ಶುಭಮಸ್ತು.



ಪಠನ ಶ್ರವಣ ಮನನಾದಿಗಳಂ ಮಾಳ್ಪರಿಗೆ ಚತುರ್ವಿಧ ಪುರುಷಾರ್ಥ
ಪ್ರದಮಾಗಿ, ಸಕಲ ವೇದಾರ್ಥಪ್ರತಿಪಾದಕವಾಗಿ

**ಶ್ರೀಮತ್ಕುಮಾರ ವಾಲ್ಮೀಕಿ ಕವೀಶ್ವರನಿಂದ ಕನ್ನಡ ಭಾಷೆ
ಯಲ್ಲಿ ವಿರಚಿತವಾಗಿರುವ**

ತೊರವೆ ರಾಮಾಯಣವು

೧೮೭೪ ನೇ ಇಸವಿಯಲ್ಲಿ ಮುದ್ರಿತವಾದ ಪುಸ್ತಕ ಸಹಾಯದಿಂದ

**ವೇ॥ ಭಾರತಿ, ಸಂಪಂಗಿರಾಮಯ್ಯನವರಿಂದಲೂ
ಅವರ ಮಿತ್ರರಿಂದಲೂ**

ಪರಿಶೋಧಿಸಲ್ಪಟ್ಟು

ಬೆಂಗಳೂರು ಸಿಟಿ ಚಿಕ್ಕಪೇಟೆ ಬುಕ್ ಡಿಪೋ ಪ್ರೊಪ್ರೈಟರ್

**ಟಿ. ಯನ್. ಕೃಷ್ಣಯ್ಯಶೆಟ್ಟಿಯವರ ಸ್ವಕೀಯ
ಶ್ರೀ ವೆಂಕಟೇಶ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.**

ದ್ವಿತೀಯ ಮುದ್ರಣ ೨,೦೦೦ ಪ್ರತಿಗಳು

ಕ್ರಯ ೨-೦-೦

1935

PRINTED AT THE
SRI VENKATESA PRESS
BANGALORE CITY.

॥ ಶ್ರೀ ॥

ಪೀಠಿಕೆ.

ಶ್ರೀಮನ್ನಾರಾಯಣಮೂರ್ತಿಯ ದ್ವಾರಪಾಲಕರಾದ ಜಯ ವಿಜಯರೆಂಬ ವರು ರಾಕ್ಷಸರಾಗಿ ಹುಟ್ಟುವಂತೆ ಬ್ರಹ್ಮಮಾನಸ ಪುತ್ರರಾದ ಸನಕಸನಂದನಾದಿ ಗಳಿಂದ ಶಾಪಗ್ರಸ್ತರಾಗಿ, ಮೂರು ಜನ್ಮಗಳಲ್ಲಿ ತಮಗೆ ವೈರಿಗಳಾಗಿದ್ದು, ಪುನಃ ಸ್ವಸ್ಥಾನವನ್ನು ಹೊಂದುವಂತೆ ಭಗವಂತನಿಂದ ಅನುಗ್ರಹಿಸಲ್ಪಟ್ಟು, ಮೊದ ಲನೆಯ ಜನ್ಮದಲ್ಲಿ ಹಿರಣ್ಯಾಕ್ಷ ಹಿರಣ್ಯಕಶ್ಯಪರೆಂಬ ರಾಕ್ಷಸರಾಗಿ ಜನಿಸಿ ಭಗವ ದ್ವಿರೋಧಿಗಳಾಗಿ ಸ್ವಾಮಿಯಿಂದಲೇ ಸಹ್ಮರಿಸಲ್ಪಟ್ಟರು.

ಆ ಯೆರಡನೆಯ ಜನ್ಮದಲ್ಲಿ ರಾವಣ ಕುಂಭಕರ್ಣರಾಗಿ ಹುಟ್ಟಿ, ಮಹಾ ಬಲಿಷ್ಠರಾಗಿ, ತಪಶ್ಶಕ್ತಿಯಿಂದ ಅನೇಕ ವರಗಳನ್ನು ಪಡೆದು, ಪ್ರಪಂಚದಲ್ಲಿನ ಅನೇಕ ಸಾಧು ಸಜ್ಜನರನ್ನೂ, ಇಂದ್ರಾದಿ ಲೋಕಪಾಲಕರನ್ನೂ ನಾನಾವಿಧವಾಗಿ ಬಾಧಿಸುತ್ತಿದ್ದರು. ಈ ವೇಧೆಗೆ ತಾಳಲಾರದೆ ಇಂದ್ರಾದಿ ದೇವತೆಗಳೆಲ್ಲಾ ಒಗ್ಗಟ್ಟಾಗಿ ಬ್ರಹ್ಮನ ಮುಖಾಂತರ ಕ್ಷೀರಸಮುದ್ರಶಾಯಿಯಾದ ಮಹಾ ವಿಷ್ಣು ವಿಗೆ ಅರಿಕೆಮಾಡಿದರು. ಆಗ ನಾರಾಯಣನು ಮನುಷ್ಯರೂಪದಿಂದ ಭೂಲೋಕ ದಲ್ಲಿ ಅವತರಿಸಿ, ಆ ದುಷ್ಟರಾಕ್ಷಸರನ್ನು ನಿಗ್ರಹಿಸಿ, ಶಿಷ್ಟರಕ್ಷಣೆಯನ್ನು ಮಾಡು ತ್ತೇನೆಂದು ಅಭಯವನ್ನು ಕೊಟ್ಟನು.

ಈ ಭಗವದ್ವರಪ್ರದಾನದಿಂದ ಸಂತುಷ್ಟರಾದ ಬ್ರಹ್ಮಾದಿ ಸುರರು ಸಭೆ ಮಾಡಿ, ಭೂಲೋಕದಲ್ಲಿ ಅವತರಿಸುವ ಭಗವಂತನಿಗೆ ಸಹಾಯಾರ್ಥವಾಗಿ ಸ್ವಾಂಶಗಳಿಂದ ತಾವುನ್ನೂ ಭೂಮಿಯಲ್ಲಿ ಅವತರಿಸುವಂತೆ ನಿಶ್ಚೈಸಿಕೊಂಡು, ಭಗವಂತನು ರಾಮಾವತಾರದಲ್ಲಿ ಲೋಕ ಶಿಕ್ಷಾರ್ಥವಾಗಿ ನಟಿಸಿದ ಲೀಲಾ ವಿಭೂತಿ ಚರಿತ್ರೆಯನ್ನು ಲೋಕಾನುಗ್ರಹಾರ್ಥ ಗ್ರಂಥರೂಪವಾಗಿ ರಚಿಸಿ ಪ್ರಸಿದ್ಧಪಡಿಸಬೇಕೆಂದು ಆಲೋಚಿಸಿ, ಸಪ್ತ ಋಷಿಗಳು ಅನುಗ್ರಹಿಸಿದ್ದ ರಾಮ ಮಂತ್ರ ಮಹಾತ್ಮ್ಯದಿಂದ ಜ್ಞಾನವರೇಣ್ಯನಾದ ವಾಲ್ಮೀಕಿಯ ಬಳಿಗೆ ನಾರದನ ಮುಖಾಂತರ ಬ್ರಹ್ಮದೇವರು ಹೇಳಿಕಳುಹಿಸಿದರು. ಆಗ ವಾಲ್ಮೀಕಿಯು ನಾರದ ಮುನಿಯಿಂದ ರಾಮ ಕಥೆಯನ್ನೆಲ್ಲಾ ಸಂಕ್ಷೇಪವಾಗಿ ತಿಳಿದುಕೊಂಡು, ಸಂಸ್ಕೃತ ಭಾಷೆಯಲ್ಲಿ ಛಂದೋರೂಪವಾಗಿ ಶ್ರೀಮದ್ರಾಮಯಣವನ್ನು ರಚಿಸಿದನು.

ಈಚೆಗೆ ಸುಮಾರು ೫೦೦ ವರ್ಷಗಳ ಮುಂಚೆ ನೀತಿ ಪ್ರದವಾದ ರಾಮಾ ಯಣವೆಂಬ ಈ ಮಹಾ ಕಾವ್ಯವು ಪಂಡಿತ ಪಾಮರೋಭಯ ಸಾಧಾರಣವಾಗಿರ

ಬೇಕೆಂಬ ಲೋಕಾನುಗ್ರಹ ಭಾವದಿಂದ ಸೋಲಾಪುರ ಪ್ರಾಂತ್ಯದಲ್ಲಿನ ತೊರವೆ ಎಂಬ ಗ್ರಾಮದಲ್ಲಿ ವಾಸಮಾಡುತ್ತಿದ್ದ ಒಬ್ಬ ಸ್ಮಾರ್ತ ಬ್ರಾಹ್ಮಣನು ಕನ್ನಡ ಭಾಷೆಯಲ್ಲಿ ಭಾಮಿನೀ ಷಟ್ಪದಿ ವೃತ್ತರೂಪವಾಗಿ ಭಾಷಾಂತರ ಮಾಡಿದನು. ಆದ್ದರಿಂದ ಈ ಕನ್ನಡ ರಾಮಾಯಣಕ್ಕೆ ತೊರವೆ ರಾಮಾಯಣವೆಂದೂ, ವಾಲ್ಮೀಕಿ ಮಹಾ ಮುನಿಯಿಂದ ವಿರಚಿತವಾದ ಶ್ರೀಮದ್ರಾಮಾಯಣವನ್ನು ಕನ್ನಡಿಸಿದ ಈ ಮೊದಲನೆಯ ಕವಿಗೆ ಕುಮಾರ ವಾಲ್ಮೀಕಿಯೆಂದೂ ಹೆಸರಾಯಿತು.

ಈ ಗ್ರಂಥದಲ್ಲಿ ಇದ್ದ ಸ್ಖಾಲಿತ್ಯಗಳನ್ನು ತಿದ್ದಬೇಕೆಂದು ಕೆಲವರು ಅಪೇಕ್ಷಿಸಿದ್ದರಿಂದ ಸಾಧ್ಯವಾದ ಮಟ್ಟಿಗೆ ತಿದ್ದಿ ಇರುತ್ತದೆ, ಸರಸ ಕವಿತ್ವಮುಳ್ಳದ್ದಾದ ಈ ಗ್ರಂಥವನ್ನು ಬಾಲಕರು ಓದಿದಲ್ಲಿ ಭಗವದನುಗ್ರಹದಿಂದ ಸದ್ಬುದ್ಧಿಯುಳ್ಳವರಾಗುವರು.

೧೮೩೭ ನೇ ಇಸವಿ. } ವೇ|| ಭಾರತಿ ಸಂಪಂಗಿರಾಮಯ್ಯ, ಬೆಂಗಳೂರು ಸಿಟಿ.

ವಿಷಯಾನುಕ್ರಮಣಿಕೆ.

೧ ಬಾಲಕಾಂಡ.

೨ ಅಯೋಧ್ಯಾಕಾಂಡ.

೩ ಅರಣ್ಯಕಾಂಡ.

---

೪ ಕಿಷ್ಕಿಂಧಾಕಾಂಡ.

---

೫ ಸುಂದರಕಾಂಡ.

೬ ಯುದ್ಧಕಾಂಡ.

ವಿಷಯಾನುಕ್ರಮಣಿಕೆ ಸಂಪೂರ್ಣಂ.

॥ ಶ್ರೀ ॥



VALMIKI'S RAMAYANA.

ಕುಮಾರವಾಲ್ಮೀಕಿ ವಿರಚಿತ

ತೊರವೆ ರಾಮಾಯಣವು.

ಬಾ ಲ ಕಾ ಂ ಡ.

ಪೀಠಿಕಾಸಂಧಿ.

ಶ್ರೀಜನಕಜಾರಮಣ ವಿಮಲ ಸ | ರೋಜಸಂಭವ ಜನಕನನುಪಮ | ರಾಜಶೇಖರ ವಿನುತ ನಿಖಿಲಾಮರ ಕಿರೀಟಚಯ ॥ ರಾಜಿತಾಮಲ ಲಲಿತಪದ ಪಂ | ಕೇಜನಾನತಜನ

ದಮನಾಸುರ। ಭೂಜ ತೊರವೆಯರಾಯ ನರಹರಿ ಪಾಲಿಸುಗೆಜಗವ॥೧॥ ಪರಮಮಂಗಳ
ಮೂರ್ತಿಪಾವನ । ಚರಿತ ಪರಮಾನಂದಮಯ ಪುರ । ಹರಪುರಂದರ ಪೂಜಿತಾಂಘ್ರಿ
ಸರೋಜಶಿವಶೌರೀ ॥ ಶರಣಜನಸುರಧೇನುಗಂಗಾ। ಧರಗಜಾಸುರಮಥನಗೌರೀ। ವರ
ತ್ರಿಯಂಬಕನೊಲಿದು ಸಲಹುಗೆ ಸಕಲಸಜ್ಜನರ ॥೨॥ ಕಡಲಕಡಹಲುರಿತೆರಗಳ ।
ನೊಡೆದು ಮೂಡಿಸಮಸ್ತದೇವರ। ಗಡಣಗಳನರಸುತ್ತ ಕಂಡುಜನಾರ್ದನನಚಲುವ ॥
ಬಿಡದೆನೋಡುತಸಂಭ್ರಮದಲಡಿ। ಗಡಿಗೆಸಡಗರದಿಂದಹರಿಯುರ । ದೆಡೆಯನಪ್ಪಿದ
ಲಕ್ಷ್ಮಿಕೊಡುನಮಗಿಷ್ಟಸಂಪದವ ॥೩॥ ಗಿರಿಜೆ ತ್ರಿಜಗನ್ಮಾತೆ ದಕ್ಷನ। ಪರಕುಮಾರಕಿ
ಪಾಪಸಂಹರೆ। ಪರಮಮಂಗಳಮೂರ್ತಿ ಶುಭದಾಯಕಿಯೆಕಲ್ಯಾಣಿ ॥ ದುರಿತಹರಬಹು
ರಾಕ್ಷಸಾಂತಕಿ। ಹರನ ಮೋಹದರಾಣಿ ಮಾಹೇ। ಶ್ವರಿಯೆ ಕೊಡು ಕಾರುಣ್ಯದಿಂವಲ
ಧಿಕಸಂಪದವ ॥೪॥ ವನರುಹಾಸನವಿಶ್ವಜಗತೀ । ಜನಕಸನಕಾದ್ಯಖಿಲಮುನಿಜನ।
ವಿನುತವಿಬುಧವರೇಣ್ಯವಾಣೀವಧುಮುಖಾಂಭೋಜ ॥ ದಿನಪಘನಚಾತುರ್ಯಚತುರಾ।
ನನರಜೋಗುಣಲೋಕವಿಭುಭೂ। ವಿನುತವಿಮಲವಿರಿಂಚಿಮಾಳ್ಕೆಮಗಧಿಕಸಂಪದವ ।
ಸರಸಿಜಾಂಘ್ರಿದ್ವಯದಕೋಮಲ। ತರ ಸಿತಾಂಗದಘನನಿತಂಬದ। ನಿರುಪಮಾನನ
ನಿಮ್ನನಾಭಿಯ ನಿಬಿಡಕಚಭರದ ॥ ವರಕರಾಭಯಕರದಶೋಭಾ । ಕರದನಗೆಮೊಗ
ದನುಪಮಾದಬಂ। ಧುರದಭಾರತಿನಿಲುಗೆಮನ್ಮುಖಪದ್ಮಸದ್ಮದಲ್ಲಿ ॥೬॥ ಕರಚತುಷ್ಟ
ಯದುದಿತನುಮಸಿಂ । ಧುರನಿಭಾನನದಮಲಲಂಬೋ । ದರದನವಸಿಂಧುರಚಂದನ
ಗಂಧಬಂಧುರದ ॥ ಉರುಲಲಾಟದಿ ನರ್ತಿಸುವಕಚ। ಭರದಕಮನೀಯಪ್ರಭಾವಿ।
ಸ್ತರವಿನಾಯಕಮಾಳ್ಕೆಮಗೆನಿರ್ವಿಘ್ನದಾಯತವ ॥೭॥ ಉದಧಿಲಂಘನಜನಕಜಾಸ।
ನ್ಮುದವಿವರ್ಧನವೈರಿಘಟಗಜ। ವಿದಳನೋದ್ಧತಸಿಹ್ಮಲಂಕಾನಗರನಿರ್ದಹನ ॥ ಕದನ
ಕರ್ಕಶಭೀಮರಿಪುದಶ । ವದನದರ್ಪವಿರಾಮರಾಘವ । ಪದಸರೋಜಭ್ರಮರಭಾವನ
ಪ್ರಾಣಜಂವಂದೇ ॥೮॥ ಸುರನರೋರಗವಂದ್ಯನಿಗಮೋ । ತ್ಕರಕಲಾಪಾನಿಂದ್ಯವಿಸ್ತಂ।
ಭರಪದಾಂಬುಜಭೃಂಗಭೂನುತಮುನಿಜನೋತ್ತುಂಗ ॥ ಶರಣಜನಪರಿಪಾಲನಾನತ।
ಪರಿಧಿಸಿರುಪಮತತ್ವವಿದ್ಯಾ । ಶರಧಿಸಲಹುಗೆನಮ್ಮಭಾರದ್ವಾಜಗುರುರಾಯ ॥೯॥
ಆದಿಕವಿಕವಿರಾಜಹಂಸನ । ನಾದಿಕವಿಕುಲಕಮಲಮಿತ್ರಮ । ಹಾದಿವೌಕಸಪ್ರಚುರ
ಭಾಷಾಕವಿಜನೋತ್ತಂಸ ॥ ವೇದಗರ್ಭವರಪ್ರಸಾದಾ । ಹ್ಲಾದಕವಿಂಘವರಕಥಾ
ವಿನು। ಲೋಪಧಿಂದುಮಹಾಮುನಿಪ್ರಾಚೇತಸಂವಂದೇ ॥೧೦॥ ಚಾರುತರಕರ್ಣಾ
ಟಕದವಿ । ಸ್ತರರಾಮಾಯಣಕೆಕರ್ತೃಕು । ಮಾರವಾಲ್ಮೀಕಿಯಕಥಾಪತಿತೋರಿದೆ
ಯಧನಾಥ ॥ ವೀರನರಹರಿಯೆನಲುಮೆಚ್ಚಿದರಾರುಸತ್ಕವಿತಾವಿಲಾಸವ । ಸೂರಿಗಳ
ಹೃದಯಾಕರುಷಣಕಥಾಕುತೂಹಲವ ॥೧೧॥ ಪರರಬಗೆಪರರುಕ್ತಿಪರರು । ತ್ವರುಕ
ಪರರುನ್ನತಿಯುಕ್ತಿಯುಪ। ಹರಣೆಪರರುಪಮಾನಪರರೊಡ್ಡವದಪರುಷವ ॥ ಹರಕು
ಹೊಗದಗ್ಗಳಿಗೆಪದಸಂಚರಣೆಯಲಿಲಿಪಿತಿರಿಗಿನೋಡದ। ಬಿರುದುಬೇರೆಕುಮಾರವಾಲ್ಮೀ
ಕಿಯುವಚೋಲಹರಿ ॥೧೨॥ ಸುಕವಿಗಳಸುಪ್ರಸೂರಿ । ಪ್ರಕರಪಮಲಜ್ಞಾನ
ಮುನಿಕರ। ಮುಕುರಗುಣಿಗಳಗೂಢವಿಧಿರಸಿಕರಸುಧಾಜಲಧಿ ॥ ಅಕುಟಿಲರನುನಮೆಚ್ಚು
ಸಿರಿಹರಿಭಕುತರಮಾಮಹವಚ್ಚ್ಲಿವರಂ। ನಕರಮೆಚ್ಚುಕುಮಾರವಾಲ್ಮೀಕಿಯಪ್ರಬಂಧ

ಕೃತಿ ॥ ೧೩ ॥ ಪ್ರಿಯರಿಗಪ್ರಿಯರಿಗೆವಿವೇಕಾ । ಶ್ರಯರಿಗತಿಮೂರ್ಖರಿಗೆವಿಜ್ಞಾ । ನಿಯರಿಗತಿಜಾಣರಿಗೆಜಡರಿಗಸೂಯಭಾವರಿಗೆ ॥ ನಯವಿದರಿಗಜ್ಞರಿಗೆಹರುಷೋ । ದಯ ವಪೆಂಪುಕುವಾರವಾಲ್ಮೀ । ಕಿಯಪ್ರಬಂಧಸೌಭಗತರಕವಿತಾಚಮತ್ಕಾರ ॥ ೧೪ ॥ ಧರೆ ಯೊಳಗ್ಗದರಾಘವೇಂದ್ರನ । ಚರಿತಶತಕೋಟಿಪ್ರವಿಸ್ತರ । ವರಮಹಾಚಾರಿತ್ರರಚ ನ ಸುಪ್ರಬಂಧದಲಿ ॥ ಪರಮಭಕ್ತಿಯೊಳಾವನೊಂದ । ಕ್ಷರವಕೇಳ್ವನವಂಗೆಪಾತಕ । ಹರಿ ವುದೆಂದುಕುವಾರರಿಗೆವಾಲ್ಮೀಕಿಮುನಿನುಡಿದ ॥ ೧೫ ॥ ಭವಭವಾರ್ಜಿತದುರಿತಕೋ ಟಿಯ । ತವಿಸುವಗ್ಗದನಾಮ ಸರಸಿಜ । ಭವಭವಾಚ್ಯುತರಮಲಸದಮಿಯಸೀವಗುಣ ನಾಮ ॥ ಶಿವಮೆಚ್ಚಿದನಾಮಗಿರಿಸಂ । ಭವೆಯನೇಮದನಾಮಸುರನರ । ಭವರಪಾ ವನನಾಮಸೀತಾಪತಿಯಸಿರಿನಾಮ ॥ ೧೬ ॥ ರಾಮರಾಮೆಂದವನುಸ್ವರ್ಗದ । ಕಾಮಿನೀ ಜನಕೊಡೆಯನಹರಘು । ರಾಮರಕ್ಷಿಸುರಕ್ಷಿಸೆಂದವಕಮಲಭವನಹನು ॥ ರಾಮಚರಿ ತಾಮೃತವಕೇಳ್ದವ । ರಾಮನಿಗೆಸರಿಯಹನುಜಗದೊಳು । ರಾಮನಾಮಕೆಸರಿಯಕಾ ಣೆನುಯೆಂದ ಮುನಿನುಡಿದ ॥ ೧೭ ॥ ಒದೆವ್ರದಘಸಂಹತಿಯತಲೆದೋ । ರಿದಡೆದಹಿಸು ವದೆಡರನೌಕಿಡೆವಹಿಸಿ । ಸುಡುವದುನ್ನತಪ್ರಳಯಪ್ರಪಂಚಗಳ ॥ ಮುದವನಿಹದಲಿ ಕೊಡುವುದಚ್ಯುತ । ಪದವಪರದೋಳಗೀವುದಿಮನಿಗ । ಮದರಹಸ್ಯಪುರಾಣಕಥೆಮಿಗೆ ಯೆಂದುಮುನಿನುಡಿದ * ॥ ೧೮ ॥

ಪೀಠಿಕಾಸಂಧಿ ಸಮಾಪ್ತಂ.

ಎರಡನೆಯ ಸಂಧಿ.

ಸೂಚನೆ ॥ ಕುಶಲವರಿಗರುಹಿದನುಪ್ರಾಚೇ । ತಸನುದಿವಿಜಮುನೀಂದ್ರನು ಪದೇ । ಶಿಸಿದರಾಮಾಯಣಸುಧಾಮಯಕಥನಕೌತುಕವ ॥

ಪದ್ಯ ॥ ನಿಗಮತತಿನಿಲುಕದಗುಣತ್ರಯ । ಹೊಗದಮಾಯಾಸತಿಯಸೊಬಗಿನ । ಸೊಗಸುಸೋಂಕದಸಕಲಸಮ್ಯಗ್ಜ್ಞಾನಿಗಳಮತಿಯ ॥ ಬಗೆಗೆಬಾರದಜನನಮರಣಾ । ದಿಗಳುಹೊದ್ದದತೋರಿತೋರದ । ಜಗದದೇವರದೇವನಿದ್ದನುರಜತಶಿಖರದಲಿ ॥ ೧ ॥ ಪರಮಪರಮೇಶಾನಘನತ । ತ್ಪುರುಷನಿರ್ಮಲವಾಮದೇವ । ಸ್ಫುರಿತ ಸದ್ಯೋಜಾತ ವಿಮಲಾಘೋರನಾಮಕದ ॥ ಪರಮತತ್ವದಬಿತ್ತಿನೊಳಗಂ । ಕುರುಗಳೈದಾದಂತೆ ತೋರುವ । ಪರಮತೇಜೋಮಯನುಮೆರೆದನುಪಂಚವಕ್ತ್ರದಲಿ ॥ ೨ ॥ ಶಿರದಚಂದ್ರ ಸುಫಾಲಲೋಚನ । ನುರಗಕುಂಡಲದಸಿತಕಂಠದ । ವರಕರಾಭಯಕರದಶೋಭಾ ಕರದತನುಕಾಂತ ॥ ನಿರುಪಮಾಗಮನಿಗಮಮಯಬಂ । ಧುರದಕರಿಶಾರ್ದೂಲಚ ರ್ಮಾಂ । ಬರನುಹರನೆಸೆದಿರ್ದನಗಜಾಪತಿಯಮೇಳದಲಿ ॥ ೩ ॥ ಸುರರುವಸುಗಳು ಸಿದ್ಧಸಿದ್ಧ್ಯರು । ಧರರು ಖಚರರು ಕಿನ್ನರರು ಕಿಂ । ಪುರುಷರುರಗರು ಮರುತುಗಳಗಣಾ

---

* ಇಲ್ಲಿ ಸೇರಿಯಿದ್ದ ಫಲಸ್ತುತಿ ಪದ್ಯಗಳು ಮೂರನ್ನು ಯುದ್ಧಕಾಂಡದ ಕಡೇ ಭಾಗದಲ್ಲಿರಬೇಕಾದ್ದರಿಂದ ಅಲ್ಲಿಯೇ ಸೇರಿಸಿದೆ.

ಯಕ್ಷರಾಕ್ಷಸರು ॥ ಗರುಡಗಂಧರ್ವರು ದಿಶಾಧೀ । ಶ್ವರರು ದಿವಿಜಮುನೀಂದ್ರಮುಖ್ಯಾ । ಮರ ಕದಂಬಕವಿದ್ದು ದೋಲಗದಲಿ ಮಹೇಶ್ವರನ ॥ ೪ ॥ ಶ್ರುತಿಗಳೀ ಕೈವಾರಿಸುವ ಮಾ । ಗಧೆಯರಖಿಲ ಮಹಾಪುರಾಣ । ಪ್ರತತಿಯೇ ಪಾಠಕರು ನಿಜದಣಿವಾದಿಗಳೆಚರರು ॥ ಸ್ಮೃತಿಗಳೇ ತತ್ಕರದಕಂಚುಕಿ । ತತಿಗಳೆನಲೊಪ್ಪಿದುದಾಭಾ । ರತಿಯ ಹೊಗಳಿಕೆಯಲಿ ಸಭಾಸ್ಥಳವಾ ತ್ರಿಯಂಬಕನ ॥ ೫ ॥ ಆ ಸಮಯದಲಿ ಕೈಮುಗಿದು ಬಿ । ನ್ನೈಸಿದಳು ಫಾಲೇಕ್ಷಣಂಗಾ । ವಾಸುದೇವ ಸ್ತುತಿಪರಾಯಣೆ ಗೌರಿದೇವತೆಯು ॥ ಕೇಶವಾದಿ ಸಹಸ್ರನಾಮ ವಿ । ಲಾಸದೊಳಗಧಿ ನಾಮಧೇಯದ । ಭಾಸುರಾನುಗ್ರಹರಹಸ್ಯವನರುಹಬೇಕೆಂದು ॥ ೬ ॥ ದೇವಿ ಕೇಳಾದಡೆ ಸಮಸ್ತ । ಸ್ಥಾವರಕೆ ಜಂಗಮಕೆ ಜಗತೀ । ಜೀವದಂತರ್ಯಾಮಿಯಹ ವಿಷ್ಣುವಿನನಾಮವನು ॥ ಆವನುಪಮಿಸಹುದು ಹೊಗಳಿದ । ಪಾವನಾಂಬಕಿ ಪೇಳ್ವಮಾತ್ರದಿ । ಸಾವುಜನ್ಮಾದಿಗಳು ತೊಲಗುವದಖಿಲ ಜನಗಳಿಗೆ ॥ ೭ ॥ ಆ ಪರಾಪರವಸ್ತುವಿನ ನಿಜಸ್ವರೂಪ ಗುಣಶೌರ್ಯಾದಿಗಳ ಮಹಿ । ಮಾಪಯೋಧಿಯ ನೆಲೆಯನರಿವರಾರು ಲೋಕದಲಿ ॥ ಆ ಪುರಾತನ ಪುರುಷನಭಿಧಾ । ನೋಪಲಕ್ಷಣಲಕ್ಷಿತಗಳಕ । ಲಾಪರಚನೆಯ ಕಂಡೆನಗ್ಗದ ರಾಮನಾಮದಲಿ ॥ ೮ ॥ ಗಿರಿಜೆ ಕೇಳು ಸಹಸ್ರನಾಮದ । ಸರಿಕಣಾ ರಘುರಾಮಚಂದ್ರ । ಪರಮಮಂಗಳನಾಮ ನಿರುಪಮನಿಗಮ ವಿಶ್ರಾಮ ॥ ನಿರುತವಿದು ನಿಜವೆಂದು ಬಗೆನಿರ್ಧರಿಸಿದೆವು ನಿಗಮಾರ್ಥದಲಿ ನಿನ । ಗುರುತರಾನುಗ್ರಹದ ಬೀಜಾಕ್ಷರವಿದೀಗೆಂದ ॥ ೯ ॥ ಹಾ ಮಹಾದೇವೆಂದು ಪುಳಕಿತ । ರೋಮಹರುಷಿತೆಯಾಗಿ ಕರಯುಗ । ತಾಮರಸವನು ಮುಗಿದು ರಾಮನ ನೆನದು ಕಣ್ದೆರದು ॥ ಆ ಮಹಾತ್ಮನ ಗುಣಚರಿತ್ರೋ । ದ್ದಾಮತೆಯನಾಜ್ಞಾಪಿಸೆಂದು ಸು । ಧಾಮರೀಚಿಧರಂಗೆ ಬಿನ್ನೈಸಿದಳು ಗಿರಿಜಾತೆ ॥ ೧೦ ॥. ಆ ದಶವ ಧರಿಸೆರಡನೆಯ ಯುಗ । ದಾದಿಯಲಿ ಕ್ರೌಂಚಾಟವಿಯಲಿ ಮ । ಹಾದುರಾತ್ಮ ವ್ಯಾಧನಿದ್ದನು ಚೋರವೃತ್ತಿಯಲಿ ॥ ಆ ದಿವಾಂಗಣದಿಂ ಭರದ್ವಾ । ಜಾದಿಮುನಿಗಳು ಬರಲು ಕಂಡನು । ಹಾದಿಯಲಿ ಬಳಿಕಾ ಪ್ರಯಾಗೆಯ ಬದರಿಕಾಶ್ರಮದ ॥ ೧೧ ॥ ಅವರನುಗ್ರಹದಿಂದ ತಪಸಂ । ಭವಿಸಿತಾವ್ಯಾಧಂಗೆ ವಾರಿಜ । ಭವನದೆಶೆಯಿಂದಾಯ್ತು ಪರಮಋಷಿತ್ವವಾತಂಗೆ ॥ ಅವತರಿಸಿದನು ಬಳಿಕ ಮುನಿಪುಂ । ಗವನು ವಲ್ಮೀಕದಲಿ ಹೆಸರಾ । ಯ್ತುವನಿಯಲಿ ವಾಲ್ಮೀಕಿಮುನಿಯೆಂದಗಜೆ ಕೇಳೆಂದ ॥ ೧೨ ॥ ಆ ತಪೋಧನ ಬಳಿಕ ಮುನಿಸಂ । ಜಾತದಲಿ ಸೇರಿದನು ಸುಜನ । ಖ್ಯಾತನಾದನು ಸುಳಿದವಿಡಿದೊಳು ಕ್ರೌಂಚಖಗಯುಗವ ॥ ಆ ತಪೋರ್ವಿಯೊಳೋರ್ವದುಷ್ಟಕಿ । ರಾತನವ ಕಂಡೆಸೆಯಲದರೊಳು । ಚೇತನಂ ಬಿಟ್ಟೊದರಿಕೆಡಮದು ವಿಹಗಪತಿ ನೆಲಕೆ ॥ ೧೩ ॥ ಅರೆಮುಗಿದಲೋಚನದ ಸಂಪುಟ । ಮರಳಿಚಲಿಸುವಚಂಚುಪುಟದು । ಸ್ಫುರಿಸಿದಂಘ್ರಿಯ ಕೆದರ್ದರೆಕ್ಕೆಯುಸಿರಿದ ತಪ್ಪಳಿನ ॥ ಕೊರಳ ಮಿಡುಕಿನ ಮುಸಿಯಮುಖದಲಿ । ಸುರವನೆತ್ತರ ಪತಿಯಸುತ್ತಲು । ತಿರುಗಿ ಚೀರುವ ವಿಹಗಸತಿಯನು ಕಂಡನಾಮುನಿಪ ॥ ೧೪ ॥ ನೊಂದುದಲ್ಲಾ ಕ್ರೌಂಚಪತಗ ಪು । ರಂದರನು ತಾನೆನುತ ಮನದಲಿ । ನೊಂದು ನಯನದೊಳೊಸಗಿ ಸೂಸಿದವಶ್ರುಧಾರೆಗಳು ॥ ಒಂದು ನಿಮಿಷಕೆ ವಿಹಗಪತಿಬಳಿ । ಕೊಂದಿದುದು ಮರಣದಲಿ ಕೇಳರ । ವಿಂದಮುಖಿ ಶೋಕಿಸಿದನಾಮುನಿನಾಥ ಮನದಲಿ ॥ ೧೫ ॥ ಲೋಕದಲಿ ಸೇವಿಸಲು

ಕಡುತಾ। ಲೋಕಪದ್ಧತಿಯಾಗಿಯಿಳಿದನು। ನಾಕದಿಂ ನಾರದನುತನ್ಮುನಿವರನ ಸರಸ ದಲಿ ॥ ಈ ಕುತೂಹಲರಚನೆಯನು ವಾ। ಲ್ಮೀಕಿಮುನಿಯಲಿ ಕಂಡು ಬಳಿಕಾ। ಶ್ಲೋಕ ಸರಣಿಗೆ ಶಿರವನೊಲಿದನು ನಗುತ ॥ ೧೬ ॥ ಅಹುದಲೇ ವಾಲ್ಮೀಕಿಕವಿತೆಯ। ಸರಣಿ ಲೇಸೈ ಶ್ಲೋಕಮುಖಸಂ। ನಿಹಿತವಹಶ್ಲೋಕ ಪ್ರಬಂಧಸುಕಾವ್ಯರಚನೆಯಲಿ ॥ ವಹಿಸಲೀ ಪದ್ಧತಿಪರಿಶ್ರುತ। ವಹುದು ಬಳಿಕೀಲೋಕದಲಿ ನಿನ। ಗಹುದುಕೀರ್ತಿ ಪ್ರಥಮ ಕವಿ ಯೆಂದಜನ ಸಭೆಯೊಳಗೆ ॥ ೧೭ ॥ ಎಂದು ನಿಜವನುತೋರಿ ಮುನಿರಘು। ನಂದನೋ ಪಾಖ್ಯಾನವನು ಮುದ। ದಿಂದ ಸಂಕ್ಷೇಪದಲನುಗ್ರಹವಿತ್ತು ಹಂಸೆಯಲಿ ॥ ಸಾರದ ನಜಪುರಿಗತ್ತಲಾಮುನಿ। ಕಣ್ದೆರದು ಮಾಡಿದನು ಕೇಳರ। ವಿಂದಮುಖಿ ಲೋಕದಲಿ ರಾಮಾಯಣ ಕಥಾಮೃತವ ॥ ೧೮ ॥ ಜಾತರಹಿತನು ಜನಿಸಿದನುಖ। ದ್ಯೋತಕುಲದಲಿ ರಘುದಿಲೀಪಾ। ಖ್ಯಾತರೊಳಗಗ್ಗಳದ ದಶರಥನೃಪನಗರ್ಭದಲಿ ॥ ಭೂತಳದ ದುರ್ಜ ನರನುನದವಿ। ಘಾತಿಗೋಸುಗವಗಜೆಕೇಳ್ಪರು। ಹೂತಮುಖ್ಯತಿದಿರಿನಲಿ ರಾಮಾ ಭಿಧಾನದಲಿ ॥ ೧೯ ॥ ಬಾಲತನದಲಿ ತಾಟಕಿಯಗೋ। ನಾಳಿಯನು ಗೋರಿದನು ಕದ ನದಕೇಳಿಯಲಿ ಕಡುಗಲಿಸುಬಾಹು ಪ್ರಮುಖರಾಕ್ಷಸರ ॥ ಸೀಳಿದನು ಸಲಹಿದನು ಮುನಿ ಕುಲಪಾಲಕೌಶಿಕನಧ್ವರವಪದ। ದೂಳಿಯಲಿದೂಟದನಹಲ್ಯಾ ಸತಿಯದುಷ್ಕೃತವ ॥ ಎರಡನೆಯನಮ್ಮುಗ್ರಚಾಪವ। ನರದನೃಪರಲಿಗೆಲಿದು ಸೀತೆಯ। ವರಿಸಿಭಾರ್ಗವನು ರುಭುಜದ ದರ್ಪವನಪಹರಿಸಿ ॥ ಗುರುನಿರೂಪವಧರಿಸಿ ವನವನು। ಚರಿಸಿಚಂಡಖ ರಾದಿಗಳ ಸಂ। ಹರಿಸಿ ಕಡಲನುಕಟ್ಟಿ ಗೆಲಿದನು ಕಲಿದಶಾನನನ ॥ ೨೧ ॥ ಭಾರವಿಳಿ ದುದು ಬಳಿಕ ವಸುಧಾ। ನಾರಿಗೊಲಿಸಿದ ಗೊಣಸುಸಾಸಿರ। ನೇರಿತಾದವು ಫಣಿ ಪತಿಯಪದ್ಮಜ ಪುರಂದರರ ॥ ಊರೊಳಗೆ ಗುಡಿಗಟ್ಟಿದವು ಘನ। ಭೂರಿ ಭುವನ ಜನೌಘಹರುಷದ। ವಾರಿಧಿಯ ಲೋಲಾಡಿದುದು ದಶಶಿರನ ಮರಣದಲಿ ॥ ೨೨ ॥ ಶರಣುಪೊಕ್ಕ ವಿಭೀಷಣನ ಪತಿ। ಕರಿಸಿ ಲಂಕಾರಾಜ್ಯವನು ಸರ। ಸಿರುಹಭವನಾ ಯುಷ್ಯಪರಿಯಂತಿತ್ತ ಕರುಣದಲಿ ॥ ಸುರರನೆಲ್ಲರಸಲಹಿ ವಿಶ್ವಂ। ಭರೆಯ ಭಾರವ ನಿಳುಹಿಸು ಜನೋ। ದ್ಧರಣನೈದಿದನ ಮಲತರ ಸಾಕೇತ ಪುರವರವ ॥ ೨೩ ॥

ಎರಡನೆಯ ಸಂಧಿ ಸಮಾಪ್ತಂ.

ಮೂರನೆಯ ಸಂಧಿ.

ಸೂಚನೆ॥ ಮನುಮಹೀಶಾನ್ವಯದಜನಪರ। ಜನನವನು ವಾಲ್ಮೀಕಿ ಸೀತಾ ತನಯರಿಗೆ ವಿಸ್ತರಿಸಿದನು ಕುಶಲವಕುಮಾರರಿಗೆ ॥

ಪದ್ಯ॥ ಈಕಥೆಯನಾದಿವಜಮುನಿ ವಾ। ಲ್ಮೀಕಿಗರುಹಿದನಾಮುನಿಪ ನಿ। ಕ್ಷ್ವಾಕುಕುಲ ಕುಶಲವರಿಗೊರೆದನು ಬಹಳ ರಚನೆಯಲಿ ॥ ಆಕಥೆಯ ಕೇಳೆಂದು ಸತಿಗೆ ಪಿ। ನಾಕಧರ ವಿಸ್ತರಿಸಿದನು ಬಳಿ। ಕಾ ಕಕುಸ್ಥ ಜಗಾದ ಮೇಲಣಕಥೆಯ ಕೌತುಕವ॥ ಗಿರಿಜೆ ಕೇಳ್ ಪಟ್ಟಾಭಿಷೇಕೋ। ತ್ಕರುಷವಾದುದು ಮೇಲೆಸುಥೆಯ। ನರಪತಿಗಳಿ

ತಂದು ಕಂಡರು ರಾಘವೇಶ್ವರನ ॥ ಕರವನವರವರೊಡಬಡಿಕೆಯಲಿ | ತರಿಸಿಕೊಂಡಿ
ಸಮುಸ್ತಧರಣೀ | ಶ್ವರರಿಗಧಿಪತಿಯಾಗಿ ಮೆರೆದನು ರಾಜತೇಜದಲಿ ॥ ೨ ॥ ಮಿಗಿಸಿದಿ
ರವಿರಾಜವಂಶಾ | ದಿಗಳ ರಾಯರ ರಾಜಧರ್ಮದ | ಸೊಗಸನವಲಚರಿತ್ರದಲಿ ಪಾಲಿಸಿ
ದನು ವಿಭುಯನು ॥ ಅಗಜೆಕೇಳ್ ಕೆಲವಾನುದಿವಸಕೆ | ಚಿಗುರಿದುದು ದುರ್ವಾರ್ತೆಲತೆ
ನಿಜ | ನಗರದಲಿ ಲಂಬಿಸಿತು ಕರ್ಣದೊಳಾ ಕಕುಸ್ಥಜನ ॥ ೩ ॥ ಯಾತರರಸು ಕಕುಸ್ಥ
ಜನು ಕಾ | ಮಾತುರದಲಸುರೇಂದ್ರ ಬನದಲಿ | ಸೀತೆಯನು ಕೊಂಡೆಯ್ದೆ ಬಿಡಲಾರದೆ
ನಿಜಾನ್ವಯದ ॥ ಖ್ಯಾತಿಯನು ಕೆಡಿಸಿದನು ಯೆಂಬೀ | ಮಾತು ಭದ್ರಕನಿಂದ ರಘು
ಸಂ | ಜಾತ ನಿದಿರಲಿ ಬಿದ್ದುದಾತನ ಕೀರ್ತಿಪಂಕದಲಿ ॥ ೪ ॥ ಕೇಳಿ ಕಡು ಸಿಗ್ಗಾಗಿ
ಸಿಗುರೆ | ದ್ದೇಳಿಗೆಯ ಚಿಂತೆಯಲಿ ಜಗದ ಜ | ನಾಳಿಕೆಯು ಪದ್ಧತಿ ತಿರಸ್ಕರಿಸುವದಲೇ
ಯೆನುತ ॥ ಕೇಳಿಸಿದನೀ ನುಡಿಯನನುಜರ | ಮೇಳದಲಿ ವೈತ್ರಾವರುಣಿ ಜಾ | ಬಾಲಿ
ಗಳಲಿ ಸುಮಂತ್ರ ಮುಖ್ಯಮಹಾ ಪ್ರಧಾನರಲಿ ॥೫॥ ಲೋಕ ದುರ್ಜನರುಗಳ ರಸನಾ |
ನೀಕದಪಹಾಸ್ಯಕ್ಕೆ ತಾವಿದು | ಲೌಕಿಕಕ್ಕಿದು ದುಷ್ಟನೆಂದವರುಗಳ ನೊಡಬಡಿಸಿ ॥
ಲೋಕವರಿಯಲು ಬಿಟ್ಟುಬಾ ವಾ | ಲ್ಮೀಕಿಭವನದೊಳೆಂದು ವಿಮಳ | ಕ್ಷ್ವಾಕುಕುಲ
ಸಂಭವನು ಸೌಮಿತ್ರಿಗೆ ನಿರೂಪಿಸಿದ |೬॥ ಅವನಿಪನ ನೇಮದಲಿ ಬಯಕೆಯ | ನೆವದಿ
ನಾಪತಿಭಕ್ತೆಯನು ಮುನಿ | ಭವನದಲಿ ಬಿಟ್ಟನು ಕಣಾ ಕೊಂಡೊಯ್ದು ಸೌಮಿತ್ರಿ ॥
ಯುವತಿಯನು ತಾಪಸನು ಮುನಿ ಸಂ | ತವಿಸಿ ಬಳಿಕಾ ಪುಣ್ಯಚರಿತೆಯ | ಭುವನ
ಮಾತೆಯನುಪಚರಿಸಿಕೊಂಡಿರ್ದ ನೊಲವಿನಲಿ ॥೭॥ ತಿಂಗಳೇಳರ ಗರ್ಭದಲಿ ರಘು |
ಪುಂಗವನ ನಗಲಿದಳು ಮೇಲಣ | ತಿಂಗಳೆರಡಕೆ ಪೂರ್ಣವಾದುದು ಗರ್ಭವವನಿಜೆಯ॥
ಮಂಗಳಗ್ರಹತಾರೆ ಶುಭ ಲ | ಗ್ನಂಗಳಲಿ ಮುನಿ ಮಂದಿರದಲಿ ಕು | ರಂಗಲೋಚನೆ
ಪಡೆದಳಿಬ್ಬರವರ ಕುಮಾರಕರ ॥೮॥ ಆ ಕುಮಾರರಿಗೊಲವಿನಲಿ ವಾ | ಲ್ಮೀಕಿ ವಿಸ್ತರಿಸಿ
ದನು ವೈದಿಕ | ಲೌಕಿಕೋತ್ಸವದಿಂದ ನಿಜನಾಮಾಭಿರಂಜಕವ ॥ ಲೋಕವಿಭು ಕುಶ
ನೆಂದು ಮೊದಲು ವಿ | ವೇಕಿಸಿದನರಡನೆಯುಶಿಶು ಶೋ | ಭಾಕಲಿತ ಲವನೆಂದು ಕರೆ
ದನು ಕಾಂತೆ ಕೇಳೆಂದ ॥೯॥ ಆದವೆಂಟಬುದಂಗಳಿಬ್ಬರಿ | ಗಾದಿನಕೆ ತನ್ಮುನಿಪನುಪ
ನಯ | ನಾದಿ ಕರ್ಮವರಚಿಸಿ ಶಸ್ತ್ರಾಭ್ಯಾಸ ಶಿಕ್ಷೆಯಲಿ॥ ವೇದಶಾಸ್ತ್ರಂಗಳಲಿ ತನ್ನೋ |
ಪಾದಿಯಲಿ ಮಾಡಿದನು ಸೀತಾ | ಹ್ಲಾದಕರ ದಿನಕರಕುಲವ ಕುಶಲವಕುಮಾರಕರ ॥
ಒಂದು ದಿನ ಬಳಿಕವರು ಮುನಿಗಭಿ | ವಂದನಂಗೈದುಚಿತವಚನದ | ಲೆಂದರೆಲೆಮುನಿ
ನಾಥ ಚಿತ್ತೈಸೆಮ್ಮಗಳ ಪಡೆದ ॥ ತಂದೆಯಾರೆಮ್ಮನ್ವಯವದೇ | ನೆಂದು ಬಿನ್ನಹಮಾಡೆ
ಮುನಿ ಸಾ | ನಂದದಲಿ ಹೇಳಲಿಕೆ ತೊಡಗಿದನೀ ಮಹಾಕಥೆಯ ॥ ೧೧ ॥ ಜನಿಸಿದನ್ನ
ಮಾನಸದೊಳಬುಜಾ | ಸನನ ಪೂರ್ವದ ಸೃಷ್ಟಿಯಲಿ ಸೂ | ತನ ವಿರಿಂಚಿ ಮರೀಚಿ
ಮುನಿ ತಸ್ಮುನಿಪನಿಂ ಬಳಿಕ ॥ ಜನಿಸಿದನು ಕಶ್ಯಪನು ಕಶ್ಯಪ | ಮುನಿಯು ದೆಸೆಯಿಂ
ದಾದುದಿನ ಸೀ | ದಿನಪ ವಿಸ್ತರವೆಂದು ಮುನಿ ನುಡಿದನು ಕುಮಾರರಿಗೆ ॥ ೧೨ ॥
ಆ ಮಹಾಮುನಿವರನ ಬಸುರಲಿ | ತಾಮರಸಸಖ ನುದಿಸಿದನು ಬಳಿ | ಕಾ ಮಹೋತ್ಪಲ
ಬಾಂಧವಂಗಾ ಮನು ಮಹೀಪಾಲ ॥ ಭೂಮಿಯಲಿ ಜನಿಸಿದನು ನಿಗಮ | ಸ್ತೋಮ
ಕಾದಿ ಪ್ರಗಾಸನೊಲು | ದ್ದಾಮಕುಕ್ಷಿ ನೃಪಾಲ ಜನಿಸಿದನಾ ಮಹೀಪತಿಗೆ ॥ ೧೩ ॥

ಕೇಳಿದೈ ಕುಶ ಬಳಿಕ ಕ.ಕ್ಷಿನೃ । ಪಾಲನಿಂದಿತ್ತಲು ವಿಕುಕ್ಷಿನೃ। ಪಾಲನರ ಾದನು ಕಣಾ ಲವ ಕೇಳು ಭೂತಳಕೆ ॥ ಮೇಲೆ ತನ್ನೃಪಗರ್ಭವರ ವರು । ಜಾಲಯುದೊ ಳುದ್ಭವಿಸಿದನು ಭೂ। ಪಾಲ ಚೂಡಾರತ್ನ ಮಿಕ್ಷ್ವಾಕು ನಾಮದಲಿ ॥ ೧೮ ॥ ಆಪರಂ ಪರೆಯುನ್ವಯದಲಿ ದಿ ಲೀಪ ನೃಪಸಂಭವಿಸಿ ಸಪ್ತ। ದ್ವೀಪ ಕಧಿಪತಿಯಾದನಲ್ಲಿಂ ಮೇಲೆ ರಘು ವೆಂಬ ॥ ಭೂಪನಾಳಿದ ನವನಿಯನು । ರಾಜೋಪಲಾಲಿತ ಧರ್ಮಮಾರ್ಗದ। ಲಾ ಪರಂತಪಗಾದನಾತ್ಮಜನಜ ಮಹೀಪಾಲ ॥ ೧೫ ॥ ಅಜನೃಪಾಲಕ ನರಸುತನ ಭೂ। ಭುಜರ ಮಿಕ್ಕುದು ಪೂರ್ವದವುಳಾಂ । ಬುಜ ಸಖಾನ್ವಯದಮೃತಕರವಂಶಾಭಿಜಾತಕದ ॥ ಭುಜಪರಾಕ್ರಮ ಚಕ್ರಿಯನು ದಿಗು। ವಿಜಯ ವಿಕ್ರಮಶಕ್ರನನು ನೃಪ। ಸೃಜಿಸಿದನು ನಿಜಮಹಿಳೆಯಲಿ ದಶರಥಮಹೀಪತಿಯ ॥ ೧೬ ॥ ದಾಶರಥಿ ಸುತ ಕೇಳು ಬಳಿಕೀ । ಕೋಸಲದ ನೃಪಸುತೆಯ ಮಘದ ಮ । ಹೀಶ ತನುಜೆಯು ಕೇಕಯಕ್ಷ್ಮಾಪಾಲ ನಂದನೆಯ ॥ ಆ ಸುತೆಗೆ ಪರಿಣಯುವಮಾಡಿ ಮ। ಹೀಶ ಪಟ್ಟವಕಟ್ಟಿ ಸ್ವಾರ್ದನು। ವಾಸವನ ಗದ್ದುಗೆಗೆ ತಾನೆಂದಾಮಹೀಪಾಲ ॥ ೧೭ ॥ ಬಳಿಕ ನಿಂದುದು ರಾಜ್ಯಲಕ್ಷ್ಮಿಯು। ವಿಳಸದಘನವತೇಜ ದಿಜ್ಮಂ । ಡಲಪರೀತ ಪುರಂದರನ ವೈಭವಕೆ ಮಿಗೆಲೆಸಿಸಿ ॥ ಇಳೆಯೊಳಿನ್ನಾರಧಿಕರವನಿಪ । ತಿಲಕರಲಿ ಷೋಡಶ ನೃಪ ಲರ। ನುಳಿದವರ ಹೇಳದಿರು ನಿಮ್ಮವೊಲೆಂದನಾವನಿಪ ॥ ೧೮ ॥ ಶಿಶುತನದಲಿ ಸಮಸ್ತ ವಿದ್ಯಾ। ವ್ಯಸನಿಗಳು ಯೌವನದಲನುಭವ। ವಿಷಯಗಳು ಮುಪ್ಪಿನಲಿ ಮುನಿಮಾರ್ಗಾನುವರ್ತಿಗಳು ॥ ಅಸು ಪರಿತ್ಯಾಗದಲಿ ಯೋಗದ । ಬೆಸುಗೆಗಳ ಮಾಡುವರು ಕೇಳೈ। ಕುಶನೆ ನಿಮ್ಮನ್ವಯದ ರಾಯರು ಲವನೆ ಕೇಳೆಂದ ॥೧೯॥ ಕುಲದಲಧಿಕರು ಕೀರ್ತಿಯಲಿ ವೆ। ಗ್ಗಳರು ಕರ್ಮಫಲಂಗಳಲಿ ಸಂ। ಮಿಳಿತರಂಭೋರಾಶಿ ಪರಿವೃತ ಧಾತ್ರಿವಲ್ಲಭರು ॥ ಬಲವಿರೋಧಿ ಸಹಾಯ ಶೌರ್ಯ। ಕಲಿತ ರಿನಕುಲದವನಿಪಾಲಕ। ತಿಲಕರನರಿಂದೀ ಮಹೀಪತಿ ಹತ್ತುಮಡಿಯೆಂದ ॥೨೦॥ ಚರಿಸುವುದು ರಥವೊಂದು ವಾಣೀ। ವರನ ಪುರಕೆಂದ್ರಾಗ್ನಿ ಯಮ ಕ । ರ್ಬುರ ವರುಣ ವಾಯ್ವಗ್ನಿ ಕೌಬೇರೀಶಪುರಗಳಿಗೆ ॥ ಉರಗರಾಜನ ನಗರಿಗವರಿಂ। ಧರೆಯೊಳಗೆ ಹೆಸರಾಮದಾ ಭೂ। ವರ ಶಿರೋರತ್ನಂಗೆ ದಶರಥನೆಂಬ ಗುಣನಾಮ ॥೨೧॥ ತೆರುವರೀತಗೆ ಕಪ್ಪವನು ಸಾ। ಗರಪರೀತ ಸಮಸ್ತಪೃಥ್ವೀಶ್ವರರು ಪುರಹೂತಾದಿ ನಾನಾಲೋಕಪಾಲಕರು ॥ ನರಭುಜಂಗಮರಾಯರಾ ದಶ । ಶಿರನು ತಪ್ಪಿಸಿ ಖಂಡೆಯದ ಪ್ಪೈ । ಸಿರಿಯದೆಂತಹೊ ನಿಮ್ಮ ದಶರಥಸಾರ್ವಭೌಮುಕನ ॥೨೨॥ ಹಗಲು ಸಂಧ್ಯಾರಾಗಡೆಸೆವ । ಬಗೆಯ ವಿಭ್ರಾಂತಿಯಲಿ ನೀರಜ। ಮುಗಿವ ವಷ್ಯಾಜನಿತ ದಾವಜ್ವಾಲೆಯೆಂಪಳುಕೆ ॥ ದಿಗಿಭವಂಜುವ ವರೀನೃಪರು ವೈ । ತೆಗವ ರುಲ್ಕಾಪಾತ ಭೀತಿಯ । ಬಿಗುಹಿನಲಿ ಬಹಳ ಪ್ರತಾಪನದೆಂತೊ ದಶರಥನ ॥ ೨೩ ॥ ಶರಧಿಪರಿವೃತವಳೆಯದವನೀ। ಶ್ವರರ ಮಕುಟಮರೀಚಿ ಮಂಜರಿ। ಚರಣನಖ ಮುಕ್ರರಂಗಳಲಿ ಬಿಂಬಿಸುವುದನವರತ ॥ ಅರಿ ವಿಕಾರದಲಾವನೊಬ್ಬನು। ಶಿರವ ನೆಗಹುವ ನಿಲ್ಲವೇನ। ಚ್ಚರಿಯೊ ಮಹದುದಿತಪ್ರತಾಪಪತಂಗ ವಂಶಜನ ॥೨೪॥ ಜಲಧಿ ನೊಗೆಯುಲಿ ಮಹಿಯೊಳಿನಮಂ। ಡಲವು ಬೀಳಲಿ ಬಿಸುಡಲವನೀ। ತಳವನಾಕಾಶದಂತೆ ಧರೆಗೋರ್ಗುಡಿಸಲಮರಾದ್ರಿ ॥ ಹಳಿವು ಹೊರದಾನೃಪಸುಭಾಷಾ। ಕಲಿತಸತ್ಯಕೆ ನಿಮ್ಮ

ಭಾಸ್ಕರ | ಕುಲಲಲಾಮಂಗಾರುಸರಿ ಸುರನರಭುಜಂಗರಲಿ ||೨೫|| ಧನಪತಿಯಃಸಿರಿ ವಾರಿಧರವಾ | ಹನನ ಭೋಗ ಸಮಿರಾರಣನ ಬಲ | ವಿನನತೇಜವಸೂನವಿತರಣ ಚಾರು ಚಂದ್ರಮನ|| ವನಧಿಪನ ಗಂಭೀರ ರವಿನಂ | ದನನ ನಡವಳಿ ಧರೆಯುಸ್ಥೈರಣೆ| ಯಿನಿತು ದಶರಥ ಸಾರ್ವಭೌಮಂಗಲ್ಲದಿಲ್ಲೆಂದ || ೨೬ || ಹುಸಿ ನುಸುಳಃ ಡೊಳ್ಳಾಸ ಹಿಂಸಾ | ವ್ಯಸನವಾರಡಿ ಬಂಧದಳವುಳ| ವಸುರಭಯ ದುರ್ಭಿಕ್ಷ ನಾನಾವರ್ಣಸಂಮಿಶ್ರ|| ಪಿಸುಣ ಧರ್ಮದ್ರೋಹ ರುಜೆ ಕೈ | ವಸಕವಳಿವಂ ನ್ಯಾಯುವೆಂಬಿವ | ರೆಸಕಹೊದ್ದದಯೋಧಿಪನ ಧರಣೀತಳಾಗ್ರದಲಿ ||೨೭|| ಮುಳಿಯರಿತರರಸಿರಿಗೆ ಹರೆಯದೊ | ಳಳಿಯರಾಪರಮಾಯುವಿನ ಕ | ಟ್ಟಳಿಯೊಳಲ್ಲದೆ ನೋಡರನ್ಯವಧೂಜನಾವಳಿಯ | ಕಲಸರಘಃಸಂಹತಿಯ ಸುಜನರ | ನಿಳಿಕೆಗಾಣ ರಸೂಯುದಲಿ ಮನ | ವೆಳಸರಲ್ಲಿಯ ವಿವಿಧವರ್ನದ ವಿಷಯದಖಿಳಜನ ||೨೮|| ನಿಂದೆಹೊದ್ದದು ನಡವಳಿಯೊಳಾ | ಕುಂದು ಹೊಗದುಬ್ಬರದುಪಪ್ಲವ | ಸಂಧಿಸದು ನೃಪಬಾಧೆ ಬಾಧಿಸದಧಿಕದಃರ್ಭಯದ || ಬಂದಿ ಹೊಗದಾಸರುವಿತಾಳಿಸ| ನಿಂದಿರದು ನೆಲೆಗೊಳ್ಳದಾಜನ | ವೃಂದದಲಿ ಕೆಟ್ಟಾಸೆ ದಶರಥನೃಪನ ರಾಜ್ಯದಲಿ ||೨೯|| ಇಳೆಯೊಳುಳ್ಳ ಸಮಸ್ತ ದೇಶಂ | ಗಳಿಗೆ ಮಂಗಳತರವಲೇ ಕೋ | ಸಲಮಹಾವನಿ ಕೌಸಲಾಪತಿ ನೃಪಪುಂಗಳಿಗೆ || ತಿಲಕವಲ್ಲಾ ರಾಯರೊಳಗ | ಗ್ಗಳಲಾ ದಶರಥ ನೃಪಾಲಕ | ನೆಲೆ ರಘುಕ್ಷಿತಿಪಾಲಸುತ ಕೇಳೆಂದು ಮುನಿನುಡಿದ ||೩೦|| ಸುರನರೋರಗ ಭುವನಲಕ್ಷ್ಮಿಯ | ಸುರುಚಿರದ ಮುಕ್ತಾಫಲದ ಬಂ| ಧುರದ ಕಾಂಚೀದಾಮದಂತಿರೆ ಸಕಲ ವಿಭವದಲಿ || ಅರಸ ದಶರಥ ಚಕ್ರವರ್ತಿಯ | ಧರೆಯ ಪರಿವೃತ ಕೀರ್ತಿಲತೆ | ವಿಸ್ಫುರಿಸುತಿರ್ದುದು ಸಕಲ ಜನಪತಿ ಜನದ ಕಣ್ಮನಕೆ | ||೩೧||

ಮೂರನೆಯ ಸಂಧಿ ಸಮಾಪ್ತಂ.

ನಾಲ್ಕನೆಯ ಸಂಧಿ.

ಸೂಚನೆ|| ಲಲಿತ ಸಂತಾನಾಭಿವೃದ್ಧಿಯ | ನೆಲೆಗೆ ಬಳಲುವ ಭೂಪತಿಗೆ ಕೈ | ಗೊಳಿಸಿವನು ಕಾಮ್ಯಾಧ್ವರವನು ವಸಿಷ್ಠಮುನಿರಾಯ |

ಪದ್ಯ|| ಕೇಳಿದೈ ಕುಶ ನಿಮ್ಮ ಮುತ್ತಯ್ಯ | ನಾಳುತಿರ್ದನಯೋಧ್ಯೆಯನು ಚಿರ| ಕಾಲ ಪೊಂದಾನೊಂದುದಿನ ದರ್ಪಣದ ನೋಟದಲಿ || ತಾಳಿದನು ಚಿಂತೆಯನು ಸಂತತ| ಪೇಳಿವೇಬೈತಪ್ಪ ವಾರ್ಧಿಕ| ಕಾಲವಿಕೃತಕೆ ಕಲಿತಫಲಿತಜರಾಶಿರೇಕದಲಿ||೧|| ವ್ಯರ್ಥವಾಯ್ತು ಕಟಕಟ ಜನ್ಮನಿ | ರರ್ಥವಾಯ್ತನ್ವಯದ ಸಿರಿ ಪರ | ಮಾರ್ಥನಾಪುತ್ರಸ್ಯ ಲೋಕಾನಾಸ್ತಿಯೆಂಬುವದು || ಸ್ವಾರ್ಥವಾಯ್ತೆನಗಧಿಕಸುಗತಿ | ಸ್ವಾರ್ಥಸಿದ್ಧಿಗೆ ಸಲ್ಲವನಿಗ| ನರ್ಥಭಾಜನನಾದೆನೇ ತಾನೆಂದು ಬಿಸುಸುಯ್ದ||೨|| ಮಕ್ಕಳಿಲ್ಲದ ಸಕಲ ಶಿರಿ ಶವ| ಕಿಕ್ಕಿದಖಿಳಾಭರಣವಿಭ್ರಮ| ಮಕ್ಕಳಿಲ್ಲದ ಸೊಬಗು ಪತಿಶೂನ್ಯಾಂಗನಾ ವಿಭವ || ಮಕ್ಕಳಿಲ್ಲದ ನಾರಿಯರು ನರ | ಕಕ್ಕೆ ಸಲುವರುಗಡ ಮಹಾದೇ | ವಕ್ಕಟಾ ಕಡುಗೇಡಕೆಟ್ಟೆನೆ ಶಿವಶಿವಾಯೆಂದ || ೩ || ಯೇನುಗತಿ ನಿಜವಂಶವಂಧ್ಯಾ | ಮಾನಿಸಿಗೆ ಪತಿಮಾಡಿನೇ ಗತ| ಸೂನುವಿವನೆಂದೆನ್ನ ಹೊಗಿಸರು ಸ್ವರ್ಗವನು ಸುರರು||

ಯೇನವಮಾಡುವೆನೇನು ದಿಕ್ಕಿನ । ಗೇನು ಹದನೆಂದಳಲಿ ಬಳಲುವ । ಹೀನಧೈರ್ಯ
ನನುಪಚರಿಸಲು ವಸಿಷ್ಠನೈತಂದ ॥೪॥ ಭೂಮಿಜಾಸುತ ಕೇಳ್ವಸಿಷ್ಠ ಮು । ಹಾಮುನೀಂ
ದ್ರನಕೂಡೆ ಬಂದರು । ವಾಮದೇವಮುನೀಂದ್ರಋಷಿ ಜಾಬಾಲಿಗಳು ಬಳಿಕ ॥ ವ್ಯೋಮ
ಕೇಶ ವಿರಿಂಚಿ ಲಕ್ಷ್ಮೀ । ಧಾಮರಿವರೆನಗೆಂಬ ಭಾವದ । ಲಾ ಮಹಿಪನೆರಗಿದನು ತನ್ಮುನಿ
ವರರ ಚರಣದಲಿ ॥ ೫ ॥ ನಿಮಿಸುತಾಸುತ ಕೇಳು ನಿಗಮ । ಕ್ರಮದಲಾ ಮುನಿವಂಶ
ಲಕ್ಷ್ಮೀ । ರಮಣರನು ಸತ್ಕರಿಸಿದನು ಸನ್ಮಾನ ಪೂಜೆಯಲಿ ॥ ದ್ಯುಮಣಿವಂಶ ಲತಾಭಿ
ವೃದ್ಧಿ । ಭ್ರಮೆಯ ಭೂಪನಕಂಡು ಕರುಣದ । ಮಮತೆಮಿಗೆ ಮಧುರೋಕ್ತಿಯಲಿ
ನುಡಿಸಿದರು ನೃಪವರನ ॥೬॥ ಮೊಗದ ದುಗುಡವಿದೇನು ಮನದ । ಬ್ಬೆಗವಿದೇನನು
ತಾಪಭೇದ । ಸ್ಥಗಿತ ಜಾಡ್ಯದ ಜಂಜಡವಿದೇನೆನುತ ಬೆಸಗೊಳಲು ॥ ವೊಗುವ ಕಂಬನಿ
ಗಳಲಿ ಕಂಠದ । ಬಿಗಿದ ಶಿರೆಗಳ ಸೇದುವಕ್ಕಿಯ । ವಿಗತಪರಿತೋಷಿತನು ಪಾವನ
ತರಂಗಿಂತೆಂದ ॥೭॥ ಸುತವಿಹೀನರಿಗಿಲ್ಲ ಗಡ ಸುರ । ಪತಿಯ ಭದ್ರಾಸನ ಮಹಾಕ್ರತು ।
ಪತಿಗಳೋಲಗಗೆ ಸಲ್ಲರವರ್ಗಳು ಗಡ ಸುಶಾಸ್ತ್ರದಲಿ ॥ ಗತಿಯದಾವುದು ತನಗೆವಂಶೋ ।
ನ್ನತಿಯ ಹೆಚ್ಚುಗೆಗೇನು ಹದನೆಂ । ದತಿಶಯದ ಭೇದದಲಿ ಕಂಬನಿದುಂಬಿದನು
ಭೂಪ ॥೮॥ ಬಿಡದೆ ಬಂದಿನಕುಲದ ಸಿರಿಯಿಂ । ದೆಡೆವರಿವುದಿಕ್ಷ್ವಾಕುವಂಶದ । ಕಡಲು
ಬರತುದು ಬೇರು ಬಿಟ್ಟುದು ರಘುಕುಲದ್ರುಮದ ॥ ನಡವಳಿಯ ಗುಣವೋ ಪುರಾಕೃತ ।
ದೊಡಲ ದುಷ್ಕೃತಫಲವೋ ತನಗೆಂ । ದಡಿಗಡಿಗೆ ಮೂಗಕ್ಕಿಯಲಿ ಮರುಗಿದನು ನರ
ನಾಥ ॥ ೯ ॥ ಹೊರೆದೆನಕಟಾ ತನುವನಿದ ಸೂ । ಕರನ ಶುನಕನವೋಲು ಕಾಮಾ ।
ತುರದಿ ಮಿಗೆ ಕಂಗಾಣದಾವೆನುಸುಗತಿ ಸಂಪದಕೆ ॥ ಯರವಿಗನು ತಾನಾದೆನಿಹಪರ ।
ವೆರಡರಲಿ ಜೀವಾವಸಾನಕೆ । ಹರಹುಕೊಂಬನಲಾ ಕೃತಾಂತಕನೆನುತ ಶೋಕಿಸಿದ ॥೧೦॥
ಸಂತವಿಸು ರಾಜೇಂದ್ರ ಚಿತ್ತದ । ಚಿಂತೆಯಿದು ತಾನ್ಯೆಸಲೇ ನಿನ । ಗಂತಕನ ಭಯ
ವಿಲ್ಲ ಸಾಕಾನಾತದಂತಿರಲಿ ॥ ಸಂತತಿಯ ಸೌಭಾಗ್ಯಸಿರಿಯು ನಿ । ತಾಂತಕಿದೆಲಾನಿನಗೆ
ಸಪ್ತಸು । ತಂತು ನಿರುಪಮ ಪುತ್ರಕಾಮೇಷ್ಟಿ ಪ್ರಸಿದ್ಧಕವು ॥ ೧೧ ॥ ಇಷ್ಟವಹುದೆಲೆ
ನೃಪತಿ ಕೇಳ್ಕಾ । ಮೇಷ್ಟಿಯಲಿ ನಿನಗಾವನೆನಹೇ । ನೆಷ್ಟದೊಡ್ಡಿತು ಬಿಡು ವೃಥಾ
ಚಿಂತಾಮನೋವ್ಯಥೆಯ ॥ ಕಷ್ಟವೃತ್ತಿಯ ನೃಪನೆ ನೀಸುರ । ಶಿಷ್ಟಸದ ಸುರಪತಿಯ
ಮಣಿಮಯ । ವಿಷ್ಟರದ ಸಿರಿಸೇರುವಬು ಸಂದೇಹವೇನಿದಕೆ ॥ ೨॥ ಎಂದು ಮೂವರು
ಮುನಿಗಳಜನೃಪ । ನಂದನನನುಬ್ಬರದ ದುಗುಡದ । ಬಂಧನವ ಪರಿಹರಿಸಿ ಬಿಜಯಂ
ಗೈದರಾಶ್ರಮಕೆ ॥ ಕಂದ ಕೇಳ್ಕೈ ಬಳಿಕ ಪರಮಾ । ನಂದವನು ಪಡೆದಾ ಮಹಿಪ ನರ ।
ವಿಂದನಾಭನ ಭಜಿಸಿದನು ನಿಜಭಾವಶುದ್ಧಿಯಲಿ ॥ ॥೧೩॥

ನಾಲ್ಕನೆಯ ಸಂಧಿ ಸಮಾಪ್ತಂ.

ಐದನೆಯ ಸಂಧಿ.

ಸೂಚನೆ॥ ರಾಯ ದಶರಥನೃಪತಿಗಖಿಳೋ । ಪಾಯ ಕುಶಲ ಸುಮಂತ್ರಕನು ಮುನಿ । ರಾಯರಾಜಿತ ಋಷ್ಯಶೃಂಗನ ಕಥೆಯ ವರ್ಣಿಸಿದ ॥

ಪದ್ಯ|| ಧರಣಿಜಾಸುತಕೇಳು ದಶರಥ| ಧರಣಿಪತಿ ರವಿಕುಲದ ಪಾರಂ| ಪರೆಯು
ಪರಮಾಪ್ತ ಪ್ರಧಾನರಕರಸಿ ಮುನಿವರರ || ಮನವಚೋಭಿಪ್ರಾಯ ಮತವಿ| ಸ್ತರಣ
ವನು ಸಿದ್ಧಾರ್ಥಮುಖ್ಯಂ| ಗೊರೆದು ನಿಮ್ಮಭಿಮತವದೇನೆಂದರಸ ಬೆಸಗೊಂಡ || ೧ ||
ಕ್ರತುವಕೈಕೊಳ್ ಜೀಯ ಸತ್ಯ | ವ್ರತವಲಾ ನುಡಿತಪ್ಪುವದೆ ಮುನಿ| ಪತಿ ವಸಿಷ್ಠಾ
ನಾಮದೇವ ಮಹಾತಪೋಧನರ || ವಿತತ ಕಾತ್ಯಾಯನ ಮಹಾಧ್ವರಕೆ ದೀ| ಕ್ಷಿತನು ನೀನಂ
ಗವಿಳರಾಜ್ಯ | ಪ್ರತತಿಯನು ಬರಿಸುವೆವು ತರಿಸುವೆವಖಿಳ ವಸ್ತುಗಳ || ೨ || ಎಣಿಕೆ
ಯಾವುದು ಜೀಯ ಧರ್ಮದ| ಕಣೆಯಲಾ ನೀನಿನ್ನ ಭಾಗ್ಯಕೆ| ತೃಣಕಣಾ ಸ್ವರ್ಗಾದಿ
ಭೋಗದ ಸಕಲ ಸೌಭಾಗ್ಯ || ಗುಣಗಣಾಲಂಕೃತನ ಸುರಮುನಿ| ಗಣಲತಾಂಘ್ರಿದ್ವ
ಯನ ನಾರಾ| ಯಣನಕೃಪೆ ನಿನಗುಂಟೆನುತ ಕೊಂಡಾಡಿದರು ನೃಪನ || ೩ || ಬಳಿಕವರ
ಮತದಿಂ ಮನುಕುಲ | ತಿಲಕನತಿಸಂತೋಷದಲಿ ನಿ| ಶ್ಚಲತೆಯಲಿ ಕೈಗೊಂಡನಾ
ಕಾಮಿತ ಮಹಾಧ್ವರವ | ಕಳುಹಿದನು ನಯದಲಿ ಸುಮಂತ್ರನ | ನುಳಿಯೆ ವೀಕ್ಷ
ಮಹಾಪ್ರಧಾನಾ | ವಳಿಯನಾಪ್ತಾಲೋಚನೆಯಲಾ ಮಂತ್ರಿಗಿಂತೆಂದ || ೪ || ಎಲೆ
ಸುಮಂತ್ರ ಸುಮಂತ್ರಮುಖದಲಿ| ಫಲಿಸುವುದೆ ಸುತಲಾಭವನ್ವಯ | ಲಲಿತಲತೆ ಕುಡಿ
ಗೊಂಬುದೇ ಕಾಮೇಷ್ಟಿ ಯಜ್ಞದಲಿ || ಕೊಲಗಿದೆಮ್ಮನ್ವಯದ ರಾಜಾ | ವಳಿಯು
ಲಾಗುವುದೆ ಪುತ್ರಸಂತತಿ| ಸುಲಭವಹುದೇನನಗೆನುತ ಬೆಸಗೊಂಡನಾಭೂಪ || ೫ ||
ಅರಸ ಕೇಳು ಸನತ್ಕುಮಾರನು| ಸರಸಿರುಹಸಂಭವನ ಸಭೆಯಲಿ| ಸುರಮುನೀಂದ್ರರ
ಮಧ್ಯದಲಿ ನಿಮ್ಮನ್ವಯಾಗತದ || ಪರಿವಿಡಿಯ ರಘುವಂಶವನು ವಿ| ಸ್ತರಿಸಿದನು
ವಿಮಲಾಗ್ನಿ ವರ್ಣನ| ನಿರುಪಮದ ಸಾಮ್ರಾಜ್ಯಪರಿಯಂತಾದಿ ಕಾಲದಲಿ ||೬|| ಮೇಲೆ
ತಾಂಡವಪಿತನ ಶಾಪವಿ| ಶಾಲರಚನದ ಪುತ್ರಲಾಭ ಫ| ಲಾಳಿದೊರಕದೆ ಮಾಣದಿಮ
ತಾಸುಪ್ರಸಿದ್ಧವಲೆ || ಕೇಳಿಬಲ್ಲೆ ನಿದಲ್ಲದಖಿಳ ಸು | ರಾಳಿಗಳದೂರಿನಲಿ ಲಕ್ಷ್ಮೀಸ್ತ್ರೀ |
ಲೋಲ ನಿನ್ನುದರದಲಿ ಜನಿಸುವನೆಂದು ಪೂರ್ವದಲಿ ||೭|| ಅದರಿನಿಂ ರವಿವಂಶಲಕ್ಷ್ಮೀ
ಸುದತಿ ಗರ್ಭಿಣಿಯಾಗದಿರಳೆಂ | ಬುದು ಪುರಾತನ ಮುನಿಸುಭಾಷಿತವದು ಯಥಾರ್ಥ
ವಲೆ || ವಿದಿತವೈದಿಕ ಲೌಕಿಕದ ಸಂ| ಪದದ ಸೌರಂಭಾತಿಶಯದ| ಭ್ಯುದಯದೊಳು
ನಿನಗಾರು ಸರಿ ರವಿಕುಲದ ರಾಯರಲಿ ||೮|| ಅರಸ ಕೇಳ್ ಕ್ರಾಮ್ಯಾಧ್ವರಕೆ ಮುನಿ| ವರ
ವಿಭಾಂಡಕುಮಾರಕನ ನೀ | ಕರಸಿಕೋ ತನ್ಮುನಿವರನನಾಚಾರ್ಯ ಭಾವದಲಿ ||
ವರಿಸುವರ ಪಿಂಡಪ್ರಸಾದೋ| ತ್ಕರದಲಹರಾತ್ಮಜರು ಬಳಿಕಾ| ಹರಿಹರಬ್ರಹ್ಮಾಮ
ರೇಂದ್ರರು ಪಾಡೆ ನಿನಗೆಂದ || ೯ || ಎನೆ ಧರಾಧಿಪನತುಳ ಹರುಷದ | ಹೊನ್ನಲಿನಲಿ
ಹೊಮರೆದ್ದು ವಿಕಸಿತ| ವದನರುಹಾಸನನಾಗಿ ನುಡಿದನು ವರಸುಮಂತ್ರಂಗೆ | ಮುನಿಪ
ದಾರಾಮುನಿಯ ಮಹಿಮೆಯ| ವಿನುತ ಚಾರಿತ್ರವನು ಬಲ್ಲರೆ| ತನಗೆ ಹೇಳೆಂದಾತ್ತ
ಮಾನಸನಾಗಿ ಬೆಸಗೊಂಡ || ೧೦ || ಅರಸಕೇಳಾದರೆ ತಪೋಧನ | ರರಸು ಕಶ್ಯಪ
ಮುನಿಯು ಬಲ್ಲಿದ | ಸರಸಿರುಹಸಂಭವನ ಮಾನಸಪುತ್ರನೆಂಬುದನು | ಧರೆಯೊಳಗೆ
ಬಳಿಕಾ ಮುನಿಪಗವ | ತರಿಸಿದನು ಶತಧೃತಿಸದೃಶೋ | ತ್ತರ ವಿಭಾಂಡಮುನೀಂದ್ರ
ನೆಂದಾತೇಂದ್ರ ಕೇಳೆಂದ || ೧೧ || ಸುರರಸೂರ್ವಶಿ ಸುರಪತಿಶ್ರವದ| ಬಳಿಕ ಕಾಮ
ಗಪಥ್ಯನೆಂಬ | ಜ್ವಲತೆಯಲಿ ತನ್ಮುನಿಪನಘಮುನಿ ಸಮುದ್ರದಲಿ | ಕ

ವಳೆಸಿದನು ಕಂಡು ಮೃಗವನು । ನಿಲಿಸಲಾರದರಸ ಕೇಳು । ಚ್ಛಳಿಸಿದುದು ವಾರಿಯಲಿ
ವೀರ್ಯ ವಿಭಾಂಡಮುನಿವರನ ॥ ೧೨ ॥ ಜಲವಸಿಂದ್ರಿಯಗೂಡಿ ತೃಷೆಗ । ವ್ವಳಿಸಿ
ಬಂದು ಕುರಂಗಿ ಜಠರದೊ । ಳವಡಿಸಿದುದು ಜೀವದ ದದರುದರದಲಿ ಮುನಿವೀರ್ಯ ॥
ಇಳುಹಿತವನಿಗೆ ಋಷ್ಯಶೃಂಗನ । ನೆಲೆ ಮಹೀಪತಿ ಕೇಳು ಮುನಿಪತಿ ಸಲಹಿದನು
ಸಾರಂಗಶೃಂಗಾಹ್ವಯುವಲಾ ಮುನಿಯ ।೧೩॥ ಧರಣಿಪತಿ ಕೇಳೀಚೆಯಲಿ ಸುರ । ಪುರದ
ಸಿರಿಯನು ಬಯಸಿ ಬಹಳ । ಧ್ವರವ ಕೈಕೊಂಡನು ಕಣಾ ರೋಮಾಂಘ್ರಿಭೂಪಾಲ ॥
ಹರಮುದೀ ವೃತ್ತಾಂತವಮರೇ । ಶ್ವರನ ಸಭೆಯಲಿ ರೋಮಪಾದನ । ಸಿರಿಗೆ ಸೇವಕ
ನಾದ ನಿಂದ್ರ ನವಗ್ರಹಂಗಳಲಿ ॥ ೧೪ ॥ ವರುಷ ಹನ್ನೆರಡಬ್ದಪರಿಯಂ । ತರಸಿಲಲು
ಭೆ ಯದಿಂದ ನಿಂಪಾ । ವರನುಹಾಕ್ರತು ಶತಗಳಿಗೆ ಹನ್ನೆರಡು ಬಳಿಕುಳಿಯೆ ॥ ತರಣಿಯು
ರುಬೆಗೆ ಧರಣಿಕಲ್ಪದ । ಹರನಭಾಳಾಂಬಕದ ಶಿಖಿ ಸೀ । ವರಿಸಿದಂತಾಯ್ತೀಸನೆಂಜಿ
ನವಗ್ರಹಾಗಮವ ॥೧೫॥ ಹೊಳೆಗಳುರೆ ಬತ್ತಿದವು ನಿರ್ಝರ । ಜಲವಡಂಗಿತು ಬರತು
ದಗ್ಗದಕೆಳನು ಕೂರ್ಮನ ಬೆನ್ನಗಿಳಿದವು ಜಲತಟಾಕಗಳು ॥ ಅಳಿದುಳಿದ ಜನಪದವ
ಳಳವಳ । ಗೊಳುತ ಕಂಗೆಟ್ಟಂಗಭೂಪನ । ಬಳಿಗೆ ಬಂದೊದರಿದರು ದುರ್ಭಿಕ್ಷದ ಮಹಾ
ಭಯುವ ॥ ೧೬ ॥ ಮನ್ನಿಸಿದ ನವರುಗಳ ನತಿಸಂ । ಪನ್ನತೆಯ ಧನಧಾನ್ಯದಲಿ ಕಡು ।
ಖಿನ್ನನಾದನು ನೃಪಸ್ರಜಾಕ್ಷೋಭಪ್ರಯುಕ್ತಿಯಲಿ ॥ ನನ್ನಿಕಾರರದೇವ ಕೇಳ್ವಾ । ಕಿನ್ನೆ
ನಗೆ ಸಾಂಮ್ರಾಜ್ಯಸುಖ ಸಂ । ಪನ್ನತೆಯು ಸೌಭಾಗ್ಯವೆಂದು ವಿರಾಗಪರನಾದ ॥ ೧೭ ॥
ಕರೆಸಿ ಮಂತ್ರಿಪುರೋಹಿತರ ಕೂ । ಡೊರೆದನೇಕಾಂತದಲಿ ಸಾಕೆನ । ಗರಸುತನ ಸಂಘ
ಟಿಸಿದುದು ದುಷ್ಕೃತಪುರಾಕೃತದ ॥ ಸುರರು ಮುನಿದರೊ ಧರ್ಮದೇವತೆ । ಪರಿಭವಿಸಿ
ದಳೊ ಭಾಗ್ಯವಧು ಮೊಗ । ದಿರುಹಿದಳೊ ಮರೆಮಾತದೇಕೆಂದರಸ ಚಿಂತಿಸಿದ ॥೧೮॥
ಪರರ ಸತಿಯನನಂಗರತಿಯಲಿ । ಬೆರಸಿತಿಲ್ಲ ಸಮಸ್ತ ಸುಜನರ । ಸಿರಿಗೆ ತಪ್ಪಿದುದಿಲ್ಲ
ದೇವದ್ವಿಜರ ಪೂಜೆಯಲಿ ॥ ಬರಡು ಮನವನು ಮಾಡಿತಲ್ಲಾ । ಧರೆಯನಳುಪಿದುದಿಲ್ಲ
ಗುರುಹಿರಿ । ಯರಲಿ ಹೊದ್ದಿದ ಪಾಪಫಲವಿನ್ನೆಂತುಟೋ ಯೆಂದ ॥ ೧೯ ॥ ವಿನುತಸತ್ಯ
ಸುಭಾಷಿತಕೆ ಪ್ರತಿ । ಮೊನೆಯನೊಡ್ಡಿದುದಿಲ್ಲ ಪರಿಪಾ । ಲನೆಯೊಳೂಣೆಯವಿದ್ದುದಿಲ್ಲ
ಮದೀಯ ಜನಪದವ ॥ ಜನಪಧರ್ಮದ ಪದ್ಧತಿಯೊಳೊಂ । ದಿನಿತು ತಪ್ಪಿದುದಿಲ್ಲ
ವಕಟಿನ । ಗಿನಿತುಕೊಟ್ಟಪೆ ದೈವದುಷ್ಕೃತಫಲವಿದೇನೆಂದ ॥ ೨೦ ॥ ಎಂಬ ಸಮಯ
ದಲಿಕಿವಸಂಜೆಯೊ । ಲಂಬರವಿನಂಜರ ಮಣಿಸ್ರತಿ । ಬಿಂಬವೆನೆ ನಾರದನು ನೀತಿವಿಶಾ
ರದನು ಬಳಿಕ ॥ ಅಂಬಕದ ಸಲಿಲದ ತುಷಾರಕ । ದಂಬಕದ ಪತನದಲಿ ಮುನಿಯ ಪ
ದಾಂಬುಜಕೆ ಚಾಚಿದನು ಮಣಿಶಿರವನು ಮಹೀಪಾಲ ॥ ೨೧ ॥ ದುಗುಡವ್ಯಾಕೈ ಭೂಪ
ಬಿಡು ಬಾ । ಧೆಗಳು ಬಳಿಸಲಿಸುವವೆ ಪೂರ್ವದ । ಯುಗದರಾಯರಿಗಗ್ಗಳನಲಾ ಗುಣ
ಚರಿತ್ರತೆಗೆ ॥ ಸೊಗಸದವರನು ಬಲ್ಲೆ ನಿನಗೆಂ । ದೊಗುವ ಕರುಣಾರಸಗಳಲಿ ಮುನಿ ।
ನೆಗಹಿನುಡಿದನು ರೋಮಪಾದ ಮಹಾಮಹೀಶಂಗೆ॥೨೨॥ ಅರಸ ಕೇಳೈ ನಿನಗೆ ಸೇರುವ
ಹೀಗೆ ಮುನಿದನು ಶಕ್ರನಾತನ । ಸಿರಿಗೆ ನಿಲುವೆಂತುಂಟು ನಿನ್ನಯ ನಿಜಮನೋರಥದ॥
ಪರಿಯ ಕೇಳೈ ಋಷ್ಯಶೃಂಗನ । ಕರಸಿಕೊ ಪಟ್ಟಣಕೆ ಸರಿಯಾ । ರರಸ ನಿನಗಾಬಳಿಕ
ಸುರನರ ನಾಗಲೋಕದಲಿ ॥೨೩॥ ಹರನು ಪೂರ್ವದಲಾ ಮಹಾಮುನಿ । ವರನ ಜನನ

ದೋಳಿತ್ತು ವರವಂ | ಟರಸ ಕೇಳ್ದುರ್ಭಿಕ್ಷದಾತುರ ಬಾಧೆಭೇದಗಳು || ಇರದವೋಲ್ಪನ್ನುಸಿಪಸಿಪನಾ| ಪರಿಯೊಳೆಂದವರಿಂದ ನೀನಾ | ವರವಿಭಾಂಡಕಸುತನ ನಗರಿಗೆ ಕರಸಿಕೊಂಡೆಂದ ||೨೪|| ಕಳುಹು ಲಲನಾಜನವ ನಾಮುನಿ | ಕುಲಲಲಾಮನಬಳಿಗೆ ಸತಿಯರ | ಬಲೆಗೆ ಸಿಲುಕದವಾರು ತ್ರೈಮೂರ್ತಿಗಳೊಳಗಾಗಿ || ಸೆಲೆಯಿದೀಗೆನಲಾ ನೃಪಾಲನ | ತಿಳುಹಿದನು ನಿಜಸತ್ಯ್ರತಿಯ ಮಂ| ಗಳತೆಯನು ಕೈಕೊಂಡು ಹಾಸ್ಸನು ಹಂಸೆಯಲಿ ಮುನಿಪ ||೨೫|| ರಾಮ ಕೇಳ್ಕೈ ಬಳಿಕಲಾ ಮುನಿ | ರಾಯನಾಜ್ಞೆಯಲಂಗಭೂಮಿಯ | ರಾಯನಬಲಾಜನವ ಕರಸಿದನವರಿಗುತ್ತಮದ | ನಾಯಕಿಯರನು ಪುಷ್ಪಚಾಪಶ | ರಾಯುಧನ ಮುಂಗುಡಿಯ ಸೇನಾ | ನಾಯಕಿಯರನು ನಗರದನುಪಮವಾರನಾರಿಯರ ||೨೬|| ಸುರಪುರದ ಸೂಳೆಯರ ಸೊಬಗಿಗೆ | ಬಿರುದನಿಕ್ಕುವ ವಿಗಡನಳಕೂ | ಬರ ಜಯಂತ ವಸಂತ ಮನುಮಥ ಚಾರುಚಂದ್ರಮರು || ಮರುಳುಮಾಡುವ ವಿವಿಧ ವಿಟರನು | ಹುರುಳುಗೆಡಿಸುವ ನವಯೌವ್ವನ | ಭರದ ವನಿತೆಯರೊದಗಿದರು ಭೂಪಾಲನಿದಿರಿನಲಿ || ೨೭ || ಸತಿಸುತರ ಪಿತೃಮಾತೃಗಳ ಸಂ| ಗತರ ಸದ್ವಂಶಾಭಿಮಾನವ | ನತಿಗಮಿಸಿ ಮಕರಧ್ವಜನ ಮಾಯೆಯನು ನೆಲೆಗೊಳಿಸಿ || ಚತುರಪುರುಷಚತುಷ್ಟಯವ ಸಂ | ತತಸಿಯಾಮಕವೃತ್ತಿಗೊಡರಿಸು | ವತಿಮನದ ಚಪಲೆಯರು ಮೋಹಿತರರಸ ಕೇಳೆಂದ ||೨೮|| ನಡೆಗಳಲಿ ಚಲುವಿನಲಿ ಚಮರಿನ | ನುಡಿಗಳಲಿ ಭಾವದಲಿ ಭಂಗಿಯ | ಕಡುಹಿನಲಿ ಕೈಮೆಯಲಿ ಮಾಯಾಮೋಹನಂಗಳಲಿ|| ತೊಡಚಿಕೊಂಬ ಸಮಸ್ತವಸ್ತ್ರವ | ನಡಕಿಕೊಂಬ ವಿದಗ್ಧಮುಗ್ಧೆಯ | ರುಡಿಗೆತೊಡಿಗೆಗಳಲೆಸೆದರು ರಾಯನಿದಿರಿನಲಿ ||೨೯|| ಮರುಕದಲಿ ಮಾಯಾವಿಳಾಸದ | ಸಿರಿಸುಗಳ ನೋಟದಲಿ ನಟಣೆಯ | ತುರುಬುಗಳ ತೋಳುಗಳ ಜಘನಸ್ಥಳದ ಚಲುವಿಕೆಯ || ಮಿರುಪಿನಲಿ ತನುರುಚಿಯನಣದು | ಬ್ಬಿರಿವ ಹೊಗರಿನ ಮುಸುಕು ಮೆಲುದಿನ| ಸೆರಗುಗಳ ಮೌಳಿಗಳ ಮಹಿಳೆಯರೆಸೆದರಿದಿರಿನಲಿ ||೩೦|| ಸರಸ ಸೊರುಳು ನನ್ನಗರುವಿಕೆ | ಗರಗರಿಕೆ ಹುಸಿನುಸುಳು ನೈಸಿಕ | ಮುರುಹು ಮುದ್ದು ವಿನೋದ ತಕ್ಕುಪಚಾರ ಬರಿಮುಳಿಸು || ಹುರುಡು ಜಾಣುಪೆಜಾಳವಸೆಚ | ಪ್ಪರಣೆ ವಂಚನೆ ನೇಹವೆಂಬೀ | ಪರಿಪರಿಯುಮಾಯೆಗಳ ಮಹಿಳಾಜನವಿರಾಜಿಸಿತು || ೩೧ || ನೋಟದಲಿ ಮಾತಾಡಿ ಹುಬ್ಬಿನ | ಬೇಟದಲಿ ಬೀಳ್ಕೊಡಿ ಕಳೆಗಳ| ಕೂಟದಲಿ ಕೀಳ್ಪಡಿಸಿ ಸರ್ವಸ್ವವನು ಸೆರೆಕವರಿ || ಗೋಟಿಗೊಳಿಸುವಬಲ್ಮೆಗಳಬ | ಲ್ಲಾಟವಿಕ ಬಹುವಿಧದ ಮಾಯೆಯ | ಜೇಟಗಾರ್ತಿಯರೊಪ್ಪಿದರು ನರನಾಥಕೇಳೆಂದ || ೩೨ ||* ಇತ್ತನವರಿಗೆ ನೇಮವನು ಮುನಿ | ಪೊತ್ತುಮನಕರಕೇಳಿಮಣಿಸುಯ | ದತ್ತವಾಭರಣಂಗಳನು ಪರಿಪರಿಯವಸನಗಳ || ಇತ್ತುಪುಷ್ಪರಥಂಗಳಲಿಮಣಿ | ಮುಕ್ತಿನ ರಥಗಳಲಿ ಹಯದಲಿ | ಮತ್ತಗಜಾರೋಹಣದಿ ಬೀಳ್ಕೊಟ್ಟನು ಮಹಿಪಾಲ || ೩೩ || ಸಿತಗುಡಾಜ್ಯಸುಲವಣಕಟುಮಿ | ಶ್ರಿತರಸಾದಿಸಮಸ್ತರಸಪೂ | ರಿತಸುಧಾಮಧುಭಕ್ಷ್ಯಫಲಭೋಜ್ಯಾದಿವಸ್ತುಗಳ || ಕೃತಕಕುಶಲೋಪಾಯದಲಿಸಿ | ಚಿತಪುಣ್ಯವಿಳಾಸಿಸೀಜನ | ತತಿಯೊಡನೆ ಕಳುಹಿದನು ನೃಪ ಕೇಳಾಮುಹೀ

* ಇಲ್ಲಿ ಶೃಂಗಾರಬೋಧಕವಾದ ಒಂದು ಪದ್ಯವನ್ನು ಬಿಟ್ಟಿದೆ.

ಪಾಲ ॥ ೩೪ ॥ ತೆರಳಿದುದು ಹರನೆಡೆಗೆ ನಡವಾ । ಸ್ಮರನಪಾಳೆಯದಂತೆ ನಡುಗಿದ ।
ರರಸಕೇಳಜಿತೇಂದ್ರಿಯರು ಮನ್ಮಥವಿರೋಧಿಗಳು ॥ ಸರಕುದೆಗವರು ಬ್ರಹ್ಮಚರಿಯದ ।
ಬೆರಳ ಜಪಗಳ ತಾಪಸರು ತರ । ಹರಿಸಿನಿಲುವವನಾವನೈ ತರುಣೀಜನಂಗಳಲಿ ॥ ೩೫ ॥
ಮೇದಿನೀಪತಿ ಕೇಳಿವೈ ಕನು । ಲೋದರನು ಕಾಮಿನಿಯ ಸೆದೆಯೊಳ । ಗಾದರಿಸಿದನು
ಕಮಲಭವ ಜಗವರಿಯೆ ನಂವನೆಯ ॥ ಐದೆಯನು ಮಾಡಿದನು ಅರೆವೆ । ಣ್ಣಾದನೀ
ಶ್ವರನಿಂದ್ರಚಂದ್ರರ । ಹಾದಿಯಿದು ನಗೆವಿಕ್ಕಿಲವರನು ಹೇಳಲೇನೆಂದ ॥ ೩೬ ॥ ನಡೆದು
ವೀಕಾಂತಾಜನಗಳು । ಗ್ಗಡದ ಪಯಣದ ಪಯಣಗತಿಯಲಿ । ಸಡಗರದ ಸೌರಂಭದಲಿ
ಸನ್ಮೋಹನಂಗಳಲಿ ॥ ಎಡೆಯಮರುವಿನ ವೀಧಿಗಳವಂ । ಗಡವಕಳೆಕಳೆದೈದಿದವರು
ಮುನಿ । ಮೃಡವಿಭಾಂಡಕುಮಾರಕನ ಕಮನೀಯಕಾನನವ ॥ ೩೭ ॥ ಭ್ರೂಲತೆಯಹದ
ವಿಲ್ಲುಗಳ ಹೊಳ । ವಾಲಿಗಳ ಹೊದೆಗೋಲುಗಳ ನಳಿ । ತೋಳುಗಳ ಬಡಿಕೋಲುಗಳ
ಸಿಳ್ಳುಗುರಿನಲಗುಗಳ ॥ ಜಾಳವಣೆಗಳ ಬಲೆಯ ತಕ್ಕಿನ । ತೌಳಿಗಳ ತೋಳುಗಳ ಸೊಂ
ಪಿನ । ಮೇಲುಮುದ್ದಿನ ಜೇಟಿಕಾತಿಯರೈದಿ ತೊಗ್ಗಿನಲಿ ॥ ೩೮ ॥ ಕರವಳಯ ಕಟಿಸೂತ್ರ
ಫವ ನೂ । ಪುರನಿನಾದದ ಜೇಟಿವರೆಗಳ । ಸರಸಹಾಸ್ಯದ ಹಾಸಗಳ ಹವಣೆಗಳ ನೈತಿ
ಕವ ॥ ಸರಳಿಸುವ ಕಕ್ಕುರಕದಂಬದ । ವಿರಚಿತಾಡಂಬರದ ನವಶಾ । ಬರಿಯರೈದಿದರ
ರಸ ಕೇಳ್ಮುನಿವ್ಯಗವನಾಂತರವ ॥ ೩೯ ॥ ಲಂಬಿಸಿದ ಫಲಭರದ ರಸದಾ । ಳಿಂಬಖರ್ಜೂ
ರಾಮ್ರಕವಳಿಕ । ದಂಬಕುರುವಕತಿಲಕ ತೆಂಗುತಮಾಲಪುನ್ನಾಗ ॥ ಜಂಬುಪನಸ
ಮಧೂಕ ತರುನಿಕು । ರುಂಬವಲಿಸುರನಂದನನಪ್ರತಿ । ಬಿಂಬವೆನೆ ಬಗೆಗೊಳಿಸಿತನುಪಮ
ಮುನಿತಪೋವಿಪಿನ ॥ ೪೦ ॥ ನಳಿನವಿಲ್ಲದಕೊಳವು ನವಶಾ । ಡ್ವಲಗಳಿಲ್ಲದನಲನು
ಹೊಸಕೆಂ । ದಳಿರುದೋರದಮರನು ಮುಘಮುಘಿಸದ ಸಮೀರಣನು ॥ ಫಲಿತವಿಲ್ಲದ
ಪುಷ್ಪಚಯ ಮ । ಕ್ಕಳುಗಳಿಲ್ಲದ ಖಗಮೃಗಾವಳಿ । ಮಳೆಗಳಿಲ್ಲದ ಮೇಘವಿಲ್ಲಾ ವನವ
ವಳಯದಲಿ ॥ ೪೧ ॥ ಗಿಳಿಯುಗಿಡಗನಕೂಟ ಮರಿಗೋ । ಗಿಲೆಯಸಾಳ್ವನಸಖ್ಯ ಹರಿ
ಕರಿ । ಕಳಭದರ ಬಂಧುತ್ವ ಫಣಿಮುಂಗುಲಿಯ ನೆಂಟುತನ ॥ ಹುಲಿಯುಹುಲ್ಲೆಯನೇಹ
ಬಿರುಗ । ತ್ತ್ರಲೆಯ ಬೆಳಗಿನ ಮೈತ್ರಿ ಮಧುರದ । ಹುಳಿಯುಸರಿಸಮ್ಮೇಳವಿದ್ದವು ಬನ
ದೊಳಾಮುನಿಯ ॥ ೪೨ ॥ ಆಟವೇ ಮೃಗಗಣದೊಡನೆ ಸವಿ । ದೂಟವೇ ವನಕಂದ
ಫಲ ತಂ । ಜೇಟವೇ ಕಂಜಾಕ್ಷ ಕಾಮಾರಿಗಳ ಭಜನೆಯಲಿ ॥ ಕೂಟವೇ ಯೋಗಾಂಗನೆಯ
ಸರಿ । ಪಾಟಿಯಲಿಹ ಋಷ್ಯಶೃಂಗನ ಆರಣ್ಯಕೆ ಕಾಮಿನಿಯರೈದಿದರರಸ ಕೇಳೆಂದ ॥ ೪೩ ॥
ಗತಿಗೆ ಕುಣಿದವು ಹಂಸ ಸಂಭಾ । ಷಿತದ ಮೃದುರವಕೊಡಗಿದವು ಪರ । ಭೃತ ವಪಾಂಗ
ಮರೀಚಿ ಚಂದ್ರಿಕೆ ಗಾಚಕೋರಿಚಯ ॥ ಗತಪರಿಶ್ರಮವಾದವಧರಾ । ಮೃತಫಲಕೆ ಮನ
ದಂದವರೆಗಿಳಿ । ರತಿಗೆ ಸೇವಕರಿಲ್ಲದಾದುದು ಹೇಳಲೇನೆಂದ ॥ ೪೪ ॥ ಅರಸ ಕೇಳಾ
ತರುಣಿಯರ ತನು । ಪರಿಮಳದ ಸೋಂಕಿನಲಿ ಸುತ್ತಲು । ಪರಿಮಳಿಸಿದವು ಚಲಿಪತರಳಾ
ಪಾಂಗರೋಚಿಯಲಿ ॥ ಮುರಿದುದ ಮರಗತ್ತಲೆಯು ಮೈ । ಸಿರಿ ಸುಗೀತಾಮೃತದ ಸವಿಗ ।
ಚ್ಚರಿಯರೋಳ್ಕೈಪಿದರು ವರಕಾಂತಾಕದಂಬಕವ ॥ ೪೫ ॥ ಮುನಿಪನಿದ್ದನು ಮುಗುಧ
ತಾಪಸ । ಮುನಿಗಣದ ಮಧ್ಯದಲಿ ಸಸ್ಮೇ । ಳದಲಿ ಪುಣ್ಯಮೃಗಾವಳಿಯ ಸೋಂಕಿನಲು
ಪಾಸನೆಯ ॥ ವನರುಹಾಕ್ಷನಧ್ಯಾನದಲಿ ಕೇ । ಳಿನಕುಲೇಶ್ವರ ಸತಿಯ ಮೀತನ । ನನು

ವರಿತು ಹೊದ್ದಿದರು ಹರಿಮೇಖಲೆಯ ಚಾಳಿಯಲಿ ॥ ೪೬ ॥ ರಾಯಕೇಳ್ಳೈತಾಪಸಾಂ
ಗದ । ನಾಯಕಿಯರದೊಳಗೆ ವರಕುಸು । ಮಾಯುಧನ ಖಂಡೆಯಕೆ ಮಣಿಯದ
ಮುನಿಯಚರಣದಲಿ ॥ ಮಾಯದಭಿರಂಜನೆಯ ಚತುರೋ । ಪಾಯದಲಿ ಗೋತ್ರ
ಪ್ರಸರಪರಿ । ಯಾಯದಲಿ ಪದಕೆರಗಿದರು ಪಾವನತಪೋಧನನ ॥ ೪೬ ॥ ವಂದಿಸಿದ
ಮುನಿವೇಷದಲಲಾ । ವೃಂದಕತಿಭಕ್ತಿಯಲಿ ಮುಗುಳಧಿ । ವಂದನಂಗೈದುಚಿತಸತ್ಕಾ
ರೋಪಚಾರದಲಿ ॥ ಕಂದಮೂಲಫಲಾದಿ ವಸ್ತುಗ । ಳಿಂದ ಮನ್ನಿಸಿನಮ್ಮಡೆಗೆಸೀ।
ವ್ವಂದ ಕಾರಣವೇನೆನುತ ಬೆಸಗೊಂಡನವರುಗಳ ॥ ೪೮ ॥ ನಾವಲೇನಿಮ್ಮಡಿಗ
ಬಹಳಕೃ । ಪಾವಲೋಕನದಿಂದ ಕಾವ್ಯವು । ಹಾವಿಳಾಸಾಧ್ವರವ ಕೈಕೊಂಡೆವು
ವಿನೋದವಲಿ ॥ ನೀವುಬಿಜಯಂಗೈದಡೀಕ್ರತು । ಪಾವನವಲೇಯನು ತಕಪಟಕ।
ಲಾವಿದೆಯರೊಡಬಡಿಸಿದರು ಗಮನವನು ಮುನಿವರನ ॥ ೪೯ ॥ ಜನಪಕೇಳ್ಮುನಿವೇಷವ
ಬಲಾ । ಜನತದೀಯಮುನೀಶ್ವರನ ಸೊಬ । ಗಿನ ಸುಸೋಂಕಿನಲೊಲುಮೆಯಲಿ ವಿವಿ
ಧೋಪಚಾರದಲಿ ॥ ವಿನುತ ಗಂಧಸುಮಾಲ್ಯ ಮಣಿಮಂ । ಡನ ನವಾಂಬರಗಳಲಿ
ಚಿತ್ತನ । ನನುಗೊಳಿಸಿಕೈವಶಕೆ ತಂದರು ದಿವಸ ದಿವಸದಲಿ ॥ ೫೦ ॥ ಸಾರಿದರು ಬಳಿ
ಕುತ್ತಮದ ಶೃಂ । ಗಾರನಾರೀಜನ ಮನೋಜನ । ಕೂರಲಗಿಗೊಡಲೊಡ್ಡಿಸಿದರಾಮು
ಗುಧವಮುನಿವರನ ॥ ಆರುಗೆಲಬಹುದರಸಕೇಳ್ಕಾ । ಮಾರಿಗಸದಳವಬಲೆಯರಕ
ಜ್ಣೋರೆಗಳ ಕಾಲಾಟಕಳುಕದರುಂಟೆ ಹೇಳೆಂದ ॥ ೫೧ ॥ ಬಳಿಕಲಾಮುನಿವರನ
ನಾನಾ । ಫಲಸುಭೋಜನ ಭಕ್ಷ್ಯದಲಿ ಸವಿ । ಗೊಳಿಸಿದರು ಮುನೀಂದ್ರನ ಮನವ
ಮಾಯೆಯಲಿ ॥ ಕಳವಳಿಸಿದವು ಕರಣವಿಂದ್ರಿಯ । ಗಳು ನಿತಂಬಿನಿಯರಲ್ಲಿ ಶಿಕ್ಕಿದ ।
ನಲವುಗಣಿಸಣ್ಣನ ಘಡಾವಣೆಗಾವಿಭಾಂಡಸುತ ॥ ೫೨ ॥ ಅಮೃತರಸನುಯ ವಿವಿಧ
ಕಾವ್ಯ । ಪ್ರಮುಖ ನಾಟಕ ಗಾನ ಭರತಾ । ಗಮರ ಸಾಲಂಕಾರ ರೂಪಕ ರಚಿತವಿದ್ಯೆ
ಯಲಿ ॥ ಅಮಿತ ಸೌಖ್ಯಕಥಾವಿನೋದದ । ಶಮತೆಯಲಿ ಭಾರತ ಕಳಾವಿ । ಭ್ರಮಕೆ
ಗುರುವೆನಲೊಲಿಸಿ ಮೆಚ್ಚಿಸಿದರು ಮುನೀಶ್ವರನ ॥ ೫೩ ॥ ಬಳಿಕ ಸಕಲೇಂದ್ರಿಯ
ಗಳುಬ್ಬಟೆ । ಬಲಿದವಿವರುಪಚಾರದಲಿ ಹಿಂ । ದುಳಿದುದುಗ್ರತಪಃಪ್ರಭಾವದ ಬೆಳಗು
ನಿಮಿಷದಲಿ ॥ ಲಲಗನುಗಿದನು ಮದನ ಮಂದಾ । ನಿಲನು ಹುಂಗಟ್ಟನದು ಕೈಚ ।
ಪ್ಪಳೆಯಲೊದರಿದ ನಾವಸಂತನು ಮುನಿಪನಿದಿರಿನಲಿ ॥ ೫೪ ॥ ಬಿದ್ದನಬಲಾಜನದ
ಬಲೆಯೊಳ । ಗೊದ್ದುಕೊಳುತ ಮುನೀಂದ್ರನಂಗಜ । ನುದ್ದುರುಟೆಣಕಾರುಸರಿ ಸುರ
ನರ ಭುಜಂಗರಲಿ ॥ ತಿದ್ದಿತಾತನ ತಪಸು ಮಾಯೆಯ । ಮುದ್ದಿನಲಿ ಮರುಳಾಗಿ ಮದ
ನನ । ಹೊದ್ದಿದನುಹೊಡಕರಿಸಲರಿಯದೆ ಭೂಪ ಕೇಳೆಂದ ॥ ೫೫ ॥ ಮೆಚ್ಚಿಮರುಳಾದಾ
ಮುನೀಂದ್ರನ । ನೆಚ್ಚಿತಂದರು ತರುಣಿಯರು ಬಳಿ । ಕಚ್ಚರಿಯಕೇಳರಸ ಮೇಘಗಳ
ಭ್ರಮಂಡಲವ । ಮುಚ್ಚಿಕೊಂಡವು ಮುರಿದು ನೇಸರು । ಗಿಚ್ಚಿನಖಿಳಾಂಬುಧಿಯಜಲ
ವನು । ಕಚ್ಚಿ ತಂದುಗುಳಿದವು ರೋಮಾಂಘ್ರಿಪನ ಭೂಮಿಯಲಿ । ೫೬ ॥ ಆರಳಿತರಸನ
ವದನಲಕ್ಷ್ಮಿಯು । ಸಿರಿ ವಿಶಾಲವಲಿರ್ದನಮರೇ । ಶ್ವರನು ಮುನಿಪನ ಬರವಿನಲಿ ಬಳಿ
ಕಾನರಾಧಿಪನ ॥ ಧರೆಯ ಜನ ಸಂತೋಷವನುಯ ಸಾ । ಗರದೊಳದ್ದುದು ಹೇಳಲೀ
ನದ । ನರಪಕರೆನಾಮುನಿಯಸಿದ್ಧಿಗಸಾಧ್ಯವೇನೆಂದ ॥ ೫೭ ॥ ಪರಮ ಹರುಷದಲಾ

ಮುನೀಂದ್ರನ | ನುರುತರೋತ್ಸವದಿಂದಲಾಪುರದರಸನಿದಿ | ಗೊರ್ಂಡೊಯ್ದು ಕೊಟ್ಟನು ತನ್ನನಂದನೆಯ || ಹಂನುವಮಾದೇವಿಯುರ ವೋಲ್ಮುನಿ | ವರನು ಶಾಂತಾದೇವಿಸಹಿತಾ | ಧರಣಿಪನ ಭವನದಲಿ ಬೆಳಗಿದ ನಧಿಕ ತೇಜದಲಿ || ೫೮ || ಬರಡು ಹಯುನ ಕುದುಡಿ ದನೀರಸ | ತರುಚಿಗುರ್ವವು ಬಂಜೆಗರ್ಭವ | ಧರಿಸುವಳು ಧನ ಧಾನ್ಯ ಗೋಧನ ಸಂಪ ದಾದಿಗಳು || ಭರಿತವಾಗಿಹವಾ ಮುನಿಪನಿಹ | ಧರಣಿಯಲಿ ನೀನಾ ಮುನೀಂದ್ರನ | ಬರೆಸಿ ಕ್ರತುವನು ನಡಸಿದರೆ ಸುತರಹರು ನಿನಗೆಂದ || || ೫೯ ||

ಐದನೆಯ ಸಂಧಿ ಸಮಾಪ್ತಂ.

ಆರನೇ ಸಂಧಿ.

ಸೂಚನೆ|| ಭೂಮಿಪತಿ ದಶರಥನು ಸುತರಾ | ವ್ಯಾಮಹಾಧ್ವರಕೆಂದು ತಂದನು | ರೋಮಪಾದನೃಪಾಲನಳಿಯನನಖಿಳವಿಭವದಲಿ ||

ಪದ್ಯ || ಧರಣಿಜಾಸುತ ಕೇಳ್ಸುಮಂತ್ರನ | ವರವಚೋಭಿಪ್ರಾಯವನು ನಿಜ | ಗುರುವಸಿಷ್ಠಂಗರುಹಿ ತನ್ಮುನಿವರನನುಜ್ಞೆಯಲಿ || ಪರಮಋಷಿ ವೈಭಾಂಡಕನನ | ಧ್ವರಕೆ ತಹನೇಮವನುಪಡೆದತಿ | ಹರುಷದಲಿಹರಿದಶ್ವಕುಲನುದ್ಯೋಗಮನಸಾದ||೧|| ನೆಗಳ್ದಕಾರ್ಯಸ್ಥಿತಿಗೆ ಲಿಖಿತಾ | ಳಿಗಳನುಡುಗೊರೆಸಹಿತಲರಸಾ | ಳುಗಳಕೈಯಲಿ ಕಳುಹಿದನು ನೃಪರೋಮಪಾದಂಗೆ || ತೆಗಸಿದನು ಬಳಿಕುತ್ತಮದ ತೊಡ | ವೆಗಳ ದಿವ್ಯದುಕೂಲ ರತ್ನಾ | ಳಿಗಳನನುಪಮ ಗಜಹಯಾದಿ ಸಮಸ್ತವಸ್ತುಗಳ || ೨ || ಭಾರಿಸಿದ ಬಲುಹೊರೆಯ ಭಂಡಿಗ | ಳೋರಣಿಸಿದವು ಪಯಣದಲಿಕ | ರ್ಪೂರ ಕಸ್ತುರಿಕುಂಕುಮದ ಪೆಟ್ಟಿಗೆಯ ಸಾಲಿನಲಿ || ಊರಹೊರವಳಯದಲಿ ಗುಡಿಗೂ | ಡಾರ ಹೊಯ್ದುವು ಶುಭಮುಹೂರ್ತದ | ವಾರನಕ್ಷತ್ರದಲಿ ದಶರಥರಾಯ ಹೊರ ವಂಟ || ೩ || ಸುಳಿದವಾರತಿ ಮುಂದೆ ವಿಪ್ರರ | ಕಳಕಳದ ಮಂತ್ರಾಕ್ಷತೆಯ ಕೈ | ಗೊಳುತ ಮಂಗಳಪಾಠಕರ ಬಹು ವಾದ್ಯಘೋಷದಲ್ಲಿ || ಘಳಿಗೆವಟ್ಟಲ ಜೋಯಿಸರಿಂದ್ರ | ಸ್ಥಳದ ಶುಭಲಗ್ನದಲಿ ಭೂಪತಿ | ಹೊಳಲ ಹೊರವಂಟನು ಸುಮಂತ್ರಾದಿಗಳ ಗಡಣ ದಲಿ || ೪ || ಮಣಿಮಯದ ಮುಕ್ತಾಫಲದ ಕೇ | ವಣದ ಕನಕದ ದಡ್ಡಿಬಿಗಿದಂ | ದಣಪನೇರಿದರಸಿಯರು ಮೂವರು ಮಹೀಪತಿಯ || ಕುಣಿವ ಕುದುರೆಯ ಹಣ್ಣಿದು ರುವಾ | ರಣಘಟಾಳಿಯ ತೇರುಗಳ ತಿಂ | ಥಿಣಿಯ ತೆರಳಿಕೆಯಿಂದ ತೆರಳಿದನಾಮಹೀ ಪಾಲ || ೫ || ತಳಿಕಪಾಲ್ಮರನೇರಿಪಿಂಗಲಿ | ಬಲಿದು ಬಾಯ್ದೊಂಡವು ಸರಾಗದಿ | ನೊಲಿದುದಂಪತಿಕಾರಗಿತ್ತುವು ಕರಿಯಹಕ್ಕಿಗಳು || ಸುಳಿದವೆಡದಿವಿಹಂಗ ಬಲದಲಿ | ನಲಿಯೆಸೂಚಿತಪುತ್ರಲಾಭದ | ಫಲವಿಶೇಷಿತ ಶಕುನಹಿಗ್ಗಿಸಿತವನಿಪಾಲಕನ || ೬ || ಹರುಷಪುಳಕದ ಹರಹಿನಲಿ ಹಯ | ಕರಿವರೂಥಪದಾತಿಬಲಸಹಿ | ತರದಿಶಾಪಟಮುಲ್ಲ ಬಂದನಪಯಣಗತಿಗಳಲಿ || ಪರಮಹೀತಳದಖಿಳಜನದು | ಬ್ಬರದ ದರುಶನಗಾಣಿ ಕೆಯ ನನು | ಕರಿಸುತನುಪಮ ವಿಷಯವೀಥಿಯ ನೋಡುತೈತಂದ || ೭ || ಹೇಳಲೇ ನದನಂಗಧರಣೀ | ಪಾಲನಪನಿಯ ಸಿರಿಯ ಹೊಗಳಲು | ಶೂಲಿಗಳವಲ್ಲೆನಲು ಕೋ

ಭಿಸಿ ತಂದುಸೊಗಸಿನಲಿ ॥ ಶೈಲವೇ ಸುರಶೈಲ ಭೂರುಹ । ಜಾಲವೇ ಸುರಭೂಜ ಲಲಿ
ತಲ । ತಾಳಿಯೇ ಸುರಲತೆ ಸುಧೇನುಗಳೈದೆ ಸುರಧೇನು ॥ ೮ ॥ ವರವಸಂತನ ಬೀಡೋ
ಮನ್ಮಥ । ಧರಣಿಪನ ಡೆಖ್ಖಾಳಭೂಮಿಯೊ । ಪರಮಹಿತಪವಮಾನನಾಡುಂಬೊಲುವ
ಚಂದ್ರವನ ॥ ಹರವರಿಯೂ ವನದೇವತೆಯವಿ । ಸ್ಮರವಿನೋದವಿಹಾರಕೇಳೀ । ನಿರತಿ
ಶಯನಿಜಧರಣಿಯೋ ಯೆನೆ ಮೆರದುದಾಭೂಮಿ । ೯ ॥ ನಗರಖರ್ವದಪೇಟಗಳ ಹೆಂ।
ಪುಗಳ ಶಾಖಾನಗರಗಳ ಸೊಂ । ಪುಗಳ ಸುಗ್ರಾಮಾಗ್ರಹಾರವ್ರಜದಲಂಪುಗಳ ॥ ತೆಗದ
ತೊರೆ ಕಾಲುವೆಗಳುದ್ಯಾ । ನಗಳ ಕಳಮೆ ದ್ರಾಕ್ಷೆ ಧವಳೇ । ಕ್ಷುಗಳ ವನವೀಥಿಗಳ
ನೀಕ್ಷಿಸುತ ರಸನಡೆತಂದ ॥ ೧೦ ॥ ಅರರೆ ಶಿವಶಿವ ಸಕಲ ಸಿರಿಯಲಿ । ಮೆರವುದಿದುತಾ
ಋಷ್ಯಶೃಂಗನ । ಪರಮ ಮಹಿಮೆಯಲಾ ಮಹೀತಳವೆನುತನರನಾಥ ॥ ಶಿರವನೊಲ
ವುತ ರೋಮಪಾದನ । ಸಿರಿಯ ಕೊಂಡಾಡುತ ಸುಮಿತ್ರನ । ಪುರಕೆ ಬಂದನು ಕೇಳಿದೈ
ಕಾಕುಸ್ಥನೃಪಸೂನು ॥ ೧೧ ॥ ರಾಯ ರಾಜಶಿರೋಮಣಿಯ ಕಟ್ಟ । ಕಾಯು ಬಿಟ್ಟುದು
ಬಳಸಿಕೊಟ್ಟಗೆ । ಲಾಯಗುಡಿಗ ಡಾರಸಹಿತ ಪುರೋಪಕಂಠದಲಿ ॥ ಆ ಯಶೋಪರಿ
ಪೂರ್ಣತೇಜನ । ಮೇಯನನುಪಮರೋಮಪಾದನ । ಜೀಯದಶರಥನೃಪನನಿದಿ
ರ್ಗೊಂಡೊಯ್ದನರಮನೆಗೆ ॥ ೧೨ ॥ ಹೇಳಲೇನದನಂದಿನುತ್ಸವ । ದೇಳಿಗೆಯ ವೈಭವವ
ನುಭಯನೃ । ಪಾಲಕರ ಸಂಹಾರ್ದನುಬಂಧದಸಘಾಡಿಕೆಯ ॥ ಬಾಲೆಯರ ಹೊಂದ
ಳಿಗೆಗಳ ಪಸು । ರ್ಗೂಳುಗಳ ಪಸಲಿಕೆಯ ಮಣಿದೀ । ಪಾಳಿಸುಳಿದವು ಜನಜಬಾಂಧವ
ಕುಲಜನಿದಿರಿನಲಿ ॥ ೧೩ ॥ ಉಪಚರಿಸಿದನು ಬಳಿಕ ರಾಜಾ । ಧಿಪನನವರಾಜೋಪ
ಚಾರದ । ವಿಪುಳಸತ್ಕಾರದಲಿ ನಿರುಪಮ ರೋಮಪಾದನೃಪ ॥ ಅಪರಿಮಿತ ಸಂತೋಷ
ದಲಿ ಭೂ । ಮಿಪನಗಮನವನರಿದು ತಂದನು । ತಪನಕುಲಜನ ಮುನಿಯ ಮಂದಿರ
ಕಾಗಿ ನಲವಿನಲಿ ॥ ೧೪ ॥ ಅರಸ ದಶರಥನಾ ವಿಭಾಂಡಕ । ವರಕುಮಾರನಚರಣದಲಿ
ತ । ನ್ನರಸಿಯರುಸಹ ದೈನ್ಯವೃತ್ತಿಯ ಭಕ್ತಿಭಾವದಲಿ ॥ ಉರುಳುವಶ್ರುಕಣಾಳಿಗಳ
ಕಾ । ತುರತೆಯಲಿ ಮೈಯಿಕ್ಕಿದನು ಸುತ । ವಿರಹಿತನ ವಂಶಚ್ಯುತನನುದ್ಧರಿಸ
ಬೇಕೆಂದು ॥ ೧೫ ॥ ವಿತತಸುತಕಾಮ್ಯಾಧ್ವರವ ಸ । ತ್ಕ್ರತುವಕೈಕೊಂಡೆನು ಭವ
ತ್ಕೃಪೆ । ಯತಿಶಯವು ತನಗಾಗೆ ತಾನೀಜಗಕೆಧನ್ಯನಲ ॥ ಸುತವಿಹೀನನನುದ್ಧರಿಸಿ
ಸಂ । ತತಿಯ ಕರುಣಿಸಬೇಕೆನುತ ಮುನಿ । ಪತಿಯ ಪದಪದ್ಮದಲಿ ಮಗುಳಿಳುಹಿದನು
ಮಣಿಶಿರವ ॥ ೧೬ ॥ ಕರುಣರಸದುಬ್ಬರದಲರಸನ । ಶಿರವನೆಗಹಿ ವರವಚೋಕ್ತಿಯಲಿ
ಮುನಿ । ಹರಿಸಿ ಸಂತಾನಾಭಿವೃದ್ಧಿಯ ಸಾರಸೌಖ್ಯದಲಿ ॥ ಅರಸನನು ಮನ್ನಿಸಿ ಮನಃ
ಪರಿ । ಸರದ ಖೇದವ ಬಿಡಿಸಿ ಕಾಮ್ಯಾ । ಧ್ವರಕೆಬಹೆನೆಂದಭಯವಿತ್ತನು ಋಷ್ಯಶೃಂಗ
ಮುನಿ ॥ ೧೭ ॥ ವೀರಕೇಳೈ ನಿಮ್ಮದಶರಥ । ಧಾರುಣೀಶಂಗಭಿನವದ ಬಿ । ಡಾರ
ವಾಯ್ತುರೆದಿಂಗಳಿರ್ದನು ಮೇಲೆ ತತ್ಪುರದ ॥ ಧಾರುಣೀಶನನಚಿತವಚನಾ । ಸಾರದಲಿ
ಸರ್ವಾಭರಣ ಮುದ । ವಾರಣಾಶ್ವವರೂಥವಸನಗಳಿಂದಮನ್ನಿಸಿದ ॥ ೧೮ ॥ ಕರಸಿ
ಮಂತ್ರಿನಿಯೋಗಿಗಳನಾ । ಪುರಜನಂಗಳಿಗುಡುಗೊರೆಗಳಲಿ । ಹಿರಿದು ಮನ್ನಿಸಿ ರೋ
ಮಪಾದಮಹಾಮಹೀಪತಿಯ ॥ ಪರಮ ಸತ್ಕಾರವನು ಕೈಕೊಂ । ಡರಸ ಮುನಿಪತಿ
ಸಹಿತನಿಜಯೋಧ್ಯಾ । ಪುರಕೆ ಬಂದನು ಬಹಳವಿಭವದಲಖಿಳಜನನಲಿಯೆ ॥ ೧೯ ॥ ಮುನಿ

ಸತಿಯುನವನೀತ ಮುನಿಭಾ। ವನೆಯುಲೇ ಪೂಜಿಸಿ ಬಳಿಕ್ಕರ। ಮನೆಯುನಿಕಟ ಪ್ರಾಂತ್ಯ
ಬಿಡಾರವನು ರಚಿಸಿ ॥ ಮುನಿವಸಿಷ್ಟನ ಕಂಸಿದನು ವರ। ಮುನಿವಸಿಷ್ಟನ ತನ್ಮುನೀಂ
ದ್ರನ। ವಿನುತ ವಚನಾನುಜ್ಞೆಯಲಿ ಕೈಗೊಂಡನಧ್ವರವ ॥ ೨೦ ॥

ಆರನೆಯ ಸಂಧಿ ಸಮಾಪ್ತಂ.

ಏಳನೆಯ ಸಂಧಿ.

ಸೂಚನೆ ॥ ಭುವನಜನಭುಲ್ಲವಿಸೆ ನಿರ್ಜರ । ನಿವಹವತಿಪರಿಣಮಿಸೆ ಯಜ್ಞ ।
ಪ್ರವರದಲಿ ದಶರಥನು ಪಡೆದನು ಪುತ್ರಪಿಂಡಕವ ॥

ಪದ್ಯ ॥ ಧರಣಿಜಾಸುತಕೇಲು ದಶರಥ। ಧರಣಿಪತಿ ಕರಸಿದನುನಾನಾ ।. ಧರಣಿ
ಪಾಲರ ಧರ್ಮನಿಷ್ಠವಸಿಷ್ಠನಾಜ್ಞೆಯಲಿ ॥ ವರುಷವರುಷದವರ್ತನೆಯ ವಿ । ಸ್ತರದ
ವಸ್ತ್ರಾತ್ಯರವಸವರಲಿ । ತರಿಸಿದನು ವರಪುತ್ರಕಾಮೇಷ್ಟಿಯ ಮಹಾಧ್ವರಕೆ ॥ ೧ ॥
ಕಾಣಿಸಿನಶಶಿಕುಲದ ರಾಜ । ಶ್ರೇಣಿಯಲಿ ತಾಬಳಿಕ ದಶರಥ। ಕ್ಷೋಣಿಪಂಗೆಣೆಯುಹ
ನೃಪಾಲರನಖಿಳರಾಯ್ದಲಿ। ಕಾಣಿಕೆಯತಂದಿತ್ತರಾಗೀ। ವಾರ್ಣಪತಿನರರಾಜರುದಿತ
ಕ್ರಿ । ಪಾಣತೇಜೋವಿಭವವೆಂತುಟೋ ನಮ್ಮದಶರಥನ ॥ ೨ ॥ ಪುರವಹೊಗಿದುದು
ದೆಲ್ಲವಾಸುರ। ವರಭುಜಂಗರಿಗತ್ತಕಪ್ಪದ । ವರಸುವರ್ನಸುರತ್ನಕನ್ಯಾವಸನವಸ್ತು
ಗಳ ॥ ಸರಯುವಿನ ತೀರದಲಿ ಯೋಜನ। ವೆರಡರಳತೆಯುವಿಶ್ವಕರ್ಮೋ । ಧ್ಧರಣ
ರಮ್ಯಾಗಾರದಲಿ ಬಿಡಿಸಿದನು ಭೂಪಾಲ ॥ ೩ ॥ ತೆಗಸಿದನು ಬಳಿಕಿನಕುಲದಪೀ ।
ಳಿಗೆಯನೃಪರಾರ್ಜಿಸಿದ ನಾನಾ। ಯುಗಯುಗಂಗಳ ನಾಣೆಯಂಗಳ ನಿಖಿಳರತ್ನಗಳ ॥
ನಗರದುಪಕಂಠದಲಿ ಕೋಟಿಯ । ಬಿಗಿಸಿ ಬಿಡಿಸಿದನಧ್ವರಕೆಸಲು । ವಗಣಿತಾಖಿಳ
ವಸ್ತುಗಳ ನೆರಹಿದನು ನರನಾಥ ॥ ೪ ॥ ವರಸ ವರ್ನ ಸುರತ್ನ ಸರ್ವಾ। ಭರಣ ಭವನಂ
ಗಳಿಗೆ ಗಾವುದ। ವೆರಡರಲಿ ಹವಣಿಸಿದನಿಖಿಳಾಂಬರ ಸುಗಂಧಗಳ ॥ ಇರವುಗಾವುದ
ಮೂರ್ಧರಲಿ ಕರಿ। ತುರಗಕನ್ಯಾಧೇನುವಖ್ಯಾ। ಧ್ವರದ ದಾನದ್ರವ್ಯಕಾಯ್ತೆಳರಸಮಾ
ಪ್ತಿಯಲಿ ॥ ೫ ॥ ಪರಿಕಲಿತ ನಾನಾಫಲದ ಪರಿ । ಪರಿಯ ಧಾನ್ಯಮಜಕೆಗುಡಶ।
ರ್ಕರೆಗೆ ಸಂಭಾರಕೆ ತೆರಹಾಯ್ತೆಂಟರಳತೆಯಲಿ ॥ ವರದ ವಜ್ರದಗಾರೆಗಳಹೊ। ಕ್ಕ
ರಣೆಗಳ ಸಾಲುಗಳಯೋಜನ। ವೆರಡರಲಿಘೃತತೈಲದುಗ್ಧಾದಿಗಳಿಗೆಡೆಯಾಯ್ತು ॥ ೬ ॥
ತರುಣಕೇಳ್ಹನ್ನೆರಡುಯೋಜನ । ವರೆಯಭೋಜನಶಾಲೆಗಳು ವಿ। ಸ್ತರಿಸಿದವು ಬಾಣ
ಸದ ಭವನಂಗಳು ಸುವೀಧಿಯಲಿ ॥ ಪರಿಪರಿಯ ಲಾಕಾಯಿ ಮೇಲೋ। ಗರದ ಮಧುರಾ
ಮಾದ್ರಿಲವಣೋ। ತ್ಕರಕಟುದ್ರವ್ಯಾದಿಗಳಿಗಾಯ್ತುನಿತರೊತ್ತಿನಲಿ ॥ ೭ ॥ ಪರುಠವಿಸಿ
ದರು ವಿವಿಧ ಗವ್ಯದ । ಸರಸಿಗಳ ಸಂವೇಶದಲಿ ಕೊ । ಪ್ಪರಿಗೆಯಂತ್ರದ್ರೋಣಿಗಳ
ರಾಟಾಳ ಸೂತ್ರಗಳ ॥ ನಿರತಿಶಯ ಯಜ್ಞೋಪಕರಣದ। ಪರಿಪರಿಯ ಸಂಭಾರಚಯ
ಗೋ। ಚರಿಸಿದುದು ಗುರುವರ ವಸಿಷ್ಠಮುನೀಂದ್ರನಾಜ್ಞೆಯಲಿ ॥ ೮ ॥ ಬರೆಸಿದುದು
ಬಳಿಕೋಲೆ ಮಣಿದಾ । ರರಿಗೆಹೇಳಿಕೆಯಾಯ್ತು ಶಿಷ್ಟರ । ಪರಠವಿಸಿಕಳುಹಿದನು
ಪಾಪ್ರಡಸಹಿತಪಾರ್ಥಿವರ ॥ ಪುರಗಳಿಗೆ ಕೇಕೆಯಧರಾಧೀ । ಶ್ವರಗೆ ಕಾಶೀಪತಿಗೆನಿವಿ

ಕುಲ | ದರಸನಿಗೆ ಮಗಧಂಗೆ ನಿರುಪಮರೋಮಪಾದಂಗೆ || ೯ || ಉಳಿದ ಚತುರಾಂ
ಬುಧಿವೃತಾಭೂ | ತಳದ ಭೂಪಾಲರಿಗೆ ದೂತರ | ಕಳುಹಿದನು ಕೈಯೊಡನೆ ಋಷಿಗಳ
ಗಶ್ರಿಮೊದಲಾದ || ಇಳೆಯೊಳುಳ್ಳ ಸಮಸ್ತಮುನಿಸಂ | ಕುಲಕೆ ಸನ್ವಿನಯಾಘೆ
ನನಿತಾಂ | ಜಲಿಯ ಭಯಭಕ್ತಿಯಲಿ ಭೂಪತಿ ಬಿನ್ನವತ್ತಳೆಯ || ೧೦ || ಬಳಿಕನೆಲ
ಶೋಧಿಸಿತು ಸವನ | ಸ್ಥಳಕೆ ಸಮೂಹೂರ್ತದಲಿ ವೈದಿಕ | ವಿಳಸದಲಿ ವಿಧಿವಿಹಿತದಲಿ
ಸರಯುವಿನ ತೀರದಲಿ | ನಿಯಮಗಳು ನಿರ್ಮಿಸಿದವಧ್ವರ | ಲಲಿತ ಶಾಲಾವಳಿಯ
ಸೌಧಾ | ವಳಿಯ ಸೌರಂಭದಲಿ ಶಶಿಸೂರ್ಯಪ್ರಭಾನ್ವಿತದ || ೧೧ || ಕೇಳಿದೈ ಕುಶ
ಬಳಿಕ ಭೋಜನ | ಶಾಲೆಯಂತರ್ವೇದಿ ಪತ್ನೀ | ಶಾಲೆ ಮುಖಶಾಲಾದಿನಾನಾವಿಧದ
ಶಾಲೆಗಳ || ಸಾಲುಮೆರದವು ಸೊಗಸಿದವು ಸಂ | ಸ್ಥೂಲತರ ವೇದಿಗಳು ವಿಮಳವಿ |
ಶಾಲವಿಪ್ರಸದಸ್ಸುಗಳು ಸಭೆಗಳು ಧರಾಧಿಪರ || ೧೨ || ಚಾರುತರವಮಖನೇಡರಮುಳಾ |
ಗಾರ ಮಂಟಪವಳಯದಲಿ ಕ | ರ್ಪೂರಧೂಳಿಸಿತಿಕ್ಕೆಲದ ಮಾಲೆಗಳು ಮೌಕ್ತಿಕದ ||
ತೋರಣಗಳುಪ್ಪರಿಸಿದವು ಭಿಂ | ಗಾರಿಬಿಗಿದವು ಬಹಳಕದಳೀ | ಸಾರದಲಿ ಸಂಭ್ರಮಿಸಿ
ದವು ಸೌಧಾಳಿನಾಲ್ದೆಸೆಯ || ೧೩ || ತಳಿತಪಲ್ಲವ ಸತ್ತಿಗೆಯ ಹೊಂ | ಗಲಶದಳ
ಹೊದರೆದ್ದ ಝಲ್ಲರಿ | ಗಳ ವಿಚಿತ್ರಾಂಬರದ ಮುತ್ತಿನ ಮೇಲುಗಟ್ಟುಗಳಾ | ನೆಲೆ
ನೆಲೆಯ ಲೋವೆಗಳ ಮುಕ್ತಾ | ಫಲದ ಸಡಕಿನ ಸೊಸಕದ ಲಂ | ಬಳದ ಲಳಿಗಳಲ
ಹರಿಯಲಿ ರಂಜಿಸಿದವನವರತ || ೧೪ || ಸವದವೀಪರಿಸಜ್ಜತಂತು | ಪ್ರವರ ದಧಿಘೃತ
ರಚಿತನಾನಾ | ಭುವನ ಭೂದೇವ ಭೂಭುಜ ವೈಶ್ಯ ಶೂದ್ರಂಗೆ || ವಿವಿಧ ವರ್ಣಾ
ಶ್ರಮರಿಗಾದವು | ಭವನಬಹಿರಾವರಣದಲಿಮುಖ | ಸವನಸಾಧನವಸ್ತುಚಯಸೊಗಸಿ
ದವುನಿಮಿಷದಲಿ || ೧೫ || ಕೇಳಿಸಿತು ಬಳಿಕಖಿಳಪೃಥ್ವೀ | ಪಾಲಪಙ್ತಿಯೊಳಶ್ವ
ಮೇಧವಿ | ಶಾಲ ಸುತಕಾಮೇಷ್ಟಿಯಧ್ವರ ವಾರ್ತೆನಿಮಿಷದಲಿ || ವೇಳೆಗೋಲುಬ್ಬರದ
ಗಮನದ | ಜಾಳಿಯಲಿಬರುತಿರ್ದದಂಬುಧಿ | ಮೇಲೆಯಂತರ್ವಿಷಯದವನೀಪಾಲ
ಸಂದೋಹ || ೧೬ || ಜನಕ ಕಾಶೀರಾಜ ಕೇಕಯ | ಜನಪನಂಗಾಧೀಶ ಮಗಧಾ |
ವನಿಯಪತಿ ಮಾದ್ರೇಶ ಮಾಳವ ಮರುಮಹೀಪಾಲ || ವಿಸುತಘೂರ್ಜರ ಗೌಳಕೇರಳ |
ಜನಪದಾದಿಸಮಸ್ತನೃಪರೊ | ಗ್ಗಿನಲಿ ಬಂದರು ಭಾಸ್ಕರಾನ್ವಯನವ ಲಪುರವರಕೆ || ೧೭ ||
ಲಾಳಚೋಳವರಾಳಯವಬಂ | ಗಾಳಬಾಹ್ಲಿಕಭೋಟವರಪಾಂ | ಚಾಲಪುಷ್ಕರಪಾರಿ
ಯಾತ್ರಕರೂಪಕಾಂಭೋಜ || ಕೌಳವಾಂಧ್ರಕಳಿಂಗಕುರುನೇ | ಪಾಳನಿಷಧವಿದರ್ಭ
ಧರಣೀ | ಪಾಲತತಿ ಸಂದಣಿಸಿದುದು ಸಾಕೇತನಗರಿಯಲಿ || ೧೮ || ಕುರುಮಹೀತಳದ
ಮಳಭಾರತ | ವರುಷದನುಪಮರಮ್ಯಕದ ಹರಿ | ವರುಷವಿಷಯವಿಳಾವೃತದ ಕಿಂಪು
ರುಷಮಂಡಲದ | ನರಪತಿಗಳೈತಂದರೇನ | ಚ್ಚರಿಯೋ ದಶರಥಸಾರ್ವಭೌಮಕ | ನವ
ಸುತನದ ಮಹಾಮಹಿಮೆಯನು ಕುಶನೆ ಕೇಳೆಂದ || ೧೯ || ನೆರವಬಳಿಕತ್ರಿಕಣ್ವಾಂ |
ಗಿರಸಕಾತ್ಯಪ ಕುಶಿಕಸುತ ಸುರ | ಗುರುತನೂದ್ಭವ ಗಾರ್ಗ್ಯ ಗೌತಮ ಜಹ್ನು ಜಾಬಾಲಿ |
ಹರಿತಮಾರ್ಕಂಡೇಯ ಮೈತ್ರಾ | ವರುಣಿ ಮುದ್ಗಲಮುಖ್ಯ ಮುನಿಸಂ | ತತಿಗಳಾ
ಸೂರ್ಯಾನ್ವಯನ ಸಾಕೇತನಗರಿಯಲಿ || ೨೦ || ಚ್ಯವನ ದತ್ತಾತ್ರೇಯಭೃಗುಸಂ | ಭವ
ಸುಶೀಕ್ಷ್ಣದೀರ್ಘತಪ ಗಾ | ಲವ ಮತಂಗನು ವತ್ಸ ಜೈಮಿನಿ ಕಂಕನುಪಮನ್ಯು |

ರವಿಸಿತಾಮಹ ಮುನಿಮೃಕಂಡನು । ಪ್ರವರ ಶೌನಕ ಮುಖ್ಯಮುನಿಪುಂ । ಗವರು
ಬಂದರು ವರತಪೋಧನಗಣದಗಡಣದಲಿ ॥೨೧॥ ವಿವಿಧವಿದ್ವಜ್ಜನ ಸುಮಾಂತ್ರಿಕ। ನಿವಹ
ಗಾಯಕ ಕಥಕ ನರ್ತಕ । ಕವಿ ವಿದೂಷಕ ವಾದಿವಾಗ್ಮಿ ಮಹೇಂದ್ರಜಾಲಕರು ॥ ನವ
ವಿನೋದವಿದಗ್ಧ ಜಟಿ ವೈ । ಷ್ಣವ ಕಪಾಲಿಕ ಬೌದ್ಧಮುಖ್ಯ । ಪ್ರವರ ದಾನಾರ್ಥಿಗಳು
ನೆರೆದರ ವಾಜಿಮೇಧದಲಿ ॥೨೨॥ ಜಗದ ಜನಪದವರ್ಗಗಳು ಶಿ । ಲ್ಪಿಗರು ಪರಸಚಿರ
ನೃಪಗ್ರಾ । ಹಿಗಳು ವಾಮನಬಧಿರ ಮೂಕರನಾಥರಂಧಕರು ॥ ಹೊಗಳಿಕೆಯ ಪರಿ
ಪರಿಯು ಕೈವಾ । ರಿಗಳು ನೆರೆದರು ನಿಮ್ಮಯೋಧ್ಯಾ । ನಗರದಲಿ ರಾಜೇಂದ್ರ ಚಂದ್ರನ
ಶ್ವಮೇಧದಲಿ॥೨೩॥ ತರುಣ ಕೇಳ್ ತ್ರೈ ತುರಗಮೇಧಾ । ಧ್ವರದ ಮೇಲಾರೈಕೆ ನಡೆದುದು।
ಪರಮಋಷಿ ಜಾಬಾಲಿ ಮುಖ್ಯ ಮುನೀಶ ಪೌರೋಹಿತ್ಯ ॥ ಪರುಠವಣೆ ವಿಜಯಂಗೆ
ಸೇರಿತು । ಧರಣಿಯಮರರ ದಕ್ಷಿಣೆಯ ವಿ । ಸ್ತರಣ ಜೊಡೆತನ ಸಂದುದಧ್ವರದಲಿ
ಸುಮಂತ್ರಂಗೆ ॥ ೨೪ ॥ ಕರೆಕರೆದು ಭೋಜನಕೆ ಭೂಮಿಪಾ । ಸುರರನಿರಿಸಿ ಸುಗಂಧ
ಮಾಲ್ಯಾಂ । ಬರ ಸಮರ್ಪಣೆಗಾದುದೊಡೆತನವಾ ಜಯಂತಂಗೆ ॥ ನೆರೆದ ಯಾಚಕ
ಜನವ ಕರಮುಪ । ಚರಿಸಿ ಮನ್ನಿಸುವನಿತು ದೃಷ್ಟಿಯು । ಪರಿವಶಕೆ ಸಂದುದು ವಸಿಷ್ಠ
ಮುನೀಂದ್ರನಾಜ್ಞೆಯಲಿ ॥ ೨೫ ॥ ಬಯಸಿ ಬೇಡಿದ ವಿವಿಧವಸ್ತು । ವ್ರಯಕೆ ಭಾರಕ
ನಾದನಾ ಕೇ । ಕಯ ನೃಪಾಲಕಸುತ ಯುಧಾಜಿತು ಯಜ್ಞವಾಟದಲಿ ॥ ನಿಯತದಧಿ
ಘೃತದುಗ್ಧಗುಡಸಂ । ಚಯದ ಸಂಭಾರಾದಿರಸ ನಿ । ರ್ಣಯಕೆ ಕಟ್ಟಧಿಕಾರ ಸಿದ್ಧಾ
ರ್ಥಂಗೆ ನೆಲೆಯಾಯ್ತು ॥೨೬॥ ಹೆಸರೆನಿಪ ನಾನಾದಿಗಂತದ । ವಸುಮತೀಶರ ನುಚಿತ
ವೃತ್ತಿಯ । ಲೊಸಗೆವಡಿಸುವ ಪರುಠವಣೆ ರೋಮಾಂಘ್ರಿ ಭೂವರನ । ವಶಕೆ ಸಂದುದು
ಸಕಲ ಸೇನಾ । ವಿಸರ ವಿವಿಧಪ್ರಜೆಗಳನು ಮ । ನ್ನಿಸುವ ಕಟ್ಟಧಿಕಾರವಾಯಿತು ಮಗಧ
ಭೂಪತಿಗೆ ॥೨೭॥ ಆದುದನುಪಮ ಮಂತ್ರಿಗಳಿಗುಳಿ । ದಾದ ಸೇವೆಯ ಪರುಠವಣೆ ಮೇ।
ಲಾದುದಧಿವಾಸರ ನೃಪಾಲಂಗಾಗಮೋಕ್ತದಲಿ ॥ ಆದಿನಾರಾಯಣನ ಶ್ರುತಿ ಸಂ । ಪಾದ
ಪಾರಾಯಣನ ಸುಜನಾ । ಹ್ಲಾದ ಸುಖಸಂಪೂರಣನ ನೋಲಿದರ್ಚಿಸಿದ ಭೂಪ ॥ ೨೮ ॥
ತರುಣ ಕೇಳ್ ಮರುದಿನದಲಮೃತೋ । ತ್ಕರ ಶುಭೋದಯ ಲಗ್ನದಲಿ ವಿ । ಪ್ರರ ಮಹಾ
ಮಂತ್ರಾದಿಪೂರಿತ ವಿವಿಧವಿಭವದಲಿ ॥ ಅರಸಿಯರು ಸಹಿತುಲಿವ ಮಂಗಳ । ತರದ
ತೂರ್ಯತ್ರಯದಲಿಭ ಕಂ । ಧರದಲೈತಂದಿಳಿದ, ಹೊಕ್ಕನು ಯಜ್ಞಮಂಟಪವ ॥೨೯॥
ಕರೆಸಿದನು ಬಳಿಕಖಿಳ ಪೃಥ್ವೀ । ಶ್ವರರಿಗನುಪಮ ತುರಗಮೇಧಾ । ಧ್ವರದ ಶಾಲಾ
ವರಣ ಸೌಧಾವಳಿಯ ವಳಯದಲಿ ॥ ಹರುಷದಲಿ ಕುಳ್ಳಿದರು ಹರಿವಿ । ಷ್ಟರಗಳಲಿ
ಮಣಿಬಂಧುರದ ವಿ । ಸ್ತರದ ತತ್ಕಾಲೋಚಿತದ ವಿನಿಯೋಗಿ ಜನಸಹಿತ ॥೩೦॥ ಸಂದ
ಣಿಸಿದುದು ಸಕಲ ಮುನಿಜನ । ವೃಂದವಾಕ್ರತು ಕರ್ಮಶಾಸ್ತ್ರ । ಛಂದಸ್ಸಾಗಮ ಪರಿಣ
ತರು ಪರಿಚಾರಕವ್ರಾತ ॥ ಬಂದುದಾಕ್ಷಣ ಸಕಲ ಸಾಧನ । ವೃಂದದಾಕ್ರತುಶಾಲೆ
ಸೊಗಸಾ । ಯ್ತಂದಿನಂಬುಜಗರ್ಭನಾರಂಭಿಸಿದ ಮಖದಂತೆ ॥೩೧॥ ಕೇಳಿದ್ದೈ ರಘು
ವಂಶ ಲಕ್ಷ್ಮೀ । ಲೋಲಸುತ ಬಳಿಕಾ ಮಹಾಧ್ವರ । ಶಾಲೆಯಲಿ ವರ ವಾಮದೇವ
ವಸಿಷ್ಠರುಚಿತದಲಿ ॥ ಬಾಲಶಶಿಧರ ಸನ್ನಿಭನ ಮುನಿ । ಜಾಲದಂಡಪ್ರಭನ ಶಾಂತಾ ।
ಜಾನಕೀವಲ್ಲಭನ ಮನ್ನಿಸಿದರು ನಯೋಕ್ತಿಯಲಿ ॥೩೨॥ ಯೆಸೆದುದಧ್ವರಯುರಪರಭಿ

ಮುಖ | ವಸತಿಯುಭಿವಳಯದಲಿ ಸಂಪಾ | ದಿಸಿದ ಸಕಲದ್ರವ್ಯವಾಮುನಿವರನಸಃಜ್ಞೆ
ಯಲಿ || ಮಿಸಪ ಕಾಂಚನ ಪಾತ್ರೆಗಳ ಪರಿ | ವಿಸ್ತರವಮಳ ಸುವರ್ಣ ಕುಂಭ | ಪ್ರಸರ
ದಲಿ ತದ್ವಿಧಿವಿಹಿತ ಯಜ್ಞೋಪಕರಣದಲಿ ||೩೩|| ವರ ಕುಶ ಸ್ಥಂಡಿಲ್ಲ ಉಲೂಖಲ |
ಚರು ಪುರೋಡಾಶಾಜ್ಯ ದರ್ಭಾಂ | ಕುರ ಸುವರ್ಣದ್ರೋಣಿಸ್ರುಕ್ಸ್ರುವವ್ರೀಹಿ ತಿಲ
ಸಾಜ್ಯ || ಬರುಹಿ ಯಿಧ್ಮ ಸಮಿತ್ಪ್ರತಾನಾ | ವರಣ ಹುತಪತ್ರಾದಿ ಮುಖಪರಿ | ಕರವ
ನೋಳ್ಪೈಸಿದರು ತತ್ಕ್ರತು ಕುಂಡನಳಯದಲಿ ||೩೪|| ಸುಳಿದು ಬಂದುದುಹಾಜಿ ಧೂಮಂ |
ಡಲವನನುಪಮ ವೈದಿಕೋಕ್ತದ | ವಿಳಸದಲಿ ನೃಪಪತ್ನಿ ಜಾಗರದಲಿ ಮಹಾಧ್ವರದ ||
ಬಳಿಯಲಿರ್ದಳು ಲಕ್ಷ್ಮಿ ಲಕ್ಷ್ಮೀ | ನಿಲಯನನುಧ್ಯಾನದಲಿ ವರ | ವಿಳಸಿತಾಧ್ವರಯೂಪ
ತತಿ ರಂಜಿಸಿದವಿದಿರಿನಲಿ || ೩೫ || ಯೂಪಬದ್ಧ ತುರಂಗ ಪಶು ಮು | ಖ್ಯೋಪಸನ್ನ
ಸಮಸ್ತ ಪಶು ಸುಮ | ನೋಪರಾಗದ ಪಿತ್ರ್ಯಹುತ ಪರಮಾನ್ನ ಪೃಷದಾಜ್ಯ || ಸೋಪ
ಮಾತಾಮೀರ್ಷಚರು ಸಮಿ | ಧೋಪಚಾರ್ಯಾಗ್ನಿ ಪ್ರಣೀತಾ | ಸ್ಥಾಪಿತಪ್ರಾಗ್ವಂಶ
ದಧ್ವರಶಾಲೆ ಚಲುವಾಯ್ತು || ೩೬ || ಬಳಿಕ ಮಾರ್ಕಂಡೇಯ ಕಾಶ್ಯಪ | ಕಲಶಭವ
ಚವನಾಂಗಿರಸ ಮುನಿ | ತಿಲಕ ಕೌಶಿಕ ಯಾಜ್ಞವಲ್ಕ್ಯ ಪ್ರಮುಖ ಮುನಿಜನವ || ನಿಲಿಸಿ
ದನು ಋತ್ವಿಕಪ್ರಹೋತ | ಸ್ಥಳದಮಾಳೊದ್ಗಾತೃಗಳ ಸಂ | ಮಿಳಿತಲಲಿತಾಸ್ಥಾನಕದ
ಲಜಸೂನು ಹರುಷದಲಿ ||೩೭|| ಕರೆದು ಮುನಿಸಾರಂಗ ಶೃಂಗನ | ನಿರವಿಸಿದನಾಪುತ್ರ
ಕಾಮ್ಯಾ | ಧ್ವರದ ಬ್ರಹ್ಮತ್ವಕ್ಕೆ ತುರಗಾಧ್ವರಕೆತಾನಾದ || ಪರಮಯಜ್ಞ ವಿಧಾನ
ವಿಧಿತೋ | ತ್ಕರಶ್ರುತಿಸ್ಮೃತಿ ಸಂಪ್ರಧಾರಣೆ| ಗಿರಿಸಿದನು ಪುಸ್ತಕವನಿತ್ತು ಮುನೀಂದ್ರ
ನಿಜಸುತನ || ೩೮ || ರಾಜಋಷಿ ಜನಕನನು ಕಾಶೀ | ರಾಜನನು ಕೇಕಯನೃಪಾಲನ |
ಯಾಜಮಾನದ ಮಾನ್ಯತೆಯಲಾ ಯಜ್ಞಶಾಲೆಯಲಿ || ಅಜನೇಶ್ವರನಿರಿಸಿ ಮುದದಲಿ |
ಪೂಜಿಸಿದನವರುಗಳ ಬಳಿಕ ಸ | ರೋಜಭವಸುತನಂಘ್ರಿಯಲಿ ಚಾಚಿದನು ಮಸ್ತ
ಕವ ||೩೯|| ಮುನಿ ಸುಪುತ್ರಾವಾಪ್ತಿರಸ್ತೆಂ | ದೆನುತ ನೆಗಹಿದನೊ ಸರ್ವಕ ಣದ |
ನನೆವಳೆಯನಯಸಾರ ವಚನದಲರಸನಾನಸವ|| ಜನಪದೀಕ್ಷಿತನಾದನಾ ಮುನಿ | ವಿನುತ
ವಚನದಲಾ ಹವಿರ್ಭೋ | ಜನದ ಬರ್ಹಿಮುಖರು ನೆರೆದರು ಬಹಳ ನೆರವಿಯಲಿ ||೪೦||
ದ್ಯುಮಣಿಕುಲ ಕೇಳ್ಚೈತ್ರ ಸಿತಪಂ | ಚಮಿಯಲುತ್ತರಪೂರ್ವವೇದಿಯ | ಲಮಳ
ಪುಣ್ಯಾಹದ ಮಹಾರಚನೆಯನು ವಿಸ್ತರಿಸಿ || ಅಮಲತರ ಶ್ರುತಿಘೋಷದಲಿ ಭೂ |
ರಮಣನಾ ಕ್ರತುಯಾಜಮಾನಾ | ಶ್ರಮವ ಕೈಕೊಂಡೆಸದನಾ ಮುನಿಜನರ ಮಧ್ಯದಲಿ||
ಹೊದೆದು ಹರಿಣಾಜಿನದ ನವಸೀ | ತದ ವಿಲೇಪವ ಋಷ್ಯಶೃಂಗನ | ವಿದಿತ ಕಳಕಳ
ದಮಳಸೂತ್ರದ ಸಂವಿಧಾನದಲಿ || ವಿದಿತ ಮಂಗಳ ತೂರ್ಯರವದ | ಭ್ಯುದಯದಲಿ
ವೇದೋಕ್ತವಿಧಿ ಮಾ | ರ್ಗದಲಿ ಮಾಡಿದನಮಲಮುಖ ಪುರುಷಪ್ರತಿಷ್ಠಿತವ || ೪೧ ||
ವಿರಚಿತಾಗಮದಿಂದ ದರ್ಭಾಂ | ಕುರಪರಿಸ್ತರಣಾದಿ ಗಂಧೋ | ತ್ಕರ ಸುಪುಷ್ಪಾಕ್ಷತೆ
ಗಳಿಂದರ್ಚಿಸಿದನಾ ಶಿಖಿಯ || ಬರುಹಿಯಿಧ್ಮಸ್ರುವಗಳಿಂ ಸ | ತ್ಕರಿಸಿ ವಿಧಿಪೂರ್ವಕಥ
ಮುಖಬಂ | ಧುರತರಿಂ ಧನದಿಂದ ಪ್ರಟಗೊಳಿಸಿದನು ಹುತವಹನ ||೪೨|| ಸುತ್ತಲಾಹವ
ನೀಯ ಗಾರ್ಹಪ | ಪ್ರತ್ಯದಕ್ಷಿಣವಹ್ನಿಗಳ ಮುನಿ | ಪ್ರೋತ್ತಮರು ಬೆಳಗಿಪರು ತತ್ಕ್ರತು
ಪರಿಕರಂಗಳಲಿ || ಎತ್ತವದು ಹಯಮೇಧಮುಖ ಮಾ | ಲೋತ್ತರದ ಮಂತ್ರಗಳ ವರ

ನಿಗ | ಮೋತ್ಕರದ ತತ್ಪೂರ್ವ ಮೀಮಾಂಸಾಪರಿಶ್ರುತದ ||೪೪|| ಇಮನೆ ಸಿದ್ಧವಿದಲ್ಲ
ನಿಶ್ಚಯ | ವಿದು ಶ್ರುತಿಸ್ಮೃತಿಗಳಲಿ ಬಿಡಿ ಸಾ | ಕದುವೆ ಸಾಮಾನ್ಯ ಪ್ರಯೋಗವಿದೀಗ
ಶಾಸ್ತ್ರದಲಿ || ವಿದಿತವಾಕ್ಯ ಪರಿಗ್ರಹಣವಿಂ | ತಿದರ ಮೇಲಿಲ್ಲೆಂಬ ಮುನಿತ | ರ್ಕದ
ಘಡಾವಣೆ ಘಾಡಿಸಿದುದಾ ಯಜ್ಞಮಂಟಪವ || ೪೫ || ಬಳಿಕ ನಡೆದುದು ಮಂತ್ರ
ತಂತ್ರಾ | ವಳಿಗಳಲಿ ತತ್ಸಾಮಗಾನದ| ಕಳಕಳದ ನಿಗಮತ್ರಯಂಗಳ ನಿಶ್ಚಯಂಗಳಲಿ||
ವಿಳಸದುದ್ಗಾತೃಗಳ ಮಂತ್ರಾ | ಕಲಿತ ಹೋತ್ರಾಧ್ವರ್ಯುಋತ್ವಿಜ | ರುಲಿಹು ತಲೆ
ದೂಗಿಸಿತು ನಭದಲಿಹ ನಿರ್ಜರಾವಳಿಯ || ೪೬ || ಕ್ರತುಮುಖಸ್ವಾಹಾಯಮಾನಾ |
ಹುತಿಯು ವೌಷಟ್ಕೃತಿಯ ಸ್ವಾಹಾ | ಶ್ರುತಿಯ ಸೌರಂಭಾತಿಶಯದಲಿ ದಣಿದರ್ಬೆ
ಸುರರು || ಶತಮಖಾದಿ ಸಮಸ್ತ ದೇವ | ಪ್ರತತಿ ತೇಗಿತು ತುಷ್ಟಿಯಲಿ ಭೂ | ಪತಿಯ
ರಾಜಿತ ವಾಜಿಮೇಧದ ಲಣುಗ ಕೇಳೆಂದ || ೪೭ || ಬೀಳುವಾಹುತಿಗಳನು ಸವಿದುರಿ |
ನಾಲಿಗೆಗಳುಬ್ಬೆದ್ದು ಕುಣಿದವು | ಮೇಲುಹವಿಗವ್ವಳಿಸಿ ಹರಹನಲಗ್ನಿಕುಂಡದಲಿ ||
ಹೇಳಲೇನದ ನಶ್ವಮೇಧದ | ಬೇಳುವೆಯ ಸಂಭ್ರಮದ ಥಾಳಾ | ಧೂಳಿಯಲಿ ತಿವಿ
ದಾಡಿದವು ಜಿಹ್ವೆಗಳು ಹುತವಹನ ||೪೮|| ಸಿಳಿಸಿಳಿಧ್ವನಿ ಮಸಗೆ ತಿಲಕೆ | ಕ್ಕಳಿಸಿದವು
ಷುಮ್ಮೆಂದು ಸಮಿಧಾ | ವಳಿಗಳಿಬ್ಬರಿಸಿದವು ಛಟಛಟ ಛಟನಿನಾದದಲಿ || ಲಲಿತಘೃತ
ಸಮ್ಮಿಳಿತಚರು ಪುಟ | ಗೊಳಿಸಿದುದು ಪಶುಹವಿಗೆ ಭುಗಿಲೆಂ | ದುಲಿದು ಸವಿದಾಡಿ
ದನು ಹುತವಹನಶ್ವಮೇಧದಲಿ ||೪೯|| ತಳಿತುದೋ ಪರಿಲುಳಿತಧೂಮಾ | ವಳಿ ವಿಯ
ದ್ಭಾಗದಲಿ ಸುರಸಭೆ | ಗಳಲಿ ಸರಸಿಜಸಂಭವನ ಪಟ್ಟಣದಲಾ ಧೃವನ || ನಿಳಯದಲಿ
ಲಂಬಿಸಿತು ಸುಧೆಯಲಿ | ಹೊಳಕೆಗಟ್ಟಿತು ಸುರಕುಜದ ಹಂ | ಬಲನು ಬಿಡಿಸಿತು ಸುರ
ಪಶುವನೇಳಿಸಿತು ನಾಕದಲಿ ||೫೦|| ಕುಶನೆ ಕೇಳ್ಕೈ ದಣಿದುದಮರ | ಪ್ರಸರವಲ್ಲಿ ಸಮಸ್ತ
ಭೂಸುರ | ವಿಸರವಿಲ್ಲಿ ಸುಭೋಜನಂಗಳ ಲಧಿಕದಾನದಲಿ || ಕುಶನನುಜ ಕೇಳ್ಸಕಲ
ಜನ ಹರು | ಷಿಸಿತು ಹಯಮೇಧದಲಿ ನಡೆದದು | ವಸುಧೆಗಚ್ಚರಿಯನಲು ಮಖ ದಶ
ರಥಮಹೀಪತಿಯ ||೫೧|| ಶ್ರುತಿಯ ಪೂರ್ವೋತ್ತರರಹಸ್ಯ | ಸ್ಮೃತಿ ಸುಮಾರ್ಗದ
ತರ್ಕಶಾಸ್ತ್ರದ | ವಿತತ ವಿಮಳಧ್ಯಾನ ಜಡಿದುದು ಮುನಿಸದಸ್ಯರಲಿ || ಕೃತಿ ಸುವಾಕ್ಯ
ವಿನೋದಪದ ಪ | ದ್ಧತಿ ಸುನರ್ತನ ವಾದ್ಯಗೀತಾ | ಮೃತ ಲಹರಿಗಳು ಮಸಗಿತಾ
ಚೆಮ ಲರಸುಹಂತಿಯಲಿ ||೫೨|| ಆದುದೀಪರಿ ಸಕಲ ಸೌರಂ | ಭಾವಿವೈಭವದಿಂದಲಾ
ಸುಕೃ | ತೋದಯನ ಹಯಸಪ್ತತಂತು ನಿರಂತರಾಯದಲಿ || ಆಮುದಾ ಕಾಮ್ಯಾ
ಧ್ವರವು ಬಳಿ | ಕಾ ದಯಾಂಬುಧಿ ಮುನಿವಿಭಾಂಡಕ ತ | ನೂದಯನು ಮಂತ್ರಾಭಿಪೂರಿತ
ವಿಹಿತ ಸಾಂಗದಲಿ ||೫೩|| ಕ್ಷಿತಿಸುತಾಸುತ ಕೇಳು ಪೂರ್ಣಾ | ಹುತಿಯ ಸಮನಂತರ
ದಲಾ ರವಿ | ಶತಸುತೇಜೋಮೂರ್ತಿ ಹೊಳೆದುದು ಯಜ್ಞಕುಂಡದಲಿ || ಶತಮುಖ
ಪ್ರಮುಖಾದಿದೇವ | ಪ್ರತತಿಗಳ ಬಿನ್ನಹದಿ ಲಕ್ಷ್ಮೀ | ಪತಿಯವೋಲು ವ್ಯದೋರಿತಾ
ಹವಸೀಯ ಮಧ್ಯದಲಿ ||೫೪|| ಮಿಸುಪ ಕಾಂಚನ ಪಾತ್ರೆಯಲಿ ಪೂ | ರಿಸಿದ ಪರಮಾ
ನ್ನವನು ಬೊಮ್ಮದ | ರಸದ ಪರಿಪೂರ್ಣವನು ಸತ್ವರಜಸ್ತಮೋಗುಣದ || ಎಸಕದಧಿ
ಗತ ಪೂರ್ಣವನು ಸುಮ | ನಸರು ಜಯಜಯಯೆನಲು ಕರಯುಗ | ವಿಸರುಹವಿಪೊಲಿ
ವಿತ್ತ್ರಮಾ ನಿಜಮೂರ್ತಿ ದಶರಥಗೆ ||೫೫|| ಮೊರೆದುದಮರರ ಭೇರಿ ಸುಮನಸ | ತರುಣಿ

ಚಾರ ಕೈಯಿಂದ ಕುಸುಮೋ । ತ್ಕರಕದಂಬಕ ಸೂಸಿದವು ಶಿರದಲಿ ಮಹೀಪತಿಯ ॥ ಸುರಮುನಿಗಳಾ ಘೋಷಿಸಿದರು । ಪ್ಪುರದಗುಡಿ ಸೆಗಹಿದವು ನಗರಾಂ । ತರದಲೇನು ಕೃತಾರ್ಥನೋ ದಶರಥಮಹೀಪಾಲ ॥೫೬॥ ಅಡಗಿತಾ ವರಮೂರ್ತಿ ಕುಂಡದ । ನಡುವೆ ಬಳಿಕ ಮಹೀಶ ರೋಮದ । ಗುಡಿಯ ಪುತ ಫಲೋದಯದ ಪರಿತೋಷದಬ್ಧಿನಲಿ ॥ ಮಡದಿಯರು ಮೂವರಿಗೆ ಮುನಿಕುಲ । ವೃಡವಸಿಷ್ಠನ ನೇಮದಲಿ ಪಿಂ । ಗಡಿಸಿ ಕೊಟ್ಟನು ನೃಪತಿ ಪರಮೋದನವನುಚಿತದಲಿ ॥ ೫೭ ॥ ತರುಣ ಕೇಳ್ಳೈ ಭಾಗವೆರಡರ । ಲೆರಡು ಭಾಗಂಗಳು ಸುಮಿತ್ರಾ । ತರುಣಿಗಾದವು ಸೇರಿದವು ಪೂರ್ವಾಂಶಭಾಗಗಳು ॥ ಹಿರಿಯರಸಿಕಿರಿಯರಸಿಯುವರಿ । ಬ್ಬರಿಗೆ ಮೂವರಿಗಿತ್ತು ನಾಲ್ಕರ । ಪರಿಗಣಿತ ಪರಮಾನ್ನ ಸಂಘಟಿಸಿದುದ ಭಾಗೆಯಲಿ ॥೫೮॥ ನೆನಸು ನಿರ್ವಿಘ್ನದಲಿ ನಡೆದುದು । ಮುನಿವಸಿಷ್ಠನ ಕರುಣದಲಿ ಬಳಿ । ಕನುಪಮಾಧ್ವರ ದವಭೃಥಸ್ನಾನಾವಸಾನದಲಿ ॥ ಮುನಿಗಳಿಗೆ ವಿಪ್ರರಿಗೆ ವಿದ್ವ । ಜ್ಜನಕೆ ವಿವಿಧಾಚಾರ್ಯ ಯಾಚಕ । ಜನಕೆ ಬೇಡಿದ ಧನವನಿತ್ತನು ದಣಿಯೆ ಧರಣೀಶ ॥೫೯॥ ದಣಿದುದಖಿಳಸುವರ್ಣ ಮಣಿಭೂ । ಷಣಸುಕನ್ಯಾಧೇನು ಹಯವಾರಣವರಾಂಬರ ವಿವಿಧ ವಸ್ತುವ್ರಜದ ದಾನದಲಿ ॥ ದಣಿಯದಾದುದು ಚಿತ್ತವಾ ದಿನ । ಮಣಿಕುಲೇಂದ್ರಂಗಮಮ ಘನವಿತ । ರಣದ ಶಕ್ತಿಯದೆಂತೊ ಸೀತಾಸೂನು ಕೇಳೆಂದ ॥೬೦॥ ಅರಸನಖಿಳ ದಿಗಂತದವನೀ । ಶ್ವರರ ನವರವರುಚಿತವಮಾನ್ಯದ । ಪರಿವಿಡಿಯ ಉಡುಗರೆಗಳಲಿ ವಿವಿಧೋಪಚಾರದಲಿ ॥ ಹಿರಿದುಮನ್ನಿಸಿ ಕಳುಹಿದನು ಸ । ತ್ಕರಿಸಿದನು ಪುರಜನವ ಸಮನಂ । ತರದ ಲೋಕುಳಿಯಾಯ್ತು ನೃಪಕುಲಸಾರ್ವಭೌಮಂಗೆ ॥೬೧॥ ಬಳಿಕ ಕನ್ನಡಿ ಕಲಶ ನೃತ್ಯದ । ಲಲನೆಯರ ಮಾಂಗಲ್ಯವಾದ್ಯದ । ಲಲಿತ ಘೋಷದಲಾಜ್ಯದಧಿ ದೂರ್ವಾಕ್ಷತಾವಳಿಯ ॥ ವಿಳಸದಲಿ ವೈಭವದ ಕಂಚುಕಿ । ಗಳ ಘಡಾವಣಿಗಳಲಿ ರಾಜಾ । ವಳಿ ಶಿರೋಮಣಿ ಹೊಕ್ಕನನುಪಮ ರಾಜಮಂದಿರವ ॥ ॥೬೨॥

ಏಳನೆಯ ಸಂಧಿ ಸಮಾಪ್ತಂ.

ಎಂಟನೆಯ ಸಂಧಿ.

ಸೂಚನೆ॥ ರಾಜ ರಾಜಾಧೀಶನನುಪಮ । ರಾಜಪರಮೇಶ್ವರನು ಮನುಕ್ಷಿತಿರಾಜ ದಶರಥರಾಯ ಪಡೆದನು ಸುತಚತುಷ್ಟಯವ ॥

ಪದ್ಯ॥ ಪಿಂಡಬಲಿದುದು ಬಳಿಕ ಮೂವರು । ಹೆಂಡರಿಗೆ ಕುಶಕೇಳ್ಳಿಧಾನವ । ಕಂಡ ಕಡುದಾರಿದ್ರನುತ್ಸವದಂತೆ ಕೋಸಲದ ॥ ಮಂಡಲೇಶ್ವರನಿರಲು ಬಳಿಕ ಲ । ಖಂಡ ಚಿನುಮಯನಾದಿ ಲಕ್ಷ್ಮೀ । ಗಂಡ ನೆಸೆದನು ಕೇಳು ಲವ ಕೌಸಲ್ಯೆಯ ಗರ್ಭದಲಿ॥ ತೋರಿದವು ಗರ್ಭಗಳು ಸೂಕ್ತಿಯ । ತೋರಿಕೆಯ ಮೌಕ್ತಿಕದವೊಲ್ಪ್ರದೋರಿ । ದವು ಚಿಸ್ನಂಗಳಂಗದಲಂಗನಾತ್ರಯದ ॥ ಪೇರಿದವು ಹೆರುಪವನು ನಸುನಗೆ । ದೋರಿದವು ಮುಖಕಮಲ ಕಾಂತಿಯ । ಬೀರಿದವು ಭುಜಲತೆಗಳಧಿನವ ಗರ್ಭದೋಹಳಿಯಲಿ॥೨॥ ನಡು ಪೊದಳ್ದುದು ವರವಳಿತ್ರಯ । ವತಗಿದುದು ನಿಜರೋಮರಾಜಿಗ । ಳಡಗಿದವು

ಮೈದೋರಿದುದು ಹೃತ್ಪ್ರಿಯರ ತವಕದಲಿ ॥ ಪೊಡರ್ವಪೀನಪಯೋಧರದ ತುದಿ
ಗಡೆಯುಲುಕ್ಕುಡಿಸಿದವು ರತಿ ಜೆ । ಳ್ಪಡಿಸಿದುದು ಮುಖಮಂಡಲದಲಾ ವಾಸಿನೀ
ತ್ರಯದ ॥೩॥ ತುಂಬಿದವು ನವಮಾಸ ಬಳಿಕ ನಿ । ತಂಬಿನಿಯರಿಗೆ ನಿರ್ಮಳ ಪ್ರತಿ ।
ಬಿಂಬ ಕಾಣಿಸಿತಾದಿ ನಾರಾಯಣನ ಮೂರುತಿಯು ॥ ಅಂಬುಜಾನನೆ ಕೌಸಲೆಯು ಗ ।
ರ್ಭಾಂಬುನಿಧಿಯಲಿ ಅಖಿಳಸುರರ ಕ । ದಂಬ ಬಂದೋಲಗಿಸುತಿರ್ದುದು ದಿವಸದಿವಸ
ದಲಿ ॥೪॥ ಕಂತುಸನ್ನಿಭ ಕೇಳು ಮೂವರು ಕಾಂತೆಯರಿಗಾದುದು ಕಸಾಸೀ । ಮಂತ
ಸೌರಂಭಾತಿಶಯ ಮುಬ್ಬರದ ವಿಭವದಲಿ ॥ ಅಂತರಹಿತನ ನಪ್ರಮೇಯನ । ನಂತ
ಗುಣಗಣನಿಳಯ ಲಕ್ಷ್ಮೀ । ಕಾಂತನಾ ನೃಪಗೊಲಿದುದಕೆ ಬೆರಗಾದನಬುಜಭವ ॥೫॥
ತರಣಿಯೇಕಾದಶದ ದಾನವ । ಗುರುನಿರೀಕ್ಷೆಯಲಿಂದುವಿನ ಶುಭ । ಕರದದೃಷ್ಟಿಯ
ಲಾಂಗಿರಸ ಸೌಮ್ಯರಸುಕೇಂದ್ರದಲಿ ॥ ಪರಮಚೈತ್ರದ ಶುದ್ಧನವಮಿಯ । ವರಪುನ
ರ್ವಸು ತಾರೆಯಲಿ ಹರಿ । ಯುದಿಸಿಬೆಸಲಾದಳು ಭವಸ್ಥಿತಿ ಲಯವಿವರ್ಜಿತನ॥೬॥ ಮರು
ದಿವಸ ಪುಷ್ಯದಲಿ ಕೈಕಾ । ತರುಣಿ ಪಡೆದಳು ವಿಮಲ ವಿಶ್ವಂ । ಭರನ ಶಕ್ತಿತ್ರಯದೊ
ಳೊಂದನು ಶುಭ ಮುಹೂರ್ತದಲಿ । ತರುಣ ಕೇಳಿದ ರಂಶವೆರಡನು । ನಿರತಿಶಯಲಗ್ನ
ದಲಿ ಮಗಧೇ । ಶ್ವರನಸುತೆ ಪಡೆದಳು ಮಘಾನಕ್ಷತ್ರದುದಯದಲಿ ॥೭॥ ಭೋರನಬ್ಬ
ರಿಸಿದವು ದಿವಿಜರ । ಭೇರಿಗಳು ದಿವದವನಿಯುರಸುಗ । ಳೂರೊಳಗೆ ಗುಡಿಕಟ್ಟಿದವು
ಕುಡಿಯಿಟ್ಟ ಹರುಷದಲಿ ॥ ವೀರ ದಶರಥ ಸಾರ್ವಭೌಮನ । ಪಾರಸಂತೋಷಾಂಬುನಿಧಿ
ಮಿಗೆ । ಮೇರೆದಪ್ಪಿದುದಾದಿ ನಾರಾಯಣನ ಜನನದಲಿ ॥೮॥ ಆದುದವರಿಗೆ ಬಳಿಕ
ಲೌಕಿಕ । ವೈದಿಕದ ವೈಭವಗಳಲಿ ಭ । ದ್ರೋದಯದ ಭವಕರ್ಮವಾಚಕ ಕರ್ಮದೂರ
ರಿಗೆ ॥ ಮೇದಿನೀಸುರ ಮುಖ್ಯ ನಾನಾ । ವೇದಿನಿಯ ಯಾಚಕರು ಸಿರಿಯನು । ಸಾಧಿಸಿ
ದರಾ ಸಾರ್ವಭೌಮನ ಬಹಳ ದಾನದಲಿ ॥೯॥ ದಿವಸ ಹನ್ನೆರಡರಲಿ ಮಹದು । ತ್ಸವದ
ಲಾದವು ನಾಮಕರಣ । ಪ್ರವರವಾ ನಾಲ್ವರಿಗೆ ಗುಣನಾಮಂಗಳಲಿ ಬಳಿಕ ॥ ಅವನಿಜಾ
ಸುತ ಕೇಳಿದೈ ಸಿಂ । ಮವನಿಜೆಯ ರಮಣಂಗೆ ರಾಮಾ । ಖ್ಯವನು ವಿಸ್ತರಿಸಿದರ
ವೈದಿಕಕರ್ಮವಿಹಿತದಲಿ ॥೧೦॥ ಭರತ ಲಕ್ಷ್ಮಣನೆಂಬ ಸಮಸಂ । ತರದಿ ಶತ್ರುಘ್ನಾಖ್ಯ
ವನು ವಿ । ಸ್ತರಿಸಿದರು ಮಿಕ್ಕಾದ ಮೂವರು ರಾಜಪುತ್ರರಿಗೆ ॥ ಭರಿತ ಭೋಜನ
ದಕ್ಷಿಣೆಯಲಾ । ದರಿಸಿದನು ಗುರು ಬಂಧುಜನ ಭೂ । ಸುರರ ವಿಟಶೂದ್ರಾದಿಗಳನುಚಿತ
ದಲಿ ಭೂಪಾಲ ॥೧೧॥ ಜಸೆಮತ್ತೇನೆಲೆ ತಪೋಲ । ಕ್ಷ್ಮೀಶ ಕೇಳೀ ರಾಮನಾ ಸ ।
ರ್ವೇಶನೆಂದೇ ನೇಮಿಸಿದೆ ನಮಗಾ ಮಹಾತ್ಮಂಗೆ ॥ ಈಸುನಿರ್ಬಂಧದಲಿ ಗರ್ಭಾ ।
ವಾಸದೊಳಗಿಳಿದುದಿಸಲೇಕೀ । ಯಾಸರಿನ ಭವವೇಕೆನುತ ನುಡಿದರು ಕುಮಾರಕನು ॥
ನೀವು ಕೇಳುವ ಕೃತವಿವೇಕದ । ಠಾವು ತಾನದು ಲೇಸು ಜಗದ ಮ । ಹಾ ವಿಭು
ವಲಾ ವಿಷ್ಣು ವಿಶ್ವವ್ಯಾಪ್ತನಾತಂಗೆ ॥ ಈ ವಿಶೇಷವ್ಯವಹರಣೆ ಲೋ । ಕಾವಳಿಯ
ಸುಜನರನು ಸಲೆ ಸಂ । ಭಾವನೋಚಿತದಿಂದ ಸಲಹಲಿ ಕಾಯ್ದಲೇಯೆಂದ ॥೧೨॥
ಸುಜನರುಪಹತಿ ಗೊಡಬಡನು ತಾ । ಕುಜನರಿಷ್ಟವ ನೈರಿಸನು ಗೋ । ದ್ವಿಜಮಹಾವ್ಯಾ
ಹುವ್ಯ ಕವ್ಯಾದಿತರ ವರ್ತನೆಯ । ಭಜಿಸಲೀಪನಿದೀಗ ಗರುಡ । ಧ್ವಜನ ಬಿರುದದರಿಂದ
ದುಷ್ಟ । ಪ್ರಜೆಯ ಶಿಕ್ಷೆಗೆ ಸುಳಿದನಲ್ಲದೆ ಜನ್ಮವಿಲ್ಲೆಂದ ॥೧೩॥ ಈತ ಸತ್ವರಜ

ಸ್ತಮೋಗುಣ | ದಾತ ವಿಮಲಗುಣತೃತೀಯಾ | ತೀತ ಮಾಯಾಸಾರ ಮಾಯಾ
ದೂರ ನೋಡಲಿಕೆ ॥ ಈತಸಿಸಿತಿನಿತೆಂದು ಯೋಚನೆಗೇತರಲಿ ಠಾವಿಲ್ಲ ಸತ್ವಗು | ಣಾತಿ
ಶಯವೇ ಕಾಣಬಂದಿಹುದಣುಗ ಕೇಳೆಂದ ॥ ೧೫ ॥ ಅಹುದುಮತ್ತೇನಿಳೆಯಜನ ನಿ |
ಗ್ರಹೆವಿದಾವವನಿಂದ ಬಳಿಕೀ | ಮಹಿಗೆಬಂದ ನಿರೋಧವಾವುದು ಹೇಳಬೇಕೆನಲು ॥
ವಿಹಿತವೇ ವಿಜ್ಞಪ್ತಿನಿಮಗೆಂ | ದಹತಪರಿತೋಷದಲಿ ಮುನಿವರ | ನಹಿಮಕರ ಕುಲ
ಕೀರ್ತಿಕರ ನಂದನರಿಗಿಂತೆಂದ ॥ ೧೬ ॥ ಎಲೆ ಕುಮಾರರೆ ಕೇಳಿರೈ ಸಿರಿ | ನಿಳಯ
ನೋಲಗಕೆಂದು ಮುನಿಕುಲ | ತಿಲಕ ಸನಕ ಸನತ್ಕುಮಾರ ಸನಂದನಾದಿಗಳು ॥
ಬಳಿಸಲಿಸೆ ಬಾಗಿಲಲಿ ತಡೆದರು | ಬಲಭರಿತಜಯವಿಜಯರಾ ನಿರ್ಮಳಮನೋರುಜ
ಕರ ನೊಡ್ಡಿದಕೈಯಕಂಬಿಯಲಿ ॥ ೧೭ ॥ ಪರಮಹಂಸರಿಗಧಿಕ ತೇಜಿ | ಷ್ಮರಿಗೆ
ತೇಜೋಭಂಗವಾಯಿತದನು | ಸರಣಿಗೊಂಬುದೆ ಕೋಪದಲಿ ಬಳಿಕವರು ಬಗೆಗೊಳದೆ ॥
ದುರುಳರಿಬ್ಬರಿಗಿತ್ತರತಿ ನಿ | ಷ್ಠುರದ ಶಾಪವನಸುರವಂಶೋ | ತ್ಕರದೊಳಗೆ ಸಂಭ
ವಿಸಿ ನೀವೆಂದಧಿಕ ರೋಷದಲಿ ॥ ೧೮ ॥ ಸರಸರಿಸಿ ಬಳಿಕಾಮುನೀಂದ್ರರು | ಸರಸಿ
ಜಾಕ್ಷನ ದರುಶನಕೆ ಬರ | ಬರಲು ಬಳಿಯಲಿ ಬಂದುದೂರಿದರವರು ಮುನಿವರರ ॥
ಕರದ ಸನ್ನೆಯ ಉಭಯ ಕಿಂಕರ | ವರರ ಖೇದವ ಸಂತವಿಸಿ ಮುನಿ | ವರರ
ನುಚಿತದಲುಪಚರಿಸಿ ಜಯವಿಜಯರಿಗೆ ಹರಿನುಡಿದ॥೧೯॥ಮುನಿವಚನವದುಹುಸಿಯದಾ
ಸುರ| ಜನನ ತಪ್ಪದು ನಿಮಗೆ ನೀವೇ | ಳನೆಯಭವದಲಿ ಬಂಧುತನಯದಲಿ ನಮ್ಮನೈದು
ವದು ॥ ಅನುಮತವಿದೊಂದಲ್ಲದಿರೆ ಮೂ | ರನೆಯಭವದ ಉರಾತಿಕೃತ ಭಾ |
ವನೆಯುಳ್ಳೈದುವುದೊಂದುಮತವಿದೆ ಹೇಳಿನೀವೆಂದ ॥ ೨೦ ॥ ಆರೆವಾವೆಲೆ ದೇವಹತ್ರಕೆ |
ಮೂರುಕಳದುಳಿದಿರ್ದ ಭವಗಳ | ಮೂರುಜನ್ಮವೆ ಸಾಕು ಹಗೆತನದಿಂದ ಬೇಗದಲಿ ॥
ಸಾರುವೆವು ನಿಮ್ಮಡಿಯ ಸಿರಿಚರ | ಣಾರವಿಂದವ ನೆಂದು ವಿಜ್ಞಾ | ಸಾರರುದಿಸಿದ
ರಸುರವಂಶದಲಧಿಕ ತೇಜದಲಿ ॥ ೨೧ ॥ ಕಂದ ಕೇಳು ಹಿರಣ್ಯಲೋಚನ | ನೆಂದು
ವೀರಹಿರಣ್ಯಕಾಸುರ | ನೆಂದು ಜನಿಸಿದರೊಂದು ಜನ್ಮದ ಲವರೊಳಾದಿಯಲಿ ॥ ಕೊಂದ
ನೊಬ್ಬನ ಸೂಕರನ ರೂ | ಪಿಂದ ಲೊಬ್ಬನ ನರಹರಿಯ | ರೂಪಿಂದ ಲಕ್ಷ್ಮೀ
ಕಾಂತ ಸಹಿತಕೃತಾಂತನಂದಿನಲಿ ॥ ೨೨ ॥ ಎರಡನೆಯಜನ್ಮದಲಿ ಜನಿಸಿದ | ಪರಿಯ
ಕೇಳ್ದೈ ಹೇಳುವೆನು ಸರ | ಸಿರುಹಗರ್ಭನಕೇಳಿಬಲ್ಲೈ ಶೃತಿಗಳೂಹೆಯಲಿ ॥ ಪರಮ
ಮುನಿಪ ಪುಲಸ್ತ್ಯನಾ ಸರ | ಸಿರುಹ ಗರ್ಭನ ಮಾನಸದ ಲವ | ತರಿಸಿದನು ತನ್ಮ
ನಿವಗಾದನು ವಿಶ್ರವಸು ಬಳಿಕ ॥ ೨೩ ॥ ಆ ಮುನಿಗೆ ಕುಬವಧುವಿನಲಿ ಕೀಲತ್ಯಾರ್ಗಮನೋ
ಕೇಶನ ಭಕ್ತಿಯಲಿ ನಿ | ಸ್ಸೀಮನಾದನು ವಿಶ್ರವಸು ಬಳಿ | ಕಾ ಮಗನನೇ ಸಲಹಿಕೊಂ
ಡಿರ್ದನು ಸರಾಗದಲಿ ॥ ೨೪ ॥ ತರುಣಕೇಳೀಚೆಯಲಿ ಲಂಕಾ | ಪುರವಸಿರಿಸೇರಿದ್ದುದಾ ಶಾ |
ರ್ವರಿಯ ಪರಿಯಟಣ ಪ್ರಚಂಡ ಸುಮಾಲ್ಯವಂತಂಗೆ ॥ ಹರಿಯವೈರದ ಲೀದರವ ರಿ |
ಬ್ಬರು ಸಹೋದರರಾ ಮಹಾಪುರ | ವರಹರಪ್ರಿಯಗಾಯ್ತು ವಿಷ್ಣುವಿನಿಂದ ಪೂರ್ವ
ದಲಿ ॥ ೨೫ ॥ ಹದನನರಿದಿದ ನೋಡಿಬದುಕಿದ | ತ್ರಿದಶವೈರಿ ಸುಮಾಲ್ಯವಂತನು | ಪದವ
ಭಜಿಸಿಪುಲಸ್ತ್ಯತನುಜಗೆ ತನ್ನ ಸಂದನೆಯ | ಮದುವೆಯನು ಮಾಡಿದನು ಬಳಿಕಾ | ಸುದತಿ
ಗಾದರು ಸುತರು ಖಳದಶ | ವದನ ನಗ್ಗದ ಕುಂಭಕರ್ನಸಿಶಾಟರವಸಿಯಲಿ ॥ ೨೬ ॥

ಅವರು ಜಯವಿಜಯರುಗಳಿರಡನೆ | ಯವತರಣದವರೀಗ ಮೇಲಾಗಿ | ಭಜಿಸಿದನು
ಹರಿಭಕ್ತಿಭೂಷಣ ವರವಿಭೀಷಣನು || ಇವರ ಮಾವರಮೇಲೆ ಕೈಕಸೆ | ಗವತರಿಸಿ
ದಳು ಮೃತ್ಯುರಾಕ್ಷಸಿ | ಸಿವಹಕಗ್ಗಳ ಶೂರ್ಪನಖಿ ಯೆಂಬವಳುಕೀಳೆಂದ || ೨೭ ||
ಬಳಿಕ ಮೆಚ್ಚಿಸಿ ವರತಪೋಸ | ಮ್ಮಿಳಿತ ಸೌರಂಭದಲಿ ಶಂಕರ | ಸಲಿಲಸಂಭವರು
ಗಳ ಬಹಳಾಯಾಸಮಾರ್ಗದಲಿ || ಇಳೆಯ ತಮ್ಮದು ಮಾಡಿಕೊಂಡ | ಪ್ಪಳಿಸಿದರ
ಮಲತರರಸುಗಳ ಕೈ | ಗೊಳಿಸಿ ಕಾದಿ ಕುಬೇರನನು ಹೊರವಡಿಸಿದರು ಪುರವ || ೨೮ ||
ಆದುದವರಿಗೆ ಲಂಕೆದಿನದಿನ | ಕಾದುದಖಿಳೈಶ್ವರ್ಯವ ಭವನ | ನೈದಿಬಕಿದುದನಾ
ಧನೇಶ್ವರಮೇಲೆ ಮಯನೆಂಬ || ಅದಿತೇಯವಿರೋಧಿಸುತೆ ಮಂ | ಡೋದರಿಯ
ತಂದಿತ್ತನಾ ಕ್ರ | ವ್ಯಾದಚಕ್ರೇಶಂಗೆ ಹೇಳುವುದೇನುಬಳಿಕೆಂದ || ೨೯ || ಜನಿಸಿದನು
ಬಳಿಕವಳಗರ್ಭದ | ಲನಿಮಿಷೇಂದ್ರವಿರೋಧಿ ಕೇರಿದು | ದನಗತದಸಿರಿಯುವನ ದೆಸೆ
ಯಿಂದಿಂದ್ರವೈಭವದ || ದನುಜಮನುಜಾಮರ ಮಹೋರಗ | ಜನತೃಣಪ್ರತಿಯಾಯ್ತು
ದಶದಿ | ಕ್ಕಿನ ಪುರಾಧಿಪರೆಡೆಗೆ ನಡೆದುದು ದಂಡು ಬಳಿಕೆಂದ || ೩೦ || ಕಾದಿದರು
ಬಳಿಕಣ್ಣನಲಿ ಗತ | ವಾದುದಾತನ ಸೈನ್ಯ ಸೋಲದ | ಹಾದಿಯಲಿ ನಿಲಿಸಿದನು ಧನ
ದನನಾ ಧನೇಶ್ವರನು || ಸಾಧಿಸಿದ ಮಹದೈಶ್ವರಿಯವನು | ಸೇದಿಕೊಂಡನು ಪುಷ್ಪಕವ
ಮೇ | ಲಾ ದುರಾಗ್ರಹಿ ಧಾಳಿಯಿಟ್ಟನು ಧೂರ್ಜಟಿಯ ಗಿರಿಗೆ || ೩೧ || ತಡೆದುದಾಗಿರಿ
ಗರುವ ಭಟನು | ಗ್ಗಡದ ದಿವ್ಯವಿಮಾನವನು ಖಳ | ಕೆಡಿಮೆಸಗೆ ಕಿತ್ತೆತ್ತಿದನು
ಮೃತ್ಯುಂಜಯನವರಗಿರಿಯ || ಮೃಡನರಿದು ನಗುತೊತ್ತಲಾಗಿರಿ | ಯಡಿಯಲೀಕೈಸಿಕ್ಕಿ
ಯೆದೆನಡ | ನಡುಗು ಲೊದರಿದನವನು ವರುಷಸಹಸ್ರಪರಿಯಂತ || ೩೨ || ಬಿಡಿಸಿದನು
ಬಂದಜನು ಮೊಮ್ಮಗನು | ಹಡದಮಗ ನಿವನೆಂದುವಂದಿಸಿ | ಮೃಡಗೆ ಬಳಿಕವಘಟಿಸಿ
ದನು ಬಾಲೇಂದುಶೇಖರನ || ಪಡೆದನಾಯುಷ್ಯವನು ತನ್ನಲಿ | ಕೆಡದ ಮಹದೈಶ್ವರ್ಯ
ದನು ಬಲು | ಖಡುಗವನು ವರಚಂದ್ರಹಾಸಕವೆಂಬನಾಮಕದ || ೩೩ || ದೃಢತರದ
ವರವಾಯ್ತು ಸಿರಿಯಾ | ಯ್ತೊಡೆಪರಿಯದುಬ್ಬರದ ಶೌರ್ಯದ | ಕಡಲು ಕೈವಶ
ವಾಯ್ತುಯೆಂಬುಂಮಹದ ಗರ್ವದಲಿ || ಒಡನೆ ಧಾಳಿಯನಿಕ್ಕಿ ಶಕ್ರನ | ತುಡುಕಿ
ತೇಜವಕೊಂಡು ವಹ್ನಿಯ | ನೆಡಹಿ ಕ್ಶಾಣದೆ ದಳವುಳಿಸಿದನು ಧರ್ಮರಾಜ
ನನು || ೩೪ || ಕಾಳಗಕೆ ನೆರದಖಿಳ ದೂತರ | ರೋಳಿಗೆವರಿದು ಮೃತ್ಯುವಿನ ಗೋ |
ನಾಳಿಯಲಿ ಚಾಚಿದನು ಚೌಪಟಚಂದ್ರಹಾಸಕವ || ಕಾಲನಡಗಿದ ನನಿತರಲಿ ದಿ |
ಕ್ಪಾಲತನವನು ಬಿಸುಟ ನಿರುತಿಯು | ಮೇಲೆಮೇಲಲ್ಲಿಂದನಡಡಾಕರಿಸಿದನುಧನವ ||೩೫||
ವರುಣ ಬಳಿಕೀಹದನಕೇಳುತ | ಶರಣುಪೊಕ್ಕನು ಕಾಯಬೇಹುದು | ಹರಣವನು ನೀ
ನೆಂದುಕೊಟ್ಟನು ಸಕಲ ವಸ್ತುಗಳ || ಕರುಣದಲಿ ಬಿಟ್ಟಾತನನು ಮುಂ | ದರುಣಪಟ
ಪರಿಧಾನಶೌರ್ಯಾ | ಭರಣ ಧಾಳಿಯನಿಕ್ಕಲೋಡಿದ ನನಿಲಭೀತಿಯಲಿ || ೩೬ ||
ಗೆಲಿದು ನಾನಾ ಲೋಕಪಾಲಕ | ರೊಳು ಧನವ ನೆರೆ ಕವರಿಕೊಂಡಿಳೆ | ಯೆಳೆಯ
ರಾಯರ ಬಾಯ್ಗೆ ಳಲಿ ಬಿರಳಿಡಿಸಿ ಶರಧಿಗಳ || ವಳಯದಖಿಳ ದ್ವೀಪಪತಿಗಳ | ತಲೆ
ಗಳನು ಹೊಡೆದಲ್ಲಿ ತನ್ನ | ಗ್ಗಳಿಯ ಭೃತ್ಯರನಿರಿಸಿ ಬಂದನು ಮರುತನೃಪನೆಡೆಗೆ | ೩೭ ||
ಆ ಮರುತ್ತನ ಯಜ್ಞಕ್ಷೇತ್ರಂ | ದಾಮರುದ್ಗಣ ಮುನಿಜನಂಗಳ | ತೋಮರದ ತೋಟಿ

ಯಲಿ ಕೆದರಿದು ಕದನಕೇಳಿಯಲಿ ‖ ಆ ಮಹೀಶನ ಗೆಲಿದು ನಿಮ್ಮಯ | ತಾಮರಸ
ಸಖಕುಲದಯೋಧ್ಯಾ | ಭೂಮಿಪತಿಯು ನರಣ್ಯದಲಿ ತೊಡಗಿದನು ಸಂಗರವ ‖ ೩೮ ‖
ಕಾದಿದನು ಸಮಪಾಳಿಯಲಿ ಹದಿ | ನೈದುದಿನ ಪರಿಯಂತ ಸೋಲವು | ಮೇದಿನೀ
ಶಂಗಾಗದಿರೆ ಮಾಯಾಭಿಯೋಗದಲಿ ‖ ಕಾದಿಕೊಂದನು ತಂನೃಪದ ಬಳಿ | ಕಾದು
ವಗ್ಗದ ಶಾಪವಾತನಿ | ನಾ ದಶಗ್ರೀವಂಗೆ ರಾಕ್ಷಸ ಸಾರ್ವಭೌಮಂಗೆ ‖ ೩೯ ‖ ಕ್ಷಿತಿ
ಸುತಾಸುತ ಕೇಳು ರಾಕ್ಷಸ | ಪತಿ ಬಳಿಕ ಬರುತಿರಲು ವೇದಾ | ವತಿಯ ಕಂಡನು
ಸೋತನಾಕಾಮಿನಿಯ ರೂಪಿಂಗೆ ‖ ಸತಿಗೆ ಬಳಿಕದು ಸಲುವುದೇ ರಘು | ಪತಿಯ
ಕೈಯಲಿ ರಣಮುಖದಲಾಪತಹತಿಸಿನಗೆ | ಬರಲೆನುತ ಹೊಕ್ಕಳು ಹವ್ಯವಾಹನನ ‖ ೪೦ ‖
ಬಂವನಲ್ಲಿಂವೋಲೆ ಜಯ ಮುಖ | ದಿಂದ ಲಂಕಾಪುರಿಗೆ ಸೇರಿತು | ಮುಂದಿಹಿಂದಣ
ರಾಕ್ಷಸೇಂದ್ರರ ಬಳಿಯ ಭಟರುಗಳು ‖ ಕೊಂದಸುರನರ ಪತಿಗಳಬಲಾ | ವೃಂದ
ಷೋಡಶಲಕ್ಷ ಭೋಗಕೆ | ಸಂದರಾದಿನಕಾನಿಶಾಚರಸಾರ್ವಭೌಮಂಗೆ ‖ ೪೧ ‖
ಗಿರಿಗಳಂಬುವಿವನ ಕಾಣುತ | ಶರಧಿಗಳನವ ಹೇಳದಿರುಸಂ | ಕರ ಸರೋಜಾಸನ
ಸುರೇಂದ್ರಾದಿಗಳ ಕಂಪನವ ‖ ತರುಣಹೇಳುವದೇನು ದಾನವ | ಹರನ ಹವಣೇ
ನರಿಯೆ ನೇಮಿ | ಕ್ಕರಿಗಳೀ ದಶಶಿರನ ಮಣಿಸಲು ತಕ್ಕರಿಲ್ಲೆಂದ ‖ ೪೨ ‖ ಕ್ರತುಗ
ಳಡಗಿದವಖಿಳ ಸುರರಾ | ಹುತಿಗಳುಖಡಿಸಿದವು ಕಾವ್ಯ | ವ್ರತತಿ ಯೋಸರಿಸಿದವು
ಧಾರ್ಮಿಕರಳ್ಳಿಬಾರಿವವು ‖ ಕ್ಷಿತಿಗೆ ಹೋರೆ ಬಲವಾಯ್ತು ಬದುಕುವ | ಗತಿಯ
ಕಾಣದೆ ಸಕಲದೇವ | ವ್ರತತಿ ನೆರದ್ವೈತಂದು ಕಂಡಿತು ಕಮಲಸಂಭವನ ‖ ೪೩ ‖
ಆತನಾ ದೂರಿಂದನವಮುಚಿ ವಿ | ಘಾತಿಮುಖ್ಯ ಸಮಸ್ತಸುರಸಂ | ಜಾತ ಸಹಿತೈ
ದಿದನು ವಿಬುಧವಿರೋಧಿಮರ್ದನನ ‖ ಭೂತಪಂಚಕ ತತ್ವಮಯನಿ | ರ್ಧೂತ
ದುರಿತನ ದುಷ್ಟಭಯ ಜೀ | ಮೂತಪಟಲ ಸಮೀರಣನ ದುಸ್ತರಮಹಾಂಬು
ಧಿಯ ‖ ೪೪ ‖ ಅಬ್ಬರಿಸಿ ತೆರೆಮಸಗಿ ಗಗನವ | ಗಬ್ಬರಿಸಿ ತಳಮಳಲವೊಗನೊಡ |
ನುಬ್ಬರಿಸಿ ಹೊಡಕರಿಸಿ ಹೊಗರೆದ್ದು ತಳವನುಬೆರೆದು ಘೋರ್ಗರೆದು ‖ ಬೊಬ್ಬುಳಿಯ
ಬೆಳ್ನೊರೆಗಳಟ್ಟಲಿ | ನೊಬ್ಬುಳಿಯ ನುರವಣೆಸುತುರುವಣೆ | ಗೊಬ್ಬನಲಿ ಮದವೇರಿ
ಪಾಲ್ಗಡಲೆಸದುದಿದಿರಿನಲಿ ‖ ೪೫ ‖ ಉಳಿಮುಡಿಡೆಯಿಲ್ಲದೆ ನಭೋಮಂ | ಡಲ ಮಹಾದೇ
ವೀತವಮುಳಿವಡೆ ವಿಲಯದಲಿ | ಜಿಜ್ಞ್ಯವದಲಾ ಬ್ರಹ್ಮಾಂಡ ಘಟನೆನುತ ‖ ಪ್ರೊಲಿದು
ನಾಳಿಯನಬುಜಭವನಾ | ಜಲಸಿಧಿಗೆ ಕೈಮುಗಿದು ಬಿಟ್ಟಿಯ | ಗೆಲಿದು ಬರುಹಿ
ಮರ್ಖದು ಸಹಿತೊಳ ಹೊಕ್ಕನಂಬುಧಿಯ ‖ ೪೬ ‖ ಕೇಳಿದ್ಯೈಯಲೆ ರಾಜಸೂನು
ಫ | ಟಾಳಿಧರನ ಶರೀರಶಯನನ | ಕಾಲಕರ್ಮಕ್ರಿಯಾಗತಾಗತಮಾರನನುಪಮನ ‖
ಆಲಯವು ಹದಿನಾರುಲಕ್ಷದ | ಮೇಲೆ ಸಾವಿರಯೋಜನವು ಬಳಿ | ಕೋಲಿದ
ಸಂಭ್ರಮವ ಹೊಗಳುವೆ ನೇಸ ತಾನೆಂದ ‖ ೪೭ ‖ ಖುಸುರರೇನವ ಕೋಟಿಸಂಖ್ಯೆಯ |
ಬಿಸರುಹಾಸನ ರಿದ್ರನುರ | ಪ್ರಸವಮಿದ್ದು ದಿವ್ಯಋಷಿಗಣವಿದ್ದ ದಪರಿಮಿತ ‖
ವಸುಧೀಶಾಧಿಪ ರುದ್ರಗಣ ಸುಮ | ನಸ ವಧೂನಿಕರುಂಬ ವಿದ್ದು | ನೂರಂ
ಕೈಗಳ ಖಿದಿನಾರಾಯಣನಬಳಸಿನಲಿ ‖ ೪೮ ‖ ವರಸರಸ್ವತಿ ಶಕ್ತಿ ಮಾಹೇ | ಶ್ವರಿ
ಮಹಾಗಾಯತ್ರಿ ಪಿಶ್ವಾ | ಭರಿಕುಮಾರಿ ವರಾಹಿ ವೈಷ್ಣವಿ ದುರ್ಗ ಚಾಮುಂಡಿ ‖

ಪರಮಸತಿ ಸಂಧ್ಯಾ | ತರುಣಿ ಮೊದಲಾದಖಿಳ ದೇವಿಯ | ರಿರವ ಕಾಣಿಸಿತಾದಿ
ಲಕ್ಷ್ಮಿಯ ಸುತ್ತವಳಯದಲಿ ‖ ೪೯ ‖ ಉಳಿವುದೊಂದೇ ವಸ್ತು ಕಲ್ಪಂ | ಗಳಲಿ
ಕಮಲಭವಾಮರೇಂದ್ರಾ | ವಳಿಗಳಡಗೂದಾ ಮಹಾತ್ಮನ ಮನದ ನೆನಹಿನಲಿ ‖ ತೊಲಗಿ
ದೂರದಲೆದ್ದು * ಮೆಲ್ಲನೆ | ಸುಳಿದರೀ ಬ್ರಹ್ಮಾದಿ ದೇವರು | ನಳಿನನಾಭನ ಮಹಿಮೆ
ಗಾವುದು ಸೀಮೆಕೇಳೆಂದ ‖ ೫೦ ‖ ನಾರದನ ಸಂಗೀತ ವಸ್ವರ | ನಾರಿಯರ ನರ್ತನ
ಶ್ರುತಿಸ್ಮೃತಿ | ಯಾರುಭಟೆ ಯಾಪ್ಪಡಣೆ ಪೌರಾಣ ಪ್ರಬಂಧಗಳ ‖ ಸಾರತರ
ಸಮ್ಮೋಹನದ ಕೈ | ವಾರಕೇಳಿಸಿತಬುಜಭವ ಬೃಂ | ದಾರಕರು ಜಯಯೆಂದು
ಹೊಗಳಿತು ಸಕಲ ಸುರಕಟಕ ‖ ೫೧ ‖ ದೇವ ಜಯಜಯ ಸಕಲ ದೇವರ | ದೇವ ಜಯ
ಕೃತಿಕೋಟಿ ಕನ್ಯಾ | ಶ್ರೀವರನೆ ಜಯಜಯ ಜನಾರ್ದನ ಭಕ್ತಸುರಧೇನು ‖ ದೇವ
ರಿಪು ಕುಲವಿಪಿನಪಟುತರ | ಪಾವನಾಖಿಳ ಲೋಕರಕ್ಷಕ | ದೇವರಕ್ಷಿಸು ನಮ್ಮ
ನೆನುತೆಡೆಗೆಡದಮರಗಣ ‖ ೫೨ ‖ ನೊಂದೆವಾವೆಲೆ ದೇವ ಸುರಕುಲ | ಬಂದಿಗಾರನ
ಕೈಯ ಲಕಟಾ | ತಂದೆನೀನೆಮಗಲ್ಲವೇ ನಿಗಮಾಗಮೋಕ್ತದಲಿ ‖ ನೊಂದನೋ
ವನುಪರಿಹರಿಸಿ ಕೃಪೆ | ಯಿಂದಸಲಹುವದೇವ ರಾರೆಮ | ಗೆಂದು ಮೇಘಧ್ವಾನ
ದಲಿ ಮೊರೆಯಿಟ್ಟುದಮರಗಣ ‖ ೫೩ ‖ ಕೇಳಿದನು ಕಡುದೂರುಕಾರರ | ನಾಲಿಗೆಯ
ಚಟಿತೋಕ್ತಿಯನು ಕರು | ಣಾಳುಗಳ ಬಲ್ಲಿದನು ನಿದ್ರಾಯೋಗಮುದ್ರೆಯಲಿ ‖ ಆಲಿ
ಗಳ ನರಳಿಚುತನಗೆಗಳ | ಮಾಲೆಗಳ ತೆರಳಿಚುತ ಕರೆ ಕ | ಟ್ಟೊಳಿಗದ ಕಾತುರರ
ನೆಂದನು ಹರಿಸುಪರ್ಣಂಗೆ ‖ ೫೪ ‖ ಬಂದನಾಗ ಸುಪರ್ಣಸುಮನಸ | ವೃಂದದೆಡೆಗಾ
ಕಮಲಭವ ಸಂ | ಕ್ರಂದನಾದಿ ಸಮಸ್ತಸುರಜನ ಮುನಿಜನವ್ರಜವ ‖ ತಂದು ನಿಲಿಸಿ
ದನಬುಜನಾಭನ | ಮುಂದೆ ಕುಸುಮಾಂಜಲಿಗಳಲಿ ಮುದ | ದಿಂದ ವೈಯಿಕ್ಕಿದರು
ಭಯರಸಭರಿತ ಭಕ್ತಿಯಲಿ ‖ ೫೫ ‖ ಜಯಜಯ ಶ್ರೀಕಾಂತಲೋಕ | ತ್ರಯ
ಕೃಪಾಕರ ಭಕ್ತವತ್ಸಲ | ಜಯಜಯಾಚ್ಯುತ ಜಯಸುರಾರ್ಚಿತ ಸಕಲ ಗುಣನಿಳಯ ‖
ಜಯ ಜಗದ್ವಲ್ಲಭ ಜಗನ್ಮಯ | ಜಯಜಗದ್ರಕ್ಷಕ ಜನಾರ್ದನ | ಭಯವಿದೂರನೆ
ದೇವಸಲಹೆನುತಿರ್ದದಮರಗಣ ‖ ೫೬ ‖ ದೇವಕಾರುಣ್ಯಾಂಬುನಿಧಿ ಭೂ | ದೇವ
ಸುಜನಜನೈಕವತ್ಸಲ | ದೇವದೇವೇಶಪ್ರಸಾದಕ ಸಿದ್ಧಮುಖಕಮಲ | ದೇವಲಕ್ಷ್ಮೀ
ಕಾಂತ ವರರಾ | ಜೀವಲೋಚನ ಸುಜನಸಜನ ಕರು | ಣಾವಲಂಬನ ಕಾಯಬೇಕೆಂ
ದೊದರಿತಮರಗಣ ‖ ೫೭ ‖ ಎದ್ದು ಬಿನ್ನೈಸಿದನು ಕಮಲದ | ಗದ್ದುಗೆಯ ಪರಮೇಷ್ಠಿ
ದೈತ್ಯತ್ರೈವಿ | ಮರ್ದನನೆ ಚಿತ್ತಾವಧಾನ ಕೃಪಾಬ್ಧಿಯವಧಾನ ‖ ತಿದ್ದಿತೆಮ್ಮಯದೆಶೆ
ದಶಾನನ | ನುದ್ದುರುಟತನದಿಂದ ನಾವ್ಬಂ | ದಿದ್ದಹದನಿದು ಜೀಯ ರಕ್ಷಿಸಬೇಹು
ದೆನುಗೆಂದ ‖ ೫೮ ‖ ಶಿಶುವದೀ ಜಗವೀ ಜಗತ್ರಯ | ನಶಿಸುತಿದೆ ಬಾಲ್ಯದಲಿ ನೆರೆರ |
ಕ್ಷಿಸುವ ದೇವರಕಾಣೆ ನಖಿಳಾಮ್ನಾಯದೃಷ್ಟಿಯಲಿ ‖ ಉಸುರಲಮ್ಮೆಸು ಜೀಯ
ಸುರರಾ | ಯುರವ ಚಿತ್ತವಿಸುರ್ವರೆಯುಗಂ | ಗಸವ ನವಧರಿಸೆಮಗೆ ಬಂದಿಹವಿಧಿಯ
ಕೇಳೆಂದ ‖ ೫೯ ‖ ಮರುಳುತನದಿಂದಾ ದಶಾಸ್ಯಗೆ | ವರವನಿತ್ತೆನು ದೇವ ತಾನದ |
ಪರಿಹರಿಸುವದಶಕ್ತ ಭಕ್ತಾಧೀನ ನೀನೆಂಬ ‖ ಬಿರುದುಮೆರೆವುದು ಜೀಯ ಜೇವನ |

* ಪಾ॥ ದೂರದ ಮೇಲೆ.

ಹೊರೆಯುಲರಿಯೆವು ವೈರಿ ದಶಕಂ | ಧರನುಪದ್ರದಲೆಲೆ ಕೃಪಾಂಭೋನಿಧಿಯೆ
ಕೇಳೆಂದ ||೧೦|| ಬರೆಯುಬಲ್ಲೆನು ಒರೆದಲಿಖಿತವ | ನೊರಸಲರಿಯೆನು ಜಗದಭಾಗ್ಯಾಂ |
ತರದಲೀ ಸಚರಾಚರದ ತತ್ಕರ್ಮಫಲವಿಡಿದು || ಬರೆದೆ ಧೃವನಲಲಾಟದಲಿ ಮುಳಿ |
ದೊರಸಿಬಿಸುಟು ಹಿರಣ್ಯಕನನಿ | ರ್ಭರದ ಭಾಳಾಕ್ಷರದ ಲಿಪಿಗೆವಿಧಾತೃನೀನೆಂದ ||೧೧||
ಸಿರಿಯುರಸ ಚಿತ್ತೈಸು ಹರಸುವ | ಗೊರವನೀ ಶ್ರೀಕಂಠನೀ ಶಚಿ | ಯರಸ ಸೇವಕ
ನೀ ಸಮೀರಣಸಖನು ಬಾಣಸಿಗ || ಮರಳಿ ಮಾತೇನೀಯಮನು ಕಿಂ | ಕರನು
ಮಿಕ್ಕಿನ ವರುಣ ವಾಯುಗ | ಳಿರವ ಚಿತ್ತೈಸಿದರೆ ಪರಿಹಾಸಕವಲೇಯೆಂದ || ೧೨ ||
ಹುಸಿಯನಾಡಲದೇನು ಗುರುಜೋ | ಯಿಸನು ತುಂಬುರ ನಾರದರು ರಂ | ಜಿಸುವ
ವೈಣಿಕರೀ ಮನೋಜವಸಂತರಾಖಳನ || ಬೆಸನಮಾಡುವ ದೂತರೀ ರವಿ | ಶಶಿ
ಗಳೊಪ್ಪುವ ದೀವಟಿಗರಲೆ | ಯ ಸುರಹರಚಿತ್ತೈಸುಪಾದ್ಯರು ನಾವಲೇಯೆಂದ ||೧೩||
ಬಿಸಜಗರ್ಭನ ಬಿನ್ನಹಕೆ ಹರಿ | ನೆಸನಗುತ ಕೃಪೆಯೀಲಿ ಕಟಾಕ್ಷವ | ರಸುಮೆಯನು
ಸೂಸಿದನು ಸುರರ ವಿಷಾದ ರಜನಿಯಲಿ || ನಸಿದರಕ್ಕುಡಿಸಿದಿರಿ ನೊಂದಿರಿ | ವಶನ
ನ್ಯೆದನು ಗೆಟ್ಟಿರಖಿಳಾ | ಯುಸಕೆಸಂದಿರಿ ಸೈರಿಸಿದಿರಿನ್ನಂಜಬೇಡೆಂದ || ೧೪ || ಸರಸಿ
ಜಾಸನ ಕೇಳು ಸಂದ-ದು | ವರನವಗೆಸಿನ್ನಿಂದ ದನುಜಾ | ಮರ ಭುಜಂಗಮು
ಮುಖ್ಯ ನಾನಾ ದೇವಯೋನಿಯಲಿ || ಮರಣಭಯವಿಲ್ಲೆಂದು ನೊಂದಿರಿ | ಹಿರಿದು
ನೀವವಸಿಂದ ಮುಂದಣಿ | ನರಿವಧಾ ಸಮಯಕ್ಕುಪಾಯುವ ಕೇಳಿನೀವೆನ್ನ || ೧೫ ||
ನರರರೂಪಿಂದಾವು ವಿಶ್ವಂ | ಭರೆಯೊಳವತರಿಸುವೆವು ನೀವಾ | ನರರರೂಪಿಂದುದಿ
ಸುವುದು ಧರಣೀತಳಾಗ್ರದಲಿ || ಧುರಮೊಳಹಿತಖಳೋತ್ತಮನ ದು | ರ್ಭರದ ಶಿರ
ಖಂಡನವ ನೆಮ್ಮಯ | ಸರಳ ಮೊನೆಯಲಿ ತೋರಿಸುವೆ ನಿವನಂಬಿನೀವೆಂದ || ೧೬ ||
ಎಂದವರಬೀಳ್ಕೊಡಲು ಚತುರಾ | ದ್ವಂದ್ವಕಾನತರಾಗಿ ಹರುಷದ | ಸಂದಣಿಯ
ಸೌರಂಭದಲಿ ಬೀಳ್ಕೊಂಡರಾ ಹರಿಯ || ಕಂದ ಕೇಳ್ಳೆ ಜಾಂಬವನರೂ | ಪಿಂದ
ತೋರಿದನಬುಜಭವನು ಪು | ರಂದರನು ನೆಲೆಗೊಂಡನಂಗದದಂಗಶೋಭೆಯಲಿ | ೧೭ ||
ತರಣಿ ಸುಗ್ರೀವಾಭಿಧಾನವ | ಧರಿಸಿ ಜನಿಸಿದನೀ ಚರಾಚರ | ಭರಿತಭುವನ
ಪ್ರಾಣನಾ ಹನುಮಂತರೂಪದಲಿ || ಧರಣಿಯಲಿ ಮೈದೋರಿದನು ಶಂ |
ಕರನು ವೃಷಭಾಕಾರದಲಿ ಗೋ | ಚರಿಸಿದನು ಸುರರಾಜವರ್ಧಕಿ ಬಳಿಕನಳ
ನಾಗಿ || ೧೮ || ಪವನಬಾಂಧವನೀಲ ನಾಮ | ಪ್ರವರದಲಿ ಜನಿಸಿದನು ಮೈಂದ |
ದ್ವಿವಿದರಾದರು ಸುರಯುಮಳರಗ್ಗದಪರೇತಪತಿ || ಗವಯ ಗಜ ಶರಭಾದಿ ಪಂಚ |
ಪ್ಲವಗರೂಪಿಂದುದಿಸಿದನು ಸಂ | ಭವಿಸಿಧನ್ವಂತರಿ ಸುಷೇಣಕನಾವ ನವಸಿಯಲಿ||೧೯||
ಉಳಿದ ಸುರಸಂದೋಹ ನಾನಾ | ಜಲಧಿ ಮಧ್ಯದ್ವೀಪ ಕುಹರಂ | ಗಳಲಿ ಕುಧರಾ
ವಳಿಗಳಲಿ ಬಹು ಕಾನನಂಗಳಲಿ || ಬಳಿಕ ವಲಿಮುಖ ರೂಪುಗಳ ನೆರೆ | ತಳದರಾಲ್ಪನ
ನೇಮದಲಿ ಕೇ | ಳಲೆ ಕಕುಸ್ಥಜನೂನು ಹರಿಲೀಲಾವಿನೋದವನು || ೨೦ || ಮಾಯೆ
ಮುಂದರೆಯಾಗಿ ದಶರಥ | ರಾಮ ಭವನದ ಸಾರಿದಳು ಫಣಿ | ರಾಮ ಲಕ್ಷ್ಮಣನಾಗಿ
ಜನಿಸಿದ ನಿಂದಿರಾಪಸಿತೆ | ರಾಮ ಜನಕನ ಮಗಳೆನಿಸಿ ವಸು | ಧಾಯುವತಿಯಿಂ ದುದಿಸಿ
ದಳು ನಾ | ರಾಯಣನು ಜನಿಸಿದ ನಸುಸಮ ರಾಮನಾಮದಲಿ || ೨೧ || ಇದು ಕಥಾ

ಜಗದೀಶ್ವರನ ಜನ | ನದ ಜಗದ್ವ್ಯಾಪಾರ ಜವನಿಕೆ | ಯುದಿಸಿ ತೋರಿದನಂಬಿದಿದು ಮಿಥ್ಯಾಪ್ರಪಂಚವಲೆ || ತುದಿಮೊದಲು ನಡುವೆಂಬ ಲಯದ | ಭ್ಯುದಯವೆಂಬ ವಿಕಾರ ಗಳು ಸೋಂ | ಕದ ಸನಾತನಗಾಯ್ತು ಲೀಲೆ ಮನುಷ್ಯರೂಪಿನಲಿ || ೭೨ || ಒಡಲೊಳ ಬುಜಭವಾಂಡ ಕೋಟಿಯು | ನಡಗಿಸಿರ್ಪ ಮಹಾಮಹಿಮ ಗಾ | ಯ್ತುಡಕಟ ತೊಟ್ಟಿ ಲೊಳಮಳನಿಗಮಾಳಿಗಳು ಬೆರಗಾಗೆ || ನುಡಿಗೆಗೋಚರದಮಳ ಬೊಮ್ಮದ | ಕಡುಹು ನಿಂದುದು ಜೋಗುಳದ ಲವ | ಗಡದ ದೇವತ್ವಕೆ ಶಿಶುತ್ವದೊಳಾಯ್ತು ನಿರ್ವಾಹ||೭೩|| ಎತ್ತ ಹೋದುದೊ ಹಸಿವು ತೃಷೆ ಹೊಗ | ದುತ್ತಮದ ಮಹಿಮಾತಿಶಯ ಹಸಿ | ದತ್ತು ಮೊಲೆವಾಲಿಂಗೆ ಸೊಗಸೂದಿದು ವಿಚಿತ್ರವಲ|| ಯತ್ತಲುರ್ವರೆಗಹಿಪತಿಗೆ ವಿಹ | ಗೊತ್ತ ಮಂಗರಿದೆನಿಸಿ ಕೊಂಬನ | ನೆತ್ತಿದರು ವನಿತೆಯರು ಬೆರಗೇನಲ್ಲವೇಯಂದ || ೭೪ || ಜಲರುಹಾಸನ ಮುಖ್ಯ ದಿವಿಜಾ | ವಳಿಗಳಿಂದೋಲೈಸಿ ಕೊಂಬ | ಗ್ಗಳದ ವಿಭವದ ದೈವವಾ ನರವಿಭುವಿನೋಲಗದ || ಕೆಳದಿಯರ ಕೈಸನ್ನೆಗಳ ವೈ | ವಳಿಯ ಮಾತಿಂ ಗೇಳ್ವ ಕುಳ್ಳಿರು | ವಳವಡಿಕೆ ಬಲ್ಲರಿಗೆ ಬೆರಗೇನಲ್ಲವೇಯುಂದ ||೭೫|| ನೆಲನನಳವಂದೀ ಮಹಾ ದಿಗು | ವಳಯವೀ ಕುಲಪರ್ವತಗಳೀ | ಜಲನಿಧಿಗಳೀ ಗಗನವೀ ಬ್ರಹ್ಮಾಂಡ ಹವಣಿಸದ || ವಿಳಸಿತವ ವಿಭುವಿಂಗೆ ದಟ್ಟಡಿ | ಗಳಕುನಡೆ ಮೆಲುನಡೆಗಳೆಂಬಿವು | ತಿಳಿವವರ ಮನಸಿಂಗೆ ಮರೆಮಾತಲ್ಲವೇಯುಂದ ||೭೬|| ಜಗದ ಜೀವರ ಯಂತ್ರಮಯ ದೂ | ಹೆಗಳ ನಾಡಿಸಿತೋರ್ಪ ನಾಟಕ | ಮಗುವು ತನದಲಿ ಬಾಲಕರ ಕೇಳೀ ಕಳಾಪ ದಲಿ || ಸೊಗಸುವುದು ಸೋಜಿಗದಲಾ ಶ್ರುತಿ | ನಗುವುದಕೆ ಸಂದೇಹವೇನೆಲೆ | ಮಗನೆ ಮಾಯಾಚರಿತ ಸೊಬಗೇನಲ್ಲವೇಯುಂದ || ೭೭ || ಆದಿಬೊಮ್ಮಕೆ ಮಗುವುತನ ಸಂ | ಪಾದಿಸಿತ್ತೆಂಬುದು ನೃಪಾಪರಿ | ವಾದವಿದು ಬಲ್ಲವರಿಗಜ್ಞರ ಮಾತದಂತಿರಲಿ || ಮೋದಿ ನಿಯು ಭಾರಾಪಹರಣ ವಿ | ನೋದವಿದು ಮಾಯಾ ಪ್ರಪಂಚದ | ಹಾದಿಗರಿಗಿದ್ಯ ಸಿದ್ಧವೆಂದೇ ತೋರುತಿಹುದೆಂದ || ೭೮ || ಅರಿಯ ಬಂದುದೆ ನಿಮಗೆ ಮಾಯೆಯ | ಮರೆಯ ಮಾನವನೆಂದು ಮಗುಳಂ | ತರಿಸಲಿಲ್ಲವಲೇ ಮನಸ್ಸಿನ ಸಂಶಯದ ಜೀದಿ || ತೆರಹುಗೊಟ್ಟತಿ ನಿಮಗೆನಲು ಪದ | ಕೆರಗಿದರು ಭಕ್ತಿಯಲಿ ಮುನಿ ಬಳಿ | ಕುರುವ ರಘುರಾಜೇಂದ್ರ ಚರಿತವ ಹೇಳಲನುಗೈದ ||೭೯|| ಹೊಳೆಹೊಳೆವ ನಿಡುಗಂಗಳಿನ ಥಳ| ಥಳಿಪ ಕದಪಿನ ಕೋಮಲಾಧರ | ದೆಳನಗೆಯ ಬಾಯ್ದೆರೆಯ ಮಿರುಗುವ ದಂತಪಂಙ್ತ್ತು ಗಳ || ಸುಳಿಗುರುಳ ಸೊಂಪೊಗೆವ ನೀಲೋ | ತ್ಪಲನಿಭಾಂಗದ ಮುದ್ದುವದನದ | ಚೆಲುವ ದೇವರದೇವ ನೆಸೆದನು ಬಾಲಕೇಳಿಯಲಿ || ೮೦ || ದಿವಸ ದಿವಸಕೆ ಬಾಲಶಶಿ ಹೆಚ್ಚುವವೊಲನುಜರು ಸಹಿತ ಲಕ್ಷ್ಮೀ | ಧವನು ಹೆಚ್ಚಿದ ನಿಳೆಯ ನಾಡಾಡಿಗಳ ನರ ರಂತೆ || ಅವನಿಜಾಸುತ ಕೇಳು ಮಹದು | ತ್ಸವದ ಉಪನಯನ ಪ್ರಪಂಚಗ | ಳಿವರಿ ಗಾದವು ವಿದಿತ ಲೌಕಿಕ ವೈದಿಕಂಗಳಲಿ||೮೧|| ಮೇಲೆ ನಿರುಪಮ ವೇದಶಾಸ್ತ್ರವಿ| ಶಾಲ ವಕ್ತೃಗಳಾವರಲ್ಲಿಂ | ಮೇಲನೆಸೆಗ್ರಹವಾಯ್ತು ಮುನಿಪ ವಸಿಷ್ಠನಿಂ ಬಳಿಕ || ನಾಲ್ವ ವರು ನಂದನರಿಗವನೀ | ಪಾಲ ತೇಜೋರಾಶಿ ಮಿಗೆ ಸಂ | ಮೇಳವಿಸಿದುದು ಮೆರದ್ವ ದವರಭ್ಯುದಯ ದಿನದಿನಕೆ ||೮೨|| ವರುಷ ಹದಿನಾರರಲಿ ಗಜ ರಥ | ತುರಗ ಜೇರಾಟ ದಲಿ ಗದೆ ಮು | ದ್ಗರ ಕೃಪಾಣ ಶರಾಸನಾದಿ ಸಮಸ್ತ ಶಸ್ತ್ರದಲಿ || ಸರಿಸುರೋರಗ

ನವರೊಳಿಲ್ಲೆಂ | ಬುರುತರಪ್ರೌಢಿಗಳ ಲುಬ್ಬಿಸಿ | ದರು ಪುರಂದರ ರಾಜತೇಜದೋ
ಖಿಳ ಜನಮನವ || ||೪೩||

ಎಂಟನೆಯ ಸಂಧಿ ಸಮಾಪ್ತಂ.

ಒಂಭತ್ತನೆಯ ಸಂಧಿ.

ಸೂಚನೆ|| ರಾಯ ದಶರಥನೆಡೆಗೆ ಮುನಿಕುಲ | ರಾಯ ಕೌಶಿಕ ಬಂದು ಯಜ್ಞವ
ಕಾಯಲೊಡಗೊಂಡೊಯ್ದ ನತಿಬಲ ರಾಮ ಲಕ್ಷ್ಮಣರ ||

ಪದ್ಯ|| ವಿಮಳಮತಿ ಕುಶಕೇಳು ಸಿದ್ಧಾ | ಶ್ರಮದೊಳಿರ್ದನು ಸಕಲ ಋಷಿ
ಕುಲ | ಕಮಲಮಿತ್ರನು ಮುನಿಪ ವಿಶ್ವಾಮಿತ್ರ ನೀಚೆಯಲಿ || ಅಮರರಿಪು ಮಾರೀಚ
ಘನ ವಿ | ಕ್ರಮ ಸುಬಾಹುಗಳೆಂಬ ರಾಕ್ಷಸ | ರಮಣರಾ ಮುನಿಮುಖಕೆ ಕಂಟಕರಾದ
ರಡಿಗಡಿಗೆ||೧|| ಮುನಿ ಬಳಿಕ ಬಲುಚಿಂತೆಯಲಿ ಗತಿ | ದನುವನವರಿಗೆ ಕಾಣಲರಿಯದೆ
ವನಜಗರ್ಭನ ಸಾರಬಿನ್ನಹ ಮಾಡಿದನು ಹದನ || ಮುನಿಪ ಕೇಳಿದಕೇಕೆ ಭಯ ಗೋ
ಮಿನಿಯಪತಿ ಗಂಹರೆಯ ಭಾರವ | ನೊನೆಯ ಲುದಿಸಿದನಿಹನು ದಶರಥರಾಯ ಭವನ
ವಲಿ ||೨|| ಕೊಂಡು ಹೋಗಾ ವಿಬುಧರಿಪುಗಳ | ಗಂಡ ಪಂಚಾನನನನಾಹವ | ಚಂಡ
ಚಟುಳ ಪರಾಕ್ರಮನ ಮಾಯಾ ತ್ರಿವಿಕ್ರಮನ || ಕಂಡ ಬಗೆಯಿದು ಬೇಗ ಹೋಗೆನೆ
ಪುಂಡೆಯನು ಮಣಿದಿಳಿದ ನವನೀ | ಮಂಡಲಕೆ ಮುದದಿಂದ ವಿಶ್ವಾಮಿತ್ರಮುನಿ
ರಾಯ || ೩ || ಕರಸಿ ಋಷಿವರ್ಗವನು ಮುನಿಜನ | ವೆರಸಿ ಸಿದ್ಧಾಶ್ರಮವ ನುಳಿದು
ಬ್ಬರವ ವಿವಿಧ ವನಾಳಿಗಳ ವಿಷಯಾಂತರಾಳದಲಿ || ಗಿರಿಸರಿತ್ಸಂಕುಲವ ಕಳಿಕಳಿ
ದರಿವಿಜಯ ದಶರಥ ಮಹೀಶನ | ಧರಣಿಯನು ಸಾರಿದನು ಸಂತೋಷದ ಸಘಾಡದಲಿ
ಬರಬರಲು ತತ್ಕೋಸಲದ ಗಂ | ಹರ ವಿರಾಜಿಸಿತಮವು ಹರಹಿನ | ಹರಿವ ಹೊಳೆಗಾ
ಲುವೆಯ ಕರೆದಂಬುಗಳ ನೀರುಗಳ || ತೆರಳಿಕೆಯ ತದಾಗ್ರಮನಿಕರದ | ಸಿರಿಯ
ಶಾಲಿಯ ವನದ ಬನದು | ಬ್ಬರದ ಧವಳೇಕ್ಷುಗಳ ಲನುಪಮ ನಂದನಂಗಳಲಿ || ೪ ||
ಹಲಸು ಖರ್ಜೂರಾಮ್ರಕುಲ ಮಾ | ದಲ ಮಧೂಕ ಕ್ರಮುಕ ದಾಡಿಮ | ತಿಲಕ ಕುರ
ವಕ ಜಂಬು ಜಂಬೀರಪ್ರಕೀರ್ಣದಲಿ || ನೆಲನ ಕಾಣಿಸದೀಕ್ಷಿಸದ ದೆಸೆ | ಗಳಲಿ ಹೂ
ದೋಟಗಳ ವನಗಳ | ವಳಯ ಡೆಡಬಲ ವೀಧಿಯಲಿ ಕಾಣಿಸಿದುದಾ ಮುನಿಗೆ || ೫ ||
ಅಂಗಜಾಂತಕ ನಾಲಯದವೋ | ಲ್ಶೃಂಗಳಾನ್ವಿತಮಯ ಹಿರಣ್ಯಕ | ಭಂಗನಂತಗರ್ಭ
ಹದವೊಲು ಲಕ್ಷ್ಮೀ ವಿಲಾಸಮಯ || ತುಂಗತೇಜೋಭರಿತ ಪರಮ ಪ | ತಂಗಮಂಡಲ
ದಂತೆ ಗೋಕುಲ | ಸಂಗಮಯ ವೆನಲೆಸದುದಗ್ಗದ ರಾಷ್ಟ್ರ ಕೋಸಲದ||೬|| ಬಂದನಾ
ಮುನಿ ನೋಡುತಜನೃಪ | ನಂದನನ ಲಲಿತಾನುವರ್ತನ | ವೃಂದವನು ತಲೆದೂಗು
ತಡಿಗಡಿಗತುಳ ಹರುಷದಲಿ || ತಂದೆ ರಾಜ್ಯವನಾಳಸೇ ಪೌ | ರಂದರಾವನಿಗಿನಿತು
ಸೊಬಗಿ | ಲ್ಲೆಂದು ಸಕಲ ಗ್ರಾಮವನು ಕಳಿಕಳಿದು ನಡೆತಂದ || ೭ || ಪರಿಧಿ ಪರಿವೃತ
ರವಿಯವೋಲ್ಶ್ವಿಜ | ಪರಿಧಿ ಪರಿವೃತನಗರ ವೆಸದುದು | ತರುಣ ಕೇಳ್ಕೆ ಕಂಗಳಿಗೆ ದೂರ
ದಲಿ ಕೌಶಿಕನ || ಮರಕತದ ಮಾಣಿಕದ ಜಾಪಿಾ | ಕರವ ಚಟುಳಪ್ರಭೆಯ ಶಾಲಾ |

ವರಣವಲಿ ಮಖಶಾಲೆಗಳ ಸೌಧಗಳ ಸೊಂಪಿನಲಿ ॥ ೯ ॥ ಮುರಿ ಮುರಿದ ಕೊತ್ತಳದ ಕೋಟೆಯು । ಥರಥರದ ಮುಗಿಲಟ್ಟಳೆಯ ವಿ । ಸ್ತರದ ವಿಮಲಸ್ಫಟಿಕ ಬದ್ಧರ ದಾಳಾ ವೇರಿಗಳ ॥ ಪರಿಪರಿಯ ಮಣಿಕನಕಮಯ ದು । ಹ್ಪರಿಗೆಗಳ ಸಾಲಿನಲಿ ಸುರಸನ । ಪುರವ ನಣಕಿಸುತಿರ್ದುದಾ ಸತ್ಯಾವತೀನಗರ ॥೧೦॥ ಹೊಳಲು ಹೊಸರೀತಿಯಲಿ ಮಿಗೆ ಕಂ । ಗೊಳಿಸುತಿರ್ದುದು ಮುನಿಪತಿಗೆ ಹೊರ । ವಳಲರಮ್ಯೋದ್ಯಾನವೆಸದುದು ಚೈತ್ರ ರಥದಂತೆ ॥ ನಲಿವಕಿನ್ನರ ಮಿಥುನದಲಿ ಮಿಗೆ । ಗಳಹುವರೆ ಗಿಳಿವಿಂಡಿನಲಿ ಹೆ । ಕ್ಕಳಪ ಕೋಗಿಲೆಗಳಲಿ ಮೊರೆವಳಿಕುಲದಮೇಳದಲಿ ॥೧೧॥ ಹೊರುವ ಮಕರಂದದ ತುಷಾರದ। ಪರಿಮಳವ ಪಸರಿಕೆಯ ಕುಸುಮೋ । ತ್ಕರದ ನಸುಮಿಡಿಗಾಯಿ ಕಸುಗಾಯ್ಪೋರೆ ಗಾಯಿಗಳ ॥ ಬಿರಿಮೊಗುವ ಬಂಬಿಲಿನ ಸೋನೆಯ । ಸರಿಯ ಪತ್ರ ಫಲಾದಿಗಳ ಬಂ। ಧುರದ ಶಾಲಿಪ್ರಮುಖಭೂಜದೆಸದುದುದ್ಯಾನ ॥೧೨॥ ಬೀಗಿ ಬೆಳದೆಳೆವಳ್ಳಿಗಳ ಸಲೆ। ತೂಗಿ ತೊನವಡಿಕೆಗಳ ಕೊನೆಯುಲಿ । ಬಾಗಿ ಬಳಕುವ ಬಾಳೆಗಳ ಫಲಭರದ ತೆಂಗುಗಳ ॥ ಸೋಗೆಗಳ ಸುಳಿವುಗಳ ಕಪಿಗಳ । ಲಾಂಗಗಳ ಲಂಘನೆಯಲೆಸೆದುದು । ಪೂಗಜೆಯ ನಾಡುಂಬೋಲಲನ ಪೋಲ್ತತ್ತುಪೋದ್ಯಾನ॥೧೩॥ ಮರಕತದ ನೆಲಗಟ್ಟುಗಳ ಶಶಿ। ಕಿರಣ ಕಾಂತದ ನೆಳೆನೆಲೆಯ ಬಂ । ಧುರದ ಘನ ಸೋಪಾನಗಳ ಕೇಳೀಮನೋಹರದ॥ ಸರಸಿಗಳ ಮಣಿಸೌಧಗಳ ವಿ । ಸ್ತರದ ವಿವಿಧ ಸುರತ್ನ ಹೇಮೋ । ತ್ಕರದ ಕೃತಕಾದ್ರಿಗಳ ಲೊಪ್ಪಿದುದಾ ಪುರೋದ್ಯಾನ ॥ ೧೪ ॥ ಸರಸಿಗಳ ಪುಣ್ಯೋದಕದ ಲಘು । ಮರುಷಣಂಗೈದಬ್ಜ ಕುಸುಮೋ । ತ್ಕರಪರಾಗದ ಲೇಪನಾಂಗದಿ ನಳಿಕದಂಬಕದ ॥ ಪರಿಚತುಸ್ವರ ದಮಲ ನಿಗಮೋ । ತ್ಕರದ ತದ್ವನಸಂಚರಥ ಪರಿ । ಸರದ ಪಾವನ ಪವನ ಮುನಿಯಪ್ಪಿದನು ಕೌಶಿಕನ ॥ ೧೫ ॥ ಬಾರಿಸಿದ ಸರಣೀಶ್ರಮೋದ್ಭವ । ವಾರಿ ತನುಗತವಾದವಂಗ ಮ । ನೋರಥದ ಲುಬ್ಬಿದುದು ವಿಶ್ವಾಮಿತ್ರಮುನಿಸರನ ॥ ಪೌರ ಜನ ವಿಭವಯ ಪರೂಥದ । ಸಾರಥಿಯು ಪಥವಿಡಿದು ನಗರ । ದ್ವಾರವನು ಸಾರಿದನು ಸಮ್ಮೇಳದಲಿ ಮುನಿನಾಥ ॥ ೧೬ ॥ ಸಗರರಂದು ಮಹಾಧ್ವರಾಶ್ವವ । ಜಗವೆರಡರಲಿ ನೋಡಿಕಾಣದೆ । ಬಗಿದಿಳೆಯನಂದಿಳಿದ ವಿತಳದ್ವಾರವೋ ಪುರದ ॥ ಆಗಳೊರವಿಯುಡೆಯಾಟಕಿಕ್ಕಿದ । ಗಗನಸೀಮೆಯೋ ಕೋಟೆಯೋ ಯೆನು । ತಗಡುರಾಜ ಮುನೀಂದ್ರ ಹೊಗಳುತ ಪೊಕ್ಕನಾಪುರವ॥೧೭॥ ಪಳುಕಿನರೆಯಲಿ ಬಿಗಿದ ಬೀದಿಯ । ನೆಲನ ನಿಜಯ ಶ್ರೇಣಿಗಳನು । ಜ್ವಲಿಪ ಚಂದ್ರೋಪಲದ ಘನಸೋಪಾನ ಪಂಙ್ತಿಗಳ ॥ ಬಳಿಬಳಿಯ ಸೌಧಾವಳಿಯ ಶೋಂ । ಗಲಶಗಳ ಹೊದರಿನ ಪತಾಕಾ । ವಳಿಯ ಪಸರದಿ ನೆಸದುದಾ ಪುರ ಮುನಿಯ ಕಣ್ಮನಕೆ ॥೧೮॥ ಪರಿಪರಿಯ ವಸ್ತ್ರೋತ್ಕರದ ವಿ । ಸ್ತರದ ವಿವಿಧಮಣಿಗ್ವರರ ಬಂ । ಧುರದ ಬಹಳಿತ ಸೂರ್ಯವೀಥಿಯ ಸೋಮವೀಥಿಗಳ । ಪುರನಿತಂಬಿನಿಯರ ವಿಳಾಸವ । ನಿರುಪಮಾಲಯವೀಥಿಗಳ ಮುನಿ । ವರನು ನೋಡುತ ಬಂದು ಹೊಕ್ಕನು ನೃಪಸಭಾಸ್ಥಳವ ॥ ೧೯ ॥ ಧರಣಿಪತಿ ಮುನಿಸಾರ್ವಭೌಮನ । ಬರವ ಕಾಣುತ ಧಿಮ್ಮನುರು ವಿ । ಸ್ತರವ ನಿಳಿದಿದಿರ್ವಂದು ವಿನಮಿತನಾಗಿ ಕೈಗೊಟ್ಟು ॥ ಅರಮನೆಗೆ ತಂದರ್ಘ್ಯಪಾದ್ಯೋ । ತ್ಕರ ವಿಧಾನದಿ ನಾ ಮುನಿಯನುಪ । ಚರಿಸಿ ಬಿಜಯಂಗೈದ ಹದನೇನೆಂದು ಬೆಸಗೊಂಡ ॥ ೨೦ ॥ ಬಂದೆವಾವ್ಮೇಳ್ಳೆ ಸ್ವಕಾರ್ಯದ ।

ಎಂದು ಹೆಚ್ಚಿನ ಕೊರತೆಗಳು ನಿಂ | ನಿಂದ ನಮಗೆ ಸುಸೂತ್ರವಹುದೆಂಬೀ ವಿಚಾರದಲಿ||
ಇಂದಿಗೀನೆಲೆಗಾವನೈ ನಿ | ನ್ನಿಂದ ತೇಜಿಷ್ಠನು ಮಹೀಶರೊ | ಳೆಂದು ಕೊಂಡಾಡಿ
ದನು ಮುನಿ ದಶರಥ ಮಹೀಪತಿಯ||೨೧|| ಜನಪ ಕೇಳೈ ಕೇಳಬೇಕೆಂ | ಬನಿತು ತಾನುಪ
ಚಾರ ನಿನ್ನಯ | ಜನಪ ಧರ್ಮದ ಸಕಲ ನೀತಿಯು ಸಾರಸಂಗ್ರಹವು || ಮನು ಪುರೂ
ರವ ಕಾರ್ತವೀರ್ಯಾ | ರ್ಜುನ ಹರಿಶ್ಚಂದ್ರಾದಿ ರಾಯರ | ನೆನಹವನು ಮಾಣಿಸಿದ
ಮಾತಿನ್ನಾವುದೆಮಗೆಂದ||೨೨|| ಹಸನು ವರ್ಣವಿಭೇದ ಪದ್ಧತಿ | ಸಸಿನು ವೈದಿಕಕರ್ಮ
ನಿನ್ನಲಿ | ವಸುಮತೀಪತಿ ಕೇಳು ಜನಪಾಲನೆಯ ಪರಿಲೇಸು || ಹುಸಿ ಕಪಟ ಕಳವಳವ
ಕೊಲೆ ಕ | ರ್ಕಶವಿರೋಧೋಪದ್ರವೆಂಬಿವು | ವಿಸಕಲವೆಮ್ಮವು ನಾವು ಹೇಳುವು
ದೇನು ನಿನಗೆಂದ ||೨೩|| ಅರಸ ಕೇಳೈ ಧರ್ಮನಾಲ್ಕು | ಚರಣದಲಿ ನಿಂದಿದೆ ಮಹೀ
ನಿ | ರ್ಜರರ ನಿರುಪಮ ಹವ್ಯಕವ್ಯಸ್ಥಿತಿ ಸುರೇಶ್ವರನ || ವರ ಸಭಾಮಂಡಲದೊಳಗೆ ವಿ |
ಸ್ತರಣವಾಗಿಹುದಗ್ನಿಹೋತ್ರಾ | ಚರಿತ ಕಾವುದು ಕೊರತೆಯೆಲೆ ನರನಾಥ ಕೇಳೆಂದ||
ಈಸುದಿನ ನಮ್ಮಗ್ನಿಹೋತ್ರಕೆ | ವಿನಾಸಲಳಿಯದೆ ನಡೆದುದೀಗ ವಿ | ನಾಶಕರವಾಯ್ತು
ದರಿನಾದುದು ಬರವು ನಮಗೆನಲು|| ಐಸಲೇ ನಿಮಗಾದ ಚಿಂತೆ ಯಿ | ದೇಸುದೊಡ್ಡಿತು
ಬೆಸಸಿ ಮಾಡುವೆ | ನಾಶೆಮಾತಲ್ಲೆಲೆ ಮುನೀಶ್ವರ ನಂಬುಸೀನೆಂದ ||೨೪|| ವೊಡವಿಪತಿ
ಕೇಳ್ನಿಗಮನಿಕರ ಗ | ಳಿಡಹಿ ವಾಚಿಪದರೆಯು ನಿಮ್ಮಯ | ನುಡಿಗೆ ಹೊದ್ದದು ಹಳಿವು
ಮನುವಿಡಿದಿಂದು ಪರಿಯಂತ || ನುಡಿದು ನೋಡುವ ನಾವು ನಮ್ಮಯ | ನುಡಿಯನೀ
ಪಾಲಿಸಿದಡದು ಮೈ | ಗೊಡುವ ಭಾಗ್ಯದ ಬೆಸಸಲೇ ನಮಗೆಂದನಾ ಮುನಿಪ || ೨೬ ||
ನಾವು ಬೇಡುವ ವಸ್ತುವಾಹನ | ವಾವುದದು ಕೇಳರಸ ರಾಘವ | ದೇವನನು ಕೊಡು
ಕಡೆಯ ಮಾತಿದು ಯಜ್ಞರಕ್ಷಣೆಗೆ || ಭೂವಧೂವರ ಕೇಳಿದೈ ಸಂ | ಭಾವನೋಚಿತ
ವಿನಿತಲೇ ಮ | ತ್ತಾವುದಕೆ ನಿರ್ಬಂಧಿಸುವರಲ್ಲೆಂದನಾ ಮುನಿಪ ||೨೭|| ಎಲೆ ಕುಶನೆ
ಕೇಳ್ಮುನಿಪನುತ್ತರ | ದಲಗು ಬೆನ್ನಲಿ ಮೂಡಿದುದು ಹೆಡೆ | ತಲೆಗೆ ಸಾರ್ದುದು ಜಿಹ್ವೆ
ಕಳವಳಿಸಿದುದು ಕರಣಚಯ | ಒಳಗುಸವದುದು ತಾಪದಲಿ ಮು | ಮ್ಮೂಳಿತನಾದನು
ಮುಂದುಗಾಣದೆ | ಹಲವ ನೆಣಿಸುತ ಹರುಷಗೆಟ್ಟಂತೆಂದನಾ ಭೂಪ || ೨೮ || ಐಸಲೇ
ಮುನಿನಾಥ ರಾಮನ | ದೈಸರವತುತ್ತುಂಬ ಹರೆಯದ | ಶೈಶವನ ಕೈಯಿಂದ ಸಲಹಿಸಿ
ಕೊಂಬುದೇಯಜನ || ಸೂಸಿದಿರಿ ಸೀವ್ನಗೆಯ ನಿದಕೇ | ಳೈಸಲೇ ಮುಖ ಪರಿಕರವ
ಮೇ | ಳೈಸಿ ಮರ್ಮಾತೇನು ರಕ್ಷಿಸುವೆನು ಮಹಾಧ್ವರವ||೨೯|| ನಗೆಯ ಸೂಸುವಡಾವು
ಲೋಕದ | ಹಗರಣೆಗರೇ ಕೇಳಿದೈ ನೃಪ | ಮಗುವು ರಾಘವನೆಂದು ತಪ್ಪಿಸಿ ನುಡಿವ
ನುಡಿ ನಿನಗೆ || ನಿಗರವೇ ರಘುನಾಥ ನಾಡಾ | ಡಿಗಳ ನರನೇ ಮರುಳೆಲಾ ನಿ | ನ್ನಗಡು
ತನವನು ಬಲ್ಲೆನದು ಕೊಳ್ಳದು ಕಣಾಯೆಂದ ||೩೦|| ಧುರದೊಳಿಂದ್ರನ ಸದೆಬಡಿದ ಶಂ
ಬರನ ಸಮರವ ಗೆಲಿದೆನೆಂಬೀ | ಬಿರುದಬಿಡು ಕೇಳರಸ ದಿಗ್ವಿಜಯದ ಪರಾಕ್ರಮದ ||
ಹುರುಳು ನಿನಗುಂಟೆಂಬುದು ಕೆಲ | ಕಿರಲಿ ವೀರಸುಬಾಹು ಮಾರೀ | ಚರುಗಳಾ
ರೆಂದರಿಯಬಾ ನರನಾಥ ಕೇಳೆಂದ ||೩೧|| ಕಳುಹುವಡೆ ನೃಪಕೇಳು ರಾಮನ | ಕಳುಹು
ಕಳುಹದಡೆಮ್ಮ ಸೀಕ್ಷಣ | ಕಳುಹು ಕಾವವರುಂಟು ಯಜ್ಞವ ನಿಳೆಯೊಳರಸುಗಳು ||
ಹೊಳದು ಸಾಡಿವರ ಸಲ್ಲವೆಂದಾ | ನೊಳಗನರಿಯದೆ ಬಂದೆನೈ ಯಿದ | ಕಳುಕಲ್ಯಾತಕೆ

ಬಿರುದ ಬಿಸುಟರೆ ತೋಟಿಯೇನೆಂದ ॥ ೩೨ ॥ ಮುಸುಡು ಕಂಡೆನು ಹಲವು ಕಾಲಕೆ ।
ಶಿಶುಗಳಿವದಿರ ನಿಮ್ಮ ಕೃಪೆಯಲಿ । ಹಸುಳೆಗಳಲಾ ಹರಿಬವನು ಸೇಸೆಂದ ಹಗೆಗಳಿಗೆ ॥
ಮನಗಬಲ್ಲರೆ ರಘುನವನತಿ ಕೆಡೆ । ಬಿಸುಡಿಸಲು ಬೇಡೈಯರಸಕ್ಕಸ । ರ ಸಮರಣ
ದೊಳಗುಳಿಯ ಬಲ್ಲರೆ ತಂದೆ ಹೇಳೆಂದ ॥ ೩೩ ॥ ಉಳಿಯಬಲ್ಲರೆ ರಕ್ಕಸರ ಕೊಳು ।
ಗುಳದೊಳಗೆ ಕವನಕೆ ಕಂದನ । ಕಳುಹ ಬಹುದೇಯೆಂದು ಕರುಣವ ತೋರಿ ನುಡಿದೆ
ಯಲ ॥ ಉಳಿವುದೀ ನಿಜವಸ್ತುವೀ ಜಗ । ದಳಿವಿನಲಿ ವಿಕ್ಯಾದನಸ್ತ್ರಗ । ಳಳಿವ
ಪೀತನೊಳೀತನಾರೆಂದರಿಯದಾದೆಯ ಲ ॥ ೩೪ ॥ ಮರುಳರಸ ಕೇಳೀತ ಮಾಯಾ ।
ನರಕಣಾಮಗನಲ್ಲ ನಿಖಿಳಾ । ಮರರ ದೂರಿಂದೀತ ನಿಮ್ಮೀತರಣಿ ವಂಶವಲಿ ॥ ಧರೆಯ
ಭಾರವ ನಿಳುಹಲೆಂದವ । ತರಿಸಿದನು ಜಗದಖಿಳ ದೇವರಿ । ಗರಸಲಾ ನಿನಗಃಕಟಮಗನೇ
ಮರುಳೆ ಹೋಗೆಂದ ॥ ೩೫ ॥ ಅಜನರೂಪಿಂದಖಿಳ ಲೋಕವ । ಸೃಜಿಸುವನು
ಸಲಹುವನು ಗರುಡ । ಧ್ವಜನ ರೂಪಿಂದಳಿವ ನಗ್ಗದರುದ್ರರೂಪಿನಲಿ ॥ ಭಜಿಸಿ ನೆರೆ
ಯರು ನಾರದಾದ್ಯರು । ನಿಜವನೀತನ ನೀತನಿನಗಾ । ತ್ಮಜನೆ ಹೋಗೆಲೆಮರುಳೆ
ನೀನಾರೀತನಾರೆಂದ ॥ ೩೬ ॥ ಈ ಹಸುಳೆ ಹಿಂದಖಿಳ ಯುಗದಲಿ । ರೂಹಿಸಿದನುರು
ಮತ್ಸ್ಯ ಕೂರ್ಮ ವ । ರಾಹ ನರಹರಿ ವಟು ಪರಶುಧರನಾಗಿ ಲೀಲೆಯಲಿ ॥ ಗಾಹು
ಬೇರಿಹುದೀ ಜಗದ ವೈ । ಗಾಹಿಗೋಸುಗ ಜನ್ಮವೆಂಬಿವು । ಚೋಹವಲ್ಲದೆ ನಿಜವಿಚಾ
ರಿಸೆ ಮಗನೆ ನಿನಗೆಂದ ॥ ೩೭ ॥ ಕಾಣವೀತನನರಸ ನಿಗಮ । ಶ್ರೇಣಿಗಳು ಸಿದ್ಧಾಂತ
ವಿದು ಪರ । ಮಾಣುಗತನ ಮಹತ್ವವನು ನಿಶ್ಚೈಸಿನೆರೆಯವಲ ॥ ಸ್ಥಾಣು ಕಮಲ
ಜರರಿಕೆಗಳ ಸ । ತ್ರಾಣವೇತರದರಸ ಕೇಳ್ನರಿ । ಗಾಣೆ ನಿನಗೀದೈವವಲಿದುದಕೆಂದ
ನಾಮುನಿಪ ॥ ೩೮ ॥ ತಂದೆನೀನಹೆನೆಂಬ ಹೆಮ್ಮೆಯ । ತಂದು ಕೊಳದಿರು ನಿನ್ನಗುರು
ವಿನ । ತಂದೆಯಯ್ಯನು ತಪ್ಪದಿದಕೆಂಬೀ ಸುನಿಶ್ಚಯವ । ಹಿಂದು ಮುಂದಕೆ
ಕೇಳಿಕೋ ನಾ । ನೆಂದ ಮಾತನು ಕುಲವಿಡಿದು ಬಳಿ । ಸಂದ ನಿಮ್ಮಯ ಗುರು
ವಸಿಷ್ಠನ ನೆಂದನಾ ಮುನಿಪ ॥ ೩೯ ॥ ಶಿರೆಗಳಾಕಿದವಾ ನರೇಂದ್ರನ । ಕೊರಳನಾ
ಮುಸನಾಥ ನುಡಿದು । ತ್ತರಕೆ ಮಾರುತ್ತರವ ಕಾಣದೆ ಮನದ ಮರುಕದಲಿ ॥ ಗುರು
ಮುಖಾಂಬುಜವನು ನಿರೀಕ್ಷಿಸೆ । ಬೆರಳ ಸನ್ನೆಯಲಾ ಮುನಿಪ ನಿ । ರ್ಧರಿಸಿದನು ನಿಜ
ವೆಂದು ಕಳುಹಿನ್ನಂಜಬೇಡೆಂದ ॥ ೪೦ ॥ ಗುರುನಿರೂಪ ವಲಂಘ್ಯವೆಂದನು । ಕರಿಸಿ
ಕರದನು ಮಗನನೀ ಮುನಿ । ವರನ ಕೃಪೆ ನಿನಗಾಯ್ತು ಪಾಲಿಸು ಮುನಿಪನಧ್ವರವ ॥
ತೆರಳು ನೀನೆಂದೆಂಬ ವಚನಾಂ । ತರದೊಳೊಸರಿದ ವಶ್ರುಜಲ ನಿ । ಬ್ಬರದ ಬೆರಗಿನ
ರೀತಿಯೋಳಿರ್ದುದು ಸಭಾಸ್ಥಾನ ॥ ೪೧ ॥ ನಮಿಸಿ ತಂದೆಗೆ ಗುರುವಸಿಷ್ಠನ । ಸುಮು
ಖಿತೆಯ ಹರಕೆಯನು ಕೈಕೊಂ । ಡಮಿತವಿಕ್ರಮ ನಿಷುಧಿಚಾಪಕೃಪಾಣಗಳ ಧರಿಸಿ ॥
ಗಮಿಸಿದನು ಮುನಿಯೊಡನೆ ಹರುಷೋ । ದ್ಗಮದಲಾತನ ಬೆಂಬಳಿಯ ನಾ । ಕ್ರಮಿ
ಸುತಾ ಸೌಮಿತ್ರಿ ಕಳುಹಿಸಿಕೊಂಡನಾ ನೃಪನ ॥ ೪೨ ॥ ಬೀಳುಕೊಂಡನು ಮುನಿ
ಬಳಿಕ ಭೂ । ಪಾಲಕನ ಹರುಷದಲಿ ತನ್ನೃಪ । ಬಾಲಕರು ಸಹಿತಲ್ಲಿಗಲ್ಲಿಗೆ ನೆರೆದ
ಪೌರಜನ ॥ ಜಾಳಿಸುವ ಕಂಬನಿಗಳಲಿ ಬಿರು । ನಾಲಿಗೆಯ ಬೈಗಳಲಿ ಮುನಿಯನು ।
ಕೇಳು ನುಡಿಯಲಿ ಜಡಿವುತಿರ್ದುದು ಜರೆದು ಜನಪತಿಯ ॥ ೪೩ ॥ ಪುರವ ಹೊರ

ವ:ಟ:ಮುನಿಪ ನಾ। ತರಣಿಕುಲಜರುಸಹಿತ ಬಂದನು । ಸರಯುವೆಂಬ ತರಂಗಿಣಿಗೆ ನಿಜಭಾವಶುದ್ಧಿಯಲಿ॥ ಪರಮುನಿಸ್ಸೈಯಲಾ ಮುನಿಪ ನಘ। ಮರುಷಣಾದಿ ಸಮಸ್ತ ಕರ್ಮಾಂ । ತರನ ವಿರಚಿಸಿ ಕೊಟ್ಟ ನವರಿಬ್ಬರಿಗನುಗ್ರಹವ ॥೪೪॥ ಹರಿಹರ ಬ್ರಹ್ಮಾಮರೇಂದ್ರಾ। ದ್ಯರ ಹೆಸರ ವಿದ್ಯಾಸ್ತ್ರ ಮಂತ್ರವ । ನೊರೆದನಾ ಚಮುನೀಂದ್ರ ಸಾಂಗೋಪಾಂಗ ವುದ್ರೆಯುಲಿ ॥ ವರವಹಿತ್ತನು ಶಸ್ತ್ರದುಪಸಂ । ಹರಣವನು ತನು ರಕ್ಷಣೆಯು ವಿ। ಸ್ತರವ ದಿವ್ಯತಸುತಿಮಂತ್ರವನಾ ಕುಮಾರರಿಗೆ॥ ॥೪೫॥

ಒಂಭತ್ತನೆಯ ಸಂಧಿ ಸಮಾಪ್ತಂ.

ಹತ್ತನೆಯ ಸಂಧಿ.

ಸೂಚನೆ॥ ತುಂಗಭುಜಬಲ ಸಹಿತಮುದಮಾ । ತಂಗಕಂಠೀರವನು ರಾಮನ । ಭಂಗದಲಿ ತಾಟಕಿಯ ಗೆಲಿದೊಲಿಸಿದನು ಜಯವಧುವ ॥

ಪದ್ಯ॥ ಕಂದಕೇಳೈ ಮುನಿ ಬಳಿಕ ಮುದ । ದಿಂದ ಸರಯುವ ದಾಂಟಿ ದಶರಥ ನಂದನರು ಸಹಿತೈದಿದನು ಘನ ಘೋರಕಾನನವ ॥ ದಂದಶೂಕ ಮಹೋಗ್ರ ಖಗ ಮೃಗ। ದಿಂದ ಮಿಗೆಕಪ್ಪಗಿಕತ್ತಲೆ । ಯಿಂದ ಬೀರಿತು ಭಯವನಾ ರಘುರಾಜಪುತ್ರ ರಿಗೆ॥೧॥ ಮುನಿಪ ಚಿತ್ತವಿಸೀ ಭಯಂಕರ। ವನವಿದಾರಾಶ್ರಮವು ಗಮಿಸುವ।ಡನಿಮಿಷರ ಗಳವಲ್ಲ ಹೆಸರೇನೀ ಮಹಾವನದ ॥ ಎನೆ ಸುರೇಂದ್ರನು ಪೂರ್ವದಲಿ ವೃ । ತ್ರನ ವಿದಾರಿಸೆ ಬಂದುದಾತಗೆ । ಜನಿತಕಲ್ಮಷ ದೋಷವಾ ದಿನಕೆಂದನಾಮುನಿಪ ॥೨॥ ಕಲುಷಿತವ ನಪಹರಿಸ ಲಾಖಂ। ಡಲನ ಬಳಿಗಜಬಂದು ಗಂಗಾ । ಜಲದಲಭಿಷೇಕ ವನು ಮಾಡಿದನಾ ಸುರೇಂದ್ರಂಗೆ॥ ಬಳಿಕಲಾ ಜಲವಿಳಿಯ ಲೀವನ। ಕಲುಷಕಾನನ ವಾಯ್ತು ಭಾರಿಯ। ಖಳರಿಗಾಶ್ರಯವಾಯ್ತು ನಮ್ಮಾಶ್ರಮಕೆ ಹಗೆಯಾಯ್ತು॥೩॥ ಈ ವನದೊಳಪ್ರತಿಮರಹಿವೀ। ರಾವತಾರರ ಕಲಿ ಸುಬಾಹು ವಿ। ಭಾವಟೀಚರ ಘೋರ ಮಾರೀಚಾದಿ ರಾಕ್ಷಸರ ॥ ತಾವುಬಿರಿಸಿದು ಕೇಳಿದೈ ರಾ । ಜೀವಲೋಚನ ನಿರ್ಘ ಯಾಂಗದ। ಲೀವನವು ದೊರಕಿರಲೆನುತ ನಡೆತಂದನಾ ಮುನಿಪ ॥೪॥ ಸುಳಿದುದಾ ಕಾಂತಾರ ಮಧ್ಯ। ಸ್ಥಳದಲಾ ನರಗಂಧ ನಾಸಾ। ವಳಯದಲಿ ನೈಶಾಟ ಕುಲವಾಟವಿಗೆ ತಾಟಕಿಯ ॥ ಸುಳಿವವರು ನರರೆನ್ನ ಪುಣ್ಯಾದ । ಫಲವಲಾ ಮಜಭಾಪೆನುತ ನೈ । ಬೊಲಹಿನಲಿ ಮನವುಬ್ಬಿನಿಂದಿರ್ದಳಧಿಕ ಹರುಷದಲಿ ॥೫॥ ಏಳಲೆದ್ದುದು ಶಾಕಿನೀ ಜನ। ಜಾಲಪಾಯುವ ಧಾರೆನುತ್ತ ಕ । ರಾಳಮುಖಿ ನಡೆತಂದಳದ್ಭುತ ರೌದ್ರರೂಪಿನಲಿ॥ ಮೇಲೆ ಸುಳಿವ ಸುರಾಂಗನಾಜನ। ಜಾಲ ಸಂಚರಿಸುತ ಬಿದ್ದುದು । ತೋಳ ಘಾಳಿಗೆ ತರುಕವಂಬಗಳವಳ ಗಮನದಲಿ ॥೬॥ ಜವನ ಜನನಿಯೊ ಮೇಣು ಲಮು ಷ್ಮೈ। ರವನ ಭಗಿನಿಯೊ ಪ್ರಳಯ ಕಾಲದ। ಶಿವನ ಶಿಬಿಯೋ ಸವತಿಯೋ ಸಂವರ್ತ ಮೃತ್ಯುವಿನ॥ ಇವಳ ಕೆಣಕಿದು ಜೀವದಲಿ ಜದು। ಕುವರೆ ಹರಜ ತ್ರ್ಯಾಮರೇಂದ್ರರ। ಹವಣ ಹುಸಿಯೆಂಪೆಂಬ ವ್ರೋ ಲ್ನಡೆತಂದ ಳೆದಿರಿನಲಿ॥೭॥ ಆದೆ ಬರವು ತಾಟಕಿಯ ನೋಡ್ಡಿ । ಕಪಸಕರ್ಕಶರಾಮ ರಣದ । ಘ್ಯಾದಯ ನೊದಲಾರಂಭವಿಮ ಭೂಭಾರ

ಭಂಜನೆಗೆ ॥ ಬೆದರದಿರು ಚಿತ್ರದಲಿ ಬಾಣವ | ಹೆಡೆಗೊಳಿಸು ರಕ್ಕಸಿಯು ಹೆಣವ ನೊಡೆದು ಹಾಯೆಂದೆನಲು ನಗುತಿಂತೆಂದನಾ ರಾಮ ॥ ೮ ॥ ಹೆಂಗುಸಿವಳಿವಳಸುವ ನುಚ್ಚುವ | ದಂಗವೇ ಕ್ಷತ್ರಿಯರಿಗೆನ್ನು ವ | ತಂಗಕುಲದರಸುಗಳು ನಗದಿಹರೇ ಸುರೇಂದ್ರನಲಿ ॥ ಭಂಗ ಬಡಿಸಿಯೆ ಬಿಡುವುದೇ ಘಟ | ರಂಗೆ ಬೆಸಸದಿರಿನಿತನೆನೆ ಮುನಿ | ಪುಂಗವನು ನಸುನಗುತ ಲಾ ರಘುನಾಥ ಗಿಂತೆಂದ ॥ ೯ ॥ ಎಲೆ ಕಕುಸ್ಥ ಜ ಕೇಳು ಲೋಕವ | ಹಿಳಿದಳಿವಳಂದದಲಿ ಹಿಂದಣ | ಬಲಿಯುತಂಗ್ಯಾ ಬಳಿಕ ದೂರಾ ವಳ ದೆಸೆಯಿಂದ ॥ ಬಲವಿರೋಧಿಗೆ ಕೇಳಿಯಾ ಕಡು | ಗಲಿಯು ಗೆಲಿದನು ಶಕ್ರನವ ಳನು | ಕೊಲೆಗೆ ಕೊಕ್ಕರಿಸಿದನೆ ಕಾಲಗ್ರೀವ ಮೃತ್ಯುವಿನ ॥ ೧೦ ॥ ಧರೆಗೆ ಕಂಟಕ ರಾದವರ ಸಂ | ಹರಿಸುವುದೆ ನ ಪನೀತಿ ಸುಜನರ | ನಿರತಿಶಯ ರಕ್ಷಿಸುವುದೇ ಕ್ಷತ್ರಿ ಯರ ಧರ್ಮಕಣ ॥ ನಿರುತವಿದು ಪರಮಾರ್ಥದಲಿ ಸಂ | ಹರಿಸು ಸಂದೇಹವನು ಮನ ಮೊಳ | ಗಿರಿಸದೀ ರಕ್ಕಸಿಯರನೆಲೆ ರಘುನಾಥ ಕೇಳೆಂದ ॥ ೧೧ ॥ ಮುಟ್ಟಿಪಿಸಿಬಹ ರಕ್ಕಸಿಯ ನಡ | ಗಟ್ಟಿ ನಿಂದನು ಮುಂದೆ ಸೆಣಸುವ | ಜೆಟ್ಟಿದಿದಿರಲಿ ಸುಳಿವ ಸಿಡಿಲಂದ ದಲಿ ಗರ್ಜಿಸುತ ॥ ಇಟ್ಟಣಿಸಿ ನಗುತವಳು ರಾಮನ | ನೊಟ್ಟವಿಸಿ ಮುಂಬರಿದು ಮುನಿ ಪನ | ತೊಟ್ಟಳಿಕೆಯಲಿ ಚಾಚಿದಳು ಚಾಪಳಚಪೇಟಕವ ॥ ೧೨ ॥ ತೊಲಗು ತೊತ್ತಿನ ಮಗಳೆ ಮುಟ್ಟದಿ | ರಳಿಯವಿಬುಧರ ನಿನ್ನ ಗಂಟಲ | ಬಳಿಯ ಬಿಡಿಸುವ ಮೃತ್ಯು ವಿದೆ ನೋಡಿತ್ತ ತಿರುಗೆನುತ ॥ ಹೊಳವ ಹೊಂಬರಹದ ಸುರೇಖೆಯ | ಶಳವದಸ್ತ್ರದ ಲವಳ ಹಸ್ತವ | ಕಳಚ ಲೆಚ್ಚನು ಭೂತಗಣ ಬಿರಿತೋಡೆ ಭೀತಿಯಲಿ ॥ ೧೩ ॥ ಸಿಡಿದು ಹಾರಿದ ಹಸ್ತದುರುಬೆಗೆ | ಬುಡಸಹಿತ ಬಲುಮರ ಧರಾತಲ ಕುಡಿದು ಬಿದ್ದುದು ಕರದ ಖಂಡನದರುಣ ವಾರಿಯಲಿ ॥ ಗಿಡಲತಾಳಿ ವಸಂತದಲಿ ತಳಿ | ರೊಡೆದವಶೋಕೆಯ ಧಾತಿನಗಲಕೆ | ಪಡದವಮರ ವಿಮಾನತತಿ ಕೆಂಪಾದು ದಭ್ರದಲಿ ॥ ೧೪ ॥ ತರುಣ ಕೇಳ್ಕೆ ಬಳಿಕಲಾ ಖಳ | ತರುಣಿ ತವಕದಲಬ್ಬರಿಸುತು | ಬ್ಬರದ ಕೋಪದ ಲೆಡದ ಕೈಯಲಿ ಜಡಿವುತಾಯುಧವ ॥ ಘುರಘುರನೆ ಹಲುಕಡಿದು ನೋಡಾ | ತಿರುವಲಿಯ ಸಾಹಸವ ನೆಸುತಾ | ಸುರದ ವೀರಾವೇಶದಲಿ ಜಡಿದಿಟ್ಟಳಿನಕುಲನ ॥ ೧೫ ॥ ಅವಳ ಶೂಲದ ಶಿಖಿಯುಲಾವನ | ನಿವಹ ಸೀಕರಿಯಾಯ್ತು ತಾರೆಗೆ | ಳವನಿಗುದುರಿದವ ರಳಿ ತಪಿಸಿತು ಬಿಂಬದಿನಮಣಿಯ ॥ ಅವನಿ ಹೊಗೆದುದು ಸಕಲ ಮುನಿವಟು | ನಿವಹ ಹಾಯೆಂದೊದರಿತಿದ ನಿ | ಮ್ಮವರು ಕೇಳುವರೇ ವಿಚಿತ್ರದ ಕೇಳಿಸೀವೆಂದ ॥ ೧೬ ॥ ಶೂಲವಿದ್ದುದು ನಭದಿ ಉಯುದ ಕ | ಪಾಲಹಸ್ತನ ಕರದೊಲಾಕೆಯ | ತೋಳುಕಾಣೆ ಸಿತಾ ಕೃತಾಂತನ ಬಳಿಯಮುಸಲವೆನೆ ॥ ಹೇಳಲೇನದ ನವಳು ಮೇಘದ | ಜಾಳಿ ಯಲಿ ಮಳೆಗರೆದಳರುಣ ಜಲಾಳಿ ಕೊನಲಿಡಲಬ್ಬರಿಸು ತಾಸುರಪಿಕಾರದಲಿ ॥ ೧೭ ॥ ಅವ ಬಲುಬಿಲ್ಲು ಜಾಣತನದ ಮ | ಹಾವಿಚಿತ್ರ ಪ್ರೌಢಿಮೆಯೋ ಧಿಟ | ದೇವನಲ್ಲಾ ಮೇಲೆ ದೈತ್ಯಾಂತಕನಲಾ ಕಣಕೆ ॥ ಅವುದರಿಂದಿನಗೆಂದು ಗಗನದ | ದೇವತತಿ ಕೊಂಡಾಡೆ ಸಲೆಘನ | ರಾವದಲಿ ನೆಲಕುರುಳ ಲೆಚ್ಚನು ಘೋರತಾಟಕಿಯ ॥ ೧೮ ॥ ಕಡುದಾ ತಲೆ ರಕ್ತಮುಂಡದೊ | ಳೊಡೆದು ಹಾಯ್ದುದು ಬಳಲಿ ನೆಲಕೊ | ಲ್ಲುಡಿಸಿ ತವಳ ಶರೀರ ಹೊರಳಿತು ಜಾವಪರಿಯಂತ ॥ ಹೊದೆದು ದಮರರ ಭೇರಿ ಹುವ್ವಿನ |

ಸಿಡಿಲ ಸರದ ಸೋನೆಗಳ ದಿವಿಜರ । ಮಡದಿಯರು ಸೂಸಿದರು ರಘುಕುಲ ಸುತ್ತ ಮಾಂಗದಲಿ ॥ ೧೯ ॥ ಪುಳಕಚಯ ದುಬ್ಬಿನಲಿ ಮುನಿಕುಲ । ತಿಲಕ ಬಿಗಿದಪ್ಪಿದನು ಸೀಲೋ । ತ್ಪಲಸಿಭಾಂಗನ ಸಿಖಿಳ ದೇವೋತ್ತಮನ ನಿರುಪಮನ ॥ ನಳಿನನಾಭನ ಮಂಗಳ ಶ್ರೀ । ನಿಳಯ ತೊರವೆಯರಾಯನನು ಹೆ । ಕ್ಕಳದ ಹರುಷದಲುಬ್ಬಿಕೊಂಡಾಡಿತು ಮುನಿಸ್ತೋಮ ॥ ॥ ೨೦ ॥

ಹತ್ತನೆಯ ಸಂಧಿ ಸಮಾಪ್ತಂ.

ಹನ್ನೊಂದನೆಯ ಸಂಧಿ.

ಸೂಚನೆ॥ ಧುರದೊಳಸುರ ಸುಬಾಹು ಮಾರೀ । ಚರರ ಗೆಲಿದು ಮುನೀಂದ್ರನಮಳಾ । ಧ್ವರವ ರಕ್ಷಿಸಿ ಪಡೆದ ನುನ್ನತಕೀರ್ತಿಯನು ರಾಮ ॥

ಪದ್ಯ॥ ಕಳಿದರಿವರೆಲೆ ಕೇಳು ಕುಶ । ಕಲುಷ ಕಾಂತಾರವನು ತನ್ಮುನಿ । ತಿಲಕ ಹೊಕ್ಕನು ಬಳಿಕ ಘನ ಪಾವನ ತಪೋವನವ ॥ ಲಲಿತ ಪುಣ್ಯಮಹೀಜಕುಲ ಮಂ । ಜುಳ ಲತಾಸೌರಭ್ಯ ಕುಸುಮೋ । ಚ್ಛಲಿತ ಕಲಿತಸಮೀರನುತ ವಿಶ್ರುತ ಮಹಾವನವ ॥ ೧ ॥ ಶ್ರುತಿಗಳುಚ್ಚಾರಣೆಗಳ ಪಿಕಸಂ । ತತಿಯ ಸೋಪನ್ಯಾಸಮಯ ವಿ । ಶ್ರುತ ಶುಕಾಳಿಯ ಸಕಲ ಶಾಸ್ತ್ರಧ್ವನಿಯ ಕಿನ್ನರರ । ನುತ ತಪೋನುಷ್ಠಾನ ವಿಧಿ ಸಂ । ಸ್ಥಿತ ವನೇಚರಚಯದ ಶೋಭಾ । ನ್ವಿತ ತಪೋವನ ಕಣ್ಗೆ ಕೌತುಕವಾಯ್ತು ರಘುವರನ ॥ ೨ ॥ ಕೇಳಿದನು ರಘುವಂಶ ಲಕ್ಷ್ಮೀ । ಲೋಲ ನೀವನ ವಾರದೆಂದು ವಿ । ಶಾಲವಿಜ್ಞಾನ ವಿನುತ ವಿಶ್ವಾಮಿತ್ರ ಮುನಿವರನ ॥ ಹೇಳಿದನು ಬಳಿಕಲಿ ನಿರೋಧದ । ಬೇಳುವೆಯ ಸುರವಲ್ಲಭನ ಕ । ಟ್ಟಾಳಿಗದ ಕಶ್ಯಪ ಮುನೀಂದ್ರನ ಪೂರ್ವಸಂಗತಿಯ ॥ ೩ ॥ ರಾಮ ಕೇಳಿದರಿಂದ ಲದಿತೀ । ಭಾಮಿನಿಗೆ ಜನಿಸಿದನು ಹರಿವರ । ವಾಮನಾಕೃತಿಯಿಂದ ದೈತ್ಯಬಲೀಂದ್ರ ನಧ್ವರದ ॥ ಹೋಮವನು ಕೆಡಿಸಿದನು ಬಳಿಕೀ । ಭೂಮಿಯನು ಕೊಂಡಾಗಳಾ ಸು । ತ್ರಾಮನುಗೊಡರಿಚಿದಂಡವನು ವಿರಚಿಸಿದನಾ ಮುನಿಪ ॥ ೪ ॥ ವನವಿದೆಮಗಾಯ್ತೆಂದು ಕಶ್ಯಪ । ಮುನಿಯ ವಚನದಿ ನೆಲೆಮಹೀಪತಿ । ತನುಜ ಕೇಲ್ತಪವೀ ತಪೋವನದೊಳಗೆ ಸಿದ್ಧಿಪುದು ॥ ಎನುತ ಮುನಿ ಹೊಕ್ಕನು ತಪೋವನ । ವಿನುತಶಾಲಾಂತರವ ನಾಕ್ಷಣ । ಮುನಿಜನಂಗಳ ಕರಸಿದನು ನಾನಾ ತಪೋಧನರ ॥ ೫ ॥ ನೆರಹಿದನು ಮಖಸಾಧನದ ಪರಿ । ಪರಿಯ ಸಕಲದ್ರವ್ಯವನು ವಿ । ಸ್ತರಣವಾದವು ಯಜ್ಞಶಾಲಾವೀಧಿಗಳು ಬಳಿಕ ॥ ಚರು ಪುರೋಡಾಶಾಜ್ಯದರ್ಭಾಂ । ಕುರಸಮಿತ್ಕುಶ ತಿಲಗಳಲಿ ಗೋ । ಚರಿಸಿ ತಾಹವನೀಯ ಲೌಕಿಕ ವೈದಿಕೋಕ್ತಿಯಲಿ ॥ ೬ ॥ ಕರೆಸಿದನು ಮುನಿನಾಥ ಬಳಿಕ । ಧ್ವನಿಗಳನು ಋತ್ವಿಜರ ಸಧ್ವರ ಪರಮ ವೈಭವದಿಂದ ನಡೆದುದು ದಿನಚತುಷ್ಟಯದ ॥ ಬರಸಿದುದು ಬರ್ಹಿರ್ಮುಖರ ನು । ಬ್ಬರದ ಹೋಮದ ಧೂಮ ವಿತ್ತಲು । ನೆರವುತಿರ್ದರು ರಕ್ಕಸರು ಜೀರೆಂದು ತಾಣದಲಿ ॥ ೭ ॥ ನಡೆವುತಿರ್ದುದು ಹೋಮದಿ । ಯ । ಗ್ಗಡದ ಸುರಸಂದೋಹ ತವಕಿಸಿ । ತೊಡಸೊಡನೆ ಗುಮ್ಮಿದುದುಗಾವಳಿ ಗಗನ

ವಳಯದಲಿ ॥ ತುಡುಗುಣಿಗಳಡವಿರು ನಭೋಗ್ರಕೆ । ಸಿಡಿದ. ಹವಿಗೊಂಬವರ ಸಿಕ
ರದ । ಕೆಡಕ ಬಾರಿಸಿ ಬಾಚುತಿರ್ದರು ಬಾಯ ತುತ್ತುಗಳ ॥ ೮ ॥ ಬೊಬ್ಬೆಯಾದುದು
ಬಳಿಕ ಸುಮನಸ । ರೊಬ್ಬುಳಿಯ ಚೂಣಿಯುಲಿ ಮುನಿಗಳು । ಬೆಬ್ಬಳಿಸಿದರು ಬಿಸುಟ
ರಾಹುತಿಗಳನು ದೆಸೆದೆಸೆಗೆ ॥ ಇಬ್ಬರಿವರಾ ಮುನಿಗಳುಪಹತಿ । ಯಬ್ಬೆಯನು ಸೈರಿಸ್ಪ
ವರೇ ಬಿಡ । ದೆಬ್ಬಿಸಿದ ರಂಬುಗಳನಾ ರಾಕ್ಷಸಕದಂಬದಲಿ ।೯॥ ಅಣಗ ಕೇಳೈ ಸುಮ್ಮ
ವರ ಮಾ । ರ್ಗಣಗಳುಬ್ಬರಿಸಿದವು ಗಗನಾಂ । ಗಣವ ನುಬ್ಬರಿಸಿದವು ಹರಿವರುಣಾದಿ
ನಿರ್ಜರರ ॥ ಉಣಿಸದಡಹಾಯ್ದಸುರ ರಟ್ಟೆಯ । ಕುಣಿಸಿದವು ಕಡಿದವರನಮರರ ।
ನುಣಿಸಿದವು ನಲಿದಾಡಿಸಿದವಾ ನಾರದಾದಿಗಳ ॥೧೦॥ ಎಲೆಲೆ ಕಣೆಗಳಿವೆಲ್ಲಿಯುವು ಕ ।
ಗ್ಗೊಲೆಯ ಕಾಹುರರಾರೊ ಹ್ಯೊಹ್ಯೊ । ತಲೆಯ ಕಡಿ ಕೊಲ್ಲೆನುತ ಕವಿದುದು ಕೂಡೆ
ಖಳನಿಕರ ॥ ತಲೆಗೆದರಿ ತೆಗನೋಡು ವಮರಾ । ವಳಿಯ ನುರೆ ಸದೆಬಡಿದು ಸರಿಸದ ।
ಲಿಳಿದ ರಧ್ವರದೆಡೆಗೆ ಖಡ್ಗದ ಕೈಯನೆಗಹಿನಲಿ ॥೧೧॥ ಕೆದರಿತಧ್ವಾರ್ಯಾದಿ ಋತ್ವಿಜ ।
ರದುಭುತದ ಭೀತಿಯಲಿ ಗಡ್ಡದ । ಮುದುಕರಲುಗುವ ತಲೆಯ ಕೈಕಾಲುಗಳ ಕಂಪನದ॥
ಬೆದರಿನಲಿ ಬಿಸುಟಾಹುತಿಗಳನು । ಗದಗದಿಸಿ ಕಂಗೆಟ್ಟು ಹಾಯ್ದುದು । ಹೊದಿಕೆ ದಂಡ
ಕಮಂಡಲವ ಬಿಟ್ಟಖಿಳ ದೆಸೆದೆಸೆಗೆ ॥ ೧೨ ॥ ಕನಕವಿಸಿ ನಗುತಿಬ್ಬರಾ ಮುನಿ । ನಿವಹ
ಕಭಯವ ಕೊಡುತ ಸಂಧಿಸಿ । ಸವರಿದರು ಸವ್ಯಾಪಸವ್ಯದ ಲೌಕುವತಿಬಲರ ॥ ಜವನ
ಕವಿತೆಯೋ ವೇಣು ಲಯ ಭೈ । ರವನ ಕಾಲ್ದುಳಿಯೋ ಯೆನಲು ನಿ । ಮ್ಮವರು ಮೆರ
ವರು ಕಲಿಕೆಗಳ ಕೌತುಕದ ರಣರಭಸದಿ॥೧೩॥ ಶಿಶುಗಳೀನವ ರಮಮ ಮಾಯಾ । ಶಿಕು
ಗಳಲ್ಲಾ ಕೇಳಿರೈ ಸಲೆ । ನಸಿದ ತಲೆಗಳು ಯುಡಗಿತಭ್ರದ್ಯೋತ ಮಂಡಲವ ॥ ಬಿಸಿವು
ಬಿದ್ದ ಕದಂಬದಲಿ ಹೆಣ । ವಿಸರವಾದುದು ನೆಲವಿದೆಲ್ಲಿಯು । ವಿಷಮುವೀರರೊ ಮಝು
ಯೆನುತ ಮಾರೀಚ ಬೆರಗಾದ ॥೧೪॥ ಇವರಿದಾರೋ ಶಕ್ರಶಿಖಿಯುಮ । ಪವನಧನ
ದೀಶಾನರೊಳಗೀ । ಹವಣಿನಭಟರ ಕಾಣೆ ನಾಹವದಂಗಲೇಸೆನುತ ॥ ರವಿಯ ಬಿಂಬಕೆ
ಲಂಬಿಸುವ ರಾ । ಹುವಿನವೋಲು ಸುಬಾಹು ಕಲಿ ರಾ । ಘವನ ಸರಿಸದೊಳೌಕಿ ಕರೆ
ದನು ಸಲಿಸರಿಪುಳಿಯ ೧೫ । ತಪನಕುಲಜರು ಕೇಳಿರೈ ರಣ । ನಿಪುಣನಲ್ಲಾ ರಾಮನಾ
ಕೋ । ಣಪನ ಕೋದಂಡವನು ಖಂಡಿಸಿದನು ಶರಾಳಿಯಲಿ ॥ ಕುಪಿತ ಖಳ ಬಳಿಕುಬ್ಬಿ
ದಿವಿಜಾ । ಧಿಪನ ದತ್ತ ಮಹಾಯುಧದಲಾ । ಕಪಟನಾಟಕ ಸೂತ್ರಧಾರನ ಸಿಟ್ಟು
ಜೊಬ್ಬಿರಿದ ॥ ೧೬ ॥ ಭುಗಿಭುಗಿಲು ಭುಗಿಲೆಂದು ಭೋರ್ಗರ । ದು ಗುಳಿದುಮು ಬಲು
ಗಿಡಿಮುನುರಿ ನಾ । ಲಿಗೆಯನಿಗುರಿನ ಲಲಗುಗಳು ಬಳಿಕಾಮುಹಾಯುಧವ ॥ ಬಗೆವಸೇ
ನಿರ್ಮ್ಮಲ್ಯ ನಗುತಾ । ಶುಗವದುಬ್ಬರಿಡೆಸಲು ಕೈದುವ । ನಗಲಿಸುತ ಕೊಂಡಡರಿತಂ
ಬರಕವನ ಮಸ್ತಕವ ॥೧೭॥ ದಿಂಡುಗೆಡವನು ನಲಕೆ ರಕ್ಕಸ । ದಿಂಡೆಯನರೌಕುಳದ
ರಕ್ತದ । ಮುಂಡವೀ ಕೌತುಕವನಾ ಮಾರೀಚ ದೂರದಲಿ ॥ ಕಂಡು ತಾಪಸವೇಷವನು
ಕೈ । ಕೊಂಡು ಕೊಳೆಗಂಘವಿಸಿ ಕಪನೊ । ದ್ದಂಡ ರಾಮನಬಳಿಗೆ ಬಂದನು ದೈನ್ಯ
ಭಾವದಲಿ ॥೧೮॥ ಕಾದುಕೊಳ್ಳೈ ರಾಜಋಾನು ಮ । ಹಾದಯಾಂಬುಧಿ ರಕ್ಷಿಸೈ ಕರು ।
ಣೋದಯನೆ ವಿಪ್ರಪ್ರಿಯನೆ ಧಾರ್ಮಿಕನೆ ಗುಣಯುತನೆ ॥ ಈ ದುರುಳ ನೈಶಾಟರಸು
ಗಳ । ನೈದೆ ಬಡಿಸಿಹರೆಂದು ಬಹು ಮಾ । ಯಾದುರಾತ್ಮನ ಕಂಡು ಮುನಿ ಕಾಕುತ್ಸ್ಥ

ಗಿಂತೆಂದ ||೧೯|| ತೊಡು ಮಹಾಸ್ತ್ರವನಿವನು ಕಪಟದ | ತೊಡಹದವನಿವ ವಿಪ್ರನಲ್ಲಿವ| ನ್ನೃಡ ಸರೋಜಭವಾದ್ಯರನು ಲೆಕ್ಕಿಸುವನಲ್ಲಿಕಣ|| ಕೆಡಹುವನು ಮಾಯೆಯಲಿ ಮುಲತು| ಗ್ಗಡದ ವೀರರ ನಿವನ ತಲೆಯನು | ಕಡಿದು ಹಾಯ್ಕೆಂದೊವರಿದನು ಬೇಗದಲಿ ಮುನಿನಾಥ ||೨೦|| ಅವರೆಯು ಬ್ರಹ್ಮನನು ಮರೆಗೊಂ| ಡ್ಯೆದಿದಂ ವಧಿಸುವುದು ಲೌಕಿಕ | ವೈದಿಕದ ಮತವಲ್ಲ ಮನುಕುಲದವರ ಪಥವಲ್ಲ || ಹೋದವ್ಯೆಯಲಿ ಹೋಗಲೆನುತ ಕೃ| ಪೋದಯನು ನಗುತನಿಲಶರದಿಂ| ದೂದಿದನು ಜಲನಿಧಿಯ ತೆಂಕಣತೀರಕಾ ಖಳನ || ಬಳಿಸರಳ ಸಂಧಾನದಲಿ ಬಳಿ| ಕುಳುಕಲಿನ ರಕ್ಕಸರ ಜವಪುರ| ದೊಳಗೆ ಹೊಗಸಿದನೊಡನೆ ಹವ್ಯಸುಭೋಜನಕೆ ಸುರರ || ನಿಲಿಸಿದನು ನಿರ್ವಿಘ್ನದಲಿ ಮುನಿ | ತಿಲಕನಧ್ವರ ಸಾಂಗವಾದುದು | ಸುಲಭವಾಯ್ತವಭೃತ ಮಹೋತ್ಸವವಾ ಮುನೀಂದ್ರಂಗೆ ||೨೧|| ಮುನಿಗಳುತ್ಸಾಹಿಸಿದ ರಬುಜಾ| ಸನ ಹರೇಂದ್ರಾದಿಗಳು ಜಯಜಯ| ನಿನದದಲಿ ಸೂಸಿದರು ಸುವ್ಯೋಮದಲಿ ಹೂ ಮಳೆಯ || ತನುಪುಳಕ ದುಬ್ಬುಗಳಲಿಂ| ಗನವ ಮಾಡಿದ ನೊಲಿದು ತೊರವೆಯ| ವಿನುತ ವೀರಾಗ್ರಣಿಯ ವಿಶ್ವಾಮಿತ್ರ ಮುನಿರಾಯ || |೨೨||

ಹನ್ನೊಂದನೆಯ ಸಂಧಿ ಸಮಾಪ್ತಂ.

ಹನ್ನೆರಡನೆಯ ಸಂಧಿ.

ಸೂಚನೆ|| ನೆರದರಖಿಳ ದಿಗಂತದವನೀ| ಶ್ವರರು ವಿಶ್ವಾಮಿತ್ರಮುನಿ ರಘು| ವರರು ಸಹಿತ್ಯೆತಂದನವನಿಜೆಯ ಸ್ವಯಂವರಕೆ ||

ಪದ್ಯ|| ಕೇಳಿದ್ಯೆ ಕುಶ ಬಳಿಕ ರಘುನೃಪ| ಬಾಲಕರಿಗಾ ಕುಶಿಕನಂದನ| ಕೋಲಗುರುವಾದನು ಕಣಾ ಕೇಳ್ಯೆ ಕುಶಾನುಜನೆ|| ಭಾಳನೇತ್ರನ ವರದಿ ಗರುಡಿಯ| ಜಾಳಿಯೆನಿತುಂಟನಿತ ನಿವರಲಿ| ಮೇಳವಿಸಿದನು ಮೇಲೆ ತಿಂಗಳು ದಿವಸದಲಿಮುನಿಪ ||೧|| ಕಲಿತರಿವ ರಾಮುನಿಯ ಶಿಕ್ಷೆಯ| ಸುಲಭತೆಯ ಲಖಿಳಾಸ್ತ್ರಶಸ್ತ್ರದ| ವಿಲಸದಭಿರಂಜನೆಯನಲ್ಲಿಂಮೇಲೆ ಮುನಿಪತಿಯ || ಬಳಿಗೆ ಬಂದರು ಜನಕಭೂಪನ| ಬಳಿಯ ಮಣಿಹಾರರು ಮಹಾಮಂ| ಗಳಿಯ ವಿಮಳ ವಿವಾಹ ಪತ್ರಿಕೆ ಸಹಿತ ವಹಿಲದಲಿ ||೨|| ಪರಮಹರುಷದಲಾ ಮುನಿಪ ನಾ| ದರಿಸಿ ಬಳಿಕ ವಿದೇಹಭೂಪನ| ಚರರ ಕಳುಹಿಸಿ ಮನದೊಳನುವರಿಸಿದನು ಜಾನಕಿಯ|| ನರಚರಿತ್ರದ ರಾಮಚಂದ್ರಗೆ| ಪರಿಣಯವ ಮಾಳ್ಪುಜ್ಜುಗವ ನಿ| ಧರಿಸಿ ಪಯಣೋದ್ಯೋಗಮಾನಸಾದನು ಸರಾಗದಲಿ|| ಶುಭ ಮುಹೂರ್ತದೊಳಾ ತಪೋಧನ| ವಿಭುಸರಾಗದಲರ್ಕವಂಶ| ಪ್ರಭವರುಗಳೊಡಗೂಡಿ ಹೊರವಂಟನು ನಿಜಾಶ್ರಮವ || ಇಭಶರಭ ಶಾರ್ದೂಲ ಹರಿಸ್ಯೆ| ರಿಭ ಕುರಂಗ ವರಾಹ ಸೇವಿತ| ದಭಿನವದ ಕಾನನವ ಕಳಿದ್ಯೆದಿದರು ಕೌಶಿಕೆಯ||೩|| ಆ ಮಹಾನದಿ ಮೆರೆದುದುಭಯದ| ಸೀಮೆಗಳ ನೊದವುರು ತರಂಗ | ಸ್ತೋಮ ದುಬ್ಬರದಬ್ಬರದ ಸಲಿಲಪ್ರವಾಹದಲಿ || ತಾಮರಸ ಕಲ್ಹಾರ ಕ್ಯೆರವ| ಕೋಮಲದ್ರುಮ ಷಂಡಗುಲ್ಮಲ| ತಾಮರಾಳ ರಥಾಂಗ ಬಕ ಕಾರಂಡ ಶೋಭೆಯಲಿ || ೪ || ಕೇಳಿದರೆ ಹೇಳಿದನು ಮುನಿಮುಖ | ಪಾಲಕಂಗೆ

ತದೀಯ ನದಿಯು ಸು | ಮಾಲಚರಿತದ ಸಂಗತಿಯ ಕುಶಕಕ್ಷಿತೀಶ್ವರನ || ಸ್ಥೂಲವಂಶ
ಪರಂಪರೆಯ ಭೂ | ಪಾಲಕರ ಜನನವನು ತನ್ನ ವಿ | ಶಾಲಚರಿತವನಾನದಿಯ ನುತ್ತ್ರ
ರಿಸಿದನು ಬಳಿಕ ||೬|| ಕ್ಷೋಣಿಜಾಸುತ ಕೇಳು ವಿಪಿನ | ಶ್ರೇಣಿಗಳ ಕೆಲಕೆಲವ ಕಳಿದ|
ಕ್ಷೋಣಿಶೌರ್ಯರು ಸಹಿತ ಬರೆ ಮುಂದೊಂದು ತಾಣದಲಿ || ಸ್ಥಾಣು ವಿಕಟ ಜಟಾಕಲಿತ
ಗೀ | ರ್ವಾಣ ನದಿಗೆಣೆಯೆನಿಪ ನಿರುಪಮ ಶೋಣಭದ್ರೆಯ | ಕಂಡು ಕೌಶಿಕಮುನಿಯ
ಬೆಸಗೊಂಡ ||೭|| ಈ ವಿಪುಳನದಿ ರಾಜನನ್ವಯ | ಪಾವುದೆನ ಕೌಶಿಕೆಗೆ ಗಂಡನು |
ಭಾವನೆಮಗಹನೀತ ಸತಿನದಿಯಾಗೆ ನದನಾದ || ದೇವ ರಾಘವ ಕೇಳೆನುತ ಮುನಿ |
ನಾವೆಯಿಂದುತ್ತರಿಸಿ ಹಲವು ವ | ನಾವಳಿಯ ಕಳಿದೈದಿದರು ಗಂಗಾ ತರಂಗಿಣಿಯ||೮||
ಶ್ರುತಿಸಮಾಜ ತರಂಗಮಯ ಪೂ | ರಿತ ಸುಧಾಮಲ ಸಲಿಲಮಯ ಸಂ | ಭೃತ ಸುಮು
ಕ್ತಾಫಲ ನಿಭೋತ್ಕರ ಸೈಕತಾಳಿಮಯ || ಕೃತಜಗತಿ ಪಾವನಮಯ ಪ್ರ | ಚ್ಯುತಭವಾ
ಖಿಲ ದುರಿತಮಯ ಶೋ | ಭಿತೆಯ ಸುಮನಸ್ತುತೆಯ ಕಂಡನು ರಾಮ ಜಾಹ್ನವಿಯ ||
ಹರಿಪದಾಬ್ಜ ಪರಾಗಪೂರಿತ | ಪರಿಮಳಾಲಂಕೃತೆಯ ಶಶಿಶೇ | ಖರ ಜಟಾತಟಪಟಲ
ಸಂಘಟಿತಾಘವಿಸ್ಫುಟೆಯ || ಸುರ ನರೋರಗ ಭುವನ ಪಾವನ | ತರಚರಿತ್ರೆಯನಜ
ನಿಜೋನ್ನತ | ಕರ ಕಮಂಡಲ ಮಂಡಿತೆಯ ಕಂಡನು ರಘುಪ್ರಭವ||೧೦|| ಎಲೆ ಮುನೀ
ಶ್ವರ ನದಿಗಳೊಳಗ | ಗ್ಗಳದ ನದಿಯಂಬಂತೆ ಮತಿ ನೆರೆ | ನಿಲುಕುತಿದೆ ಚಿತ್ತದಲಿ
ಮುನಿ ಕೇಳೀ ಮಹಾನದಿಯ || ವಿಳಸದಭಿರಂಜಕದ ಜನನ | ಸ್ಥಳವಿಡಿದು ಬಂದಾ
ಪ್ರಸಂಗವ | ತಿಳುಹಬೇಕೆನೆ ಬಳಿಕ ವಿಶ್ವಾಮಿತ್ರ ನಿಂತೆಂದ || ೧೧ || ತರುಣ ಕೇಳಾದಿ
ಯುಲಿ ಸಗರನ | ಸಿರಿಗೆ ಸೇರದೆ ಶಕ್ರನಾಕ್ರತು | ತುರಗವನು ಕದ್ದೊಯ್ದು ಕಪಿಲ
ಮುನೀಂದ್ರ ನೊತ್ತಿನಲಿ || ಇರಿಸಿದನು ಪಾತಾಳದಲಿ ಬಳಿ | ಕರಸಿ ಕಂಡರು ಸಗರ
ನಂದನ | ರುರಿಯಲಿದ್ದರು ಮುನಿಯ ಧಿಕ್ಕರಣೆಯ ನಿಘಾತಿಯಲಿ || ೧೨ || ಧಗಧಗಿಸಿ
ದರವತ್ತು ಸಾವಿರ | ಸಗರರನು ಸಂಸ್ಕಾರ ಮುಖದಲಿ | ತೆಗೆಯಲೋಸುಗ ತಪದಲಿ
ದ್ದನು ಕಮಲಗರ್ಭಂಗೆ|| ಮಿಗೆ ಭಗೀರಥ ನಿಳುಹಿದನು ಸುರ | ಜಗತಿಯಂ ಪಾತಾಳಕೀ
ತ್ರ್ಯ | ಜಗಕೆ ಮಾತೆಕಣಾ ಹರೀಶವಿಧಾತ್ರ ಹೊರಗಾಗಿ ||೧೩|| ರಾಮ ಕೇಳೀ ವ್ಯೋಮ
ನದಿಯ ಮ | ಹಾಮಹಿಮೆ ಗನಘಿಯನು ಕಾಣೆನು | ಸೋಮಧರನೇ ಬಲ್ಲನಲ್ಲದೆ ಜೀಪ
ಮಾತೇನು || ಕಾಮಿಸಿದ ಫಲನಹುದು ನೆನದರಿ | ತೀ ಮರುತ್ಪಥಗಾಮಿನಿಯ ನೆನ |
ಲಾ ಮುನಿಪ ಬರೆ ಪೊಗಸಿದುದು ಪಮತಿಯ ಜನಸ್ಥಾನ || ೧೪ || ನಗರವಿದು ತಾನಾವ
ದೆಂದಾ ಗಗನಮಣಿಕುಲ ಕೇಳೆ ಹೇಳಿದ | ನಗಪಿದೂರಕ ನರಿಯಮಾನ್ವಯ ದರಸು
ಸ್ರಂಜಯನ || ನಗರವಿದು ತಾ ರಾಮ ಕೇಳೀ | ನಗರದಧಿಪತಿ ದಶರಥನ ದಾ | ಯಿಗನ
ಫರೆಯಿದು ನಿಮಗೆ ಸಲುವುದೆನುತ್ತ ನಡೆತಂದ || ೧೫ || ನೋಡುತಾ ನಗರವನು ಮಿಗೆ
ಕೊಂ | ಡಾಡುತಾರಾಷ್ಟ್ರನನು ಪಥಿಕರು | ಗೂಡಿ ಬರುತಿರೆ ಕಾಣಿಸಿದುದಾಶ್ರಮವು
ಗೌತಮನ || ಮೂಡಿದಬುಜದ ಸರಸಿಯಂತಿನ | ನಾಡದಂಬರದಂತೆ ಜೋಕೆಯ |
ಜೋಡದಪ್ರತದಂತೆ ಜನಪಿರೆ ಕಂಡು ಬೆಸಗೊಂಡ || ೧೬ || ಇದು ಕಣಾ ರಘುನಾಥ ಕೇ
ಳ್ಪು | ರ್ವದಲಿ ಗೌತಮನೆಂಬ ಮುನಿಪನ | ಸದನವಾ ಮುನಿಸತಿಗೆ ಮನವಿಕ್ಕಿದನು
ಸುರನಾಥ || ಮದನನಾಗರ್ಗಳ್ಳಿದನು ಸಂಭೋ | ಗದಲಿ ಸಿಲುಕಿದನಿಂದ್ರ ನಾತನ |

ಸದೆದುದೀ ಮುನಿಶಾಪರೂಪಾಯ್ತಂಗವಬಲೆಯರ ॥೧೭॥ ಪರವಧೂವ್ಯಸನದಲಿ ಕೆಡರಾ| ರರಸ ರಾಘವ ಕೇಳು ಕೆಟ್ಟುದು | ಪುರುಷತನಪಿಂದ್ರಂಗ ಹಲ್ಯಾದೇವಿ ಶಿಲೆಯಾಗಿ || ಧರಿಸಿದಳು ನಿಜತನುವಸಾಪ್ರ | ಸ್ತರವಿದೀಗಾ ಸತಿಯೆನುತ ಹ | ತ್ತಿರಕೆ ಬರೆ ರಾಮಾಂಘ್ರಿರಜ ವಾಪರಿಸಿತಾ ಶಿಲೆಯ ||೧೮|| ಗುರುಕಟಾಕ್ಷ ನಿರೀಕ್ಷೆಯಲಿ ದು | ಸ್ತರ ಭವಾಂಬುಧಿ ಬರಚ ವೋಲೀ | ಖರಕಿರಣನೀಕ್ಷಣದೊಳಡಗುವ ತಿಮಿರಲತೆಯಂತೆ || ಪರಮ ಪುರುಷನ ದೃಷ್ಟಿಪಾತ ದೊ | ಳಿರದೆ ಸಂಚಿತ ಸಕಲ ದುಷ್ಕೃತ | ಹರೆದುದಿಸಿದಳು ಶಿಲೆಯ ಮಧ್ಯದೊಳಬಲೆ ಗೌತಮನ ||೧೯|| ನರವಿನೋದ ವಿಚಿತ್ರಲೀಲಾ ಚರಿತ ವಿಷ್ಣು ತ್ರಾಹಿ ವಿಶ್ವಂ | ಭರ ಭವಾರಿ ತ್ರಾಹಿ ಸರ್ವೇಶ್ವರ ಶಿವ ತ್ರಾಹಿ || ಕ್ಷರರಹಿತನಕ್ಷಯನ ನಾಹತ | ಹರವಿರಿಂಚಾತ್ಮಕ ಪರಾಪರ | ಪರಮ ಗುಣನಿಧಿ ಜಯಜಯೆಂದೆರಗಿದಳು ಚರಣದಲಿ || ೨೦ || ನೆನದಡಖಿಳ ಭವಾಂತರಂಗಳ | ನೆನೆಯುಬಾರದ ಘೋರ ಪಾತಕ | ಜಿನುಗುವುದು ತಾನೆಂಬ ಶ್ರುತಿಮತ ಸಿದ್ಧವಾದುದಲ || ಸೆನಹದಲ್ಲದೆ ನಿನ್ನ ಪದದರು | ಶನದ ಭಾಗ್ಯವು ತನ್ನೊಳಾದುದು| ಘನಮಹಿಮ ನಮೋಯೆನುತ ಕೈಮುಗಿದಿರ್ದಳಾ ಕಾಂತೆ ||೨೧|| ಲಲನೆ ಈಕೆಯುದಾರೆನಲು ಮುನಿ | ತಿಲಕ ಬಳಿಕಾ ಜ್ಞಾನಮಯ ನಿ | ರ್ಮಳ ಸದಾನಂದೈಕ ರೂಪಂಗಧಿಕ ಹರುಷದಲಿ || ತಿಳುಹಿದನು ತತ್ಸತಿಯ ಶಕ್ರನ | ಕಲುಷಕೃತ ಸಂಗತಿಯ ನಾವುದು | ಸುಲಭವಾಗದದುಂಟೆ ನಿನ್ನ ಕೃಪೋದಯದೊಳೆಂದ || ೨೨ || ಬಂದನಾ ಸಮಯದಲಿ ಗೌತಮ | ನಿಂದಿರೇಶನ ಮನುಜವೇಷನ | ಸಂದ ಸೌಮ್ಯಜ್ಞಾನ ಮುಖದಲಿ ನಮಿಸೆ ಬಳಿಕವರ || ವೊಂದುಗೂಡಿ ಕೃತಾರ್ಥರಿವರಿಂ | ನೆಂದು ಕೌಶಿಕನವರ ಸಾವನ | ಮಂದಿರದಲೇ ನಿಲಿಸಿ ಬಂದರು ಮಿಥಿಲೆಗೊಲವಿನಲಿ || ೨೩ || ಮುನಿಯ ಬರವನು ಕೇಳ್ದು ಮಿಥಿಲಾ | ವನಿಯಪತಿ ಮಹಮತ್ಸವದಲಾ | ಮುನಿಯನಿದಿಗೊಂಡೈದೆ ಸತ್ಕರಿಸಿದನು ಭಕ್ತಿಯಲಿ || ತನುಜ ಕೇಳೈ ಬಳಿಕ ಗೌತಮ | ತನುಜರಾಜಪುರೋಹಿತನು ತ | ಜ್ಜನಪಗೊರೆದನು ವಿಮಳ ವಿಶ್ವಾಮಿತ್ರ ಸಂಗತಿಯ ||೨೪|| ವರವಸಿಷ್ಠ ವಿವಾದವನು ಭೂ | ವರ ಋಷೀಶ್ವರನಾದ ಬಹಳಾ | ಶ್ಚರಿಯ ದುಗ್ರ ತಪಃಪ್ರಭಾವವನಾ ತ್ರಿಶಂಕುವಿಗೆ || ಸುರಪುರವ ಬೇರಭ್ರದಲಿ ವಿ | ಸ್ತರಿಸಿದಾಖ್ಯಾನವನು ಜನಕಂ | ಗೊರೆದು ಕೊಂಡಾಡಿದನು ಕೌಶಿಕನನು ಶತಾನಂದ||೨೫||ಮುನಿಗೆ ಬೀಡಿಕೆಯಾಯ್ತು ಮಿಕ್ಕಿನ | ಮುನಿಗಳೈತಂದರು ಸಮಸ್ತಾ| ವನಿಯ ನೃಪರೊಗ್ಗಾಯ್ತು ವರವೈದೇಹ ನಗರದಲಿ || ವಿನುತ ಮಖಮಂಟಪ ವಿರಾಜಿಸಿ | ಅನುಪಮಾಧ್ವರ ಪರಿಕರದ ಸಾ | ಧನವ ಮೇಳೈಸಿದನು ದೀಕ್ಷಿತನಾದನಾ ಜನಕ ||೨೬|| ಕುಶನೆ ಕೇಳೈ ನಿಮ್ಮ ಮುತ್ತಯ್ಯ | ದಶರಥನು ಮಾಡಿದ ಮಹಾಧ್ವರ| ವೆಸಕಕಿದು ಹೈಕ್ಯಯನಲು ಮಾಡಿದನು ಸತ್ಕ್ರತುವ || ಕುಶನನುಜ ಕೇಳ್ನಿಮ್ಮ ಪಿತನ| ಶ್ವಶುರನಲ್ಲಿಂಮೇಲೆ ಯೌವನ | ದೆಸ ತಲೆದೋರಿದುದಂ ಕಂಡನು ನಿಮ್ಮ ಜನನಿಯಲಿ || ನಾರದನ ಪೂರ್ವದ ವಚೋವಿ | ಸ್ತಾರದಾಭಿಪ್ರಾಯವರಿದು ಕು | ಮಾರಿಗುಚಿತೋಪ್ಪಾಹ ವೈಭವದಲಾ ಸ್ವಯಂವರಕೆ || ಭೂರಿಭುವನದ ಭಾಗಧೇಯರ | ಭೂರಮಣರನು ಬರಿಸಿದನು ಮಿತಿ | ಮೀರಿಯಿಲ್ಲದೆ ನೃಪರು ನೆರದರು ಜನಕನಗರಿಯಲಿ || ೨೮ || ಅಂಗ ಮಗಧ ಕಾಂಭೋಜ ಸಿಂಧು ಕ | ಳಿಂಗ ಬರ್ಬರ ಚೀನ ಚೋಳಿ ತು| ರಂಗ ಮುಖ ಬರ್ಬರ

ಕರೂಷ ವರಾಳ ನೇಪಾಳ॥ ವಂಗ ಕೇಕೆಯ ಗೌಳ ಘೂರ್ಜರ । ಸಿಂಗಳಾಂಧ್ರ ದ್ರವಿಡ ಮುಖ್ಯ ಧ । ರಾಂಗನಾ ವಲ್ಲಭರು ಸಂದಣಿಸಿದರಸಂಖ್ಯಾತ ॥ ೨೯ ॥ ಪುರದ ಬಹಿರಾವರಣ ಸೀಮಾಂ । ತರದ ಸಂವೇಶದಲಿ ಬೀಡಾ । ಯ್ತರಸು ಮನ್ನೆಯ ಮಂಡಳೇಶ್ವರ ಸಾರ್ವಭೌಮರಿಗೆ ॥ ಧೊರೆಗಳಿಗೆ ದುರ್ಗಳರಿಗವನೀ । ಸುರರಿಗಾ ವಿಟಶೂದ್ರ ಮೊದಲಾ। ದರಿಗೆ ಮಿಕ್ಕಿನ ವಿವಿಧ ವರ್ಣಾಶ್ರಮ ಜನಂಗಳಿಗೆ॥೩೦॥ ನಗರವಿದ್ದುದು ಶರಧಿಸುತ್ತಿದ। ನಗರವೋಲ್ಲಾನಾ ದಿಗಂತದ । ಜಗಿಯ ಭಾರಿಯ ಬಹಳನರಸಾಗರದ ಮಧ್ಯದಲಿ ॥ ಸೊಗಸಿದುದು ಬಳಿಕಿತ್ತ ಜನಕನ । ಮಗಳ ವಿವಹೋದ್ವಾಹ ವೈಭವ । ದೊಗುಮಿಗೆಯ ಸೌರಂಭದತಿಶಯವಖಿಳ ರಚನೆಯಲಿ ॥ ।೩೧॥

ಹನ್ನೆರಡನೆಯ ಸಂಧಿ ಸಮಾಪ್ತಂ.

ಹದಿಮೂರನೆಯ ಸಂಧಿ.

ಸೂಚನೆ॥ ವಿರಚಿಸಿದರುದ್ವಾಹ ಶೋಭಾ । ಕರದಲಂಕಾರದಲಿ ಮಿಥಿಲಾ । ಪುರವ ನಖಿಳ ವಿಚಿತ್ರವಿಭವದ ವಿವಿಧ ರಚನೆಯಲಿ ॥

ಪದ್ಯ॥ ಕೇಳಿದೈ ಕುಶ ನೆರೆದ ಪೃಥ್ವೀ । ಪಾಲರಿಗೆ ವಿಪ್ರರಿಗೆ ಮಣಿಮಯ । ಲಾಲಯಂಗಳು ಸವೆದವೈ ಗಾವುದಂಗಳಳತೆಯಲಿ ॥ ಕೇಳು ಲವ ತದ್ವಳಯದಲಿ ಪರಿ । ಪಾಳಿಯಾಯ್ತಿಳಿದಖಿಳ ಭೂಮೀ । ಪಾಲ ರವರವರುತ್ತಮಾಧಮ ಮಧ್ಯಮಂಗಳಲಿ ॥ ೧ ॥ ಬಲಿದುದನಿತಕೆ ಕೋಟೆಸರಿಘಾ । ವಳಿಯ ರಚನೆಯಲಾಳು ನೇರಿಯ । ಹುಲಿಮುಖದ ಮುಗಿಲಟ್ಟಳೆಯ ಸಾಲುಗಳ ಸೊಗಸಿನಲಿ ॥ ಬಲು ಘಟರ ಕಾಹಿನಲಿ ಸುರರಿಗೆ । ನಿಲುಕ ಲಸವಳವೆಂಬವೋಲ್ ಕಂ । ಗೊಳಿಸಿದುದು ಬಳಿಕಾ ಸ್ವಯಂವರ ಭದ್ರಮಣಿಭವನ ॥ ೨ ॥ ರಚಿಸಿದರು ಬಳಿಕೆಡೆಗೆಡೆಗೆ ಮಣಿ । ಖಚಿತ ದರ್ಪಣ ಕಲಶ ಕುಶಲೋ । ಪಚಿತ ವಿದ್ರುಮ ವಿಳಸಿತಾಲಂಕಾರ ತೋರಣದ॥ ಪ್ರಚುರತರ ದುಪ್ಪರಿಗೆಗಳ ಹಿಮ । ರುಚಿಯ ವೀಧಿಯ ಸೂರ್ಯವೀಧಿಯ । ನಚಳ ಸಂಪದ ದಿಕ್ಕೆಯನೆ ಮಿಥಿಲಾ ಮಹಾಪುರದ ॥೩॥ ಗುಡಿಯಪಲ್ಲವ ಝಲ್ಲರಿಯ ಬೆಳು । ಗೊಡೆಯ ಮಿಳಿರ್ವ ಪತಾಕೆಗಳ ಪರಿ । ವಿಡಿಯ ಮುತ್ತಿನ ಸೂಸಕದ ಸುಡಕುಗಳ ಸೀಗುರಿಯ ॥ ಇಡಿದ ಮಣಿಮಯ ಕಲಶದಿಂದೆಸ । ವೆಡಬಲದ ಸೌಧಗಳಲವನಿಯ । ತೊಡಿಗೆಯೆನೆ ರಂಜಿಸಿತು ಪುರವಾ ಜನಕ ಭೂಪತಿಯ ॥ ೪ ॥ ಹೊರೆವ ಕುಸ್ತುರಿ ಸಾರಣೆಯ ನವ । ಪರಿಮಳದ ಪನ್ನೀರ ಚಳೆಯದ । ಪರಿಸರದ ಕುಂಕುಮದ ನಿಡುಗಾರಣೆಯ ಕರ್ಪುರದ ॥ ಪರಿಪರಿಯ ಕಡೆಸಾಲ ಪರಿವಿ । ಸ್ತರದ ಧೂಪದ ಧೂಮ ಗಂಧೋ । ತ್ಕರ ಸಮುದ್ರದೊಳದ್ದನೊಲ್ಲದೆ ಪಥವ ಪವಮಾನ ॥ ೫ ॥ ಇಳಿದುದೋ ಸುರರಾಜ ಭವನ । ಸ್ಥಳದ ಸಿರಿ ಸೀತಾವಿವಾಹೋ । ಜ್ವಲ ಮಹಾಮಂಟಪದ ರೂಪವ ಧರಿಸಿ ಧರೆಗೆನಲು ॥ ಹೊಳವ ಹೇಮಸ್ತಂಭ ರಚಿತಾ । ಕಲಿತ ರತ್ನಪ್ರಭೆಯ ಚಂದ್ರೋ । ಪಲದ ಭಿತ್ತಿಯಳೆಸೆದುದಭಿನವ ಭದ್ರಮಣಿಭವನ॥೬॥ ಹೇಳಲೇನದ ಮಂಟಪದ ಚಾ। ಮಾಲಿ ಯುಗಲದ ಲಾವಚದ ಬ । ಲ್ಲಾಳದಡ್ಡಿಯ ಬಹಳ ರತ್ನ ವಿತಾನ ದುಪ್ಪರದ ॥

ಮೇಲು ಕಟ್ಟಿನ ಮಲಯಜ ಸ್ತಂ । ಭಾಳಿಗಳ ಮಣಿಪುತ್ರಿಕೆಯ ಸಂ । ಭಾಳಿಯಲಿ
ಸೊಗಸಿದುದು ಚಪ್ಪರ ವೆರಡು ಯೋಜನದ ॥೭॥ ಬಿಗಿದ ಬಿಂಗಾರಿಗಳ ಮಿಸುನಿಯ ।
ಜಗುಲಿಗಳ ಮರಕತದ ಸೋಪಾ । ನಗಳ ಸುತ್ತಣ ಸಾಲಭಂಜಿಕೆಗಳ ವಿಳಾಸದಲಿ ॥
ಸೊಗಸಿತಾ ಮಂಟಪ ಹಿಮಂತನ । ಮಗಳ ಮದುವೆಯ ಮಂಟಪಕೆ ತ । ದ್ವಿಗುಣವೆನೆ
ತೊಳತೊಳಗಿ ಬೆಳಗುವ ಬಹಳ ತೇಜದಲಿ ॥೮॥ ಮಘಮಘಿಪ ಮಲಯಜದ ಸಾರದ ।
ಸೊಗಯಿಸುವ ಸರಸಿಗಳ ಪನ್ನೀ । ರುಗಳ ಕೊಕ್ಕರಣೆಗಳ ಸಾರ್ದ ಜವಾದಿ ಕಸ್ತು
ರಿಯ ॥ ಜಗಜಗಿಪ ಹೊಂಬೆಸವ ರಂಜಣಿ । ಗೆಗಳ ನವ ಕರ್ಪುರದ ತವಲಾ । ಯಿಗಳ
ತಿಂತಿಣಿ ಮೆರದುದಲ್ಲಿಯ ಸುತ್ತುವಳಯದಲಿ ॥೯॥ ತುಡುಕಿ ತೂಳವ ಸೂತ್ರಯಂತ್ರದ ।
ಗಡಣದಲಿ ಗತಿಗೊಂಡು ಬೇಡಿದ । ಕೊಡುವ ಮಣಿಪುತ್ರಿಕೆಗಳೆಸದವು ವಿವಿಧ ರಚನೆ
ಯಲಿ ॥ ಅಡಕಿ ತುಂಬುವ ಹೇಮ ಘಟ ದ । ಗ್ಗಡದ ಹೊಂದೋಣಿಗಳ ಹಂತಿಯ ।
ಸಡಗರದ ಸೌರಂಭ ವೆಸೆದುದು ಸುತ್ತುವಳಯದಲಿ ॥೧೦॥ ಎಸೆದು ದನುಪಮ ರಚನೆ
ಯಲಿ ಮಣಿ । ವಿಸರ ಖಚಿತ ವಿವಾಹ ಕಾಂಚನ । ವಸತಿ ಬಳಿಕೀ ವಾರ್ತೆಯನು ಕೇಳಿ
ದುದು ಸುರಜಾಲ ॥ ಪಶುಪತಿ ಬ್ರಹ್ಮೇಂದ್ರ ಶಿಖಿ ಯಮ । ನಸುರವರುಣ ಸಮೀರ
ಶಿವಸಖ । ರೊಸೆಗೆ ವರೆಗಳ ಹೊಯ್ಸಿ ಹೊದ್ದಿದ ರಂಬರಸ್ಥಳನ ॥ ೧೧ ॥ ಹೊಯ್ಸಿದನು
ಡಂಗುರವ ಜನಕ ಮ । ಹೀಶನಾ ನೆರದಖಿಳ ವಸುಧಾ । ಧೀಶರರಮನೆಗಳಲಿ ವೈದೇಹಿ
ಯನು ವರಿಸುವಡೆ॥ ಈಶದತ್ತ ಮಹೋಗ್ರತರ ಚಾ । ಪಾಸನವ ತೆಗದೇರಿಸುವ ಬಲು ।
ಸಾಸಿಗರು ಬಹುದೆಂದು ಸೂರ್ಯಾಸ್ತಮಯ ಸಮಯದಲಿ ॥ ೧೨ ॥ ಕೇಳಿಸಿದುದಾ
ವಿಮಲ ಮನುಕುಲ । ಮೌಳಿಗಾ ಡಂಗುರದ ಧ್ವನಿ ಮುನಿ । ಪಾಲಕನನಾ ರಾಮನೀ
ವೃತ್ತಾಂತ ವಿವರಣವ ॥ ಕೇಳಿದರೆ ಹೇಳಿದನು ಹರಿಹರ । ರಾಳುತನ ದತಿಶಯವನಾ
ದಿವಿ । ಜಾಳಿಯಿಂದಜನಿಂದ ಸಂಘಟವಾದ ಸಂಗತಿಯ ॥ ೧೩ ॥ ಆರು ಹೀನೋತ್ತ
ಮರು ಸರಿಮಿಗಿ । ಲಾರು ಸತ್ವದೊಳೆಂದು ದಿವಿಜರ । ವೀರ ಭಟರೀಕ್ಷಿಸಿದರಬುದಸಹಸ್ರ
ಪರಿಯಂತ ॥ ಹೋರಿದರು ಸಮರದಲಿ ಸಾಹಸ । ತೀರದಿರೆ ಬಳಿಕಬುಜಭವ ಬ್ರಂ ।
ದಾರಕೋತ್ತಮರೆರಗಿದರು ಹರಿಹರ ಪದಾಬ್ಜದಲಿ ॥ ೧೪ ॥ ಮನದ ಸಂಶಯ ವಡಗಿ
ತಿಬ್ಬರ । ವಿನುತ ಮೂರ್ತಿಯನೇಕ ಭಾವದ । ಲನುಕರಿಸಿದರು ವಿಶ್ವರೂಪ ವಿರೂಪ
ಲೋಚನರ ॥ ಧನುವೆರಡು ಬಳಿಕಿದ್ದವಂದಿನ । ದಿನದ ಲಿಬ್ಬರ ವಶದಲವು ಬಳಿ । ಕಿನಲಿ
ಕೇರಿದ ವಿಬ್ಬರಿಗೆ ಕೃತಯುಗದ ಸಮಯದಲಿ ॥ ೧೫ ॥ ರಾಮ ಕೇಳಾ ಶಾರ್ಙ್ಗಧರನು ।
ದ್ದಾಮ ವೈಷ್ಣವ ಚಾಪವದು ಮುನಿ । ರಾಮಗಾದುದು ಭೃಗುವಿಡಿದು ಜಮದಗ್ನಿಯಿಂ
ಬಳಿಕ ॥ ಸೋಮಧರ ಕೋದಂಡವದು ನೃಪ । ಸೋಮ ನಿಮಿ ಮೊದಲಾಗಿ ಬಂದುದು ।
ಭೂಮಿಪತಿ ಜನಕಂಗೆ ಕೇಳ್ಕಾರ್ಮುಕದ ಸಂಗತಿಯ ॥ ೧೬ ॥ ಈ ಮಹಾಧನು ಮೈ
ಗೊಡುವುದಾ । ವ್ಯೋಮಕೇಶಂಗಲ್ಲದಿರೆ ಲ । ಕ್ಷ್ಮೀಮುಖಾಂಬುಜ ತರಣಿಗೊಲಿವುದು
ಮಿಕ್ಕ ನಿರ್ಜರರ ॥ ಕೈಮಿಗಿಲೊಗುವುದಲ್ಲದಭಿನವ । ರಾಮ ನಾಹವಭೀಮ ಮಂಗಳ ।
ನಾಮ ತೊರವೆಯರಾಮ ನರಹರಿಗೆಂದು ಮುನಿನುಡಿದ ॥ ॥೧೭॥

ಹದಿಮೂರನೆಯ ಸಂಧಿ ಸಮಾಪ್ತಂ.

ಹದಿನಾಲ್ಕನೆಯ ಸಂಧಿ.

ಸೂಚನೆ॥ ರಾಯ ಜನಕನುದಗ್ರ ಹರಚಾ। ಪಾಯುಧವ ನೊಡ್ಡಿದನು ಕಮಲ ದ। ಳಾಯತಾಕ್ಷಿಯು ನಿಲಿಸಿದನು ಬರಸಿದನು ಭೂಭುಜರ॥

ಪದ್ಯ॥ ಎಲೆ ಕಕುಸ್ಥಜ ಸೂನು ಕೇಳ್ಳುನಿ। ತಿಲಕ ವಿಶ್ವಾಮಿತ್ರನಾ ರಘು। ಕುಲ ಶಿರೋಮಣಿ ರಾಘವಂಗಾ ಚಾಪ ಸಂಗತಿಯ ॥ ತಿಳುಹಿದನು ತೀರಿದುದು ತಮದೊ। ಬ್ಬುಳಿತಮಿಶ್ರಿಯ ತಾರಕೆಯ ವೈ। ಳೆಗು ಮುಸುಳಿದ ವಳಲು ಸಿಂದುದು ಜಕ್ಕವಕ್ಕಿಗಳ ॥೧॥ ರಜನಿಯೆಂಬ ಮದೋತ್ಕಟದ ದಿ। ಗ್ಗಜದ ಕುಂಭಸ್ಥಳಕೆ ಮೋಹಿತ। ವಿಜಿತ ಬಲನಂಕುಶದ ತಲೆಮಾಣಿಕ್ಯ ವಿದೆಂಬಂತೆ॥ ಗಜಗಲಿಸಿತಿನಬಿಂಬ ಮೂಡಲು। ಗಜರಿದವು ಬಳಿಕಖಿಳ ವಾದ್ಯ। ವ್ರಜ ವಿದೇಹ ನೃಪಾಲ ನುಪ್ಪವಡಿಸಿದ ನೊಲವಿನಲಿ॥೨॥ ವಿನುತ ಸಂಧ್ಯಾವಂದನಾದಿಯ। ನನುಕರಿಸಿ ವಿಶ್ವಂಭರಾಮರ। ಜನವನುರುಸನ್ಮಾನ ದಾನಂಗಳಲಿ ಸತ್ಕರಿಸಿ ॥ ಅನುಜ ವೀರಕುಶಧ್ವಜನು ಸಹಿ। ತನುಪಮೋತ್ಸವದಿಂದ ನಡೆತಂ । ದನು ಸ್ವಯಂವರ ಮಂಟಪಕೆ ಮಂತ್ರಿಗಳ ಗಡಣದಲಿ॥೩॥ ಕರೆಸಿದನು ಬಳಿಕಖಿಳ ಪೃಥ್ವೀ। ಶ್ವರರನಾ ಕನ್ಯಾ ಸ್ವಯಂವರ। ಪರಮನಿಳಯಕೆ ಪೂರ್ವಸೂಚಿತ ಸಕಲ ಭೂಸುರರು॥ ನೆರದರೈ ವಿಪರೀತ ಪೃಥ್ವೀ। ಶ್ವರರು ಬಳಿಕವರು ಚಿತವರಿದಾ। ದರಿಸಿ ಹರಿವಿಷ್ಟರಗಳಲಿ ಸತ್ಕರಿಸಿದನು ಭೂಪ॥೪॥ ಜನಪರಾ ಕಾಲೋಚಿತದ ಪರಿ । ಜನಸಹಿತ ಕುಳ್ಳಿದರು ಸಿಂಹಾ । ಸನಗಳಲಿ ಸೌಹಾರ್ದ್ರ ಸೌಖ್ಯದ ಸುಪ್ರಮೋದದಲಿ ॥ ತನುಜ ಕೇಳಾ ಸಮಯದಲಿ ರಘು। ತನುಜರುಗಳೊಡಗೂಡಿ ಬಂದನು। ವಿನುತ ವಿಶ್ವಾಮಿತ್ರನಾ ಪಾರ್ಥಿವ ಸಭಾಸ್ಥಳಕೆ॥೫॥ ಸಾಲಸೌಧಂಗಳಲಿ ಪೃಥ್ವೀ। ಪಾಲರಿರ್ದರು ತರಣಿ ಕಿರಣವ। ನೇಳಿಸುವ ಮಣಿಭೂಷಣಂಗಳ ಬಹಳ ತೇಜದಲಿ॥ ಬಾಲರಿವರೊಡಗೂಡಿ ಮುನಿಗಳ। ಮೇಳದಲಿ ಕುಳ್ಳಿದನು ವಿಮಲ ವಿ। ಶಾಲ ವೇದಿಕೆಯಲಿ ವಿಶ್ವಾಮಿತ್ರ ಮುನಿರಾಯ॥೬॥ ವರಸುಧಾಮಾನ ಕೈ ವಿಡಿದು ಬಳಿ। ಕರಸನುಷ್ಟುಡಣೆಯ ನಿನಾದದ । ಲರಸು ಹಂತಿಯ ನೋಡುತವರವ ರುಚಿತ ವೃತ್ತಿಯಲಿ॥ ಕರವ ಮುಗಿವುತ ವಿನಮಿತರನಾ। ದರಿಸುತವನೀಸುರಕದಂಬಕೆ। ಶಿರವ ಬಾಗುತ ಭದ್ರಪೀಠಕೆ ಬಂದ ನೊಲವಿನಲಿ ॥೭॥ ವಸುಮತೀಶನ ನೇಮದಲಿ ಬಳಿ। ಕಸಮಲೋಚನ ಚಾಪವನು ಪೂಜಿಸಿದ ರಾಗಮ ವಿಧಿವಿಹಿತ ನಿಯಮೋಪಚಾರದಲಿ॥ ಪಶುಪತಿ ಸ್ತವದಿಂದ ವಾದ್ಯದ। ವಿಷಮ ನಿಸ್ವನದಿಂದ ರುಧಿರಾ। ಮಿಷ ವಠೋದನದಿಂದ ಕುರಿ ಕೋಣಗಳ ಬಲಿಗಳಲಿ ॥೮॥ ಬಂದುದಾ ಧನುವಾ ಸ್ವಯಂವರ। ಮಂದಿರಕೆ ಮುರಜಾನಕಧ್ವನಿ। ಯಿಂದ ಮದನವಿರೋಧಿ ಮಂತ್ರೋಪಾಸ್ತಿಯಲಿ ಬಳಿಕ ॥ ಇಂದುಧರ ನಾರಾಯಣರಿಗೇ। ನೆಂದು ತೋರ್ಪುದ ನರಿಯೆ ವಿಲಯದ । ದಂಡಶೂಕನ ಮೂಡಿಗೆಯೊಲಿರ್ದುದು ನೃಪಾಲಂಗೆ ॥೯॥ ಜನಕನೃಪ ಬಳಿಕುತ್ಸವದಿ ತ । ನ್ನನುಜ ವೀರಕುಶಧ್ವಜನ ಕರ । ದನುಪಮುತ್ರೈಲೋಕ್ಯ ಕನ್ಯಾಸೂನುರತ್ನವನು ॥ ವನಜಭವ ಭವಮುಖ್ಯ ಸುರ ಮಾ । ನಿನಿಯರಧಿಕ ವಿಳಾಸವಿಭ್ರಮ। ಘನ ಯಶೋರತ್ನವನು ತಾ । ಹೋಗೆಂದು ನೇಮಿಸಿದ ॥೧೦॥

ಆಕಾಶಧ್ವಜ ನೃಪಕ ಹರುಷೋ | ದ್ರೇಕದಲಿ ನಡೆತಂದನಾ ಲೋ | ಕೈಕಸಾಧ್ವಿಯ
ವಿಶ್ವಮಾತೆಯ ಭುವನಪೂಜಿತೆಯ || ಶ್ರೀಕಮಲೆಯುಡೆಗಂತ ರಂಗದ | ಲಾ ಕುಮಾ
ರಿಗೆ ನಮಿಸಿತೋಳ್ಗಳ | ಲಾಕಿ ತೊಡೆಯಲಿ ಕುಳ್ಳಿರಿಸಿ ಮಾನಸದೊಳಂತೆಂದ || ೧೧ ||
ರಮಣರಿನ್ನಾರಿಹರೋ ಲಕ್ಷ್ಮೀ | ರಮಣನಲ್ಲದೆ ಮಿಕ್ಕ ಪೃಥ್ವೀ | ರಮಣರೀ
ಕನ್ನಿಕೆಗೆ ಸದೃಶವೆ ಶಿವ ಮಹಾದೇವ || ಕಮಲಭವ ನಿನ್ನಾರ ನೀಕೆಗೆ | ಸಮುಖರನ್ನ
ಮಾಡುವನೊ ಯೆನುತಾ | ಕಮಲ ಮುಖಿಯರ ಕರೆದು ಸಿಂಗರಿಸಲು ನೇಮಿ
ಸಿದ || ೧೨ || ತರಿಸಿ ಹೊಸ ಹಸೆಮಣೆಯೊಳಗೆ ಕು | ಳ್ಳಿರಿಸಿ ಕಮಲಾಕ್ಷಿಯರು
ಪೂರಿತ | ಪರಿಮಳದ ತೈಲವನು ಪೊಗೆದು ಮನೋಭವನ ಪಿತನ || ಅರಸಿಯಾಗಂ
ದೊಸಗೆ ವರಗಳ | ಭರವಸದ ಸೌರಂಭದಲಿ ನೇ | ವರಿಸಿದರು ಸೆಳ್ಳುಗುರ್ಗಳಲಿ
ಶಶಿಮುಖಿಯ ಸಿರಿಮುಡಿಯ || ೧೩ || ಧೀರತೆ ಪಾಯವಧಾರೆನಲು ಸತಿ | ಯರಸ
ಮೋಳದಲಬಲೆ ಮಣಿ ಬಂ | ಧುರದ ಹಾವುಗೆಯಿಂದ ಬಂದಳು ಮಜ್ಜನದ ಮನೆಗೆ ||
ತರುಣಿಯರ ಕರಕಳಶ ಸಲಿಲೋ | ತ್ಕರದಿ ಮಜ್ಜನದ ಮಾಡಿ ವಿಮಳಾಂ | ಬರವ
ನುಟ್ಟೈತಂದಳವನಿಜೆ ಮಾತೃಮಂದಿರಕೆ || ೧೪ || ಸ್ಮರನ ಸೌಭಾಗ್ಯದ ಯಶೋ
ಮಂ | ದಿರೆಯ ಮನ್ಮಥ ಬೀಜ ಮಂತ್ರಾಕ್ಷತೆಯ | ಮನಸಿಜ ಶಾಸ್ತ್ರಸಾರಸ್ವತೆಯ
ಸುಲಲಿತೆಯ || ಸುರಚಿರಾಭರಣಂಗಳಿಂ ವಿ | ಸ್ತರ ಸುಗಂಧಾವೋಲ ಕುಸುಮೋ |
ತ್ಕರಗಳಿಂದಬಲೆಯ ನಲಂಕರಿಸಿದರು ಶಶಿಮುಖಿಯರು ||೧೫|| ಚರಣ ಕಾಂತಿಗಳಿಂದ
ನೂಪುರ | ಗುರುನಿತಂಬದಿ ಕಾಂಚಿ ಕೋಮಲ | ಕರದಿ ಕಂಕಣ ಬೆರಳಿನಿಂದುಂಗು
ರವು ಕೊರಳಿಂದ || ಸರದ ಮುತ್ತುಗಳೋಲೆ ಕದಪಿಂ | ದಿರದೆ ಮೆರೆಮೆರೆದವು
ಸ್ಮರಕರಾಗ್ರ | ಸ್ಫುರಿತ ಚಾಪಕಲಾಪ ಶರದಭಿಮಾನದೇವತೆಯ || ೧೬ || ಹೊಳ
ಹೊಳೆವ ತನುಕಾಂತಿಯಲಿ ಗಜ | ಗಲಿಸಿದವು ಹೊಂದೊಡವುಗಳು ಥಳ | ಥಳಿಸಿದವು
ಮುತ್ತುಗಳು ದಂತಪ್ರಭೆಯ ಲಹರಿಯಲಿ || ಸುಲಲಿತಾಧರ ರಾಗದಿಂದುಜ್ವಲಿಸಿದವು
ಮಾಣಿಕ್ಯಚಯ ವಾ | ರಳವು ಹೊಗಳುವಡಬುಜ ಗಂಧಿಯ ವಿಪುಳ ವಿಭ್ರಮವ || ೧೭ ||
ಕುಶನೆ ಕೇಳವನಿಜೆಯ ನಭಿವ | ರ್ಣಿಸುವಡೇತರ ಮತಿಗಳೆಮ್ಮವು | ರಸನೆ ಸಾಸಿರ
ದಹಿಪ ಗರಿದುಳಿದವರ ಪಾಡೇನು || ಕುಶನನುಜ ಕೇಳಾದಿಮಾಂಜ | ವಸತಿಯಲ್ಲಾ
ಮೇಲೆ ನಿರುಪಮ | ಕುಸುಮಶರ ನಂಬಿಕೆಯಲಾ ಕೌತುಕವಿದೇನೆಂದ || ೧೮ ||
ಆದಿಮಾಯಾ ಮಹಿಮೆಯನು ಕ್ಷೀ | ರೋದಧಿಯ ನಂದನೆಯ ನಗ್ಗದ | ಮೇದಿನೀ
ಸಂಭವೆಯ ನರಭಾಮಿನಿಯ ರೂಪಕದ || ಆದಿಶಕ್ತಿಯ ಜಾತರಹಿತೆಯ | ವೇದ
ಮಾತೆಯ ವಿಷ್ಣುವನಿತೆಯ | ನಾದರದೊಳಬಲೆಯರು ಸಿಂಗರಿಸಿದರು ಹರುಷದಲಿ ||೧೯||
ಒತ್ತಿದರು ಬಳಿಕಾರತಿಯ ಹೊಸ | ಮುತ್ತುಗಳ ಸೇಸೆಯನು ಪರಿಕಲಿ | ಸುತ
ಪಸರಿಸಿದರಖಿಳ ವಿಪ್ರ ಸುವಾಸಿನೀ ನಿಕರ || ಇತ್ತರವಸೀವೇವ ಮಾಂತ್ರಿಕ | ರುತ್ತ
ಮದ ಜಂಬೀರ ಫಲವನು | ದಾತ್ತ ಭದ್ರ ಮದೇಭ ಕಂಧರ ಕಡರಿದಳು ಸೀತೆ ||೨೦||
ಒಡನೆ ಚಾಮರ ಸೀಗುರಿಯ ಕ | ನ್ನಡಿಯ ಕಾಳಂಜಿಯ ಸುಗಂಧದ | ಹಡಪದ
ಬಳಿಯ ರೇರಿದರು ಬೆಂಬಳಿಯಲಾ ಗಜದ || ಯಡಬಲದ ಗಜ ತುರಗ ರಥವಂ |
ಗಡದ ದಂಡಿಗೆಗಳ ವಿಳಾಸದ | ಕಡುಚಲುವು ಮುಗುಡೆಯದು ಬಳಸಿದ ರಸನಿ

ನಂದನೆಯು ‖ ೨೧ ‖ ನುಡಿಯು ಚದುರಿನ ಭ್ರೂವಿಲಾಸದ । ಕಡುತೆಗಂಗಳ ಪರಿ ಮಳಾಂಗದ । ಪೊಡರ್ವ ಜಘನದ ಕಠಿಣತರ ಪೀವರ ಪಯೋಧರದ ‖ ಮುಡಿಯು ಸೊಗಸಿನ ಸಣ್ಣನಡುವಿನ । ಬೆಡಗಿ ನಖಿನವ ರಸದ ಭಾವದ । ಕಡುಹು ಗಾರ್ತಿಯು ರೈದಿದರು ಮುಂಗುಡಿಯ ಲವನಿಜೆಯ ‖ ೨೨ ‖ ಚಾರುತರ ಮಣಿಮಯದ ಮುಕ್ತಾ । ಹಾರಗಳ ಥಳಥಳಿಸುವಾ ಶೃತಿ । ಪೂರಗಳ ಮೂಕುತಿಯು ಮುತ್ತಿನ ಬೊಟ್ಟು ಜೈ ತಲೆಯು ‖ ವೀರ ಮುದ್ರಿಕೆ ಕಡಗ ಕಂಕಣ । ಸಾರತರ ಮಣಿ ಕಾಂಚಿನೂಪುರ । ಭೂರಿ ಭೂಷಣ ದಂಗನೆಯರೈದಿದರು ಮುಂಗುಡಿಯೊಳ್ ‖ ೨೩ ‖ ನೋಟದಲಿ ಮದ ನಾಸ್ತ್ರವದೆಯಲಿ । ನಾಟದವು ವಿಟರುಗಳ ಹುಬ್ಬಿನ । ಬೇಟದಲಿ ಬೆಂಡಾದ ರಗ್ಗದ ನಿರ್ಜಿತೇಂದ್ರಿಯರು ‖ ನಾಟಿಬಗೆದವು ವೀರಕಳಿನಗೆ । ನಾಬ ದುರ್ಮದ ವಿರಹಿಗಳ ವಿ । ಕ್ಕಾಟವಿಟಜನ ಭಗ್ನವಾದುದು ನಗೆಯ ಮುಕುರದಲಿ ‖ ೨೪ ‖ ವಾರಿರುಹ ವದನೆಯರ ವಿಭ್ರಮ । ಸಾರತರ ಸೊಬಗಿಂಗೆ ಸುಮನೋ । ನಾರಿಯರು ನಾಚಿವರು ನಳಕೂಬರ ಜಯಂತಕರು ‖ ಭಾರಿಸಿದ ಮೋಹಂಗಳಲಿ ಸಂ । ಸಾರವನು ಬಯಸಿದರು ನರರ ವಿ । ಕಾರ ವಿಭ್ರಮ ಚೇತವಾಯ್ತುಳಿ ದಮರ ಸಂದೋಹ ‖ ೨೫ ‖ ಸಂದಣಿಸಿ ತೀಪರಿಯ ನಾರೀ । ವೃಂದವಾ ಜನಕ ಕ್ಷಿತೀಶನ । ನಂದನೆಯ ಬಳಸಿನಲಿ ಬಹಳ ವಿಶಾಲ ವಿಭವದಲಿ ‖ ವಂದಿಗಳ ಹೊಗಳಿಕೆಯ ರಭಸ । ದಿಂದ ಮುಂಗುಡಿ ಗಹಳೆ ಗಳ ರವ । ದಿಂದ ರಾಜಕುಮಾರಿ ಬಂದಳು ರಾಜವೀಧಿಯಲಿ ‖ ೨೬ ‖ ಕುಸುಮಶರ ನುಪ್ಪುಡಣೆ ಕೈವಾ । ರಿಸುವ ಚೈತ್ರನ ಹೊಂಪ ಕೆಲಸಾ । ರಿಸುವ ಬಂಧುರ ಗಂಧ ಮಂದಾನಿಲನ ರಭಸಿಕೆಯ ‖ ಶಶಿಯ ಹೊಗಳಿಕೆ ಬರಿದನುತ್ಸಾ । ಹಿಸುವ ರತಿಯ ವಿಳಾಸಮಿಗೆ ಕಾ । ಣಿಸಲು ನಡೆತಂದಿಳಿದಳಿಭವನು ಸಭೆಯೊಳವನಿಪರ ‖ ೨೭ ‖ ಲವನೆ ಕೇಳ್ಳೆ ಜಯಜಯೆಂದುದು । ದಿವಿಜ ಯುವತೀಜಾಲ ಬಹಳೋ । ತ್ಸವವ ಧರಿಸಿದಳಗಜೆ ನಮಿಸಿದಳಬುಜಭವನರಸಿ ‖ ಅವನಿಜೆಯ ಸಂದರುಶನವು ಸಂ । ಭವಿಸಲಮರರು ಭಕ್ತಿ ಭಾವದ । ಸವಡಿಗೈಗಳಲಿರ್ದ ರನತರಾಗಿ ಗಗನದಲಿ ‖ ೨೮ ‖ ಆನೆಯಿಂದಿಳಿದಾದಿ ಮಾಯಾ । ಮಾನಿನಿಯ ಮಂಗಳೆಯನಾ ಜನ । ಕನನುಜನು ಕೈಗೊಟ್ಟು ತಂದನು ರಾಜ ಸಭೆಯೊಳಗೆ ‖ ಆ ನಭದ ನಿಖಿಳಾಮರೌಘ ವಿ । ಮಾನದಿಂದಿಳಿ ದೋರಣಿಸಿದುದು । ಮಾನನಿಧಿ ಳಳಿಕವನಿಜೆಗೆ ತೋರಿಸಿದನವರುಗಳ ‖ ೨೯ ‖ ದೇವಿ ನೋಡೀತನು ಭವಾನೀ । ದೇವಿಯರಸನು ಗುಹ ಗಣಪ ಮು । ಖ್ಯಾದಿ ಭೂತ ಪ್ರಮಥ ಗಣವಿದೆ ನೋಡು ನೀನವರ ‖ ತೀವಿಕೊಂಡಿದೆ ಮುಂದೆ ವರ ರಾ । ಜೀವಭವ ಸನಕಾದಿಗಳು ಸುರ । ದೇವ ಮುಖ್ಯ ಸಮಸ್ತರಿವರನು ನೋಡು ನೀನೆಂದ ‖ ೩೦ ‖ ತರುಣಿ ನೋಡೀಚೆಯಲಿ ರಮ್ಯಕ । ಹರಿವರುಷ ಕಿಂಪುರುಷ ಭಾರತ । ವರುಷ ಕುರುವರುಷಾದಿ ನಾನಾ ಧಾರುಣೀಶ್ವರರ ‖ ಹರಿತ ಕಶ್ಯಪ ಕಣ್ವ ಚವನಾಂ । ಗಿರಸ ಕೌಶಿಕ ಮುಖ್ಯ ಮುನಿ ಸಂ । ತರುಗಳಿದೆ ಮಿಕ್ಕಾದನರರಿದೆ ನೋಡು ನೀನವರ ‖ ೩೧ ‖ ಇವರೊಳಾರಲಿ ಚಿತ್ತ ನಿನಗುಂ । ಟವರ ನಂಗೀಕರಿಸು ನೋಡೀ । ಭುವನ ಮೂರರ ರೂಪು ಸಿರಿ ಸೌಭಾಗ್ಯ ವಿಕ್ರಮದ ‖ ವಿವಿಧಗುಣ ಸಂಪನ್ನರಿದೆ ಯನ್ನ । ಲವರವರ ಹಂತಿಗಳ ನೊಯ್ಯನೆ । ನವವಿಳಾಸ ಪ್ರೌಢಿಯಲಿದೋಡಿದಳು ನಳಿನಾಕ್ಷಿ ‖ ೩೨ ‖ ಮಗಳ

ಗಂಡನು ಶಿವನು ಬೊಮ್ಮನು | ಮಗನು ಮಿಕ್ಕಿನ ಸುರರು ಭಂಟರು | ಬಗೆವಡೆಮುಳ ಬ್ರಹ್ಮ ಋಷಿಗಳು ನಿರ್ಜಿತೇಂದ್ರಿಯರು || ಜಗದರಸುಗಳು ನರರು ತೊರವೆಯ | ನಗರದಧಿಪತಿ ಗಂಡನೆಂಬೊಗು| ಮಿಗೆಯ ಹರುಷದಲಬಲೆ ಬಂದಳು ಜನಕಸಿದ್ದೆಡೆಗೆ ||೩೩||

ಹದಿನಾಲ್ಕನೆಯ ಸಂಧಿ ಸಮಾಪ್ತಂ.

ಹದಿನೈದನೆಯ ಸಂಧಿ.

ಸೂಚನೆ|| ಭೂಪತಿ ವ್ರಜಗರ್ವ ಸರ್ವ | ಸ್ವಾಪಹರ ಹರಧನುವನಾ ನರ| ರೂಪಿನಬುಜಾಂಬಕನು ಗೆಲಿ ದೊಲಿಸಿದನು ಜಾನಕಿಯ ||

ಪದ್ಯ|| ತರುಣ ಕೇಳಾ ಜನಕ ಭೂಪತಿ | ಪರಮ ಸಂತೋಷದಲಿ ಸೀತಾ| ತರುಣಿಯನು ತೆಗೆದಪ್ಪಿ ಯಂಕದ ಮೇಲೆ ಕುಳ್ಳಿರಿಸಿ || ನೆರದ ರಾಯರೊಳಾವನೀ ಶಶಿ | ಧರನ ಚಾಪವನೇರಿಸುವ ಭೂ | ವರನ ನೊಲಿಸೆಂದಿತ್ತನಾ ಮಂದಾರ ಮಾಲಿಕೆಯ || ೧ || ಒಳಸಿದರು ಬಳಿಕವನಿಜೆಯ ಸೂ | ರ್ಯಾಳಿ ಮಹಾಮಾಂಗಲ್ಯ ಕನ್ಯಾ| ಕುಲ ಶಿರೋಮಣಿ ಮಾಂಡವಿ ಶ್ರುತಕೀರ್ತಿಯಂಬವರು | ಹಲವು ಪರಿಚರಿಯಕದ ಸೇವಾ | ಲಲನೆಯರು ಪರಿವೇಷ್ಟಿಸಿದರು | ಜ್ವಲ ಸುಕಾಂತಾಜನದ ತಿಂತಿಣಿ ಕಾಣಲಾಯ್ತೆಂದ || ೨ || ಅಗಿದು ಹೊಳವಕ್ಷಿಗಳ ಮರಿಮೀ | ನುಗಳ ವಿಕಸಿತವದನ ಕಂಜಾ| ಳಿಗಳ ಕುಂತಳಚಳದ ಭೂರಿಭ್ರಮರ ವಿಭ್ರಮದ || ಯುಗ ಪಯೋಧರ ಚಕ್ರವಾಕದ| ನಗೆಯ ಲಾವಣ್ಯಾಂಬುರಸ ದು | ಬ್ಬುಗಳ ಬೊಬ್ಬುಳಿಕೆಗಳ ಕಾಂತಾ ಸರಸಿ ರಂಜಿಸಿತು || ೩ || ಮೊಳಗಿದವು ನಿಸ್ಸಾಳತತಿ ನಿಮಿ | ಕುಲ ಶಿರೋಮಂಡನನ ಸನ್ನೆಯ | ಉಲಿವ ಕಂಚುಕಿಗಳ ಗಡಾವಣೆಯುಲಿ ನೃಪಾಲಚಯ | ಗಳದ ಕಪ್ಪಿನ ಗರುವ ದೇವನ | ಬಲು ಶರಾಸನವಿದ್ದೆಡೆಗೆ ಹೆ | ಕ್ಕಳಿಸಿ ಹೊದ್ದಿದರುದಿತ ಮದ ದುಬ್ಬಿನ ವಿಳಾಸದಲಿ || ೪ || ಹಾರಕುಂಡಲ ಕಟಕಮಣಿ ಕೋ | ಟೀರಭಾರದ ಭೂರಿ ವೇಗಗಿನ| ಘೋರಘೋಷದ ಖಡೆಯ ಹಾರಾವಳಿಯ ಸೊಗಸುಗಳ || ಧಾರುಣೀಶ್ವರರೊಬ್ಬರೊಬ್ಬರು | ಹೋರಿದರು ಬಿಲ್ಲಿನಲಿ ಬಯಕೆಯ | ಭಾರಣೆಯ ಬಯಲಾಸೆಯಲಿ ಮೇಣ್ಬಹುಪ್ರತಾಪದಲಿ || ೫ || ಸಿಹಧನಳ್ಸಿಗಳಾಡಿದವು ಬಾರಿಸಿತು ಬಳಲಿಕೆ ಚೈದ್ಯ ನೃಪ ಗು | ಬ್ಬಸವು ಬಲುಹಾಯ್ತುಂಗಪತಿ ಗೆಚ್ಚರಿಕೆ ಬಡವಾಯ್ತು || ವಿಷಮುವೀರ ಯುಧಾಜಿತುವಿನಾ| ಯುಸವ ನೇವೇಳುವೆನು ಮಿಕ್ಕಿನ | ವಸುಮತೀಶರ ಪಂಜ್ತುಯಲಿ ಬಲುಬಿಲ್ಲ ಬವರದಲಿ || ೬ || ಚೋಳ ಹಿಮ್ಮೆಟ್ಟಿದನು ಹಿಂದಕೆ | ಲಾಳ ಸರಿದನು ಹಂಗಿದನು ಬಂ| ಗಾಳ ಬೆಂಗೊಟ್ಟೋಡಿದನು ಪಾಂಡ್ಯನು ಪಲಾಯನವ || ಓಲಗಿಸಿದನು ಬಾಹ್ಲಿಕನು ಪಾಂ| ಚಾಲ ಸಿಂಧು ಕಳಿಂಗ ಮರುಸೇ | ಪಾಳದರಸರು ಸವಸಕೊಳಗಾದರು ಸತೀಜನದ || ೭ || ಕರಕರದು ಕಡುಚಪಳೆಯರು ಚ | ಪ್ಪರಿಸಿ ನಾಚಿಸಿದರು ನೃಪಾತ್ಮಜೆ| ಗರಸರಾಗಲು ಬಂದವಸ ಮೋರೆಗಳ ನೋಡೆನುತ || ಅರೆನಗೆಯ ಬಿರುನಗೆಯ ನಗೆಗಳ | ಹೊರಳಿಗಳ ಲಡಬಿದ್ದು ಕರದಾ | ವರೆಗಳಲಿ ಚಪ್ಪರಿಸಿ ತೆಮರಿದ ರಿಟ್ಟು ಭೂಭುಜರ || ೮ || ಕಂಡು ಬಳಿಕಿಪ ನುಳಿದವನ್ನೆಯ | ಮಂಡಳಿಕ ಸಾಮಂತ

ರೇಳಿದೆ । ದಂಡಿಸಿವರಲ್ಲಲ್ಲಿಯೇ ಬಿಲ್ಲಿಗೆ ನಮೋಯೆನುತ । ಗಂಡುಗಲಿ ರಾವಣನು
ರಾಕ್ಷಸ । ತಂಡ ಸಹಿತಾ ಸಮಯದಲಿ ನೃಪ । ಮಂಡಲಿಯ ಬಳಿಗಿಳಿದನನುಪಮ ವರ
ವಿಮಾನದಲಿ ॥ ೯ ॥ ಎದ್ದು ನಿಂದುದು ಸಮರಗಣನಜ । ನೆದ್ದು ಹರಿಸಿದ ನೀಶನಂ
ಘ್ರಿಗೆ । ಬಿದ್ದನವನಪ್ಪಿದನು ಸಾರ್ದರು ನೃಪರು ಕೆಲಬಲಕೆ ॥ ದೊಡ್ಡಿಗರು ರಕ್ಕಸನ
ಕಾಣುತ । ಕದ್ದು ಹಾಯ್ದರು ಜನಕ ಚಿಂತೆಯ । ಲದ್ದ ನವನಡೆತಂದ ನಘ್ನಡಣೆಯ
ನಿನಾದವಲಿ ॥ ೧೦ ॥ ತೊಡರು ಝಣಝಣ ರವದ ಸುರರು । ಘ್ನಡದ ಬಿರುದಿನ
ಬಾವುಲಿಯ ಕ । ಪ್ಪಿಡಿದ ಕಾಯದ ಕುಡಿವರಿದ ವಾಡೆಗಳ ಬೆಳಗುಗಳ ॥ ಇಡಿದ
ವ ಣಿಮುಕುಟಗಳ ಝಳಪಿನ । ಖಡುಗ ಹಸ್ತವ ಶೋಣಿತಾಂಬರ । ದುಡಿಗೆ ಯುಗ್ಗದ
ರಾಯ ರಕ್ಕಸ ಸೈದಿದನು ಧನುವ ॥ ೧೧ ॥ ಬೆದರಿದರು ಕಂಡಿವರ ರೂಪನು ।
ಹೊದರು ದಲೆಗಳ ಹೊತ್ತ ಜೋಹದ । ಮದದ ಗರ್ವದ ಗಾಢ ಗಮನದ ಭೂತವೋ
ಯೆಂದು ॥ ಸುದತಿಯರು ಗಡಗಡನೆ ನಡುಗಿದ । ರದುರಿ ಸಿರಿವೊಗವನು ಮಹೀಸುತೆ ।
ಹೆದರಿದಳು ಹೇರಾಳ ಚಿಂತೆಯಲಾ ವಿದೇಹ ನೃಪ ॥ ೧೨ ॥ ಖಳನಿವನು ಪೂರ್ವದಲಿ
ರಜತಾ । ಚಲವ ನಪಗತ ಭೀತಿಯಲಿ ಕರ । ತಳದ ಲಜಗರ ಪಾಣಿಸಹಿತೆತ್ತಿದನು
ಜಗವರಿಯೆ ॥ ಅಳುಕದಿರದೀ ಧನು ವಿವಂಗ । ಜ್ಜ್ವಳ ನಿಮೀಶ್ವರವಂಶ ಮುಕುಂಕೆ ।
ಕಿಲುಬು ದೋರದಲೇ ಮಹಾದೇವೆನುತ ಚಿಂತಿಸಿದ ॥ ೧೩ ॥ ಧನುವಿದೆಲ್ಲಿಯದೆಲ್ಲಿ
ನಾರದ । ಮುನಿಯ ವಚನವಿದೆಲ್ಲಿ ಮರುಳಾ । ದೆನು ಮಹೀಶರ ನೆರಹಿ ಮಗುಳಿನ್ನೇನ್ನ
ಗತಿ ತನಗೆ ॥ ವನಜವೆತ್ತಲು ಗರಳಮಯ ಜೀ । ವನವಿದೆತ್ತಲು ಧೇನುವೆತ್ತಲು ।
ಜನಿತ ಕೋಪದ್ವೇಷಿಯೆತ್ತಲು ಶಿವಶಿವಾಯಂದ ॥ ೧೪ ॥ ವಿಪುಳಮತಿ ಕುಶಕೇಳು
ಲಂಕಾ । ಧಿಪನು ಬಂದನು ಬಿಲ್ಲೆಡೆಗೆ ನಮ । ಗುಪಕರಿಸಿದುದಲಾ ಮಹೀಶರ ಗೆಲಿದ
ಕೋದಂಡ ॥ ಕೃಪೆಯು ಲೇಸೆನುತುನ್ಮದದಿ ಕೋ । ಣಪ ಕುಲಾಗ್ರಣಿ ಬಯಲ
ನೋಹ । ದ್ವೀಪವ ನೇರಿದ ನರೆನಿಮಿಷವಾ ಸುರವಿಕಾರದಲಿ ॥ ೧೫ ॥ ನಿಂದಿದನು
ಬಳಿಕವನು ಬಿಲ್ಲಿನ । ಮುಂದೆ ಬಳಿಸಂದಸುರನಿಕರವ । ಹಿಂದಣಿಗೆ ಹಿಮ್ಮೆಟ್ಟಿಸುತೀ
ಕ್ಷಿಸುತ ಲಿಡಬಲವ ॥ ಮಂದ ಹಾಸದಲಾ ಕರಾಗ್ರದ । ಚಂದ್ರಹಾಸವ ಸೂತಗಿತ್ತರ ।
ವಿಂದು ವದನೆಯ ನೋಡಿ ಚಾಪಕೆ ನೀಡಿದನು ಕರವ ॥ ೧೬ ॥ ನೃಪ ತಿರಸ್ಕಾರಾಸ
ಹಾಸನ । ಚಪಳೆಯರ ನಗೆಯಡಗಿದವು ಭೂ । ಮಿಪರ ಭುಜಬಲ ಮಾನಹಾನಿಯ
ಕೋಪ ಕೊಂಕಿದವು ॥ ವಿಫಲವಾದುದೆ ಜನಕಭೂಪನ । ತಪದಫಲವೆಂದಿಪ್ಪಜನ ನಿ ।
ರ್ಲಿಪಿತ ಚಿಂತಾ ಭರದಲಿದ್ದುದು ಬೆರಳ ಮೂಗಿನಲಿ ॥ ೧೭ ॥ ನೋಡಿ ಬಳಿಕಾ ವಿಬುಧ
ವಂಶ ವಿ । ಭಾಡ ಕೈಯಿಕ್ಕಿದನು ನಿಧಿಯನು । ಕೂಡಿಕೊಂಡಿಹ ಕಾಲಸರ್ಪನ ತುಡು
ಕುವಂದದಲಿ ॥ ಗಾಢ ಮುಷ್ಟಿಯೊಳವುಕಿ ಜಡಿದ । ಲ್ಲಾಡಿಸಿದನಾ ಧನುವನದು ಕೈ ।
ಗೂಡದಿರೆ ಕೈದೆಗದ ಬಾಹಸ್ಪಳಿಸಿ ಬೊಬ್ಬಿರಿದ ॥ ೧೮ ॥ ಬಲಿದು ಮುಕುಟಾವಳಿಯ
ಶೋಣಿತ । ಘಳಿಯ ರಕ್ಕಸ ದೇಸಿಯಲಿ ಬಿಗಿ । ದೆಳವ ಹಾಹೆಯ ನೋಜಗೊಳಿ
ಸಿಕ್ಕಲಿಲಿ ಪದಯುಗವ ॥ ಅಳುಕದಂದು ಹರಾದ್ರಿಯನು ಕಿ । ತ್ತಿಳಿಯನಗಲಿಸ
ವಂತೆ ಬಾಹಾ । ಲುಳಿತ ಖಳನೆತ್ತಿದನು ನೆಲನೆಲದಾಡ ಲಿಡಬಲಕೆ ॥ ೧೯ ॥ ಒದೆದು
ಕೊಂಡುದು ಜಲಧಿ ಗರಳವ । ನುದುಗರಿಸಿದನು ಫಣಿಪ ಕೂರ್ಮನ । ಹೃದಯ ಬಿಚ್ಚಿತು

ಬಿಗಿಹು ಸಡಲಿದುದಾ ಕುಲಾದ್ರಿಗಳು ॥ ಅದರಿತಂಬರ ವಬುಜಜಾಂತದ । ಸಾದಿ ತುತಿಸೆ ರಿಸಿತೀ ದಶಾಸ್ಯನ । ಪದವಿ ಘಾತಿಗೆ ಪ್ರಾತು ಮುರ್ಛು ಭಾಸೇಂದುದಮರಗಣ॥೨೦॥ ಮೃಡ ಸರೋಜಭವಾದಿ ಸುರರು । ಘ್ನುಡಿಸೆ ರಕ್ಕಸರಾಯ ನೆತ್ತಿದ । ನೊಡನೆ ಜೊಬ್ಬಿರಿದಪ್ರಕಿ ದನು ನೊಳಕಾಲಾ ಧನುವ ॥ ತುಡುಕಿ ತಿರುವ ಸುತೀವ್ರಚಾಪದ । ಹೆಡಕಿ ಗ್ಯೊದನು ಕೂಡೆ ರಕ್ಕಸ । ಗಡಣವಾಯ್ತೆಂದಬ್ಬರಿಸಿದುದು ಹರಿಯ ಹ್ಯೊಲಿನಲಿ ॥೨೧॥ ಆಗಲಿಪ ನಹನೆಂದು ಜನಕನ । ಬೈಗುಳಿನ ಬಾಯ್ಗಳಲಿ ನಗೆಗಳ । ಲಾಗಿ ದವಿಲಳಿಯೇರಿತವನೀ ಪಾಲ ಸಂದೋಹ ॥ ತಾಗಿದಂಜಿಕೆಯಿಂದ ಚಿಂತಾ । ಸಾಗರದೊಳದ್ದಳು ವಿದೇಹನ । ಯಾಗ ಭೂಮಿಯ ಮಗಳು ಮರುಗಿತು ಮಾಸಿನೀನಿಕರ ॥೨೨॥ ಅಳುಪಲಾರಂತರಪ್ರ ಜಗದ । ಗ್ಗಳದ ದೈವದ ಸೊಮ್ಮಿಗಸುರನ । ಸಿಳಿಕೆ ಗಂಡಿದು ಚಾಪಚಪ್ಪರಿಸಿತು ಛಡಾ ಳಿಕೆಯ ॥ ಕಳವಳಿಸಿದವು ಕರಣ ಕಂಗಳ । ಬಳಸಿದುದು ಬಲು ತಿವಿರಕರತಳ । ವಲುಗಿ ದವು ಕಾತರಿಸಿದವು ಕಾಲ್ಗಳು ದಶಾನನನ ॥೨೩॥ ಉಳಿದುದ್ಯೆ ಯವ ಮಾತ್ರಕಾಬಿಲು। ಕೊಲೆಯ ತಿರುವಿನಕೂಟ ಮೇಲಕೆ । ನಿಲುಕದಾದುದು ಕೊಂಡಗಮನಕೆ ಪರಮಪರಿ ತೋಷ ॥ ಫಲಿಸಲರಿಯದ ಕಾರ್ಯದಲಿ ಹಂ । ಬಲಿಸಿ ಕೆಡುವವನಂತೆ ಕೆಡದನು । ಬಿಲುಸಹಿತ ಬರ್ಹಿರ್ಮುಖರವನಿತೆಯರು ಗಹಗಹಿಸೆ ॥ ೨೪ ॥ ಕಂಡು ಕಿರುನಗೆಗಳಲಿ ರಾಯರ । ತಂಡವಿದ್ದುದು ಮಂದಹಾಸದ । ಮಂಡೆಗಳ ಮುರಿವುಗಳ ಮುಸುಕಿನಲಿದ್ದು ದಮರಗಣ ॥ ಗಂಡುಗಲಿ ರಾವಣಗೆ ಬಿಲ್ಲಿನ । ದಂಡೆಯನು ಹಾಯ್ಕಿದಳೆ ನಿಜ ದೋ । ರ್ದಂಡ ದಂಗನೆ ಯೆನುತ ಗುಹಿಲಿಕ್ಕಿತು ಸತೀನಿವಹ ॥ ೨೫ ॥ ದೆಸೆದೆಸೆಗೆ ಸಿಡಿದವು ಕಿರೀಟ । ಪ್ರಸರ ಹರಿದವು ಹಾರವೆದೆಯಲಿ । ಬಸವಳಿದು ಬಿಲ್ಲುಗುಳಿಸಿತು ರುಧಿರವನು ವದನದಲಿ ॥ ರಸದಲಂಪಟ ಕಿಕ್ಷುವನು ಖಂ । ಡಿಸಲು ಸಿಲುಕಿದ ನಾಲಿಗೆಯ ಗಂ । ಗಸದ ನರಿಯಾಪೊಲಿರ್ದನಾ ಬಿಲ್ಲಡಿಯಲಸುರೇಂದ್ರ ॥ ೨೬ ॥ ಹಾಯೆನುತ್ತ ಹರಿತಂದು ರಕ್ಕಸ । ನಾಯಕರು ಹಿಡಿದುಗಿದರಾ ಚಾ । ಪಾಯುಧದ ನಂದಸುರಬಲ ಮುಂದರವ ನುಗಿವಂತೆ ॥ ಬಾಯ ಮಿಡುಕಿನ ಬಳಲ ಕಂಗಳ । ನಾಯುವಿನ ತೆಗೆಬಗೆಯ ರಕ್ಕಸ । ರಾಯನನು ಕೊಂಡೊಯ್ದು ಬೀಸಿದ ರಾಲವಟ್ಟದಲಿ ॥ ೨೭ ॥ ನಳಿನಭವ ಶಂಕರರು ಪೂರ್ವದೊ । ಳೊಲಿದು ಕೊಟ್ಟ ವರಂಗಳಿಂದವ । ನುಳಿದನಲ್ಲದೆ ಬಿಲ್ಲು ಬಿದ್ದಸು ತೊಲಗದವರಾರು ॥ ಬಳಿಕ ಕೇಳ್ಳೈ ಕುಶನೆ ಸೀತೆಯ । ಕಳವಿನಲಿ ಕೊಂಡೊಯ್ವೆನೆಂ ದವ । ನಳವ ಲಜ್ಜೆಯ ಲ್ಹೈದಿದನು ಲಂಕಾ ಮಹಾಪುರವ ॥೨೮॥ ಬಳಿಕ ಜನಕನ ನಂದ ನೆಯ ಹಂ । ಬಲನು ಬಿಟ್ಟರು ನೆರರಿಳಾ ಮಂ । ಡಲದ ರಾಯರು ಜೈದು ಭಂಗಿಸುತಾ ವಿದೇಹಜನ ॥ ಬಲೆಯ ನೊಡ್ಡಿದ ನಿವನು ಲುಬ್ಧಕ । ತಿಲಕನೋ ನೃಪಋಷಿಯೊ ಸಾಕಿವ । ನೊಳಗೆ ಮಾತೇಕೆನುತ ಮಗೆ ಮೊರಡೆದ್ದರಲ್ಲಲ್ಲಿ ॥ ೨೯ ॥ ನಿಲಿಸು ರಾಯರ ನಾರದನ ನುಡಿ । ಬಳಲಿಕೆಯ ತಂದುದೆ ಮಹಾಧನು । ಸುಲಭವೇ ಸಾಕಿನ್ನು ಕುಳ್ಳಿರಿಸಿ ಪರ ನುಚಿತದಲಿ ॥ ಎಲೆ ಕುಶಧ್ವಜ ಕೇಳು ಸೀತೆಯ । ನೊಲಿಸಲೀ ಪಾರ್ಥಿವರು ಯೌವನ । ಕುಲವಿಭವ ವಿಭ್ರಮದಲೆಂದನುಜಂಗೆ ನೇಮಿಸಿದ ॥ ೩೦ ॥ ಧನು ಪರೀ ಕ್ಷೆಯಗೊಡವೆ ಜೇಡೀ । ಜನಕಜೆಯ ನೊಲಿಸುವುದು ಕುಲ ಯೌ । ವನ ವಿಳಾಸ ವಿಚಿತ್ರ ವೈಭವದಿಂದ ನೀವೆಂದು । ಜನಪರಲಿ ಸಾರಿಸಿದ ಸಾಮದ । ಲನುನಯವ

ನಂಗೀಕರಿಸಿ ನೃಪ | ಜನ ಸರಾಗದಿ ನಂತರಿಸಿ ಕುಳ್ಳಿರ್ದ-ದಲ್ಲಲ್ಲಿ ||೩೧|| ಎಲೆ ಕುಶಧ್ವಜ ನಂದನೆಯು ನಂ | ದಳವನೇರಿಸಿ ತೋರಿಸೀನೃಪ | ಕುಲ ಶಿರೋಮಣಿಗಳನು ತನ್ನಯ ಮನಕೆ ಹತ್ತುವರ || ತಳದು ಕೊಳಲಿದು ಕೃತಸಮುಯವಿಂ | ನಲಸಿಕೆಯದೇಕೆಂದು ನುಡಿಯಲು | ಕಳಕಳವ ಕೇಳ್ದದನು ಮುನಿಪತಿ ರಾನುಗಿಂತೆಂದ ||೩೨|| ಏಳು ಸೀತೆಯ ವೊಲಿಸು ನಡೆ ತೆಗೆ | ಫಾಳನೇತ್ರನ ಧನುವ ಬೇಗನೆ | ಮೇಲು ವೊಗದುಬ್ಬಿನಲಿ ನಿಂದಿರ್ದನು ಸರಾಗದಲಿ || ಬಾಲನೇ ನರನಾಟಕದ ಸಿರಿ | ಲೋಲನಲ್ಲಾ ಬೆರಗದೇನು ಪಿ | ಶಾಲವತಿ ಕುಶಕೇಳು ಬೀಳ್ಕೊಂಡನು ಮುನೀಶ್ವರನ || ೩೩ || ವರಪಯೋನಿಧಿ ಮಧ್ಯದಿಂದವ | ತರಿಸುವಮೃತಾಂಶುವಿನ ವೊಲ್ಮಿನಿ | ವರರ ಮಧ್ಯದೊಳಿದ್ದನಾ ರಘುನಾಥ ನೋಲವಿನಲಿ || ಪರಮ ವಿಭವಕೆ ವಿಭ್ರಮಕೆ ಸರ | ಸಿರುಹಭವ ಮನ್ಮಥನು ಲೋಕಕೆ | ಧೊರೆಗಳವದಿರ ಪಿತನಲಾ ಪಡಿಗಟ್ಟಲೇನೆಂದ ||೩೪|| ಚರಣನಖ ದೀಧಿತಿಯು ಪೀತಾಂ | ಬರದ ದಿವ್ಯ ವಿಭೂಷಣದ ಭಾ | ಸುರ ಶರೀರದ ಹೊಗರ ಹೊಸಜವ್ವನದ ವಿಭ್ರಮದ || ಪರಮ ತೇಜೋಮಯನ ಮಾಯಾ | ನರನು ಬಂದನು ನೆರದ ಪೃಥ್ವೀ | ಶ್ವರ ಸಭಾ ಮಧ್ಯದಲಿ ಬೆರಗಾಗಿರೆ ಸಮಸ್ತಜನ||೩೫|| ಸುರರಿಗೀಶ್ವರನಂತೆ ಧರಣೀ | ಸುರರಿಗಮಲ ಬ್ರಹ್ಮನಂತಿತ | ರರಿಗೆ ರಾಜಕುಮಾರನಂದದಿ ಸಿಖಿಳ ರಾಯರಿಗೆ || ಧರೆಗಧೀಶ್ವರನಾಗಿ ವನಿತೆ | ಯರಿಗೆ ಮನ್ಮಥನೆಂಬ ವೊಲ್ಗೋ | ಚರಿಸಿದನು ಗರುವಾಯಿಯಲಿ ಗಜಗತಿಯ ಗಮನದಲಿ ||೩೬|| ಈತನಹ ನವನಿಜೆಗೆ ವರರೂ | ಪಾತಿಶಯದಲಿ ಹರೆಯದಲಿ ಭಾ | ವಾತಿರೇಕದ ಲಧಟನಲಿ ನಿಜರಾಜತೇಜದಲಿ || ಈತ ಚಾಪವಗೆಲಲಿ ಗೆಲದಿರ | ಲೀತನೇ ಸಾಕೆಂಬ ಘನ ಸಂ | ಪ್ರೀತಿ ವಚನದೊಳಿರ್ದ ರಬಲೆಯರಧಿಕ ಹರುಷದಲಿ || ಲಲಿತ ರಾಮನ ಮೂರ್ತಿಯನು ಕಂ | ಗಳಲಿ ಬಿಗಿಯಪ್ಪಿದರು ಸುರತಾ | ಕಲಿತ ದನುರಾಗ ಪ್ರಪಂಚದ ಸಕಲ ಕಲೆಗಳಲಿ || ಬಳಸಿದರು ಭಾವಕಿಯ ರಂಗಜ | ನಲಗಿ ಗೊಡ್ಡಿವ ವೈಯ್ಯಲೊಯ್ಯನೆ | ಸುಳಿಸಿದಳು ಸುಮ್ಮಾನದಲಿ ಕಡೆಗಂಗಳನು ಸೀತೆ||೩೮|| ಮುಸುಕಿ ತಭ್ರುವ ನವ ರತತಿ ತಾ | ಪಸರು ತವಕಿಸಿ ನಿಂದರು ನೆರೆ | ಮುಸುಕಿಕೊಂಡುದು ಸಕಲ ಪೃಥ್ವೀಪಾಲ ಸಂದೋಹ || ಕುಸುಮಮಾಲೆಯ ತಿರುಹುತೆತ್ತಿದ | ಮುಸುಡಿನರೆ ನೋಟದಲಿ ಲಜ್ಜೆಯ | ಬೆಸುಗೆಯಲಿ ನಡೆ ನೋಡುತಿರ್ದಳು ಸೀತೆ ರಘುಪತಿಯ ||೩೯|| ಬಂದು ನಿಂದಿದ ನೀತನಾ ಬಾ | ಲೇಂದುಧರನೆರಡನೆಯ ಬಿಲ್ಲಿನ | ಮುಂದೆ ನಿಂದೀಕ್ಷಿಸಿದ ನವನೀಸುತೆಯ ಸಿರಿವೊಗವ || ಸಂದಣಿಸಿದ ಸಮಸ್ತ ಸುರನರ | ವೃಂದ ಕಂಡುದೋ ಕಾಣದೋ ಯೇ | ನೆಂದರಿಯೆ ನೇರಿಸಿದ ಧನುವಿದ್ದುದು ಕರಾಗ್ರದಲಿ ||೪೦|| ಎಳೆಯ ಕಬ್ಬಿನಕೋಲು ವನಕರಿ | ಕಲಭ ಕರದಲಿ ಮುರಿವವೊಲು ನಿರಿ | ನಿಳಿಲು ನಿಳಿಲೆಂಬಬ್ಬರಣೆ ಗಬ್ಬರಿಸೆ ದಿಗುತಟವ || ಸೆಳದನಾಕರ್ಣಾಂತ ಪರಿಯಂ | ತಲಘುಬಲ ರಘುನಾಥ ನಿಕ್ಕಡಿ | ಗಳದುದಾ ಧನು ಬಳಿಕ ಬೆದರಲು ಹೃದಯ ಭಾರ್ಗವನ || ೪೧ || ಪಸರಿಸಿದ ಪರಿತೋಷದುಬ್ಬಿನ | ಮುಸುಡ ಕಾಂತಿಯ ಕಾಂತನಂಘ್ರಿಯ | ಸಸಿನದಲಿ ಧಾಳಿಸುವ ಕದಪಿನಪಾಂಗಿನಗ್ಗಳದ || ನಸುನಗೆಯ ಸಿರಿವೊಗದ ಲಜ್ಜಾ | ರಸದ ಸೊಬಗಿನ ಸೀತೆ ಸುರಕುಜ | ಕುಸುಮ ಮಾಲೆಯ ನಿಕ್ಕಿದಳು ರಘುರಾಮಚಂದ್ರಂಗೆ ||೪೨|| ಉಕ್ಕಿದುದು ಪೆರೆಗಂಡ ಕಡಲಿನ | ಹೆಕ್ಕಳದ ವೊಲು ಹರುಷ ರಸ ಜಲ | ಉಕ್ಕಿದುದು ಸತ್ಕುಲ

ಲತಾಂಕುರ ಜನಕ ಭೂಪತಿಯು॥ ಹೊಕ್ಕರಂಬುಜ ದಲಿಹೆನಮರ । ಧಕ್ಕಡೆಯ ದಾನವದ
ದನಿ ದಶ । ದಿಕ್ಕನುಬ್ಬಿಸೆ ರಘುಪತಿಯು ಸಿರಿಮುಡಿಯ ಸರಸದಲಿ ॥ ೪೩ ॥ ಉಗಿದಡಾ
ಯುಧ ವೀರ ಸುಭಟಾ । ಳಿಗಳು ದಶರಥ ಸಾರ್ವಭೌಮನ । ಮಗನ ಮುಸುಕಿದ ರಂಗ
ರಕ್ಷಣೆಗರಸ ನಾಜ್ಞೆಯಲಿ ॥ ಹೊಗುವಡೆಡೆಯಿಲ್ಲೆನಿಪ ಹರುಷದ । ಹೊಗರಿನಲಿ ಹೊರೆ
ಯೇರಿ ನೃಪ ದಂ । ಡಿಗೆಯ ಲಿವರನು ಕೊಂಡು ಬಂದನು ರಾಜಮಂದಿರಕೆ॥೪೪॥ ಹರೆದ
ರಾಕ್ಷಣ ನೆರದ ಪೃಥ್ವೀಶ್ವರರು ಪದ್ಮಭವಾದಿ ದೇವರು । ಸರಿದರಾ ಸಮಯದಲಿ ವಿಶ್ವಾ
ಮಿತ್ರ ನಡೆತಂದು ॥ ಅರಸ ಕೇಳವರುಗಳು ಭೂಮಿಪಾ । ಶ್ವರ ದಶಸ್ಯಂದನನ ನಂದನ
ರರಿಕೆಯಿದು ನಿನಗೆನುತ ಮುನಿ ಸರಿದನು ನಿಜಾಶ್ರಮಕೆ ॥೪೫॥ ಅಹದು ಮತ್ತೀನೆಮ್ಮ
ವಂಶಕೆ । ಮಿಹಿರ ವಂಶಕೆ ಕೊಳುಕೊಡೆಗೆ ನಿ । ರ್ವಹಿಸಿತೀ ಸಮ್ಬಂಧ ನರಕೇಸರಿಯ
ಕರುಣದಲಿ ॥ ಬಹಳ ಭಾಗ್ಯರು ನಾವಲಾ ಯೆನು । ತಹಹ ಪರಿತೋಷದಲಿ ನೃಪ ಮೇ ।
ಲಹ ಮಹೋತ್ಸವ ಕೊಡನೆ ನೆನೆದನು ಬೀಯಗನ ಬರವ ॥ ॥೪೬॥

ಹದಿನೈದನೆಯ ಸಂಧಿ ಸಮಾಪ್ತಂ.

ಹದಿನಾರನೆಯ ಸಂಧಿ.

ಸೂಚನೆ॥ ರಾಮ ಜನಕನು ಜಗದ ರಾಯರ । ರಾಯ ರಘುನಂದನರಿಗಬ್ಜ ದ
ಳಾಯತಾಂಬಕಿಯರನು ಕೊಟ್ಟನು ಕರಸಿ ದಶರಥನ ॥

ಪದ್ಯ॥ ಬರೆಸಿದವು ಬಳಿಕುಭಯಮತ ವಿ । ಸ್ತರದ ಪತ್ರಿಕೆಗಳು ಸುಧಾಮನ ।
ವರ ಶತಾನಂದನನ ತೆರಳಿಚಿದನು ಮಹೀಪಾಲ ॥ ತರುಣ ಕೇಳ್ವೆ ಕುಶನೆ ಗಜ ರಥ ।
ತುರಗ ಪದಬಲಸಹಿತಯೋಧ್ಯಾ । ಪುರಿಗೆ ಪಯಣೋದ್ಯೋಗರಾದರು ಜನಕ ನಾಜ್ಞೆ
ಯಲಿ ॥ ೧॥ ಅರುಹಿದರು ಮಣಿಹಾರರಿವರಿ । ಬ್ಬರ ಬರವಿನಸ್ಥಿತಿಯ ನರಸಂ । ಗರಸ
ನಾಜ್ಞೆಯ ಲೆತ್ತಿದುಮ ಗಡಿಪುರದೊಳಗಲದಲಿ ॥ ಧರಣಿಪತಿಯೋಲಗದ ಸಮಯವ
ನರಿದು ನಡೆತಂದಾ ಸುಧಾಮನ ಚರಣಕಾನತನಾಗಿ ಕೊಟ್ಟನು ಬಿನ್ನವತ್ತಳೆಯ ॥೨॥
ಅರಸ ಬಳಿಕಾ ಜನಕ ಮಂತ್ರೀ । ಶ್ವರನನುಚಿತ ಪ್ರೇಮವಚನದಿ । ಹಿರಿದು ಮನ್ನಿಸಿ
ತನ್ನ ನಿಜ ಸಿಂಹಾಸನಾರ್ಧದಲಿ ॥ ಕರೆದು ಕುಳ್ಳಿರಿಸಿದನು ಮಿಕ್ಕಿನ । ನವರ ಶತಾನಂ
ದಾದಿಗಳನುಪ । ಚರಿಸಿ ಬಳಿಕಾ ಮಂತ್ರಿಗಿಂತೆಂದನು ಮಹೀಪಾಲ । ೩ ॥ ಕುಶಲನೇ
ಜನಕಕ್ಷಿತೀಶನು । ಕುಶಪತಾಕನು ಹದುಳಿಗನೆ ತ । ದ್ವಸುಮತೀಶನ ಬಂಧುಗಳು
ಸುಕ್ಷೇಮಿಗಳೆ ಯೆನಲು ॥ ಕುಶಲವರ್ಗಳು ಜೀಯ ದೇವರಿ । ಗೊಸಗೆಯಾದ ವಿವಾಹ
ಪತ್ರಿಕೆ । ಯೆಸಕವನು ಚಿತ್ತವಿಸಿ ಯನಲೋದಿದುದು ಲಿಖಿತಾರ್ಥ ॥೪॥ ಸ್ವಸ್ತಿ ಶ್ರೀಮ
ದ್ರಾಜ ರಾಜ ಸ । ಮಸ್ತಗುಣರಾಜಿತ ಸಹಸ್ರಗ । ಭಸ್ತಿ ವಂಶಲಲಾಮ ಸಕಲ ನೃಪಾಲ
ಮಣಿಮಕುಟ ॥ ಮಸ್ತಕಾಂಘ್ರಿಸರೋಜ ಶೂನ್ಯತ । ವಿಸ್ತರಣ ಸಾಕೇತಪುರ ವಿ ।
ನ್ಯಸ್ತವೈಭವ ನೃಪಗೆ ಬಿನ್ನಹ ಜನಕ ಭೂಪತಿಯ ॥ ೫ ॥ ರಾಮ ಚಿತ್ತೈಸಖಿಳಸ್ವ ಸ
ವಿ । ಡಾಮಗೆಡಿಸಿದ ಚಂದ್ರಧರ ಚಾ । ಪಾಯುಧವ ಗೆಲಿದೊಲಿಸಿದನು ರಘುನಾಥ
ನವಸಜೆಮ ॥ ಈ ಮಹೋತ್ಸವದ ಮ । ಶ್ರೀಯುವನು ಕೈಕೊಂಡು ಬಂಧುಸಿ

ಕಾಯ ಸಹಿತ್ರೈತಹುದೆನುತ ವಾಚಿಸಿದುದಾಲಿಖಿತೆ ॥ ೬ ॥ ಏನಿದೆತ್ತಣಸುದ್ದಿ ಪರಮು
ತ। ಪೋನಿಧಿಯು ಮುಖಸಾಲನೆಗೆ ಮ। ತ್ರೂನುಗಳು ಗಮಿಸಿದರು ಮೇಲಿದು ಬೆರಗಲೀ
ಯೆಸುತ ॥ ಮಾನನಿಧಿ ಮನದನುಗತದ ಸ । ಮ್ಮಾನದಲಿ ಕೇಳಿದನು ಗೌತಮ।
ಸೂನುವನು ಹೇಳಿದನು ಮುನಿ ಮೇಲಣ ಕಥಾಂತರವ ॥ ೭ ॥ ಮುನಿವರ ವಿಶ್ವಾಮಿತ್ರ
ಮುಖವಾ । ಲಸೆಯ ಗೌತಮ ಮುನಿವರನ ಮಾ । ನಿನಿಯ ಶಾಪವಿಮೋಚನೆಯ
ನರ್ಧೇಂದುಶೇಖರನ ॥ ಧನುವರಿಚ್ಛೆ ದವ ಧರಾನಂ। ದನೆಯ ಪಾಣಿಗ್ರಹಣದುಜ್ಜುಗ
ವಿನಿತವೇಳ್ದಚ್ಚರಿಸಿವನು ಮೇಲಣ ಮಹೋತ್ಸವವ ॥ ೮ ॥ ಹರುಷಲತೆ ಲಂಬಿಸಲಿ
ಕವರನು। ಹಿರಿದು ಮನ್ನಿಸಿ ಬೀಡಿಕೆಯ ಮಂ। ದಿರಗಳಿಗೆ ಬೀಳ್ಕೊಟ್ಟ ನುಚಿತೋಕ್ತಿ
ಯಲಿ ಮರುದಿವಸ ॥ ಪರುಠವಿಸಿ ಪಯಣವನು ತತ್ಪುರ । ವರದ ಹೊರವಳಯದಲಿ
ಗುಡಿಯ। ಪ್ಪರಿಸಿದುದು ಮಾಂಗಲ್ಯ ತೂರ್ಯತ್ರಯದ ರಭಸದಲಿ ॥ ೯ ॥ ತೆಗಸಿ
ದನು ಭಂಡಾರದಲಿ ಝಗ। ಝಗಿಪ ರತ್ನಾಭರಣ ವಸನಾ । ದಿಗಳನಖಿಳ ಸುಗಂಧ
ಕನ್ಯಾಭೂಷಣಾವಳಿಯ ॥ ಅಗಣಿತದ ಪೆಟ್ಟಿಗೆಯ ಹೊರೆಯಾ । ಳುಗಳ ಸಂದಣಿ
ನೂಕಿದುದು ಶತ। ಕುಗಳಲಸದಳ ಭಂಡಿಗಳು ಭಾರಿಸಿದವಿಳೆ ಜಡಿಯೆ ॥ ೧೦ ॥ ಗಳಿತ
ಹಾಳಿತ ಧಾಳಧಳನಿ । ರ್ಗಳಿತ ನಾನಾ ಧಾನ್ಯ ಗುಡ ತಂ । ಡುಲ ಘೃತಾದಿ ಸಮಸ್ತ
ಸಂಭಾರಗಳ ಹೇರುಗಳ ॥ ಹಲವು ಕೊಟ್ಟಿಗೆ ಭಂಡಿ ನೆಲಕೊಂ । ಬಳತೆಯಲಿ ನಡೆ
ಗೊಂಡವೀಯಂ। ದಳದ ಸಾಲಿಟ್ಟಣಿಸಿ ತಂತಱವುರ ಪುರಂಧ್ರಿಯರ ॥ ೧೧ ॥ ಇರಿಸಿ
ದೃಷ್ಟಿಜಯಂತರನು ಪುರ। ಕರಸ ರಥವೇರಿದನು ನೃತ್ಯದ । ತರುಣಿಯರ ಹರಿವಾಣ
ದಾರತಿಗಳ ವಿಳಾಸದಲಿ ॥ ಗುರು ವಸಿಷ್ಠ ಸುಮಂತ್ರ ಭರತಾ । ದ್ಯರು ಸುಹೃಜ್ಜನ
ಪೌರಜನ ದು। ಬ್ಬರದ ಸೌರಂಭದ ಲಯೋಧ್ಯಾಪುರವ ಹೊರವಂಟ ॥ ೧೨ ॥ ಮಣಿ
ಮಯದ ದಂಡಿಗೆಯ ತೊನ್ನಂ । ದಣಿದ ಮುಸುಕಿನ ಲರಸಿಯರ ಭಾ । ರಣೆಯ
ಕಂಚುಕಿನಿಕರದುಪ್ಪಡಣೆಗಳು ಥಾಡಿಸಲು ॥ ಕುಣಿವ ಕುದುರೆಯ ಹಣ್ಣಿದುರುವಾ।
ರಣ ವರೂಥ ಪದಾತಿಯಲಿ ದಿ । ಬ್ಬಣವ ಹೊರವಂಟನು ಮಹೀಪತಿ ಸಕಲ ವಿಭವ
ದಲಿ ॥ ೧೩ ॥ ಸೀತೆಯ ಬಾಗರೆ ಕೇಳಿದ್ದ ದಿಗು । ಜಾತ ಜರಿಯಲು ಹೊಡೆವ ವಾದ್ಯ।
ವ್ರಾತದಲಿ ನಿಮ್ಮರಸ ಪಯಣದಮೇಲೆ ಪಯಣದಲಿ ॥ ಚಾತುರಂಗದ ಚಟುಳಚರ
ಣೋ। ದ್ಧೂತರಜ ವುಪ್ಪರಿಸಲಾ ಝಷ। ಕೇತನನ ಚೈತ್ರನ ವಸಂತನ ಕ್ರೀಡೆಯೆನೆ
ನಭವ ॥ ೧೪ ॥ ದಿವಸಹದಿನೈದಕ್ಕೆ ಸಾರಿದ। ರಿವರು ಜನಕನ ಪಟ್ಟಣವ ನು। ತ್ಸವ
ಮಿಗಿಲು ಬಳಿಕಾ ವಿದೇಹನು ನೃಪತಿ ದಶರಥನ ॥ ಯುವತಿಯರ ನರ್ತನದ ಕಹಳಾ।
ರವದ ಕನ್ನಡಿ ಕಲಶ ದಭಿನವ । ದವಿರಳೋತ್ಸವದಿಂ ದಿದಿರ್ಗೊಂಡೊಯ್ದು ನೊಲ
ವಿನಲಿ ॥ ೧೫ ॥ ಮಾಡಿದರಮನೆ ನಿಜನಿವಾಸದ । ಬೀಡಿಕೆಗಳಾದವು ಬಳಿಕ್ಕೆಡೆ।
ಯಾಡಿದರು ಪರಿಚಾರಕರು ರಚಿವರು ಪುರೋಹಿತರು ॥ ಮೋಡಗಂಡಂಬುಧಿಯ ಹರು
ಷದ । ಥಾಡಣೆಯಲಿ ಸುಧಾಮ ಸಹಜನ । ಗೂಡಿಬಂದನು ಜನಕ ದಶರಥ ರಾಯ
ನರಮನೆಗೆ ॥ ೧೬ ॥ ತವಕದಿಂದಿದಿರೆದ್ದು ಜನಕನ । ನವನಿಪತಿ ತಕ್ಕೈಸಿಮಹದು।
ತ್ಸವದಲಾತನ ನಿರಿಸಿದನು ಸಿಂಹಾಸನಾರ್ಧದಲಿ ॥ ರವಿಕುಲ ಗಾನೃಪತಿ ಕೈಮುಗಿ।
ಜೆವಗೆ ಬೀಯ್ಯಗರಾದಿರೀ ಭಾ। ಗ್ಯವನುಕಾಣಿಸಿದುದು ಪುರಾಕೃತ ಪುಣ್ಯಫಲವೆಂದ॥೧೭॥

ಎನುತ ಧಿಮ್ಮನೆ ನಿಂದು ದಶರಥ | ಜನಪನಪಸವ್ಯದಲಿ ನಿಂದಾ | ಸನದೊಳವತರಿಸಿರ್ದ ತತ್ಕುಲಗುರು ವಸಿಷ್ಠಂಗೆ || ತನುಪುಳಕದುಬ್ಬಿನಲಿ ನಿಮಿಕುಲ | ಜನಪ ನಾನತನಾಗಿ ವೀಕ್ಷಿಸ | ಮುನಿಜನಕೆ ಕೈಮುಗಿದು ಕುಳ್ಳಿರ್ದನಧಿಕ ಹರುಷದಲಿ || ೧೮ || ರಾಜಋಷಿಗಳೊಳುತ್ತಮನು ನಿಮಿ | ರಾಜವಂಶದೊಳಧಿಕ ನಗ್ಗದ | ರಾಜವರ್ಗದೊಳಗ್ಗಳನು ನೀನೆಂದು ಕೊಂಡಾಡೆ || ಆ ಜಗದ್ವಂದಿತ ತಪೋಧನ | ರಾಜನೊಯ್ಯನೆ ನಗುತ ವಂಶವಿ | ರಾಜಿತನೊಳೀಸಾತನೆಂದನು ಕುಲಪರಿಶ್ರುತದ || ೧೯ || ಮುನಿಯು ಮಾತಿಂಗಾ ಜನಕನಾ | ನವಪನೀಕ್ಷಿಸಿದನು ಶತಾನಂ | ದನನ ನಾಮುನಿ ಬಳಿಕ ನಿಮಿರಾಜೇಂದ್ರ ಸಂತತಿಯ || ಜನಪನುದಯಿಸುವ ನರುಹಿ ಮಿಥಿಲಾ | ವನಿಪನಭ್ಯುದಯವನು ವಿರಚಿಸಿ | ದನು ವಿಶುದ್ಧ ಚರಿತ್ರವನು ಬಳಿಕಾ ಮಹಿಪತಿಗೆ || ೨೦ || ವರ ವಿದೇಹನೃಪಾಲನಾ ನಿಮಿ | ಧರಣಿಪತಿಗುದ್ಭವಿಸಿದುದ ವಿ | ಸ್ತರಿಸಿದನು ಬಳಿಕಾ ವಿದೇಹಪರಂಪರೆಯ ನೃಪರ || ಚರಿತವನು ಕೊಂಡಾಡಿ ಜನಕನ | ನಿರತಿಶಯ ವಂಶಪ್ರಸಿದ್ಧ | ಸ್ಫುರಿತ ಧಾರ್ಮಿಕ ತನಪ ನೊರೆದನು ಮುನಿವಸಿಷ್ಠಂಗೆ || ೨೧ || ಆಹುದು ಬಳಿಕೇನುತ್ತಮೋತ್ತಮ | ರಹರಲೇ ವಂಶದಲಿ ನಾವೀ | ಮಿಹಿರವಂಶದ ರಾಯರನು ನಿಮಗರುಹಬೇಹುದಲೆ || ದ್ರುಹಿಣನಿಂ ಕಶ್ಯಪನು ಕಶ್ಯಪ | ಗಹಿಮಕರನಾ ಮಿಹಿರನಿಂದೀ | ಮಹಿಗೆ ಮನುವರನಾದ ನಾತನಿಂದಾಯ್ತು ಮನುವಂಶ || ೨೨ || ಆತನಿಂದಿಕ್ಷ್ವಾಕು ವಂಶ | ಖ್ಯಾತನಾದನು ಜನಿಸಿದನು ಬಳಿ | ಕಾತನನ್ವಯದಲಿ ದಿಲೀಪನುದಾರಕುಲಯುತನು || ಆತನಿಂದೀಚೆಯಲಿ ರಘು ಮಾಂ | ಧಾತ ಸಗರ ಭಗೀರಥಾದಿಮ | ಹೀತಳಾಧಿಪ ರೊಲಿದು ಪಾಲಿಸಿದರು ನಿಜಾನ್ವಯವ || ೨೩ || ಅಜನು ಬಳಿಕಾ ಸಂತತಿಯ ಭೂ | ಭುಜರ ಮಿಕ್ಕನು ನಡೆವಳಿಯಲಾ | ತ್ಮಜನು ಜನಿಸಿದನೀ ದಶಸ್ಯಂದನ ಮಹೀಪಾಲ || ತ್ರಿಜಗಕತಿಶಯರಿವರು ಸದ್ಗುಂ | ಶಜರು ಬಳಿಕೀ ರಾಮರಾಮಾ | ನುಜರು ಮಕ್ಕಳು ನಾಲ್ವರೀತಂಗೆಂದನಾ ಮುನಿಪ || ೨೪ || ಕುಲದಲತ್ಯುತ್ತಮರು ರಾಜಾ | ವಳಿಯೊಳಧಿಕರು ನಿಯುತ ಧರ್ಮದ ಬಳಿಕೆಯಲಿ ಬಲ್ಲಿದರು ಕೋವಿದ ರಖಿಳಕಲೆಗಳಲಿ || ಕೊಳುಕೊಡೆಗೆ ಸಂದೇಹವೇ ನರೆ | ಒಳಿಕೆಯವರೇ ನೀವೆನುತ ಮುನಿ | ತಿಲಕನುಭಯನೃಪಾಲಕರ ಕೊಂಡಾಡುತಿಂತೆಂದ || ೨೫ || ಸಲಹಿದನು ಜನಕಕ್ಷಿತೀಶನು | ನೆಲಮೊಳುದಿಸಿದ ಮಗಳನೆಂದೇ | ಹಲಬರಾಡುವರದರಿನರಸನ ತನುಜೆಯಲ್ಲೆಂದು || ಉಲುಕುವದು ಚಿತ್ತದಲಿ ಜನನದ | ನೆಲೆಯನರುಹಿದಡೊಪ್ಪುಗೊಂಬುದ | ಕಲಸಿಕೆಯದೇಕೆಂದು ಮುನಿನುಡಿದನು ವಿದೇಹಂಗೆ || ೨೬ || ಮುನಿಪ ಚಿತ್ತೈಸಹುದು ನೀವೆಂ | ದಿಸಿತು ಪೂರ್ವದ ರಾಜಸೂಯದ | ವಿನುತ ಮಖಭೂಮಿಯನು ಶೋಧಿಸಲಲ್ಲಿ ನೇಗುಲದ || ಮೊನೆಗೆ ಸಿಲುಕಿದ ಭೂಗತಾಲಯ | ವನರುಹಾಕರವಿರಲ ಕಂಡೆನು | ಕನಕಕಮಲದ ಕರ್ಣಿಕೆಯಮಧ್ಯದಲಿ ಕೋಮಲೆಯ || ೨೭ || ಈ ಕುತೂಹಲಿಕೆಯನು ಕಂಡು ಮ | ಹಾಕುಳದಿ ನಾನಂಜಿ ಮನದಲಿ | ಸಾಕು ನಮಗೀಸ್ಥಳ ವೆನುತ ತದ್ಭೂಮಿಗರ್ಭತದ || ಶ್ರೀಕರಾಲಯವಿದು ನಿಸರ್ಗವು | ದಾಕೃತಿಯಲಿರಲೆಂಬ ಸಮಯಕೆ | ನಾಕಮುಸಿ ನಡೆತಂದು ಬಳಿಕಿಂತೆಂದ ನಮಗಂದು || ೨೮ || ಭೀತಿಬೇಡೆಲೆ ಜನಕ ಜೀವದ | ಜಾತಮಂದಿರೆ ಯಿರಾಕೆ ಯಿರಾಕೆಯ | ನೋತು ಸಲಹೆಂದಿತ್ತನಾ

ಮುನಿನಾಥ ನೊಲವಿನಲಿ ॥ ಸೀತೆಯೆಂದೇ ನಾಮಕರಣವ । ಸಾತ ಮಾಡಿಸಿ ಬಳಿಕ
ಘನ ಸಂ । ಪ್ರೀತಿವಚನವಿ ನೊರೆದನಭಿಗತ ಕಾರ್ಯವಿಸ್ತರವ ॥ ೨೯ ॥ ಮನುಜ
ರೂಪಿಂ ದಿಳೆಯೊಳೀ ಗೋ । ಮಿನಿಯುಪತಿ ವಸುಮತಿಯ ಭಾರವನೊನೆಯಲುದಿಸಿದನಾ
ಮಹಾತ್ಮಂಗೀಕೆಸೇರುವಡೆ ॥ ಧನುವನೊಡ್ಡಿ ಪಿನಾಕಪಾಣಿಯು । ಜನಪರನು ಬರಿಸಾ.
ಕಳಂಬಾ । ಸನವಗೆಲಿದಂಗೀವುದಾತನೆ ವಿಷ್ಣು ಕೇಳೆಂದ । ೩೦ । ತೆರನಿದೀಗಿದ
ನಿನುಗಿದುವೆ ಮನ । ಕುರಿಸದಡೆ ನಿಮ್ಮಡಿಗೆ ನಾವ್ಕಂದೆರವನೂಡುವೆ ವೆನುತ ನಸದನು
ನೃಪತಿ ನಾರದನ ॥ ತುರುಗಿ ತೂಳುವ ಶುಭ್ರಕಾಂತಿಯು । ನಿರಸಿ ನಲಿನಡೆತಂದು
ನಿಂದಿರ । ಲೆರಗಿದರು ಬಳಿಕ ಭಯರಾಯರು ನಾರದನ ಪದಕೆ ॥ ೩೧ ॥ ಜನಪರಿಬ್ಬರ
ಹರಸಿ ವಿವಿಧಾ । ರ್ಚನೆಯ ಕೈಕೊಂಡುಭಯರಾಯರ । ಮನದಣಿಯೆ ಕೊಂಡಾಡಿ
ವಂಶಾಢ್ಯತೆಯ ಶುದ್ಧತೆಯ ॥ ವಿನುತಚರಿತಕೆ ಮೆಚ್ಚಿ ಸೀತಾ । ವನಿತೆ ರಾಘವ
ರಿವರು ಲಕ್ಷ್ಮೀ । ವನರುಹಾಂಬಕರವತರಣ ವೆಂದರುಹಿದನು ಮುನಿಪ ॥ ೩೨ ॥ ತಿಳುಹಿ
ನೃಪರಿತ್ತಂಡವನು ಕೈ । ಗೊಳಿಸಿದನು ಕೊಳುಕೊಡೆಲುನಿಮ್ಮವೊ । ಲಿಳೆಯೊಳಾರ್ಯೈ
ಭಾಗ್ಯವುಳ್ಳವರೆನುತ ಕೊಂಡಾಡಿ ॥ ತಳರ್ದನಮರಮುನೀಂದ್ರ ನಂಬುಜ । ದಳಸ್ವ
ನೇತ್ರನ ನಾಮಕೀರ್ತನೆ । ಗಳ ಸುವೀಣಾನಾದದಲಿ ನಳನಜನ ಪುರಗಾಗಿ ॥೩೩॥ ಸುರ
ಮನಿಯು ಮತವಿಡಿದು ಲಗ್ನವ । ಪರುಠವಿಸಿದರು ಬಳಿಕಲಾ ರಘು । ವರಗೆ
ಸೀತಾದೇವಿಯನು ಸೌಮಿತ್ರಿಗೂರ್ಮಿಳೆಯ ॥ ಭರತಶತೃಘ್ನರಿಗೆಜನಕಾ । ವರಜ
ವೀರಕುಶಧ್ವಜಾತ್ಮಜೆ । ಯರನು ನಿರ್ಧರಿಸಿದರು ಮುನಿಪ ವಸಿಷ್ಠನಾಜ್ಞೆಯಲಿ ॥೩೪॥
ಬಿಳುಕೊಂಡನು ಜನಕನುರುನಿ । ಸ್ಸಾಳದಬ್ಬರಗಬ್ಬರಿಗೆ ಭೂ । ಪಾಲರಮನೆಗಳಲಿ
ನಡೆದವು ಪೂರ್ವವೇದಿಗಳು ॥ ಮೇಲೆ ನಾಂದೀಮುಖದ ಸಂಭ್ರಮ । ಮೇಳವಿಸೆ
ಶೈಲಜೆಯ ಸಿರಿಯು ವಿ । ಶಾಲವಿಭವೋದ್ವಾಹಗೇಹದ ಸಕಲಸಂಭ್ರಮವ ॥ ೩೫ ॥
ಕುಶಲೆ ಕೇಳ್ಕ ಲ್ಯಾಣವಿಭವವ । ಲೆಸದುದಾ ಮಣಿಮಯವಿವಾಹದ । ವಸತಿ ಮುತ್ತಿನ
ಚೌಕದಲಿ ವಿಮಳಾಂಕುರಾರ್ಪಣದ ॥ ಪಸರಿಕೆಗಳುಜ್ವಲವಿನೂತನ । ವಸನವರ್ಪಣ
ದೀಪದಲಿ ಪೂ । ಜಿಸಿದ ಕಾಂಚನದ್ರೈರಣಿಯ ಶೋಭೋಪಕರಣದಲಿ ॥ ೩೬ ॥ ಕನಕ
ಪತ್ರಾವಳಿಯ ವರಚಂ । ದನದ ಕುಸುಮಾಕ್ಷತೆಯ ಗೊರೋ । ಚನದ ಲಾಜೆಯ
ದಧಿಯ ದೂರ್ವೆಸುವರ್ಣಬಾಸಿಗದ ॥ ವಿನುತಭದ್ರದುಕೂಲ ಮಣಿಕಾಂ । ಚನವಿಭೂ
ಷಣಭಕ್ಷ್ಯಫಲದು । ಬ್ಬಿನಲಿ ದಶಧಾನ್ಯಾದಿ ವಿಭವದಲೆಸದುದಾ ಭವನ ॥ ೩೭ ॥
ನೆರದುದಾ ಮಂಟಪದ ಬಹಿರಾ । ವರಣದಲಿ ವಿಪ್ರರು ವಿಶೂದ್ರೋ । ತ್ತರರು ಸಾಹಿ
ತ್ಯರು ಕಲಾವಿದರಖಿಳಕೋವಿದರು ॥ ಸರಸಕವಿ ವಾಗ್ಮಿಗಳು ಮಂತ್ರ । ಜ್ಞರು ಮಹಾ
ಪಂಡಿತರು ನಾನಾ । ದರುಶನಾಚಾರಿಯರು ಮುಖ್ಯ ಸಮಸ್ತ ಜನನಿಕರ ॥ ೩೮ ॥ ತಾಳ
ಗತಿಯ ಮೃದಂಗರವದ ರ । ಸಾಳಗೀತದ ಗಾಯಕರ ವೈ । ತಾಳಿಕರ ವಂದಿಗಳ ವೀಣಾ
ರವದ ನರ್ತನದ ॥ ಬಾಲೆಯರ ಬಹುವಿಧದ ಮೋಹನ । ಜಾಲದುಬ್ಬಿನ ಕಾವ್ಯಗೀತದ ।
ಸಾಲಸತ್ಪ್ರಾರಂಭ ರಂಜಿಸಿತಾ ಮಹಾಸ್ಥಳವ ॥ ೩೯ ॥ ತರುಣಿಯರ ಶುಭಗೀತ ಧರಣೀ
ಸುರರ ಸೂಕ್ತಸುಮಂತ್ರ ಸಂಪ । ತ್ಸರಿಕರಾಯತರವವೆಸೆದುದುದ್ವಾಹಗೇಹದಲಿ ॥
ತರುಣ ಕೇಳೀಜೆಯಲಿ ರಘುಪತಿ । ಭರತ ಲಕ್ಷ್ಮಣದೇವ ಶತ್ರು । ಘ್ನರ ಗಳಿಭಕಂಧರದ

ಲೊಪ್ಪಿದರರಸನಾಜ್ಞೆಯಲಿ ॥ ೪೦ ॥ ಹಿಡಿದ ಮುತ್ತಿನ ಸೂಸಕದ ಬೆಳು । ಗೊಡೆಯು
ಚಿಮ್ಮುವ ಚಾಮರದ ಥರ । ವಿಡಿದ ಸೀಗುರಿಗಳ ವಿಡಾಯಿಯು ಸೊಸಲ ಬಾಸಿಗದ ॥
ಹಿಡಿದ ಕೈದೀವಿಗೆಯ ಸಾಲಿನ । ತುಡುಕುವೆಳಗಿನ ವಂದಿಜನದು । ಗ್ಗಡದ ರಾಜ
ಕುಮಾರಕರು ನಡೆತಂದರೊಲವಿನಲಿ ॥ ೪೧ ॥ ಸಂದಣಿಸಿದವು ಕರಿತುರಗ ಬಳಿ ।
ಸಂದು ನೂಕಿದರಖಿಳ ನಾರಿಯು । ರಂದಣಗಳಟ್ಟಣಿಸಿದವು ದಶರಥನ ಬಂಧುಜನ ॥
ಮುಂದೆ ಕಂಬಿಯ ಕಂಚುಕಿಯ ರೊಲ । ವಿಂದ ವಿಪ್ರರ ಮಂತ್ರ ಘೋಷಣೆ ।
ಯಿಂದ ಬಂದರು ರಾಜಪುತ್ರರು ರಾಜಬೀದಿಯಲಿ ॥ ೪೨ ॥ ಅಣುಗ ಕೇಳೈ ನಭದ
ತಾರಾ । ಗಣ ತದೀಯ್ಯ ಮಹೋತ್ಸವದ ದಿ । ಬ್ಬಣಕೆ ನೆರೆದವೋ ಪುರದೊಳಿನೆ
ಬೆಳಗಿದುದು ದೀಪಾಳಿ॥ ಮಣಿಮುಕುರದವಬಲೆಯರು ನೃತ್ಯದ । ಗಣಿಕೆಯರ ಮಾಂಗಲ್ಯ
ವಾದ್ಯದ । ಕುಣಿತದಲಿ ನೆಲಕುಸಿಯೆ ಹೊಕ್ಕರು ಜನಕನರಮನೆಯ ॥೪೩॥ ಇಳಿದರಾ
ನೆಯನಬಲೆಯರು ಹೊಂ । ದಳಿಗೆಗಳ ಪಸುಗುರ್ಗಳದೀಪಾ । ವಳಿಯ ಸೊಡರಿನ ಸಾಲಿ
ಸೆಯೆ ಸೂಸುಗಳ ಸೊಗಸಿನಲಿ ॥ ವಳಗಬಲ್ಲವರೂರ್ಧ್ವಮುಖದಂ । ಜಾಳಿಗಳಲಿ ಜಯ
ಯೆನಲು ಹೊಕ್ಕರು । ನಿಳಯವನು ಸಿರ್ಜಗರ ದುಂದುಭಿವಾದ್ಯ ರಭಸದಲಿ ॥೪೪॥ ಏನ
ನೆಂಬೆನು ಜನಕನೃಪನನ । ನೂನಭಾಗ್ಯವ ನವ ಮ ಜಗದಧಿ । ಮಾನದೈವದ ಲಲಿತಪದ
ಕಮಲಾಭಿಷೇಚನವ । ಶ್ರೀನಿವಾಸಸ್ಮರಣೆಯಲಿ ವಿ । ಜ್ಞಾನ ಮುಖವಲಿ ಮಾಡಿ
ತಾಳ್ದನ । ನೂನತೀರ್ಥವ ಶಿರದೊಳೀಸು ಕೃತಾರ್ಥನೋ ಯೆಂದ ॥೪೫॥ ಬಳಿಕ ಮಧು
ಪರ್ಕಾದಿ ವೈದಿಕ । ವಿಳಸದಭಿರಂಜನೆಯ ಲಾ ಕಳ । ಕಳವ ಮಾಣಿಸುತಿತ್ತರುತ್ತಮ
ಗುಡವ ಜೀರಿಗೆಯ ॥ ನಿಲಿಸಿ ವೇಟ್ಟಕ್ಕಿಯಲಿ ಮದುವ । ಕ್ಕಳಿಗೆ ಕನ್ಯಾವರಣವಾದವು।
ಘಳಿಗೆವಟ್ಟಲಲಗ್ನದೊಳು ಪುಣ್ಯಾಹರಚನೆಯಲಿ ॥೪೬॥ ಇಳೆಯ ಮಗಳನು ರಾಘವಂ
ಗೂ । ರ್ಮಿಳೆಯನಾ ಸೌಮಿತ್ರಿ ಗುಳಿದರಿ । ಗುಳಿವನುಜತನುಜೆಯರ ಧಾರೆಯನೆರೆದನಾ
ಜನಕ ॥ ಸುಳಿದರಾ ದಂಪತಿಗಳುರು ಮಂ । ಜುಳದ ಮಣಿವೇದಿಕೆಗೆ ಹೋಮಾ । ನಲನ
ಬಲವಂದೆಡಕೆ ಸಾರಿದರವರ ಪತ್ನಿಯರು ॥ ೪೭ ॥ ಆದುದವರ ವಿವಾಹವೈಭವ । ವೈದಿ
ಕದ ಲವಣೀಸರರು ಮೊದ । ಲಾದ ಯಾಚಕವೃಂದ ದಣಿದುದು ಬಹಳ ದಾನದಲಿ ॥
ಆ ದಶಸ್ಯಂದನನ ಜನಕನ । ಮೇದಿನಿಯ ರಾಯರ । ನಾದರಿಸಿದರು ತಮ್ಮೊಳಡುಗೊರೆ
ವುಚಿತವಚನದಲಿ ॥ ೪೮ ॥ ವರಶುಭೋದಯಕೆ ಸಂಪ । ತ್ಕರದ ನೆಲೆವನೆ ಸಿರಿಯ
ಸೋಂಪಿನ । ಶರಧಿ ಸೊಬಗಿನ ಜನ್ಮ ಸುಮ್ಮಾನದ ಮಹಾಸ್ಥಾನ ॥ ಸಿರಿಪವೋತ್ಸವ
ಶಾಲೆ ಹರುಷೋ । ತ್ಕರದ ಜನನಸ್ಥಳವಿದೆನ ಲಾ । ಕರುಹಿಸಿತು ಜನಮನವನನುಪಮ
ಪರಿಣಯಸ್ಥಾನ ॥ ೪೯ ॥ ಪರಮ ಸಂಭ್ರಮದಿಂದ ವರವಾ । ಸರ ಚತುಷ್ಟಯದಿರುಳು
ದಂಪತಿ । ವರರು ಮೆರೆದರು ಭದ್ರಮದಸಿಂಧುರದ ಕಂಧರದ ॥ ಸುರಚಿತದ ರತ್ನಪ್ರಭಾ
ಪಂ । ಜರದ ಗದ್ದುಗೆಗಳಲಿ ನೃಪರಿ । ಬ್ಬರು ಮಹಾವಿತರಣದ ವೈಭವದಬೀಳರಚನೆ
ಯಲಿ ॥೫೦॥ ಮರುದಿವಸ ಮೂರುಳಿಯ ಸಮನಂ । ತರದ ಲವಭೃಥದೋಕುಳಿಯ ವಿ।
ಸ್ತರಣವೆಸಡುದು ವಿಳಸಿತೋತ್ಸವ ವಿವಿಧ ವಿಭವದಲಿ ॥ ಪರಿಮಳದ ಪನ್ನೀರ ನವ ಕ
ರ್ಪೂರದ ಕಸ್ತೂರಿ ಕುಂಕುಮದ ಕೊ । ಪ್ಪರಿಗೆಗಳ ಸಾಲೆಸೆದುದನುಪಮ ಹೇಮಮಣಿ
ಮಯವಾ॥೫೧॥ಲಲನೆಯ ಕಂಚುಕಗಳಲಿ ಹೊ ದುರು । ಬಿನ ಪಿಣಿಲ್ಗಳ ದಂಡೆಗಳ ಮು।

ನ್ಮೊನೆಯ ಮಂಜಿನಗುಗಳ ಚಂದ್ರಿಕೆಪಟದ ಚಲ್ಲಣದ|| ಕನಕರತ್ನಾಭರಣ ಕಾಂತಿಯ| ವನಿತೆಯರು ಬಳಸಿವರು ಬವರವ | ವನಜಿಜನ ಮಾಸುಳಿನಂದವ ಉಭಯಭೂಮಿಪರ ||೫೨|| ಕೊಂಡು ಕುಂಕುಮವಾರಿಗಳ ಹೊ| ನ್ನಂಡೆಗಳ ಜಲಜಂತ್ರಗಳ ಮುಂ| ಕೊಂಡು ನೃಪರಿಬ್ಬರ ವಧೂನಿಕುರುಂಬವಾ ನೃಪರ || ಮಂಡಳಿಯ ತನ್ನೃಪಕುಮಾರರ| ತಂಡ ಸೌರಂಭದಲಿ ಸುರರೆಳೆ | ವೆಂಡಿರುತ್ಸಾಹಿಸಲು ಹ್ಯೊದಾಡಿದರು ವೋಕುಳಿಯ ||೫೩|| ಹೊರದುವಿಳೆ ಸೌರಭ್ಯ ಶೈತ್ಯೋ| ತ್ಕರವ ನಂಬರವಳಯದಗಲಕೆ| ಪರಿಮಳಿಸಿದುದು ಗಂಧವಾಹನನಾಡಿಕೆಯ ಸರಣಿ || ಸುರಭಿಮಯವಾಯ್ತಂಬುಜಸಖ ಹಿಮ| ಕರಣನಾಮೋದ್ಯೈಕ ಭಾನೋ| ತ್ಕರ ಮರೀಚಿಗಳಾವರನುಪಮ ವಾರಿಕೇಳಿಯಲಿ ||೫೪|| ಆದುದಲ್ಲಿಂಮೇಲೆ ಮಾಮನೆ| ಮೇದಿನೀಪತಿ ಜನಕರಾಯಂ| ಗಾದಿವಾಕರ ಕುಲಲಲಾಮನಿಗಖಿಳ ವಿಭವದಲಿ || ಆದರಿಸಿದನು ಜನಕನಿಭರಥ| ಕೈದು ರತ್ನಾಭರಣ ಕಾಂತಾ| ಮೇದಿನಿಯ ಬಳುವಳಿಗಳಿಂ ಬಳಿಕಾ ಕುಮಾರಕರ || ||೫೫|

ಹದಿನಾರನೆಯ ಸಂಧಿ ಸಮಾಪ್ತಂ.

ಹದಿನೇಳನೆಯ ಸಂಧಿ.

ಸೂಚನೆ|| ಭೂಮಿಪರನುರೆಜರಿದ ಭಾರ್ಗವ| ರಾಮನನು ಗೆಲಿದತುಳಬಲ ರಘುರಾಮ ಸಹಿತಜಸೂನು ಬಂದನಯೋಧ್ಯೆಗೊಲವಿನಲಿ ||

ಪದ್ಯ|| ಧರಣಿಜೆಯ ಪರಿಣಯದ ಸಮನಂ | ತರದಲಾ ದಶರಥ ಮಹೀಪತಿ| ಪುರವ ಹೊರವಂಟನು ಕಣಾ ಜನಕಕ್ಷಿತೀಶ್ವರನ || ತರುಣ ಕೇಳ್ಳೈ ಬಳಿಕ ದಶರಥ| ನರಸಿಯರು ನಂದನರು ನಂದನ| ರರಸಿಯರು ಗುರು ಮಂತ್ರಿಜನ ಸಹಿತಖಿಳ ವಿಭವದಲಿ || ಕಳುಹಲ್ಕೈತಂದನು ನಿಮಿರಾಶ್ವರ| ಕುಲಲಲಾಮನ ಶೇಷ ನೃಪನಂ| ಡಳಿಯ ಮಸ್ತಕಮಣಿವೆ. ನಾಲುಕುಪಯಣಪರಿಯಂತ|| ಇಳಿವ ಕಂಬನಿಗಳಲಿ ಕಂಪಿತ| ಗಳದ ಬಿಕ್ಕಳಿಸಕ್ಕೆಯಲಿ ಮ| ಕ್ಕಳನು ಕೈವರ್ತಿಸಿ ಕಕುಸ್ಥಾನ್ವಯನ ಬೀಳ್ಕೊಂಡ ||೧|| ಬಳಿಕ ದಶರಥ ಸಾರ್ವಭೌಮನ| ದಳದ ಸಂಭ್ರಮದಬ್ಬರದ ರವ| ವಳುಕಿಸಿತು ಸುರನರಭುಜಂಗಮಭುವನವೀಥಿಗಳ|| ಇಳೆಯ ಪಾರ್ಥಿವರಥಟು ಕೊಡಲಿಯ| ಕೊಲೆಗಡಿಕಗದು ಸೊಗಸೆಸುಳಿದನು| ವಿಲಯರುದ್ರನ ಕುಪಿತರೌದ್ರಾವೇಶರೋಷದಲಿ ||೩|| ಕರಿಘಟೆ ಗಳುಪ್ಪರಿಸಿ ಜಗ್ಗನೆ ' ಜರಿದು ನಿಂದವು ಕುಣಿವ ಕುದುರೆಗ| ಳುರಕೆಕಬ್ಬಿಯಕುಸಿದು ಕುಕ್ಕರಿಸಿದವು ಭೀತಿಯಲಿ || ಕರಿಸಬಾಯಲಿ ಹಾಯ್ದು ಬಳಲಿದ | ಕರವಕೈದುಗಳರಸುಗಳು ಬಾ| ಯ್ದೆರೆಯದೇನೆಲನೆನುತ ಪರವಶರಾದರಲ್ಲಲ್ಲಿ ||೪|| ಉಲುಹುಡೆಗದಿಂಗುವಸಮುದ್ರದ| ಸಲಿಲ ದೋಲಾಯ್ತಖಿಳ ಸೇನಾ| ಜಲಧಿ ಕಾಣೆನು ಮಲೆವಮಹಿಪರಮುನಿಯ ಮುಂಬಿನಲಿ || ಕಳಚಿತರಸನಮನದ ಧೈರ್ಯ | ಚಲದ ಬೈಸಿಕೆ ಹದನನದ ಕಂ| ಡಲಘುಭುಜಬಲ ರಾಮನಿಂದನು ಮುಂದೆಭಾರ್ಗವನ ||೫|| ನಿಮಗಿದೇತಕೆ ಕ್ಷತ್ರಿಯರೊಳು| ಧೃಷಿತತನ ಭೂಭುಜರ ಭುಜವಿ| ಕ್ರಮದ ಪರಿಪಾಡುಗಳು ನೀನೇ ನಿಮ್ಮ ಚಿತ್ತದಲಿ || ಸಮತೆಯಲಿ ಸುಮುಖದಲಿ ತಿಳಿದಾ| ಕ್ರಮಿಸುವದೆ ಸುಪ್ರಾರ್ಥಿ ಬಲುಸಂ|

ಭ್ರಮವು ಸಾಕೀಪ್ರೌಢದಲಿ ಜಾರುವದು ಲೇಸೆಂದ ॥ ೬ ॥ ಕೆಲಕೆ ತೊಲಗ ವಮುಚಿತ
ಹಿಂದಣ । ಬಲುಹದಂದಿಗೆ ಹುಲುಧೊರೆಗಳಲಿ । ಸಲುವುದಲ್ಲದೆ ಸಲ್ಲದಿತ್ತ್ರಲು ಶೌರ್ಯ
ನಿಮ್ಮಡಿಯು । ಶಿಳಿವಡವನೀಸುರರಿಗಿಂದ । ಗ್ಗಳರು ಶೌರ್ಯದಲವನಿಪರು ವೆ । ಗ್ಗಳರು
ವಿಪ್ರರುವಿಧಿವಿಹಿತ ಕರ್ಮದಲಿ ನಿಮಗೆಂದ ॥ ೭ ॥ ಧ್ಯಾನ ಮೌನ ಸಮಾಧಿಶೌಚ ।
ಸ್ನಾನ ಜಪತಪ ನಿತ್ಯನಿಯಮ । ಜ್ಞಾನ ಸತ್ಕರ್ಮ ಪ್ರವಿಸ್ತರ ದೇವತಾಭಜನೆ ॥ ಮೌನಿ
ಗಳಿಗಿದ ಮಾರ್ಗ ಶರಸಂ । ಧಾನ ಸಮಯೋಚಿತದ ಶೌರ್ಯ । ನೂನ ಪಾರ್ಥಿವರ್ಕ
ನಿಮಗಿದು ಯೋಗ್ಯವಲ್ಲೆಂದ ॥ ೮ ॥ ಸೆಣಸುವುದು ಸುವ್ಯಾಕರಣಪರಿ । ಗಣಿತ ಶಾಸ್ತ್ರಜ್ಞ
ರಲಿ ಸಮರದೊ । ಳಣಕಿಸುವುದ ಸಮಾನರಲಿ ಸಂಗ್ರಾಮ ಸಲ್ಲದೆನೆ ॥ ಕುಣಿದವಾ ಕುಡಿ
ಮೀಸೆ ಬಿಡದಿಂ । ಗಣವ ನುಗುಳಿದವಕ್ಷಿ ಕಲ್ಪದ । ಕಣುಗಿಡಿಯು ಕರ್ಕಶ ಕಪರ್ದಿಯು
ಬಗೆಗೆ ಮನದಂದ ॥ ೯ ॥ ತರಣಿಯನು ತುಸವೆಂದು ತುಂಡದ । ಲರಿವ ರಾಹುವತಾರೆ
ತವಕಿಸಿ । ತುಂಬಿ ನಿಲುವವೊಲಾಯ್ತಲಾ ಕ್ಷತ್ರಿಯರು ತಾವುಗಡ । ಧರಣಿಯಮರರ
ನಾವುಗಡ ಸಾ । ಗರವ ಸರಸಿಯು ಶೆಣಸುವಂತಾ । ಯ್ತರಿಯ ಬಹುದಿನ್ನೆನುತ ಕೊಡ
ಲಿಯ ಜಡಿದನಾ ರಾಮ ॥ ೧೦ ॥ ಹಾಯಿತುರಿಹೊದರೆದ್ದು ಕೊಡಲಿಯ । ಬಾಯಧಾರೆಯ
ಲಖಿಳ ಜಗವವಿ । ದೇಯನಲು ಸೀವರಿಸೆ ಶಿಖಿನೊಗೆದುದು ಮರುತ್ಪಥವ ॥ ವಾಯು
ವರುಣ ಕುಬೇರ ಯಮ ವ । ಜ್ರಾಯುಧರು ಹಮ್ಮೈಸಿದರು ಹರು । ವಾಯಿತೆಮಗೆಂ
ದೊಡನೆ ದಶರಥರಾಯ ನಳವಳಿದ ॥ ೧೧ ॥ ರಾಮನೆಕಟಾ ಹಸುಳೆ ಭಾರ್ಗವ । ರಾಮ
ನಗ್ಗದ ಜವನು ಭೂಮಿಯೊ । ಳಾ ಮಹೀಶಾಧೀಶ ವಂಶಾರಣ್ಯವನು ತರಿದ ॥ ಭೀಮ
ಬಲ ವಿಕ್ರಮಗೆ ಜಗದಭಿ । ರಾಮ ಸಿಲುಕಿದ ನಿನಕುಲಾಂಬುಧಿ । ಸೋಮ ಕೈವಶವಾ
ದನೇ ಹಾಯೆನುತ ಹರಿತಂದ ॥ ೧೨ ॥ ಕಂಡನೈಯನ ಮನದ ಧೈರ್ಯದ ದಂಡಿ
ಯನು ನೀ ಬೇಡಿಕೊಳಲೇ ಕಂಡಲೆದು ಕೆಲಸಾರಿ ಸೈರಿಸಿ ನಿಮಿಷಮಾತ್ರದಲಿ ॥ ಖಂಡ
ಪರಶು ಮಹೋಗ್ರಚಾಪ ನಿ । ಖಂಡನನು ಸುಳಿಸಿದನು ನಿಶಿತಸು । ತಾಂಡವನು ಭೃಗು
ಸುತನ ಕೊಡಲಿಯು ಕೊರಳ ಸರಿಸದಲಿ ॥ ೧೩ ॥ ಉಸುರಲೇನದ ಕಲ್ಪದಲಿ ಸುಳಿ ।
ದಶನಿಗೆಣೆಯೆನಿಸುವ ಮಹಾಯುಧ । ವೆಸೆದುದೈ ವ್ಯೋಮದಲಿ ರಾಮನ ತೋಮರಾಗ್ರ
ದಲಿ । ಪಶುಪತಿಬ್ರಹ್ಮಾಮರರು ಮಾ । ನಸದೊಳರಿದರು ಪಲ್ಲಟಿಸಿತಿಂ । ದಸುರಹರ
ನವತಾರವೆಂದುಬ್ಬಿದರು ಹರುಷದಲಿ ॥ ೧೪ ॥ ಘನತರ ಕ್ರೋಧಾಗ್ನಿ ಮಿಗೆಸಂ ।
ಜನಿಸ ಭಾರ್ಗವನುಗ್ರವೈಷ್ಣವ । ಧನುವನುಗಿದೇರಿಸಿದ ನವನೀಸಾಕ್ಷರಳವಳಿಯೆ ॥
ವನಜಸಂಭೂತಾದವೆಡಬಲ । ಕೊನೆಯ ಬಿಲುಧನಿವೋರಿಕೋಲಿನ । ಕೊನೆಗೆ ಕೈ
ಯಿಕ್ಕಿದನು ದಿವ್ಯಾಮೋಘಮಂತ್ರದಲಿ ॥ ೧೫ ॥ ಮನದೊಳಗೆ ನಸುನಗುತ ನಿಮ್ಮಯ
ಜನಕ ರಥದಿಂದಿಳಿದು ಪಾರ್ಥಿವ । ಜನಮಹಾಂಬುಧಿ ವಡಬನೆಡೆಗಿದಿರಾಗಿ ನಡೆತಂದು ॥
ಅನಿಮಿಷರು ಕೊಂಡಾಡೆ ಹೊಡಿದ । ಧನುವ ಮೇಲ್ವಾಯ್ದುಗಿದು ಕೊಂಡಾ । ಮುನಿಗೆ
ಬಳಿಕೀ ಮಾತನೆಂದನು ಮಧುರ ವಚನದಲಿ ॥ ೧೬ ॥ ನೀವು ವಿಪ್ರರು ವಿಪ್ರಹಿಂಸಾ ।
ವ್ಯಾವಹಾರಿಕವೆಮಗೆ ದುಷ್ಟವ । ಲಾ ವಿಶೇಷಜ್ಞಸ್ಮೃತಿ ಸೂಕ್ತಿ ಕರೋವಿದರ್ಥದಲಿ ॥ ನೀವು
ವಂದ್ಯರು ನಮಗೆ ನಿಮಗಿ । ನ್ನಾವ ಜುಂಜಡಬೇಡ ತಪದ ಫ । ಲಾವಳಿಯೆ ಸಾಕಿನ್ನು
ಬಿಜಯಂಗೈಸಿ ನೀವೆಂದ ॥ ೧೭ ॥ ಮನುಜನಸ್ಲೀತನು ಮುದೀಯ । ಧ್ವನಿಗೆ ಭೂಭುಜ

ವರ್ಗದಬಲಾ । ಜನಪನಿಬ್ಬರ ಗರ್ಭಕಳಚುವೃದೆನ್ನು ಕೋಪದಲಿ ॥ ಜನಸರುಳಿದವ
ರಿಲ್ಲ ನಿದುಗೋ । ವಿಸಿಯುಗಂಡನ ಘನತರದ ಘ । ಡಣೆಯುಲಾ ಗತಿಪಲ್ಲಟಿಸಿತೆನ
ತುಬ್ಬಿದನು ರಾಮ॥೧೮॥ ಆಯಿತೆಮ್ಮವತಾರವೀ ರಾ । ಮಾಯಣದ ನಾಟಕಕೆ ದೀಪ್ತಿ।
ನ್ಯಾಯವಪೊಲೆನುತಪ್ಪಿ ಬಳಿಕಕ್ಷಯನಿಷಂಗವುದ ॥ ಸಾಯಕವ ನೊಲಿದಿತ್ತು ತಾಪಸ।
ರಾಯ ತೆರಳಿದನಾಶ್ರಮಕೆ ಬಳಿ । ಕಾಯಿತಧಿಕೋತ್ಸವವು ದಶರಥಸಾರ್ವಭೌಮಂಗೆ ॥
ಇವನೆ ಕೇಳೈ ಬಂದನೀ ರಾ । ಘವನ ಬಳಿಕಾ ಸಮಯದಲಿ ವೈ । ಷ್ಣವ ಮಹಾಚಾಪ
ವನು ಬೇಡಲು ಸುರಪನಾಜ್ಞೆಯಲಿ ॥ ತವಕಮಿಗೆ ಮಕರಾಕರೇಶ್ವರ । ನವಿರಳದ
ವಿನಯದಲಿ ತದ್ವೈ । ಷ್ಣವ ಮಹಾಕೋದಂಡವನು ಪಡದಿತ್ತನಿಂದ್ರಂಗೆ ॥೨೦॥ ಮುಂದೆ
ಕಾರಣವುಂಟೆನುತ ಸಂ । ಕ್ರಂದನನು ಬಳಿಕಾ ಧನುವ ನಿಜ । ಮಂದಿರದ ಲಿರಿಸಿದನಲ್ಲೈ
ವಧೆಗರಿದಶಾನನನ ॥ ಬಂದನಲ್ಲಿಂ ಮೇಲೆ ಸೇನಾ । ವೃಂದ ಸಹಿತ ಮನೋನುರಾಗದ।
ಸಂದಣಿಯ ಸೌರಂಭದಲಿ ಸಾಕೇತಪುರವರಕೆ॥೨೧॥ ಕಲಶ ಕನ್ನಡಿ ತೋರಣದ ಹೊಂ।
ದಳಿಗೆಯಾರತಿಗಳ ಸುಲಲನಾ । ವಳಿಯ ಮಂಗಳಪಾಠಕರ ನರ್ತನದ ನಾರಿಯರ ॥
ಉಲಿವ ವಾದ್ಯದ ಲಿಡಬಲದ ಹೆ । ಕ್ಕಳದ ನೋಟಕ ಜನದಲಾ ನೃಪ । ಕುಲಶಿರೋ
ಮಣಿ ಹೊಕ್ಕನನುವಮ ರಾಜಮಂದಿರವ ॥ ॥೨೨॥

ಹದಿನೇಳನೆಯ ಸಂಧಿ ಸಮಾಪ್ತಂ.



ಅಯೋಧ್ಯಾಕಾಂಡ.

ಮೊದಲನೆಯ ಸಂಧಿ.

ಸೂಚನೆ॥ ರಾಯದಶರಥ ನಖಿಳಲೋಕದ । ರಾಯ ರಾಮಂಗೊಲಿದು ರಾಜ್ಯ।
ಶ್ರೀಯ ಪಟ್ಟವ ಕಟ್ಟಲೆಂದುದ್ಯೋಗಮನನಾದ ॥

ಪದ್ಯ॥ ವೀರ ಕೇಳೈ ಕುಶನೆ ರಾಜಕು । ಮಾರಕರು ನಾಲ್ವರಿಗೆ ಭದ್ರಾ । ಗಾರ
ವೆಸಮದು ವಿಶ್ವಕರ್ಮನಿರ್ಮಾಣಮತಗಳಲಿ ॥ ಬೇರೆಬೇರರಸಿಯರು ಸಹಿತಸು । ತಾರೆ
ಯಲಿ ಶುಭಲಗ್ನದಲಿ ವಿ । ಸ್ತಾರವೈಭವದೊಸಗೆಯಲಿ ಹೊಕ್ಕರು ನಿಜಾಲಯವ ॥೧॥
ಆಳಿದನು ರಾಮನ ವಿವಾಹದ । ಮೇಲೆ ಹನ್ನೆರಡಬ್ದ ಪರಿಯಂ । ತೋಲಗಿಸಿ ಕೊಂ
ಡಖಿಳ ರಾಯರ ನವನಿಮಂಡಲವ ॥ ಕೇಳಿದೈ ಲವ ನಿಮ್ಮ ಮುತ್ತಯ್ಯ । ನಾಲಯಕೆ
ಬಳಿಕೊಂದುದಿನ ನೃಪ । ಬಾಲಕನು ಬಂದನು ಕಣಾ ಕೈಕೆಯ ಮಹೀಪತಿಯು ॥ ೨ ॥
ಆದರಿಸಿದನು ಬಳಿಕ ಕೈಕೆಯ । ಸೋದರನ ಸುಕ್ಷೇಮಕುಶಲವ । ನಾದಯಾಂಬುಧಿ
ಕೇಳಿದನು ಕೈಕೆಯನೃಪೋತ್ತಮನ ॥ ಐದುದಿನ ವಿದ್ದನು ಬಳಿಕಾ । ಸೋದರಳಿಯಂ
ದಿರನು ನಿಜಪುರ । ಕೈದನಭ್ಯಾಸಿಸಲು ವರಶಸ್ತ್ರಾಸ್ತ್ರಕೌಶಲನ । ೩ ॥ ಲವನೆಕೇಳಾ
ಭರತನಾ ಸಹ । ಭವಸಹಿತ ನಿಜಪಿತನ ಬೀಳ್ಕೊಂ । ಡವನಿಜೇಶನ ಕೈಯ್ಯ ಕಳುಹಿಸಿ
ಕೊಂಡು ಕೈಕೆಯನ ॥ ಭವನಕೈದಿದ ನತ್ತಲಿತ್ತಲು । ದಿವಸದಿವಸಕೆ ಕೌಸಲ್ಯ ಸಂ ।
ಭವನ ಸದ್ವರ್ತನೆಗೆ ಸಂತೋಷಿಸಿದನಾ ಭೂಪ ॥ ೪ ॥ ಈತನೇ ಸಿಂಹಾಸನಸ್ಥಿತ ।
ನೀತನೇ ಸಾಮ್ರಾಜ್ಯಪತಿ ತಾ । ನೀತನೇ ರಘುಕುಲ ಸಮುದ್ರೋದ್ಧರಣ ಹಿಮಕಿರಣ॥
ಈತನೇ ರಘುನಾಥನೆಂಬೀ । ಮಾತು ಮಂತ್ರಿ ಮಹಾಪ್ರಧಾನ ವಿ । ನೀತ ವಿನಿಯೋಗಿ
ಗಳಿಗೆಚ್ಚರಿಸಿದನು ನರನಾಥ ॥೫॥ ತೋರಿದುದು ಜರೆ ನಮಗೆ ನಾವಿ । ನ್ನಾಳಲೊಲ್ಲೆವ
ರಮರ ನಗರವ । ನೂರುಯಜನದ ಜಾಣನೋಲಗ ದಮಲವಿಸ್ತರವ ॥ ತೋರುತಿದೆ
ಚಿತ್ತದಲಿ ಮಿಕ್ಕಿನ । ಮೂರು ಮಕ್ಕಳಿಗಿಂತ ರಾಮನೆ। ಸಾರವುರ ಸಾಮ್ರಾಜ್ಯಸ್ಥಿತಿಗೆಂದ
ವನಿಪತಿ ನುಡಿದ ॥ ೬ ॥ ಬಳಿಕಲನಿಬರ ಮತದಿ ನಾತಂ । ಗೊಳ್ಳಿಯದಿವಸದಲಿ ಯುವ
ರಾಜ್ಯದ । ಲಲಿತ ಪಟ್ಟವ ಕಟ್ಟಿದನು ಸಂಭ್ರಮಿಸೆ ಸಕಲಜನ ॥ ಹಲವು ಮಾತಿನ್ನೇಕೆ
ರಾಮನ । ನೆಳಲು ನಿರ್ಜರಕುಜದ ನೆಳಲಾ । ಯ್ತ್ತಿಳೆಯ ಜನ ಪರಿಜನ ಜನಂಗಳಿ
ಗಣುಗ ಕೇಳೆಂದ ॥ ೭ ॥ ಮನುಮಹೀಶ ದಿಲೀಪ ಮಾಂಧಾ । ತನುಪುರೂರವ ಕಾರ್ತ
ವೀರ್ಯಾ । ರ್ಜುನ ಭಗೀರಥ ಸಗರ ನಳ ನಹುಷಾದಿ ಭೂಭುಜರ ॥ ನೆನಪನುರಸಿದ
ನೀತನೀತನ। ವಿನುತ ವಿಮಳ ಚರಿತ್ರ ಕಬುಜಾ । ಸನಪುರಾರಿ ಪುರಂದರರು ಪುಳಕಿಸಿದ
ರಡಿಗಡಿಗೆ ॥೮॥ ಬಯಸುವಳು ಭೂವನಿತೆ ವಿಪ್ರ । ಪ್ರಿಯನ ನುರುಧಾರ್ಮಿಕನ ರಿಪು ನಿ।
ರ್ಭಯನ ನಿಯತಮತಿ ಪ್ರತಿಜ್ಞನ ರಾಘವೇಶ್ವರನ॥ಬಯಸುವಳು ಪುರಲಕ್ಷ್ಮೀಜಗದಾ।
ಶ್ರಯಸುಪರ್ವದ್ರುಮನ ದೆಂತುಟೊ । ದಯೆ ಸಮಸ್ತರಮೇಲೆ ರಘುರಾಜೇಂದ್ರಚಂದ್ರ
ಮನ ॥೯॥ ಪಲ್ಲವಿಸಿದುದು ಹರುಷಲತೆ ಭೂ । ವಲ್ಲಭಂಗಾ ಜನಕತನುಜಾ । ವಲ್ಲಭನ
ನಡವಳಿಯ ನೀತಿಗೆ ನಿರ್ವಿಕಾರತೆಗೆ ॥ ಇಲ್ಲಗೀತನೆ ಕರ್ತುರ್ಕಾಮಿತ । ವಲ್ಲಭೆಗೆ ನಾಸ್ಕ
ರ್ತುವಾದರೆ । ಬಲ್ಲವಿಕೆ ಲೇಸೆಂದು ಭೂಮಿಪಾಲ ಮನದೆಂದ ॥ ೧೦ ॥ ನೆಟ್ಟನಧಿರಾ
ಜೇಂದ್ರ ಪಟ್ಟವ । ಕಟ್ಟುವೆನು ಕಮಲಾಂಬಕನ ಪದಿ । ಗಟ್ಟಿದಗ್ಗದ ರಾಮಚಂದ್ರಂ
ಗೆಂದು ನಿಶ್ಚೈಸಿ ॥ ಇಟ್ಟೆಡೆಯ ಹರುಷದಲಿ ಮಿಗೆ ಸೊಂ । ಗಟ್ಟಿಗೆಯ ಭರದಿಂದಲಾ
ಮನ । ಮುಟ್ಟಿದಾಸ್ಥರ ಕರಸಿ ಬಳಿಕಿಂತೆಂದನಾಭೂಪ ॥೧೧॥ ಅಕೆ ಬೀರಿತು ನಮಗೆ
ರಾಜ್ಯ । ಶ್ರೀ ಸತಿಯಮೇಲಣ ಮನಸ್ಪೃಹ । ಲಾಪಿಮಾದುದು ಮುಕ್ತಿವನಿತೆಯ ಮೇಲ
ಮೇಳವದ ॥ ಈ ಸಕಲ ಸಾಮ್ರಾಜ್ಯಭಾರವ । ನೀ ಸುಬಾಹುಧ್ವಂಸಿಯಲಿ ನಿ । ಕ್ಷೇಪಿ

ದಡೆ ನಿಶ್ಚಿಂತರಾವೆಂದರಸ ನೇಮಿಸಿದ ॥ ೧೨ ॥ ವಿತತ ವಿನಯಯೋಗಿಪ್ರಧಾನ । ಪ್ರತತಿ ನೆಗಳ್ದೀ ರಾಜಕಾರ್ಯ । ಕ್ಷಿತಿಗೆ ಪಣವಿಸಿದರು ಕೊಂಡಾಡುತ ನೃಪಾಲಕನ ॥ ಕ್ಷಿತಿ ಸುತಾಸುತ ಕೇಳ್ದು ಬಳಿಕ । ಚ್ಯುತನ ಮಾಯಾನರನ ನನನೀ । ಪತಿಯ ಪಟ್ಟಕೆ ಪರುತವಿಸಿ ಕರಸಿದನು ಜೋಯಿಸರ ॥೧೩॥ ನಿಸಡಿಸಿದ ವೈಶಾಖ ಮಾಸದ । ಧವಳ ಪಕ್ಷದ ಪಂಚಮಿಯ ಶುಭ । ದಿವಸದಭಿಜಿಲ್ಲಗ್ನದಲಿ ಮೂರ್ಧಾಭಿಷೇಚನದ ॥ ವಿವರವಾಯ್ತು ವಿದೇಹಜಾಸತಿ । ಗವನಿಪನ ಬರಿಬಯಕೆಯಲಿ ಮರು । ದಿವಸ ಮತಿರಿಸಿತು ಪುರಪ್ರಪುರಂದರನ ಪುರವ ॥ ೧೪ ॥ ಇಡಿದ ಮುತ್ತಿನ ಸೂಸಕದ ಕ । ನ್ನಡಿಯ ಕಲಶದ ತೋರಣದ ವಂ । ಗಡದ ವಿವಿಧಧ್ವಜನಿಕಾಯದ ಸೌಧ ಸಂಕುಳದ ॥ ಜಡಿವ ಝಲ್ಲರಿಗಳ ಪತಾಕೆಯ । ಸಡಕುಗಳ ಮೇಲ್ಗಟ್ಟುಗಳ ಪರಿ । ವಿಡಿಯ ಪಸರದಲೆಸೆದುದಾ ಸತ್ಯಾವತೀ ನಗರ ॥ ೧೫ ॥ ಬೀದಿ ಬೀದಿಗಳೊಳಗೆ ಕಸ್ತುರಿ । ಸಾದಗಳ ಸಾರಣೆಯ ಪರಿಮಳ । ಮೇಳಿಸಿದ ಪನ್ನೀರಚೆಳೆಯದ ಚಾರು ಕುಂಕುಮದ ॥ ಶೋಧಿಸಿದ ಕಾರಣೆಯ ಕಡೆವಲಿ । ಗೈದ ಹೊಸಮುತ್ತುಗಳ ಪಡಿಸಣ । ಗೈದ ಧೂಪದ ಧೂಮಪವನದಲೆಸದುದಾ ನಗರ ॥ ೧೬ ॥ ಎಸದುದೈ ಬಳಿಕಕಖಿಳ ಶೋಭಾ । ವಿಸರದಲಿ ಮೂರ್ಧಾಭಿಷೇಕದ । ವಸಗೆ ವೈದಿಕಲೌಕಿಕಾಂಗದ ವಸ್ತುಕಾರದಲಿ ॥ ಮಿಸುಪ ಮಿಸುನಿಯ ಪೂರ್ಣಕಲಶದ । ಪಸರಿಕೆಯ ಪುಣ್ಯೋದಕದ ಶೋ । ಭಿಸುವ ಪೂರ್ಣ ಸುವರ್ಣಕುಂಭದ ಸಂಭ್ರಮಂಗಳಲಿ ॥ ೧೭ ॥ ವಿನುತ ಧವಳಚ್ಛತ್ರ ಸಿಂಹಾ । ಸನಮಣಿಧ್ವಜಕನಕನೃಪಕೇ । ತನಫಲಾವಳಿ ದೂರ್ವೆ ದಧಿ ಮಧು ಕುಂಕುಮಾಕ್ಷತೆಯ ॥ ಕನಕ ಪಾತ್ರೆ ಸುಗಂಧಗೋರೋ । ಚನ ಸುಪುಷ್ಪದುಕೂಲ ಮಣಿಮಂ । ಡಲ ಸುಲಕ್ಷಣಹಯ ಮದೇಭದಿನೆಸದುದಾ ಭವನ ॥ ೧೮ ॥ ಮೇಲೆ ಮುದದಲಿ ಕೌಶಿಕಾಧ್ವರ । ಪಾಲಕನ ನಿಜನಿಳಯಕಾ ಭೂ । ಪಾಲಕನು ಕಳುಹಿದನು ಕಮಲಾಸನನ ನಂದನನ ॥ ನಾಳೆರಘುನಾಥಂಗೆ ರಾಜ್ಯ । ಶ್ರೀಲತಾಂಗಿಯ ಮದುವೆ ಮಂಗಳ । ದೇಳಿಗೆಯ ಸುವ್ರತವಮಾಡಿಸಲುಚಿತವಚನದಲಿ ॥ ೧೯ ॥ ಜನಕಜಾಸುತಕೇಳು ರಘುನಂ । ದನನಭವನಕೆ ಬಂದು ಸನ್ಮುನಿ । ಜನಮನೋ ರಂಜಕನ ನಘಭಂಜಕನನಾರಾಮ ॥ ವಿನುತ ಸತ್ಕೃತಿಸಹಿತ ಗುರುಭಾ । ವನೆಯರಿದು ಪೂಜಿಸಲು ಪೂಜೆಯ । ನನುಕರಿಸಿ ಕೈಗೊಳಿಸಿದನು ಕಾಲೋಚಿತ ವ್ರತವ ॥ ೨೦ ॥ ಪುರದೊಳಗೆ ರಾಜೇಂದ್ರನಂತಃ । ಪುರದೊಳಗೆ ತತ್ಕೌಶಲರರಿಂ । ಧರೆಯೊಳಗೆ ರಾಜಾಧಿರಾಜನ ರಾಜಸಭೆಯೊಳಗೆ ॥ ಹರೆದುದೀವೃತ್ತಾಂತ ವಿದನಾ । ದರಿಸಿದಳಲ್ಲೈ ಪೂರ್ವಮಾಯಾ । ತರುಣಿ ಮಂಥರೆ ಮಥಿಸಿ ಮನದಲಿ ಪೂರ್ವ ಸೂಚಕವ ॥ ೨೧ ॥ ಭೂರಿಭಾರನಿಶಾಚರರ ಸಂ । ಹಾರಕರಣೋದ್ಯೋಗಕಾಲ । ಕ್ಷ್ಮೀರವಣನುದಿಸಿದನಲ್ಲೈ ರಾಮಾಭಿದಾನದಲಿ ॥ ಆ ರಮಾಪತಿಯಾಜ್ಞೆಗಾವುದೊ । ದಾರಿಯಿಂದಾ ಮಾಯೆ ವಿಜ್ಞಾ । ಸಾರಮುಖದಿಂದರಿದಳಾಗಲಾಕಾರ್ಯಕೌಶಲವ ॥ ೨೨ ॥ ಅಂದಿನುದಯದೊಳವಳು ಕೈಕೆಯ । ಮಂದಿರಕೆ ನೃಪಸಭೆಯೊಳಿರಲೈ । ತಂದಳಾಸ್ತ್ರೈಳೇಂದ್ರಿನೇಕವಘಾಟಿವಹಿಲದಲಿ ॥ ಕುಂದನಿಕ್ಕುವೆ ನವನಿಪನ ಮನ । ದಂದವೋಹದ ಮಾಸಿನಿಗೆ ಮಹೀ । ನಂದನನ ನೆಬ್ಬಟ್ಟುವೆನು ರಾವಣನ ವಧೆಗೆನುತ ॥ ೨೩ ॥ ಹೊರೆಸು ಸಖಿಯರ ಮೇಳದಲಿ ನಸು ಹೊರದ ಕೋಪದ ಹೊಗರಿನಲಿ ಸರ । ಸರನೆ

ಬಂದಳು ಸನಸಿಜಾ ಕೈಕೆಯನ್ನ ಪಾತ್ರಜೆಯು ॥ ಅರಸಿಯಿದ್ದೆಳಲ್ಲೇನೇಳದ । ತರುಣಿ
ಮರ ಸಬ್ಬೋಗಿನ್ನಿಯಲಿ ಸಡ ಗರಿಸಿ ಸಾಧ್ವಿವಳಿಂದಧಿಕ ಹಿತೋಕ್ತಿ ಭಾಷಿತವ ॥೨೪॥
ಅರಸಿಕೇಳಿನ್ನೇನಹೇಳುವೆ । ನರಸ ಮನದಲಿ ನೆನದಮಂತ್ರದ । ಪರಿಯ ನೀನದರರಿ
ಯದಿಲ್ಲವಲಾ ಮಹಾದೇವ ॥ ಧರಣಿಗಡ ರಾಮಂಗೆ ಭರತಾ । ದ್ಯರುಗಳಾ ರಘುನಂದ
ನನ ಕಿಂ । ಕರರು ಗಡ ಕೇಳರಸಿ ಕೌತುಕ ನಡದುದಿಂದಿನಲಿ ॥೨೫॥ ಅರಸುತನ
ರಾಮಂಗೆ ನೆಲೆಗೊಳ । ಲರಸಿ ಕೇಳೌ ನಿನ್ನಮಗನೇ । ನರಸನೋ ಪೇಣ್ವರಸನೋ
ಸಾಮ್ರಾಜ್ಯ ಸಂಪದಕೆ ॥ ಹೊರೆಯುವೇಬಳಿಕೊಡಲ ಶುನಕನೊ । ಕರಗಳಕಟಾ ನಿನ್ನ
ಭಾಗ್ಯದ । ಸಿರಿಗೆ ಸೇವಟಿ ನಾದನೇ ನೃಪನೆಂದಳಾ ಕಾಂತೆ ॥೨೬॥ ಕೇಳಿ ಕಡುಗೋಪ
ದಲಿ ಮಾನಿನಿ । ಮೇಳದಬಲೆಯರೊಡನೆ ನುಡಿದಳು । ಕಾಳುಗೆಡದಪಳೆನಗಿವಳು ಯಿವ
ಳೆಂದ ಮಾತುಗಳ ॥ ಕೇಳಿದಿರೆ ನೀವೆಂದು ಜರದಿದ । ಹೇಳಕಾರಣವೇನು ಹಿಸುಣರ ।
ಜಾಲಿಗರ ಚತುರೋಕ್ತಿ ನಮಗೇಕೆಂದಳವಳೊಡನೆ ॥೨೭॥ ಭರತನಲಿ ರಾಮನಲಿ
ದಾಯಿಗ । ದೊರಸೊರಸುತನವುಂಟೆ ನಮ್ಮ । ಬ್ಬರಲಿ ಸವತಿಯರೆಂಬ ಮತ್ಸರವುಂಟೆ
ಪೂರ್ವದಲಿ ॥ ತರಣಿವಂಶಪರಂಪರೆಯ ಬಂ । ಧುರದ ಭದ್ರಾಸನಕೆ ರಾಘವ । ನರಸ
ನಾದರೆ ಭಾಗ್ಯವದು ನಮಗೆಂದಳಾ ಕೈಕೆ ॥೨೮॥ ಮರಳಿ ನುಡಿದಳು ನಮ್ಮನಿವ್ರ ನೀ ।
ವ್ವರಮನೀತಿಯ ಧರ್ಮಶಾಸ್ತ್ರದ । ನಿರತರಾವೇ ಕುಹಕ ಕರ್ಮದ ಕಪಟಕೌಶ
ಲರು ॥ ಇರಲಿರಲಿ ತೋರಿಸುವೆ ಮುಂದಕೆ । ಗುರುಲಘುತ್ವದ ಪರಿಯ ತುದಿಯಲಿ ।
ದೊರಕುವಶುಭದಿ ಬೀದಿಗಲಹವನೆಂದಳಾಕಾಂತೆ ॥೨೯॥ ಹಿರಿದು ಲಕ್ಷಿಸಿ ನೋಡದೇ
ನಾ । ನರಿಯದುಸುರಿವೆ ನಿಮಗಿನಿತು ನಿಷ್ಠುರತೆಯಾದರೆ । ನಮಗಿದೇಕೀ ಬಾಯಿಬಡುಕ
ತನ ॥ ಅರಸಿ ಕೌಸಲೆಯಿಂದ ಕೇರುವ । ಪರಿಭವವ ನೀವ್ಯಾಂಬರೆನುತವ । ಳೆರಡು
ಕೈಗಳ ಮುಗಿದು ಹೊರವಂಟಳು ನಿಕೇತನವ ॥೩೦॥ ಕರೆಯುವಳ ಮೂಕಂಡಿತ್ರೊತ್ತಿನ ।
ಮುರುಕತನ ಲೇಸೆನಲವಳ ಹ । ತ್ತಿರಕೆ ತಂದರು ಕೆಳದಿಯರು ಕೈವಿಡಿಯಲೊಪೆ
ಮುರುಚಿ॥ ಇರಲಿರಲಿ ನಮಗೇಕೆ ಹೊದ್ದುವ । ಪರಿಭವವದೇನೆನಲು ಮಾಯಾ । ತರುಣಿ
ಮಾಯಾಮೋಹಕದಲಿಂತೆಂದಳಾ ಸತಿಗೆ ॥೩೧॥ ಧರೆಯೊಳಗೆ ವೈರಿಗಳು ಬೇರೊ ।
ಬ್ಬರೆ ನಿತಂಬಿನಿ ಕೇಳು ನಾವ। ತ್ನರುಕಣಾ ಕಡುವಗೆಗಳುಳಿದವರಲ್ಲವೈರಿಗಳು ॥ ಧರಣಿ
ರಾಮಂಗಾಗೆ ಕೌಸಲೆ । ಪರಕುಮಾಡುವಳೀ ಸಮಶ್ರೀ । ಪೆರಸಿ ಬದುಕುವ ನಿನ್ನನೆಂ
ದಳು ನಗುತ ಸೈರೇಂಧ್ರಿ ॥೩೨॥ ತೆವರಿದರು ನಿನ್ನಯ ಕುಮಾರರ । ನೆವದಿನತ್ತಲು
ರಾಜಲಕ್ಷ್ಮಿಗೆ । ಕವಡಹಾಯ್ಕಿದರಿತ್ತಲೀ ರಘುರಾಮಚಂದ್ರಂಗೆ ॥ ವ್ಯವಹರಿಸಿತೀ
ಕುಹಕಮತಿ ನಿ । ಮ್ಮವನಿಪಾಲನ ಮತದಿ ನಿಮಗೀ । ಹವಣ ತಿಳಿಯದು ತಿಳುಹಲೇ
ನಿನಗೆಂದಳಾ ಕಾಂತೆ ॥೩೩॥ ಅರಸಿ ಕೇಳ್ಪೂರ್ವದಲಿ ಪಿಂಡವ । ನರಿಯನಿತ್ತನು ಸಕಲ
ಪೃಥ್ವೀ । ಶ್ವರರ ಮಧ್ಯದಲಾ ಪ್ರಕಾರದಲೂರ್ವಿಯೊಡೆತನಕೆ ॥ ಸರಿಕಮಾರಕನಿಬ್ಬ
ರನು ನಿ । ಮ್ಮರಸನಲಿ ಹುಟ್ಟಿದ ಸಮಸ್ತೈ । ಶ್ವರಿಯ ರಾಮಂಗಾಗೆ ನೀಪೇನಪಿರಿ
ಬಳಿಕಿನಲಿ ॥೩೪॥ ನೆಂಟರೋ ಸಾಮ್ರಾಜ್ಯಲಕ್ಷ್ಮಿಗೆ । ಭಂಟರೋ ನೀವ್ನಾವು ಬರಿದಿದ ।
ನುಂಟು ಮಾತುವ ಮಾತಿನಿಂದೇನಹುದು ಫಲಸಿದ್ಧಿ ॥ ಕಂಟಕರು ನಾವಾಗಲೇಕವ ।
ನೆಂಟುಮುಡಿ ನಯದಿಂದ ನೋಪಲಿನೊ । ಬಂಟ ಭರತಂಗೆ ಪಟ್ಟವನೆಂದಳಾಕಾಂತೆ ॥

ಆರು ಮಾತುವಡೇನು ಭಾಗ್ಯದ | ನಾರಿ ನೋಡಿದಳವರನಶುಭವಿ | ಕಾರಿ ನಿನ್ನ ನಿರೀಕ್ಷಿಸಿದಳವು ಸುಪ್ರಸಿದ್ಧವಲೆ || ಪ್ರಾರಬ್ಧ ಫಲಭೋಗವಿದ ಕೆಲಸಾರಿರಲು ನಿಮ್ಮಳಿಪೆ ನಿರಾರಲು | ಬಾರದಧಿಕೃತ ಪೂರ್ವದತ್ತವನೆಂದಳಾಸತಿಗೆ ||೩೬|| ಹುಟ್ಟಿದುದು ಬಳಿಕಾಕೆಗೆ ಕರೆ | ಗಟ್ಟಿತಗ್ಗದಸೂಯೆ ಮನಕಳ | ವಟ್ಟುದಾಕಾಂಕ್ಷೆಯಲಿ ರಾಜ್ಯಶ್ರೀನಿತಂಬಿನಿಯ || ನೆಟ್ಟನೇಹವ ಲವಳನುಡಿಗೊಡ | ಬಟ್ಟಳೈ ಕುಶಕೇಳು ಮಾಯೆಯ | ಕಟ್ಟಿಗೊಳಗಾಗದವರ ದಾರಥವಾದಿ ದೇವರಲಿ ||೩೭|| ಕರೆದು ಬಳಿಕೇಕಾಂತಕೈದಾ | ದರಿಸಿ ಬೆಸಗೊಂಡಳು ನಯೋಕ್ತಿಯ | ಲರಸುತನ ಭರತಂಗೆ ಶೇರುವುಪಾಯವೇನೆಂದು || ಅರಿದಿದೇನೆಲೆ ದೇವಿ ನೃಪ ಕೊ | ಟ್ಟಿರಡು ವರವುಂಟಾದಿಯಲಿ ಬೇ | ಡರಸನನು ನಿನಗಿದುವೆ ಪಥಕೇಳಖಿಳಸಂಪದದ ||೩೮|| ಧರೆಯ ಭರತಂಗವನಿಜೇಶಂ | ಗರವರಿಸದಾರಣ್ಯವನು ಬೇ | ಡೆರಡು ವರವಿವು ಸಫಲವಾದುದು ನಿನ್ನ ಭಾಗ್ಯದಲಿ || ಪರಮ ಮತವಿದು ಪಲ್ಲಟಿಸಬೇ | ಡರಸಿಕೇಳೈಶ್ವರ್ಯಪದವಿಗೆ | ಪರಮಸಾಧನವೆಂದು ಮಂದರೆ ನುಡಿದಳಾಸತಿಗೆ || ೩೯ || ಮುಸುಕಿದಳು ಮಾಯಾವಿಲಾಸದ | ವಸನದಲಿ ಮಾಯಾನಿತಂಬಿನಿ | ಮಿಸುಕದಂತಿರೆ ಕೇಳಿದೈ ಕಾಕುಸ್ಥ ನೃಪಸೂನು || ಪಿಸುಣರಿಂದಾಶ್ವೈಶ್ವರಿಯಜಾ | ಳಿಸದು ಜಗದಲಸೂಯದಧಿಕ | ವ್ಯಸನದಲಿ ಮನವಿಕ್ಕಿದಳು ಮಾನಿನಿ ಮಹೀತಳಕೆ |೪೦|| ಸಡಿಲಿಸಿದಳು ದುಕೂಲವನು ತೊಂ | ಡೊಡವೆಗಳ ಮಲಿನಾಂಬರವ ನವೆ| ವಡಿಸಿದಳು ಬಿಚ್ಚಿದಳು ಸೌಗಂಧಿಕದ ಸಿರಿಮುಡಿಯ || ಝಡಿತೆಯಲಿ ನೆಲಿವಾಸಿನಲಿ ಸ್ವೈ | ಗೆಡದು ಸುಯ್ಯುತ ಶೂನ್ಯಹರುಷದ | ತೊಡಕಿನಲಿ ತಾಂಬೂಲವನು ತೊರೆದಿರ್ದಳಾಕೈಕೆ ||೪೧|| ಭಾವೆಯರು ಬಳಿಸಲಿಸೆ ಖತಿಯಲಿ | ಸೀವರಿಸುವಳು ಮಜ್ಜನಕೆ ವೈ | ಸೋಕಿಸಳು ಸೊಗಸಳು ಸುಭೋಜನ ಗಂಧಮಾಲ್ಯದಲಿ || ದೇವ ತೊರವೆಯ ನರಹರಿಗೆ ಭೂ | ದೇವಿ ಶೇರದಪಾಯವನು ನಾ | ನಾ ವಿಚಾರದಿ ನೆನಹುತಿರ್ದಳು ಮನದೊಳಗೆ ಕೈಕೆ || ||೪೨||

ಮೊದಲನೆಯ ಸಂಧಿ ಸಮಾಪ್ತಂ.

ಎರಡನೆಯ ಸಂಧಿ.

ಸೂಚನೆ|| ಕೈಕೆಯನುಮತದಿಂದಲಾ ಲೋ | ಕೈಕವೀರನುದಾರಧೀರ ರ | ಣೈಕಸಾಹಸಿ ರಾಮ ವನವಾಸವನು ಕೈಕೊಂಡ ||

ಪದ್ಯ|| ಕೇಳಿದೈ ಕುಶ ದಶರಥ ಕ್ಷಿತಿ | ಪಾಲನಾದಿನ ದಿರುಳು ಬಂದನು | ಮೇಳದಬಲಾಜನಸಹಿತ ಭರತಾಂಬಿಕೆಯ ಮನೆಗೆ || ಆಳಿಯರು ಕೆಲಸಾರಿದರು ಭೂ | ಪಾಲಕನ ಬರವಿನಲಿ ನೃಪ ಶಯ | ನಾಲಯವ ಸಾರಿದನು ಸುನಮ್ರಾನದ ಸಘಾಡದಲಿ ||೧|| ಲಲನೆಯಿದ್ದಳು ಮಲಿನಮಯ ಪು | ತ್ಥಳಿಯವೊಲು ಹೇಮಂತಕಾಲದ | ನಳಿನಿಯಂತೆ ನಿದಾಘವೇಳೆಲತೆಯಂತೆ ರಾಹುವಿನ || ಎಳತಟದ ಶಶಿರೇಖೆಯಂ ತು | ಜ್ವಲತೆಗುಂದಿದ ಮುಖದಕಾಂತಿಯ | ಹಳಹಳಿಕೆಗೊಳಗಾದ ಕೈಕೆಯ ಕಂಡನಾಭೂಪ ||೨|| ಅರಸನುಡಿ ಸಿದನೇನಿದೇ ಸ | ಚ್ಚರಿ ಮಹಾಮಾಂಗಲ್ಯಮಾನಿನಿ | ವಿರಸವೆಲ್ಲಿಯದಾದುದಶುಭಾ

ಕಾರ ನಿನಗೆನುತ ॥ ಕರಸರೋಜದಿನಂಗನೆಯ ಮುಖ ಸರಸಿಜವನಭಿಮುಖವ ಮಾಡಿದು । ತರುಣಿ ದುಗುಡವಿದೇನು ಹೇಳೆನ್ನಾಣೆ ಹೇಳೆಂದ ॥ ೩ ॥ ಆರು ಮುನಿದರು ನಿನಗೆ ನಿನ್ನ ಮ । ನೋರಥಾಮರಕುಜಕೆ ಕಠಿಣ ಕು । ಠಾರರಾದವರಾರು ನುಡಿ ನೀ ನಂಜಬೇಡೆನುತ ॥ ನಾರಿ ಮಂಚವ ನಿಳಿಯೊಳೊರಗದ । ನಾರಿಮನು ಬಸೆಳದು ನೃಪ ಲಲಿ । ತೋರುಯುಗದಿಂದುಗುರಿಸಿದ ನಳಿದಳಕ ಪಂಙ್ತಿಗಳ ॥೪॥ ಮನದ ಬಯಕೆಯ ದೇನು ಹೇಳದ । ನಿನಗೆ ಸಲಿಸುವೆ ನಂಜಿಕೆಯ ಬಿ । ಟ್ಟೆನುಸಿರು ನಿನ್ನಿಷ್ಟವಾವುದ ಕೊಟ್ಟೆನದ ಬೇಡು ॥ ತನುಜ ರಾಘವನಾಣೆಯೆನೆ ಮೆ । ಲ್ಲನೆ ಮುಖೇಂದುವ ಮುರಿದು ನೃಪನಾ । ನನವ ನೀಕ್ಷಿಸುತಬಲೆ ನಗುತಿಂತೆಂದಳರಸಂಗೆ ॥೫॥ ಕೊಡ ಸಮರ್ಥನೆ ಬೇಡಿದುದ ನೀ । ವ್ನುಡಿದು ತಪ್ಪುವರಲ್ಲಲೇ ಬಾ । ಯ್ಬಡಿಕೆ ಯಿವಳೆಂದೆನ್ನಿರಲಿ ನೋವಿಲ್ಲಲೇ ಮನಕೆ ॥ ಯಡಬಲಕೆ ಮನವಿಕ್ಕಿರಲೆ ತಾ । ನುಡಿದ ನುಡಿಯನು ಸಲಿಸುವುದು ನೆರೆ । ವ್ರಥವೆಯೆನೆ ದೃಢವೆನುತ ಕೊಟ್ಟನು ಸತಿಗೆ ನಂಬುಗೆಯ ॥೬॥ ಹಿಂದೆ ನೀವೆನಗಿತ್ತ ವರವೆರ । ಡಂದವನು ನೀವ್ಬಲ್ಲಿರೇ ಸಂ । ಕ್ರಂದನನ ಶಂಬರನ ಸಮರದ ಸೋಲುಗೆಲವಿನಲಿ ॥ ಯಿಂದಡೆಂದನು ಬಲ್ಲೆ ಬೇಡೆನ । ಲೊಂದು ವರದಲಿ ಧರೆಯ ಭರತಂ । ಗೊಂದರಲಿ ಬೇಡಿದಳು ರಾಮಂಗಡವಿಯೊಡೆತನವ ॥ ೭ ॥ ವನಿತೆಯುತ್ತರದಲಗು ನಾಟಿತು । ಜನಪನುರವನು ಬಿಗಿದು ಬೆನ್ನಲಿ । ಮನದ ಮರುಕದಲೊರಗಿದನು ಹಾಯೆಂದು ಹಮ್ಮೈಸಿ ॥ ತನುವ ತುಂಬಿತು ಶೋಕತಾಪದ । ಘನತೆಯಲಿ ಗರುವಾಯಿಗೆಟ್ಟೊಗ । ವನಿಯ ನಯನಜಲಂಗಳಲಿ ನೂಕಿದನು ಯಾಮಿನಿಯ ॥೮॥ ನರಚರಿತ್ರದ ರಾಮ ದಶಕಂ । ಧರನ ವಧೆಗುದ್ಯುಕ್ತನಹನೆಂ । ಬುರುತರೋತ್ಸವವರಿದು ಶಚಿ ಸುರಪತಿಯ ನೇಮದಲಿ ॥ ಇರುಳಿನಗ್ರದ ಲಮಲಮಣಿ ಬಂ । ಧುರದ ಪೊಂದುಳಿಗೆಯ ನಿವಾಳಿಯ । ಧರಿಸಿದಳೊ ದರಹಾಸಮಿಗೆಲೆನಲೆಸದುದಿನಬಿಂಬ ॥ ೯ ॥ ಹರೆದುದೀನೃಪ ಚಕ್ರವರ್ತಿಯ । ಹರುಷಕಂಟಿತವಾರ್ತೆ ನಗರದ । ಲರಸಿ ಕೌಸಲೆ ರಾಮ ಸೌಮಿತ್ರಿಯರು ಹೊರತಾಗಿ ॥ ಹಿರಿದು ಮನದಲಿ ಮರುಗಿ ಮಂತ್ರಿಗ । ಳರಮನೆಗೆ ನಡೆತಂದು ಮೈತ್ರಾ । ವರುಣಿಯಲಿ ಮಾಡಿದರು ಮಂತ್ರಾಲೋಚನೆಯ ಹದನ ॥೧೦॥ ಧರಣಿಪನ ಕೈಕೆಯ ವಿವಾದದ । ಭರವ ಸುದ್ದಿಯ ಬಾಲಮೂತರಿ । ನರಿದು ಮರುಗಿದರಿವರು ಪಾಣಿಶ್ರೋತ್ರ ಬಂಧದಲಿ ॥ ಹರಮಹಾದೇವೆನುತ ನಯನದ । ಲುರುಳುವಂಬಕವಾರಿ ಬಿಂದುವ । ಬೆರಳಕೊನೆಯಲಿ ಮಿಡಿದು ಮಿಡುಕಿದರಧಿಕ ಶೋಕದಲಿ ॥೧೧॥ ಏನುಪಾಯವು ನಿಮ್ಮ ಮತವನು । ಮಾನನಾವುದದಕೆ ಯೋಚನೆ । ಗೇನು ಹದನನು ಕಂಡಿರೆಂದವರೊಬ್ಬರೊಬ್ಬರಲಿ । ಹೀನವಿದು ಮಧ್ಯಮವಿದುತ್ತಮ । ಸಾನುಮತವಿವು ಸಾಕು ನಮ್ಮನು । ಮಾನವೆಂದಿಂತೆಂದು ನಿಶ್ಚೈಸಿದರು ನಿಜಮತವ ॥ ೧೨ ॥ ಕರಸಿ ರಾಮನ ನೀನೃಪನ ಮುಂ । ದಿರಿಸಿ ನೋಡುವರವರ ಚಿತ್ತದ । ಹರಕುಗಳ ಬಳಿಕರಿವರೆಂದುತ್ಸಾಹಭೇರಿಗಳ ॥ ಅರಮನೆಯ ಲೊದರಿಸಿದರಡಗಿಸಿ । ದರು ಪುರದವಾರ್ತೆಯನು ನೆರಹಿದ । ರರಸುಗಳ ನಿಖಿಳಾಪ್ತ ಸಚಿವ ನಿಯೋಗಿ ಪರಿಜನವ ॥೧೩॥ ಕುಶನೆ ಕೇಳ್ಪಟ್ಟಾಭಿಷೇಕದ । ನಶತಿ ಶೃಂಗಾರಿಸಿತು ನೆರೆದವು । ಹೊಸಪರಿಯ ನೃಪಲಾಂಛನಾದಿ ಸಮಸ್ತವಸ್ತುಚಯ ॥ ವಸಗೆ ತತ್ಪುರವರದ ನವಲಾ । ಬಿಸಿತು ನಿಮಿಷದಲಾ ಸುಮಂತ್ರನ ।

ದಶರಥನ ಬಳಿಗಟ್ಟಿ ರಾಮನ ಬಳಿಗೆ ಮುನಿಬಂದ ॥ ೧೪ ॥ ಬಂದ ಮುನಿಪನ ಭಕ್ತಿ
ಪೂರ್ವಕ | ದಿಂದ ಸತ್ಕರಿಸಿದನೆಲ್ಲೈ ರಘು | ನಂದನನು ವಿಧಿವಿಂತ ಗುರುಪೂಜಾವಿಧಾನ
ದಲಿ | ಎಂದನಾಮುನಿಪತಿಗೆ ಕಂಡೆ ನಿ | ದೊಂದು ಕನಸನು ಕಾನನದೊಳರ | ವಿಂದ
ಮುಖಿ ಸಹಿತೆಮಗೆ ಸಂಘನಿಸಿತು ಪರಿಭ್ರಮಣ ॥೧೫॥ ಕಂದೆರದೆನನಿತರಲಿ ಮನಕಿದು
ಚಂದವಾಗಿರದೇನು ನೀವೇ | ನೆಂದು ಕಂಡಿರಿ ರಾಜ್ಯಸಂಪದದಾಗನುಷ್ಠಿತಿಗೆ ॥ ಮುಂದೆ
ನಲು ಮುನಿನಾಥ ಮಗುಳಿಂ | ತೆಂದನಾಯುಸತೋರಿ ಬಳಿಕ ಪು | ರಂದರನ ವೈಭವದ
ಸರಿಸಿರಿಯಹುದು ನಿನಗೆಂದ ॥೧೬॥ ನಿಮ್ಮ ಕರುಣಾಕಟಾಕ್ಷ ರಕ್ಷಣೆ | ನಮ್ಮ ಮೇಲಿರಲಾ
ವದ ಘಟ | ವೆಮ್ಮ ಮಾಡುವುದೇನು ನಾವ್ನಿರ್ದ್ವೇವರೇಯೆನುತ ॥ ಬೊಮ್ಮಕೋಟ
ಕಿರೀಟಮಂಡಿತ | ನಿರ್ಮಲಾಂಘ್ರಿನಖಪ್ರಭಾಕರ । ನುಮ್ಮಹದೊಳೆಸಗಿದನು ನರಸ
ವೊಲಾ ಮುನೀಂದ್ರಂಗೆ ॥ ೧೭ ॥ ಅರಸನಾಗಧಿರಾಜನಾಗೂ | ರ್ವರೆಗೆ ಪತಿಯಾಖಿಳ
ಸೂನೃತ | ಚರಿತನಾಗಿ ವಿಜಯನಾಗು ಸಮಸ್ತ ಸುಜನರಿಗೆ ॥ ಸುರಮಹೀರುಹನಾಗು
ಲಕ್ಷ್ಮೀ | ವರನವೊಲು ಸದ್ಗುಣ್ಯಸಕಲೈ | ಶ್ವರಿಯಯುತನಾಗೆಂದು ಮುನಿ ಹರಿಸಿದನು
ಹರುಷದಲಿ॥೧೮॥ ಬಿಸರುಹಪ್ರಿಯಕುಲದ ಮುನಿ ವಾ | ನಸಸರೋವರ ರಾಜಹಂಸನ|
ನೊಸೆದು ಮಂಗಳಮಜ್ಜನವ ಮಾಡಿಸಿದನಾ ಮುನಿಪ ॥ ವಸಗೆವರೆ ಭುಲ್ಲೈಸೆನೂತನ|
ವಸನ ದಿವ್ಯ ವಿಭೂಷಣಂಗಳೊ | ಳೆಸದನ್ಯ ಮೂರ್ಧಾಭಿಷೇಕದ ರಾಜತೇಜದಲಿ॥೧೯॥
ಮಾಡಿದನು ಮನದಣಿಯೆ ದಕ್ಷಿಣೆ | ಗೂಡಿ ಕನ್ಯಾಧೇನು ದಾನವ | ನಾಡಲೇನದ ನವನಿ
ಮಮರರ ಸಿರಿಯ ಪಡಗರವ ॥ ಝಾಡಿವೆಳಗಿನ ಲಾರತಿಗಳಿಡೆ| ಯಾಡಿದವು ಕಳಕಳಕೆ
ಮಿಗೆ ಮುಂ | ದಾಡಿದವು ಕಂಬಿಗಳು ಕಂಚುಕಿ ಜನದ ಕೈಗಳಲಿ ॥೨೦॥ ಕ್ಷಿತಿಯ ವಿಬು
ಧರ ವಿಮಳ ಮಂತ್ರಾ | ಕ್ಷತೆಯ ಕೈಕೊಳುತಡರಿದನು ನಿಜ | ಸತಿಸಹಿತ ಹೊಂಗದ್ದು
ಗೆಯ ಹೊಂಬೆಸವರಂಜೆಯದ ॥ ರತುನಲಹರಿಯ ಲಳಿಯ ಭದ್ರಾ ಯುತ ಮತಂಗಜ
ಕಂಧರದಿ ಮುನಿ | ಪತಿಯನುಜ್ಞೆಯ ಲಖಿಳತೂರ್ಯತ್ರಯದ ರಭಸದಲಿ ॥೨೧॥ ಬಳಸಿ
ದುದು ನರಪಾಲತತಿ ಹೆ | ಕ್ಕಳಿಸಿದುದು ಚತುರಂಗಬಲ ವೆಡ | ಬಲದಲುಘ್ಘಡಿಸಿದರು
ಕೈವಾರಿಗಳು ಬಿರುದುಗಳ ॥ ನಿಳಯನಿಳಯದ ನಳಿನಮುಖಿಯರ | ಹೊಳೆವ ರತ್ನಾ
ವಳಿಯ ದೀಪಾ | ವಳಿಯ ಸಂಭ್ರಮದಿಂದ ಬಂದನು ರಾಜಬೀದಿಯಲಿ ॥೨೨॥ ತಳಿತ
ಪಲ್ಲವ ಪಲ್ಲವವನು | ಜ್ವಲಿಪ ಹರ್ಮ್ಯಾಳಿಗಳ ಚಿತ್ರಾ | ಚಲದನಮರ್ದಮರಾವಳಿಯ
ಶಿಖಿಶುಕಪಿಕವ್ರಜದ॥ ಬಲುಹು ವಿಪಿನವಿಹಂಗಮದ ಕ | ಟ್ಟಲುಹು ಸೂಚಿಸುತಿರ್ದುದೈ
ವನ | ವಿಳಸದಭಿನವರಾಜಪದವಿಯ ನವನಿಜಾಪತಿಗೆ ॥೨೩॥ ಕದಡಿದಂತಃಕರಣಗಳ
ಗದ | ಗದಿತ ಕಂಠದ ಕಂಬನಿಯ ಲಿ | ದ್ದುದು ಸಮಸ್ತಚಮೂಪ ಸಚಿವ ನಿಯೋಗಿ
ಬಂಧುಜನ॥ ಇದಿರುವಂದು ಸುಮಂತ್ರನಿಳೆ ಗಿಳು | ಹಿದನು ಮದಕರಿಯಿಂದ ಮುರಿವಿನ|
ಮುದದ ಹೊಳವಶ್ರುಗಳ ಸಂತಾಪದಲಿ ರಘುಪತಿಯ॥೨೪॥ ತೆವರುದೊದ್ದೆಯ ಹೊಗಿಸ
ಬೇಡುಳಿ | ದವರ ನೆಂದೊಳಹೊಗುತ ನೇಮುವ | ನವಸರದ ಸೇವಕರಿಗಿತ್ತು ವಸಿಷ
ಮುನಿ ಸಹಿತ ॥ ಅವನಿತನುಜಾಪತಿಗೆ ಕೈಗೊ | ಟ್ಟವನಿಪನ ಬಳಿಗಾಗಿ ಕೈಕೆಯ
ಭವನಸಕತ್ರಲು ತಿರುಗಿದನು ಮಂತ್ರೀಶ ದುಗುಡದಲಿ ॥೨೫॥ ಯುವತಿಯರ ಗುಜುಗುಜಿನ
ಶೂನ್ಯೋ | ತ್ಸವದ ನೃಪಮಂದಿರಸ ಜಾಡ್ಯದ | ಜವನಿಕೆಯ ಜಂಜಡಸ ಕಾಣುತ ನುಡಿಪ

ನಿಂತೆಂದು ॥ ಅವನಿ ನಮಗೆ ಅಸಾಧ್ಯವೆಂಬೀ । ನ್ನೃಪಕರಣೆ ಗೋಚರಿಸುತಿದೆ ಸಂ।
ಭವಿಸಲುತ್ತರ ವೆಂದನಾರಘುಪತಿ ಸುಮಂತ್ರಂಗೆ ॥ ೨೬ ॥ ಹೃದಯ ಕಳವಳಿಸಿದುದು
ಕಂಗಳ । ಹೊದಸಿದವು ನಯನಾಂಬುಮರುವಾ । ತುದಿಸದೊಯ್ಯನೆ ಬಾಗಿದನು
ಮಂತ್ರೀಶ ಮಸ್ತಕವ ॥ ಬೆದರಿದನು ರಘುಪತಿ ಸುಮಂತ್ರನ । ವದನಚೇಷ್ಟೆಯ
ಕಂಡು ತಂದೆಯ । ಹದನದೇನೆಂದರಸನಿದ್ದೆಡೆಗಾಗಿ ನಡೆತಂದ ॥ ೨೭ ॥ ವಿತತಗಳಿತಾ
ಶ್ರುಪ್ರಕರವೂ । ರಿತ ನಿಮೀಲಿತನೇತ್ರನಿರ್ಗತ । ಗತವಚೋವಿಹ್ವಲನ ಶೋಕೋ
ದ್ರೇಕಪರವಶನ ॥ ಸತಿಯ ಕರ್ಕಶ ಕಲುಷವಾಗಸಿ । ಹತಿನಿರೋಧಿತ ಹೃದಯ
ಬಾಧಾ । ನ್ವಿತನ ಕಾಣುತ ಕೈಯ್ಯಕದಪಿನಲಿರ್ದನಾರಾಮ ॥ ೨೮ ॥ ಆ ಸಮಯದಲಿ
ಮನಮರುಗಿ ಮಂ । ತ್ರೀಶನೊಯ್ಯನೆ ರಾಜರಾಜಾ । ಧೀಶನನು ನುಡಿಸಿದನು ಮಧುರ
ವಚೋವಿಲಾಸದಲಿ ॥ ಈಸುನಿರ್ಬಂಧದನಿರೋಧ । ಕ್ಲೇಶವಾರಿಂದೇನುಕಾರಣ ।
ವಾಸವಾಮದು ದೇವರಂಗದ ಲೆಂದನಾಮಂತ್ರಿ ॥ ೨೯ ॥ ತರಣಿವಂಶದ ಸಾರ್ವಭೌ
ಮರಿ । ಗೆರವಲಾ ದುಶ್ಚಿತ್ತ ಮಿನಕುಲ । ದರಸುಗಳಿಗೆ ವಿಷಾದವದು ತಾಸುಪ್ರಸಿದ್ಧ
ವಲೆ ॥ ಅರಿವಿಜಯ ವೀರರಿಗೆ ಚಿಂತಾ । ಸ್ಫುರಿಶವುಂಟೇ ಜೀಯಯೋಗೊ । ತ್ತರುಷ
ರಿಗೆ ದೇಹವ್ಯಥೆಯದೇಕೆಂದು ಬೆಸಗೊಂಡ ॥ ೩೦ ॥ ಆ ಮಧುರವಚನದ ವಿಳಾಸೋ।
ದ್ದಾಮಗಾರುಡಮಂತ್ರವೆಬ್ಬಿಸಿ । ತಾಮಹಾದುಷ್ಟಾಂಗನಾರಸನಾಹಿದಂಷ್ಟ್ರನನು ॥
ರಾಮನೇ ಬಂದಾತ ಜಗದಭಿ । ರಾಮನೇ ನುಡಿವಾತ ಮಂಗಳ । ನಾಮನೇ ಯೆಂದಪ್ಪಿ
ವನು ಮಗನೆಂದು ದಳಪತಿಯ ॥ ೩೧ ॥ ಜೀಯ ನಾನು ಸುಮಂತ್ರಕನು ರಘು । ರಾಮ
ನಭಿಷೇಚನದರಾಜ್ಯ । ಶ್ರೀಯುಪರಿಣಯಕಾವ್ಯದಭಿಮತ ನಿಮ್ಮ ಚಿತ್ತದಲಿ ॥ ರಾಯತನ
ವಭಿಮುಖದ ಕಮಲದ । ಛಾಯತಾಂಬಕ ಬಂದಿಹನೆ ಮುನಿ । ರಾಯನೈತಂದಿಹನೆ
ನೇಮವದೇನು ತನಗೆಂದ ॥ ೩೨ ॥ ಮಗನೆಬಂದ್ಯೆ ಇನಕುಲಾಂಬರ । ಗಗನಮಣಿ
ಬಂದ್ಯೆ ಮನೋರಥ । ಸುಗುಣಬಂದ್ಯೆ ಸೂನೃತವ್ರತ ಬಂದೆಯ್ಯೆಯೆನುತ ॥ ಮೊಗುವ
ನಮನೋದಕದಲರೆದಿ । ಟ್ಟಿಗಳ ನೋಟದಲಪ್ಪಿ ಸತ್ಯದ । ತಗಹಿನವನೀನಾಥನಾ
ರಘುನಾಥಗಿಂತೆಂದ ॥ ೩೩ ॥ ಕಂದಕೇಳೆನ್ನಣುಗ ಕೇಳಾ । ನೊಂದುನೆನದರೆ ದೈವತಾ
ಚೇ । ರೊಂದು ನೆನೆದುದು ದೈವಗತಿಗೀಕೈಕಯನು ಸಾರಿ ॥ ಎಂದ ಮೇಲುತ್ತರಕ್ಕೆ
ನಾಲಿಗೆ । ಬಂದುಬಂದೊಳಸರಿದು ಮೆಲ್ಲನೆ । ನಿಂದುಬಳಿಕೀ ಮಾತನೆಂದನು ಕಲಿಸು
ಮಂತ್ರಂಗೆ ॥ ೩೪ ॥ ಈಸುದಿನ ಪರಿಯಂತ ವಿಭವದ । ವಾಸ ಸೊಬಗಿನಸಜ್ಜೆ ಸುಖ
ದಸು । ದೇಶ ಸುಮಾನ್ಯದ ಸುಧಾಂಬುಧಿ ಸಿರಿಯ ನೆಲೆವೀಡು ॥ ಲೇಸಿನಾಗರ ಶುಭದ
ಬಹಳಿತ । ಕೋಶ ಸಂತಸದಿಕ್ಕೆ ಸೊಂಪಿನ । ವಾಸವಾಗಿರ್ದುದು ನಿವಾಸವಿದೆಂದನಾ
ಭೂಪ ॥ ೩೫ ॥ ಅಶುಭನಾಡುಂಬೊಲನು ಕುಹಕನ । ವಿಸರ ಚಿಂತೆಯಸಂತೆ ದುಃಖದ ।
ವಸತಿ ಮುಗುಡದಬೀಡು ದುಮ್ಮಾನದ ಜನಸ್ಥಾನ ॥ ಅಸುಖದಾರವೆ ಭೀದವುದಿನಾ ।
ಯಸಪದಜಾಳಿಗೆ ಜವನಮನೆ ರಕ್ಕಸಿಯಮಠವಾಯ್ತೆಂದು ಭವನವಿದೆಂದನಾಭೂಪ ॥ ೩೬ ॥
ನರಪತಿಗಳೊಳು ಭಾಗ್ಯದಲಿಬಾ । ಹಿರರಲಾ ನಾವಿಂದು ಸುಕೃತವೊ । ಳಕೆಗೆಲಸಿಗಳು
ನಾವಲೇ ಹರಹರ ಮಹಾದೇವ ॥ ಪರಮಹರುಷದ್ರುಮದಬೇರಿಂ । ಗುರಿಯನುರಿ
ಚಾಚಿದೆ ನಲಾ ಕಡು । ದುರಿತ ಕಾಪುರು ನಾವಲೇ ಯೆಂದನು ಮಹೀಪಾಲ ॥ ೩೭ ॥

ಹೇಳಿಫಲವೇನೆಲೆ ಸುಮಂತ್ರಕ । ಮೇಲನರಿಯದೆ ಕೊಟ್ಟೆನೀಘಾ । ತುಕಳಿಗಸುರಾಮರ
ಸಂಗ್ರಾಮದಲಿ ವರವೆರಡ ॥ ಬಾಚಾಚಿವಳಿವಳೆನಗೆ ಗೋ । ನಾಳಿಗೊಡ್ಡಿದ
ಬಂವಿಸಿತುದೀ । ನಾಲಿಗೆಗೆ ನರಸುಖಸಿಕ್ಕಿದಳಿವಳು ತನಗೆಂದ ॥ ೩೮ ॥ ಬಟ್ಟೆಗುತ್ತಿರ
ವಿದ್ಯೆವಿವರಿಗೆ । ಕೊಟ್ಟರುಂಟೆಲೆಮಂತ್ರಿ ಕೇಳ್ಮನ । ಮುಟ್ಟಿಸಡಿಯಲಿ ಭಾವಿಸದೆ
ಸದ್ವರ್ಗಮಾರ್ಗದಲಿ ॥ ಕೊಟ್ಟವರವೆರಡುಂಟು ಬೇಡಲಿ । ಕೊಟ್ಟರವರಿಂದೀಗ ಹೋದ
ಕುಳಿ । ಗುಟ್ಟುತಿಹರಿದನರಿಯೆ ನೀಕೇಳೆಂದಳಾಕೈಕೆ ॥ ೩೯ ॥ ಬಂದುದೆನಗಪಕೀರ್ತಿ
ರಾಜ್ಯದ । ನೊಂದು ವರದಲಿ ಬೇಡಿದೆನು ನಿಜ । ನಂದನಂ ಗೊಂದರಲಿ ರಾಮಂಗಡವಿ
ಯೊಡೆತನವ ॥ ಇಂದುಮುಖಿಯರ ಸಾಕ್ಷಿಯಲಿ ಪೊದ । ಲೊಂದಿಸಿದರೆನಗೀವರವ
ನೀವು । ಬಂದಬಳಿಕನುಮಾನವಾಗಿದೆ ನಿಮ್ಮರಾಯರಿಗೆ ॥ ೪೦ ॥ ಮನುಕುಲದ
ರಾಯರಲಿ ಹುಸಿಸಂ । ಜನಿಸದೆಂದೊಳಗರಿಯದೆನ್ನಯ । ತನುಜಗಧಿರಾಜತ್ವವನು
ಬೇಡಿದೆನು ನಿಮ್ಮವರ । ನಿನಿತು ಸತ್ಯಕೆ ಮರಳದಲೆಯಿರ । ಲೆನಗದೊಡ್ಡಿತ್ತೆ ಸಾಕು
ರಘುನಂ । ದನಗೆ ಪಟ್ಟವಕಟ್ಟಿ ನೀವ್ನೆರಹೆಂದಳಾಕೈಕೆ ॥ ೪೧ ॥ ಈತನೇನು ದಧೀಚಿ
ಶಿಬಿಜೀ । ಮೂತವಾಹನಬಲಿಕಪೋತಾ । ಖ್ಯಾತರೊಳಗಗ್ಗಳನೆ ಬೇಡಿದಡೀವರವವ
ನಿಜಲಿ ॥ ಮಾತದೇಕೆಲೆ ಮಂತ್ರಿಸಾಕಿಂ । ನೀತಕವನಿಯ ಬಯಕೆ ರಘುಸಂ । ಜಾತ
ಗಭಿಷೇಕವನು ಮಾಡಲಿಕೆಬ್ಬಿಸವನಿಪನ ॥ ೪೨ ॥ ದೊಡ್ಡಿತೇ ಕ್ಷತ್ರಿಯರಿಗೀಕಡು ।
ಖಡ್ಡತನವಿರಬೇಕು ರಾಮ । ಗೊಡ್ಡಿದೀಕವದೊಂದು ತಪ್ಪಿಸಿ ನೆನೆದ ಮತಿಲೇಸು ॥
ಒಡ್ಡಿಡಿದುದಪಕೀರ್ತಿವಧು ಸಲೆ । ದೊಡ್ಡದರು ರಘುಸಗರರವರೊಳ । ಗಡ್ಡನಗೆ
ಹೊಗದಂತೆ ಮಾಡುವದುಚಿತ ನಿಮಗಿಂದು ॥ ೪೩ ॥ ಸುತವಿಯೋಗದಲಳಿಯದಿರಲೀ ।
ಕ್ಷಿತಿಪ ನೀವಿಂದುಗ್ರಪಾತಿ । ವ್ರತೆಯರೊಳಗಗ್ಗಳರು ನಿಮ್ಮನು ನೆಮ್ಮಗಪಕೀರ್ತಿ ॥
ಕ್ಷಿತಿಯ ಕುಜನರ ಜಿಹ್ವೆಕಡಕೂ । ಡಿದನರ್ಥದಿನವನಿಪಾಲ । ಚ್ಯುತಿಗೆ ಮನವನು
ಮಾಡುವುದು ನಿಮಗುಚಿತವಲ್ಲೆಂದ ॥ ೪೪ ॥ ಇರಲಿ ನಿಮ್ಮಕುಮಾರನೀಧರೆ । ಯರಸು
ತನದಲಿ ರಾಘವೇಶ್ವರ । ನಿರಲಿ ಘಸ್ಸರನಾಗಿ ರಾಜಋಷಿತ್ವದಲಿ ಬಳಿಕ ॥ ಇರಲಿ
ರಘುಪತಿ ನಿಮಗೆ ಮೆರೆವುದು । ಧರೆಯ ಸಿರಿ ಮನ್ವಾದಿ ರಾಯರ । ತರುಣಿಯರು ನಗ
ದಂತೆ ಮಾಡುವದುಚಿತನಿಮಗೆಂದ ॥ ೪೫ ॥ ಬೇಡಿದೀವರದಿಂದ ನೃಪತಿಯ । ಕೂಡಿ
ಕೊಂಡು ವನಪ್ರವಾಸವ । ಮಾಡುವೆನು ಮರೆಯೇನು ಮನದನುತಾಪವಿನ್ನೇಕೆ ॥
ಜೋಡಿ ನಿಮಗಾಗದವೊಲೀನೃಪ । ನಾಡಿ ಹುಸಿಹೊಗದಂತೆ ಕೀರ್ತಿಯ । ಜೋಡಿಸು
ನಡಿದುಸಮಯ ವೆಂದು ಸುಮಂತ್ರ ಕೈಮುಗಿದ ॥ ೪೬ ॥ ಬಿಡು ಸುಮಂತ್ರ, ಕುಮಂತ್ರ
ಕೃತ್ಯವ । ನಡಿಸಬೇಡೆಮ್ಮೊಡನೆ ರಘುಗಳ । ಮಡದಿಯರು ನಗಲೆಮ್ಮನೆಮ್ಮಲಿಯಾದ
ದಪಕೀರ್ತಿ ॥ ಒಡರಿಸಲಿ ಪುನರುಕ್ತಿ ನಮ್ಮಯ । ನುಡಿಗೆ ಹೊಗದಾವ್ಬಲ್ಲೆ ವೀಜೊಂ ॥
ಜಡೆಯ ತನವನು ಕೆಲಕೆ ಸಾರೆಂದಳು ಸುಮಂತ್ರಕನ ॥ ೪೭ ॥ ಇದುಯಥಾರ್ಥ
ಸುಮಂತ್ರ ನೀನಾ । ಡಿದಸೆಭಾಷಿತವೆಂದು ನಂಬಿಹು । ದದಕೆ ಹೊರೆಹೊಗದಂತೆ
ನಡಸುವೆನೆಂದು ಮುನಿ ನುಡಿಯೆ ॥ ಗದಿಯಬೇಡಿನ್ನಾತನಾಡಿದ । ತುದಿಯ ಕೊಸರನು
ನಿಮ್ಮರಾಯನ । ವದನದಲಿ ನುಡಿಹುಟ್ಟಲೆಂದಳು ಕೈಕೆ ಮುನಿಪತಿಗೆ ॥ ೪೮ ॥ ಐಸಲೇ
ನಿನೀ ಬೇಡಿದುದತಾ । ನೇನದೊಡ್ಡಿತು ತಂದೆಯಾಡಿದ । ಭಾಷೆಗಿದಕೋ ಭಾಷೆ

ಮನುಜಾ ಜನಸಿಗಾರಾಮ ‖ ಲೇಸುಮಾಡಿದರಸ್ಸೃತವೆಮ್ಮವ । ಸೀಶನಲಿ ಹೊಗದಂತೆ ಘಟದಲಿ । ಕಾಸದಿರಿ ಕಲ್ಮಷವನುಗಡ ನೃಪುದ ಭೂಷಣವ ‖ ೪೯ ‖ ಭರತನಾಳಲಿ ರಾಜ್ಯವನು ನೀನು । ನರಪತಿಯ ಚರಣಾರವಿಂದದ । ಪರಮ ಸೇವಾನಿರತರಾಗಿರಿ ನಿಮ್ಮನುಜ್ಞೆಯಲಿ ‖ ಚರಿಸುವೆನು ವನವಾಸವನು ಗೋ । ಚರಿಸುವೆನು ನೀನುಡಿದ ವರುಷದ । ಪರಿಗಣದ ಪರಿಯಂತವೆಂದನು ಕೈಕೆಗಾರಾಮ ‖ ೫೦ ‖ ಆಸತಿಯನುಪಚರಿಸಿ ಪಿತನಾ । ನ್ಯಾಸವನು ಶ್ರುತಿಧರ್ಮಶಾಸ್ತ್ರವಿ । ಶ್ವಾಸವಚನಾಲಾಪದಿಂದನುತಾಪವನು ಬಿಡಿಸಿ ‖ ಆ ಸಕಲಲೋಕೈಕ ಲೀಲಾ । ವಾಸ ತೊರವೆಯರಾಯನಾವನ । ವಾಸವನು ಕೈಕೊಂಡನಮರೇಂದ್ರಾದಿಗಳು ನಲಿಯೆ ‖ ‖ ೫೧ ‖

ಎರಡನೆಯ ಸಂಧಿ ಸಮಾಪ್ತಂ.

ಮೂರನೆಯ ಸಂಧಿ.

ಸೂಚನೆ‖ ಸುರಕದಂಬಕನಲಿಯೆ ರಜನೀ । ಚರಕದಂಬಕಕುಮುದರವಿಂದಶ್ರೀ ವನನಿಧನಕೆ ನಿಜಪುರವ ಹೊರವಂಟನಾರಾಮ ‖

ಪದ್ಯ‖ ಹರೆದುದೀವೃತ್ತಾಂತ ವಾನೃಪ । ನರಸಿಕೌಸಲೆಗೂಡಿ ಯೈಸೂ । ರರಸಿಯರ ಮನೆಗಳಲಿ ಮಗಧಾತ್ಮಜೆಯ ನಿಳಯದಲಿ ‖ ಶರನಿಧಿಯ ಸಲಿಲವನು ಮೊಗದು । ಬ್ಬರಿಸುವೌರ್ವಾನಲನವೊಲು ಕಾ । ಹುರದೊಳಂತಃಪುರದೊಳಿದ್ದುದು ಬಹಳ ಶೋಕಾಗ್ನಿ ‖ ೧ ‖ ಹಿಡಿದ ಕನ್ನಡಿಕಲಶಗಳ ನೆಲ । ಕೆಡುತ ಹೊಂವಳಿಗೆಯನಿವಾಳಿಯ । ಸೊಡರಸೂಸುತ ಬಿಸುಟು ದಧಿದೂರ್ವಾಕ್ಷತಾವಳಿಯ ‖ ಮುಡಿದಲರ ಕೆದರಿಕೆಯ ಕೇಶದ । ಸಡಲಿದುಡಿಗೆಯ ಕುಚದ ಸೆರಗಿನ । ಮಡದಿಯರ ಮಂದೆಯಲಿ ಬಂದಳು ಕೌಸಲಾದೇವಿ ‖ ೨ ‖ ಹರಸಿ ಹಡದೆನ ಮಗನನಡವಿಯ । ಗಿರಿಯ ಸೂರೆಗೆ ಘೋರವಿಪಿನಾಂ । ತರದ ಖಗಮೃಗರಾಜಧಾನಿಯ ರಾಜ್ಯ ಸಂಪದಕೆ ‖ ಗಿರಿಗುಹಾ ಕಟಕಂಗಳರಮನೆ । ಯರಸುತನಕಕಟಕಟ ಹಾಹಾ । ತರುಣ ಹಾ ಯೆನುತೈದಿದಳು ಬಾಯ್ಬಿಡುತ ಬಾಲಕನ ‖ ೩ ‖ ಅಕಟ ಕಲ್ಪಾನಲನ ಜಿಹ್ವಾ । ಪ್ರಕರಮುಬ್ಬರವಮಲತರ ಚಂ । ದ್ರಿಕೆಗೆ ಸೊಗಸೇಸಿಡಿಲಡವಿಗಿರಿ ಶಿಶುವಿಗನುನಯವೆ ‖ ಸಕಲದುರುವ್ಯಾಘ್ರ ಸೂಕರ । ವೃಕ ಮಹೋರಗ ಶರಭ ಸಿಂಹ । ಪ್ರಕರವನವೆನ್ನಣುಗಗುಚಿತವೆ ಯೆಂದಳಾ ಕಾಂತೆ ‖ ೪ ‖ ನೆರೆಮದಭ್ರದೊಳಗಜೆ ಭಾರತಿ । ವರಶಚೀ ಸತಿಮುಖ್ಯ ನಾನಾ । ಸುರವಧೂನಿಕುರುಂಬ ವಂಬಕಜಳದಝೂಡಿಯಲಿ ‖ ಕರದ ಕದಪಿನ ಭೇದದಂತಃ । ಕರಣದನುತಾಪದಲಿರಲು ಸರ । ಸರಿಸಿ ಬಂದಪ್ಪಿದಳು ಕೊರಳನು ಕಾಂತೆನಿಜಸುತನ ‖ ೫ ‖ ನಿಂದನೆಲ ನುಂಗುವಡೆ ಸುಳುಹಿನ । ಮಂದಮಾರುತಸುರುಹುವಡೆ ಪೂ । ರ್ಣೇಂದುಮಂಡಲ ಗರಳವುಯು ಕೌಮುದಿಯ ಕಾರುವಡೆ ‖ ಕಂದ ಕೇಳೈ ಬದುಕಬಹುದೇ । ತಂದೆನಿನಸಗೀಹದನನೆನವರೆ । ಬಿಂದುಗಳನವರಾರು ಸೇಳೆಂದಪ್ಪಿದಳು ಮಗನ ‖ ೬ ‖ ತ್ರಿಶನೆ ಕೇಳೀಚೆಯಲಿ ರಾಯನ । ವಸತಿಯಲಿ ರಾಮಂಗೆ ಕೈಕೆಯ । ದೆಸೆಯಲಾ ದೀನಾರ್ತಿ ಕೇಳಿಸಿತೂರ್ಮಿಳಾಪತಿಗೆ ‖ ಹಸಿದಹುಲಿಯಂದದೊಳು ಗ । ರ್ಜಿಸುವ

ಸಿಂಹವೊ ಹೆಡೆಗಳದನಿ | ಟ್ಟುಸಿರಿನುರಗನೊ ಮೇಣೆನಲು ಸೌಮಿತ್ರಿ ಹಲು ಮೊರೆದ ‖ ೭ ‖ ಹೊಗದುದಾನನವಕ್ಷಿ ಕಿಡಿಗಳ | ನುಗುಳಿದವು ಹೊಗೆಸುತ್ತಿ ಕುಡಿಮೀ | ಸೆಗಳು ಕೌಂದವವಂಗಕಾಹೇರಿದುದು ಹಡುಹಿನಲಿ ‖ ಬಿಗುಹುಗೊಂಡಪ್ಪಳಿಸಿದವು ಹು | ಬ್ಬುಗಳು ಹರಹರ ಹರ ಲಯಾಗ್ನಿಯು | ಮೊಗವಡದ ನುಗಿವಂತೆ ಬಹಳಿತ ರೌದ್ರಮುಖನಾದ ‖ ೮ ‖ ಬಗೆಯೆ ನೃಪ್ಯನ ಸಿನ್ನು ಕಷ್ಟದ | ಬಗೆದ ಕೈಕೆಯ ಕಾಳುತೊತ್ತಿರ | ಜಗಳದಲಿ ತೆಗ್ಗಿಸುವೆನು ಬಾಯನು ಭರತಗೀಪ್ಸಿತವ ‖ ಹೊಗಲಿರಿಯುಬಹುದಿನ್ನು ದಿಟ ಕೈ | ಮಿಗುವ ಪರಿಯನು ಕಾಣಬಹುದೆನು | ತಗಿವ ಹಲ್ಲಾಡಿನಲಿ ಹೊರವಂಟನು ನಿಜಾಲಯುವ ‖ ೯ ‖ ಉಕ್ಕಿದ ಕೋಪಾಗ್ನಿ ದಳ್ಳಿಸಿ | ದಿಕ್ಕುಗಳನಳ್ಳಿರಿಯೆ ಲಕ್ಷ್ಮಣ | ನೆಕ್ಕತುಳವಲಿ ಬಂದನಾಲಯು ಕಾಲದಲಿ ಜಗನ ‖ ಮುಕ್ಕಿನೋಡುವ ಮದನಹರನವೊ | ಲಿಕ್ಕಿಲದ ಸೇವಿಗರು ಕೆಲಬಲ | ಕೊಕ್ಕರಿಸಿದರು ಕೈಕೆ ಮರೆಹೊಕ್ಕಳು ಮಹೀಪತಿಯ ‖ ೧೦ ‖ ಧರಣಿಜೇಶನ ಮುಸುಕಿಕೊಂಡಿಹ | ಸೇವಿಗರ ಹ್ಯೊಹ್ಯೊಯೆನುತ ಸರ | ಸರಿಸಿ ಬಂದನು ರಾಘವೇಂದ್ರನ ಬಳಿಗೆ ಸೌಮಿತ್ರಿ ‖ ಮರುಳುತನ ನಿಮಗುಂಟೆ ಬಿಡಿ ಬೇ | ರರಸರುಂಟೇ ಧರೆಗೆನುತ ರಘು | ವರನ ಜನನಿಯು ಜರದು ಜಾನಕಿಯುರಸಗಿಂತೆಂದ ‖ ೧೧ ‖ ಅವನಿಪಗೆ ಮುಪ್ಪಿನಲಿ ಮುದುಗರ | ನವಚಿತೀಕೆಯ ತಲೆಯ ಪಿತ್ತದ | ಭವಣೆ ಬಲಿದುದು ಮುನಿ ವಸಿಷ್ಠ ಸುಮಂತ್ರ ಮಂತ್ರಿಗಳು ‖ ನಮಗೆ ಹಿತವರೆಯ್ಯೆಸೆ ಮಾತ್ರೇ | ನವನಿಗಡ ಭರತಂಗೆ ಕಾನನ | ಭವಣೆಗಡ ನಿಮಗಹುದಲೇ ಪರಿ ಲೇಸುಲೇಸೆಂದ ‖ ೧೨ ‖ ಬರಡು ಮನವೇಕರಸ ನೊಸಲಲಿ | ಧರಿಸು ಪಟ್ಟವ ಲಗ್ನವಿದೆ ಹೆ | ತ್ತಿರೆ ಹರಾದ್ಯರ ಬರಿಸುವೆನ ಮೂರ್ಧಾಭಿಷೇಚನಕೆ ‖ ತರುಣಿಯರು ಬರಲಮಳ ಸೇನೆಯ | ಹರಸಿ ಹಾಯ್ಕುಲಿತಾಯೆ ಚಿಂತೆಯ | ನೆರವಕೊಡಿ ಭರತಾಂಬಿಕೆಗೆ ಬೇಗೇಳಿ ನೀವೆಂದ ‖ ೧೩ ‖ ತಮ್ಮ ಸೈರಿಸು ಸೈರಿಸೀ ಮಾ | ತೆಮ್ಮ ವಂಶಕೆ ಸಲ್ಲದಾಸುರ | ಕರ್ಮವಿದು ಸತ್ಯಪ್ರತಿಜ್ಞಗುಚಿತವೇ ಹೇಳು ‖ ಉಮ್ಮಳಿಸುವರು ಸುರರ ಸಭೆಯೊಳ | ಗೆಮ್ಮ ರಾಯರು ಪಿತನ ಸತ್ಯದ | ಸೊಮ್ಮನಳಿದರೆ ಬಳಿಕ ಬಹುದೆಪಕೀರ್ತಿ ನಮಗೆಂದ ‖ ವೇದಮತವಿದು ಜಗಕೆ ಸೂನೃತ | ವಾದಿಯೇ ಸಾಕ್ಷಾತ್ ಶಿವನೋ | ವಾದಿ ಸತ್ಯವಿಹೀನನೇ ತಾ ನರಕಭಾಜನನೆ ‖ ಶೋಧಿಸೈ ಲೇಸಾಗಿ ಪಿತೃವಚ | ನೋದಯವನೆಲೆ ತಮ್ಮ ನಿನ್ನ ಮ | ಹಾ ದುರಾಗ್ರಹ ತಾಳದಿರದಪದೆಸೆಯ ನಮಗೆಂದ ‖ ೧೪ ‖ ಕಾಲನಾವುದು ನೋಡು ನೆರದಿಹ | ಮೇಲಣವರಾರೀಕ್ಷಿಸನೃತಕೆ | ಸೋಲಲಹುದೇ ತಮ್ಮ ತಂದೆಯ ಮಾತನತಿಗಳೆದು ‖ ಮೇಲೆ ಕಾಂಬೈಶ್ವರ್ಯಕಿದು ತಾ | ಕೀಳು ಮಾಡದೆ ನಮ್ಮನೀಜನ | ಜಾಲ ನಗುವುದು ಪಿತನನುಜ್ಞೆಯೆ ರಾಜಪದವೆಂದ ‖ ೧೫ ‖ ಎಂದು ತಮ್ಮನ ಧರ್ಮಪದ್ಧತಿ | ಯಿಂದ ಚಿತ್ತವ ತಿಳುಹಿ ಬಳಿಕಿಂ | ತೆಂದನೈಯನ ಸೇವೆಯಲಿ ಮಾತೃಗಳ ಭಕ್ತಿಯಲಿ ‖ ಸಂದಿಹುದು ಕೇಳಣುಗ ಭರತನು | ಬಂದಡಾತನ ಕೂಡಿಕೊಂಡಿಹು | ದೆಂದು ಶೋಕವ ನಿಳುಹಿ ಸಂತೈಸಿದನು ಸಹಭವನ ‖ ೧೬ ‖ ಈ ಯುಘೋಚಿತ ಸುತವಚೋಭಿ | ಪ್ರಾಯವನು ಕಿವಿಗೊಟ್ಟು ಕೇಳ್ದಬು | ಜಾಯತಾಂಬಕಿ ನುಡಿದಳಣುಗಂ ಗಾಗಮೋಚಿತವ ‖ ತಾಯಿ ಮೊದಲಾಕ್ರನುದಿ ಪಿತತರು | ವಾಯುಲಾಚಾರಿಯನನುಜ್ಞಾ | ದಾಯದಳತೆಯ ಮಗನೆ ಕೇಳು ವಸಿಷ್ಠಮುನಿವರನ ‖ ೧೭ ‖

ಕ್ರಮವಿದೀಗೆಲೆ ಕಂದ ನೀನ | ಕ್ರಮವ ಮಾಡದೆ ಮಾತೃವಚನವ | ಸಮತೆಯಲಿ ಸಲಹುವದು ಶಾಸ್ತ್ರವಿದೀಗ ಸರ್ವರಿಗೆ || ರಮಣನಾಗೆಲೆ ರಾಮ ವಸುಧಾ | ರಮಣಿಗೆನ್ನನವಜ್ಞೆಗೈದಡೆ | ಸುಮನಸರು ನಗದಿಹರೆ ಹೇಳೆಂದಳು ನಿಜಾತ್ಮಜನ ||೧ || ಉಚಿತವೇ ನಿಮಗಿದು ಪರೀಕ್ಷಿಸಿ | ಸುಚರಿತಾಗಮ ಧರ್ಮಶಾಸ್ತ್ರ | ಪ್ರಚುರತೆಯನಾದಾಟಿ ಎಣಿಕೆಯ ಮತ್ತ್ರಕಾಶಿಸಿಥೆ || ವಿಚರಿತಾನ್ವಯ ಪೆರಡನೆತ್ತುವ | ಶುಚಿತನವು ನಿಮಗಲ್ಲದಿತರರ | ಉಚಲತೆಯುದಾರ್ಗುಂಟಿದೆಂಬುದು ನೋಡಿ ನೀವೆಂದ ||೨೦|| ಪತಿಯ ವಶವರ್ತನೆಗೆ ಬಾರದ | ಸತಿಯನೇನೆಂಬರು ಮಹಾಸು | ವ್ರತೆಯರಾ ದಂಪತಿಗಳೆಚ್ಚೈಯಲಿನದ ಪುತ್ರನನು || ಪತಿಕರಿಸುವರೆ ಬುಧರು ಮುನಿ ಭೃಗು | ಸುತನ ಚರಿತವ ಕೇಳಿದರಿಯರೆ | ಪತಿಭಜನೆ ನಿಮಗಲ್ಲದಿತರರಿಗುಂಟೆ ಹೇಳೆಂದ ||೨೧|| ಮನದೊಳಸುಮಾನಿಸದೆ ನೇಮವ | ನೆನಗೆ ಕರುಣಿಸು ತಾಯೆ ತಾತನ | ಮನಕೆ ಬಹುದಿದು ಪರಮ ಸೀಮೆ ಪತಿವ್ರತಾಗುಣಕೆ|| ತನಗೆ ಪೂರ್ವದ ದತ್ತ ಪಲವಿದ | ನೊನನು ತೆಗವವಾರು ಚಿಂತಾ| ವನಧಿ ಬತ್ತಲಿನುತ್ತ ನೆರೆನಂಬಿಸಿದ ನಂಬಿಕೆಯ ||೨೨|| ಹಾಯೆನುತ ಕೊಂಡಾಡುತಂಭೋ | ಜಾಯತಾಕ್ಷನ ನಭದಸುರಸಮು | ದಾಯ ಸುರವಂದಿಗಳು ಹೊಗಳಿದರು ದಧಿಘೋಷದಲಿ || ವಾಯುನಿರುತೀಶಾಗ್ನಿ ಯಮ ವ | ಜ್ರಾಯುಧಾದ್ಯರು ಮನದ ಮುದದ ನ | ವಾಯಿಯಲಿ ಸೂಸಿದರು ಸುರನಂದನದ ಕುಸುಮಗಳ||೨೩|| ಮೊಳತುದಾ ಮನುವಿಂ ವಿಕುಕ್ಷಿಯೊ | ಳೆಳೆಸಸಿಯ ನೈದಿತು ದಿಲೀಪನೊ | ಳೆಲೆವಡದುದಾ ರಘುವಿನಿಂ ಪಲ್ಲವಿಸಿತಜನಿಂದ || ನಳನಳಿಸಿತಜಪುತ್ರನಿಂ ದು | ಜ್ವಲತೆ ದೋರಿತು ರಾಮ ನಿನ್ನಲಿ| ಫಳಿಸಿತಗ್ಗದ ಸತ್ಯತರುವೆಂದನು ವಸಿಷ್ಠಮುನಿ ||೨೪|| ಐಸೆ ಮಾತ್ರೇನೆನುತ ಸೇನಾ| ಧೀಶನಂಗೀಕರಿಸಿದನು ನೆರ | ದಾ ಸಭಾಸದರೊಲಿದು ಕೊಂಡಾಡಿದರು ರಘುಪತಿಯ || ಆಶೆ ಸಂದುದು ವಾರಿಜೋದ್ಭವ | ವಾಸವಾದ್ಯರಿಗರಸಿ ಕೈಕೆಗೆ | ಪೈಸರಿಸಿದುದು ಮೇಲೆ ಮನದುತ್ಕಟದ ಸಂದೇಹ ||೨೫|| ತನುಜ ಕೇಳೀ ಜಗದ ದುರ್ಜನ | ವನಿತೆಯರೊಳೆನ್ನೆನಿತು ಪಾಪಿಯೊ ನೆನವಳ್ಳೆ | ನಿಷ್ಠುರವ ನವನಿಯೊಳಾರು ನೆನೆಯದುದ || ಮನವದೆಂತೊಡಬಟ್ಟುದೋ ತವ | ಜನಕನನು ಹತ್ತಿರಕೆ ಕರದಾ | ನನವನೋಡವೆ ಸಡಿಲಿಸಿದಳು ಸಮಸ್ತ ಭೂಷಣವ ||೨೬|| ಮರುಗುತಿರ್ದರು ಮೇಲೆ ಕಂಬನಿ | ಯೊರತೆಗಳ ಕೈಗಲ್ಲದಲಿ ಕಡು | ನೆರಗುಗಳ ಶೋಕದಲಿ ಶೈಲಜೆ ಮುಖ್ಯ ನಾರಿಯರು || ಮರೆಯದೇಕೆಲೆ ರಾಮ ಕೊಳ್ಳುಡು | ಗೊರೆಯ ನಬುದ ಚತುರ್ದಶದವನ | ದುರುವ ಪಟ್ಟೆಕೆಸುತ್ತಲಿತ್ತಳು ಕೈಕೆ ವಲ್ಕಲವ ||೨೭|| ನೋಡಲಚ್ಚರಿ ಚಿತ್ರದಲಿ ಖಯ | ಷೋಡಿಯಿಲ್ಲದೆ ಸಕಲಜನ ಕೊಂಡಾಡೆ ಕೊಂಡನು ಕುಮತಿಸತಿ ತನಗಿತ್ತ ವಲ್ಕಲವ || ನೋಡಿ ಲಕ್ಷ್ಮಣದೇವನಣ್ಣನ | ಕೂಡೆ ವನವನುಚರಿಸಿ ಸೇವೆಯ | ಮಾಡುವಡೆ ತನಗಿದುವೆ ಸಮಯವೆನುತ ಮನದಿಂದ ||೨೮|| ದೇವ ಬಿನ್ನಹ ನಿಮ್ಮ ಪದರಾ | ಜೀವದೋಲಗ ತಪ್ಪಿ ಜೀವಿಪ | ಜೀವವಿದು ತಾನಿದ್ದು ಫಲವೇನೀ ಧರಿತ್ರಿಯಲಿ || ದೇವ ತನ್ನ ಮೇಲೆ ನಿಮ್ಮ ಕೃ | ಪಾವಲಂಬನವಾಗಲುಳಿವುದು | ಜೀವವಿದು ವಲ್ಕಲವನೆನಗಿತ್ತಳುಹಬೇಕೆಂದ ||೨೯|| ಭರತನಿಲ್ಲೀಸಮಯದಲಿ ದು | ಸ್ಥಿರನು ತಾತನು ತನ್ನ ಕೇಳೀ | ದುರುಳತನ ಜೀಡಧಿಕೃತರು ನಾನ್ನೈಸಲೀ ವನಕೆ || ಹಿರಿದು ಬರಬೇಕಾವಡವನಿಯ |

ಭರತಗೊಪ್ಪಿಸಿ ಪಿತನನುಜ್ಞೆಯ | ಧರಿಸಿ ಬೀಳ್ಕೊಳು ಬಳಿಕ ನಮ್ಮೆಡೆಗೆಂದನಾರಾಮ ||
ದೂರವೇ ನಾಲ್ಕೆರಡು ದಿವಸಕೆ | ಬಾರದಿರನಾ ಭರತನವನೀ | ನಾರಿಯುಂದರೆ ಸಲಿಪು
ದವರಾರೀ ಜಗತ್ತಿನಲಿ || ಪಾರಮಾರ್ಥವಿದೀಗ ತಂದೆಯ | ಭಾರವನ್ನೆವರುಸುಮಂ
ತ್ರನ | ಸಾರಲೆಂವಾಸೀರೆಯನು ಸೆಳದುಟ್ಟಸೊಲವಿನಲಿ || ೩೧ || ಅರಸಿ ಮನದಲಿ
ಹರುಷಿಸಿದಳೆ | ಬ್ಬರಿಗೆ ವನವಾಯ್ತೆಂದು ಕಿರುನಗೆ | ವೆರಸಿ ಕೊಟ್ಟಳು ಮತ್ತೆಮನು
ವಂಶಂಗೆ ವಲ್ಕಲವ || ಸರಸರಿಸಿ ಶಶಿವದನೆ ಸಭೆಯಲಿ || ಭರವಸದಲೈತೆಂದು ರಾಮನ |
ಚರಣದಲಿ ಚಾಚಿದಳು ಭಾಳವರಿ ಭಕ್ತಿಭಾವದಲಿ || ೩೨ || ದೇವ ಬಿನ್ನಹ ನಿಮ್ಮ
ದೇಹವ | ನೈವಳಿಯ ನೆಳಲಾಗಿ ನೀವೇ | ಭಾವಿಸುವದುರೆ ಬೇರೆ ತನಗನ್ಯತ್ರ ಗತಿ
ಯುಂಟೆ || ಹೂವಸುರಭಿ ಸುಧಾಂಶುಬಿಂಬವ | ನಾವಿಮಳರುಚಿ ಕೀರ್ತಿಸದ್ಧ | ರ್ಮಾ
ವಳಿಯ ಬಿಟ್ಟಿರಲು ಬಲ್ಲುವೆಯಂದಳಾ ಸೀತೆ || ೩೩ || ಬೇಡ ನೀನು ಕುಮಾರಿ
ನಮ್ಮೊಡ | ನಾಡುವುದು ಕಡುಕಷ್ಟ ಕಾನನ | ವಾಡುವರು ನಿನ್ನವರು ನಮ್ಮನು ದೂರ
ದಿರ್ವಪರೆ || ಬೇಡ ನೀನೀವಮಾತನಮ್ಮೊಡ | ನಾಡದಿರು ಕೌಸಲೆಯ ಸೇವೆಯ | ಮಾಡಿ
ಕೊಂಡಿರು ಸಾಕು ಬಂದವಳೆಂದನವನಿಜೆಯ || ೩೪ || ಹಸಿದಡಿಲ್ಲಮೃತಾನ್ನ ಚಯ್ಯ
ಸವ | ಡಿಸುವಡಿಲ್ಲ ಮೃದುಸ್ತರಣದಿಂ | ದೆಸೆವ ಮಣಿ ಪರಿಯಂಕವಿಹಡಿಲ್ಲಲ್ಲಿ ಮಣಿ
ಭವನ || ಬಿಸಿಲು ಮಳೆ ಛಳಿಗಳಿಗೆ ಸಲೆಸೈ | ರಿಸುವದೇಹವೆ ನಿನ್ನದಿದು ದೀ | ವಸಿಕೆಗಾ
ವಂಜುವೆವು ಕೆಲಸಾರೆಂದನಾರಾಮ || ೩೫ || ಪತಿಯ ಸುಖದುಃಖಂಗಳೊಳಗನು |
ಗತೆಯೆನಿಸದವಳಾವಲೋಕದ | ಗತಿಯನೈದುವಳೆಂಬುದನು ನೀನೇ ವಿಚಾರದಲಿ ||
ಶ್ರುತಿಗೆ ಕೊರತೆಯ ತಾರದಿದ್ದ | ಸ್ಥಿತಿಯಲೇ ಕರುಣಿಸುವುದೆಂದ | ಚ್ಯುತನ ನೊಡ
ಬಡಿಸಿದಳು ಪತಿಭಜನಾನುರಾಗದಲಿ || ೩೬ || ಇನ್ನು ನೀನೇ ಬಲ್ಲೆ ಬಳಲಿಕೆ | ಗೆನ್ನ
ಸಮ್ಮತವಲ್ಲ ಮುಂದಣೆ | ಗಿನ್ನುಕೊಳ್ಳೆನುತಿತ್ತನಾ ಕ್ಷಾಮಾಂಬರವ ಸತಿಗೆ || ಮುಂನ
ದುಃಖ್ಖದೊಳಿಡಿದ ದುಃಖ್ಖವಿಸನ್ನರೊದರಿದ ರಶ್ರುಧಾರಾ | ಪನ್ನಪಟುರವದಿಂದ ಪರಿಸರ
ಗಾಳುಮೇಳದಲಿ || ೩೭ || ಹಸುಳೆಗಾಯ್ತೆ ವಿಪತ್ತಕಟವ | ನಿಸುತೆ ಸುಕುಮಾರಿಗೆ
ವನಾಂತರ | ವಸತಿ ಸಂಭವಿಸಿತೆ ಶಿಶುವಿಗೆ ವನಪರಿಭ್ರಮಣ || ದಶರಥನ ಸೊಸೆಯಾಗಿ
ಜನಕನ ಬಸುರಿನಿಂ ಬಂದುಂಣದೀಯಾ | ಯಸಕೆ ಸಂದಾ ತಾಯೆಯೆಂದಳು ಕೌಸಲಾ
ದೇವಿ || ೩೮ || ಕಲೆದು ತಂಗಿಗೆ ಹೇಳಲಾಗದೆ | ಗುರುಸುಮಂತ್ರಕರಕಟ ನೀವೇ |
ನೆರವಬಂದಿರೆ ತಾಯ್ಗಳಿರ ಸೊಸೆಯಲ್ಲವೇ ನಿಮಗೆ || ಅರಸಿಯರೊಳೈನೂರರೊಳ ಗೊ |
ಬ್ಬರಿಗೆ ಹುಟ್ಟದೆ ಕರುಣವಕಟಾ | ನಿರಪರಾಧಿಗೆ ತಕ್ಕುದೇ ವನವೆಂದಳಾಕಾಂತೆ ||೩೯||
ಕೊರಳ ಡೊಕ್ಕರವಾಯ್ದು ಹಣೆಯುಂ | ದೊರಸಿ ಹಣೆಯನು ಗಲ್ಲವನು ಹಿಡಿ | ದೆರಡು
ಕೈಯಿಂದೊಲದು ಮೋಹದಲೊಸೆದು ಮುಂದಾಶಿ || ಮರಳಿಮರಳೀಕ್ಷಿಸಿ ನಿಜಾಂತಃ |
ಕರಣದತುಳವ್ಯಥೆಯ ಸುಯಿಲಿನ | ಶಿರದತೂಗಿನ ತಳ್ಳುಬಾರಿನಲಳಲಿದಳು ಕಾಂತೆ ||೪೦||
ಸಂತವಿಸುತತ್ತೆಯನು ಸತಿ ನಿಜ | ಕಾಂತನಿತ್ತಾ ನಾರಸೀರೆಯ | ನಾಂತುಕೊಂಡಳು
ಸುರವಧೂನಿಕರುಂಬ ಕಂಜನಿಯ || ತುಂತುರಲಿ ತುಳುಕಾಡೆ ಬಳಿಕಾ | ದ್ಯಂತ
ಶೂನ್ಯನ ಸುಖಮಯನ ವಿ | ಕ್ರಾಂತಧೀರನ ನೋಡುತುಟ್ಟಳು ಕಳಚುತಂಬರವ||೪೧||
ಎದ್ದ ಕೋಪದಲಬುಜಭವಸುತ | ನೆದ್ದು ಹರಿ ತಂದವನಿಸುತೆ ಸು | ತ್ತಿರ್ದ ನೂತನ

ನಾರಸೀರೆಯ ಸೆಳದು ಸೀಳ್ದಿಕ್ಕಿ ॥ ಲಡ್ಡಿಲಿಸಿದನು ಕೈಕೆಯನು ಕಡು । ಗದ್ದಲವು ಘನ ವಾಯ್ತು ಲಾನೀ । ನಿದ್ದ ಹವಣಿನಲಿರಲರಿಯೆ ಹಾ ಯೆನುತ ಗರ್ಜಿಸಿದ ॥ ೪೨ ॥ ತರಣಿ ವಂಶಪರಂಪರೆಯ ಭೂ । ವರರಿಗವನಿಯಪಟ್ಟ ಜ್ಯೇಷ್ಠರಿ । ಗುರುವದಲ್ಲದೆ ಬೇರೆ ಸಲ್ಲಿದು ತತ್ವಸಿಷ್ಠರಿಗೆ ॥ ಹಿರಿದು ನಾವು ಸೈರಿಸಿದೆವಲ್ಲದೆ । ಧರಣಿಸುತೆ ವಲ್ಕಲವ ನುಡಲನು । ಕುರಿಸಲಹುದೇಯೆನುತ ಕಿಡಿಕಿಡಿಯಾದನಾ ಮುನಿಪ ॥ ೪೩ ॥ ತರಿಸಿ ದಿವ್ಯದುಕೂಲವನು ಪರಿ । ಪರಿಯ ದಿವ್ಯವಿಭೂಷಣಂಗಳ । ಸುರಭಿಕುಸುಮಾನೋದ ದಿವ್ಯಸುಗಂಧ ಸಾರದಲಿ ॥ ತರುಣಿಯರ ಕೈಯಿಂದರುಂಧತಿ । ಯರಸ ಸತಿಯ ನಲಂಕರಿಸಿ ಬೇಗೆ । ಹರಿಸಿ ರಾಮನವಾಮಭಾಗಕೆ ಕಳುಹಿ ಕುಳ್ಳಿರ್ದ ॥ ೪೪ ॥ ಮನದೊಳಂಜದೆ ಮುನಿಯ ವಚನವ । ಮನಕೆತಾರದೆ ಕೈಯೊಡನೆ ಕಾ । ಮಿನಿ ಕಕುಸ್ಥಾನ್ವಯಗೆ ತಂದಳು ಮತ್ತೆ ವಲ್ಕಲವ ॥ ವನನಿವಾಸಧರಾಧಿಪತ್ಯದ । ಜನಪನನದುಡುಗೊರೆ ಯಿದೀಗೆಂ । ದೆನುತ ಮೊಳೆನಗೆಯಿಂದ ಹರಿಸಿದಳವನಿಜೇಶ್ವರನ ॥ ೪೫ ॥ ಉಟ್ಟ ನೀತನು ಬಿಗಿದು ಸುರಗಿಯ । ಕಟ್ಟಿ ಕಟಿಯಲಿ ತಿರುಗಿತನ್ನೊಡ । ಹುಟ್ಟಿದನ ನೀಕ್ಷಿಸಲು ತಂದನು ಚಾಪಮಾರ್ಗಣವ ॥ ಪಟ್ಟವರಸಿಗೆ ಪೊಡವಿಯೋಲ್ಪಡ । ಮುಟ್ಟಿ ಗುರುಪದ ಕಭಿ ನಮಿಸಿ ಪೊರ । ಮಟ್ಟನಾ ವೈದೇಹಿಸಹಿತರಮನೆಯನಾ ರಾಮ ॥ ೪೬ ॥ ಅನುಜ ನಾಶ್ರಮದಿಂದ ಸಂಧಿಸಿ । ಜನನಿಯ ನು ಬೀಳ್ಕೊಳೆ ಸುಮಿತ್ರಾ । ವಸಿತೆ ನುಡಿದಳು ಕಂದ ಕೇಳ್ಳೈ ರಾಘವೇಶ್ವರನ ॥ ಜನಪ ದಶರಥನಂತೆ ಕಾಂಬುದು । ಜನಕಜೆಯ ನೆನ್ನಂತೆ ಕಾಂಬುದು । ವನವ ಯೋಧ್ಯೆ ಯೆಂದು ಬಗೆ ನಡೆಯೆಂದಳಾ ಕಾಂತೆ ॥ ೪೭ ॥ ಆ ಸುಮಿತ್ರಾದೇವಿ ನಡೆತಂ । ದಾ ಸರೋಜಾಂಬಕನ ಕೈಯಲಿ । ಸೂಸುವಶ್ರುಗಳಿಂದ ಕೊಟ್ಟಳು ತನ್ನ ನಂದನನ ॥ ದಾಶರಥಿಕೇಳ್ತಿರಳನಿವನತಿ । ರೋಷಗರ್ವಿತ ನೀತನಲಿ ಗುಣ । ದೋಷವನು ಭಾವಿಸದೆ ಸಲಹೆಂದಿತ್ತಳರ್ಭಕನ ॥ ೪೮ ॥ ಬಳಿಕುದಧಿಪರಿವಳಯದವನೀ । ತಳದ ರಾಜ್ಯುರ ರಾಜ್ಯವೈಭವ । ನಿಳಿಯುವನು ವೈಶಾಖ ಸಿತ ಪಂಚಮಿಯ ದಿವಸದಲಿ ॥ ಘಳಿಗೆ ಹದಿನಾರರಲಿ ಪುಷ್ಯದ । ಸುಳುಹಿ ನುಚ್ಚಗ್ರಹದ ದೃಷ್ಟಿಯ । ಲಿಳೆಯುಮಗಳೂರ್ಮಿಳೆಯ ವಲ್ಲಭ ಸಹಿತ ಹೊರವಂಟ ॥ ೪೯ ॥ ಕೂಡೆ ಹೊರವಂಟರು ಸುಮಂತ್ರಕ । ಗೂಡಿಸಚಿವ ಪಸಾಯತರು ಹೊರ । ಬೀಡುಬಿಟ್ಟಿದು ಮುಂದೆ ಮನ್ನೆಯ ಮಂಡಲೇಶ್ವರರ ॥ ಕೂಡೆ ಸರಕಿನಭಂಡಿ ಜಿಡಿಡಿಡೆ । ಯಾಡಿದವು ರಜೋಪಕರಣದ । ಜೋಡಣೆಯ ಪಸರಿಕೆಯ ಪಾಳೆಯ ತೆರಳಿತಗಲದಲಿ ॥ ೫೦ ॥ ದಾರಿದೆಗವವು ಮುಂಡಿ ಹೂಡಿದ । ತೇರುಗಳು ಹಂಣಿದ ವಡಸ್ತ್ರಂ । ಬೇರನಾರಳೆ ಹಲ್ಲಣಿಸದ ಹಯಾಳಿ ಮಣಿಮಯದ ॥ ಭೂರಿಭೂಷಣ ವಸ್ತ್ರಶಸ್ತ್ರದ । ಭಾರಣೆಯ ಭಟರುಗಳು ಕೂಡಿ ಗು । ಡಾರ ಕೊಟ್ಟಿಗೆ ಲಾಯಸಹಿತ ಸಮಸ್ತ ನೃಪನಿಕರ ॥ ೫೧ ॥ ಹರಿ ಜಗದ್ರಕ್ಷೆಗೆ ಸುಧಾ ಸಾ । ಗರವ ಹೊರವಡುವಂತ ಯೋಧ್ಯಾ । ಪುರವ ಹೊರವಂಟನು ದಶಗ್ರೀವಾದಿ ರಾಕ್ಷಸರ । ಹರಣ ಸಂಹರಣಾರ್ಥದಲಿ ಶಂ । ಕರ ವಿರಿಂಚಿ ಸುರೇಂದ್ರರಭ್ರುವ । ಲರಳಮಳೆಗರೆದರು ಜಯಾನಕರವದ ರಭಸದಲಿ ॥ ೫೨ ॥ ತರಹರಿಕೆ ಕೈಗೂಡದವನೀ । ಶ್ವರನು ಕೌಸಲೆ ಸಹಿತ ಬಳಲುವ । ಶಿರದ ಬಿಡುಮುಂಡಿಗಳ ಲೊಸರುವ ನಯನ ವಾರಿಯಲಿ ॥ ತರುಣಿಯರ ಹೆಗಲಿನಲಿ ಜಾಚಿದ । ಕರದ ಕಾಲ್ನಡೆಯಿಂದ ಕಡ ಕಾ । ಹುರದ

ಕಟ್ಟೆಲಲಿಕೆಯುಳ್ಳೈದಿವನವಸಿಜಾಪತಿಯು ॥ ೫೩ ॥ ತೆರಳುತಿದೆ ವಜ್ರೇವರತ್ನಾ । ಭರಣ ವೆನ್ನ ಮನೋರಥವಸಿರಿ । ಪರಿವೃತಿದೆ ರಘು ರಾಜವಂಶದ ಬಹಳ ಭಾಗ್ಯನಿಧಿ ॥ ಪುರವ ತೊರವಡುತಿದೆ ಮದೀಯ । ಸ್ಫುರಿತ ಚಂದ್ರಮ ಕಲ್ಪಸಾದಪ । ಪರುಷ ನಿರ್ಜರಧೇನು ಬಿಡುತಿದೆ ತನ್ನನಕಟೆಂದ ॥ ೫೪ ॥ ಅಕಟ ಸೆಳದರೋಜೀರ್ನದೇಹಾಂ । ಧಕನ ಹಸ್ತದ ಯುಷ್ಟಿಯನು ಕಾ । ಳಿಕವ ತೋರಿದನೇ ವಿಧಾತ್ರನು ಪುತ್ರಮೋಹಕದ ॥ ಸುಕೃತ ಹೀನರು ನಾವಲೇ ವಾ । ರ್ಧಿಕದೊಳಾದುದೆ ಸುತವಿಯೋಗ । ಪ್ರಕಟ ಪಾತಕ ಫಲ ವೆನುತ ಮೊರೆಯಿಟ್ಟನಾ ಭೂಪ ॥ ೫೫ ॥ ನಿಲಿಸಲಾಗದೆ ತಂದೆಗಳಿರಿಭ । ಕಳ ಭನಸು ಹರಿಪೋತನನು ಮಂ । ಜುಳಮನೋಜಾತನನು ಮನ್ಮುಖರತ್ನಮುಕುರವನು ॥ ನಿಲಿಸಿರೈ ನೀವೆನುತ ಕೌಸಲೆ । ಕಳಲಿಚಿವ ಮುಡಿಯಿಂದ ಕಂಬನಿ । ದುಃಕೆ ಕೆಲಬಲ ಕಳವಳಿವುತೊದರಿದಳು ದೆಸೆದೆಸೆಗೆ ॥ ೫೬ ॥ ಬಿಟ್ಟುಕಳೆದ್ಯೆ ಮಗನೆ ನಮ್ಮನು । ಬಟ್ಟ ಬಯಲೊಳಗಿರಿಸಿದ್ಯೆ ಹೊರ । ಗಟ್ಟಿದ್ಯೆ ಕಾಡ್ಗಿಚ್ಚಿನಲಿ ಕಾಮೇಷ್ಟಿಯಲಿ ಪಡದ ॥ ಹೊಟ್ಟೆ ಬರುದೊರೆಯಾಯಿತೇ ಕಂ । ಗೆಟ್ಟೆನೈ ಯೆಲೆಕಂದ ಹಾ ಯೆಂ । ದೊಟ್ಟಲೊದರಿದಳಬಲೆ ಕಂಬನಿದುಂಬಿ ಪೌರಜನ ॥ ೫೭ ॥ ಇರಿಸಿಹೋಪರೆ ಕಂದ ಜವ್ವನ । ಜರಿದ ಜನನಿಯ ಜನಕರನು ನಿ । ನ್ನರಿತಕಿದು ತಾಗುಣವೆ ಪಿತೃಸೇವಾಪ್ರಸಿದ್ಧನಿಗೆ ॥ ಕರಗ ದಕಟಾ ಚಿತ್ತವೆಮ್ಮ । ಬ್ಬರನು ಬಿಟ್ಟೈದುವರೆ ಹೇಳೈ । ತರುಣ ನಮಗಿನ್ನೇನುಗತಿ ಯೆಂದೊದರಿದಳು ಕಾಂತೆ ॥ ೫೮ ॥ ಆರನೋಡಿದರವರು ಲೋಚನ । ವಾರಿಧಾರಾ ಗಳಿತ ಗದ್ಗದ । ಪೂರಣದ ಕಂಧರವ ಕರಪಲ್ಲವದ ಗಲ್ಲದಲಿ ॥ ಊರ ಹೊರವಂಟರು ನರೇಂದ್ರನ । ಪೌರಜನ ಬಿಡಲಾರದಾ ರಘು । ವೀರನನು ವಿಶ್ರುತ ಸುಧಾರ್ಮಿಕ ಸಾರ್ವಭೌಮನನು ॥ ೫೯ ॥ ತೆರಳಿತಷ್ಟಾದಶಮಹಾಪ್ರಜೆ । ಪುರದೊಳಿಲ್ಲೊಳಲ್ಕೆ ಣಾಯಿ ಪಾ । ಳ್ಗರದುದಾ ಪುರವಾರಿಗೇನೊಳ್ಳಿದನೊ ರಘುನಾಥ ॥ ತೊರವೆಯಧಿ ಪತಿರಾಮ ನರಕೇ । ಸರಿಯ ಚರಣವ ಸಜ್ಜನರು ಬಿ । ಟ್ಟರಲುಬಲ್ಲರೆ ಕಂದ ಕುಶ ಕೇಳೆಂದು ಮುನಿ ನುಡಿದ ॥ ॥ ೬೦ ॥

ಮೂರನೆಯ ಸಂಧಿ ಸಮಾಪ್ತಂ.

ನಾಲ್ಕನೆಯ ಸಂಧಿ.

ಸೂಚನೆ॥ ವೀರ ರಘುಪತಿ ವಿಮಲತರ ಭಾ । ಗೀರಥಿಯನುತ್ತರಿಸಿ ಗುಹನಿಂ । ಸಾರಿದನು ವರಚಿತ್ರಕೂಟ ಮಹಾಮಹೀಧರವ ॥

ಪದ್ಯ॥ ಕೇಳಿದೈ ಕುಶ ನಗರವದು ತಾ । ಪಾಳೆನಿಸಿದುವ ನರಿದು ಕಡುಘಾ । ತಾಳಿ ಗಂಡನ ಜರಿದು ನುಡಿದಳು ಪಡಿವ ರೋಷದಲಿ ॥ ಅಳಲವನಿಯ ನಿನ್ನ ಮಗನೆ ವ । ನಾಳಿಯೆಂಬುದಿದ್ಯಾಕೆ ಬಂದುದು । ಕಾಳಿಕವ ವರವೆನುತ ಕಟಕಿಯ ನುಡಿದ ವಾಕ್ಯಕೆ ॥ ೧ ॥ ಅರಸ ಕೇಳನುಲೋಪವಾದುದು । ವರವು ನಿನ್ನಯ ಸತ್ಯವಚನಕೆ । ಮರುಳುದಲೆ ಯುಂಟೆಂಬುದನು ತಾತಿಳಿಯದಾದೆನಲಾ ॥ ಧರೆಯ ಜನಸಂಕುಳದ ಜಿಹ್ವಾಂ । ಕುರದ ಕಷ್ಟಕೆ ಸೀಮೆಮಾಡೆನು । ಮರುಳುತನ ತನಗಿದ್ದುದೆಂದಳು

ಕೈಕೆ ಕೋಪದಲಿ ॥ ೨ ॥ ಅರಿದನಾ ಕೈಕೆಯ ವಿಷಾದದ । ತೆರನನಾ ರಘುನಾಥ ನೆಮ್ಮನು । ಕೊರತೆನೆಮ್ಮದೆ ಮಾಣದಿರದೆಂದಾಪ್ತಮಂತ್ರಿಗಳ ॥ ಪುರಜನವ ಪರಿಜನವ ನುಚಿತೋ । ತ್ತರದ ವಚನದಲಾಸತಿಯ ನಿ । ರ್ಭರದ ಕೋಪವ ಬಿಡಿಸಿ ಬೀಳ್ಕೊ ಟ್ಟನು ಮಹಾಜನವ ॥ ೩ ॥ ತಿರಗಿ ನೀವಿನ್ನೆನ್ನ ದೆಸೆಗು । ಬ್ಬರದ ಚಿಂತೆಯ ತಾಳದಿರಿ ತಂ । ದಿರಿಸಿ ತತ್ಪುರದಾಧಿಪತ್ಯಕೆ ಭರತ ಭೂಪತಿಯ ॥ ಗುರುವಸಿಷ್ಠನ ಕಳುಹದಿರಿ ನಿ । ಮ್ಮರಸಿ ಕೌಸಲ್ಯಾಸತಿಯ ನುಪ । ಚರಿಸಿ ಕೊಂಡಿಹುದೆಂದು ತಂದೆಗೆ ನಮಿಸಿದನು ರಾಮ ॥ ೪ ॥ ಕಂದಕೇಳೀರೇಳುವರುಷವ । ಸಂದಬಳಿಕೀ ನಗರವಿದು ನಿ । ನ್ನಿಂದ ಪಾಲಿಸಿಕೊಳಲಿ ಕೋ ಮುದ್ರಿಕೆಯ ನೀನೆಂದು ॥ ಸಂದಣಿ ಸುವಸ್ತ್ರಗಳಲಾ ನಿಜ । ನಂದನನ ಕಿರುವೆರಳಿಗಿಟ್ಟಂ । ತೆಂದು ನುಡಿದನು ವರಸುಮಂತ್ರಂಗಾ ಮಹೀಪಾಲ ॥ ೫ ॥ ತರಿಸು ನಮ್ಮಯ ವಿಮಲಮಣಿಬಂ । ಧುರ ವರೂಥವ ನಿಮಿಕೊಂಡೊ । ಯ್ದಿರಿಸಿಬಾ ಕಳುಹಿಪರೆ ಕಳುಹದಲಿರು ಸಮೀಪದಲಿ ॥ ತೆರಳಿ ನೀವೆಂದಶ್ರುಕಣದು । ಬ್ಬರದಲ ವರನು ಬೀಳುಕೊಟ್ಟನು । ಮರುಗಿಮುದು ಜನಜಾಲ ವಿರಹದಲಾಕಕುಸ್ಥಜನ ॥ ೬ ॥ ಅಮೆಯಲಿನನೊಡನಿರ್ದು ತೊಲಗಿದ । ಹಿಮಕರನವೊಲು ರಘುಕುಲಾಂಬರ । ಹಿಮ ಕಿರಣನಗಲಿದನು ವಿಪಿನವಿಯದ್ವಿಭಾಗದಲಿ ॥ ದ್ಯುಮಣಿಕುಲಪಾರ್ಥಿವಸರೋಜ । ದ್ಯುಮಣಿ ದಶರಥರಾಯನಾ ಪ । ಶ್ಚಿಮದ ತರಣಿಯ ತೇಜದಲಿ ತಿರುಗಿದನು ಪಟ್ಟ ಣಕೆ ॥ ೭ ॥ ಬಳಿಕ ಸರಯುವದಾಟಿ ಗಗನದ । ನಳಿನಮಿತ್ರಂಗರ್ಘ್ಯವಾರಿಯ । ತುಳುಕಿ ರಥವೇರಿದನು ಸೀತಾದೇವಿಯುರುಸಹಿತ ॥ ಚಳಗತಿಯ ವಾಜಿಗಳು ಕೊಂಡೆ । ಯ್ದುಳುಹಿದವು ತಮಸೆಯಲಿ ನಾಲ್ವರು । ಕಳೆದರಾತೀರದಲಿ ಜಲದಾಹಾರದಲಿ ಶಿವಿರ ॥ ೮ ॥ ಮರುದಿವಸ ವೇದಾವತಿಯ ಸಾ । ರ್ದರು ಬಳಿಕದರಲಿ ರಜನಿಯ । ಪರಿಹರಿಸಿ ದಾಟಿದರು ನದಿಯನು ಮೂರನೆಯ ದಿವಸ ॥ ಹರಿಪದೋದ್ಭವೆಯನು ಜಗ ತ್ರಯ । ಪರಮಪಾವನೆಯನು ಪವಿತ್ರೆಯ । ಹರಸಿರೋಮಂಡಿತೆಯನೈದಿದರಸ್ತ ಮಾನದಲಿ ॥ ೯ ॥ ಅಂದಿನಿರುಳನು ಕಳೆದು ಬಳಿಕರ । ವಿಂದಸಖನುದಯದಲಿ ಮಂತ್ರಿಗೆ । ಯಿಂದನಾರಘು ನಾಥನಾಗತಕಾರ್ಯದನುನಯವ ॥ ತಂದೆಯೇನಾಗಿಹನೊ ಭರತನು । ಬಂದುದಿಲ್ಲಾ ಪ್ತರುಗಳೈಯನ । ಮುಂದಿರರು ನಡೆ ಪಿತನನಾರೈಕೋಗುಬೇಗೆಂದ ॥ ೧೦ ॥ ತೆರಳು ತಾಯ್ಗಳ ಶೋಕವನು ಪರಿ । ಹರಿಸಿ ಕೈಕೆಯ ಪುರಿಗೆ ದೂತರ । ಕಳುಹು ಭರತನ ಕರಸು ಕೈವರ್ತಿಯಮಹೀತಳವ ॥ ವರುಷಹದಿನಾಲ್ಕಕ್ಕಯೋಧ್ಯಾ । ಪುರಕೆ ಬಹೆ ನಿದೆಹುದನನಾ ಭೂ । ವರಗೆ ಬಿನ್ನಹಮಾಡೆನುತ ಬೀಳ್ಕೊಟ್ಟನಾರಾಮ ॥ ೧೧ ॥ ಬಿಡಲರಿಯದಪದಗಳ ನೇಲಲಿ । ಮಿಡುಕುತಿರಲು ಸುಮಂತ್ರ ಮಂತ್ರಿಯ । ಮುಡುಹ ಹಿಡಿದಲ್ಲಾಡಿ ಬಿಗಿಯಪ್ಪಿದನು ಮಸ್ತಕವ ॥ ಬಿಡು ನೃಪಾಲನ ಜೀವಶರಧಿಗೆ । ವಡ ಪಿನೋ ಚಂದ್ರಮನೊ ಸಾಕಿ । ನ್ನಡಿಗಡಿಗೆ ಹೇಳುವಡೆ ನೀನೇನಜ್ಞನೇಯೆಂದ ॥ ೧೨ ॥ ಆ ಸುಮಂತ್ರನ ಸಂತವಿಸಿ ಬಳಿ । ಕಾಸರಯುತೀರದಲಿ ಕಳುಹಿದ । ನಾಸರೋಜಾಂಬಕನು ವಿನಯದೊಳಧಿಕತೇಜದಲಿ ॥ ದಾಶರಥಿಸುತಕೇಳ್ಕಪರ್ದಿಯ । ವೈಶಿರಿಯ ಮಿಕ್ಕನು ಶಿರೋವಿ । ನ್ಯಾಸವಿಮಲಜಟಾನಿಬಂಧನ ನಾಟಕಾಂಗದಲಿ ॥ ೧೩ ॥ ಬಂದು ಕಂಡನು ಗುಹನು ಚರಣ । ದ್ವಂದ್ವದಲಿ ಚಾಚಿದನು ಪರಮಾ । ನಂದಭಕ್ತಿಯುಳುಪ

ಚರಿಸಿದನು ರಾಘವೇಶ್ವರನ ॥ ಮುಂದೆ ಜಾಪದವೇಲೆ ನಾವೆಗ | ಳಿಂದ ನದಿಯನು ದಾಟಿ ಬಳಿಕ | ಲ್ಲಿಂದ ತೆರಳಿದರಿವರು ಮೂವರು ಕಾಲುನಡೆಗಳಲಿ ||೧೪|| ಕುಶನೆ ಕೇಳು ನಿದಾಘಸಮಯದ | ಬಿಸಿಲ ಬೇಗೆಗೆ ಬೆಂದು ನಲನು | ಷ್ಣಿಸಿತಲ್ಲೈ ಕಡುಗಾದ ಕಾವಲಿಯಂತೆ ಕಡಲುಗಳು ॥ ಬಿಸುಗುದಿಯುಲುಕ್ಕಿದವು ಸಿಡಿದವು | ವಸುಮತೀಧರಶಿಖರ ವಿವರಾ | ಯಸವನೇ ಪೇಳುವೆನು ಬಳಲಿದರಾವನಾಧ್ವದಲಿ ॥ ೧೫ ॥ ಮುಸುಡು ಕಳೆಗುಂದಿಮುದು ಕಂದಿದ | ವೆಸೆವ ತನುಕಾಂತಿಗಳು ಪದಸಾ | ರಸದ ಸೊಂಪಡಗಿದವು ಕದಡಿದವಕ್ಷಿ ಕೆಂಪಿನಲಿ ॥ ಕಸರಿಕೆಯು ಕಾಪಥದ ಕಟ್ಟಾ | ಯಸವು ಕಡೆದುದು ನಿಮ್ಮ ರಾಯನ | ಶಶಿಮುಖಿಯು ನಾಪತ್ತಿಗೊಳಗಾಗದವರಾರೆಂದ ||೧೬|| ಅಡಿಗಡಿಗೆನಿಲ್ಲುವಳು ಕುಳ್ಳಿರು | ತಡಿಗಡಿಗೆ ಸುಯ್ವಳು ಬಳಲಿ ಬಾ | ಯ್ವಿಡುವಳೇಳುವಳಳುಕುವಳು ಬಳಕುವಳು ಮೆಲ್ಲಡಿಯ ॥ ಇಡಲರಿಯದಿನ್ನೆನಿತು ಕಾನನ | ದೆಡೆಯೆನುತ ಬೆಸಗೊಂಬಳೀಪರಿ| ನಡೆನಡೆದು ನಡೆಗೆಟ್ಟು ನೇಮಿದಳಾತ್ಮವಲ್ಲಭನ ||೧೭|| ತುಂಬಿದನು ಕಂಬನಿಯನಾತ್ಮನಿ | ತಂಬಿನಿಯ ಮೊಗನೋಡಿ ಮೆಲ್ಲನೆ | ನಂಬಿಸಿದ ನಿದೆಸಾರೆ ನೋಡಿದೆ ನೋಡು ಕಾಂತಾರ ॥ ಅಂಬುಜಾಕರದಲ್ಲಿ ಫಲನಿಕು | ರುಂಬದಲಿ ಸಮಗ್ರವಿಲಲಿನ | ಬಿಂಬದುಗ್ರಾಟೋಪ ದೂಪಿಸದರಸಿಕೇಳೆಂದ ॥ ೧೮ ॥ ತೆಗೆದು ದಾರಿಗೆ ಹೆಜ್ಜೆಹೆಜ್ಜೆಗೆ | ಚಿಗುರುದೋರಿದ ತಳಿರ ತರತರ | ದಗಲದಲಿ ಪಸರಿಸುತ ಪದಕಂಟಕವ ಪಂಟಿಸುತ ॥ ಮೊಗಕೆ ಪುತ್ತುಗದೆಲೆಯ ಮರೆವಿಡಿ| ದಗಲಿದುವ್ಮುಹದಿಂದ ಜನಕನ | ಮಗಳ ನಡೆಸುತ್ತೈ ತಂದರೊಂದು ಮಹಾಸರೋವರಕೆ ||೧೯|| ಅಂಚೆ ಸುಕಪಿಕ ಚಕ್ರವಾಕ | ಕ್ರೌಂಚ ಬಕಕಾರಂಡನುಂಡಲಿ | ಯಿಂಚರದ ಮರಿದುಂಬಿಗಳ ಮೇಳವದ ಝೇಂಕೃತಿಯ ॥ ಸಂಚರಿಪ ಶಫರಿಗಳ ಸಾರಸ| ದಂಚಿತದ ಕಲುಹಾರಕೈರವ| ಸಂಚಿಸುವ ಸೌರಭ್ಯಪಂಕಜದಿಂದೆಸೆದುದಾಸರಸಿ ||೨೦|| ಸುಳಿದನೊಯ್ಯನೆ ಶೈತ್ಯಸಲಿಲೋ | ಚ್ಚಲಿತನೂನ ತುಷಾರಭಾರಾ | ಕಲಿತ ದಳಿತ ಸರೋಜ ಗಂಧಪರಾಗಯೋಗದಲಿ ॥ ತಿಳಿಗೊಳನ ತಳಿವಿಡಿದು ಮಂದ | ಸ್ಖಲಿತ ಮಾರುತನಾವನಾಧ್ವದ | ಬಳಕೆಯಲಿ ಬಿಸಜಪ್ರಿಯಾಸ್ಪದಸಂಗವೀಥಿಯಲಿ ॥ ಝುಳಧಗೆಗೆ ಡಾವರಿಸೆ ಹೊಕ್ಕರು | ಕೊಳನ ಕರಚರಣಾನನಂಗಳ | ತೊಳೆದು ಕುಡುತೆಯಲೀಂಟಿದರು ನಿರ್ಮಲ ಹಿಮೋದಕವ ॥ ಕಳದಪಥ್ಯಶ್ರಮವನಾತಿಳಿ | ಗೊಳನತೀರದು ತಳಿರುದೋರಿದ | ನಳನಳಿಪ ಮಾಮರದ ನೆಳಲಲಿ ಮೂವರವರಂದು ||೨೧|| ಮೂರುದಿನದುಪ್ಪಯಣಕುದ ಕಾ | ಹಾರ ನಿಬ್ಬರಿಗಾಯ್ತು ಕಳೆದರು | ವಾರಿಜದ ಕಂದದಲಿ ಹಸಿವನು ನಾಲ್ಕನೆಯ ದಿವಸ ॥ ಸಾರಿದರು ಜಾಹ್ನವಿಯ ಜಮುನೆಯ | ಭಾರತಿಯ ಸಂಗಮದ ಮಧ್ಯದ | ಪಾರಿಕಾಂಕ್ಷಿಪ್ರವರ ಭಾರದ್ವಾಜನಾಶ್ರಮವ ||೨೨|| ಪರಮಸತ್ಕಾರದಲಿ ಮುನಿಯುಪ | ಚರಿಸಿದನು ಬಳಿಕವರ ಗಮನದ | ಪರಿಯನರಿದನು ಪರಮಪುರುಷನ ನಾಟಕಸ್ಥಿತಿಯ ॥ ತರುಣಕೇಳೈ ಬಳಿಕ ನಿರ್ಜರ | ಗುರುತನೂಭವ ಚಿತ್ರಕೂಟದ | ಗಿರಿಗೆ ಕಳುಹಿದನಿವರ ನಾ ಮರುದಿವಸದುದಯದಲಿ ||೨೩|| ತುಂಗತರ ಧಾತುಪ್ರಕೀರ್ಣದ | ಶೃಂಗರದುರುಸಾನುವಿನಸುರಗಿಲ | ವಂಗಕದಳಿತವಾಲ ಚೂತಪ್ರಮುಖ ತರುಲತೆಯ ॥ ಸಂಗದಲಿ ಹರಿಶರಭಕುಲ ಸಾ | ರಂಗ ಸೂಕರ ಹರಿಣಮದವಾ | ತಂಗದೆಡೆಯಾಟದಲಿ ಗಿರಿಕಣ್ಗೆಸೆದುದಿದಿರಿನಲಿ ॥ ೨೫ ॥ ಇರವು ಬಳಿಕಾಸ್ಥಳ

ದೊಳಾಯ್ತಂ। ದರಸ ರಘುಪತಿಗಾನುಹಾ ಭೂ। ಧರದ ಮಧ್ಯಸ್ಥಳದ ಲಲಿತಪಲಾಶ ಭವನದಲಿ॥ ತೊರವೆಯಧಿಪತಿ ವೀರನರಕೇ। ಸರಿಯ ಕೈಯಲಿ ಬೀಳುಕೊಂಡಾ॥ ತರಣಿವಂಶದ ಸಚಿವಪತಿ ತಿರುಗಿದನು ಪಟ್ಟಣಕೆ॥ ॥೨೬॥

ನಾಲ್ಕನೆಯ ಸಂಧಿ ಸಮಾಪ್ತಂ.

ಐದನೆಯ ಸಂಧಿ.

ಸೂಚನೆ॥ ಚಂಡಕರಕುಲ ಕಮಲ ವನಮಾ। ರ್ತಾಂಡನಸ್ತಮಿಸಿದನು ಪೂರ್ವದ। ತಾಂಡವನ ಪಿತೃಶಾಪದಲಿ ನಿಜಸುತ ವಿಯೋಗದಲಿ॥

ಪದ್ಯ॥ ಕೇಳಿದೈ ಕುಶ ನಿಮ್ಮ ರಘುಭೂ। ಪಾಲಕನ ಕೈಯಿಂದ ಗಂಗಾ ಕೂಲದಲಿ ಬೀಳ್ಕೊಂಡ ಸೇನಾನಾಥ ದುಗುಡದಲಿ॥ ಮೇಲುಮುಸುಕಿನ ಮನದಮರುಕದ। ಜಾಳಿಸುವ ಕಂಬನಿಯ ಸುಯಿಲಿನ। ಸೂಳುಗಳ ಸಂತಾಪದಲಿ ತಿರುಗಿದನು ಪಟ್ಟಣಕೆ॥೧॥ ಅಗಲಲಾರದೆ ಮುರಿದು ನೋಡೆಯ। ದುಗುಡದಲಿ ಹರಿವಶ್ವನಾರಿಯು। ನುಗುಳಿಗತಿ ಗುಂದಿದವು ಗುಣಭರಿತನ ವಿಯೋಗದಲಿ॥ ಮುಗುಳೆ ಮುಗುಳೆ ಸುಮಂತ್ರ ಮನದ। ಬೈಗದಲುರಿ ಬೆಂಡಾಗಿ ವಿರಹದ। ಧಗೆಯದೊಳ್ಳಾಯಿಯಲಿ ಬಂದನು ಕೌಸಲಾವತಿಗೆ॥೨॥ ತೇರೊಳವರನು ಕಾಣದಳಲಿತು। ಪೌರಜನವಲ್ಲಲ್ಲಿ ರಾಜ। ದ್ವಾರವನು ಹೊಕ್ಕನು ಸುಮಂತ್ರನು ಶೂನ್ಯಹರುಷದಲಿ॥ ವಾರಿಜಪ್ರಿಯನಸ್ತಶೈಲವ। ಸಾರೆಸಾರಿದನಕ್ಷಿಯುಗಳದ। ವಾರಿಗಳ ಬೀಳಿಕೆಯ ಬಿಸಸುಯಿಲಿನ ಮಹೀಪತಿಯ॥೩॥ ಬಿಟ್ಟು ಬಂದೈ ನಂದನರ ನೀನು। ಪಿಟ್ಟುಬಂದೈ ರಾಜಪುತ್ರರ। ನಟ್ಟನಡವಿಯಲಿ ನಿರ್ಜನಾರಣ್ಯಪ್ರದೇಶದಲಿ॥ ಕೆಟ್ಟನುಡಿದರೆ ತನ್ನ ನೇನೆಂ। ದಟ್ಟಿದರು ನಿನ್ನುವನು ತನುವಿದು ತುಟ್ಟಿಪದ ಮುಂದಿದ್ದುದನು ಹೇಳೈಯ್ಯ ನಮಗೆಂದ॥೪॥ ಜನಪಕೇಳಿಲ್ಲಿಂದ ತೆರಳಿದ। ದಿನದೊಳಿರ್ದರು ತಮಸೆಯಲಿ ಮರು। ದಿನದೊಳಿರವಾಯ್ತು ಮಲ ವೇದಾವತಿಯ ತೀರದಲಿ॥ ದಿನವೆರಡರಿಮ್ಮೇಲೆ ಮುಂದಾ। ಕಿನಿಯ ನೈದಿದರಲ್ಲಿ ತನ್ನನು। ಜನಕಗಿಲ್ಲಾಪ್ತರುಗಳಿಂದಟ್ಟಿದರು ದುಗುಡದಲಿ॥೫॥ ಬಳಿಕಲವರೇನಾದರೆಂಬುದ। ತಿಳಿಯದಿಲ್ಲೆನೆ ಕೇಳುತವನಿಪ। ನಿಳುಹಿದನು ನಿಜಕಾಯವನು ಕೌಸಲೆಯ ವಕ್ಷದಲಿ॥ ಕಳುಹಿದನು ಕೈಸನ್ನೆಯಲಿ ನಿಜ। ನಿಳಯಕಾ ಮಂತ್ರಿಯನು ಭೂಪತಿ। ಹಳವಿಸಿದನಡಿಗಡಿಗೆ ನೆನೆನೆನೆದಾ ಕುಮಾರಕರ॥೬॥ ಹುದುಗಿಸೆಲೆರಾಜೇಂದ್ರ ಸತ್ಯಾ। ಸ್ಪದನಲಾ ನೀ ನಿನ್ನ ಕುಲಸಂ। ಪದದ ಸಿರಿಗಾಭರಣನಾದನು ಪುತ್ರನೆಂದೆಂಬ॥ ಮುಪವಿರಲು ಬೇಕಿಲ್ಲದೀಪರಿ। ಗದಗದಿಪಲಹುದೇ ದೃಢವ್ರತ। ಸಪಮುಳದ ಸತ್ಪುರುಷರೆಂದಳು ಕೌಸಲಾದೇವಿ॥೭॥ ಮುಳಿವಮುಗಸೇ ಮರುಳಲಾಮುಹಿ। ಗುರುವ ಸುಕುಮಾರಕನ ಕಾನನ। ಕುರುಬಿ ಸಂತೈಸಿದರೆ ನಿಲುವುದೆ ಮನವು ನಮಗೆಂದ॥ ಕುರುಬನಾದೆನು ಕೈಯಮೇಲೆ। ಚ್ಚರಿಸಿತಕಟಾ ಪುತ್ರವಿರಹದ। ಮರುಕವೂರುಜ ತಾಪಸರ ಬಲುಶಾಪ ತನಗೆಂದ॥೮॥ ಯುವತಿಕೇಳುನ್ಮತ್ತ ಯೌವನ। ದವತರಣದಲಿ ತನಗೆ ನೆರೆಸಂ। ಭವಿಸಿತನಾಕಿರಾಚೋನೃಪೋತ್ಸೈಂಬನಾಣ್ನುಡಿಯ॥ ನೆವಗಿದೀಗ ಪವರ್ತನವ ಮೃಗ। ನಿವಹ

ತೀರ್ಥವ್ಯಸನ ಕೊಂಡೊಯ್ | ದವಚಿತೆನ್ನನು ವಿಧಿಪುರಾಕೃತ ವಾರವಶವೆಂದ ||೯||
ಅಂಬುಜಾನನೆ ಕೇಳು ತಾಂತವ | ನೆಂಬಮುನಿ ಪಿತೃಮಾತೃಸೇವಾ | ಲಂಬಕನು ತೊಳಲಿವನು ನಾನಾ ತೀರ್ಥಯಾತ್ರೆಯಲಿ || ಜಲವನು ತರಲೆಂದು ಪಿತೃಗಳ | ಕಂಬಿಯನು ಏರಿರಿಸಿ ಚರ್ಮದ | ತಂಬುಗೆಯ ಕೊಂಡರಸುತೈದಿದನವನು ಜೀವನವ ||೧೦|| ತೋಹಿನಲಿ ತಾನಿರುಳು ಶರಸ | ನ್ನಾಹನಾಗಿತೆ ತಾಂಡವನು ತ | ದ್ವ್ಯಾಪಿನಿಯೊಳದ್ದಿದನು ಕರವತಿಗೆಯನು ಕೈನೀಡಿ || ಮೋಹಿಸಿತು ಘುಳುಘುಳು ಸಿನಾದವ | ರಾಹುನಿಸ್ವನದಂತೆ ಮುನಿಯೆಂ | ಬೂಹೆಕೊಳ್ಳದೆ ಹರಿದುದೆನ್ನಯ ಚಿತ್ತವಘಪಥಕೆ ||೧೧|| ಆ ರವದ ಧನಿಗೊಡುವದನು ಭೂ | ಧಾರವೆಂದೇ ಮಾಡಿ ಹೂಡಿದ | ಕೂರಲಗು ಬಿಡಲೊಡಲ ತಾಗಿತು ವೈಶ್ಯಮುನಿವರನ || ಭಾರಿಬಾಣ ವ್ಯಥೆಯನಾಮುನಿ | ಸೈರಿಸದೆ ಶಂಕರ ಸದಾಶಿವ | ಮಾರಹರ ಯೆಂದೆನುತ ಹಂಮ್ಮೈಸಿದನು ಮೂರ್ಛೆಯಲಿ ||೧೨|| ಇದುವಿಚಿತ್ರವೆನುತೆ ಹರಿದೆ | ಯಿದ್ದೆನು ನಿಲ್ಲದೆ ಬಿಲ್ಲನಲ್ಲಿಬಿ | ಬಿದಿರಿಬಳಿಕಿದಿರಿನಲಿ ಕಂಡೆನು ಕೆಂಡದ ತಾಂಡವನ || ಕದಡಿತೆನ್ನಯ ಹೃದಯ ಹೃದಯವ | ಹುದುಗಿತಘವಘನುರಿಗೆ ತನುಬೆದ | ಬೆದನೆ ಬೆಂದಿಂತೆಂದೆನಾ ಮುನಿಗರಸಿಕೇಳೆಂದ ||೧೩|| ನರದು ರಜನೀಮುಖವ ಸೀಮಾ | ಚರಿತದುತ್ತರ ಭಾಗ ರಾತ್ರೀ | ಚರರಿಗಾಗಿಹುದಿದುವೆನೀನರನೋ ನಿಶಾಚರನೋ | ನಿರುತವಾವುದು ಹೇಳೆನಲು ನಾ | ವ್ನರರು ವೈಶ್ಯರು ತೀರ್ಥಯಾತ್ರಾ | ಚರಿತರಿನ್ನಾರಾದಡೇನೆಮಗಾಯ್ತು ಹರಿವೆಂದ ||೧೪|| ಹಳೆದಿನದ ತಾಯ್ತಂದೆಯರ ಬಿಡ | ದಲಸದವರನು ಹೊತ್ತು ತೊಳಲಿದ | ನಿಳೆಯೊಳುಳ್ಳ ಸಮಸ್ತತೀರ್ಥಕ್ಷೇತ್ರ ಗಿರಿವನದ || ಉಳಿದುದೊಂದೇಕಾಸಿ ಕಾಸಿಯೊ | ಳುಹುವೀಸಂಕಲ್ಪ ವಿದುತಾ | ನಿಲುಕದಾದುದು ದೈವಗತಿ ಬೇರಿದ್ದುದೆನಗೆಂದ ||೧೫|| ಅರಿದನನ್ನನು ಯನ್ನಮಾತಿನ | ನಿರುಗೆಯಲಿ ನೃಪನೆಂದು ಮೇಲೆ | ಚ್ಚರಿಸಿದನು ತನಗಾತ್ಮವಿದ್ಯಾವಿಷಯಬುದ್ಧಿಗಳ || ನೆರೆವುದಾರಾಯುಷ್ಯ ಪಾರಿಂ | ದರಿದುಕೋಚಿತ್ಪ್ರಭೆಗೆ ಮಾಯೆಯ | ಮರೆಯ ಜವನಿಕೆಯಾಕೆ ನೀನಿದಕಳುಕಬೇಡೆಂದ ||೧೬|| ಎಲೆಮಹೀಪತಿ ನಿನ್ನಮನದ | ಸ್ಖಲಿತ ಕಲ್ಮಷ ವಿಪಿನಕಿದಕೋ | ಜ್ವಲನಸತ್ಕರ್ಮಪ್ರಪಂಚದ ಸಾರಸಂಸ್ಕಾರ || ಹಲವು ಮಾತೇನೆಮ್ಮಮಾತೆಯ | ಸಲಹು ತಾತನ ರಕ್ಷಿಸಕ್ಷಯ | ಫಲವ ಪ್ರಾಯಶ್ಚಿತ್ತವಿದು ನಿನಗೆಂದುಮುನಿನುಡಿದ ||೭|| ನೀರನೆರೆಕೊಂಡೊಯ್ದು ಮೇಲುಪ | ಚಾರವೇನದ ಮಾಡು ಗಂಗಾ | ತೀರವನುಸಾರುವದೆ ಕೋಡೊಯ್ದುಳುಹ-ಕಾಶಿಯಲಿ || ಭಾರವಿದು ನಿನಗದುವೆ ಮೃತಸಂ | ಸ್ಕಾರಪರಿಯಂತರವ ಕೇಳೆಂ | ದೂರುಜಪ್ರತಿಸರಳಕೀಳಿಸೆ ಮುಗಿದನಕ್ಷಿಗಳ ||೧೮|| ಹರನ ಗಂಗಾಧರನ ಗಿರಿಜಾ | ವರನ ಶಶಿಶೇಖರನ ಶೋಭಾ | ಕರನ ಸರ್ವೇಶ್ವರನ ವಿಜಿತಸ್ಮರನ ಶಂಕರನ || ಪರಮ ಮೂರ್ತಿಯ ಹೃದಯಕಮಲದೊ | ಳಿರಿಸಿ ಸಂಧಾನದಲಿ ಜೀವವ | ತೆರಳಿಚಿದ ನೊಡೆಹಾಯ್ದುದಾತ್ಮಜ್ಯೋತಿ ಮೂರ್ಧ್ನಿಯಲಿ ||೧೯|| ಹೊತ್ತಿಹೊಗುವನು ತಾಪದಲಿ ನೀ | ರೊತ್ತಿದಂಬಕದಿಂದ ಬಿಡದರ | ಸುತ್ತ ಬಂದೆನು ಕರವತಿಗೆ ಜಲಸಹಿತ ತಾಂಡವನ || ಹೆತ್ತ ತಾಯ್ತಂದೆಯರ ತಂದೆನು | ಮುತ್ತುಸಡಲಿದಚಿಪ್ಪಿನವೊಲಳ | ಲುತ್ತ ಬಾಯ್ಬಿಡುತಿಹ ಪುರಾಣ

ಶರೀರ ತಾಪಸರ ॥ ೨೦ ॥ ನೀರೊಳಗೆ ಜಾರಿದನೊ ಮೇಣ್ಕಾ । ಟೋರಗನೊಳಳಿ
ವಾಯ್ತೊ ದುಷ್ಟಚ । ಮೂರ ಚಪ್ಪರಿಸಿದ ದೊ ಕೆಡದನೊ ಹಳ್ಳ ಕೊಳ್ಳದಲಿ ॥
ಕ್ರೂರಲುಬ್ಧರ ಶಸ್ತ್ರಹತಿಯಲಿ । ತೀರಿದನೊ ಹಾಕಂದ ಹಾ ಯಂ । ಬೂರುಜಪ್ರತಿ
ಗಳನು ಕಂಡತಿಮರುಕವಾಯ್ತೆಂದ ॥ ೨೧ ॥ ನೊಂದೆನಾ ನುಡಿಗೇಳುತವೆಪೂ ।
ರ್ಣೇಂದುಮುಖಿ ಕೇಳ್ತಾಂಡವನ ತಾ । ಯ್ತಂದೆಗಳು ಧಸಿದೋರದಿಳುಹಿದೆನಿಳೆಗೆ ಮರ
ನಿಂದ ॥ ಇಂದಿದೇನೈ ತಡವೆ ನೀರನು । ತಂದಡೆರೆ ತಮಗೆ ನಲುವಿಗತಾ । ನಂದವೂ
ನಸನಾಗಿ ಬಳಿಕೆರೆದೆನು ಹಿಮೋದಕದ ॥ ೨೨ ॥ ಹೊಲಸುದೋರಿದೆ ಮಗನೆ ಜಲ
ವೆಮ । ಗಲಸಿದೆಯಲಾ ಸೇವೆಯಲಿ ವಿಧಿ । ಮುಳಿಯನಕಟಾ ಪಾಪಿಗಳಿಗೆನುತೊಕ್ಕ
ರಾಜಲ ॥ ಬಳಿಕ ತನ್ನಿಂದಾದಹದನನು । ತಿಳಿಯಹೇಳಿದುಃಖವನು ಕೈ । ಗೊಳಿಸಿ
ತನಗೆಂದವರ್ಗೆ ಕೈಗಳ ಮುಗಿದೆನಾನೆಂದ ॥ ೨೩ ॥ ಹೊರಳಿದರು ಧಾವಡಿಯೊಳಕಟಾ ।
ಕರುಣಿಸಿದನೆ ವಿಧಾತನೀಪರಿ । ಕರೆದ ಸುತಶೋಕವನು ಹಾಹಾಮಗನೆ ನಮ್ಮವನು ॥
ಪರಕೆಸಲಿಸದೆ ಮುಂದೆ ನೀನೀ । ಪರಿಯಲ್ಪೋಪರೆ ಕಂದ ಯೆಂದನು ರುರುಳಿಸಿದರಶ್ರು
ಗಳ ನೆಲುಗುವ ಶಿರದ ಶೋಕವಲಿ ॥ ೨೪ ॥ ಎಲೆ ಮಹಾಪುರುಷನೆ ಪುರಾಕೃತ । ಫಲ
ವಿದೆಮಗಿನ್ನಾದರೆಯು ನಾ । ವಿಳಿಕೆಗೈಯದಮುನ್ನ ನಿನ್ನಿಂದಳಿದ ತಾಂಡವನ ॥ ಬಳಿಗೆ
ಕೊಂಡೊಯ್ದಿರಿಸು ನಿಜಸುತ । ನೊಳಗೆ ಮಾತುಂಟೆಮಗೆ ಕಾರ್ಯದ । ಹದನವಿದು
ನಿನಗೆಂದು ಕೈಗಳಮುಗಿದರೆನಗೆಂದ ॥ ೨೫ ॥ ಹೊತ್ತುಕೊಂಡೊಯ್ದಿಳುಹಿದೆನು ನದಿ ।
ಯೊತ್ತಿನಲಿ ತಾಂಡವನ ಬಳಿಯಲಿ । ಕುತ್ತಿದಂಬಿನ ಗಾಯವನು ತಡವರಿಸಿ ಮುಡಂ
ಬುಗಳು ॥ ಇತ್ತಭಾಷೆಯ ಸಲಿಸದುರೆಬೇ । ಸತ್ತು ಬಿಸುಟೈ ನಮ್ಮ ಯಮಗಿಂ । ನೆತ್ತ
ಸಥ ವೆಮಗೇನುಗತಿ ಹೇಳೆಂದರವರಂದು ॥ ೨೬ ॥ ಅಳಿದಮಗನೋಪಾದಿ ನಿಮ್ಮನು ।
ಸಲಹುವೆನು ನಂಬುವದು ನೀವೆನ । ಲಳಲಿ ಬಳಿಕಸು ವಿಡಿಯಲೊಲ್ಲದೆ ಸುತವಿಯೋಗ
ದಲಿ । ಅಳಿವುಶೋರಲಿ ನಿನಗೆನುತ ಸುರ । ನಿಳಯಕಭಿಮುಖರಾದರನಿಬರು । ಜ್ವಲನ
ಸಂಸ್ಕೃತಿಯಿಂದ ಮಾಡಿದೆನೂರ್ಧ್ವದೈಹಿಕವ ॥ ೨೭ ॥ ಎನುತ ಬಹಿರಂಗದಮನಸ್ಸಂ ।
ಜನಿತ ಭವಮಾಯಾಪ್ರಪಂಚವ । ನೊಸೆದು ನಿರ್ಮಳಸಚ್ಚಿದಾನಂದಸ್ವರೂಪದ ॥
ವಿನುತಯೋಗಜ್ಞಾನತತ್ವದ । ನೆನಹಿನಲಿ ನಿಜಪೈಕ್ಯತರ ಭಾ । ವನೆಯಲಿಬಿಟ್ಟನು
ಕಳೇಬರವನು ಮಹೀಪಾಲ ॥ ೨೮ ॥ ಮೇಲಣುತ್ತರವಿಲ್ಲದಿರೆ ಭೂ । ಪಾಲಕನ ಮುಖ
ಚೇಷ್ಟೆಯನು ಮುರಿ । ದಾಲಿಗಳಲರಿದಕಟ ಕೆಟ್ಟೆನು ಕೆಟ್ಟೆನೆಂದೆನುತ ॥ ಬಾಲಕರಿಗಿ
ನ್ನೇನುಗತಿ ಭೂ । ಪಾಲಹೇಳೈ ಹೇಳೆನುತ ನಿಜ । ಭಾಳವನುಭಾಳದಲಲಂಕರಿಸಿದಳು
ಶೋಕದಲಿ ॥ ೨೯ ॥ ಸುತವಿಯೋಗದ ಶೋಕದಿ ನಿಜ । ಪತಿ ವಿಯೋಗದ ಶೋಕ
ತಟನೀ । ಪತಿಯ ಸಂಗಮವಾದುದಿರ್ದಳು ಕೌಸಲಾದೇವಿ ॥ ಕ್ಷಿತಿಸುತಾಸುತಕೇಳು
ನೆರೆದುದು । ಸತಿಯರಾ ದಶರಥನ ಹಾ । ಹಾಕೃತಿಯ ಕಲಿತಾಕ್ರಂದನಾಧ್ವನಿ ತುಂಬಿತಂ
ಬರವ ॥ ೩೦ ॥ ಅರಿದು ನೃಪವಾರ್ತೆಯರು ಪುರಜನ । ವರಮಂತ್ರಿರೆ ಬೇಗ ವೈತ್ತಾ ।
ವರುಣಿ ದೃಷ್ಟಿ ಸುಮಂತ್ರ ಮುಖ್ಯರಿಗರುಹಿದನು ಹದನ ॥ ಪುರದ ಬಾಗಿಲಿಗರಸನೆಗೆ ತಾ
ತ್ಪುರದ ಕೇರಿಗಳೊಳಗೆ ಕಾವಲ । ನಿರಿಸಿ ಹೊಕ್ಕರು ಕಂಡು ಮರುಗಿದರವರು ನೃಪ
ನಿರವ ॥ ೩೧ ॥ ಸೂಳಗಿಪ ಬಲು ಚಿಂತೆಯಲಿ ಭೂ । ಪಾಲ ಮರಣದಮೇಲೆ ಮುನಿಕುಲ ।

ಮೌಳಿ ದೃಷ್ಟಿ ಸುಮಂತ್ರ ಮುಖ್ಯ ಸಮಸ್ತ ಮಂತ್ರಿಗಳು ॥ ಮೇಲಣಭಿಗತಕಾರ್ಯ ದವನೀ । ಪಾಲ ಸದವಿಗೆ ಕೈಕೆಯುಕ್ತ್ಯಾ । ಪಾಲಕನ ನೊಮ್ಮಗನು ಕರೆಸಲು ಮಾಡಿದರು ಮತವ ॥ ॥೩೨॥

ಐದನೆಯ ಸಂಧಿ ಸಮಾಪ್ತಂ.

ಆರನೆಯ ಸಂಧಿ.

ಸೂಚನೆ॥ ಅರಸುತನ ಕೊಡಬಡದೆ ರಘುಕುಲ । ದರಸನಲ್ಲಿಗೆ ಬಂದು ನೇಮವ। ಧರಿಸಿ ಮರಳಿದು ಭರತ ನಂದಿಗ್ರಾಮಕೈತಂದ ॥

ಪದ್ಯ॥ ರಾಯನಾಯುಷ್ಯಾವಸಾನದ । ರಾಯಸವ ಬರೆಸಿದರು ಕೈಕೆಯ । ರಾಯನಲ್ಲಿಗೆ ಕಳುಹಿದರು ಬಳಿಕಾಪ್ತಗುಪ್ತಿಗಳ ॥ ರಾಯದಶರಥನಸುವಿಸಂಚಿತ । ಕಾಯವನು ನವತಪ್ತತೈಲದ । ಲಾಯಸಂಬಡಿಸಿದರು ಮೇದಿಸಿದರು ಸುಗಂಧದಲಿ ॥ ೧ ॥ ವರದುಕೂಲವನುಡಿಸಿ ವಸುಧಾ । ಸ್ತರಣದಲಿ ಪಟ್ಟರಿಸಿ ಜಾಡ್ಯಾ । ಸ್ಪದನೆಂದೂರೊಳಗೆ ಹರಹಿದರುದಯಕಾಲದಲಿ ॥ ಹರಿದರಿತ್ತಲು ಲೇಖವಾಹಕ । ರಿರುಳು ಹಗಲೆನ್ನದೆ ಗಿರಿವ್ರಜ । ಪುರವ ಹೊಕ್ಕರು ಕಂಡರಾಕೈಕೆಯ ಕುಮಾರಕನ ॥ ೨ ॥ ಇತ್ತರೋಲೆಯನೆವವಿರವದಿರ। ಹತ್ತಿರಕೆ ಕರೆದೈಯ್ಯನಿರವಿಗೆ । ಚಿತ್ತದಲಿ ಶಂಕಿಸುತ ಹದನೇನೆಂದು ಬೆಸಗೊಳಲು ॥ ಹೊತ್ತ ರಾಜ್ಯಶ್ರೀಯ ನಿಮ್ಮಡಿ । ಯುತ್ತಮಾಂಗದಲಿರಿಸಿ ಸುರಪುರ । ದತ್ತ ಸರಿದರು ರಾಯ ದಶರಥ ನೆಂದರಾ ಚರರು ॥ ೩ ॥ ಐಸೆ ಮತ್ತೇನೆಂದು ಕಲಿತ । ಕ್ಲೇಶವನು ತಾಪದಲಿ ಹೊರವಂ । ಟಾಸುಮಿತ್ರಾಸೂನು ಸಹ ಚತುರಂಗಬಲ ಸಹಿತ ॥ ವಾಸರತ್ರಯಕೈದಿದನು ವರ । ಕೌಸಲಾನಗರವನು ಗತಭೂ । ವಿಾಶನಿದಿರಲಿ ಬಿದ್ದು ಹೊರಳಿದನಧಿಕಶೋಕದಲಿ ॥ ೪ ॥ ಕೇಳಿದನು ಸುತವಿರಹದವಸೀ । ಪಾಲ ಮರಣವನಧಿಕ ಶೋಕ । ಜ್ವಾಲೆ ಥಳ್ಳಿಸಿತಗ್ರ ಜನ್ಮಪಯೋಗ ವಿಶ್ರುತದ ॥ ಆಲಿಯಲಿ ಕಿಡಿಗೆದರಿ ಜನನಿಯ । ಮೇಲೆ ಮುಳಿದಳಿವಿಂಗೆ ಜಡಿದನು । ಬೀಳ ಬಳಿಕ ವಸಿಷ್ಠ ಕಂಡಡಹಾಯ್ದನಾಯುಧಕೆ ॥೫॥ ಜರೆದು ಭರತನ ಕೈಯ ಖಡುಗನ । ನೊರೆಗೊಳಿಸಿ ಧರ್ಮದ ರಹಸ್ಯವ । ನರುಹಿ ಬಳಿಕ ಪರೇತಕೃತ್ಯವ ಪರಮವೈದಿಕದ ॥ ನಿರುಗೆಯಲಿ ಮಾಡಿಸಿದ ನಗ್ನಿಯ । ಲೊರಗಿತೈನೂರರಸಿಯರು ನೇ । ಸರುಕುಲಾಧಿಪನೊಡನವರ್ಗಳಿಗಾಯ್ತು ಸಂಸ್ಕಾರ ॥ ೬ ॥ ಸದನದೀತೀರದಲಿ ಗೃಹಸಂ । ಪದವಸಹಿತ ಸಕ್ಷೇತ್ರಕನ್ಯಾ । ವಿದಿತ ವಿವಿಧ ಸುವರ್ಣ ವಸ್ತ್ರಾಭರಣ ದಾನದಲಿ ॥ ಮದುವೆ ಕೆರೆಪುರವಟಿಗೆ ಯಾತ್ರಾ । ಸದನ ನಾನಾಶಾಸ್ತ್ರ ಸಂಪೂ । ರ್ಣದಲಿ ಮಿಗೆ ಮೆಚ್ಚಿದನಾ ಮನುವಂಶದರಸುಗಳ ॥೭॥ ದಿವಸ ಹದಿಮೂರರಲಿ ಕೈಕಾ । ಭವನ ನೊಡಬಡಿಸಿದರು ಮುನಿಪುಂಗವ । ಸುಮಂತ್ರಕರರಸುತನಕೆ ನೃಪಾಲ ಮತವಿಡಿದು ॥ ಅವನಿಸುತೆ ತಾಯಿ ರಾಮಪಿತನೆಂ । ದವರುಗಳ ನೊಡಬಡಿಸಿ ನೃಪನಗ । ರವನು ಹೊರಂಟನು ಕಕುಸ್ಥಾನ್ವಯನ ದರುಶನಕೆ ॥ ೮ ॥ ಕೂಡೆ ಹೊರಸಂಟರು ಸುಮಂತ್ರಕ । ಗೂಡಿ ಸಚಿವ ನಿಯೋಗಿಗಳು ಹೊರ । ಬೀಡ್ರು ಬಟ್ಟರು ಮುಂಡೆ ಮನ್ನೆಯ ಮಂಡಲೇಶ್ವರರ ॥ ಜೋಡಿಸಿದ ಕರಿತುರಗರಥವೆಡೆ ।

ಯಾಡಿದುವು ಗುಡಿಮಂಡಲಿಕೆಗಳ | ಹೊಡಿದೆತ್ತಿನ ಬಂಡಿಗಳು ನಡೆಗೊಂಡವಗಲದಲಿ॥೯
ಇರಿಸಿದನು ಪಟ್ಟಣದ ರಕ್ಷಣೆ | ಗೆರಡನೆಯ ಸೌಮಿತ್ರಿಯನು ನಾ | ಲ್ವರು ವ ಹಾ
ಮಂತ್ರಿಗಳ ನನ್ವಯದಾಪ್ತಪರಿಜನವ ॥ ಹರಸಿದನು ನಾನಾದಿಗಂತಕೆ | ಚರರ ನಪೀನಾ
ರಣ್ಯ ನದಿ ದು | ಸ್ತರ ಮಹೀಧರನಿಕರದೆಡೆಗರಸಲು ನಿಜಾಗ್ರಜನ॥೧೦॥ ಕೇಳಿಕೊಳುತಾ
ಭರತನಧಿಕ ಕೃ | ಪಾಳುವನು ಕಾಬುಜ್ಜುಗದ ಪರಿ | ಪಾಳಿಯಿಂದೈದಿದನು ಪುರವರವ॥
ಪಾಳೆಯವನಿದ ಕಾಣುತಾಗುಹ| ನಾಳು ಕುದುರೆಯಕೂಡಿ ಗಮನದ | ಜಾಳಿಯಾ ವೃದೊ
ತಿಳಿಯಬೇಕೆಂದಲ್ಲಿಗೈತಂದ ॥ ಅವನ ಮನ್ನಿಸಿ ಕಂಡುದುಂಟೇ | ರವಿಕುಲೇಂದ್ರನ ರಾಮ
ಚಂದ್ರನ | ಭುವನಜನ ವಂದ್ಯನನನಿಂದ್ಯನ ನಿಖಿಳಗುಣಯುತನ ॥ ನವರಮಾಕ್ಷಿತಿಪಾಲ
ಕನ ನೆನ | ಲವನು ಮನದಲಿ ವೈರಬುದ್ಧಿಯ | ತವರು ಬಂದವರಲ್ಲವೆನುತಿಂತೆಂದನರ
ಸಂಗೆ ॥ ಜನಪಚಿತ್ತೈಸಾದಡಾ ಶ್ರೀ | ಸ್ತನಸುಕುಂಕುಮ ಪಂಕದಂಕಿತ | ವಿನುತ ವಕ್ಷ
ಸ್ಥಳನು ಸೀತಾದೇವಿಯುರುಸಹಿತ | ಅನುಜ ಲಕ್ಷ್ಮಣಸಹಿತ ಮಂದಾ | ಕಿನಿಯುದಾಟಿ
ಸುರೇಂದ್ರಗುರು ನಂ | ದನನ ನಂದನಕ್ಕಾಗಿ ಗಮಿಸಿದರರಸಕೇಳೆಂದ ॥ ೧೩॥ ಬಳಿಯ
ಲೋಲೈಸುತಲವರನು | ಕಳುಹಿದೆನು ಸುರಗುರು ತನೂಜನ | ಬಳಿಗೆ ನೀನಾವಮುನಿ
ವಚೋವಿಸ್ತರವಿಳಾಸಕವ॥ ತಿಳಿವುದೆನೆ ಬಳಿಕಾಭರತ ನಿಜ | ಬಲಸಹಿತ ಭಾಗೀರಥಿಯು
ಹಾ | ಯ್ದೊಲವುಮಿಗಲೈತಂದನಾಮುನಿನಾಥ ನಿದ್ದೆಡೆಗೆ ॥ ೧೪ ॥ ಆಭರದ್ವಾಜನು
ನಿಜೋನ್ನತ | ವೈಭವದಿನಾಭರತಮುಖ್ಯರು | ಹಾಭಟಸ್ತೋಮವ ನಿಭಾಶ್ವವರೂಥ
ವಾಹಕರ ॥ ಶೋಭಿಸುವ ಸುರಧೇನುವಿಂ ಪಾ | ಖ್ಯಾಭಿಸಂತುಷ್ಟಿಯಲಿ ಸುರರ ಸು |
ಖಾಭಿಲಾಷೆಯ ಬಿಡಿಸಿದನು ವಿವಿಧೋಪಚಾರದಲಿ ॥ ೧೫ ॥ ಬಳಿಕ ಭಾರದ್ವಾಜಮುನಿ
ಮನು | ಕುಲ್ಯದರಾಯನ ಚಿತ್ರಕೂಟಾ | ಚಲಕೆ ಕಳುಹಿದ ಹದನ ಭರತಂಗೊರೆಯೆ
ಬೀಳ್ಕೊಂಡು ॥ ತಳರ್ದನಲ್ಲಿಂಮೇಲೆ ಮುನಿಪದ | ನಳಿನ ಕಾನತನಾಗಿ ಸೇನಾ | ಜಲ
ನಿಧಿಯ ನಿರ್ಘೋಷ ನಿಲುಕಲಜಾಂಡಮಂಡಲವ ॥ ೧೬ ॥ ಕುಶನೆಕೇಳಾಭರತ ಸೇನಾ |
ವಿಸರಪದಹತಧೂಳಿ ಗಗನವ | ಮುಸುಕೆ ವಿಬುಧ ತರಂಗಿಣಿಯ ನಿಂಗಿಸಿತು ರಂಜಿಸಿತು ॥
ಬಿಸರುಹಾಸನ ಪುರವ ನುಸಿಕೀ | ಲಿಸಿ ತಜಾಂಡವವಾದ್ಯರವ ನೆರೆ ॥ ಕೆಸರುದೋರಲು
ಜಮುನೆ ದಾಂಟಿತು ಭರತಪರಿವಾರ ॥ ೧೭ ॥ ಬಂದುಬಿಟ್ಟುದು ಸೇನ ಶೈಲವ | ಹಿಂದು
ಮುಂದಿದ್ದೆಸೆಯುಲಾ ಬಲ | ವೃಂದದದ್ಭುತ ನಿನದ ಕಿವಿಗೇಳಿಸಿತು ರಘುಪತಿಯ ॥
ಬಂದವನದಾರರಿದುಬಾ ಹೋ | ಗೆಂದು ನೇಮಿಸೆ ಬಳಿಕ ಭರತನ ಸ್ಯಂದನವ
ಕಂಡರಿದು ಲಕ್ಷ್ಮಣದೇವ ಹಲುವೊರೆದು ॥ ೧೮ ॥ ಆಗಲದಕೇನೀತ ವೈರೋ |
ದ್ಯೋಗಗರಿಗೊಡರಿಸಿದನಾದೊಡೆ | ಕಾಗೆ ಹದ್ದಿಗೆ ಹರಹುವೆನು ಕಡಿದೀಚತುರ್ಬ
ಲವ ॥ ಮೇಲೆಬರಲಪಕೀರ್ತಿ ಯದಕೇ | ನೀಗಳೆಣಿಕೆ ಯೆನುತ ಕರುಣಾ |
ಸಾಗರನ ಬಳಿಗೈದಿ ಬಿನ್ನಹ ಮಾಡಿದನು ಹದನ ॥ ೧೯ ॥ ಭರತ ಬಂದವ ಬಂದ
ಹದನೇ | ನರಿಯಬಾರದುಜೀಯ ಬೆಸಸೊಂ | ದರಿನಿಮಿಷ ನಿರ್ವಹಿಸಿ ತೋರುವೆ
ನೀಗ ನಿರುಪಮದ ॥ ಧರೆಯ ದೂಷಿಸಿಕೊಂಡುದಲ್ಲದೆ | ಧುರಕೆಬಹುದಿದು ಗುಣವೆ
ಯೆಂದು | ಬ್ಬರದ ರೋಷಾವೇಶದಲಿ ಸೌಮಿತ್ರಿ ಗರ್ಜಿಸಿದ ॥ ೨೦ ॥ ಮರುಳಲಾ
ಯೆಲೆತಮ್ಮ ಪಡುವಲು | ತರಣಿತಲೆದೋರಿದಕೆ ವೈರವ | ಧರಿಸಬಲ್ಲನೆ ಭರತನಾ

ರೆಂದರಿಯಲಾ ನೀನು | ತರಹರಿಸು ಕಟ್ಟುಗ್ರವನು ನಿ | ಷ್ಠುರತೆ ಸಾಕಿನ್ನೆಂಬ ಸಮನಂ|
ತರದೊಳಿಳಿದು ವರೂಥವನು ವೈಯಿಕ್ಕುತೈ ತಂದ || ೨೧ || ಬಳಿವಿಡಿದು ಕೌಸಲೆ
ಸುಮಿತ್ರಾ | ಲಲನೆ ಕೈಕೆ ಸುಮಂತ್ರರಾಮುನಿ | ಕುಲಲಲಾಮ ವಸಿಷ್ಠರಿವರಂದಣ
ಗಳಿಂದಿಳಿದು || ನಳಿನನಯನನ ಕಾಂಬತವಕದಿ | ತಳಿತಹರುಷದ ತುರುಗಿದಂಗೊ|
ಚ್ಚಲಿತಪುಳಕದಿನೈದಿದರು ರಘುಸಾರ್ವಭೌಮಕನ || ೨೨ || ದೇವ ತಾಟಕಿಯಸುವಿ
ಸಂಚಿತ | ದೇವ ವೀರಸುಬಾಹುಜಿತ ಜಯ | ದೇವಮಾರೀಚಪ್ರತಾಪಪ್ರಕಟ ವಿಜಯ
ಜಯ || ದೇವ ಮುನಿಮಖಪಾಲನಾ | ವಿಭ್ರಾವಿತಾಮಳ ಕೀರ್ತಿಕಾಂತಾ | ಜೀವಿತೇ
ಶ್ವರ ಜಯಯೆನುತಡಿಗೆರಗಿದನು ಭರತ || ೨೩ || ದೇವ ಗೌತಮವಧ ವಿಶಾಪಕೃ|
ಪಾವಲಂಬನ ಕಪಟನಾಟಕ | ದೇವ ಹರಕೋದಂಡಖಂಡನ ಚಂಡಬಾಹುಬಲ | ವೈ
ದೇಹಿಯ ವಿವಾಹಮ | ಹಾವಿಭವ ಭೃಗುಜಪ್ರತಾಪ ಹ | ರಾವತಾರ ವಿನೋದ
ವೈಭವ ರಾಮನಮೋಯೆಂದ || ೨೪ || ಎದ್ದು ಬಳಿಕಪ್ಪಿದನು ನೇಹದ | ಹೊದ್ದಿಗೆ
ಯಲನುಜನನು ತಾಯಿಗ | ಳಿದ್ದಹದನನು ಕಂಡು ಕಂಗಳಲೊಗೆಸಿದನುಜಲವ ||
ತಿದ್ದಿತೇಭವದೀಯಕರ್ನದ | ಹೊದ್ದಿಗೆಯ ಸೌಭಾಗ್ಯವಿಂದ್ರನ | ಗದ್ದುಗೆಯನಡರಿದನೆ
ಪಿತನೆನುತೆರಗಿದನು ಪದಕೆ || ೨೫ || ಆಳಲಿದರು ಬಳಿಕೊಬ್ಬರೊಬ್ಬರು | ಹಳಪಿಸುತ
ಹಲವಂಗದಲಿ ನೃಪ | ಕುಲಲಲಾಮಗೆ ವೀರದಶರಥಸಾರ್ವಭೌಮಂಗೆ || ತಿಳುಹಿ
ಬಳಿಕನಿಬರನು ಸಲಿಲಾಂ | ಜಲಿ ಮೃತಸ್ನಾನಾದಿಕರ್ಮ | ವಳಿಯ ವಿರಚಿಸಿ ಮುನಿ
ಪನುಪಚರಿಸಿದನು ರಘುಪತಿಯ || ೨೬ || ಲವನೆಕೇಳಾದಿನವನಾದಳ | ಭವನದಲಿ
ನೂಕಿದರು ಮರುದಿನ | ವವನಿಪತಿಗಾಭರತ ಭಯಭಕ್ತಿಯಲಿ ಕೈಮುಗಿದು || ಅವ
ಧರಿಸು ರಾಜೇಂದ್ರ ವಸುಧಾ | ಯುವತಿಗರಸಾಗೇಳು ರಕ್ಷಿಸು | ಭುವನಜನವನು
ಕೃಪೆಯ ಮಾಡೆಂದೆರಗಿದನು ಪದಕೆ || ೨೭ || ತಂದೆಯಡಗಿದಬಳಿಕ ನೀನೇ | ತಂದೆ
ತಾಯೆನ ಗವನಿಜಾತೆಯು | ನಂದಿಸುವರೇಮನವ ಮಕ್ಕಳು ಮರೆಯಮಾತೇನು ||
ಇಂದು ನೀನರಸಾಗದಿರೆ ತಂ | ಮಂದಿರದಲಿ ತಾನೊಬ್ಬ ನಿನಗಿ | ಲ್ಲೆಂದು ಚಿತ್ತೈಸುವ
ದೆನುತ ಬಿನ್ನೈಸಿದನು ಭರತ || ೨೮ || ಒಡನೆ ಭರತನ ಬಿನ್ನಹಕೆ ವೈ | ಗೊಡುವು
ದೆಂದು ಸುಮಂತ್ರಸಂಘಿಯ | ಹಿಡಿದನುಚಿತವಿದೆಂದು ಕೈಮುಗಿದನು ವಸಿಷ್ಠಮುನಿ ||
ಬಿಡಿಸಿದನು ಬಳಿಕವರವರ ಮನ | ದೊಡಕನನುಪಮ ನೀತಿಶಾಸ್ತ್ರದ | ಸಡಗರದ ಸತ್ಯ
ಪ್ರತಾಗಮುದನುನಯೋಕ್ತಿಯಲಿ ||೨೯|| ಬಂದು ಕೈಕಾದೇವಿ ಕಂಬನಿ | ಯಿಂದ ಮನ
ದನುತಾಪ ಶಿಖಿಯಲಿ | ಬೆಂದು ಬಳಿಕೀ ಮಾತನುಡಿದಳು ಚಿತ್ತಶುದ್ಧಿಯಲಿ || ಹಿಂದೆ
ನೆನೆದಪಕೃತವ ನೆರೆ ಮರೆ | ದಿಂದು ಪಾಲಿಸು ಧರೆಯ ಕೇಳೆಲೆ | ಕಂದ ಯೆನುತಪ್ಪಿದಳು
ಶಿರವನು ರಾಘವೇಶ್ವರನ ||೩೦|| ನಿಮ್ಮ ಮಾತನು ಮೀರಲಾಪೆನೆ | ನೊಮ್ಮೆ ನಾನೆಲೆ
ತಾಯೆ ನಿಜಪಿತ | ನುಮ್ಮಳಿಸಿ ವಿರನಾಜ್ಞೆಯನು ಮೀರಿದನು ಮಗನೆಂದು || ನಮ್ಮ ಪಾಡೇ
ನಾಸೀಮವನಿಯ | ಹೆಮ್ಮೆಕಾರರು ಸತ್ಯಮಾರ್ಗವ ನೆಮ್ಮಿದವರೇನಪ್ರಬುದ್ಧರೆ ಯೆಂದ
ನಾರಾಮ ||೩೧|| ಕಳುಹಿದನು ಕೈಮುಗಿದು ಮುನಿಕುಲ | ತಿಲಕನನು ಬಳಿಕಾ ಸುಮಂ
ತ್ರನ | ನೊರೆದು ಮನ್ನಿಸಿ ಬೀಳುಕೊಟ್ಟನು ನಮಿಸಿ ಜನನಿಯರ || ಹಲವು ನಯನೀತಿ
ಯಲಿ ಚಿತ್ತದ | ಕಲುಷವನು ಕೆಲಚಾಚಿ ನಗರಕೆ | ಕಳುಹಿದನು ಕರುಣದಲಿ ಕೈಕಾ

ಸತಿಯು ನಂದನನ ॥ ೩೨ ॥ ಆದಡೆಲೆ ರಾಜೇಂದ್ರ ನಿಮ್ಮಯ । ಪಾದುಕೆಯ ಚಿತ್ತೈಸಿ ದೇವರ । ಪಾದವೆಂದೇ ಕಂಡು ಸೇವೆಯ ಮಾಡಿಕೊಂಡಿಹೆನು॥ ಕಾದಿಹೆನ ಹದಿನಾಲ್ಕು ವರುಷವು। ಮೇದಿನಿಯನೀವು ಬಾರದಿರಲು ನಿ । ವೇದಿಸುವೆ ನೀತನುವ ನನಲಂಗೆಂದನಾ ಭರತ ॥ ೩೩ ॥ ಎಂದು ಬೀಳ್ಕೊಂಡಖಿಳ ಸೇನಾ । ವೃಂದ ಸಹಿತಾ ಭರತನೃಪ ನೈ । ತಂದು ನಗರವ ಹೊಗದೆ ನಂದಿಗ್ರಾಮದಲಿ ಬಳಿಕಾ ॥ ಇಂದಿರೇಶನ ತೊರವೆಯರಸನ । ಸಂದ ನಿಜಭಕುತಿಯಲಿ ಪರಮಾ । ನಂದರಸಮಯನಾಗಿ ಪಾಲಿಸಿದನು ಧರಾತಲವ॥೩೪॥

ಆರನೆಯ ಸಂಧಿ ಸಮಾಪ್ತಂ.


ಏಳನೆಯ ಸಂಧಿ.

ಸೂಚನೆ॥ ರಾಯ ರಘುಪತಿ ವನದೊಳಗೆ । ವಜ್ರಾಯುಧನ ನಿಜನಂದನನತೃಣ। ಸಾಯಕದಲಿಟ್ಟೊಡನೆ ತಲೆಗಾಯಿದನು ಕರುಣದಲಿ ॥

ಪದ್ಯ॥ ಜನಕಜಾಸುತಕೇಳು ಕೈಕಾ । ತನುಜ ತೆರಳಿದ ಬಳಿಕ ತಿಂಗಳು । ದಿನವ ಕಳೆದರು ವಿಪಿನವಿಲಸಿತ ಚಿತ್ರಕೂಟದಲಿ ॥ ವನಿತೆ ಸಹಿತ ತದೀಯಶೈಲದ । ವನ ವಿಹಾರೋದ್ಯೋಗ ಕೇಳೀ । ಜನಿತ ಮಾನಸನಾಗಿ ತೊಳಲಿದನಡವಿಯಲಿ ರಾಮ ॥೧॥ ದಿವಿಜಮುನಿ ಗಂಧರ್ವ ಕಿನ್ನರ । ಯುವತಿಯರ ಖಚರಿಯರ ನಂದನ । ನಿವಹದಲಿ ಶಬರಿಯರ ನಿರುಪಮ ಸಿದ್ಧಚಾರಣರ ॥ ಅವರವರ ಬಳಿಸಂದು ಸೊಗಸಿನ । ವಿವಿಧ ಚಿತ್ರಕಲಾಪ ಕೇಳೀ । ಭವನ ವೀಧಿಗಳೊಳಗೆ ವಿಹರಿಸಿದನು ವಿನೋದದಲಿ ॥ ೨ ॥ ಬಳಿಕ ಬಳಲಿದು ಸಾರಿದರು ಪೂ । ಗೊಳನನಾ ಚಂಡಾಂಶುವಿನ ಮೈ । ಝಳದ ಝಾಡಿಯ ಜೋಡಿಯಧ್ವಶ್ರಮದ ಭಾರದಲಿ ॥ ತೀಗೊಳವ ತಂಪಗಿವ ತೆಕ್ಕೆಯ । ತೊಳಲಿಕೆಯ ತಾವರೆಯ ತನಿಪರಿ। ಮಳದ ವಿಸ್ತರದ ಹಸರದಲಿ ತೀಡಿದುದು ತಂಗಾಳಿ॥ ಪರಿಮಳದ ಪದ್ಮದ ಪರಾಗದಿ । ಹೊರೆದ ಗಿರಿದೆರೆಯುಬ್ಬುಗಳ ಸಂ । ಚರಿಸುವಂಚೆಯ ರಾಗರತಿಯರಥಾಂಗದಂಪತಿಯ ॥ ಮೊರೆವ ಮರಿದುಂಬಿಗಳ ಸೊಗಸಿನ । ಸರಸಿಗಿಳಿದರು ತಮ್ಮೊಳೊಬ್ಬೊ । ಬ್ಬರ ನಿರೀಕ್ಷಿಸಿ ವಾರಿಕೇಳಿಗೆ ಮಾಡಿದರು ಮನವ ॥೪॥ ಚರಣದಾಸು ಕಟಿ ಪ್ರಮಾಣಾಂ । ತರದಿ ಸಿಳಿದರು ನೀರೊಳುರೆ ಮ । ತ್ಸರಿಸಿದರು ಪ್ರಣಯ ಪ್ರತಾಪದಿ ನೊಬ್ಬರೊಬ್ಬರಲಿ ॥ ಅರಸಿಯರಸನಮೇಲೆ ರಘುಕುಲ । ದರಸನರಸಿಯ ಮೇಲೆ ಹಿಮಸೀ । ಕರಕದಂಬಕ ಸೊಗಸೆ ಸೂಸಿದರಾ ಹಿಮೋದಕವ ॥ ೫ ॥ ಕುಚದ ಮೇಲೊಗೆಸಿದನು ವಾರಿ । ಪ್ರಚಯವನು ರಘುನಾಥನಾತನ । ರುಚಿರತರವಾನನದ ಮೇಲೊಗೆಸಿದಳು ಸಾರಸದ ॥ ಪ್ರಚುರತರ ಹಿಮಜಲವ ನಭ್ರದ । ಖಚರಿಯರು ಕೊಂಡಾಡೆ ಕೇಳೀ । ರಚನೆಯಿಂ ದೋಡಿಸಿದಳಸನ ನಟ್ಟಹಾಸವಲಿ ॥೬॥ ಸೋಕಿರರಸಿನುತ್ತ ಧರಣೀ । ಜಾತೆ ತಡಿಗಡರಿದಳು ವಿಮಲ । ಶ್ವೇತವಸನವನುಟ್ಟಳಿಟ್ಟಳು ಬೊಟ್ಟ ಮಣಿಶಿಲೆಯ ॥ ಕೇತಕೀ ಪ್ರಮುಖಾದಿ ಕುಸುಮ । ವ್ರಾತವಾಭರಣದಲಿ ರಘುಸಂ । ಜಾತನಮಲಾಂಗವ ಲಲಂಕರಿಸಿದನು ಜಾನಕಿಯ ॥೭॥ ಬಂದರಿವರಾಶ್ರಮಕೆ ಲಕ್ಷ್ಮಣ । ನಿಂವ ಬಾಣಿಸನಾವ ನಾನಾ । ಕಂದಮೂಲಫಲಂಗಳಲಿ ಕಳೆದರು ಮಹಾಕ್ಷುಧೆಯ ॥

ಕಂದಕೇಳ್ವೈ ಬಳಿಕ ಸಮಯುವಿ । ದೆಂದು ಸಾರಿದನಿವರ ಶಾಪದ । ಲೊಂದಿಕೊಂಡಿರ್ದಾ
ಜಯಂತನು ಕಾಕರೂಪದಲಿ ॥೮॥ ಆವಗೆ ಶಾಪ ವಿಮೋಚನವು ರಾ । ಘವನ ರಾಣಿಯು
ಪದರಜದ ಸೊಂ । ಕವಗೆ ಘಟಿಸಲಿಕೆಂಬುದಿದು ತಾನತ್ರಿವನವಲೆ ॥ ಪವಣನದನಿವ
ನರಿದುವಾನಿಳ । ಯವನು ಸಾರಿದು ಮುಂದೆನಿಂದಿಹ । ಹವಣನರಿಯದೆ ಹೊದ್ದಿದನು
ದರುಶನಕೆ ಧರಣಿಜೆಯ ॥ ೯ ॥ ಸಾರುತಿರೆ ಪದಸೊಂಕಿಗಾಸತಿ । ಕ್ರೂರವಾಯಸಕಂಜಿ
ಪತಿಯ ಶ । ರೀರವನು ಬಿಗಿಯಪ್ಪಿಕಾಚರಿಸಿದಳು ಭೀತಿಯಲಿ । ವೀರಕೇಳ್ವಾಯಸದ
ಪವನಖ । ಧಾರೆ ಭುಜದಲಿ ಬೀಳೆ ಬಳಿಕ ಸು । ರಾರಿ ಕೋಪಿಸುತಿಟ್ಟನಾ ಖಳನನು
ತೃಣಾಸ್ತ್ರದಲಿ ॥೧೦॥ ಅದು ಬಳಿಕ ಭುಗಿಲಿಡುತ ಬೆಂಬ । ತ್ತಿದುದ ಬಿಡದಾಕಾಕನನು
ಸಾ । ರಿದುದು ಸರಸಿಜಭವನ ನಾತನಿಗಾಗದಿರೆ ಮುರಿದು ॥ ಮದನಮದ ಮರ್ದನನ
ಮರೆ ಹೊ । ಕ್ಕುದು ಬಳಿಕಾದೇವನಲು ಸರಿ । ಯುದಿರಲಿಕೆವೈತಂದು ಸಾರ್ದುದು ಪಾಕ
ಶಾಸನನ ॥೧೧॥ ಆವ ದೇವರ ಮರೆಯ ಹೊಕ್ಕ । ರಾವದೇವರಕಾಣೆ ರಾಘವ । ದೇವ
ನಸ್ತ್ರದ ಮಹಿಮೆ ಯೆಂತುಟೊ ಶಿವ ಮಹಾದೇವ ॥ ದೇವರೊಳಗಗ್ಗಳನಲಾ ರಾ । ಜೀವ
ನೇತ್ರನು ಚಿತ್ರವೆನುತ ಮ । ಹಾವಿಭುವಿನ ವಿನೋದವಿಭವವ ನರಿವರಾರೆಂದ ॥ ೧೨ ॥
ಅರಿದು ಬಳಿಕಿಂದ್ರನು ಜಯಂತನ । ಜರೆದು ಕಳುಹಿದನೀ ಮಹಾಸ್ತ್ರವ । ತರುಬು
ವವರುಂಟೇ ಸುರಾಸುರ ನರಭುಜಂಗರಲಿ ॥ ಬರಿದೆ ಬಳಲಿದೆ ಹೋಗು ಮಾಯೆಯ ।
ಮರೆಯ ಮನುಜಾಕೃತಿಯ ದೈವದ । ಮರೆಯ ಹೊಗು ಹೋಗೆನಲು ಹೊದ್ದಿದನಾ
ಕಕುಸ್ಥಜನ ॥೧೩॥ ಶರಣು ಹೊಕ್ಕೆನು ದೇವ ದೇವರ । ಚರಣಕಮಲವನಸ್ತ್ರವಿದ ಪರಿ।
ಹರಿಸಲಾರುಂಟೆ ನೀನಲ್ಲದೆ ಸುರೌಘದಲಿ ॥ ಶರಣಜನ ರಕ್ಷಾಮಣಿಯೆ ನಿಜ ।
ಶರಣಜನವತ್ಸಲನೆ ನಿರುಪಮ । ಶರಣದೇಹಿಕದೇವ ತನ್ನನು ಕಾಯಬೇಕೆಂದ ॥೧೪॥
ಕಾವಡೆಯು ಕೊಲುವಡೆಯು ಮಿಕ್ಕಿನ । ದೇವತತಿಗುಂಟೇ ಸ್ವತಂತ್ರ ಮ । ಹಾ ವಿಭು
ವಲಾ ನೀನು ನಿನಗೆಣೆಗಾಣೆ ನುಳಿದರಲಿ ॥ ದೇವ ಮಾರ್ಕಂಡೇಯ ಧ್ರುವ ದಂ । ತಾವ
ಳೀಂದ್ರಪ್ರಮುಖ ಶರಣಜ । ನಾವಳಿಯ ಸಲಹಿದವೊಲೆನ್ನನು ಕಾಯಬೇಕೆಂದ ॥೧೫॥
ಶರವಿದೆನ್ನಮೋಘ ಮರೆಯೊ । ಕ್ಕರನು ಸಲಹುವ ಬಿರಿದು ಸಂದಿಹು । ದೆರಡುಗುಣ
ನಮಗೀ ಧರಿತ್ರಿಯೊಳೆಂದು ರಘುನಾಥ ॥ ಸರಳಿಗೊಂದವನಕ್ಷಿಯನು ಕೊಂ । ಡೆರಡು
ಕಡೆಗೊಂಡಾಲಿಯನ ವಿ । ಸ್ತರಿಸಿ ಕರುಣದಲಾ ಜಯಂತನ ಕಾಯಿದನು ರಾಮ ॥೧೬॥
ಬಳಿಕ ಶಾಪ ವಿಮೋಚನದಲವ । ನಳಿನನಾಭ ಸ್ತೋತ್ರದಲಿ ಮಂ । ಗಳ ಮನೋರಾಗ
ದಲಿ ಮುಕುಳಿತ ಕರಪುಟಾಂಗದಲಿ ॥ ನಲಿದು ನರ್ತಿಸುತಮರನಗರಿಗೆ । ತಳರ್ದನಮರ
ವಿಮಾನದಲಿ ಬಳಿ । ಕಿಳಿದರಿವರೀ ಚಿತ್ರಕೂಟ ಮಹಾಮಹೀಧರವ ॥೧೭॥

ಏಳನೆಯ ಸಂಧಿ ಸಮಾಪ್ತಂ.



ಅರಣ್ಯಕಾಂಡ.

ಮೊದಲನೆಯ ಸಂಧಿ.

ಸೂಚನೆ॥ ತರಣಿವಂಶಜನತ್ರಿಮುನಿ ಯುಪ । ಚರಣೆಯನು ಕೈಕೊಂಡು ರಜನೀ । ಚರ ವಿರಾಧನ ಮುರಿದು ಸಾರ್ದನು ಪಂಚವಟಿ ವನವ ॥

ಪದ್ಯ॥ ಕೇಳು ಕುಶ ಬಳಿಕವರು ಹಲವು ವ । ನಾಂಗಳನು ಕಳೆದತ್ರಿಮುನಿ ಕುಲ । ಮೌಳಿ ಮಣಿಯಾಶ್ರಮವ ಸಾರಿದರತುಳ ಹರುಷದಲಿ ॥ ಶ್ರೀ ಲತಾಂಗಿಯರಮಣನಸಿ ಭೂ । ಪಾಲ ನೆಂದರಿದಾಮುನಿಪ ಸಂ । ಸ್ಥೂಲ ಸತ್ಕೃತಿಯಿಂದ ಸಂಭಾವಿಸಿದನವರುಗಳ ॥ ೧ ॥ ಆ ಸಮಯದಲಿ ಬಂದು ರಾಮ ಸು । ವಾಸಿನಿಯ ಬಿಗಿಯಪ್ಪಿದಳು ಪರಿ । ತೋಷ ರಸದುಬ್ಬರದ ಋಷಾಡಿಯ ಲನುಸುಯಾದೇವಿ ॥ ಕ್ಲೇಶಗೊಂಡಳು ಕೈಯೊಡನೆ ವನ । ವಾಸವಾದುದೆ ಮಕಟ ಬಹಳಾ । ಯಾಸ ಘಟಿಸಿತೆ ರಾಜನಂದನೆಗೆಂದಳಿಂದುಮುಖಿ ॥ ೨ ॥ ಹೇಳಿದಳು ಬಳಿಕವನಿಜೆಗೆ ಶಶಿ । ಮೌಳಿ ವಿಷ್ಣು ವಿರಂಚಿಗಳು ನಿಜ । ಬಾಲಕರು ತನಗಾದ ಕಥೆಯನು ತನ್ನ ನಡವಳಿಯ ॥ ಶೀಲವನು ಸಿಗುರೇಳದಿರಲಿ ವಿ । ಶಾಲಪತಿ ಭಜನೆಯಲಿ ಯೆಂದತಿ । ಲಾಲನೆಯೊಳುಪಚರಿಸಿದಳು ಲಲನಾಶಿರೋಮಣಿಯು ॥ ೩ ॥ ಸೊಗಸು ಪಿಸೌಂಪರಿಯ ಸಾಗರ । ವಗಡೆಗಾರವೆಗಾ ಸರಸ್ವತಿ । ಗಗನೆಸೀರಾಗಿದೆ ನಿರೀಕ್ಷಿಸಲಂಗವಟ್ಟವಲಿ ॥ ಅಗಲದಿರು ರಾಮನನು ಮಾಯಾ । ವಿಗಳು ಘನಕೇಶದು ಕೊಂಪೆಯಿತೆ । ನೆಗಳನಿತ್ತುಪಚರಿಸಿ ಕಳುಹಿಸಿದಳನಸೂಯಾದೇವಿ ॥ ೪ ॥ ಮುನಿಬಳಿಕ ಬೀಳ್ಕೊಟ್ಟನೀ ರಘು । ಜನಪನನು ಜಮದಗ್ನಿ ರಾಮನ । ಜನಕೆ ಬಂದರು ಬೀಳುಕೊಂಡರು ತಪ್ಪಸಿಂಕ್ಷ್ಯರನ ॥ ಮುನಿಮುನಿಗಳಾಶ್ರಮವ ಹೊಕ್ಕವ । ರನಿತ್ಯ ಮಾಡಿದ ಸತ್ಕೃತಿಯ ಸಾ । ಧನವ ಕೈಕೊಳುತ್ತೈದಿದರು ಘನಘೋರಕಾನನವ ॥ ೫ ॥

ಹಬ್ಬಿದಾಲ ತಮಾಲ ತರುಗಳ। ಮೊಬ್ಬುಗಳ ಹೆಮ್ಮೆಳೆಯು ಹರಹುಗ । ಳುಬ್ಬರದ ಶಾರ್ದೂಲ ಸೈರಿಭ ಶರಭ ಸೂಕರನ। ಉಬ್ಬಟೆಯು ಘೂತ್ಕೃತಿಯು ಫಣಿಕುಲ। ದುಬ್ಬರವ ಕಾಂತಾರವೊಳಗಿವ। ರಬ್ಬರಿಸುತೈದಿದರು ಸೋಕುತ ಸಕಲ ಮೃಗಕುಲವ।೬॥ ಏನಿದಬ್ಬರ ವಿಪಿನವಿದಿರಲಿ। ಮಾನವರ ಸಂಚಾರವಿಲ್ಲ ನ। ವೀನವಿದು ನರರಾಗೆ ಪುಣ್ಯವಿದೈಸಲೇಯೆನುತ ॥ ಆ ನಿಶಾಟ ವಿರಾಧನಾ ವನಾ। ಯಾನವರನ ಬಳಿಗೈದಿದನು ಸೀ। ತಾನಿತಂಬಿನಿ ಬೆದರೆ ಬಹಳತ ರೌದ್ರರೂಪದಲಿ ॥೭॥ ಮುಳುಗಿಸಿದುದಾಖಳನ ಪೈಗ। ತ್ತಾಲೆ ದಿವಾಕರ ಬಿಂಬವನು ಬಿಡು। ದಲೆಯು ಸಿಡಿಲಿಂಗಣದ ಜಂಗಣದಕ್ಷಿಯುಗಳಗಳ॥ ಕುಲಿಶದಂಷ್ಟ್ರರ ವಿಕೃತರೌದ್ರದ। ವಿಲಯುಭೈರವನಂತೆ ಮುಂದಕೆ ಸುಳಿಯಲಾಚರಿಸಿದಳು ಕಂಡು ಕುಮಾರಿ ಕುಂಭಿಸಿಯ ॥೮॥ ಸೀತೆಯನು ಕಂಡಾ ವಿರಾಧನು। ಸೋತಸೈಚಿತ್ರದಲಿ ಲೆಕ್ಕಿಸ। ದೀತಗಳ ಝುಂಕಿಸುತ ಝೋಂಪಿಸಿದನು ವಿದೇಹಜೆಯ॥ ಆ ಕುಠಾರನ ಕಂಡು ಸಿಮ್ಮುಖ। ತಾತ ಸೈರಿಸುವನೆ ಮಹೋಗ್ರನಿ। ಶಿಕಶರವೆಂದೆಚ್ಚ ಕಡಿವನು ಕರವನಾಖಳನ ॥೯॥ ಮುರಿದುಮೊದಲವನಿಪನ ನುಂಗುವ। ಭರದಲವನೈತರಲು ನೃಪ ಹೊಂ। ಬರಹದಸ್ತ್ರದಲಿಳುಹಿದನು ರಕ್ಕಸನ ಮಸ್ತಕವ ॥ ಉರವಣಿಸುತಾ ಮುಂಡ ಮುಂದಕೆ। ಬರಲು ಲಕ್ಷ್ಮಣದೇವನದನೂ। ರ್ವರೆಯೊಳಡಗಿಸಲೆಚ್ಚು ಮೆಚ್ಚಿಸಿದನು ಕಕುಸ್ಥಜನ ॥೧೦॥ ಶಾಪಹತನಾಗಿರ್ದನವನು ವಿ। ಶಾಪನಾಯ್ತದರಿಂದ ಪೂರ್ವದ। ರೂಪ ಕೈಕೊಂಡೆಸೆವ ತುಂಬುರನೆಂಬ ನಾಮದಲಿ ॥ ಶ್ರೀಪತಿಯಲಾ ನೀನು ಭೂಭಾರಾಪಹರ ಕಾರಣದಿ ನೀ ನರ। ರೂಪ ನಿನಗಾಯ್ತೆನುತ ಹೊಗಳುತ ಹಾಯ್ದನಜಪುರಿಗೆ ॥ ೧೧ ॥ ತಳೆದರಿವರು ವಿರಾಧ ವಿಪಿನ। ಸ್ಥಳವನಲ್ಲಿಂ ಮೇಲೆ ನಾನಾ। ಹಳುವವನು ಬಳಸುತಲಿ ಬಂದರು ತೆಂಕಮುಖವಾಗಿ ॥ ಫಲಿತ ಭೂಜಾರಣ್ಯವನು ಮುಂ। ಬಳಮಹೀ ಲಾವಣ್ಯವನು ಕಂ। ಡೊಲಿದು ಹೊಕ್ಕರು ದಂಡಕಾರಣ್ಯವನು ಹರುಷದಲಿ ॥ ೧೨ ॥ ಮುನಿಗಳಿದ್ದರು ಮುಂದೆ ನಿಯಮಾ। ಸನಸಮಾಧಿಧ್ಯಾನದಲಿ ಜಲ। ವನಿಲದಾಹಾರದಲಿ ಕಾಮುಕ್ರೋಧಮೊದಲಾದ ॥ ಜಿನಗು ಜಾಡ್ಯವ ಜಂಜಡವ ಕೆಲ। ಕೊನದು ನಿಖಿಳೇಂದ್ರಿಯದ ಕಳಕಳ। ವನು ನಿವಾರಿಸಿ ಕೇವಲ ಬ್ರಹ್ಮನಲಿ ನೆಲೆಯಾಗಿ ॥೧೩॥ ಕೆಲಬರೂರ್ಧ್ವಮುಖಾಂಘ್ರಿಯಲಿ ಕೆಲ। ಕೆಲರುಜಲಮಧ್ಯದಲಿ ಕೆಲರಾ। ಜ್ವಲನಪಂಚಕಮಧ್ಯದಲಿ ಸೂಚ್ಯಗ್ರದಲಿಕೆಲರು ॥ ಕೆಲರು ಜಪತಪಹೋಮ ನಿಯಮದ। ಲಲಿತ ನೀಲಗ್ರೀವ ನೀರಜ। ದಳವಿಲೋಚನನಮಳಭಕುತಿಯಲಿರ್ದರಿದಿರಿನಲಿ ॥೧೪॥ ಮರಪಲಾಶಾಶ್ವತ್ಥಪೌದುಂ। ಬರಕುಶಾಶಕಾಪ್ಲರ್ಕ ಶಮೀಶಾ। ದಿರವಸಾಸಾರ್ಗದಿ ಹೋಮದ ಸಮಿಧೆಗಳಭರಿತ ಘಟ ಗೋಕ್ಷೀರ ದಧಿಬಂ। ಧುರದ ಮಧುಸಿತಸರ್ಪಿಗಳ ಮುನಿ। ವರರ ಬಳಿವಿಡಿದೈದಿದರು ಶರಭಂಗನಾಶ್ರಮವ ॥೧೫॥ ಆಮುನೀಶ್ವರನಿದಿರುಬಂದೀ। ರಾಮಚಂದ್ರನ ಸಕಲನಿಗಮ। ಸ್ತೋಮಸಾಂದ್ರನ ನಧಿಕಮಾನ್ಯತೆಯಿಂದ ಸತ್ಕರಿಸಿ ॥ ಈಮಹಾತ್ಮನು ವಿಷ್ಣುವೆಂದೀ। ಸೌಮನಸ್ಯದಲರಿದು ಭಕ್ತಿ। ಪ್ರೇಮದಲಿ ಕೂಡಿದನು ಮುನಿ ಹೋಮಾಗ್ನಿ ಮಂದಿರವ ॥೧೬॥ ಅಕ್ಷಣದೊಳಾ ವನವ ಸುಳಿದು ಸು। ತೀಕ್ಷ್ಣನನ ನಧಿಗತತಪಃಪರಿ। ರಕ್ಷಣನ ದಳನಿಳಯವನು ಸಾರ್ದರು ಸರಾಗದಲಿ ॥ ಸೂಕ್ಷ್ಮಜ್ಞಾನದಲಿ ಮುನಿ ವನ।

ಜಾಕ್ಷನೆಂಬುದನರಿದು ಮನದ | ಪೇಕ್ಷೆಯಲಿ ಭಜಿಸಿದನು ಮಾಯಾಮನುಜ ವಲ್ಲ
ಭನ ‖ ೧೭ ‖ ಆಸುತೀಕ್ಷ್ಣಾಶ್ರಮದೊಳಿರ್ದಾ | ದಾಶರಥಿ ನೂಕಿದನು ತಿಂಗಳ |
ವಾಸರವನಲ್ಲಿಂ ಮೇಲಾ ಮುನಿಯ ಬೀಳ್ಕೊಂಡು ‖ ಆಸುಮಿತ್ರಾಸೂನು ಜನಕಮ |
ಹೀಶನಂದನೆಸಹಿತಗಸ್ತ್ಯ ಮು | ನೀಶನೊಡಹುಟ್ಟಿದನ ಬಳಿಗೈತಂದನೊಲವಿನಲಿ ‖ ೧೮ ‖
ಇವರನಾಮುನಿ ಯುಪಚರಿಸಿದನು | ವಿವಿಧಸತ್ಕಾರದಲಿ ತಿಂಗಳು | ದಿವಸ ಪರಿಯಂ
ತಿರಿಸಿಕೊಂಡಿಲ್ವಲನಸಂಗತಿಯ ‖ ಅವನನುಜ ವಾತಾಪಿಯೆಂದೆಂ ‖ ಬವನಕಥೆಯನು
ಕೇಳ್ದು ಘಟಸಂ | ಭವನ ಭವನಕೆ ಬೀಳುಕೊಟ್ಟನು ಮುನಿ ಕಕುಸ್ಥಜನ ‖ ೧೯ ‖
ಕುಶನೆಬಲ್ಲೆಲೈ ಹಿಂದೆ ಭಾರ್ಗವ | ನಸಮಧನುವನು ನಿಮ್ಮಪಿತನಾ | ಶಶಿಮುಖಿಯ
ಪರಿಣಯದ ಸಮನಂತರದಲಧ್ವದಲಿ ‖ ವಿಷಮತರ ದೋರ್ದಂಡಸಾಹಸ | ದೆಸಕ
ದಲಿ ಸೆಳೆದಾಮಹಾಧನು | ವಸತಿಯಲಿ ಮಡಗಿರ್ದದನು ಲವಕೇಳುಸುರಪತಿಯ ‖ ೨೦ ‖
ನಾರದನ ಸೂಚನೆಯಲಾವೈಂ | ದಾರಕೋತ್ತಮನಕ್ಷಯದ ತೂ | ಣೀರಬಾಣ
ಕೃಪಾಣ ಬಾಣಾಸನಸಮೇತದಲಿ ‖ ಸಾರಿದನು ಮಾತಳಿಯ ರಥಚೀ | ತ್ಕಾರದಬ್ಬ
ರದಿಂದ ಕೊಡನಕು | ಮಾರಕನ ಬಳಿಗಾಮುನೀಂದ್ರಂಗಿತ್ತನಾಧನುವ ‖ ೨೧ ‖
ಈವ್ರದಿದನೀಯೆಡೆಗೆ ರಾಘವ | ದೇವಬಂದರೆ ಮರೆಯದಗ್ಗದ | ರಾವಣಾಸುರನಿಧನ
ಕುಪಕರಿಸುವವಲೇಯೆನುತ ‖ ಆವಿಭಾಕರ ವರುಣಮಿತ್ರಂ | ಗೀವಿವೇಕವನರುಹಿ
ಬಳಿಕಮ | ರಾನತಿಯ ಸಾರಿದನು ಸಾರಿದರವರು ಮುನಿವರನ | ೨೨ ‖ ಆಮಹಾಶ್ರಮ
ವೆಸೆದುದಿದಿರಲಿ | ಹೋಮಧೂಮೋದ್ಧೂತ ಗಂಧ | ಸ್ತೋಮದಲಿ ಸ್ವಾಹಾಸ್ವಧಾಕಾರ
ಪ್ರಸಾರದಲಿ ‖ ಸಾಮಗಾನಧ್ಯಾನದಲಿ ವಿ | ಶ್ರಾಮ ವಿಶ್ವತರಂಮ್ಯ ಪೂರ್ಣಸು | ಧಾಮ
ದಲಿ ಕಂಡಿವರು ಹೊಕ್ಕರಗಸ್ತ್ಯಮಂದಿರವ ‖ ೨೩ ‖ ಶಕ್ರವಚನದಲೀತನಂದಿನ |
ಚಕ್ರಧರನೆಂದರಿದು ರಘುಕುಲ | ಚಕ್ರವರ್ತಿಯನುಪಚರಿಸಿ ವಿನಯಾನುಸಾರದಲಿ ‖
ಶಕ್ರನಿತ್ತಾಯುಧಧನುವ ನಾ | ಶಕ್ರಮಾಚಾರ್ಯಂಗೆ ರಾಕ್ಷಸ | ವಿಕ್ರಮಾಂಬುಧಿ
ಬಡಬಗಿತ್ತನಗಸ್ತ್ಯಮುನಿಬಳಿಕ ‖ ೨೪ ‖ ಇರಿಸಿಕೊಂಡಿರ್ದನು ಸಿಶಾಚರ | ಕರಿಮೃ
ಗೇಂದ್ರನನೊಂದುತಿಂಗಳು | ಪರಮ ಪಂಚವಟಿಪ್ರದೇಶದ ಘನವನಾಂತರಕೆ ‖ ಹರಿಷ
ಕಳುಹಿದರಿವರು ಮೂವರು | ಬರುತ ಕಂಡರು ದಂಡಕಾವನ | ದಿರವ ವಿಸ್ತಾರವನು
ತೋರಿದನಾನೃಪತಿ ಸತಿಗೆ ‖ ೨೫ ‖ ಇದುಲವಂಗ ವಿಳಂಗ ಕುರವಕ | ಕದಳಿ ಕಕ್ಕೆ
ಕಪ್ರಂಗು ಕಮ್ರಾರ | ತದಿಕುತಂಡಸುತಡಸುತಪಸಿಕರಂಜ ಖರ್ಜೂರ ‖ ಬದರಿ ಬೇಳ
ವಿಚ್ಛೇಡ ಚಿಗುರದ | ಬಿದಿರಿಬೇಳಲರುಟಾಳವಿವ್ರನೋ | ಡಿದಿರಿನಲಿ ಬೇರಿವೆ ಮಹೀ
ಜಗಳರಸಿ ನೋಡೆಂದ ‖ ೨೬ ‖ ಪುತ್ರಿ ಮೊಳಗರಸೆಲ್ಲಿ ಮಾವಲ | ಮುತ್ತು ಮಾವು
ಮಧೂಕ ಕೂಟಕ | ಲತ್ತಿ ಕಾತರು ಕಡವಶಾಲ್ಮಲಿ ಸೊಂಡೆ ಸುರಹೊನ್ನೆ ‖ ಚಿತ್ರ
ಬೆವಗಸೆ ಮಣಿಲಿ ಮುಳ್ಳರ | ಮತ್ತು ಕಾತರುಕಾರ್ವಿಕಾರದ | ಮೊತ್ತ ಪಿವನೋಡ
ಬಲೆ ತಳಿದೆಳೆದಳಿರಸೊಂಪಿನಲಿ ‖ ೨೭ ‖ ಅಲವಂಬಟೆ ತೆಗ್ಗಿನಗ್ಗಿಲು | ಜೇಲಿಬೊಬ್ಬುಲಿ
ಬಕುಳ ಕಮಿಕು | ಹಾಳೆ ಗುಗ್ಗುಳ ಹೊನ್ನೆ ಚೆನ್ನಗಿ ತಾಳ ತಾಳ ಹಿಂತಾಳ ‖ ಜಾಲಿ
ಜೇನೊಡಪಿಪ್ಪೆ ಪಿಪ್ಪಲ | ಹಾಲೆಯಿವನೋಡಬಲೆ ತಲೆಗಳ | ಪೇರುಹೊದಕೆಯ ಬನ
ಪೆಣಕೆಗಳ ಭಾರಿಪೂರೆಗಳಲಿ ‖ ೨೮ ‖ ಬೆಲ್ಲವತ್ತ ತವಮಾಲಚಿಕ್ಕಣೆ | ಚೆಳ್ಳುನೇರಿಲು

ಗೇರುಗಾವಟಿ। ಗಳ್ಳುತಿಲಕವಶೋಕ ಚಂಪಕ ಪೂಗ ಪುನ್ನಾಗ ॥ ನೆಲ್ಲಿನೇರಿಲು ಪನಸ ಕಡಸಿಗೆ । ಕಲ್ಲರಳಿ ಕರ್ಪೂರ ಕದಳಿಗ । ಳಲ್ಲಿನೋಡಿವೆ ಭ್ರಮಿಸುತೆ ಭೂಜಾತ ಸಂತತಿಯ ॥ ೨೯ ॥ ನೋಡು ಬೇರಿವರಿತ್ತಲಿವೆ ಹರಿ । ಕ್ರೋಡ ಖಡ್ಗಿ ಕುರಂಗಿ ಚಿತ್ರಕ । ನೇಡ ಕಡವರ ಮಾವು ಸೈರಿಭ ಶರಭ ಸಾರಂಗ ॥ ಕಾಡಬೆಕ್ಕು ಬಗಂಣ ಜಂಬುಕ। ಕೋಡಗವು ವೃಕಶಶಕಮರೆ ಮರ। ಗಾಡಿನೊಳಗಿವೆ ಸೀತೆನೋಡು ಸಮಗ್ರ ಮೃಗಕುಲವ ॥ ೩೦ ॥ ಕರಡಿ ನೋಡಿವು ಮುಸುಗಳಿವು ಕ । ಸ್ತೂರಿಯಾಮೃಗವಿವು ಚಮರಿಯಿವು ಕಿಂ। ನರಕದಡಬಕವಿವು ವನದ್ವಿಪ ಕಳಭ ನಿಕರವಿವು ॥ ಕರಭವಿವು ಕಾಕೋದರಗಳಜ । ಗರಗಳಿವು ಹೆರಳಿಲ್ಗಳಿವು ಮುಂ । ಗುರಿಗಳಿವು ಗವುಜುಗಳಿವು ಗಜಗಮನೆ ನೋಡೆಂದ ॥ ೩೧ ॥ ಅರಸಿನೋಡೀಚೆಯಲಿ ಹುದುಗಿಹ । ಹರಡೆಹಂಗ ಮಯೂರ ಟಿಟ್ಟಿಭ । ಗೊರವ ಗೀಜಗ ಗೌಜು ಲಾವುಗೆ ಬರುಲೆ ಬೋಗಾರ । ಮರ ಕುಟಿಗ ಚಂಬೋತ ಶುಕಜಾ। ಗರಿಗ ನರಳಿಗನಸಗ ಸಾಳುವ । ಸರಟಿಸಾರಸಮಾನಿ ನೀವೀವೃತ್ತಲಿವೆಯೆಂದ ॥ ೩೨ ॥ ಉಲಿಯೆ ಭಾರದ್ವಾಜ ಪಿಕಪಿಂ । ಗಲಿನಿ ಶಾಟ ಧ್ವಾಂಕ್ಷ ಚಾತಕಿ । ಚಿಲಿಮಿಲಿಗಜಾಣ್ವಕಿ ಚಕೋರಿ ಕಳಿಂಗ ಕಳವಿಂಕ ॥ ಬೆಳುವ ಬೆಂಜೆಗ ಬೊಕ್ಕು ಬಕಮಿಾಂ। ಬುಲಿಗ ಕೆಂಜರಿಗಣ್ಣ ಶಿಖಿಮುಡ । ಗೊಳತಿ ಮುಖ್ಯ ವಿಹಂಗವಿವೆ ವೈದೇಹಿನೋಡೆಂದ ॥ ೩೩ ॥ ದೇವಿನೋಡಿದೆ ಮುಂದೆ ಕನಕ। ಗ್ರಾಮ ದಂತಿರೆ ಖಗವಿದೊಂದು ಮ । ಹಾ ವಿಚಿತ್ರ ಪ್ರತತಿಯಿದನಾವ್ನೋಡಬೇಕೆನುತ ॥ ತೀವಿದುತ್ಸವದಿಂದ ವರರಾ। ಜೀವಲೋಚನನೈದಿದನು ಪರಿ। ಭಾವಶುದ್ಧಿಯ ಮನದ ತಪದ ಪತಂಗಸುತಜನ ॥೩೪॥ ನೀನಿದಾರೈ ಪಕ್ಷಿವೇಷವ। ದಾನವನೋ ಮಾನವನೊ ವಿನತಾ । ಸೂನುವೋ ಸುರನೋ ಭುಜಂಗಮನೋ ಮಹಾದೇವ ॥ ಕಾನನದ ಖಗ ಕುಲದಪರಿಯನು। ಮಾನತೋರುವದು ಮನಕೆ ಹೇಳೈ। ನೀನಿದಾರೆಂಬುದನು ತ್ವಂಗೆಂ ದರಸ ಬೆಸಗೊಂಡ।೩೫॥ ತೆರೆದು ಕಂಗಳಲಾತನೀತನ। ನಿರವನೀತನ ಹೊಗರನೀತನ। ಮಿರುಪ ತನುವಿನ ದೇವತಾಲಾಂಛನವ ಮನದೊಳಗೆ ॥ ಅರಿದುನೀನಾರೈ ನರಾಂಗದ। ಮರೆಯ ಜವನಿಕೆ ನಿನ್ನಲಿದೆ ಕಂ। ದೆರೆವ ಮಾಡಾರೆಂಬುದನು ನೀನೆಂದನರುಣಸುತ ॥ ಆದಡೆಲೆ ವಿಹಗೇಂದ್ರ ರವಿವಂ। ಶೋದಯನ ವಸುಮತಿಯ ಸುಮನೋ। ಪಾದಪನ ದಶರಥನ ಬಲ್ಲೈ ಕೇಳಿ ಪೂರ್ವದಲಿ ॥ ತೀರ್ದನಾತನು ಬಳಿಕ ಭರತಂ। ಗಾದುದೀ ಧರೆ ವನಪರಿಭ್ರಮ। ಣೋದಯವು ತನಗಾಯ್ತು ಪಿತನಾಜ್ಞೆಯಲಿ ಕೇಳೆಂದ ॥೩೬॥ ಅಕಟ ದಶರಥರಾಯನಮರ । ಪ್ರಕರದಲಿ ಸೇರಿದನೆ ಶಿವಶಿವ । ಸಕಲ ವಿಭವಾಲಂಕೃತನು ಸಾರಿದನೆ ಸುರಪುರವ ॥ ಪ್ರಕಟಿತಾತ್ಮಪ್ರಿಯನ ಮೃತಿವಾ। ಚಕವ ಕೇಳ್ದವೆ ಹಾ ಯೆನುತ ವ್ಯಾ। ಕುಲ ಜಲಬಿಂದುಗಳ ಬಿಡದುಗುಳಿಸಿದ ನಕ್ಷಿಯಲಿ॥ ೩೭॥ನರಕುಲಾಧಿಪನಾತ ನೀನಂ। ಬರ ಚರಾಧಿಪನು ಭಯವ್ಯೈತ್ರ । ಸ್ಫುರಣವಾದುದ ಹೇಳಬೇಂ ಕೆಂದರಸ ಬೆಸಗೊಳಲು ॥ ತರಣಿಕುಲ ಕೇಳಾದಡಾದಿಯ । ಲರಸಿಯರು ಹದಿಮೂರಾದರು। ವರಮರೀಚಿಸುತಂಗೆ ದಕ್ಷಮುನೀಂದ್ರ ತನುಜೆಯರು ॥ ೩೮ ॥ ಅದಿತಿಯಿಂ ದೇವತೆಗಳಾದಿತಿ। ಸುದತಿಯಿಂ ದೈತ್ಯರು ಸುಕೈಕಸೆ। ಸುದತಿಯಿಂ ರಕ್ಕಸರು ಕದ್ರುವಿನಿಂ ಭುಜಂಗಮರು ॥ ಉದಿಸಿದರು ಮಿಕ್ಕಾದ ಮಹಿಳೆಯ । ರದರದಿಂ ತೋರ್ಪೀ ಜಗಂ

ಗಳ । ವಿದಿತ ವಿವಿಧ ಚರಾಚರದ ವಿಸ್ತಾರವಾಯ್ತೆಂದ ॥ ೪೦ ॥ ವಿನತೆಯೆಂಬಂಗನೆಗೆ
ಕಶ್ಯಪ । ಮುನಿಗೆ ನಂದನರಿಬ್ಬರಿಳೆಯಲಿ । ಜನಿಸಿದರು ಕೇಳರುಣ ಗರುಡರು ಬಹಳ
ಭುಜಬಲರು ॥ ಇನನ ಸೇರಿದನೊಬ್ಬನೊಬ್ಬನು । ವನಜನಾಭನ ಸಾರಿದನು ತಾ ।
ಜನಿಸಿದೆನು ಗರುಡಾಗ್ರಜಂಗೆಲೆ ರಾಮ ಕೇಳೆಂದ ॥ ೪೧ ॥ ಆ ತಮೋವಿಧ್ವಂಸಕನ ನಿಜ ।
ಸೂತನೆನ್ನೊಡ ಹುಟ್ಟಿದನು ಸಂ । ಪಾತಿ ಜನಿಸಿದ ಮೊದಲು ನಾವಿಬ್ಬರು ಸಹೋದ
ರರು ॥ ತಾತನಿಂ ಬಳಿಕಿಂದ್ರನಲಿ ವಿ । ಖ್ಯಾತ ಸೇವಕರಾದೆವೆಂದು ನಿ । ವಾತಕವಚರ
ದೆಸೆಯುಲಳಿವಾಯ್ತಮರಪುರಕೆಂದ ॥ ೪೨ ॥ ಬಂದನಿಂದ್ರಸಹಾಯಕಜ ನೃಪ । ನಂದ
ನನು ಬಳಿಕಾ ಮಹೀಶನೊ । ಳೊಂದುಗೂಡಿ ಬಿಡೌಜನಾಜಿಯುಲರಿನಿಶಾಚರರ ॥
ಕೊಂದೆವಾವದರಿಂದ ಬಳಿಯಲಿ । ಬಂದುದೈ ಬಂಧುತ್ವ ಕೇಳೈ । ವೊಂದುದರದಲಿ
ಬರಲು ಬೇಕೈ ರಾಮ ಹೇಳೆಂದ ॥ ೪೩ ॥ ಇರಲು ಬಳಿಕರುವತ್ತು ಸಾವಿರ । ವರುಷ
ನಿಮ್ಮಯ್ಯಂಗೆ ನಮಗೊಂ । ದರೆನಿಮಿಷವಾಯ್ತುಡಸಿದುವು ಜರೆವಾರ್ಧಿಕಗಳೆಮಗೆ ॥
ಪರವಗಳಿಸುವ ಬಗೆಯ ಬುದ್ಧಿಯ । ವಿರವು ಬಳಿಕಾಯಿತ್ತಿಬ್ಬರಿಗೆ ವಿ । ಸ್ತರಿಸಿದೆವು
ಯೋಗದಲಿ ಮನವನು ರಾಮ ಕೇಳೆಂದ ॥ ೪೪ ॥ ಐಯನಸ್ಥಿರನಾದ ಬಳಿಕೆಮ । ಗೈಯ್ಯ
ನೀನಾಕದಲಿ ನೆಲೆಗೊಂ । ಡೈಯ್ಯ ಸೀಗ ಜಟಾಯು ನೀನವ ಗೀಗ ದಶರಥನು ॥ ಮಯ್ಯ
ಮಾತಲ್ಲಿದುವೆ ನಮ್ಮಯ । ಕೈಯಲಹ ಸೇವೆಯನು ಕೈಕೊಂ । ಡೈಯ್ಯನಾಗಿಹುದೆಂದು
ನಮಿಸಿದನಂಘ್ರಿಗರುಣಜನ ॥ ೪೫ ॥ ತಂದು ಕಂಗಳಲಶ್ರುಗಳನಿನ । ಗೊಂದಿತೇ ವಿಪಿನ
ಪ್ರವಾಸ ವಿ । ದೆಂದು ದುಃಖಿಸಿ ಮೈದಡವಿ ನಿಜಭಾವಶುದ್ಧಿಯಲಿ ॥ ಎಂದವರ ಬೀಳ್ಕೊ
ಟ್ಟನಾಯೆಡೆ । ಗೊಂದುಯೋಜನ ಪಥವ ನಿವಸ್ಕೈ । ತಂದು ಕಂಡರು ಪಂಚವಟಿಯಲಿ
ಪರಮ ಗೌತಮಿಯ ॥ ೪೬ ॥ ಮಂದುದಿದಿರಲಿ ಸಿಖಿಳ ನದಿಗಳ । ಮುರುಕವನು ಮುಳಿ
ಸುವ ಕುಸಕವ । ನಿರಿಸಿ ನಲಿನೀರುಬ್ಬುಗಳ ನಿರ್ಘೋಷಸಬ್ಬರದ ॥ ಬಿರುಬು ತೆರೆಗಳ
ಸಿಡಿದೊಗುವ ತುಂ । ತುರಿನ ತೂಳುವ ಫೇನಪಿಂಡದ ಗುರುಬಿನಲಿ ಘೂಡಿಸಿತು ಗೋದಾ
ವರಿ ಕಕುಸ್ಥಜನ ॥ ೪೭ ॥ ಆ ನದಿಯ ಕಂಡಾಗ ಘಾಘಕ್ರ । ಶಾನು ಪರಿತೋಷದಲಿ
ಯಮಗೀ । ಸ್ಥಾನವೆ ಸಾಕೆಂದು ನಿಶ್ಚೈಸಿದನು ಬೀಡಿಕೆಯ । ಸ್ನಾನಪಾನಾದಿಗಳಿ
ಗಿದು ಪರ । ಮಾನುಗುಣವಾಯ್ತೆಂದು ತೊರೆಯ । ಶ್ರೀನೃಸಿಂಹನು ಬಂದು ಹೊಕ್ಕನು
ಪರ್ಣಮಂದಿರವ ॥ ॥ ೪೮ ॥

ಮೊದಲನೆಯ ಸಂಧಿ ಸಮಾಪ್ತಂ.

ಎರಡನೆಯ ಸಂಧಿ.

ಸೂಚನೆ ॥ ಅಗಲಿದನು ಜಾಮಾತೃ ಗುರುಮಾ । ತೃಗಳ ವನವಾಸ ಪ್ರವಾಸದ ।
ಮಾಗಡವನು ಪರಿಹರಿಸಿದನು ಜಾಬಾಲಿ ಜನಪತಿಯ ॥

ಪದ್ಯ । ಕೇಳಿದೈ ಕುಶ ನಿಮ್ಮ ರಘುಭೂ । ಪಾಲ ನಿರ್ದನು ಗುರುತನುಜನ ವಿ ।
ಶಾಲವಚನದಲಮಳ ಪಂಚವಟಿಪ್ರವಾಸದಲಿ । ಕಾಲಕಳೆದುದು ಹಿಂದಕಬ್ಬದ ।
ಮೇಲೆ ತಿಂಗಳು ಬಂದುದಲ್ಲಿಂ । ಮೇಲೆ ಕುಶ ನಿನ ಜಾತಕೇಳ್ ಹಿಮಸಮಯ ಸೌರಂಭ ॥

ಶರದಘನ ರಾಜೇಂದ್ರ ಪದವಿಯು | ಬರೆಹತೊಡೆನುದು ಬಿಲವಿರೋಧಿಯು | ಕರುಣದಲಿ ಹೇಮಂತಗಾದುದು ಕೇಣಿಭೂತಳದ || ಹರಿದರಾಹಿಯ ಚರರು ಟಾಣಾಂ | ತರಗಳಿಗೆ ಹಿಡಿವಬುಜಮಿತ್ರನ | ಕರವಕೊಂಡರು ಕೋಳಹಿಡಿದಂಭೋಜಿನೀವಧುವ ||೨|| ಶಿರದ ಗಂಗೆಯು ತೂರಿ ತುಹಿನಾ | ಕರನ ನಂಬರಕಿಟ್ಟು ಫಣಿಗ | ಣ್ಣುರಿಯ ನುಬ್ಬಿಸಿ ತನುವ ನೊಡ್ಡಿದನಘನ ನಡುಕದಲಿ || ಹರಿಪಯೋಧಿಯನುಳಿದು ಲಕ್ಷ್ಮಿಯು | ಗುರುಪಯೋ ಧರದಿರುಬಿನಲಿ ಬೈ | ತಿರಿಸಿದನು ನಿಜಮೂರ್ತಿಯನು ಹೇಮಂತಕಾಲದಲಿ ||೩|| ಧಾತು ಗುಂದಿ ವಿಧಾತ್ರಸಂಭೋ | ಜಾತ ನಿಳಯವನುಳಿದು ಚೇತೋ | ಜಾತೆಯನು ಭೋಗ ಪ್ರಪಂಚಕೆ ಮಾಡಿದನು ಮನವ || ಕಾತರಿಸಿ ಕಂಗೆಟ್ಟು ಸೀತದ | ಭೀತಿಯಲಿ ನಿಲಲಾರ ದೋಡಿದ | ವೀತಿಹೋತ್ರನನೇಲೆ ರವಿ ಮಿಕ್ಕವರ ಪಾಡೇನು || ೪ || ಕಳಿದರೀ ಚಂ ಡಾಂಶುವಂಶೋ | ಜ್ವಲರು ಬಳಿಕಾ ಹಿಮದ ಸಮಯವ | ಪುಲಿದೊಗಲ ಹರಿಣಾ ಜಿನದ ಹಾಸಿಗೆಯ ಹೊದಿಕೆಯಲಿ || ತಳಿರ ತಗಹಿನ ಮನೆಗಳಲಿ ತಳಿ | ಗಳಶಿಖಾಸೇವೆ ಯಲಿ ನೆನೆದನು | ಬಳಿಕ ಭರತನೃಪಾಲನಾ ಭಾಸ್ಕರಕುಲಾನ್ವಯನ ||೫|| ಬಿಸಿಲುಮಳೆ ಚಳಿಗಾಲವಿವು ಸಂ | ಧಿಸಿದವೇ ರಘುಪತಿಯ ಬಹಳಾ | ಯಸವ ನೋಡುತಿದ್ದೆನೇ ಶಿವಶಿವ ಮಹಾದೇವ || ಅನುವಿದೇನಿದ್ದೇನುಫಲ ವೆಂ | ದುಸುರಲಾ ಜಾಬಾಲಿಮುನಿ ಕಾ | ಳಿಸಿದ ನಂತಿಸಾತ್ತ್ವವನು ಬಳಿಕಾ ನೃಪಾಲಕನ || ೬ || ಕಂಡುಬಹೆನೆಲೆ ಭರತ ಘನ ಕೋ | ದಂಡಭಗ್ನನ ಬಿಡು ವೃಥಾ ಗೋ | ಳುಂಡೆಗುಟ್ಟದಿರೆನುತಲಾ ಧರತನನು ಬೀಳ್ಕೊಂಡು || ಚಂಡಮುನಿಪತಿ ದಕ್ಷಿಣದ ಭೂ | ಮಂಡಲದ ಪಥವಿಡಿದು ಗಿರಿವನ | ಷಂಡವನು ಕಳೆವೈದಿದನು ಕಾಕುಸ್ಥಭೂಪತಿಯ ||೭|| ಅರಸ ಬಳಿಕೀಚೆಯಲಿ ತಮ್ಮಂ | ದಿರನು ತಾಯ್ಗಳು ಮೂವರನು ಮುನಿ | ವರವಸಿಷ್ಠನ ಬಿಸುಟುಬಂದುಂ ಮಹದ ಭಾರ ದಲಿ || ಹಿರಿದು ಚಿಂತಿಸುತಿವರ ವಾರ್ತೆಯ | ಪರಿಯ ನರುಹುವರಿಲ್ಲಲಾ ಯೆಂ | ದುರು ಳಿಸುವ ಕಂಬನಿಗಳಿಂದಿರೆ ಬಂದನಾ ಮುನಿಪ || ೮ || ಆಲಿ ಬಿಡದಾನಂದಜಡ ಮು | ಕ್ತಾಳಿಗಳ ನುಗುಳಿದವು ಮುನಿ ಜಾ | ಬಾಲಿಯನು ಕಾಣುತ ಕಕುಸ್ಥಾನ್ವಯಶಿರೋ ಮಣಿಗೆ || ಆ ಲತಾಂಗಿಸಮೇತ ಮುನಿಕುಲ | ಮೌಳಿಗಾನತನಾಗಿ ವಿದಿತವಿ | ಶಾಲ ವೈದಿಕವಿಂದ ಸತ್ಕರಿಸಿದನು ಮುನಿವರನ || ೯ || ಗುರುವಸಿಷ್ಠನ ಚರಣಯುಗ ಸು | ಸ್ಥಿರವೆ ಕೌಸಲ್ಯಾದಿ ಜನನಿಯ | ರಿರವು ಕುಶಲವೆ ಭರತಶತ್ರುಘ್ನರು ಬಲಾನ್ವಿತರ || ವರಸುಮಂತ್ರಪ್ರಮುಖ ಮಂತ್ರೀ | ಶ್ವರರು ಸುಕ್ಷೇಮಿಗಳೆ ಪುರಜನ | ದಿರವುಲೇಸೇ ಮುನಿಪ ಹೇಳೆಂದರಸಬೆಸಗೊಂಡ ||೧೦|| ಅವನಿಜಾಪತಿಕೇಳು ನೀನೆಂ | ದವರು ಪದು ಳಿಗರೀನೆಲೆಗೆ ಬಡ | ವವಯವದಲಾ ಭರತನೆಲೆರಾಜೇಂದ್ರ ನಿನ್ನಡಿಗೆ || ನವದನತಿ ಚಿಂತೆಯಲಿ ಬಳಿಕಾ | ಹವಣರಿದು ಒರವಾಯ್ತೆನಲು ಸಹ | ಭವನವಿರಹದ ದುಃಖದಲಿ ತುಂಬಿದನು ಕಂಬನಿಯ || ೧೧ || ಅಗಲಲಾದುದೆ ತನಗೆ ಭರತಾ | ದಿಗಳ ನೈಯುನ ಮರಣದಲಿ ಹೆರ | ದೆಗಹವಾದುದೆ ಜನನಿಯಂಘ್ರಿ ಸರೋಜಸೇವೆಯಲಿ || ಸೊಗಸ ದಾದೆನೆ ಸೀತೆ ಲಕ್ಷ್ಮಣ | ರುಗಳ ವನವಾಸಪ್ರಯಾಸಕೆ | ತೆಗೆದುಕೊಂಡೆನೆ ಹಾಯೆ ನುತ ಬಿಸುಸುಯ್ದ ನಾರಾಮ ||೧೨|| ಏತರಾಯುಷವಿವು ಜಗದ್ವಿ | ಖ್ಯಾತನಲ್ಲಾ ರಾಯ ರಲಿ ನಳ | ನಾತಗಾದ ವಿಪತ್ತುಬಲ್ಲೆಲ್ಲ ಕೇಳು ಪೂರ್ವದಲಿ || ಆತದಾಯಮಾದ್ರುರಿಗೆ

ಕಪಟ | ದ್ಯೂತದಲಿ ಸಾಮ್ರಾಜ್ಯಲಕ್ಷ್ಮಿಯ | ಸೋತು ಸತಿಸಹಿತಡವಿಗುರಿಯಾದನು ಕಣಾ ಯೆಂದ ||೧೩|| ಬಿಸುಟನೆ, ಬಳಿಕಡವಿಯೊಳಗಾ | ಯಸವ ಸೈರಿಸಲಾರದಾದನು | ಮುಸಿಯದೆಸೆಯಿಂದವನು ದಮಯಂತಿಯನು ವಿಪಿನದಲಿ | ನಸುಳಿದನು ಬಳಿಕೊಬ್ಬನೇ ಸಂ | ಧಿಸಿದ ಕಾರ್ಕೋಟಕನ ದೆಸೆಯಿಂ | ದಸುವ ನೀಗದೆ ಸಾರಿದನು ರುತುಪರ್ಣ ಭೂಪತಿಯ ||೧೪|| ನಳನಮುನೆಯುವನೆಂದರಾತನ | ಕಲಹಿಕೊಂಡಿರ್ದನ-ಕಣಾ ನೃಪ | ತಿಲಕ ನಿಮ್ಮನ್ವಯದ ರುತುಪರ್ಣಕ್ಷಿತೀಪಾಲ || ಬಳಿಕಲಾದಮಯಂತಿ ಭಾರಿಯ | ಬಳಲಿಕೆಯ ನನುಭವಿಸಿ ತಂದೆಯ | ನಿಳಯವನು ಸಾರಿದಳು ಸೀತಾರಮಣ ಕೇಳೆಂದ||೧೫|| ಅಳಿಯನನು ಕಾಣದೆ ವಿದರ್ಭನು | ತೊಳಲಿಚಿದನನುಚರರ ನಾನಾ | ಹಳುವದಲಿ ಹಳ್ಳಿಯಲಿ ನಗರಂಗಳಲಿ ನಗಕುಲದ | ಬಳಿಗಳಲಿ ಬಳಿಕವರು ಕಾಣದೆ | ಹೊಳಲ ಸಾರ್ದರು ಭೀಷ್ಮಕನ ಮಗ | ಳುಳಿವಕಾಣದೆ ಕಂಡನೊಂದನು ಮಾನಸಾಧನವ||೧೬|| ಸೃಜಿಸಿದನು ಸುದ್ದಿಯನು ನೃಪ ಭೂ | ಭುಜರ ನಗರಂಗಳಲಿ ನಿಷಧನ | ನಿಜದ ವನಿತೆಗೆ ಪುನಃ ಸ್ವಯಂವರವೆಂದು ಚರರಿಂದ || ನಿಜವರಿಯದಳಿಯಾಶೆಯಲಿ ಭೂ | ಭುಜರು ಬರುತಿರ್ದರುಕಣಾ ಕೇ | ಳಜಕುಮಾರ ಕುಮಾರ ಬಳಿಕಾ ಕುಂಡಿನೀಪುರಕೆ || ೧೭ || ಸೋಕಿತೀ ಕಡುನಿಂದೆ ಪುಣ್ಯ | ಶ್ಲೋಕರಿಗೆ ನಳಭೂಪ ನೀನರ | ಲೋಕದೊಳಗುತ್ತಮನಲಾ ತತ್ಪತ್ನಿ ಪಾರ್ವತಿಗೆ || ನಾಕಮುಡಿ ಮಿಗಿಲೆಂಬನಾಣ್ನುಡಿ | ಕಾಕಬಳಸಿತೆ ಯೆಂದು ನಿಮ್ಮ | ಕ್ಷ್ವಾಕುಕುಲದವನಿಪನು ಸುಯ್ದನು ಬೈದು ಕಮಲಜನ || ೧೮ || ಅರಿದನಿದನಾವ್ನೋಡಬೇಕೆಂ | ದರಸನುತ್ತಮ ವಾಜಿಹೂಡಲಿ | ವರವರೂಥಕ್ಕೆನಲು ತಂದನು ಸೂತ ನುರುಹಯವ || ಅರಸಕೇಳೈ ನಳಮಹೀಪತಿ | ತುರಗವಿವು ನಾಳಿನಲಿ ಕುಂಡಿನಿ | ಪುರಿಗೆ ಪರಿಗತವಾಗದೆನೆ ರುತುಪರ್ಣನಿಂತೆಂದ |೧೯|| ನಳನು ಬಲ್ಲವನಶ್ವ ಹೃದಯವ | ನಿಳೆಯೊಳೆಂದು ಸಮಸ್ತರಾನೃಪ | ತಿಲಕನನು ಕೊಂಡಾಡುವರು ನೀನಶ್ವ ಲಕ್ಷಣದ || ಹೊಲಬಬಲ್ಲೈ ಬಲ್ಲೆನೆನೆ ಗಳಿಗೆಸೊಗಸು ಪರಿ | ಕರಿಸುವಶ್ವಾವಳಿಯ ತಂದನು | ಹೂಡಿದನು ಹೊಂದೇರಿನಲಿ ಹಯವ ||೨೦|| ಏರಿದನು ನೃಪನಾರಥವನು | ಬೇರಿ ನಳನಬ್ಬರಿಸೆ ಕಣ್ಣೆವೆ | ಜಾರೆ ಚಾರಿದವಶ್ವಚಯ ಪವಮಾನವೇಗದಲಿ || ತೂರಿಬಿದ್ದುದು ಮುಕುಟತಡೆ ಹಯ | ವೇರಿದಂತಿರೆ ಪಥವನೆನೆ ನಳ | ನೂರುಯೋಜನ ಮಿಂಚಿತೆನಲಬ್ಬರಿಸಿದನು ಹಯವ |೨೧|| ಇವನು ತಾ ನಳನಲ್ಲಲೇ ಯೆಂ | ದವನಿಪತಿ ಅನುಮಾನನುಖದಿಂ | ತಿವನನರಿಯಲು ಬೇಕೆನುತ ಧುಮ್ಮಿಕ್ಕಿದನು ಧರೆಗೆ || ಹವಣ ನದನರಿದೀತ ಕಡಿಯಾ | ಣವನು ಸೆಳೆದಿಳಿಗಿಳಿದುದೇನೈ | ಯವನಿಗವತರಿಸಿದ ಕಥಾಂತರವೇನು ಹೇಳೆಂದ |೨೨|| ನಳನು ನೀನಹುದೆನಲು ಕಂಗಳ | ಜಲದರ್ಘ್ಯಾಡಿಯಲಪ್ಪಿ ತುರಗಾ | ವಳಿಯ ಹೃದಯವ ನರಿದನಾತನ ನಕ್ಷಹೃದಯವನ || ನಳ ತದೀಯನೃಪಾಲನಿಂದರಿ | ದೊಲವುಮಿಗೆ ರಥವೇರಿ ಭೂಮಿಪ | ತಿಲಕರಿಬ್ಬರು ಸಾರಿದರು ಭೀಷ್ಮಕನ ಪಟ್ಟಣವ ||೨೩|| ಬಂದನೃಪಪೊಳಗೀತನೇ ನಳ ನೆಂದರಿದು ಭೀಷ್ಮಕನು ತನ್ನಯ | ನಂದನೆಯ ನೊಲಿದಿತ್ತನೈ ಬಳಿಕಾ ಮಹೀಪತಿಗೆ || ಬಂದಭೂಪರು ಹರದರೀತನ | ತಂದು ಸಲಿಸಿದ ನಖಿಳ ಸಂಪದ | ದಿಂದ ನೈಷಧನಗರಿಯಲಿ ನರನಾಥಕೇಳೆಂದ ||೨೪|| ಜನಪನಾದಾಯಿಗನ ಮರು ಜೂ | ಜಿನಲಿ ಗೆಲ್ದನು ಧರೆಯನಾಳ್ದನು | ಜನಪರಲಿ ಮಿಗಿ

ಲೆನಿಸಿ ರಾಜ್ಯವಕೇಳು ಪೂರ್ವದಲಿ ॥ ಇನಕುಲದ ನಿಮ್ಮಯ ಹರಿಶ್ಚಂ। ದ್ರನ ಕಥೆಯ
ಕೇಳ್ದರಿಯಲಾ ಸುರ। ಪನಲಿ ಕೌಶಿಕಮುನಿ ವಸಿಷ್ಠಂಗಾಯ್ತು ಸಂವಾದ ॥೨೫॥ ಭೂ
ವಧೂವರರೊಳಗೆ ಸತ್ಯವ । ಚೋವಿಲಾಸನು ಕಲಿ ಹರಿಶ್ಚಂ । ದ್ರಾವನಿಪನೆನಲವನ
ಸತ್ಯರ ಕುಲತಿಲಕನೆಂದು ॥ ಹೇವವಿಬ್ಬರಿಗಾಪ್ರತಿಜ್ಞಾ । ಭಾವದಲಿ ಬಲುಹಾಯ್ತು
ಘನವಾ। ಯಾವಿಲಾಸತೆಯಿಂದ ಕೌಶಿಕ ಹೊಕ್ಕನಾ ನೃಪನ ॥೨೬॥ ಬಳಲಿಸಿದನಾ
ನೃಪನ ಮೃಗಸಂ । ಕುಲದ ಬೇಂಟೆಯನೆಪದಿ ಅವನಿಯ । ಸೆಳೆದುಕೊಂಡನು ವರ
ಸುವರ್ಣಾಧ್ವರದದಾನದಲಿ ॥ ಹಳುವ ಕೆಬ್ಬಟ್ಟಿದನು ಬಿರುನುಡಿ । ಗಳಲಿ ಸತಿಸುತ
ಮಂತ್ರಿಸಹಿತುರಿ। ಯೊಳಗೆ ಹೊಗಿಸಿದ ನಡವಿಯಲಿ ಕಲ್ಪಿತದವಾನಳನ ॥೨೭॥ ವಿಳಸ
ದಧ್ವರ ದಕ್ಷಿಣೆಗೆ ಮೊ। ಕ್ಕಳವನಿಕ್ಕಿದನೊಬ್ಬ ನಿಪ್ರರ । ತಿಲಕನನುಗತದವನವರ
ಕಟಕಾಡಿಕಾಶಿಯಲಿ ॥ ಲಲನೆನಂದನರನು ಮಹೀಸುರ । ನಿಳಯದಲಿ ಮಾರಿದನು
ತಾನೇ। ಹೊಲೆಯನನಾಗಿರ್ದನಾ ಪಿತೃವನಪರೇತವಲಿ ॥೨೮॥ ಕುಶಿಕಸುತ ಮಾಯಾ
ಹಿಯನು ಕ। ಲ್ಪಿಸಿ ಹರಿಶ್ಚಂದ್ರನ ಕುಮಾರನ । ನಸುವನುಗಿದನು ಮಗನನರಸುತ
ಬರಲು ರಾತ್ರಿಯಲಿ ॥ ಶಶಿಮುಖಿಯ ನೂರೊಡೆಯನಿಂ ರ। ಕ್ಕಸಿಯಮಾಡಿಸಿ ಹೊಡಿಸಿ
ವಲ್ಲಭ। ನಸಿಯಧಾರೆಗೆ ಕೊರಳ ನಡೆಗೊಡ್ಡಿಸಿದನಾಮುನಿಪ ॥ ೨೯ ॥ ವಿತತ ರಾಜ್ಯ
ಭ್ರಷ್ಟಚಿಂತಾ। ವ್ಯತಿಕರವನಂತ್ಯಜನ ಸೇವಾ । ಕೃತಿಯಲಾ ಸುಕುಮಾರಕನ ಮರ
ಣವ ಕುಲಾಂಗನೆಯ ॥ ಕೃತವಧಾ ವ್ಯಾಪಾರಮನನಾ। ದತಿಶಯದ ಬಳಲಿಕೆಯ ನಣು
ಸಂ। ಪ್ರತಿಗೆ ತಾರದೆ ಸತ್ಯವನು ಸಲಹಿದನು ಭೂಪಾಲ ॥೩೦॥ ಬಳಿಕಲಾ ಮುನಿ ಮೆಚ್ಚಿ
ಪೂರ್ವದಿ। ಗಳಿಸಿದಧಿಕ ತಪಃಪ್ರಭಾವದ। ಫಲವಕೊಟ್ಟನು ಹರಿಹರಬ್ರಹ್ಮೇಂದ್ರರಿದಿರಿ
ನಲಿ ॥ ಇಳೆಯಧೀಶ್ವರತನಕೆ ನೃಪತಿಯ । ನಿಲಿಸಿದನು ಕೇಳೈ ಮಹೀಪತಿ। ತಿಲಕ
ಬಹಳಾಯುಸವ ನನುಭವಿಸಿದನು ಮಹೀಭುಜರ ॥೩೧॥ ಅವರನಡೆವಳಿಯಿಂದ ನೀನೇ।
ಭುವನಭಾರಿಯ ಕೀರ್ತಿಯನು ನಿಂ। ನವಯುವದಲೇ ತಾಳ್ದೆ ನಿನಗಿನ್ನಾರು ಸರಿಯೆಂದ ॥
ರವಿಕುಲದ ತೊರವೆಯ ನೃಕಂಠೀ। ರವನ ಮಿಗೆ ಕೊಂಡಾಡಿ ಭರತನ। ಭವನ ಕಛಿ
ಮುಖನಾದನಾ ಜಾಬಾಲಿ ಹರುಷದಲಿ ॥ ॥೩೨॥

ಎರಡನೆಯ ಸಂಧಿ ಸಮಾಪ್ತಂ.

ಮೂರನೆಯ ಸಂಧಿ.

ಸೂಚನೆ॥ ಚಂಡಕರಕುಲಕಮಲನನ ಮಾ । ರ್ತಾಂಡ ರಾಘವರಾಯನನುಜನು ।
ದಂಡಕಾರಣ್ಯದಲಿ ಮುರಿದನು ಶಂಭುಕಾಸುರನ ॥

ಪದ್ಯ॥ ಸುರಪತಿತ್ವವ ಬಯಸಿ ಬಹಳಾ । ಶ್ಚರಿಯದುಗ್ರತಪ ಸ್ಸಮಾಧಿಯ।
ಲಿರವ್ರಘಟಿಸಿತು ಶಂಭುಕಂಗಜನನೇಮದಲಿ॥ ತರುಣಕೇಳೈ ಕೆಲವು ಕಾಲಾಂ। ತರದಲಾ
ಖಳನಿಂದ ದೂರಾಯ್ತುರಿ । ಯಮುನ ದೆಸೆಯಿಂದಸುರಕುಲ ಸಾರ್ವಭೌಮಂಗೆ ॥ ೧ ॥
ಇದು ಸಮಯವೆನುತಿಂದ್ರನಾ ನಾ। ರದ ಸುರಾಚಾರಿಯರಮತದಿಂ। ಹದನ ಕಂಡನು
ಹರಣದಂತ್ಯಕೆ ಶಂಭುಕಾಸುರನ ॥ ತ್ರಿದಶರೂಪವನುಳಿದುಕೈರಾ। ತದಲಿ ಕಂಗೊಳಿಸಿ

ದರು ಬಳಿಸಲಿ | ಸಿದುದು ಖುರಸಿಕರಂಬವಕ್ಷಣ ರಾಘವಾಶ್ರಮವ ||೨|| ಪೀಲಿಯುಡಿ
ಗೆಯು ಹೆಗಲ ಬಿಲುಬಡಿ | ಕೋಲುಗಳ ಸಂಕಲೆಯು ನಾಯ್ಗಳ | ಕೋಳಗುಂಜೆಯ
ದಂಡೆಗಳ ಕಟಕಟದ ಸುರಗಿಗಳ || ಬೋಳೆಗಳ ಮಿಂಟೆಗಳವೀಹವ | ಸಾಳುವನಗಣೆ
ಯಿಂದಥಟ ಶಬ | ರಾಳಿ ಬಂದುದು ಪರ್ಣಶಾಲೆಗೆ ಸೂರ್ಯವಂಶಜನ || ೩ || ಕರಿಯ
ಮುಕ್ತಾಫಲದ ವನಸೂ | ಕರನದಾಡೆಯ ಹರಿಣ ಶಿಶುಕ | ಸ್ತುರಿಯಮೃಗ ಶಾರ್ದೂಲ
ಚರ್ಮದ ಸಿಹ್ಮದುಗುರುಗಳ || ತೆರಳಿಗಟ್ಟಿನಬಿಲ್ಲು ಬೋಳೆಗ | ಳರೆಗಿಳಿಯ ಕೋಡಗನ
ಮರಿಗಳ | ಸರಸರಾಮುಂಗಿತ್ತು ಕಂಡುದು ಶಬರಸಂದೋಹ || ೪ || ಕಾಣಿಕೆಯ ಕೈ
ಕೊಂಡು ಶಬರಶ್ರೇಣಿಯನು ಮನ್ನಿಸಿದನುಚಿತದ | ವಾಣಿಯಲಿ ವೈವಸ್ವತಾನ್ವಯನಾ
ಪುಳಿಂದಕರ || ಏಣನಿಕ್ಕೆಯ ಸೊಕ್ಕಿದೆಕ್ಕಲ | ತಾಣಗಳ ಕಾಡ್ಗೋಣ ಸೆರಳೆಯ |
ಕೇಣದಾಡಂಬೊಲನ ನೃಪತಿಗೆ ಶಬರಪತಿ ನುಡಿದ ||೫|| ಜೀಯ ಜಸ್ನಹವಿಲ್ಲಿ ಹರಿಕಾ|
ತ್ಯಾಯನೀಪತಿ ಕಮಲಜನ ಪಾ | ರಾಯಣರು ಪರಲೋಕಸಾಧಕರಿದೆ ತಪಸ್ವಿನಲಿ ||
ಈಯಟವಿಯಲಿ ದುಷ್ಟಮೃಗ ಸಮು | ದಾಯವಿದೆ ಸಿಪ್ಪಿ ನನುಷ್ಠಾ | ನಾಯತರ
ಕಂಟಕರ ಬೇಂಟೆಗೆ ಬಿಜಯವಾಡೆಂದ || ೬ || ನಿಯಮವಿನ್ನುಗಿದು ವನಸಿವಾಸಾ |
ಶ್ರಯದ ತುದಿಪರಿಯಂತ ಮೃಗಹಿಂ | ಸೆಯಲಿ ಮಾಡೆವ್ರಮಸವ ಮಾತವಿದು ರಾಜಋಷಿ
ತನದ || ಪ್ರಿಯವು ನಿಮಗೀ ದುಷ್ಟಮೃಗಹಿಂ | ಸೆಯಲಿ ಸಿಲವಡೆ ಮುನಿಗಳಿಗೆ ನಿ|
ರ್ಭಯವ ಮಾಡುವದೊಪ್ಪುವದೀ ಲಕ್ಷ್ಮಣನ ನೀವೆಂದ || ೭ || ಈತನೇ ಸಾಕೆಂದು
ಶಬರರ | ಜಾತಶತ್ರುವಿಗೆರಗಿ ಭರತ | ಭ್ರಾತರನನೆಬ್ಬಿಸಿದರಾ ರಾಘವನನುಜ್ಞೆಯಲಿ ||
ಆತ ಬಳಿಕಳವಡಿಸಿದನು ಶಬ | ರಾತಿಶಯದಂಗವನು ಪಾರ್ಥಿವ | ರೀತಿಯನು ಮರೆ
ಮಾಡಿ ಕೂಡಿದನಾಪುಳಿಂದಕರ ||೮|| ಸೇರಿಸಿದನವಲಾಂಗಕಂಗಿಯ | ಪಾರಿಯದ ಪದ
ಕೆಕ್ಕಡವ ನೊ | ಯ್ಯಾರಿಸಿದ ನೊರಗೊಳಿಸಿ ಸುರಗಿಯ ಕಟಿಯೊಳಳವಡಿಸಿ || ಕೂರಲಗು
ಗಳ ಹೊದೆಯ ಬಲುಬಿಲು | ಭಾರಣೆಯ ತಲೆಹಿಣಿಲ ಹೊಗರಿಸಿ | ಹಾರ ಪಿಕಿತಾಂಗದಲಿ
ಬೀಳ್ಕೊಂಡನು ಮಹೀಪತಿಯ ||೯|| ಅಬ್ಬರಿಸಿದುವು ಬೇಂಟೆವರೆನೆಲ | ಗಬ್ಬರಿಸೆ ಶಬ
ರಾಳಿ ಬೆರಲಿನ | ಬೊಬ್ಬೆಯಲಿ ನಲವೇರಿ ನರ್ತಿಸಿ ರಾಘವಾನುಜನ || ಉಬ್ಬಿಸಿದರೆಡ
ಬಲನ ಸರುಹಿನ | ಹಬ್ಬುಗೆಯ ಹರಹಿನಲಿ ತೆಗಹಿನ | ತೆಬ್ಬುಗಳ ಸಂಧಿಸಿದ ಸರಳಿನ
ಸನ್ನೆವಾತಿನಲಿ ||೧೦|| ತೊಲಗುವಚ್ಚೆನುದಿರ್ದ ತುಪ್ಪಳ | ಒಳಿಯ ಮಲಗಿದು ಮೆಲು
ಕಿರಿದು ನೊರೆ | ವಳಿಯ ನಣದಿರಿದಾಡಿ ತೊಗುನೆತ್ತರಿನ ಬೆಂಬಳಿಯ || ನೆಲನ ಸಿಕ್ಕೆಯ
ಹಕ್ಕೆಯಾಡುಂ | ಬೊಲನ ಮರಗಾಡಗಳೊಳಗೆ ಕ | ಟ್ಟಲುಹೆ ದೋರವೆ ಹೊಕ್ಕು
ವಗಲಕೆ ಶಬರಸಂದೋಹ ||೧೧|| ಒಡ್ಡಿದರು ದಡಿವಲೆಯ ಸಿಡಿವಡೆ | ಖಡ್ಗವಲೆ
ಕುಡಿವಲೆಯ ನಾಗಲಿಕೆ | ಚಡ್ಡವಿಸಿದರು ಬೀಸುವಲೆ ಜೆಕ್ಕ್ಯಾರವಲೆಗಳಲಿ || ಅಡ್ಡವಿಸಿ
ಸೋಕಿದರು ಕೋಣನ | ದೊಡ್ಡಗಳ ದಂತಿಗಳ ಹರಿಣನ | ಪೊಡ್ಡೆಡೆಯುದವೋಲಾ
ಸುಮಿತ್ರಾಸುತನ ಸರಿಸದಲಿ ||೧೨|| ಮರೆಯುಲುಲಾಯ ವ್ಯಾಘ್ರವೃಕ ಸೂ | ಕರ ಶಿಖರಿ
ಸಾರಂಗ ಕೇಸರಿ | ಕರಿಶರಭ ಖಡ್ಗ ಪ್ರತಾನದ ಮೋಹುಗಾಡಿನಲಿ || ಹರಿದು ಜಿರಿಸಿತು
ಜೇಡಸಡೆ ಕಾ | ಕ್ಕ್ಯಾರಿನ ಹಾಸವನುಗಿದು ಸೇಎದ | ಸರಳಸನ್ನಾಹದಲಿ ಕಬುಕಿರಿ
ದಿಶಿಳ ದಿಸೆಗಳಲಿ ||೧೩|| ಹಲಿಯನೌಕಾವ ವಿಗಡ ದಂತಾ | ವಳಗೆ ಲಂಘಿಪ ಸಿಂಗ

ವನು ಹಿಡಿ । ದುಲಿವ ಶರಭಕೆ ಮಲವ ಮದದೆಕ್ಕಲನ ಕುಕ್ಕರಿಪ ॥ ಲುಳಿಯ ಜಂ
ಘೆಯ ಜವಗತಿಯ ಹೆ । ಕ್ಕಳದ ಗಳಗರ್ಜನೆಯ ಕಟ್ಟಾ । ಗುಳಿಕೆಗಳ ನಾಯಿಗಳು
ತುಡುಕಿದವಖಿಳ ಮೃಗಕುಲವ ॥೧೪॥ ಹಾಯಿದವು ಮಿಗವಿಂಡು ಸರಳರೆ । ಘಾಯದಲಿ
ಮರ್ಮಾಲಿನ ಮೃಗಗಳ । ನಾಯಿಗಳು ತುಡುಕಿದವು ಕಡಿದುವು ಕಿರುಮೃಗಾವಳಿಯ ॥
ಬಾಯಬೊಬ್ಬೆಯ ಬಿರುಬುಗಳ ಲಡ । ಹಾಯಿದೋಡುವ ನಿಖಿಳಮೃಗಸಮು । ದಾಯ
ವನು ಸಂಹರಿಸುತಿರ್ದುದು ಶಬರಸಂದೋಹ ॥೧೫॥ ನಾಲಗೆಯನರೆಗಚ್ಚಿ ಕೆಡದ ಮೃ ।
ಗಾಳಿ ಕೆಲವಳ್ಳಿಗಳ ಘಾಯದ । ಜೋಲುಗರುಳಿನ ಲೊರಗುವವು ಕೆಲವಂಜಿ ಕೊರ
ಳಡಿದು ॥ ಬೀಳುವವು ಕೆಲಕೆಲವು ನಡುತೊಡೆ । ಕಾಲುಖಂಡಿಸಿ ಬಸಿವನೆತ್ತರ ।
ಲೋಳಿ ನೆಲದಲಿ ಮಗ್ಗುಲಿಕ್ಕಿದವಖಿಳ ಮೃಗನಿಕರ ॥೧೬॥ ಸಿಲುಕಿದವು ಮೃಗವಿಂಡು
ನಾನಾ । ಬಲೆಗಳಲಿ ಕುಳಿಗಳಲಿ ಬೀಸಿದ । ಬಲೆಗೆಬಿದ್ದುವು ಗಿಡಗ ಗೀಜಗ ಗೌಜುಗುಬ್ಬಿ
ಗಳು ॥ ಜಲಿಮಿಲಿಗ ಚಿಂಬೋತವಾಯಸ । ವಲಿಯ ಹುದುಗಿಹ ಹರಡೆಹಸುಬಗ । ಳಿ
ಮದಕೆ ಕಡೆಯಿಲ್ಲ ಬೇಂಟೆಯೊಳೂರ್ಮಿಳಾಪತಿಯ ॥೧೭॥ ಗಳೆಗಳಂಟೆಗೆ ಸಿಕ್ಕಿದವು
ಪಿ । ಕ್ಕಳಿನ ಪಿಂಜರಮಂಜರಿಗ ಮಿಂ । ಬುಲಿಗ ಲಾವಗೆ ಬುರುಲೆ ಸರಲೆಗಳೆಚ್ಚ ಪಿಂಟಿ
ಯಲಿ ॥ ಬಳಲುಗೊರಲಲಿ ಬೀಳುತಿರ್ದುವು । ಬೆಳುವಗಿಳಿ ಕಬ್ಬಕ್ಕಿ ಬಕ ಕೋ । ಗಿಲೆ
ಕಪೋತ ಕಳಿಂಗ ಕೊಂಚೆಗಳವಸಿಯರ್ಗಲದಲಿ ॥೧೮॥ ಇದುವೆ ಸಮಯವೆನುತ ಹರಿ
ಸೃಜಿ ಸಿದನು ಮಾಯಾಸೂಕರನ ಕ । ಟ್ಟಿದಿರಿನಲಿ ಗರ್ಜಿಸಿತು ದಾಡೆಯಮಸೆದು
ಲಕ್ಷ್ಮಣನ ॥ ಕೆದರಿತೀ ಶಬರಾಳಿ ಸೀಳ್ದಿ । ಕ್ಕಿದುದು ತುಡುಕುವ ನಾಯಿಗಳ ನ ।
ಟ್ಟಿದುದು ಘುಡುಘುಡಿಸುತ ಕಪಟಕಿರಾತ ಸಂತತಿಯ ॥೧೯॥ ನಿಂದನೈ ಬಳಿಕೀತನಾ
ಹೆ । ಬ್ಬಂದಿಯಿದಿರಲಿ ಮೆಲ್ಲಮೆಲ್ಲನೆ । ಹಿಂದಣಡಿಗಳನಂದುಗೊಂಡುದು ಶಂಭುಕಾ
ಸುರನ ॥ ಮಂದವಿಸಿ ಮುಸುಕಿದ ಮಹೀರುಹ । ವೃಂದವನು ಕುಶಕೇಳ್ಸುಮಿತ್ರಾ ।
ನಂದನನು ಬಳಿಕುಗಿದು ಹೂಡಿದನಸಮಮಾರ್ಗಣವ ॥೨೦॥ ಉಗಿದು ಕಿವಿವರೆಗಾಗಿ
ಬಾಣವ । ನಗಲಿಸುತ ಬೊಬ್ಬಿರಿಯೆ ಶರ ವಿ । ಬ್ಬಗೆಯ ಮಾಡಿತು ಮುಂದುವರಿದಂಡಿ
ಸಿದ ಸೂಕರನ ॥ ಚಿಗಿದು ಮುಂದಕೆ ಹಾಯ್ದು ಹುತ್ತವ । ಬಗಿದು ರಜನೀಚರನ ಶಿರ
ವನು । ನೆಗಹಿದುದು ನಭಕಾಗಿ ನಿರ್ಜರನಿವಹ ಕೊಂಡಾಡೆ ॥೨೧॥ ನಿಲ್ಲದೊದರುತ
ಬಿದ್ದಮಸ್ತಕ । ದಲ್ಲಿಗೈದಿದನೀತನಾ ತುದಿ । ಗಲ್ಲದಲಿ ಚಾಚಿದನು ಕರತಳಗೂಡಿ
ಕಾರ್ಮುಕವ ॥ ಯೆಲ್ಲಿಯದು ಹೆಬ್ಬಂದಿ ಮುನಿವಧೆ । ಯೆಲ್ಲಿ ಕೂಡಿತೊ ಯೋಗವೆಂ
ದೆದೆ । ಝಲ್ಲೆನಲು ಜವಗುಂದಿ ಲಕ್ಷ್ಮಣ ನೊಲದನವಯವವ ॥೨೨॥ ಐಸೆಮತ್ತೇನಿದು
ಪುರಾಕೃತ । ದೋಷಫಲ ದುಃಖವಲಾ ಹೆ । ಡ್ಡೈಸಿ ಮಾಡುವುದೇನು ಪ್ರಾಯಶ್ಚಿತ್ತ
ಮುಖವೆನಗೆ ॥ ಈ ಶರೀರತ್ಯಾಗವೇ ಕೃತ । ದೋಷಹರವೆಂದುಗಿದು ಸುರಗಿಯ ।
ನಾ ಸುಮಿತ್ರಾಸೂನು ಮಿಗೆ ಮೋಹಿಸಿದನುದರದಲಿ ॥೨೩॥ ಘಾತಿಹೊದ್ದದು ಸೈರಿಸ
ದವ । ಘಾತುಕಕೆ ಮನವಿಕ್ಕಬೇಡಿವ । ಯಾತುಧಾನನು ಮುನಿಪನಲ್ಲಿವನೆಂಬ ನಿಶ್ಚ
ಯವ ॥ ಈತನನು ಕೊಲಲೋಸುಗವೆ ಸುರ । ಜಾತನೆರೆದುದು ಶಬರರೂಪಿನ । ಲೀತ
ನಿಂದ್ರನು ನೋಡು ನಾರದನೀಗ ತಾನೆಂದ ॥೨೪॥ ಇವಕಣಾ ರಕ್ಕಸನು ರಾಕ್ಷಸ ।
ನಿವಹದಲಿ ಬಲ್ಲಿದನು ಬಳಿಕಿವ । ನೆವಗೆ ಸಲುವ ಸುರೇಂದ್ರಪದವಿಗೆ ಮಾಡಿದನು ಮನವ ॥

ಇವನು ನರರಿಂದಲ್ಲಬಾನುು । ಷ್ಯವನು ಬಿಡನೆಂದರಿದು ಬರವಾ । ಯ್ತನಗೆ ಸೀನೋ ಡೆಂದು ನಿಜವನು ತೋರಿದನು ಸುರಪ ॥೨೫॥ ಮರಳಿದನು ಬಳಿಕೀತನವುರರು । ಸಂದ ರತ್ನಲು ರಾಮುಗೀ ವಿ । ಸ್ತರವನೆಲ್ಲವ ಬಿನ್ನಹವ ಮಾಡಿವನು ಸೌಮಿತ್ರಿ । ತೊರವೆ ಯುಧಿಪತಿರಾಯು ನರಕೇ । ಸರಿ ನಿಜಾಂಗನೆ ಸಹಿತ ಭರತಾ । ವರಜಸಹಿತೀರಾರುವರು ಷನ ಕಳೆದರಡವಿಯಲಿ ॥ ॥೨೬॥

ಮೂರನೆಯ ಸಂಧಿ ಸಮಾಪ್ತಂ.

ನಾಲ್ಕನೆಯ ಸಂಧಿ.

ಸೂಚನೆ॥ ಚೆಲುವತನವನು ತೋರಿ ರಾಮನ । ನೊಲಿಸಬೈದಿದ ಶೂರ್ಪನಖಿಯನು । ಕಲಿ ಸುಮಿತ್ರಾಸೂನು ಕಡಿದಿಳುಹಿದನು ನಾಸಿಕವ ॥

ಪದ್ಯ॥ ಕುಶನೆ ಕೇಳೈ ಶೂರ್ಪನಖಿ ಯೆಂ । ಬಸುರೆಬಂದಳು ವನವಿಹಾರ । ವ್ಯಸನದಲಿ ನರಮಾಂಸ ಭೋಜನದುಜ್ಜುಗತ್ವದಲಿ ॥ ಅಸುಬಲ ಶಂಭುಕನ ತನು ವಿನ । ಉಸುರದೆಗಹಸುಕಂಡು ಹಲುಗಳ । ಮುಸೆವುತೈದಿದಳಿನಕುಲೇಂದ್ರನ ಪರ್ಣ ಮಂದಿರವ ॥೧॥ ಆರಘುಕ್ಷಿತಿನಾಥ ನಾನಿಜ । ನಾರಿಸಹಿತ ದ್ಯೂತಕೇಳಿ ವಿ । ಹಾರದಿಂ ದಿರೆ ಕಂಡಳವಳೀ ರಾಮುಚಂದ್ರನನು ॥ ದೂರದಲಿ ದುಮ್ಮಿಕ್ಕಿದುದು ದೃಢ । ವೈರ ದರು ಶನಮಾತ್ರದಲಿ ಕಣು । ಕೋರವಿಸಿದುವು ಕೋಮಲಾಂಗನ ಕಾಯಕಾಂತಿಯಲಿ ॥೨॥ ಭುವನ ಯಿಾರರೊಳಧಿಕವೆಂದೆಂ । ಬವರು ನಾಲ್ವರು ರೂಪಿನಲಿ ವೈ । ಶ್ರವಣಸುತನವು ದೇಂದ್ರ ನಂದನರಿಂದು ಮನ್ಮಥರು ॥ ಅವರುಗಳ ಶತಕೋಟಿ ಲಾವ । ಣ್ಯವನು ಮಿಕ್ಕಿದೆ ನೋಡಲೀ ನೃಪ । ನವಯುವದೊಳಿವನಾವನೋ ಯೆಂದೊಲೆದಳವಯವವ॥೩ ನೋಡನೋಡಲಿಕಂಗಜನ ಹೂ । ಮೂಡಿಗೆಯ ಸರಳಂಗದೊಳಗ । ಕ್ಕಾಡಿದವು ಮೈ ಮರೆದಳೊಂದೆರಡೆಂಬವಸ್ಥೆಗಳ ॥ ಜೋಡಣೆಯ ಜೂಕೆಗಳ ಝಡಿತೆಯ । ಜೋಡ ಣೆಯ ಝೊಂಪಿನಲಿ ಬಳಿಕೀ । ಡಾಡಿದಳು ವಿಕೃತಾತಿಶಯದ ನಿಶಾಟರೂಪಕವ ॥ ೪ ॥ ಹೊಳವಹುಡುಗಂಗನ ಕೋಮಲ । ದಳದ ಕದಪಿನ ಪೆರೆನೊಸಲ ಪ್ರ । ಜ್ವಲಿಪ ದಂತಾ ವಳಿಯ ಮಿರುಗುವ ಪಲ್ಲವಾಧರದ ॥ ಸೆಳೆನಡುವಿನುತ್ತುಂಗ ಕುಚಮಂ । ಡಲದ ನಳಿ ದೋಳುಗಳ ಮಾನವ । ವಿಳಸಿತಾಂಗದ ರೂಪಕೈಕೊಂಡೆಸೆದಳಿದಿರಿನಲಿ ॥ ೫ ॥ ಘಟ ಪಯೋಧರ ಭಾರದಲಿ ಸಂ । ಘಟಿಸಿತಧಿಕಶ್ರಾಂತಿ ನಡುವಿಗೆ । ಕುಟಿಲ ಕುಂತಳ ದುಬ್ಬ ರದ ಧಮ್ಮಿಲ್ಲದುರುಭರಕೆ ॥ ನಟನೆಯಲಿ ಬಳುಕಿದುದು ಕೊರಳು । ಕ್ಷಟಿ ನಿತಂಬ ಸುಗಾಢತರ ದು । ಬ್ಬಟೆಗೆ ಧಡಧಡಿಸಿದುವು ಪದಯುಗವಾನಿತಂಬಿನಿಯ ॥೬॥ ಅಂಗ ವಟ್ಟದ ಸುರಭಿ ಸೆಳೆದಾ । ಲಿಂಗಿಸಿತು ಗಗನದಲಿ ಸುಳಿವ ಸು । ರಾಂಗನೆಯುರನು ಸುತ್ತ ಪರಿಮಳಿಸಿತು ಕಾಂತಾರ ॥ ಅಂಗಜನ ಮೋಹನದ ಸುಭಟರ । ಮುಂಗುಡಿಯ ಮುಂ ಬರಿವ ಮದವ । ತಂಗವೆನಲಿಭಗಮನೆ ಗರುವಾಯಿಯಲಿ ಗಮಿಸಿದಳು ॥ ೭ ॥ ನೇಹದ ನೋಪರಿಸುತ್ತ ಮೇಳುದ । ನಿರುಕುತಡೆಗೈದುದಿಮುಲಾ ಮುಂ । ಜರಗ ಸಂಮರಿಸುತ ನಸುನಾಚಿಕೆಯ ಭಾವದಲಿ ॥ ತುರುಗೆ ಮೆಯುನಿಡುಗಂಗಳಿನ ಕಡೆ । ಸೆರಗಸಸರಿಸು

ತೊಯ್ಯನೊಯ್ಯನೆ | ಮುರುಕವನು ತೋರುತ ಬಂದಳು ರಾಮ ನಿದ್ದೆಡೆಗೆ|| ೮ || ಬಿದ್ದು
ದರಸನವೃಷ್ಟಿ ಮೋಹನ | ದದ್ದುಗೆಯು ಮೋಹಿನಿಯ ಮೇಲೊಡ| ನಿದ್ದುದೈ ನೃಪ
ಗೇಕಪತ್ನೀವ್ರತಪ್ರತಿಜ್ಞಾನ || ಹೊದ್ದದಾದುದು ಚಿತ್ತ ಚಿತ್ತಜ | ನುದ್ದುರುಟುತನ
ವೇನು ದೃಢತರ | ಎದ್ದುದೋ ನಿಮ್ಮಯ್ಯಗೆಲೆ ಕುಶ ಕೇಳಿದೈಯೆಂದ || ೯ || ದೇವಿ
ನೋಡಿದಳೊಯ್ಯನಾ ವ್ರಾ| ಯಾವಿಳಾಸದ ವಧುವನನುಪಮ | ಹಾವಭಾವವಿಳಾಸ
ವಿಭ್ರಮ ರಂಜಕವ ಕಂಡು || ಅವಳೋ ತಾಸಿವಳೆನುತಭಿ | ಭಾವದಲಿ ಹೆದರಿದಳು
ಮನದಲಿ | ದೇವ ರಾಘವ ನೀ ಲತಾಂಗಿಗೆ ಸೋಲದಿರನೆನುತ || ೧೦ || ಗಮನವೆಲ್ಲಿಗೆ
ಮನುಜೆಯೋ ನೀ | ನಮರ ವಧುವೋ ವಹಿಸಿಕೊಂಡಿಹ | ರಮಣರಾರೀ ಕಾನನಕೆ
ಬರವೇನು ನಿನಗೆಂದು || ಅಮಿತಬಲನಾ ಕಪಟರಾಕ್ಷಸ | ರಮಣಿಯನು ಮಾಧುರ್ಯ
ವಚನದ | ಮಮತೆಯಲಿ ಕೇಳಿದನು ಮೆಲ್ಲನೆ ಮಂದಹಾಸದಲಿ ||೧೧|| ರಮಣರಿಲ್ಲೆನ
ಗಾನು ಸ್ವೇಚ್ಛಾ | ರಮಣಿ ವಿಮಲ ಪುಲಸ್ತ್ಯವಂಶದ | ರಮಣರಿಂದೆನಗಾಯ್ತು ಜನ
ನವು ಜಲಧಿ ಪರಿವೃತದ || ಕ್ಷಮೆಯ ವಲ್ಲಭರೆಲ್ಲರಲಿ ನಿ | ರ್ಮಮತೆಯಾಯ್ತಾಮನಕೆ
ನಿಮ್ಮಲಿ | ರಮಿಸುವೀಯನುರಾಗ ವೆನಗಾಯ್ತೆಂದಳಿಂದುಮುಖಿ || ೧೨ || ಏಕಪತ್ನೀ
ವ್ರತ ಸುಭಾಷಿತ | ಸೋಕಿಹುದು ನಮ್ಮನನು ನಿನ್ನ ವಿ| ವೇಕ ದನುರಾಗ ತೆಗೆ ನಮ್ಮಯ
ರೂಪು ಯೌವನಕೆ || ನಾಕುಮಡಿಯಹ ಪುರುಷನ್ಯದನೆ | ಸಾಕು ಹೋಗಾನಿಳಯದಲಿ
ಲೋ | ಕೈಕ ವೀರನುದಾರವಿಕ್ರಮನಹನೆ ನಡೆಯೆಂದ ||೧೩|| ಒಲಿಸಿಕೋ ನೀ ನಾತ
ನನು ಕ | ಟ್ಟೊಲುಮೆಯವನಲಾತ ನಿಬರ | ಲೊಲಿಯದಿರ ನತಿಶಯದ ನಿನ್ನಯ
ವಿಭ್ರಮಾನ್ವಿತಕೆ || ಲಲನೆ ಹೋಗೆನುತವಳನಸಿತೋ | ತ್ಪಲನಿಭಾಂಗನು ಕಳುಹೆ
ಲಕ್ಷ್ಮಣ| ನೆಲೆವನೆಗೆ ಬಂದಳು ನಿತಂಬಿನಿ ನಡೆಯ ಮುರುಕದಲಿ ||೧೪|| ಸರಳ ಹಿಳು
ಕಿನ ಹೊಂಗರಿಯ ತುದಿ | ವೆರಳ ಲೊಯ್ಯ್ಯಾರಿಸುತ ಬಾಣವ | ತಿರುಹಿತಿದ್ದುತ ಕೂರಲಗ
ಧಾರೆಯ ನಿರೀಕ್ಷಿಸುತ || ಇರಲು ಸಾರಿದಳಿವಳು ವಿಜಿತ | ಸ್ಮರನ ಸಾರುವ ಜೋಡಿ
ಯದ ವೊ | ಲ್ಸರಕುಮಾಡದೆ ತಿದ್ದುತಿರ್ದನು ಮತ್ತೆ ಮಾರ್ಗಣವ || ೧೫ || ರೂಪಿನಲಿ
ಸೊಬಗಿನಲಿ ಶೌರ್ಯಾ | ಟೋಪದಲಿ ಕುಂದಿಲ್ಲ ಮನ್ಮಥ | ತಾಪವನು ತಗ್ಗಿಸಲು
ತಕ್ಕವನಹನು ನೋಡಲಿಕೆ || ಈ ಪುರುಷ ನೀತನನು ಮಧುರಾ | ಲಾಪದಲಿ ಮಾತಾ
ಡಿಸುವೆ ನೆಂ | ದಾ ಪರಂತಪನನುಜನನು ನುಡಿಸಿದಳು ಶೂರ್ಪನಖಿ || ೧೬ || ನೇಮ
ವಾಯ್ತೆನಗಸಿತಕುಮುದ | ಶ್ಯಾಮನಿಂ ಕಗ್ಗೊಲೆಯ ಕಾಮನ | ಕೈಮೆಯನು ಕಳಲಿಸು
ಕಟಾಕ್ಷದ ಕರುಣಭಾವದಲಿ || ಕಾಮಿಸಿದೆ ನಾನಿನಗೆ ಸುರತ ಕ | ಳಾಮನೋಜ ವಿಲಾಸ
ನಾಗೆಂ | ದಾಮಗಧನಂದನೆಯ ನಂದನಗೆಂದಳಿಂದುಮುಖಿ ||೧೭|| ತೊಡರನಿಡುಮದ
ನಂಗೆ ಮದವನು | ತೊಡೆವಸಂತನ ಮಾರುತಗೆ ಮರು | ವಿಡಿಯ ಸಿಕ್ಕು ಸುಧಾಂಶುವಿನ
ಸುಮ್ಮಾನವನು ಕೆಡಿಸು || ನುಡಿಯನಡಗಿಸು ಕೋಗಿಲನ ಗಾ | ರುಡಿಸು ವಿಷಯ
ವಿಷಾಹಿಯನು ಮೆ | ಲ್ನುಡಿಯ ಹೊಯ್ದುತ್ತೆನೆಯುವಸ್ವಾಂತರ ಕಳೆದುಳಿಸೆ || ೧೮ ||
ಎಂದು ನುಡಿವೀ ಸುರತದಭಿಗತ | ಸೌಂದರಿಯ ನೀಕ್ಷಿಸಿದನಿಂದ್ರಿಯ | ಬಂದಿಕಾರನು
ಬಳಿಕ ಮನದೊಳಗರಿದನಾ ಸತಿಯ || ಸಂದವಾಯಾ ಮೋಹನದ ರೂ | ಪಿಂದ
ಸುಳಿದ ಪಿಶಾಚ ವಧುವಿವ | ಳೆಂದು ಮೆಲ್ಲನೆ ನುಡಿದನಾ ರಾಕ್ಷಸ ನಿತಂಬಿನಿಗೆ || ೧೯ ||

ಕೃತಕವಲ್ಲ ಮದೀಯ ವಚನ । ಸ್ಥಿತಿಗೆ ನಾನೇ ಬ್ರಹ್ಮಚರ್ಯ । ವ್ರತ ಸುನಿಷ್ಠರು
ನೀ ವನಾಂತರವಾಸ ಪರಿಯಂತ॥ ರತಿಯ ಸೊಗಸಿಗೆ ಸೋಲದೆಮ್ಮಯ । ಮತಿಮನೋ
ಭವನಸ್ತ್ರ ಧಾರಾ । ಹತಿಗೆ ಸಿಕ್ಕುವರಲ್ಲ ತೆರಳೆಂದನು ನಿತಂಬಿನಿಯ ॥ ೨೦ ॥ ಎಲವೊ
ಖೂಳ ನರಾಧಮಮತಿ ನಾ । ನೊಲಿದು ಬಂದರೆ ನಿಮ್ಮ ಬಿರುನುಡಿ । ಯಲಿಗಿನಲಿ
ಡಾವರಿಸಿದಿರಿ ಡೊಳ್ಳಾಸವಿದ್ಯೆಯಲಿ ॥ ಲಲನೆಯೊಬ್ಬಳ ವ್ರತ ತನಗೆ ಗಡ । ಹಳುವದಿರ
ವಿಗೆ ಬೊಮ್ಮಚರಿಯದ । ಬಳಕೆಗಡ ನಿಮಗೆಲೆ ನಪುಂಸಕರೆಂದಳಾಕಾಂತೆ ॥೨೧॥ ಕಾತ
ರಿಸಿ ವಿಷಯಾತುರರು ನೆರೆ । ಬೂತುಗೆಡದರೆ ಗರುವ ರಾಘವ । ರಾಗಿ ಮಾರುತ್ತರವ
ಕೊಡುವರೆ ಕೆಲಕೆ ಸಾರೆನುತ ॥ ಆತಮಿಸ್ರಾಚರಿಯನಸುರಾ । ರಾತಿಯನುಜನು ಜರೆಯೆ
ಘನರೋ । ಷಾತಿಶಯದಲಿ ಮತ್ತೆ ಬಂದಳು ರಾಮನಿದ್ದೆಡೆಗೆ ॥೨೨॥ ಕಳುಹಿದನು ತಾ
ಬೊಮ್ಮಚರಿಯದ ಬಳಕೆ ತನಗೆಂದಾತ ನಿನ್ನಯ । ಬಳಿಗೆ ನಿನ್ನಭಿಮತ ವದಾವುದು
ಹೇಳು ಬೇಗೆನಲು ॥ ಲಲನೆ ಯಿವಳಾಚರವಿಕರ್ಮದ । ಬಳಕೆಯವಳೆಂದರಿದು ಮೆಲ್ಲನೆ
ತೊಲಗನುಡಿ ನೊಲಿದವನ ನಂಗೀಕರಿಸು ಹೋಗೆಂದ ॥ ೨೩ ॥ ಮನದ ಮುದದಕ್ಕರಿನ
ವಿಷಯದ । ನೆನಹು ನೆಗ್ಗಿತು ಸುರತಾಸೆ ವಾ । ಹಿನಿಯ ಭರತಗ್ಗಿದುದು ಬಿಟ್ಟುದು
ಕೋಮಲತೆ ಬಳಿಕ ॥ ಘನಮನೋರಥ ಶಿಶಿರಕಾಲದ । ವನಜವಂತಾಯ್ತು ದಿಹಿತವಳಾ
ನನದೊಳಧಿಕ ಕ್ರೋಧಶಿಖಿ ಸಿಡಿದೊಗುವ ಕಿಡಿಗಳಲಿ॥೨೪॥ ತಿಂಬೆನಿವರೀರ್ವರೀಮನುಷ್ಯ
ನಿ । ತಂಬಿನಿಯ ಕೊಂಡೊಯ್ದು ಸುರನಿಕು । ರುಂಬದಲ್ಲಣಗೀವೆ ನೆಂದನುಮಾನ
ಮಾರ್ಗದಲಿ ॥ ಅಂಬುಜಾಕ್ಷನ ಮುಡಿಯ ಸರಿಸಕೆ । ಜೊಂಬಿಸಲು ಝಡಿತೆಯಲಿ
ಬಳಿಕ । ತ್ರ್ಯಂಬಕನ ಹೊಳಹಿನಲಿ ಹೊರಕೈಯಿಂದ ಝಾಡಿಸಿದ॥೨೫॥ ಕಳಕಳವಿದೇ
ನಣ್ಣದೇವನ । ನಿಳಯದೊಳಗೆಂದೂರ್ಮಿಳಾಪತಿ । ಚಳಕವಿಂತೈತಂದು ಕಂಡನು
ಕಪಟ ರಕ್ಕಸಿಯ ॥ ಸೆಳೆದಡಾಯುಧವವಳ ಗಂಟಲ । ಬಳಿಗೆ ಚಾಚಲು ಕಂಡು ರಘು
ಪತಿ । ನಿಲಿಸಿದನು ಕೈತಪ್ಪ ಮಾಡದಿರೆಂದು ಲಕ್ಷ್ಮಣನ॥೨೬॥ ಚಲುವತನವನು ತೋರಿ
ನಿನ್ನುವ । ಲಿಸಲ್ಕೈದಿದಳಿವಳ ಲೋಕಕೆ । ಚೆಲುವತನವನು ಮಾಡಿಬಿಡು ಸಾಕೀ
ನಿಶಾಚರಿಯ । ಕೊಲುವುದನುಚಿತವೆಂಬ ನುಡಿಯಿಂ । ದೊಳಗವಳ ನಾಸಿಕವ ನದ್ರಕೆ
ಬಳಚಿದನು ಕಳಚಿದನು ಕರ್ಣದ್ವಯದ ಬೆಸುಗೆಗಳ ॥೨೭॥ ಬೆದರಿದವನೀ ನಂದನೆಯ
ಮೊಗ । ಪದುಮವರಳಿದುದಾ ನಿಜೇಶನ । ವಸನವಾರೀರುಹವ ನೀಕ್ಷಿಸಿ ನಗೆಯ ನಟನೆ
ಯಲಿ ॥ ಮದುವೆಯಾಗಲು ಬಹುದು ಲೋಕದ । ಸುದತಿಯರಿಗೀ ಸೊಬಗು ಸಂಭವಿ
ಸಿದುದ ಕಾಣೆನು ವರಿಸಬಹುದೆಂದವಳು ನಿಜೇಶ್ವರನ ॥ ೨೮ ॥ ನಿಮ್ಮ ಚಿತ್ತಕೆ ಬಾರದಿರೆ
ನೀ । ನೆಮ್ಮ ಮೈದುನಗಾದರೆಯು । ನಮ್ಮೂರ್ಮಿಳಾ ಮಾಸಿನಿಗೆ ಪಡಿಯಾಗಿರಲಿ
ಮಾಡುವುದು ॥ ನಿಮ್ಮ ರೂಪಿಗೆ ಸೋತವಳ ನೀವು । ಗುಮ್ಮನನು ಮಾಡುವುದು
ಗುಣವೇ । ನಮ್ಮ ಮನಕಿದು ಬಾರದೆಂದಳು ನಗುತ ನಳಿನಮುಖಿ ॥ ೨೯ ॥ ನಗುತ
ಲಕ್ಷ್ಮಣದೇವನಾಕೆಯ । ಹೆಗಲ ಹದಿರಿನೊಳಾಕೆ ನಿನ್ನಯ । ಸೊಗಸಿಗನು ಗುಣವಾವವನ
ವರಿಸೆಂದು ಪ್ರೊರಮುಡಿಸೆ ॥ ಒಗುವ ಕಿವಿ ಮೂಗುಗಳ ರಕುತದ । ಹೆಗರಣವ ಹೊಸ
ನಾಟಕದ ಹಲು । ಪೆಗದ ರಕ್ಕಸಿ ಬಂದಳೊದರುತ ಖರನ ಪಟ್ಟಣಕೆ ॥ ॥೩೦॥

ನಾಲ್ಕನೆಯ ಸಂಧಿ ಸಮಾಪ್ತಂ.

ಐದನೆಯ ಸಂಧಿ.

ಸೂಚನೆ॥ ತುಂಗಬಲ ಸೌಮಿತ್ರಿಯಿಂದುರೆ । ಭಂಗಬಟ್ಟ ಮಹೋಗ್ರ ರಜನಿ ಚ । ರಾಂಗನೆಯು ದೂರಿನಲಿ ಖರನೈತಂದನಾಹವಕೆ ॥

ಪದ್ಯ॥ ರಾಯ ರಾಘವಸೂನು ಕೇಳ್ವನು । ಲಾಯತಾಂಬಕನನುಜ ನುರುಕಾಂ । ಕ್ಷೇಯ ಧಾರಾಭಿನ್ನ ನಾಸಿಕದಬಲೆ ತಾ ಬಳಿಕ ॥ ಹಾಯಿದಳು ಹೊರವಡುವ ನೆತ್ತರ । ಬಾಯಿತೂಪಿರಿ ವಶ್ರುಜಲ ಪೂ । ರಾಯದಭಿಮಾನಚ್ಯುತಿಯ ರೋಧನ ನಿನಾದದಲಿ॥೧ ಇವಳ ಕಾಣುತ ಕೆದರಿದವು ಮೃಗ । ನಿವಹ ವನದಲಿ ತಾಪಸರು ತವ । ತವಿಸೆ ಹಾಯ್ದರು ಹಾಯ್ಕಿ ದಂಡ ಕಮಂಡಲಾವಳಿಯ ॥ ಲವನೆ ಕೇಳ್ಮೆ ಬಳಿಕ ಹಾಹಾ । ರವದ ರಹಣಿಯುಲಾ ಜನಸ್ಥಾ । ನವನು ಹೊಕ್ಕಳು ಸಾರಿದಳು ಸಭೆಯನು ಖರಾ ಸುರನ ॥ ೨ ॥ ಬಿಸುಟಳೊದರುತ ಶೂರ್ಪನಖಿ ನಿವ । ಡಿಸಿದ ಕಟ್ಟಭಿಮಾನ ವಿಳಸಿತ । ಬೆಸುಗೆಗಳಚಿದ ನಾಸಿಕವ ನಿದಿರಿಲಿ ಖರಾಸುರನ ॥ ಅಸುರನವಳನು ಕಾಣುತೀಜಗ । ದಸುವಿನಳಿವಿನ ಕಾಲರುದ್ರನ । ನಿಶಿತ ಕೋಪಜ್ವಾಲೆಗಿವ್ಮಗ್ರಿಲೆನಲು ಖತಿಗೊಂಡ ॥೩॥ ಹೇಳುಹೇಳೀ ಮಾನಭಂಗ ಛ । ಡಾಳವಾರಿಂದಾದುದೆಂಬುದ । ಹೇಳು ಹೇಳೀನಾಸಿಕ ಚ್ಯುತಿ ಯಾರದೆಸೆಯಿಂದ ॥ ಮೇಳವಿಸಿ ತಾನವನ ಮೂಗನು । ಸೀಳಿ ನಿಮಿಷಾರ್ಧದಲಿ ನಿನ್ನೀ । ಕಾಳೆತಘ್ರಾಣದಲಿ ಬೆಸುವೆನು ಬೇಗ ಹೇಳೆಂದ ॥ ೪ ॥ ಕಾಲನಾಗಲಿ ಕಾಲದ ಗ್ಗದ । ಶೂಲಿಯಾಗಲಿ ನೃತ್ಯುವಾಗಲಿ । ಕಾಲಭೈರವನಾದಡಾಗಲಿ ಹರಿವಿರಿಂಚಿಗಳು॥ ಹೇಳು ಸಾಕಾರಾದಡಾಗಲಿ । ಮೇಲಣಾಹವದೊಳಗೆ ಕೈಹದ । ದೇಳಿಗೆಯ ಕೌತುಕನ ನೆನುತಲೆ । ಖಂಡೆಯುವ ಝಡಿದ ॥೫॥ ಖರನ ಕಡುಕೋಪಾನಲನ ಧ । ಳ್ಳುರಿಗೆ ಸಿಡಿದುವು ತಾರೆ ಸಿಮಿಸಿಮಿ । ಗತೆದುದಂಬರ ಸಿಂಧು ಸುರಪುರ ಹೊಗದುದಗಲದಲಿ ॥ ತರುಣಕೇಳ್ಮೆ ಕುಕನೆ ರಾಕ್ಷಸ । ತರುಣಿಗಾದಭಿಮಾನ ಭಂಗದ । ಭರದ ಬವರಕೆ ಬಹಳ ಬಲಸಹಿತಸುರ ಹೊರವಂಟ ॥೬॥ ಮೊರೆವ ವಾದ್ಯಧ್ವನಿಯುಲುಕ್ಕಿನ । ವರವರೂಥವ ನಡರಿದನು ನಿ । ರ್ಜರರ ಜೀವಿಗಳಡಲೆನೆತ್ತಿಗೆ ನೆನೆಯಬಾರದೆನೆ ॥ ಧುರಕೆ ಮುಂಚಿತು ಮುಂದೆ ದೂಷಣ । ದುರುಳ ದುರ್ಮದ ದುಸ್ಸರಣ ದು । ರ್ಧರ ಖರತ್ರಿಶಿರಾದಿ ರಕ್ಕಸ ತಳುಕೆ ಭುವನಚಯ ॥೭॥ ಧೂಳಿಗಟ್ಟಿಗರಟ್ಟ ಸಂಟುರು । ಗಾಳಿ ಮುಸುಕಿತು ಸೂಸಿದುವು ಕುಂ । ಡಾಲಕುಲ ಕಂಬನಿಯ ತಲೆಗೊಡಹಿದುವು ತೇಜಿಗಳು ॥ ಮೇಳವಿಸಿದುವು ಧನುಕೇತು ದಿ । ಶಾಳಿಯಲಿ ರಥಕೇತು ದಂಡದ । ಮೇಲೆ ಹದ್ದೆರಗಿದುವು ಕಲಿ ಖರ ದೂಷಣಾದಿಗಳ ॥೮॥ ಅದರಿತಿಳೆ ರುಧಿರಾಂಬುಧಾರೆಯ । ನದುಗರಿಸಿತಾಕಾಶ ಕಾವಳ । ಕದುಬಿತಿನ ಮಂಡಲವನುದುರಿದವಿಳೆಗೆ ತಾರೆಗಳು ॥ ಮದವುಖಿಲ್ಮೆ ರಕ್ಕಸರು ತೋ । ರಿದ ಮಹೋತ್ಪಾತವನು ಒಗೆಯದೆ । ಕದನ ಕೋಲಾಹಲರು ದಳವುಳಿಸಿದರು ದಾಳಿಯಲಿ ॥೯॥ ಮುಸುಕಿತಭ್ರವನಸುರ ಸೇನಾ । ವಿಸರ ಪದಹತಧೂತ ಧೂಳಿ । ಪ್ರಸರ ವಡಿಗಡಿಗಳುಕಿಸಿತು ರಣ ವಾದ್ಯ ನಿರ್ಘೋಷ ॥ ಬಿಸಜಗರ್ಭಾಂಡವನು ಕಿವಿಗೇ । ಳಿಸಿತಲ್ಮೆ ಸಿಮ್ಮರಸಗೀ ರಾ । ಕ್ಷಸರ ರಣರಭಸದ ಗಡಾವಣೆ ಪರ್ಣಶಾಲೆಯಲಿ ॥೧೦॥ ಆಗ ದಿರವೀಯಬ್ಬರವು ಕಿವಿ । ಮೂಗು ಮಸುಳಿಸಿದವಳ ಬವರದ । ಭಾಗೆಕಾರರ ಬರವು

ಭರತಾವರಜ ನೋಡೆನಲು ॥ ಆಗಲಾ ಸೌಮಿತ್ರ ಸಕಲ ಗು । ಣಾಗಮಜ್ಞನ ನುಡಿಗೆ ಗಿರಿತುದಿ । ಗಾಗಿ ಬಂದೇರಿಳಿದು ಬಿನ್ನೈಸಿದನು ರಘುಪತಿಗೆ ॥ ೧೧ ॥ ಅರಸ ಚಿತ್ತೈಸ ಹುದು ನಾವಂ । ದಿರಿದ ನಾಸಿಕದವಳ ತೆತ್ತಿಗ । ರುರವಣಿಸಿ ಬರುತಿದೆ ನಿರೂಪಿಸು ಜೀಯ ಸಂಗರಕೆ ॥ ಸರಳ ಸೂತ್ರದಲಹಿತವೀರರ । ಶಿರವ ಸೂತ್ರಿಸಿ ಕಾಲಕಂಠನ । ಕೊರಳಿಗಿಕ್ಕುವೆ ನೆನುತ ಬಿಲುದುಡುಕಿದನು ಸೌಮಿತ್ರಿ ॥ ೧೨ ॥ ಬೇಗವಾಡದಿರಿರಿಸು ಸೀತೆಯ । ನೀ ಗಿರಿಯ ಶಿಖರದಲಿ ಕೈಮಿಗಿ । ಲಾಗಿ ಬಂದರಿಭಟರ ಭಂಜಿಪ ನೇಮಸಿಸ ಗಿನಿತು । ಬಾಗೆ ನಮಗೀ ರಕ್ಕಸರ ರಣ । ದಾಗು ತಾ ಕಾರ್ಮುಕವನೆಂದು ಸ । ರಾಗದಲಿ ಸಾಹಸ ಪರಾಕ್ರಮಿ ಸಮರಕನುವಾದ ॥ ॥ ೧೩ ॥

ಐದನೆಯ ಸಂಧಿ ಸಮಾಪ್ತಂ.

ಆರನೆಯ ಸಂಧಿ.

ಸೂಚನೆ ॥ ಅಸುರದ ಸನ್ನಾಹದಲಿ ಖರ । ದೂಷಣ ತ್ರಿಶಿರಾದಿಗಳ ಕೀ । ನಾಶನಗರಿಗೆ ಕಳುಹಿದನು ಸಂಗ್ರಾಮದಲಿ ರಾಮ ॥

ಪದ್ಯ ॥ ಅದುದಾ ರಕ್ಕಸಿಯ ನಾಸಾ । ಚ್ಛೇದವೇ ಭೂಭಾರಕರ ವಿ । ಚ್ಛೇದನಾ ಪ್ರಾರಂಭವೆಲೆ ಕುಶ ಕೇಳಿದ್ದೈ ಬಳಿಕ ॥ ಐದಿತೀ ರಘುಪತಿಯನಾಕ್ರ । ವ್ಯಾದಬಲ ವೇಡೈಸಿಕೊಂಡುದು । ಹೋದ ಮೂಗಿನ ಖಳಸತಿಯ ಕೈಸನ್ನೆಗಾಶ್ರಮವ ॥ ೧ ॥ ಅದೆ ನಿಶಾಚರ ಮೇಘಮಾರುತ । ಸದನ ವಸುರಾನ್ವಯ ಪರಾಕ್ರಮ । ಸುದತಿಯುಗ್ಗದ ಕರ್ನ ನಾಸಾಛೇದ ನಿಜನಿಳಯ ॥ ಅದೆರಣೋತ್ಸಹಸಿರಿಯ ವಿಟನ । ಭ್ಯುದಯ ಶಾಲೆ ವಿಶಾಲ ಬಲ ಸಂ । ಪದನ ಭವದ ವಿಧಿಯನು ತೋರಿದಳು ಶೂರ್ಪನಖಿ । ೨ ॥ ಮುತ್ತಿ ತಾರಿಪ್ತ ಸೇನೆ ಸೂರ್ಯ ಕು । ಲೋತ್ತಮನ ದಳನಿಳಯವನು ದಿಗು । ಭಿತ್ತಿ ಬಿರಿಯಲು ಮೊರೆವ ಭೇರಿ ಮೃದಂಗದುನ್ನತಿಯ ॥ ತಿತ್ತಿರಿಯ ತಂಬಟದ ಲಗ್ಗೆಯ । ಮತ್ತವಾರಣ ಹಯ ವರೂಥದ । ಪತ್ತಿಗಳ ಪಡಿತಳದ ಭಾರಿಯ ಘೋರಘೋಷದಲಿ ॥ ೩ ॥ ನಡೆ ಸುಮಿತ್ರಾ ಸೂನು ಕೇಳ್ಸಿಲ । ಸಿಡಿ ಸರೋಜಾನನೆಸಹಿತ ಸಂ । ಗಡಿಸು ಕಡು ಕೋದಂಡ ಕಕ್ಷ ಯಕ ಕಳಂಬಕವ ॥ ತೊಡವೆನಾ ತೋರ್ಪಿನಿಶಾಚರ । ಪಡೆಯ ಭಾಗ್ಯದ ಭಾಳಲಿಪಿ ಯನು । ನೆಡಿಸುವೆನು ನೈಶಾಟವಿಜಯಸ್ತಂಭಡಂಬರವ ॥ ೪ ॥ ಬಿಗಿದು ಬೆಳುವಟ್ಟೆಯ ಕಠಾರಿಯ । ಮಿಗೆಕಟಿಗೆ ಸಿಂಗರಿಸಿ ಹೊನ್ನಾ । ಯುಗದ ಖಡ್ಗವನಕ್ಷಯದ ಮೂಡಿಗೆಯ ದಕ್ಷಿಣದ ॥ ಹೆಗಲಿಗಾನಿಸಿ ಹರದ ಜಡೆಗಳ । ಜಗುಳದೋಳೊಳಚಾಚಿ ಚಾಪವ । ತೆಗೆದುಕೊಂಡಾವನದಿಂದೆ ಹೊರವಂಟನಾರಘುನಾಥ ॥ ೫ ॥ ಕುಶನೆ ಕೇಳಂದಾ ಹಿರ ಣ್ಯಾಕ । ಸಸವ ದೈತ್ಯ ಕದಂಬದಲಿ ರೂ । ಹಿಸಿದ ನರಕೇಸರಿಯ ರೌದ್ರಾಟೋಪದಂದ ದಲಿ ॥ ಮುಸಗಿ ಮಾರ್ಬಲದಿದಿರಿನಲಿ ಮೋ । ಹಿಸಿದನೈ ಲನಕೇಳು ಹೂಂಕೃತಿ । ಮುಸಗೆ ಹೂಡಿದನಹುತರದೆ ನಿಳಿನಿಟಿಲೆನಲು ಧನುವ ॥ ೬ ॥ ಧನುವನೇವರಿಸಿದನು ಕೊಪ್ಪಿಸ । ಕೋನೆಯ ನಾತ್ಯೈದು ಭಯದಲಿ ಓಂ । ಜನಿಯಧ್ವನಿದೋರಿಸಿದ ನಬುಜಭವಾಂಡ ಘಟ ಬಿರಿಯೆ ॥ ವನಧಿಗಳು ತುಳುಕಾಡೆ ತಾರಕೆ । ತನಿಗೆದರೆ ತಳ್ಳಂಕಗೊಳೆ ಮೇ । ದಿನಿ

ಸುರಾಚಲವಲುಗೆ ಬೊಬ್ಬಿರಿದುಬ್ಬಿದನು ರಘುಜ॥೭॥ ಅಂದರಾ ತ್ರಿಶಿರಾದಿಗಳು ಮೂ। ಕೊರತಿ ಹೇಳಿದ ಹಳ್ಳಿಕಾರನ। ಕುರುಹ ಕವಿಕಪಿಯೆನುತ ಭೋಯೆಂದುಬ್ಬಿ ಬೊಬ್ಬಿರಿದು ॥ ಹರೆಯು ಕೊಯ್ಲಿನ ಲಮರಗಿರಿ ತರ। ತರಿಸೆ ಹೂಡಿವರಸ್ತ್ರಶಸ್ತ್ರದ। ಹೊಂಗೆಯಲಿ ಹೊಳೆವರು ಹೊಗಿಸಿದರಾನೆ ಕುದುರೆಗಳ ॥೮॥ ಸರಳಸರಿಲ್ಲೆಹದ ಮಳೆ ಮು। ದ್ಗರದ ವೃಷ್ಟಿ ಮುಸುಂಡಿ ಮುಸಲದ। ವರುಷ ಧಾರಾಸಾರ ಕದಸಿಡಿಲಂಬು ಶಕ್ತಿಗಳ॥ ಬಿರುಬಿನಗ್ಗದ ಸೋನೆ ರಜನೀ। ಚರ ಬಲಾಹಕಪಟಲದಿಂದ। ಬ್ಬರಿಸಿ ಸುರಿದುದು ರಾಮ ಸುಮನೋದ್ದಾಮ ಶಿಖರಿಯಲಿ ೯॥ ಬೀಸಿದುದು ಬಿರುಗಾಳಿ ರಾಮ ಶ। ರಾಶನದ ಸಂಳೋಟದಲಿ ಕೊರ। ಬೀಸಿ ಬಿದ್ದುವು ಬಿರುದಿನಸುರರ ಸಾಲುಡಲೆ ನೆಲಕೆ॥ ಸೂಸಿ ಸಿಡಿ ವರುಣಾಂಬುವಿನಲಾ। ಕಾಶದಮರ ವಿಮಾನವರಳಿದ। ದಾಸಣದ ಧಾತುಗಳಲಿರ್ದವು ಕೂಡೆ ಗಗನದಲಿ ॥೧೦॥ ಬೀಳುವಾಯುಧವನು ನಿವಾರಿಸ। ಕೋಲವೊಂದು ಪದಾತಿ ಹಯ ಶುಂ। ಡಾಲ ರಥಕೊಂದೊಂದು ಮೇಲಾರೈಕೆಗೊಂದುವರ॥ ಕೇಳುವುದು ಮೂಡಿಗೆಯೊಳೊಂದರ। ಬೂಳಿಗವ ನಚ್ಚರಿಯುಲಾ ರಣ। ಕೇಳು ಸಾಮಕವಲ್ಲದಿಲ್ಲೆಸುಗೆಯಲಿ ರಘುಪತಿಯ ॥೧೧॥ ಕಾಣೆನಿದಿರಲಿ ಕವಿವಕಾದುವ। ಕೋಣಪರ ಕೋಳಾಹಳಿಕೆಗಳ। ಕಾಣೆ ಸೈ ಕಣ್ಣಾಳತೆಯಲಿ ಕುಂಭಿನಿಯ ವಿವರಣವ॥ ಕಾಣಿಸಿತು ಕರ್ಬುರರ ಕದನವ। ಶೋಣಿತಾಂಬುಧಿಯುಗಲದಲಿ ಬಿಲು। ಜಾಣರೊಳಗಿಂದಾವ ವೀರನೋ ಸಿಮ್ಮಪಿತನೆಂದ ॥೧೨॥ ಸೀಳಿಬಿದ್ದುವು ಬಲುಮದೇಘ। ಟಾಳಿ ಘೋಟಕ ನಿಕರ ನೆಲದಲಿ। ಹೋಳುಗಳೆದುವು ಕಳಚಿಬಿದ್ದ ನಭೋಗ್ರದಲಿ ರಥವ। ಗಾಲಿ ಗರ್ರನೆ ತಿರುಗುತಿರ್ದುವು। ಕೋಲ ಮೊನೆಯಲಿ ಭೂತಗಣ ಕರ। ತಾಳದಲಿ ಕುಣಿದಾಡುತಿರ್ದುವು ಪಾಡುತನವನಿಪನ ॥೧೩॥ ಎಲೆಲೆ ಕವಿತಿವಿ ಕೊಲ್ಲು ಕೊಲ್ಲಿರಿ। ತಲೆಯ ಹ್ಯೊಹ್ಯೊ ಕಾಲಹಿಡಿದ। ಪ್ಪಳಸು ನರನೊಟ್ಟೈಸುವನು ಗಡ ರಕ್ಕಸರನೆನುತ॥ ಬಳಿಯ ರಕ್ಕಸರಧಿಕರಿಸುಗೆಯ। ಚಳಚಮತ್ಕೃತಿಯಿಂದ ದೂಷಣ। ಹಳಚಿದನು ಹರಿದಶ್ವಕುಲ ಸರಸಿರುಹ ಬಾಂಧವನ ॥೧೪॥ ಉರುವಣಿಸಿದರು ರಾಯರಾವೃತರು। ಕರದ ಬಡುಗದ ನೆಗಹಿನಲಿ ಸಿಡು। ವರಿಯ ಗಜತೂಳಿದವು ತೋಳಿನ ಬಾಳನೆಗಹಿನಲಿ॥ ಹಂಗೆ ಖಡ್ಗ ಕಠಾರಿ ಕುಂತದ। ಲಿರಿತಕಾರರು ಹೊಕ್ಕರನಿಬರ। ಕೊರಲೊಳಾಡಿದವಂಬು ಖಳಕುಲ ಕಾಲಭೈರವನ ॥೧೫॥ ರುಂಡಕುಣಿದುವು ಕೂಡೆ ನಭದಲಿ। ಮುಂಡ ತೊರಳಿದುವವನಿಯಲಿ ಕಡಿ। ಖಂಡಮಯವಾಯ್ತಿಭರಥಾಶ್ವ ಕವಂಬನಿನಿವಹದಲಿ॥ ಕಂಡ ವೈಯ್ಯಾಲಿ ಕರುಳ ರಕುತದ। ಜೊಂಡೆಯದ ಜರಿದೆಲುಗಳಲಿ ಜವ। ನುಂಡುಕಾರಿದ ನೆಲನವೊಲು ರಣಭೂಮಿ ರಂಜಿಸಿತು ॥೧೬॥ ಬಣಗುಮಾನವ ಕೇಳು ಕಲಿದೂ। ಷಣಕಣಾ ಬಂದವನು ಮೃತ್ಯುವಿ। ನಣಲಿಗಾಂತ ಶರೀರಿಗುಂಟೆ ಪುನರ್ಭವಾಭ್ಯುದಯ॥ ತೃಣಕೆ ಕೊಂಬೆನೆ ದೇವ ದಾನವ। ಗಣವನಕಟ ವೃಥಾ ನಿಶಾಟರ। ಕೆಣಕಿ ಕೆಟ್ಟೆಯೆನುತ ಕಸಿದೆಚ್ಚನು ಕಕುಸ್ಥಜನ ॥೧೭॥ ಎಚ್ಚಮಾರ್ಗಣಗಣವ ನೆಡೆಯಲಿ। ಕೊಚ್ಚಿದನು ಗಹಗಹಿಸುತಿಲಿವೋ। ಕಿಚ್ಚುಕದಳಿಯೊಳುಳ್ಳಿಡದು ತಾಜಗಕೆಚಿತ್ರವಲ॥ ಬಿಚ್ಚಿದಿರು ಡೋರ್ಬಲ ತಟಾಕವ। ಮುಚ್ಚಿದೂಬನು ನಮ್ಮ ಮುಂದೆನು। ತೆಚ್ಚಗಗನಕೆ ದೂಟಿಸಿದ ದೂಷಣನ ಮಸ್ತಕ ॥೧೮॥ ದೂಟಿಮಸ್ತಕವಭ್ರಕಿಟ್ಟದು। ಕೂಟದಲಿ ಮುಸಲ

ದಲಿ ಗದೆಯಲಿ। ಘಾಟಶಕ್ತಿಯ ಲೀಟಿಯ್ಯಲಿ ಶೂಲದಲಿ ನೆತ್ತರಿನ ॥ ಓಟಪರಿಯಂತರ
ಕದಂಬನಿ। ಶಾಟರಿಪುವನು ಸುರರು ಬೆರಗಿಡೆ। ದಾಟುತಲ್ಲಿಂಪೋಲಿ ಮೆಲ್ಲನೆ ಜೀವವಾ
ಖಳನ ॥ ೧೯ ॥ ನೂಕಿದನು ಕೈಯೊಡನೆ ರಥವ ಸ । ಮಿಾಕ ಸಾಹಸಮಲ್ಲನಾನರ।
ಲೋಕನಾಥನ ಸರಿಸದಲಿ ಸಳೆಯಗೆಯಲಿ ತ್ರಿಶಿರ ॥ ವ್ಯೋಕರಿಸಿದುದೋ ಗಗನಮಣಿ
ದಶ। ಸೀಕ ಬೆಸಲಾದುದೋ ಲಯಾಗ್ನಿಕ। ಣಾ ಕಲಿತಮಾರ್ಗಣವನೆನೆ ಮುಸುಕಿದುದು
ಕರಿಜಾಲ ॥ ೨೦ ॥ ಅಸುರಹರನೇನಲ್ಪನೇ ಸಾ। ಹಸದರಿದ್ರನೆ ಸುರನರೇಂದ್ರರ। ಲಸಮ
ನಯನನ ನೋಟಕಿದಿರೆ ಚರಾಚರದ ವಿಭವ॥ ವಿಷಮ ವಿಕ್ರಮ ವೀರ ರಾಮನ। ವಿಶಿಖ
ಮುಖದಲಿ ಸಮರದಲಿ ಜೀ । ವಿಸುವನಾರೈ ತ್ರಿಶಿರ ಮಸ್ತಕವಡರಿದವು ನಭವ ॥ ೨೧ ॥
ಏನಹೇಳುವೆನಮಮ ಹರ ಚತು। ರಾನನಾಖಂಡಲರ ನರಸಿದ। ವಾನಿಶಾಟನ ಮೂರು
ಮಸ್ತಕವಟ್ಟಿ ಸುರಬಲವ ॥ ಆನೆಯಿಂದಿಳಿದೋಡಿದನು ಸುರ । ಸೇನೆಸಹಿತಮರೇಂ
ದ್ರನಜಗೆ ಪ್ರ। ಯಾಣವಾದುದು ಕಾಣೆನಭದೊಳಗಾ ತ್ರಿಯಂಬಕನ ॥ ೨೨ ॥ ನೋಡಿ
ಕಂಡನು ಸುರರ ಮುರಿಗೆಡ । ದೋಡಿಕೆಯ ಕಳಕಳವ ನಸರ ವಿ। ಭಾಡ ನಸುನಗು
ತುಗ್ರವೈಷ್ಣವ ಬಾಣವನು ಬೆಸಸೆ ॥ ಝಾಡಿಗಿಡಿಗಳ ಝಳಪ ದಳ್ಳುರಿ। ಝಾಡಣೆಯ
ಜವಗತಿಯಲಮರರ । ಬೀಡಿಗಭಯವ ಕೊಡುತ ಲಡಗಿಸಿತಾ ಶಿರತ್ರಯವ ॥ ೨೩ ॥
ತನುಜಕೇಳಾಶ್ಚರ್ಯವನು ಸ್ಯಂ । ದನದ ಮೇಲಣ ಮುಂಡ ಬೊಬ್ಬೆಯ । ನಿನದ
ತಪ್ಪಿಸಿ ತಪ್ಪದೆಸುತಿರ್ದುದು ಕಕುಸ್ಥಜನ॥ ನೆನಹವೆಂತುಟೊ ಸವೆಯ ಸರಳು। ಬ್ಬಿನಲಿ
ಚಕ್ರದಲಿಟ್ಟುದುಟ್ಟುದು। ಕನಲಿ ಕೈದುಗಳನಿತರಲಿ ೞಲಿರಾಘವೇಶ್ವರನ ॥ ೨೪ ॥ ತೀರೆ
ಕೈದುಗಳಳಿದು ಬೊಬ್ಬೆಯ। ದೋರೆ ಕಡಿಗೊರಲಿನಲಿ ಕೋಪಿಸಿ । ತೇರಿನಗ್ರವಪಿಡಿದು
ತಿರುಹಿಟ್ಟುದು ಕಬಂಧಕವ ॥ ವೈರಿಯಾನು ಬಳಿಕಾ ಕಬಂಧದ। ಭಾರಿಭುಜ ವಿಕ್ರಮವೆ
ನಾ ರಘು। ವೀರ ಕಂಡಚ್ಚರಿಯ ತಾಳ್ದನು ತೂಗಿ ಮಸ್ತಕವ ॥ ೨೫ ॥ ಲೇಸು ಲೇಸೆನು
ತವರ ಸಮರ ವಿ। ಳಾಸ ವಿಭವಕೆ ಮೆಚ್ಚಿ ನಗುತ ಶ। ರಾಸನಾಗ್ರದಲಿರಿಯೆ ಬಿದ್ದುದು
ಧರಣಿಗಪ್ಪಳಿಸಿ ॥ ಸೂಸುವರುಣಾಂಬುವಿನ ಧಾರೆಯ । ಭಾಸುರದ ಪರಿಗೊರಳ ತೋ
ಳಿನ। ಬೀಸಿಗೆಯ ಬಿರುಸಿನಲಿ ಹೊರಳಿತು ಮುಂಡವಾಖಳನ ॥ ೨೬ ॥ ಧರಣಿಜಾಸುತ
ಕೇಳು ತ್ರಿಶಿರನ। ಮರಣವನು ಕಾಣುತ ಜಗಸಂ । ಹರಣ ರುದ್ರನ ಕುಪಿತ ರೌದ್ರಾ
ವೇಶ ರೋಷದಲಿ ॥ ಖರನು ನೂಕಿದ ನದ್ರಿಸಾರದ। ವರವರೂಥವನೊಡನೆ ಗಜರಥ।
ತುರಗ ಕಾಲಾಳೇರಿ ಮುತ್ತಿತು ಮನುಕುಲೇಶ್ವರನ ॥ ೨೭ ॥ ಆಸುರರ ಬೊಬ್ಬಾಟ ಹಸು
ದುರು। ಹೇಷಿತಧ್ವನಿ ಕರಿಯ ಬೃಂಹಿತ । ಘೋಷ ರಥರಾಜಿಗಳ ಚೀತ್ಕೃತಿ ಭಟರ
ಸಿಂಹರವ ॥ ಆ ಸಮರವಾದ್ಯದ ಘಡಾವಣೆ । ಯಾಸುರದಿ ಬೆದರಿಸಿತು ರಾಮ ಸು।
ವಾಸಿನಿಯು ನಗವಳಿದು ನುಡಿದಳು ರಘುಜನನುಜಂಗೆ ॥ ೨೮ ॥ ದೇವ ರಾಮನರೌದ್ರ
ವದಧಿ। ರಾವಕರ್ಣಕೆ ಬೀಳದಿದೆ ಭುವ । ನಾವಳಿಯ ನಬ್ಬರಿಸುತವೆ ಕಬರ್ರರ ರಣ
ರಭಸ ॥ ಆವ ಹದನೋಹರಣದಲಿ ಮು। ಜ್ಜೀಪಿತೇಶನು ಕೇಳದೈ ಯೆಲೆ। ದೇವ ನರ
ದೇವೇಶ ನಿರವೆಂತೆಂದಳಬುಜಾಕ್ಷಿ ॥ ೨೯ ॥ ನೊಂದೆ ಲಕ್ಷ್ಮಣದೇವ ನಡೆ ರಘು। ನಂದ
ನನ ಬೆಂಬಲಕೆ ರಿಪುಗಳ। ಬಂದಿಯನು ಬಿಡಿ ಸವಿುತಮಾರ್ಗಣ ವಣವನ ಣಲಿಕ್ಕು ॥
ತಂದೆ ಹೋಗೈ ತಡವಮಾಡದಿ । ರೆಂದು ಜಾನಕಿ ನುಡಿವ ಲಾ ಪ್ರೂ । ಣೇಂದು

ಮುಖಿಗೀಮಾತನೆಂದನು ಮಾಗಧೀಸೂನು ॥ ೩೮ ॥ ಹಲಬರುಂಟೀ ರವಿಗಳಿಡಿ ಗ ।
ತ್ತಲೆಯುಮೊತ್ತಕೆ ಘನಬಲಾಹಕ । ಬಳಗಕನಿಬರು ಮಾರುತರು ಮದವೇರಿದಂಬು
ಧಿಯು ॥ ಸಲಿಲಕನಿಬರು ಬೀಕು ಉರ್ವಾ । ನಲರು ಹೇಳೌ ತಾಯೆ ರಾಮನ । ಕಲಹ
ಕ್ಯಾಕೈನೆರವು ಕಳವಳವೇಕೆ ನಿಮಗೆಂದ ೩೧ ಬಿಜಯಮಾಡೀ ಕುಧರದಗ್ರದ । ಕುಜದ
ನೆರಳಿಗೆ ಕೋಟಿ ವೃಷಭ । ಧ್ವಜ ಪರಾಕ್ರಮ ಪೌರುಷವ ರಣಪಥವ ತೋರುವನು ॥
ಭಜಿಸದಿರಿ ಭೀತಿಯನೆನುತ ಭೂ ಮಿಜೆಯ ಭೂಧರದಗ್ರಕೇರಿಸಿ । ವಿಜಯ ವಿಕ್ರಮ
ವೀರರಾಮನ ರಣವ ನೋಡೆಂದ ॥೩೨॥ ಅದೆ ರಘುಕ್ಷಿತಿಪಾಲಕನ ಚಾ । ಪದ ಚಡಾಳ
ಧ್ವನಿಯು ಚಿತ್ರೈ । ಸಿದಿರೆ ಮುಂದಿದೆ ಸಮರಭೈರವನುಗ್ರಸಿಂಹರವ ॥ ಅದೆ ಶಿಖಾ
ಳಿಯ ನುಗುಳ್ವ ಶರಳಿನ । ಹೊದರ ಹೋರಟೆ ನೋಡೆ ಮೂರುತಿ । ಯದೆ ಜಗದ್ವ್ಯಾಪ
ಕನ ನಿಲವಿನ ನಿಗರ ನೋಡೆಂದ ॥ ೩೩ ॥ ಹರಿಯ ಬಿಡಿಲೋಚನವ ನಿದಿರಿನ । ಉರ
ವಣಿಸುತಿದೆ ರಾಮಬಾಣ । ಸ್ಫುರಿತ ವಿಕ್ರಮವಹ್ನಿ ವಿದ್ವಿಷ ವಿಪಿನ ವೀಥಿಯಲಿ ।
ಉರುಳುತಿವೆ ಗಜವರುಣ ಜಲದಲಿ । ಹೊರಳುತಿವೆ ಹಯ ವಸುರರಸುಗಳು । ತೆರಳುತಿವೆ
ತಾರಾಧ್ವದಲಿ ತರಳಾಕ್ಷಿ ನೋಡೆಂದ॥೩೪॥ ಕುಣಿವುತಿವೆ ರಣಭೂತ ರಾಮನ । ಕಣೆಯ
ಝೇಂಕೃತಿ ರವಕೆ ನಭದಲಿ । ಮಣಿವುತಿವೆ ಮೌಳಿಗಳು ರಾಮನ ಸಂಗರಕೆ ಸುರರ ॥
ಎಣಿಕೆ ಮಾತಕೆ ರಾವ ನೀ ಧಾ । ರುಣಿಯಭಾರವ ಭಂಜಿಸಲು ಕಾ । ರಣಿಕನಾದನು
ಕಮಲನಾಭನು ಮಾತೆ ಕೇಳೆಂದ ॥ ೩೫ ॥ ಈಪರಿಯ ರಣರಭಸವನು ಸತಿ । ಗಾಪರಂ
ತಪ ತೋರುತಿರಲಾ । ಟೋಪ ಮಸಗಿದುದತ್ತ ಸಂಗರ ದುಭಯವೀರರಿಗೆ ॥ ಆ ಪುಲ
ಸ್ತ್ಯಾನ್ವಯನು ಚಾಪ ಕ । ಳಾಪವನು ಕೈಕೊಂಡು ಮುಸುಕಿದ । ನೀ ಪತಂಗಾನ್ವಯ
ಶಿರೋಮಣಿಯನು ಸರಾಗದಲಿ ॥ ೩೬ ॥ ಮುಸುಕಿದರಿ ಶರಜಾಲವನು ಖಂ । ಡಿಸಿದನಾ
ರಘುನಾಥ ಮಾಗು । ಬ್ಬಸವ ಮಾಡಿದ ನೆಸುಗೆಯಲಿ ಬಳಿಕಾ ನಿಶಾಟಂಗೆ ॥ ವಿಶಿಖ
ಹತಿಯಲಿ ನೊಂದು ಹಲುನೊರ । ದಸುರನುಗಿದನು ಬತ್ತಳಿಕೆಯಿಂ । ದಸಮನಯನ
ಕಳಂಬವನು ಕಳವಳಿಸೆ ಸುರನಿಕರ ॥ ೩೭ ॥ ಈ ಸುಭಟನುದ್ದಂಡ ಬಿಲ್ಲಿ । ಗ್ಯೆಸಲೀ
ತಪ್ಪೇನೆನುತ ಮ । ಹೇಶದತ್ತ ಕಳಂಬವನು ಕಾರ್ಮುಕಕೆ ನೆಲೆಗೊಳಿಸಿ॥ ಆ ಸಮಸ್ತ
ನೃಪಾಲ ಮಧ್ಯದ । ಲೀಶಚಾಪವ ಮುರಿದ ವೈರದ । ವಾಸಿ ನಿನಗಿನ್ನರಿಯಬಹುದೆನು
ತೆಚ್ಚ ಬೊಬ್ಬಿರಿದ ॥ ೩೮ ॥ ಅದು ಮಹೇಶ್ವರ ಮಾರ್ಗಣವದೆಂ । ದದನದೊವ್ಮಗೆ
ಮನ್ನಿಸುತ ಚಾ । ಚಿದನು ಚಟುಳ ಚಡಾಳ ಚಾಪವನಾ ಚರಾಚರದ ॥ ಹೃದಯದಂತ
ರ್ಯಾಮಿ ಸರಳೆ । ತ್ತಿದುದು ಬಳಿಕರ್ಧನನು ಕೊಂಡೊ । ಯ್ದುದುರಿಸಿತು ಸೀತಾ ಸುಮಿ
ತ್ರಾಸುತನ ಸರಿಸದಲಿ ॥ ೩೯ । ಹಾಯೆನುತ ಮುಕ್ಕುರಿಕಿತ ಸುರ ನಿ । ಕಾಯ ನಿಶಿತ
ಮಹೋಗ್ರತರ ನಿಖಿ । ಳಾಯುಧದ ಭಟರೌಕಿದುದು ಗಜರಥ ತುರಂಗಮನ ॥ ಬಾಯ
ಬಿಟ್ಟುದು ಗಗನದಲಿ ರಘು । ರಾಯನಾದುದೆ ರಣಧುರಂಧರ । ದಾಯತಿಕೆ ಗವಸಾನ
ಹಾಯೆ ನುತಖಿಳ ಸುರನಿಕರ ॥೪೦॥ ಬಳಿಕಲೇನೇಳುವೆನು ಕಂಚುಕಿ । ಗಳೆದ ಕಾಳೋ
ರಗನ ಜಾತಿಯ ! ಕಳಕಳಕೆ ವಿ ಗಿಲುಗಿದ ನೊರೆಯಿಂದುಗ್ರಖಂಡೆಯವ ॥ ಕಳಲಿ ರಣ
ದಲಿ ಕೆಡದ ರಕ್ಕಸ । ವಲಗೆಯಿರಲದ ಕೊಂಡು ಮುಂಗೈ । ಗೊಳಿಸಿ ಯಜ್ಞದ ವೀರ
ಭದ್ರನ ರಣಕೆ ಗುರುವಾದ ॥೪೧॥ ಅಟ್ಟಿ ಹೊಯ್ದನು ಹೊಗುವ ತೇರಿನ । ಥಟ್ಟಿತೂಳಿದ

ತೋಳಿನಾರಿಯು | ಮೆಟ್ಟಿ ಮೆಡೆಗೆಡಹಿದನು ವರತೇಜಿಗಳ ತಿಂತಿಣಿಯ || ಅಟ್ಟಿ ಕುಣಿಯಲು ಕುಬುಬಿರಿದು ತಲೆ | ಯೊಟ್ಟಿಲನು ತೋರಿದನು ಕಾಲಗೆ | ಕೊಟ್ಟಿಗೆಯೊಲಾಯೆನಲು ಕಡಿದಿಕ್ಕಿದನು ಖಳಬಲವ || ೪೨ || ಮತ್ತ ಮುಸುಕುವ ಕರಿಯ ಶಿರದಲಿ | ಮುತ್ತುಗಳ ಮಾಂಟಿದನು ಮಾವುತ | ರುತ್ತಮಾಂಗಕೆ ಹರಿವ ಕಂಡನು ಹಯದರಾವುತರ || ಎತ್ತಿಸಿದ ನಸುಗಳನು ರಥಿಕರ | ಹತ್ತಿಸಿದ ನಂಬರವ ಭೀತರ | ಹುತ್ತನೇರಿಸಿ ಹೊಳಕಿವನು ಹೊಳೆಹೊಳೆವ ಖಡ್ಗದಲಿ ||೪೩|| ನೀರೊಳೆಳದಸಿ ಯಂತೆ ಖಡ್ಗದ | ಧಾರೆ ಚತುರಂಗದಲಿ ವಿಹರಿಸಿ | ತಾರನುಪನಿಸುವೆನು ಸುರಾಸುರ ನರಭುಜಂಗರಲಿ || ವೀರ ರಾಮಗೆ ರಾಮನೇ ಪ್ರತಿ | ವೀರಕೇಳ್ವೆ ಮುಗಿಲು ಗಂಡ ಮ | ಯೂರನವೊಲುಬ್ಬಿದನು ಸಂಗರ ರಂಗಮಧ್ಯದಲಿ || ೪೪ || ಪುಟನೆಗೆದು ತಿಗೆದಸುವ ಖರನು | ಬ್ಬಟೆಯ ತೇರಿನ ತೇಜಿಗಳ ನಾ | ಭ್ರಟಿಸಿ ನೂಕುವ ಸಾರಥಿಯನಾ ಧ್ವಜಪತಾಕೆಗಳ || ಅಟಕಟ್ಟಿಸಲಳಿಯೇರಿ ತರಿದು | ತ್ಕಟನ ತೋರಿದನಂತಕನ ಜೆಳೆ | ಗಟಿಮಟಿವ ಫಲಿಸುವದೆ ದೈವದ ಲಣುಗ ಕೇಳೆಂದ ೪೫|| ಅಡರಿದನು ಹೊಸರಥವನವನದ | ಕಡಿದು ಹಾಯ್ಕಿದನೀತನಾಖಳ | ಪಡಿರಥಕೆ ಧುಮ್ಮಿಕ್ಕಲದ ತರಿದನು ಕೃಪಾಣದಲಿ || ಬಿಡದೆ ನೂರೆಂಭತ್ತು ಪರಿಯಂ | ತಡಸಿ ಸಾರಥಿ ಸಹಿತ ರಥವಂ | ಗಡವ ವಿಂಗಡಿಸಿದನು ಸಂಗರ ರಂಗಮಧ್ಯದಲಿ ||೪೬|| ಏಸಿದಚ್ಚರಿ ಕಡಿದ ಧನುವಿಮು | ಭಾನುಕುಲಜನದಾಗದಿರವಿದ | ನೀನು ಕಂಡ್ಯೆ ಯುಪಜಯುವ ನುಪಕರಿಸದಲೆ ಪತಿಗೆ || ಅನಿಭೃತ ಕೋದಂಡ ಚಂಡ | ಧಾನ್ವನರವನು ಕಾಣೆ ನೀನಿದ | ಕೇನುಪಾಯುವ ಕಂಡೆ ಯೆಂದಳು ಸೀತೆ ವೈದುನನ ||೪೭|| ಐಸಲೇ ಚಿತ್ತೈಸಿ ಚಿತ್ರಕ | ೪ಾಸವನು ನೀವೆನುತ ಲಕ್ಷ್ಮಣ | ನಾಸುರೇಶ್ವರದತ್ತ ವಜ್ರಾವರ್ತ ಕಾರ್ಮುಕವ|| ಭಾಸುರಾಸ್ತ್ರ ಮುಖಾಗ್ರದಲಿ ಮೇ | ಳೈಸಿ ಮಿಗೆ ಬೋಳೈಸಿ ಸಂಗರ | ಸಾಸಿಗರ ಬಲ್ಲಹನ ಬಳಿಗೈದೆಂದು ಬೀಳ್ಕೊಟ್ಟ ||೪೮|| ಆಯನುತ ಹರಿವರುಣ ಶಂಕರ | ವಾಯುವಿತ್ತಪ ನಿರುತಿಶಿಖಿಯುಮ | ರಾಯುಧದ ನಿರ್ಗಮಕೆ ಲಘುಸಂಧಾನ ಕೌಶಲಕೆ || ರಾಯ ರಾಘವನಿಗವರ್ಝುಸ ರಘು | ರಾಯ ಮಂದರ ಕೂರ್ಮರಾಘವ | ರಾಯ ಧರಣಿವರಾಹ ಯೆಂದುದು ಕೂಡೆ ಲಕ್ಷ್ಮಣನ || ೪೯ || ಸಿಡಿಲಮರಿ ಕಾರ್ಮುಕ ಮುಖದೊಳು | ಗ್ಗಡಿಸುವಂತಿರೆ ಧಣಧಣತ್ಕೃತಿ ಜಡಿಯ | ಝಾಡಿಯ ಜೋಡಿಗಳ ಬೊಂಬಾಳ ಜೌರಿಯಲಿ || ಹೊಡಕರಿಸಿ ಹೊಗದೇಳ್ವ ಮಿಂಚಿನ | ಕುಡಿವೆಳಗ ದೆಸೆದೆಸೆಗೆ ಪಸರಿಸು | ತಡಸಿ ಬಂದುದು ಚಾಪವಾ ರಘುಭೂಪನಿದ್ದೆಡೆಗೆ ||೫೦|| ಅರಿದನಾ ಶತ್ರುಘ್ನನಗ್ರಜನ | ಕರುಹುದೆಂಬುದ ನಾ ಕೃಪಾಣವ | ನೊಪ್ಪಿಗೊಳಿಸಿ ರಘುನಾಥ ಕೈಯಿಕ್ಕಿದನು ಕಾರ್ಮುಕಕೆ || ತೆರನೆಯಾದುದು ಭೀತಿ ಬಿಲಬೊ | ಬ್ಬಿರಿತ ಕಸುರನ ಧೈರ್ಯಕಾಲನ | ಮರೆಪ ಹೊಕ್ಕುದು ಹೊರಳಿಯೊಡೆದುದು ವಿಕ್ಕ ರಕ್ಕಸರ ||೫೧|| ಮರುಳಲಾ ನೀನೆಲೆ ಪ್ರೊಖಳ ಮೂ | ಗರಿಕಿಗಾದಘಿನಾನ ಭಂಗಕೆ | ಧುರವನೆಸಗುವ ನಪ್ರಜವ ನೊ ಮೇಣ್ವಿಚಕ್ಷಣನೊ || ಶರಣು ಪೊಗು ಸಿತನಾಣೆ ಕಾಣೆನು | ಹರಣವನು ಕೊಡಬೇಡ ಕಾಲಗೆ | ಕರುಣವಿಲ್ಲ ವೃಥಾ ವಿರೋಧಿಸಿ ಸಾಯಬೇಡೆಂದ ||೫೨|| ನಿನ್ನವೊಲು ಬಲುಬಾಹು ಸಾಹಸಿಗ | ನಿನ್ನು ಜನಿಸನು ಜಗದೊಳಬೇಡ | ನಿನ್ನ ಕೊಂಡೆಸಗಿದರೆ ಮೂಡವ ಮೂಗು ಮಾನಿನಿಗೆ || ಹೊನ್ನಬಾಣವ ನೆಚ್ಚು ಕೆಡಿಸದಿ | ನಿನ್ನ

ಮಾತನು ಕೇಳು ತಾಸಿದು । ನಿನ್ನ ಚಿತ್ತಕೆ ಬಾರದಿರೆ ಕಲಿಯಾಗು ಬೇಗೆಂದ ॥೫೩॥
ರಾಮಕೇಳ್ಳೈ ಕೊಂಡ ಛಲಪದ । ಕಾಮಿತವ ಬಿಡಲೇನು ತನುವಿದು । ತಾಮರಸ ಬಾಂ
ಧವನ ಬಾಳಿಕೆ ತನಕ ಶಾಶ್ವತವೆ ॥ ಈ ಮರುಳುತನವೇಕೆ ಬಲಸಿ । ನಾಮವಾಸ್ತ್ರಂ
ದುಬ್ಬಿ ವಚಿಸುವ । ಕೈನೆಗಿದಕೋಯೆನುತ ತೆಗದೆಚ್ಚನು ಕಕುತ್ಥಜನ ॥೫೪॥ ಎಚ್ಚ
ಬಾಣವ ತರಿದು ತೊಡಚಿದ । ನುಚ್ಚ ಮೂಡಿಗೆಯೆಂಬನಮರರೊ । ಳೊಚ್ಚ ಶೌರ್ಯವ
ನರಸಿ ಕಾಲನಕರೆದು ನೆಲೆಗೊಳಿಸಿ ॥ ಚುಚ್ಚುಗೊಂಡೆಯುದಧಟ ಜಡೆಗಳ । ವಚ್ಚ
ವರ್ತಿಸಿ ರಾಮ ಕಡುಬಿರಿ । ದೆಚ್ಚು ಕಡಿದನು ಶಿರವ ಸರಳಿನಲಾ ಖರಾಸುರನ ॥೫೫॥
ನೆಗಹಿಕೊಂಡವು ಭೂತ ಬೇಳುವ । ವಿಗಡ ರಕ್ಕಸದಲೆಯು ನಟ್ಟೆಯೊ । ಳೊಗುವ
ರಕುತಕೆ ಬಾಯನೂಡ್ಡಿತು ಶಾಕಿನೀ ನಿವಹ॥ ಅಗಿದು ನಲಿನಲಿದಾಡಿ ಹೆಣಗಳ । ಬಗಿದು
ಕೊಸನದಾಚಂಡಿ ಚಾಮುಂ । ಡಿಗಳು ಚಪ್ಪರಿಸಿದುವು ಭೇರಿಗಳಮರ ಕಟಕದಲಿ॥೫೬॥
ರಣಕೆ ನಮಿಸಿ ಸಮಸ್ತ ಶಾಕಿನೀ । ಗಣಕೆ ಬೆಸಸಿ ಮಹೋಗ್ರಚಾಪದ । ಗುಣವ ಸಡಿ
ಲಿಸಿ ಬಡಿವ ಪೈವಸೆಗಳನು ಬಳಿದಿಡುಕಿ ॥ ಪ್ರಣತಸುರಮುನಿಜನದ ಜಯಜಯ ।
ರಣಿತರವ ದುಬ್ಬಿನಲಿ ರಕ್ಕಸ । ರಣಭಯಂಕರ ನೈದಿದನು ನಿಜಪರ್ಣ ಮಂದಿರವ॥೫೭॥
ಸುಳಿದವಾರತಿ ಯಮರಿಯರ ಹೊಂ । ದಳಿಗೆಗಳ ದೀವಿಗೆಯ ಮುಕ್ತಾ । ಫಲದ ಲೇಸಾ
ಕ್ಷತೆಯ ಮಳೆ ಸಿರಿ ಮುಡಿಯ ಸರಿಸದಲಿ । ಹೊಳಕಿದವು ಬಳಿಕಿತ್ತಲೀ ಮೈ । ಥಿಲಿಯ
ಕರಕರದಂದದಾರತಿ । ನೆಳಗು ಹರಕೆಗಳೊಳಗೆ ಹೊಕ್ಕನು ಪರ್ಣಮಂದಿರವ ॥೫೮॥

ಆರನೆಯ ಸಂಧಿ ಸಮಾಪ್ತಂ.

ಏಳನೆಯ ಸಂಧಿ.

ಸೂಚನೆ॥ ಭಾನುಕುಲನಿಂದಾದ ಭಂಗದ । ಮಾನಿನಿಯ ಮತನಿಡಿದು ಕುಮತಿ ದ ।
ಶಾನನು ಮಾರೀಚ ರಾಕ್ಷಸನೆಡೆಗೆ ನಡೆತಂದ ॥

ಪದ್ಯ॥ ಕೇಳಿದೈ ಕುಶ ನಿಮ್ಮ ರಘು ಭೂ । ಪಾಲಕನು ರಿಪುವಿಜಯ ವಿಭವವ ।
ಲೀಲೆಯಲಿ ನಿಜಪರ್ನ ಭವನಕೆ ಬರಲು ಬಳಿಕಿತ್ತ ॥ ಕಾಲಕಂಡಗ್ರಜನ ಕಾಯದ ।
ಮೇಲೆ ಹೊರಳಿದುಪುದಿದ ಶೋಕದ । ಸೂಳಿನಲಿ ಸಾರಿದಳು ಲಂಕಾಪುರವ ಶೂರ್ಪ
ನಖಿ ॥೧॥ ಲವನೆ ಕೇಳ್ ಸುರನರ ಭುಜಂಗಮ । ಭುವನದಲ್ಲಣ ದಶವದನ ನ । ತ್ಸನದಿ
ನೊಡ್ಡೋಲಗದೊಳಿದ್ದನು ಬಹಳ ವಿಭವದಲಿ ॥ ಪವನಶಿಖಿ ಯಮ ನಿರುತಿ ಹರಿ ವೈ ।
ಶ್ರವಣ ವರುಣಾದಿಗಳು ಬೆಸಸೇ । ನೆನಗೆ ತವಗೆನುತಿದ್ದರಿದ್ದೆಸೆಯಲಿ ದಶಾನನನ ॥೨॥
ತುಡುಕಿ ತರಣಿಯನಗಿವ ರಾಹುವಿ । ನೆಡಬಲದ ಕಟವಾಯ ಲೊಸರುವ । ನಿಡಿಯ
ರಸನೆನೆವೆಸವ ದಾಡೆಯ ಹುರಿಯ ಹುಬ್ಬುಗಳ । ಇಡಿದ ಹೊಗರಿನ ಜವ್ವನದ ಕ ।
ಪ್ಪಿಡಿದ ಕಾಯದ ಸುಪ್ರತಾಪದ । ಸಡಗರದ ಸಾಹಸದ ರಕ್ಕಸರಾಯ ನೆಸೆದಿರ್ದ ॥೩॥
ತಮನಭಂಜನ ಕೈಟಭನ ಬಲ । ನಮುಚಿಯಿಂದಾಸುರನ ಘನ ವಿ । ಕ್ರಮ ಸುಬಾಹು
ಸುಪಾರ್ಶ್ವ ಸಾರಣ ಶೋಣಿತಾಂಬಕರು ॥ ಕಮಲಜನ್ಮ ಮಹೇಶ ಶಕ್ರರ । ಸಮರದೊಳ

ಗೊಳವಾಲವಿಕ್ಕಿಸಿ | ದಮರ ವಿಜಯಿಗಳಿದ್ದರಿದ್ದೆಶೆಯಲಿ ದಶಾನನನ||೪|| ಸಿಡಿಲು ಸೊಡ ದುಚ್ಚಳಿಸಿ ದುರುದ | ಗ್ಗಡದ ಘಾಯದ ಘನಮದದ್ವಿಭ | ರುಡುಕಿಕಿವಿಡೆಲುಬುಗಳ ಡೋರುಗಳರಮುರಾಯುಧದ || ಪಡಿಮುಖದ ಹಳಿಗಲೆಯ ತಲೆಗಳ | ನಡಸಿ ಬಸುರಲಿ ಹೊಲಿದ ಹೊಲಿಗೆಯ | ದಡಿಗ ರಕ್ಕಸರಾಯರಿದ್ದುದು ಕೋಟಿ ಸಂಖ್ಯೆಯಲಿ || ೫ || ಕಲಹದಲಿ ಮೃತ್ಯುವಿನ ಗಂಟಲಿ | ಗಲಗ ಹೊಡಿದ ಲಯ ಕೃತಾಂತನ | ತಲೆಯ ನರೆ ಯರೆಗೊಯ್ದ ಕಡುಹಿನ ಕಾಲಭೈರವನ || ಹಲುಗಳದ ಹರಿಯಿಟ್ಟ ಚಕ್ರದ | ಲುಳಿಗೆ ಪಲ್ಲಟವಾಗಿ ಹತ್ತಿದ | ತಲೆಯ ತಾಮಸ ರಿದ್ದುದದ್ಭುತ ರೌದ್ರರೂಪಿನಲಿ ||೬|| ಹರಿಯ ಚಕ್ರವ ನಾ ಪಿನಾಕಿಯ | ವರಪಿನಾಕವ ನಮರ ಚಕ್ರೇ | ಶ್ವರನ ಚಾಪವನಾ ಚತು ರ್ಮುಖನುರುಶಿಲೀಮುಖನ || ವರುಣ ವಾಯು ಕುಬೇರ ರಜನೀ | ಚರ ಯಮಾದಿಗ ಳಸ್ತ್ರಶಸ್ತ್ರೀ | ತ್ಕರವ ಸೆಳದ ಸವರ್ಥರಿದ್ದುದು ಮುಂದೆ ರಾವಣನ || ೭ || ಇದಿರಡ ರ್ದಿಹ ರೋವ.ಗಳ ಕೆಂ | ಪುದಿದೊಗುವ ಕಂಗಳಿನ ಕರ್ಕಶ | ವದನಗಳ ಕೆವಿಮ್ಮಿಕ್ರಿಗಳ ಕುಡಿಯಿಡುವ ದಾಡೆಗಳ || ಕೆದರುದಲೆಗಳ ತೋರಬಾರದ | ಮರದ ಕುಡಿಹುಬ್ಬುಗಳ ಭಯುರಸ | ವದುಭುತದ ಖಳರಿದ್ದುದಿದಿರಿನಲಾ ದಶಾನನನ || ೮ || ಶುಕ ಮಹೋದರ ವೀರ ದೇವಾಂ | ತಕ ನರಾಂತಕ ಕುಂಭ ಯೂಪಾಂ | ಬಕ ನಿಕುಂಭ ತ್ರಿಶಿರ ಯುದ್ಧೋ ನ್ಮತ್ತ ನತಿಕಾಯ || ಮಕರಲೋಚನ ಕಲಿವಿರೂಪಾ | ಕ್ಷಕ ಸುಮಾಲಿ ಸುರೇಂದ್ರಜಿತು ದ | ಕ್ಷಕ ವಿರೂಪಾಕ್ಷಾದಿ ರಕ್ಕಸರಿದ್ದುದಪರಿಮಿತ||೯|| ವೀರ ವಿದ್ಯುಜ್ಜಿಹ್ವ ದುರ್ಮುಖ| ಸಾರಣಾಸುರ ಶೋಣಿತಾಕ್ಷಕ | ಘೋರಬಲ ನತಿಕಾಯ ವಿದ್ಯುನ್ಮಾಲಿ ಶಾರ್ದೂಲ || ಘೋರತರ ದುರ್ದರುಶನಾದಿ ಕು | ಮಾರಕರು ಸಚಿವರು ಸಮಸ್ತ ವಿ | ಶಾರದಾಹವ ಮಲ್ಲರಿರ್ದುದು ಮುಂದೆ ರಾವಣನ || ೧೦ || ಮಣಿದ ವಸೌಳಿಯ ಭಯಭರಿತ ಭಾ | ರಣೆಯ ಹರಿಶಿಖಿ ಯಮ ನಿಶಾಟಾ | ಗ್ರಣಿ ಮಹೋದಧಿನಾಥ ವಾಯು ಕುಬೇರ ಮೊದ ಲಾದ || ಗಣನೆಯಿಲ್ಲದ ದೇವಗಣ ಸಂ | ದಣಿಯಲಿರ್ದುದು ಜೀಯ ಬಾಳಿಂ | ದಣಕು ಗಳ ವೈವುರೆಯದಪರಾಂಗದಲಿ ರಾವಣನ || ೧|| ಕಣುಗ ಕೇಳಾಸಮಯದಲಿ ನರೆ | ಹರಿದ ಮಾಗಿನ ಹರಿದ ತುಟಿಗಳ | ಜುಣುಗು ಗಿವಿಗಳ ಜರಿದ ಹುಣ್ಣಿನ ಕೊರೆದ ಕದಪು ಗಳ || ವ್ರಣದ ದುರ್ಗಂಧದ ಮಹಾ ಭೀಷಣವ ರಕ್ಕಸಿ ಬಂದಳಾ ರಾ | ವಣನ ರಚಿತ ಸಭಾಂತರಾಳಕೆ ಮೃತ್ಯುರೂಪಿನಲಿ || ೧೨ || ಇದುವೆ ಕಡುವೇಗನೆನುತಲಾ ದಶ | ವದನ ಕದಪಿನ ಕೈಯ್ಯಲಾಕೆಯ | ವದನವನು ನೋಡಿದನು ನೋಡಿದುದಖಿಳ ಖಳನಿಕರ || ಮುಗುಳು ನಗೆಯಲಿ ವೊಗದ ಮುರುಹಿನ | ವದನದತಿ ಮುಷುಕುಗಳಲಿರ್ದುದು | ಹೃದಯದಲಿ ಹೆಗರೆದ್ದುಮುರಿ ಬಳಿಕಾದಶಾನನನ || ೧೩ || ಅಳಿವೆನೋ ಹದಿನಾಲ್ಕು ಲೋಕವ | ಹಿಳಿವೆನೋ ಹರಿಯುಜಭವಾದ್ಯರ | ಸೆಳೆವೆನೋ ಬಾಹುಪ್ರತಾಪಾನಲನ ಬಲುಗೆಡೆಯ || ಉಳಿದಡರಿಯಲು ಬೇಕು ತಂಗಿಯ | ಬಳಲಿಸಿದ ಬಲುವೀರನೆನುತ ರ ಗೊಳುವ ಕಡುಕೋಪದಲಿ ಕಿಡಿಕಿಡಿಯಾದನಸುರೇಂದ್ರ || ೧೪ || ಝುಳಪಿಸುತ ಹಿಮ ಕಿರಣಹಾಸನ | ಸೆಳೆದನಾಸನದಿಂದ ವಸೌಳಿಗ | ಳುಲಹಿನಲಿ ಬೀಳ್ಕೊಟ್ಟನಸುರಾಮರ ಕದಂಬಕವ || ತೊಳಕುವಂತಸ್ಸಾಪದಲಿ ಮಾ | ಗಳಿದ ರಕ್ಕಸಸಹಿತ ತನ್ನೊಳ | ನಿಳಯವನು ಹೊಕ್ಕನುಜೆಯನು ಬೆಸಗೊಂಡನಸುರೇಂದ್ರ || ೧೫ || ಎಸಿದೇಸೀ ಮಾನ

ಭಂಗ ವಿ | ಧಾನವಾರಿಂದಾಯ್ತು ತೇಳಭಿ | ಮಾನಗತವಿದು ನಮ್ಮದೈಸಲೇ ಹೇಳು ಬೇಗೆನಲು || ಹಾನಿಯುವನಿಂ ತನಗೆ ಬಂದುದ | ನೇಮುವನು ಪಸರಿಸದೆ ತನ್ನನು | ಮಾನವಾರ್ಗದ ಮತವನೇಮರದೆಂದಳೀಹದನ ||೧೬|| ವಾಸಿತೋರಿತು ವನಕೆ ಜನಕ ಮ | ಹೀಸುತೆ ನಿನಗಂದು ಭವ ಬಾ | ಣಾಸನದ ಭಾರಣೆಯು ಬಿಗುಹಿನ ಜಗುಳದಲೀ ಯಿಂದ || ದಾಶರಥಿಗಾರಮಣಿ ರಾಣೀ | ವಾಸ ವಾದಳು ತನ್ನೃಪಂಗೆ ನಿ | ವಾಸಘಟಿಸಿತು ಬಳಿಕ ಪಂಚವಟಿಪ್ರದೇಶದಲಿ||೧೭|| ಚಲುವಿಕೆ ಹಿಮವಂತಸುತೆ ಗ | ಗ್ಗಳಿರವಾದೇವಿಯು ಮಹಾ ಮಂ | ಗಳತೆಗಿಮ್ಮಡಿ ನಾಲ್ಕುಮಡಿ ಸೊಬಗಿಗೆ ಸರಸ್ವತಿಯು || ಉಳಿದ ರತಿಗತಿ ಮುಖ್ಯ ಸುಮನೋ | ಲಲನೆಯರ ಪಾಡಲ್ಲವೇ ನ | ಗ್ಗಳಿಳೋ ಶಿವಶಿವ ಸೀತೆ ರೂಪಿನೊಳೆಂದಳಸುರಂಗೆ || ೧೮ || ಇದೆ ಚತುರ್ದಶ ಲಕ್ಕಸಂಖ್ಯೆಯ | ಸುದತಿಯರು ಗನಗರುಣರಸದಂ | ಗದಲಿ ಹುದುಗಿದು ಹೊಳವ ಗಾಜಿನ ಮಣಿಯ ರಸದಂತೆ || ಸದೆಗರವದಿರು ಜೆಲೆಗೆ ಬಾರದ | ತ್ರಿದಶರತ್ನವಿದೆಂಬರಾನುಡಿ | ಯುದಿಸಿತೆನಗಾನರಿಯು ದಾದೆನು ಮೇಲಹೆಣಿಕೆಗಳ || ೧೯ || ನಿನಗೆ ಕಾಣಿಕೆಯಾಗಿ ತಹೆನಾ | ವನಿತೆಯನು ತಾನೆಂಬ ಮತಿ ಸಂ | ಜನಿಸಿ ಕೈಯಿಕ್ಕಿದೆನು ಕಪಟದಲಾ ನಿತಂಬಿನಿಯ || ಜನಪನನುಜನು ಕಂಡು ಕಿವಿ ಮೂ | ಗಿನಲಿ ಕಂಡನು ಹರಿಬನೆನ್ನಲಿ | ಹದನು ಬಳಿಕಾಯ್ತಿದರಿನಿಂ ಖರದೂಷಣಾದಿಗಳ || ೨೦ || ಎನುತ ಮುಂದಿಳುಹಿದಳು ಹೇಸಿಕೆ | ಹೊಸಲಿಡುವ ಹಂವಲೆಯ ನಿದು ನಿ | ನ್ನನುಜ ವೀರ ಖರಾಸುರನ ತಲೆ ನೋಡೆನಲು ಬಳಿಕ || ಮನದೊಳತಿ ಮರುಗಿದನು ತಮ್ಮನ | ಹನನಕನುಜೆಯ ಮಾನಭಂಗಕೆ | ನೆನಹು ಬೇರಿದ್ದುದು ಮನಸಿನಲವನಿಜೆಯ ಮೇಲೆ ||೨೧|| ನಾಟದವು ಸ್ಮರಶರಗಳಾ ವಿಟ | ಕೋಟಿಯಲಿ ಜಾನಕಿಯ ನೆನಹಿಗೆ | ನಾಟುವುದು ಸತ್ಕ್ರೋಧಹುತವಹಧನುಜರಳಿವಿಂಗೆ || ಕೋಟಲೆಗಳೀ ಯರಡರವರೊಳ | ಬೇಟನನೆ ಬಲುವಿಡಿದು ಹೂಡಿದ | ಘೋಟಕದ ಹೊಂದೇರಿನಲಿ ಹೊರವಂಟನರಮನೆಯ||೨೨|| ಅಳಿಬಲರು ನರರೆಂದು ಸನ್ಮುಖ | ದಲಿ ಸಮಾಕವನೆಸಗದಿರು ಕೈ | ಗೊಳಿಸಿ ಕೈತವದಿಂದ ಕಮಲಾನನೆಯ ಕಳವಿನಲಿ || ಸೆಳೆವುದೀ ಮನದೊಳಿಹ ನಿಜಮಾ | ತುಳನೊಳರಿವುದು ಹೋಗೆನುತ ದಶ | ಗಳನ ಗಳಿತ ಘ್ರಾಣಮುಖಿ ಕಳುಹಿದಳು ಶೂರ್ಪನಖಿ ||೨೩|| ಬಂದು ವಿದ್ಯುಜ್ಜಿಹ್ವ ಬಳಿಕ | ಸ್ಯಂದನದ ಘೋಟಕ ಸಹಸ್ರದ | ಕಂಧವನು ಬೋಳೈಸಿ ಪಕ್ಕದ ಪಾರುವಳೈಗಳ || ಮುಂದುವರಿಸಿದ ನಭ್ರದಲಿ ನಡೆ | ತಂದುದಾರಥಕಳೆದು ಕಾನನ | ವೃಂದವನು ಮಾಯಾವಿ ನಾರೀಚನ ನಿಜಾಶ್ರಮಕೆ || ೨೪ || ಗರುಡನಂದಂಬಿಕೆಯ ನೇಮದ | ಉರಗಸಂತಾನವನು ಜಠರಾಂ | ತರದೊಳಿಳುಹಲು ಜೀರ್ಣಪರ್ಣದ್ವಾರಭಾಗದಲಿ | ಚರಣಯುಗಳವನೂರಿದಾಲದ | ಮರದ ಘನಶಾಖೋಪಶಾಖೆಯ | ಲಿರವಕಂಡನು ವಾಲಖಿಲ್ಯ ಮಹಾಮುನೀಶ್ವರರ || ೨೫ || ಬರಬರಲು ಮುಂದಖಿಳಮುನಿ ಶಾಂ | ತರುಗಳಿರ್ದರು ಕಂದಮೂಲಾಂ | ಕುರದ ಭೋಜನದುದಕದಾಹಾರದ ಫಲಾಶನದ || ನಿರಶನವ್ರತದುರುತಪೋ ನಿ | ಷ್ಠರುಗಳನಿಬರ ಮಧ್ಯದಲಿ ಕ | ರ್ಬುರ ಮುನೀಂದ್ರನ ಕಾಣುತಿಳಿದನು ರಥವನಸುರೇಂದ್ರ | ೨೬ || ಕುಶನೆ ಬಲ್ಲೈ ಹಿಂದೆ ಹೇಳಿದ | ಕುಶಿಕಸುತನಧ್ವರದಲವ ತಾ | ಪಸ ಶರೀರವ ತಾಳ್ದು ಜೀವಿಸಿದಂದು ಮೊದಲಾಗಿ || ವಸುಮತಿಯ ಬಲಭಾರ

ವನು ಭಂ । ಜಿಸೆ ಭುಜಂಗಮ ಶಯನ ರಘುಪತಿ । ಪೆಸರಲುದಿಸಿದನೆಂಬ ಮತಿ ಗೋಚರಿಸಿತವಗೆಂದ ॥ ೨೭ ॥ ಯೋಗಮುಖದಲಿ ಸರ್ವಸಂಗ । ತ್ಯಾಗವನು ಮಾಡಿದನು ನಿಂದುದು । ಭೋಗಿಭೂಷಣ ಭಕ್ತಿ ಸಂಸಾರದ ವಿರಕ್ತಿಯಲಿ ॥ ಆಗರುವ ಮಾರೀಚ ಮುಕ್ತಿ । ಶ್ರೀಗೆ ನೆಲೆಯಾದನು ಕಣಾ ನಿಗ । ಮಾಗಮೋಕ್ತಿಯ ಮಾರ್ಗವೇ ನಿಶಿಶಯವೊ ಜಗಕೆಂದ ॥೨೮॥ ಜಪ ಸಮಾಧಿ ಧ್ಯಾನ ಮೌನದ । ತಪದಲಾ ಮಾರೀಚನಿರೆ ದಶ । ವದನನೆರಗಿದನಂಘ್ರಿಗಾ ಮಾರೀಚರಾಕ್ಷಸನ ॥ ವಿಪುಳ ಮಾಯಾಕುಶಲ ವಿದ್ಯಾ । ಚಪಳ ನೊಯ್ಯನೆ ಕಂದೆರೆದು ಕೋ । ಣಪಕುಲಾಗ್ರೇಶ್ವರನ ಹರಸಿದು ಬರವ ಬೆಸಗೊಂಡ ॥೨೯॥ ಹೇಳಿದನು ಬಳಿಕವಗೆ ಕಾತಂ । ದೂಳಿಗದ ಪೂರ್ವಾಪರವ ನದ । ಕೇಳಿದನು ಕಿವುಡಿಕೆಯ ಕೊನರುವ ಕೊನರ್ವ ಕೋಪದಲಿ ॥ ಕಾಳನನದನೆ ಪಾಪಿಯುಕಟನೃ । ಪಾಲನೇ ನರನಾಥನಾತನ । ಬಾಲೆ ಮನುಜಾಂಗನೆಯೆ ಮಾರಿಯು ತಂದನಿವನೆಂದ ॥೩೦॥ ಹರಿಬಹತ್ತಿಗುಡಿರಿದು ಮಂತ್ರಾ । ಕ್ಷರವ ನುಪದೇಶಿಸಿದಳೀ ಕ । ರ್ಬುರಗೆ ಬಳಿಕವನನುಜೆ ಯದರಿಂದಿವನು ಕಾಮುಕದ ॥ ಹರಹನಂಗೀಕರಿಸಿ ನಮ್ಮನು । ಕರತರಿಸಲೈತಂದ ಮತಿ ಗೋ । ಚರಿಸುತದೆ ಮನವೇನಮಾಡುವೆ ನಿನಗೆ ತಾನೆಂದ ॥ ೩೧ ॥ ಏನು ನಿನ್ನಂಘವಣೆ ನೀ ಪೇ । ಳ್ದೀನಿರುದ್ಧಸ್ಥಿತಿಗೆ ಸೊಗಸೆನು । ಗೇನು ತೋರದು ತೋರುತಿದೆ ಬಲುಚಿಂತೆ ಚಿತ್ತದಲಿ ॥ ಹಾನಿ ನಿನಗುಪಕರಿಸವಿರವೆಂ । ಬೀ ನಿಬದ್ಧಕೆ ನಿನ್ನ ಮನದನು । ಮಾನವಾವುದು ಹೇಳು ಕೇಳುವೆ ನೆಂದನಸುರಮುನಿ ॥೩೨॥ ಕೊಲೆಗೆ ಕೊಲೆಗೊಲಡಲ್ಲದೋಜೆಗೆ । ನಿಲಲರಿಯದೀ ಮನವು ತಂಗಿಯ । ಚಲುವಿಕೆಯ ಚೈತನ್ಯವಳಿದುದಕಹಿತನಂಗನೆಯ ॥ ಚಲುವನಂಗೀಕರಿಸಿದಲ್ಲದೆ । ತೊಲಗಲರಿಯದು ಚಿತ್ತ ನಿಮ್ಮಡಿ । ಗಳ ಕಟಾಕ್ಷದ ಕೃಪೆಯದೇನವ ಬೆಸಸಿ ತನಗೆಂದ ॥ ೩೩ ॥ ಅಕಟ ಮರುಳಾದೈ ನಿಶಾಟ । ಪ್ರಕಟ ವಂಶಾರಣ್ಯದಲಿ ಪಾ । ವಕನ ಪಸರಿಸಬೇಡ ತಾನೀಶೂರ್ಪನಖಿನಿನ್ನ ॥ ವಿಕಳಗೊಳಿಸಿದಳಂಗಜನ ನೋ । ಹಕವ ಮುದ್ದಿನಲಾದಿಪುರುಷನ । ಸುದತಿ ಸಾಧ್ಯವೆ ಸಾಕು ಕೊಳ್ಳದು ನಿನ್ನ ಬಗೆಯೆಂದ ॥ ೩೪ ॥ ರಾಮನಾರೆಂದರಿಯಲಾ ಸು । ತ್ರಾಮ ಮುಖ್ಯರ ದೂರಿನಲಿ ಬಳಿ । ಕೀ ಮಹೀಭಾರಕನ ಭಂಜಿಸಲೆಂದು ನರನಾಗಿ ॥ ಆಮಘುದ್ವಿಪನವತರಿಸಿದನು । ನೀ ಮರುಳಲಾ ಸುಲಭವೇ ರಿಪು । ತಾಮಸಿಗೆ ತಾಮಸವನಂಗೀಕರಿಸ ಬೇಡೆಂದ॥೩೫॥ಎಲವೆಲವೊ ಸುರಭೂಜಗೊಡ್ಡಾ । ಕುಳಿಸುಸರ್ವಸುಧೇನು ಪುಳುಕಿನ । ಶಿಲೆಯೆ ಸುಮನೋರತ್ನ ಕಿರುಗಲ್ಲೇ ಮಹಾಮೇರು ॥ ಎಲೆ ಮರುಳೆ ನರನೇ ನೃಪಾಲಕ । ತಿಲಕನಕಟಾ ದೈವದೊಳಗ । ಗ್ಗಳಿಕೆಗೊಂಬುದೆ ಕಾಳಸೆಣಸಿದೆ ಖೂಳ ಹೋಗೆಂದ ॥೩೬॥ ಉದಕದೊಳಗಿರ್ದಂದು ನೈರವ । ನೊಡಗಿದಾಮಧು ಕೈಟಭರಮೇ । ಳದಲಿ ಮುಸಿಕಿದನರ್ಣವವ ನಿಲಿಸಿದನು ಮೇದಿನಿಯ ॥ ಮೊದಲು ಬಳಿಕೀಜಿಯಲಿ ಬಹು ರೂ । ಪದಲಿ ಬಂದು ತಮಾದಿಗಳನೆ ಮ । ಸದನ ಕಟ್ಟಿದನವರಿಗಿಂದತಿ ಬಲನೆ ನೀನೆ ವ ॥೩೭॥ ಆತಸೀಗೀತನು ಕಣಾ ಸ । ತ್ವಾತಿಶಯ ದುಬ್ಬರದ ಕೊಬ್ಬಿನ । ನೀತ ನಿದಿರಲಿ ಮೆರವಡೇನೈ ವಿತ್ರಸಿವಿರಿನಲಿ ॥ ಧಾತು ಧವಳಿಸ ಬಲ್ಲುದೇ ಖ । ದ್ಯೋತ ಕೀಟಕ ದಾಟವಿಕತನ । ಸೀತೆ ಮುರಸನಲೆಸಗಬಲ್ಲುದೆ ಕಂದ ಕೇಳೆಂದ ॥ ೩೮ ॥ ಜೀಡ ಮಗನೇ ಹರಿ ವಿರೋಧದ । ಜಾಡಿ ಕೆಟ್ಟರು ಕೆಲಬರನರೋ । ಗಾಡದಾಳಿದರು ಕೆಲರು

ನಿನಗಿಂದಮರ ಸಂದೋಹ ‖ ಬೇಡವಾಗಿಹುದಿನಿತು ಸುಖದ ಸು । ರಾಡವನು ಕೊಂ
ಡೆರೆಯುನುಡಿಗೆ ನಿ । ವಾಸವನು ಮಾಡದಿರು ಕೂಡದಿರಪಜಯಾಂಗನೆಯ ‖ ೩೯ ‖
ಮುರಿಯದಿರು ಸುರಭೂಜವನು ನೀ । ಸಿರಿಯಬೇಡಾ ಕಾಮಧೇನುವ । ನುರುಬದಿರು
ಕಾಮಿತದ ರತ್ನವನಕಟ ಕಡಲೊಳಗೆ ‖ ಉರುವ ಮುನಿಪೌಲಸ್ತ್ಯವಂಶದ । ಮೆರೆವ
ಜವ್ವನ ಜರಣವನಿತೆಯ । ತುರುಬ ಬೋಳಿಸಬೇಡ ಬೇಡಕಟಕಟ ಸೀನೆಂದ ‖ ೪೦ ‖
ಹುಳಿಗಲಸಿದರೆ ಕೊಡದಹಾಲಪ್ಪೊ । ಉಳಿವುದೇ ಕ್ಷೀರಾಂಬುನಿಧಿ ವಿಸಾ । ಸ್ಫುಲಿಗನೌಂಕಿ
ದತಳುಕುವುದೆ ಮಕರೇಶ ನೀನಿಂತು ‖ ಮುಳಿದು ಮದಗೊಬ್ಬಿನಲಿ ವೈರವ । ಜೆಳಸಿ
ಕೆಣಕಿದಡಾ ನೃಪಾಲಕ । ತಿಲಕ ತೆಕ್ಕುವನೇ ವಿವೇಕಕೆ ಮನವ ಮಾಡೆಂದ ‖ ೪೧ ‖
ಬಲುಹದಾರ್ಯ್ಯೆ ತಾಟಕಿಗೆ ವೆ । ಗ್ಗಳರದಾರು ಸುಬಾಹುವಿಗೆ ಕಡು । ಗಲಿಗಳಾರು ವಿರಾಧ
ಗೆಮ್ಮಾಣ್ರಿ ಶೂರ್ಪನಖಿಗಿಂತೆಂದ ‖ ಕಲಹದಲಿ ಮಿಗಿಲಾರು ಅದುಹೋ । ಗಲಿ ಖರಾದಿ
ನಿಶಾಟಭಟರ । ಗ್ಗಳಿಕೆ ಯೇನಾಯ್ತೆಂಬುದನು ಲೇಸಾಗಿ ತಿಳಿಯೆಂದ ‖ ೪೨ ‖ ಹರನ
ಧನುತಾಸೆರೆದ ಪೃಥ್ವೀ । ಶ್ವರರಿಗಳುಕಿತೆ ಹೇಳು ತಾರಾ । ಗಿರಿಯನೆತ್ತಿದ ಭುಜಬಲ
ನಲಾ ನೀನು ನಿನಗಂದು ‖ ಶಿರವ ಮಣಿದುದೆ ಹೇಳು ನಿಮ್ಮ । ಲ್ಲರನು ನಾಸಾಗ್ರದಲಿ
ಸೀತೆಯ । ಶರಗ ಸೆಳೆದವನಿಜೆಯ ನೊಪ್ಪುವರಾರು ಹೇಳೆಂದ ‖ ೪೩ ‖ ಶಿಕ್ಕಲರಿಯಳು
ಸಿಕ್ಕಿದ । ಡಕ್ಕಲರಿಯಳು ಸತ್ಯವಿದು ಕೈ । ಯಿಕ್ಕಿ ಕದನಕೆ ಸೋಲಲರಿಯನು ರಾಮ
ನಿದುಸಿದ್ಧ ‖ ಸೊಕ್ಕಿ ಹರಿ ಕರಿಯೊಡನೆ ಸೆಣಸುವ । ದಕ್ಕಜವಲಾಲೋಕ ಕಂಟಕ ।
ಕಿಕ್ಕದಿರು ಸಾರಿದೆನು ನಿನ್ನನುಜಾತ್ಮಜರನೆಂದ ‖ ೪೪ ‖ ಶಿವಶಿವಾ ಹಸನಾಯ್ತು ಧರ್ಮ।
ಶ್ರವಣ ಪದ್ಧತಿ ಮಾಮದೀಯ । ಶ್ರವಣವನುರಾಗಿಸಿದೆನೈ ಕೇಳ್ದಮನು ಹೊಸಕಥೆಯ ‖
ಅವಯವವನೊಳಾನಂದಸುಖ ಸಂ । ಭವಿಸುತದೆ ಎಲೆ ಸೂತ ಕೇಳಿಂ । ತಿವನನ್ನೋಲ್
ನಮಗಾಪ್ತರುಂಟೆಂದೊಲದನನಯವವ ‖ ಒಸೆದುಮುಂದಣ ತಾಗುಬಾಗಿನ । ಸಸಿನವನು
ಹೇಳಿದನು ಹಡದಡೆ । ಹೆಸರಿಡಲು ಬೇಕಿವನ ರಾಮುಂಗಂಜಬೇಕಿನ್ನು ‖ ಪಶುಪತಿಯ
ಮೇಲಾಣೆ ಹುಸಿದಡೆ । ಶಿಶುಪಿನಾಣೆಯೆನುತ್ತ ಕೆಲಬಲ । ಕಸವಳಿದು ಬಿರುನಗೆಯ
ಸೂಸಿದನಾ ದಶಗ್ರೀವ ‖ ೪೬ ‖ ಹರಹಿದನು ಬೆದರಿಕೆಯನಹುದೋ । ಹಿರಿಯನ್ನ ನೀನಾತ
ಸಾಕ್ಷಾ । ತ್ಪರಮಪುರುಷನುಗಡ ಭವಬ್ರಹ್ಮಾಮರೇಶ್ವರರು ‖ ಹಿರಿದು ದೂರಲು ಜನಿಸಿ
ದನುಗಡ । ಹರಮುಕುಂದೇವೀವಿವೇಕ । ಸ್ಫುರಣೆ ನಿನಗಲ್ಲದೆ ಜಗತ್ತಿನೊಳಾರಿಗುಂಟೆಂದ ‖
ಕೊಂದಗಡ ಮಧುಕೈಟಭರ ಬಳಿ । ಕಂದು ಬವರದ ಬರವನಿತ್ತಲು । ಬಂದಗಡ ಗೆಲಿದನು
ಗಡಾಚೆಯ ನಖಿಳದಾನವರ ‖ ಛಂದವಾದ ದು ಕಥೆ ಕುತೂಹಲ । ವಿಂದು ತೋರಿತು
ತಮಗೆನಾವ್ ರಘು । ನಂದನನ ಪರದೈವವೆಂದೇ ಕಾಣಬೇಕೆಂದ ‖ ಏನೆಲವೊ ಮಾರೀಚ
ಮಾರಿಯ । ದೇನು ಮನೆದೊತ್ತಲ್ಲವೇ ಚತುರಾನನಾದಿ ಸುರೌಘಸೇವಕರಲ್ಲವೇ ತನಗೆ ‖
ನೀನು ಹೊಸಬನೆ ಹೊಗಳಲಹುದೇ । ಮಾನವನ ಮಾರವುಣನೆಂಬಭಿ । ಧಾನದಲಿ
ಸೈರಿಸೆನದೆಂದೂ ಖೂಳ ಹೋಗೆಂದ ‖ ೪೯ ‖ ಅಂದು ಸಾಸಿರಲಳಿವರೇ ನೀ । ನೆಂದ ವೀ
ರರು ಸಾಕದಾವಾ । ತಿಂದು ನೀಬಹುದುಂಟೊ ಬಾರೆಯೊ ಹೇಳು ಶೀಘ್ರದಲಿ ‖ ಬಂದ
ರುಳುಹುವೆ ಬಾರದಿರೆ । ಕೊಂದು ಬಿಸುಡುವೆ ನಿನ್ನ ಸೀಗೆಸು । ತಿಂದುಹಾಸವ
ನುಗಿದು ನೆಗಹಿದನಧಿಕ ರೋಷದಲಿ ‖ ೫೦ ‖ ಅಸುರಸೈವನಾಸುರ ವಿಕರ್ಮನ । ನೆಸಗ

ದಲ್ಲದೆ ಮಾಣನದರಿಂ | ದಸುವ ನಸುರಾರಿಗೆ ಸಮರ್ಪಿಸುವೆನು ಸಮಕ್ಷದಲಿ || ನಸಿಯು
ದಿರದಿಂ ದಸುರವಂಶದ | ಶಶಿಯು ಬೆಳಗೆನುತೇರಿದನು ಬೇ | ವಸವ ಬೇಳಂಬದಲಿ
ಬೇಸರು ತವನ ಮಣಿರಥವ || ೫೧ || ಉಗಿದು ಖಡ್ಗವ ನೊರೆಯು ಬಸುರಲಿ | ಹೊಗಿಸಿ
ದನು ದಶವದನ ವದನದ | ನಗೆಯುಲಿಂದನು ಮಾವ ಕೇಳೆನ್ನಯ ದುರುಕ್ತಿಗಳ ||
ಬಗೆಯದಿರಿ ನೀವೆಂದು ಕೈಗಳ | ಮುಗಿದು ನಯದಲಿ ಬೇಡಿಕೊಂಡನು | ಚಿಗಿದ ದಂಬರ
ಕಾಗಿ ರಥಸಾರಥಿಯ ಸನ್ನೆಯಲಿ || ೫೨ ||

ಏಳನೆಯ ಸಂಧಿ ಸಮಾಪ್ತಂ.

ಎಂಟನೆಯ ಸಂಧಿ.

ಸೂಚನೆ|| ಮಾಯದಲಿ ಮೋಹಿಸಿದ ಕಾಂಚನ | ಕಾಯದೇಣನ ಗೋಣನನುಪಮ |
ಸಾಯಕದಲೆತ್ತಿದನು ಗಗನಕೆ ರಾಯ ರಘುನಾಥ ||

ಪದ್ಯ|| ಕುಶನಕೇಳ್ ಮಾರೀಚ ಮನದಲಿ | ಘಸಣಿಗೊಳುತಿರ್ದನು ಕಣಾ ರಾ
ಕ್ಷಸಕುಲಾಧೀಶ್ವರನ ದುಶ್ಚಿಂತ್ರದ ದುರಾಗ್ರಹಕೆ || ಶ್ವಸನಗತಿಯಲಿ ಗಗನದಲಿ ಬಳಿ |
ಕಸುರರಥ ಬರುತಿರ್ದುದತಿ ಸಾ | ಹಸದ ಸನ್ನಿಭ ರಾಮಚಂದ್ರನ ವರ ತಪೋವನಕೆ || ೧ ||
ಕಂಡರೆಡೆಯಲಿ ಖರನ ನಗರದ | ಹೆಂಡಿರುಗಳಕ್ಕೆಗಳ ತುಳುಕಿನ | ಮುಂಡೆಗಳ ತೋಳು
ಗಳ ಬಾಯ್ಗಳ ಬಸುರ ಹೊಯ್ಲುಗಳ || ಕಂಡೆಯ್ಯ ದಶಕಂಠ ತಾನಿದ | ಖಂಡಿತದ
ದುಶ್ಶಕುನ ಫಲವಿದ | ನುಂಡು ತೀಗುವ ಬೇಗ ನಡೆನಡೆಯೆಂದನಸುರಮುನಿ || ೨ || ಬರ
ಬರಲು ಮುಂದುಡಿದ ಮುಕುಟದ | ಹರಹುಗಳ ಹೊಳೆಹೊಳೆವ ಕೈದುಗ | ಳರೆಗಡಿದ
ಹಸರಗಳ ಹರಹಿನ ರಥದ ಹಂತಿಗಳ || ಕರುಳನುಗಿವ ಸೃಗಾಲ ವೃಕ ಭೀ | ಕರ ತರಕ್ಷು
ಧ್ವಾಂಕ್ಷಕುಲ ಸಾ | ಗರದ ಸಾರದ ಭೂಮಿಯನು ಕಂಡಸುರ ನೋಡೆಂದ || ೩ || ಬುದ್ಬು
ಬುಡಿಸುವೇರಿನಲಿ ದುರ್ವ್ರಣ | ದೊಡನೆ ಸೂಸಿದ ಬಗೆಯನಾಡುವ | ನೆಡೆವೆಣನ ಮಿಗ
ಬೀಗಿ ಬಾಗಿರ್ದಿಭ ಘಟಾವಳಿಯ || ಸೆಡವ ಕಾಲ್ಗಳ ಕುದುರೆಗಳ ಬಸಿ | ದೊಡವ ಹೆಣ
ಸಾಲುಗಳ ಪಂವಣಿ | ಯಡವಿಯನು ಕಂಡಿವರು ನಿನ್ನವರಹರೆ ನೋಡೆಂದ || ೪ || ಬರತ
ನೆತ್ತರ ಬಿಡೆಯುಗಳ ನೆಲ | ದೆರದ ಹಂಜರವೆಣನ ತೊಗಲುಡಿ | ದೊರತು ಸೂಸಿದ
ಕಾಡಿಗೆಯ ಹಳುವಾದವಾವವ || ಪೊರಲಿಗೊಂಡಳ್ಳೆಗಳ ನೆತ್ತರ | ಸುರಿವ ತನುಸಂ
ಪುಟದ ಬೆಸಣಿಕೆ | ಗುರುಬಿಸೆಡೆಗಳ ಕಂಡು ಕಂಡ್ಯೆ ಕೇಡ ನೀನೆಂದ || ೫ || ಕಳಲಿಬಿದ್ದಿದೆ
ಹೆತ್ತುಯೋಜನ | ದಳತಿಯಲಿ ಹೆಣಸಾಲು ಸಾಲದೆ || ಹಳಚಿದತಿ ಬಲರಳಿದುದೆಂಟೀ
ನೋಡು ಲೀಸಾಗಿ || ಎಲವೊ ನಿನ್ನಯ ಬಾಹುಹವಳಂ | ಗಳವಡದ ಬಲುದುಷ್ಕೃ
ನಂಗ್ರೈ | ಗಳಲಿ ಧರಿಸಿದೆ ಪಾಪಿ ಕೆಡಿಸಿದೆ ಕರ್ಬುರಾನ್ವಯವ || ೬ || ಎಲೆಲೆ ಪಾಪಿ ಪರಾಂ
ಗನೆಗೆ ಮನ | ವೆಳಸಲುಪುವತಿಗೆಪರವರ ಹೆಂ | ಗಳರಮಣರು ತಪ್ಪಿದು ತ್ರಾಸಿಪ್ರ
ಸಿದ್ಧವಲೆ || ಅಳಿಪ ತನಗಿಮ್ಮಡಿಸಬಾರದು | ಖಳಶಿರೋಮಣಿ ಹಿಂಗು ಹಿಂದಕೆ |
ಸುಲಭವಲ್ಲ ಸುಬಾಹುಹರನ ವಿರೋಧ ನಿನಗೆಂದ || ೭ || ಮುಗುಳಲಾ ಮಾರೀಚ ನಾ

ರಿಯು | ಸರಸ ಸಾವಿಗೆ ಸೊಗಸೆ ತನ್ನಯ | ರುಹನರಿಯಾ ಹೆಡ್ಡನೇ ತಾನಕಟ ಸೀ ನಿನಿತು || ತೆರೆದು ಮಾತಾಡುವರೆ ವೈರನ | ಬೆರಸಿ ಬದುಕಲು ಬಲ್ಲರೇ ಸುರ | ನರ ಭುಜಂಗಮರೆನ್ನೊಡನೆ ನೀ ಹೊಸಬನೇ ಯೆಂದ ||೮|| ಅಹುದು ಮಿತ್ರ ನೀನಾರಚಿತ್ರದ | ಲಿಹ ಪರಾಕ್ರಮ ಪೌರುಷನ ನಿ | ರ್ದಹನನವರೇ ಬಲ್ಲರೆಮ್ಮದು ಸ್ವಲ್ಪ ಬುದ್ಧಿಗಳು || ಬಹಳ ಮತಿಯುತ ನೀನೆನುತಲಾ | ಬಹುಮುಖನ ವೈದಳಿಯಲೈದಿದೆ | ನ ಹಿಮಕರನ ಕುಲಾಶ್ರಮವ ನಪರಾಹ್ಣ ಸಮಯದಲಿ || ೯ || ಇಳಿದ ನಾವನ ಸನ್ನಿವೇಶಾ | ಚಲದ ಶಿಖರವ ಮರೆಯಲೀನೃಪ | ರುಲುಹನಾಲಿಸಿ ಹೊಗುವನೇ ಕಗ್ಗೊಲೆಯನೆಂದವನು || ಅಲಯಲವ ಮಾರೀಚನಾದಶ | ಗಳನ ಧಿಕ್ಕರಿಸಿ ಕೆಲವುದಿನ ನೀ | ನುಳಿವುಪಾಯವ ನೋಡುವೆನು ತಂದದಕೆ ತಾನೆಂದ ||೧೦|| ಮುಸುಡ ಕಂಡರೆ ರಾಮಶರ ಖಂ | ಡಿಸದೆ ಬಿಡುವುದೆ ನಮ್ಮನಕಟಾ | ವಸುಕಿಕೊಂಡಿದೆ ನಿನ್ನನುನ್ಮಾದಗ್ರಹಾವೇಶ || ಉಸುರ ದಿರು ಸಾಕಿನ್ನು ಮಾಯಾ | ಮಸಕವನು ಮಾಗೊಂಡು ನೋಡುವ | ನಸುರಕರ್ನದ ಕಣೆಯ ಕಾಣಿಸಲರಿಯೆ ಪೇಗೆಂದ ||೧೧|| ಕಳಿದರಿಬ್ಬರು ಕತ್ತಲೆಯ ಕಡೆ | ಹೆಳಗಿನಲಿ ಕಾಮಾತುರದ ಕಳ | ವಡಿಗನಾ ಮಾರೀಚಗೆಂದನು ಮಧುರವಚನದಲಿ || ನಳಿನಮುಖಿ ಕೈಸಾರುವೀಮುತ | ದುರುಳಹನೆ ನಿಶ್ಚೈಸಿ ಹರಣವ | ನುಳುಹಿಕೋ ನೀನೆಂದು ಮಡಿದನು ಮಾವನಂಘ್ರಿಯಲಿ || ೧೨ || ಆದಡೆಲವೋ ಕೇಳು ತೋರ್ಪೆ | ರೈದು ತಲೆಗಳ ಬೈಚಿಡುವ ಬಲು | ಗೈದುಗಳ ಜಸುಟಡಗಿಸೀ ರಾಕ್ಷಸಕಳೇಬರವ || ಐದೆ ತಾಪಸವೇಷವನು ಬಳಿ | ಕೈದು ಪರವನಿತಾನ್ಯಸನಿಗಳಿ | ಗಾದಪರಿಯನು ಹೊರುವ ಪಾಪಕೆ ಹೊರವುತಾನೆಂದ ||೧೩|| ತೋರಿದನು ತಾ ಬಳಿಕವಗೆ ಹಿರಿ | ನಾರು ಬಣ್ಣದ ಪುಟದ ಚಿನ್ನಕೆ | ನೂರುಮಡಿಯೆನೆ ಹೊಳೆಹೊಳೆವ ಹೊಮ್ಮರಿಯರೂಪಕದ || ಬೇರೆಬಿಟ್ಟದ ತಾಯುತಾಣನ | ವಿಾರಿ ತಳಪಟದೊಳಗೆ ಹಾತಕ | ವಾದನಭಿನವ ಭಾವಭಂಗಿಯ ಬಹಳ ಕೌತುಕವ || ೧೪ || ಹೊಳೆಹೊಳೆವ ಕಿರುಗೊರಲುಗಳ ಥಳ | ಥಳಿಪ ರದನದ ತರಳನಯನದ | ಮಿಳಿರ್ವ ಕಿವಿಗಳ ಮಿಡುಕುವಂಘ್ರಿಯ ಮಿರುಪ ನಾಸಿಕದ || ದಳ ಗತಿಯ ನಿರ್ಮಾಸ ಜಂಘೆಯ | ಲುಳಿಯಲಾಗಿನ ಲಂಘನೆಯ ಲ | ವ್ವಳಿಪ ಹೊಸಜವ್ವನದ ಹೊಮ್ಮರಿ ಹೊಳೆದುದಿದಿರಿನಲಿ ||೧೫|| ಮಾಯೆಯಿದು ತಾನೆಂದು ಹರಸಾ | ರಾಯಣಾರಿಗರಿವೆತ್ತಣವು ಪಾ | ನೀಯಜಾಸನ ಸೃಷ್ಟಿಗಿದು ನೂತನವಲೇ ಯೆನುತ || ಮಾಯೆಯಲಿ ಮಾರೀಚನಾದಾ | ತಾಯು ರೂಪದಿ ಸುಳಿಯಲಾ ಖಳ | ರಾಯಮಾಮರುಮಾಯೆ ಯೆಂದೊಲದೊಲದ ನವಯುವವ ||೧೬|| ಎಲೆ ದಶಾನನ ಕೇಳಧೋಗತಿ | ಗಿಳಿವ ಮತಿನಿನಗಿನ್ನು ಸುಗತಿಯ | ಸುಳಿವು ನನ್ನದು ಭಾಗೆಯಿದು ನಿನಗೆನಗೆ ನೋಡೆನುತ || ಸುಳಿದ ನವಸೂಚನೆಯ ಮುಖದಲಿ | ಖಳಪತಿಗೆ ಚಿಂತಿಸುತ ರಾಮನ | ನಿಳಯವನು ಸಾರಿದನು ಸೂರ್ಯೋದಯದ ಸಮಯದಲಿ||೧೭|| ಇಳಿದುದೋ ಚಂದ್ರಮನಸಾಂದ್ರೋ | ಜ್ವಲ ಸುಚಂದ್ರಿಕೆಯನು ನಭೋಮಂ | ಡಲದೊಳಗೆ ಕರ್ದಮನುಪೂರ್ಣ ಸುಧಾಂಶು ಮೃಗವೆನಲು || ಸುಳಿದುದಾ ಮೃಗಪೋತ ಪರಿಮಳ | ಮಿಳಿತ ತೇಜೋಲತೆಯ ತರಿತರಿ | ದಿಳುಹುತವನೀ ನಂದನೆಯ ಹೊಗೊಳನ ಹೊರೆಗಾಗಿ || ೧೮ || ವಸುಮತೀಪತಿಸೂನು ಕೇಳ್ ನಿ | ಮ್ಮಸುರವೈರಿಯ ಶಯನ ನನಿಗದ | ಶಶಿವದನೆ ಸುಪ್ರಾತರೋಚಿತ ನಿಯಮ

ನಿರ್ಣಯಕೆ॥ ಮಿಸುಪ ಚಂದ್ರಸುಕಾಂತಿಶಿಲೆ ಸಂ। ಧಿಸಿದ ಘನ ಸೋಪಾನ ಪಂಙ್ತಿಯ। ಬಿಸರುಹಾಕರ ಕೆಳೆದಳಾ ಮೃಗಸುಳಿವ ಸಮಯದಲಿ ॥ ೧೯ ॥ ಮುಗಿದವೀ ಚಂದ್ರಾ ನನೆಯ ಬರ। ವಿಗೆ ಸರೋರುಹ ಷಂಡವಿರಹದ। ಥಗೆ ವಿತಾಳಿಸೆ ಚಕ್ಕವಕ್ಕಿಗಳೊಕ್ಕ ವಕ್ಕುಗಳ ॥ ನಗೆಯನೆಸೆದುವು ಕೂಡೆ ಕುಮುದಾ। ಳಿಗಳು ವಿರಸಂಭ್ರಮೆಯಲಿಂದುವ। ಗಗನದಲಿ ಮೊಗನೋಡಿ ಮುರಿದೀಕ್ಷಿಸಿತು ಮಾನಿನಿಯು॥೨೦॥ ಶಿವಶಿವಾ ಸರಸಿರುಹಷವ ನು। ದ್ಭವ ಪರಂಪರೆಯಿಂದ ಜನಿಸಿದ। ಯುವತಿಯರೊಳೀ ರೂಪದೆಲ್ಲಿಯದೇನು ವಿಸ್ಮ ಯವೋ ॥ ತಪಸಿತಿಂದ್ರಿಯಸಿಕರ ಮಗುಳು । ದ್ಭವಿಸುತಿದೆ ದರುಶನದಲಾ ವೈ। ಶ್ರವಣನಳುಪದೆ ಮಾಣನಕಟಕಟೆಂದನಸುರಮುನಿ ॥೨೧॥ ಮಾಯೆಯುಮೃದು ಸ್ವಲ್ಪ ವಿದ್ಯಾ। ಮಾಯೆ ಯಾಗದೆ ಮಾಣಳೀಸತಿ। ಮಾಯೆಯಲಿ ಮತಿಗೆಡಿಸಿ ಕೊಲಿಸಿದಳು ದಿಸಿ ರಾಕ್ಷಸರ ॥ ಮಾಯೆಯಹುದಿನ್ನಸುರಕುಲ ನಿ। ರ್ಮಾಯನುದಿತದ್ವೇಷಸಮರದ। ಸಾಯಕದ ಮುಮ್ಮೊನೆಯಲೆಂದನು ತನ್ನ ಮನದೊಳಗೆ ॥ ೨೨ ॥ ಈಕೆ ಕರಚರಣಾನ ನಾಬ್ಜಾ। ನೀಕವನು ತೊಳದಂತರಂಗದ। ಲಾ ಕಕುಸ್ಥಾನ್ವಯನ ಪಾದ ಸರೋಜ ವನು ನೆನೆದು ॥ ಲೋಕನಯನಂಗೆರಗಿ ನೊಸಲಲಿ। ಕೋಕನದ ಕರ್ನಿಕೆಯನಿಟ್ಟು ನಿ। ರಾಕುಳದಿ ನೋಡಿದಳು ನೆಳಲನು ನೇವರಿಸಿ ಮುಡಿಯ ॥೨೩॥ ಕಂಡಳುದಕದ ನೆಳಲಿ ನಲಿ ಕೈ। ಗೊಂಡ ಮಾಯಾಮೃಗದ ಮೂರ್ತಿಯ। ದಂಡಿಸರದಭಿನವದ ಶಿಶುಲೀಲಾ ಕಳಾಪಕವ॥ ಮಂಡೆಯನು ಮುರಿದೆತ್ತಿ ಸರಸಿಯ। ದಂಡೆಯನು ನೋಡಿದಳು ಕಾಣದೆ ಮಂಡಿಸಿದ ಪಕ್ಷಿಗಳು ತಿಳಿಗೊಳನೊಳು ತಳೋದರಿಯ ॥ ೨೪ ॥ ಸುಳಿಸುಳಿದು ಸಂಭ್ರ ಮಿಸಿ ನಾಸಿಕ । ದೆಲರ ಪರಿಮಳ ಪೂರಭಾರವ । ಸುಳಿಸಿದುದು ಸರಸಿರುಹಗಂಧಿಯ ಲಲಿತನಾಸ್ಯದಲಿ॥ ಜಲದ ನೆಳಲಿನಲೆವೆಚಲಿಸದಾ। ಜಲಜಲೋಚನೆ ನೋಡುತಿರ್ದಳು। ವಿಲಸದಭಿನವ ಚಿತ್ರಗತಿಯ ಕುರಂಗಶಾಬಕವ ॥೨೫॥ ತೋರುವುದು ನೀರಿನಲಿ ನೋ ಡಲು। ಜಾರುವುದು ತೀರದಲಿ ಮಿಗೆ ಮೈ। ದೋರುವುದು ನೀರಿನಲಿ ತೀರದಲುಭಯ ಸಂಗದಲಿ ॥ ವಿರ.ವಿಳಿವಕ್ಷಿಗಳು ಬಳಲಿದು। ಬೇರೆ ಬುದ್ಧಿಯ ಕಂಡು ಗಂಡಗೆ। ದೂರ ಬೇಕೆನುತೀರಿದಳು ಸೋಪಾನ ಪಂಙ್ತಿಗಳ ॥೨೬॥ ನಮಿಸಿದುವು ಹಂಸೆಗಳು ಲಲಿತ। ಕ್ರಮದ ಸೋಂಕಿನಲಳಕಗತಿ ಗು। ದ್ಭ್ರಮಿಸಿದುವು ಭ್ರಮರಾಳಿ ಬೆಂಬಳಿಯಲಿ ನಿತಂ ಬಿನಿಯ ॥ ಅಮಳತರ ಪಾನೀಯ ರುಚಿಯಾ। ಕ್ರಮಿಸಿ ಸರಸಿಯ ಶಶಿಮುಖಿಯ ವಿ। ಭ್ರಮು ಸುಲಾವಣ್ಯಾಂಬುರುಚಿಯಲಿ ಬೆರಸಿತಾಕ್ಷಣಕೆ ॥ ೨೭ ॥ ಬಂದುದೀಮೃಗಪೋತ ಛೀತಿಯ। ಮಂದಗತಿಯಲಿ ಮೃಗಸುನೇತ್ರೆಯ । ಹಿಂದುಗೊಂಡೀಕ್ಷಿಸಿದಳೊಯ್ಯನೆ ನಿಲುತ ನಿಲುಕಿದಡೆ ॥ ಮುಂದಣಿಗೆ ಲಂಘಿಸುತ ಮುರಿದರೆ। ಸಂಧಿಸುತ ಸಮ್ಮಾನರ ಸದು। ಕ್ಕಂದವನು ಕಾಮಿನಿಗೆ ಕಾಣಿಸುತ್ತೈಯ್ದಿ ತಡಿಗಡಿಗೆ ॥೨೮॥ ಕೊಳನತಾಗಿದಕಲ್ಲ ರತುನಾ। ವಳಿಯಮಾಡುತ ನೋಪಿವನಿಯ ಲು। ಜ್ವಲ ಸುಮುಕ್ತಾಫಲವ ಕೆದರುತ ವಿವಿಧ ತರುಲತೆಯ ॥ ಲಲಿತ ತನುಕಾಂತಿಯಲಿ ಮಿಗೆ ಹೆಂ। ಬೆಳಗ ಪಸರಿಸುತೊಯ್ಯ ನೊಯ್ಯನೆ। ಬಳಿಪಿಡಿದು ಪಲವೇಷದವೊಳ್ಳೆದಿತು ನಿತಂಬಿನಿಯ ॥೨೯॥ ಉಟ್ಟ ಹೊಸ ಬೆಳುವಟ್ಟೆ ಹೊಮ್ಮಿರಿ। ಮುಟ್ಟವಿಸೆ ಹೊಂಬಣ್ಣವಾದುದು। ತೊಟ್ಟ ರತ್ನಾಭರಣ ಪಲ್ಲಟಿಸಿದುವು ಧಾತುಗಳು ॥ ದಿಟ್ಟಿ ಹರಿಣನಮೇಲೆ ನೇಹದ। ನೆಟ್ಟು ಹರಿಣಮೇಲೆ

ಹೆಜ್ಜೆಗ | ಳಿಟ್ಟಣಿಸಲ್ವೆದಿವಳು ನಗೆಮೊಗದಲಿ ನಿಜೇಶ್ವರನ ||೩೦|| ಇದ್ದವರಚಮೂರು ಚರ್ಮದ | ಗದ್ದುಗೆಯ ಗರುವಾಯೆಯಲಿ ಸತಿ | ಹೊದ್ದಿದಳು ಹೊಮ್ಮರಿಯನೋಟದ ಹೊವರ ಹರುಷದಲಿ || ಹೊದ್ದಿತಿದು ಹೊಂಬಳಿಯಲೀ ನೃಪ | ನಿರ್ದಮಂದಿರಕಗ್ರ ಭಾಗದ | ಕದ್ದುದಗ್ಗದ ಮನವ ದರುಶನದಲಿ ಧರಾಧಿಪನ ||೩೧|| ದೇವ ಚಿತ್ತೈಸಿದಿರಿನಲಿ ಸಂ | ಭಾವಿಸಿದಿರೇ ಕನಕರುಚಿಯ ಕ | ಳೇವರದ ಕಮನೀಯ ಕಲಿತ ಕುರಂಗ ಶಾಬಕವ || ತೀವಿಕೊಂಡಿದೆ ವಿವಿಧ ರುಚಿ ವಿಪಿ | ನಾವಳಿಯಲಿದ ತಂದು ಕೊಡಬೇ | ಕಾವಪರಿಯಿಂದಾದಡೆಯು ತನಗೆಂದಳಿಂದುಮುಖಿ ||೩೨|| ಸಲಹಲೆನು ನಾನಿಲ್ಲಿ ನಮ್ಮಯ | ಹೊಳಲಿಗೊಯ್ವವರಣ್ಯವಾಸವ | ಬಳಸಿದದರಿಮ್ಮೇಲೆ ಬಯಕೆಯ ಸಲಿಸಬೇಕೆಂದು || ಹಲವು ಪರಿಯಲಿ ಲಲ್ಲೆವಾತಿನ | ಲೊಲಿದು ರಾಮನ ಕೋಮಲಾಂಘ್ರಿಯೊ | ಳೆಳುಹಿ ವಳು ಮೂರ್ಧ್ನಿಯನು ಮುಗ್ಧಭಾವಭಾರದಲಿ ||೩೩|| ಐಸಲೆ ವೈದೇಹಿ ನೀನಿಂ | ತೀಸು ನಿರ್ಬಂಧದಲಿ ಧಿಟ ಬಿ | ನ್ನೈಸಲೇನಿದು ದೊಡ್ಡಿದೇ ತನಗೆನುತಲೆಕ್ಕಡವ || ಬಾಸಣಿಸಿ ಪದತಳಕೆ ಪೀತ ಸು | ವಾಸವನು ತೆಗೆದುಟ್ಟು ಬಿಲು ಬಾ | ಣಾಸನವ ತೆಗದೆಲವನೆಯ ಹೊರವಂಟನಾರಾಮ ||೩೪|| ಅರಸಿಯಿಚ್ಛೆಯ ಸಲಿಸಲಿನಕುಲ | ದರಸ ಹೊರವಡಲೂರ್ಮಿಳಾಸತಿ | ಯರಸ ಕಂಡನು ತನ್ನ ಭವನದಲಿದ್ದು ಭೂಪತಿಯ || ಸರಸರಿಸಿ ನಿಜ ಚಾಪವನು ಸಂ | ವರಿಸಿಕೊಳು ತೆಲೆವಸೆಯ ಹೊರವಂ | ಟರಿದಿಶಾಪಟ ಪಟುಪರಾಕ್ರಮಿಯೆಡೆಗೆ ನಡೆತಂವ ||೩೫|| ತಿರುಗಿನೋಡಿದ ನಿದ್ದೆಶೆಯ ನಹಿ | ತರಲಿ ಭಯವನು ಕಾಣದಣ್ಣನ | ಭರವಸಿಕೆ ತಾನಲ್ಲಿಗೆಂ ದನುಮಾನ ಮಾರ್ಗದಲಿ || ಹರಹುಗಾಣದೆ ಕೈಮುಗಿದು ಭಯ | ಭರಿತ ಭಕ್ತಿಯಲೊಯ್ಯನೀ ಬಿಲು | ಸರಳ ಸಂವರಣೆಯ ಸಗಾಢವಿದೆನುತ ಬೆಸಗೊಂಡ ||೩೬|| ತಮ್ಮ ನೋಡೀ ಮೃಗವ ನಬುಜಜ | ನಿರ್ಮಿಸಿದ ಸೃಷ್ಟಿಗೆ ನವೀನವಿ | ದೆಮ್ಮರಿಸಿ ಬೇಡಿದಳು ಬಯಕೆಯ ಸಲಿಸಬೇಕೆಂದು || ಹೊಮ್ಮಯೆಮಗಾಯ್ತೆಂದು ನಾವೀ | ಹೆಮ್ಮರಿಯ ತಪ್ಪಸ್ನಬರಲೀ | ಧರ್ಮಪತ್ನಿಯ ಕಾದುಕೊಂಡಿರು ನೀವು ನಿನಗೆಂದ ||೩೭|| ರಾಯನಾಡಿದ ನುಡಿಗೆ ನೋಡಿದ | ನಾ ಮಹಾತ್ಮನು ಹೊಮ್ಮರಿಯನಿದು | ಮಾಯೆಯಲಿ ರೂಪಾಯಿತೆಂದೇ ನಿಜವನಿಶ್ಚೈಸಿ || ಜೀಯ ಬಿನ್ನಹ ಕಪಟವಿದು ಕಮ | ಲಾಯತಾಕ್ಷಿಯ ಕಾಮ್ಯವೇಕೀಕೆಗೆ | ಪಾಯವಹುದಿದರಿಂದ ಬಳಲಿಕೆಯಹುದು ನಮಗೆಂದ ||೩೮|| ತೊಳಲ ದಡವಿಗಳೆಲ್ಲ ತೋಳಿಗೆ | ಸಿಲುಕದಿಹ ಮೃಗವಲ್ಲ ಬೇಂಟೆಯೊ | ಳಲಗು ಗಾಣಿಸದಿರ್ದ ಮೃಗವಿಲ್ಲಿನಿತು ಪರಿಯಂತ || ಬಳಕೆಗಿದು ಬಯಲೆಂಬಬಗೆ ತಾ | ಹೊಳಕುತಿಪೆ ಹೃದಯದಲಿ ಮಾತಿದ | ನೆಣಿಕೆ ಗಾಣದೆ ಮನೆಗೆ ಬಿಜಯಂಗೈಯನೀವೆಂದ ||೩೯|| ಎನಲು ಕೇಳಿದ ಬಂದು ಸೀತಾ | ವನಿತೆ ನುಡಿದಳು ಜರೆದು ನಿಜಮೈ | ದುನನ ಬಯಸಿದ ಬೇಡಲೀ ಹೊಮ್ಮರಿಯಲವಗುಣವ || ಜನುವರಿಸಿ ಮಾತಾಡುವುದು ನಿನ | ಗನುನಯವೆ ಸಾರತ್ತಲೆನೆ ಮಾ | ನಿನಿಯ ಝಂಕಿಸಿ ಕಳುಹಿ ಲಕ್ಷ್ಮಣದೇವಗಿಂತೆಂದ ||೪೦|| ಕೇಳಿದ್ದೈ ಯೆಲೆತಮ್ಮ ಸೀರಜ | ಲೋಲಲೋಚನೆಗಾಢದುತ್ತರ | ನಾಲಿಗೆಗೆ ಪುನರುಕ್ತಿಯಾಗೆ ಪುರಂಧ್ರಿನಗವಳೆಲೆ || ಮೇಲೆನಾವೃದ್ಧಿ ಡೆಡಹೆವೆಮ್ಮದು | ಮೇಲೆ ಮಾತಾಗಿಹುದು ನಿನ್ನಯ | ಮೇಲುದಾಗಿನ ನುಡಿಗೆ ಮತಿಯನು ಕೇಳುನೀನೆಂದ ||೪೧|| ಧಿಟಕೆ ಹೊಮ್ಮರಿಯಾದಡೆಯು ಕರ | ಪುಟಕೆ ಯಡಗಿಸಿತಹೆನು ತಾನಿದು |

ಕುಟಿಲ ಕರ್ಬುರ ಸಾದಡಿಳುಹುವೆ ನಿದರವುಸ್ತಕವ ॥ ನಿಟಿಲದಲಿ ವಿಧಿ ಬರೆದ ಬರಹವ
ನಟಮಟಿಸಲಿದರಳವೆ ಕಾದಿರು । ಕುಟಿಲಕುಂತಳ ಧರೆಯು ನೆನುತ ಡಿಯಿಬಿಟ್ಟನಾರಾಮ॥೪೨
ಕಂಡುದಾ ಕಡುಕಪಟಮೃಗ ಕೋ । ದಂಡರಾಮನ ಮನದ ನೆನಹಿನ । ದಂಡಿಸರವನ
ದಾರಿದೆಗೆದುದು ಘೋರವಿಪಿನದಲಿ ॥ ಕೊಂಡು ಮೋಹಕಬುದ್ಧಿಲತೆ ಕುಡಿ । ಗೊಂಡ
ದರಸನ ಬಳಿಕ ಕಪಟ ಕ । ರಂಡಮೃಗ ಕಡುಚಿತ್ರಗತಿಯಲಿ ಚಿಮ್ಮಿದಿರಿನಲಿ ॥ ೪೩ ॥
ಅಡಿಗಡಿಗೆ ಮುಂಚುವುದು ನಿಲವಿನ । ಗತಿಗೆ ನಿಲುವುದು ಮುರಿಯೆ ಮುರಿವುದು ।
ಪ್ರತಿಗೆ ದನಿದೋರುವುದು ಲಂಘಿಸಡೆ ಲಂಘಿಸುವುದು ॥ ಯುತಿಗೆ ಸಾಧನ ಸಡಮುಳಜಿಹ್ವಾ ।
ನತೆಗೆ ನಿಗುರ್ವವೋಲೊಡನೆ ನಿಗುರುವುದತುಳ ಮಾಯಾವುಯುವ ಮಾರೀಚ ಪ್ರತಾಪ
ಮೃಗ ॥೪೪॥ ಮುಗಿದು ಮುಂಗಾಲುಗಳ ಹಿಂದಕೆ । ಹೊಗುವ ಹಿಂಗಾಲುಗಳ ಮುರಿ
ವಿನ । ಸೊಗದ ಚಮರಿನಬಳಿಯು ನೋಟದ ಸೀಳ್ದ ಕರ್ಣಗಳ ॥ ಮುಗುಹಿದಪ್ಪಲು
ಮುಂಚೆ ಚಿಮ್ಮುವ । ಬಿಗಿವ ಚಲನೆಯು ಜಂಗುವಾರಿನ । ಮೃಗವು ಮುನಿ ನಿಕರುಂಬ
ದೊಳ ಗಡಹಾಯ್ದುದಗಲದಲಿ । ೪೫ ॥ ಇದೆ ಇದೆಂಬಂತೊಡನೆ ಹಿಡಿ ಹಿಂ । ದೊದಗು
ವುದು ಬರಲಾಸೆಯಲಿ ಬಿಸಿ । ಲ ದಕವೋಲತಿ ಮಿಂಚುವುದು ಕೈಸೋಕಿಗವಸಿಪನ ॥
ಚತುರತನವನು ಮಿಕ್ಕಿಹುದು ಸದು । ಹೃದಯನನು ವಂಚಿಸುವ ಮಾಯಾ । ವಿದನ
ವೊಲು ವೈದೇಹಿ ತೋರದೆ ಹಾಯ್ದುದಗಲದಲಿ ॥೪೬॥ ಇಡಕರಲಿ ಕುತ್ತುರಲಿ ಕುಹ
ರದ । ತೊಡಕು ಮೆಳೆಗಳ ಲದ್ರಿಕೂಟದ । ಎಡಬಲದ ತಪ್ಪಲಲಿ ತುರುಗಿದ ತರುಕದಂ
ಬದಲಿ ॥ ಅಡಗಿ ತೋರುತ ನಿಲುತ ನಿಗುರುತ । ತೊಡಹವಳಿ ಮಾನದಧಮಪುರುಷರ ।
ಮತಿಯವೊಲು ವಂಚಿಸುತ ಹಾಯ್ದುದು ವಿಪಿನದಲಿ ನೃಪನ । ೪೭ ॥ ದಾರಿಯಿದು ದರಿ
ಯಿದು ಮಹಾ ಕಾಂ । ತಾರವಿದು ಕಲುಮರವಿದದ್ಭುತ । ಘೋರಮಾರ್ಗವಿದುಗ್ರಕಂಟಕ
ಕಠಿಣಪಥವೆಂಬ ॥ ಆರಯಿಕೆಯಿಲ್ಲದೆ ಮೃಗವ್ಯಾ । ಪಾರಚಿತ್ತನು ಶಾಂತಗುಣ ಗಂ ।
ಭೀರಗರ್ವಿತ ನೈದಿದನು ಮಾಯಾ ಕುರಂಗವುವ ॥ ೪೮ ॥ ಭುಜದಸೋಂಕಿಗೆ ಭೂರಿ
ಭೂಜ । ವ್ರಜವು ಬಿಡುಮೊದಲಾದವದ್ರಿಗ । ಳಜೆಗಿಜೆಗಳಾದವು ನಿತಾಂತಪದಪ್ರಹಾರ
ದಲಿ ॥ ಗಜದ ಕಾಲ್ದುಳಿವಾಳೆಯೋ ಭೂ । ಮಿಜವ್ರೊ ಕಳಿಯಿತು ಕಾನನವ ನಜಿ ।
ಗಿಜೆಯ ಮಾಡುತ ಕಾಲುನಡೆಯಲಿ ರಾಮನೊಡೆಹಾಯ್ದ ॥೪೯॥ ಸರಳಿಸುವ ಸಮ್ಮುಖ
ದೊಳಡಸಾ । ಯ್ದ್ದರಳಿಗಳ ತೂರಿದನು ತೂಳುವ । ಕರಿಗಳನು ಶೀಳಿದನು ಸೇವರಿಸುವ
ತರಕ್ಷುಗಳ ॥ ಸುರಗಿಯಲಿ ಸಿಕ್ಕಿದನು ಕುಕ್ಕಿದ । ನುರುಶರಾಗ್ರವಲಿದಿರಿಲೊದಗುವ ।
ಶರಭಸಿಂಹಲುಲಾಯಗಳಲುಬ್ಬರವ ಗಮನದಲಿ ॥ ೫೦ ॥ ಕದಳಿ ಕಡವರಿ ಮಾವುಗಳ
ಬಿಲು । ದುದಿಯುಲಿರಿದನು ಮೆರೆವರಾಹನ । ನೊದೆದು ಕೊಂದನು ಕರಡಿ ಖಡ್ಗಪ್ರಮುಖ
ಮೃಗಕುಲವ ॥ ಕೆದರಲೆಚ್ಚನು ಲೋಚನಾಗ್ರವ । ನದರಮೇಲಿರಿಸಿದನು ಮಾಯಾ ।
ವಿದ ಮೃಗವ್ಯಸನದಲಿ ಮಾಯಾತೀತ ಮರುಳಾದ ॥ ೫೧ ॥ ಲಾಗುಹಿಂಗದೆ ಕಂಗಳಿಗೆ
ಮರೆ । ಯಾಗದಾ ವಾತಾಯುವಿನ ಮೈ । ಲಾಗು ಲಂಘನೆಗೊಡನೆ ಲಂಘಿಸು ತಂಘವಣೆ
ಮಿಗಿಲು ॥ ವೇಗೆಮೇಗುಬ್ಬೇಳ್ವ ಸುಯಿಲಿನ । ತಾಗುವಳ್ಳೆಯು ತೋದ ಬೆಮರಿನ ।
ಜಾಗುಗಳ ಸಿಡ ವ ರನ ಮರೆಗಳಲಟ್ಟಿದನು ಮೃಗವ ॥ ೫೨ ॥ ತಿರುಗಿ ತೂಳುವ ಮುಗಿಲ
ಮುಂದೆಯ । ಮುರಿವಿಡಿದು ನಗಗೊಂಬನಗಲೆ । ದೆರೆಯವೊಲು ನಿಗುರಿದುದು ನಿಬಿಡ

ನಿಕುಂಜಪುಂಜದಲಿ || ತೆರಹು ಗೊಡದೀಪರಿಯಲಾನೇ | ಸರುಗುಲಾಧೀಶಂಗೆ ಮಾ
ಯೆಯ | ಮರೆವಿಡಿದು ನಡೆವವರ ಗೆಲುವವರಾರು ಲೋಕದಲಿ ||೫೩|| ಸಿಕ್ಕುತಿದೆ ಯಂ
ಬಾಸೆ ಮನದಲಿ | ಮಿಕ್ಕಿಹುದು ತನ್ಮೃಗವನದು ಹಿಂ | ದಿಕ್ಕಿಹುದು ಮಿಕ್ಕಿಹುದು ಮನ
ಮೃಗವನು ಮಹೀಪತಿಯ || ಇಕ್ಕಿದರ್ಥಕೆ ಮಾತು ಮೈಗುಡ | ದಕ್ಕರಿನರಸ ಪಂದಿಗಳ
ಕೈ | ಸಿಕ್ಕಿದವೊಲಿಳಿಯಾಸೆಯಲಿ ಬೆಂಬತ್ತಿದನು ರಾಮ ||೫೪|| ಚಿಗಿಯಲಂಬರ ಹೊಂ
ಬಿಸಿಲದೆನೆ | ಗುಗುಳುವುದು ನೆಲಕಿಳಿಯಲಂಬರ | ವಗಲದಲಿ ಹೊಂಬಣ್ಣವಹುದಾ
ಮೃಗದ ಕಾಂತಿಯಲಿ || ಬಗೆಯೆ ನಿಶ್ವಾಸವಲಿ ದಶದಿ | ಕ್ಕುಗಳು ಪರಿಮಳಿಸುವುದು
ಸೊಬಗಿನ | ಸೊಗಸ ಬೀರುತ ಬೀದಿವರಿದುದು ಬನದೊಳಗಲದಲಿ || ೫೫ || ಆಸೆಬಿಡ
ದಟ್ಟದನು ಮತ್ತೆ ಮ | ಹೀಶ ಮಾರುತವೇಗದಲಿ ಮಾ | ಯಾಸುರದ ಮೃಗಘನ
ಮನೋವೇಗದಲಿ ಸರಳಿಸಿತು || ಘಾಸಿಯಾದನು ಭೂಪ ಬಹಳ | ಶ್ವಾಸಲಹರಿಯ
ಲಳಿಯುತಾಳಿಗೆ | ಯಾಸರಿನ ಸರಣಿಶ್ರಮದ ಭಾರಣೆಯ ಬಿಗುಹಿನಲಿ ||೫೬|| ದರಿಗಳೊಳು
ಸರಣಿಯೊಳು ಬಲು ಡೊಂ | ಗರಗಳೊಳು ಗುಹೆಗಳೊಳು ಗಿರಿ ನಿ | ರ್ಝರ ತರಂಗಿಣಿ
ವಾಪಿ ಕೂಪ ತಟಾಕ ಪಲ್ವಲದ || ಹೊಲಗಳೊಳು ಹೊಲವರೆಗಳೊಳು ಉ | ಬ್ಬರದ
ಹುಲು ಹೊದರುಗಳೊಳಗಲಕೆ | ಹರಿದು ಹೋರಟೆಗುಟ್ಟಿದನು ಹೊಸ್ಸರಿಯಬೆನ್ನಿ
ನಲಿ ||೫೭|| ಗೊಲ್ಲಪಳ್ಳಿಗಳೊಳು ಗುಹಾಂತರ | ಬಿಲ್ಲ ಪಕ್ಕಣದೊಳು ಮುನೀಂದ್ರರ
ಪ | ಲ್ಲವಾಲಯ ನಿಕರಮೊಳು ನಗರೋಪಕಂಠದೊಳು || ಹಳ್ಳದಲಿ ಪೂರುಗಳಲಿ
ಹೊಳೆಗ | ಳಲಿ ನಗರಗ್ರಾಮ ಸೀಮೆಗ | ಳಲ್ಲಿ ಬೆಂಬತ್ತಿದನು ಬಳಿಕಾ ಕನಕಮಯ
ಮೃಗವ ||೫೮|| ತೊಳಲಿಸಿತು ಸೌರಾಷ್ಟ್ರದವನೀ | ತಳದೊಳಾ ಗೌಳಾವನಿಯ ಮಂ |
ಡಲದೊಳಂಗ ಕಳಿಂಗ ಗುರ್ಜ್ಜರ ನಿಷಧ ಕಾಂಭೋಜ || ತುಳುವ ಲಾಳ ವಿದರ್ಭ
ದ್ರವಿಡಾ | ವಳಿಗಳಲಿ ತೊಳಲಿಸಿತು ಕುಂತಳ | ವಲಯ ವಿಷಯರಿಗಳಲಿ ವಿವಿಧಾರಣ್ಯ
ವೀಥಿಯಲಿ ||೫೯|| ಬಿಸಿಲುಬೇಗಕೆ ಬೆಂದು ಕಂದಿದ | ಮುಸುಡ ಮಸುಳಿಸಿ ದಂಗರೋ
ಚಿಯ | ನುಸುಕೆ ಕೆಂಪಿನ ಲೋಚನದ ನಿರ್ದ್ರವದ ನಾಲಿಗೆಯ || ಉಸುರಿ ಗುಬ್ಬಸ
ನೆಡಹು ನೆರಳಿನ | ಕುಸಿದ ಗಮನದ ಗಳಿತಸಾಹಸ | ದಸಮವೀರರ ದೇವ ಧೈರ್ಯ
ವಿಸಂಚನುಸನಾದ || ೬೦ || ಅಡಿಗಡಿಗೆ ಹಸಿದವುಕಿದವು ನೀ | ರಡಿಕೆ ನಿರ್ಬಂಧಿಸಿತು
ನಾಗಿವ | ರೊಡನೆ ಬಳಲಿಕೆಯೆಂಬ ಬಗೆ ಬಲುಕರಿಸಿತವನಿಪನ || ಸುಡು ವೃಥಾ ಪೌರು
ಷವ ನಕಟಾ | ಬಡಕುರಂಗಾಧಮವು ಸಾಹಸ | ತಡೆದುದೇ ತನ್ನನನೆನುತ ಸಾರ್ದನ್ನ
ವನಸ್ಪತಿಯ ||೬೧|| ಎಳೆವಳಿರ ಸೊಂಪಿನಲಿ ಕುಸುಮದ | ಕಳಿಕೆಗಳ ಹೆಂಪಿನಲಿ ಘನ
ಸರಿ | ಮಳದ ಪಸರಿನ ತಂಪಿನಲಿ ತಂಬೆಲರ ಕಂಪಿನಲಿ || ಚರಿತ ಸಹಸಾಕಾರಸಾರದ |
ಸುಲಭತೆಯುನರಸಂಗೆ ಬಿಲುಬಿಲು | ಗೊನೆಗೆ ಗಲ್ಲವನೂರಿ ನಿಂದೀಕ್ಷಿಸಿದನಾ ಮೃಗವ ||
ಬಳಲಿದನು ಮಾರೀಚನಾ ನೃಪ | ತಿಲಕ ರಾಮಂಗೆಂಟು ಮಡಿಯಲಿ | ಬಲುಮೆಗತಿ
ಬೆರಗಾದನಾ ರಘುರಾಜಚಂದ್ರಮನ || ಚಲವಬಿಡನವನೀಶ ನೀತಂ | ಗಳಿವ ಹೊಡವೆ
ನಾಣನೆಂ ದೊಳ | ಗೊಳಗೆ ಚಿಂತಿಸುತಿದಿರಿನಲಿ ನಿಂದನು ರಘುಪತಿಯ || ೬೩ || ಕಂಗ
ಳನು ಹರಹಿದನು ರಾಮನ | ಮಂಗಳ ಶ್ರೀಮೂರ್ತಿಯನು ನೆರೆಹಂಗ | ಕಳೆದನು ಭವ
ಭವದ ದುಷ್ಕರ್ಮವಾಸನೆಯ || ಸಂಗಿಯಾದನು ಸುಖಮಯದ ಮೋ | ಕ್ಷಾಂಗನೆಯ

ಘನಜಘನ ಪೀನ ಕು । ಚಂಗಳಿಗೆ ಕೈನಿಲುಕಲುದ್ಯೋಗಿಸಿದನವ ಬಳಿಕ ॥೬೪॥ ಮೃಗ ವಿದಲ್ಲೆಂಬಮತಿ ಮನ । ದ ಗಹನಿಕ್ಕಿತು ರಾಘವಂಗಾ । ಬಗೆಯಲಿದು ಮೋಹಿಸಿತು ಮಾಯಾ ಮೃಗವು ರಘುಪತಿಯ ॥ ಬಿಗುವಿತೆಡಬಲಕುದುರ್ದ ತಿರುಗಲೆ । ಜಗುಳಿ ಜಿದ ರುವುದವನಿಜಿ ಶನ । ಸೊಗಡನು ಶ್ವಾಸಿಸುವುದಂಜುವುದ ಸಿಲನುರುಬೆಯಲಿ ॥ ೬೫ ॥ ನೋಡುವುದು ಭವವೈರಿಯನು ತಾ । ಕೂಡುವೆನು ಮುಕ್ತಿಯನೆನುತೋ । ಲಾಡು ವುದು ಮಹಿಮೆಯಲಿ ಪಿರಿದೆಳೆಹುಲ್ಲ ಮೊಗೆನೊಗೆದು ॥ ಕೂಡೆ ಭಕ್ತಿರಸಾಮೃತದ ಲೋ । ಲಾಡುವಂತಿರೆ ಸುಖಮಯದ ಲೋ । ಲಾಡುವುದು ಚಿನ್ಮಯ ಸದಾನಂದೈಕ ಭಾವದಲಿ ೬೬॥ ಇದ್ದುದಾ ಮೃಗವೀಪರಿಯನೆನ । ಹಿದ್ದುದೈ ರಘುಪತಿಗೆ ರಾಣಿಯು । ಲಿರ್ದ ಮನನನ ಭವ ಭವಾದಿಯಚಿಂತೆ ಹೊಮ್ಮರಿಯ ॥ ಕೊದ್ದಿದನು ರವಿಯಪರ ದಿಗುವಘು । ವಿದ ಮಂಚನುನಿನ್ನು ನಿಳಯವ । ಹೊದ್ದಬೇಕೆನು ತಡಸಿ ವೇಲ್ವಾಯಿ ದನು ಹೊಮ್ಮರಿಯ ॥೬೭॥ ಲಂಘಿಸಲು ಲಾಗಿದು ಮೃಗವು । ಲ್ಲಂಘಿಸುತ ರಘುನಾಥ ಮುಗುಳರೆ । ಜಂಘೆಯಲಿ ಸಿಗುದರೆ ಸಿಗುರಿತು ನಿಮಿಷ ನಿಮಿಷದಲಿ ॥ ಸಂಘಟಿತ ಸಂದರ್ಭಗಳಿಗಳ । ಸಂಘದಲಿ ಸಂಧಾನ ದಟವೀ । ಸಂಗದಲಿ ಸೈವರಿದು ಸೈರಣೆ ಗುಂದಿ ದನು ರಾಮು ॥೬೮॥ ಬಳಲಿದನು ಬಲುಹಾಗಿ ಸಾಕಿ । ನ್ನೆಳತಟವು ತನಗೆಂಬ ಬಗೆಮು। ಗೊಳಿಸಿದುದು ಮುಂಬರಿದುಮುಗಾಟೋಪ ಕೋಪಶಿಖಿ ॥ ಸೆಳೆದ ನಿಷುಧಿಯ ಲಂಬ ತಿರುವಿಗೆ । ತುಳುಕಿ ಕೋಲನು ಕೋಡಕೈಯಿಂ । ದಳಲಿ ನೊಯ್ಯನೆ ಸಿಲುಕಿದನು ಸಿಲುಕಿದ ಶರೀರದಲಿ ॥ ೬೯ ॥ ಸಾರೆ ತನಗಿನ್ನ ಸುರಭವ ಸಂ । ಸಾರಸುಖ ವೆಂದವನು ಜನ್ಮೋ । ತ್ತಾರಕನ ರಮಣೀಯತರ ರಾಮಾಭಿಧಾನಕದ ॥ ಸಾರತರ ಜಿಹ್ವಾಗ್ರದಿಂದು । ಚ್ಚರಿಸುವ ಸಮಯದಲಿ ರಾಯನ । ಕೂರಲಗು ಕಡಿವಿಳುಹಿತಾ ಮಾರೀಚ ವ ಸ್ತ್ರ ಕವ ॥೭೦॥ ಹಾ ಸುಮಿತ್ರಾಸೂನು ಹಾ ಸೀ । ತಾ ಸರೋರುಹನಯನ ಹಾ ಯೆಂಬೀ। ಗಾಢಧ್ವನಿಯಲಿಳೆಗೊರಗಿದನು ಮಾರೀಚ ॥ ಆಸುರಾರಿಗೆ ಸನ್ನೆಯಿದು ಬಳಿ । ಕಾ ಸರೋಜಾಂಬಕನ ರಾಣೀ । ವಾಸ ಕೇಳಿದು ಹಾ ಯೆನುತ ಹಂಮೈಸಿದಳು ಧರೆಗೆ॥೭೧॥ ಕರವ ಕದಪಿನೊಳಿಟ್ಟು ರಘುಕುಲ । ದರಸ ಶಿವಶಿವ ಹಾ ಮಹಾದೇ । ವರಿದೆಲಾ ಸೌಮಿತ್ರಿ ಯರಿದನೆನುತ್ತ ಬೆರಗಾಗಿ ॥ ಮರಳಿದನು ನಾನೊಂದುಪಾಯುವ । ನೆರಹುವಿರಂದೇನಾಗಿ ಹದೊ ಸರ । ಸಿರುಹಮುಖಿ ಸೌಮಿತ್ರಿಯನು ತಳವಳಿದನಾರಾಮ ॥೭೨॥ ಮುಗುಳೆ ನುಗು ಳಸುರಾರಿ ಮಾಯಾ । ಮೃಗವು ಮಾಡಿದ ಮರೆಯ ಮರುಕದ । ದುಗುಡದಲಿ ತಿರುಗಿ ದನು ತನು ಬಡವಾಗುತವನಿಯಲಿ ॥ ಮಗನೆ ಕೇಳೈ ಕುಶನೆ ಜನಕನ । ಮಗಳಿಗಾದಾ ಪತ್ತು ನುಳಿದೀ । ಜಗದ ಮನುಜರಪಾಡೆ ಲವ ಕೇಳೆಂದು ಮುನಿನುಡಿದ ॥೭೩॥

ಎಂಟನೆಯ ಸಂಧಿ ಸಮಾಪ್ತಂ.

ಒಂಬತ್ತನೆಯ ಸಂಧಿ.

ಸೂಚನೆ॥ ಧರಣಿಜೆಯ ಬಿರುನುಡಿಗೆ ಲಕ್ಷ್ಮಣ । ತೆರಳಿದಭಿಸಂಧಿಯಲಿ ಸೀತೆ । ತ್ತರಣೆ ಯನು ಕದ್ದೊಯ್ದು ನಡವಿಯಲಾ ದಶಗ್ರೀವ ॥

ಪದ್ಯ॥ ಕೇಳು ಲವ ಕುಶಕೇಳು ಕುಶಲವ । ಕೌಶಿಕದ ಮಾರೀಚನವಸಿಗೆ । ಬೀಳುತೊದರಿದ ಬೆದರಿದನಿ ರಘುಪತಿಯಾದನಿಯಂತೆ ॥ ಮೇಲುಡಿಯ ಬಿದ್ದುದು ವಿದೇಹ ನೃ। ಪಾಲಕನ ಕರ್ನಿಕೆಯ ಕರ್ನದೊ । ಳೋಲವಿಸಿದುದು ಮನವನಪಗತ ರಾಘವಾಲಾಪ॥೧॥ ಏಕೆಬೇಡಿದೆನಕಟ ಮೃಗವನ । ದೇಕೆ ಬಲುಹಿಂದೆನ್ನ ಗಂಡನ । ನೂಕಿದೆನೊ ಹೊನ್ನುರಿಯ ಬೆನ್ನಲಿ ಬಹಳ ಕಾನನಕೆ । ಏಕೆ ಮೈದುನನಂದ ಮಾತ ಸಿ । ರಾಕರಿಸಿದೆನು ಕೆಟ್ಟೆನೇ ವಿಧಿ । ಯಾಕರಣೆಗೊಳಗಾದೆನೇ ಹಾಯೆಂದಳಿಂದುಮುಖಿ॥೨॥ ಕೇಳಿದೈ ಸೌಮಿತ್ರಿ ಮಿತ್ರವಿ । ಶಾಲ ವಂಶೋದ್ಭವನ ವಚನದ । ಹಾಳಿಸನು ಹಾ ಸೀತೆ ಹಾ ಸೌಮಿತ್ರಿ ಯೆಂಬುದನು। ಓಲಗ ಸ್ಥಿರವಾಗದೆಲೆ ಭೂ । ಪಾಲನೇನಾದನೋ ಮಹಾಗ್ನಿ। ಜ್ವಾಲೆ ಜಠರದೊಳುಕ್ಕುತಿದೆ ತನಗೆಂದಳಿಂದುಮುಖಿ ॥೩॥ ನಡುಗಿಸನು ಸೌಮಿತ್ರಿ ತಾನಾ । ನುಡಿಯ ಕೇಳಿದು ಚಿತ್ತದಲಿ ಇ । ತ್ತಡಕೆ ಬಿದ್ದುದು ಬುದ್ಧಿ ಬುದ್ಧಿಗೆ ಸಂಶಯಾಲಾಪ ॥ ತೊಡಕಿಕೊಂಡುದು ಮನವನುತ್ತರ। ಗೊಡಲರಿಯದವನಿಜೆಗೆ ಕಂಗಳ। ಗುಡುಗುಪ್ಪಿಸುನಶ್ರುಗಳನವಸಿಗೆ ಬಾಗಿದನು ಶಿರನ ೪॥ ಅಕಟ ಲಕ್ಷ್ಮಣದೇವ ರಘು ನಾ। ಯಕನ ಮರಣದ ನುಡಿ ನಿನಗೆ ರಂ । ಜಕವೆ ರಾಘವನಳಿಯೆ ರಸಭಾವಕವೆ ರುಚಿಕರವೆ ॥ ವಿಕಳಗೊಂಡುದೆ ವಿಷಯ ನೆನ್ನಲಿ । ಯುಕುತಿಯಂತರವೇನು ಸಾಸ । ತ್ನಕೆ ವಿದೇತಕೆ ಸೊಗಸಿತಂದ್ಯೆ ಯೆಂದಳಿಂದುಮುಖಿ ।೫॥ ತಾಯೆ ಚಿತ್ತೈಸಕಟ ರಾಘವ । ರಾಯನಾರೆಂದರಿಯಲಾ ಮಾ । ಯಾಯುವಿನ ಮಾತ್ಯೆಸೆ ಮಾತಲ್ಲಿದು ಮಹೀಪತಿಯ ॥ ಮಾಯವನು ವಿಕ್ರಾದಿಪುರುಷರ । ಕಾಯವೆಂದರಿಯದೆ ವಿವೇಕ । ಸ್ಥಾಯಿ ತಾಮಸ ಬುದ್ಧಿ ನಿಮಗೇಕೆಂದನವನಿಜೆಗೆ ॥೬॥ ರಾಮನಳಿದರೆ ಕಮಲಭವ ಸು । ತ್ರಾಮರುಳಿವರೆ ದೇವಿ ಕೈರವ । ತಾಮರಸ ಬಾಂಧವರು ಬೆಳಗುವರೇ ನಭಸ್ಥಳವ ॥ ಈಮರುಚ್ಛಿಖಿ ಶರಧಿಯವನಿ । ಸ್ತೋಮವಿವು ಕಾಣಿಸುವವೇ ನರ । ಭಾಮಿನಿಯರೇ ನಿಮ್ಮ ಸೀವ್ರ ವಿಚಾರಿಸುವುದೆಂದ ॥೭॥ ಕೃತಕಮೃಗವಿದು ದೇವಿಕೇಳಾ । ಹುತಿಯ ಕೊಟ್ಟನು ನಿಶಿತ ತೋಮರ । ಹುತವಹಂಗದು ಬೀಳುತೊರಳಿದುದಾ ಸುರಾಂಗದಲಿ ॥ ಹತ ರಘುಕ್ಷಿತಿನಾಥನಲ್ಲ । ಸ್ಥಿತಿಗೆ ನಂಬುವುದೆನ್ನ ನಮಲಾ । ಚ್ಯುತನ ಭುವನಶ್ರುತನ ರಾಮನ ತೋರಿಸುವೆನೆಂದ ॥೮॥ ಅಕಟ ಲಕ್ಷ್ಮಣದೇವ ಪ್ರತ್ಯ । ಕ್ಷಕೆ ಪ್ರಮಾಣವದೇಕೆ ಪರಮಾ । ತ್ಮಕ ಪರಾಪರನೆಂದು ನೆರೆ ಬಾಯಾರಲೇಕಿನ್ನು ॥ ಯುಕುತಿಗಿದು ಮರೆಯಲ್ಲನೇ ಕಾ । ತುಕದ ಮಾತೇಕೆಮ್ಮೊಡನೆ ಸಾ । ಕಕಟ ಗಂಡನ ಕೊಂಡು ಬಾ ಹೋಗೆಂದಳವನಿಸುತೆ॥ ವಿಷವಕೊಂಬೆನು ತಾರದಿದ್ದರೆ । ವಸತಿಗರಿಯನು ಚಾಚಿ ಜೀವವ । ಬಿಸುಡುವೆನು ಬೀಳುವೆನು ಘಾತೋದಕದ ಕೂಪದಲಿ ॥ ರಸನೆಯನು ಕಿತ್ತನುವ ನಿನಗೊ । ಪ್ಪಿಸುವೆನೆಂದಾಕ್ಷೇಪ ಮುಖದು । ಬ್ಬಸದ ರೋಷಾವೇಶದಲಿ ಜರಿದಳು ಲಕ್ಷ್ಮಣನ ॥೧೦॥ ಬಗೆಯಲರಿದೆನು ನಿನ್ನ ಚಿತ್ತವ । ಬಗೆವಳಲ್ಲುಳಿದವರ ನಂನ್ಯರ । ಬಲೆಗೆ ಸಿಲುಕುವಳಲ್ಲ ಬಗವೆಯಲಾ ಮನಸಿನಲಿ ॥ ಸೊಗಸುವವಳಹುದಲ್ಲ ವೆಂಬುಜ್ಜುಗವ ನೀನೇ ಬಲ್ಲೆಯೆನೆ ಕರ । ಯುಗಳದಲಿ ಕಿವಿ ಮುಚ್ಚಿದನು ರಘುರಾಮರಾಮೆನುತ ॥೧೧॥ ತಾಯೆ ಕೇಳರೆ ಘಳಿಗೆ ಮಾತ್ರಕೆ । ರಾಮನನು ತಹೆ ತಾರದಿರ್ದಡೆ । ರಾಯನಂಘ್ರಿಗಳಾಣೆ ಪುಸಿವಡೆ ನಿಮ್ಮ ಪದದಾಣೆ ॥ ಈ ಯಡವಿಯಲಿ ತೊಳಲುವಸುರರು । ಮಾಯೆಯಲಿ ಬಲ್ಲಿದರು

ಬಹಳೋ | ಪಾಯ ಕುಶಲದ ಬುದ್ಧಿವಂತಿಗೆ ನಿಮ್ಮೊಳಿರಲೆಂದ || ೧೨ || ಅಣ್ಣನಾಜ್ಞಾ ಭಂಗಕಿದು ತಾ | ತಿಣ್ಣವೇ ದೇವಿಯರ ನುಡಿ ಮು | ಕ್ಕಣ್ಣನುಗ್ರಾಟೋಪದಂತಿರೆ ಕೋಪದುರುಬೆಯಲಿ || ಕಣ್ಣಳಿದ ಕಾಪಥದ ಪೊಲ್ಲಾ | ಬಣ್ಣಬಡುತಿದೆ ಬುದ್ಧಿ ಚಿಂತೆಯ | ಕಣ್ಣಿನಲಿ ತಾ ಕಟ್ಟವಡೆದೆನು ಶಿವಶಿವಾ ಯೆಂದ || ೧೩ || ಒರದು ಚಿಂತೆಯ ನಸಿದು ಸವು ವಿ | ಟ್ಟೆರಡು ಕೈತೂಕದಲಿ ಗಾಢಾ | ಗುರು ಲಘುತ್ವವ ನರಿದುವೆಸು ಬಲವೃತ್ತರವ್ರಯೆನುತ || ಹರಶರಾಸನ ಖಡ್ಗ ಕವಚವಧರಿಸಿ | ಧಾರಿಡವ ಶೃಕಣ ದು | ಬ್ಬರದ ಚಿಂತಾಭರದಲಿ ಹೊರವಂಟನಾಶ್ರಮವ || ೧೪ || ಕಾಯ್ದು ಕೊಂಡಿರಿ ಸತಿಯ ನೆಂದಭಿ | ವಾದನಂಗೈದನು ಮಹೀ ಸಲಿಲಾದಿ | ಭೂತಂಗಳಿಗುಳಿದ ದೇವ ಸಂತತಿಗೆ || ಮೇದಿನೀಶ ಬಹನನಿಬರನಿಮ| ಗೈದುವುದು ಭರಭಾರವೆಂದತಿ | ಭೇದದಲಿ ಕಾಲಿಕ್ಕಿದನು ಕಾನನಕೆ ಸಂಜೆಯಲಿ ||೧೫|| ಸುರರೊಂದು ತಕ್ಷಣದೊಳಾ ಸರ | ಸಿರುಹ ಮುಖಿಯನು ವೀತಿಹೋತ್ರನ | ಪುರಕೆ ಕೊಂಡೊಯ್ದಗ್ನಿ ಶುಚಿಯಹುದೆಂಬ ಶೃತಿ ಮತದಿ || ಇರಿಸಿ ವೈಶ್ವಾನರನ ಪುರದೊಳ | ಗುರುತರ ದೊಳೊಂದಂಶ ಮಾತ್ರವ| ನಿರಿಸಿದರು ಪರ್ಣಾಲಯದೊಳೆಲೆ ಲವನೆ ಕೇಳೆಂದ || ೧೬ || ಶಶಿಮುಖಿಯ ಪೊಂದಿ ಪರ್ಣದ| ವಸತಿಯೊಳಗಿರ್ದುದು ಕಣಾ ರಾ | ಕ್ಷಸರ ನಿರ್ಮೂಲನಕೆ ತಾನಿದು ಬೀಜ ವೆಂಬಂತೆ|| ಪಸರಿಸುವ ಲಾವಣ್ಯಲಹರಿಯ | ವಿಷಮುದುದ್ಭವರೂಪಿನಲಿ ರಂ | ಜಿಸಿದಳೈ ಜನಕಜೆಯ ನಾಮದೊಳಣುಗ ಕೇಳೆಂದ ||೧೭|| ಮನದ ಬಹಳಾಂದೋಳದಲಿ ಮಾ | ನಿನಿಯ ಬಿಡೆ ಬೀಸಿದನು ನಡೆತಂದನು | ಮಹಾರಣ್ಯದಲಿ ಮಾಯಾಮೃಗದ ಗತಿ ವಿಡಿದು || ತನುಜ ಕೇಳೀಚೆಯಲಿ ಖಳ ಸೂ| ತನಲಿ ಸಂದುದು ಬೇಹುನಿಕಷಾ | ತನುಜ ನವಯತಿಯಾದನಾಕ್ಷಣ ಕಪಟಕೌಶಲದ || ೧೮ || ಶಿರದ ಮುಂಡದ ಲಕ್ಷಮಾಲೆಯ | ಕರದ ದಂಡ ಕಮಂಡಲದ ಬಂ | ಧುರವ ಕಾಷಾಂಬರದ ಕೌಪೀನದ ಕಳೇಬರವ || ಜರೆಯ ಜರುಗಿದ ಬೆನ್ನಿನಲುಗುವ | ಶಿರದ ಶೂಲಿಯ ಸಟೆಯ ನಾಮ | ಸ್ಮರಣೆಯ ಲಿ ಮೈದೋರಿದನು ಮಾಯಾಮಹೀಸುತೆಗೆ || ೧೯ || ಇದೆ ದಿಲೀಪಾನ್ವಯನ ವಿಶ್ರುತ | ಸದನ ವಿಪ್ರಪ್ರಿಯನ ಗೃಹದಂ | ತಿದೆ ಮಹಾಧಾರ್ಮಿಕನ ಪುಣ್ಯಾಶ್ರಮವಿದೇಯೆನುತ|| ಮುವದ ತುದಿಯಲಿ ತೋರುತಿರ್ಪಾ | ಪದದವೊಲು ಪುಣ್ಯಾಂಗನೆಯ ನಘ | ಹೃದಯ ನೈದಿದನವಳ ಸಂಧ್ಯಾಸಮಯದಗ್ರದಲಿ || ೨೦ || ಮಾತಿದೆಲ್ಲಿಯದೆನುತ ಬಾಗಿಲ | ಲಾ ತಪೋಧನ ವೇಷದತಿ ಕಾ | ಮಾತುರನ ಕಪಟಾನ್ವಿತನ ಕಡುನರಕ ಭಾಜಕನ || ಪಾತಕನ ಪರಿಯರಿಯದಾ | ಭೂಜಾತೆ ಯತಿಯೆಂದೇ ಬಗೆದು ಸಂ | ಪ್ರೀತಿವಚನದಲಸುರ ಮುನಿಗಿಂತೆಂದಳುಚಿತದಲಿ||೨೧||ಅಹುದಿದೀಗ ಮಹೀಸುರಪ್ರಿಯ | ಗೃಹವು ಧಾರ್ಮಿಕ ನಿಲಯವಿದು ತಾ | ನಹುದು ನೀವೆಲ್ಲಿಂದ ಬಂದಿರಿ ಬಿಜಯಮಾಡೆನಲು || ಮಹಿಳೆ ಕೇಳ್ ಯಜಮಾನನಿಲ್ಲದ | ಗೃಹವು ನಮಗಸ್ವಾವ್ಯ ಸಂಧ್ಯಾ | ವಿಹಿತ ಕೃತ್ಯಕೆ ಸಾಕು ತಾವೆಮಗದುವೆ ಸೊಗಸೆಂದ || ೨೨ || ಬಿಜಯಮಾಡಿ ಗೃಹಾಂತರಾಳಕೆ || ಭಜಕರಾವ್ ನಿಮಗೈಸೆ ಭವದಾ | ತ್ಮಜೆಯಲಿ ಭಾವಿಸಲು ಕುಳ್ಳಿರಿ ಲೇಸುಮಾಡಿದಿರಿ || ವಿಜಯರಾಮ ನಗಲ್ಚಿ ಚಿಂತಾ | ರಜನಿಗಾದುದು ನಿಮ್ಮ ಪದ ಪಂ | ಕಜ ಪತಂಗೋದಯದ ಬೆಳಗೆಂದಳು ಸರೋಜಮುಖಿ || ೨೩ || ಮನದೊಳವನೀತನುಜೆ

ತನಗಹ ನೆನಹು ನೆಲೆಗೊಳದೆಂಬ ದೃಢನೆನೆ । ನೆನ ನೆನೆದು ಸಿಶ್ಚೈಸು ತೊಳ ಹೊಕ್ಕನು ದಳಾಲಯುವ ॥ ಜನಕಸುತೆ ಭಕ್ತಿಯಲಿ ದರ್ಭಾ । ಸನವನಿತ್ತು ಪಚರಿಸಿ ನಮ್ಮಯ । ಜನಕಬಂದವೊಲಾಯಿತೆಂದಳು ಮುಗಿದು ಕರಯುಗವ ॥ ೨೪ ॥ ಅವಕಡೆ ನಿಜವಾವ ದೇಶವ । ದಾವು ದಮುಲಕ್ಷೇತ್ರ ತೀರ್ಥದ । ಠಾವು ಕಾ ನಿಮಗೆಲ್ಲಿ ನಮ್ಮಾಶ್ರಮಕೆ ಬರವೇನು ॥ ನೀವು ವೃದ್ಧರು ನಿಮಗೆ ಶಿಶ್ರೂ । ಷಾವಲಂಬನ ವಿಲ್ಲವೆಂ ದತಿ । ಭಾವಭಕ್ತಿಯ ಉಪಚರಿಸಿದಳು ಕಪಟತಾಪಸನ ॥ ೨೫ ॥ ವಾಸವೆಮಗೇನಿದುತ್ತರ । ವಾಸವಾದುದು ನಮಗೆ ಪರಿಯಾಯ । ತಿಶರೀರವ ಸಲಹುನೆವು ಪ್ರಾರಬ್ಧಫಲ ವಿಡಿದು ॥ ದೇಶದೇಶವ ತೊಳಲಿದೆವು ಹಿಂ । ದೀಸುದಿನ ವಿನ್ನೊಂದು ಲಂಕಾ । ದೇಶವಿದೆ ಸಂಕಲ್ಪಸೀವೆಮಗೆ ಕಾಂತೆಕೇಳೆಂದ ॥ ೨೬ ॥ ಗಮನವಿಲ್ಲಿಗೆ ಗವಿಸಿದರೆ ನಾವ್ । ಸುಮನಸರಿಗಿಂ ದಧಿಕ ಕೇಳೆಲೆ । ಕಮಲಮುಖಿ ಕಾರ್ಯಾರ್ಥವಿದು ಸಮನಿಸೆ ಕೃತಾರ್ಥರೆಲೆ ॥ ಶ್ರಮವಳಿದು ದಿಂದಿನಲಿ ನಿಮ್ಮಾ । ಶ್ರಮಕೆ ಬಂದುದರಿಂದ ನೀನು । ತ್ರಮೆಯೆಲಾ ಪ್ರಿಯವಿದ್ದುದೆಮ್ಮಯಮೇಲೆ ನಿನಗೆಂದ ॥ ೨೭ ॥ ಎನುತ ಕಂಗಳಹರಹಿದನು ಕಾ । ಮಿನಿಯ ಕೋಮಲ ಕಾಯದಲಿ ತನು । ಮನಸಿಜೆಗೆ ಗುರಿಯಾಯ್ತು ಕಳವಳಿಸಿದುವು ಕರಣಚಯ ॥ ನೆನಹಿನನು ರಾಗಕೆ ಧರಿತ್ರೀ । ತನುಜೆಯಲಿ ನೆಲೆಯಾಯ್ತು ಯೋಗದ । ಬಿನುಗುಜಾರಿತು ಜಪವಜಿಹ್ವೆಗೆ ಜಾಡ್ಯತನವಾಯ್ತು ॥ ೨೮ ॥ ಅಡಗಿತಾಕ್ಷಣದಂಡಮೆಲ್ಲನೆ । ಪಡಿಲಿ ಹೊದ್ದಿತು ಕರಕಮಂಡಲ । ಬಿಡುಕುನಿಂದುದ ಬೆರಳ ನಾಮಸ್ಮರಣೆಗಳು ಹರನ ॥ ಸಿಡಿದು ಜಾರಿತು ಜಡೆಯಜಾಡ್ಯದ । ಕೊಡರು ಹರಿದು ವಯೋವಿಲಾಸದ । ಜಡೆಯ ತಾಪಸಿಯಾಗೆಮನದಲಿ ಹೆದರಿದಳು ಸೀತೆ ॥ ೨೯ ॥

ಮರಳಿ ಮರಳಿ ಮನೋ ವಿಕಾರದ । ಹರಹುಗುಂದದೆ ಪೀವಿಯರ ಸೌಂ । ದರಿಯುದಂಗೋಪಾಂಗದಲಿ ಹರಹಿದನು ಕಣ್ಮನವ ॥ ಅರರೆ ಮನ್ಮಥನೀ ಸತಿಯ ಲವ । ತರಿಸಿದನೊ ಶಿವ ಯೆನುತ ಮನದಲಿ । ಮರುಳುಗೊಂಡನು ಮೃತ್ಯುವೆಂಬುದ ನರಿಯದವ ಬಳಿಕ ॥ ೩೦ ॥ ನೆರೆವವೇ ಕಣ್ಣುನಾಲಿಗೆಗಳ ನಿ । ತರಲಿ ಶಕ್ರನೆ ಸರ್ಪರಾಜನ । ಮರೆಯುಮಾತೇಸೀ ಸತಿಯ ನೋಡುವರೆ ಹೊಗಳುವರೆ ॥ ಹೆರಯ ಹೆತ್ತನ ಹೊಕ್ಕುಳಲಿ । ಡುರುಬಿ ದಾತನ ಮಗಳಿಗಳುಪಿದ । ತೊರೆಯುವನ ಹೆಂಡಿರನು ಬಲ್ಲೆನು ಕಂಡು ತಾನೆಂದ ॥ ೩೧ ॥ ತಂಗಿ ತಪ್ಪದೆ ನುಡಿದಳೀ ಲಲಿ । ತಾಂಗಿ ಗೋಪ್ಯಗ ನಾಸಿಕದ ಒಲು । ಭಂಗ ಭಾವಿಸಲಳಿದ ರದರಿಂ ದೂಷಣಾದಿಗಳು ॥ ಹಿಂಗದಾ ಬಳಿವ್ಯಯ್ಯಳೆಮ್ಮನ । ಸಂಗ ಕೇಳಿಗೆ ತಂದುದಿದಕೆ । ಮ್ಮಂಘವಣೆ ಮುಂಚಿದರೆ ಮೂಜಗಕಧಿಕರಾವೆಂದ ॥ ೩೨ ॥ ಎಲೆ ಪಯೋಧರಭಾರೆ ಶಶಿಮುಂ । ಡಲಸಿಭಾನನೆ ಪೀನಜಘನ । ಸ್ಥಳೆ ಸರೋರುಹನಯನೆ ಸಿಂಧುರಗಮನೆ ಶುಕವಚನೆ ॥ ಲಲಿತಚಂದನಗಂಧಿ ಕೇಳೀ । ಗಳು ಮಹಾ ಮಾರೀಚನೆಂಬ । ಗ್ಗಳದ ಮಾಯಾಮೃಗದಲಳಿದನು ರಾಮನೆಂಬ ನೃಪ ॥ ೩೩ ॥ ಅತ ನಿನಗೇನಾಗುವನೊ ಸೀ । ನಾತಗೇನಹೆ ಹೊಲಬಿ ಗಿಂದವೆ । ಮಾತಿನಿಂದಲೆ ದಂಪತಿಗಳೆಂಬಂತೆ ತೋರುತಿದೆ ॥ ಏತಕಕಟಾ ಕಳಹಿಕೆಡಿಸಿದೆ ಶಾತಕುಂಭ ಕುರಂಗದೆಡೆಗಿ । ನ್ನೇತಕಾ ಮರುಳಾದೆ ಯೆನುತಾ ವಿಧಿಯ ಲಿಪಿಯೆಂದ ॥ ೩೪ ॥ ಹೋಗು ತಾತನಬಳಿಯಲೊಬ್ಬನು । ನೀಗಿದನು ನಿಜತನುವ ನಿನ್ನುಪ । ಭೋಗ ನಿನ

ಗೇನಿದ್ದುದೋ ಶಿವಶಿವಮಹಾದೇವ ॥ ಹೋಗಿಬರಲೇ ನಾವೆನುತಲನು । ರಾಗದಲಿ ನಿಂದಿರಲು ಕಾಮುಕ । ನಾಗದಿರ ನಿವನೆಂದು ಕಳವಳಿಸಿದಳು ಕಮಲಾಕ್ಷಿ ॥ ೩೫ ॥ ಏಳು ತವನಾ ಭಿಕ್ಷುವೇಷವ । ಬೀಳುಕೊಟ್ಟನು ತೋರಿದನು ದಶ । ಮೌಳಿಗಳ ಮದ ದುಬ್ಬುಗೊಬ್ಬಿನ ಬಾಹುದಂಡಗಳ ॥ ನೀಲಮೇಘ ನಿಭಾಂಗದೊಳು ದಂ । ಷ್ಟ್ರಾಳಿಗಳ ಮಣಿಕಾಂಚನದ ಮಕು । ಟಾಳಿಗಳ ವಿವಿಧಾಭರಣದಭಿನವದ ರೂಪಕದ ॥ ೩೬ ॥ ಸುರರ ಬಿರುದಿನ ಹಾಕೆಗಳ ಸುರು । ಚಿರದ ಶೋಣಾಂಬರದ ಜವ್ವನ । ಹೊರದ ಹೊಗರಿನ ವೀರರಸ ಜಡದೋರ್ವನೊಗರಸದ ॥ ಕರವಿಕಾರದ ಮನದ ನೋಟದ । ಗುರುವಿಕೆಯ ಲೀ ಮಾತನುಡಿದನು । ತರುಣಿ ನೋಡಾ ತನ್ನ ತಾನಾರೆಂಮಕೇಳೆಂದ ॥ ೩೭ ॥ ನಳಿನಮುಖಿ ಕೇಳಿನ್ನು ಭುವನಾ । ವಳಿ ಗಳೆನ್ನವು ಸಕಲ ದಿವಿಜಾ । ವಳಿಗಳೆನ್ನಯು ಬಂಟರೂರ್ವಸಿ ಮುಖ್ಯಸುರಕಲದ ॥ ಲಲನೆಯರು ತೊತ್ತಿರು ಸುರೇಂದ್ರನ । ಹೊಳಲ ಸುರತರು ಕಾಮಧೇನು ಗ । ಳೊಳಗು ಗೊಟ್ಟಹ ವೆನಗೆತನ್ನಯ ಹೆಸರ ಕೇಳೆಂದ ॥ ೩೮ ॥ ಚಂಡವಿಕ್ರಮ ನುರುತ್ರಿಲೋಕದ । ಗಂಡ ರಾವಣನೆಂಬ ಜಗದು । ದ್ದಂಡ ವೆನ್ನೈಶ್ವರ್ಯ ಕಜ ಹರಿ ಹರರು ಪಾಡಲ್ಲ ॥ ಕಂಡೆನೆನ್ನದೆ ಕಾಣೆನೆನ್ನದೆ । ಗಂಡ ಶೌರ್ಯನ ನೋಡು ನಿನಗಾ । ದಂಡಿ ಯುಳ್ಳವನೇ ವಿವೇಕಕೆ ಮನವ ಮಾಡೆಂದ ॥ ೩೯ ॥ ಪುರುಷರೊಳ ಗುತ್ತಮನು ನಾಂ ವರ । ತರುಣಿಯೊಳಗುತ್ತಮೆ ಕಣಾನೀಂ । ಸುರ ನರೋರಗ ಲೋಕದೊಳಗಿದು ಸುಪ್ರಸಿದ್ಧ ಕಣ ॥ ಸ್ಮರಕಣಾ ತಾರಕಿಕಣಾ ನೀ । ಮರುಳುಮಾತಿನ್ನೇಕೆ ನಡೆ ಸಂ । ಕರದ ಸಂಶಯವಿನ್ನದೇಕೆ ಲತಾಂಗಿ ಕೇಳೆಂದ ॥ ೪೦ ॥ ಚಲುವೆ ನೀನೆಂದರಿದು ಬೀಸಿದ । ಬಲೆ ಯಿದೀಗೊಟ್ಟೋಲೆ ಸುಸ್ಥಿರ । ವೆಲೆ ಮಹೀಸುತೆ ಕೇಳು ತನ್ನಿಂದಾವ ಭಯಬೇಡ ॥ ತಳಿರಡಿಗಳ ನ್ನಿತ್ತುಮೆಲ್ಲನೆ । ಚಲಿಸುವುದೆ ಸುಪ್ರೌಢಿ ಯೆನೆ ನಿ । ರ್ಮಲಪತಿವ್ರತೆ ತಾಯಿಕಡೆ ನುಡಿದಳು ಸರೋಷದಲಿ ॥ ೪೧ ॥ ಎಲವೊ ಪಾತಕಿ ಹೊಲೆಯ ಹೊರವಡು । ತಲೆಗಳಿವು ಯಿನ್ನುಳಿವುದಿಲ್ಲ । ಗ್ಗಳಿಯ ದೈವವ ಕೆಣಕಿ ನೀರಲಿ ನೆರೆವೆ ಹೋಗೆನುತ ॥ ನಳಿನಮುಖಿ ಹಲವಂಗದಲಿ ಬೈ । ದೊಳಗು ಗೊಡದಿರೆ ಕೋಪದಲಿ ಕಳ । ವಳಿಸಿ ಕಾಂತೆಯ ಕಬರಿಯನು ಹಿಡಿದೆಳೆದನಂಗನೆಯ ॥ ೪೨ ॥ ಬೇಡ ಬೇಡೆಂಬಂತೆ ಮರದ । ಲಾಡುತಿರ್ದುದು ನೆರೆದ ಖಗಕುಲ । ನೀಡಿರಿದು ನೆರೆದರಚಿ ಹ್ಯೊದುವು ಖಳನ ಮಸ್ತಕವ ॥ ನೋಡದವ ನಪಶಕುನ ಮುಖದಲಿ । ಜೋಡಿಸಿದ ನೆಳದ್ಯೊದು ರಥದಲಿ । ಕೂಡೆ ಹಾ ಹಾ ಲಲನೆಯಧ್ವನಿ ತುಂಬಿತಂಬರವ ॥ ೪೩ ॥ ಬಾಯ ಹ್ಯೊಲಿನ ಲಲನೆ ದಿಗು ಸಮು । ದಾಯಮಾರ್ಧ್ವನಿ ದೋರಲೊದರಿದ । ಆಯುತಾಕ್ಷನ ದುಷ್ಟಶಿಕ್ಷನ ಸುಜನ ರಕ್ಷಕನ ॥ ರಾಯ ರಾಮನವೈರಿ ಗಿರಿವ । ಜ್ರಾಯುಧನ ನುದ್ದಂಡ ತೊರವೆಯ । ರಾಯನನುಕರೆ ಕರೆದು ಮೊರೆಯಿಟ್ಟಳು ವಿದೇಹಸುತೆ ॥

ಒಂಭತ್ತನೆಯ ಸಂಧಿ ಸಮಾಪ್ತಂ.

ಹತ್ತನೆಯ ಸಂಧಿ.

ಸೂಚನೆ॥ ರಾಯ ದಶರಥ ಪರಮ ಬಂಧು ಜ। ಟಾಯುವನು ಗೆಲಿದಧಟ ರಕ್ಕಸ।ರಾಯ ಲಂಕಾಪುರವ ಹೊಕ್ಕನು ಜನಕಸುತೆಸಹಿತ ॥

ಪದ್ಯ॥ ಕುಶನೆ ಕೇಳಂಬರವ ನವಲಂ । ಬಿಸಿದು ದಸುರವರೂಥ ಬಾಯ್ಲಿ। ಬಸುರಿನಲಿ ಕರವಾಡಿದವು ಕುಂಭಿನಿಯ ನಂದನೆಯು ॥ ದೆಸೆದೆಸೆಗೆ ಬಾಯ್ಬಿಟ್ಟಳಮರ। ಪ್ರಸರದಲಿ ಮೊರೆಯಿಟ್ಟಳಿನಕುಲ। ದಸಮುವೀರನ ಕರೆಕರೆದು ಕಂಗೆಟ್ಟಳಾಸೀತೆ ॥೧॥ ಸೆಳೆವುತಿವೆ ಕಾಡ್ಗಿಚ್ಚು ಕಡು ಕೋ। ಮಲದ ಲತೆಯನು ಕೊರಳ ಹಿಡಿದೆಳೆ। ದುಲಿವುತಿದೆ ಹೆಬ್ಬುಲಿ ಸುಧೆನುವ ನಕಟ ಬಲುಕರಿಸಿ ॥ ಬಳಲುತಿದೆ ದುಷ್ಕೀರ್ತಿ ಕೀರ್ತಿಯ। ನೆಲೆ ರಘುಕ್ಷಿತಿನಾಥ ಬಿಡಿಸೈ। ಖಳನ ಸೆರೆಯಂಗನೆಯ ನೆಂದೊದರಿದಳು ನಳಿನಾಕ್ಷಿ॥೨॥ ರಾಮ ಬಿಡಿಸೈ ಖಳನ ಕುಲಸ್ಮರ। ಭೀಮ ಬಿಡಿಸೈ ರಾಕ್ಷಸಾನ್ವಯ। ಸಾಮ ಸುಭಟವ ಸಂಗದಳನ ಮೃಗೇಂದ್ರ ಬಿಡಿಸಕಟ ॥ ತಾಮಸನ ತಡೆಗಡಿದು ಭೂತ। ಸ್ತೋಮ ಕಣ್ಬಿಡಿಸೈ ನಿಶಾಚರ। ಕಾಮುಕನ ಕೈಸೆರೆಯ ಬಿಡಿಸೆಂದೊದರಿದಳು ಸೀತೆ ॥೩॥ ಕೇಳ ವಿಹುದುಚಿತವೆ ರಘುಕ್ಷಿತಿ। ಪಾಲ ನಿನ್ನಂಗನೆಯ ಭಂಗದ। ಮೇಲು ಹುಯ್ಯಲ ಕೇಳ್ದು ಮನುಕುಲದವರು ಕೊರತೆಗಳ ॥ ತಾಳುವರೆ ಸೈರಿಸುವರೇ ದು। ಶ್ಶೀಲಚರಿತರ ನಿರ್ಮೂಲಾವರ। ಲೋಲ ನಿನಗೇಕಕಟ ನಿಷ್ಕೃಪೆಯೆಂದಳಬುಜಾಕ್ಷಿ॥೪॥ ಜರೆದು ಕಳುಹಿದ ಳೆಂದು ಮನದಲಿ । ಕಿಲುಬು ತನವನು ಮಾಡೆಯಿದು ಧಿಟ । ಕೊರತೆ ಬಾರದೆ ನಿನಗೆ ಕುಲದಭಿಮಾನಭಂಗದಲಿ ॥ ಉರಿಸಲಹುದೇ ತಂದೆ ರಘುಕುಲ। ದೊರೆಯನನ್ಯನೆ ನಿನಗೆ ಸೀತೆಯ। ಸೆರೆಯ ಬಿಡಿಸೈ ತಂದೆ ಯೆಂದೊದರಿದಳು ನಳಿನಾಕ್ಷಿ॥ ೫ ॥ ಎಲೆ ವಸಂತನೆ ಚಂದ್ರಮನೆ ಚಾ। ಪಲ ಚಕೋರಿಯೆ ಮಾರುತನೆ ಮಾಂ। ದಳಿರೆ ಮನ್ಮಥನೆ ಮದಾಳಿಯೆ ಮತ್ತಕೋಕಿಲನೆ ॥ ಕುಲಯುತೆಯ ಕುಂಭಿನಿಯತನುಜೆಯ। ಕಲುಷರಹಿತೆಯ ಖಳಕುಲಾಧಮ। ಬಲುಕರಿಸಿ ಕೊಂಡೈದನೆಂದುಸುರುವುದು ರಾಮಂಗೆ ॥ ೬ ॥ ಬೇಡಿಕೊಂಬೆನು ನಿಮ್ಮನೀವ್ ಕೃಪೆ। ಮಾಡಲಾಗದೆ ಮಾನ್ಯರಲಿ ಮಾತಾಡಲಾಗದೆ ಸಕಲ ವನದೇವತೆಗಳಿರ ಪತಿಗೆ ॥ ಮಾಡಿತಿಲ್ಲಪರಾಧವನು ಹರಿ । ಕ್ರೀಡ ಖಡ್ಗ ಕುರಂಗಿನಳಿರೆಲೆ। ನಾಡೊಡೆಯ ರಾಮಂಗೆ ಹೇಳುವುದೆಂದಳಾ ಸೀತೆ ॥೭॥ ದಶವರೂಥ ಮಹಾಮಹೀಶನ। ಸೊಸೆಯ ಜನಕನ ಮಗಳರಾಮನ। ಶಶಿಮುಖಿಯ ನಪ್ರತಿಮ ಲಕ್ಷ್ಮಣದೇವ ನತ್ತಿಗೆಯ ॥ ಅಸುರ ವಂಶಾಧಮನ ದುಷ್ಟ । ವ್ಯಸನಿ ದುರಿತ ದುರಾತ್ಮನಪಹಿಯೊ। ಳಸವಳಿಸಿ ಕೊಂಡ್ಯೊದ ನೆಂದುಸುರುವುದು ರಾಮಂಗೆ ॥ ೮ ॥ ಕೇಳಿಸಿದುದಾ ನುಡಿ ವಿಹಂಗಮ। ಭಾಳನೇತ್ರನ ವೈರಿ ಸಮರಾ । ಭೀಳ ಚಂಚುಪುಟ ಪ್ರಹಾರನ ಪದನಖಾಯುಧನ ॥ ಕಾಲಶತವಿಕ್ರಮನ ರಘುನೃಪ। ಲೋಲುಪನ ರವಿಸೂತ ತನುಜನು ಬಿಡ। ದಾಲಿಸಿದ ನಾನನದ ನೆನೆಹಿನಲಾ ಮಹಾಧ್ವನಿಯ ॥ ೯ ॥ ಪದಗತಿಯ ಪಲ್ಲಟಿಸಿ ಪಕ್ಷವ। ಕೆದರಿ ಚಂಚುವ ಮಸೆದು ನಖಮುಖ। ದುಡಿಯ ಲವಸಿಯ ಝುಡಿದು ಝಾಡಿಸಿ ಝುಡಿತೆಯಲಿ ನೆಲವ ॥ ಒದೆದು ಹಾರಿದನಬುಧಿ ಯಬುಧಿಯ। ನೊದೆಯಿಸಮನಸ ಶೈಲಶಿರವನು। ಬಿದಿರೆ ಭೂತಳವದರೆ ಪದಹತಿ ಪಕ್ಷಘಾತದಲಿ ॥೧೦॥ ಅರೆ

ಲವೊ ಜಗದಂಬಿಕೆಯು ನಸು । ರಾವಿ ಪತ್ನಿಯ ಪರಮ ಋಷಿನೃಪ । ವೀರ ವಿಮಳ
ವಿದೇಹ ತನುಜೆಯ ಸುರುಪತಿವ್ರತೆಯ॥ ಚೋರತನದಲಿ ತಂದರಕ್ಕಸ । ನಾರು ಹೆಸರೇ
ನೆನುತ ತಾಗಿದ । ನಾರುಭಟೆಯಲಿ ನಭಕೆಲಂಘಿಸಿ ರಾವಣಾಸುರನ ॥೧೧॥ ಕಡಲ ಸುಳಿ
ಯಲಿ ಸಿಕ್ಕಿ ತಿರುಗುವ । ಹಡಗಿನಂತಿರೆ ಕಲಿಜಟಾಯುವಿ । ನೆಡಬಲದ ಪಕ್ಷಪ್ರತಾಪದ
ಮಾನಸುರುಬೆಯಲಿ ॥ ಬಿಡದೆ ತಿರುಗಿತು ತೇರು ಮರುಳು । ಗ್ಗಡದ ರೋಷಾವೇಶದಲಿ
ಗುಡು । ಗುಡಿಸುತೆರಗಿದ ನಾನಿಶಾಚರಪತಿಯ ಮಸ್ತಕವ ॥೧೨॥ ಚೆಲ್ಲಿದವು ದೆಸೆದೆಸೆಗೆ
ಗಗನದ । ಘಲ್ಲಡೆಯ ಉಡುನಿಕರ ಲಯದೊಳ । ಗಲ್ಲೊಗುವವೊಲ ಮುಕುಟಮಣಿಗಳ
ರತ್ನಬಂಧುರದ ॥ ತಲ್ಲಣಿಸಿದನು ತರಣಿವಂಶಜ । ನಲ್ಲಲೇ ಯೆನುತ ಸುರಖಗಕುಲ ।
ವಲ್ಲಭನು ಬೊಬ್ಬಿರಿದು ಬಳಿಕ ದಶಾಸ್ಯಗಿಂತೆಂದ॥ ಎಲವೊ ಕೂರ್ಮನ ಬೆನ್ನುಗಡಿದವ ।
ನಿಳಯಗತಿ ಹೊಕ್ಕಲ್ಲಿ ಹೊಕ್ಕಡೆ । ಯೆಲುವಮುರಿವೆನು ಹಣವನಾನೆಂದರಿಯಲಾ ನೀನು॥
ಕಲಿಜಟಾಯುಕಣಾ ನಿಶಾಚರ । ಜಲಧಿಬಡಬಾನಲ ಕಣಾ ರಿಪು । ನಳಿನವನಮದಗಜ
ಕಣಾ ಯೆನುತೆರಗಿದನು ಖಳನ ॥೧೩॥ ಧಿಟಕೆ ನೀನೆಂದೆಲವೊ ಸೀತೆಯ । ನಟಮಟಿಸಿ
ಕೊಂಡ್ಯೊವ ರಕ್ಕಸ । ಭಟನೆ ಹೋಗದಿರೆಲವೊ ಹೋದರೆ ನಿನ್ನ ತಲೆ ಹಲವ ॥ ಕುಟ್ಟಿ
ಕೊಂಬೆನು ನಿಲ್ಲೆನುತ ಲಾ । ರ್ಭಟಿಸಿ ಹೊಯ್ದನು ಮತ್ತೆ ಕುಲಗಿರಿ । ತಟನೊಳಗೆ
ಪ್ರತಿಶಬುದಗೊಳೆ ವಿಘುಧೇಂದ್ರರಿಪುರಥವ ॥ ೧೪ ॥ ತುಂಗಬಲ ನುರುಪಕ್ಷ ಹತಿಗೆ ರ ।
ಥಾಂಗವ ಜಿಗಿಜಿಗಿಯಾಯ್ತು ರಥದ ತು । ರಂಗ ತಲೆಕೆಳಕಾಗಿ ಕೆಡೆದವು ಕೆಡಹು
ತಂಭ್ರುಗಳ ॥ ಜಂಗುಜರಿ ದವನಿಜೆಯನೆಡದ ಕ । ರಂಗಳಲಿ ಹಿಡಿದವ್ರಂಕಿ ಖೇಚರ ।
ರಂಗದಲಿ ನೆಲಕಿಳಿಯ ಲಿಳಿದನುವೀರ ವಿಹಗೇಂದ್ರ ॥ ೧೫ ॥ ತೊಲಗು ಹಳಚಡಿ
ಹಳೆಯುಹದ್ದಿಗೆ । ಸುಲಭವೇ ತ್ರೈಲೋಕ್ಯವೀರನ । ಕಲಹವೆನುತಿದಿರಾಗಿ ಚಾಪಕೆ
ತೊಡಿಸಿ ಕೋಮರವ ॥ ತೊಲತೊಲಗು ತೊಲಗೆನುತ ವೈರಿಮ । ಪುಪ್ಪಳು ಗಲಗಲಕೆ
ಕೆದರಿ ಬಾಣಾ । ವಳಿಯ ಸುರಿದನು ಸುರಿವಕಡುಹಿನ ಕಾರಮುಗಿಲಂತೆ ॥ ೧೬ ॥
ತುರುಗಿ ದಂಬಿನವೈಯ್ಯ ವೈಯ್ಯು । ಬ್ಬರದಿ ಮುಳುಗೈದಾಡು ವಂತಿರೆ । ವುರುಬಿ
ಝಾಡಿಸಿ ಝಾಡಿತೆಯಲಿ ಮೆಲ್ವಾಯಿದು ರಿಪುಶಿರವ ॥ ತರಿದ ತುಂಡಿದಲಭ್ರಮಂಡಲ ।
ತುರುಬಿ ಮಂಡದಲೇಳ್ವತಲೆಗಳ । ತರಿದುತಿರಿಕಲ್ಲಾಡು ತಿರ್ದನು ವೀರವಿಹಗೇಂದ್ರ॥೧೭॥
ಉಗಿದುಬಳಿಕಸುರೇಂದ್ರ ಮಂದರ । ನಗನಿಭಾಂಡನ ವಜ್ರಮುಷು ರ । ಕೈಗಳ ಪಡಿ
ಮುಖವೊಳಗೆ ಲಾವಣಿಸಿದನು ಖಂಡೆಯವ । ಚಿಗುರಿದವು ತುದಿಗರಿಗಳದಕ್ಕೆ । ಮಗು
ಚುವನು ಖಡ್ಗದಲಿ ರಣರಭ । ಸಿಗರ ಘನವಿಕ್ರಮರ ರಣರಂಜಿಸಿತು ರಾತ್ರಿಯಲಿ ॥೧೮॥
ಮಾಡುವವು ತಲೆಹರಿದ ಗರಿಹೊರ । ಬೀಡಬಿಡುವುವ ಸುಭಟರಿಬ್ಬರ । ಗಾಢಕೆಯ
ಖಂಡೆಯದ ತುಂಡದ ತೋರತೋಟಿಯಲಿ ॥ ಆಡಲೇನದ ನಿಂದ್ರಜಂಭರ । ಜೋಡಿ
ಗಲಹವಿದೆನಲು ಗಗನದ । ಗಾಡಿಸಿದ ರಣರಭಸ ವಾರಣರಂಗಭೈರವನ ॥ ೧೯ ॥
ವಿಕಟನಿಷ್ಠುರ ಘಟ ಪ್ರತಾಪ । ಪ್ರಕಟ ಶೌರ್ಯರ ಪದಹತಿಗೆ ವಾ । ಸುಕಿಯುಹೆಡೆ
ಪೋಗರ್ಟಿಸಿದವು ಚಂಡಿಸಿದ ಶುದ್ಧದಲಿ ॥ ಭ್ರುಕುಟಿಬದ್ಧ ನಿಶಾಚರನಕಂ । ಟಕ
ವಿದಕಟ ವಿಚರನ ಘನಸು । ನ್ಯಕುತ ಕುಶಲಪ್ರೌಢಿ ಸಮುತಳಿಸಿತುಸುರಾಸುರರ ॥೨೧॥
ಎಲವೊ ರಾವಣ ಬೀಡಬಿಡು ಮೈ । ಥಿಲಿಯ ನನ್ನನವಧೂವ್ಯಸನವಲಿ । ಸಿಲುಕಿ ಸಿಕ್ಕಿಪ

ಕೀರ್ತಿ ಕಮಲಜನುಸುರು ಹನ್ನಬರ ॥ ತೊಲಗಲರಿಯದು ಮೇಲೆ ಸಿನ್ನಯ । ಬಳಗ
ವೆಲ್ಲವ ಕೊಂದು ದುರ್ಗತಿ । ಗಿಳಿಯಬೇಡಕಟಕಟ ಬಿಡುಸಾರಿದೆನು ನಿನಗೆಂದ ॥ ೨೨ ॥
ಕೇಳಿದೈ ಖಗರಾಜ ಖಡುಗದ । ಮೇಲೆ ಬಹರಾಭೈಸೆ ಕಲುಷಿತ । ದಾಲಯಕೆ ನಾವಂಜಿ
ವಳುಪಿದ ಬಳಿಕಪಸರತಿಗೆ ॥ ಕೋಳುಹೋಗಲಿ ಕೀರ್ತಿ ಬಿಡೆನೀ । ಬಾಲಕಿಯ ಸಿದು
ಸುಪ್ರಸಿದ್ಧ ಸು । ರಾಲಯವು ನಿನಗೆನುತ ಖಳನೆರಗಿದನು ಖಗ ಪತಿಯ ॥ ೨೩ ॥
ಸಿಡಿಲು ಸಿಡಿಲೆರಗುವ ವೊಲಿಬ್ಬರ । ಖಡುಗ ಚಂಚುಪುಟ ಪ್ರಹಾರವು । ರುಡಿಸು
ತಿರ್ದುದು ವೀರರಿಬ್ಬರ ಸಾಪೌರುಷದ ॥ ನಡುಗಿದನು ಖಳ ನವನಿಪತಿ ಮೇ ।
ಲುಡಿಯ ಬೀಳುವೆನೆಂದು ಮಾಯೆಯ । ನಡಪನೊಡ್ಡಿ ಜಟಾಯುವನಿಗಿಂತೆಂದ ನಸು
ರೇಂದ್ರ ॥ ೨೪ ॥ ಸಮಬಲರು ನಾವಿಬ್ಬರಿಬ್ಬರು । ಸಮರ ಮುರಿಯದು ಸೋಲ ಗೆಲ
ವಿವು । ಸಮನಿಸವು ಕದನದಲಿ ಧರ್ಮದಲೆಮ್ಮಮರ್ಮಗಳ ॥ ಪ್ರಮಿತವಚನದ ಲದುಸಿ
ದೊಡೆ ವಿ । ಕ್ರಮದ ಬಿಗೆಬಳಿಕರಿಯಬಹುದೆಂ । ಬಮರರಿಪುವಿನ ನುಡಿಗೆನಂಬುಗೆ
ವಿಡಿದ ನರುಣಸುತ ॥ ೨೫ ॥ ತಪ್ಪದೇ ತವವಚನವೆನೆ ಖಳ । ತಪ್ಪದೆನೆ ನಂಬುಗೆಯ
ಮೆಲುದಾ । ನಪ್ಪಿಕೊಂಡು ಖಗೇಂದ್ರ ಬಳಿಕಿಂತೆಂದ ನಸುರಂಗೆ ॥ ವೊಪ್ಪವೀ ಘನ
ಮೂಲಪಕ್ಷದೊ । ಳಪ್ಪುದೆನ್ನಸು ನಿನ್ನ ಜೀವದ । ತಪ್ಪುಗಂಡಿಯ ಕೋರಿಕೆಯ ತಳು
ವಿಲ್ಲದಸುರೇಂದ್ರ ॥ ೨೬ ॥ ಪರಸತಿಗೆ ಮನವಿಕ್ಕಿದವರಿನ್ನು । ನರಕಭಯಕಂಜುವರೆ
ತನ್ನಯ । ಚರಣತಳದಲಿ ಚಪಳತರಚೈತನ್ಯ ವೇದೆನಲು ॥ ನಿರುತವೆಂದೇ ಮಾಡಿ
ರಜನೀ । ಚರನ ಚರಣಕೆ ಲಾಗಿಸಲು ನಿ । ರ್ಭರದ ನಿಸ್ತ್ರಿಂಶಕದಲೆರಗಿದ ನಸುರ
ವರುಣಜನ ॥ ೨೭ ॥ ಕೆಳಗೆ ಬಿದ್ದವು ಪಕ್ಕ ಎಂದನು । ಕಳಚಿದದ್ರಿಯ ಪಕ್ಕ
ದಂತಿರೆ । ಬಳಲಿದನು ಬೊಂಬಾಳಿಸಿದ ಬಾಸರದ ರಕ್ತದಲಿ ॥ ಜಲರುಹಾಕ್ಷ ಜನಾರ್ದನ
ಶ್ರೀ । ನಿಳಿಯ ನೀನೇಗತಿಯೆನುತ ಬಸ । ವಳಿದು ಬಿದ್ದನು ಮಥನದಗ್ರದ
ಪೃಥುಳಗಿರಿಯಂತೆ ॥ ೨೮ ॥ ಹಾ ವಿಹಂಗಮರಾಜ ದಶರಥ । ಭೂವಧೂವರ
ಬಂಧು ಹಾ ಹಾ । ಮಾವ ಕೆಟ್ಟೆನೆನುತ್ತ ಹರಿ ತಂದರುಣ ನಂದನನ ॥ ಆವಿ
ಮುಕ್ತ ವಿಪಕ್ಷ ಶೋಣಿತ । ಜೀವನದ ಲುರೆಹೊರಳಿದಳು ತನ । ಗಾವಹದನ್ಯೆ
ಮಾವ ಮಾತಾಡೆಂದು ಶೋಕದಲಿ ॥ ೨೯ ॥ ಹಾಯಿದಳುಕಲು ಮೊಗನ ನಗಲಕೆ ।
ಬಾಯಿಬಿಟ್ಟೊರಲಿದಳು ರಾಘವ । ರಾಯ ನಭಿಮಾನವನು ಕಾಯ್ವವರಿಲ್ಲಲಾ
ಯೆನುತ ॥ ಕಾಯವನು ಕೆಡಹಿದಳು ಬಳಿಕಜ । ಟಾಯುವಿನ ಚರಣದಲಿ ಬಿಡ
ಜೇ । ಡಾಯುವನು ಕಂಡಲ್ಲದರಸನನೆಂದು ಶೋಕದಲಿ ॥ ೩೦ ॥ ಸಾಕು
ನಡೆ ಸಾವವರೊಡನೆ ಮಾ । ತೇಕೆ ಕೇಳು ಜಟಾಯುನಿನಗೆ ಸ । ವಿೀಕರಿಸುವನೆ
ಹೋಗಲು ನ.ವ್ ನಮ್ಮ ನಿಜಪುರಿಗೆ ॥ ಯಿಾಕೆಯುರವನು ಜಹುದು ಹುಸಿ ಸೀ । ನಾಕ
ನಿಳಯಕೆ ತೆರಳು ಜಂಬುಕ । ಕಾಕತತಿ ಗುಡುಗಾಡಿಸಿದ ಮುನ್ನೆಂದ ನಸುರೇಂದ್ರ ॥ ೩೧ ॥
ಕಳವಳಿಸಿದನು ಮೇಲುಹುಯ್ಯಲು । ಸುಳಿದುದಾದರೆ ಮಾಪ ಹೇಳಿದ । ಹೊಲಬು
ಹೊದ್ದದೆ ಮಾಣದೆನುತತಿ ಶೀಘ್ರಗಮನದಲಿ ॥ ಇಳೆಯ ತನುಜೆಯ ಕೊಂಡು ನಭ
ದಲಿ । ತಳರ್ದನವ ನಪರಾರ್ಧ ರಜನಿಯೊ । ಳಳವಳಿದು ಬಾಯ್ಬಿಟ್ಟಳಂಗನೆ ಬಹಳ
ಶೋಕದಲಿ ॥ ೩೨ ॥ ಗಿರಿಗಳಿರ ತರುಗಳಿರ ವನವ । ಲ್ಲರಿಗಳಿರ ಮೃಗಗಳಿರ ರಾಮನ ।

ತರುಣಿಯನು ರಾವಣನು ಕಳವಿನೊಳೊಯ್ದನೆಂಬುದನು ॥ ತರಣಿಕುಲಜಂ ಗರುಹ
ವುದು ಯೆಂ। ದರಸಿ ಭಾಳಸ್ಥಳದ ಕುಟ್ಮಲ। ಕರದ ಕರಣವ ಲೊದರಿದಳು ದೆಸೆದೆಸೆಗೆ
ಬಾಯ್ಬಿಡುತ ॥೩೩॥ ಬರಬರಲು ವರ ಋಷ್ಯಮೂಕದ। ಗಿರಿಯ ತುದಿಯಲಿ ಕಂಡಳತಿ
ಬಲ। ಹರಿಕುಲೇಂದ್ರನ ತರಣಿಸುತ ಸುಗ್ರೀವದೇವನನು । ಧುರವಿಜಯ ಹನುಮಂತ
ನೀಲಾ । ದ್ಯರು ಸಹಿತಲಿರೆ ಕಂಡು ಕಾರಣ । ಪುರುಷರಿವರಹರೆನುತ ಸಡಿಲಿಸಿದಳು
ವಿಭೂಷಣವ ॥೩೪॥ ಹಾರ ಕಂಕಣ ಕರವಳಯ ಕೇ। ಯೂರ ಕಾಂಚೀದಾಮ ನೂಪುರ।
ವೀರಮುದ್ರಿಕೆ ಮುಖ್ಯ ಮಣಿಭೂಷಣದ ವೇಲುದಿನ। ಸೀರೆಯಗ್ರವ ಸೀಳ್ದು ಕಟ್ಟಿ ಕ
ರಾಗ್ರದಲಿ ರಘುನಾಥ ಬರಲಿದ। ಸೇರಿಸುವುದೆಂದಿಟ್ಟಳಾ ಸುಗ್ರೀವನಿದ್ದೆಡೆಗೆ ॥ ೩೫ ॥
ಆವನು ಬೈತಿರಿಸಿದನು ಬಳಿಕಾ । ರವಿಜನಾ ಖಳನಂಜಿ ಮನದಲಿ। ತವಕದಲಿ ತೆರಳಿ
ದನು ತಾಗದೆ ಮಾಣರಿವರೆನುತ ॥ ಅವರ ವಂಚಿಸಿ ಹಾಯ್ದು ನಭ್ರಕೆ। ಸವೆದಸಿಶಿಯಲಿ
ನಿಶಿತಬಲ ಸಂ । ಭವನು ಕಂಡನುದಗ್ರಬಲ ಸಂಪಾತಿ ಖಳಸತಿಯ ॥ ೩೬ ॥ ಬಿಡು
ಬಿಡೆಲವೊ ಪರಾಂಗನೆಯ ಮೊರೆ। ಯಿಡುವ ಹೊಯ್ಯಲ ಕೇಳ್ದು ಸೈರಿಸಿ। ನಡೆವವರು
ನಾವಲ್ಲೆನುತ ಸುಪಾರ್ಶ್ವನಡ್ಡೈಸೆ। ತಡೆದ ಸೀತಸನಾತನರ ನಡ। ನಡುಗಿ ಮಾಯೆಯ
ನಾಶ್ರಯಿಸಿ ಕಾ। ಲಡಿಯನು ಸೀಳಿದು ಹಾಯ್ದನುದಧಿಯ ದಾಂಟಿ ನಿಜಪುರಿಗೆ ॥೩೭॥
ಪುರವ ಹೊಗಲಾಕ್ಷಣವಿ ನಿಳೆಬಾ। ಯ್ದೆರೆದು ಪೂರಲಿ ಶಿಲಾವೃತಿನೆ ಬೊ। ಬ್ಬಿರಿದಾ
ದಂಬರ ಕಾರಿತರುಣೋದಕದ ಧಾರೆಗಳ॥ ಮುರಿದು ಬಿದ್ದುವು ಸೌಧ ಬೀಸಿತು। ಬಿರುಬಿ
ನಲಿ ಬಿರುಗಾಳಿ ಬಾಗಿಲ। ಲೊದರಿದುವು ನರಿ ಹದ್ದು ಕಾಗೆಗಳಾ ಮಹಾಪುರದ ॥೩೮॥
ಆಗ ತಕ್ಷಣ ಮಯತನುಜೆ ವಿನ। ಯಾ ತತಿಗಳೊಡಗೂಡಿ ಬಂದು। ತ್ಪಾತ ಶತವನು
ಕಂಡವಳು ನೊಂದಾದಶಾಸ್ಯಂಗೆ ॥ ದಾಕರಿದು ಮೈವಳಿಯಲೇ। ನಯನೀತಿಯಲಿ
ಹೇಳಿದಳು ಧರಣೀ । ಜಾತೆಯನು ತಹುದುಚಿತವಲ್ಲೆಂದಾಪ್ತ ವಚನದಲಿ ॥ ೩೯ ॥
ಅಸುರನಿವನಾಸುರ ವಿಕರ್ಮದ । ಶಶಿವದನೆ ಬಲುವಿಡಿದು ಪತಿಕೈ । ವಶಕೆ ಸಿಲುಕಿದ
ಳೆಂಬ ಸಂತೋಷದ ಸಗಾಢದಲಿ ॥ ಪೊಸಗೆ ಮಿಗಲೈತಂದು ಹೊಕ್ಕನು। ವಸತಿಯನು
ವಸುಮತಿಯ ಸುತೆ ರಾ! ಕ್ಷಸರ ವಂಶಕೆ ಮೃತ್ಯುವೆಂಬುವ ಸರಿಯದಸುರೇಂದ್ರ ॥೪೦॥
ಉಚಿತವಿದು ನಿನಗಲ್ಲವೆಂದಾ। ಸಚಿವಪತಿ ನಯನೀತಿಯಿಂದಲೆ। ವಚನಿಸಿದ ನನ್ಯಾಯ
ವೆಂದನು ಕಲಿ ವಿಭೀಷಣನು ॥ ಪ್ರಚುರವಾಗಿಯೆ ಕೇಳು ರಾಕ್ಷಸ। ನಿಚಯಸುಕಹುದೆಂ
ದೊರಲಿದಳು ತಾ । ಯ್ಯಚನೆಗೆಡುವುದು ನಮ್ಮದೆಂದನು ಮಾಲ್ಯವಂತಖಳ ॥ ೪೧ ॥
ಆಹವಕೆ ಲೆಕ್ಕಿಸದವರ ನುಳಿ। ದವರು ಹೇಳಿದ ಮಾತ ನುರುವೈ। ಭವನನಾ ಸಪ್ತಾಂಗ
ಸಾಮ್ರಾಜ್ಯದ ಸಘಾಡಿಕೆಯ॥ ಅವನಿಜೆಗೆ ತೋರಿಸಲು ನೋಡದೆ। ನಿವಸನದ ಮುಸುಕಿ
ನಲಿ ಚಿಂತಾ । ರ್ಣವದೊಳಗೆ ಮುಳುಗಿರ್ದಳಾತ್ಮಪ್ರಿಯನ ನೆನಹಿನಲಿ ॥ ೪೨ ॥ ಪರಿ
ಪರಿಯ ಮಂತ್ರಿಗಳ ನಾನಾ। ಪರಿಯ ನಾನಾ ಲಲನೆಯರ ಬೋ। ಧರಿಗ ವೃದ್ಧಸ್ತ್ರೀ
ಜನಂಗಳ ಕೈಸ್ಯುಲವನಿಜೆಯ ॥ ಹರುಹಲರಿಯಲು ಮಾತನಾಡಿಸಿ। ತಿರುಹು ಮುರು
ಹಿನ ಲೊಬಬಡಿಸಿ ನಯ । ಸರವ ಕಾಣದೆ ಕಣ್ಗುರುಡನಂತಿರ್ದ ನಸುರೇಂದ್ರ ॥೪೩॥
ಶಾಪ ತನಗುಂಟಾಗಿ ಮನ್ಮಥ । ತಾಪಕಂಗವಸಿತ್ತು ಬಳಿಕವ । ನಾ ಪತಿವ್ರತೆಯನು

ನಿಶಾಚರ ಗುರುವಚನದಿಂದ ‖ ತಾಪವನು ಹಿಂಗಿಸುತ ಶೋಕೆಯ । ಕೋಪಿನಲಿ ಸರಮೆ
ತ್ರಿಜಟೆಯರ । ಕಾಪಿಸಿಂದಿರಿಸಿದನು ತೊರವೆಯರಾಯನಂಗನೆಯು ‖ ‖೪೪‖

ಹತ್ತನೆಯ ಸಂಧಿ ಸಮಾಪ್ತಂ.

ಹನ್ನೊಂದನೆಯ ಸಂಧಿ.

ಸೂಚನೆ। ಆದಿನಾರಾಯಣೀತನನುಪಮ । ವೇದಸಿದ್ಧನು ಜಗದ ನರರೋ । ಪಾದಿ
ಯಲಿ ಹಲುಬಿದನು ಹಲುವಂದದಲಿ ಜಾನಕಿಯ ‖

ಪದ್ಯ‖ ಕುಶನೆ ಕೇಳ್ ಮಾರೀಚರಾಕ್ಷಸ । ನುಸಿರು ಹಿಂಗಿದ ಬಳಿಕ ನೃಪ ಚಿಂ ।
ತಿಸುತ ತಿರುಗಿದ ನನುಜ ನವಸೀನಂದನೆಯ ದೆಸೆಗೆ ‖ ಸಸಿನವಾಗಿರದೇನು ಕಣ್ಕಂ ।
ಪಿಸುತಲಿದೆ ವಾಮದಲಿ ಸಲೆ ಸಂ । ಧಿಸದೆ ಮಾಣದಪಾಯ ವೆಮಗೆನುತರಸನೈತಂದ‖೧
ಬರಬರಲು ದುಶ್ಶಕುನಚಯ ಗೋ । ಚರಿಸಿದುವು ಸವ್ಯಾಪಸವ್ಯದ । ಲರಸ ನಿಶ್ಚೈಸಿ
ದನು ಬಹಳಾಪದದ ಪರಿಸರದ ‖ ಕೊರಗಿದಾನನದಶ್ರುಕಣದು । ಬ್ಬರದ ಖೇದದ
ವಾಮಕರ ಕಂ । ಧರದ ಬಿಲು ಬಡಿಕೋಲ ತಮ್ಮನ ಕಂಡ ಸಿದಿರಿನಲಿ ‖ ೨ ‖
ಅಕಟ ಗಂಟಲ ಕೊಯ್ದನಬುಜಾಂ । ಬಕಿಯನುಳಿದೇಕೆಯ್ದಿದನೊ ಜಾನಕಿಯ । ಜವ್ವನ
ಭರದ ವದನಾಲೋಕನಂಗೆಯ್ವ ‖ ಯುಕುತಿಯಲ್ಲೆಂಬೆಣಿಕೆ ಮನವನ । ನುಕರಿಸು
ತ್ತಿದೆ ಗಮನಜೇಷ್ಟಾ । ಪ್ರಕರದ ವೊಲೆಂದರಸ ಜಗ್ಗನೆ ಜರಿದಸಿದಿರಿನಲಿ ‖ ೩ ‖ ಈಗ
ಗವಿಸುವ ಪುರುಷನಿನಕುಲ । ನಾಗದಿರ ನೆಂದೀತ ಮನದಲಿ । ರಾಗಿಸಿದನಾ ಕಣೆಯ
ದಲಿ ಕೈಯೊಡನೆ ಜಾನಕಿಯ ‖ ನೀಗಿ ಬಂದುದ್ಮಳದ ಬೆದರಿನ । ಬೇಗೆಯಲಿ ಚೆಂಡಾಗಿ
ಶಿರವನು । ಬಾಗಿದನು ಬಿಸುಸುಯ್ದು ಕಂಗಳಸೀಂ ಧಾರೆಯಲಿ ‖ ೪ ‖ ಹೇಳು ಹೇಳೇ
ನಾಯನ್ತ ಜನಕ ನೃ । ಪಾಲಜೆಯ ಹದನೇನು ಹವಣಿನ । ಕೀಲಣೆಗೆ ತಾನೇನು ನುಡಿ
ಸೀನಂಜಬೇಡೆನುತ ‖ ಹೇಳಿದನು ದೇವಿಯರು ಪೇಳ್ದ ಕ । ರಾಳವಚನವನದರಿ
ನೆನ್ನನು । ಚಾಳುಕೊಡೆ ಬರವಾಯ್ತೆನುತ ಬೀಳಿಸಿದ ನಶ್ರುಗಳ ‖ ೫ ‖ ಕೆಡಿಸಿದೆಯಲಾ
ತಮ್ಮ ದುರ್ಘಯ । ದಡವಿಯಲಿ ಭುವಭರಿತ ವನಿಜೆಯ । ಬಿಡುವರೇ ಸಕಟಕಟ ಬಲ್ಲ
ವರೆಲ್ಲರಿಗೆ ನೀನು ‖ ಮಡದಿಯನು ಸಾವಿನ್ನು ಕಾಂಬುದು । ಕಡೆಗೆ ಹುಸಿ ಹೊಮ್ಮರಿಯ
ಮಾಯೆಯ । ತೊಡಕಿನಿಂ ಚಿತ್ತದಲಿ ತೋರಿದೆ ತಮ್ಮ ತನಗೆಂದ ‖ ೬ ‖ ಏನಹೆಳೋ
ವೈದೇಹಿ ದೈವಾ । ಧೀನ ಕಾವುದು ಹದನು ಸೀತಾ । ಮಾನಿನಿಯ ಮುಖಸಂದರುಶನ
ವಸಾಧ್ಯನಮಗೆನುತ ‖ ಜಾನಕಿಯ ಧ್ಯಾನದಲಿ ಚಿತ್ತ । ಜ್ಞಾನದಲಿ ಗತಿಗುಂದಿ ದಡ
ಪಿಯ । ಲೂನ ಹರುಹಿತನೈದಿದನು ನಿಜಪರ್ನಮಂದಿರವ ‖೭‖ ಕಳಕಳಲ್ದ ಹಿಮಾಂಶು
ಬಿಂಬದ । ಹೊಳಪಿನ ವೊಲಳಿಗಬ್ಬಿಗನ ಹೆ । ಕ್ಕಳದ ಕ್ರತಿಯವೊಲುಬ್ಬರದ ಜವ್ವನದ
ಜಾಣ್ಕೆಯೊ ‖ ಸುಳಿವು ಸಡಿಲಿದ ಸತಿಯ ರತಿಯವೊ । ಲಿಳಿಯನಂದನೆ ಸಿಲ್ಲದಾದಳೊ ।
ನಿಲಯವನು ಕಂಡಿವರು ಕಳವಳಿಸಿದರು ಕರುಣದಲಿ ‖ ೮ ‖ ಎಲೆ ಸುಮಿತ್ರಾಸೂನು
ಸೀತೆಯ । ಸುಳಿವು ನಿಲಯದೊಳಿಲ್ಲದಿದೆ ಕಂ । ಬೆಳಕು ಕಾಣಿಸದಿದೆ ಮದೀಯ ವಿಶಾಲ

ಭವನದಲಿ ॥ ಲಲಿತ ದರಹಸಿತಾನನಾಬ್ಜಾ । ಕಲಿತ ನಾನಾಃಶ್ವಾಸ ಪರಿಮಳ । ಸುಳಿಯು
ದಿದೆ ಸೀತೆಯನು ತೋರೈ ತಮ್ಮ ತನಗೆಂದ॥ ಇಲ್ಲದಿದೆ ಸುಳಿವನುಜ ಕೇಳ । ತ್ಫುಲ್ಲ
ನಯನೆಯ ನೋಟ ಘನಥಂ । ವಿಲ್ಲ ಭುಜಲಂಬಿಕೆಯ ಕೊಂಕಿದ ಕೊರಳಕೈತವದ ॥
ಭುಲ್ಲವಣೆಯ ವಿಲಾಸ ಮುಖನೆಂ । ವಲ್ಲಿ ತೋರದಿದೇನು ಸೀತೆಯ । ನೆಲ್ಲರಿಸಿ ನೀ
ಬಂದೆ ಹೇಳೈ ತಮ್ಮ ತನಗೆಂದ ॥ ೧೦ ॥ ಕಾಣದಿದೆ ಕಳಹಂಸಗಮನೆಯ । ಕೋರಿಕೆಯ
ಗತಿ ಕಂಗಳಿಗೆ ವೈ । ದೋರದಿದೆ ಲಾವಣ್ಯರುಚಿ ನಿಭಾನನೆಯ ॥ ಬೀರದಿದೆ ಸೌಭಾಗ್ಯ
ಸಾರದ । ಸೀರೆ ಸೊಬಗಿನ ಸಿರಿಯುದೇನೈ । ಮಾರುಮಾತಿಲ್ಲೇಕೆ ಹೇಳೈ ತಮ್ಮ ತನ
ಗೆಂದ ॥೧೧॥ ಉರಿದು ವಂಸಿಸಿಲ್ಲವನಿಜೆಗೆ ನಿ । ಷ್ಠುರತೆ ಜನ್ಮದೊಳಿಲ್ಲ ಗರ್ವದ । ಗರ
ಗರಿಕೆ ಮುನ್ನಿಲ್ಲ ಝುಡಿತೆಯ ಜೋಕೆತಾನಿಲ್ಲ ॥ ಹರುವಳು ಹರುಷವನು ತನ್ನಯ ।
ದರುಶನದ ಲೀಲೆ ತಮ್ಮ ಹೇಳ । ಚ್ಚರಿಯದೇನೈ ಕಾಣಬಾರಳು ಸೀತೆ ತನಗೆಂದ ॥೧೨॥
ಕನಕ ಮೃಗವನು ತಾರೆನೆಂಬೀ । ಮುನಿಸದೊಂದಿದೆ ತಮ್ಮ ತನ್ನಯ । ಮನದ ಸಂಶಯ
ವನು ನಿವಾರಿಸು ಹೊಗು ಗೃಹಾಂತರವ ॥ ಕನಕ ಮೃಗವನು ತಂದೆನೆಂದು । ವನಿತೆ
ಗನೃತವ ನುಡಿದು ಸೀತೆಯ । ನನಗೆ ತೋರೈ ಸಾಕು ಬಳಿಕ ಕೃತಾರ್ಥ ತಾನೆಂದ॥೧೩॥
ಭ್ರಮಿಸಿತೀತನ ವತಿ ವಿವೇಕದ । ನಯತ ಸಡಲಿತು ಸ್ಥೈರಣೆಯ ನಾ । ಕ್ರಮಿಸಿದುದು
ಮತಿ ಕಳವಳಿಸಿದುದು ಕರಣದಂಗದಲಿ ॥ ವಿಮುಖವಾಯ್ತಂ ವಕಟ ಸೀತಾ । ರವೆಪಲಾ
ಯನ ವಾಗದಿರಳೆಂದ । ಮರಿದನುತಾಪದಲಿ ಲಕ್ಷ್ಮಣ ಹೊಕ್ಕನೆಲೆಮನೆಯ ॥ ೧೪ ॥
ಹೊಗುತ ಲುತ್ತರ ಪೂರ್ವ ಪಶ್ಚಿಮ । ದಿಗು ವಿಭಾಗವ ನೋಡಿ ಕಾಣದೆ । ಮಗಿದು
ದಿನ್ನೇನೆನುತ ಮುಸುಕಿದ ಮನದ ಮರುಕದಲಿ ॥ ಒಗುವ ಕಂಬನಿಗಳಲಿ ಕಾಯದ ।
ಬೆಗಡಿನಲಿ ಬೆಳವಿಗೆಯ ಶೋಕದ । ಶಗಳಿಕೆಯ ಸಸಿಯಂತೆ ಲಕ್ಷ್ಮಣದೇವ ನಳವಳಿದ॥
ಏನನೆಂಬೆನು ರಾಘವಂಗಿ । ನ್ನೇನಹೇಳುವೆ ರಾಮಚಂದ್ರಂ । ಗೇನಮಾಡುವೆ ನಕಟ
ಮನುಕುಲ ಸಾರ್ವಭೌಮಂಗೆ॥ ಜಾನಕಿಯ ಹೋಗಾಡಿದವನು । ತಾನೆಲಾ ಹಾಯೆನುತ
ಮರುಗಿದ । ಸಾನಿಕೇತನ ಮಧ್ಯದಲಿ ಮಾಗಧಿಯ ಮಗ ಬಳಿಕ ॥ ೧೫ ॥ ಅಕೆ ಬಿಡದಳಿ
ಮನದಲಾ ಸೀ । ತಾಸತಿಯ ನಾ ದಕ್ಷಿಣಾಶಾ । ವಾಸದಲಿ ನೋಡಿದನು ಹರಿಣಾಜನದ
ಹಾಸದಲಿ ॥ ಆಸಟೋಜಾಂಬಕನ ರಾಣೀ । ವಾಸನನು ಕಾಣದೆ ಮಗುಳ್ದಾ । ವಾಸ
ವನು ಹೊರವಂಟು ಕೈಸನ್ನೆಗಳಲಿಲ್ಲೆಂದ ॥ ೧೬ ॥ ಅಹಮಾನಿನಿ ಯೆನುತ ಭೀತಿಗೆ ।
ಮೋಹಿ ಮೌಳಿಮನೊಲಿದು ಬಳಿಕಾ । ಗೇಹದಿಂದಪ್ಪಳಿಸಿ ಬಿದ್ದನು ರಾಮ ವರಾಭಿ
ಯಲಿ ॥ ಈ ಹದನ ಕಂಡಾಕ್ಷಣದೊಳು ವಿ । ದೇಹನೆರಡನೆಯುಳಿಯನಾ ವೈ । ದೇಹಿ
ಯರಸನ ಚರಣಸೀಮೆಯೊಳುಳುಹಿದನು ತನುವ । ೧೭ ॥ ಘಳಿಗೆ ಪರಿಯಂತರ ಮಹಿ
ಪತಿ । ಚಲಿಸದಿರ್ದನು ಕಳವಳವ ಕರಣ । ಲತೆ ತಾ ಕುಂದಿದುದು ರಾಮನ ತಾಪಶಿಖಿ
ಯೊಳಗೆ ॥ ತಿಳಿವು ಮರಿನೆಯ ಸುರತ ಸೌಖ್ಯದ । ಕಳೆಯ ಕಾಮಾತುರದ ಭಂಗಿಯ ।
ಬೆಳೆಸಿರಿಯ ಮತಿವಂತ ನಿರ್ದನು ಭ್ರಾಂತಿಯೋಗದಲಿ॥೧೮॥ ಬಮಲನೊಪ್ಪುವ ನೊಪ್ಪ
ಲಿಡುವನು । ನಯನದಲಿ ನಗೆನುಡಿಯ ಚದುರಿನ । ನಯವ ತೋರುವ ನಗುವ ನಾಲಿಂಗಿ
ಸುವ ಚುಂಬಿಸುವ। ನಿಯುತ ವಚನಪ್ರಣಯ ಫಲ ಸಂ । ಚಯದ ಸುರತಾಲಾಪರಸದಭಿ
ನಯವ ತನೆನ್ನೊಳಿ ಮೆರೆವನೆರಡಿಟ್ಟಾಮಹೀಪಾಲ॥೨೦॥ ಒಂದೆರಡು ನಾಲ್ಕೆಂಟ ರೆಣಿಕೆಯ

ನೊಂದಿದಾ ಸ್ಮರತಾಪ ದಾಭ್ರಮೆ । ಯಿಂದ ಬೆದರಿದ ಕಣ್ದೆರೆದು ಕಾಮಿನಿಯ ಕರೆ
ಕರೆದು । ತಂದೆನಿದಕೋ ಹೆಮ್ಮರಿಯನಿದೆ । ಯೆಂದು ಬಿಲ್ಲನು ಬಿಸುಟು ಬಾಗಿಲ ।
ಮುಂದೆ ಕರೆಕರೆ ದಂಗಲಾಚಿದ ನಾವ ಹೀಪಾಲ । ೨೧ ॥ ಎಲೆ ಸುಮಿತ್ರಾಸೂನು
ಕೇಳೀ । ನಿಲಯ ದೊಳಗಿಲ್ಲವನಿಸುತಿ ನೀ । ತಿಳಿದುಕೋ ಮನೆಯಲ್ಲವಿದು ನಾವ್
ತಪ್ಪಿಬಾರೆವೆಲೆ ॥ ನಿಲಯವಿದು ತಾನಮ್ಮದಾದಡೆ । ಸಖಿಯವಿಹಳಿಸೀತೆ ನೀನ ।
ಸ್ಖಲಿತ ಮೂರ್ಖನಲಾ ಮತಿಭ್ರಮೆಯಾಯ್ತು ನಿನಗೆಂದ ॥ ೨೨ ॥ ಅಹುದು ಜೀಯ
ಮಾನೀಯ ಪೂರ್ವದ । ಗೃಹವು ದಿಟದಿಟವೆಂದೆನಲು ನಿಜವಹುದು ಸೀತೆಯ ತೋರಿ
ದರೆ ನೀನೆಂದನುಡಿ ನವಗೆ ॥ ಸಹಜ ನೀ ಲಕ್ಷ್ಮಣನೊ ಕಪಟದ । ಸಹಭವನೋ
ನೀನಾರು ಸತ್ಯದ । ಲೋಹಿಮರ ಕುಲದವರವೊಲು ನಿರ್ಧರಿಸಿ ಹೇಳೆಂದ ॥ ೨೩ ॥
ದೇವರೊಡಹುಟ್ಟಿದನ ತಾನಹು । ದಾವಸಂಶಯವಿಲ್ಲವೆನೆ ನಿಜ । ವೇ ವಿದೇಹ
ಕುಮಾರಿಯನು ನಾವ್ ನಮ್ಮ ಪುರದಿಂದ ॥ ಈ ವಿಪಿನ ಕೊಡಗೊಂಡು ಬಂದೆವೊ । ದೇವಿ
ಯನು ನಾವಿರಿಸಿಬಂದೆವೊ । ಭೂವರನ ಮೇಲಾಣೆ ತಪ್ಪದೆ ಹೇಳುತನಗೆಂದ ॥ ೨೪ ॥
ತಂದೆವಾವ್ ದೇವಿಯರನಾದಡೆ । ತಂದೆವಿಲ್ಲಿ ವಿದೇಹಸುತೆ ರಘು । ನಂದನನು
ನಾನಹುದೋ ಪಲ್ಲಟವಾಗೆ ನೆಲೆನೋಡು ॥ ಯೆಂದೆನಲು ಕೈಮುಗಿದು ದಿಟರಘು ।
ನಂದನನು ನೀನಹುದೆನಲು ನಗು । ತೆಂದನಿದು ಹುಸಿಮಾತು ಮಾತಿನ್ನೊಂದು
ಕೇಳೆಂದ ॥ ೨೫ ॥ ಘನವನ ದೋತ್ಕಟ ಧಾರೆಯಿಲ್ಲದ । ವನವುದನ್ವಿಸವುಂಟೆ ತೀಕ್ಷ್ಣ ।
ವಿನುತ ದೀಧಿತಿ ಯಿಲ್ಲದಿನನುಂಟೇ ಜಗತ್ರಿನಲಿ । ವನಜವಿಲ್ಲದ ಕೊಳನು ವರವಾ ।
ಹಿನಿಗಳಿಲ್ಲದ ವಾರ್ಧಿ ಸೀತಾ । ವನಿತೆಯಿಲ್ಲದ ರಾಮನುಂಟೇ ಭೂಮಿಯೊಳಗೆಂದ ॥ ೨೬ ॥
ಜೀಯ ಚಿತ್ತೈಸಜ್ಞನೇ ನರ । ರಾಯ ತಾವ್ ನಿಮಗೇಕೆ ಸೀ ನಾ । ರಾಯಣನಲಾ
ನಿಮ್ಮ ನೀವು ಪಿಶಾಚಿಸೆಂದೆನಲು । ಮಾಯ ದಭಿರಂಜನೆಯ ನುಡಿರವು । ಣೀಯಪೇ
ಯೆಲೆ ತಮ್ಮ ದಿಟ ನಾ । ರಾಯಣನು ತಾ ನಾದ ಡಂಗನೆ ಯಿಲ್ಲವೇಯೆಂದ ॥ ೨೭ ॥
ಆದಡೆಲೆ ರಘುನಾಥ ಚಿತ್ತೈ । ಸಾದಿ ಲಕ್ಷ್ಮಿಯ ನವಸಿತನುಜೆಯ । ನೀದಿವಿಜ ಮಾನವ
ಭುಜಂಗಮ ಭುವನ ಮೂರರಲಿ ॥ ಸಾಧಿಸುವೆ ನಿಲ್ಲದಿರೆ ವಿಧಿಮೊದಲಾದ ದೇವರ ಹಿಂಡಿ
ಹಿಳಿವೆನು । ಕೈದುವಿದು ತಾನಿದ್ದು ಫಲವೇನೆಂದು ಗರ್ಜಿಸಿದ ॥ ೨೮ ॥ ತಡೆದರೆಂದೇ
ದೇವಧೈರ್ಯವ । ಹಿಡಿಯಲರಿಯದೆ ದೇವಿಯರು ನಟ್ಟಡವಿಯಲಿ ಬಿಡದರಸುತಿರ ಲಿತ್ರೆ
ದೇವ ನಮ್ಮನನು ॥ ತಡೆಯದಾದಿಗು ಗುಲ್ಮಲತೆ ಮರ । ಗಿಡು ಗಳಿರುಬಿನ ಲರಸಿ
ನೋಡುವ । ನಡೆಯಿರೆಂದಗ್ರಜನ ನಿಂದಿರಿಸಿದನು ಸೌಮಿತ್ರಿ ॥ ೨೯ ॥ ಮುಗುಳಿ ಮನಸಿನ
ಸಂಶಯದಲೆಲೆ । ದಗಡ ಹೊದಕೆಯ ಮನೆಯ ಹೊಕ್ಕನು । ಸುಗಿದ ಸುಯಿಲಿನ ಶಿಖಿಯ
ಬೆಳಗಿನ ಲರಸಿದನು ಸತಿಯ ॥ ಸೊಗಸ ಕಾಣದೆ ಧನ ತನುತ್ರವ । ತೆಗೆದು ಕೊಂಡರು
ತೆರಳಿದರು ಕ । ಪ್ಪೊಗುವ ಕತ್ತಲೆಯೊಳಗೆ ಕೈಗೊಳ್ಳಿಗಳ ಬೆಳಕಿನಲಿ ॥ ೩೦ ॥ ಅರಸಿ
ದರು ತಾವಿದ್ದ ತಾಣದ । ತೆರವುಗಳ ತರು ಗುಲ್ಮಲತಿಕೆಗ । ಳುರುಬಿನಲಿ ಕಿನ್ನರಿಯ
ನಾಡಂಬೊಲನ ಸೀಮೆಯಲಿ ॥ ಮರುಕೊಳಿಸಿ ಮತ್ತೊಂದು ಮನೆಯೊಳ । ಗರಸಿ
ಕಾಣದೆ ಕಂಬನಿಯ ಕ । ಟ್ಟೊರತೆಯಲಿ ಕರೆಕರೆವುತೈ ತಂದರು ವನಾಂತದಲಿ ॥ ೩೧ ॥
ವಿವಿಧಗುಲ್ಮ ನಿಕುಂಜದಲಿ ಭೂ । ವಿವರ ನಿಳಯಂಗಳಲಿ ಭೂರುಹ ನಿವಹದಲಿ ನಿರ್ಜರ

ನಿಕುಂಚಿತ ಪಲ್ಲವಂಗಳಲಿ ॥ ಪವನ ನಿಸ್ವನ ಪರ್ಣ ಘನಪ್ರ । ಸ್ರವಣ ಧಾರಾಧ್ವಾನ ಖಗ ಮೃಗ । ನಿವಹ ನಾದದಿ ಸಿಡಿರದು ನೋಡಿದರು ಜಾನಕಿಯು ॥ ೩೨ ॥ ಮುನಿ ಮುನಿಗಳಾಶ್ರಮದ ವಿಮಲಾಂ । ಗನೆಯರಲಿ ವನವೀಧಿಯಲಿ ಕುಮು । ದಿನಿ ಕುಶೇಶಯದುದುರು ತಟಾಕಂಗಳ ತಟಂಗಳಲಿ ॥ ಮುನಿಗಳಿದ್ದೆಡೆಗಳಲಿ ತರುಸಂ । ಜನಿತ ಭೇದದ ಘನವಿಷಾದದ । ಮನವ ಮನುಕುಲ ರಾಜಸೂನುಗಳರಸಿದರು ಸತಿಯು ॥ ೩೩ ॥ ವನಜವನು ಕಂಡರಸ ವನಜಾ । ನನೆಯ ಕಂಡಿರೆಯೆಂದು ಕೈರವ । ವನು ನಿರೀಕ್ಷಿಸಿ ಕೈರವಾಕ್ಷಿಯ ಕಾಣಿರಲೆ ಯೆನುತ ॥ ವಿನುತ ಕೋಕವ ಕಂಡು ಕೋಕ । ಸ್ತನಿಯು ಕಂಡಿರೆ ಯೆನುತ ಬೆಸಗೊಂ । ಡನು ಮದಾಳಿಯ ಕಂಡು ಕೇಳಿದ ನಳಿಕುಲಾಲಕಿಯು ॥ ೩೪ ॥ ಕಂಡು ಹಂಸೆಯ ಹಂಸಗಮನೆಯ । ಕಂಡು ದುಂಟೇ ಯೆಂದು ಕೋಗಿಲೆ । ಗಂಡು ಕೋಕಿಲ ಲಲಿತನಿನದೆಯ ಕಾಣಿರಲೆಯೆಂದು ॥ ಮಂಡಲಿಯ ಮಧುರಧ್ವನಿಯ ಗಿಳಿ । ವಿಂಡಿನಲಿ ಕಲಕೀರವಚನದ । ಹೆಂಡತಿಯ ನೀವ್ ಕಾಣಿರಲೆ ಯೆಂದರಸ ಬೆಸಗೊಂಡ ॥ ೩೫ ॥ ಎಲೆಹರಿಣ ಹರಿಣಾಕ್ಷಿಯನು ಕರಿ । ಕಳಭನೇ ಕರಿಕುಂಭಕುಚವಂ । ಡಲೆಯ ನಾ ಹರ್ಯಕ್ಷ ಬಡನಡುವಿನ ನಿತಂಬಿನಿಯ ॥ ವ್ರೊಲುವೆಕಾತಿ ರಸಾತಿಶಯ ನಿ । ರ್ಮಳೆಯ ಸಂಭೋಗಪ್ರವೀಣಾ । ಕಲಿತ ಕೌತೂಹಲೆಯ ಕಂಡಿರೆ ಶೋರಿ ನಮಗೆಂದ ॥ ೩೬ ॥ ಎಲೆಲೆ ಮಾಲತಿ ಜಾತಿ ಕೇತಕಿ । ಗಳಿರ ನೀವಾಮೋದ ಭಾರಾ । ಕಲಿತ ಲಲಿತ ಸ್ಮಿತಲತಾಂಗಿಯ ತುಂಗಕುಚಭರೆಯ ॥ ಸುಳಿವ ಕಾಣಿರೆ ನೀವ್ ಸುಧಾರಸ । ಬಿಂಬಾಧರೆಯ ವೇಣೀ । ವಿಲಸಿತೆಯ ಲುಳಿತಕಟಾಕ್ಷೆಯ ಕಾಣಿರಲೆಯೆಂದ ॥ ೩೭ ॥ ಬದರಿ ಬಿಲ್ವ ತಮಾಲ ವಟ ಹಿಂಗುದ ಕಪಿತ್ಥ ವಶೋಕೆ ಕುರುವಕ । ಕದಳಿ ಖರ್ಜೂರಾಮ್ರ ಜಂಬು ಕದಂಬ ದೆಡೆಗಳಲಿ ॥ ಚದುರೆಯನು ಚಪಲಾಕ್ಷಿಯನು ಮೃಗ । ಮದ ಸುಗಂಧಿಯ ಮಾನಗುಣಸಂ । ಪದೆಯ ಸೀತೆಯ ಕಂಡುದುಂಟೇಯೆನುತ ಬೆಸಗೊಂಡ ॥ ೩೮ ॥ ಕೆದರಿ ನೋಡಿದ ರುದುರಿ ದೆಲೆಗಳ । ಹೊದರುಗಳ ಲತೆಯೋವರಿ ಗಳೊಳು । ಬೆದಬೆದಕಿ ನೋದಿದರು ನೋಡಿದರಾಮ್ರಪಲ್ಲವದ ॥ ಕದಳಿ ಖರ್ಜೂರಾದಿ ತರುಗಳ । ನುದುಹಿ ನೋಡಿದ ನಬುಜದಲರನು । ಕೆದರಿ ನೋಡಿದ ಸುದಿತ ವಿರಹ ಭ್ರಮೆಯ ಲವನಿಜೆಯ ॥ ೩೯ ॥ ಮಿಸುಪ ಚಂದ್ರೋತ್ಪಲದ ಲುರಬಿಂ । ಬಿಸುವ ತನ್ನುರು ರೂಹನೇತ । ನ್ನರಸಿಯೆಂದೇಮಾಡಿ ಮಾತಾಡಿಸಿದ ನಡಿಗಡಿಗೆ ॥ ಶಶಿಮುಖಿಯೆ ಮುಖತೋರಿಸಾ ಪೋ । ಭಿಸುವ ದರ್ಪಣಮುಖಿಯೆ ಮುಖದೋ । ರಿಸಿ ಬಳಿಕ ಸಲಹೆಂದು ಕರುಣವ ತೋರಿದನು ರಾಮ ॥ ೪೦ ॥ ಸೀತೆ ಸೀತೆ ಸಮುದ್ರವಸನಾ । ಜಾತೆ ಜಾನಕಿ ಜನಕನೃಪಸಂ । ಭೂತೆ ಪೋ ಪೋ ಯೆನಲು ಬಾರದೆ ಕರುಣವಿಲ್ಲದಲೆ । ಏತಕಕಟಾ ತನ್ನ ನೀಪರಿ । ಧಾತುಗೆಡಿಸುವುದುಚಿತವೇ ಸಂ । ಪ್ರೀತಿವಚನದ ರಚನೆನಮ್ಮೊಳಗಿಲ್ಲಲಾಯೆಂದ ॥ ೪೧ ॥ ಹಸಿದ ಬಳಲಿಕೆಯೊಂದು ಹೆಮ್ಮರಿ । ಹುಸಿದ ಬಳಲಿಕೆಯೊಂದು ಕಷ್ಟಾ । ಯಸದ ವಿಪಿನ ಭ್ರಮಣ ದಗ್ಗದ ಬಳಲಿಕೆಯದೊಂದು ॥ ಎಸಗದಿಷ್ಟಾ ಸತಿಯದರುಶನ । ದೆ ಸಕ ದಾಸೆಯುಲಾಸೆಯುಳವಿನ । ಲೆಸಗಿದುದು ಕುಶ ಕೇಳು ಕುಸುಕಿರಿದುದು ಕಕುಸ್ಥ ಜನ ॥ ೪೨ ॥ ಕನಕು ಕಳವಳ ಬೆದರು ಭ್ರಮೆ ಭಾ । ವನೆ ವಿವೇಕ ವಿಲಾಸ ವಿಕಳ । ಸ್ಖಲಿತ ತಾಪಶ್ರಮಗತಶ್ರಮ ಚಿಂತೆ

ಸಂತೋಷ || ಇನಿತು ಸಂಧಿಸಿದವನಿಪನ ಕಂ | ಡನುಜ ವನದಲಿ ಬೆದರಿ ಮರುಗಿದ | ನನುಗತದ ಶೋಕದಲಿ ಸೂಸುವ ನಯನ ವಾರಿಯಲಿ || ೪೩ || ವಿಷಮಶರ ವಿರಹಾಗ್ನಿ ಮಿಗೆ ಪೀಡಿಸು | ತಲೇ ಬಳಿಕಂಗದಲಿ ಭಾ | ರಿಸಿತಲ್ಲೈ ಸೀತಾಪ್ರಲಾಪದಿ ಭಾರಿ ಪರಿತಾಪ || ಪಸರಿಸುವ ತಂಬೆಲರು ಪರಿದೂ | ಷಿಸಿತಲ್ಲೈ ಮುಗ್ಗುಲಲಿ ನೆಲನುರಿ | ಮಸಗಿದುದಲ್ಲೈ ಕಂದಕೇಳ್ ನರರಂದ ದಚ್ಯುತನ || ೪೪ || ತಾಪ ಬಲುಹಿನ್ನೇನ ಮಾಡುವೆ | ನೀಪರಂತಪ ಪುರುಷ ರವಿ ಗಳ | ಟಾ ಪುರಂಧ್ರಿಯ ವಿರಹಶಿಖಿ ವೇಢೈಸಿತೇ ಯೆನುತ || ಆ ಪುರಾತನ ಶ್ರೀಮನಾ ನರ | ರೂಪಕದ ನಾರಾಯಣಗೆ ಶೈ | ತ್ಯೋಪಚಾರವ ಮಾಡುವೆನು ತಾ ನೆನುತ ಮನದಂದ || ೪೫ || ಬಾಳೆಗಳ ಬಿಡುದಳದ ನಳಿನ ಮೃ | ಣಾಳವಡಿಕಿಲು ವಾಸಿನಲಿ ಭೂ | ಪಾಲಕನ ನೂಕಿದನು ಹಿಮಕರ ಕಾಂತದೊಸರಿಕೆಯ || ಕಾಲುವೆಯ ತಿದ್ದಿದನು ಕರ್ಪುರ | ವಾಳಿಯುಲಿಯಲಿ ಬೀಸಿದನು ಬಿರು | ಘಾಳಿಗೆದ್ದುರಿಯಂತೆ ಹೆಚ್ಚಿತು ಮತ್ತೆ ವಿರಹಾಗ್ನಿ || ೪೬ || ಸೀದವಾ ಮುಗ್ಗುಲಿನ ಮೈಯ್ಯಲಿ | ನೈದಿಲಿನ ತಾವರೆಯ ಕದಳಿಕೆ | ನಾಡಿಕೆಯ ನಾಳಂಗಳುರಿ ನೊರೆಗುದಿಯ ನಬುದದಲಿ || ಕಾದು ಕುದಿದುಮುಕ್ಕಿದುದುಘನ ಶೈ | ತ್ಯೋದಕದ ಧಾರೆಗಳು ನೆರೆಬೆಂ | ಡಾದ ನುಪಚರಣೆಯಲಿ ತಪನ ನಿಜಾನ್ವಯಾಧಿಪನ || ೪೭ || ಸೀತೆ ಸೀತೆ ಸರೋರುಹಾನನೆ | ಸೀತೆಸೀತೆ ಸರೋಜ ಲೋಚನೆ | ಸೀತೆಸೀತೆ ಸರೋಜಪರಿಮಳೆ ಯೆಂಬನಾಲಿಗೆಯ || ಮಾತು ಮುಗಿಯದೆ ಮನದಮನುಕೂಲ | ಜಾತನಿರೆ ಮೈದೋರಿದುದು ಪುರು | ಹೂತ ದಿಗ್ಭಾಗದಲಿ ಮಂಡಲವಾ ಹಿಮಾಂಶುವಿನ || ೪೮ || ತೋರೆ ಕಂಗಳಿಗಿಂದು ತನು ಕಾ | ಹೇರಿದುದು ಕಂದರ್ಪನಡ್ಡಣ | ಬಿರುಬುಗಳ ಬಿಡುಗಡೆಯ ಬಿರುದರ ಮನಕೆ ರಂಜಕನೆ || ತೋರಿದಂಗದ ಭಟನ ಖಂಡೆಯ | ದೇರಿನವರಿಗೆ ಸುಖತರವೆ ಹದಿ | ನಾರು ಕಳೆಯಣ್ಣಾನ ಘುಡಾವಣಿಯಣುಗಕೇಳೆಂದ || ೪೯ || ಕಿರಣವಿವು ದಾವಾನಲನ ಧ | ಳ್ಳುರಿಯ ಪೋಲ್ಮೈದೋರಿದವು ಮೊಗ | ಮುರಿದು ನೋಡಿದ ನನುಜನನು ಘನತರದ ತಾಪದಲಿ || ತರಣಿಯುಗ್ರಿಕೆ ತನುವಿದಕಟಾ | ತರಹರಿಸುವುದೆ ತಮ್ಮ ನೀನಿ | ಷ್ಕರುಣಿಯೈ ನೆಳಲಿಂಗೆ ಕೊಡೊಯ್ದೆನ್ನನಿರಿಸೆಂದ || ೫೦ || ತರಣಿಯಲ್ಲಿಲೆ ಜೀಯ ಶಶಿಯವ | ತರಣಿಯೈಸೆ ನಸುನಗುತ ಹಿಮ | ಕಿರಣಗುಂಟೇ ಚಟುಲತರ ಚಂಡಾಂಶುವೆಂದೆನಲು || ತರಣಿಕುಲ ಚಿತ್ತೈಸು ನುಡಿಗಪ | ಸರಣೆಯುಂಟೇ ತನಗೆನಲು ಹಿಮ | ಕಿರಣ ನಾದಡೆ ಕುರುಹದೇನೆಂದರಸ ಬೆಸಗೊಂಡ || ೫೧ || ಕಂಗಳೀಕ್ಷಿಸ ಲಮೃತಕರ ನು | ತ್ತುಂಗ ಬಿಂಬವದದರ ನಡುವೆ ಕು | ರಂಗವಿದೆ ಕುರುಹೀ ಜಗತ್ರಯಕರಸ ಚಿತ್ತೈಸು || ಹಂಗಿಗನೆ ಹುಸಿಯೆನಲು ನೋಡಿ ಕು | ರಂಗವನು ಕಂಡರಸ ಬಾಲಕು | ರಂಗಲೋಚನೆ ಹಾ ಯೆನುತ ಹಮ್ಮೈಸಿದನು ಧರೆಗೆ || ೫೨ || ಧರಣಿಪತಿ ಚಿತ್ತೈಸು ಸಾಕಿ | ನ್ನಿರಲಿ ಚಿತ್ತದಲರಿಕೆ ಸೀತೆಯ | ಪರಿಯನುದಯ ದೊಳರಿಯುದಿರೆ ಬಳಿಕೀಜಗತ್ರಯುವ || ಜರುಗಿಸುವೆನು ಮಹೋಜ್ವಲರ ನಜ | ಪರ ಸುರೇಂದ್ರ ಯಮಾದಿಗಳ ಗಡಿ | ಗರಳನುಚರ್ರವೆ ನೆಚ್ಚರಿಯ ಬೀರುವೆನು ಜಗಕೆಂದ || ೫೩ || ತೋಳಬಲುಹಿದೆ ಬೀಯದಿವ್ಯ ಶ | ರಾಳಿಯಿದೆ ಮೃತ್ಯುವಿನ ಬಲುಗೋ | ನಾಳಿಗೌಕದ ಖಡುಗ ವಿದೆ ಕರಜದಲಿ ಖಾತಿಯದೆ ||

ನಾಳಿನುದಯದಲಿ ವಿಮಲ ವಿ । ಶಾಲನೇತ್ರೆಯ ಸುದ್ದಿಯನು ಕಿವಿ । ಗೇಳಿಸದಿ
ರಾನೇಕೆಯನುತಾ ಕಾರ್ಮುಕವ ನೊದರಿಸಿದ ॥ ೫೪ ॥ ನಡುಗಿ ತವನೀತಲ ಮಹೋ
ದಧಿ । ಯಡಿಮಗುಚಿದುದು ಮೇರು ಮಂಡೆಯ । ಕೊಡಹಿಕೊಂಡುದು ಕಳವಳಿಸಿಕುದಿ
ದುದು ನಗರನಿರ್ಜರರ ॥ ಸಿಡಿದು ದಣ್ಣನಸತಿಯ ವಿರಹದ । ಕಡುಹು ತತ್ಕಾರ್ಮುಕದ
ಜಿಲುದನಿ । ಗಡಿ ಮುಗುಚಿದುದು ಧೈರ್ಯ ತನವಿನಲಾ ಕಕುಸ್ಥಜನ ॥ ೫೫ ॥ ಇದು
ಕಣಾ ಜಾನಕಿಯ ನೊಯ್ದವ । ನೆದೆಯ ಶೂಲ ವಿದೀಗ ಸೀತಾ । ಸುದತಿಯನು
ಕದ್ದೊಯ್ದವನಗಳ ಮಂಡಲಾಗ್ರಕಣ ॥ ಇದು ವಿದೇಹನೃಪಾಲ ತನಜೆಯ । ಸಿದಿರು
ಗೊಂಡರಿಭಟನ ನೆತ್ತಿಯ । ನೊದೆವ ಕುಂತ ದರಂತವಿದೆ ಯೆಂದಾರ್ದು ಬೊಬ್ಬಿರಿದ ॥
ಜೀಯ ಜಂಜಡವೇಕೆ ಲೋಕದ । ತಾಯೆ ನೀ ಲೋಕತ್ರಯಾದರಮ । ಣಿಯ ನೇತ್ರೆಯ
ಜನನ ಪರಿಯಂತರಸುವೆನು ಬಳಿಕ ॥ ಆಯತಾಕ್ಷಿಯ ಕಾಣದಿರೆ ತನ್ನಾಯುತವ । ನೋ
ಡೆನುತ ತೊರವೆಯ । ರಾಯ ನರಕೇಸರಿಯ ಸಂತವಿಸಿದನು ಸೌಮಿತ್ರಿ ॥ ॥ ೫೬ ॥

ಹನ್ನೊಂದನೆಯ ಸಂಧಿ ಸಮಾಪ್ತಂ.

ಹನ್ನೆರಡನೆಯ ಸಂಧಿ.

ಸೂಚನೆ॥ ಅರುಣಜನ ಕಂಡರಿ ಕಬಂಧನ । ಹರಣವನು ಕೊಂದಧಿಕ ಸುಮನೋ ।
ದ್ಧರಣರೈದಿದ ರಮಲತರ ಪಂಪಾಸರೋವರವ ॥

ಪದ್ಯ॥ ಕುಶನ ಕೇಳೈ ಕಳೆದರಗ್ಗದ । ನಿಶಿಯ ನಿಬ್ಬರ ನೂರು ಸುತನಿಂ । ವಸು
ಮತಿಯ ನಂದನೆಯ ಸುದ್ದಿಯ ತನ್ನ ಸಂತತಿಯ ॥ ಬಿಸರುಹಾಂಬಕ ರಾಘವಂಗರು ।
ಹಿಸುವ ತವಕದಿ ನಬುಜಬಾಂಧವ । ನೆಸಗಿದನು ಮಣಿಮಯ ವರೂಥವ ನುದಯ
ಶಿಖರಿಯಲಿ ॥ ೧ ॥ ಎಲೆ ಕುಶಾನುಜ ಕೇಳಿದೈ ಮನು । ಕುಲ ಲಲಾಮರ ಮುಂದೆ ಸೂಚಿಸಿ ।
ಸುಳಿದುದೈ ಹರಿಣಾಕ್ಷಿ ಸೀತೆಯನೊಯ್ದ ಪಥವಿಡಿದು ॥ ಹೊಲಬುಗಾಣರ ಹೆಜ್ಜೆದೆಗ
ಹಿನ । ಚಲಿತ ಚಪಳದ ಜಾಳಿಯ ಪೊ । ಲಗ್ಗದ ಬಲಾನ್ವಿತರೈದಿದರು ಬಳಿಕದರ ಪಥ
ವಿಡಿದು ॥ ೨ ॥ ಬಲದೆಡದ ಭಾಗದಲಿ ಸದ್ದಿಯ । ಸುಲಭತೆಯ ಶಕುನವನು ಕೈಗೊಳು ।
ತಿಳಿದು ಬರುತಿರ್ದವರು ಕಂಡರು ಸತಿಯ ಸೋಮರ್ಮುಡಿಯ ॥ ಹೊಲಬು ತಪ್ಪದೆನುತ
ಮನದಲಿ । ಹಲವನೆಣಿಸುತ ಬರಬರಲು ಸಿಡಿ । ದಲಗು ಗರಿಗಳ ರಣದಿ ಕಂಡರು ಕಲಿ
ಜಟಾಯುವಿನ ॥ ೩ ॥ ಅರೆಮುಗಿದ ಲೋಚನದ ಬಳಲುವ । ಕೊರಳ ಬಿದ್ದಿಹ ರೆಕ್ಕೆಗಳ
ನಭಕು । ಪ್ಪಳಿಸಿ ದಂಷ್ಟ್ರಿಯ ನಿಶಿತ ಖಡ್ಗ ವಿಘಾತವೇದನೆಯ ॥ ನರಳಿಕೆಯ ರಘು
ರಾಮ ನಾಮ । ಸ್ಮರಣೆ ಯರುಣಕುಮಾರಕನ ಬಳಿ । ಕರಸ ಕಂಡನು ನೆನೆದುಕೊಂಡನು
ಪೂರ್ವ ದರುಶನವ ॥ ೪ ॥ ತಮ್ಮ ಕೇಳೀತನು ಜಟಾಯುವು । ನಮ್ಮ ತಾತನ ಮಿತ್ರ
ಬಲ್ಲೆ । ಮೊಮ್ಮಗನೀತನು ವಿನತೆಯಾತ್ಮಜ ಸೂರ್ಯಸಾರಥಿಯ ॥ ನಮ್ಮಬರ ಭಾರವನು
ಹಿಂದಾ । ನ್ಯೆಮ್ಮಿಸಿದೆವೀತನಲಿ ಕೇಡಿದು । ನಮ್ಮದಾಗದೆ ಮಾಣದೆನುತಗಿಸಿದವ
ರಂಬನಿಯ ॥ ೫ ॥ ಅಹುದು ಜೀಯ ಮದೀಯ ಜನಕನ । ಸಹಜಮಿತ್ರ ನಿವನೆಂಬ ವರು
ಣನ । ಸಹಜಪುತ್ರನ ಬೀಳುಕೊಂಡಾವಿವಟ್ಟಿಯಲಿ ಕಂಡ ॥ ವಿಹಗಪತಿ ಸಂದೇಹ

ವಿಲ್ಲನು । ತಾರೆನುತ ನಡೆತಂದು ನುಡಿಸಿದ । ನುಹುಮಕರ ಸುತಜನನಾ ಸೌಮಿತ್ರಿ
ದುಗುಡದಲಿ ॥೬॥ ಏನುಕಾರಣ ನಿನಗೆ ಹರಣದ । ಹಾನಿಯಾರಿಂದಾಯ್ತು ನಿನ್ನನು
ದಾನವರೊ । ದಿವಿಜರೊ ಭುಜಂಗಮರೋ ಸಮೀಪದಲಿ ॥ ಈ ನಿರೋಧಕೆ ತಂದವರ
ಹೇ । ಳೈ ನಿಧಾನವ ನಾವು ದಶರಥ । ಸೂನುಗಳು ನಿನಗಾವು ಪಿತೃರು ಹೇಳು ನವ
ಗೆಂದ ॥ ೭ ॥ ಆರು ನೀ ರಾಘವನೋ ಲಕ್ಷ್ಮಣ । ವೀರನೋ ಹೇಳೆನುತ ಶ್ರಮದ ಶ
ರೀರಿನೊಯ್ಯನೆ ನಿಂದು ಕಣ್ದೆರೆದರಿವ ನಿವರುಗಳ ॥ ಸೋರುವಶ್ರುಗಳಿಂದ ಸೀತಾ
ಚೋರನನು ತಾತೊಲಗೆ ತಾಗಿದ । ಕಾರಿಯದ ಸಂಗತಿಯ ಹೇಳಿದು ಮುಗಿದ ನಕ್ಷಿ
ಗಳ ॥೮॥ ಆದಡೆಲೆ ವಿಹಗೇಂದ್ರ ಕೇಳು ಸ । ಹೋದರನಲಾ ನಿನಗೆ ದಶರಥ । ಮೇ
ದಿನೀಪತಿಗರುಹಬೇಡೀ ಹದನ ನೀ ಹೋಗಿ ॥ ಆ ದಿವಿಜರಿಪು ಸಭೆಯ ಲಬಲೆಯ
ನೊ । ಯ್ದವನ ತನಗರುಹೆಂದಘ । ವಾದನಂ ಗೆಯ್ದುಣಜನ ಬೀಳ್ಕೊಟ್ಟನಾ ರಾಮ॥
ತಂದೆ ಮೃತವಾದಂಮ ವಿಪಿನಕೆ । ಸಂದವೆಲೆ ಸೌಮಿತ್ರಿ ಮಿತ್ರನು । ತಂದೆಗೀತನು
ಪಿತೃಸಖರು ತತ್ಪಿತೃ ಸಮಾನರಲೆ ॥ ಯೆಂದು ನುಡಿವರು ಹಿರಿಯರದರಿಂ । ತಂದೆ ನವು
ಗೀತನು ಕಣಾ ವಿಧಿ । ಯಿಂದ ವಿಹಿತ ಪರೇತಕೃತ್ಯವ ಮಾಡಬೇಕೆಂದ ॥೧೦॥ ನಿಯಮ
ವಿಧಿಪೂರ್ವಕವ ಲೂರ್ಧ್ವ । ಕ್ರಿಯೆಯ ಮಾಡಿದರಲ್ಲಿ ರಿಪುನಿ । ರ್ಣಯ ಮನೋ ವ್ಯಸನಿ
ಗಳು ತಾಳ್ದರು ರೋಷಪಾವಕನ ॥ ಲಯದ ಭಾಳಾಂಬಕನವೊಲು ನಿ । ರ್ಭಯ
ಮನೋರಾಗಿಗಳು ದಕ್ಷಿಣ । ದಯನ ಹಿಡಿದೈತಂದರಲ್ಲಿಂ ಮೇಲೆ ವಿಪಿನದಲಿ ॥ ೧೧ ॥
ತನುಜ ಕೇಳೈ ಕಂಡರಿವ ರಾ । ವನದ ಪಥದ ಲಧೋಮುಖಿಯವ । ಳಿನಕುಲೇಂದ್ರನ
ತಡೆದು ನುಡಿದಳು ಪರಿಘ ಹಸ್ತದಲಿ ॥ ಕನಲಿ ಲಕ್ಷ್ಮಣದೇವ ನಾಕೆಯ । ಜನನಿಯಂ
ದವ ಮಾಡಿ ಮುಂದಣ । ವನಕೆ ಗಮಿಸಿದರಧಿಕ ದುಸ್ತರ ದುರ್ಗ ದುರ್ಭಯದ ॥೧೨॥
ದಾರಿತೋರದ ವಿಪುಲತರ ಕಾಂ । ತಾರ ದುಬ್ಬರದೊಳಗೆ ಭಳಿಲೆಂ । ಬಾರು ಘಟೆಗಳ
ನಾಮರದ ಸಂದಣಿಯ ಸಾಲಿನಲಿ ॥ ಭೂರಿವೃಕ ಶಾರ್ದೂಲ ಸೂಕರ । ಸೈರಿಭದ್ವಿಪ
ಹರಿ ತರಕ್ಷು ವಿ । ಹಾರ ವಿಪಿನದಲಿವರು ಬರುತಿರ್ದರು ಸರಾಗದಲಿ ॥ ೧೩ ॥ ತೋರಿತಾ
ವನಮಧ್ಯದಲಿ ಮುಗಿ । ಲೇರಿಕೆಯ ಮುಂಗುಡಿಯ ಸಿಡಿಲಿನ । ಚೀರಿಕೆಯ ಚಡ್ಡಣವ
ರವ ರಾಘವರ ಕಿವಿಗಳಿಗೆ ॥ ಬೇರೆ ಬೇರೆಕ್ಕಲಿಸಿ ಬಿಲುಗಳ । ನೇರಿಸಿದ ರೆಡಬಲದಬ್ಬರ ।
ದೋರಿಸುತ ನಡೆತಂದ ರಡವಿಯಲೊಂದು ಯೋಜನವ ॥೧೪॥ ಮುರಿವಡೆದ ಕಾಡ್ಗೋಣ
ನೆಮ್ಮರಿ । ಚಿರತೆ ಚಿತ್ರಕ ಶಿಖರ ಹಾಯ್ದವು । ಮರಿಗಳನು ಮುಂದಿಕ್ಕಿ ವನಕರಿ ಕಂಡ
ಭೀತಿಯಲಿ ॥ ಸಿರಿನಿಳಿಲು ಸಿಟಿಲೆಂಬ ಮರಗಿಡ । ದಿರುಬಿನೊಳಗಡಹಾಯ್ದರಿವರಿ ।
ಬ್ಬರತ ಕಾನನ ವಳಿಯ ಕಾಲ್ದದಿ ಯಾಯ್ತು ಮೃಗಕುಲದ ॥ ೧೫ ॥ ಅಲಿಸುತ ಬಲ್ಬ
ರಿಸಿ ತೊಯ್ಯನೆ । ತೋಳುಗಳ ಪಸರಿಸುತ ಮುಂದಕೆ । ಮೇಲುಡಿಯ ಬಿದ್ದಿಹ
ಲುಲಾಯ ಕುರಂಗಕರಡಿಗಳ ॥ ತಾಳಿಕೆಯ ತಳಕಿಳುಹುತುಗಿಪ್ರತ । ಮೇಲು ಮುಂಡದ
ಲಖಿಳ ಭೂತಗ । ಳೋಲಗದ ಬಿಳನೆದ್ದ ನಾಚರಿಸಲು ಸುರವ್ರಾತ ॥ ೧೬ ॥ ವೀರರಿವ
ರಿಬ್ಬರು ಸಮೀಪಕೆ । ಸಾರಿದರು ತೋಳೆವಡ ಕಂಡನು । ಭೈರವಾಡಂಬರದ ಘೋರಕ
ಬಂಧ ರಕ್ಕಸನ ॥ ಸ್ಫೈರಿಸುವರೆ ಬಳಿಕೆನಲು ಕೈ । ಹಾರದಲಿ ಕಣೆದೊಟ್ಟು ಕೈಕೊಂ ।
ಡಾರು ತೆಚ್ಚರು ಕೈಗಳನು ಕಳಚಲು ಕಬಂಧಕನ ॥ ೧೭ ॥ ಮೊದಲು ತಲೆತಾನಿಲ್ಲ

ತ್ತೋಳುಗ । ಉದುರಿದುವು ನೆಲಕೆರಡು ಯೋಜನ । ದದುಭುತದ ನೀಳದಲಿ ನಿಲವಿದ್ದುದು ನಿಶಾಚರನ ॥ ವ್ರೊದೆದ ಸಿಡಿಲಿನ ಪದಹತಿಗೆಕಳ । ಚಿದ ಮಹಾಕಂಧರದ ಗಿರಿಯವೊಲಿರಿಲಿವ್ದನು ಕಂಡನುರಿ ವಕ್ಷಿಗಳ ಲವನಿಪನ ॥ ೧೮ ॥ ಅರಿವ ನವನೀ ನರರ ವೇಷದ । ನಿರಿಕೆಯನು ಚಿತ್ತದಲಿ ತನಗಂ । ದರುಹಿ ದಗ್ಗದ ದೀರ್ಘ ಶಿರಮುನಿವರನ ನುಡಿವಿಡಿದು ॥ ಅರಸಿ ಕಾಣೆವು ವೇದತತಿಕಂ । ದೆರೆದು ಕಾಣರು ಕಮಲಭವ ಭವ । ರುರುವ ದೈವವ ಕಂಡೆನೆಂ ದಾನಂದ ಮಯನಾದ ॥ ೧೯ ॥ ದೇವ ನಿನ್ನವತಾರ ಲೀಲಾ । ಭಾವಕವ ನರಿದೆನು ಕಣಾ ಮಾ । ಯಾ ವಿಲಾಸಕೆ ಲೇಸು ತನಗಿನ್ನದರವಾಕೇಸು ॥ ದೇವ ರಾಕ್ಷಸ ಭವದ ಬದುಕಿಗೆ । ಹೇವರಿಸಿದುದು ಚಿತ್ತ ಮುಕ್ತಿ । ಶ್ರೀವಧುವ ಕಾಣಿಸುವ ಕೃಪೆಯನು ಮಾಡಬೇಕೆಂದ ॥ ೨೦ ॥ ದೇವ ನೀಬಂದುದನು ಬಲ್ಲೆನು । ದೇವಿಯರನೊಯ್ದವರ ಬಲ್ಲೆನು । ರಾವಣನ ಸಾಧಿಸುವ ಮಿತ್ರನಬಲ್ಲೆನೆನ್ನನು ॥ ಪಾವನವ ಮಾಡುವ ಕೃಪಾ ಸಂ । ಭಾವ ನೋಚಿತ ವೃಳ್ಯ ಡುಪುರಾ । ರಾವಲಂಬನ ನಹೆನೆನಲು ರಘುನಾಥನಿಂತೆಂದ ॥ ೨೧ ॥ ದನುಜ ಕೇಳಾವ್ ಮಾಳ್ಪಲೇಸಿನ । ನೆನಹದಾವುದು ಹೇಳೆನಲು ಸಂ । ಹನನವಿದು ಶಿಖಿಮುಖದೊಳಲ್ಲದೆ ಮುಕ್ತಿಪಡೆಯದೆನೆ ॥ ಅನುಜ ಲಕ್ಷ್ಮಣನೈಸಲೇ ಯೆಂ । ದೆನುತ ತಂದೊಟ್ಟಿದನು ಬಳಿಕಿಂ । ಧನವ ನುರಿಗೋಳಿಸಿದನು ಹುತವಹನಲಿ ನಿಶಾಚರನ ॥ ೨೨ ॥ ಬಂದುದಾ ಸಮಯದಲಿ ಹಂಸಗ । ಳಿಂದ ಹೂಡಿದ ವರವಿರಿಂಚಿ । ಸ್ಯಂದನವು ಪರಮೇಷ್ಠಿಪುರದಿಂ ದವನಹೊರಗಾಗಿ ॥ ನಿಂದ ನವ ರಥದೊಳಗೆ ಕೈಮುಗಿ । ದೆಂದನೆಲೆ ರಘುನಾಥ ನುಡಿ ಮನ । ಬಂದುದನು ಬೇಗೆನಲು ಬಳಿಕವ ಗರಸನಿಂತೆಂದ ॥ ೨೩ ॥ ಧಾರುಣಿಯನಂದನೆ ಯನೊಯ್ದವ । ನಾರದೆಸೆಯಿಂದರಿಕೆ ನಮಗನು । ಸಾರಿ ಮಹದಾ ಹದನ ಹೇಳೆನ ಲವನು ಕೈಮುಗಿದು ॥ ವೀರ ಕೇಳಾದರೆ ಸುಪಂಪಾ । ತೀರ ದನುಪಮ ಋಶ್ಯಮೂಕದ । ಸೂರಿಯನ ಸುತನಿಂದ ನಿಮಗಿಷ್ಟಾರ್ಥವಹುದೆಂದ ॥ ೨೪ ॥ ತಳರ್ದ ನವನೀಪಾತ ನುಡಿದಜ । ನಿಳಯ ಕೆವರೀವಿಪಿನ ವೀಧಿಯ । ಕಳೆದು ಬಂದರು ಕುಂತಳದ ಕಮನೀಯಮಂಡಲಕೆ ॥ ಹೊಳೆವ ಹರಿಗಾಲುವೆಯ ಹರಹಿನ । ಬೆಳದ ನಂದನ ದುಬ್ಬುಗೊಬ್ಬಿನ । ಕಳವೆ ಕದಳಿ ದ್ರಾಕ್ಷೆ ಧವಳೇಕ್ಷುಗಳ ನೀಕ್ಷಿಸುತ ॥ ೨೫ ॥ ವಿಷಮ ಬಲ ಸುಗ್ರೀವನೇವನ । ಬಿಸರುಹಪ್ರಿಯ ಸುತನ ಗಿರಿಯನು । ಬೆಸಗೊಳ್ಳುತ ಪಟ್ಟಿಗಳ ಲಖಿಳ ಗ್ರಾಮಸೀಮೆಗಳ ॥ ಪಶುಗ ಳಾಡುಂಬೊಲನ ಪಥ ವಿಡಿ । ದೆಸಗಿ ದಾಶ್ರಮ ಭಾಗದಲಿ ರಾ । ಕ್ಷಸ ಕುಲಾಂತಕ ರೈದಿದರು ಶಬರಿಯನಿಜಾಶ್ರಮದ ॥ ೨೬ ॥ ಸೊಗಯಿಸುವ ತಾಪಸರ ವನವೀ । ಥಿಗಳ ಲನುಪಮ ಪುಣ್ಯ ಪುಷ್ಕರ । ಣಿಗಳ ಲಧ್ವರಶಾಲ್ಯ ಶಾಲಾವರಣ ದನುಪಮದ ॥ ಅಗರು ಚಂದನ ಚಂಪಕಾಮೋ । ದಗಳ ಲುಲಿವ ಶುಕಾಳಿ ಪಿಕ ಕೇ । ಕಿಗಳಲಿ ದಿರಿನ ಲೆಸದುದಾಶ್ರಮ ಧರ್ಮಚಾರಿಣಿಯ ॥ ೨೭ ॥ ಸಲಹುತಿರ್ದವು ಹುಲಿಯಮರಿಗಳ । ನೊಲಿಯುನಿತ್ತು ಕುರಂಗಿ ವನಕರಿ । ಕಲಭ ನಿಕರವ ಪೋಲುತಿರ್ದವು ಸಿಂಹ ವಹಿನಿಕರ ॥ ನಲಿವುತಿರ್ದವು ನವಿಲೆಡೆಯುರಗ । ಗಿಳಿಯ ಪಚನೋದಯದ ನುಡಿನಳ । ಕಲಿವುತಿರ್ದವು ಕೂಡೆವನ ಮಾರ್ಜಾಲ ವಿದಿನಿನಲಿ ॥ ೨೮ ॥ ಕುತನೆ ಕೇಳ್ಳೈ ನೆರೆತ ಮಂಡೆಯ । ಕುಸಿದ ತೊಗಲಿನ

ಜೋಲ್ವ ಹುಬ್ಬಿನ । ನಸಿದ ನೋಟದ ಬಾಗಿದೊಡಲಿನ ಬತ್ತಿದಾನನದ ॥ ನಸಿದ
ಹಲುಗಳ ಕೆತ್ತಕಿವಿಗಳ । ಮಸುಳಿದಂಗದ ಮುಪ್ಪಿನಲಿ ಲಂ । ಬಿಸುವ ಶಬರಿಯು
ಸುಪ್ರಸಿದ್ಧಿಯ ಸಾರ್ದರೊಲವಿನಲಿ ॥ ೨೯ ॥ ಮುರಹರನ ನಿಜಮೂರ್ತಿಯನು ಹೃ।
ತ್ಸರಸಿರುಹ ಕರ್ಣಿಕೆಯ ಮಧ್ಯದ । ಲಿರಿಸಿ ಪರಮಾನಂದ ಸುಖಮಯ ಭಾವ
ಶುದ್ಧಿಯಲಿ ॥ ಇರಲು ಹೊಳಕಿದು ದವನಿಜೇಶನ । ಪರಮಮಂಗಳ ಮೂರ್ತಿ
ಮನದ । ಚ್ಚರಿಯ ನೊಯ್ಯನೆ ಕಣ್ದೆರದು ನೋಡಿದಳು ರಘುಪತಿಯ ॥ ೩೦ ॥
ಹರಿಯಲಾ ಸಾಕ್ಷಾತ್ ಲಕ್ಷ್ಮೀ । ವರನಲಾ ಪರಿಪೂರ್ಣ ವಿಶ್ವಂ । ಭರನಲಾ
ಜಗದಂತರಂಗನಲಾ ಮಹಾದೇವ ॥ ಅರರೆ ಶಿವಶಿವವಿಷ್ಣುಪದ ಸಂ। ದರುಶನವು
ತಾ ಮುಂದೆಮಾಡಿದ । ಪರಮಸುಕೃತವಲಾ ಯೆನುತ್ತಿದಿರೆದ್ದಳಾಶಬರಿ ॥ ೩೧ ॥
ಆದಿಪುರುಷನ ಕಂಡೆನನುತ । ತ್ಯಾದರದಿ ಹರಿಪದವನವಳಾರಾ । ಧಿಸಿದಳಾಗಮದ
ನವವಿಧ ಭಕ್ತಿಭಾವದಲಿ ॥ ಆದಯಾಂಬುಧಿ ಗೆಂದಳೆಲೆ ದೂ। ರ್ವಾದಳಶ್ಯಾಮಳನೆ
ಕೇಳ್ ನೀ। ನ್ನೈದಿದುದ ನಾನರಿವೆ ನಿನ್ನಯ ಕಪಟನಾಟಕವ ॥ ೩೨ ॥ ಖಳ ಕಬಂಧನು
ನಿನಗೆ ಹೇಳಿದ। ಕಲಿಲಲಾಟ ಲಲಾಮನೆನಿಪ । ಗ್ಗಳ ಕಪೀಂದ್ರನು ಋಷ್ಯಮೂಕನ
ನಗೇಂದ್ರ ದಕ್ಷಿಣದ ॥ ಕೆಲದೊಳಗೆ ವರಶೃಂಗ ಭದ್ರಾ। ಕಲಿತ ಪಂಪಾಕ್ಷೇತ್ರ ಸೀಮಾ।
ವಳಿಯ ವದರಲಿ ಕಾಪಿರೆಂದಳು ಶಬರಿ ಕೈಮುಗಿದು ॥೩೩॥ ಮನದಬಗೆ ಕೈಗೂಡುವುದು
ರಿಪು। ಹನನ ನೆರೆಸಿದ್ಧಿಪುದು ನಿಮ್ಮಯ । ವನಿತೆ ನಿಮಗಹಳೊಲಿವಳಲ್ಲಿನ್ಮೇಲೆ ಭೂ
ವನಿತೆ ॥ ವಿನುತ ಕೀರ್ತ್ಯಂಗನೆ ಜಯಾಂಗನೆ । ಜನಪ ಚಿತ್ತೈಸೆಂದು ಮಾಯಾ ।
ಮನುಜನೆನು ಬೀಳ್ಕೊಟ್ಟು ಬಿಜಯಂಗೈದಳಜಪುರಿಗೆ ॥೩೪॥ ಶಬರಿಯನು ಬೀಳ್ಕೊಂಡು
ಶೌರ್ಯ। ಸ್ತಬಕದಲಿ ಮ್ಮೇಲೆ ಬಂದರು। ವಿಬುಧರಿಗೆ ದುರ್ಲಭದ ಪಂಪಾಕ್ಷೇತ್ರಮಂಟ
ಪಕೆ ॥ ಪ್ರಬಲತರ ಘೂರ್ಮಿತದ ಬಹುಳಿತ। ಸಬುದ ದುಬ್ಬಿನ ಸುಳಿಗಳಬ್ಬರ। ವಬುಧಿ
ಭಂಗದ ತುಂಗಭದ್ರೆಯ ಕಡರಿದಿರಿನಲಿ ॥೩೫॥ ಆ ನದಿಯ ನುತ್ತರಿಸಿ ಪಂಪಾ । ಶ್ರೀನಿ
ವಾಸನ ಕಂಡು ಬರೆ ಸು। ಮ್ಮಾನವುಖದಲಿ ಸುಳಿದ-ದನ ಪನು ಕುಸುಮಮಯಸಮಯ॥
ಮೌನಿಗಳನೈಷ್ಟಿಕ ತಪೋನು। ಷ್ಠಾನ ಶೀಲರ ಸಲೆವಿಯೋಗಿಗ। ಳಾಸನದ ಮೇಲಿ
ಳಿಯುತಸಿಯ ನುದಾರತೇಜದಲಿ ॥ ೩೬ ॥ ಗಿಳಿಗಳುಗ್ಗಡಣೆಗಳ ಮರಿಕೋ। ಗಿಲೆಯ
ಹೊಗಳಿಕೆಗಳ ಮದಾಳಿಯ। ಲಲಿತ ಕಹಳಾರವದ ಶಿಖಿ ಸಂಕುಳದ ನರ್ತನದ॥ ಅಲರು
ಗಣೆಗಳ ಕಬ್ಬುವಿಲ್ಲಿನ । ತಳಿತ ಹುವ್ವಿನ ಝಲ್ಲರಿಯ ಮಂ । ಡಳಿಯ ಮನ್ಮಥರಾಜ
ಸುಳಿದನು ರಾಮನಿದಿರಿನಲಿ ॥ ೩೭ ॥ ತರುಣ ಕೇಳ್ಕೈ ಕುಶನೆ ಕಾವನಾ। ತುರಗಿಗಗ್ಗಳ
ವಿರಹಿಗಳಿಗೀ। ಸ್ಮರನಕಾಣಿಕೆ ಸೊಗಸೆ ಸೋತನು ಶಂಬರಾಂತಕಗೆ। ಅರಸಿ ಸೀತೆಯ
ನೆನೆಹು ಹುಟ್ಟಿದ। ವಿರಹಶಿಖಿಯುಬ್ಬರದ ತಾಪಕೆ। ಪರಹರಿವ ದೋರದೆ ಸರೋವರ
ದೊಳಗೆ ಮಂಡಿಸಿದ ॥೩೮॥ ಬಿಸಜವನು ಮುಖವೆಂದು ಚುಂಬಿಸಿ। ಶಶಿವದನೆ ನನೆವಂಗ
ದಲಿ ಝೋಂ। ಪಿಸಿದನಮಳ ರಥಾಂಗಗಳನುತ್ತುಂಗ ಕುಡಪೆಂದು ॥ ಒಸೆದು ನೋ
ಡಿದ ನಕ್ಷಿಯಿಂದೆವೆ। ಮಿಸುಕಿದೆಳೆ ಮೀಸುಗಳ ಕಲಿಗಳ । ಕೊಸರಿದನು ಸಂಭೋಗ
ಸಮಯೋಚಿತ ಸುಭಾಷಿತದ ॥೩೯॥ ಅನುಜ ಕೇಳೆಮ್ಮರಸಿ ಯೆಮ್ಮನು। ಬನದೊಳಗೆ
ಬಿತದರಸಿ ಕಾಣದೆ। ವನರುಹಾಕರ ವಾಗಳಲೆ ತನ್ನಂತರಂಗದಲಿ ॥ ಅನುಕೂಲಸದಿರ

ಸೀತೆಯೆಂಬೀ । ನೆನಹು ನಿನ್ನಯ ಚಿತ್ತದಲಿ ಸಂ । ಜನಿಸಿದುದ ಹೇಳೆಂದು ಸೌಮಿತ್ರಿ ಯುನು ಬೆಸಗೊಂಡ ॥ ೪೦ ॥ ಅಕಟ ರಘುಕುಲದರಸುಗಳು ಕಾ । ಮುಕರೆ ಕಾತುರತೆ ವಿಚಾರಿಸೆ । ವಿಕಳಮತಿಗಳೆ ವಿಷಯಿಗಳೆ ಲಲನಾಜನಂಗಳಲಿ ॥ ಯುಕುತಿ ವಿಧನಿನಗೀ ಪರಿಭ್ರಾ । ಮಕರ ಪರಿಕೃತವೇಕೆ ನರನಾ । ಟಕದ ನಟಣೆಯು ನನ್ನ ಬರ ಬಿಡಿ ಬಿಜಯ ಮಾಡೆಂದ ॥ ೪೧ ॥ ಎಂದು ಮೆಲ್ಲನೆ ಕೊಳದತೀರಕೆ । ತಂದು ತಾಪವ ಬಿಡಿಸಿ ನಯ ಮುಖ । ದಿಂದಲೊಯ್ಯನೆ ಕರೆದು ತಂದನು ತರಣಿನಂದನನ ॥ ನಂದನದ ಗಿರಿಗಾಗಿ ತಂಪುಗ । ಳೊಂದಿದೆಳೆಲತೆಯೋಪರಿಯ ಮಕ । ರಂದವನು ತೊರವೆಯರಾಯ ನೊಡಗೂಡಿ ॥ ॥೪೨॥

ಹನ್ನೊಂದನೆಯ ಸಂಧಿ ಸಮಾಪ್ತಂ.



ಕಿಷ್ಕಿಂಧಾಕಾಂಡ.

ಮೊದಲನೆಯ ಸಂಧಿ.

ಸೂಚನೆ॥ ಚಂಡಕರ ಕುಲತಿಲಕ ತನ್ನನು । ಕಂಡು ಪವನಜನಿಂದ ಕಾಣಿಸಿ । ಕೊಂಡು ಕೈವಿಡಿದೊಲಿದು ಪಾಲಿಸಿದನು ಪತಂಗಜನ ॥

ಪದ್ಯ॥ ತರುಣಕೇಳ್ ರಂಜಿಸಿತು ಯವ್ವನ । ದಿರವು ನಿಮ್ಮೈಯಂದಿರಿಗೆ ಕುಡಿವ ರಿವ ಮಿಸೆಯು ಕಪ್ಪುದೋರಿದ ಬವರಿಗಡ್ಡಗಳ ॥ ಧನದ ಭುಜಬಲ ದರುಣ ಕೀತಕೆ । ಕನದ ಸುರಗಿ ಕೃಪಾಣ ಬಲುಬಿಲು । ಸರಳ ಹೆಗಲಿನಲೆಸೆದರಂದು ದಿನೇಶವಂದದಲಿ॥೧॥ ಆಳುತಿರ್ದನು ಸಕಲ ಗೋಲಾಂ । ಗೂಲ ಸಾಮ್ರಾಜ್ಯವನು ದಿವಿಜರ । ಶೈಲ ಕೆಳೆಯೆಸಿ ಸದ್ರಿಶಿಖರದ ರಾಜಧಾನಿಯಲಿ ॥ ನೀಲ ನಳ ಹನುಮಂತ ತಾರ ಕ । ರಾಳ ಬಲಕೇಸರ

ರುಮಾದ್ಯರ | ಮೇಳದಲಿ ಕಪಿ ವಿಪುಲ ಕಾಲಗ್ರೀವ ಸುಗ್ರೀವ ||೨|| ಕಂಡ ನೊಡ್ಡೋ
ಲಗದೊಳಿದಿರಲಿ | ಚಂಡಕರ ಕುಲಕಮಲವನ ಮಾ | ರ್ತಾಂಡರಸು ರಿಪುವಿಜಯ
ಮಾಯಾ ಮನುಜವಿಗ್ರಹರ || ಖಂಡಪರಶು ಪರಾಕ್ರಮದ ಕೋ | ದಂಡ ಚಂಡ
ಕೃಪಾಣ ಛುರಿಗೆ ಸು | ಮಂಡನರ ರಾಜಸದ ತೇಜೋವಿಪುಲ ವಿಗ್ರಹರ ||೩|| ಏನಿ
ದಚ್ಚರಿ ನಮ್ಮ ರಾಷ್ಟ್ರದ | ಮಾನುಷಸದವಿಲ್ಲಿಗೆತ್ತಣ | ಮಾನವರ ಸಂಚಾರ ಸಂ
ಘಟನವು ವಿಚಿತ್ರವಲೆ || ದಾನವರೋ ದಿವಿಜರೋ ಮೇಣ್ ಹರಿ | ಸೂನುವಿನ ಗುಪ್ತ
ಕರೊ ಬರವು ನ | ವೀನವಾಗಿದೆ ಹನುಮ ನೋಡವರುಗಳ ನೀನೆಂದ ||೪|| ನೋಡಿಬಾ
ಹೋಗಿ ನರೇಂದ್ರರ | ಗಾಢ ಗಮನಸ್ಥಿತಿಯ ನರಿ ಮಾ | ತಾಡು ಮನದಂತರವ ತಿಳಿ
ಹಗೆಕೆಳೆಯ ಕೈಮನದ || ಮೋಡಿಯನು ನಿರ್ಧರಿಸು ನೀ ಮೊಡ | ಲಾಡದಿರು ಮುನಿ
ವೇಷದಲಿ ವೈ | ಗೊಡು ಹೋಗೆಂದಟ್ಟಿದನು ಸುಗ್ರೀವ ನನಿಲಜನ ||೫|| ಆ ಕಪೀಂ
ದ್ರನು ಬೀಳುಕೊಂಡು ಪಿನಾಕಧರ ವಿಶ್ರಾಂತ ನೈಂದ್ರ | ವ್ಯಾಕರಣ ಕೋವಿದ ನಶೇಷ
ಶೃತಿ ಕಲಾವಿದನು || ಲೋಕಲೋಚನ ಭೀಕರನು ಜಗ | ದೇಕವೀರನುದಾರಗುಣ ರ |
ತ್ನಾಕರನು ರಾಘವನ ಕಾಣ್ಬುತ್ಸವದಿ ನಡೆತಂದ ||೬|| ವಿತತ ವಿಮಳಾಮ್ನಾಯದಲಿ
ವಿ | ಶೃತದ ಮಣಿಕುಂಡಲದ ವಿವಿಧ | ಸ್ಮೃತಿ ವಿಲಾಸ ಬ್ರಹ್ಮದಂಡದ ನಿರ್ಜಿತೇಂದ್ರಿ
ಯದ || ನುತ ಕನಕ ಕೌಪೀನದಾಗಮ | ದತಿಶಯದ ಯಜ್ಞೋಪವೀತದ | ಯತಿ
ಕುಲೋತ್ತಮನೈದಿದನು ನರರೂಪಿನಚ್ಯುತನ ||೭|| ಕಾಣುತೀ ಪವನಜನು ಪಂಕಜ |
ಪಾಣಿಯೆಂದೇ ಮಾಡಿದನು ಪರ | ಮಾಣುಯೆಂತುಟೋ ಪವನಸುತ ನಿಂಗಿತಜ್ಞತೆಯ ||
ಕಾಣವರಸಿ ಸಮಸ್ತನಿಗಮ | ಶ್ರೇಣಿ ತನ್ನಯ ತಾಯನುಡಿ ತಾ | ರ್ಕಾಣೆಯಾಯ್ತೆಂ
ದಂಘ್ರಿಗಾನತನಾದನಾ ಹನುಮ ||೮|| ನೀವು ವಿಪ್ರರು ಪೀರ ಪಾರ್ಥಿವ | ರಾವು ನಮ
ಗಭಿವಂದಿಸುವುದಿದು | ಭಾವಿಸಲು ಮಾಯಾವಿಲಾಸಕವೆಂಬಬಗೆ ಮನವ || ತೀವ್ರಕೊಂ
ಡಿದೆ ಬಂದಕಾರ್ಯವ | ದಾವುದಾ ರಟ್ಟಿದರು ನಿಮ್ಮ | ತಾವದಾವುದು ಬಂದ ಹದನೇನೆಂದು
ಬೆಸಗೊಂಡ ||೯|| ಆದಡೆಲೆ ರಾಜೇಂದ್ರ ಚಿತ್ತೈ | ಸಾವಿಯಾಗಲಿ ನೀವು ಬಿಜಯಂ |
ಗೈದ ಬಗೆ ಯಭಿವಚನ ಬಿನ್ನಹ ಬಳಿಕ ತನ್ನದೆನೆ || ಆ ದಯಾಂಬುಧಿಯೈಸೆ ಪುತ್ರೇ |
ನಾದಡವಧರಿಸಾವು ಬಂಪ ವಿ | ನೋದ ವಿಭವವ ಹೇಳಿದರೆ ಹುರುಡಲ್ಲ ನುಡಿಯೆಂದ ||
ಕೇಳಿಬಲ್ಲೈ ದಶರಥಕ್ಷಿತಿ | ಪಾಲಕನ ನಾಮಾ ನರೇಂದ್ರನ | ಬಾಲಕರು ಬರವಾಯ್ತು
ತನ್ನೃಪನಾಜ್ಞೆಯಲಿ ಬಳಿಕ || ಕಾಲಗತಿಯಿಂದೆಮಗೆ ಕಾನನ | ವಾಲಯವು ಸಮನಿ
ಸಿತು ಕಷ್ಟದ | ಮೇಲೆ ಕಷ್ಟವು ಕಾಂಬಕಥೆ ನಮಗಾಯ್ತು ಲೇಯೆಂದ ||೧೧|| ಸುಳಿದು
ದಿದಿರಲಿ ನಮ್ಮ ವಿಪಿನ | ಸ್ಥಳದೊಳೊಂದು ಕುರಂಗವದ ಕಂ | ಡೆಳಸಿ ಬೇಡಿವಳೆಮ್ಮ
ನಧು ನಾವ್ ಮಾಯೆಯೆಂಬುದನು || ತಿಳಿಯಲರಿಯದೆ ತನ್ಮೃಗದ ಬೆಂ | ಬಳಿಯ
ಬಳಲಿದ ಹಿಂದೆ ರಾವಣ | ಕಳವಿನಲಿ ಕದ್ದೊಯ್ಯಲಡವಿಯ ಲೆಮ್ಮ ಭಾಮಿನಿಯ ||೧೨||
ಸತಿಯ ಹೋಗಾಡಿದೆವು ಮಾನ | ಸ್ಥಿತಿಗೆ ವ್ಯಾಮರೆಯಾಯ್ತು ಬಂದೆವು | ಗತಿವಿಡಿದು
ದಶಶಿರನ ಮೇಲಣ ವೈರ ಬುದ್ಧಿಯಲಿ || ದಿತಿ ತನೂಜ ಕಬಂಧನಿಂ ವಿ | ಶ್ರುತ ಕಪೀಂ
ದ್ರನ ಕಾಣ್ಬ ಬಗೆಯಾ | ಯ್ತೆಲೆ ತದೀಯ ಕಪೀಂದ್ರನನು ನಾವರಿಯಬೇಕೆಂದ ||೧೩||
ಬಳಲಿದೆವು ನಾವ್ ಹಿಂದೆ ಹೆಮ್ಮರಿ | ಯಳತುಲದ ಮಾಯೆಯಲಿ ಮಾಯಾ | ವಿಲಸಿತರು

ರಕ್ಕಸರು ನಾವ್ ನಿಷ್ಕಪಟ ಮಾನವರು ॥ ತಿಳಿಯ ಬಾರದು ನಿನ್ನ ವೇಷದ। ನೆಲೆಯು ನೆನೆ ಕೈಮುಗಿದು ಕಪಿಕುಲ। ತಿಲಕ ಬಿನ್ನಹ ಮಾಡಿದನು ಮನುಕುಲ ಶಿರೋಮಣಿಗೆ॥ ಜೀಯ ನೀವೀಗೆಂದ ವಾನರ । ರಾಯ ಸಚಿವನು ನಾವು ನಮ್ಮಯ । ತಾಯಿ ತಂಗಿ ತದೀಯ ಕಪಿಕುಲ ಸಾರ್ವಭೌಮಂಗೆ ॥ ವಾಯುವೆನ್ನಯ ತಾತ ಮನ್ನಧಿ। ಧೇಯ ವನಿಲಜನೆಂದು ಮಿಕ್ಕಿನ । ಮಾಯೆಯವರಾವಲ್ಲವೆಂದನು ಹನುಮನರಸಂಗೆ ॥ ೧೫ ॥ ಆತ ಕಪಿಯಲಿ ನಿನ್ನ ಸಂಗದ। ಮಾತು ಮೊದಲಿದು ಮುಂದ ಗಮನಕೆ। ಕೌತುಕದ ಕಥೆ ತೋರುತಿದೆ ನೀನೇ ವಿಚಾರಿಸೆನೆ ॥ ವಾತಸುತ ಬಳಿಕನ್ವಯದ ಪರಿ। ಜಾತಕಭ್ಯುದಯವನು ಒಹು ರೂ। ಪಾತಿಶಯವಹ ಪರಿಯ ಬಿನ್ನೈಸಿದನು ರಘುಪತಿಗೆ ॥ ೧೬ ॥ ಐಸೆ ಮತ್ತೀಸಾದಡೀಪರಿ । ಮಾಸಿತೆನೆ ವೈದೋರದಿದ್ದಡೆ। ಕೀಶಕುಲ ಕುಂಜರನು ನೀನೆಂದೆಮಗೆ ಕಾಣಿಸಲು ॥ ದೋಷಕೃತ ಮುಖನಲ್ಲ ಮಾಯೆಯ। ವೈಸಿರಿಯ ಮನವೆಮಗೆ ಬಹುದಿನ । ಲಾ ಸಮೀರಕುಮಾರ ಬಳಿಕಿಂತೆಂದ ನರಸಂಗೆ ॥ ೧೭ ॥ ದೇವ ಚಿತ್ತೈಸಿನ್ನು ಮರೆಯೇನು । ನಾವು ಕಪಿಗಳು ಕಾಮರೂಪಿಗ। ಳಾವು ನಮ್ಮಂಗವನು ತೋರಲಿಬೇಕು ನಿಮಗೆನುತ॥ ಆ ವಿಮಲಯತಿರೂಪವನು ಬಿಡೆ। ರಾವರಣ ನಭಕೊತ್ತಿನಲಯದಿ। ದಾ ವಿರೂಪಾಕ್ಷಂಗೆ ಸಡಿಯೆನೆ ಬೆಳೆದನಾ ಹನುಮ ॥೧೮॥ ಥಳಥಳಿಸಿತಿನಬಿಂಬ ನಾಭೀ। ವಳಯದಲಿ ನಭದಮಲ ತಾರಕೆ । ತೊಲಗಿದುವು ತುದಿ ಮಸ್ತಕದ ಉತ್ತಾನಪಾದಜನ ॥ ನಿಳಯದಲಿ ಲಾಂಗೂಲ ಲಂಬಿಸಿ। ತೋಳದುದಿಳೆ ದಿಗ್ವಳಯ ಬಂಧದ। ಹೊರಿಗೆ ಹರಿಯಲು ಹನುಮ ವೈದೋರಿದನು ರಘುಪತಿಗೆ ॥ ೧೯ ॥ ಸಾಕು ಸಾಕೊಡಬಟ್ಟೆವಾವ್ ಲೋ। ಕೈಕ ಜಲರುಹುದುಳಿದ ಬಲು ವಿಪಿ। ನೌಕಸರಿಗೀ ಬಲುಹದೆಲ್ಲಿಯ ದಲ್ಲದಿರೆ ನಮಗೆ ॥ ಆ ಕಬಂಧನು ಹೇಳುವನೆ ನ। ಮ್ಮಾಕೆವಾಳತನಕೆ ವೈರಿಸ। ವಿಾಕಜಯ ಕೃತಮುಖಕೆ ಸಖನೆಂದಬ್ಜಸಖ ಸುತನ ॥ ೨೦ ॥ ಎಲ್ಲವಿನ್ನೇತಕೆ ವನೌಕಸ। ವಲ್ಲಭನ ತಾ ಹೋಗು ಸಂಶಯ। ವಿಲ್ಲ ನಮಗೆನೆ ಹನುಮ ಹಾಯ್ಲಿ ಹಸಾಧವನು ಬಳಿಕ ॥ ಸಲ್ಲಲಿತ ಹರುಷದಲಿ ನೃಪಪದ । ಪಲ್ಲವಕಭಿನಮಿಸಿ ರವಿಸುತ । ನಲ್ಲಿಗೈತಂದರುಹಿದನು ಬರವನು ಕಕುಸ್ಥಜನ ॥೨೧॥ ತೂಳಿದುತ್ಸವ ದುಬ್ಬರದ ರೋ। ಮಾಳಿಗಳ ಹೊದರಿನಲಿ ಹರಿಕುಲ। ಮೌಳಿಮಣಿಗಳ ನೀಲ ತಾರಾದಿಗಳ ಗಡಣದಲಿ॥ ಶ್ರೀಲತಾಂಗಿಯ ಪತಿಗೆ ಬಳಿಕ ಸ । ಲೀಲೆಯಲಿ ನಡೆತಂದು ಪದಕೆ ಫಲಾ । ಳಿಗಳ ಕಾಣಿಕೆಯ ನಿತ್ತೆರಗಿದನು ಹರುಷದಲಿ ॥೨೨॥ ಬರಸೆಳೆದು ತಕ್ಕೈಸಿ ಮೈತ್ರ। ಸ್ಫುರಣೆಯಲಿ ಮನವುಬ್ಬಿ ವಾನರ। ರರಸನನು ಮನ್ನಿಸಿದನುಚಿತ ಸುಭಾಷಿತಂಗಳಲಿ॥ ಧುರ ವಿಜಯ ನಳ ನೀಲ ತಾರಾ । ದ್ಯರನ ನಗುತಾದರಿಸಿ ತೊರವೆಯ । ಪುರವರಾಧಿಪ ಸಿದ್ಧನಾ ವರ ಋಷ್ಯಮೂಕದಲಿ ॥ ॥೨೩॥

ಮೊದಲನೆಯ ಸಂಧಿ ಸಮಾಪ್ತಂ.

ಎರಡನೆಯ ಸಂಧಿ.

ಸೂಚನೆ॥ ತಾಳ ತರುವನು ಮುರಿದು ಸಮರಾ। ಭೀಳ ದುಂದುಭಿಯಸ್ಥಿಯನು ತುದಿ।
ಗಾಲ ಲೊದೆದ ಪವಮಾನ ಸಿನ ತನುಜಂಗೆ ರಘುನಾಥ ॥

ಪದ್ಯ॥ ಕುಶನ ಕೇಳ್ ಕಪೀಶನಾ ರಾ । ಕ್ಷಸ ವಿಪಕ್ಷಿಯು ಬಂಧುಕೃತ್ಯದ ।
ಲೊಪಗೆ ಪಡಿಸಿದ ನುಚಿತ ಸೇವಾಭಾವಭಕ್ತಿಯಲಿ ॥ ನಸಿಸದುವುದಿನವೆರಡು ಬಳಿಕಾ ।
ವಸುಮತೀಶಂ ಗಿನಜ ಕರಯುಗ। ಬಿಸರುಹವ ಮುಗಿದಿಲ್ಲಿ ಗೈದಿದ ಹದನ ಹೇಳೆಂದ॥೧॥
ತರಣಿಸುತ ಕೇಳಾದ ಡಗ್ಗದ। ತರಣಿವಂಶದ ವೀರ ದಶರಥ । ಧರಣಿಪನ ನೀ ಕೇಳಿ
ಬಲ್ಲೈ ತನ್ನೃಪೋತ್ತಮನ ॥ ಹಿರಿಯಮಗ ನಾ ನೀಗ ನನ್ನು । ತ್ತರದ ಸಾಪತ್ನಂಗೆ
ಸೇರಿತು। ಧರಣಿ ತತ್ಪಿತನಾಜ್ಞೆಯಲಿ ವನವಾಯ್ತು ನಮಗೆಂದ ॥ ೨ ॥ ಗುರು ವಚನ
ವದು ಸುಜನ ಜನಕಾ। ಭರಣ ವಲಾ ಹೇಳಿ ವನವನು । ಚರಿಸಿದೆವು ಹನ್ನೆರಡುವರ
ವರುಷವನು ಗೌತಮಿಯ ॥ ವರನದೀ ತೀರದ ಸಮೀಪದ। ಪರಮ ಪಂಚವಟ ಪ್ರದೇ
ಶದ। ಲಿರಲು ಸುಳಿದುದು ಮುಂದೆ ಮಾಯಾಹರಿಣ ನೊಂದುದಿನ ॥ ೩ ॥ ಆಡಲೇನದ
ನಾ ಕುರಂಗವ । ಬೇಡಿದಳು ನಮ್ಮರಸಿ ನಾ ವದ । ರಾಡಿಕೆಯ ರೊಳಬೀಳಲತ್ತಲು
ಸತಿ ಯಶೋಭರದ ॥ ಜೋಡಣೆಯ ಯತಿರೂಪದಲಿ ಮರ । ವಾಟ ರಾವಣಕೊಂಡು
ಹೋದನು। ಶೋಡಿ ಬಲುಕೆಡುಗಾಗೆ ಬಂದೆವು ನಿನ್ನ ಬಳಿಗೆಂದ ॥೪॥ ಅರಿದ ನಸಿತರ
ಮೇಲೆ ನಭದಲಿ। ಮೊರೆಯಿಡುತ ಹೋದಳರಸಿ ರಘುನೃಪ। ನೆರಯಳೆಂಬುದನೊಯ್ದ
ವನು ದಶಕಂಠ ನೆಂಬುದನು ॥ ಮರುಗಿದನು ಮನದೊಳಗೆ ವಿಧಿಯನು । ಜರಿದು
ಜುಳಿಸಿ ಯಕಟ ಕಷ್ಟಾಸ। ಗರ ಮಹಾರಾಯರಿಗೆ ಬಂದುದೆ ಶಿವಶಿವಾಯೆಂದ ॥ ೫ ॥
ತರಿಸಿದನು ಬಳಿಕಬಲಿ ಬಿಸುಟಾ। ಭರಣವನು ರಾಜೇಂದ್ರ ಕಂಠಾ । ಭರಣ ಚಿತ್ತೈ
ಸೆಂದು ಮುಂದಿಳುಹಿದನು ಮನುಕುಲನ ॥ ಸ್ಫುರಿಸಿದುವು ಸೀತಾಕೃತಿಯ ಲಾ। ಭರಣ
ವದ ಕಂಠರಸ ತಂವನು। ತರಹರದ ಉದಕವನು ಹೊಳಹೊಳವೆಂಬ ಕಂಗಳಲಿ ॥೬॥
ದೇವ ಚಿತ್ತೈ ಸಸುರ ನಂದಾ। ದೇವಿಯರ ಹೊಯ್ವಂದು ಬಿಸುಟಳು। ದೇವ ರಾಘವ
ಬಂದಡೀವುದೆನುತ ನಮ್ಮಡಿಗೆ। ಈ ವಿಚಾರವ ಬಲ್ಲಡವ ತಾ । ಜೀವದಲಿ ಜಾಂಬವನೆ
ಕಲಿಸು । ಗ್ರೀವನೇ ತಾ ಬಳಿಕ ತಪ್ಪಿದ ಕಾರ್ಯಕೇನೆಂದ ॥ ೭ ॥ ಅಹುದು ಮಿತ್ರೀ
ನನುಜ ನೋಡಿವು । ಮಹಿಳೆ ಯಾಭರಣಂಗಳಿವು ತಾ । ನಹವೆ ನೋಡೆನಲೊಗುವ
ದೈಗು ವಾರಿಗಳ ಧಾರೆಯಲಿ ॥ ಅಹು ದಿವಲ್ಲೆಂಬೆಣಿಕೆ ಮನದಲಿ । ವಹಿಸ ಲರಿಯದೆ
ನೂಪುರಂಗಳಿ। ವಹುದೆನುತ ಕೆಲತಿಗೆದುತಲೆ ತೂಗಿದನು ಸೌಮಿತ್ರಿ ॥ ೮ ॥ ಶೃತಿ ಲಲಾ
ಟಗ್ರೀವ ಕಟ ವಿ। ಶೃತ ಕಾರಾಭರಣಂಗಳಿವು ಭೂ । ಸುತೆಯ ತೊಡವಹು ದೆನ್ನದಿ
ನೂಪುರಗಳಹುದೆಂದ ॥ ಮತಿಯುದೇನ್ನೈ ತಮ್ಮ ದಿಟವಿ । ಸ್ಮೃತಿಯಿದೇನೆನೆ ದೇವ
ಸಿತ್ಯ। ಸ್ತುತಿಯ ವಂದನೆಯಿಂದ ಬಲ್ಲೆನು ಕುರುಹ ನವನೆಂದ ॥ ೯ ॥ ಎನೆ ದಿವಾಕರ
ಸುತ ಶಿರಃಕಂ। ಪನದಲಿರ್ದನು ಹಾರವಿಸಿದನು। ಹನುಮ ಹೊಗಳಿದ ರುಳಿದ ನೀಲಾ
ದಿಗಳು ಮಸವಣಿಯೆ ॥ ಮನುಜರೇ ನೀವಾದಿ ಪುರುಷರ । ತನುಗಳಲಾ ಯೆಂದು
ಭಾಸ್ಕರ। ತನುಜ ತನುಪುಳಕದಲಿ ಕೊಂಡಾಡಿದನು ಲಕ್ಷ್ಮಣನ ॥ ೧೦ ॥ ಬಳಿಕ ನಿಜ
ವಲ್ಲಭೆಯ ಮುಕ್ತಾ। ಫಲ ಸುರತ್ನಾಭರಣ ನಿಚಯದ। ನೆಲೆಕುರುಹ ನರಿದತಿ ವಿರೋ
ಧಾಸ್ಪದದ ಬಿಗುಹಿನವಲಿ ॥ ಕೊಳಗುಳದೊಳರಿಭಟನ ಜೀವನ । ಸೆಳೆವ ಸೀತೆಯ
ತಂದ ಬಳಿಕಾ। ಲಲನೆಗೀವುನೀ ಯೆಂದು ಕೊಟ್ಟನು ಬಳಿಕ ರವಿಜಂಗೆ ॥೧೧॥ ತರಣಿ
ತನುಜ ಹಸಾದವೆನು ತಾ। ಧರಣಿಜೆಯ ವೈದೊಡವುಗಳ ಬೈ। ತೀರಿಸಿದನು ಬೇಳವಿಗೆ

ಗಳಾದುವು ಬಂಧುಕೃತ್ಯದಲಿ ‖ ಹೊರ ಹುಗದ ಬಳಿಕರಸ ವಾನರ । ರರಸಗೆಂದನು
ರವಿಜನೆಂಬೀ । ಮೊರೆಪೆಸರು ಬಂದಂದ ವಾವುದು ಹೇಳಬೇಕೆಂದ ‖ ೧೨ ‖ ರಾಮ
ಚಿತ್ರೈಸಾದ ಡಂಭೋ । ಜಾಯತಾಕ್ಷನ ನಾಭಿಯಲಿ ಪಾ । ಸೀಯುಜಾಸನ ಮುದಿಸಿದನು
ಲಯಸಲಿಲದಂತ್ಯದಲಿ ‖ ಆಯಿ ತಾತಂ ಗರಸು ತನ ನಾ । ರಾಯಣನ ಸೇವುದಲಿ
ಸೃಷ್ಟಿಯ । ಕಾಯುದಲಿ ಕುಶಲತ್ವ ಕಶ್ಯಪಮುನಿಯ ವಶವಾಯ್ತು ‖ ೧೩ ‖ ಕ್ಷಿತಿಪ
ಕೇಳಾಮುನಿಪತಿಗೆ ನಿಜ । ಸತಿಯರಾದರು ದಕ್ಷಸುತೆಯರು । ದಿತಿ ಯದಿತಿ ಮೊದ
ಲಾದ ಬಹುಮಾನಿನಿಯರದರೊಳಗೆ ‖ ಸತಿ ಕುಶಸ್ಥಲಿ ಯೆಂಬ ಖ್ಯಾತಿ । ವ್ರತೆಗೆ ಸಂಭ
ವಿಸಿದರು ವಾನರ । ಪತಿ ಪರಾಕ್ರಮಿ ಕಿಷ್ಕೆಯಾತಂಗಾದುದೀ ವಿಪಿನ ‖ ೧೪ ‖ ಅರಸ
ಕೇಳ್ ಕಿಷ್ಕಿಂಧೆಯೆಂದೇ । ಕರೆಸಿಕೊಂಡುದು ದುರ್ಗವಿದು ಕಪಿ । ವರ ಶಿರೋಮಣಿ
ಕಿಷ್ಕೆಯಿಂ ಬಳಿಕಿತ್ತ ಕಪಿಕುಲದ ‖ ದೊರೆಗಳಾಳಿದರಿದಕೆ ಸೇರಿದ । ಧರೆಯ
ನಲ್ಲಿಂಮೇಲೆ ಶಕ್ರನ । ಸರಿ ಪರಾಕ್ರಮಿ ಋಕ್ಷರಾಜಂ ಗಾದುದಾ ನಗರ ‖ ೧೫ ‖ ಆಳಿ
ದನು ಬಳಿಕಾತ ನೀತರು । ಶೈಲ ಸಂವರ್ಧನದ ಗೋಲಾಂ । ಗೂಲ ರಾಷ್ಟ್ರವ
ನಾಯ್ತು ವಾರ್ಧಿಕ ವಾ ಕಪೀಂದ್ರಂಗೆ ‖ ಬಾಲಕರು ತನಗಿಲ್ಲದಿರೆ ಶಶಿ । ಮೌಳಿಯಲಿ
ಮನಸಂದು ಸಾರ್ದನು । ಶೈಲರಾಜನ ತಪದಲಿರ್ದನು ಹಲವು ದಿನಗಳಲಿ ‖ ೧೬ ‖
ಅರಸ ಕೇಳಾಶ್ಚರ್ಯವನು ಪು । ಷ್ಕರಿಣಿ ಯೆರಡುಂಟಲ್ಲಿ ಮಿಂದನು । ಸರಸಿಯೊಂ
ದದರಲ್ಲಿ ಸೌಂದರಿಯಾದ ನಾಕ್ಷಣಕೆ ‖ ಸುರಪ ಕಂಡನು ಕಂಡನಾ ಸರ । ಸಿರುಹ
ಬಾಂಧವ ಬೋಧಿಸಿದರಿ । ಬ್ಬರು ಬಳಿಕು ದ್ಭವಿಸಿದರು ಸುತರಿಬ್ಬರಾ ಸತಿಗೆ ‖ ೧೭ ‖
ಸುರಪ ಸುತ ನಮ್ಮಗ್ರಜನ್ಮನು । ತರಣಿಸುತ ನಾನೀಗ ಬಳಿಕಿರು । ತಿರಲು ಮಿಂದಳು
ಸರಸಿ ಮತ್ತೊಂದರಲಿ ಸುರವನಿತೆ ‖ ತರುಣಿತನ ವಳಿಯಿತು ಮುನ್ನಿನ । ಪುರುಷ
ತನವಾಯ್ತೀಶ ನವ್ವಿ । ಬ್ಬರನು ಕೊಟ್ಟನು ಋಕ್ಷರಾಜಂಗರಸ ಕೇಳೆಂದ ‖ ೧೮ ‖
ಇವರು ನಂದನರೆಂದು ತಂದೆಗೆ । ವಿವರಿಸಿದ ರೆಮ್ಮಿಬ್ಬ ರಭಿಧಾ । ನವನು ಕೊಟ್ಟನು
ಕಾಮಿಸಿದ ರೂಪಿನ ಮಹಾವರವ ‖ ಯುವತಿಯಲಿ ಪಡೆ ಹೋಗು ಗಿರಿಸಂ । ಭವೆಯ
ಸಮನೆನಿ ಪಂಜನೆಯು ವೈ । ಷ್ಣವದ ಮಹಿಮೆಯ ಮಗಳು ಜನಿಸುವಳೀ ವಧುವಿ
ಗೆಂದ ‖ ೧೯ ‖ ಬೀಳುಕೊಂಡನು ಭುವನ ಗೋಲಾಂ । ಗೂಲಪತಿ ಬಳಿ ಕಂಜನೆಯ
ನಿಜ । ಬಾಲೆಯಲಿ ಪಡೆವಿತ್ತ ನಾಕನ್ನಿಕೆಯ ಕೇಸರಿಗೆ ‖ ಮೇಲೆ ಜವ್ವನದಧಟನಲಿ
ರತಿ । ಕೇಳಿಯಲಿ ಗಂಧರ್ವರೂಪನು । ತಾಳಿರಲು ಮನವಿಕ್ಕಿದನು ಪವಮಾನ ನಂಜ
ನೆಗೆ ‖ ೨೦ ‖ ರೂಪುದೋರದೆ ರಮಿಸಿದನು ಬಳಿ । ಕಾ ಪತಿವ್ರತೆಯನು ಚತುರ್ಮುಖ ।
ರೂಪ ನುಡಿಸಿದ ನೀ ಸಮೀರಜ ನಂಜನಾಸತಿಗೆ ‖ ಭೂಪ ಚಿತ್ತೈಸೀತ ವಜ್ರಿಯ ।
ಕೋಪದಲಿ ಕುರುವಳಿ ಯಲಾ ಯ್ತಾ । ತ್ರೈಪುರುಷರಿಂ ವಜ್ರಕಾಯದ ವರವು ।
ಬಳಿಕೆಂದ ‖ ೨೧ ‖ ಓದಿದನು ಬಳಿಕೀತ ಸಾಸಿರ । ವೇದವನು ಸೂರ್ಯನಲಿ ಸುರಪನ ।
ಲೋದಿದನು ಸೂತ್ರದ ಸುರೇಂದ್ರ ವ್ಯಾಕರಣ ಕೃತಿಯ ‖ ಐದಿದನು ಬಳಿಕೆನ್ನ ನಲ್ಲಿಂ ।
ಪಾ ದಿವಾಕರ ವಚನದಲಿ ತನ । ಗಾದುದಲ್ಲಿಂಮೇಲೆ ಕಥೆಯನು ಪೂರ್ವಪದ್ಧತಿಯ ‖
ಹಗೆತನವು ನಿನಗೇನು ಕಾರಣ । ಚಿಗುರಿದುದು ನಿಮ್ಮಣ್ಣನಿಂದೆನೆ । ತೆಗೆದ ನಸಿತರ
ವೇಂದ್ರ ಕಥೆಯನು ಪೂರ್ವಪದ್ಧತಿಯ ‖ ಸಗರಕುಲ ಚಿತ್ತೈಸು ಯಕ್ಷನ । ಮಗಳ

ನಾಮಮಾಯಾವಿ ಯೆಂಬವ । ನುಗಿದು ಕಳವಿನೊಳೊಯ್ಯುತಿರೆ ಮೊರೆಯಿಟ್ಟಳಭ್ರ
ದಲಿ ॥ ೨೩ ॥ ಕಂಡನವರನು ವಾಲಿ ಹಾಯ್ಕಿಸಿ । ಕೊಂಡ ನಾ ಕಾಮಿಸಿಯುಬಿಡೆ
ಬೆಂಕೊಂಡು ತೆವರಿದ ನವನ ಬಳಿಕವನಾ ನಿತಂಬಿನಿಯು ॥ ಕಂಡು ಬಿಡಲಾರದೆ ಪಿರೋ
ಧನ । ಕೊಂಡು ಕರೆವನು ಕಾಳಗಕೆ ಕ್ಯ । ಕೊಂಡ ಮನದಾದಿಯಲಿ ಕಪಿಕುಲ ಸಾರ್ವ
ಭೌಮನನ ॥ ೨೪ ॥ ತರುಣಿಯರ ಮೋಹನದ ಲುರೆಮ । ತ್ಸರಿಸದವರಾರಸದ
ಹೇವದ । ಹುಲಿ ಬಲಿದುದೀತಂಗೆ ಹರಿಬದ ಸೂಳು ಬಂಟೆಗೆಯ । ಧುರಕೆ ನಿಂದನು
ವಜ್ರಿ ತನಯನ । ಸರಹತಿಗೆ ಕಾಲೂರಲರಿಯದೆ । ತಿರುಗಿ ಮಾಯೆಯು ತಳೆದು ತಳಕಿ
ಸಿದನು ಬಿಲಾಂತರವ ॥ ೨೫ ॥ ಹಳಚಿದರು ಹರಿ ಕೈಟಭರು ಬಲು । ಗಲಹ ಕೈವಡಿ
ಯೆನಲು ನಮುಚಿಯು । ಬಲವಿರೋಧಿಯು ಬಾಹುಬಲ ಕೈವತ್ತು ಮಡಿಯೆನಲು ॥
ಕಲಹವತಿ ಬಿರಿಸಾಗೆ ನಾ ಬೆಂ । ಬಳಿಯುಬರೆಬರೆ ಬೇಡ ನೀನೀ । ಬಿಲದ ಬಾಗಿಲ
ಕಾದಿರೆನು ತೋಹೊಕ್ಕನಾ ವಾಲಿ ॥ ೨೬ ॥ ಬಾರದಿರು ಬೆಂಬಳಯ ಬಿಲದ । ದ್ವಾರ
ವನು ಕಾದಿರೆ ಮಗುಳ್ದವ । ಬಾರದಂತಿರೆ ಬೇಹು ನಿನಗೆಂದೆನ್ನಲ್ಲಿರಿಸಿ । ಹೋರಿದರು
ಹವಿನ್ನೈದು ವರುಷವು । ತೀರುವಪರಿಯಂತ ವಿಲಯ । ದ್ವಾರಮುಖನಾದೆನು ಬಳಿಕ್ಕವನ
ರಸ ಕೇಳೆಂದ ॥ ೨೭ ॥ ಸಾಯುತಾ ಹಾ ತಮ್ಮ ಹಾ ಸುಗ್ರೀವ ಹಾ ಯೆನುತೊದರಿ ರಣ
ದಲಿ । ಜೀನವನು ದಾಟಿಸಿದ ನಾ ಧ್ವನಿಗೇಳಿಸಿತು ಕಿವಿಗೆ ॥ ತೀವಿದತಿಭಯದಲಿ ಮ
ಹೇಂದ್ರ । ಗ್ರಾವ ಕಣೆಯ ನಿಪದ್ರಿಯನು ಕಿ । ತ್ತಾ ಬಿಲದ ಕುಹರದಲಿ ಕೀಲನು ಕೊಟ್ಟೆ
ನಾನೆಂದ ॥ ೨೮ ॥ ಸಾರಿದೆನು ನಗರವನು ಕಪಿಸಂ । ಸ್ಕಾರವನು ಮಾಡಿದೆನು ರಾಜ್ಯ ।
ಶ್ರೀರಮಣಿಗರಸಾದೆ ನರಸಿದನಣ್ಣ ನಾಬಿಲನ ॥ ದ್ವಾರವನು ಬಳಿಕಲ್ಲಿ ಕಾಣದೆ । ಧಾರು
ಣಿಯ ನೊಡೆತಿವಿದು ವಿಲಯದ । ಭೈರವನ ಪೊಲುಬಂದು ತನ್ನನು ಕೊಲಲು ಮನ
ದಂದ ॥ ೨೯ ॥ ಅವನಿಪತಿ ಚಿತ್ತೈಸು ಧರ್ಮ । ಶ್ರವಣ ಮುಖದಲಿ ಗಜ ಗವಯ
ಜಾಂ । ಬವ ಸುಷೇಣಾದಿಗಳು ಸತಿ ಸಹಜಾತ ಸುತರುಗಳ ॥ ತವಿಸುವ್ರದು ತಾ
ಧರ್ಮವಲ್ಲೆಂ । ದವರು ನುಡಿಯಲು ನೂಕಿದನು ಹರ । ಣವನು ತಾಳ್ದತಿ ಕೋಪದಿಂ
ದನುಮಾನವರ್ಗದಲಿ ॥ ೩೦ ॥ ಎಲೆಮಹೀಪತಿ ಕೇಳು ಮೇಲಣ । ಕೆಲಸವನು
ಕರ್ತವ್ಯವಲ್ಲೆಂ । ದು ಳಿಯ ಲಾಪ್ತರಮಾತಕೇಳದೆ ತನ್ನ ನಿಜಸತಿಯ ॥ ಸೆಳೆದು
ಕೊಂಡನು ಮಾನಭಂಗ । ಸ್ಥಳಕೆ ನಾಯಕನಾದೆ ನಂಜಿಕೆ । ಬಲಿದು ದಲ್ಲಿಂಮೇಲೆ
ಭಾರಿಯ ಬಲುಹಿ ದೆನುಗೆಂದ ॥ ೩೧ ॥ ಸಾರಿದೆನು ನಿಲಲರಿಯ ದೈಯ್ಯನೆ । ಮೇರು
ವಿನ ಕೀಲಚ್ಚನರಿದಾ । ಸಾರಸಪ್ರಿಯ ಸಲಹಿಕೊಂಡಿರ್ದನು ಕರಾಂಬುಜದ ॥ ವಾರಿ
ಜದ ಮಧ್ಯದಲಿ ರಣವ । ಧಾರೆದಟ್ಟೈಸಿದಂತೆ ವತ್ಸರ । ತೀರಿದವು ಹಲವಲ್ಲಿ ಹದ
ನಿನಿತಾಯ್ತು ತನಗೆಂದ ॥ ೩೨ ॥ ದೇವ ಬಳಿಕೀಚೆಯಲಿ ಗತಮಾ । ಯಾವಿ
ಯ್ಯೈಯ್ಯನು ಮಗನಕೊಂಡವ । ನಾವ ನೆಂದರಿಯಲು ಸುರೇಂದ್ರನ ಬೇಡಿದನು
ರಣವ ॥ ದೇವ ಪಡೆಯುವಗಂಜಿ ಶೂಲಿಯ । ಮಾವನನು ತೋರಿದನು ಬಳಿಕಾ ।
ಗ್ರಾವಪತಿ ಕೈಮುಗಿದು ಕಳುಹಿದ ನಬುಧಿಪನಬಳಿಗೆ ॥ ೩೩ ॥ ನಿಲಲರಿಯದಾ
ವರುಣ ತರಣಿಯ । ಬಳಿಗೆ ಕಳುಹಿದನಾತ ನೀತನ । ಕಲಹ ಕಾವ್ಯಸ್ಥಿತಿಯ ನರಿ
ಪನು ಜ್ಞಾನಮಾರ್ಗದಲಿ ॥ ಯೆಲವೊ ರಕ್ಕಸ ನಿನ್ನ ತನುಜನ । ತಲೆಯನರಿದವ ನನ್ನ

ತನಯನ | ಕೊಲೆಗೆ ಕೊಟ್ಟವನೊಬ್ಬನೇ | ಹೋಗವನ ಬಳಿಗೆಂದ ||೩೪|| ಅವ ನೆಲೇ ಮಹಿಷಾಸುರನ ಸಹ | ಭವನು ದುಂದುಭಿಯೆಂಬ ಹೆಸರವ | ಗವನಿಪತಿ ಚಿತ್ತೈಸು ಹೊಗಳುವೆನೇನ ನವನಧಟ || ಶಿವನಕೂಡೆ ಗಜಾಸುರನು ವಿ | ಷ್ಣುವಿನೊಡನೆ ಕೈಟಭನು ಹೋರಿದ | ರನಘಿಯಲಿ ಹೋರಿದನು ಹರಿಸಂಭವ ನೊಳವನೆಂದ ||೩೫|| ಬಿಂದು ದಬುಜಭವಾಂಡ ವಿಬ್ಬರ | ಧುರವ ಹೋರಟಿಗವುರ ಸಂತತಿ | ಸರಕುದೆಗೆದುದು ಪಿಡಿದು ಹಾರಿದವದ್ರಿ ಶಿಖರಚಯ || ಬರತು ದಂಬುಧಿ ಯುವನಿ ಬಕ್ಕನೆ | ಬಿರಿದು ಪೋಗುರ್ಬಿಸಿದುವು ನಿಡುಬ | ದ್ವಂದ ಭುವನಾವಳಿ ಭಯಂಕರ ವಾಯ್ತು ರಣರಭಸ ||೩೬|| ಕೇಳು ರಘುಪತಿ ಪಶುಪತಿಯಸನು | ಜೋಳಿಯಲಾ ವಾಲಿ ಸಂಗರ | ಶೂಲಿ ಸುಮನೋರತ್ನ ರಾಜಿತಹೇಮಮಯವಾಲಿ || ಸೂಳುವಿಗೆ ಸಂಗರವ ರವದು | ಬ್ಬಾಳಿನಲಿ ತಿರುಹಿಟ್ಟ ನರುಣಜ | ಲಾಳಿ ಜೋರಿದ ಋಶ್ಯಮೂಕ ಮಹಾಮಹೀಧರಕೆ ||೩೭|| ಅಂಗಜಾರಿ ಯಸದೃಶ ದುಗ್ರಮ | ತಂಗ ಮುನಿವರ ನಿದ್ದನಾ ಗಿರಿ ಶೃಂಗದಲಿ ನೈಷ್ಠಿಕ ತಪೋನುಷ್ಠಾನ ನಿಯಮದಲಿ || ಹಿಂಗಿದಸುವಿನ ದುಂದುಭಿಯ ವೈ | ಜಂಗಳವ ಬರಿದರುಣಜಲ ಮುನಿ | ಯಂಗ ದಡಿಯಲಿ ಬೀಳೆ ಕಿಡಿಕಿಡಿಯಾದನಾ ಮುನಿಪ ||೩೮|| ವಿಶ್ರಮ ಸ್ಥಳವೆಮ್ಮದೀಗ ಮ | ಹಾಶ್ರಮಕೆ ನಮ್ಮಯ ತಪಕೆ ಸ | ಹಸ್ರನಯನನ ಸುತನ ಘಲ್ಲಣೆ ಘನವಲಾ ಯೆನುತ || ಮಿಶ್ರಿತಾರುಣ ನಯನನಾ ಬಲ | ವಿಶ್ರುತಂಗಿತ್ತನು ಮದೀಯ | ಮಹಾಶ್ರಮಕೆ ಬರೆ ಮರಣ ವೈಗೊಡಲೆಂದು ಶಪಿಸಿದ || ದಿನಪ ನದರಿಂದೆನ್ನ ನಂದಾ | ಮುನಿಯ ಕೈಯಲಿ ಕೊಟ್ಟನಂತಂ | ದೆನಗೆ ನೆಲೆವನೆಯಾದುದೀಗಿರಿ ಸೇರಿದುದು ಬಳಿಕ || ಹನುಮ ನಳ ನೀಲಾದಿಗಳು ದಿನ | ದಿನಕೆ ಜೆಳದುದು ವೈರವಣ್ಣಂ | ಗೆನಗೆ ಹೆಂಬಳಿಯಿಂದ ಹೆದನಿದು ದೇವ ಕೇಳೆಂದ ||೪೦|| ವಾಸಿಲೇಸಭಿಮಾನ ಮಾರ್ಗದ | ರಾಸಿ ತಾಳಿಕೆ ಲೇಸು ಕಂಡೆವು | ದೋಷವನು ದುರ್ಜನಗೆ ನಿನಗಿನ್ನಾವ ಭಯಬೇಡ || ವಾಸವನ ನಗರದಲಿ ವಾನರ | ವಾಸವನು ನಿನ್ನ ಸು | ವಾಸಿನಿಯ ಬಳುವಲಿಗೆ ಜಯಸಿರಿವಧುವ ನಿನಗೆಂದ ||೪೧|| ಕೆಲಸವಿದು ಸಂಘಟಿಸಿದೇವರ | ಕಲಹ ಕೊಪ್ಪಿಸಿ ಕೊಡುವೆ ನಾದಶ | ಗಳನನೆನೆ ಸಾಕೆಂದು ಸತ್ಯವಚೋವಿಲಾಸದಲಿ || ಕಲಿಗಳಿಬ್ಬರು ಮಾಡಿದರು ನಿ | ರ್ಮಲ ಸುಭಾಷಾ ಸಮಯವನು ಕರ | ತಳದ ನೇಮ್ರಗೆಗಳಲಿ ನಂಬುಗೆಯಗ್ನಿ ಸಾಕ್ಷಿಯಲಿ ||೪೨|| ಕಂದ ಕೇಳ್ಕೈ ಭಾಷೆ ಘಟಂಗೆ | ಸಂದುಮೀಸರಿ ಮನುಜ ರವಿಜಗೆ | ನಿಂದು ನಿಲಲರಿಯದೆ ಪರೀಕ್ಷೆಗೆ ಮಾಡಿದನು ಮನವ || ಒಂದು ಬಿನ್ನಹ ಜೇಯಬಿದ್ದಿಹ | ದುಂದುಭಿಯ ವಿಗ್ರಹವ ನಿದಕೆಲ | ಕೊಂದಿಸಿದ ಭಟಗೆಲವ ನಣ್ಣನನೆಂದು ಕೈಮುಗಿದ ||೪೩|| ಐಸೆ ಮತ್ತೇನೆನುತಲಾ ಭೂ | ವಿನಾಶನುಂಗುಟ ದುದಿಯಲೆಲುಗಳು | ಸೂಸಲೊದೆದನು ನಗುತ ದಶಯೋಜನ ಮಿತಾವನಿಗೆ || ಬೀಸಿಬಿದ್ದವು ತಾಗಿದದ್ರಿಗ | ಳಾಸುರದ ರಭಸದಲಿ ಮನದೊಳ | ಗಾಸೆ ಬಲಿಯದೆ ಮಗುಳೆ ಮರ್ಕಟರಾಯ ನಿಂತೆಂದ ||೪೪|| ಅರಸ ಚಿತ್ತೈಸೇಳು ತಾಳಿವೆ | ಸರಿಸದಲಿ ದೈವಕದ ಮರನಿವ | ನುರುಗದಂದದಿ ದೈತ್ಯಮುನಿ ಧರಿಸಿದನು ವಿತಳದಲಿ || ಸುದರಿಗಸದಳವಿವು ಬಳಿಕವ | ನೆಸಡು ಕಡಿ ಮಾಡಿದರೆ ಕದನದ | ಲರಿವಧಾಸಮಯಕೆ ಸಂಸ್ತುತಿಪಹುದೆಲೇ ಯೆಂದ ||೪೫|| ಆಹುದು ಮತ್ತೇನೆನುತ ನೃಪ ಸಹ | ಭವನ

ನೊಗವನು ನೋಡಲಿತ್ತನು । ವಿಹಿತ ಸಮಯೋಚಿತ ಶರಾಸನವನು ಮಹೀಶಂಗೆ ॥
ಅಹಿಯರೂಪಿನ ದಾನವನ ವಿ । ಗ್ರಹದ ನುಂಗುಸಿದಗ್ರದಲಿ ಜಡಿ । ದ ಹಿಮಕಲಿಸುತ
ನೋಡೆನುತ ಯೊಡೆಯೆ ಚಚ್ಚಿ ಬೊಬ್ಬಿರದ ॥೪೬॥ ಬೀಳುತಾ ಮರನೊಪರಿದುವು ಸಿಡಿ ।
ಲೀಳಿಗೆಯು ತನವಲಿ ಋಮುನೋ । ಪಾಲಸುತ ನೆದೆನಡುಗೆ ಬೆಕಿದವು ಮತ್ತೆ ಬೇಗ
ದಲಿ ॥ ಏಳಲೀಸದೆ ತರಿವುತಿರ್ದುದು । ಕೋಲು ಕೋಲಾಹಲಿಸಿ ಕಪಿಕುಲ । ಮೌಳಿ
ಮಣಿ ಬೆರಗಾಗೆ ಹೊಗಳೆ ಸಮಸ್ತ ಕಪಿನಿಕರ ॥ ೪೭ ॥ ಸಂದಣಿಯ ಮರನೊಟ್ಟೈಸಿರ
ರಘು । ನಂದನನು ಬಳಿಕರಿದ ಬೆಸಲು । ಕೊರಿದುದಾ ಪಾತಾಳದಲಿ ಫಣಿರೂಪಕನ
ಖಳನ ॥ ಬಂದು ಹೊಕ್ಕುದು ಶರ ಸುದರ್ಶನ । ನಂದವಲಿ ಮೂಡಿಗೆಯ ನಾರವಿ ।
ನಂದನಾದಿ ಗಳೆರಗಿದರು ಜಯಜಯ ನಿನಾದದಲಿ ॥೪೮॥ ಎತ್ತಿ ಕಪಿ ಮಸ್ತಕವ ನಿನ್ನೀ
ನೊತ್ತಿ ನೋಡುವದುಂಟೆ ಮನ ತಾ। ಸಿತ್ತಟವ ಮೆಟ್ಟಿರಲು ಬೇಡ ನುತ್ತೆ ಪರೀಕ್ಷೆಯಲಿ॥
ಚಿತ್ತ ಶುದ್ಧಿಯ ನೆನಲು ಕಪಿ ತಲೆ । ಗುತ್ತಿ ದೇವಂಗಿನ್ನು ತಾಪಡಿ । ಯುತ್ತರಕೆ
ಪಾಪಟೆಯೆ ಪತಿಕರಿಸೆಂದು ಕೈಮುಗಿದ ॥ ೪೯ ॥ ಕೆಣಕು ಹೋಗಾದಡೆ ವಿಚಾರವ ।
ನೆಣಿಸದತಿ ಭೈರವನ ಮೇಲಿಣ । ರಣದ ಭಾರವು ನಮ್ಮದಂಜಿಕೆಬೇಡ ನಿನಗೆನುತ ॥
ಪ್ರಣತಜನ ಸುರಧೇನು ಸುಮನೋ । ಗಣ ಮಹಾವಿಭವಿರಲು ತೊರವೆಯ । ಗುಣ
ಭರಿತ ನರಸಿಂಹ ನಭಯವನಿತ್ತನಿನಜಂಗೆ ॥ ।೫೦॥

ಎರಡನೆಯ ಸಂಧಿ ಸಮಾಪ್ತಂ.

ಮೂರನೆಯ ಸಂಧಿ.

ಸೂಚನೆ॥ ರಾಯ ಕಪಿ ಸುಗ್ರೀವ ನಮರರ । ರಾಯ ಕುವರನ ಹಳಚಿನೊಂದು ಪ ।
ಲಾಯನದಲುರೆ ಜರಿದು ನುಡಿದನು ಜಾನಕೀಪತಿಯು ॥

ಪದ್ಯ॥ ಎಲೆ ಕುಶನೆ ಕೇಳಗ್ರಜನ್ಮನ । ಕೊಲೆಗೊಡಂಬಟ್ಟನು ಕಣಾ ಹೆ ।
ಬ್ಬಲದ ಹೆಕ್ಕಳ ಜಕ್ಕುಲಿಸಿದುದು ಜಾನಕೀಪತಿಯ ॥ ಕಲುಮರನ ಕೈದುಗಳ ಜಂಘಾ ।
ಕಲಿತ ಗಾಡಿಯ ಗಡಿಯ ಗರ್ವದ । ಕಿಲಿಕಿಲಾಯುತ ರವದ ಭಟ ರುಬ್ಬಿಸಿದರಿನ
ಸುತನ ॥ ೧ ॥ ಧರಣಿಪನ ಕೈಸನ್ನೆಯಲಿ ಮೋ । ಹರಿಸಿ ನಡೆದುದು ಸೇನೆ ಮುತ್ತಿದ ।
ರಿರಳು ತುದಿಯಲಿ ದುರ್ಗವನು ದಿವಿಜೇಂದ್ರ ಚಂದ್ರಮನ ॥ ಪುರವೊಳಾಡಿದ
ಪದ್ರಿತರು ಕಾ । ಹುರದೊಳಾ ಕಳಕಳಿಕೆ ಕೇಳಿಸಿ । ತರಿಭಯಂಕರ ಭಟನ ವಿಜಯ
ರಣಾಂಗ ನಾಟಕನ ॥ ೨ ॥ ಹಗೆಗಳಿಂದೆಮಗಾರು ನಿರ್ಜರ । ನಗರಪತಿ ನಮ್ಮಯ್ಯ
ನುಳಿದರ । ಸುಗಳು ಪಾಡಲ್ಲೆನಗೆ ದಿಗಧಿಪ ಧರೆಯ ಧರಣಿಪರು ॥ ಹೆಗಲು ಬಡುಕರ
ಹೇಳದಿರು ವಾ । ಸುಗಿಗೆ ಗರುಡರು ನಾನ ನಮ್ಮೊಳ । ಗಗಡುದನವೀ ಹುರಿಗೆ ತಮ್ಮಂ
ಗಲ್ಲದಿಲ್ಲೆಂದ ॥೩॥ ಕೆಣಕಿದವ ನಸೀಗಲುತನ । ಕುಣಿಹವನು ಕುಂದಿಸುವೆ ನೆಂದೀ ।
ರಣದೊಳಗೆ ಸಾಕೆನಿಸುವೆನು ಸಂಸಾರತರ ಸುಖವ ॥ ಅಣದಣದು ಹೋಗಲವನ ಗಗ
ಣಾಂ । ಗಣದ ಮಾರ್ಗಿಯ ಮಾಡದಿರೆ ಬಲು । ಗಣೆಯ ಭಟನೇ ತಾನೆನುತ ಹೊರವಂಟ

ನಾಹವಕೆ ||೪|| ಊರೊಳಗೆ ಬೀಳುವ ಮಹಾದ್ರಿಮ | ಹೀರುಹಂಗಳ ಜಂಗಳವ ನುಗ್ಗಾ
ದಾಲಿಸುತ ಹೊರವಂಟುದೊಡನೆ ಸುರೇಂದ್ರಸುತ ಸೇನೆ || ಆರು ನಿಲ್ಲಹುದವರ
ಪಾರಾಪಾರಲಿ ಘಾಡಿಸುವ ರವಿಜನ | ಕೋಡಿಯ ಕಪಿಭಟರು ಕೆದರಿತು ಕಂಡ
ವೈಗಳಲಿ ||೫|| ಬಂದು ನಿಂದ ಇಂದ್ರಸುತ ನಿನ | ನಂದನನ ಸರಿಸಗಲಿ ಹಂಬಳ |
ಯಿಂದ ಹೆಚ್ಚಿದ ಮರದ ಮಸಕದ ಮತ್ಸರಂಗಳಲಿ || ಕುಂದು ಹೆಚ್ಚಿನಪಾಡು ಪಂಥವ |
ಕಂದುಕಸರಿನ ಕಿಲಿಮನದ ಕಡ | ಹಿಂದ ಕೈದುಡುಕಿದರು ಕದನಕೆ ಕಪಿಗಳಾಚೆಯಲಿ||
ಬಲವೆರಡು ಹಿಮ್ಮೆಟ್ಟಿ ನಿಂದವು | ಕಲಿಗಳಿಬ್ಬರ ಕೈಯ್ಯ ಸನ್ನೆಯ | ಲಳಿಬಲರ ಬಾಹು
ಪ್ರತಾಪದ ಬಹಳ ತೇಜದಲಿ || ಮಲೆತುದಾ ಕೈಲಾಸ ಕನಕಾ | ಚಲದೊಳಿನೆ ರಣವೀರ
ರಿಬ್ಬರು | ಕುಲಿಶದೆದೆ ಸಿಗುರೇಳಿ ಸೀವರಿಸಿದರು ಬೊಬ್ಬೆಯಲಿ ||೭|| ಅಡಿಯ ನೆರೆದೆಗ
ದೊದರಿ ಭುಜವನು | ಹೊಡೆಯಲಿಬ್ಬಗೆಯಾಯ್ತು ಮೇರುವಿ | ನೊಡಲು ಬೆರಳಿನ
ಬಾಯ ಬೊಬ್ಬೆಯ ಬಿಗುಹಿ ಗಬುಜಜನ || ಮಿಡುಕು ಕಂಠದೊಳಾಯ್ತು ಮಂಡಿಯ |
ಪಡಿಯ ಪದಪದ್ಧತಿಗೆ ಫಣಿಪನ | ಹೆಡೆ ನಿರಿಲು ನಿಟಲೆಂದವೇನದ್ಭುತದ ರಣರಭಸ||೮
ಅಬ್ಬರಿಸಿ ಬಲು ಮುಷ್ಟಿಗಳ ನಭ | ಕೆಬ್ಬಿಸುತ ಕೈ ಮುಷ್ಟಿಯಲಿ ಸುರ | ರುಬ್ಬರಿಯೆ
ಸುಳಿಸಿದರು ಮುಷ್ಟಿಯ ಪಾಳುಪಾಡಿನಲಿ || ಹಬ್ಬುಗಿಡಗಳ ಹೊದರುದಿವಿಗಳ | ಗುಬ್ಬ
ರದ ಸಮರದಲಿ ತಾಯ್ಮಳ | ಲುಬ್ಬುತಿರ್ದುದು ಶರಧಿಯಲಿ ತಾ ಸೂರಹಲೇನೆಂದ ||
ಶಿರವು ಕಂಠ ಕಪೋಲ ಭುಜ ಕಂ | ಧರ ಮಹೋರುಸ್ಥಳದ ಲಾಡಿದ | ವರಿಭಯಂಕರ
ಭಟರ ಯುದ್ಧಗಳಶನಿ ಘಾತದಲಿ || ಸುರಿವ ಕಿಡಿಗಳ ತೋಳ ನೆಗಹಿನ | ತಿರುಹು ತಿವಿ
ಗಳ ತೀವ್ರತೆಯ ಲ | ಬ್ಬರಿಸುತಿರ್ದುದಜಾಂಡಮಂಡಲ ಘಮ್ಮು ಘೇರೆನುತ || ೧೦ ||
ಉಸಿರ ಕಾರ್ಬೊಗೆ ಕಲ್ಪಮೇಘದ | ಬೆಸುಗೆಯಂತಿರೆ ಭಾನು ಬಿಂಬವ | ಮುಸುಕು
ತಿರ್ದುದು ಕಂಗಳಿಂ ದೊಗುಲಿಂಗಣೆಗಳೆಯ || ಬಸುರ ಬೇಯಿಸುತಿರ್ದುದದನಂ |
ದಿಸುತಲಿರ್ದವು ಭಟರ ವೈಗಳ | ಲೊಸರ್ವ ಬೆಮರಡಿಗಡಿಗೆ ಪಡಿಯಿಡಲಿಯೆ ಸಾ
ನೆಂದ ||೧೧|| ಜವನ ಜೂಜಿನಕೂಟ ಲಯ ಭೈ | ರವನ ಕಾಲ್ದೊಳಿಸಾಟ ವಿಲಯದ |
ಶಿವನ ನಿಟಿಲಿನ ನೋಟ ನರಸಿಂಹನ ಭುಜಾಸ್ಫೋಟ|| ಪ್ಲವಗ ಪತಿಗಳಲಿರ್ದಪೈ ತ್ರೈ |
ಭುವನ ಕಂಪಿಸುತಿರ್ದುದೈ ರಣ | ದವಕಿಗರ ಧಕ್ಕೆಯದ ಡೆಕ್ಕಳ ದದುಭುತಾರವಕೆ||೧೨||
ಘಾಯಗತಿಯ ಗಡಾವಣೆಗೆ ರಘು | ರಾಯ ಹಾ ಯೆನುತಿರ್ದನೈ ಮರ್ಝು | ಮಾಯೆ
ಮಾಯೆನುತಿರ್ದ ನಂಗವ ನೊಲದು ಸೌಮಿತ್ರಿ || ವಾಯುಸುತ ನಳಲೀಚೆಯಲಿ ತಾ |
ರೇಯ ಜಾಂಬವರಾಚೆಯಲಿ ಸಮ | ರಾಯತದ ಸೌರಂಭ ಲೇಸೆನುತಿರ್ದರಿದ್ದೆಸೆಯ||೧೩||
ಕೈಟಭನ ಕಮಲಾಂಬಕನ ಹೊ | ಯ್ದಾಟವೋ ಮೇಣಂಧಕನ ಶಶಿ | ಜೂಟನಿಬ್ಬರ
ದಿವಿಗಳೋ ನರಹರಿ ಹಿರಣ್ಯಕರ || ಆಟವೋ ರಣರೌದ್ರವೋ ಶತ | ಕೋಟಿ
ಪಾಣಿಯ ವೀರಜಂಭನ | ಘಾಟಿಮುಷ್ಟಿಪ್ರಹರವೋ ಪರೀಕ್ಷಿಸುವುದರಿದೆಂದ || ೧೪ ||
ಸೋಲವಿಲ್ಲದೆ ನಡೆವುತಿರ್ದುದು | ಕಾಳಗವು ಕಪಿವೀರರಿಗೆ ಕಪಿ | ಜಾಲವಿದ್ದುದು
ರಣವ ಸೊಗಸಿನ ಸುಖದ ಸುದ್ದಿಯಲಿ || ಆಲಿವಣಿಯದೆ ಮಗುಳೆ ನುಗುಳೆ ಭ | ಡಾಳ
ನೋಟದ ಬಿಲ್ಲತಿರುವಿನ | ಕೊಲ್ಲ ತೋಹಿನ ರಾಮ ನಿರ್ದನು ನೋಡುತಾಹವವ||೧೫||
ಘುರ ಚಮತ್ಕೃತಿ ಚಟುಳತ ನಿ | ರ್ಭರ ವಿಡೆಂತುಟೊ ವಪ್ರಿತನಯನ | ಕರಹತಿಗೆ

ಕರದಂಟಸಖ ಸುತ ರಣಕೆ ಯೋಜನನ || ಚರಣತಳದಿಂದೊದೆದ ಸಿಡಿಲಿನ | ಭರಕೆ ಬಿರುತುದುರಿದ ಕುಲೋರ್ವಿ | ಧರದ ಪ್ರೊಲು ಜಿದ್ದೊದ್ದುಕೊಂಡನು ಋಷ್ಯಮೂಕದಲಿ ೧೬|| ಘರಘರನೆ ಹಲುಕಿರಿದು ಚಾಪವ | ಗಿರಿತನಕೆ ಬೆನ್ನಟ್ಟಿ ತಮದಲಿ | ತಿರುಗಿದನು ಸುರರಾಜಸುತ ನಸ್ತಮಯ ಸಮಯದಲಿ ಶಿರವ ತಡವರಿಸುತ್ತ ಮಹದೇ | ವರಿಸು ಬವರದ ಬೋಳಕೊಮ್ಮೆಗೆ | ಹರಣವುಳಿದುದೆ ಯೆನುತ ರವಿಸುತ ನೇರಿದನು ಗಿರಿಯ | ನೊಂದನೈ ಸುಗ್ರೀವ ತಪ್ಪಾ | ಯ್ತೆಂದ ಗೆಟ್ಟುದು ಬಲ್ಲವಿಕೆ ಯೇ | ನೆಂದು ಬಗೆವನೊ ಚಿತ್ತದಲಿ ಕಡುಹೀನನಾಯ್ತೆಮಗೆ || ಯಿಂದೆನುತ ದುಮ್ಮಾನದಲಿ ವನ | ನೊಂದು ಲಕ್ಷ್ಮಣಸಹಿತ ಭಾಸ್ಕರ | ನಂದನನ ಬಳಿಗಾಗಿ ಭಾನುಕುಲೇಂದ್ರ ನಡೆತಂದ || ೧೮ || ಕಾಣುತೀ ರಘುಪತಿಯ ಚಾಪಕೃ | ಪಾಣ ಬಾಣವ ನೇರಿಳಿಯ ಕಡೆ | ಗಾಣಿಕೆಯಲೀಕ್ಷಿಸಿ ಮಹಾದೇವರಿವ ಕಂಡೆನಲ || ಪ್ರಾಣಸಖನೆಂದಿತ್ತ ಭಾಷೆಯ | ಗೋಣಕೊಯ್ವೀ ಸೊಗಸು ಸುಭಟ | ಶ್ರೇಣಿಯಲಿ ಹೊಗದವನು ನಿನಗಿನ್ನಾರು ಸರಿಯೆಂದ || ೧೯ || ತಕ್ಕಕಾರ್ಯಕ್ಕೊದಗಿದನು ಬಲು | ತೆತ್ತಿಗನು ಬವರದಲಿ ಕುಂದಿ | ಇತ್ತ ಭಾಷೆಗೆ ಸಾಲದೇ ಸಾಂಮ್ರಾಜ್ಯನೇಮಕದ || ಉತ್ತಮಿಕೆ ಲೇಸಾಪ್ತನಹ ಹಗೆ | ಸತ್ತನೀತನ ಕೈಯ್ಯಮಕ್ಕಳ | ಹೆತ್ತಡೀತನ ಹೆಸರಿಡಲು ಬೇಕೆಂದ ನಾ ರವಿಜ || ೨೦ || ಹನುಮ ಕಡೆಯಾ ಮರೆಯಬಹುದೇ | ಜನನ ಜನುಮದ ಲೀನರೇಂದ್ರನ | ತನುವಿದನು ತಾ ಕಾದುಕೊಂಡನು ಕಡೆಯಮಾತೇನು || ಬನಪಮಾಡಿದ ಹಂಗ ಮಗುಚುವ | ಜೆನಗೆ ತೀರುವದಲ್ಲಿ ಚತುರಾ | ನನನ ಪರಮಾಯುಷ್ಯಪರಿಯಂತೆಂದನಾ ರವಿಜ ||೨೧|| ಮನನ ಮುರಿಯಲು ಬಹುದು ದೈತ್ಯನ | ಸುವನ ನುಲಿಯಲುಬಹುದು ನಿರ್ಜರ | ನರಭುಜಂಗವ ರೊಳಗೆ ಹಳಚಲುಬಹುದು ಸುರಪಜನ || ಹರಣಗೊಂಬುದು ಸೂರೆಯ ಶಂ | ಕರಗೆ ತೀರದು ನಿನ್ನ ಪಾಡೇ | ನರಸ ರಕ್ಷಿಸಿದಾತ ತನ್ನನು ಬಿಜಯ ಮಾಡೆಂದ || ೨೨ || ನಂಬುಗೆಯ ನುಡಿಯಿಂದ ರಕ್ಷಿಸಿ | ಕೊಂಬುದೆನುಗಾಯ್ತು ಕಟಕಸಿಯನು | ನಂಬಿಕೆಟ್ಟುದು ಕಾರ್ಯ ನಮ್ಮದು ದ್ರೋಹವೆಮಗಾಯ್ತು || ಹಂಬಲಿನ್ನೇಕಾವ್ ಕೃತಘ್ನರು | ಬೆಂಬಲಿಕ್ಕಿನ್ನೊದಗಿತಿಲ್ಲಿಂ | ನೆಂಬ ಮಾತಿನ್ನೇಕೆ ಬಿಜಯಂಗೈಯ್ವಿ ನೀವೆಂದ || ೨೩ || ಅರಿಯದವರನು ನಂಬಿ ಹಗೆಯನು | ತೆರನರಿಯ ತೊಡಗುವದು ನಮ್ಮದು | ಕಲಿತನವು ಕುಂದಿಲ್ಲ ನಿಮ್ಮಲಿ ನಿಮ್ಮೊಡನೆ ನಾನು || ಒರಲಿಫಲವೇನರಸ ಬಟ್ಟೆಯ | ತೆರಹುಗೊಡಿರೈ ಹೋಗಲೀನೃಪ | ಗುರುವ ಮೈತ್ರಕೆ ಮರಣಕುಪಕೃತ ವಾಗದಿರದೆಂದ || ೨೪ || ಕೊರತೆನಮ್ಮದು ನಮ್ಮನೀತಾ | ಜರೆದು ನುಡಿಯಲು ಬಹುದು ಯಿದಕಾ | ಬರಿಸಿದೆವು ನೋಪಿಲ್ಲ ಲಕ್ಷ್ಮಣನಾಣೆ ಚಿತ್ತದಲಿ || ಅರಿಯದಾದೆನು ಸುಭಟರಿಬ್ಬರ | ಕುರುಹ ನದರಿಂದಂಬು ಹೂಡದೆ | ತೆರಳಿಗೆದೆವೈ ವಲ್ಲದಂಜಿದುದಿಲ್ಲ ಹಗೆಗೆಂದ || ೨೫ || ಧರೆಯೊಳಗೆ ತಾನಿಲ್ಲಿ ಶಿಷ್ಯರ | ಶರಣಾಗತಿಕರ ಸಖರ ಸೋಲದ | ಧುರದಕಂಡರೆ ಮೇಲೆಕೈಮಾಡುವುದು ಶಾಸ್ತ್ರವಿದು || ಗುರುಲಘುವ ನಿಮ್ಮಿಬ್ಬರಾಜಿಯ | ಹರಹಿನಲಿ ತಾ ಕಂಡುದಿಲ್ಲಚ್ಚ | ರಿಯ ಕಂಡೆನು ಕೆಲಕೆ ಒಡಿದಿರ್ದುದನು ನೀನೆಂದ || ೨೬ || ಅಂಬುಕಳುಹಿದ ಡಾರಹರಣವ | ಕೊಂಬುದೋ ನಾನರಿಯೆ ನದರಿಂ | ನಂಬಿದವರನು ಕೊಂದನೆಂಬ

ಶೌರ್ಯ | ಡಂಬರನ ನಾಜಿಯಲಿ ನೂಹಿನೊಳೆಂದ ನಾ ರಾಮ || ೨೭ || ನೋಯ ದಿರು ಚಿತ್ತದಲಿ ದಶರಥ | ರಾಯನಾಣೆ ಕಪೀಶ ನಿನ್ನಯ | ದಾಯಿಗನ ದಿತಿಸಂಭವನ ದಾಯಿಗನ ಸಭೆಯೊಳಗೆ || ರಾಮನನು ಮಾಡುವೆನು ಮಾತಿದು | ಪಾಯವಾದರೆ ನಿರಯನಿಳಯದ | ಯಾಯಿಗಳ ಗತಿಯಾಗಲೆಂದನು ನೀಡಿ ನಂಬುಗೆಯ ||೨೮|| ಅಂಜಬೇಡಿನ್ನೆಂದು ನಿರ್ಭಯ | ಪಂಜರವ ಮೊಗಿಸಿದನು ದುರಿತ ವಿ | ಭಂಜನನು ತೊರವೆಯ ನೃಕಂಠೀರವನು ರವಿಸುತನ || ಅಂಜದೊದಗುವ ಮಗನ ಸಮರಸ | ಮಂ ದೆಸೆವ ನೋಳುತ್ಸವದಿ | ಕಂಜಸಖ ಸಡರಿದನು ನಸಿದುದಯಾದ್ರಿ ಪರ್ವತವ || || ೨೯ ||

ಮೂರನೆಯ ಸಂಧಿ ಸಮಾಪ್ತಂ.

ನಾಲ್ಕನೆಯ ಸಂಧಿ.

ಸೂಚನೆ|| ಪತಿಕರಣೆ ಪಲ್ಲಟಿಸೆ ಶರಣಾ | ಗತನ ರಕ್ಷಿಸಿ ರಾಮ ನಮರಾ | ವತಿಗೆ ಬೀಳ್ಕೊಟ್ಟನು ಬಲಾಸುರ ರಿಪುಕುಮಾರಕನ ||

ಪದ್ಯ|| ಎಲೆಕುಮಾರರಿರ ಕೇಳಿರೈ ನೃಪ | ತಿಲಕ ರಾಮನ ನೇಮನಿಂ ದು | ಜ್ವಲಿಸಿದನು ರಿಪುವಿಪುಲ ಕಾಲಗ್ರೀವ ಸುಗ್ರೀವ || ನಳ ಸಮೀರಜ ನೀಲ ತಾರಕ | ರುಲಿದು ಕಲಿಯೇರಿಸಿದ ರಾಜಿಗೆ | ನಿಲುವ ವೊಲುಕಪಿಸೇನ ಕೋಲಾಹಲಿಸಿ ತಾಟಿಯಲಿ || ೧ || ಕರೆದು ರಘುಪತಿ ತಮ್ಮನನು ಸಂ | ಗರಕೆ ಕುರುಹಿಗೆ ಕೊರತೆ ಬಾರದ | ತೆರನಮಾಡೆನೆ ನಳವಳಿಪ ಗಜಪುಷ್ಪಮಾಲಿಕೆಯ || ತಿರಿದ ತುಲಸಿಯ ದಳ ವನಘ ಶತ | ಹರನ ನೆಡೆಗೆಡೆ ನಿರುತಿವೈರಿಯ | ಧುರವಜಯಿಸೆಂದಿಕ್ಕಿದನು ಕೊರಳಲಿ ಕಪೀಶ್ವರನ || ೨ || ನಡೆದು ದಳ್ಳಿಮ್ಮೇಲೆ ಬಲವವ | ಗಡೆಯ ನಳ ನೀಲಾದಿ ಕಪಿಗಳ | ಗಡಣದಲಿ ಗಿರಿ ತರು ನಿಕಾಯದ ನೆಗಹು ಕೈಗಳಲಿ || ಜಡಿವ ಬೊಬ್ಬೆಯ ಜಾನು ಜಂಘೆಯ | ದೃಢಗತಿಯ ದುವ್ವಾಳಿಗಳು ಬಂ | ದಡಸಿ ಮುತ್ತಿದ ರಿಂದ್ರಪುತ್ರನ ಪುರವ ನಗಲದಲಿ || ೩ || ಬಗೆಯದಿರ್ದುದು ದುರ್ಗವಿವ ರು | ಬ್ಬುಗಳ ಲೆಕ್ಕಿಸದಿರ್ದ ರಿಂದ್ರನ | ಮಗನ ಬಳಿಗಟ್ಟಿದರು ಮಿಗೆ ಕಾಳಗಕೆ ಕಪಿಚರರ || ನಗುತ ಚರರುತ್ತರಕೆ ನಿಮ್ಮನು | ಗಗಡುತನ ವಿನಿಟುಂಟೆ ರಣದಲಿ | ತೆಗೆಯನೆಲೆ ನಿರ್ಧರಿಸಿ ಬಂದನೆ ತಮ್ಮನೀಗೆಂದ || ೪ || ಜೂಜುಸ್ತೋತರೆ ಸೋಲುವುದೆ ಮರು | ಜೂಜು ಸಾಕೆನ್ನದರ ಮಾತೇ | ಕಾಜಿರಂಗದಲಿನ್ನು ನಿನ್ನಯ ಭಟ ಶಿರೋಮಣಿಯ || ಪೈಜೆಗಾರನ ಗೆಲುವಡಹುದುಬಿ | ಡೌಜಸುತ ನೆಂಬಗ್ಗಳಿಕೆ ನಿ | ವ್ಯಾಜವೇಕೆನುತುಲಿದ ರಿದಿರಲಿ ಚರರು ಕಪಿಪತಿಯ || ೫ || ಕಡುಹು ನಿಮ್ಮವಗಿನಿತಿರಲು ನಾ | ವಡಗಬಹುದೇ ಬಹೆ ನಡೆಯಿ ನಿ | ಮ್ಮೊಡೆಯನನು ನಿಂದಿರಿಸಿ ಕೊಂಡಿರಿ ನಿಸ್ಸಿನಂದದಲಿ || ನುಡಿ ಹಲವು ಸಾಕೆಂದವರ ಬೀ | ಳ್ಕೊಡುತ ಭದ್ರಾಸನವ ನಳಿದವ | ಗಡೆಯ ಕಪಿರಾಜೇಂದ್ರ ಕದನೋದ್ಯೋಗ ಮನನಾದ || ೬ || ತರಿಸಿದನು ತನಗಿಂದ್ರನ ಸಂ ರ | ಘುರದೊಳಿತ್ತ ಸುಜೀವರತ್ನ | ಸ್ಫುರಿತ ಕಾಂಚನಮಾಲೆಯನು ನಿಖಿಳಾ ಸುಮಾಲಿ

ಯನು ॥ ಧುರದೊಳರಿಭಟ ಸರ್ವಬಲವನು । ಬೆರಸಿಕೊಂಬು ಬಲಾತಿಶಯ ಬಂ।
ಧುರದ ಮಾಲೆಯ ಧರಿಸಿ ತನ್ನರಮನೆಯ ಹೊರವಂಟ ॥ ೭ ॥ ಆಸಮಯದಲಿ ಬಂದು
ತಾರೆ ನಿ । ಜೇಶನೊಡನಿಂತೆಂದ ಳಿನಜನ । ದಾಶರಥಿ ಪತಿಕರಿಸಿದನು ಗಡ ಪರಮ
ಮೈತ್ರಿಯಲಿ ॥ ವಾಸಿಬಿದ್ದುದು ಗಡ ತದೀಯ್ಯ ಮ । ಹೇಶನಲಿ ತಮ್ಮನಲಿ
ತೋಟಿಯ । ಜಯಿಸು ವಾಯತಿಕೆಯ ವಿಚಾರಿಸುನೆಗಳುವುದು ಗುಣಿಸ ॥ ೮ ॥
ಆಮಹೀಪತಿ ಯಂಗನೆಯ ನು । ದ್ದಾಮ ಬಲದಶಕಂಠ ಬನದಲಿ । ವೈ ಮರಸಿ
ಕೊಂಡೊಯ್ದುಗಡ ಬರವಾಯ್ತುಗಡ ಬಳಿಕ ॥ ಈ ಮಹೀಮಂಡಲಕೆ ರುಮೆಯನು ।
ಕಾಮಿಸುವ ಕಪಿಕತು ಭಾಷೆಯ । ನಾಮಹಿಪನಲಿ ಕೊಂಡು ಕೊಲ್ಲೈತಂದ
ರಾಜಿಯಲಿ ॥೯॥ ಅನುಜ ನಂಗನೆಗಳುಪಿ ವೈರವ । ನೊಸರಿಸಿದೆ ಯಾತನಲಿ ತಾಸಿದು
ನಿನಗೆ ದೂಷಣವಲ್ಲವೇ ಯಿನ್ನಾದರೆಯು ರುಮೆಯ ॥ ಇನಸುತನ ಕರೆದಿತ್ತು ರಘು
ನಂ। ದನನ ಕಾರ್ಯಕ್ಕೊದಗು ಲೇಸಿನ । ನೆನಹಿಂದೀಗತಿ ಮಥನ ಲೇಸಲ್ಲೆಂದಳಾ
ತಾರೆ ॥ ೧೦ ॥ ಮರುಳೆಲಾ ಯೆಲೆತಾರೆ ತನ್ನಯ । ಪರಿಯನರಿಯಾ ನೀನು ರಣದಲಿ ।
ಹರಿ ಹರ ಬ್ರಹ್ಮರನು ಬಗೆಯನು ಬಗೆಯನೆಂಬುದನು ॥ ತಿರುಗಿ ರುಮೆಯನು ಕೊಟ್ಟು
ತಮ್ಮನ । ಕರೆಸಿಕೊಂಬೀ ಹೇಸಿಕೆಯ ನೀ । ಶಿರದೊಳಾನುವ ನಲ್ಲೆನುತ ನಡೆತಂದ
ನಾಹವಕೆ ॥ ೧೧ ॥ ಪುರವ ಮುತ್ತಿದ ವೈರಿಸೇನೆಯ । ಶರಭ ಶತಬಲಿ ಗಜ ಗವಾ
ಸಂ । ಗರಭಯಂಕರ ಸುಮುಖ ದುರ್ಮುಖ ಗಂಧಮಾಧನರ ॥ ಜರಿಯ ಗೆಡಹುತೆ
ಲಂದನಾಪುರ । ಕಿರಿಸಿ ಜಾಂಬವ ಗಜ ಸುಷೇಣರ । ನೆರವಿಯಲಿ ನಡೆತಂದು ನಿಂದಿದ
ನನುಜ ನಾಹವಕೆ ॥ ೧೨ ॥ ನಿಲುಕಿದರು ಭಟರಿಬ್ಬರು ಭಯದ ಕಲಗಳಬ್ಬರಣೆಯಲಿ
ಬೊಬ್ಬೆಯ । ಕಲಿಶರವನಳುಕಿಸಿತು ಭವ ಬ್ರಹ್ಮಮಹೇಶ್ವರರ ॥ ಹೊಳೆಹೊಳೆವ
ಹೇಮಪ್ರಭಾ ಪರಿ । ಲುಳಿತ ದಿವ್ಯವಿಮಾನ ವಾಹನ । ಗಳಲಿ ಸಕಲ ಸುರೌಘ
ನೆರೆದುದು ನೋಡಲಾಹವವ ॥ ೧೩ ॥ ನಭದೊಳಿಕ್ಕಟ್ಟಾಯ್ತು ನಾಕದ ॥ ವಿಭುಗಳಿ
ಬ್ಬರ ಸೈರಣೆಯ ಸುರ । ಸಭೆ ದಿವಾಕರ ಸುಭಟರಿಬ್ಬರ ಸೋಲಗೆಲವುಗಳ ॥
ಅಭಿನವಯುಗಳಭಿಪಚನವಲಿ ದುಂ । ದುಭಿಗಳಬ್ಬರಣೆಯಲಿ ಬೊಬ್ಬೆಯ । ರಭಸದಲಿ
ನಳಿಯೇರಿ ಕಲಿಗಳಕದನ ಕೇಳಿಯಲಿ ॥ ೧೪ ॥ ನೆರೆಯುದಾದುದು ಗಗನವಿಬ್ಬರ ।
ಪುರವಿನಬ್ಬರ ಬೊಬ್ಬೆಗಳ ಗಸು । ನೆರೆಯುದಾದುದು ಪಟುಭಟರ ಪದಹತಿಗೆ
ಫಣಿಪತಿಯ ॥ ಅರಚುತಿರ್ದ ದಜಾಂಡ ವಿಳೆ ಬಾ । ಯ್ದೆರೆವುತಿರ್ದುದು ಸುಭಟ
ರಿಬ್ಬರ । ಬಿರುಬಿನಬ್ಬರಣೆಯ ಭುಜಾಸ್ಫಾಲನೆಯ ರಭಸದಲಿ ॥ ೧೫ ॥ ವಿನ
ನಿಂಬೆನು ಸುರಪ ಸೂರಿಯ । ಸೂನುಗಳ ಸಂಗರದ ಸಮಯದ । ಸೂನಸಾಹಸ
ಪನು ಸುರಾಸುರ ನಿಳಿರ ಜಿರಗಾಗೆ ॥ ಸಾನುಗಳ ಸಡಲಿಕೆಯ ಕರಸಂ । ಧಾನದಲಿ
ಶ್ರೈಲಗಳ ಸುಘಟಿಸಿ । ಧಾನರಿಟ್ಟಾಡಿದರು ಹರಿ ಹರಿದಶ್ವರಬ್ಬರಿಸೆ ॥ ೧೬ ॥ ಸುರಪ
ಸುರುಬೆಗೆ ಸೀಪರಿಸಿ ಪೋ । ಹರಿಸಿ ಮುರಿದೇರುವ ಮಹೀಧರ । ದುರವಣೆಯ್ಯ
ತೆರನಂತೆ ಕಾಣಿಸಿದವು ಗಗನದಲಿ ॥ ತರಣಿ ಕೆಲಸಾರಿದನು ಸುರಪತಿ । ತಿರುಗಿ
ಬಿಟ್ಟನು ಪಾಳಯವ ನಂ । ಬರದ ಸುರರ ವಿಮಾನತತಿ ಚೆಲ್ಲದವು ದೆಸೆದೆಸೆಗೆ ॥ ೧೭ ॥
ಹಳಚಿದವು ಗಿರಿಗಿರಿಗಳಘ್ರದ । ವಳಯದಲಿ ಬಳಿಸಲಿಸಿ ಬೀಳುವ । ಕುಲಮಹೀಧರ

ನಿಕರದಲಿ ನೆಲನ ದುರಿತೆಡಬಲಕೆ ॥ ನಿಲುಕಿ ನಿಗುರಿದ ಗಿರಗಳಬುಧಿಯೊ । ಳಿಳಿದು ಬಿದ್ದುಬ್ಬರಿಸಿತಭ್ರಕೆ । ಘುಳುಘುಳಧ್ವಾನವನು ಹೊಗಳುವೆ ನೇನ ನದ್ಭುತವ ॥೧೮॥ ಗಿರಿಗಿರಿಯು ಹೋರಟೆಯುಉಬ್ಬಿದ । ಹೊರಳಿ ಗಿಡಿಹೊದರೆದ್ದು ದಿಕ್ಪಾ । ಲರ ಪುರಂಗಳ ಸರಕು ಡೆಗೆಸಿದ ವೇನನುಸುರುವೆನು ॥ ತರುಣ ಕೇಳೈಬ್ರಹ್ಮನಿರ್ಮಿತ । ಪರಮ ಸೃಷ್ಟಿಯು ನೆಣಿಸಲೀ ಯಿ । ಬ್ಬರಿಗೆ ಪಡಿಯಹ ಸಮರ ಧೀರರ ಕಾಣೆ ನಾನೆಂದ ॥ ೧೯ ॥ ಅರರೆ ಭಟರುಗಳಿರಡರಗ್ಗದ । ತರುಚರರು ಹಿಂದೀವ ಬಲುಭೂ । ಧರ ಗಳೈದುವದೇನು ಸಾಹಸವೋ ಮಹಾದೇವ ॥ ಧುರಧುರೀಣ ಜಯಾಂಗನೆಯು ನಿಜ । ಕರದ ಕಂತುಕ ದಾಟವನೆ ಧರೆ । ಗುರಳ್ವಗಗನಕೆ ನೆಗೆವ ನಗಗಳಿಗಂತ್ಯವಿಲ್ಲೆಂದ ॥ ೨೦ ॥ ತಪ್ಪಿ ಮೈಯ್ಯಲಿ ಬಿದ್ದಗಿರಿ ಸಿಡಿ । ದುಪ್ಪರಿಸಿ ಹುಡಿಗೆದರಿದುವು ಮುಗು । ಳಪ್ಪಿದುಗ್ರನ ಘಾಳಿ ಹೆಳ್ಚುಗಳಾದ ವಗಲದಲಿ ॥ ಕಪ್ಪು ಡೋರದು ಕಲಿಗಳಿಬ್ಬರ । ಸುಪ್ರತಾಪಕೆ ಶೌರ್ಯಕಂಚುಕಿ । ಕುಪ್ಪಳಿಸಿ ತೇ ನಗ್ಗಳರೊ ಶಿವಶಿವ ಮಹಾದೇವ ॥ ೨೧ ॥ ಮರಳಿ ಗಿರಿಶಿಖರದಲಿ ಕಳಿಕು । ಬ್ಬರದ ಸಿಡುಗಲ್ಗಳಲಿ ಬಲು ಹಾ । ಸರೆ ಗಳಲಿ ಘನಗಂಟ ಶೈಲದ ಗುಡು ಕಲ್ಗಳಲಿ ॥ ತಿರುಹಿ ಮುರುಹಿ ನಲೌಕು ವಳುಕುವ । ಭರದ ಬವರದ ಬಿನ್ನಣೆಗಳ । ಟ್ಟರಿಯು ಸಮರೋಚಿತವ ಮೆರೆದರು ಸುರರು ಹಾರೈಸೆ ॥ ೨೨ ॥ ತೀರಿ ಗಿರಿ ಮುಟ್ಟೆವಿಸೆ ಬುಡದಲಿ । ಬೇರುಡಿಯೆ ಬೆಳವತ್ತಿ ಕಮ್ಮರ । ಗೇರಳಿಲೆ ಹಿಂತಾಳೆ ತಾಳ ತಮಾಲ ತಡಸುಗಳ ॥ ತಾಳೆ ತೆಂಗರುಟಾಳ ಬಿಲ್ವರೆ । ನೇರಿಲಾಲ ಪ್ರಮುಖ ನಾನಾ । ಭೂರಿ ಭುಜಗಳಿಂದ ಹೊಯ್ದಾಡಿದರು ಸರಸದಲಿ ॥ ೨೩ ॥ ವೀರಕೇಳೈ ಬಳಿಕಲಾ ರಘು । ವೀರ ನಂಬಿನಲುಡಿದು ಸಿಡಿದಿ । ದ್ದಾರಣದ ಕಾರಣದಮರಗಳ ಕೊಂಡು ಮುಂಡಿಯಲಿ ॥ ಜಾರುವೊಯ್ಲ ಡವೊಯ್ಲ ನಿಡುವೊ । ಯ್ಲೋರೆವೊಯ್ಲ ಪ್ಪರದವೋಲು । ಬ್ಬೇರು ಹೊಯ್ಲನಲೊದಗಿದರು ಭಟರಸಮ ಸಮರದಲಿ ॥೨೪॥ ಗೆಲಿದ ನಿಂದ್ರಜನೆಂದು ಸೂಸುವ । ರಲರ ಲಮರೇಂದ್ರನ ವಧೂಜನ । ಗೆಲಿದ ನಿನಸುತನೆಂದು ಮುತ್ತಿನ ಹಾರವನು ತಳಿದು ॥ ತಳಿದರಿನನಂಗನೆಯು ರಿದ್ದೆಸೆ । ಗಳಲಿ ಮೊರೆಮವು ದೇವದುಂದುಭಿ । ಗಳು ಪರಿಗ್ರಹ ವಿಗ್ರಹದ ಲುಬ್ಬೇರಿದರುಭಯರಲಿ ॥೨೫॥ ಪ್ಲವಗಪತಿ ಜಂಝಾಕ್ರಮಣ ನಿಡು । ಬವರಿಭಂಜನೆ ಲಾಗುಲಳಿಲುಳಿ । ತ್ರಿವಳಿ ವಂಚನೆ ಉತ್ಪತನ ಪತನ ಪ್ರಬಂಧದಲಿ ॥ ದಿವದರಸುಗಳ ಸೂನುಗಳು ರಾ । ಘವ ಮಹೀಪತಿ ಮಾಗಧೀಸುತ । ರೆವೆಹಳಚ ದೀಕ್ಷೆಸಲು ಕಾದಿದರಖಿಳ ಚಿತ್ರದಲಿ॥೨೬॥ ಹೊಕ್ಕರಿಬ್ಬರು ಬಿಸಟು ಮರಗಳ । ಹೊಕ್ಕರಿಬ್ಬರು ಬಿಸಟು ಮರಗಳ । ಡೊಕ್ಕರಣೆ ಫಣಿರಾಜನೆದೆ ನೆಳಿ । ನೆಕ್ಕನಲು ತಳವೇಲು ತಳಗಳ ಸಂಧಿ ಬಂಧದಲಿ ॥ ದೊಕ್ಕುಡಡಸ ಬುದಗಳ ಲಿಳೆ ಧಿ । ವಿಮ್ರಕ್ಕಿ ಕೂರುಮನ ರಚೆ ದಿಕ್ಕು ವಿ । ದಿಕ್ಕು ಬಾಗಿಲೆನೆ ಧೈರ್ಯಬಲರೊದಗಿದರು ಸರಿಸದಲಿ ॥೨೭॥ ಕಂದ ಕೇಳೈ ಪಕ್ಷಮುಗಳ ಗ । ಳಿಂದುವಿನ ಕಳೆಯಂತೆ ಹೆಚ್ಚಿತು । ಕುಂದಿತಿಂದ್ರಜ ಇನಸುತಂಗಾಹವದ ಸೀಮೆಯಲಿ ॥ ಮಂದಮತಿಗಳು ನಿಲಲು ರಘುಕುಲ । ನಂದನನು ಕಂಡರಿದು ತಿರುವಿಗೆ । ಸಂಧಿಸಿದ ನಾಲಿಂಧಪದದ ಲಮೋಘಮಾರ್ಗಣವ ॥೨೮॥ ಓರೆಗಣ್ಣಲಿ ನೊಂದು ನೋಡುವ । ಸೂರಿಜನಸುತ ಗಧೆಯುಕರ ಸರ । ಸೀರುಹವ ತೋರಿಸ ತ

ತೆಗೆದಾಕರ್ಣಪರಿಯಂತ ॥ ನಾರಚವನುಬ್ಬೆದ್ದು ಶರಣನ । ನಾರಿಗಾಪಿದ ಹೀನಹೃದ
ಯನ । ಹೇರುರವ ಕಟ್ಟೊಡನೆ ಕೆಡೆಕೆಡೆಯೆನುತ ನಡೆತಂದ ॥ ೨೯ ॥ ಭೂಸುತಾಸುತ
ಕೇಳು ಪರರ ಸು । ವಾಸಿನಿಯುರಲಿ ಸೋತವಂಗುರೆ । ಹೇಸಿ ಬಿಡದಿಹಳೇ ಜಯಶ್ರೀ
ಹಲವು ಮಾತೇನು ॥ ಈಶ ಶಂಭು ಗಿರೀಶ ಶಿವ ಮ । ಹೇಶ ಮೃತ್ಯುಂಜಯ ಪುರಾ
ಸ । ದಾಶಿವ ಶ್ರೀಕಂಠ ಸಲಹೆನುತೊರಗಿದನು ನೆಲಕೆ॥೩೦॥ ಚೆಲ್ಲಿತಾಕ್ಷಣ ಸೆರೆದಸೇನಾ
ವಲ್ಲಭರು ತನುತನುಗೆ ವಾರಿಜ । ವಲ್ಲಭನ ಮಗನೊಬ್ಬ ತಪ್ಪಿಸಿ ಕಾಣಿಸಿನಕುಲನ ॥
ಗಲ್ಲದಲಿ ಗಡಿಯಿಲ್ಲದ ಪ್ರತಿ । ಮಲ್ಲ ಹಾಯೆನುತಶ್ರುಗಳನುಗು । ರಲ್ಲಿ ಮಿಡಿವುತ
ಮೂರ್ಛೆಯಲಿ ಮೈಮರೆದ ನವರೇಂದ್ರ ॥೩೧॥ ರಾಹುತುಡುಕಿದ ರವಿಯುವೊಲು ಬಾ
ಣಾಹಿ ತುಡುಕಿದವಾಲಿ ಬೆನ್ನಲಿ । ಮೋಹಿದಲಗಿನ ಕೆಂಗರಿಯ ಹೇರುರದ ಕಂಪನದ ॥
ಸಾಹಸವ ಮುರಿದರೆಯ ಮುಷ್ಟಿಯ । ಲಾಹತದ ದಿಟ್ಟಿಸಿದ ಕಂಗಳ । ಹಾಹೆಗಳಲೆಸ
ದಿರ್ದನಾಹವ ರಂಗ ಮಧ್ಯದಲಿ ॥೩೨॥ ನೋಡಿದನು ಮುರಿದವನಿಪನನ । ಲ್ಲಾಡಿದನು
ತುದಿವೆರಳನಹುದೈ । ಖೋಡಿಯಿಲ್ಲದ ಖರೆಯನಹೆ ಖದ್ಯೋತ ವಂಶದಲಿ ॥ ಪಾಡ
ಕಾಣೆನು ನಿನಗೆನುತ ನರ । ಗೂಡಿ ಪದಮೊಗ್ಗನಲಿ ಹುಸಿದಡೆ । ಕೂಡಿಕೊಂಡೈತಂದು
ಕೊಲಿಸಿದ ತಮ್ಮನಾಣೆಂದ ॥ ೩೩ ॥ ಏಸುದಿನ ಪರಿಯಂತ ಬಿಡದ । ಭ್ಯಾಸಿಸಿದೆ ಹೇಳ
ಣುಗನಾಣೆ ವ । ನೌಕಸರೊಳೆನ್ನಾಣೆ ಹೇಳೆನ್ನೇಕೆ ಭಯ ನಿನಗೆ॥ ವಾಸಿವೊಳ್ಳಿತು ಗರುವಿ
ನಭಿವಿ । ನ್ಯಾಸವೆಂತುಟೊ ಶಿವಶಿವಾ ಕಾ । ಳಾಸ ತಪ್ಪಿದ ಕಳವಿನೆಸುಗೆಯ ಚಿತ್ರತರ
ವೆಂದ ॥೩೪॥ ನೀನೆ ದಶರಥನೆಂಬ ನೃಪತಿಯ । ಸೂನು ಸಾಂಬ್ರಾಜ್ಯಕ್ಕೆ ಸಲ್ಲದೆ । ಕಾನ
ನವ ಪೊಕ್ಕುಬಳಿಯನು ಕೊಂಗಾಡಿದತಿಬಲನು ॥ ಹೀನವೃತ್ತಿಯ ಬಗೆಗೆ ಸಲ್ಲದ । ಮಾನ
ನಿಧಿ ನೀನಹುದು ಮನದನು । ಮಾನವೀಪರಿ ತೋರುತಿದೆ ನಿನಗಾರು ಸರಿಯೆಂದ ॥೩೫॥
ಧರೆಯೊಳಗೆ ಮೃಗಮಾಂಸ ಭೋಜನ । ಕರಸುಗಳು ಮನಮಾಡುವರದು । ಶ್ರುತಿತ
ವಲ್ಲದು ಶಾಸ್ತ್ರದಲಿ ನಿಜಧರ್ಮಮಾರ್ಗದಲಿ ॥ ಪರಿಕಿಸಲು ಕೋಡಗದ ಮಾಂಸವು ।
ನರಪತಿಗಳಿಗೆ ಯೋಗ್ಯವೇ ಹೇ । ಳರಸ ಹಿರಿವಹ ಹೇಸಿಕೆಯ ಕೈಗೊಂಡೆ ನೀನೆಂದ ॥
ರಣದ ಮೇಲಭಿಲಾಷೆಯುಳ್ಳಡೆ । ಕೆಣಕಿ ನೋಡಿದ ಡರಿಯುಬಹುದು । ಲ್ಬಣ ಶರಾ
ಸನ ಸರಳ ಹುರಿಗೆಯ ಹೊಂತಕಾರಿಗಳ ॥ ಹುಣಿಗಿ ಮರೆಗೊಂಡೆಸು ಲುಬ್ಧಕ । ರೆಣಿಕೆ
ಯಲಿ ಕೈಮಾಡುವುದು ಥೂ । ಪಣವೆ ಭಟರಿಂಗೆ ಕೇಳಿದಿರೆ ಜಾಂಬವರು ನೀವೆಂದ॥೩೬॥
ತರಣಿ ಕುಲದರಸುಗಳು ಧಾರ್ಮಿಕ । ರುರು ಸದಾಚಾರಿಗಳು ಸೂನೃತ । ಚರಿತ ರಖಿಳಾ
ಗಮರು ಶುದ್ಧ ವಿಶುದ್ಧ ಗುಣಯುತರು ॥ ನರಕಭೀತರು ಘನಕೃಪಾ ಸಾ । ಗರರು
ನೀನಿನ ರನ್ವಯದಲವ । ತರಿಸ ತಕ್ಕನನಲ್ಲ ನಿನ್ನನ್ವಯವದೇನೆಂದ ॥೩೭॥ ಹಗೆತನವ
ನೆಣಿಸುವರೆ ರಘುಪತಿ । ಳಿಗಿದ ರಾಯರ ಕೊಂದುದಿಲ್ಲಾ । ಮಗುಳನರಸತಿಯರಿಗೆ
ತಪ್ಪಿದುದಿಲ್ಲ ಜಗವರಿಯೆ ॥ ಮೃಗಕುಲೇಂದ್ರ ದ್ವಿಪ ಹಯ ರಥ । ಮಗುಳಿರಲು ಬಲಿ
ಗಾಡ ಸಿಕ್ಕಿದ । ಬಗೆಯ ಸಾಣ್ಣಾಡಿ ತಪ್ಪದೀಗಲು ನಿನ್ನೊಳಾಯ್ತೆಂದ ॥ ೩೮ ॥ ನೆತ್ತಿ
ಯೊಳು ಹರ ಜೆಡೆ ತ್ರಿಯಂಬಕ । ಸುತ್ತಿದುದು ವಲ್ಕಲವು ಶಿವಶಿವ । ಮೆತ್ತಿಕೊಂ
ಡಿದೆ ಭಸಿತ ಮೃತ್ಯುಂಜಯ ಮಹಾದೇವ ॥ ಹೊತ್ತು ಜೋಹಕೆ ಚಾಳು ಲೇಸಾ ।
ಯಿತು ನಿನಗುಪದೇಶ ಮಂತ್ರವ । ನಿತ್ತವನ ವರ್ತನವದೇನುಟೊ ನೋಡೀಜೆ

ಕೆಂದ ॥ ೪೦ ॥ ಶಿಶು ಮಹೀಸುರ ಭೂತ ಸಂತತಿ । ಪಶುಕುಲ ಪ್ರಮುಖಾದಿ ಹಿಂಸಾ
ವ್ಯಸನಗಳಿಗನ್ಯಾಯ ವಿನಿತಿಲ್ಲೀ ಜಗತ್ತಿನಲಿ ॥ ಹೆಸರು ನೋಡಲು ನಿನ್ನ ನಾಮದ ।
ಜನವು ರಮಣೀಯ್ಯಕವು ಮನಕ । ಕರ್ಕಶತೆಯಾಗಿದೆ ಸಲ್ಲದೀ ಹೆಸರಕಟ ನಿನ
ಗೆಂದ ॥ ೪೧ ॥ ಆಗಲದಕೇ ನೊಡಂಬಡುಬಹು । ದಾಗಿ ಅಪರಾಧತ್ವ ಪೊನ್ಮಿಗೆ ।
ಮೇಗೆ ಹೊತ್ತರೆ ಹೊಲ್ಲೆ ಹೇನಳಿವಿಂಗೆ ಸಂಸಾರ ॥ ಬೇಗನುಡಿ ಕೃತದೋಷ
ಕಾರಿಗ । ಳಾಗಿ ನಾವ್ನಡೆ ದೆಡೆಗಳುಳ್ಳಡೆ । ಮಾಗರಾಗಿಹೆವೆಂದು ಕೊಂಡಾಡಿದನು
ರೋಷದಲಿ ॥ ೪೨ ॥ ಇವನು ನಿನಗೆ ಸಹಾಯಿಯೆ ನೀ । ನವನ ಬಲದಲಿ ನಿನ್ನ
ವೈರಿಯ । ತವಿಸುವುದು ತಪ್ಪಲ್ಲ ಕೂಡಿತು ದೈವವಿಬ್ಬರನು ॥ ಪವನನಲಿ ಪಾವಕನ
ಕೂಡಿದ । ಹವಣ ಸಂಘಟಿಸಿದುದ ಬಲ್ಲರೆ । ಇವು ವಿಚಿತ್ರವು ಕಾಲಗತಿಯಿಂ ದರಸ
ಕೇಳೆಂದ ॥ ೪೩ ॥ ಆ ಗರುವ ದಶಮುಖನ ಸಮರೋ । ದ್ಯೋಗ ಕಿವನೇ ನಿಲು
ವವನು ಗಡ । ಸಾಗರವ ನುತ್ತರಿಸುವಡೆ ಹರಿಗೋಲು ಹಂಗುಗದ ॥ ಹೋಗಿ
ಶರಧಿಯ ದಾಂಟಿ ಹಗೆಯನು । ಶಾಗಿ ತಲೆಯನು ಕೊಂಡು ತರುಣಿಯ । ಭೋಗಿಸ
ವಡಿದು ಮಿಗೆ ಭಗೀರಥ ಯತ್ನ ನಿನಗೆಂದ ॥ ೪೪ ॥ ಖಳನಿವನು ಹಗೆಯೆಂದು ಸೂಟಿಸ ।
ಲೆಳೆದು ತರಿಸನೆ ತನ್ನ ಬಾಲನ । ಕಳುಹಿ ಗಾಲದ ಬಳಿಗೆ ಸಿಲುಕಿದ ಮೀನಿನಂದದಲಿ ॥
ಬಲುಭಟರ ಜಾವಾಳಿಗಳ ನ । ಸ್ಖಲಿತ ಮೂರ್ಖರದೇನು ಬಲ್ಲರು । ಹಲುಬಿ
ಮಾಡುವುದೇನು ಕೇಳ್ಪ್ರಾರಬ್ಧ ನಮಗೆಂದ ॥ ೪೫ ॥ ಅರಿದೆನಾದರೆ ನಿನ್ನ ತೋಮರ ।
ನಿರಿಯಬಲ್ಲುದೆ ನನ್ನವನು ಮಿಗೆ । ಮುರಿವೆನೈ ಬಾಣವನು ನನಗಿದು ಗಣ್ಯವಲ್ಲ
ಕಣಾ ॥ ಜರೆದು ನುಡಿದಿನ್ನೇನು ಲೋಕದೊ । ಳುರುವ ಭಟರೆಂದರಿಯರೇ ಸುರ ।
ರೆರೆಯ ಮೊದಲಾಗೆಲ್ಲ ನಿನ್ನೊಡನೆಂಬುದೇನೆಂದ ॥ ೪೬ ॥ ಅಂಗವಲ್ಲದು ನಿನಗೆ
ನೀದು । ಸ್ಸಂಗದಲಿ ದುರ್ವರ್ತನಗಳನು । ಹಿಂಗದನುಭವಿಸದೆ ಮಹಾಪಾತಕಕೆ
ಮನವೆಳಸಿ ॥ ಸಂಗಶುದ್ಧವ ನಲ್ಲದಾವುದು । ಸಂಗಿಗಳ ಕೈಪಿಡಿವೆವೇ ಪರ । ರಂಗ
ನೆಗೆ ವೈಗೊಟ್ಟವರ ಶಿಕ್ಷಿಸದೆ ಬಿಡವೆಂದ ॥ ೪೭ ॥ ರಾಯ ಮಾರ್ಗವ ಕೇಳಿದೈ ಯ ।
ನ್ಯಾಯವನು ಕೈವಿಳಿಸು ನವಳಾ । ನ್ಯಾಯ ಮಾರ್ಗವೆ ನಿಮ್ಮದಿದು ತಾ ಶಿಕ್ಷೆ
ರಕ್ಷಣೆಗೆ ॥ ಕಾಯುವನೆ ತತ್ಪಥವಿಡಿದು ನಡೆ । ವಾಯತಿಕೆ ಯವರಾವು ನೀನ ।
ನ್ಯಾಯಿಯಲ್ಲವೆ ಹೇಳು ನಮ್ಮೊಳು ಮರೆಯದೇಕೆಂದ ॥ ೪೮ ॥ ಮೆರೆಯಬಲ್ಲದೆ
ಸಿರಿ ಜಯಶ್ರೀ । ತುರುಬ ಸಂಗರಿಸವಳೆ ಭೂವಧೂ । ಕೊರುವಳೆ ಗೀರ್ವಾಣಸತಿ
ಸ್ವೈರಿಸುವರೇ ಸುರರು ॥ ತೆರೆವರೇ ಬಾಗಿಲನು ಪರಸತಿ । ಗುರಿಸು ಪತಿಪಾತಕನ
ನೀನೆ । ಚ್ಚರಿತು ನಡೆಯದೆ ನಮ್ಮನುಡಿವುದು ಗುಣವೆ ಹೇಳೆಂದ ॥ ೪೯ ॥ ನುತ
ತಪೋನುಷ್ಠಾನ ನಿಯಮ । ವ್ರತ ಗುರು ದ್ವಿಜ ದೇವತಾ ಧ್ಯಾ । ಗತಸುಪೂಜೆ
ಸಮಾಧಿ ಮೌನ ಧ್ಯಾನ ಪರಸತಿಯ ॥ ರತಿಗಿವನು ಗುಣವೇ ವಿವೇಕ । ಸ್ಥಿತಿಯ
ನೀನರಿಯದುದೆ ಕೇಳ್ಧೃತಿ । ಹೃತಿಯಲಾ ಸತ್ಕೃತಕೆ ಪರದಾರಾಭಿಗಮವೆಂದ ॥ ೫೦ ॥
ಎಲೆ ಕಪೀಶ್ವರ ಕೇಳು ಪರಸತಿ । ಗಳುಪಿ ಹಾಯ್ಮಿಸಿಕೊಂಡೆ ತಮ್ಮನ । ಕೊಲೆಗೆಳಸಿ
ಹೊರಮಡಿಸಿ ಹಾಯ್ಸಿಸಿ ಕೊಂಡೆ ನಾದಿನಿಯ ॥ ಬಳಿಕೆಯಿದು ತಾ ದೋಷಿಕೃತ ಸ ।
ಮ್ಮತ ವಲ್ಲವೆ ನಾವು ನಿನ್ನನು । ಕೊಲುವುದೇನನ್ಯಾಯ ನೀನೇ ನೋಡಿಕೋ

ಎಂದ ॥೫೧॥ ಗುರು ನಿಜೇಶ ಜ್ಯೇಷ್ಠರೀವರು । ವರು ಕಣಾ ಪಿತೃಸಮರು ಶಿಷ್ಯಾ । ವರಜ ಶರಣಾಗತರು ಪುತ್ರರು ಧರ್ಮಶಾಸ್ತ್ರವಿದು ॥ ಸುರಪಸುತ ಕೇಳವರ ಸತಿಯಲಿ । ಗುರಿಸಿದವ ಬಾಹಿರನಲಾ ದು । ಶ್ಚರಿತ ವಧೆಗಳಿ ಗರುಹ ನೀನೇ ನೋಡಿಕೋ ಎಂದ ॥ ಇರುಳು ಕಳ್ಳನ ಕೆಲಸ ದಿನದಾ । ಚರಣೆ ಧರ್ಮವಿದಲ್ಲ ಸತ್ಪುರ । ಸರದನಸವಳಿ ನಿನ್ನೊಳಿದೆ ಕೇಳರಿದು ನಾವಿಸಿಯು ॥ ಇರಿಸಬಹುದೇ ನೋಡು ನೀನಿಹ । ವರವ ನೋಡದೆ ನಡೆವುದಿವುಸ । ಜ್ಜನರ ಮನಕೊಡಬಡುವುದೇ ನೀ ನೋಡಿಕೋ ಎಂದ॥೫೨॥ ಎಂಬ ರಾಮನ ವಚನ ಕರ್ಣದೊ । ಳಿಂಬುಗೊಂಡುದು ಕಪಿಪತಿಯ ಪೊಡ । ಲಿಂಬಿಡಿದು ನೋಡಿದನು ಬಳಿಕಾ ರಾಮಲಕ್ಷ್ಮಣರ ॥ ಅಂಬುಜಾಕ್ಷ ಫಣೀಂದ್ರರಪ್ರತಿ । ಬಿಂಬವಾಗಿರೆ ಕಂಡ ಮುಕ್ತಿ ನಿ । ತಂಬಿನಿಯ ನಿಬಿಡ ಸ್ತನಾಲಿಂಗನಕೆ ಮನತಂದ ।೫೩॥ ಇದು ಮಹೀಮಂಡಲವ ಭಾರವ । ನೊದೆಯಲಾದ ವಿಲಾಸ ವಿಭವಾ । ಸ್ಪದವಲಾ ಮನುಜಾಂಗವಿದು ತಾ ಸುಪ್ರಸಿದ್ಧವಲಾ ॥ ಸುದತಿ ಯೆಂಬುದು ನೆವನು ತಾ ನಿಂ । ತಿರದೆ ಮೇಲೀಪರಮ ದೈವದ । ಪದವ ಭಜಿಸಲು ಬೇಕೆನುತ ಕೈಮುಗಿದನಾ ವಾಲಿ ॥ ೫೪ ॥ ಮುಗುಳೆ ಮುಗುಳಡಿಗಡಿಗೆ ನೋಟದ । ಬಿಗುಹು ಬಿಡದೆಡವಿಡದೆ ಪುನರಪಿ । ಮುಗುಳೆ ಮುಗುಳೆ ಮಹಾಮಹಿಮ ಮಾಯಾ ಮಹೇಶ್ವರನ ॥ ನಿಗಮ ತತ್ವಾತ್ಮಕನ ಮಂಗಳ । ಸುಗಮ ಮೂರ್ತಿಯ ನೋಡಿ ಕಂಗಳ । ಮುಗಿದು ಪರಮಾನಂದ ಸುಖಮಯನಾದನಾ ವಾಲಿ ॥ ೫೫ ॥ ದೇವ ಲಕ್ಷ್ಮೀಕಾಂತ ವರ ರಾ । ಜೀವಲೋಚನ ಭವವಿಮೋಚನ ದೇವ ಸಂಸಾರಾಬ್ಧಿ ಪೋತ ವಿನಾಶ ಘನದುರಿತ ॥ ದೇವ ಭಕ್ತಾಧೀನ ಮುಕ್ತಿ ವ । ಧೂವಿಲಾಸ ಪ್ರದ ಪರಾಪರ । ದೇವ ದೇವೋತ್ತಮ ಕೃಪಾನಿಧಿ ಸಲಹ ಬೇಕೆಂದ॥೫೬॥ ಇಹ ಪರಂಗಳ ಪದಕೆ ಸಲ್ಲದ । ಮಹೀ ಬಹಿಷ್ಕಾರವಮಾ ದು । ಸ್ಸಹನ ದುಶ್ಶೀಲನ ದುರಾಚಾರನ ದುರಾಗ್ರಹನ ॥ ಕುಹುಕ ಕರ್ಮದ ಕುಪಿತ ಕಾಯನ । ಬಹಳ ಕೃತಪಾಪಾನುಗತ ವಿ । ಗ್ರಹನ ಕೈವಿಡಿದೆತ್ತ ಬೇಕೆಲೆ ದೇವ ನೀ ನೆಂದ ॥ ೫೭ ॥ ಉಡಿಯವೇ ತರುಗಾಳಿಯಲಿ ಗಿರಿ । ಕೆಡೆಯವೇ ಸಿಡಿಲಿನಲಿ ಯಾ ಕಡು । ವೊಡಲು ಬೀಳಲಿ ಕಂಗಲಾಚಿದೆ ದೇವ ನಿನ್ನೊಡನೆ ॥ ಹಿಡಿಯದೆನ್ನಪರಾಧವನು ಕೈ । ವಿಡಿದು ನಿನ್ನ ಪದಾರವಿಂದದ । ಲಡಗಿಸುವ ಘನ ಕೃಪೆಯನ್ನೆನಲಿ ಬೀರಬೇಕೆಂದ ॥ ೫೮ ॥ ತಮ್ಮ ಬಾ ಶಿವನಾಣೆ ಚಿತ್ತದ । ನೆಮ್ಮದಧಿಕದ್ವೇಷವೀ ಪರ । ಬೊಮ್ಮದಿದಿರಿಲಿ ಬಿಟ್ಟುದೀ ರಾಜೇಂದ್ರ ಚಂದ್ರಮನ ॥ ಸೊಮ್ಮನೊಯ್ದುವ ಗೊಡಲುಗೊಡು ನೆರೆ । ನೆಮ್ಮುವುದು ಸತ್ಕೀರ್ತಿಲತೆ ಬಳಿ । ಕೆಮ್ಮ ವಂಶದ್ರುಮವ ನೆಂದಪ್ಪಿದನು ಸಹಭವನ ॥ ೬೦ ॥ ಬಾಲ ನಂಗದ ನಹಿತ ಸುತನೆಂ । ದಾಳಿಯನು ಮಾಡಿದರು ಮನ್ನಿಸಿ । ಪಾಲಿಸುವು ದವನಿನ್ನು ಮಗ ನನಗಲ್ಲ ನಿನಗೆಂದ ॥ ಆಲಿಗಳ ನೀರೂರತೆಯೇಲಿ ನಿಜ । ಬಾಲಕನ ಕಟ್ಟೈಸಿ ರಘು ಭೂ । ಪಾಲ ಚರಣಾಂಭೋಜ ಸೇವಾ ಶ್ಲಾಘ್ಯನಾಗೆಂದ ॥ ೬೧ ॥ ಗವಯ ಶತವಲಿ ಗಜ ಶರಭ ಜಾಂ । ಬವ ಗವಾಕ್ಷ ಸುಷೇಣ ಮೈಂದ । ದ್ವಿವಿದ ದುರ್ಮುಖ ಸುಮುಖ ದಧಿಮುಖ ಗಂಧಮಾದನರ ॥ ಇವರ ಪಾಲಿಸು ರಾಜಕಾರ್ಯ । ಕ್ಕವರು ನಿಲುವರು ಬೇಡರೀ ದು । ರ್ಗವನು ಕೇಳೆನುತಿತ್ತ ನಮಳ ಸುರತ್ನಮಾಲಿಕೆಯ ॥ ೬೨ ॥ ಮರಳಿ ರಘುನಂದನನ ಪದಪಂ । ಕರುಹವನು ಕಂಗಳಿಗೆ ಸೇರಿಸಿ । ಕರಪುಟಾಂ

ಜಲಿಯಿಂದ ನುಡಿದನು ದೈನ್ಯಭಾವದಲಿ ॥ ತರಳ ನಂಗದ ನಂಗದನ ನೀ । ತರಣಿ ಸುತ ಪತಿಕರಿಸ ದಿದ್ದಡೆ । ಪುರಕೆ ಕೊಂಡೊಯ್ದೊಲಿದು ಸಲಹೆಲೆ ದೇವ ನೀನೆಂದ॥೬೩॥ ಹಿರಿದು ನಂಬಿದೆ ನಿನ್ನ ನಿಹಪರ । ಕೆರವ ಮಾಡದಿರೆಂದು ಕಂಗಳ । ಮುರಿಯೆ ಮುಳು ಗಿರ್ದಂ ಬಸುಗಿದನು ಮನದ ಮರುಕದಲಿ ॥ ಕರುಳ ಮರುಗದೆ ಬಿಡುವುದೇ ಯೆಲೆ । ತರಳ ಕೇಳ್ಪೈ ಕುಶನೆ ಧಸ್ಸನೆ । ಸುರಪಸುತ ನಂಗದಲಿ ಬಿದ್ದಳಲಿದನು ಸು ಗ್ರೀವ ॥ ೬೪ ॥ ತೊಡಚು ರಘುಪತಿ ತೋಮರವ ನೆಂ । ನೊಡಲ ಗಧಿಕೃತ ಪಾಪ ಕರ್ಮವ । ಒಡಲುಪಿಡಿದಪಕೀರ್ತಿ ಕಮಲಜನುಸುರು ಹನ್ನಬರ ॥ ಅಡಗಲರಿಯದು ದೇವ ಪೂರ್ವಜ । ನೊಡನೆ ಕಳುಹೆಂ ದಂಘ್ರಿಯಲಿ ಹೊಡೆ । ಗೆಡೆದು ತೊರಳಿದ ನಾ ಕಪೀಶ್ವರ ನಾ ಕಕುಸ್ಥಜನ ॥ ೬೫ ॥ ಗಳಿಸಬಹುದು ಕಳತ್ರ ಮಿತ್ರಾ । ವಳಿಯ ನೊಡಹುಟ್ಟಿದರ ನೆಂತೆರ್ಪ್ । ನುಳಿಸಬಹುದೈ ಮುಕ್ತಿಗಕಟ ವಿರಕ್ತನಾದೆ ನಲ ॥ ಲಲನೆ ಗೋಸುಗ ತನ್ನ ಬೆನ್ನಿಂ । ದಿಳಿದವನೆ ಕೊಲಿಸಿದ ದುರಾತ್ಮನ । ನಿಳೆಯೊಳಿರಿ ಸುವುದುಚಿತವೇ ಎಲೆ ದೇವ ಹೇಳೆಂದ॥೬೬॥ ಕುಲವಿಘಾತನ ಕುಪಿತ ಚಿಂತಾ । ಕಲಿತ ಕಾಯನ ಕಪ್ಪಹೃದಯನ । ಕಲುಷಕರ್ಮನ ಕಾಪಿಶಾಯನ ಮದಿತಮಾನಸನ ॥ ನೆಲನು ಹೊರದೆಲೆ ದೇವ ಭೂಮಿಯು । ತಲೆಯೆ ತಿಣ್ಣವ ತಿದ್ದಲೀಯ । ಗ್ಗಳದ ಕೃತ್ಯವು ನಿನ್ನದಾಗಿಹುದಾಗಿ ಕೇಳೆಂದ ॥ ೬೭ ॥ ಮರುಳಲಾ ಸುಗ್ರೀವ ಪೂರ್ವದ । ಚರಿತ ದುಷ್ಕೃತವಿವು ಕಣಾ ಜೀ । ವರಿಗೆ ಜಂಜಡವಾಗಿಹವು ನೀನಳಲ ಬೇಡಿವಕೆ ॥ ಮರಣ ನಿನ್ನಿಂದಾಯ್ತೆ ನಾವ್ ಸಂ । ಹರಿಸಿದವರೇ ಸಾಕು ಶೋಕದ । ಸುರುಳಿಯನು ಸುತ್ತದೆ ಸುಸಂಮ್ಯಜ್ಞಾನಿಯಾಗೆಂದ॥೬೮॥ ಆವಜನ್ಮದ ಸಹಭವನೋ ತಾ । ನಾವಜನ್ಮದೊಳಣ್ಣ ನೋಡಲಿ । ಕಾವುದೈ ನಿಶ್ಚಯವು ಮುಂದಣ ಜನ್ಮಕೇನಹಿರಿ । ಈವಿವೇಕವ ಚಿತ್ತದಲಿ ಸಂ । ಭಾವಿಸದೆ ಸುಜ್ಞಾನದೀಪ್ತಿಗೆ । ಸೋವಬೇಡಜ್ಞಾನ ತಿಮಿರವ ನೆಂದನಾರಾಮ ॥ ಸಾಕು ಸೈರಣೆಯಿರಲಿ ಸಮತೆಯ । ಸೋಕಿನಜ್ಞತೆಬೇಡ ನಡೆಯಿಸಿ । ಪಾಕಶಾಸನಿ ಗೌರ್ಧ್ವದೈಹಿಕ ವಿಹಿತ ಸತ್ಕೃತಿಯು ॥ ಸೋಕ ದಪರಾಧಿಯನು ನಾವವಿ । ವೇಕ ಮುಖವಲಿ ಕೊಂದೆವೆನ್ನುತ । ನೌಕಿ ಕೊಂಡಿಹ ಕಾರ್ಯಕೋಸುಗಯೆಂದನಾರಾಮ ॥ ತಿಳುಹಿದನು ಬಳಿಕಾತ ನಂತ । ಸ್ಖಲಿತ ಚಿತ್ತಜ್ಞಾನಿಯನು ಬಳಿ । ಕಿಳುಹಿ ಕಾಮವ ನೊದೆದುದಾತ್ಮಜ್ಯೋತಿ ಕಪಿವರನ ॥ ಮೊಳಗಿದುವು ಸುರಭೇರಿ ಸುರಕುಜ । ದಲರವಾಳಿ ಸೂಸಿದುವು ಕಂಬನಿ । ದುಳುಕುತಮರರ ಚಕ್ರಿ ಸರಿದನು ತನ್ನ ಪಟ್ಟಣಕೆ ॥೭೧॥

ನಾಲ್ಕನೆಯ ಸಂಧಿ ಸಮಾಪ್ತಂ.

ಐದನೆಯ ಸಂಧಿ.

ಸೂಚನೆ॥ ದೇವ ರಘುರಾಜೇಂದ್ರನಾ ಸು । ಗ್ರೀವದೇವಂಗೊಲಿದು ಕಿಷ್ಕಿಂ । ಧಾವನಿಯ ಸಾಂಮ್ರಾಜ್ಯ ಪದವಿಯ ನೊಲಿದು ಮಾಸ್ತಿಸಿದ ॥

ಪದ್ಯ॥ ಕೇಳದೈ ಕುಶ ನಿಮ್ಮ ರಘುಭೂ । ಪಾಲಕನ ಶರಘಾತದಿಂದ ಸು । ಜಾಳಿಸಿದ ಜಿಷ್ಣುವಿನ ತನುಜನ ಮರಣವಾರ್ತೆಯನು ॥ ಕೇಳಿ ತಾರಾದೇವಿ ತನ್ನಯ ।

ಬಾಲಸಂಗದ ಸಹಿತ ಸತಿಯರ। ಮೇಳದ ವಿಕ್ರಾಂತನದ ಲೈದಿದಳಾತ್ಮವಲ್ಲಭನ ।೧॥ ಸಾರಿದರು ಬಳಿಕಖಿಳ ವಾನರ । ನಾರಿಯರು ನಿಜಜೀಪತೀಶನ । ನಾರುಭಟೆ ಧಟ್ಟಿಸಿತು ರೋದೋಂತರದ ರೋದನದ ॥ ವೀರ ಹಾ ಸುರರಾಜ ರಾಜಕು । ಮಾರ ಹಾ ಕಡುಗಲಿಯೆ ಹಾ ರಣ । ಧೀರ ಹಾ ಹಾ ಯೆಂದು ಧಪ್ಪನೆ ಕೆಡೆದಳಾ ತಾರೆ ॥ ೨ ॥ ಹೊರಳಿದಳು ದೆಸೆದೆಸೆಗೆ ಬಾಯ್ಬಿ । ಟ್ಟೊರಳಿದಳು ಪತಿಯಂಗದಲಿ । ತೋ । ಳೆರಡರಲಿ ತಕ್ಕೈಸಿ ತರಳಾಪಾಂಗ ಲಹರಿಯಲಿ ॥ ಎರೆಯ ನಾನವನನು ನಿರೀಕ್ಷಿಸಿ । ಮರುಕವಿಾಗೆ ಸುರತಾನುಭವ ದೆ । ಚ್ಚರಿನ ನುಡಿಗಳ ಸಡಗರಿಸಿದಳು ಸೆರಗಮರೆಮಾಡಿ ॥ ೩ ॥ ಏಳು ಕಪಿರಾಜೇಂದ್ರ ಹಿಮಕರ । ಮೌಳಿ ಬಂದಿಹ ನರ್ಚನೆಯ ಕೊಡ । ಲೇಳು ಮಂತ್ರಾಕ್ಷತೆಯ ಹಿಡಿದಿಹ ನೊಲಿದು ಕಮಲಭವ ॥ ಓಲಗಿಸ ಲೈತಂದಹರೆ ದಿಗು । ಪಾಲರಿಂದ್ರನು ನಿನ್ನ ಸಂಪದ । ದೇಳಿಗೆಯ ನೋಡಲ್ಕೆ ಬಂದಿಹರೆಂದಳಾ ತಾರೆ ॥ ೪ ॥ ಏಳು ಕಪಿರಾಜೇಂದ್ರ ಸುರಪನ । ಮೇಲೆ ದನುಜರ ಧಾಳಿಯಾಯ್ತಂ । ದೋಲೆ ಬಂದಿದೆ ಬಾಗಿಲಲಿ ಬಳಿಯಿಂ ಬಲಾಂತಕನ ॥ ಕಾಳಗದೊಳಮರೇಂದ್ರಸೋತರೆ । ಸೋಲವದು ನಿನಗೆಂಬೆ ನಿನ್ನಯ । ತೋಳ ಧಟ್ಟಿಯ ತೋರುನಡೆ ಬೇಗೆಂದಳಾ ತಾರೆ ॥ ೫ ॥ ಪ್ರಾತರುಚಿತ ಕರ್ಮಕೃತ ಸಂ । ಧ್ಯಾ ತಪೋನುಷ್ಠಾನ ತರ್ಪಣ । ವೀತಿಹೋತ್ರ ಸುಹೋತ್ರ ವಭ್ಯಾಗತ ಮಹಾಪೂಜೆ ॥ ಭೂತಪತಿ ಯರ್ಚನೆ ಧರಾಮರ । ಜಾತ ತರ್ಪಣ ವಿಸಿತು ಕಾಲಾ । ತೀತ ವಾಗಿದೆ ಸುವ್ರತರುಗಳಿಗೆಂದಳಾ ತಾರೆ ॥ ೬ ॥ ಬಂದಹರೆ ಕೈವಾರಿಗಳು ಸುರ । ವಂದಿಗಳು ಸುರಸೇವಕರು ನಡೆ । ತಂದಿಹರೆ ಸುರಮುನಿಗಳಾಶೀರ್ವಚನವನು ಕೊಡಲು ॥ ಬಂದಿಹರೆ ಸುರಗಾಯಕರು ಬಳಿ । ಸಂದಿಹರೆ ಸುರನರ್ತಕಿಯರೇ । ಳೆಂದು ಗಂಡನ ಗಲ್ಲವನು ಹಿಡಿದಲುಗಿದಳು ತಾರೆ ॥ ೭ ॥ ಎತ್ತಹೋದುದು ಮಂದರಾದ್ರಿಯ । ಕಿತ್ತು ಕಡಲನು ಕಡೆದ ಭುಜಬಲ । ವೆತ್ತಸರಿದುದು ನೈರಿಖಳಕುಲ ಕಾಲಭೈರವನ ॥ ಮೃತ್ಯುವಿನ ಭೋಜನಕೆ ಬಾಣಸ । ವಿತ್ತ ಬಲುಹಕಟಕಟ ಹಾ ಕಪಿ । ಮತ್ತವಾರಣ ಹಾ ಯೆನುತ ಮೊರೆಯಿಟ್ಟಳಾ ತಾರೆ ॥೮॥ ಅಂಗದನ ತೊಟ್ಟಿಲಲಿ ವೀರೋ । ತ್ತುಂಗ ದಶಕಂಧರನ ಕಟ್ಟಿದ । ತುಂಗ ವಿಕ್ರಮವೆತ್ತ ಸರಿದುದು ಸುರಕದಂಬಕವ ॥ ಭಂಗಿಸಿದ ದುಂದುಭಿಯ ಜೀವವ । ಹಿಂಗಿಸಿದ ವೈಹಾಳಿತನದ ಭ । ಟಾಂಗ ವೇನಾಯ್ತರಸ ಹಾ ಯೆಂದೊರಳಿದಳು ತಾರೆ ॥ ೯ ॥ ಋಷಿಚರಿತ್ರನ ಕೊಂದರೇ ಕ । ಲ್ಮಷವಿಹೀನನ ಕೆಡಹಿದರೆ ಯನಿ । ಮಿಷ ಗತೋದ್ವಿಜ ಹವ್ಯ ಕವ್ಯ ಹಿತೋಪಲಾಲಿತನ ॥ ವಿಷಯವಿಲ್ಲದೆ ಕೆಡಹಿದರೆ ಕಪಿ । ವೃಷಭನನು ಕಾಂತಾರ ಮೃಗಕುಲ । ಝಷಪತಾಕನ ನೆಂದು ಮೊರೆಯಿ ಟ್ಟಳಲಿದಳು ತಾರೆ ॥ ೧೦ ॥ ಕಡಿದರೋ ಸುರತರುವ ನೆಲವದ । ಹಿಡಿಯ ಬಯಕೆಗೆ ತೊತ್ತುಬೇಟೆಗೆ । ಹಡೆದ ತಾಯನು ತೊರಸಿದರೊ ಮೌಕ್ತಿಕದ ಮಣಿಗಣವ ॥ ತೊಡಹಿ ಬಿಸುಟರ ದಾರಗೋಸುಗ । ನುಡಿಸಿದರೋ ಕಸ್ತೂರಿಯ ನರಳಿಗೆ । ನುಡಿಯರೋ ಮರೆಯೇಕೆನುತ ಮೊರೆಯಿಟ್ಟಳಾ ತಾರೆ ॥ ೧೧ ॥ ಇರಿದರೋ ಸುರಧೇನುವನು ನೆರೆ । ಮುರಿದರೋ ಸುರಕುಜವ ಕಡಲೊಳ । ಗುರುಬಿದರೋ ಕಾಮಿತದ ರತ್ನವನಕಟ ಕೈಯಾರೆ ॥ ಹರಿದು ಬಿಸುಟರೋ ತನ್ನ

ಕೊರಳಲಿ । ಮೆರೆವ ಮಣಿಮಾಂಗಲ್ಯಸೂತ್ರವ । ಪೊರೆಯೋ ನೀನೀಧಾತ್ರಿ ಹಾ
ಯೆಂದೊರಲಿದಳು ತಾರೆ ॥ ೧೨ ॥ ಆಯಿತೇ ಸಂತೋಷ ರಾಜ್ಯ । ಶ್ರೀಯನನುಭವಿ
ಸಿನ್ನು ಮದನನ । ಬಿಯ್ಯಗಕೆ ಬಿಡುವಾಯಿತೇ ನಿನಗೆಲೆ ರವಿಜಪತಿಯು ॥ ಪಾಯದಲಿ
ಕೊಲಿಸಿದೆ ಧರಾಚಂ । ದ್ರಾಯುತದ ಕೀರ್ತಿಯನು ಳಿಸಿದೆ । ದಾಯಿಗರೊಳುತ್ತಮ
ನಲಾ ನೀನೆಂದಳಾತಾರೆ ॥ ೧೩ ॥ ಆರುಗತಿ ನಮಗಿನ್ನು ನಾವಿಂ । ನಾರ ಸಾರಿದು
ಬದುಕುವೆವು ನಮ । ಗಾರೊಡೆಯರಾರಾಪ್ತ ರಾರಧಿಕೃತರು ನಮಗಿನ್ನು ॥ ಆರು
ಯಿಲ್ಲದ ನನ್ಯಗತಿಕರಿ । ಗಾರು ಬಂಧುಗಳೆಂದು ಬಳಿಕಾ । ತಾರೆ ಕಡುಶೋಕದಲಿ
ಕೆರಲಿಗೆ ಹಾಯ್ದಳಂಗದನ ॥ ೧೪ ॥ ಕಂದ ನಿನ್ನನದಾರಕೈಯಲಿ । ತಂದೆ
ಕೊಟ್ಟನೋ ಬಳಿಕ ನನಗೇ । ನೆಂದು ಹೇಳಿದನಕಟ ದೇಶಿಗರಾದೆವೇ ನಾವು ॥
ಮುಂದೆ ನಮಗಿನ್ನೇನು ಗತಿನಾವ್ । ನೊಂದೆವೈ ನುಗ್ಗಾದೆವೈ ಅರೆ । ಬೆಂದ ತನು
ತಾನಾದೆವೈ ಹಾ ಯೆಂದಳಾ ತಾರೆ ॥ ೧೫ ॥ ಎಂದು ಮೂರ್ಛಾಗತ ಪರಿಗ್ರಹ ।
ದಿಂದ ಮಾನಿನಿ ಮುಳುಗಿದುವುರಘು । ನಂದನನ ಶರದರುಣ ಜಲಧಾರಾ ಸುತೀರ್ಥ
ದಲಿ ॥ ಮುಂದುವರಿವ ವಿಲಾಪಮಂತ್ರದ । ಸಂದಪೂಜಾಸನದ ಲೊಯ್ಯನೆ ।
ಸಂದರುಶನವ ಮಾಡಿದಳು ಮಾಯಾಮಹೇಶ್ವರನ ॥ ೧೬ ॥ ಅಕಟ ರಘುಕುಲದರಸು
ಗಳು ಧಾ । ರ್ಮಿಕರು ಕೃತಭಾಷಿತರು ಭಾಗ್ಯಾ । ಧಿಕರು ಪುಣ್ಯಶ್ಲೋಕ ರುತ್ತ
ಮ ರಧಿಕ ಗುಣಯುತರು ॥ ಅಕುಟಿಲರು ಸನ್ಮಾರ್ಗಶೀಲ । ಪ್ರಕಟಿತರು ಸದ್ವ
ರ್ತನರು ಸೇ । ವಕರಿ ಗೋಸುಗ ಕೊಲುವುದುಚಿತವೆ ಯೆಂದಳಾತಾರೆ ॥ ೧೭ ॥
ದಶಮುಖನ ಮೇಲಣ ವಿರೋಧ । ವ್ಯಸನದಧಿಕಕ್ರೋಧ ಶಿಖಿಯನು । ಬಿಸುಡು
ವರೆ ಕೊಂಡೆಯರ ನುಡಿಗಪರಾಧ ಹೀನನಲಿ ॥ ಬಸಿದಶೂಲಕೆ ಕುಣಪವನು ಸೇ ।
ರಿಸಿದ ಗಾದೆಯುಮೆರೆವರೇ ಯುಪ । ದೆಸೆಯ ಹೊತ್ತೆ ನಿರರ್ಥಲೋಕದೊಳೆಂದಳಾ
ತಾರೆ ॥೧೮॥ ಬಲ್ಲ ಬಲುಮೆಯೊಳೆನ್ನಗಂಡನು । ಅಲ್ಲದಾರಿಗೆ ಹೇಳು ಚಾಪಟ । ಮಲ್ಲತನ
ಮರ್ಕಟ ರೊಳಲ್ಲದೆ ಮೆರೆಯದೇ ನಿನಗೆ ॥ ಖುಲ್ಲರೊಡನೆಯ ಕೂಟ ಸಜ್ಜನ । ರಲ್ಲಿ
ಸೊಗಸೇ ಖೂಳರಂಗವ । ನಿಲ್ಲಿಮೆರೆವರೆ ರಾಮ ನೀನೆಂದಳಲಿದಳು ತಾರೆ ॥ ೧೯ ॥
ಮಧುವಿನಲಿನಿನಗೊಪ್ಪುವುದು ರಣ । ನಿಧನ ನಿಗಮಾಂಗನೆಯ ನವನೀ । ವಧುವ
ಕದ್ದೊಯ್ದವ ರೊಳೆಸೆವುದು ಕಲಿ ಹಿರಣ್ಯಕನ ॥ ವಧಿಸುವಂದು ವಿರಾಜಿಪುದು ನಿ ।
ನ್ನಧಿಕ ಭುಜಬಲವಕಟ ವಾನರ । ವಧೆವಿಚಾರಿಸೆ ರಂಜಕವೆ ನಿನಗೆಂದಳಾ ತಾರೆ ॥೨೦॥
ಅರಿಕೆ ಗುಣವಿನ ಕೊರತೆ ಪತಿಯಲಿ । ಹೊರೆದು ಪಿಸುಣರಮಾತು ಮನಸಿಂ । ಗುರಿಸಿ
ದಲ್ಲದೆ ದೇವ ದಯೆ ನಿನಗಿಲ್ಲ ದಾದುದಲ ॥ ಅರೆಚಿ ಮಾಡುವುದೇನು ತಾನೀಂ ।
ನೆರೆಯಮುಂಚದ ಮುನ್ನ ವಹ್ನಿಯೊ । ಳೊರಗಿಸೆನ್ನುವ ನೆನ್ನಪತಿ ಯೊಡನೆಂದಳಾ
ತಾರೆ ॥ ೨೧ ॥ ತರಳನಿವ ನಂಗದನು ಸೇರುವ । ದರಿದು ಸುಗ್ರೀವಂಗೆ ಹಸುಳೆಯು ।
ಹರಣನಿನ್ನದು ಕಂದನಿವ ತಾ ನಿನ್ನಕೈಲೆಡೆಪು ॥ ಕರುಣವಿರಲಿವನಲ್ಲಿ ಬಾಪ್ಪೈ ।
ತರುಣ ಬಾ ಯೆಂದಿನಕುಲೇಂದ್ರನ । ಚರಣದಲಿ ಚಾಚಿದಳು ತನುಜನನಶ್ರುಜಲ
ಜಡಿಯೆ ॥ ೨೨ ॥ ಜಲವಿಡಿದ ವಕ್ಷಿಯಲಿ ಕರುಣಾ । ಜಲನಿಧಿಗೆ ಲವ ಕೇಳು ಕಡು
ಕೋ । ಮಲವಲಾ ರಘುಪತಿಯ ಚಿತ್ತವು ಬಳಿಕಬಾಲಕನ ॥ ತಲೆವಡಹಿ ತನ್ನಂಘ್ರಿ

ಕಮಲವ । ನಿಳುಹಿದನು ಮೂರ್ಛೆಯಲಿ ತಾರಾ । ಲಲನೆಯನು ಸಂತೈಸಿದನು ವಿವಿಧೋಪಚಾರದಲಿ ॥ ೨೩ ॥ ತರುಣಿ ಕೇಳಾಯುಷ್ಯವೊದಲಾ । ದುರುತರ ಪ್ರಾರಬ್ಧ ಕರ್ಮವ । ಬರಹವಿದು ತಾ ಪ್ರಾಣಿಗಳಿ ಗಂಭೋಜ ಸಂಭವವ ॥ ಮರಣ ವಿಧಿಕೃತ ಜನನ ಕಿದನಾ । ದರಿಸಲರಿಯದೆ ಬಯಲ ಹಮ್ಮಿನ । ಹರಹಿನಲಿ ಹೊದ ಕುಳಿಸುವುದು ಜಗವೆಂದ ನಾ ರಾಮು ॥ ೨೪ ॥ ಆದರೇನಜ್ಞಾನ ಪ್ರಪಂಚವ । ನೊದವು ದೇಸು ಪ್ರೌಢಿನಾವುನಿಜ । ಸುದತಿಯನು ಹೋಗಾಡಲೇತಕೆ ಕಪಿಯ ಕೊಲಲೇಕೆ ॥ ಯಿದುವೆ ತಾ ಪ್ರಾರಬ್ಧ ಫಲವಿದ । ನುದಗಲಿ ಸಲಳವಲ್ಲ ಸಹಗಮು । ನದ ವಿಚಾರವ ದೇಕೆ ಸಾಕಿನ್ನೆಂದನಾ ರಾಮು ॥ ೨೫ ॥ ತನುಜ ಕೇಳ್ಳೈ ಬಳಿಕ ಹರಿನಂ । ದನೆಯ ಲಲನೆಯ ಲೋಚನದ ಬಿಡು । ವನಿಯ ನಂಶುಕದಗ್ರದಿಂ ದೊರಸಿದನು ಕರುಣದಲಿ ॥ ಅನುಜ ಲಕ್ಷ್ಮಣನಂತೆ ನಿನ್ನಯ । ತನುಜನನು ಪಾಲಿಸುವೆನೆಂದಾ । ವನಿತೆಯನು ಸಂತೈಸಿ ಬಳಿಕಿಂತೆಂದ ನಾ ರಾಮು ॥ ೨೬ ॥ ತರಣಿ ತನಯುಗೆ ರಾಜ್ಯಪದವಿಯ । ವಿರಚಿಸುವ್ರ ದಂಗದಗೆ ನೊಸಲಲಿ । ಧರಿಸುವುದು ಯುವರಾಜ ಪಟ್ಟವನೆಂದು ಬೆಸವೇಳ್ದು ॥ ತೆರಳಿಸಿದ ನನುಜನನು ರವಿಜನ । ಕರೆದು ನಡೆ ನೀನಿನ್ನ ಪುರಕೀ । ವರುಷ ಕಾಲವ ಕಳೆದು ಕಪಿಬಲ ಸಹಿತ ಬಾ ಯೆಂದ ॥ ೨೭ ॥ ತಿರುಗಿದನು ಪ್ರಸ್ರವಣ ಪರ್ವತ । ಕರಸನಲ್ಲಿ ಮ್ಮೆಲೆ ನಡೆದುದು । ಸುರಪಸೂನುವಿ ಗೌರ್ಧ್ವದೈಹಿಕ ವಾಗವೋಕ್ತಿಯಲಿ॥ ಹರಿ ಧರಾಧಿಪ ಪಟ್ಟ ಬಳಿಕಾ । ಯ್ತುರಿ ಯಮುನ ನಂದನಗೆ ನಡೆದುದು । ಹರಿಹಯನ ಮೊಮ್ಮಗಗೆ ಘನ ಯುವರಾಜ್ಯ ದಭಿಸೇಕ ॥ ೨೮ ॥ ಇನಜನನು ಬೀಳ್ಕೊಂಡು ಮಾರುತ । ತನುಜ ನಳ ನೀಲಾದಿಗಳ ವಂ । ದನೆಯ ಕೈಕೊಳುತೂರ್ಮಿಳಾಪತಿ ಪರವು ಹರುಷದಲಿ । ಮನುಜವೇಷದ ಗೌರವದ ಗೋ । ಮಿನಿಯ ಗಂಡನ ಗರುವ ದೇವನ । ವಿನುತ ತೊರವೆಯ ರಾಯ ನರಹರಿಯೆಡೆಗೆ ನಡೆತಂದ ॥ ॥ ೨೯ ॥

ಐದನೆಯ ಸಂಧಿ ಸಮಾಪ್ತಂ.

ಆರನೆಯ ಸಂಧಿ.

ಸೂಚನೆ॥ ಕಳೆದು ಮಳೆಗಾಲವನು ಬಲಿಮುಖ । ಬಲಸಹಿತ ಬಂದಿನಜನಾ ದಶ । ಗಳ ವಿರೋಧಿಯ ಕಂಡು ಕದನೋದ್ಯೋಗ ಮನನಾದ ॥

ಪದ್ಯ॥ ಕೇಳಿದೈ ನೃಪಸೂನು ನಿಮ್ಮನ್ನ । ಪಾಲರಾ ಪ್ರಸ್ರವಣ ಶೈಲದ । ಮೇಲಿರಲು ಮೈದೋರಿದುದು ಮುಂಗಾರು ಮೇದಿನಿಗೆ ॥ ಬೀಳೆ ಬುಡಮೇಲಾಗಿ ಗಿರಿ ತರು । ಕೀಳೆ ಕಡಲುಪ್ಪರಿಸಿ ಗಗನಕೆ । ತೂಳೆ ತವಕದಿ ಬೀಸಿದುದು ಬಿರುಗಾಳಿ ಪಶ್ಚಿಮದ ॥೧॥ ಮುರಿದು ನಭಕೇರಿದುವು ಮುಗಿಲಿನ । ನೆರವಿ ನೀರ್ಗಳ ಹೇರಿ ಹಾರಿದ । ವರಸುಕುಲದ ಮರಾಳತತಿ ಮಾನಸ ಸರೋವರಕೆ ॥ ಹರುಷಿಸಿದುವು ಬಲಾಹಚಾತಕಿ । ಸುರಶರಾಸನ ಮೇಘ ಲಕ್ಷ್ಮಿಯ । ಶಿರದ ಶೆಖರದ ಮೇಲುದಿನ ಪೊಲು ಮೆರೆದು ದಭ್ರದಲಿ ॥ ೨ ॥ ತೊಟ್ಟುದೋ ನಭಕವಚ ವನು ನೆಲ । ಕಟ್ಟಿ ಬಿಗಿದರೋ ಸುರರು ನಿರಿವಿಡಿ । ದುಟ್ಟಳೋ ಜಲದಾಗಮಸ್ತ್ರೀ ನೀಲಮಯಪಟವ ॥ ಮಟ್ಟ ಮರಕತ ಶಿಲೆಯ ನೀಲದ । ಜೆಟ್ಟದಿರ

ನೆಂಬಂತೆ ಜಂವಳ | ವಿಟ್ಟು ಜರೆದುದು ಕಾರ್ಮುಗಿಲು ಕತ್ತರಿಸೆ ಕುಂಭಿನಿಯ || ೩ || ಝಡಪ್ರಗಳ ಝಾಡಣೆಯ ಮಿಂಚಿನ | ಖಡುಗಗಳ ನಡುಮುಗಿಲ ಹರಿಗೆಯ | ಗಡ ಬಡೆಯ ಗರ್ಜನೆಯ ಗಾಢಿಯ ಘನ ಘಟಾವಳಿಯ || ಸಿಡಿಲ ಬೊಬ್ಬೆಯು ಧಾಳಿಯಲಿ ನಡೆ | ನಡೆಸಿ ತಾಗ ನಿದಾಘ ಭೂಪನ | ಹಿಡಿದು ಹೆಕ್ಕಳಿಸಿ ದನು ಮೇಘಾಗಮ ಮಹೀ ಪಾಲ || ೪ || ಧೊರೆ ಮುಗಿಲು ಧರೆಮುಗಿ ನಿಡುಮೋ | ಹರದಮುಗಿ ಲುಪ್ಪರದ ಝಾಡಿಯ | ಜರಿವ ಜೋಡಿಯ ಜಗದ ಜಂಗಗದಗಳ ಮುಗಿಲಿನಲಿ || ತರಣಿ ಶಶಿ ತಾರಾ ಗ್ರಹಂಗಳ | ಹರಹು ನಿಂದುದು ಗಗನ ಜಲನಿಧಿ | ಜರೆದು ದಿಳೆಗೆಂಬಂತೆ ಜಲ ರೋಪಿಸಿತು ಮೇದಿನಿಯ || ೫ || ಬೆಸುವ ಮೇಘದ ಕಾಳಿಕೆಯ ಖಂ | ಡಿಸುವ ಮಿಂಚಿನ ಸಂಚರದ ಸಂ | ಧಿಸುವ ಸಿಡಿಲಿನ ನೆಲಕೊಗುವಾಲಿಕಲ್ಲುಗಳ || ಬೆಸುಗಳ ಬಿರುವಳೆಯ ಬಿದರ್ವಳೆ | ಬಿಸುಲುವಳೆ ಸಿರಿಸೋನೆ ಸೇಡಿದ | ಘಸಣಿ ಮಳೆಯಲಿ ಗಾಸಿ ಯಾದುದು ಜಗದ ಜನ ನಿಕರ || ೬ || ತೊರೆಗಳು ಪ್ಪರದಬ್ಬರದ ಜೊ | ಬ್ಬರಿ ತವ ಬುಧಿಯ ಸರಸಿಗಳ ನೀ | ರೊರತೆಗಳ ನೆಲನವ ಘನೋದಕ ದುಬ್ಬುನಿರ್ಜರದ || ನಿರಿಸು ನಿಡು ಜಂಘಾ ಸಮೀರದ | ದಿರಿಸು ಬೇಸರಸಿತ್ತವೆನೆ ನೇ | ಸರು ಕುಲಾಧಿಪ ಸೂನು ಕೇಳ್ಳೈ ಮೇಘ ಕಾಲದಲಿ || ೭ || ಲವನೆಕೇಳ್ ಚಂಡಾಂಶು ವಂಶೋ | ದ್ಭವನು ಬಳಿಕಾ ಪರ್ವತದ ಬಲು | ಗವಿಯ ಗೇಹಂಗಳಲಿ ಜಂಝಾನಿಲ ನಿವಾರಣದ || ವಿವಿಧ ಪುಣ್ಯ ಮೃಗಾಜಿನಂಗಳ | ನಿವಸನದ ನೀರೇಜ ಕಂದದ | ನವ ಫಲಾಹಾರದಲಿ ನೂಕಿದ ರಂಬುದಾಗಮವ || ೮ || ಬಂದುದಾ ಕೈಯ್ಯೊಡನೆ ಧಾಳಿಕೆ | ಗುಂದಿ ದಭ್ರದ ಬೆಳ್ಪಿನುಬ್ಬರ | ಮಂದವಾದ ಸಮೀರಣನ ಸಂಭ್ರಮದ ಸಡಿಲಿಕೆಯ || ಸಂಧಿಸಿದ ಸಿಡಿ ಪಾಟಗಳ ತರು | ಣೇಂದು ಗಳ ತೋರಿಕೆಯ ಬೆಳಗುಗ | ಳಿಂದ ಸೊಗಸನು ಸೂಸು ತವನಿಗೆ ವರ ಶರತ್ಸಮಯ || ೯ || ಮುರಿದ ವೀರನ ರಣದವೊಲು ಬೊ | ಬ್ಬಿರಿತ ನಿಂದವು ಸಾರಸಂಗಳು | ಹರಿದೆಗೆದ ರಣಭೇದನ ವೊಲೊಳ ಸರಿದವಲ್ಲಲ್ಲಿ || ತೊರೆ ಗಳಾತ್ಮಜ್ಞಾನಿ ತತ್ಪರ | ದರಿವು ಕಾಣಿಸದಂತೆ ನಭಕಂ | ದೆರವೆಯಾದುದು ಕಾಣಿಸಿತು ಜನಮನದ ಸುಮ್ಮಾನ || ೧೦ || ಸಡಗರಿಸಿದುದು ಶಾಲಿ ಶಾಡ್ವಲ | ದುಡಿಗೆಯಲಿ ನೆಲ ದಖಿಳ ಮುಗಮುದ | ವಡೆದ ವಂಚೆಗ ಳಿಂಚರವ ಬೀರಿದುವು ಕೊಳಗಳಲಿ || ಮಡುಗಳು ಕ್ಕಾಡಿಸಿದುವು ಹಾವಸೆ | ಹಿಡಿದ ಪಟ ಪಾಂಥಕರ ಪದಹತಿ | ಗೊಡಲ ನಿತ್ತವು ಹೊಂಚಿದವು ಹೊಲದಲಿ ವಿಹಂಗಚಯ || ೧೧ || ಸಂದು ದಾಶರ ದವನಿಪಾಲಕ | ಸಿರಿ ಕುಶಾನುಜ ಕೇಳು ಹಿಮಋತು | ಬರವಿನಲಿ ಬಳಿಕಾದುದವನಿಪಗರಿವಥೆಯು ಸಮಯ || ಬರವ ನಲ್ಲಂಮೇಲೆ ವಾನರ | ದರಸನಲಿ ಕಾಣದೆ ಕಪೀಂದ್ರನ | ಪರಿಯ ಕಂಡ್ಯೆಯೆಂದು ಮೆಲ್ಲನೆ ನುಡಿದ ನನುಜಂಗೆ || ೧೨ || ಹಿರಿದು ಹವಣರಿಯದ ಕೃತಘ್ನರು | ಧರೆಯೊಳಿಲ್ಲೆನಬೇಡ ಧರೆಯುಲಿ | ನಿರತಿಶಯ ಪುರುಷಾರ್ಥ ಪಂಡಿತರಿಲ್ಲವೆನಬೇಡ || ಸಿರಿಯುಮದದಲಿ ನಮ್ಮನಾ ಕಪಿ | ಪರಕು ಮಾಡದೆ ಹೋದ ನೀನೆ | ಚ್ಚರಿಸಿ ಬಾ ಹೋಗೆಂದು ನೇಮವನಿತ್ತ ನನುಜಂಗೆ || ೧೩ || ಏನವನು ದೊಡ್ಡಿದನು ಶರಸಂ | ಧಾನ ಸಮಯಗಳಾವು ನನುಗಾ | ವಾನರರ ಮಿತ್ರತ್ವ ವೆಂಬುದು ಲೋಕಹಾಸ್ಯವಲ || ಈ ನಿಶ್ಚಿತ ಕೋದಂಡ ಚಂಡತ್ವ | ಶಾನುಪಿನ ತೊಯ್ಲಿನಲಿ ಹಗೆಗೊಂ | ಡಾನ

ವವರಾರೆಂದು ಲಕ್ಷ್ಮಣ ದೇವ ಗರ್ಜಿಸಿದ ॥೧೪॥ ಕರೆದು ನೋಡೆಂ ದವನು ಬಂದರೆ।
ಬರಲಿ ಬಾರದ ಡವನ ರಾಜ್ಯವ। ತಿರುಹಿ ನಾವ್ ಕೊಂದವನ ನಂದನಗಿತ್ತು ಬಾ ಬಳಿಕ ॥
ಅರಿವಥೆಗೆ ನೀನೆಂದ ನುಡಿ ತಾ। ತ್ಪರ್ಯತುದಿಗೆಂದರಸ ನಾಜ್ಞಾ। ಧರನ ಧೈರ್ಯೋತ್ಕ
ರನ ಕಳುಹಿದನಾ ಮಹಾದ್ರಿಯುಲಿ ॥೧೫॥ ಧರಿಸಿಕೊಂಡಿ ರ್ದಗ್ರಜನ ನವ। ವರ ಶರಾ
ಸನ ಶರ ಕೃಪಾಣವ। ನಿರಿಸಿ ತನ್ನಯ ಧನು ತನುತ್ರವ ಧರಿಸಿ ರಘುಪತಿಯ ॥ ಚರಣ
ಕಾನತನಾಗಿ ಮನದು। ಬ್ಬರದ ಹೊದರಿನ ಹೊಗುವ ಕೋಪದ। ಭರದ ಭಾರ
ವಣೆಯಲಿ ಬೀಳ್ಕೊಂಡನು ಮಹೀಪತಿಯ ॥೧೬॥ ಅರು ನಿಲುವರು ಲಕ್ಷ್ಮಣನ ಘನ।
ಘೋರ ಗರ್ವಾನಲನ ಮುಂದೆ ಮ। ಹೀರುಹಾವಳಿ ಸೀದ ವಂಗದ ಝಳದ ಝಾಡಿ
ಯಲಿ ॥ ಭೂರಿಭೂಧರ ಬಿರಿದ ವಮಮುಕ। ದೋರ ಸಿಂಹಧ್ವನಿಗೆ ಸಿಂಹಚ। ಮೂರ
ಕರಿ ಶರಭಾದಿ ಮೃಗಜಾರಿದವು ದೆಸೆದೆಸೆಗೆ ॥೧೭॥ ಏರಿಸಿದ ಬಿಲು ಬಿರುವಿನುಬ್ಬರ।
ಕೂರಿಕೆಯ ತುದಿವೆರಲಿನಲಿ ಕೆಂ। ಪೇರಿದಕ್ಷಿಯು ಕುಣಿವ ಮೀಸೆಯ ಕಾಹುರದ ಮನದ॥
ಮೂರುಲೋಕದ ಕೊಲೆಗೆಲಸ ಕು। ಬ್ಬೇರಿದ ಸಮಾರಂಬಕನ ಪೊಲು ವೈ। ದೋರಿ
ದನು ಮಿಹಿರಜನ ದುರ್ಗದ ಭಟರ ಕಣ್ಗಳಿಗೆ ॥೧೮॥ ಕಾಣುತೀತನ ನಾ ಪ್ಲವಂಗ।
ಶ್ರೇಣಿ ದುರ್ಗವ ನಿಳಿದು ಬಂದೆಡೆ। ದಾಣದಲಿ ತರುಬಿದರು ತರು ಶೈಲಾಯುಧಂಗಳಲಿ॥
ಕ್ಷೋಣಿಜಾಸುತ ಕೇಳು ಬಳಿಕಾ। ಕ್ಷೀಣಬಲ ನಾವಲಿಮುಖಾಳಿ ಯ। ಗೋಣುಗಳ
ನೆಬ್ಬಿಸುತನಡೆ ದಡರಿದನು ಪರ್ವತವ ॥೧೯॥ ಎಡಬಲದ ಲೌಂಕುವ ಭಟಾವಳಿಯ।
ತೊಡಕ ತೂರುತ ಮೀರ ಮುಸುಕುವ। ಕಡುಹುಕಾರರ ಕಾಲನೂರಿಗೆ ಕಳುಹಿ ಸಂದ
ಣಿಸಿ ॥ ಘುಡು ಘುಡಿಪ ಕೋಪದಲಿ ದುರ್ಗದ। ಹೆಡಕುಪರಿಯಂ ತೇರೆ ಪುರಗಡ।
ಬಡಿಸಿ ತೆಚ್ಚಿತು ಭಾರಿಸಿತು ಘನ ವಿನತನೂಜಂಗೆ ॥೨೦॥ ಗಜಬಜ ವಿದೇನೆನುತ
ಪವನಾ। ತ್ಮಜನು ನಡೆತಂದಿನಕುಲೇಂದ್ರಾ। ನುಜನ ಕಂಡೆ ಡಬಲದ ಕಳಕಳವದು
ನಿವಾರಿಸುತ ॥ ನಿಜದ ಸಿರಿಗೆಯ ಭಕುತಿಯಲಿ ಭೂ। ಮಿಜೆಯ ನಿಜವೈದುನನ ಪದ
ಪಂ। ಕಜಕೆ ವಿನಮಿತನಾಗಿ ತಂದನು ರವಿಜ ನರಮನೆಗೆ ॥೨೧॥ ಧರಣಿಜಾ ಸುತ
ಕೇಳು ತತ್ಪುರ। ವರ ವಿರಾಜಿಸಿತಮರ ನಗರಿಗೆ। ಯೆರಡು ಮಡಿಯೆನೆ। ಬದ್ಧಭವನಾ
ವಳಿಯ ವೀಧಿಯಲಿ ॥ ಸುರಮಹೀಜೋದ್ಯಾನದಲಿ ಸುರು। ಚಿರ ವಿಭೂಷಣ ದಬಲೆ
ಯರ ಸುಂ। ದರದ ಸೊಗಸಿನ ರಾಜಭವನವು ಮೆರೆದು ದಿದಿರಿನಲಿ ॥೨೨॥ ಜರೆದು
ತಾರಾದೇವಿ ಬಳಿಕೆ। ಚ್ಚರಿಸ ಲಾಕ್ಷಣ ಜೆದರಿನಲಿ ಮುಖ। ದರಿಕೆಯಲಿ ಬಹುವಿಧದ
ಸೌರಂಭಾತಿಶಯದಿಂದ ॥ ಉರುವ ತನ್ನ ಯುವತಿಯರನ್ವೈ। ಮರೆಯಲ್ಪೈತಂ
ದವರು ಸಹಿತಡಿ। ಗೆರಗಿ ವೈಭವದಿಂ। ದಿದಿರ್ಗೊಂಡೊಯ್ದು ನರಮನೆಗೆ ॥೨೩॥
ಪರಮ ಪೂಜಾವಿಧಿಗಳಿಂ ದಾ। ದರಿಸಿ ಲಕ್ಷ್ಮಣದೇವನನು ಸ। ತ್ಕರಿಸಿ ಕಂಪಿತ
ಕಾಯ ನೆರಗಿದ ನಿತ್ತು ಕಾಣಿಕೆಯ ॥ ಕರುಣಲತೆ ಕುಡಿದೋರಿ ಮೆಲ್ಲನೆ। ಕರಸರೋ
ಜದಿ ನಾ ಕಪೀಂದ್ರನ। ಶಿರವ ನೆಗಹಿದು ಬಳಿಕ ಕುಳ್ಳಿರಿಸಿದನು ವಿನಯದಲಿ ॥೨೪॥
ಹರಿದ ಹರುಷಣ ದಾನನದ ವೈ। ಸಿರಿಯುರಿದು ಕೈಮುಗಿದು ಮೆಲ್ಲನೆ। ದರಹಸಿತ
ಮುಖನಾಗಿ ಕೇಳಿದ ನವನಿಜೇಶ್ವರನ ॥ ಚರಣ ಸರಸೀರುಹ ಸುಯುಗ್ಮ। ಸ್ಥಿರವ
ಜೀಯ ಕೃಪಾತಿಶಯ ದಂ। ತರದನರಿ ಯೇನನ್ನ ಮೇಲೆನುತಿನಜ ಬೆಸಗೊಂಡ ॥೨೫॥

ನುಡಿದದಿನ ಕವ ಬಾರನೆಂದವ । ಘಡಸರಲೆ ಚಿತ್ತದಲಿ ಸೆನ್ನಲಿ । ತರದು ದಪರಾ
ಧಾಂಶವದ ಬಿನ್ನೈಸಲೇಕಿನ್ನು ॥ ಹಿಡಿದೆವತಿ ದೃಢವಾಗಿ ನಿಮ್ಮಡಿ । ಗಳನು
ನಾವಿನ್ನಂಜಲೇಕೆ । ನ್ನೊಡೆಯತನವನು ಮೆರೆದು ತನ್ನನು ಸಲಹಬೇಕೆಂದ ॥ ೨೬ ॥
ಅರಸ ಚಿತ್ತೈಸರಿ ಯವಮಾನ್ವಯ । ದರಸನಂಘ್ರಿ ಸರೋಜ ಸೇವೆಗೆ । ನರಹಿದೆನು
ಶರನಿಧಿ ಪರೀತ ಸಮಸ್ತ ಕಪಿಬಲವ ॥ ಹರಿ ವರುಷ ಕಿಂಪುರುಷ ಭಾರತ । ವರುಷ
ಕಾವರುಷಾದಿ ನಾನಾ । ಧರೆಯ ಗಿರಿ ವನವಾಸಿಗಳ ಸಾಹಸ ವಿಲಾಸಿಗಳ ॥ ೨೭ ॥ ಶರ
ನಿಧಿಯ ಹೊರಗೊಳಗೆ ಸಗ್ಗದ । ತರುಚರೇಂದ್ರರ ನಿಂದುಜೂಟರ । ಗರಿಯವುಗೆ ವರು
ಣಂಗೆ ಕಾಲಂಗಗ್ನಿದೇವರಿಗೆ ॥ ಸುರಪತಿಗೆ ಕಿನ್ನರಪತಿಗೆ ಮಾ । ರ್ಮರೆವ ಸುಭಟರ
ನೆರಹಿದೆನು ನಿ । ಮ್ಮರಸನಂಘ್ರಿಸರೋಜ ಸೇವೆಗೆ ಜೀಯ ತಾನೆಂದ ॥ ೨೮ ॥ ನುಡಿದ
ದಿವಸಕೆ ಬಾರದಿದ್ದಾ । ಗಡಿಗತನವದು ಜೀಯ ನಿಮ್ಮಾ । ಪಡೆಯನೆರಹಲು ಸಂದವವ
ನಿಗೆ ದಿವಸ ಹನ್ನೆರಡು ॥ ನುಡಿಯೆ ನಾಲಿಗೆಯಿಲ್ಲ ನಿಮ್ಮಡಿ । ಯೆಡೆಗೆ ಭೃತ್ಯನ ತಪ್ಪಿ
ನೊಪ್ಪಂ । ಬಡೆಯ ಬೇಕೆಂದೆರಗಿದನು ಮಗುಳಂಘ್ರಿಗಾ ರವಿಜ ॥ ೨೯ ॥ ನೆಗಹಿದನು
ಕಪಿವರನ ಶಿರವನು । ಮುಗುಳುನಗೆ ಮಂದವಿಸೆ ತಾರೆಯು । ಮಗನ ತಾರೆಯ ರುಮೆಯ
ನಮಿತಾನನಗಳನು ಬಳಿಕ ॥ ಮಗುವ ಕರುಣದೊಳಿತ್ತು ಸೌಖ್ಯವ । ಸೊಗಸಿನಲಿ
ಸೌಮಿತ್ರಿ ತೊರವೆಯ । ನಗರ ದಧಿಪತಿಯೆಡೆಗೆ ಬಂದನು ಬಹಳಬಲ ಸಹಿತ ॥ ೩೦ ॥

ಆರನೆಯ ಸಂಧಿ ಸಮಾಪ್ತಂ.

ಏಳನೆಯ ಸಂಧಿ.

ಸೂಚನೆ॥ ರಾಯ ರಘುಕುಲ ಸಾರ್ವಭೌಮರಿ । ಗಾಯತಾಹವಮಲ್ಲ ನನುಪಮ ।
ರಾಯದಳವನು ತೋರಿ ಮನ್ನಿಸಿಕೊಂಡನಾ ರವಿಜ ॥

ಪದ್ಯ॥ ಕೇಳಿದೈ ಯೆಲೆ ರಾಜಸೂನು ದ । ಯಾಳುವಲ್ಲಾ ರಾಯರಲಿ । ಸೀತಾ
ಲತಾಂಗಿಯ ರಮಣ ಕಾಣುತ ಕಪಿಕುಲೋತ್ತಮನ ॥ ಮೇಲಣ ವರುಷ ಮನವ
ನಾಕ್ಷಣ । ಬೀಳುಕೊಟ್ಟನು ದೂರದಲಿ ದು । ವ್ವಾಳಿಸಿದ ಭೀತಿಯಲಿ ಕಪಿ ವ್ಯೈಯಿಕ್ಕು
ತೈತಂದ ॥೧॥ ತ್ರಾಹಿ ನರನಾಟಕ ವಿನೋದ । ತ್ರಾಹಿ ಭೂಭಾರಾಪಹರಣ । ತ್ರಾಹಿ
ಸರ್ವೇಶ್ವರ ಸನಾತನ ಸಕಲ ಗುಣನಿಲಯ ॥ ತ್ರಾಹಿ ಸತ್ವರಜಸ್ತಮೋಗುಣ । ದೇಹ
ವಿವಿಧ ವಿಚಿತ್ರ ಲೀಲಾ । ಗೇಹ ನಿರುಪಮಮಹಿಮ ಮಾಯಾನರ ನಮೋಯೆಂದ ॥೨॥
ದೇವದೇವಾಧೀಶ ರಿಪುವನ । ದಾವದೈತ್ಯಕದಂಬ ವಿಪುಲ । ಗ್ರಾವ ಗರ್ವಿತವಜ್ರ ಶರಣ
ಜನೈಕ ಸುರಧೇನು ॥ ದೇವ ಭಕ್ತಾಧೀನ ಭಕ್ತಜ । ನಾವಲಂಬನ ವಿಮಲ ವೈದೇ ।
ಹೀ ವಿಲೋಚನ ವಿಕಸಿತೋತ್ಪಲ ಚಂದ್ರ ಸಲಹೆಂದ ॥ ೩ ॥ ಕರುಣರಸ ತುಳುಕಾಡೆ
ಕಪಿ ಕುಂ । ಜರನ ಕಂಜದಳಾಯತಾಕ್ಷನು । ಬರಸೆಳೆದು ಬಿಗಿಯಪ್ಪಿದನು ಮನದಧಿಕ
ಹರುಷದಲಿ ॥ ಕರವ ಹಿಡಿದು ಮೃಗೇಂದ್ರ ಪೀಠದ । ಹೊರೆಯಲಾತನ ನಿಲಿಸಿ ನಯ
ದಿಂ । ದರಸ ಬಳಿಕೀ ಮಾತನೆಂದನು ರಾಜಕಾರಿಯವ ॥ ೪ ॥ ಕೇಳಿದೈ ಸುಗ್ರೀವ ಹಗೆ
ವನ । ಮೇಲಣಧಿಕ ಕ್ರೋಧ ದಿನದಿನ । ಕೇಳಿ ಧಿಟವಹುದೆಂಬ ನಾಣ್ನುಡಿ ನಮ್ಮದಾದ.

ದಲ ॥ ಮೇಲೆ ತಿಂಗಳು ನಾಲ್ಕರೆಣಿಕೆಯು । ಕಾಲ ಸವೆದುದು ರಿಪುವಿರೋಧ ವಿ । ತಾಳ ವಿಗ್ರಹಕೇನು ಮತಿಯುನು ಕಂಡೆ ನೀನೆಂದ ॥ ೫ ॥ ಮತಿಯದೇನೆಲೆ ಜೀಯ ರಿಪು ಸಂ । ತತಿಯ ಸಂಹರಿಸುವ ಶರಣಾ । ಗತರ ಸಲಹುವ ಸತ್ವಗುಣ ನಿನಗಲ್ಲದಿಸ್ನುಳಿದ ॥ ಇತರ ದೈವದಲುಂಟೆ ಮುಂದಾವ್ । ಸ್ತುತಿಸಲೇತಕೆ ಜೀಯ ಸೇವಾ । ಕೃತಿಯ ಸಮಯೋಚಿತವ ತನ್ನಲಿ ಬೆಸಸು ಸಾಕೆಂದ ॥೬॥ ಧಾರಿಣೀಪತಿ ಕೇಳು ಬಹು ತೂ । ಣೀರ ದಂಬಿವ ಲೊಬ್ಬ ತಾನುಪ । ಕಾರಿ ನಿಮಗಾನೆಂಬುವದು ರಾಜೋಪಚಾರವೆಲೆ ॥ ಕಾರಿಯವದೇನರಸ ಭರವಲಿ । ಭಾರಿಯಾಹವ ಕಿಕ್ಕು ಮಿಕ್ಕ ವಿ । ಚಾರವಿನ್ನೇಕೆಂದು ಕೈಗಳ ಮುಗಿದ ನರಸಂಗೆ ॥ ೭ ॥ ಭಾ ಸುರೇಂದ್ರಜಸೂನು ಶೋಚಿ । ಪ್ಕೇಶಸುತ ಬಾನಮ್ಮ ಬಲವಾ । ರಾಶಿಯುನು ರಾಜೇಂದ್ರಚಂದ್ರನು ನೋಡಲಿಂದಿನಲಿ ॥ ಈ ಸಮಾಪಕೆ ಬರಲೆನಲು ಪರಿ । ಶಾಸನನ ಸಂಜ್ಞೆಯಲಿ ಬಳಿಕಾ । ಕೀಶಬಲ ಬರುತಿರ್ದು ದಗಣಿತ ಭೂಮಿ ಲಂಬದಲಿ ॥ ೮ ॥ ಅರರೆ ಜಂಗಮ ಗಿರಿಯೋಜವನು । ಬ್ಬರದ ಜಾತ್ರೆಯೋ ವಿಲಯ ವಹ್ನಿಯ । ನೆರವಿಯೋ ನೆಗಳಿಕೆಯ ಬಲವೋ ಕಾಲಭೈರವನ ॥ ನಿರುಪಮವಲೇ ಹೊಗಳುವರೆ ಹೊಸ । ಪರಿಯ ಬಲ ಬರುತಿರ್ದುದದ್ರಿಯ । ಹರಹುಗಳ ಹೊದರುಗಳ ಬಲು ಹೊಮ್ಮರನ ನೆಗಹಿನಲಿ ॥೯॥ ಝುಡಪುಗಳ ಗಿರಿಶಿರದ ತೊಡಹಿನ । ಗಿರಿಯುಲಂಬರ ತುಂಬಿದುದು ಜೀ । ರುಡಿಯ ಮರದಾಗುಗಳ ಲುದಿಸಿದ ಧೂತಧೂಮಶಿಖಿ ॥ ಪಡೆವಡೆಂಬೀ ಭರದ ಲಿಬ್ಬರ । ಕೊಡೆದು ದಬುಜಭವಾಂಡ ವಾ ಕಪಿ । ಪಡೆಯ ಪದಹತ ಧೂಳಿಗೆದ್ದುದು ಸಕಲ ಭುವನ ಚಯ ॥ ೧೦ ॥ ಮೊದಲು ಶತವಲಿ ಯೆಂಬ ಕಪಿ ತೋ । ರಿದನು ಕಪಿವಾಹಿನಿಯ ನೆರಡ । ರ್ಬುದವ ನದ್ಭುತ ರೌದ್ರ ಭದ್ರ ನಮುದ್ರಮುದ್ರಿತದ॥ ಮದವೊದರಿ ಭೈರವನ ಕರ್ಕಶ । ಕದನ ಕೋಲಾಹಲರ ರಣ ಸಂ । ಪದ ಸಮುಗ್ರರ ರಣಮುಖೋಗ್ರರ ವಿಕೃತ ವಿಗ್ರಹರ॥೧೧॥ ಅವನ ಬಳಿಯಲಿ ಬಂದುದಗ್ಗದ। ಗವಯ ವೀರ ಗವಾಕ್ಷ ಸೇನಾ। ನಿವಹ ವೆರಡರ್ಬುದ ಯುಗಾಂತದ ಮೇಘದಾಕೃತಿಯ॥ ತಿವಿದೆಳೆಯ ಬಿಚ್ಚುವ ಸುರಾಚಲ । ವಚಲನಡಗುವ ಬೊಬ್ಬೆ ಗಗ್ಗದ । ಧೃವನ ಶಿರ ...ೞೀಳೆ ಸಂಗರ ಸುಬಲ ಸಂಮೋಹ ॥ ೧೨ ॥ ವಿಮಲಮತಿ ಕುಶಕೇಳು ದುರ್ಮುಖ । ಸುಮುಖ ರೆಂಬವ ರೊಮ್ಮಿಗೀತನ । ಸಮಕೆ ತಾರದ ಸುಭಟ ಸಮರ ಶ್ರೀವಧೂವಿಟರ ॥ ಯಮನ ಲೆಕ್ಕಿಸ ದಧಟರಸು ನಿ । ರ್ಗಮ ನಿಯುದ್ಧರ ಮದೋತ್ಕಟರ ಸಂ । ಕ್ರಮಿತ ಸಾಹಸ ನಟರ ತೋರಿದ ನೆರಡು ನೆರ್ಬುದವ ॥ ೧೩ ॥ ದನುಜ ಮನುಜಾಮರ ಕದಂಬವ । ಮನಕೆ ತಾರ ದಜಾಂಡ ಮಂಡಲ । ವನು ವಿಭಾಗಿಪ ವೀರ ವಾನರ ವರೂಥಿನಿಯ ॥ ವಿನುತ ದಧಿಮುಖ ಗಂಧಮಾದನ । ಪನಸ ಶರಭಜ್ಯೋತಿರ್ಮುಖರೆನಿ । ಪಸುಮನೋತ್ಸವ ಭಟರ ತೋರಿದರೆರಡು ನೆರ್ಬುದವ ॥೧೪॥ ತೋರಿದನು ಕೈಯೊಡನೆ ಕೇಸರಿ । ಮೂರು ನ್ಯರ್ಬುದವನು ನೃಕೇಸರಿ । ಗಾರುಮಡಿ ಭುಜಬಲನ ಭುವನಕ್ಷೋಭಕೃತ ಭುಜರ ॥ ತೋರಿದನು ತರುವಾಯ ಲುಪಮೆಗೆ । ತೋರಿದತಿ ಬಲವಲಿಮುಖರ ಹೊರ । ಕೇರಿಕೆಯ ಹೊಸಪರಿಯ ಮಸಕದ ವೃಷಭ ನರ್ಬುದವ ॥ ೧೫ ॥ ಕುಮುದ ನರ್ಬುದ ಬಲವನಗ್ಗದ । ರುಮನು ತಾ ನರ್ಬುದವ ನುರು ವಿ । ಕ್ರಮ ರುಮಣ್ವಾಕ

ನರ್ಬುದವ ವರ್ಬುದವ ನಾ ಪನಸ ॥ ಸಮರ ವಿಜಯರ ಸುಪ್ರತಾಪರ। ಯಮಶರೀರರ
ಶೌರ್ಯಗುಣ ಸಂ। ಭ್ರಮರ ತೋರಿದ ನಮಮ ನರ ವಾನರ ಕುಲೇಂದ್ರಂಗೆ ॥ ೧೭ ॥
ಕನಲಿದರೆ ಕಲ್ಪಾಂತ ರುದ್ರನ। ಮೊನೆಗೆ ಮೋಹವ ಮೋಹಿಕಂತಕ। ನಸು ನಿತಾಂತ
ಭುಜಪ್ರತಾಪದಲಸುವ ನಸುವಬಗೆವ ॥ ಘನಪರಾಕ್ರಮಿ ಚಕ್ರಿಗಳ ಮೈಂ। ದನು
ಮದಾಂಧ ದ್ವಿವಿದ ಭಟರು। ಬ್ಬಿನಲಿ ತೋರಿದ ನೆರಡು ನೆರ್ಬುದ ಕಪಿ ವರೂಥಿನಿಯ ॥
ನಿಟಲ ನಯನನ ನೊಸಲವಹ್ನಿಯ। ಪಟುತನವ ನಂದಿಸುವ ಬೊಮ್ಮನ। ತುಟಿಗೆ ಹದ
ನಿಕ್ಕಿಸುವ ತೋಟಿಯಲಾದಿ ಭೈರವನ ॥ ನಟನೆ ಗೆಡಿಸುವ ನಗದರಾಯರ। ಭಟರ ನಸು
ಪಮ ಸಮರಜಯ ಸಂ। ಘಟರ ನೈದರ್ಬುದವ ನಗ್ನಿಕುಮಾರ ತೋರಿಸಿದ ॥೧೮॥ ಜಲ
ನಿಧಿಯ ನುರೆಕುಡಿವ ಬಡಬಾ। ನಲನ ನುಂಗುವ ನಲನ ನಿಬ್ಬಗೆ। ಗಳಿವ ನಿಖಿಳ
ಕುಲಾದ್ರಿಗಳ ಕಿತ್ತಭ್ರತಳಕಿಡುವ ॥ ಜಲಜ ಬಂಧು ಹಿಮಾಂಶುಗಳ ಕುಂ। ಡಲವ
ನಿಕ್ಕುವ ಕೋಟಿ ಬಡಬಾ। ನಲ ಬಲಾನ್ವಿತ ಭಟರ ನಳನರ್ಬುದವ ತೋರಿಸಿದ ॥೧೯॥
ಮೇರುವನು ಕಿತ್ತಬುಜಜಾಂಡದ। ಭೂರಿಭಾಂಡವ ನೊದೆದು ವಿಲಯ ಸ। ಮೀರಣನ
ನುರಿದಳುಕಿಸುವ ವಾಸುಕಿಯ ಬಳಕಿಸುವ ॥ ತಾರೆಗಳ ತರಿದಗಿವ ವರ್ಗದ। ಗೌರವ
ವನರ್ಬುದ ನಂಗದ। ತೋರಿ ಮೆಚ್ಚಿಸಿದನು ದಿನಾಧಿಪವಂಶವಲ್ಲಭನ ॥ ೨೦ ॥ ಸಿಡಿಲು
ಗಳ ಗರ್ಜನೆಯ ವಿಲಯದ। ಮೃಡನ ಮುಳುಸಿನ ಧನಿಯ ಕಲ್ಪದ। ಕಡಲರಭಸವ
ಕಾಲಮೇಘದ ಕಡುಹಿನಬ್ಬರದ ॥ ಜಡಿವ ಜೂಜಿನ ಸಿಂಗಳೀಕದ। ಪಡೆಯ ನೈದರ್ಬು
ದವ ನಾ ಕೈ। ಯೊಡನೆ ಕಪಿಕುಲವೀರ ವೈದ್ಯ ಸುಷೇಣ ತೋರಿಸಿದ ॥೨೧॥ ಕಾಹುರದ
ಕಲ್ಪಾಂತ ಮೇಘ। ವ್ಯೂಹದಂದದ ಪೂರ್ಣ ಯಜ್ಞ ವ। ರಾಹನಂದದ ಯಮನಸೈರಿಭ
ದಂದದನುಪಮದ ॥ ಸಾಹಸದ ಪಡಗರದ ಸಿಡಿಲಿನ। ಕಾಹುರದ ಕುಡುಹುಗಳ ಕರ
ಡಿಯ। ಮೋಹರವ ಜಾಂಬವನು ತೋರಿದ ನೈದು ನರ್ಬುದವ ॥೨೨॥ ಅಣದಡಬುಜ
ಭವಾಂಡ ಘಟವಾ। ರಣಿಪ ಕುಕ್ಕಿದಡುಗುರಲಿಳೆ ಬಿ। ಜ್ಜಣಿಪ ಲಂಘನೆ ಗುದಯಗಿರಿ
ಮಸ್ತಕದಿ ಧಡಧಡಿಪ ॥ ಪಣೆಯ ಜೂಜಲ ಜೂಲುಗೂದಲ। ಕಣುಗಿಡಿಯ ಕಡು
ಕಾಹುರದ ಸಿಂ। ಗಣಿಕಗಳ ನರ್ಬುದವ ನತಿಬಲ ತಾರ ತೋರಿಸಿದ ॥ ೨೩ ॥ ಇವರ
ಸಾಹಸ ವಿವರ ಪಡಗರ। ವಿವರ ವಿಕ್ರಮ ವಿವರ ರಣಪಂ। ಥಿವರ ರೌದ್ರಾಟೋಪ
ವಿವರ ಸಮಾನವೆಂದೆಂಬ ॥ ಹವಣ ನರಿಯೆ ಸರೋಜಜಗೆ ಸಂ। ಭವಿಸಿ ದಗ್ಗದ ತನ್ನ
ತೂಕದ। ಬವರಿಗರ ತೋರಿಸಿದ ನನಿಲಜ ಕೇಳು ನೆರ್ಬುದವ ॥ ೨೪ ॥ ಕೋಟಿ ಸಂ
ಖ್ಯೆಯ ಬಲವದಿಕ್ಕಿನ। ಕೋಟಿ ಸಂಖ್ಯೆಯ ಯೂಥಪರು ಧರೆ। ದೂಟಲಂಬುಧಿ ವಿಶಾಟ
ಲಹಿಪತಿ ಕೂರ್ಮರಗ್ಗಳಿಕೆ॥ ಪಾಟುಗೆಡೆ ತೋರಿಸಿದ ವೀಪರಿ। ಪಾಟಿಯಲಿ ಫಣಿಪತಿಗೆ
ನಾಲಗೆ। ನಾಟದೆಣಿಸಲು ಗಣನೆಯಿಲ್ಲದ ರಾಜಸೈನಿಕವ ॥೨೫॥ ಎಂತು ಹೊತ್ತುದೋ
ಧರಣಿ ದಿಗ್ಗಜ। ವೆಂತು ತಾಳಿತೋ ಭಾರಕರಲಿ ಮ। ಹಾತ್ಮಕೃ ಭುಜಗೇಂದ್ರ ಕೂರ್ಮರು
ಹೊರಗೆ ವಾಳರಲಿ। ಹೊಂತಕಾರಿಗಳಾ ಕುಲಾದ್ರಿಗ। ಳಾಂತುದಕೆ ಬೆರಗೆಂದು ಹರುಷ।
ಸ್ವಾಂತದಲಿ ಹೊಯ್ಸಿದನು ಕಮಲಜ ನಮಲ ಭೇರಿಗಳ ॥ ೨೬ ॥ ಹರಮದೋಲಗವಾ
ಸಮಯದಲಿ। ಸುರವಧೂ ನಿಕುರುಂಬ ಸುಳಿದುದು। ಕರದ ಹೊಂದಳಿಗೆಗಳ ರತುನಾ

ರತಿಯ ಸೊಗಸಿನಲಿ ॥ ತೊರವೆಯಧಿಪತಿರಾಯ ನರಕೇ । ಸರಿಯ ಸರಿಸದ ಲಸ್ತ್ರೈಲಕೆ । ಸಂದನಿನ ನನುರಾಗಿ ಸರಿದಾದು ಹರುಷಭಾವದಲಿ ॥ ॥೨೭॥

ಏಳನೆಯ ಸಂಧಿ ಸಮಾಪ್ತಂ.

ಎಂಟನೆಯ ಸಂಧಿ.

ಸೂಚನೆ॥ ರಾಯ ರವಿನಂದನನು ವಾನರ । ನಾಯಕರ ಕಳುಹಿದನು ಕಮಲದ । ಛಾಯ ತಾಕ್ಷನ ನೇಮದಲಿ ನೋಡಲು ವಿದೇಹಜೆಯ ॥

ಪದ್ಯ॥ ಕೇಳಿದೈ ಕೋಸಲ ಧರಿತ್ರೀ । ಪಾಲಸುತ ಮರುದಿವಸ ದುದಯದ । ಮೇಲೆ ಬಂದೋಲಗವ ನಿತ್ತನು ರಾಯ ರಘುನಾಥ ॥ ವಾಲಿಸುತ ಹನುಮಂತ ಜಾಂಬವ । ನೀಲ ನಳ ತಾರಾದಿಗಳ ಸ । ವ್ಮೈಳದಲಿ ಮಾರ್ತಾಂಡನುತ ನೈತಂದ ನೋಲಗಕೆ ॥ ೧ ॥ ಹೆಗಲ ಗಿರಿಶಿಖರಾಳಿಗಳ ಕೊಂ । ಬುಗಿವ ಮರ ಕಂತುಳಿನ ನಖ ಮುಖ । ದಗಡು ಮೋಡಿಯ ಹೊಗರ ಹೊಸ ಜವ್ವನದ ಭಟನಿಕರ ॥ ಜಗದರಸ ರಾಮಂಗೆ ಕೈಗಳ । ಮುಗಿಮುಗಿದು ಕೆಲ ಸಾರುತಿರ್ದುದು । ಬಗೆವೆರಸಿ ಬಲಪತಿಗಳೆಪ್ಪತ್ತೇಳುಕೋಟಿ ಯನೆ ॥ ೨ ॥ ಈತನಗ್ಗಳ ನೀತನತಿಬಲ । ನೀತ ನನ್ವಯ ನೀತ ಸಾಹಸ । ನೀತನಿರ್ಭಯ ನೀತಶೂರನುದಾರಬಲ ನೀತ ॥ ಖ್ಯಾತರಿವರಿವರೆಂದು ರವಿಸಂ । ಜಾತ ತೋರಿಸುತಿರ್ದ ನಾನಾ । ಯಾತಿರೋಧಾನಂಗೆ ಮಹಿಮಾಸ್ಪದದ ಕಪಿಭಟರ॥ ೩ ॥ ಅರಸ ಚಿತ್ತೈಸಜನಸುತ ಕೇ । ಸರಿ ಸುಷೇಣ ಕರಿವರು ಮೂವ್ವರು । ಗುರುಗಳಿವರಭಿವಂದ್ಯರು ಗಳಗ್ಗಳದ ಮಂತ್ರಿಗಳು ॥ ಧುರವಿಜಯ ಹನುಮಂತ ನಳನೀ । ಲರು ಮದೀಯಪ್ರಾಣ ಸಖರುಳಿ । ದರು ಭಯಂಕರ ಭಟರಿವರು ಬಂಧುಗಳು ತನಗೆಂದ ॥ ೪ ॥ ಇದೆ ಸಮಸ್ತದ್ವೀಪ ವನದು । ರ್ಗದ ಕಪೀಂದ್ರರು ಜೀಯಚಿತ್ತೈ । ಸದರ ಮಹಿಮೆಯ ನುಸುರ ಲೆನ್ನಳವಲ್ಲ ನಿಮ್ಮಡಿಯ ॥ ಪದದ ಸೇವೆಗೆ ಸಲುವ ಬಲು ಗೈ । ಯಧಟರಿಂದೆ ಬವರಕ್ಕೆ ನಿಲುವ । ಗ್ಗದ ಬಲಾನ್ವಿತ ಭೂರಿಬಲರಿದೆ ಯೆಂದನಾ ರವಿಜ ॥ ೫ ॥ ಮನದಮುದ ದುಬ್ಬಿನಲಿ ಬಳಿಕಾ । ಜನಪ ಒಲದಲಿ ಕುಳ್ಳಿರಿಸಿ ಕೊಂ । ಡನು ಚತುರ್ಮುಖ ಸೂನು ಕೇಸರಿ ಕಲಿಸುಷೇಣಕರ ॥ ಹನುಮ ನಳ ನೀಲಾದಿಗಳ ತ । ನ್ನನುಜ ನೆಡವಂಕದಲಿ ಮಿಕ್ಕಿನ । ವನಚರಾಧೀಶ್ವರರ ಕೈಸನ್ನೆಯಲಿ ಮನ್ನಿಸಿದ ॥ ೬ ॥ ಕರೆದು ತನ್ನೊತ್ತಿನಲಿ ಕಾರ್ಯಾ । ತುರನ ಕದನ ಧುರಂಧರನ ಕಪಿ । ವರನ ಕಲಿಸುಗ್ರೀವ ದೇವನ ನಿಲಿಸಿ ಹರುಷದಲಿ ॥ ಹಿಂದುಮುನ್ನಿಸಿ ಜಾಂಬವಾದ್ಯರ । ನುರುತರ ಪ್ರಿಯ ಭಾಷಣೆಯ ಲುಪ । ಚರಿಸಿ ಘನ ಸಂತೋಷ ಶರಧಿಯ ಲದ್ದಿದನು ಭಟರ ॥ ೭ ॥ ಅರಸನಿದ್ದನು ಬಳಿಕ ವಿಮಲಾಂ । ಬರದಿ ತಾರಾಗಣದ ಮಧ್ಯದ । ಹರಿಣಲಾಂಛನದಂತೆ ಹರಿನಾಯಕರ ಮಧ್ಯದಲಿ ॥ ಹರುಷವಿದ್ದುದು ತತ್ಸಮಯದಲಿ । ತಲುಣ ಕೇಳುತ್ತರದ ಭಾಗಾಂ । ತರದಲಿರ್ದುದು ರಿಪುವಧಾ ಚಿಂತಾಮನೋವ್ಯಸನ॥೮॥ ಎಲೆ ಕಪೀಶ್ವರ ಕೇಳು ಸೀತಾ । ಲಲನೆಯನು ನಾವಗಲಿ ತಿಂಗಳು । ತಿಳಿಯ ಲೈದದ

ಗಿದವು ಸ್ವೈರಣೆ ಮಾನಭಂಗದಲಿ ॥ ನಿಲುವು ದನುಚಿತವೆಂಬ ಚಿತ್ತದ। ನೆಲೆಯ ನೀನೇ ನೋಡಿಕೊಳ್ಳೆ ನಿ । ನ್ನೊಳಗೆ ಹೇಳುವಮಾತು ಮಗುಳೇನಿದ್ದು ಬೆಮಗೆಂದ ॥ ೯ ॥ ದೇವ ಚಿತ್ತೈಸೈಸಲೆ ನಿಜ । ಸೇವಕರು ನಾವಿರಲು ದೊಡ್ಡಿತ । ಡಾವು ದಬುಜ ಭವಾಂಡ ವೆನ್ನೆಯು ಕರತಲಾಮಲಕ ॥ ದೇವಿಯರ ನೊಯ್ದಸುರನನು ಭುವ । ನಾವಳಿಯ ಹೊರಗಿರಲಿ ಮೇಣೊಳ । ಗಾವ ಲೋಕದೊಳಿರಲಿ ತೋರಿಸಿಕೊಡುವೆ ತಾ ನೆಂದ ॥ ೧೦ । ಬೆಸಸು ಸಾಕೆಲೆಜೇಯ ರಿಪುರಾ । ಕ್ಷಸನು ರಂಜಿತ ರಾಜ ಮೌಳಿಯು। ವಸತಿಯೊಳಗಡಗಿರಲಿ ಮೇಣಾ ವಾರಿಜಾಸನನ ॥ ಬಸುರಿನಲಿ ಹೊಕ್ಕಿರಲಿ ಮಿಕ್ಕಿನ। ನುಸುಳಗಳ ಹೇಳದಿರು ಹೇಳಿದ। ಹಸನೆನಲು ಮಾಡುವೆನು ಮರೆ ಮಾತೇನು ತನಗೆಂದ ॥ ೧೧ ॥ ಕರೆದು ಪಡುವಲು ಕಲಿಸುಷೇಣನ । ಪಟುತವಿಸಿದನು ಶತಬಲಿಯ ನು । ತ್ತರಕೆ ಮೂಡಲುವಿನುತನನು ದಕ್ಷಿಣದಿಳಾವತಕೆ ॥ ವರ ವಿರಿಂಚಿಕುಮಾರ ಮಾರುತಿ । ಸುರಪಸುತ ಸುತಮುಖ್ಯಭಟರನು । ವರಿಸಿ ಕಳುಹಿದನರಸಿ ಬರಲು ವಿದೇಹನಂದನೆಯ ॥ ೧೨ ॥ ದೇವಚಿತ್ತೈಸಿದಡಿಹನಾ । ರಾವಣನು ಲಂಕೆಯಲಿ ಶಂಕೆಯು । ನೋವ ಡತಿಬಲರಿವರು ಮಂತ್ರಜ್ಞರು ಮಹಾ ಭಟರು ॥ ಮುನ್ನರಿವರಿವರೊಳಗೆ ಜಾಂಬವ। ದೇವ ನತಿಶಯ ನಾತನೆಂದೀ। ಪಾವಮಾನಿ ಸಮರ್ಥನೆಂದುಸುರಿದನು ಕರ್ಣದಲಿ ॥ ೧೩ ॥ ಬಳಿಕ ಕೊಂಡಾಡಿದನು ಹನುಮನ । ಬಲುಹಬಾಲ್ಯದ ಲಿನನಬಿಂಬಕೆ। ನಿಲುಕಿ ರಾಹುವನಟ್ಟೆ ವಜ್ರಿಯ ವಜ್ರಹತಿಯಿಂದ ॥ ಕಳಚಿ ವಾಯುವಿನಿಂದ ಕಾಯುವ। ತಳೆದು ತ್ರೈಮೂರ್ತಿಗಳಿಂ ದು। ಜ್ಜ್ವಲತೆ ವಡೆದು ವರಂಗಳನು ವಡೆದಮಲ ಸುಗತಿಯನು ॥ ೧೪ ॥ ಈತನನು ಕೊಡಹೇಳಿ ಕೊಟ್ಟನು। ಸೀತೆಯರಸನು ಬರಲು ನೀನೆಂ । ದಾ ತಿಮಿರಹರ ನರುಹಿದನು ಬಳಿಕಿಂತು ಬಹಕಲೆಯು ॥ ಆತ ಕೆಲಸದ ರಾಜಕಾರ್ಯ । ಕ್ಕೀತನಲ್ಲದೆ ಕಾಣೆನೆಂದ ಭಿ। ಜಾತ ಹರುಷಂಗಿತ್ತನಾ ಪವಮಾನನಂದನನ ॥ ೧೫ ॥ ಕೊಟ್ಟ ಹನುಮನ ನಸುರವಂಶಘ । ರಟ್ಟ ನುರೆ ಪರಿಕರಿಸಿ ಪವನಜ । ನಿಟ್ಟಡೆಯು ಹರುಷದಲಿ ಭಾಳವ ಚಾಚಿದನು ಪದಕೆ ॥ ಅಟ್ಟವಾಪತ್ತಿನ ಸಮುದ್ರಕೆ । ಕಟ್ಟನೀನೆಂದೊಲುಮೆಯಲಿ ಮನ । ಮುಟ್ಟ ನುಡಿದಿತ್ತನು ಮಹಾ ಮಾಂಗಲ್ಯ ಮುದ್ರಿಕೆಯ ॥ ೧೬ ॥ ಎಸೆದುದಾ ಮಣಿಖಚಿತ ಕಿರಣ । ಪ್ರಸರ ಮುದ್ರಿಕೆ ಪೂತ್ಕರಿಸಿ ಪಳಿ । ಮಸಗಿದಹಿವನ ನೆಡೆವಳಿಯ ವೊಲು ಕರದ ಲಸಿಲಜನ ॥ ಕುಸಿದಮೌಳಿಯ ಕರತಳದ ಸಂ । ಧಿಸಿದ ವದನದ ಭಕ್ತಿಭಯಮುಖ। ರಸದ ಹನುಮನ ಕರ್ಣದಲಿ ಕಾಕುಸ್ಥನಿಂತೆಂದ ॥ ೧೭ ॥ ಅರಿವು ದರಿನಗರದಲಿ ಸೀತೆಯು । ಕುರುಹನರಿದು ಪತಿವ್ರತಾ ಗಣ । ಮೆರೆದಿರಲು ಬಳಿ ಕೀವುದೀ ನಿಜ ರಾಜಮುದ್ರಿಕೆಯ ॥ ಕುರುಹುಗಳನಿದು ಹೇಳುವುದು ಯೆಂ । ದರುಹಿ ಕೆಲವನು ಬೀಳುಕೊಟ್ಟನು । ಮರೆಯ ಮಾಯಾವರನು ನರರ ವೊಲಂಜನಾಸುತನ ॥ ೧೮ ॥ ಚರಣಕಾನತನಾಗಿ ರಘುಕುಲ । ದರಸನನು ಬೀಳ್ಕೊಳಲು ಹನುಮನ । ಕರೆದು ಕೈವರ್ತಿಸಿದ ನಂಗದ ಜಾಂಬವಾದಿಗಳ ॥ ಬರವು ತಿಂಗಳಿಗಾಗದಿರೆ ನೀವ್ । ಮರಣ ಕಫಿಕ್ಕತರೆಂದು ನೇಮಿಸಿ। ಹರಿಪತಿಗಳನು ಕಳುಹಿದನು ಕಟ್ಟಾಜ್ಞೆಯಲಿ ರವಿಜ ॥ ೧೯ ॥ ತೆರಳಿದುದು ಕಪಿಸೇನೆ ಸಾಗರ। ಹೊರಳಿ ದೆಗೆದಂದದಲಿ ನಾಲ್ದೆಸೆ। ಗರಸ ತೊರೆವೆಯ

ರಾಯ ನರಕೇಸರಿಗೆ ಸುಗ್ರೀವ ॥ ವರವನೀತನ ಗರುಹಿದಂದಿನ । ಧರೆಯ ವಿಸ್ತಾರ
ವನು ಮೇರುವ । ತಿರುಗಿ ಬಂದಂದಕ್ಷಿಗತವಾದಖಿಳ ಭುವನಗಳ । ॥೨೦॥

ಎಂಟನೆಯ ಸಂಧಿ ಸಮಾಪ್ತಂ.

ಒಂಬತ್ತನೆಯ ಸಂಧಿ.

ಸೂಚನೆ॥ ಮೂರುದಿಕ್ಕಿನ ಸಮರವೈಭವ । ಸೂರೆಕಾರನ ನರಸಿಕಾಣದೆ । ಬೇರೆಬೇರೈ
ತಂದು ಬಿನ್ನೈಸಿದರು ರಘುಪತಿಗೆ ॥

ಪದ್ಯ॥ ಕೌಶನಕೇಳು ಸುಷೇಣ ಚರಿತವ । ನುಸುರುವೆನು ಮೊದಲಿಳೆಯಭಾರ
ಕ್ಕೆಸುರು ತೆಗೆಬಗೆಯಾಯ್ತು ತೆರಳಿತು ಸೇನೆ ಪಶ್ಚಿಮಕೆ ॥ ಕೆಸರು ದೋರಿತು ಕಡಲು
ಪಾಂಸು । ಪ್ರಸರದಲಿ ಪದಹತಿಗೆ ಗಿರಿಹುಡಿ । ಮಸಗಿದುವು ಹರಹಿನಲಿ ಹೊಡೆ
ಹುಲ್ಲಾಯ್ತು ವನಭೂಮಿ ॥೧॥ ಹರಿದು ಹರಿಬಲದಾಳಿ ನಾನಾ । ಧರಣಿಪರ ದೇಶದಲಿ
ಹೊಕ್ಕುದು । ಧರಣಿಜೆಯ ನೊಯ್ದವನ ಬೆಸಗೊಳು ತರಸುತಲ್ಲಲ್ಲಿ ॥ ಉರವಣಿಸಿದುದು
ಮುಂದೆ ಬರ್ಬರ । ಮರು ಯವನ ಕಾಂಭೋಜ ಗೂರ್ಜರ । ದುರುಳ ದುರ್ಜನ ನೃಪರ
ಹಿಡಿದಾಕರಿಸಿ ಬೆಸಗೊಳುತ ॥ ೨ ॥ ಕ್ಷಿತಿಪರನು ಕರೆಕರೆದು ಗರ್ವೋ । ದ್ಧತ ಸುಷೇಣ
ಕಪೀಂದ್ರ ಸೀತಾ । ಪತಿಯ ಪೆಸರಲಿ ಕೊಂಡರನಿಬರಲಾಣೆ ಭಾಷೆಗಳ ॥ ಕ್ಷಿತಿಸುತಾ
ತಸ್ಕರನ ದುರ್ಗತಿ । ಕೃತನ ದುರ್ನಯ ದುಸ್ಸಹನ ದು । ಸ್ಥಿತನ ನೊಳಕೊಂಡಿರದ
ಪೊಲು ನಿಖಿಳಾರ್ಥ ಸಾಧನವ ॥೩॥ ವಾರಿಧಿಯ ತಡಿವಿಡಿದು ನಡೆದುದು । ಭೂರಿಬಲ
ಕೊಂಕಣದ ಕಾಹುಗ । ಳೋರಣದ ಕರವಳಿಯಲಾ ಹಿಮದವನಿ ಕುಂಡಲವ ॥ ಚೀರ
ವಾಳವ ಬರ್ಬರದ ದು । ರ್ವ್ವಾಳಿಜೋನೆಗವಿಂಧ್ಯ ಬೋಟಕ । ಪಾರಸಿಕ ಸೌಂಬ್ರಾಣಿ
ಹುರಿಮುಂಜೆಗಳ ಬಳವಿಡಿದು ॥ ೪ ॥ ಅರಸುಗಳ ಹಿಡಿಹಿಡಿದು ಕೇಳುತ । ಹರಿಬಲದ
ಹರಿದಾಳಿ ಸುರಭೂ । ಧರದ ಬಲದಲಿ ಬಿಟ್ಟುಹಾಯ್ದುದು ಪಶ್ಚಿಮೋತ್ತರವ ॥ ಎರಡು
ವೈಗಳ ಮಹಿಮ ಚಕ್ರೇ । ಶ್ವರರ ಪುರಗಳ ಹೊಕ್ಕು ಹೊರವಡು । ತುರವಣಿಸಿದುದು
ಸೇನೆ ವಾಯುವ್ಯದಲಿ ವಲಯದಲಿ ॥ ೫ ॥ ವಿನುತ ದೇಶಾಧೀಶ್ವರರ ತ । ಜ್ಜನಪದಂಗಳ
ಲರಸಿದರು ಪುರ । ಜನ ಶಿಲೋಚ್ಚಯ ಶಿಖರ ಕಟಕಗ್ರಾಮ ಸಂಕುಲದ ॥ ಒನದೊ
ನದು ನೋಡಿದರು ಮುಂದಣ । ವನಧಿವಳೆಯದ ವಿವಿಧವೀಧಿಯ । ಜನಪರನು ಕೇಳಿ
ದರು ಕೋಲಾಹಲದ ಕಡುಹಿನಲಿ ॥ ೬ ॥ ಕಾಣದಲ್ಲಿಂದಿಳಿದು ಪಡುವಣ । ಕೋಣ
ವಿಡಿದುತ್ತರಿಸಿತಲ್ಲಿ ಸು । ಷೇಣ ಬಲ ಲವಣಾಂಬುಧಿಯ ಲಂಭೋಧಿ ಮಾರ್ಗದಲಿ ॥
ಕಾಣಿಸಿದ ತದ್ವೀಪಿನ ಸಿಂಧು । ಶ್ರೇಣಿಗಳ ಕಳಕಳದು ಕನಕ । ಕ್ಷೋಣಿ ಪರಿಯಂತರಸಿ
ಮುರಿದುದು ವರುಣಪುರಿಗಾಗಿ ॥೭॥ ವರುಣನನು ಬೆಸಗೊಂಡು ತತ್ಪುರ । ವರವನಗಲಕೆ
ಬೀದಿವರಿದು । ಪ್ಪರಿಸಿ ಲೋಕಾಲೋಕ ಪರ್ವತದಗ್ರಪರಿಯಂತ ॥ ಸುರ ವಿರೋಧಿಯ
ಕಾಣದಲ್ಲಿಂ । ದುರುತರದ ಪಸರದಲಿ ಪಾಳಯ । ತಿರುಗಿ ಬಂದುದು ಕಲಿ ಸುಷೇಣ
ಕಪೀಂದ್ರನಾಜ್ಞೆಯಲಿ ॥೮॥ ತೆರಳಿತೀಚೆಯ ಲಪ್ರತಿಮ ವಾ । ನರ ವರೂಥಿನಿ ವಹಿಲ
ದಿಂದು । ತ್ತರದಿಳಾಮಂಡಲಕೆ ಕಲಿ ಶತಬಲಿಯ ಸನ್ನೆಯಲಿ ॥ ಹರಿಕಟಕ ದುರವಣೆಗೆ

ಗಿರಿ ನೆಲ ಸರಿಸವಾದುವು ನದಿ ನದಂಗಳ | ಹರಹುನಿಂದವು ತಗ್ಗಿ ನೆಲಗತವಾಯ್ತು ಪವನಿಚಯ ||೯|| ಆಕರಿಸಿ ಬೆಸಗೊಂಡು ಬಿಟ್ಟರ | ನೇಕ ನೃಪರನು ಬೇಹು ಹರಿದುದು| ನಾಕುವೈಯಲಿ ತುಬ್ಬುಕಾತರಿಸಿತು ಬಹುಧನವ || ನೂಕಿನಡೆದುದು ಸಕಲ ವಿಷಯಾ| ನೀಕವನು ನೋಡುತ ಬಂದಿ | ಕ್ಷ್ವಾಕು ವಂಶದ ಭರತ ಭೂಮಿಯು ಹೊಕ್ಕರುರ ವಣಿಸಿ ||೧೦|| ಹರಿಕಟಕ ದುಬ್ಬರಕಯೋಧ್ಯಾ | ಪುರವು ತಲೆಕೆಳಗಾಯ್ತು ಹೊಕ್ಕುದು| ಪುರವ ನಾ ಬಲವೀ ನಗರದಧಿಪತಿಯುದಾರೆನುತ || ಭರತನನು ಸಂಧಿಸಿತು ಶತಬಲಿ | ಕರೆಸಿಕೊಂಡು ಕಕುಸ್ಥ ಸಂಭವ | ನರಸಿಯನು ಕೊಂಡೊಯ್ದ ಖಳನನು ಕಾಣಿರೆಲೆ ಯೆಂದ || ೧೧ || ಭರತನುರೆ ಬೆರಗಾಗಿ ಚಿಂತಾ | ಭರದಲಾ ಶತವಲಿಯು ಗಮನದ | ಪರಿಯ ನರಿದಾ ಕಪಿಪತಿಯು ಕಳುಹಿದನು ದುಗುಡದಲಿ|| ಅರರೆ ರಾಜಭ್ರಷ್ಟವಿಪಿನಾಂ| ತರ ಪರಿಭ್ರಮಣ ಪ್ರಯಾಸದ | ಹುರುಹಿಗಿದು ಹೊರೆಯಾದುದೇ ಹಾ ಎಂದು ಚಿಂತಿಸಿದ |೧೨|| ತಮ್ಮಬಾ ಶತೃಘ್ನ ನಮ್ಮನು | ನೆಮ್ಮಿತಧಿಕ ವಿಪತ್ತು ಕೇಳಿದು | ಸುಮ್ಮನಿಹದನುಚಿತವು ಅವಮಾನಾವಹಸ್ಥಿತಿಯು || ಒಮ್ಮುಖದಲಾವ್ ಹಗೆಯ ಗೆಲವುದ | ನಮ್ಮನೆರಹು ಚತುರ್ಬಲವ ನಿ| ನ್ನವ್ಮಳಿಕೆ ಯೇಕೆನುತ ರೋಷಾವೇಶ ಮನನಾದ|| ಜನಪ ಕೈಕಯು ಮಗಧ ಸುಮತೀ | ಜನಪ ಮುಖ್ಯ ಸಮಸ್ತ ದೇಶದ | ಜನಪತಿಗಳೊಟ್ಟಾಗಿ ಕೂಡಿತು ಮತ್ತೆ ಚತುರಂಗ || ಅನುವರ ಪ್ರಸ್ತಾರಭೇರಿಯು | ನಿನದ ನಿರ್ಜರ ಜಗವ ಬೆದರಿನ| ಲನಿತನರಿವಲ್ಲಿಂದ ನಾರ ನಿಳಿದ ನಭ್ರದಲಿ||೧೪|| ಮರುಳಲಾ ಎಲೆ ಕಂದ ದಶಕಂ| ಧರನ ದಾರೆಂದರಿಯೆಲಾ ಬಿಡು| ತರಳತನುವನು ಬಾಯೆನುತ ಕೆಲಕಡೆಗೆ ಕೊಂಡೊಯ್ದು | ವರ ರಹಸ್ಯದ ಲಸುರಹರ ನವ | ತರಣವನು ವಸುಮತಿಯ ಭಾರೋ| ತ್ತರಣದಭಿಗತ ವಿವರಣವ ನರುಹಿದನು ಕರ್ಣದಲಿ ||೧೫|| ಪಯಣ ನಿಂದುದು ಮೇಲೆ ಮುನಿಹಂ| ಸೆಯಲಿ ಹಾಯ್ದನು ನಭಕೆ ಶತಬಲಿ | ಭಯವ ಬೀರುತ ಬೀದಿವರಿದನು ಬಹಳ ಬಲಸಹಿತ || ನಿಯತಮತಿ ಕುಶಕೇಳು ನರಭೂ | ಮಿಯನು ಕಳೆದು ಹಿಮಂತನನು | ನಿರ್ಭಯದೊಳೇ ರಿಳಿದೆತ್ತಿ ಹಾಯ್ದುದು ಸೇನೆ ಶತವಲಿಯ || ೧೬ || ಭರತ ಖಂಡದ ಬಹಳ ಭಾರತ | ವರುಷ ಸೀಮೆಯ ದಾಂಟಿ ಮುಂದಣ | ಹರಿ ವರುಷ ಕಿಂಪುರುಷ ರಮ್ಯಕ ವರುಷ ವರ್ತನೆಯು || ಭರದಿ ನಡೆದುತ್ತರ ದಿಳಾವೃತ | ವರುಷ ಮಧ್ಯದ ಮೇರುಶೈಲದ | ಶಿರವ ನೇರಿಳಿದೊತ್ತಿ ಬರಿಸಿತು ಸೇನೆ ಶತವಲಿಯ || ೧೭ || ವರ ಹಿರಣ್ಮಯುವರುಷವನು ಹೊ | ಕ್ಕರಸುಗಳ ಹಿಡಿಹಿಡಿದು ದಶಕಂ| ಧರನ ಕೇಳುತ ಕೇತುಮಾಲಾವರುಷ ಸೀಮೆಯಲಿ || ಹರಿದು ಭದ್ರಾಶ್ವದಲಿ ಕಾಣದೆ | ಕುರುಮಹೀ ಮಂಡಲಕೆ ನಡೆದು | ತ್ತರಿಸಿ ಬಿಟ್ಟುದು ಬೀಡು ಲವಣಾಂಬುಧಿಯ ತೀರದಲಿ || ೧೮ || ಧುರಕೆ ಮೋಹಿಸಿದಾಧರಣಿಪರ ಸಂ| ಹರಿಸುತಾ ಸಾಗರದ ತೀರದ| ಕರವಳಿಯ ಪಟ್ಟಿ ಶೋಧಿಸುತಾ ಮಹೋದಧಿಯ || ಭರದಿ ನಡೆದುತ್ತರಿಸಿ ಮಿಕ್ಕಿನ | ಶರಧಿಶರಧಿಯ ದಾಂಟಿ ಮಿಗಿದು | ಪ್ಪರಿಸಿ ನಿಂದುದು ಸೇನೆ ಧನಪನ ರಾಜಧಾನಿಯಲಿ || ೧೯ || ಇದಿರುವಂದು ಕುಬೇರನಧಿಕಾ | ಸ್ಪದದ ಸೌರಂಭದಲಿ ಕೊಂಡೊಯ್ದು | ದಿತಸಂತೋಷದಲಿ ಸತ್ಕರಿಸಿದನು ಶತ ವಲಿಯ || ಮುದದಿ ನಮಿಸಿ ರಾಘವೇಂದ್ರನ | ಪದಕೆನುತ ನಾನಾಸುರತ್ನದ | ಹೊದರು ವೆಳಗಿನ ತೊಂಬೊಡವುಗಳ ತೊರಸಿ ಬೀಳ್ಕೊಟ್ಟ ||೨೦||

ತಿರುಗಿ ತಾ ಶತವಲಿಯು ಬಲ ದಶ | ಶಿರನ ಕಾಣದೆ ಕಂಡವ್ಯೆಯಲಿ | ಧರಣಿಜಾಸುತ ಕೇಳು ಮೂಡಲು ಇನಜ ನಾಜ್ಞೆಯಲಿ || ಹರಿದು ದಗ್ಗದ ಧಾಳಿ ಧಾತ್ರಿಯ | ಧರಣಿಪರ ಬೆಸಗೊಂಡು ಮುಂದಣಿ | ಗುರುವಣಿಸಿದುದು ನಡುಗಲಿಂದ್ರಾದ್ಯಖಿಳ ದೇವ ಗಣ || ೨೧ || ಕಡುಮನದ ಕಪಿಬಲದ ದಾಳಿಗೆ | ನಡುಗಿ ಕಂಡರು ಪೂರ್ವದಿಕ್ಕಿನ | ಪೊಡವಿಪರು ಸಾವಂತ ಮನ್ನೆಯ ಮಂಡಲೇಶ್ವರರು || ಪೊಡವಿ ತಮ್ಮನಿತರಲಿ ರಾವಣ | ನಡಗಿಯಿರದ ವೊಲ.ಣ ಭಾರದ | ಕಡಿಯ ಕೊಟ್ಟರು ಬಳಿಕ ತಮ್ಮಯ ಧರ್ಮ ಸಾಕ್ಷಿಯಲಿ || ೨೨ || ಒಟ್ಟಿಹೋದುದು ಸೇನೆ ಮುಂದಣಿ | ಗೊಟ್ಟವಿಸಿ ಶರನಿಧಿಯ ತೀರದ | ಪಟ್ಟಣವ ಪಡಿತಣಿಸಿ ಪಾರಾವಾರ ಧೋರಣದ || ಒಟ್ಟೈಸಿ ದೆಡಕಿಕ್ಕಿ ಮೇರುವಿ | ನಿಟ್ಟೆಡೆಯ ಜನಪದದ ರಾಯರ | ಕಟ್ಟಕೇಳುತ ಕಂಡ ವ್ಯೆಯಲಿ ಹರಿದು ದಗಲದಲಿ || ೨೩ || ಬಳಿಕ ಕಿನ್ನರ ಯಕ್ಷ ಗುಹ್ಯಕ | ರಳಿಯ ರಾಕ್ಷಸ ಸಿದ್ಧ ರುರ್ವೀ | ತಳದ ವಿದ್ಯಾಧರರು ಗಂಧರ್ವರು ಮಹೀತಳದ || ಬಳಸಿ ಮುಂದಣ ಕಿಂಪುರುಷರ | ಗ್ಗಳದ ಭೂಮಿಯ ಹೊಕ್ಕು ಸಾರ್ದರು | ವಿಲಸದುತ್ತರ ದಭಿನವದ ಕೈಲಾಸ ಪರ್ವತವ || ೨೪ || ಅದುಬಳಿಕ ಲೈವತ್ತು ಸಾವಿರ | ದುದಯ ದುಪ್ಪರ ಶೈಲವದರ | ಭ್ಯದಯ ರಚನಾರಂಭ ಕವನೇನೆಂಬೆ ನಿದಿರಿನಲಿ || ಪುದಿದ ಪೂರ್ವ ಶಶಿ ಪ್ರಭೆಯ ಕೆಲ | ಕೊದನ ಕೊಲ್ಲಣಿಗೆಗಳ ಹೊಳಹಿನ ಹೊದರಿನಲಿ ರಂಜಿಸಿತು ಕಪಿವಾಹಿನಿಯು ಕಣ್ಮನಕೆ || ೨೫ || ಗಿರಿಯ ನೋಲೈಸುತಲಿರ್ದದು | ಹರನ ಕಾಣದೆ ಸಿದ್ಧ ವಿದ್ಯಾ | ಧರ ಮಹೋರಗ ಯಕ್ಷ ರಾಕ್ಷಸ ಗರುಡ ಗಂಧರ್ವ || ಸುರ ಮುನೀಶ್ವರ ರಮರಜನ ಕಿಂ | ಪುರುಷ ಕಿನ್ನರ ಮಾನವಾಪ್ಸರ | ರೆರಡು ಮ್ಯೆಯ್ಯಲಿ ಕೇಳಿದ್ಯೆ ಶತಕೋಟಿ ಸಂಖ್ಯೆಯಲಿ || ೨೬ || ಬಂದು ಬಂದೋಲೈಸಿ ಪೋಹವು | ರಂದರಾದ್ಯರ ದಿವ್ಯಪುಷ್ಪಕ | ವೃಂದ ವನುಪಮ ಕಿರಣ ಕೆಂಗೊಳಿಸಿತು ಕಪಿಭಟನ || ಮುಂದುವರಿ ದಕ್ಷಿಗಳ ನಿದಿರಿಲೆ | ಬಂದಿರಿನೆಲೆ ದಶಾಸ್ಯನೆಂದು ರ | ಪುಂಧಮರು ಹತ್ತಿದರು ಹರಪರ್ವತವ ಹುರಿಗೊಳಿಸಿ || ೨೭ || ಕಳಕಳಿಗೆ ಕೈಲಾಸ ಶಿಖರದ | ಹೊಳಲೊಳಗೆ ಹೊದರೆದ್ದು ಲಿಲ್ಲಿಯ | ಗಲಬೆಕಾರರು ನಡುಗಿ ಗೋಪುರ ವಂಕವೀಧಿಯಲಿ || ಹೊಳಕುವೀ ಕಪಿನಾಯಕರು ಗಾ | ವಳಿಯ ಗುಮ್ಮಿದ ರಸ್ತ್ರಶಸ್ತ್ರಾ | ವಳಿಯ ಲೊದರುವ ಪಣವ ಪಟಹಾನಕದ ರಭಸದಲಿ || ೨೮ || ಗಿರಿ ಯಿದೀಶನದಿಲ್ಲಿ ಗಸುರೇ | ಶ್ವರನು ಬಹನೋಲಗಕೆ ಮಾತಿದು | ಹರಿದಿಹುದು ನಾವಿಲ್ಲಿ ನೋಡಲು ಬಹುದಲೇ ಯೆನುತ | ಹರಿವರೂಥಿನಿ ಹತ್ತಿದುದು ತ | ದ್ಗಿರಿಯ ನುಗ್ರವಿಹಾರದಲಿ ಸೀ | ವರಿಸಿ ಶಿಖಿಶಿಖರಿಯನು ಭೋರ್ಗರೆ ದಡರುಸಂವದಲಿ || ೨೯ || ಹತ್ತಿದರು ಹೊಯಿದಿಡುವ ಕೈದುಗ | ಳೊತ್ತ ಭರಕಳುಕದೆ ಫಣೀಂದ್ರರ | ನೆತ್ತಿನೆಗ್ಗಲು ನೆಗಹಿ ದದ್ರಿಮಹೀರುಹಂಗಳಲಿ || ಹೃತಲೀಸದೆ ಹರನ ಗಣ ತಲೆ | ಯೊತ್ತವಕಿಸೆ ತರುಚರರು ನಭ | ಕೆತ್ತಿ ಹಾಯುತ ಕೋಟೆಯಿಂದೊಳಬಿದ್ದುದೆಗಲದಲಿ || ೩೦ || ತರುಬಿ ಪರಿಭವಿಸುವ ಭಟಾಳಿಯ | ಲುರುಬಿ ಬೀದಿಯೊಳಾನ್ಯವಧಟರ | ಹರುಬ ಹಸರಿಸಿ ಹೊಕ್ಕರೀಶನ ರಾಜಮಂದಿರವ || ಸೆರಗ ಹಿಡಿದರ್ಶೋರು ಸೀತೆಯ | ಸೆರೆಯ ಹಿಡಿದವ ನಿನ್ನಭಕ್ತರೂ | ಳುರುವವನು ಗಡತೋರ

ಬೇಕೆನುತಾ ಮಹೇಶ್ವರನ ॥ ೩೧ ॥ ತೋರಿಕೊಡುವೆವು ಸೈರಣೆಯು ಕಾ । ಲೂರ ಲಾಗ್ರಹವೆನುತ ಶೃತಿಗಳು । ತೋರಲರಿಯುದ ವರಪರಾಪರ ವಸ್ತುನಸುನಗುತ ॥ ತೋರಿದನು ಬಳಿಕುಮೆಗೆರಾಮನ । ದೂರುಗರು ನೋಡಿವರ ದೆರೆಹೊರೆ । ಯೇರಿ ಹೊಂಪುಳಿ ಯೋದಳುಮೆ ಮಹಿಮೆಗೆ ಮಹೀಶ್ವರನ ॥ ೩೨ ॥ ಕೇಳಿದೈ ಎಲೆ ವಿನುತ ತಮ್ಮನು । ಕೇಳಲಿಕೆ ಕರ್ತವ್ಯವುಂಟದ । ಹೇಳಿದರೆ ನೀ ನಂಬಬಲ್ಲೈ ನಮ್ಮ ಮಾತುಗಳ ॥ ಬಾಲರೀ ಗುಹ ಗಣಪರಾಣೆ ವಿ । ಶಾಲ ಬಲ ಹನುಮಂತ ಕಾಬನಃ । ಲೋಲನಯನೆಯ ನಿಂದಿನಿರುಳೆಂದವರ ಬೀಳ್ಕೊಟ್ಟ ॥ ೩೩ ॥ ತಪ್ಪದೇ ಸುರಲೋಕ ಕಾ ವಿ । ನ್ನುಪ್ಪರಿಸಬೇಡವೆ ಕಕುಸ್ಥ ಜ । ನೊಪ್ಪದಿರ್ದಡೆ ತೊಡಕು ನಿಮಗಹುದೆಂದು ನಂಬುಗೆಯ ॥ ಒಪ್ಪದಲಿ ಕೊಂಡಾಪುರಕೆ ಕೈ । ತಪ್ಪಮಾಡದೆ ತಿರುಗಿದನು ನಿ । ಮ್ಮಪ್ಪ ತೊರವೆಯುರಾಯ ನರಹರಿಯೆಡೆಗೆ ಕಪಿರಾಯ.॥ ॥೩೪॥

ಒಂಬತ್ತನೆಯ ಸಂಧಿ ಸಮಾಪ್ತಂ.

ಹತ್ತನೆಯ ಸಂಧಿ.

ಸೂಚನೆ॥ ವೀರ ಮಾರುತಿ ಮುಖ್ಯವಾನರ । ವೀರರಾಹವ ಧೀರರಬಲಾ । ಚೋರನನು
ಜನ ಪದದಲರಸಿದರಾ ಸ್ವಯಂಪ್ರಭೆಯ ॥

ಪದ್ಯ॥ ಕೇಳಿದೈ ಸುಕುಮಾರ ರಾಮ ನೃ । ಪಾಲನನು ಬೀಳ್ಕೊಂಡು ಬಲಿಮುಖ। ಪಾಳಯವು ಪಡಿತಳಿಸಿ ನಡೆದುದು ತೆಂಕಮುಖವಾಗಿ ॥ ದಾಳಿಕಾರರು ದಳದುಳದ ಭೂ। ಪಾಲ ಭೂಮಿಯ ಹೊಕ್ಕು ಗಂಗಾ । ಕೂಲದಲಿ ಸಂಗಮದ ಸಾಗರಕಾಗಿ ವಹಿಲದಲಿ॥೧ ವಿಮಲ ಗಂಗಾ ಸಾಗರದ ಸಂ । ಗಮದಸೈವಳೆ ವಿಡಿದು ವಸುಧಾ । ರಮಣಿಯನು ಪಡಿತಳಿಸಿ ಪಂಚಮಹಾ ಸರಿತ್ತುಗಳ॥ ಸಮನಿಕೆಯ ಸೌರಾಷ್ಟ್ರ ಗೂರ್ಜರ । ವಿಮಲ ಕಾಶ್ಮೀರಾಂಧ್ರ ಗೌಳ । ಪ್ರಮುಖ ದೇಶಂಗಳನು ನೇಡುತ ತಿರುಗಿದುದು ಸೇನೆ ॥೨॥ ಉರುಕುಗೊಂಡರಸುಗಳ ಗರ್ವವ। ಮುರಿದು ಮಾರಾಂತ ವರಪುರಗಳ । ವರಗಗಳ ಹೊಯ್ದೊತ್ತಿ ಬರಿಸಿತು ತಿರುಗಿ ಗೌಳವಕೆ ॥ ಉರುಬಿ ಘಟ್ಟಾವಳಿಯ ಪುರಗಳ । ಲರಸಿ ಪಡುವಣ ಕಡಲ ನಡುವಣ । ಕುರವಗಳ ಕೈತೊಳಸಿ ತಿರುಗಿತು ಸೇನೆ ಕೊಂಕಣಕೆ। ೩॥ ಮಣಿಯ ದವನೀಪಾಲಕರ ಪ । ಟ್ಟಣವ ಸೂರೆಯುಗೊಳುತ ಬಂದರು । ರಣ ಸುಶವರ್ಮಾದಿಗಳ ಹಿಡಿದಾಕರಿಸಿ ಬೆಸಗೊಳುತ ॥ ಪ್ರಣತರನು ತಲೆಗಾಯ್ದು ಬಿಡುತಿ । ಟ್ಟಣಿಸಿ ಕಾವೇರಿಯು ತಟಾಕವ । ಕಣೆಯು ವಿಡಿದೈತಂದು ಹೊಕ್ಕರು ಪಾಂಡ್ಯ ಮಂಡಲವ ॥೪॥ ಹಿಡಿದು ಪಾಂಡ್ಯರ ಚೋಳ ಕೇರಳ । ಪೊಡವಿಪರ ಬೆಸಗೊಂಡು ಮೂಡಣ । ಕಡಲಕರವಳಿಗೊಂಡು ನೋಡುತ ಗಟ್ಟ ಬೆಟ್ಟಗಳ ॥ ಗಡಿಯ ಮನ್ನೆಯರುಗಳ ಘಾಡಿಸಿ । ತಡಿಮಸಿಂಗಣ ತಾಮ್ರಪರ್ಣಿಯ । ಹುಡುಕಿ ಹೊಳೆಸಾಲಿನಲಿ ತಿರುಗಿತು ಬಲವು ಬಲಿಮುಖರ॥ ಹೊಕ್ಕು ಸಿಂಹಾದ್ರಿಯನು ನಾಲುಕು । ದಿಕ್ಕಿನೆಡೆ ಮನ್ನೆಯರ ವಸುಧೆಗ । ಳಿಕ್ಕೆಗಳ ಶೋಧಿಸುತ ನಡೆದುದು ಮುಂದೆ ಮರುವನಕೆ ॥ ಹೊಕ್ಕರಿನಿಬರು ಗುಲ್ಮಲತೆಗಳ । ಸಿಕ್ಕುಗಳ ಮಧ್ಯದಲಿ ಧರಣೀ। ಹೊಕ್ಕುಳಿನವೊಲು ಹೊಳಕಿದುದು ಮಾಯಾ ಮಹಾಸರಸಿ ॥೬

ವಸುಮತಿಯ ವಿವರಣದ ಮಧ್ಯದ । ವಿಷಯದರ್ಥವಿದೀಗ ಮಯ ನಿ । ರ್ಮಿಸಿದ
ಮಾಯಾ ಸರಸವಿದು ಕುಶಕೇಳು ಕೌತುಕವ ॥ ಬಿಸಜ ಗಂಧೋದ್ಧೂತ ಸೀಕರ ।
ವಿಸರ ವಿಹರಣ ಲಘುಸಮೀರಣ । ನೆಸಗಿದುದು ತದ್ದಿವ್ಯ ಸರಸಿ ತಟಾಗ್ರದೆಡೆಗಳಲಿ॥೭॥
ಆಯೆನುತ ಕಪಿಕಟಕದಾ ಲಘು । ವಾಯುವಿನ ವೈಹಾಳಿಯಲಿ ಪಾ । ನೀಯವೆಂದೇ
ಬಗೆದು ಹೊಕ್ಕುದು ಕಾತರಿಸಿ ಕೊಳನ ॥ ಮಾಯೆಯಲಿ ಜಲತೋರುತಡಗುತ ।
ವಾಯುಜಾದ್ಯರ ನಿಳುಹಿದುದು ಕುಹ । ದಾಯು ಮಾರ್ಗಿತಮಯ ವಿನಿರ್ಮಿತ ಮಹಿಗೆ
ವಹಿಲದಲಿ ॥೮॥ ಬೆದರಿತಾ ಗೆಣೆವಕ್ಕಿ ಕೊಂಚೆಗ । ಳೊದರಿ ಹಾಯ್ದುವು ಹಂಸೆ ತುಂಡದ
ತುದಿಯ । ತಾವರೆಗಚ್ಚಿನಲಿ ಬೆಚ್ಚಿದುವು ದೆಸೆದೆಸೆಗೆ ॥ ಗದಬದಿಸಿ ಕಾರಂಡ ಬಕ ಚೀ ।
ರಿದುವು ಪರಿವ ಸರೋವರದ ಸಲಿ । ಲದ ಸಮೀಪದಲಬ್ಬರದ ಕಪಿಬಲದ ಕಳಕಳಕೆ ॥
ಧಗೆವಿತಾಳಿಸಿ ಕರಮರೀಚಿಯ । ದಗಡುಬಿಸಿಲಿನ ತೊರೆಗೆ ಹಂಣಾ । ಳಿಗಳು ಹರಿವಂದ
ದಲಿ ಹರಿಬಲ ಹೊಕ್ಕುದಿನಸುತನ ॥ ಮಗಳ ಮಂಜುಳ ಪುಂಜ ರಂಜಿತ । ಜಗತಿಯನು
ಬಳಿಕಲ್ಲಿ ಕಂಡುದು । ನಗರಖರ್ವದ ಖೇಡದ್ರೋಣಗ್ರಾಮ ಸಂಕುಲವ ॥ ೧೦ ॥ ಅದು
ಕಣಾ ಮಯನಿರ್ಮಿತದ ಜನ । ಪದವು ತಜ್ಜನಪದ ಪತಿತ್ವವು । ಸುದತಿಗಾಗಿಹುದಾ
ಸ್ವಯಂಪ್ರಭೆಯೆಂಬ ನಾಮಕದ ॥ ಅದು ಸುರೇಶ್ವರ ಜನಪದದ ಸಂ । ಪದವ ನಾಂತಿಹು
ದಾ ಮಹಾಜನ । ಪದದೊಳಗೆ ನೋಡಿದರು ಜನಕಸುತಾಪಹಾರಕನ ॥ ೧೧ ॥ ಅಯನ
ವಿಲ್ಲಾ ರಾಷ್ಟ್ರಕಬುಜ । ಪ್ರಿಯನ ದಿವಾರಾತ್ರಿಗಳ ಪರಿ । ಚಯದ ಸಂಚರವಿಲ್ಲ
ಪ್ರಭೆಯಹುದಾ ಸ್ವಯಂಪ್ರಭೆಯ ॥ ನಿಯತರುಚಿಯಲಿ ತೀರಿದುವು ದಿನ । ಪಯಣ
ಪರಿಯಟಣದಲಿ ಪರಮೇ । ಷ್ಠಿಯ ಪುರಂದರಸುತನ ಪಾವಕನ ಸಖನ ನಂದನನ ೧೨॥
ನೋಡನೋಡಲು ದೇಶವದು ಕಪಿ । ಬೀಡಬಿಡೆ ಹೊಸತಾಗಿಹುದು ನೆರೆ । ನೋಡ
ನೋಡಲು ನದಿನದಾದ್ರಿ ನಿಕುಂಜವಲ್ಲಲ್ಲಿ ॥ ಕೂಡೆಪಲ್ಲಟವಾಗಿಹುದು ಮರೆ । ಮಾಡಿ
ತಿರುಗಿಸಿತಿವರ ನಿವರೆಡೆ । ಯಾಡಿಕೆಯಲೇ ಸರಿದವಿಪ್ಪತ್ತೇಳು ದಿನವೆಂದ॥೧೩॥ ನಗರ
ವಿದ್ದುದನಂತ ಶಾಖಾ । ನಗರವಿದ್ದುದನಂತಸೊಗಯಿಸು । ವಗರು ಚಂದನ ಚೂತನಂದನ
ವಿದ್ದುದಪರಿಮಿತ ॥ ಮಘಮಘಿಪ ಫಲಶಾಲಿ ಧವಳೇ । ಕ್ಷುಗಳ ತಳಿತ ಸರೋಜ ಕಲ್ಹಾ ।
ರಗಳ ಸರಸಿಗಳಿದ್ದವಗಣಿತವಾ ಧರಿತ್ರಿಯಲಿ॥೧೪॥ ಸುತ್ತಸೋಡಿದ ಡನಿತರಲೀ ಸುರ ।
ಮತ್ತಗಜ ಪಂಚಾನನಾ ಗಿರಿ। ಯೊತ್ತುಗಳ ಪಿಂಖಣಗಳಲಿ ತರುಗಾವಳಿಯಲಿ ॥ ಕುತ್ತು
ರಲಿಕುಹರದಲಿ ಕೊಳಗಳ। ಲಿ ತ್ತಡಿಗಳಲಿ ಹೇರಡವಿಗಳ। ಮೊತ್ತಜಲಿ ವ್ಯಮರೆಯದರ
ಸಿದರಾ ನಿಶಾಚರನ ॥ ೧೫ ॥ ಬಳಿಕ ಕಂಡರದೊಂದು ಶೋಭಾ । ಕಲಿತ ಕಮನೀಯ
ಪ್ರಭಾಪರಿ । ಲುಳಿತ ವಿಶ್ರುತದಾಸ್ವಯಂಜ್ಯೋತಿಯ ಮಹಾ ಪುರವ ॥ ಪೊಳಲ
ದಮರಾವತಿಗೆ ಪೋಗೆಗೆ ವೆ । ಗ್ಗಳವೆನಲು ರಂಜಿಸಿತು ಕೋಟಾ । ವಳಯ ಕೊತ್ತಳ
ದಾಳುವೇರಿಯ ವಿವಿಧ ರಚನೆಯಲಿ ॥ ೧೬ ॥ ಹೊಕ್ಕರೊಳಬಿದ್ದಂದು ನಿಮಿಷದ ।
ಲೆಕ್ಕತುಳದಲಿ ಬಂದ ಮಿಗೆ ವ್ಯೆ ಯಿಕ್ಕಿದವರನು ಹಿಡಿ ಹಿಡಿದು ಕೇಳಿದನು ರಾವಣನ ॥
ಮರ್ಕಟರ ಧಳಧಳದ ದೂರಿನ । ಧಕ್ಕಡೆಯತನ ಬಿದ್ದುದೈ ಕ । ರ್ಣಕೆ ಕಮಲ
ಪ್ರಿಯನಸುತೆ ಸಾರ್ವನ ನಂದನೆಯ ॥ ೧೭ ॥ ಕರೆಸಿ ಕೊಂಡಳು ಬಳಿಕ ಕಲಿಕಪಿ ।
ವರನ ನದರೊಳು ಜಾಂಬವಂತನ । ಹಿರಿಯನೆಂದುಪಚರಿಸಿದಳು ಬೆಸಗೊಂಡಳುಚಿತ

ದಲಿ ॥ ಬರವು ನಿಮಗಾರಿಂದಲೀ ಪುರ । ವರಕೆ ಘಟಿಸಿತು ನೀವಿದಾರೆಂ । ದುರುತಪಸ್ವಿನಿ ಕೇಳಿದಳು ಕೈಮುಗಿದು ವಿನಯದಲಿ ॥ ೧೮ ॥ ಹೇಳಬೇಕೋ ನಿಮಗೆ ರಘುನೃಪ । ನಾಳುಗಳು ನಾವ್ ಕೇಳಿದೆವು ನ । ಮ್ಮಾಳಿದನ ವಲ್ಲಭೆಯು ರಾವಣನೆಂಬ ರಕ್ಕಸನು ॥ ಕೌಳಿಕದ ಯತಿಯಾಗಿ ರಘುಭೂ । ಪಾಲ ನಿಲ್ಲದ ಹಿಂದೆ ಸಂಧ್ಯಾ । ಕಾಲದಲಿ ಕದ್ದೊಯ್ದನಡವಿಯಲಾ ದಶಗ್ರೀವ ॥ ೧೯ ॥ ಅವನ ನರಸಲು ಬೀಳಕೊಟ್ಟಾ । ರವಿತನೂಭವ ನಾ ಧರಿತ್ರೀ । ಧವ ನನುಜ್ಞೆಯ ಲಿಮ್ಮನಿತ್ತಲು ಬರವು ನಮಗಾಯ್ತು ॥ ಅವನಿಪರ ಪಟ್ಟಣಗಳಲಿ ನಾ । ವವನನರಸಿ ಕಾಣದಿಲ್ಲಿಗೆ । ಪವನಜಾದ್ಯರ ಗಢಣದಲಿ ಗಮಿಸಿದೆವು ನಾವೆಂದ ॥ ೨೦ ॥ ಈತನೀ ಗನಿಲಜನು ವಹ್ನಿಜ ನೀ । ತ ನೀತನು ಸುರಪಸುತ । ನೀತನೀ ನಳನೀತ ನೀತನು ಗಜಗವಾಕ್ಷರು ॥ ಯಿಗಾತರ್ಗಳ ಬಲವಿದೆ ಸಮುದ್ರದ । ರೀತಿಯಲಿ ನಗರೋಪ ಕಂಠದ । ಲಾತ ಕೆಲಸವಿದೀಗ ಬಲ್ಲರೆ ಹೇಳಿ ನೀವೆಂದ ॥ ೨೧ ॥ ಮನದೊಳಮಲ ಧ್ಯಾನಮುಖದಿಂ । ದಿನ ಕುಲೋದ್ಭವ ವಿಷ್ಣುವೆಂಬುದ । ನನುವರಿಸಿ ಬೆರಗಾದಳಾ ಮಾಯಾಮಧು ದ್ವಿಪನ ॥ ವಿನುತ ಚರಿತಕೆ ಮೆಚ್ಚಿ ಚತುರಾ । ಸ್ಯನ ಕುಮಾರಂಗೆಂದಳೆಮ್ಮೀ । ಜನಪದ ದೊಳವನಿಲ್ಲ ನಾವ್ ಕಂಡರಿಯೆವಾ ಖಳನ ॥ ೨೨ ॥ ಇದ್ದಡಿಹ ನವ ಲಂಕೆಯೊಳಗವ । ನಿದ್ದ ಠಾವಿಗೆ ಹೋಹುದಲ್ಲಿಯೆ । ತಿದ್ದಿಕೊಂಬುದು ನಿಮ್ಮ ಕಾರ್ಯದ ಕೊಂಕು ಕೊರತೆಗಳ ॥ ಯಿದ್ದಹದನಿದು ನಮ್ಮ ಪುರದೊಳ । ಗಿದ್ದ ನಾದಡೆ ಕಮಲನಾಭ ಕ । ಪರ್ದಿಗಳ ಮೇಲಾಣೆಯೆಂದಳು ಜಾಂಬವಂತಂಗೆ ॥ ೨೩ ॥ ಐಸೆಮುತ್ತೀನಂದು ತಿರುಗಿದ । ರಾ ಸಕಲಬಲ ಸಹಿತ ಲಾ ಮಾ । ಯಾಸುರದ ಮಯರಚಿತ ರಾಷ್ಟ್ರದ ರಾಜಮಾರ್ಗದಲಿ ॥ ಘಾಸಿಯಾದರು ಬಂದಟ್ಟೆಯು । ನ್ಯೈಸಿರಿಯ ನಿದ ನರಿಯದಗ್ಗದ । ಬೇಸರಿಕೆಯಲಿ ಮತ್ತೆ ಬಂದರು ಕಂಡರಾ ಸತಿಯ ॥ ೨೪ ॥ ದಾರಿತಪ್ಪಿದೆವರಸಿ ರಾಜ । ದ್ವಾರವನು ಹೇಳಿ ಸ್ವಯಂಪ್ರಭೆ । ಧಾರುಣೀಶನ ಹಗೆಯ ನಗರಿಗೆ ಹೋಗಬೇಕೆಂದು ॥ ವಾರಿಜಪ್ರಿಯ ಸುತನ ನೇಮಕ । ಘೋರತರ ವದರಿಂದ ನಮಗುಪ । ಕಾರವನು ಹೊರಬೇಗ ಕೊಡಬೇಕೆಂದ ನಜಸೂನು ॥ ೨೫ ॥ ಹೆಂಗಸುಗಳಾವ್ ಬಲ್ಲೆವೇ ಪುರು । ಷಾಂಗ ನಿಮ್ಮ ಪೌರುಷಾಂಗದ । ತುಂಗಬಲರಿದೆ ನಿಮ್ಮ ಬಳಿಯಲಿ ಲಕ್ಷ ಸಂಖ್ಯೆಯಲಿ ॥ ಅಂಘವಿಸ್ಪುದು ಬಂದಬಟ್ಟೆಯ । ಸಂಗದಲಿ ನೀವೆನಲು ಕೇಳ್ದು ಪ । ತಂಗಬಿಂಬ ಭಯಂಕರನು ಭಾಮಿನಿಯೊಳಿಂತೆಂದ ॥ ೨೬ ॥ ಪುರುಷರಹುದಾವ್ ಪೌರುಷಾಂಗದ । ನಿರತಿಶಯವನು ನೋಡು ನೀನೆಂ । ದುರುಪರಾಕ್ರಮ ಹೆಚ್ಚಿದನು ಹೇರಾಳ ರೋಷದಲಿ ॥ ಪುರಿಯೊಳಬುಜ ಭವಾಂಡ ಭವನದ । ಲಿರಿಸಲುಬ್ಬರಿದೆದ್ದು ರುದ್ರನ । ಪಡಿಗೆ ನೂರ್ಮಡಿಯೆನಲು ನಿಗುರಿದ ನಂಜನಾಸೂನು ॥ ೨೭ ॥ ಝಡಿದು ಮುಷ್ಟಿಯಲವನಿ ಕುಹರವ । ನೊಡೆಯಲುದ್ಯೋಗಿಸಲು ಮನದಲಿ । ನಡುಗಿ ನಿಂದಿರ್ದಳು ಸ್ವಯಂ ಪ್ರಭೆ ಮಾರುತಿಯ ಕರವ ॥ ಹಿಡಿದು ನಯದಲಿ ಬೇಡಿಕೊಂಡಳು । ಕೆಡಿಸಬೇಡೆಲೆ ತಂದೆ ನಮ್ಮೀ । ಯೊಡೆಯನೆಂದುದರದಲಿ ತಲೆಯಿಕ್ಕಿದಳು ತರಳಾಕ್ಷಿ ॥ ೨೮ ॥ ಪಥವ ತೋರಾದರೆ ಮನುಷ್ಯರ । ಪೃಥಿವಿಗೆನೆ ನಡುನಡುಗಿ ಗಗನದ । ರವಿಗೆ ಲಂಘಿಸಿ ವಥಟಗೆಂದಳು ಮಧುರ ವಚನದಲಿ ॥ ಪೃಥುಳ ವಿಕ್ರಮ ಕೇಳು ರಣನಿ । ಶ್ಶಿಥಿಲ ನಿರುಪಮ ವೀರ

ಕೇಳ | ಪ್ರತಿವು ಸಾಹಸಮಲ್ಲ ಕೇಳಿನ್ನೊಂದು ವಿಸ್ಮಯವ ॥ ೨೯ ॥ ಮುಚ್ಚಿಕೊಳ ಲಕ್ಷಿಗಳ ನಿನ್ನಯ | ಮುಚ್ಚೆಯದ ಸುಭಟಾಳಿ ನೀಸಹಿ | ತಚ್ಚರಿಯ ತೋರುವೆನು ನಿನಗೆನುತಾ ಕ್ಷಣಾರ್ಧದಲಿ | ಮುಚ್ಚಿದರು ಕಂಗಳನು ಕೈಗಳ | ಮುಚ್ಚಳಲಿ ನೆಗಹಿದಳು ರಾಮನ | ನಚ್ಚಿನಾಳ್ಗಳ ನಿಳಿಗದೇನ್ಸಾಮರ್ಥ್ಯವೋ ಬಳಿಕ ॥ ೩೦ ॥ ಕಂದೆರೆದು ನೋಡಿದರು ಬಳಿಕವ | ರೆಂದು ವಿಸ್ಮಯರಾಗಿ ಸೂರ್ಯನ | ನಂದನನ ನಂದನೆಯು ಮಹಿಮೆಗೆ ಜಾಂಬವಾದಿಗಳು ॥ ಇಂದಿರೇಶನ ಕಾರ್ಯಕೊದಗುವ | ದೆಂದಿವರ ನುರೆಹರಿಸಿ ಕಂಭದ | ಕಂದನನು ನೆನೆವುತ್ತ ಕಾಣಿಸಿದಳಾಕಾಂತೆ ॥ ೩೧ ॥

ಹತ್ತನೆಯ ಸಂಧಿ ಸಮಾಪ್ತಂ.

ಹನ್ನೊಂದನೆಯ ಸಂಧಿ.

ಸೂಚನೆ॥ ಕಂಡು ಸಂಪಾತಿಯನು ಮುನಿ ಮೃ | ಕಂಡುವನು ದರುಶನವಮಾಡಿ ಯ |
ಖಂಡಬಲ ರೈದಿದರು ಘನಗಂಭೀರ ವಾರಿಧಿಯ ॥

ಪದ್ಯ॥ ಎಲೆ ಕುಮಾರಕ ಕೇಳು ವಾನರ | ಬಲ ಮಹಾಂಬುಧಿ ಕಾದ ಕಡಲಿನ | ಕಳಕಳದ ಕಾಹುರದವೋಲು ದಕ್ಷಿಣದ ದೆಸೆಗಾಗಿ ॥ ನಿಲುಕಿದುದು ನಿರ್ಮಲ ನಿತಾಂತ | ಸ್ಥಳದ ನಿರುಪಮ ಮುನಿ ಮೃಕಂಡುವಿ | ನೆಲೆವನೆಯ ಕಂಡಿವರು ಹೊಕ್ಕರು ತನ್ಮುನೀಶ್ವರನ॥೧॥ ಅರಿದ ನವರುತ್ತಾಳಗಮನದ | ನಿರಸನಾ ಮುನಿ ವಿಷ್ಣುವಿನ ವೈ | ಮರೆಯ ಮಾಯಾ ನಾಟಕದ ಭೂಭಾರ ಭಂಜನೆಯ ॥ ನಿರಿಗೆಯನು ಸತ್ಕರಿಸಿದನು ತನ | ಗೆರಗಿದಜಸುತ ಹನುಮ ಮೊದಲಾ | ದುರುವ ಕಪಿನಾಯಕ ನತಿಕಾರುಣ್ಯ ಭಾವದಲಿ ॥೨॥ ಹೇಳಿದರು ಬಳಿಕಿವರು ರಾಮ ನೃ | ಪಾಲಸಖ ಸುಗ್ರೀವ ನೇಮಿಸಿ | ದೊಳಿಗದ ಫಲಗತಿಯನಾ ಮುನಿ ಸಾರ್ವಭೌಮಂಗೆ ॥ ಕೇಳಿ ಮಾರ್ಕಂಡೇಯ ಚರಿತವ | ಹೇಳಿದನು ಬಳಿಕಿವರಿಗಿವರನು | ಬೀಳುಕೊಟ್ಟನು ಹೊರಿಸಿ ರಸಪೂರಿತ ಫಲಾವಳಿಯ ॥೩॥ ಬಳಿಕಲಿವರಾ ಮುನಿಯ ವಿಪಿನ | ಸ್ಥಳವ ಕಳೆದೈದಿದರು ಘನವುಂ | ಜುಳದ ಮಹಿಜಾವಳಿಯ ಕುಸುಮೋತ್ಕರ ಲತಾವಳಿಯ ॥ ವಿಲಸದಭಿರಂಜನೆಯ ರಾಜಿತ | ನಿಳಯವನು ಬಳಿಕಲ್ಲಿ ಕಂಡರು | ನಳಿನ ನಯನಾರ್ಚಕನ ಕಣ್ವಮಹಾಮುನೀಶ್ವರನ ॥ ೪ ॥ ಈತಗಳು ನಡೆತಂದ ಕೆಲಸವ | ನಾತ ಶಮೆದಮೆಯುಳ್ಳ ಮುನಿಪ | ಜ್ಞಾತಮುಖದಿಂದರಿದು ಮನ್ನಿಸಿದನು ನಯೋಕ್ತಿಯಲಿ | ಭೂತಲೇಂದ್ರನ ರಾಮಚಂದ್ರನ | ರಾತಿಕಳವಿನಲೊಬ್ಬುಧರಣೀ | ಜಾತೆಯನು ನೀವ್ ಕಾಂಬಿರೆನುತವರುಗಳ ಬಿಳ್ಕೊಟ್ಟ ॥ ೫ ॥ ಬಂದರಿವರು ಸಮಗ್ರ ಸೌರಭ | ದಿಂದ ಮೆಲ್ಲನೆ ಸುಳಿವ ಮಾರುತ | ನಿಂದ ಶೈತ್ಯದ ಸಾರತರ ಶಿಲೆಯಿಂದ ಸಂಚರಿಪ ॥ ಸಂದಣಿಪ ಘನಪುಣ್ಯ ಮೃಗಕುಲ | ದಿಂದ ತರುಲತೆ ಗುಲ್ಮನಿರ್ಜರ | ದಿಂದ ಮೆರೆವ ಮಹಾತಿಶಯ ಮಲಯಾದ್ರಿ ಮಂಡಲಕೆ ॥೬॥ ಲವನೆ ಕೇಳೈ ಮಲಯಪರ್ವತ | ದವನಿಯಲಿ ಬಿಟ್ಟುದು ಬಲಿಮುಖ | ನಿವಹವೆಣಿಸಿದರಲ್ಲಿ ತಿಂಗಳ ದಿವಸಕೇಳು ದಿನವ ಅವನಿಜೆಯ ಸುದ್ದಿಯನು ಮಿಕ್ಕಿನ | ದಿವಸದಲಿ ನಾವರಿದರಿಂದೀ | ಹದನಿಗುತ್ತರವೇನೆನುತ ಬೆಸಗೊಂಡನಜಸುತನ ॥ ೭ ॥ ಕಳುಹಿದನು ಕಟ್ಟಾಜ್ಞೆಯಲಿ

ತಿಂ | ಗಳಿಗೆ ಬಹುದೆಂದೆನ್ನನೇ ಕುರಿ | ತಿಳಿಯ ತನುಜೆಯ ಸುದ್ದಿ ತೋರಲಸಾಧ್ಯಜಗ
ದೊಳಗೆ || ಎಲೆ ಸರೋರುಹಸೂನು ಕೇಳ್ ಕೊಲೆ | ನಿಲುವುದೆನ್ನಲಿ ಹಗೆಯ ಮಗನೆಂ|
ದಲಂಕದಿಂದ್ಯೈಯ್ಯಂಗೆ ಮನದೊಳಗೆಂದ ನಂಗದನು || ೮ || ನಿರತವಿದು ಕೇಳಂಗ ಸುಗ
ತಿಗೆ | ನಿರತಿಶಯ ವನಶನವು ದುರ್ಗತಿ | ಗರಸುತನ ದುರ್ಮ್ಮರಣವಿದು ತಾ ಶಾಸ್ತ್ರಸಿದ್ಧ
ವಲೆ || ತೆರಳುವುದು ನೀವರಸುವುದು ನಿ | ಮ್ಮರಸ ನೇಮಿಸಿದಂದದಲಿ ತಾ | ನಿರಶನವ
ಕೈಕೊಂಡವನು ನೀವ್ ಬಿಜಯಮಾಡೆಂದ || ೯ || ನೆಲನ ಶೋಧಿಸುವರ ಕುಶಸ್ಥಂ|
ಡಿಲದಲಂತರ್ಭಾವಶುದ್ಧಿಯ | ಲಳವಡಿಸಿದನು ನಿಯಮ ಮೌನದ ಲನಶನವ್ರತವ ||
ಕೆಲಸವಿದು ಲೇಸಾಗಿ ತೋರಿತು | ಸಿಲುಕು ರಾಮನ ರಾಜಕಾರ್ಯಕೆ | ನಿಲುಕಡೆಯದೇ
ನೆಂದು ಚಿಂತಿಸಿದನು ವಿರಿಂಚಿಸುತ || ೧೦ || ಮರುಳಲಾ ತಾರೇಯ ತಾ ನಿರು | ತಿರಲು
ನಿನಗುಪಹತಿ ಸಿದಾನಿಸೆ | ನೆರೆಯಬಲ್ಲುದೆ ಕಂದ ರಘುರಾಜೇಂದ್ರ ಚಂದ್ರಮನ || ಕರು
ಣವೇ ತತ್ಪ್ರಾಣಪೂರಿತ | ಪರಮಮಾರುತನಿರಲು ನಿನ್ನನು | ತರಣಿಸುತ ಕೊಲಬಲ್ಲನೇ
ಕಾಳ್ತನವಿದೀಗೆಂದ ||೧೧|| ಕಾಕುತನ ದೆಣಿಕೆಗಳ ಬಿಡು ಲೋ | ಕೈಕಬಲರಿದೆ ನಮ್ಮ
ಕಟಕದೊ | ಳಾಕೆವಾಳನು ನೀನು ನಮಗಿಂದಜ್ಞತನ ನಿನಗೆ | ಸೋಕುತಿದೆ ಸುಪ್ರೌಢ
ಗೆಂದ | ವ್ಯಾಕುಲತೆ ನಿನಗಿಹುದು ಮೂರ್ಖತೆ | ಸಾಕು ರಾಜಕುಮಾರಗಿದು ತಾ ಯೋಗ್ಯ
ವಲ್ಲೆಂದ || ಹೋಗುವುದರಿ ನಗರವನು ಹಗೆ ಕೈ | ಮಿಗುಹ ಹದನನು ಕಂಡಡಾಜಿಸು |
ಲಘುಹರನ ಮೆಚ್ಚಿಸುವುದಳಿವುದು ಸಮರ ಭೂಮಿಯಲಿ || ಖಗಕುಲೇಂದ್ರ ಜಟಾಯು
ವಿನ ಸಂ | ಯುಗ ಸಮರ್ಥನ ಸಾವು ಸುರರಿಗೆ | ಸೊಗಸದೇ ಸಂಕಲ್ಪವಿದು ತಾ
ಯೋಗ್ಯವಲ್ಲೆಂದ ||೧೩|| ಮಾತನಿದ ಕೇಳಿದನು ಕಲಿ ಸಂ | ಪಾತಿ ಕಿವಿಗೊಟ್ಟಳಿದನೇ
ಸಹ | ಜಾತ ನಕಟೆನು ತಂತರಂಗದಲ್ಲೈದೆ ಮರುಕದಲಿ || ಈತಗಳು ತಾವಾರೊ ಯೆನು
ತಿನ | ಸೂತ ಸುತ ಮುರಿದೇಳಲರಿತು | ಭೀತಿಯಲಿ ಭಟನಿಕರ ಬೀಳುವ ಗುಂಡಿನಂದ
ದಲಿ ||೧೪|| ಎದ್ದುದೋ ಗಿರಿಯೆನುತ ನೆಲದಲಿ | ಬಿದ್ದ ಭಟರಬ್ಬರಿಸಿ ಮೆಲ್ಲನೆ | ಹೊದ್ದಿ
ದನು ಜಾಂಬವನು ಹೇಳುತ ಹೆಸರ ನರುಣಸುತ || ಹೊದ್ದಿದನೆ ಸುರಪುರದ ಸುರಪನ |
ಗದ್ದುಗೆಯನು ಜಟಾಯುವಾರಿ | ದಿದ್ದುದೋ ಸಹಜಾತ ಶೋಕದನೋವು ತನಗೆಂದ ||
ಅನುಜ ನೆನಗೆ ಜಟಾಯು ಸಾವೆಂ | ತನುಕೊಳಿಸಿ ತಾರಿಂದಲೆನ ಲಜ | ತನುಜ ತದ್ವೃ
ತ್ತಾಂತವನು ಸೂರಿಯನ ಸಾರಥಿಯ || ತನಯಗೆಲ್ಲವನೊರೆದು ತಾವ್ ಬಂ | ದಿನಿತ
ನುಸುರಲು ಶೋಕರಸದಲಿ | ನೆನೆದು ಮರುಗಿದನನುಜನಳಿವಿಗೆ ವೀರ ಸಂಪಾತಿ || ೧೬ ||
ಸಂತವಿಸಿದನು ಜಾಂಬವನು ವಿ | ಕ್ರಾಂತ ವಿಹಗೇಶ್ವರನ ಚಿತ್ತದ | ಚಿಂತೆಯನು ಬಿಡಿಸಿ
ದನು ನುಡಿಸಿದನಾ ಖಗೇಶ್ವರನ || ಎಂತು ನಿನಗೀ ಪಕ್ಷಪತನ | ಶ್ರಾಂತ ಸಮನಿಸಿ ತಾವ
ನಿಂದೆನೆ | ಕಂತುಹರ ಚರಣಾರ್ಚಿತನು ಜಾಂಬವನಿಗಿಂತೆಂದ ||೧೭|| ಸುರಪ ಸಭೆಯಲಿ
ತನ್ನ ತಮ್ಮನು | ಗರುಡನಲಿ ಗರ್ವಿಸಿ ಮನೋಮ | ತ್ಸರದ ಹಮ್ಮಿನ ಸೋಲಗೆಲವಿನ
ಸುಪ್ರತಿಜ್ಞೆಯಲಿ || ತರಣಿ ಬಿಂಬವ ತುಡುಕಲಭ್ರಕೆ | ಚರಿಸಿದನು ಸಮಗೈಯ್ಯಲನು
ಜನ | ಪರಿಯನರಿಯಲು ಜಾರದೆನುತೈದಿದೆನು ಬೆಂಬಳಿಯ ||೧೮|| ಸರಸಿಜಾಸನಸೂನು
ಕೇಳ್ | ಹರಿಕೆ ಗೊಂಬುವೆ ತರಣಿಕಿರಣ | ಸ್ಫುರಣೆಯಲಿ ಮಲೆವಾಡಿದೆನು ತಮ್ಮಂಗೆ
ಪಕ್ಷಗಳ || ಮುರುಡಿದುವು ತನ್ನುಭಯಪಾರ್ಶ್ವದ | ನಿರತಿಶಯ ಪಕ್ಷಗಳು ಪತನವ |

ದೊರದುವು ಬಳಿಕಂದು ಪಾರಾವಾರ ತೀರದಲಿ ॥ ೧೯ ॥ ಅರುಣನೀ ಗೆಮ್ಮಯ್ಯನಾತನ । ಕರುಣದಲಿ ಪಶುಪತಿಯ ನಾಮ । ಸ್ಮರಣೆಯಲಿ ಸಾವಿಲ್ಲದುಳಿದೆನು ಸಲಹು ಸಹಭವನ ॥ ಮರಣ ತಮ್ಮಂಗಾಗಲಂತಃ । ಕರಣ ಮರುಗದೆ ಬಿಡುವುದೇ ಹರಿ । ಶರಣಜನ ಚೂಡಾಮಣಿಯೆ ಕೇಳೆಂದನರುಣಸುತ ॥ ೨೦ ॥ ಮೂಡಿದುವು ಗರಿ ಬಳಿಕ ಪೂರ್ವದ । ಘಾಡಿಕೆಯ ಗುರುವೆನಿಸಿ ದೈತ್ಯ ವಿ । ಭಾಡ ಪದಸೇವಕರ ಸಂದರ್ಶನದ ಸೊಗಸಿನಲಿ ॥ ಈಡಿರಿದ ಪಕ್ಕದಲಿ ಸೇನೆಯ । ಸೂಡಿ ತಂದಿಳುಹಿದನು ನಾಯಕ । ವಾಡಿಗಳು ಸಹಿತುಬ್ಬರಿಪ ಸಾಗರದ ತೀರದಲಿ ॥ ೨೧ ॥ ಬಳಿಕಲಾ ಸಂಪಾತಿ ಸಲಿಲಾಂ । ಜಲಿ ಮೃತಸ್ನಾನಾದಿ ಕರ್ಮವ । ಜಲನಿಧಿಯಲೇ ಮಾಡಿ ಮೇಲಣ ತಾಗುಬಾಗುಗಳ ॥ ತಿಳುಹಿ ಲಂಕಾಪುರದ ಸರಣಿಯ । ಹೊಲಬ ತೋರಿಸಿ ಬೀಳುಕೊಂಡನು । ಕಲಿಸುಪಾರ್ಶ್ವ ಸಮೇತ ವರಮಾನಸ ಸರೋವರಕೆ ॥ ॥೨೨॥

ಹನ್ನೊಂದನೆಯ ಸಂಧಿ ಸಮಾಪ್ತಂ.

ಹನ್ನೆರಡನೆಯ ಸಂಧಿ.

ಸೂಚನೆ॥ ರಾಯ ರಾಘವಸತಿಯ ಸರಸಿರು । ಹಾಯತಾಕ್ಷಿಯ ದರುಶನಕೆ ಕಪಿ । ರಾಯ
ಕಟಕ ಪಿತಾಮಹನು ಕಳುಹಿದನು ಪವನಜನ ॥

ಪದ್ಯ॥ ಕೇಳಿದೈ ಕಾಕುಸ್ಥ ಧರಣೀ । ಪಾಲಸುತ ರವಿಸುತನ ತನುಜನ । ಬೀಳುಕೊಂಡನು ಬಳಿಕ ಸಾರಿದರಿವರು ಸಾಗರವ ॥ ಮೇಲು ಮಸದುಬ್ಬಿನಲಿ ಘನಕ । ಲ್ಲೋಲಗಳ ಬಲು ಸುಳಿಯ ಸಡಗರ । ದೇಳಿಗೆಯ ಸೀಕರ ಕದಂಬದ ಲೆಸೆದುದಂಬುನಿಧಿ ॥ ॥ ಓಟ ಭರಿತದ ಭರವಸದ ಹೊ । ಯ್ಲಾಟ ದುರುಲಹರಿಗಳ ಲಳಿಗಳ । ತೋಟಿಗಳ ಪಾಠೀನ ಮಕರಜಲೀಭದುಬ್ಬಿನ ॥ ದೂಟಿಗಗನಕೆ ಚಿಗಿದುಮುಕ್ತಾ । ಸ್ಫೋಟಕದ ಗಂಭೀರ ಸಬುದದ । ಮೂಟ ಮುದ್ರಿತ ರತ್ನದಿಂದ ಸಮುದ್ರ ರಂಜಿಸಿತು ॥ ೨ ॥ ನೋಡಿದನು ಜಾಂಬವನು ಜಲಧಿಯ । ಝಾಡಣೆಯ ಜಂಘಾಲ ರಭಸದ । ಜೋಡಣೆಯ ಗಗನಾವಲಂಬಿತ ಗತಿಯ ಗುರುವಿಕೆಯ ॥ ಝಾಡಣೆಯ ಮಝವಾ ಯೆನುತ । ಲ್ಲಾಡಿ ಮೂರ್ಧ್ನಿಯ ಮುರಿದು ಸುಭಟರ । ನೋಡಿ ಬಳಿಕೀ ಮಾತನೆಂದನು ಮಧುರ ವಚನದಲಿ ॥೩॥ ಆವಸಿದ ದಾಂಟುವನು ದಾಂಟಲು । ಮಾವಧೂವಲ್ಲಭಗೆ ತೀರದು ರಾವಣಾಸುರ ನಗರ ತಾಸೀ ಕಡಲ ಮಧ್ಯದಲಿ ॥ ದೇವನಿಕರಕಸಾಧ್ಯಗಡ ನ । ವ್ಯಾಮೀ ವನೌಕಸ ಭಟರೊಳಗೆ ಹೊ । ಕ್ಕಾವನೈ ಮರಳುವ ಮಹಾತ್ಮನೆನುತ ಚಿಂತಿಸಿದ ॥ ೪ ॥ ಜೀಯ ಚಿಂತೆಯಿದೇಕೆ ಕೇಳ್ಚಿಂ । ತಾಯಕನು ನೀನಿರಲು ನಿನ್ನ ಸ । ಹಾಯದಲಿ ಸಾಗರವ ಗುಡಿವ ಸಮರ್ಥರಿದೆ ನೋಡು ॥ ಈ ಯಜಾಂಡವ ನುಗ್ಗಿ ನೊಣದ ಸ । ಹಾಯ ಶೌರ್ಯ ಸಮಗ್ರಬಲ ಸಮ । ದಾಯರಿದೆ ಬೆಸಸೆಂದು ವಾಲಿ ಕುಮಾರ ಕೈಮುಗಿದ ॥೫॥ ಕೆದರಿಕೊಂಡರು ಭಟರು ಕಲ್ಪಾಂ । ತದ ಸಿಡಿಲ್ಗಳ ಸಡಗರದವೊಲು । ಮದದಿ ವೀರಾವೇಶರೋಷೋತ್ಕಲಿತ ಚಾಪಳದ ॥ ಉದಧಿಯನು ಹೇಳದಿರು ಹಗೆವನ । ಕದನವನು ಹೇಳದಿರಜಾಂಡದ । ತುದಿಯಲುಂಟೇ ಕೆಲಸ ಹೇಳದನೆಂದ ರುಬ್ಬಿನಲಿ ॥ ೬ ॥ ಹೋ

ಹೋ ಸೈರಿಸಿ ನಿಮ್ಮವೊಲು ಬಲು । ಸಾಹಸಿಗರಾರುಂಟು ಸುಭಟ । ವ್ಯೂಹದಲಿ ಭುವನ
ತ್ರಯ ದಸುರ ನರ ಭುಜಂಗರಲಿ ॥ ಬೇಹಭಟರಹುದಾದಡೆಯು ನಿ । ರ್ವಾಹಶಕ್ತಿಯ
ಸೊಬಗು ಬೇರಿಹು । ದಾಹದನ ಕೇಳಿದರೆ ಹೇಳುವೆನೆಂದ ನಜಸೂನು ॥ ೭ ॥ ಅರಸ
ಬೇಕಣುವಾಗಿ ರಕ್ಕಸ । ರರಿಯದಂತಿರೆ ರಾತ್ರಿಯಲಿ ವೇ । ಲರಿದರಾದಡೆ ಏಲಯ
ರುದ್ರನ ರೌದ್ರರಂಜನೆಯ ॥ ಮೆರೆಯ ಬಲ್ಲವನಾಗಬೇ ಕೊಳ । ಗರಿದು ಕಾರ್ಯವ ಕಾಬ
ಕುಶಲದ । ತೆರನ ಬಲ್ಲತಿಶಯದ ಕೃತಮುಖನಾಗಬೇಕೆಂದ॥೮॥ ನುಡಿಯಬಲ್ಲವನಾಗಬೇ
ಕೊಳ । ಗುಡಿಯ ವಿಶ್ವಾಸದಲಿ ಸೀತೆಗೆ । ಪೊಡವಿಪನ ಮನದನುಭವೋಚಿತ ಲಲಿತ
ಭಾಷಿತವ॥ ತೊಡಕಿದರಿ ಭಟಪುರವ ನೂಮ್ಮಿಗೆ । ಸುಡಲುಬಲ್ಲವ ನಾಗಬೇಕೀ । ತಡೆಯ
ನರಿವ ಸಮರ್ಥರುಂಟೇ ಹೇಳಿ ನೀವೆಂದ ॥೯॥ ಜೀಯ ಜವನಿಕೆ ಯೇಕೆ ನೀವೆಂ । ಬೀ
ಯಶೇಷ ಗುಣಂಗಳಾ । ಕಾತ್ಯಾಯನೀಪತಿಗುಂಟು ಮಗುಳೆರಡನೆಯ ನೆಣಿಸುವರೆ ॥
ವಾಯು ತನುಜಂಗುಂಟು ಮಿಕ್ಕಿನ । ನಾಯಕರದಂತಿರಲಿ ನವಿಸ್ಮಾ । ರಾಯ ಕಟಕ
ದೊಳೆಂದು ವಾಲಿ ಕುವರಾರ ಕೈ ಮುಗಿದ ॥ ೧೦ ॥ ಮನಕೆ ಬಂದುದು ತನ್ನ ಚಿತ್ತದ ।
ನೆನಹಿಗನು ಬಂದಂತೆನಗೆ ಮೊಗ । ವೆನಿಸಿ ಕೊನವೆರಲುಪ್ಪರಿಸಿ ಕೊಂಡಾಡಿದ ನಂಗ
ದನ । ಎನಿತು ಚಿಕ್ಕವನಾದಡೆಯು ಕಪಿ । ಜನಪ ಸೂನುವಲಾ ವಿವೇಕದ । ಘನತೆ
ಲೇಸೆಂದುಳಿದ ವೀರರ ಮೊಗವ ನೀಕ್ಷಿಸಿದ ॥ ೧೧ ॥ ತಪ್ಪದೀ ಯುವರಾಜ ನಾಡಿದ ।
ಕಪ್ಪುದೋರದ ಮಾತು ಹನುಮಂ । ಗುಪ್ಪರದ ಭಟರುಂಟೆ ನಮ್ಮೀ ರಾಯಕಟಕದಲಿ॥
ಒಪ್ಪಿದುವು ಲೇಸಾಗಿ ವಾಸಿಯ । ದರ್ಪದಿಂ ದೇನಹುದು ನಿಮ್ಮಡಿ । ಯೊಪ್ಪಿದುದೆ
ಮತ ತಮ್ಮಮತ ವೆಂದುದು ಭಟಸ್ತೋಮ ॥ ೧೨ ॥ ಲೇಸನಾಡಿದಿರೆಂದು ಹೊಗಳಿದ ।
ನಾ ಸುಭಟರನು ವೀರ ಹನುಮನ । ಶೈಶವದ ಸಾಹಸದ ಶೌರ್ಯವ ನೊರೆದ ನನಿಬರಿಗೆ ॥
ಈ ಸಮೀರಜ ನೀಗ ಹೃದಯ ನಿ । ವಾಸ ಮಾರುತ ನಜ ಹರೀಶ್ವರ । ರೋಷರದ
ಬರಿಮಾತಿದಲ್ಲದು ವೇದಮತವೆಂದ ॥ ೧೩ । ಕಂದಬಾ ಕಡುಗಲಿಯೆ ಬಾ ನಾ । ವೆಂದ
ಮಾತನು ಕೇಳಿದೈ ನಿನ್ನಿಂದ ಮೆರೆವುದು ಕೀರ್ತಿ ರಾಮನ ರಾಜಕಾರಿಯವ ॥ ಸಂದ
ಭಟರಿದೆ ವೆರವವನು ನಾ । ನೆಂದು ನುಡಿಯದೆ ಗುರುವಿನಾಜ್ಞೆಯಿ । ದೆಂದು ಕೈಕೊಂಡು
ಪಯಣವಾ ಗೇಳೆಂದ ನಜಸೂನು ॥ ೧೪ ॥ ಬಳಿಗೆ ಕರದೇಕಾಂತದಲಿ ಭುಜ । ಬಲಗೆ
ನುಡಿದನು ಮೊದಲಲೇ ವ್ಯ । ಥಿಲಿಯಲಿ ಕೊಡು ರಾಘವೇಂದ್ರನ ರಾಜಮುದ್ರಿಕೆಯಾ॥
ಬಳಿಕ ಲಂಕಾಧಿಪನ ಮನದಳ ಬಳವ ತಿಳಿ ಕಾಪೇಯತನ ದ । ಗ್ಗಳಿಕೆಯನು ನೆರೆ
ಬಳಸ ದಿಲ್ಲಿಗೆ ಬೇಗಬಾಯೆಂದ ॥ ೧೫ ॥ ದಿವಸಮೂರಿದೆ ಮೂರು ದಿನದೊಳ । ಗವ
ನಿಜೇಶನ ಚರಣಸರಸಿಜ । ಹವನು ಕಾಣಲಿಬೇಕು ಸುಗ್ರೀವಾಜ್ಞೆಯಿದು ನಮಗೆ ॥
ಹವಣನೀನೇ ಬಲ್ಲೆ ನಾವಿದ । ವಿವರಿಸಲು ನೀನಜ್ಞನೇ ಯೆಂ । ದವಿರಳದ ಹರುಷ
ದಲಿ ಹರಸಿ ಕಳುಹಿದನು ಕಪಿಯ ॥ ೧೬ ॥ ಮಣಿದನಂಘ್ರಿಗೆ ಹನುಮನಾ ದ್ರಾ ।
ಹಿಣಿಯ ಮಿಕ್ಕಿನ ಯೂಥನಾಥಾ । ಗ್ರಣಿಗೆ ಕೈಮುಗಿದೊಲಿದು ಬೀಳ್ಕೊಂಡನು ಸರಾಗ
ದಲಿ ॥ ಗುಣನಿಧಿಯ ರಘುವಂಶ ಚೂಡಾ । ಮಣಿಯ ರಾಕ್ಷಸಕುಲ ವಿಘಾತಕನ ।
ಮಣಿಯ ನೆನೆದಡಿ ಯಿಟ್ಟನುರು ವಿಕ್ರಾಂತ ಹನುಮಂತ ॥ ೧೭ ॥ ಜರುತ ಕಂಡ
ಸಖಂಡಬಲ ನಂ । ಬರವಿಲಂಬಿತ ಮೇಘ ಮಾರ್ಗಾಂ । ತರದ ಶಿರದ ಮಹೇಂದ್ರವ

ಸರ ಮಹಾಮಹೀಧರನ ‖ ಗಿರಿಯಿದಹುದೆಂ ದಂಘ್ರಿಗಳದು । ಸ್ಮರಕೆ ತಪ್ಪಲೆನುತ ವಿಕ್ರಮ । ಭರಿತ ನೈದಿದನಾ ತ್ರಿವಿಕ್ರಮನಂತೆ ಝಡಿತೆಯಲಿ ‖ ೧೮ ‖ ಅಡಿಗೆ ಯೋಜನ ಯೋಜನದ ಮೆ । ಲ್ಲಡಿಗೆ ಬೆಳೆವುತ ಬಂದ ನಿಳೆಕೆಲ । ಕಡೆಗೆ ಯೋಜನಯೋಜನವ ತಗ್ಗಿದುದು ನಿರ್ಗಮಕೆ ‖ ಕಡಲು ಕಂಪಿಸುತಿರ್ದು ದಹಿಪನ । ಹೆಡಕು ಭಾರಿಸುತಿರ್ದ ದದ್ರಿಗ । ಳೊಡೆವುತಿರ್ದುವು ದೆಸೆಗಳೆಂಟರ ಧರಣಿದಾರುಣದ ‖ ೧೯ ‖ ಬಂದು ನಿಂದ ನಾ ಮಹಾದ್ರಿಯ । ಮುಂದೆ ಬಯಚ್ಛೈರವನ ಭಾರಣೆ । ಯಂದದಲಿ ಬಹಳತ ಭಯಂಕರ ರೌದ್ರತೇಜದಲಿ ‖ ಮಂದರಾದ್ರಿಗೆ ಮಿಗಿಲೆನಿಸುವ । ಮಹೇಂದ್ರ ಪರ್ವತ ಕಾಗ ಕಂಡುದು । ವೃಂದವೃಂದಾರಕ ವಧೂಜನ ವನಿಲನಂದನನ ‖ ೨೦ ‖ ಪೀರ ಧೀರೋದ್ಧಾರ ರಾಜಕು । ಮಾರ ಕೇಳ್ ಪರ್ವತಾಗ್ರದ । ಚಾರಣರು ಚತುರೆಯರು ಸಿದ್ಧರು ಮುಗ್ಧೆಯರು ಕಪಿಯ ‖ ಭೈರವಾಡಂಬರಕೆ ಬೆದರಿತು । ದಾರಿದೆಗೆದರು ಸುರಪುರಕೆ ಕೇ । ಳೀರಮಣ ರೊಡಗೂಡೀ ಗಗನದ ಗತಿಯಗಾಡಿಯಲಿ ‖ ೨೧ ‖ ಸರಿದರಾ ಬೆಂಬಳಿಯ ಗಂಧ । ರ್ವರ ವಧೂನಿಕುರಂಬ ಕೇಳೀ । ಸರಸಿಗಳ ನುಳಿ ದೋಡಿತಲ್ಲಿಯ ಕಿನ್ನರೀ ನಿವಹ ‖ ವರಲತಾಂತ ಚಯಾಪಚಯರ । ಪ್ಸರಸಿಯು ರಡಗಿದು ದಖಿಳ ವಿದ್ಯಾ । ಧರಿಯ ರಗಲಕೆ ಹಾಯ್ದುರೀಕ್ಷಿಸಿ ಪವನ ನಂದನನ ‖ ೨೨ ‖ ಗಿರಿಗೆ ಕಾಲಿಕ್ಕಿದರೆ ಕಂಪಿಸಿ । ತೆರಡು ವೈಯ್ಯಾಲಿ ಶೈಲವದ ಕಂ । ಡಿರದೆಹಾಯ್ದುವು ಮುರಿಗೆಡೆದು ಮದಕರಿಗಳಗಲದಲಿ ‖ ಕರಭ ಕಡವಂ ಮಾವು ಕೇಸರಿ । ಶರಭ ಸೈರಿಭ ಹುಲಿ ಕರಡಿ ಹೊ । ವ್ಮರಿಯ ಹಿಂಡೊಡೆನೋಡಿದುವು ದೆಸೆಪೆಸೆಗೆಭೀತಿಯಲಿ ‖ ೨೩ ‖ ಒತ್ತಿ ಕಾಲಿಡಲೊಡನೆ ಗಿರಿ ತಲೆ । ಗೊತ್ತುತಿರ್ದುದು ತೋರ ಮರಗಳು । ಕಿತ್ತುಹಾರುತಲಿರ್ದುದಂಬರ ಮಣಿಮ ನಳಿದಳದು ‖ ನೆತ್ತಿಯುಗ್ರದ ತೋರ ಗುಂಡುರು । ಳುತ್ತಲಿರ್ದುದು ಜಲಧಿಯಡಿ ಮಳ । ಲೆತ್ತುತಿರ್ದುದು ಗುಮ್ಮರಿದು ಗುಡಿಯಿರಿದು ಗುಳ್ಳೆಗಳು‖೨೪‖ ಏರಿದನು ಪರ್ವತವ ನರೆದೆಡೆ । ಗೂರಿ ತವನಿಯೊಳದ್ರಿ ವಾಮನ । ನೇರಲವಿಯ ಮಹಾದ್ರಿ ತಗ್ಗಿದುದಿಲ್ಲ ಪೂರ್ವದಲಿ ‖ ಮೂರು ಲೋಕ ದೊಳೆಣಿಸೆ ಸರಿಯನು । ತೋರಲಪ್ರತಿಹನುಮನನು ತಾ । ಮೀರು ವಗ್ಗದ ಭಟರು ಹುಸಿಗಳು ಕೇಳಿದೈಯೆಂದ‖ ಅಂದಿಳೆಯನೆಳೆವಾ ತ್ರಿವಿಕ್ರಮ । ನಂದಕಿಮ್ಮಡಿಯೆನಲು ಬೆಳೆದನು । ಕಂದಕೇಳ್ ಶಿರದರುಣ ಮಣಿಯಂತಿರ್ದು ದಿನಬಿಂಬ ‖ ಮಂದವಿಸಿ ತಿರುಗಿರ್ದು ತಾರಾ । ವೃಂದ ಪೂಜೆಯ ಪುಷ್ಪಗಳ ಪರಿ । ಯಿಂದಲಿರ್ದುದು ಹೇಳಲೇನದ ಪವನ ನಂದನನ ‖ ೨೬ ‖ ಚಾಲವಿರ್ದುದು ವಿಮಲ ಸುಮನೋ । ಶೈಲ ವಳೆಯದ ಲವನಿಗಿಳಿವ ಸು । ರಾಲಯದ ಬಾಂದೊರೆಯ ತೆರೆಯ ವೊಲಂಜನಾ ಸುತನ ‖ ಲೋಲ ಕುಂಡಲ ಚಂದ್ರಸೂರ್ಯರ । ಸೋಲಿಸುತ ಲಿರ್ದುದ ಬಳಿಕೇ । ವೇಳೆನು ಬಲಿದಂಘ್ರಿಯನು ಭುಜಹೊಯ್ದು ಬೊಬ್ಬಿರಿದ ‖ ೨೭ ‖ ಮೊದಲಬೊಬ್ಬೆಗೆ ಬಿಸಜಸಂಭವ । ಬೆದರಿಬಿದ್ದನು ಹನುಮನೆರಡನೆ । ಉದಿತ ಸಿಂಹಧ್ವನಿಗೆ ಶಿವ ಬಿಸುಟನು ಗಜಾಜಿನವ ‖ ಮುಪದ ಮೂರನೆ ಯಬ್ಬರಕೆ ಕೆದ । ರಿದುವು ಮೇಲಣ ಜಗವ ಜೋಡಿಗ । ಳದುಭುತವಿದೇನೆಂದು ನೆರೆದುದು ಸಕಲಸುರ ಕಟಕ ‖ ೨೮ ‖ ಕಂಡನೀ ಪವಮಾನಸುತ ದೋ । ರ್ದಂಡ ಬಲ ಬಲಸ್ಮೈರಿಪು ವೇ । ತಂಡ ಕಂಠೀರವನು ರಕ್ಕಸರಾಯ ಪುರವರವ ‖ ಕಂಡಿದೈಸಲೆ ಮನ

ದೊಳಾವ್ ಕೈ । ಕೊಂಡ ಕೆಲಸಕಿದಲ್ಪವೆನು ತರಿ । ಗಂಡ ಭೈರವಚುಬು ಕಿರಿದು ಚಪ್ಪರಿಸಿದನು ಭುಜವ ॥ ೨೯ ॥ ದಾಟುವೆನು ಕಡಲೇಳ ನವನಿಯ । ಸೀಂಟಿ ಸಪ್ತರ ಸಾತಳದ ತುದಿ । ಗೋಂಟಿ ಗಿಳಿವೆನು ಮೇಣು ಕಮಲಭವಾಂಡ ಮಂಡಲದ ॥ ಕೋಟ ರವ ಬಿಗಿದಡರುವೆನು ಕಾ । ಲಾಕ್ಷಕಿದುವೇ ಲಕ್ಷ್ಯವೆಂದಾ । ಸ್ಫೋಟಣೆಯಲೌಡಗಿದು ಹಲುವೊರೆ ದೊಯ್ದನವಯುವವ ॥ ೩೦ ॥ ಅಡಿಯಿಡಲು ಮದಗಜದ ಕಾಲುಗ । ಳಡಿಯ ಕುಂಬಳದಂತೆ ರಕ್ಕಸ । ಗಡಣವಜಿಗಿಜಿಯಾಗದಿರ ದವನಿಜೆಯ ಕಾಂಬೆಣಿಕೆ ॥ ಕಡೆಗೆ ನಿಲಲರಿಯದು ನಿರರ್ಥಕೆ । ತೊಡಕ ಬಹುದೆ ನಗಜ ತನುಜ ನ ಡಿ । ದಡಕವೇ ನಿಜ ರಾಜಕಾರ್ಯಕೆ ರಾಜಪಥವೆಂದ ॥ ೩೧ ॥ ಎನುತ ಮುನ್ನಿನ ತನ್ನ ನಿಜರೂಪ । ವನ ನವನು ಕೈಕೊಂಡು ಕವ.ಲಾ । ಸನ ಸುರೇಂದ್ರಾದ್ಯಖಿಳ ಸುರಸಂದಣಿಗೆ ಕೈಮುಗಿದು ॥ ಮನದೊಳಧಿರಾಜೇಂದ್ರ ಚಂದ್ರನ । ವನರುಹಾಂಘ್ರಿಯ ನೆನೆದು ತಂದೆಗೆ । ವಿನಮಿತಾ ನನನಾಗಿ ಗಮನೋದ್ಯೋಗ ಪರನಾದ ॥ ೩೨ ॥ ಕೈಗಳನು ತತ್ಪರ್ವತಾಗ್ರದ । ಮೇಲೆ ಬಲಿದಡಿಯೂರಿ ತನುವನು । ತೂಗಲಿಳೆನಿಳೆಮುಂಚದವೊಲೆಸೆದುದು ನೀಹಾರದಲಿ ॥ ಸೂಗುರಿಗೆ ತುದಿವಾಲಪ ಮರರ । ಕೂಗುಗಳ ಕಹಳೆಗಳ ಹರೆಗಳ ತಾಗುಗಳ ತನಿ ರಭಸದಲಿ ಹಾರಿದನು ಹನುಮಂತ ॥ ೩೩ ॥ ಅದ್ದುದ ತಳಕೆ ಗಿರಿ ಸಮೀರಜ । ನೊದ್ದು ಹಾರಿದ ಪದಹತಿಗೆ ಸಿಡಿ । ದೆದ್ದು ಜಲಧಿಯ ಜಲದೊಳುರೆ ಮುಳುಗಿದುದು ಸುರಕಟಕ॥ ಒದ್ದುಕೊಂಡುವು ಧರಣಿಯನು ಹೊ । ತ್ತಿರ್ದ ದಂತಿಗಳಹಿಯ ಕೂರುವು । ರುದ್ದುರುಟುತನ ವಲ್ಲಿಯೇನಾಯ್ತರಿಯೆ ನಾನೆಂದ ॥ ೩೪ ॥ ಸುಗಿದುಗಿದ ತತ್ಪರ್ವತದ ರ.ಚಿ । ಚಿಗಿದು ಹಾಯ್ದುವು ಬಳಿಯುಲಬುಧಿಯ । ನೆಗಳುಗಳು ಮೀನುಗಳು ಕೆದರಿದುದಖಿಳ ದೆಸೆದೆಸೆಗೆ ॥ ಬೆಗಡುಗೊಂಡುದು ಸುರರ ಬಲವಗಿ । ದುಗಿದು ಪೂಮಳೆಗರೆದ ವನಿಲನ । ಮಗನ ಮಹಿಮೆಗೆ ಮದನಹರ ನಲ್ಲಾಡಿದನು ಶಿರವ ॥ ೩೫ ॥ ಹರಸಿದನು ಚತುರಾಸ್ಯ ನಮರರ । ತರುಣಿಯರು ಸೂಸಿದರು ಆಶೆಯ । ಸುರಮುನಿಗಳಾ ಘೋಷಿಸಿದ ರುಬ್ಬಿದರು ದಿಗಧಿಪರು ॥ ತೊರವೆಯಧಿಪತಿ ರಾಯ ನರಕೇ । ಸರಿಯ ಲೀಲಾಚರಿತ ವಿಪಲಾ । ಹೆರಯಿಸುತ ನಾರದನು ನಲಿವಾಡಿದನು ಗಗನದಲಿ ॥ ॥ ೩೬ ॥

ಹನ್ನೆರಡನೆಯ ಸಂಧಿ ಸಮಾಪ್ತಂ,



ಸುಂದರಕಾಂಡ.

ಮೊದಲನೆಯ ಸಂಧಿ.

ಸೂಚನೆ|| ಸಾಗರವ ನುತ್ತರಿಸಿದನು ಭವ | ಸಾಗರೋತ್ತಾರಕನು ಕರುಣಾ | ಸಾಗ
ರನ ಸಗರಾನ್ವಯನ ಕರುಣದಲಿ ಕಲಿಹನುಮ ||

ಪದ್ಯ|| ಸುರಪನಾ ಪವನಜನ ಪರಿಯನು | ಪರಿಕಿಸಲು ನಿರ್ಮಿಸಿದ ನಾಕ್ಷಣ |
ಸುರಸೆಯನು ವಿರಸೆಯನು ಮಲೆವ ಮಹಾತಿಭಟ ಬಲರ || ಮರುತಜನ ಸರಣಿಯನು
ತಡೆಯೋ | ಗಿರದೆ ನೀನೆಂದವಳ ಕಳುಹಲು | ಬೆದರಿಸಿದಳು ಭೈರವನ ತಾಯುವೊ
ಲಂಜನಾ ಸುತನ ||೧|| ಎಲ್ಲಿಗೆಲವೋ ಹೋಗದಿರು ಕಪಿ | ನಿಲ್ಲು ಬಂದವಳಾವ
ಳೆಂಬುದ | ಬಲ್ಲವಿಕೆಯಲಿ ನೋಡು ಭಕ್ಷಣೆಗಾದೆ ನೀನೆನಗೆ || ನಿಲ್ಲೆನುತ ಹದನಿಕ್ಕಿ
ಹೆಡಕನು ಘಲ್ಲಿಸಲು ಹೊರಕೈಯ ಲಾಕೆಯ | ಹಲ್ಲುದರಹೊಯ್ದೊಡದ ಮುಷ್ಟಿಯ
ಲೆರಗಿವನು ಸತಿಯ ||೨|| ಕೋಟಿ ಸಿಡಿಲಬ್ಬರಣೆಯಲಿ ಶತ | ಕೋಟಿ ಆಯನ
ಸುಂಗಲಾಸ್ಯದ | ಕೋಟರವ ನಗಲಿಸಿದಳದ ಕಂಡಂಜನಾಸೂನು || ದಾಟಿ ಮರು
ಮುಷ್ಟಿಯಲಿ ಗಗನಕೆ | ದೂಟಲೆರಗಿದನವಳ ಲೋಕುಳಿ | ದೂಟವೆನ ಲರುಣಾಂಬು
ವಿನಲುರೆನೆನದು ದಮರಗಣ ||೩|| ಕಾಳರಕ್ಕಸಿ ತಿರುಗಿ ಹನುಮನ | ಮೇಲೆ ಹೂಣಿಸೆ
ಹನುಮನಾಕೆಯ ಕಾಲೆರಡ ಹಿಡಿದಭ್ರಮಂಡಲ ಕಿಟ್ಟಿ ನಬ್ಬರಿಸಿ || ಕೇಳಿದೈ ನೃಪ
ಸೂನು ಸುಮನೋ | ಪಾಲ ನಗರದ ಸೊಗಸಿನಗ್ಗದ | ಸೂಳೆಗೇರಿಯ ನಡುವೆ
ಬಿದ್ದಳು ಬೆದರೆ ಪೌರಜನ ||೪|| ಹಾರವಿಸಿದರು ಹನುಮನುಬ್ಬಟೆ | ಗಾರುಸರಿ
ಯಿಲ್ಲೆಂದು ನಭದ ಸ | ರೋರುಹಾಸನ ಮುಖ್ಯದಿವಿಜರು ದೇವ ಮುನಿ ನಿಕರ | ಸೇರು
ವುದು ನಮಗಿನ್ನು ಸುಖ ಸಂ | ಪೂರಣದ ಫಲ ವೆನುತ ಸುಮನೋ | ಭೇರಿಗಳ
ಹೊಯ್ಸಿದರು ಸುರಪುರಗಳಲಿ ಸುರನಿಕರ ||೫|| ಇನ್ನಸಾಧ್ಯ ವದಾವುದೈ ಸಂ | ಪನ್ನ
ಶೌರ್ಯಂಗೆಂದು ಸರಿದನು | ತನ್ನನಗರಕೆ ಶಕ್ರ ಹರಿದದು ಸಕಲದೇವಗಣ || ಜನ್ಮ
ಸೂರನ ನುಡಿಯ ಹೊಗಳಿಕೆ | ಕರ್ಣದಲಿ ಕೇಳಿಸಿ ಕಪರ್ದಿಯ | ಮನ್ನಣೆಯ ಮೈದು
ನನು ಮೈದೋರಿದನು ಜಲಧಿಯಲಿ ||೬|| ಈತನೀಗನಿಲಜನಲಾ ಪುರು | ಹೂತ ಹೊಗ
ಳಿತ ಸುಭಟಸೀತನ | ತಾತನುರೆ ಸಲಹಿದ ಶಶಿರವಿದೀಗಲಾಯೆನುತ || ವಾತಸರಣಿಯ

ಸರಣಿಯಲಿ ಬಹ । ವಾತಜನನಿದಿರ್ಗೊಂಬ ಸೌರಂ । ಭಾತಿಶಯದಲಿ ಬೆಳೆದನಂಬರ
ಕಾಗಿ ವೈನಾಕ ॥೭॥ ಮತ್ತಿದೇನಂಬುಧಿಯೊಳಗೆ ತಲೆ । ಯೆತ್ತುತಿದೆ ಬಲುಬೆಟ್ಟವಿದು
ತಾ । ಕೃತ್ರಿಮವೊ ಸಹಜವೊ ಯೆನುತಲೆ ಹಿಡಿಯೆ ಸಂಶಯವ ॥ ಉತ್ತಮಾಂಗಸ್ಥಿತಿ
ಯಲಿದು ಗಿರಿ । ಜೋತ್ತಮನ ನಂದನನು ತದ್ಗಿರಿ । ಯುತ್ತಮಾಂಗದಮೇಲೆ ನಿಜ
ರೂಪಿಂದ ರಂಜಿಸಿದ ॥ ೮ ॥ ಹನುಮ ಕೇಳೊಡಹುಟ್ಟಿದನು ನೀ । ನೆನಗೆ ನಿನ್ನಯ ತಂದೆ
ಯಿಂದೀ । ತನು ಪುನರ್ಭವವಾಯ್ತು ಸುರಪನ ಪೂರ್ವವೈರದಲಿ ॥ ಘನಮನೋವೇಗ
ದಲಿ ತಂದೀ । ವನಧಿಯಲಿ ನೂಕಿದನು ನಿನ್ನಯ । ಜನಕನದರಿಂದೆನಗೆ ಸಖನಾದನು
ಕಣಾಯೆಂದ॥೯॥ ವಾಯುಸುತಕೇಳ್ ಲೋಕದಲಿ ವಿ । ಖ್ಯಾತರೈವರು ತಂದೆಗಳು ಪಡೆ
ದಾತನೊಬ್ಬನು ಸ್ವಾಮಿಯೊಬ್ಬನು ಹೋದಜೀವವನು ॥ ಆತುಕೊಂಡವನೊಬ್ಬ ರಕ್ಷಿಸಿ
ದಾತನೊಬ್ಬನು ಗುರುವದೊಬ್ಬನು । ಮಾತದೇನುಳಿತದರಿ ನೆನಗಗ್ರಜನು ನೀನೆಂದ ॥
ಜನನಿ ಮೇನಕಿಯೊಬ್ಬಳಿನಗೆರ । ಡನೆಯಲಂಜನೆಯೊಬ್ಬಳಿಬ್ಬರು । ಜನಕರದ್ರಿ
ಕುಲೇಂದ್ರ ಮಾರುತರಿದು ನಿಧಾನ ಕಣ ॥ ಹನುಮ ಕೇಳಾತಿಥ್ಯಪೂಜೆಯ । ನನುಕರಿಸಿ
ರಾತ್ರಿಯನು ಕಳೆದಿನ । ಜನನದಲಿ ಜಾನಕಿಯ ಕಾಣಲು ಬಿಜಯಮಾಡೆಂದ ॥೧೧॥
ಇವೆ ಸುಧಾರಸ ಪೂರಣದಫಲ । ನಿವಹ ವನ್ಯ ತೋಪಮ ಹಿಮೋದಕ । ವಿವೆ ಸುಸೌರಭ
ತಳಿತ ಕುಸುಮೋತ್ಕರ ತನುಚ್ಛಾಯೆ ॥ ಇವೆ ಮದೀಯ ಪ್ರಿಯತರೋಕ್ತಿಯ । ವವ
ಧರಿಸಿ ನಾಳಿನಲಿ ನಿಮಿಸಂ । ಭವೆಯ ಸಂದರುಶನಕೆ ತೆರಳುವುದೆಂದು ಕೈಮುಗಿದ ॥೧೨॥
ಈತನನಿತರ ಮೇಲೆ ಗುಣ ಸಂ । ಪ್ರೀತಿ ವಚನದ ಲಂಬಿಕಾ ಸಹ । ಜಾತನನು ಸಹಜಾತ
ಸಾಂದ್ರಸ್ನೇಹಭಾವದಲಿ ॥ ಮಾತರೀಶಂಗದ್ರಿರಾಜಂ । ಗೇತರಲಿ ಪಲ್ಲಟವು ಕೇಳಿಂ ।
ದಾತನನು ಮನ್ನಿಸಿದನು ಚಿತ್ತದಲಂಜನಾಸೂನು ॥೧೩॥ ಬರತ ನಿನ್ನುಪಚರಿತಪೂಜಿತ ।
ಪರಮಪೂಜೆಯಕೊಂಡು ಬಳಿಕೆ । ಮ್ಮರಸನಂಘ್ರಿಯ ಕಾಬೆ ನಿನಿತಕೆ ಚಿಂತೆಬೇಡೆಂದು ॥
ಗಿರಿಜೆಯನುಜನ ಬೀಳುಕೊಂಡು । ಪ್ಪರಿಸಿದನು ಗಗನಕೆ ಗರುಡನ । ಗರುವಿಕೆಯ
ಗಾಢಣೆಯ ಗತಿಯಲಿ ವೀರಹನುಮಂತ ॥ ೧೫ ॥ ತರುಣಕೇಳಲ್ಲಿಂದ ಬಹ ಬಲು । ಖರ
ವಸಿಗನನು ಕಂಡಳಾ ಸಾ । ಗರದ ತೀರದ ತರಣಿವೈರಿಯ ತಾಯಿ ತವಕದಲಿ ॥ ಸುರ
ನರೋರಗ ಯಕ್ಷ ರಾಕ್ಷಸ । ಗರುಡ ಗಂಧರ್ವಾದಿಗಳು ಸಂ । ಚರಿಸ ಬಾರದಿದಾವನೋ
ಯೆನುತಡರಿದಳು ನಭವ ॥ ೧೬ ॥ ಅಹಿವಿರೋಧಿಯ ಗಾಢಗತಿಯಲಿ । ಬಹಬಲಾಗ್ರೇ
ಶ್ವರನ ಛಾಯಾ । ಗ್ರಾಹಿ ಘನಛಾಯಾಪತಿಯನಾಕುವ ತಮೋನಿಧಿಯ ॥ ಬಹಳಿತೆಯ
ಭಣಿತೆಯಲಿ ಮಾರಂ । ತ ಹಿಮಕರಕುಲಚರನ ಘನವಿ । ಗ್ರಹಕೆ ಕಬಲಿಕ್ಕಿದಳು ಗಗ
ನದ ತರಣಿಕಳವಳಿಕೆ ॥೧೭॥ ಅವಳ ಬಗೆಯದೆ ಹನುಮ ಮೇಲಣ । ಪವನಪಥಕುಪ್ಪರಿಸೆ
ನಸುನಗು । ತವಳು ಹಿಡಿದಳು ನೆಳಲನಗ್ಗದ ವೀರಮಾರುತಿಯ ॥ ಅವಳ ಬಲುಹಿಸ್ನೆಂ
ತುಟೋ ಶಿವ । ಶಿವ ಮಹಾದೇವಾತನಿದ್ದನು । ಸವಡಿಗೈಯ್ಯಲಿ ಸರಿವಸೇಣಿನ ನಭದ
ಪಟವಂತೆ ॥ ೧೮ ॥ ಉಗಿದಳೀತನ ನೆಳಲನವಳೊಡ । ನಗಲಿಸಿದ ನಾವನವ ನಸಿಲನ ।
ಮಗನ ನುಂಗಲು ವ್ಯಾತ್ತ್ಯವಿನಪ್ರೊಲು ನೂರು ಯೋಜನವ ॥ ಬಗೆಯದೀತನು ಬೆಳೆದ
ನಾತ್ಮ । ದ್ವಿಗುಣದಲಿ ತತ್ಪರಿಸರದ ಸಂ । ಖ್ಯೆಗಳ ಶತಸಾವಿರವಲಂಬರ ವಳೆಯದಗಲ
ದಲಿ ॥೧೯॥ ಸಿಕ್ಕುವುದು ನೃಪಕಾರ್ಯ ನಾವೀ । ರಕ್ಕಸಿಯ ಕೂಡಾಡಿದರೆ ಕೈ । ಸಿಕ್ಕಲಾ

ಖುದು ಕೀರ್ತಿ ತನಗೆನುತವಳ ಬಾಯೊಳಗೆ ‖ ಹೊಕ್ಕನಪವನನಿತರಲಿ ಬಲ್ಲಿದ । ಸಿಕ್ಕಿದನು ತನಗೆಂದು ಹರುಷದ । ಹೆಕ್ಕಳದ ಲನಿಲಜನ ನುಂಗಿದಳಸುರೆ ಕೇಳೆಂದ ‖೧೯‖ ನುಂಗಲೊಡನಾಕ್ಷಣವಿ ಬೆಳೆವನ । ಭಂಗಬಲ ಹನುಮಂತನಾಕೆಯ । ಕಂಗಳುರೆ ತಿರುಗಿದುವು ಕಳವಳಿಸಿದುವು ಕರಣಚಯ ‖ ಉಂಗುರದ ಮಹಿಮೆಯಲಿ ಹರಣವು । ಹಿಂಗದನಿಲಜನುಳಿದನಲ್ಲದೆ । ಸುಂಗದುಳಿದವರಿಲ್ಲ ದನುಜಾನುರ ಕದಂಬದಲಿ ‖೨೦‖ ಬಲ್ಲದರಿ ಪಕ್ಕದಲಿ ತತ್ತಿಯ । ನಳಿದು ಹೊರವಡುವಂತೆ ವಜ್ರೋ । ತ್ಪಲದ ಕಂಬವನುಗಿದ ನಂದಿನ ಮನುಜ ಹರಿಯಂತೆ ‖ ನೆಂನಿಳಿಲುನಿಕುಲೆಂದು ಬದಿಯಲು । ಕಳಚಿ ಸನುಸೀಳಾಗಿ ಸೀಳಿದು । ಲಲಿ ಲಲಾನು ಲಲಾಟ ನ್ಯೆದೋರಿದನು ಝುಡಿತೆಯಲಿ‖೨೧‖ ಆಲಿ ಜೊಬ್ಬಿರಿದಘಟಕಪಿಕುಲ । ವೀರನಾ ಸಿಂಹಿಕೆಯ ಸೀಳ್ದುದ । ರೀರದೊಳಗೊಂದೆಡದಭಾಗದ ಹೊಳೆವ ಶಶಿಕರನ‖ ಪೂರಿಗಿಟ್ಟನು ಮಿಕ್ಕ ಹೋಳನು । ದಾರಬಲ ಬಲಿಮುಖಕುಲೇಂದ್ರಕು । ಮಾರ ಜಾಂಬವದೇವ ನಿದ್ದೆಡೆಗಿಟ್ಟು ಬೊಬ್ಬಿರಿದ ‖ ೨೨ ‖ ಬೆಗಡುಗೊಂಡುದು ಲಂಕೆ ಭೀತಿಯ । ಲಗಿದು ನಲಿದಾಡಿದುದು ಶಾಖಾ । ಮೃಗಕಟಕ ಹನುಮಂತದೇವನ ಕೆಲಸವಿದುಯೆನುತ ‖ ನಗರದರಿ ಕಟಕದಲಿ ಕೆಂಪಿನ । ಮುಗಿಲ ಕಡಿಬಿದ್ದಂತೆ ರಕುತದೆ। ಜೆಗಿಯ ಜೋರಿನ ಲೆಸೆದುದಾ ಹೋಳುಗಳು ಸಿಂಹಿಕೆಯ ‖೨೩‖ ರಕ್ಕಸಿಯ ಕೊಂದತುಳ ಹರುಷದ । ಹೆಕ್ಕಳದಲಂಜನೆಯಸುತ ಬೊ । ಬ್ಬಿಕ್ಕಿ ಬಾಹಪ್ಪಳಿಸಿ ಪುಟನೆಗೆದಂಬರ ಸ್ಥಳಕೆ ‖ ಉಕ್ಕುವತಿಶಯ ವೀರರಸದೊಳು । ಸೊಕ್ಕಿನೊಳು ಲಂಕಾಪುರವ ನೆಡ । ಕಿಕ್ಕಿ ಹಾರಿದನತ್ತ ಮೇಲೇಳ್ನೂರು ಯೋಜನವ ‖ ೨೪ ‖ ಕಂಡನಲ್ಲಿ ಮಹಾಸಮುದ್ರವ । ಕಂಡುದಿಲ್ಲರಿಪುರವ ನಾಕ್ಷಣ । ಕೊಂಡನಲ್ಲಿ ವಿಚಾರಿಸದ ವಿಜ್ಞಾನವಿಶೇಷಣದ ‖ ದಂಡಿ ಲೇಸಾಯ್ತೆನುತ ಧರಣೀ । ಮಂಡಲಕ್ಕವತಂಸುತಿದಿರಲಿ । ಕಂಡನಾ ತೃಣಬಿಂದುವನು ಸಿಂಧುವಿನ ತೀರದಲಿ ‖೨೫‖ ಸಾರಿದನು ಸೈವಳಿಯ ನರಿದು । ಪಾರಿಕಾಂಕ್ಷಿಪ್ರವರನನು ನಯ । ಸಾರದಲಿ ಬೆಸಗೊಂಡನೆಲೆ ಮುನಿನಾಥ ರಾವಣನ ‖ ಪೂರಬಲ್ಲೈ ಬಲ್ಲಡೆಮಗುಪ । ಕಾರವಹುದು ನಿರೂಪಿಸುವುದೆನ । ಲಾಖಪೀಶ್ವರ ನಾನನವ ನಸುದಿರುಹ ದೀಕ್ಷಿಸಿದ ‖೨೬‖ ಏರಿಳಿಯನೋಡಿದನು ಹೊಸಹೊಗ । ರೇರಿಕೆಯ ಹೊದರೆದ್ದ ದರ್ಪದ। ತೋರಿಕೆಯ ತನಿರಸವ ನೊಗವನು ಮೂರುಬಾರಿಯಲಿ ‖ ಆರುನೀ ನಿನಗೇಕೆ ರಕ್ಕಸ । ರೂರ ಚಿಂತೆ ತದೀಯ ಪುರದೊಳ । ಗಾರು ನಂಟರು ನಿನಗೆ ಹೇಳದ ಕೇಳ್ವೆವಾವೆಂದ ‖ ಮುನಿಪ ಕೇಳಾದರೆ ಕಕುಸ್ಥಜ । ವನಿತೆ ಯೆಮ್ಮಾಳಿದನ ವಲ್ಲಭೆ । ವನದೊಳಗೆ ಕದ್ದೊಯ್ದನಾಪತಿಯನು ದಶಗ್ರೀವ ‖ ಮನುಕುಲೇಶ್ವರ ನನ್ನನಾ ಭಾ । ಮಿನಿಯ ನೋಡಲು ಕಳುಹಲರಿಪುರ । ವೆನಗೆ ಕಾಣದಂತಾಯ್ತು ಬಲ್ಲರೆ ಹೇಳಿ ನೀವೆಂದ ‖ ೨೭ ‖ ನೀನು ಕೋಡಗ ಹೇಡಿ ಮೇಲೆ ದ । ಶಾನನನು ತ್ರೈಲೋಕ್ಯವೀರ ನಿ । ದಾನವಾತನ ನಗರವನು ಹೊಗಲರಿದು ಪುರಹರಗೆ ‖ ಏನು ಚಿತ್ತಕೆ ಬಾರದಿದೆ ಕಪಿ । ನೀನು ನುಡಿವೀಮಾತನರಿಸು । ಮ್ಮಾನದಲಿ ಕಟಕವನು ಹೊಕ್ಕಂತಹುದಲೇಯೆಂದ ‖೨೯‖ ಚಿಂತೆ ನಿಮಗೇಕದರ ಕೃತ ವಿ । ಕ್ರಾಂತರರಿವರು ನಮ್ಮ ಸಾಹಸ । ದಂತರವನದು ಹೋಗಲಮರ ವಿರೋಧಿಪುರವಿನ್ನು ‖ ಎಂತು ದೂರವದಾವದೆಸೆಯೆಂ । ಬಂತುಟನು ಹೇಳಿದರೆ ಮನಬಂ । ದಂತೆ ಮಾಡುವೆನೆಂದನಾ ಮುನಿಪತಿಗೆ ಕಲಿಹನುಮ ‖ ೩೦ ‖ ಮಗನೆ ಕೇಳಾದರೆ

ವಯೋಽನ್ವ | ದ್ವಿಗಳ ದಿನ ತಪ್ಪಿದುವು ತನುವಿನ | ಬಿಗುಹುಬಿಟ್ಟುದು ಬೀತುದಗ್ಗದ ಸತ್ವ ಸೆರೆಧರೆಯ || ಹಗರಣವು ನಮಗಾಯ್ತು ನಮ್ಮನು | ನೆಗಹಿ ತೋರಿದಡಮರ ವೈರಿಯ | ನಗರವನು ತೋರುಪೆನೆನುತ ತೃಣಬಿಂದುಮುನಿ ನುಡಿದ || ೩೧ || ಅಹುದು ಮತ್ತೇನೆನುತಲಾ ನಿಜ | ವಹ ನಿತಾಂತ ಬಲಾಢ್ಯ ನಾನಿ | ಸ್ಪೃಹಯತೀಂದ್ರನ ನೆತ್ತಿ ಲಿಕ್ಕಿದ ನುಭಯ ಕರತಳವ || ಮಹಿಸುತಾಸುತ ಕೇಳು ಮುನಿ ವಿ | ಗ್ರಹವ ಭಾರವಡೆಂತುಟೊ ನೆಲ | ನಹಿವರನ ಸಿಬ್ಬೆಗಳಿಗಗಲದು ನೆಗಹಿದನು ಹನುಮ || ೩೨ || ಮುನಿಪ ನಿಕ್ಕಿದ ತಪದ ಪದ್ಮಾ | ಸನದ ಪೃಥಿವಿಯ ಸಂಘಟನ ಸಂ | ಜನಿಸದಿರೆ ಸಂವರಿಸಿ ಕೊಂಡು ಸವಿಸ್ಮಯಸುತ ಮುನಿಯ || ತನುವ ಕಕ್ಕೆಯೊಳೌಕಿ ಮೋಹಕಾ | ಲಿನಲಿ ಧರಣಿಯನೊತ್ತು ತೆತ್ತಲು | ವನಜಸಂಭೂತಾಂಡ ಬಿಡದೊಲದಾಡಿದೆಡಬಲಕೆ || ೩೩ || ಹೊರಗೆ ನಾರರೊಳಹಿಪ ಕೂರುಮ | ರಯುವರೀ ಲೋಕದಲಿ ಲೋಕಮೊ | ಳಾರುವ ನವರಿಮ್ಮಡಿಗೆ ಪವನಕ ಮಾನಿದು ಸಿದ್ಧ || ಮರೆಯ ಮಾತೇನನಿಲಬಂಧದ | ನಿರಿಸನಲಿ ನೀರೇಜಜಾಂಡವು | ತುರುಗಿಹವು ತತ್ಸೂನುವಿಂಗೆ ಯಸಾಧ್ಯವೇನೆಂದ || ೩೪ || ಎತ್ತಿದನು ನಭಕಾಗಿ ಮುನಿವಂ | ಶೋತ್ತಮನು ಸಾಕೆನಲು ಮುನಿಪತಿ | ಚಿತ್ರದಲಿ ಹಾರೈಸಿ ಹರಸಿದನಂಜನಾಸುತನ || ಎತ್ತಲರಿಯವೆ ಕುಂಡಲವನ ಸು | ರೋತ್ತಮನು ತೆಕ್ಕಿದನು ಪೂರ್ವದ | ಲೆತ್ತಿದನು ಕಪಿಮಂಡಲವ ಸಹಿತೆನ್ನ ನೀಗೆಂದ || ೩೫ || ಹನುಮ ಮೆಚ್ಚಿದೆ ನಿಳುಹು ನಿನ್ನಯ | ಮನದ ಬಗೆ ಹಸನಾಗಲರಿದೆನು | ವನಜನಾಭನ ಲೀಲೆಯಲಿ ಸುಖಿಯಾಗು ನೀನೆಂದ || ಮುನಿವರನು ಕೊಂಡಾಡಿ ದರ್ಭೆಯ | ಕೊನೆಯಲಾತನ ನೆಗಹಿ ಕಂಡಾ | ಧನಪ ದಿಗ್ಭಾಗದಲಿ ಧನದಾನುಜನ ಪುರವರವ || ೩೬ || ಕಂಡೆನೆನುತಲ್ಲಿಂದ ಧ್ರುವನ | ಮಂಡಲಕೆ ಪುಟನೆಗೆದನಾ ಕರ | ದಂಡಭಾಂಡದ ಬಿಂಬ ತಳಕೆಳಕಾಗೆ ತಾರಕಿಯ || ತಂಡಗಳು ತನಿಗೆದರೆ ಬಂದನ | ಖಂಡಬಲ ನಿನಶಶಿಯ ರುಚಿಯ ಕ | ರಂಡವೆನಿಪ ನಿಶಾಚರೇಂದ್ರ ರಾಜಪುರವರಕೆ || ೩೭ || ಪುರವ ಕಾಣುತ ಕಾಯವನು ಸಂ | ಹರಿಸಿಕೊಂಡು ಸವಿಸ್ಮಯಸುತ ನಾ | ಸುರಭಟಾವಳಿ ಯರಿಯದಂತಿರೆ ತತ್ಪುರಾಂತಿಕದ || ಸುರಪನುದ್ಯಾನದ ಸಘಾಡಿಕೆ | ಸರಿಯೆನಿಪ ನಂದನದ ಮಧ್ಯದ | ಸುರತರ ವಿನಲಿ ನಿಂದಿವನು ಲಾಘವದ ಗಮನದಲಿ || ೩೮ || ಬೀರುತಿರ್ದುವು ನವರಸದ ಮದ | ವೇರಿ ಪೆಳೆಕೋಗಿಲೆಗಳೊಳು ಕುಡಿ | ಮೋರುತಿರ್ದುವು ರಾಜಕೀರ ಮಯೂರ ನರ್ತನದ || ತೋರುತಿರ್ದುವು ತುಂಬಿಗಳು ಮೊರೆ | ದೇರುತಿರ್ದುವು ಕೋಗಿಲೆ ಮದ | ವೇರುತಿರ್ದುವು ಮದಮರಾಳ ಕ್ರೌಂಚ ಬಕನಿಕರ || ೩೯ || ಸುಳಿವುತಿರ್ದುವು ಮಂದಮಾರುತ | ನೆಳಲತಾವಳಿಗಳಲಿ ಕೃತಕಾ | ಚಲವ ಚಮರೀಮೃಗ ವಿತಾನ ವಿಹಾರಮಾರ್ಗದಲಿ || ನಲಿವುತಿರ್ದುವು ಗೀತರಸ ಸ | ಮ್ಮಿಳಿತ ಸೌರಂಭದಲಿ ಕಿನ್ನರ | ಲಲನೆಯರು ಲಳಿಯೇರುತಿರ್ದರು ಪಾಂಥ ಗೃಹಗಳಲಿ || ೪೦ || ಪರಿಮಳದ ಪೂಗೊಂಚಲಿನ ಕೆಂ | ಪೊಗೆದ ಕಿಸಲಯವಲ್ಲರಿಯ ಬಂ | ಧುರದ ಬಹಳಿತ ಗಂಧಮಾರುತ ಮುಖ್ಯ ಭೂಜಗಳ || ಭರಿತ ಫಲಭರ ದುಬ್ಬುಗೊಬ್ಬಿನ | ಪುರವರೋದ್ಯಾನವನು ತೊರವೆಯ | ನರಹರಿಯ ನಿಜದಾಸ ಕೊಂಡಾಡಿದನು ಮನದಣಿಯೆ || || ೪೧ ||

ಮೊದಲನೆಯ ಸಂಧಿ ಸಮಾಪ್ತಂ.

ಎರಡನೆಯ ಸಂಧಿ.

ಸೂಚನೆ॥ ರಾಮ ವೈರಿಭಟ ಸಾಹಸ । ರಾಯ ಭೈರವ ಸಹಿತ ರಕ್ಕಸ । ರಾಯ
ನಗರದೊಳರಸಿದನು ನಿಮಿರಾಜ ನಂದನನು ॥

ಪದ್ಯ॥ ವಾರಿಜಪ್ರಿಯಕುಲದ ರಾಜಕು । ಮಾರಕೇಳ್ ತತ್ಸಮಯದಲಿ ರವಿ ।
ಜಾರಿದನು ಸಾಗರವ ನಪರಾಹ್ಣದಲಿ ಪಶ್ಚಿಮವ ॥ ತೀರಿತುತ್ಸಹ ಕಮಲಿನಿಗೆ ಕೈ ।
ಸಾರಿತುತ್ಸಹ ಕುಮುದಿನಿಗೆ ದಿಗು । ಧಾರುಣಿಯೊಳನುರಾಗರಸ ಪಸದುದು ನಿಮಿಷ
ದಲಿ ॥೧॥ ಅಂಡಲೆಯ ಬಲುನಿದ್ರೆ ನಳಿನಭ । ವಾಂಡ ಭವನದ ತಿಮಿರ ರಕ್ಕಸಿ । ಚಂಡ
ಕರದೀಪವನು ತೊಲಗಿಸಿ ಮಣಿಯಮಂಚದಲಿ ॥ ಮಂಡಿಸಿದಳೆಸೆತಗಡಗತ್ತಲೆ । ಚಂಡಿ
ಸಿತು ತತ್ಸಮಯದಲಿ ಕೋ । ದಂಡ ದೀಕ್ಷಾಚಾರ್ಯಚರಸಿದು ಸಮಯತನಗೆಂದ ॥೨॥
ಮುದದಿ ನಾತ್ಕೋಮ್ರೀವಯದ ಶಕುನವ । ತುದಿವೆರಳನಾರ್ರೈದು ಧುಮ್ಮಿಕ್ಕಿದನು ಧಾರುಣಿಯು
ಲುರೆ ಮರತುದಿಯಿಂದ ಭೂತಳಕೆ ॥ ಮದವವರಿ ಭೈರವನು ಕರ್ಕಶ । ಕದನ ಕೋಳಾ
ಹಳನು ರಾಮನ । ಪದವನೆನೆ ಅಡರಿದನು ದುರ್ಗವನಾ ಮಹಾಪುರವ ॥ ೩ ॥ ಕೋಟಿ
ಯಿದ್ದುದು ಮುಂದೆ ಶಿವನಕ । ರೋಟಿ ಮಾಲಾವಲಯದವೊಲುರೆ । ಪಾಟಿಸಿದ ಕೊತ್ತ
ಳದ ಮುಗಿಲಟ್ಟಳೆಯ ಮುರಿವಿನಲಿ ॥ ಘೋಟಕದ ಮದಕರಿಯಖಂಡಿಯ । ದಾಟಿದ
ಹುಲಿಮುಖದವಂಕದ । ಕೂಟಮುರು ಶಾಲಾವಿಲಾಸದ ವಿವಿಧ ರಚನೆಯಲಿ॥೪॥ ಅಣವು
ತಿದುರ್ಗವು ಗೋಪುರಾಗ್ರದ । ಮಣಿಮಯದ ಕಳಶಾಳಿ ತಾರಾ । ಗಣವ ನಂಜಿಸು
ತಿರ್ದವಾ ಮುಖಶಾಲೆಗಳ ಬಳಿಯ ॥ ಕಣಗಿಡಿಯ ಭೇತಾಳ ಜಟ್ಟಿಗ । ರಣಕದೋ
ರುವ ಬೊಮ್ಮರಕ್ಕಸ । ರಣಪಿಶಾಚಿಗಳರಿವ ಹೊಗಗುಡ ದಂಜನಾಸುತನ ॥ ೫ ॥ ವೀರ
ನವರನು ಕೆಣಕದೊಯ್ಯನೆ । ಚೋರಗಂಡಿಯಲಿಳಿದು ಹೊಕ್ಕನು । ಭೂರಿವಳಗಿನ
ನೊದಲ ವಳಿಯದ ಕೋಟೆಯನು ಬಳಿಕ ॥ ವೀರಕೇಳೈ ಕೋಟಿಸಂಖ್ಯೆಯ । ವೀರರಿ
ದ್ದರು ಭವನ ಬೊಮ್ಮನ । ಭೈರವನ ಬಗೆಯದ ಮಹೋನ್ನತಕಾಯರಿದಿರಿನಲಿ ॥ ೬ ॥
ಅವರ ವಂಚಿಸಿ ಮೆಲ್ಲನೀತನು । ಕವಿವ ಕತ್ತಲೆಯೊಳಗೆ ಹೆಜ್ಜೆಯ । ಸವಸಲರಿದಾ
ಸಮಯದಲಿ ಹರಿತಂದಳಾಪುರವ ॥ ದಿವಸಲುಗುಳುವ ರಾತ್ರಿಯಲಿ ನುಂ । ಗುವ ಮಹಾ
ದ್ಭುತ ಘೋರರಕ್ಕಸಿ । ಯುವತಿ ಲಂಖಿಣಿ ತಡೆದಳೀತನ ಕೈಯ್ಯ ಖಡುಗದಲಿ ॥ ೭ ॥
ಸುರನರೋರಗ ದೇವಯೋನಿಗ । ಳಿರುಳು ಸುಳಿದರೆ ನುಂಗಿ ನೊಣವ । ಚ್ಚರಿಯ ರಕ್ಕಸಿ
ಯಿವಳಲಾ ಕುಶಕೇಳು ಕೌತುಕವ ॥ ಹರನೊಡನೆ ಕಪಿದರಿಹಳಚುವ । ದುರುಳ
ಮೃತ್ಯುವಿಗಿಮ್ಮಡಿಯ ಸೀ । ಪುರದ ರಕ್ಕಸಿ ತಡೆದಳೀತನಕೈಯ್ಯ ಖಡುಗದಲಿ ॥ ೮ ॥
ಎಲ್ಲಿಗೆಲವೋ ಹೋಗದಿರು ಕಪಿ । ಯಿಲ್ಲಿಗೇತಕೆ ಬಂದೆ ಬೇಹಿನ । ಭುಲ್ಲವಣೆ ಭಾರಿಸುತ
ಲಿವೆ ನೆರೆ ನಿನ್ನ ಮೋರೆಯಲಿ ॥ ನಿಲ್ಲುನಿಲ್ಲೆಂದೆನಲು ಚವುಪಟ । ಮಲ್ಲನದ ಲೆಕ್ಕಿಸದೆ
ನಡೆಂದಕೆ । ನಿಲ್ಲದಡಿಯಿಡೆ ಹಿಡಿದಳೀತನ ಹೆಡಕಹೆಗುರಿನಲಿ ॥೯॥ ಹೆಡಕ ಹಿಡಿದಳೊ
ಹಿಡಿಕೆಲಾಕಡೆ । ಸಿಡಿದು ತಿವಿದನು ತೀವ್ರಮುಷ್ಟಿಯ । ಲಡಿಮಗುಚಿ ಬಿದ್ದಳು ಪುರ
ದ್ವಾರದ ಮಹಾಸೌಧ ॥ ಹುಡಿಗೆದರೆ ಸುಳಿವಸುರ ರಸುಗಳು । ಸಿಡಿಯೆ ರಕುತವ ಕಾರ
ಡೆಡಬಲ । ದಡಬಳರಸವದೀತ ತಪ್ಪಿಸಿ ಹಾಯ್ದ ನೂರೊಳಗೆ ॥ ೧೦ ॥ ಅರಿದಳವಳು

ಬಳಿಕ ಪೂರ್ವದ । ಕುರುಹ ನಜನಿರ್ಮಿತದ ಕಾಲವು । ನೆರೆದುದಲ್ಲಾ ರಾಮಭೃತ್ಯ
ನಲಾ ಕಪೀಶ್ವರನು ॥ ಹರಿವುದಿನ್ನ ಸುರೇಂದ್ರ ವನಿತೆಯು । ಮೆರೆವ ಮಂಗಳಸೂತ್ರ
ಸಾವಿ । ನ್ನರಸಿಕೊಳಬೇಕಜನ ನೆನುತೈದಿದಳು ಕಮಲಜನ ॥ ೧೧ ॥ ಈತನೊಪ್ಪುನೆ
ಬಳಿಕ ಗುರುಬಿನ । ಲಾತು ನಿಲುತಲ್ಲಲ್ಲಿ ರಕ್ಕಸಿ । ವಾತುಗಳ ನಾಲ್ಯೆವೃತೆಡೆವೀಥಿಗಳ
ರಚನೆಗಳ ॥ ಗೀತವಾದ್ಯ ಸುನೃತ್ಯ ಕದನ । ವ್ರಾತ ದೆಡೆಗಳ ಲೆಡಬಲಗಳ ನಿ । ಕೇತನ
ದಲರಸಿದನು ನಿಮಿಕುಲರಾಜ ನಂದನೆಯ ॥ ೧೨ ॥ ಅಂಗಡಿಗಳೊತ್ತಿನಲಿ ರಕ್ಕಸ ।
ರಂಗಳಗಳಲಿ ದೇವತಾ ಭವ । ನಂಗಳಲಿ ಕಾಸಾರಮಂಡೆಯ ಸಂದುಗೊಂದಿನಲಿ॥ ಹಿಂಗ
ದೋಸರು ಗೇಳುತಾ ಸೀ । ತಾಂಗನೆಯ ನುಡಿಹುಟ್ಟುವದೇ ಯೆನು । ತಂಗಲಾಚುತ
ಬೀದಿಯುಗಲಕೆ ನೋಡುತೈತಂದ ॥ ೧೩ ॥ ಕಳಿದು ಜಾವದಮೇಲೆ ರಕ್ಕಸ । ರುಲುಹು
ನಿಲಲಣು ರೂಪಿನಲಿ ಹೆ । ಕ್ಕಳ ಬಲವನರಿ ದರಸಿದನು ವಿವಿಧಾಲಯಂಗಳಲಿ ॥ ಕಳಚಿ
ಕದಗಳ ವಾಯು ಸರಣಿಯೊ । ಳಿಳಿದು ಮುದ್ರಿಕೆಯುಂಗುರದ ಮಣಿ । ವೆಳಗಿನಲಿ
ನೋಡಿದನು ನಿಮಿಕುಲರಾಜನಂದನೆಯ ॥೧೪॥ ನುಡಿಯ ಲಾಲಿಸಿ ಕುರುಹು ಕೋಸುಗ।
ಳಿಡೆಯ ನಬಲೆಯರಲಿ ಪರೀಕ್ಷಿಸಿ । ಹಿಡಿದು ನೋಡಿದ ನಿಳಯನಿಳಯಂಗಳಲಿ ನಿಮಿಷ
ದಲಿ ॥ ತೊಡಕು ವೀಥಿಯ ಕೇರಿಕೇರಿಗ । ಳಿಡೆಗೆಡೆಯ ಮನೆಮನೆಯ ಮೂಡಣ ।
ಕಡೆವಿಡಿದು ಮುರಿಮುರಿದು ಕೋಟೆಯ ಸುತ್ತುವಳಯದಲಿ ॥ ೧೫ ॥ ಮೊದಲು
ಕೋಟೆಯ ಸುತ್ತುವಳಯದ । ಸದನ ಸಂಕುಳವನು ಪರೀಕ್ಷಿಸಿ । ಕದಡು ಮನದುಬ್ಬ
ರದ ಮರುಕದಲಿಳಿದನೆರಡನೆಯ ॥ ಪುದಿದ ಮಣಿಕಾಂಚನದ ಲಹರಿಯ । ಹೊದರು
ವೆಳಗಿನ ಹೊನ್ನಕೋಟೆಯ । ಸದಮುದದ ಸಂಪದದ ರಕ್ಕಸನಿಳಯವನು ಕಂಡ ॥೧೬॥
ತಡೆದ ರಕ್ಕಸತಳವರರ ಜವ । ನೆಡೆಗೆ ಚಾಳಿಸುತಾಳುವೇರಿಯ । ತಡಿವಿಡಿದು ಶೋಧಿ
ಸಿದನಲ್ಲಿಯ ಸದನಸಂಕುಲವ ॥ ಎಡೆವಿಡಿದು ಮನೆಮನೆಯ ರಕ್ಕಸ । ಮಡದಿಯರ
ಮರೆದೊರಗಿದ ರವಂ । ಗಡವ ಶೋಧಿಸಿ ದಾಂಟದನು ಕೋಂಟೆಯನು ಮೂರನೆಯ ॥
ವಿಟ ವಿದೂಷಕ ನಾಗಲೀಕರ । ನಟಣೆಗೆಡಿಪಂಗನೆಯರಲಿ ಚಾ । ಪಟೆಯರಲಿ ಚದ ರೆ
ಯರ ಲುಪಭೋಗ ಪ್ರಪಂಚಕದ ॥ ಕುಟಿಲ ಕುಂತಳ ದಬಲೆಯರ ಕಾ । ಲಟೆಯರಲಿ
ಕಾಮುಕಿಯರಲಿ ಘನ । ಘಟ ಕುಚೆಯರಲಿ ಕೂಡೆ ನೋಡಿದ ನವನಿನಂದನೆಯ ॥೧೭॥
ಗಿಳಿಯ ನೋದಿಸುವಬಲೆಯರನು । ಯ್ಯಲೆಯನಾಡುವ ಸತಿಯರಲಿ ಜೋ । ಗುಳವ
ಹಾಡುವ ಗಾಡಿಯರ ಲುಪಪತಿಯರಾಲಯಕೆ ॥ ಸುಳಿವ ಸೌಂದರಿಯರಲಿ ಸಾಧ್ವೀ ।
ಲಲನೆಯರ ಸಂಗೀತನರ್ತನ । ಗಳ ವಿಲಾಸಿನಿಯರಲಿ ಕಪಿ ನೋಡಿದನು ಜಾನಕಿಯ ।
ಚಾಟಿಯರಲೆಡೆಗೆಲಸದವರಲಿ ಬೇಟಿಕಾತಿಯರಲ್ಲಿ ಕಡುಕಂ । ಬೇಟದಂಗನೆಯರಲಿ ಸಂ
ಕೇತಕನಿಕೇತನದ ॥ ಕೂಟಣಿಗಳಲಿ ಕುರುಹುಗೊಡದೆಡೆ । ಯಾಟದವರಲಿ ವೇಷವಿಧ
ದಲಿ । ಧೂಟಿಯರ ಲರಸಿದನು ಮರೆಯದೆ ಮಂದಗಾಮಿನಿಯ ॥೨೦॥ ಎಳಿಯ ಜವ್ವನೆ
ಯರಲಿ ಮುಗ್ಧಾ । ಲಲನೆಯರಲಿ ವಿದಗ್ಧ ಮುಗ್ಧೆಯ । ಕಲಿತ ಲಲಿತ ಪ್ರೌಢೆಯರ ಲನು
ಮಾನಮಾರ್ಗದಲಿ ॥ ಸುಳಿಸುಳಿದು ಸೀತೆಯನು ಕಾಣದೆ । ಬಳಲಿ ದುಮ್ಮಾನದಿಂದ
ಖಳಜನ । ನಿಳಯನಿಳಯವ ಶೋಧಿಸುತ ಸುಳಿದಾಡಿದನು ಹನುಮ ॥ ೨೧ ॥ ಸುರ
ವಿರೋಧಿ ಧರಾಮರರ ತ । ದ್ವರಣಿಪರ ತದ್ವೈಶ್ಯ ಶೂದ್ರಾ । ದ್ಯರ ನಿಕೇತನ ನಿಚಯ

ದಲಿ ನಿರ್ಮಿಸಿ ನಾಲ್ಕನೆಯ ॥ ಸುರುಚಿರದ ಪ್ರಾಕಾರದಭ್ಯಂ। ತರವ ನಿರುಪಮ ರಾಜ
ಪುತ್ರರ। ಪರಿಪರಿಯ ಮಣಿಭವನ ವೀಧಿಯ। ಲರಸಿದನು ಹನುಮ ॥ ೨೨ ॥ ದಾಂಟಿ
ಬಳಿಕಾಪರಿಧಿಯನು ನೈ। ಶಾಟಭೈರವ ನಸಿದನು ಮಣಿ। ಕೂಟ ದುಷ್ಪಂಗಗೆಗಳ ಕೇಳೀ
ಗೃಹದ ಸತಿಯರಲಿ ॥ ನಾಟದಾದುದು ಬುದ್ಧಿ ಶುದ್ಧಿಯ । ಕೋಟಲೆಯ ಕೊಲ್ಲಣಿಗೆ
ಯಲಿ ನೈ। ಗೋಟೆಯನು ಹತ್ತಿದನು ಹದಿನಾರನೆಯ ಗಳಿಗೆಯಲಿ ॥ ೨೩ ॥ ಹೊಳಕಿ
ಮದು ಕಿರಣಾಳಿ ಹೇಮದ। ಹಳಿಗಳಲಿ ಸಂಧಿಸಿದ ಕೋಟೆಯ। ತಳದ ಮಣಿಹರ್ಮ್ಯಾದಿ
ಗಳ ಪಂಜ್ತಿಗಳ ಸೊಗಸಿನಲಿ ॥ ನಿಳಯನಿಳಯದ ಸೋಮಸೂರ್ಯರ। ಲಲಿತವೀಧಿಯ
ಚಂದ್ರಭವನಾ। ವಳಿಯ ಕನಕದ ತೋರಣದ ವೋರಣಗಳೋಜೆಯಲಿ ॥೨೪॥ ಈಡಿ
ರಿದ ಮಣಿಮಯದ ಕಳಶದ । ಝಾಡಿನೇಗಿನ ಹೇಮರಸದಲಿ । ತೀಡಿತೊಳಗುವ
ಸುಧೆಯ ಸೊಂಪಿನ ಸೂಸಕಂಗಳಲಿ । ಜೋಡಿಸಿದ ಜಾಂಬೂನದದ ಪರಿ। ಪಾಡಿಗಳ
ಪಲ್ಲವದ ರುಚಿಯ ಪ। ವಾಡಿಗಳಿಕೇತನ ನಿಕೇತನವೆಸದುದಲ್ಲಲ್ಲಿ ॥ ೨೫ ॥ ನಗರ ತಾ
ನದು ನೂರು ಯೋಜನ। ದಗಲ ವನಿತರ ನಾಲ್ಕುಭಾಗೆಯ। ಜಗತಿ ತಾನೊಳಕೋಟೆ
ಯದುರುನ್ನತಿಯ ವೈಭವವ ॥ ಪೊಗಳಲೆನ್ನಳವಲ್ಲ ಹನುಮನ । ಬಗೆಯದೆಂತುಟೊ
ಸರ್ಪಗತ ನೆಂ। ದೊಗುವೆ ಹನುವ ಂಗಲ್ಲ ದೆಲ್ಲಿಯದಸುರಹರಗೆಂದ ॥೨೬॥ ಮನೆಮನೆ
ಗಳಲಿ ಪುರಜನಂಗಳ । ಕನಸಿನಲಿ ತಿಳಿದೆದ್ದನಿದ್ರೆಯ । ಜನದಲೋಚನ ವೀಧಿಯಲಿ
ವಿವಿಧಾಲಯಂಗಳಲಿ ॥ ಹನುಮಮಯವಾಗಿರ್ದುದೈ ನೃಪ। ತನುಜ ಕೇಳರಸಿದನು
ಸೀತಾ। ವನಿತೆಯನು ವೈಚಿತ್ರಗತಿಯ ವಾಯುಜನು ಜೋಕೆಯಲಿ ॥ ೨೭ ॥ ಶುಕನು
ಭವನವ ನಾಮಹಾ ಪಾ। ಶ್ವರ್ಕನ ಮನೆಯ ಮಹೋದರನ ಸ। ದ್ಮಕವ ಸಾರಣನಾ
ಲಯವ ಸದನವ ನರಾಂತಕನ ॥ ವಿಕಟ ವಿವಿಧೋನ್ಮತ್ತ ದೇವಾಂ। ತಕ ವಿರೂಪಾಕ್ಷ
ಪ್ರಮುಖ ನಾ । ಯಕರ ನಿಳಯಂಗಳಲಿ ನೋಡಿದನವನಿನಂದನೆಯ ॥ ೨೮ ॥ ವೀರ
ಕುಂಭ ನಿಕುಂಭ ಕಲಿ ಜಂ। ಭಾರಿಜಿತು ಧೂಮ್ರಾಕ್ಷ ದುರ್ಮದ। ಘೋರಬಲ ಮಿತ್ರಜ್ಞ
ವಿದ್ಯುಜ್ಜಿಹ್ವ ಶಾರ್ದೂಲ ॥ ಶೂರರಿಪು ಮಕರಾಕ್ಷ ರಣಜಂ। ಝಾರಬಲ ನತಿಕಾಯ
ಮುಖ್ಯ ಕು। ಮಾರ ವರ್ಗದ ಮನೆಗಳಲಿ ನೋಡಿದನು ಜಾನಕಿಯ ॥ ೨೯ ॥ ತ್ರಿಶಿರ
ವಿದ್ಯುನ್ಮಾಲಿ ಸೇನಾ। ವಿಸರಪತಿ ಸುಮತಿಪ್ರಹಸ್ತರ। ವಸತಿಗಳಲಿ ವಿರೂಪಲೋಚನ
ಲೋಹಿತಾಂಬಕರ ॥ ಪಿಶಿತಭಕ್ಷಣ ಜಂಬುಮಾಲಿಗ। ಳ ಪಿತನಾಯಕರಮಳ ಗೇಹ।
ಪ್ರಸರದಲಿ ನೋಡಿದನು ಪರಮ ಪತಿವ್ರತಾ ಸತಿಯ ॥ ೩೦ ॥ ಕೇಳಿಬಲ್ಲೈ ಹಿಂದೆ ಬನ
ದಲಿ। ಬೋಳೆಯಂಬಿನ ಲೂರ್ಮಿಳಾಪತಿ। ಬೋಳಿಸಿದ ಕಿವಿಮೂಗಿನಸುರೆಯ ಕಥೆಯ
ನಾ ಸತಿಯ ॥ ಆಲಯಕೆ ಐರಲವಳು ಕಡು ಕಿವಿ। ಮೂಳಿಯರ ಮಾಕೊರತಿಯರ ಸ।
ಮ್ಮೇಳದಿಂದಿದ್ದಳು ಕರಳಪ್ರಮುಖಿ ಶೂರ್ಪನಖಿ ॥ ೩೧ ॥ ಹೊಕ್ಕನವಳಾಲಯವ
ನಾಲಯ। ರಕ್ಕಸಿಯ ಕಂಡಾಚರಿಸಿ ಹಿಂ। ದಕೆ ಹೆಜ್ಜೆಯನಿಕ್ಕಿ ಹೆದರಿದು ರಾಮರಾಮೆ
ನುತ ॥ ಬೆಕ್ಕಸಂ ಬೆರಗಾಗಿ ಭೈರವ। ನಕ್ಕತಾ ಯಿವಳಾಗಬೇಕೆನು। ತಿಕ್ಕೆಲನ ನಾರೈವು
ತಂಜುತ ನೋಡಿದನು ಹನುಮ ॥ ೩೨ ॥ ಉಳುಹಿಕೊಂಡನು ರಾಮನೀಕೆಯ। ಚಲು
ವಿಕೆಯ ಹೋಗಾಡಿ ದಿಟವಿವ । ಳಳುಕದಿದ್ದರೆ ತಿನ್ನದಿಹಳೇ ತೋರುವೀ ಜಗವ ॥
ಜಲಜಭವನಾ ರೊಡಲೊಳೀಕೆಯ । ನಿಳುಹಿದನೊ ಹಡೆದವಳ ಹೊಟ್ಟೆಯ। ವಳಯ

ವೆಂತುಟೊ ಹಾ ಮಹಾದೇವೆನುತ ಬೆರಗಾದ ‖ ೩೩ ‖ ಇದ್ದರಲ್ಲಿ ಸಹಸ್ರ ಸಂಖ್ಯೆಯು ಮೊದ್ದು ಕುಟಲದ ಮಾಯಕಾಂತೆಯು । ರಿದ್ದೆಸೆಯ ಕಿವಿಗೊಯ್ಕಿಯರು ಮೂಳಿಯರ ಮುಕ್ಕಿಯರು ‖ ಕದ್ದವರು ಕೈಗಡಿಕಿಯರು ಮೊಲೆ । ಬಿದ್ದವರು ಮುದಿಗುಂಟಣಿಗಳವ । ಳಿದ್ದೆಸೆಯ ಕಟ್ಟೋಲಗದ ಸೋಂಕುಗಳ ಸೊಗಸಿನಲಿ ।೩೪‖ ಮೆರೆದು ಬಿದಿರಲಿ ಕೋಣ ಕುರಿದಲೆ । ತುರಗದೊಟ್ಟಿಲದೊಂದುಕಡೆಯಲಿ । ಜುರಿತ ರಕುತದರಸದ ರಂಜಣಿಗೆಗಳ ದೊಂದೆಸೆಯ ‖ ತಾರ ಕರುಳ ಹೂದಂಡೆಗಳ ಲು । ಕ್ಕಿರಿದ ಕಡುಗೊಡನೆಡೆಗಳಲಿ ಕು ಕ್ಕಿರಿದು ಕುಣಿದಸುರೆಯರ ಕಂಡುಗುಳಿದನು ಕಲಿಹನುಮ ‖ ೩೫ ‖ ಕಡಿವ ಕೊಚ್ಚುವ ಕೊರೆವನರುಕುವ । ಸುಡುವ ತಾಳಿಸಿತಿಂಬ ತೇಗುವ । ಕುಡಿವ ಹಾಡುವ ಹಾರೈಸು ವಬಲೆಯರ ವೈಮರೆವ ‖ ಇಡಿದ ಹೊಲಸಿನ ನಾತದುಬ್ಬರ ದೆಡಬಲದ ತಿನಿಸುಗಳ ಮದ್ಯದ । ಹಡಿಕೆಗೈನೆಯ ಕಂಡು ಹೇಸುತ ಹನುಮ ಹೊರವಂಟ ‖೩೬‖ ತಿರುಗಿದನು ಬರಕಾಗಿ ಹರ ಭೂ । ಧರವನೇಳಿಪ ಹಬ್ಬುಗೆಯ ಹರ । ವರಿಯ ಯೋಜನವೈದರಳ ತೆಯ ಕನಕಮಣಿಮಯದ ‖ ಪರಿಪರಿಯ ಪುತ್ಥಳಿಯ ಚಿತ್ರದ । ತರತರದ ನೆಲೆನೆಲೆಯ ಮಣಿಮಂ । ದಿರವ ಕಂಡನು ಕುಂಭಕರ್ಣ ನಿಶಾಚರೇಶ್ವರನ ‖೩೭‖ ಎರಡು ಯೋಜನ ವಾಲಯದ ಸರಿ । ಸರದ ಮಣಿಪರಿಯಂಕದಲಿ ತ । ನ್ನೆರಡು ದೆಸೆಯಲಿ ತನ್ನ ತೂಕದ ಘೋರಯುವತಿಯರ ‖ ಕರದ ತಲೆದಿಂಬಿನಲಿ ನಿದ್ರಾ । ಭರದಲಿದ್ದನು ನೀಲಗಿರಿಯನು ಸರಸಿಜೋದ್ಭವ ಕಡೆದು ಕೆಡಹಿದ ತೆರದೊಳಸುರೇಂದ್ರ ‖೩೮‖ ಜಗದ ಕೊಲೆಗೆಲಸದಲಿ ಬಳಲಿಕೆ । ಬಿಗಿದ ನಿದ್ರೆಯ ಭೈರವನೊ ರತಿ । ಯೊಗಡಿಕೆಯ ವಿಶ್ರಮಸುಷುಪ್ತಿಯ ಲಯಕೃತಾಂತಕನೊ ‖ ಉಗಿಸಿ ನೀರನು ಭಾರಿಸಿದು ವೈ । ದೆಗೆದ ಮುಗಿಲಿನ ಮೂಲ ಮೂರ್ತಿಯೊ । ವಿಗಡ ರಕ್ಕಸನೊ ಮಹಾದೇವೆನುತ ಬೆರಗಾದ ‖ ೩೯ ‖ ಲೋಕಕಿವ ಮುನಿದೆದ್ದನಾದರೆ । ಬೇಕು ಬೇಡೆಂಬವರದಾರು ಪಿ । ನಾಕಿ ಪದ್ಮಜರುಗಳು ಪಡಿಯಿ ಲ್ಲೆಂಬ ಬಗೆಮನವ ‖ ಸೋಕಿಕೊಂಡಿದೆ ಕೆಲವು ನವಿ । ಕ್ಕಾವ್ಯ ಕುಲಜಂಗಹುದು ಚಿತ್ರವಿ । ಲೋಕನಕೆ ನೆಲೆಗೊಳ್ಳದಿವೆ ನೇತ್ರಂಗಳೆನಗೆಂದ ‖ ೪೦ ‖ ಇವನು ಹಿಂದು ದಿಸಿದರೆ ಸಾವರೆ । ದಿವಿಜರಿಪು ಮಧುಕೈಟಭಾದಿಗ । ಳವತರಿಸುವನ ದೈತ್ಯಹರ ನಾನಾ ಯುಗಂಗಳಲಿ ‖ ಇವದಿರಾಳ್ದನಕಮರತತಿ ಕಂ । ಪವನು ತಾಳುವದೇನರಿದು ಶಿವ । ಶಿವ ಮಹಾದೇವೆನುತ ಮನದಲಿ ಹೆದರಿದನು ಹನುಮ ‖೪೧‖ ಧರೆಯ ಮುಳುಗಿಸಲೇಳ್ವ ಉರುಸಾ । ಗರದ ರಭಸವೊ ಹೊತ್ತ ವಿಶ್ವಂ । ಭರೆಯ ಬಿಸುಟಹಿಸತಿಯ ನಿಡುಸುಯಿಲು ಗಳ ಸೊಗಸುಗಳೊ ‖ ಬಿರಿವ ಕಮಲಭವಾಂಡ ರುದ್ರನ । ಉರುವಳಿಪ ಬಹಿರಾವರಣದ ಲನಿ । ಲನ ಬಲುರಭಸವೋ ಮಹಾದೇವೆಂದನಾ ಹನುಮ ‖೪೨‖ ಎನುತ ಮೆಲ್ಲನೆ ಮಣಿ ಖಚಿತ ಕಾಂ । ಚನದ ಕಾಂತಿಯ ಬಳಿವಿಡಿದು ಸಾ । ರ್ದನು ಸುರಾರಿಯ ಸುಳಿವ ಮೂಗಿನ ಸುಯಿಲುಸರಿಸದಲಿ ‖ ವನಿತೆ ಸಿಂಹಿಕೆ ಸೆಳೆವ ನೆಳಲಿನ । ಘನತೆಗಿಮ್ಮಿಗಿಲಾಗಿ ಸೇದಿತು । ಹನುಮನನು ಹೊಯ್ದೊಡೆ ಮರಿದು ಸಿಟ್ಟಿಸಿರು ರಕ್ಕಸನ ‖ ೪೩ ‖ ಬಿಸುಟ ಬಿಡೆ ಹೊರಬೀಳ್ವ ನೊಳದೆಗೆ । ದುಸಿರಿನಲಿ ಮುಳುಗುವನು ಮೂಗಿನ । ಕಸುಮಲದ ಕಾವಣದ ಕಲಿತಶ್ಲೇಷ್ಮ ಶರಧಿಯಲಿ ‖ ಉಸಿರ ಗಮನಾಗಮದ ಸರಣಿಯ । ಘಸಣಿ ಯಲಿ ಬೆಂಡಾಗಿ ಕಿಡಿಕಿಡಿ । ಮಸಗಿ ಕೋಪಾನಲನ ನೋಕರಿಸಿದನು ಕಲಿಹನುಮ ‖೪೪‖

ಬೆಳೆದನಾ ನಾಸಿಕದ ನಾಳಿಯ | ಕುಳಿಯ ಕುಹರದ ಕೋಹಿನಲಿ ಕೊಂ | ಡೆಳೆದು ಸೂಸುವ ಸುಯಿಲ ಬಟ್ಟೆಗೆ ಕೀಲ ಗೊಟ್ಟಂತೆ || ಬಲಿದು ದುಬ್ಬಸ ದಖಿಳಕರಣದ | ಬೆಳಸು ಬೀಳುದು ಬೆವರಿಗೀತನು | ಪ್ರಳಯದಲಿ ಸಿಡಿಲೆರಗಿದ ಪೊಲಳವಳಿಯೆ ಪೌರ ಜನ || ೪೫ || ಸೀತ ಭಾರಕೆ ಹನುಮನುಲ್ಕಾ | ಪಾತದಂತಿರೆ ಬಡಿದು ಬಿದ್ದನು | ಕಾತರಸಿ ಮಯರಚಿತ ವಜ್ರಸ್ತಂಭವನು ತಾಗಿ | ತಾತನನು ಕರ್ಣಾಟಕದ ಜನ | ಜಾತ ನೋವಿಗೆನೆ ನವಪೊಲು ನಿ | ನ್ನಾತನೆನೆದನು ನೊಂದುನೇವರಿಸುತ್ತ ನೊಸಲೆಡೆಯ || ೪೬ || ಕೋಪಕೊನರಿತು ಮತ್ತೆ ಲಯಶಿಖಿ | ರೂಪನಾದನು ಸಂಕ್ರಮಿಸುತಾ | ಟೋಪ ವಸುರನ ಕೊಲೆಗೆ ತಂದನು ಮನವ ನನಿಲಸುತ || ಸೈವರೆಯ ದುರುಳಗಳನರವಾಂ | ಸಾಪಹಾರದಸುರರ ನೆತ್ತರ | ಲೇಪ ದುನ್ನತಶೂಲ ವಿರಲದಕೊಂಡು ಬೊಬ್ಬಿರಿದ || ೪೭ || ಕೊಲುಲೆ ನಿದರಿಂದಿವನ ನೆನುತ | ಗ್ಗಳ ಶಿಲೋಚ್ಚಯ ಸಾರಬಾಹಾ | ಲುಳಿತ ಒಲನೆತ್ತಿದನು ಶೂಲವ ಶೂಲಿಯಂದದಲಿ || ಅಲಗದೊರೆದುದಲೆತ್ತಿಕೂಟಾ | ಚಲ ಮಹಾದೇವಾ ಮಹಾಯುಧ | ವಳವದೆಂತುಟೊ ಸೂಸಿದುವು ಕಿಡಿಕೂಡೆ ದೆಸೆದೆಸೆಗೆ || ೪೮ || ಎತ್ತಿಹಾಣಿಸಿ ಘರಿಘರಿಸಿ ಹ | ಲ್ಲೊತ್ತಿ ಹೊಡಿದನೆದೆಗೆಯಕಟಾ | ಸತ್ತಡಿವನೆಂದುದಿಸುವನು ಬಳಿಕೆಮ್ಮರಘುಪತಿಯ || ಒತ್ತಬರದಾಹವಕೆ ತನುವನು | ತೆತ್ತುಸಿಲುವವರಾರು ನೆರೆದು | ವೃತ್ತತನವಿದು ನಮ್ಮದೆಂದಂತರಿಸಿದನು ಹನುಮ || ೪೯ || ಬದುಕು ನಿದ್ರೆಯಲಿದ್ದವನ ಕೊಲು | ವುದು ಮಹಾವೀರರಿಗೆ ಕುಂದ | ಭ್ಯದಯ ವಕ್ಕುಡಿಸುವದು ನಗುವುದು ಜಗದಜನನಿಕರ || ಬದುಕು ಬದುಕೆನು ಕಳುಹಿದನು ಬಳಿ | ಕದುಭುತವ ಶೋಧಿಸಿ ದಯಸ್ಕಾಂ | ತದ ಮಹಾದ್ಭುತಭಾರದುಗ್ರ ನಿಶಾಚರಾಯುಧವ || ೫೦ || ತಿರುಗಿದನು ಬಳಿಕಲ್ಲಿ ಸೀತೆಯ | ಪರಿಯ ಕಾಣದೆ ತನ್ನಿಕೇತನ | ದೆರಡುನೈಯಲಿ ಮಂದಿರವ ಶೋಧಿಸುತ ಶ್ರೀಘ್ರದಲಿ|| ಪರಮ ಪುಣ್ಯ ಪತಿವ್ರತಾಜನ | ದರಸಿ ತನಗಿನ್ನಲ್ಲಿ ನೆರೆಗೋ | ಚರಿಸುವಳೊ ಹಾ ಯೆನುತ ಹಮ್ಮಲಿಸಿದನಾ ಹನುಮ || ೫೧ || ಬರಬರಲು ಮುಂದೆಸೆದು ದಗ್ಗದ | ಪರಮ ವೈಷ್ಣವ ಚಕ್ರವರ್ತಿಯ | ವರನಿಕೇತನ ಕೇತನಧ್ವಜ ಚಿತ್ರಪತ್ರಗಳ || ಹರಹಿನಲಿ ಹೊದರೆದ್ದ ಕಳಶೋ | ತ್ಕರಗಳಲಿ ಕಮನೀಯ ತರದು | ಪ್ಪರಿಗೆಗಳ ನಮರೇಂದ್ರ ನಮಳಾಗಾರದಂದದಲಿ || ೫೨ || ಆವಕಡೆಯಲಿ ತಿರುಗಿದರೆ ಮಣಿಭದ್ರ ಧವನಚಯ || ಆವಕಡೆಯಲಿ ಹೊಕ್ಕರನುಪಮ | ದೇವಪೂಜಾಗೃಹಗಳಿದ್ದುವು | ಶ್ರೀವರನ ಪಾಲ್ಗಡಲಮಧ್ಯದ ಭವನವಂದದಲಿ || ೫೩ || ಹರಿಕಥಾಸಂಗತಿಯ ಚಿತ್ರೋ | ತ್ಕರದ ಮಯ ಭಿತ್ತಿಗಳು ನೋಡಲು, ಹರಿಯ ನಾಟಕದಂಗನಾ ವಿಭ್ರಮ ವಿಲಾಸನಯ || ಹರಿಯ ಗೀತದ ಗಾಯಕರ ವಿ | ಸ್ತರಣ ಮಯಮಾಗಿರ್ದುದೈ ಜಾ | ಗರದಲಿರ್ದನು ವರವಿಭೀಷಣದೇವ ಹರಿದಿನದ || ೫೪ || ಲಲಿತ ಹೇಮದ ವಿವಿಧ ಚಿತ್ರಾ | ವಳಿಯ ಹರಿಯವತಾರದನುಪಮ | ವಿಲಸಿತದ ವರಸಾಲಭಂಜಿಕೆಗಳ ವಿಲಾಸದಲಿ || ವಳಯದಲೆಸೆವ ಸೌಧಾ | ವಳಿಗಳಲಿ ಬೃಂದಾವನವು ಕಂ | ಗೊಳಿಸಿದುದು ಮಧ್ಯದಲಿ ಮಣಿಮಯ ಭದ್ರಭವನಿಕೆಯ || ೫೫ || ಖಳರೊಳಗೆ ಸಜ್ಜನನು ಹಾಲಾ | ಹಲದೊಳಗೆ ಸುಧೆ ಕಾಮರಂಗಳ | ಹಳುವದಲಿ ಹರಿಚಂದನವು ಶಿಖಿಯೊಳಗೆ ಶೀತಳವು || ಕಲು

ಗಳೊಳು ನಿಜಪರುಷಜನಿಸುವು । ದಿಳಿಗೆ ಚಿತ್ರವಲಾಯೆನುತ ವೈ । ಯ್ಯಾಲಹಿನಲಿ ನೋಡಿದನು ದೂರದೊಳಾ ವಿಭೀಷಣನ ॥ ೫೬ ॥ ಆದಡಿವ ನಂದಿನ ಮಹಾಪ್ರ । ಹ್ಲಾದನಿವ ಸಂದೇಹವಿಲ್ಲ ತ । ಳೋದರಿಯನೊದ್ದವ ಹಿರಣ್ಯಕನಹುದು ತಪ್ಪಲ್ಲ ॥ ಆ ದಶಸ್ಯಂದನನ ನಂದನ । ನಾದಿ ನರಕೇಸರಿಯ ವೊಲ್ ನೆರೆ । ನೇಹಿಸುತ್ತಿದೆ ಮತಿ ವಿವೇಕವಿದೆಂದ ನಾ ಹನುಮ ॥ ೫೭ ॥ ಎನುತ ಮೆಲ್ಲನೆ ಸೂಕ್ಷ್ಮರೂಪವ । ನನುಗೊಳಿಸಿ ಕಾಲಿಕ್ಕೆ ಮಣಿಮಯ । ಕನಕರಂಜಿತ ದ್ವಾರದಿವ್ವೆಸಗಳಲಿ ಶುಕನಿಕರ ॥ ಹನುಮ ಹೊಗದಿರು ಪರವಧೂಜನ । ದನುಜ ನರಮನೆಯಿದು ಕಣಾ ಕಾ । ಮಿಸಿಯ ನರಸುವ ಠಾವಿದಲ್ಲೆನೆ ಕೇಳಿದನು ಹನುಮ ॥ ೫೮ ॥ ತಪ್ಪದೆನುತಾ ಹನುಮ ನಾನುಡಿ । ಯೊಪ್ಪದಲಿ ತಿರುಗಿದನು ಜನಕಜೆ । ಯಿಪ್ಪಠಾವಿನ್ನಾವುದೋ ಯೆನು ತಹಳಚಿಂತೆಯಲಿ ॥ ಕಪ್ಪೊಗುವ ಕತ್ತಲೆಯೊಳೈ ತಂ । ದೊಪ್ಪವಾಂದೋಳದಲಿ ಕುಲಕುಲ । ದರ್ಪದಳನ ದಶಾಸ್ಯ ನರಮನೆಗಾಗಿ ನಡೆತಂದ ॥ ೫೯ ॥ ಮೆರೆದುದೈ ಮರಕತ ಶಿಲಾಬಂ । ಧುರದ ಕೋಟಾವಳಿಯ ಕನಕೋ । ತ್ತರ ನಿಬದ್ಧದ ನಿಖಿಳರತ್ನಾವಳಿಯ ವಿಲಸಿತದ ॥ ತರತರದ ತನಿವೆಳಗಿ ನಬುಧಿಯ । ತೆರೆಯ ತೆನೆಗಳ ತೆಕ್ಕೆಯುರಿ ದಶ । ಶಿರನ ಭವನಾವಳಿಯ ವೀಧಿಯ ಭದ್ರಭವನದಲಿ ॥ ೬೦ ॥ ಹೊಕ್ಕನಾ ಮುಖಶಾಲೆಯನು ಕಳೆ । ದೆಕ್ಕತುಳದಲಿ ಮೆರೆದುದೈ ಸಭೆ । ಹೊಕ್ಕಳಿನ ಹೂದುರುಬಿದರಸನ ಸಭೆಯುಸಡಗರವ ॥ ಮಿಕಶತಸಾವಿರವ ಕರಿಭದ । ತೆಕ್ಕಗಳ ತನಿವೆಳಗಿನಲಿ ಕಂ । ಡಿಕ್ಕಲಸದಳವೆಂಬವೊಲುತೇಜೋವಿಲಾಸದಲಿ ॥ ೬೧ ॥ ಪರಕಲಿಸಿದುದು ಮೌಕ್ತಿಕದ ಸಂ । ಚರಿಸುವಾನೆಯ ಮುಕ್ತಮದನಿ । ರ್ಜರವ ಸುಳಿವಬಲೆಯರ ಪದತಳಯುಗಳದಂತಿಗೆಯ ॥ ಹೊರೆದ ಹೆಜ್ಜೆಯನಳಿಕುಳಂಗಳ । ನೆರಮಿಮಲ್ಲಿಗೆ ಮೃಗಮದಾವಳಿ । ಸರಸಿರುಹ ವೆಂದೆರಗುವ ಸುರ ಸಭಾಂಗಣವ ಕಂಡ ॥ ೬೨ ॥ ಕಳೆದು ಮುಂದಣವಿವಿಧ ಮಣಿಮಂ । ಜುಳ ಮುಖದ್ವಾರಗಳ ಬಲದ । ಗ್ಗಳವ ಮುರಿದೊಳಹೊಕ್ಕ ನೀಪರಿಕಣೆಯ ಕಣ್ಯದಲಿ ॥ ಎಲೆ ಕುಮಾರರುಕೇಳಿರೈ ಕಂ । ಗೊಳಿಸಿತಿದಿರಿಲಿ ಕಾಮುಕೇಳೀ ವಿಲಸಿತನ ರಾವಣನ ರಂಜಿತ ರಾಜಮಣಿಭವನ ॥ ೬೩ ॥ ಹೊಡಕರಿಸುವುದು ರಜನಿ ರಜನಿ । ಕುಡಿವುದಮಳ ಸುಸಾಂದ್ರ ಚಂದ್ರಿಕೆ । ಬಿಡದೆ ಚಂದ್ರಾತಪವ ನಪಹರಿಸುವುದು ಹೊಂಬಿಸಿಲು ॥ ಕಡೆದ ಕರವಾಡದ ಕವಾಟದ । ಕಡೆವಿಡಿದ ಹೊಂಬೆಸದಲುರೆ ಹೊಗ । ರಿಡುವ ನೀಲದ ಮೌಕ್ತಿಕದ ಮಾಣಿಕದ ಲಹರಿಯಲಿ ॥ ೬೪ ॥ ಬಡಗಿಯರು ಮಯ್ಯ ವಿಶ್ವಕರ್ಮರು । ಮೃಡಸರೋಜಜರಿವಗೆ ಜೇಡಿದ । ಕೊಡುವವರು ಭಂಡಾರಿಧನ ಪತಿ ಗುರುಮುಹೂರ್ತಿಕನು ॥ ಎಡೆಗಳಿಂದ್ರಾದಿಗಳು ಸಿರಿಯಲಿ ಬಡಪನೇ ಜೆರಿಗೇನೆನುತ ಕೆಲ । ಹಿಡಿದು ಕಾಲಿಂದೊದೆದು ಕದವನು ಹೊಕ್ಕನಾ ಹನುಮ ॥ ೬೫ ॥ ಎದ್ದಿದಾರೋ ಯೆಂಬವರ ನೊಳ । ಗುದ್ದಿನಲಿ ತೀರಿಸುತ ಮೆಲ್ಲನೆ । ಹೊದ್ದಿದನು ಹೊಳೆಹೊಳೆವ ಮಣಿಮಯ ಖಚಿತ ಕಾಂಚನದ ॥ ಭದ್ರಭವನಾವಳಿಯನಲ್ಲಲ್ಲಿದ್ದವರ ನಾರೈದು ಸೀತೆಯ । ಕದ್ದ ಕಳುವಿನ ಕಳನ ಸಜ್ಜೆಯ ಸದನಕೈತಂದ ॥ ೬೬ ॥ ಜೇರುತಿರ್ದುದು ದಿವ್ಯಗಂಧದ । ಸಾರತರ ಸೌರಭವ ನಾಪುರ । ವೈರಿ ಮಿತ್ರನ ಬನದ ಕಂಪಿನ ಸೊಪ್ಪನುರೆಜರೆದು ॥ ಭೂರಿಭುವನದ ಗಂಧಗವ್ವದ । ಹಾರಿಯೆನಿಸುವ ಗಂಧವಾಹಗ ।

ಧೀರತರ ಬಂಧುರದ ಗಂಧದ ಭರಣಿಯಂದದಲಿ ‖ ೬೭ ‖ ಹೊಕ್ಕನಾ ಭವನವನು ಭರವಸ। ದಕ್ಕರಿನ ನೋಟದಲಿ ಮುರಿಮುರಿ । ದಿಕ್ಕಿಲನ ನಾರೈವುತೊಯ್ಯನೆ ಸಾರಿದನು ಖಳನ ‖ ಲಕ್ಕಸಂಖಯ ಸಖಿಯರಿದ್ದುದು । ಜಕ್ಕುಲಿವ ಜವ್ವನದ ಮನ್ಮಥ। ನಿಕ್ಕೆಯಂತಿರೆ ಸಾಲಮಣಿಪರಿಯಂಕ ವೀಥಿಯಲಿ ‖ ೬೮ ‖ ಹೊಳೆಹೊಳೆವ ಕಿರುದಾಡೆಗಳ ತಳ । ತಳಿಪ ಕದಪಿನ ದೀರ್ಘನಯನದ । ಬಲು ಮೊಲೆಯ ಬಾಸೆಗಳ ಬಂಬಲುಗುರುಳ ಹೊಸಹೊಗರ ‖ ಕಲಿತವುದದುಬ್ಬುಗಳ ತೋಳಿನ । ಮಲೆತ ಹುಬ್ಬಿನ ಪುಳಿನ ಜಘನ । ಸ್ಥಳದ ದಾನವ ಸತಿಯರಿದ್ದರದೊಂದು ತಾಣವಲಿ ‖ ೬೯ ‖ ನಸಿದ ದಾಡೆಯ ಹುರಿಯ ಹುಬ್ಬಿನ । ಕೆಸರುಗಂಗಳ ಕರ್ಕಶಂಗವ। ಮಿಸುಪ ದಂತಾವಳಿಯ ಜುಂಜುರುದಲೆಯ ಹೆಗ್ಗವಿಯ ‖ ಬಿಸುರ ಹೊದ್ದಿದ ತೋರಮೊಲೆಗಳ । ವಿಷಮ ರಕ್ತಾಸಕ್ತಮಯ ರಾ । ಕ್ಷಸವಧೂ ನಿಕುರುಂಬವಿದ್ದುದದೊಂದು ತಾಣದಲಿ ‖ ೭೦ ‖ ತೋರ ಕಬರಿಯ ಕುಡಿತೆಗಂಗಳ । ಸಾರಬಿಂಬಾಧರದ ಲಲಿತ । ಸ್ಮೇರವದನದ ನುಣ್ಗೊರಲ ಪೀವರ ಪಯೋಧರದ । ಚಾರುಭುಜ ಲತಿಕೆಗಳ ಘನಗಂ । ಭೀರ ನಾಭಿಯ ಗುರುನಿತಂಬದ । ಭೂರಿಭೂಷಣದವರಿಯರು ಮೆರೆದಿರ್ದರೊಂದೆಸೆಯ ‖ ೭೧ ‖ ಅಂಗಸೌಖ್ಯದ ನಗೆಮೊಗದ ಸ। ರ್ವಾಂಗ ದಮಳಾಭರಣ ಕಿರಣ ತ । ರಂಗ ದನುಪಮ ಹಾವಭಾವ ವಿಲಾಸ ವಿಭ್ರಮದ ‖ ತುಂಗ ಕುಚ ದುತ್ತುಂಗ ಕಬರಿಯ । ಸಿಂಗರದದೆಳೆನಡುವಿ ನವಳ ನ । ರಾಂಗನೆಯರೆಸೆದಿರ್ದರಾ ಸ್ಮರಭಟನ ಬಲದಂತೆ ‖೭೨‖ ಉಳಿದ ಪನ್ನಗ ಗರುಡ ಗುಹ್ಯಕ । ಲಲನೆಯರು ಗಂಧರ್ವ ಕಿನ್ನರ । ರೊಳು ನಿತಂಬಿನಿಯರು ಮಹಾಪ್ಸರ ಯಕ್ಷರೋರಗರ ‖ ಹಲವು ಜಾತದ ಜವ್ವನದ ಜಂ । ಗುಳಿಯರಿರ್ದುದು ಸುರತ ಸೌಖ್ಯದ । ಸುಲಲಿತ ಪ್ರೌಢೆಯರು ಸಕಲ ಕಲಾವಿದಗ್ಧೆಯರು ‖ ೭೩ ‖ ವನಧಿಮಧ್ಯದ ಹರಿಯ ಸೊಬಗಿನ । ಘನತೆಯೊಳಸುರೇಂದ್ರನುರು ಯೌ। ವ್ವನವ ಕಾಂತಾರ್ಣವದ ಮಧ್ಯದೊಳಿದ್ದ ನೊಲವಿನಲಿ ‖ ಮನುಜ ದನುಜಾಮರ ಭುಜಂಗಮ। ಜನಪದತ್ವವು ಸಲುವುದೈ ನಿನ । ಗೆನುತ ಮಿಗೆ ಕೊಂಡಾಡಿದನು ಕಂಡಾ ದಶಾನನನ ‖೭೪‖ ನೀರು ತುಂಬಿದ ಮುಗಿಲಕಾಂತಿಯ। ಚಾರುತರ ತನುರುಚಿಯ ನಗೆಮೊಗ । ದೋರಣದ ತಳತಳಿಪ ಕದಪಿನ ಕರ್ಣಕುಂಡಲವ ‖ ವೀರಲಕ್ಷ್ಮೀವಿಹಾರಣೋನ್ನತ । ಭೂರಿಭುಜದಂಡದ ನಿಶಾಚರ । ಧೀರಮನ್ಮಥ ನಿರ್ದನಾಲಿಂಗನದಿ ಮಯ ಸುತೆಯ ‖೭೫‖ ಹರನ ಹಣೆಗಣ್ಣಿನ ಮಹಾನಲ। ದುರಿಯ ಹೊಯ್ಲಲಿ ಸಾಯಲಾರದೆ । ಪುರುಷತನವನು ಬಿಟ್ಟು ಮಂಡೋದರಿಯ ರೂಪಕವ ‖ ಧರಿಸಿದನೊ ಕಂದರ್ಪನೆನೆ ಸಿಂ । ಗರದ ಸಾರೋದಯದ ಸೊಬಗಿನ । ಶರನಿಧಿಯ ಮೌಕ್ತಿಕದವೊಲು ಮೆರೆದಿರ್ದಳಾ ಕಾಂತೆ ‖ ೭೬ ‖ ತಡೆದುದೀತನ ಮನದ ಸಂಶಯ। ದೆಡೆಹು ಕರಣೇಂದ್ರಿಯದ ಬುದ್ಧಿಯ । ಕಡುಹು ಕೈಗುಂದುದು ಕಳವಳಿಕೆ ‖ ಬಿಡಿಸಿದನು ಕಂಪದಲಿ ನಿಜವನು । ಹಿಡಿಯಲರಿಯದೆ ಪವನಸುತ ನೆರೆ। ಮಿಡುಕು ತೀಕ್ಷ್ಣಿಸುತಿರ್ದನೊಂದರೆಗಳಿಗೆ ಮಾತ್ರದಲಿ ‖೭೭‖ ಒಡೆಯನಾಜ್ಞಾಪಿಸಿದ ಕುರುಹಿನ। ಕಡುಹು ಕೆಲವಿವೆ ಕಾಣಿಸದೆ ಕೆಲ । ವಡಕವಾಗಿವೆ ಯೇನಮಾಡುವೆನೆನುತ ಮನದೊಳಗೆ ‖ ಮಿಡುಕುವನು ಸಂತೈಸುವನು ಘುಡು । ಘುಡಿಸುವನು ಸೈರಿಸುವನಸುರಗೆ। ಕಡೆಯ

ಕಾಣ್ಬಡೆಯನು ನೆನೆವುತಿರ್ದನಾ ಹನುಮ ॥ ೭೮ ॥ ಆಗಲಿದಕೇನೊವ್ಮೆ ರಘುವರ ।
ನಾಗನೋಕ್ತಿಯ ಕುರುಹುಗಳ ಲೇ । ಸಾಗಿ ಮಿಗೆ ನಿರ್ಧರಿಸಿ ನೋಡುವೆ ನೀ ಪುರಂಧ್ರಿ
ಯಲಿ ॥ ಮೇಲೆ ಮನದಲಿ ತೋರಿದುದ ನು । ದ್ಯೋಗಿಸುವೆ ನೆಂದೆನುತ ಮೆಲ್ಲನೆ ।
ಬಾಗಿ ದೀಪ್ತಿಯ ಬೆಳಗಿನಲಿ ಭಾಮಿನಿಯ ನೀಕ್ಷಿಸಿದ ॥೭೯॥ ಆ ಕಕುಝ ಜ ಪೇಳ್ದ ಕುರು
ಹಿನ । ಸೋಕ ಕ ಣದೆ ಕಂಡನಶುಭದ । ಕಾಕರೇಖೆಯನಂಘ್ರಿಯಲಿ ವೈಧವ್ಯ ಲಕ್ಷ
ಣದ ॥ ನೂಕಿದನು ಮನದರ್ಥ ಚಿಂತೆಯ । ನಾಕುಲತೆ ಬಿಡಲರಿಯದ್ಮೆಂದ್ರ । ವ್ಯಾಕ
ರಣ ಪಂಡಿತನು ನೋಡಿದ ನಬಲೆಯಾನನವ ॥೮೦॥ ನೊಸಲೊಳಿಲ್ಲ ಖರಾಂತಕನು ನೇ ।
ಮಿಸಿದ ಬಾಲಸ ಧಾಂಶು ರೇಖೆಯು । ಪುಸುವಲಕ್ಷಣವಿದ್ದುದಾ ಭಾಳಪ್ರದೇಶದಲಿ ॥
ಅಸಿತ ರೋಮಾವರ್ತ ಸಾಕಿ । ನ್ನಸುರೆಯಿವಳೆಂದರಿದು ಮನದಲಿ । ಘಸಣಿಗೊಂಡನು
ನರಕ ಭಾಜಕನಾದೆನೇ ಯೆನುತ ॥೮೧॥ ಜೆರಸುವಳಿ ಸುರಗಂಗೆ ಕಾದಂ । ಬರಿಯ ಕಡ
ಲನು ಸಂಶಯವ । ಕರವ ಸಂಘಟಿಸಿದೆವಲಾ ಸಿರಿ ರಾಮ ರಾಮೆನುತ ॥ ಹಿರಿದು ಪರಿ
ತಾಪದಲಿ ದೇಹವ । ನುರುಹಿಕೊಂಡು ಪುರಾರಿ ಶಂಕರ । ಹರ ತ್ರಿಯಂಬಕಯೆನುತ
ತಲೆಗೊಡಹಿದನು ಹನುಮಂತ ॥ ೮೨ ॥ ಮುರಿದನಲ್ಲಿಂ ಮೇಲೆ ಮುಂದಕೆ । ಬರಲು
ಕಂಡನು ವಿವಿಧ ಕುಸುಮೋ । ತ್ಕರದ ಗಂಧಾಕ್ಷತೆಯ ಪೂಜಾಬಂಧದನುಪಮದ ॥
ಕಿರಣಲಹರಿಯ ವಿಮಳತರ ವಿ । ಸ್ತರದ ವಿವಿಧಾಯುಧದ ಮಧ್ಯದ । ಗರಳಕಂಧರ
ದತ್ತನಿರುಪಮ ಚಂದ್ರಹಾಸಕವ ॥೮೩॥ ಸುರನರೋರಗ ದೇವಸಮಿತಿಯ । ಶಿವ ತರಿ
ತರಿದಿಕ್ಕೆಲವರದ । ರುರುಲಲಾಕ್ಷರ ಕದಂಬಕ ವಿಂಬುಗೊಂಡಂತೆ ॥ ಹೊರಳಿ ವೆಳಗಿನ
ಹೊಗರ ಧಾರೆಯ । ಸುರುಚಿರದ ಮೋಹರದ ಮಣಿ ಬಂ । ಧುರದ ಖಂಡೆಯವಿರಲು
ಕೈಯಿಕ್ಕಿದನು ಕಲಿಹನುಮ ॥ ೮೪ ॥ ನೆಗಹಿ ಝಳಪಿಸಿ ಲುಳಿವಡೆಯಲಿಳೆ । ಗುಗುಳಿ
ದುದು ಬಲುಗಿಡಿಗಳನು ನಿ । ದ್ರೆಗಳ ನಿಬಿಡಸ್ತನೆಯರೆದ್ದುದು ಬೆದರುವಾತಿನಲಿ ॥ ಧಗ
ಧಗಿಸಿತುರಿ ಮತ್ತೆ ಝಳಪಿಸೆ । ನಿಗರವೊಳ್ಳಿದೆನುತ್ತ ರಕ್ಕಸ । ವಿಗಡಕೈದುವ ನಿರಿಸಿ
ಕೆಲಸಾರಿದನು ಕಲಿಹನುಮ ॥ ೮೫ ॥ ಸೀತೆ ಯಿಲ್ಲೀಯಡೆಯೊಳೆನುತ ಬ । ಲಾತಿಶಯ
ಬಳಿಕುಳಿದವನಿಯ ನಿ । ಕೇತನದ ಲರಸಿದನು ಮರೆಯದೆ ಮೂರು ಲೋಕಗಳ ॥ ಮಾತೆ
ಯನು ಮದನಾರಿಸಖ ಸಲೆ । ಸೋತು ಕಪ್ಪವತೆತ್ತ ಭುವನ । ಖ್ಯಾತದವನ ಪಿಮಾನ
ವಿರ್ದುದು ಪೂರ್ವಭಾಗದಲಿ ॥ ೮೬ ॥ ಸಕಲಸುರರ ವಿಮಾನಕದು ನಾ । ಯಕವಲೇ
ನಳಿನಜನ ಸೃಷ್ಟಿ । ಪ್ರಕರಣಕೆ ಪರಮಾರ್ಥವಿದು ಪದ್ಮಜಭವಾಮರರ ॥ ಪ್ರಕಟಿತಾ
ಖಿಲ ಭುವನ ಭವನ । ಪ್ರಕರ ಪರಿಯಟಣೈಕ ಪೆರಿರಂಜಕ । ಜಗವಿದೀಗದ ಕಂಡು
ಹೊಕ್ಕನು ಹನುಮ ಹರುಷದಲಿ ॥೮೭॥ ಸುರಪುರದ ರಂಭಾವಿಲಾಸ್ಯದ । ತರುಣಿಯರು
ಕೇಳೀ ಸುವಿದ್ಯಾ । ಧರಿಯರಿರ್ದುದು ಭರತ ವಿದ್ಯಾವಿಷಯ ಪರಿಣತರು ॥ ಮುರಜ
ವಾಸವಾದ್ಯ । ಸ್ಫುರಿತ ತಾಳಸುಗೀತದಬಲೆಯ । ರಿರಲು ನೋಡಿದರವರೊಳಾ ನಿಮಿ
ರಾಜ ನಂದನೆಯ ॥ ೮೮ ॥ ಹಡಪಸೀಗುರಿ ಚಾಮರದ ಕ । ನ್ನಡಿಯ ಕಾಳಾಂಜಿಯ
ಸುಗಂಧದ । ಮುಡಿಯಲರಹಾವುಗೆಯ ಹೊಳಹಿನ ತಾಳವೃತ್ತಕವ ॥ ನುಡಿನಗೆಯ
ಪರಿಹಾಸಕರ ವಂ । ಗಡದ ಲೆಸೆವಾಸಖಿಯರಲಿ ವಿಂ । ಗಡಿಸಿ ನೋಡಿದು ಕಾಣ ದಳವಳಿ
ದನು ಹನೂಮಂತ ॥೮೯॥ ಅರಸಿ ವಿಷವಲ್ಲಿರ್ದ ಮನದು । ಬ್ಬರದ ಚಿಂತಾಭರದೊಳಗೆ

ಬಳಿ | ಕರಿಗೃಹವ ಹೊರವಂಟು ಹಯಗಜ ಶಸ್ತ್ರಶಾಲೆಯಲಿ ‖ ತಿರುಗಿ ರನ್ನಸುಗಂಧ ದಿವ್ಯಾಂ | ಬರ ಸುವರ್ಣ ಸುಧ್ಯಾನಕೋಶದ | ನೆರವಿಗಳ ನಿರ್ೕೈಸಿ ಸೆರೆಮನೆಗಾಗಿ ನಡೆ ತಂದ ‖೯೮‖ ಏನಹೇಳುವೆ ನಿದ್ದುದಲ್ಲಿ ಮ | ಹಾ ನರೇಂದ್ರರು ಯಕ್ಷಸಿದ್ಧ ವಿ | ತಾನ ಕಿನ್ನರ ಕಿಂಪುರುಷ ಗಂಧರ್ವ ಗುಹ್ಯಕರ ‖ ಮಾನಿನೀಜನ ಸಹಿತ ಕಂಡು ಮ | ಹಾ ವಿನೋದದಲದರಿ ಶಿರವನು | ಭಾನುಕುಲದರಸಿಯನು ಕಾಣದೆ ಹನುಮ ಹೊರ ವಂಟ ‖ ‖೯೧‖

ಎರಡನೆಯ ಸಂಧಿ ಸಮಾಪ್ತಂ.

ಮೂರನೆಯ ಸಂಧಿ.

ಸೂಚನೆ| ಕ್ಷೋಣಿಪತಿ ಸಿರಿರಾಘವೇಂದ್ರನ | ರಾಣಿಯನು ಬನದೊಳಗೆ ಭುವನ |
ಪ್ರಾಣಸುತ ಕಂಡಿತ್ತನನುಪಮ ರಾಜಮುದ್ರಿಕೆಯ ‖

ಪದ್ಯ‖ ಕಂದಕೇಳ್ಗೆ ಕುಶನೆ ಚಿಂತೆಯ | ಸಂದಣಿಯ ಸುಯಿಲುಗಳ ಸೊಂಪುರೆ | ಕಂದಿದಾನನ ದಿಳಿವ ಜಲಬಿಂದುಗಳ ಲೋಚನದ ‖ ನಿಂದಿರುತ ಬೆರಗಾಗುತವನೀ | ನಂದನೆಯದೇನಾದಳೋ ಹಾ | ಯೆಂದೆನ ತ ಹಂಬಲಿಸಿ ಹಲುಬುತ ಹನುಮನೈತಂದ‖ ಬರಬರಲು ತತ್ಪುರದ ಮಧ್ಯದ | ಪರಿಸರದ ಪಡಿತಳದ ನಾನಾ | ಪರಿಯ ಪಲ್ಲವಗಳ ಪತಾಕಾವಳಿಯ ಪಸರಿಕೆಯ ‖ ಸುರುಚಿರದ ಕಳಶಾಳಿಗಳ ಬಂ | ಧುರದ ಬಹಳಿತ ಪತ್ರಿಕೆಯ ಸಂ | ಚರದ ಸುಮನೋಹರದ ಹರ್ಮ್ಯವ ಕಂಡನಿದಿರಿನಲಿ ‖೨‖ ಏರಿದನು ನಡೆದುದಯ ಶಿಖರಿಯ | ನೇರು ವಮೃತಾಂಶುವಿನವೊಲು | ಹದಿನಾರು ಯೋಜನದುದ್ದ ದುಪ್ಪರಿಗೆಯನು ತುದಿವರೆಗೆ ‖ ತೋರಿತಾ ಸಮಯದಲಿ ಸೀತೆಯ | ತೋರಬೇಕೆಂದು ತ್ಸವದ ಮೈ | ದೋರಿಕೆಯ ಶಶಿಬಿಂಬವಂಬರಕಾ ಸವಿಾರಜನ ‖೩‖ ಒಸರಿದನು ಶಶಿ ಕಾಂತಶಿಲೆ ದವ | ಳಿಸಿದು ದಂಬರವಂಬುನಿಧಿ ಉಳಿ | ಮಸಗಿದುದು ನಗೆದೋರಿದುವು ನೈದಿಲೆ ಚಕೋರಚಯ ‖ ಬಿಸುಟರಂತಶ್ರಮವ ತಂಬೆಲ | ರೆಸಗಿದುದು ತನಿವೇಟದಲಿ ತಾ | ಮಸಿ ದಿಗಂಬರೆಯಾಗಿ ನಲಿದಪ್ಪಿದಳು ನಿಜಪತಿಯ ‖ ೪ ‖ ಚರಣಲಾಘವದಿಂದ ಮೆಲ್ಲನೆ | ತಿರುತಿರುಗಿ ನೋಡಿದನು ತತ್ಪುರ | ವರವನಾ ಚಂದ್ರಮನ ಸಾಂದ್ರಪ್ರಭೆಯ ಬೆಳಗಿನಲಿ ‖ ಮರೆದುದಿಲ್ಲನಿತರಲಿ ದೇವಿಯ | ರಿರವು ತನ್ನಯ ಕಂಗಳಿಗೆ ಗೋ | ಚರಿಸುವುದು ದುರ್ಲಭವೆನುತ ದುಮ್ಮಾನ ಮನಸಾದ |೫‖ ಮರುಗಿ ಮಾಡುವುದೇನಃ ಸಾಕಿ | ನ್ನರಿಕೆಯೊಂದಿದೆ ತನಗೆ ರಘುವರ | ನರಸಿ ಕೊಳಲೀಗಿರಿಯ ಕಿತ್ತೊಯ್ದಿಳುಹುವೆನು ಮುಂದೆ ‖ ತೆರನತಾನೇ ನೋಡಿಕೊಳ ಲೆ | ಚ್ಚರಿಕೆಗದು ತಾ ಸಮಯವಿನಿತಕೆ | ಕೊರತೆ ಬಾರದೆನುತ್ತ ನಿಶ್ಚಯಿಸಿದನು ನಿಜಮತವ ‖ ೬ ‖ ಬಳಲಿದೆವು ಹಿರಿದಾಗಿ ನಗ ರವ | ತೊಳಲಿ ನಾವಿಂದಿನಲಿ ಬಾರ್ದೆ | ಬಳಿಗೆಲಸಕಿನ್ನಾರು ನೀನಮಗಲ್ಲದಾಪ್ತರಲಿ | ಹೊಳಲ ಹೊತ್ತ ಮಹಾ ತ್ರಿಕೂಟಾ | ಚಲವನಿದ ನೀ ಕೀಳು ಬೇಗೆಂ | ದೊಲಿವ ಮನ್ನಣೆಯಿಂದ ಬಾಲಕೆ ಬೆಸಸಿದನು ಹನುಮ ‖೭‖ ಆ ಹನುಮ ನಾಜ್ಞಾಪನೆಯ ಕ | ದ್ರೂಹೆವಿಡಡಾಕ್ರಮಿಸಿ ಸುತ್ತಿದು | ದಾ ಹರಾದ್ರಿಯ ಕಿತ್ತು ದೈವದ್ರೋಹಿ ರಕ್ಕಸನ ‖

ಬೇಹನಗರದ ನಗವ ನಮರ ಸ | ಮೂಹ ಕಂಪಿಸೆ ಕಮಲಜಾಂಡ ಕ | ಟಾಹ ಖಿಳಿಖಿಳಿ
ಯೆನೆ ವಿಭಾವಿಸಿ ಜಡಿದು ದೆಡಬಲಕೆ ‖ ೮ ‖ ಬೆದರಿದುದು ತತ್ಪೌರಜನ ನೆಲ | ನದು
ದುದು ಭೂಕಂಪನದ ಲಲು | ಗಿದುವು ಕುಲಕುಧರಾಳಿ ಕೂಗಿತು ಗಗನ ನಿಮಿಷದಲಿ ‖
ಕದಡಿತಗ್ಗದ ಕಡಲು ನುಡಿಯುಲ | ತ್ತುದರ ಮೇಲಶರೀರ ವಾಕ್ಯಾ | ಶದಲಿ ಮಾರುತನ
ಮಗನ ಮನದಿಷ್ಟಾರ್ಥವಹುದೆಂದ ‖ ೯ ‖ ದನಿಯುನದ ನಾಲಿಸಲು ತಾ ನಿಜ | ಜನಕ
ನೊಯ್ಯನೆ ಬನದವನಿತೆಯು | ವಿನುತ ಲಾವಣ್ಯಾಂಬುವಿನ ಸೀತಳದ ಸೊಂಪಿನಲಿ ‖
ಅನುಪಮಾನದ ಪದ್ಮಗಂಧದ | ಕ್ಷನತೆಯಲಿ ಪಕ್ಷೋಜಯುಗ ದಿರು | ಬಿನಲಿ ತಡೆತಡೆ
ದೆಸಗಿದನು ನಿಜಸುತನ ಸರಿಸದಲಿ ‖೧೦‖ ನೋಡಿದನು ಸೌರಭ್ಯ ಶೈತ್ಯ ಸ | ಗಾಢಣೆಯ
ಸೌಗಂಧವಾಹನ | ನಾಡಿಕೆಯ ಸರಣಿಯನು ಕಂಡನು ಗಂಧವಾಹಸುತ | ಮೂಡಣಾ
ಶಾಪತಿಯ ಚೈತ್ರನ | ಬೀಡಿಕೆಯ ನೇಳಿಸುವ ದಿವಿಜ ವಿ | ಭಾಂಡನನು ದಮವಿಲಸಿತ
ಕ್ರೀಡಾಮಹಾವನವ ‖೧೧‖ ಸಸಿಯಿಡುವನಂಗಜಸುಧಾ ಘನ | ರಸವ ಸೂನುವನಿಂದು
ಮಂದಾ | ಲಸನು ಸಲಹುವನೋ ವಿದುಕೊಂಡಿಹ ನಿಕ್ಷುಚಾಪಸಖ ‖ ಎಸೆವ ಕುರುವಕ
ತಿಲಕ ಪನಸ | ಪ್ರಸರ ಜಂಬು ರಸಾಲ ದಾಡಿಮ | ವಿಷಮ ವಿಲಸಿತ ವಿವಿಧನಿರುಪಮ
ಭೂಜರಾಜಿಗಳ ‖ ೧೨ ‖ ಗಾಳಿಯೊಲಹಿಗೆ ನಿಲುಕುವವು ಹೊಂ | ಬಾಳೆ ಖಚರೀಜನದ
ಕಬರಿಗೆ ಬಾಳೆ ಬಾಯ್ದೆರಸುವವು ಬಿರಿವಣ್ಣಿನ ರಸಾತಳಕ ‖ ಬಾಲಕಿನ್ನರಿಯರನು ನೃಪ
ಶುಕ | ಪಾಳಿಸಿದ ನಖಹತಿಯ ಚೂತ ಫ | ಲಾಳಿ ನಿರ್ಜರನಿಲಿಸುವವು ಪಥಿಕರ ಪರಿ
ಶ್ರಮವ ‖೧೩‖ ನನೆಮುಗುಳ್ಗಳ ಕುಸುಮ ನಸುಗಾಯ್ | ಕನರುಗಾಯ್ ಹುಳಿಗಾಯಿ
ಪಣ್ಗಳ | ತನಿರಸದ ಮಧುರಾಮೃಪೂರಿತ ಮಾಧುರೀಯುಕವ ‖ ತೊನೆದು ತೂಗುವ ಫಲ
ಭರಂಗಳ | ಘನತರದ ಸಹಕಾರ ಸಹಸುರ | ವನಕದಂಬಕ ವೆಸೆದುದಿದಿರಿಲಿ ಕಪಿಕುಲೇ
ಶ್ವರನ ‖ ವಸುಮತೀಪತಿ ಸೂನುಕೇಳ್ ಬಂ | ಣಿಸಲು ತೀರದು ತನಗೆ ಚೈತ್ರನ | ವಸತಿ
ಯೋ ಸೌಗಂಧಮಂದಾನಿಲನ ನೆಲೆಮನೆಯೊ ‖ ಕುಸುಮಬಾಣನ ಬೀಡೊ ಸುರವನ |
ವೆಸೆವಜನ್ಮನಿವಾಸವೆನೆ ವನ | ವೆಸೆದುದಾ ಶ್ರೀರಾಮಚಂದ್ರನ ಚರನ ಕಣ್ಮನಕೆ ‖೧೫‖
ವನವಿದೊಂದಿದೆ ಗಗನದಗ್ರದ | ನುಡಿಯಿದೊಂದಿದೆ ನೋಳ್ಪ ನಷವ | ರ್ತನೆಯ
ನಿದಿರಿನಲೀ ಮಹಾವನದೊಳಗೆ ಬಳಿಕಲ್ಲಿ ‖ ವನಜವದನೆಯ ಪಾದದರುಶನ | ವನಿತ
ರಲಿ ಸಂಘಟಿಸದಿಕೆ ಕಂ | ಡನುವ ಕಾಂಬೆನೆನುತ್ತಶೋಕಾವನಕೆ ಪುಟನೆಗೆದ ‖ ೧೬ ‖
ಪುಟನೆಗೆದ ಭಾರದಲಿ ಕಪಿಪದ | ಚಟುಳ ಹತಿಗುಪ್ಪರಿಗೆ ಸಿಡಿಲಾ | ರ್ಭಟಿಸಿ ಹೊಡೆ
ದದ್ರಿಯುವೊಲಿಳೆ ಗೊರಗಿತು ನೀಹಾರದಲಿ ‖ ಕಟಕಬೆದರಿತು ರಾಕ್ಷಸರ ಸಂ | ಘಟದ
ಸೌರಂಭದಲಿ ಬಳಿಕೀ | ಪಟುಪರಾಕ್ರಮಿ ಹನುಮ ಹೊಕ್ಕನು ಲಲಿತ ನಂದನವ ‖೧೭‖
ತಿಳಿಗೊಳನ ದಾಂಟುತ ಲತಾಮಂ | ಡಳಿಯ ನುಸುಳುತ ಕುಸುಮ ವಲ್ಲಿಗ | ಳೊಳಗೆ
ವಿಹಂಸುತುನ್ನತ ದ್ರುಮತತಿಯ ಲಂಘಿಸುತ ‖ ಕೆಲಬಲವ ನಾರೈವು ತೊಯ್ಯನೆ |
ನಿಲುಕಿನೋಡುತ ಬಂದನುರು ಮಂ | ಜುಳಫಲಾನ್ವಿತ ಶಿಂಶುಪಾಖ್ಯ ದ್ರುಮದ ಹೊರ
ಗಾಗಿ ‖ ೧೮ ‖ ಆಮಹಾ ದ್ರುಮದಡಿಯ ಕದಳಿ | ಸ್ತೋಮ ಮಧ್ಯದದಳ ನಿಳಯದಲಿ |
ರಾಮನಾಮಾಮೃತ ಸಜೀವಕಪ್ರಾಣ ಧಾರಕದ ‖ ತಾಮರಸ ದಳನಯನೆಯಾನ ನಿ |
ಸ್ಸೀಮ ಸುವ್ರತಚರಿತೆಯನು ಸೀ | ತಾ ಮಹಾಲಕ್ಷ್ಮಿಯನು ಕಂಡನು ವೀರ ಹನು

ಮಂತ ॥ ೧೯ ॥ ಶರಭ ಸಿಂಹ ಚಮೂರುವದನದ । ಕಿರಿಲಾಯ ವೃಕಾನನದ ಪರಿ ।
ಪರಿಯ ಖಗ ಮೃಗ ಸರ್ವ ವಕ್ತ್ರದ ವಿಕೃತ ದೃಷ್ಟಿಗಳ ॥ ಎರಡು ನಾಲ್ಕೈದಾರು ತಲೆ
ಗಳ । ಕರದ ಕತ್ತಿಯ ಕಾಳರಕ್ಕಸ । ತರುಣಿಯರ ಕಾವಲಿನ ಸೀತೆಯ ಕಂಡನಾ
ಹನುಮ ॥ ೨೧ ॥ ಏಕ ವೇಣೀಧರೆಯ ನಶ್ರುಜಲಾಕುಲಾಯುತ ಲೋಚನೆಯನು ।
ದ್ರೇಕಶೋಕಾನ್ವಿತೆಯ ನಂತಸ್ತಾಪವಿಹ್ವಲೆಯ ॥ ಶೋಕವನದಡಿ ಯಧಿಕಪುಣ್ಯ ।
ಶ್ಲೋಕಚರಿತೆಯ ಮಲಿನಪಟ ಪರಿ । ದಾಕೃತೆಯ ನವಿರಳಕೃಶಾಂಗಿಯ ಕಂಡನಾ
ಹನುಮ ॥ ೨೨ ॥ ಪದ್ಮಗಂಧಿಯ ಪದ್ಮ ವದನೆಯ । ಪದ್ಮಸದ್ಮ ನಿವಾಸನೆಯ ಪದ್ಮ
ಕರಪದ್ಮಂ ಗಳೊಪ್ಪುವ ಪದ್ಮ ಲೋಚನೆಯ ॥ ಪದ್ಮಜಾಂಬಕಿ ಪದ್ಮಿನಿಯ ಹೃ ।
ತ್ಪದ್ಮದೊಳು ರಘುರಾಮಚಂದ್ರನ । ಪದ್ಮಪಾದವ ನೆನೆವ ಸೀತೆಯ ಕಂಡನಾ ।
ಹನುಮ ॥ ೨೩ ॥ ಬಿಸಜ ಸಂಭವ ಜನಿತ ಜನನಿಯ । ಕುಸುಮ ಶರನಂಬಿಕೆಯ
ಭುವನ । ಪ್ರಸರಚರಿತೆಯ ಪುಣ್ಯ ಭರಿತೆಯ ನಧಿಕಸವ್ರತೆಯ ॥ ಪಶುಪತಿ ಬ್ರಹ್ಮ
ಮರೇಂದ್ರನ । ಶಶಿವದನೆಯರ ಭಾಗ್ಯಲಕ್ಷ್ಮಿಯ । ನಸದಳದ ಮಾಯಾವಿನೋದೆಯ
ಕಂಡನಾ ಹನುಮ ॥ ೨೪ ॥ ಜನನಿ ಶಿಶುವನು ಸತ್ಕುಲೀನನು । ವಿನುತ ಸದ್ವರ್ತನೆಯ
ಸತ್ಪುರು । ಷನು ಸದಾಚಾರಿತನು ಸಜ್ಜನ ನಧಿಕಸದ್ಗುಣವ ॥ ಜನಪನೈಶ್ವರ್ಯವನು
ಧರ್ಮ । ಜ್ಞನು ಯಶೋಲಭ್ಯನನು ಸಲಹುವ । ನೆನಹಿನ ವೊಲಭಿಮಾನರಕ್ಷಣೆ
ಸತಿಯ ಕಪಿಕಂಡ ॥ ೨೫ ॥ ಹೊಗೆಯಲದ ಪುತ್ಥಳಿಯವೊಲು ಹಿಮ । ವಗಿದತಾವರೆ
ಯಂತೆ ಬಿಚ್ಚದೆ । ಬಿಗಿದಮುತ್ತಿನ ಚಿಪ್ಪಿನಂದದಿ ರಾಹುಲಂಬಿಸಿದ ॥ ಮೃಗಧರನ
ವೊಲು ಗೂಢದರ್ಥವ । ತೆಗೆಯಬಾರದ ಕೃತಿಯ ವೊಲಿ । ದ್ದಗಣಿತಾಮಲ ಪುಣ್ಯ
ಮೂರ್ತಿಯ ಕಂಡನಾ ಹನುಮ ॥ ೨೬ ॥ ಆಗಬೇಕೀ ಜನನಿ ಜಾನಕಿ । ವೈಗುರುಹು
ತಪ್ಪದು ಮಹಾದೇ । ವೀ ಗರುವ ಪಾತಿವ್ರತೆಯ ಗುಣನಿಧಿಯ ಕಂಡೆವಲ ॥ ಭಾಗ
ಧೇಯರು ನಾವಲಾ ನ । ಮಗೀಗ ಮುಂದಕೆ ಸುಲಭವೆಂದು ಸ । ರಾಗದಲಿ ಕೈ
ಮುಗಿದು ಜಯಜಯ ಯೆಂದನಾ ಹನುಮ ॥ ೨೭ ॥ ಅರರೆ ಶಿವಶಿವ ಸಾಂಗವಾದುದು ।
ನರಪತಿಯ ದೂತತ್ವ ವಿನ್ನೀ । ಶ್ವರನ ಪಾಡಲ್ಲೆನಗೆನುತ ಹೆಚ್ಚಿದನು ಹರುಷದಲಿ ॥
ಬಿರದನಿಕ್ಕುವೆ ನಿನ್ನು ದಶಕಂ । ಧರಗೆ ಕೈಮಾಡಿದ ನಿಶಾಚರ । ನರೆವೆನೆಂ ದುಬ್ಬರದ
ಮನದಲಿ ಹಿಗ್ಗಿದನು ಹನುಮ ॥ ೨೮ ॥ ಅರಸುಗಳೊ ಳಧಿರಾಜ ಚಕ್ರೇ । ಶ್ವರನ
ಬಸುರಲಿ ಬಂದು ಲಕ್ಷ್ಮೀ । ವರನ ತೂಕದ ಸಾರ್ವಭೌಮನ ಕೈವಿಡಿದು ಕಡೆಗೆ ॥
ಸಿರಿಯುಸಿಣೆಯನ ನಿಲಯದಲಿ ಕೈ । ಸೆರೆಗೆ ಸಂದಾ ತಾಯೆ ಯೆಂದಿಳೆ । ಗುರುಳಿಸಿದ
ನಶ್ರುಗಳ ನಾಕೈಯ್ಯೊಡನೆ ಕಲಿಹನುಮ ॥ ೨೯ ॥ ಇತ್ತಲು ಮಾರುತಿ ಶಿಂಶುಪಾದಪ ।
ತರುವಿನಗ್ರದಲವನಿಜೆಯ ಸಂ । ದರುಶನದ ಸಮಯಕೆ ಸುಳಿದುದು ಮೂಡಣಿನ
ಬಿಂಬ ॥ ಮುರಿದು ನಿದ್ರೆಯ ಕಾಪಿನಸುರರ । ತರುಣಿಯರು ಬಳಸಿದರು ಬಿದ್ದುದು ।
ತರಣಿಬಿಂಬ ಮಹಾಂಬುನಿಧಿಯಲಿ ನಡೆದು ಪಶ್ಚಿಮವ ॥ ೩೦ ॥ ಏನನೆನೆದನೊ
ಚಿತ್ತದೊಳಗೆ ದ । ಶಾನನ ಮನಸಿಜನಶರಸಂ । ಧಾನದೆಸುಗೆಯ ಹಗೆಯವೈನೋವಿ
ನಲಿ ಕಳವಳಿಸಿ ॥ ಊನವಕ್ಷರಬಗೆಯ ಭಂಗಿಯ । ಮಾನಸದ ಖಳಶನ್ನಸೇವಾ ।
ಮಾನಿನಿಯರೊಡಗೂಡಿ ಹೊರವಂಟನು ನಿಜಾಲಯವ ॥ ೩೧ ॥ ಬೆಳಗಿದುವು ಬೊಂ

ಬಾಳ ದೀಪಾ | ವಳಿಗಳಿದ್ದೆಸೆಗಳಲಿ ಕಂಚುಕಿ | ಗಳ ಗಡಾವಣೆಯಿಂದ ಬಂದೇರಿದನು ಪುಷ್ಪಕವ || ಹೊಳೆಹೊಳೆವ ಮಣಿಮಕುಟ ಬದ್ಧಾ | ವಳಿಯ ಭಟರೊತ್ತೊತ್ತೆಯಲಿ ಬಂ | ದಿಳಿದನಾ ವನಮಧ್ಯದವನೀಸುತೆಯ ಸರಿಸದಲಿ || ೩೨ || ಸಾರಿದರು ಕಾಪಿನ ನಿಶಾಚರ | ನಾರಿಯರು ಕೈಬಲಕೆ ಮಣಿಮಯ | ಸಾರತರ ಸಿಂಹಾಸನದಲಾ ಮಯನ ಸುತೆ ಸಹಿತ || ಚಾರುತರ ಚಾಮರದ ಲುರೆಕೈ | ವಾರಿಗಳು ಕಳಿಕಳಿದು ದರಿಭಟ ಭೈರವನು ಕುಳ್ಳಿರ್ದನು ಸಮ್ಮುಖದಲಿ ಜಾನಕಿಯ || ೩೩ || ದೇವಿಯಿದ್ದಳ್ ಬಾಗಿದೊಡಲಿನ | ಕೈಬೆರಲ ಹತ್ತುಗೆಯ ಕದಪಿನ | ಜೀವನವನುದುಗಲಿಪ ನಯನದ ಮಣಿದ ಮಸ್ತಕದ || ತೀವಿದುಮ್ಮಳಿಕೆಗಳ ನಸಿದ ಕ | ಳೇವರದ ನಿಜಪತಿಯುಪದ ರಾ | ಜೀವಯುಗಳದ ನೆನಹಿನಲಿ ನೋಡುತ ಮಹೀತಲವ || ೩೪ || ಕಳುಹಿದನು ಕಾಮಿನಿಯರನು ಮೈ | ಥಿಲಿಯ ಬಳಿಗೆ ಬಳಿಕ ಸೇವಾ | ಲಲನೆಯರು ಬಳಸಿದರು ಬಹುವಿವಿಧೋಪಚಾರದಲಿ || ಇಳಿಹಿದರು ಕಮ್ಮೆಣ್ಣೆ ಹಾಯ್ಕಿತು | ಹೊಳೆವ ಮಣಿ ಮಡಿವಸೆ ಮಹಾಮಂ | ಗಳದ ಮಜ್ಜನಕೂಷ್ಣಜಲ ಹೊಂಗೊಡಗಳಿಳುಹಿದುವು ||೩೫|| ವರದುಕೂಲದ ಹಾವುಗೆಯ ಬಂ | ಧುರದ ಗಂಧವ ದಿವ್ಯಮಾಲ್ಯಾಂ | ಬರದ ದಿವ್ಯಾಭರಣದಬಲೆಯ ರುಬ್ಬುವಾತಿನಲಿ || ಅರಸಿ ಕೇಳೀ ವೈಭವವ ನಾ | ದರಿಸಬೇಕೆಂದುಚಿತ ವಚನದ | ಪರಿವಿಡಿಯ ಲಲನೆಯರು ಬಿನ್ನೈಸಿದರು ಜಾನಕಿಗೆ || ೩೬ || ಮೂರು ಲೋಕದಗಂಡ ನೀತನ | ಮೀರಬಹುದೇ ದೇವಿ ದಿವಿಜರ | ನೀರೆಯರು ಬಯಸುವರು ಬಹುವಿಧ ಸುವ್ರತಂಗಳಲಿ || ನೂರುಜನ್ಮವ ತಿರುತಿರುಗಿ ಬಾ | ಯಾರಿ ಕಾಮಿಸಲೀತನಂದದ | ವೀರನುಂಟೇ ನಳಿನಭವ ನಿರ್ಮಿಸಿದ ಸೃಷ್ಟಿಯಲಿ || ೩೭ || ಇದೆ ಚತುರ್ದಶಭುವನ ದೊಡೆತನ | ವಿದೆ ಸಕಲಸಾಂಮ್ರಾಜ್ಯಸಂಪದ | ವಿದೆ ವಿಭುತ್ವ ಸಮಸ್ತ ಸುರ ನರ ಯಕ್ಷ ಗುಹ್ಯಕರ || ಇದನು ನೀ ನನುಭವಿಸಲೊಲ್ಲದೆ | ಚದುರುಗೆಡುವರೆ ದೇವಿ ಹೇಳೆಂ | ದುದಕೆ ಮಾರುತ್ತರವ ಕಾಣದೆ ಕೆಲಕೆ ಸಾರಿದರು || ೩೮ || ಕೇಳದನಿಬರ ಮಾತು ಕಿವಿ ಕ | ಣ್ಣಾಲಿಗಳು ಕಡೆಗಣಿಸಲೆಳಸದು | ಸಾಲು ಸೌಗಂಧಕ್ಕೆ ನಾಸಿಕದುಸುರು ಜಾನಕಿಯ || ನಾಲಿಗೆಗೆ ನುಡಿಹೊಗದು ತನುಸೊಂ | ಪೇಳದಿನ್ನುಳಿದಿಂದ್ರಿಯದ ಸ | ಮ್ಮೇಳವೇತರದೇನು ಸಾಧ್ವಿಯೋ ಸೀತೆ ಭುವನದಲಿ || ೩೯ || ಹೃದಯ ರಾಮಧ್ಯಾನ ನಾಲಿಗೆ | ತುದಿ ನಿಜೇಶಸ್ಮರಣೆ ಕಂಗಳ | ಹೊದಿಸಿ ದೆವೆಯುಪುಗೆ ಗಳಪ್ಪದೆ ರಾಘವೇಶ್ವರನ || ಇದಿರ ಬಗೆವಳೆ ಸೀತೆ ಮಾಯಾ | ವಿದರ ಮಾಯೆಗೆ ಸಿಲುಕುವಳೆ ಲೋ | ಕದ ಮಹಾಮಾಯಾ ವಿನೋದೆ ವಿಚಿತ್ರವೇನೆಂದ || ೪೦ || ಉಪಚರಣೆ ಕೈಕೊಳ್ಳದಾ ಖಳ | ಚಪಲೆಯರು ಚಂಡಿಸಿದರಾ ದಶ | ಲಪನು ಯಿದ್ದನು ಸೀತೆ ಸೇರುವಳಲ್ಲ ತನಗೆನುತ || ತಪನ ಕುಲಜರು ಕೇಳಿರೈ ಲೋ | ಲುಪತಿ ಬಿಡಲರಿಯದೆ ಮನೋಜಾ | ತಪಕೆ ಸೈರಿಸದ ಸುರಸರಮೆಯ ಕರೆದು ಬೆಸಗೊಂಡ || ೪೧ || ಏನನೆಂಬಳು ಸೀತೆ ಮನದೊಳ | ಗೇನ ಹಂಬಲಿಸುವಳು ನಿನ್ನನು | ಮಾನವೇನಂತಸ್ತವಾವುದು ಜನಕನಂಗನೆಯ || ಮಾನವೇಂದ್ರನ ಮರೆದಳೇ ಹದ | ನೇನೆನಲು ಹತ್ತಿರಕೆ ಬಂದು ದ | ಶಾನನನ ಕರ್ಣದಲಿ ಮೆಲ್ಲನೆ ನುಡಿದಳಾ ಸರಮೆ || ೪೨ || ಆಡಲೇನದ ಜೀಯ ಲೋಕದ | ಜೋಡಿಕೆಯ ಜಾನಕಿ

ಜಗತ್ರಿನ। ಗಾಢ ಪತಿಭಕ್ತಿಯಲಿ ನೀಸತಿ ಮಾತೃಭವನವಲ ॥ ಆತಿದರೆ ಜಗವೇನನೆಂಬುದೋ। ಖೋಡಿಗಳು ಕೆಲರುಂಟು ಮಿಕ್ಕಿನ। ಹಾಡಿ ಹೊಗಳಿಸಿಕೊಂಬ ಜಗದ ಪತಿವ್ರತಾ ಜನಕೆ ॥ ೪೩ । ಕಂಡು ಜಲ್ಲೆವು ಕೆಲಜರನು ಭೂ। ಮಂಡಲದೊಳೀ ಪತಿಯ ತೋಲುವ। ಹೆಂಡಿರಿಲ್ಲ ಧೃವ ವಸಿಷ್ಠ ಮಹಾಮುನೀಶ್ವರರ ॥ ಹೆಂಡಿರುಗಳೊಂದೋಜೆ ಜಗದ ಲ। ಖಂಡ ಸುವ್ರತೆ ಸೀತೆ ಹುಸಿದಡೆ। ಖಂಡಪರಶುವಿನಾಣೆ ಸತ್ಯವಿದೆಂದಳಾ ಸರಮೆ ॥೪೪॥ ಆಗುಳಿಕೆಯಲಿ ಸೀನಿಸಲಿ ನಡೆ। ವಾಗ ನುಡಿವಾಗಲಸಿಕೆಗಳಲಿ। ತಾಗುಗಳ ಲೆಡಹುಗಳ ಲೆಚ್ಚರಿಕೆಯಲಿ ಮರವೆಯಲಿ ॥ ಜಾಗರದಲಿ ಸುಷುಪ್ತಿಯಲಿ ಸಂ। ರಾಗದಲಿ ಚಿಂತೆಯಲಿ ರಘುಕುಲ। ಸಾಗರನ ನೆನಹಲ್ಲದಿಲ್ಲನ್ಯತ್ರಗತಿ ಸತಿಗೆ ॥ ೪೫ ॥ ತಿಳುಹಿ ತೀರಿದ ರೆಮ್ಮಬುದ್ಧಿಯು। ಹಲವು ಬಗೆ ಬಹುವಿಧದ ಮಾಯೆಯು। ಬಳಸಿ ಸೋತೆವು ಬೆದರಿಸಿದೆವು ಬಹುಪ್ರಕಾರದಲಿ ॥ ಅಳುಪಕಾಣೆವು ಚಿತ್ತವೃತ್ತಿಯ। ನಲೆ ನಿಜೇಶನಮೇಲೆ ಘನಕ್ಕೆ। ದೊಳಸುಗೊಳ್ಳದು ನುಡಿಸಿ ನೋಡುವಳೆಂದಳಾ ಸರಮೆ। ೪೬ ಐಸೆ ಮತ್ತೇನೆನುತ ಖಳನಭಿ। ಲಾಷೆ ಬಿಡದಿಂತೆಂದ ನಕಟ। ನ್ನೇಸುದಿನ ಬನದೊಳಗೆ ಸೆರೆಯೆಲೆ ಸೀತೆ ಮೃಮನದ ॥ ವಾಸಿಯಿನ್ನಾರೊಳು ವಿವೇಕ ವಿ। ಲಾಸವಲ್ಪವಲಾ ನಿರರ್ಥಕೆ। ವಾಸಿಗಳ ನೆನೆನೆನೆದು ಬರಿದೊರೆಯಾದೆ ನೀನೆಂದ ॥ ೪೭ ॥ ಮರುಳಲಾ ಯೆಲೆ ಸೀತೆ ನಿನ್ನನು। ತಿರುಗಿ ತೆಗೆವವಗೆಂಟು ಕಂಗಳು। ಶಿರದೊಳಿರಲಿನ್ನೀವುದದು ಹುಸಿ ಹಲವುಮಾತೇನು ॥ ಹರಿಹರಬ್ರಹ್ಮಾದಿದೇವರ। ಸರಕುಮಾಡುವೆ ಮಾಡೆನೆಂಬುದ। ಧರೆಯೊಳಗೆ ನೀ ಕೇಳಿಕೋ ಕಾಳಾಗಬೇಡೆಂದ॥೪೮॥ ಚದುರತನ ನಿನಗುಳ್ಳಡೀಯೆ। ಪ್ಪದಲಿ ಬೆಸುವುದು ಬುದ್ಧಿಪಟ್ಟದ। ಸುದತಿ ನೀ ನೆನಿಸುವೆನು ಜಗದೊಳಗಾಣೆ ಘೋಷಣೆಯ ॥ ಇದೆ ಚತುರ್ದಶ ಲಕ್ಕ ಲಲನೆಯ। ರಿದೆ ಮಹಾ ಸಂಪದವು ನೀ ನಿಂ। ತಿದಕೆ ನಾಯಕಿಯಾಗು ನಡೆ ಜಡಮತಿಯದೇಕೆಂದ ॥೪೯॥ ಸುರಪಶಿಖಿ ವರುಣಾದಿಗಳು ಕಿಂ। ಕರರು ತನಗಿಂದಬುಜಭವ ಶಂ। ಕರರು ತನ್ನಾಶ್ರಿತರು ನಳಕೂಬರ ಜಯಂತ ಕರು ॥ ಚರಣಸೇವಕರಮರ ಮುನಿತುಂ। ಬುರರು ಗಾಯಕರಿಂದು ಮನ್ಮಥ। ವರ ವಸಂತಕರೊಲಿವ ಸತಿಯರ ದೂತರಿವರೆಂದ ॥ ೫೦ ॥ ಸುರರಗುರು ಸಾಂವತ್ಸರಿಕ ಸುರ। ತರುಣಿಯರು ತೊತ್ತಿರು ಸುರೋರಗ। ನರ ಪಿಶಾಚರ ಭುವನದೊಡೆತನವೆನ್ನದೆನಗಿಂದು॥ ಸರಿಯದಾರೆಲೆ ಸೀತೆ ನೀನೀ। ಸಿರಿಯ ನನುಭವಿಸೆದೆ ನಿರರ್ಥಕೆ। ಜರೆದು ಮನುಜನ ಧ್ಯಾನಿಸುವುದಿದು ಯೋಗ್ಯವಲ್ಲೆಂದ ॥೫೧॥ ಕಣ್ಣಳಲಿ ಕಿಡಿಸೂಸೆ ಕೈಯ್ಯಲಿ। ತೃಣವ ನುರೆ ಮುರಿದಿಕ್ಕಿ ನುಡಿದಳು। ಬಣಗು ರಕ್ಕಸ ಕೇಳೆಲವೊ ನಿನಗಿನಿತು ಗುಣವಿಲು ॥ ತ್ರಿಣಯನನ ಧನು ವಂದ ದೇತಕೆ। ಮಣಿಯದಾದುದು ಸುಡುಸುಡೆಲವೋ। ಹೆಣದಿನಿಹಿಗಳಿ ಗುಚಿತವೀಮಾತೆಂದಳಾ ಸೀತೆ ॥ ೫೨ ॥ ಏಕೆ ನಿನಗೀಮರುಳುತನದ ವಿ। ವೇಕನೀ ನಾರಾ ನರಾಧಮ। ಕಾಕನಾರುವಜೀವನ ಪ್ರಾರಬ್ಧ ಫಲಗಳಲಿ ॥ ಸೋಕಿದುದ ನನುಭವಿಸುವುದೆ ಸು। ವ್ಯಾಕುಲದ ಸುಪ್ರಾಪ್ತಿ ನಿನಗಿ। ನ್ನೇಕೆ ರಾಮನಚಿಂತೆಯೆನ ಲುರಿಮಸಗಿ ತವನಿಜೆಗೆ ॥ ೫೩ ॥ ತಂದ ರತಿಬಲನಹುದಲೇ ರಘು। ನಂದನನ ಸಮ್ಮುಖದಲೆಮ್ಮನು। ಹಂದೆ ಹೋಗೆಲೆ ನಾಯೆ ನಿನಗೇಕಮರ ಮಾನವರ ॥ ದಂದಶೂಕರ ಭುವನದೊಡೆತನ। ಚೆಂದವೋರೆಗೆ ಬಹುವಿಕಾರದ। ಮಂದಿವಾಳದ ಮಾತ

ದೇಕೆಂದುರುಬಿದಳ ಖಳನ ‖ ೫೪ ‖ ತನಗೆಗಡ ಸುರರರಸು ಭಂಟನು । ವನಜಭವ ಭವ ರಾಶ್ರಿತರುಗಡ । ಮನೆಯ ತೊತ್ತಿರುಗಡ ಸುರಾಂಗನೆಯರು ವಿಚಿತ್ರವಲ ‖ ಮನಸಿಜಾದ್ಯರು ಸೇವಕರುಗಡ । ಮನುಜಗಡ ರಘುನಾಥ ನಿವನಾ । ನನವ ಶೀಲವರಿಲ್ಲ ವಕಟಕಟೆಂದಳಿಂದುಮುಖಿ ‖ ೫೫ ‖ ಸಲುವುದೀ ನುಡಿ ಪಾಪಿಗಳಗ । ಸ್ಖಲಿತ ಮುಖ್ಯಾರ್ಥಮರಿಗೆ ಬೆದ । ರಳಿದವರಿಗಭಿಮಾನ ಹೀನರಿಗಿದುವೆ ಸಿದ್ಧವಲ ‖ ಎಲವೊ ನಿನ್ನೊಳಮಾತ ಸಿದಿರೂಳು । ಗಳಹಲಹುದೇ ಸುವ್ರತೆಯರೆಲೆ । ಹೊಲೆಯ ಹೋಗೆಂದಬಲೆ ಮುಖದಿರುಹಿದಳು ಖತಿಯಲಿ ‖ ೫೬ ‖ ವಾಸುಗಿಯ ನೀರೊಳೆ ತನ್ನ ನಿ । ವಾಸವಲಿ ಜರೆವುದುಗಡೆಲವೋ ದಾಶರಥಿಯನುಚರರ ಕಿಂಕರ ಕಿಂಕರನು ಚರರ ‖ ದಾಸಿಯುಲ ಕಿಂಕರಿಗೆ ಸರಿಬರ । ಲೇಸರವನೀ ನಾಯಿ ಕಳುಹೆಂ । ದಾ ಸರಮೆಗಾ ಸೀತೆ ಕೋಪಿಸಿ ನುಡಿದಳಿಂತೆಂದ ‖ ೫೭ ‖ ಲಲನೆ ಕೇಳೀ ರಕ್ಕಸನ ಕಡಿ । ದಲೆಯ ಮೆಟ್ಟಿದು ಮಿಂದ ಬಳಿಕೀ । ಖಳನ ಸತಿಯರು ತೊತ್ತಿರಹರೀ ಸಕಲಸಂಪದವು ‖ ಸುಲಭವಹುದಿದು ಸಿದ್ಧವಿದ ನೀ । ಹೊಲೆಯ ಗುತ್ತರಗೊಟ್ಟು ಕಳುಹೀ । ಗಳಹರಕ್ಕಸ ನಾಯನೆಂದಳು ಸರಮೆಗಾ ಸೀತೆ ‖ ೫೮ ‖ ಫಡ ಪತಿವ್ರತೆ ತನುಗಡ ಕಾ । ಳ್ಗಡದು ನುಡಿವರು ನಾವುಗಡ ಧಿಟ । ಕಡಿದಲೆಯ ತಾಮೆಟ್ಟಿ ಮೀವಳುಗಡ ಮಹಾದೇವ ‖ ಒಡತಿಗಡ ಬಲುಸಂಪದಕೆ ಬಾಯ್ । ಬಡುಕ ಹೆಂಗುಸ ಕೊಲುವೆನೆಂದು । ಗ್ಗಡದ ಕೋಪದಲೆತ್ತಿದನು ಖಂಡೆಯವ ನಸುರೇಂದ್ರ ‖ ೫೯ ‖ ಅಹಹ ರಕ್ಕಸರಾಯ ಮರುಳೇ । ವಿಹಿತವೇ ನಿನಗಿದು ಜಯಶ್ರೀ । ಮಹಳೆ ನಗದಿಹಳೇ ಯಶೋರಮೆ ನಾಚಿತಲೆಗೊಡಹ ‖ ಬಹಿ ಕರಿಸದಿಹಳೇ ಧರಾಂಗನೆ । ಗಹಗಹಿಸದಿಹಳೇ ವಿಚಾರವ । ವಹಿಸದಳಿವರೆ ಸತಿಯ ನೆಂದಳು ಮಯನಸುತೆ ಪತಿಯ ‖ ೬೦ ‖ ಝಡಿದು ಚಿಮ್ಮುವ ಖಂಡೆಯಕೆ ಕೈ । ದುಡುಕಿ ಮಂಡೋದರಿ ನಿಜೇಶನ । ಕಡುಹ ಕಲಿಸಿ ಕೆಲಕೆ ಸಾರಿಸುವನಿತರೊಳು ಹನುಮ । ಕಿಡಿಗೆದರಿ ಗಿಣಿವಿಂಡಿಗೆರಗುವ । ಗಿಡುಗನವೊಲುಬ್ಬೆದ್ದು ಕೊಲಗಿದ । ಖಡುಗವನು ಕಂಡಂತರಿಸಿದನು ಮರದಕೊಂಬಿನಲಿ ‖ ೬೧ ‖ ಮರುಳುತನ ಬೇಡೇಳು ನಡೆ ನರ । ತರುಣಿಯೇ ತಾನೀಕೆ ಸಾಕ್ಷಾ । ತ್ಪರಮಪುರುಷನ ಪುಣ್ಯವಧುವೆಂಬಂತೆ ತೋರುತಿದೆ ‖ ಸ್ಮರವಿಕಾರದ ಬುದ್ಧಿ ಸಾಕು । ತೆರಳು ಗೆಡಬೇಡೆಂದ ಮಂಡೋ । ದರಿ ನಿಜೇಶನ ನೊಯ್ದಳರಮನೆಗಣಿಗ ಕೇಳೆಂದ ‖ ೬೨ ‖ ಬಳಿಕ ದುಮ್ಮಾನದಲಿ ಖಳ ನಿಜ । ನಿಳಯ ಕಭಿಮುಖನಾದ ನಿತ್ತಲು । ಹಲುಬಿದಳು ಹರಿದಶ್ವ ಕುಲವಘ ರಾಘವೇಶ್ವರನ ‖ ನೆಲನೆ ಬಾಯ್ದೆರೆ ಬದುಕಲಾರೆನು । ಖಳನ ಬಾಧೆಯಲೆಂದು ಬಾಯ್ವಿ । ಟ್ಟಳಲಿದಳು ನೆನೆನೆನೆದು ಮನುಕುಲ ಸಾರ್ವಭೌಮಕನ ‖ ೬೩ ‖ ರಾಮ ರಘುಕುಲವಾರ್ಧಿ ವರ್ಧನ । ಸೋಮ ಸೋಮಾಹ್ಲಾದಕರ ನಿಜ । ರಾಮ ನಿರುಪಮ ರಮ್ಯ ವಿಗ್ರಹ ವಿನುತವಿಖ್ಯಾತ ‖ ರಾಮ ರಾಘವ ರಾಕ್ಷಸಾನ್ವಯ । ಭೀಮ ಭಾರ್ಗವ ರಾಮ ಬಲ ಜಯ । ರಾಮ ತನಗಿನ್ನೇನುಗತಿ ಹೇಳೆಂದಳಬುಜಾಕ್ಷಿ ‖ ೬೪ ‖ ಅಕಟ ಪೂರ್ವದಲಾವ ಹಿರಿಯರ । ವಿಕಟಗಳೆದೆನೊ ಆವದೈವದ । ಭಕುತಿಯಲಿ ಕುಂದಿದೆನೋ ನಿಂದಿಸಿದೆನೊ ಗುರುದ್ವಿಜರ ‖ ವಿಕಳತೆಯ ಲವಿವೇಕಿಸಿದ ಪಾ । ತಕವದೇನೋ ಪತಿಯೊಳಕಟಾ । ಪ್ರಕಟಿಸಿತು ದುಷ್ಕರ್ಮಫಲವೆನಗೆಂದಳಾ ಸೀತೆ ‖ ೬೫ ‖ ಸುಳಿಯ

ಲೇಕೆ ಕುರಂಗ ರಾಮನ। ಕಳುಹಲೇಕೆ ದುರುಕ್ತಿಯಲಿ ನುಡಿ । ದಲಘುಬಲ ಲಕ್ಷ್ಮ ಣನ ತರುಬಲದೇಕೆ ಬೆಂಬಳಿಯು ॥ ಲಲನೆ ಇವಳಲ್ಲಿಂದು ಚಿತ್ತದ । ಲಲಸಿದರೊ ಮೇಣ್ಬಳರ ಮಾಯೆಗೆ। ಸಿಲುಕಿದರೊ ಸಾವ್ಮಾರ ದಿನಗಳಟೆಂದಳಿಂದುಮುಖಿ ॥ ೬೬ ॥ ಏನುಹದನಾಗಿಹರೋ ರಘುನೃಪ। ಸೂನುಗಳು ಸೂರ್ಯ್ಯಾನ್ವಯದ ಸುರ । ಧೇನುಗಳು ಸದ್ವಂಶ ಸಚ್ಚರಿತಾಭಿಮಾನಿಗಳು । ಆನರೇಂದ್ರನ ಸುದ್ದಿಯನ ಸಂ । ಧಾನಗೊಳಿಸು ವರಿಲ್ಲಲಾ ಹಾ। ಹಾ ನರೋತ್ತಮ ಹಾ ಯೆನುತ ಹಲ್ಮೈಸಿದಳು ಸೀತೆ ॥ ೬೭ ॥ ಹಾ ಮಹಾದೇವ ಮಮಸುಕೃತ। ಸ್ತೋಮ ದಧಿದೇವತೆಯಲಾ ಸೀ। ತಾಮಹಾಸತಿ ವಿಶ್ರುತ ದದೃಷ್ಟಾವಮಾನದಲಿ ॥ ರಾಮ ಸತಿಗೆಣೆಯಾರು ಜಗದಭಿ। ರಾಮೆಯರಿಗೆ ವಿಭೂಷಣ ವಲಾ। ರಾಮಣೀಯಕ ಪತಿಭಕುತಿ ಜಗಕೆಂದನಾ ಹನುಮ ॥೬೮॥ ಆತಳೋದರಿ ಬಳಿಕ ಮೆಲ್ಲನೆ। ಚೇತರಿಸಿ ಕೊಂಡೆದ್ದು ಸಾವಿಗೆ। ಶಾತಖಡ್ಗಕೆ ಕೈದುಡುಕಿದಳು ಕಾವಲಸ ರಿಯರ॥ ಭೂತಲಾ ನೀಜಗದ ಜೀವವಿ। ಘಾತಕಿಯಲಾ ಸಾಕು ನಮಗೀ। ರೀತಿ ಸೇರದ್ಯ ಸಾಕೆನುತಬಿಡೆ ಜರೆದಳಾ ತ್ರಿಜಟೆ ॥೬೯॥ ಇನ್ನುಬರ ಸೈರಿಸಿದ ಸೈರಣ। ದುನ್ನತಿಕೆಗಿದು ಮಾರ್ಗವೇ ದಿನ। ವಿನ್ನುಸಾರೆ ದಶಾನನಂಗೆಲೆ ದೇವಿ ಚಿತ್ತೈಸು॥ಮುನ್ನಿಸದಿರವಿವೇಕವನು ತ್ಪನ್ನತೆಗೆ ಕುಂದಹುದು ಹಬ್ಬವು । ದಿನ್ನು ನಿಮ್ಮಭ್ಯುದಯಲತೆ ಕೇಳೆಂದಳಾ ತ್ರಿಜಟೆ॥ ಕನಸಕಂಡೆನು ನಿನ್ನಿನಿರುಳಿನ। ಕೊನೆಯಲೆಲೆ ವೈದೇಹಿ ಕೇಳ್ ಖಳ। ಜನಪ ರಾವಣ ನರಿದ ತಲೆಗಳಲಳುವ ನಾರಿಯರ ॥ ನಿನದದಿಂದಂತಕನ ದಿಕ್ಕಿಗೆ। ತನುಜ ಮಿತ್ರಜ್ಞಾತಿ ಬಾಂಧವ । ಜನಸಹಿತ ಗಮಿಸಿದುದನಂದಳು ಸೀತೆಗಾ ತ್ರಿಜಟೆ ॥೭೦॥ ಧವಳ ದಂತಿಯ ಹೆಗಲಿನಲಿ ರಾ। ಘವನ ಕಂಡೆನು ಪೃಥುಳಸಿತ ಪುಂ। ಗವನ ನೇರಿದ್ದುದನು ಕಂಡೆನು ರಾಘವಾನುಜನ ॥ ವಿವಿಧ ಮುಕ್ತಾಭರಣ ಮಂಗಳ। ನಿವಸನಾಲಂಕಾರದಲಿ ನಿ। ಮ್ಮೊ ವರನು ಕಂಡೆನು ತೊಡೆಯಮೇಲೆ ನ ವಂಶವಲ್ಲಭನ॥೭೧॥ ಕಂಡೆನುನ್ನತ ಶೈಲಶಿಖರದ। ಮಂಡೆಯಲಿ ಮೂರ್ಧಾಭಿಷೇಕದ। ಮಂಡೆಯನು ಧಾರ್ಮಿಕ ಪುಲಸ್ತ್ಯಾನ್ವಯ ವಿಭೀಷಣನ॥ ಕಂಡ ಕನಸಿದು ದೇವಿ ನಿಮ್ಮಯ। ಗಂಡನಭ್ಯುದಯವನು ಕಾಬಿರಿ। ಕೊಂಡ್ಯ ಕೊನರದಿರರಸಿ ಚಿಂತೆಯನೆಂದಳಾ ತ್ರಿಜಟೆ ॥ ೭೨ ॥ ಸಂತವಿಸಿ ದೇವಿಯರ ಬಳಿಕಾ ಕಾಂತೆ ಕಾಹಿನ ನಾರಿಯರು ಸಹಿ। ತಂತರಿಸಿದರು ನಿದ್ರೆಯಲಿ ನೀರೇಜಮುಖಿ ಮನದ॥ ಚಿಂತೆಯನು ಬಿಡಲರಿಯದಾ ನಿಜ। ಕಾಂತನನು ಹಂಬಲಿಸುತಿರೆ ಹನು। ಮಂತನಾ ಸಮಯದಲಿ ನುಡಿದನು ಮರದಕೊಂಬಿನಲಿ ॥೭೩॥ ದೇವಿಯರೆ ನಿಜಸತಿಯ ಪದ ರಾ। ಜೀವಪತಿ ಸುಕ್ಷೇಮ ಲಕ್ಷ್ಮಣ । ದೇವ ಬಲ್ಲಿದನಧಿಕಬಲ ಬಲಿಮುಖ ಕುಲಾಧಿಪರ ॥ ಭಾವಕರ ಲೇಸೆನ್ನನಿಲ್ಲಿಗೆ। ವರಮಂಟ್ಟಿದರವರು ಸೀತಾ । ದೇವಿಯರ ನೀನರಸಿ ಬಾ ಹೋಗೆಂದು ಗುಪ್ತದಲಿ ॥೭೪॥ ಬಂದೆನಬುಧಿದಾಂಟ ಕಂಡೆನು। ಸಂದ ಸುವ್ರತೆಯಂಘ್ರಿ ಕಮಲವ । ನೆಂದೆನಲು ಮೊಗನೆಗಹಿ ನೋಡಿದಳಾ ಮಹೀರುಹನ । ಹೊಂದಿಕೆಯ ಹೊಲಬಲ್ಲವೀ ನುಡಿ। ಯೆಂದು ಸತಿ ಮೊಗದಿರುಹಲೊಡನಿಂ। ತೆಂದನಾ ಹನುಮಂತ ಹವಣಿಸಿದುಚಿತ ವಚನದಲಿ ॥ ೭೫ ॥ ದೇವಿಯಾರ ಖಳತಂದ ಬಳಿಕೆಲೆ। ದೇವಿ ಕೇಳ ಜಟಾಯುವನು ಕಂಡ । ನು ವಿಭಾಕರಕುಲಜ ರೈತಂದಿಂದ್ರನಂದನನ ॥ ಜೀವವನು ಕೊಂಡಧಿಕಬಲ ಸುಗ್ರೀವನನು ಪತಿಕರಿಸಿ ಸುರವಿ । ದ್ರಾವಣನ ರಾವಣನ ಕೊಲಲ್ಯೆ

ತಂದರವರೆಂದ ||೭೮|| ಕಳುಹಿದರು ಬಳಿಕವರು ಸೀತೆಯ | ಪರಿಯನರಿ ಹೋಗೆಂದು ಬಂದೆನು | ಬಳಿಕ ಕಂಡೆನು ದೇವಿಯುರ ವಿಮಲಾಂಘ್ರಿಪಂಕಜವ|| ಎಲೆ ಜನನಿ ಚಿತ್ತೈಸೆನುತ ಮಂ | ಜುಳ ಮಹೀಜವನಿಳಿದು ಪಾದದ | ಲಿಳುಹಿದನು ನಿಜಶಿರವ ನವನಿಜೆ ಬೆದರೆ ಭೀತಿಯಲಿ ||೭೯|| ಅಂಜಬೇಡಾಸುರವಿಕಾರದ | ರಂಜಕರು ನಾವಲ್ಲವೆನುತ ಧ | ನಂಜಯನ ಸಖಸುತನು ಬಿನ್ನೈಸಿದನು ಕೈಮುಗಿದು || ಅಂಜಬೇಡೆಲೆ ತಾಯೆ ದಾನವ| ಭಂಜಕನ ಭೃತ್ಯನು ಕಣಾ ತಾ | ನಂಜನಾಸುತ ಹನುಮನೆಂಬುದು ಹೆಸರೆಲೇ ತನಗೆ || ನೀನು ಕಪಿ ನರನಾಥನಾ ರಘು | ಸೂನುವಿದು ತಾ ಸ್ವಾಮಿ ಭೃತ್ಯ ಮ | ಹಾನುಭವ ಕನುನಯವೆ ತಾನಿದಸಂಗತದ ಮಾತು || ವಾನರರು ವಾರಿಧಿಯ ದಾಂಟುವ | ದೇನಿದಚ್ಚರಿಯಲ್ಲವೆ ಮಾ | ಯಾನಿಬದ್ಧೋಕ್ತಿಗಳಿಗಂಜುವೆನೆಂದಳಾ ಸೀತೆ || ೮೦ || ಜನನಿ ಕೇಳ್ ನಿಮ್ಮರಸ ನನುಪಮ | ವನರುಹಾಂಘ್ರಿಯ ಸೇವಕರಿಗೀ | ನೆನಹು ದೊಡ್ಡಿತೆ ಶರನಿಧಿಯ ನುತ್ತರಿಸುವಂದವನು || ಜನನಿ ಚಿತ್ತೈಸೆನುತ ವರ ವಾ | ಮನ ತ್ರಿವಿಕ್ರಮನಾದವೊಲು ಬೆಳೆ | ದನು ಮಹೀತಳ ಉದುರುವ ವೊಲಂಬರದ ತುದಿಗಾಗಿ || ೮೧ || ಶಿವನ ಕಾಯದ ಕಾಂತಿ ಮೈಯ್ಯಲಿ | ಕವಕವಿಸಿದುದು ವದನ ವೃದಯದ | ರವಿಯವೊಲು ರಂಜಿಸಿತು ತಾರಾಗಣದ ಹರಿಯಂತೆ || ದಿವವನಣದುದು ಬಾಲ ಬಳಿಕಾ | ಹವಣ ಕಾಣುತ ಕಾಂತೆ ಕರಗಳ | ನೆವೆಗಳಲಿ ಮುಚ್ಚಿದಳು ರಘುಪತಿ ರಾಮ ರಾಮೆನುತ ||೮೨|| ಕಂಡು ಹೆದರುವಳೆನುತ ಲಾಹವ | ಚಂಡಬಲ ಸಂಕೋಚಿಸಿದನು | ದ್ವಂಡಮೂರ್ತಿಯಲಸದ ಲಣುರೂಪಿನಲಿ ಕೈಯೊಡನೆ || ಮಂಡಳಿಸಿ ದಂಬುಧಿಯ ನೀ ಕೈ | ಗೊಂಡ ಗಮನವ ಲುತ್ತರಿಸಿದೆನು | ಕಂಡೆ ನೀ ರೂಪಿನಲಿ ನಿಮ್ಮವನೆಂದನಾ ಹನುಮ || ಒಡಬಡುವುದೊಮ್ಮೊಮ್ಮೆ ಮನವು | ತೊತ್ತಡಬಡದೆ ಬೆವರುವುದು ನಿಜವನು | ಹಿಡಿಯಲರಿಯದೆ ಹತ್ತುಗೆಯ ಹಸ್ತಕದಪಿನಲಿ || ನುಡಿಯಲಮ್ಮದೆ ಕಾಂತೆಯಿರೆ ಕೈ | ಗುಡಿಯ ಕಿಂಕರಭಾವದಲಿ ಕಪಿ | ನುಡಿದ ನವನೀನಾಥ ನೀಮನಿತ್ತ ಕುರುಹುಗಳ ||೮೩|| ತಾಯೆ ಚಿತ್ತೈಸಿನಕುಲದ ರಘು | ರಾಯನನುಪವ ಚಿತ್ರಕೂಟ | ಸ್ಥಾಯಿಯಲಿ ವಿಹರಣ ಜಲಕ್ರೀಡಾ ವಿನೋದದಲಿ || ಪಾಯವಟ್ಟವನಾ ಕೊಳನ ಪಾ | ನೀಯದಲಿ ನಿಂದಿರಿಸಿ ಗಡ ನಿಜ | ವೇಯಿದೆಂದು ಸಮೀರಸುತ ಕೈಮುಗಿದ ನಂಬಿಕೆಗೆ ೮೪|| ದೇವಿ ಕೇಳ್ ನಿಮ್ಮವನು ಬೆದರಿಸಿ | ದಾವಿಹಂಗಾಧಮನ ನಾ ನರ | ದೇವ ನುಳುಹಿದನುಗಡ ಶರಸ್ತೊಗಲಿದುವೆ ನಿಶ್ಚಯವೆ || ದೇವಿ ಬಳಿಕಾ ಚಿತ್ರಕೂಟ | ಗ್ರಾಮವನು ಕಳೆದೈದಿದಿರಿ ಗಡ | ಮೂವರಧಿದೇವತೆಗಳೈಯ್ಯಲು ಪರ್ಣಮಂದಿರವ ||೮೫|| ಆ ಮುನೀಂದ್ರನ ವನಿತೆ ವಿಮಲ | ಪ್ರೇಮದಲಿ ನಿಮ್ಮವನು ನಿರುಪಮ | ಹೇಮರತ್ನಾಭರಣದಿಂ ಪೂಜಿಸಿದಳಲ್ಲಿ ಗಡ || ಆ ಮುನಿಯ ಬೀಳ್ಕೊಂಡು ಬರುತ | ದ್ದಾಮವೀರ ವಿರಾಧನನು ನಿ | ರ್ನಾಮವನು ಮಾಡಿದನು ಗಡ ನೃಪನಹುದೆ ಕುರುಹೆಂದ || ೮೬ || ಮಂಗಳಾನನೆ ಚಿತ್ತವಿಸು ಶರ | ಭಂಗ ಮುನಿಪ ಸುತೀಕ್ಷ್ಣ ಭವನಂ | ಗಳಲಿ ಗಮಿಸಿದಿರಿ ಗಡ ಮೇಲ್ ಘಟವಾರಿಸಂಭವನ || ಅಂಗಣವ ಸಾರಿದಿರಿಗಡ ರಘು | ಪುಂಗವಂಗಾ ಮುನಿಪ ಚಾಪ ನಿ | ಷಂಗ ಖಡ್ಗವನಿತ್ತಗಡ ಕುರುವಹುದೆ ನಿಮಗೆಂದ || ೮೮ || ಇರಲು ತಿಂಗಳ ಮೇಲೆ ಮೈತ್ರಾ | ವರುಣಿಯನು ಬೀಳ್ಕೊಂಡು ಬರೆ ನೀ | ವರುಣತನಯನ ಕಂಡು ಕಳುಹಿಸಿಕೊಂಡು

ಗೌತಮಿಯ || ಸರಯುವಿನ ತೀರವನು ಸಾರಲು | ಹರಿಬಕೊಡಗಿದ ದೂಷಣಾದ್ಯರ |
ಶಿರವ ಚೆಂಡಾಡಿದನು ಗಡ ನೃಪನಹುದೆ ಕುರುಹೆಂದ ||೮೯|| ಮೇಲೆ ಹೊಮ್ಮರಿ ಸುಳಿಯು
ಲವರಿಂ | ಕೋಲುಕೋದಿರಿಗಡ ಯೆನಲ್ಕ | ಣ್ಣಾಲಿಗಳೊಳುರುಳಿದುವು ಜಲಬಿಂದು
ಗಳು ಜಾನಕಿಯ || ಹೇಳಿದೀ ಕುರುಹುಗಳು ನೀನೆಲೆ | ಕೇಳಿದೈ ಹನುಮಂತ ನಂಬುಗೆ |
ಗೇಳದಿದೆ ಮನವೇನ ಮಾಡುವೆನೆಂದಳಾ ಸೀತೆ || ೯೦ || ಆದಡೆಲೆ ಕೇಳ್ಜನನಿ ಚಿತ್ರೈ |
ಸಾದರದಿ ಕರಯುಗಳ ತಳದಲಿ | ಪಾದದಲಿ ಪದ್ಮಂಗಳೆರಡರಲಿ ಮತ್ತೆ ನೊಸಲಿನಲಿ ||
ನೈದಿ ಅರಸನ ಚಿಹ್ನವಿವು ತಾ | ನೈದಿಹವು ಗಡ ದೇವಿ ಕೇಳ್ ಹುಸಿ | ಯಾದಡಿವು
ಬಳಿಕೆನ್ನ ನಂಬಲು ಬೇಡ ನೀವೆಂದ ||೯೧|| ಮೂರುಭಾಗದ ಸಂಶಯವು ಕೆಲ | ಸಾರಿ
ತವನೀಸುತೆಗೆ ನಂಬುಗೆ | ದೋರದಿರೆ ತುದಿಯಂಶದಲಿ ಹನುಮಂತನಾಹದನ || ಮಾರು
ನುಡಿಯಾದಿರ ಲರಿವಾಮನ | ಮಾರುವುದೆಲಾ ಯೆಂದು ಮಣಿಗಣ | ದೂರಿಕೆಯ
ಮುದ್ರಿಕೆಯನಿತ್ತನು ರಮೆಗೆ ರಾಘವನ ||೯೨|| ಕಮಲಮುಖಿ ಸುಮುಖತೆಯ ಘನಸಂ|
ಭ್ರಮದ ಪರಮಾನಂದದಲಿ ನಿಜ | ರಮಣನೆಂದೇ ವಂದಿಸಿದಳಾ ರಾಮ ಮುದ್ರಿಕೆಗೆ ||
ತಮವನುರೆ ಜರೆದುರುಳ್ವ ಕಿರಣದ | ವಿಮಲರತ್ನದ ನಡುವೆ ಹೊಳೆದುದು | ಕಮಲ
ನಯನನ ಮೂರ್ತಿ ಕಂಗಳಿಗಾ ಪತಿವ್ರತೆಯ ||೯೩|| ತರಣಿ ಬಿಂಬವ ತೋರಿಕೆಯ ತಾ |
ವರೆಯವೊಲು ಹೆರೆಗಂಡು ಹಿಗ್ಗುವ | ಶರಸಿಧಿಯವೊಲುಸಾರ್ದ ಸಿರಿಯ ದರಿದ್ರನಂದ
ದಲಿ || ಪರಮತತ್ವದ ನಿಲುಕಡೆಯ ಸಂ | ದರುಶನದ ಸುಜ್ಞಾನಿಯವೊಲುಬ್ಬರದ
ಹರುಷದಲಬಲೆ ಸೋಂಪುಳಿಯೋದಳಡಿಗಡಿಗೆ ||೯೪|| ಮುಗುಳೆ ಮುಗುಳೆ ಸುಖಾತಿಶಯ
ದು | ಬ್ಬಗಳ ರೋಮಾಂಚವದ ಹರುಷಾಶ್ರುಗಳಲಾ | ಮುದ್ರಿಕೆಯ ಶಿರದಲಿ ನಿಸುಪ
ಭಾಳದಲಿ || ದೃಗುಗಳಲಿ ಕಚಮಧ್ಯದಲಿ ಸೊಂ | ಪೊಗೆವ ಸಂತೋಷದಲಿ ಸೇರಿಸಿ |
ಸೊಗಸಿಗನುಭವ ನೆಲೆಯ ಲೋಲಾಡಿದಳು ನಿಜಪತಿಯ ||೯೫|| ಸಂದ ಸುಖದತಿಶಯದ
ಹರುಷದ | ಸಂದಣಿಯ ಲಾ ಸರಸಿಜಾನನೆ | ಸಂದ ವಿಶ್ವಾಸದಲಿ ಸೂಸುವ ಮಧುರ
ವಚನದಲಿ || ಕಂದ ಬಳಲಿದೆ ಜೀವವಿದು ನಿ | ನ್ನಿಂದ ಪತ್ಪ್ರಾಣಿಸಿತು ಹೇಳೈ | ಕಂದ
ತನ್ನಯ ಮೇಲೆ ಕರುಣವದೆಂತೊ ರಘುಪತಿಯ ||೯೬|| ಮನದ ಪರಿಯೇನೆನ್ನ ಮೇಲಣ |
ನೆನಹಿನಂತರವೇನು ಹೇಳೈ | ಹನುಮ ಕಠಿಣವೊ ಕೋಮಲವೊ ಕಾಕುಸ್ಥನಂತಸ್ಥ ||
ಕನಲಿಕೆಯ ಮಾತುಗಳೊ ಮಮತೆಯ | ವಿನಯವಚನವೊ ನಿನ್ನ ಕಳುಹುವ | ದಿನದ
ಲಿವ ಸ್ಥಿತಿಯನೇ ಹೇಳೆಂದಳಿಂದುಮುಖಿ ||೯೭|| ಅರಸಿ ಕೇಳಧ್ಯಾತ್ಮ ವಿದ್ಯಾ | ಚರಿತ
ರಿನಕುಲದವರು ರಾಮನ | ಪರಿಯವರಪರಿಯಲ್ಲ ಚಿಂತನೆ ದೇವಿಯರ ಮೇಲೆ || ವರ
ಜಪಾನುಷ್ಠಾನ ವಿಹಿತೋ | ತ್ಕರ ಸಮಾಧಿಧ್ಯಾನದಲಿ ಸಂ | ಚರಣ ಜಾಗ್ರತ್ಸ್ವಪ್ನದಲಿ
ಬೇರಿಲ್ಲ ನೆನಹೆಂದ ||೯೮|| ಕಂದ ಕೇಳಿನಿತುಂಟೆ ಮನದಲಿ | ಕಂದು ಕಸರಿಕೆಯಿಲ್ಲವೆಲೆ
ನೀ | ನೆಂದ ಮಾತನು ನಂಬಲೇ ನಿಶ್ಚಯವೆ ಹೇಳೆನುತ || ಸಂದಣಿಯ ಲೋಚನ
ಪಮಃಕಣ | ದಿಂದ ಮತ್ತೀ ಮಾತ ನುಡಿದಳು | ಯೆಂದಿಗುತ್ಕಲ ತಂದೆ ಯೆನಲಿಂತೆಂ
ದನಾ ಹನುಮ || ೯೯ || ಏನಮಾಡುವೆ ತಾಯೆ ತಪ್ಪಿತು | ತಾನಲಾ ಕಡುಮೋಸ
ಹೋದೆನು | ಹೀನವಾದುದು ಭಂಟತನಕಿನ್ನೆಂದು ಫಲವೇನು || ಈ ನಿಶಾಟನ ಕೊಂದ್ರ
ನಿಮ್ಮುವ | ನಾ ನರೇಂದ್ರನಬಳಿಗೆ ಕೊಂಡೊಯ್ವ | ನೆನಹ ನೆಚ್ಚರಿಸದಾದೆನು ಬರುತ

ತಾನೆಂದ ||೧೦೦|| ಮಾಣಲದ ಕೊಂಡೊಯ್ವನೇ ತ | ತ್ಪ್ರಾಣಪತಿ ಯೇನೆಂಬನೋ ನವು | ಗೂಣಯುವ ಹೊರಿಸುವನೊ ಕೊರತೆಯ ಹಾಯ್ಕುವನೊ ತನಗೆ || ಕಾಣಬಾರದು ಹಗೆಯು ವಿಗತ | ಪ್ರಾಣದಲಿ ನಿಮ್ಮವನು ತೆಗೆವುದು | ಜಾಣತನ ಜಗದೊಳಗೆ ರಾಮುಂಗೆಂದನಾ ಹನುಮ || ೧೦೧ || ಅಳಲದಿರಿ ನೀವಿನ್ನು ತಪ್ಪಿದ | ಕೆಲಸಕಿನ್ನೇನೆನುತ ಸತಿ ಕೇ | ಳೊಲಿದ ನಿಮ್ಮಡಿಯರಸನನು ತಿಂಗಳಿಗೆ ತಾರದಿರೆ || ಬಳಿಕ ನಾಂ ಡಿಂಗರಿಗನೇ ಜಂ | ಗಳದ ಜಾಡ್ಯವ ಜಾರಬಿಡಿ ಮಂ | ಗಳೆಯು ರಾಗಿ ಮನೋರಥಕೆ ನೀವೆಂದನಾ ಹನುಮ || ೧೦೨ || ಬೀಳುಕೊಡಿ ನಿಮ್ಮರಸರಿಗೆ ನಾ | ಹೇಳಲೇನದ ಹೇಳಿ ಮನದಾಂ | ದೋಳವನು ಬಿಡಿಬಿಡಿ ಸುಚಿಂತಾಭರದ ತಲೆಹೊರೆಯ || ಹೇಳಲೇ ನಿಂದಿರವ ಕಂಡ್ಯೆ | ಮೇಲಣುತ್ತರವೇನು ಕಂಡದ | ಹೇಳು ಹೇಳುದಾವು ದೆನಗಿನ್ನೆಂದಳಾ ಸೀತೆ ||೧೦೩|| ನಂಬಿಸೀ ನುಡಿಗೆನ್ನ ನೆನ್ನನು | ನಂಬುವಂತಿರೆ ಕಿರಿದು ಕರುಹುಗ | ಳೆಂಬದುಳ್ಳಡೆ ಕೊಡಿ ನಿರೂಪವ ನನಿತರಿವ್ಯೆಲೆ | ನಂಬದಿರನಿದು ತಥ್ಯವೆನೆ ಬಳಿ | ಕಂಬುಜಾನನೆ ತೆಗೆದಳಾ ಮಲಿ | ನಾಂಬರವಿ ನಿರಿಮರೆಯ ನಿರುಪಮವರ ಶಿಖಾಮಣಿಯ||೧೦೪ ಗುಣನಿಧಿಯೆ ಬಾ ಕಂದ ಕಪಿ ದಿನ | ಮಣಿಯೆ ಬಾಯೆಂದಮಳ ಚೂಡಾಮಣಿಯನಿತ್ತಳು | ತುಂಬುವಂಬಕ ಜಲದ ಝಾಡಿಯಲಿ || ರಣಭಯಂಕರ ರಾಘವಂಗೀ | ಮಣಿಯು ನೀ ಯೆಂದಧಿಕ ಕಪಿಗಣ | ಗಣದಿಶಾಪಟಮಲ್ಲನನು ತಹುದೆಂದಳಾ ಸೀತೆ || ೧೦೫ || ಮಗನೆ ಕೇಳ್ ರಾಕ್ಷಸರು ಮಾಯಾ | ವಿಗಳು ಮಾಂಸಾಹಾರಿಗಳು ವೈ | ದೆಗೆದು ನಡೆ ಮತಿಮಂತನಾಗಿಯೆ ಕಂದ ಹೋಗೆಂದು | ಅಗಲಲಾರದೆ ಪಾವಮಾನಿಯ | ಮಗುಳೆ ಮಗುಳುಪಚರಿಸಿ ತೊರವೆಯ | ನಗರದೊಡೆಯನ ಚರನ ಕಳುಹಿದಳಶ್ರುಜಲ ಝಡಿಯೆ || || ೧೦೬ ||

ಮೂರನೆಯ ಸಂಧಿ ಸಮಾಪ್ತಂ.

ನಾಲ್ಕನೆಯ ಸಂಧಿ.

ಸೂಚನೆ|| ಮುರಿದು ರಕ್ಕಸ ಬಲವ ಬನದಲಿ | ತರುಬಿ ಕಾದಿದ ಜಂಬುಮಾಲಿಯ |
ಮೆರಸಿದನು ಮಿಹಿರಜನ ನಗರದೊಳಂಜನಾ ಸೂನು ||

ಪದ್ಯ|| ಕೇಳಿದೈಕುಶ ನಿಮ್ಮರಘುಭೂ | ಪಾಲಕನ ನಿಜದೂತನೆನ ದು | ಬ್ಬಾಳುತನದ ಯಶೋವಿಲಾಸ ವಿನೋದ ವಿಭ್ರಮವ || ಮೌಳಿಹತ್ತರ ರಕ್ಕಸಗೆ ತನ್ನಾಳಿಗವ ನೆಚ್ಚರಿಸದಿರೆ ಹೆ | ಬ್ಬಾಳುತನ ಕರೆ ಕುಂದೆನುತ ಮನತಂದನಾ ಹನುಮ || ೧ || ಮುರಿದು ತೋಟದನೆವದಿ ನಸುರರ | ತುರಿಸಿ ತೋಟಿಯ ತೆಗವೆ ಮೇಲವ | ರುತಕಂಘೈಸಿದರೆ ತೋರುವೆನೆನ್ನ ಕೈಗುಣವ || ವರಹಿದೀಗೆನಗೆನುತ ಸೀತೆಯ | ತೆರಹತಪ್ಪಿಸಿ ತುದಿವೆರಳ ಬೊ | ಬ್ಬಿರಿತದಲಿ ಬಾಹಪ್ಪಳಿಸಿ ಬಿಗುಹೇರಿದನು ಹನುಮ ||೨|| ಬಳಿಕಲೇವೇಳುವೆನು ಕಲ್ಪದ | ಕುಲಿಶ ಕೋಟಿಯ ಕಳವಳಿಕೆ ಕೈ | ಲುಳಿಯೊಳಗೆ ಕಾಲಾಟದೊಳಗಬ್ಬರದ ಲಾದುದೆನೆ || ನಿಳಿನಿಟಿಲು ನಿಟಿಲೆಂಬರವ ನಭ | ದೊಳಗೆ ಗಾಢಿಸೆ ಘಾಢಭುಜವಲಿ | ತಳಹತಿಯ ಲಂಘ್ರಿಯಲಿ ನುಗ್ಗೊತ್ತಿದನು ನಂದನವ || ೩ ||

ಒದೆದೊದೆದು ಮಾಮರದ ಬುಡವನು । ಕೆದರಿದನು ಕೈಯಿಕ್ಕಿ ಸಿಕ್ಕಿದ । ಕದಳಿ ಖರ್ಜೂರಾದಿ ಫಲಭರದವನಿಜಾವಳಿಯ ॥ ಹೊದರ ಹೊರಳಿಚಿ ನುಗ್ಗುನುಸಿ ಮಾ। ಡಿದ ನಶೋಕಾವನದ ಘನಸಂ। ಪದ ವಿವಿಧವೃಕ್ಷಗಳ ಗುಲ್ಮಂ ತಾ ವಿತಾನಕವ ॥ ೪ ॥ ಮಟ್ಟಿದೋಿದ ತೆಂಗುಗಳ ಸಾ । ಲಿಟ್ಟು ಬೆಳೆದಡಕೆಗಳ ಬೇರಿಂ । ದಟ್ಟಣಿಸಿ ಕಡು ಕಾತ ಹಲಸನು ಹೇರುವು ಫಲಭರದ ॥ ಕಟ್ಟದಿರ ಕಳಿವಣ್ಣುಗಳ ಕಡ । ಲಿಟ್ಟ ಸುರಿವ ಸುಧಾರಸದ ಹೊಂ। ಗಟ್ಟುಗಳ ಫಲಭೂಜರಾಜಿಯ ಕಿತ್ತನು ಹನುಮ ॥ ೫ ॥ ಜಂಬು ಕುರುವಕ ತಿಲಕ ರಸದಾ । ಳಿಂಬ ಭರದಿ ತಮಾಲ ಗುಗ್ಗುಳ । ಸಿಂಬೆ ಯಂಬಟೆ ಮಾತುಳಂಗ ವಿಳಂಗ ನಾರಂಗ ॥ ಎಂಬ ದಿಗುಚುಂಬಿತದ ಶಾಖಾ । ಡಂಬರದ ಕನುನೀಯ ತರು ನಿಕು। ರುಂಬವನು ನಿರ್ನೈಸಿದನು ನಿಶ್ಶೇಷವೆನೆ ಹನುಮ ॥ ೬ ॥ ಅಗರು ಚಂದನ ಚಂಪಕಾ ಮಲ। ಕಗಳ ಬಕುಳಾಶ್ವತ್ಥ ಪುನ್ನಾ। ಗಗಳ ಘನಕರ್ಪೂರ ಕದಳಿ ಕಪಿಥ್ಥ ಕೌಂಗಗಳ ॥ ಬಗೆ ಮಲುಂಗ ಲವಂಗಗಳಸೊಂ। ಪೊಗಿವ ಸಕಲ ಸುರದ್ರುಮಾಳಿಯ। ಬಗಿದುಗಿದು ಹೂಣಿದನು ಹರಹಿನ ಲಭ್ರಮಂಡಲಕೆ ॥ ೭ ॥ ಈಳೆ ಮಧುರ ರಸದ್ರವದ ಕಿ । ತ್ತಳೆ ಕಂಪಿತ ಫಲಭರದ ಹೇ । ರಿಳೆ ಹೊಂಪಿನ ಕಂಜಕಿಂಶುಕ ಶಿಂಶುಪಾದಿಗಳ ॥ ಹೇಳಿಕೆಗೆ ಹೆಸರೆನಿಸಿ ದಗ್ಗದ । ಸಾಲಸಂದಣಿ ಮರನ ನಗಲಕೆ। ಹೂಳಿ ತಳಮಾಡಿದನು ಮದವೆಗ್ಗಳಿಸಿ ಕಲಿಹನುಮ ।೮॥ ಮೊಲೆಯ ಸೋಂಕಿಗೆ ತರುಣಿಯರ ತಂ। ಬುಲದ ಕೊಡಹಿಗೆ ತೋಳ ಬಿಗುಹಿಗೆ। ಬೆಳೆವ ಭೂಜವ್ರಜವ ಬಲುದೋಳುಗಳ ತೆಕ್ಕೆಯಲಿ ॥ ತಳಪಟವ ಮಾಡಿದನು ಮದವೆ । ಗ್ಗಳಿಸಿ ದಿಭಪತಿ ಹೊಕ್ಕ ಬಾಳೆಯ । ಹಳುವದ ಪೊಳೊದೆದು ಮುರಿದನು ಬನವನಾ ಹನುಮ ॥ ೯ ॥ ತಂದು ಬೀಜವ ಬಿತ್ತಿ ಬೆಳೆವ ಪು। ರಂದರನ ಪುರಹರನ ಪದ್ಮಜ। ನಿಂದಿರೇಶಧ್ಯಾನ ದವನೀರುಹವ ಮರವರವ ॥ ನಗೆನೊಗದ ಲಬ್ಬರ। ದಿಂದ ಕಿತ್ತಿಟ್ಟವರಚಿತ್ತಕೆ । ಬಂದನೈ ಬರ್ಹಿರ್ಮುಖಾವಳಿ ಹೊಗಳೆ ಗಗನದಲಿ ॥ ೧೦ ॥ ಅಟಮಟಿಸಿ ಪರವಧುವ ತಂದು। ತ್ಕಟದ ಪಾಪಿಗೆ ಹೇಸಿ ವನವಧು । ಚಿಟಿಕ ಮುರಿದಪಳೆನಲು ಬೀಳುವ ಭೂಜರಾಜಿಗಳ ॥ ಸಿಟಿನಿಳಿಲು ನಿಟಿಲೆಂಬ ರವ ದಿಗು । ತಟವ ತುಂಬಿತು ಸಿಡಿಲ ನಾಟ್ಯದ। ನಟನೆಯ ಪೋಲೇನೆಂಬೆ ವನಭಂಗದ ಮಹಾದ್ಭುತವ ॥ ೧೧ ॥ ಚಿಗುಳಿ ದುಳಿದನು ಬನದೊಳೆಳೆವ । ಭೃಗಳ ನಮಳ ದ್ರಾಕ್ಷೆಗಳ ಲತಿ । ಕೆಗಳ ನನುಪಮ ಮಾದಲೀ ಮಂಜುಳ ಲತಾದಿಗಳ ॥ ಹೊಗಳಲೇನದ ಪತಿಯ ಮರಣದ । ಲಗಲಿ ಬದುಕಿದ ಸತಿಯುಸಿರದ ಪೊ। ಲಗಲದಲಿ ವಂಚಿಸಿದ ರಮ್ಯೋದ್ಯಾನ ರಾವಣನ ॥ ೧೨ ॥ ಮರುಗ ಮಾಲತಿ ಜಾಜಿ ಕೇತಕಿ । ಸುರಗಿ ಸಂಪಿಗೆ ಮೊಲ್ಲೆ ಮಲ್ಲಿಗೆ । ಸರಸಿರುಹ ಶಾವಂತಿ ಗಿರಿವಂತಿಗಳ ಗಿಡಲತೆಯ ॥ ಪರಿಪರಿಯ ಹೂ ದೋಟಗಳ ಹೊ । ಯ್ದುರಸಿದನು ಮುಡಿವಾಳ ಭಾಳದ। ಹರಿವರಿಯ ಹರಹಿದನು ಲಾಂಗೂಲದ ಪದಾರ ಗುಳಿಯ ॥೧೩॥ ಮುರಿದು ರಾಟಾಳಗಳ ನಗಲಗೆ । ತರಿದು ಕಬ್ಬಿನ ತೋಟಗಳ ಕಿ। ತ್ತುರುಬಿ ಕನಕಸ್ರೋಣಿಗಳ ಮುರಿದಿದಿರಿಸೇತಗಳ ॥ ಹರಿವ ಸಿಡುಗಾಲುವೆಯ ನಗಲಕೆ। ಜರುಹಿ ರಕ್ಕಸಕೋಟಿಗಳ ಜೊ । ಯ್ದೊರಸಿ ಬನದಲಿ ಬೀದಿ ವರಿದಾಡಿದನು ಕಲಿ ಹನುಮ ॥ ೧೪ ॥ ಕುಕ್ಕಿ ನೆಲಸನು ಬಿಗಿದು ನೆಗಹಿ ನ । ಭಕ್ಕೆ ಬಿಸುಟನು

ಪಳುಕಿನರೆ ಸಂ । ದಿಕ್ಕಿ ಸವೆದ ಸರೋವರಂಗಳ ಸಾಲಸಂದಣಿಯ ॥ ತೆಕ್ಕೆಯಲಿ ಕೃತಕಾದ್ರಿಗಳ ಕಾ । ಚಿಕ್ಕಿದನು ಕರಘಾತದಲಿ ದಡ । ದೊಕ್ಕೆನಲು ಕೆಡಹಿದನು ಕೇಳೀಸೌಧ ಸಂಕಲವ ॥ ೧೫ ॥ ಹಾರಿದುವು ಹಂಸೆಗಳು ತುಂಬಿಗ । ಳೇರಿದುವು ಮೊರೆದಭ್ರದಗಲಕೆ । ಚೀರಿದುವು ಕೊಂಚೆಗಳು ಬಕ ಶುಕ ಪಿಕ ಮಯೂರ ಚಯ ॥ ಜಾರಿದುವು ಜಂಘಾಯುಡಲಿ ಕಪಿ । ಕೀರಿದುವು ವನಮೃಗಚಯವು ವೈ । ದೋರಿ ಗುವು ದೂರದಲಿ ಕಾಲ್ದುಳಿಗನಿಲ ನಂದನನ ॥ ೧೬ ॥ ಕಾಮುನಡುಗಿದ ಸಾವಸಂತನ । ಸೀಮೆಯೊಡೆದುದು ಮಂದಮಾರುತ । ವ್ಯೋಮೆರೆಸಿದನು ಸರಿದನಂಬರಕಿಂದು ಭೀತಿ ಯಲಿ ॥ ಆಮಹಾ ವನಲಕ್ಷ್ಮಿ ಸೀತಾ । ಭಾಮಿನಿಯ ಮೊರೆಹೊಕ್ಕಳೀ ನಿ । ಸ್ಸೀಮ ಬಲ ಬಲಿಮುಖ ಕುಲಾಗ್ರೇಶ್ವರನ ಕಳವಳಿಕೆ ॥ ೧೭ ॥ ಬೆದರಿತೀತನ ಕಾಲ್ದುಳಿಯ ವನ । ವದಭುತ ಧ್ವಾನದಲಿ ನಿದ್ರೆಯ । ಕೆದರಿಕೆಯ ಕಾಪಿನ ನಿಶಾಚರ ರರಸು ತಾಯುಧವ ॥ ಇದೆ ರಭಸವೀಕಡೆ ಯಲಾಚೆಯ । ಲದೆ ಮಹಾಧ್ವನಿ ಶರವ ಸಂಧಿಸಿ । ಸದೆಯರೋ ಯೆನುತುರುವಣಿಸಿ ತಲ್ಲಣಿ ಖಳನಿಕರ ॥ ೧೮ ॥ ಸೊಕ್ಕಿ ಬಂದಿಭವಲ್ಲಲೇ ವಿಪಿ । ನಕ್ಕೆ ಬಯಸಿದ ಭೂತವಲ್ಲವೆ । ಹೊಕ್ಕನೋಡಿರೊ ಭೂತವಲ್ಲಣಿಸಿಂಗೆ ಹಸಿದೆದ್ದ । ರಕ್ಕಸನ ಬಲುಗಪತೆಯಲ್ಲದೆ । ಮರ್ಕಟವು ಕಾಣೇವೊ ಕವಿಕವಿ । ಹೊಕ್ಕು ತಿವಿ ಕೊಲ್ಲಿರಿ ಯೆನುತ ಕೆಣಕಿದರು ಕಪಿವರನ ॥ ೧೯ ॥ ಇಟ್ಟ ರೀಟಿಯ ಲೆತ್ತಿ ದರು ಕೈ । ಗಟ್ಟಿ ಕುಂತದ ಲುರುಬಿ ತಿವಿದರು । ಮುಟ್ಟವಿಸಿ ಕಕ್ಕಟ ಕಠಾರಿ ಕರಾಳ ಭೂಜದಲಿ ॥ ಹೆಟ್ಟಿದರು ಶೂಲದಲಿ ಕಪಿತಲೆ । ಮುಟ್ಟಿ ಮುರಿದವು ಕಲ ನಿಶಾಟರ । ಮೆಟ್ಟಿದನು ನಭಕೊಟ್ಟಿದನು ಖಳವೆಣನ ಬಣಬೆಗಳ ॥ ೨೦ ॥ ಎಲೆಲೆ ಕೋಡಗ ಕೊಲುತಲದೆ ಕಪಿ । ಬಲೆಯ ಬಿಡಿಸಿರೊ ಬೀಳಗೆಡಹಿರೊ । ತೊಲಗ ದಿರಿರೋ ಕವಿಯೆನುತ ಖಳನಿಕರವಲ್ಲಲ್ಲಿ ॥ ಎಲೆ ವಿಲುಗಳಲಿ ತರುಬಿದರು ಮಂ । ಡಳಿಸಿ ಕುಬು ಬಿರಿದಟ್ಟುತ ಕಹಳೆ । ಗಳುಹಿನಲಿ ಹೆಬ್ಬಲೆಯಹೊಯ್ಲಲಿ ಹರಿಕುಲೇ ಶ್ವರನ ॥ ೨೧ ॥ ಅಂಬುಗಳ ಮಳೆಗರೆದ ಖಳನಿಕು । ರುಂಬವನು ಬಲುಹೆಮ್ಮರನ ಹೆ । ಗ್ಗೊಂಬುಗಳಲೀಹೊಯ್ದು ಹೊರವಂಟಿಸಿದ ನುಸುರುಗಳ ॥ ತುಂಬಿದುದು ಹೆಣ ನೊಟ್ಟಲಲಿ ನೆಲ । ನಂಬರಕೆ ಜಡಿದಿಟ್ಟ ನೌಕುವ । ಡೊಂಬಿಗರ ವಂದಿಗರ ಧಕ್ಕಡ ರಕ್ಕಸರ ಹನುಮ ॥ ೨೨ ॥ ಮತ್ತೆ ಕವಿಕವಿದೌಕು ವಸುರರ । ಹುತ್ತಿಸಿದ ನಂಬರವ ನಸುಗಳ । ಕಿತ್ತು ನಡಿಸಿದನು ಪವನದ ವಳಯದಲಿ ಪಿತೃಪತಿಯ ॥ ಒತ್ತಬರಿಸುವ ಪಡಿತಳದ ಸುಭ । ಟೋತ್ತಮರ ಸೆದೆಬಡಿದ ನನಿಲಜ । ಕೃತ್ತಿವಾಸನೊ ಕದನ ಕೇಳಿಯ ಲಣುಗ ಕೇಳೆಂದ ॥ ೨೩ ॥ ಅಟ್ಟಿ ಸೆದೆದನು ಮೀರೆ ಘಾಡಿಯ । ಘಟ್ಟಿಯರಗ ಬಲಿಕ್ಕು ವಸುರರ । ಮೆಟ್ಟಿಸೀಳಿದನೆಡಬಲದ ನೌಕುವ ನಿಶಾಚರರ ॥ ತೊಟ್ಟೀಳಿಕೆ ಗಳ ನೂಕಿ ಹೆದರಿನ । ಲಟ್ಟಿಸಿದ ನಸುಗಳನು ಪಶುಗಳ । ಬಟ್ಟೆಯಾದುದು ಕಾಲ ನಧ್ವರ ಶಾಲೆಯಂದದಲಿ ॥ ೨೪ ॥ ಕನಲಿ ಕವಿದಬ್ಬರಿಸಿ ನೂಕಿದ । ವನಪತಿಯ ಪಿತೃ ಪತಿಯ ಕೈಯಲಿ । ತನುಜನಿವ ಸಿಕೆಂದ ಕೊಟ್ಟನು ಕೊಂಡುನೀಬುಗೆಯ ॥ ತನಯ ಕೇಳ್ದೈ ಜಂಬುಮಾಲಿಗೆ । ಮನೆ ಕೃತಾಂತನ ಪುರದೊಳಾದ ದು । ನೆನೆದು ಕೊಂಡನು ಕಾಳಗಕೆ ಕಡೆಸುವರೆ ನಿಜಮತವ ॥ ೨೫ ॥ ಚಾರೆಲವೊ ನೀಹೋಗು ನಾರೀ । ಚೋರ

ನಿದ್ರೆಡೆ ಗಂಜಬೇಡ ಖ। ರಾರಿ ದೂತಾಗಮನವನು ವಿಸ್ತರಿಸು ನಿನ್ನವಗೆ। ವೀರರುಳ್ಳರೆ ಕಳುಹು ಹೇಳುವ। ಚಾರವಲ್ಲೀ ಮಾತು ಹೋಗೆಂ। ದಾ ರಣೋತ್ಸವನುಳುಹಿ ಕಳುಹಿದನಾ ಸಮಾಲಿನಿಯ॥ ॥೨೬॥

ನಾಲ್ಕನೆಯ ಸಂಧಿ ಸಮಾಪ್ತಂ.

ಐದನೆಯ ಸಂಧಿ.

ಸೂಚನೆ॥ ರಣಭಯಂಕರ ಹನುಮ ಸಮರಾಂ। ಗಣ ದೊಳಕ್ಷನಮುರಿದು ಮೆರೆದನು। ಗುಣದೊಳಕ್ಷಾಂತಕನೆನಿಪ ಗುಣನಾಮಧೇಯಕವ॥

ಪದ್ಯ॥ ವೀರ ಕೇಳೈಕುಶನೆ ರಣಜಂ। ಝಾರ ನಿದ್ದನು ಬನದ ಬಾಗಿಲ। ತೋರಣದ ತುದಿ ಭಂಗದಲಿ ತೂಕಡಿಸು ತಡಿಗಡಿಗೆ॥ ಊರೊಳಗೆ ಕಪಿವಾರ್ತೆ ಯಗಲಕೆ। ಬೇರುವರಿದುದು ಬೆರಗು ಬಿಂಕದ। ಭಾರಕರು ಭಾರಿಸಿತು ಕೋಟಾ ವಳಯ ವಗ್ರದಲಿ ॥೧॥ ತುರಿಸಿಕೊಳ್ಳುತಿದ್ದೆಸೆಯ ಬದಿಗಳ। ಹೊರಗ ನಾಲಿಸಿ ತುದಿಸಿಳಿನೇ। ಸರಿ ನರಸುಮೆಗೆ ಮುಸುಡ ತಿರುಹುತ ದೂರದಿಂದಿಡುವ॥ ತರುಚುಗಳ ತೆರವಾಕಳಿಕೆ ಹು। ಬ್ಬಿರಿದು ಹಣಗುತ ಹರಿಬದಾಜಿಯ। ಹೊರಿಗೆವಾಳರ ಬರವ ಬಯಸುತ್ತಿರ್ದ ನಾ ಹನುಮ ॥೨॥ ಬದುಕಿತೀ ತಲೆಯೆನುತ ಬಳಲುವ। ವದನ ದುಸುರಿನ ತಳ್ಳಬಾರಿಯ। ಕೆದರುಮುಂಡೆಯ ಕಲಿತ ಭಯದ ಸುಮಾಲಿ ನಡೆತಂದು॥ ಸದನುದದ ಕಟ್ಟೋಲಗದ ದಶ। ವದನ ನಿದಿರಲಿ ಹಾಯ್ಕಿದನು ಬಲು। ಬೆದರಿಕೆಯ ರಣಭೈರವನ ಸಂಗರ ಭಯಂಕರವ ॥೩॥ ಜೀಯಬರುತಿದೆ ಕಪಿಯ ರೂಪಿನ। ಬಾಯಿತೆರಪಿನ ವೃತ್ತ್ಯ ನಿನ್ನೆಡೆ। ಗಾಯತದಿ ಹರಿವ ಸುರವನ ವನಪಾಲ ಸಂತತಿಯ॥ ಹಾಯುದಿರ ದರೆಗಳಿಗೆ ಮಾತ್ರಕೆ। ರಾಯ ನಗರಿಗೆ ದಳದುಳಿವ ನಡು। ಪಾಯ ಮಾರ್ಗದ ಮನವನುಳ್ಳರೆ ಕಾಣು ಬೇಗೆಂದ ॥೪॥ ತಾನುಗಡ ರಘುನಾಥನೆಂಬ ಮ। ಹಾನರೇಂದ್ರನ ದೂತಗಡ ಸೀ। ತಾನಿತಂಬಿನಿಯರಿಕೆಗೋಸುಗ ಬಂದ ತಾನುಗಡ॥ ಈ ನುಡಿಯನೇ ನುಡಿದು ಕಳುಹಿದ। ನಾನಿಕೆಯ ಭಟರುಳ್ಳರಿಂತಕೆ। ಧ್ಯಾನಿಸದೆ ಕಳುಹೆಂದು ಜರೆದನು ರಾವಣಾಸುರನ ॥೫॥ ಬಾಯ ಹೊಯ್ ಭಯವುಂಟೆ ತನಗರಿ। ರಾಯರಲಿ ಹೋಗೆಲವೊ ಹರಿಕಾ। ತ್ಯಾಯನೀಪತಿ ಕಮಲಭವರಿಂದೆನಗೆ ಪಾಡಲ್ಲ॥ ನಾಯೆ ಬಗುಳದೆ ಕೆಲಕೆ ಸಾರು ಸು। ಕಾಯವನು ವೆ ಧಿಸಿತೆಯೆಂದ ಸ। ಹಾಯಶೂರರ ದೇವಜರೆದಿ ಡಾಡಿದನು ಚರನ ॥೬॥ ವನವ ನದು ಮುರಿದುದುಗ ಡಳಿದುದು। ವನದ ಕಾಪಿನ ರಕ್ಕಸರು ಗಡ। ಕನಲಿ ತನ್ನನು ಕಳುಹಿದುದು ಗಡ ಕದನ ನೆಮ್ಮುವದು॥ ಜನಕ ತನುಜೆಯ ನರಿಯಲದು ರಾ। ಮನಲಿ ಬೀಳ್ಕೊಂಡೈದಿದುದು ಗಡ। ತನಗೆ ಭಯಗಡ ಬಾಯ ಹೊಯ್ ಹೊಯ್ಯೆಂದ ನಸುರೇಂದ್ರ ॥೭॥ ಜರೆಯ ಲೇತಕೆ ಜೀಯ ಬಾಯನು। ಹರಿಯಕೊಯ್ಸೀಮಾತು ಹುಸಿದಡೆ। ಮೊರೆಯಕೇಳೂ ರೊಳಗೆ ಸತ್ತಿರ್ದವರ ಸತಿ ಸುತರ॥ ಬರಿಯ ಬಿಂಕದ ಮಾತನಾಡೆವು। ತರುಬುವಡೆ

ನಡೆಯಿಲ್ಲದಿರೆ ನ್ಯ | ಮರೆಸಿಕೋ ಬಲುಮೃತ್ಯು ಬರುತಿದೆ ಬೇಗ ನೀನೆಂದ || ೮ ||
ಮೇಲೆ ಮೇಲೀವಾರ್ತೆ ಜಡಿದುದು | ಸಾಲ ಗೊಂಡಚ್ಚರಿಯಿ.ದೆನುತ ಕಸಲಿ | ರೋಷಾ
ವೇಶ ನಿಳಿದನು ಸಿಂಹವಿಷ್ಟರವ || ಭಾಳ ಝಳಪಿನ ಕೆಂಪೊಗುವ ಕ | ಣ್ಣಾಲಿಗಳ ನಸು
ರೇಂದ್ರ ನಡಿಯಿಡ | ಲಾಳುಗಳ ಹರಿಯಕ್ಷ ನಕ್ಷಕುಮಾರ ನಿಂತೆಂದ || ೯ || ಜೀಯ
ಕೊಡು ವೀಳಯವ ನಾಕಪಿ | ಮಾಯದ ಮರಾಧೀಶನಾಗಲಿ | ವಾಯು ವರುಣ ಕೃತಾಂತ
ನಾಗಲಿ ಮಿಕ್ಕ ಮೃಮರಸಿ || ಮಾಯೆಯಲಿ ಬಂದಿರಲಿ ಹರನಾ | ರಾಯಣರು
ತಾವಾಗಲೊಂದೇ | ಘಾಯದಲಿ ಹಿಡಿತಹೆನು ಹಿಡಿಮೊಲನಂತೆ ತಾನೆಂದ || ೧೦ || ಎಂದ
ಮಾತಿನ ಮಗನ ಪೌರುಷ | ದಂದ ಕತಿಪರಿಣಮಿಸಿ ಖಳ ನಿಜ | ವೆಂದು ಮನದಲಿ
ಮಾಡಿ ಹೊಂಬಟ್ಟಲಲಿ ವೀಳೆಯವ || ನಂದನಂಗಿತ್ತಿಭ ತುರಂಗ | ಸ್ಯಂದನಾರೋಹಕ
ಪದಾತಿಯ | ವೃಂದವನು ಬೆಸಸಿದನು ಬಳಿಯಲಿ ಬವರಕನಿಲಜನ || ೧೧ || ವೀಳಯವ
ಕೊಂಡಸುರರಾಯನ | ಬೀಳುಕೊಂಡವ ನಾಹವದ ಹೊಗ | ರೇಳಿಗೆಯ ಹೊಸಮದದ
ಯೌವನದುಬ್ಬಿನಲಿ ಪಿತನ || ಆಲಯವ ಹೊರವಂಟನಾಖಳ | ನೀಳನೂರ ಕುಮಾರ
ಕರಸ | ಮ್ಮೇಳವಲಿ ಝಳಪಿಸುವ ಖಡುಗದ ನೆಗಹುಕೈಗಳಲಿ || ೧೨ || ಬಳಿಸಲಿಸಿ
ತ್ರೈನೂರ್ವರಾತನ | ಬಳಿಯ ಪಂಚಚಮೂಪಸುತರು | ಬ್ಬುಳಿಕೆವಾತಿನ ಬಿಗಿದಕಾಸೆಯ
ಬಲಿದ ತಲೆವಿಣಿಲ | ಕಲಹವಿದು ತನಗೆನಗೆನುತ ಮುಂ | ಕೊಳಿಸಿತೀ ಸೇನಾನಿ ನಂದನ |
ರಳಿವ ಜಗದಲಿ ಸುಳಿವ ಸಿಡಿಲಿನ ಗಥಣದಂದದಲಿ || ೧೩ || ಮಿಂಡ ದುಂಡುಗಳತಿ
ಕಾರರು | ಗಂಡುಗರು ಗರ್ವಿತರು ರಣದು | ದ್ದಂಡರಾಹವದುಬ್ಬಿನಲಿ ಉಬ್ಬರಿಂದ ರತಿ
ಬಲರು || ಖಂಡೆಯದ ಕಲಿಕೆಗಳ ತರಳರ | ತಂಡ ಕೂಡಿತು ಹೂಸಿಗೆಯ ಸಿರಿ | ಖಂಡ
ನದ ಮಣಿಮಂಡನದ ಮುಡಿಯಲರ ಮರುಕದಲಿ || ೧೪ || ಸೋಟಕರು ನಿರ್ಭಯರು
ಕೊನಬುಗ | ಳಾಟಳಿಕ ದುರುದುಂಬಿಗಳು ಕೈ | ಗೂಟದವರುತ್ತಾಳದಾಂಘ್ರಿಯ ಳಾತ
ತಾಯಿಗಳು || ಕೂಟ ಮುದ್ಗರ ಮುಸಲ ತೋಮರ | ಖೇಟಕಾದಿ ಸಮಸ್ತಶಾಸ್ತ್ರದ |
ಘಾಟದತಿಬಲ ಖಳರು ಕೂಡಿತು ಕೋಟಿ ಸಂಖ್ಯೆಯಲಿ ||೧೫|| ಖುರದ ಹೊಯಿಲ್ಲನಲಿಳೆ
ನೊಳಗೆ ಮೋ | ಹರಿಸಿ ನಡೆದುವು ಕುದುರೆಗಳು ನೆಲ | ಹರಿಯೆ ಹರಿದುವು ತೇರುಗಳು
ತೇರವದ ತೋಳುಗಳ || ಉರುಕೃಪಾಣದ ದಂತಿಗಳು ಡಾ | ವರಿಸಿದುವು ಕಾಲಾಳು
ಕೂಡಿತು | ಸುರಶಿಖರ ಸಿಗುರೇಳೆ ಮೊಳಗುವ ವಾದ್ಯರಭಸದಲಿ ||೧೬|| ಬರವ ಕಂಡನು
ಹನುಮ ಲಂಕೇ | ಶ್ವರನ ಮೋಹದ ಮಗನ ಸೇನೆಯ | ವರುಷಕಾಲದ ಕಾಳಮೇಘದ
ಕಡುಹಿನಬ್ಬರಕೆ | ಕರದ ಲವನಿಯ ನಪ್ಪಳಿಸಿ ಮೊಗ | ಮುರಿದು ನಭವನು ನೋಳ್ಪ
ವರಕೇ | ಸರಿಯು ಪೋಲು ಹರಿನಾಥಸಿರಲ್ಕೆ ತಂದು ದಾಸೇನೆ || ೧೭ || ನಾಲ್ಕು ಮೈಯಲಿ
ಮುತ್ತಿಕೊಂಡುದ | ಶೋಕವನವನು ಬಳಿಕ ಬಲವದ | ನೋಕಹದ ಮೃಗರಾಜ
ನಿವ್ವನು ಹಾಕುತಾನನವ || ತೋಕಿದರು ಕೂರಂಬ ಬೊಬ್ಬೆಯ | ಬಾಕುಳಿಗ ರೊಳ
ಹೊಕ್ಕು ಸರಳಿನ | ಸೋಕುಗಳ ಸೈರಣೆಯಲಿದ್ದನು ಬಿಗೆಯದತಿಬಲರ || ೧೮ || ಹೊಕ್ಕು
ಕೆಣಕಿದವರಡಸಿ ಹರೆಯದ | ಸೊಕ್ಕಿನಣ್ಣುಗಳನಿಲಪುತನದ | ಲೆಕ್ಕಿಸದೆ ಲಳಿಮೇರು
ತಿರ್ದನು ಹಾಯ್ಕಿ ಹುಬ್ಬುಗಳ || ಕಕ್ಕಡೆಯ ಕರವಾಳ ತರಿಗೆಯ | ದಕ್ಕಡೆಯ ರೊತ್ತಿಂ
ಬರಿಸಿ ಬೊ | ಬ್ಬಿಕ್ಕಿ ಬಿರಿಗುಂಡಿಗಳಲೆಬ್ಬಿಸಿ ದಂಜನಾಸುತನ || ೧೯ || ಕೂಡೆ ಕೇಕಳ

ಬಲಿದು ಬಲಕ್ಕೆ | ಗೂಡಿ ಕಪಿ ಮಲು ಕಂಡನಿದ ಹೋ | ಗಾಡಬೇಕೆಂದಿಳಿದ ನಾತೋ
ರಣದಿ ನಿಳೆಗಾಗಿ || ನೋಡುತಿದೆ ಕಪಿ ಹಿಡಿಯಿರೋ ಹಿಡಿ | ಹೋಗಲಾಪದಿರಿಯೆನುತ
ನಗೆಮೊಗ | ಗೂಡಿ ದಕ್ಷಕುಮಾರ ಸಂಧಿಸಿದನು ಸಮೀರಜನ ||೨೦|| ಮುರಿದು ಮಾರುತಿ
ಗಗನ ಲಂಬಿತ | ನಿರುಪಮದ ತೋರಣದ ಕಂಭವ | ನೆರೆಡನೀ ಕೈಕೊಂಡು ಕಪಿದೆಡ
ಬಲದ ರಕ್ಕಸರ || ತಿರುಹಿ ಪದೆವನು ಕಾತಮೆಕ್ಕೆಯು | ಹರವರಿಯೊ ಳಿಭಜಾರಿ ವರಿವ
ನೊ | ಲರಿದು ದಣಿಗಿಜಿಯಾಗಿ ರಣರಂಗದಲಿ ಚತುರಂಗ || ೨೧ || ಅಟಕಟಿಸಿ ಹೊಡ
ಕರಿಸಿ ಹೊಳಕುವ | ಭಟರ ಕಪಿವಾನೆಗಳ ತೇರ್ಗಳ | ಚಟುಳ ಹಯ ಸಂಕುಳವ ಕಾಲಾಳು
ಗಳ ಸಂದಣಿಯ || ಸ್ಫುಟವರಿಯ ಬಾರದವೊಲರದಾ | ರ್ಭಟಿಸಿದನು ಸಂಹಾರ ರುದ್ರನ
ನಟಣೆಗಿಮ್ಮಿಗಿಲೆನಲು ಸವರಿದನಾ ಸಮೀರಸುತ || ೨೨ || ತುಡುಕಿ ಬೀಳುವ ರಾಜ
ಪುತ್ರರ | ಹಿಡಿಸಿದನು ಸುರರೆಳೆಯ ಹರೆಯದ | ಮಡದಿಯರ ಕೈಯಿಂದ ನ್ಯೆದೊರಿದ
ಮಹಾಭಟರ || ನಡೆಸಿದನು ಯಮಪುರಿಗೆ ಕೂಡಿವ | ಕಡುಹುಕಾರರ ರಕುತ ಗುತಿಗ |
ಳೊ ಕಲತುಂಬಿತು ತುದಿವೆರಳ ಲುಬ್ಬಿರಿದನಾ ಹನುಮ ||೨೩|| ತರುಣಕೇಳ್ಳೈ ರಾಕ್ಷಸೇಂ
ದ್ರನ | ತರುಣನಾರ್ಭಟಿಯನು ಸಮೀರ | ಧ್ವರಣನಲ್ಲಾ ಸಾಹಸದಲಿನ್ನಾರು ಸರಿ
ಯಿವಗೆ || ಸರಳ ಶರಧಿಯೊಳದ್ದಿದನು ಸುಳಿ | ಥರೆಯೊಳಗೆ ತಲೆಯೆತ್ತಿದವೊಲ |
ಬ್ಬರಿಸಿ ಹೊಳೆದ ನಕ್ಷ ನಕ್ಷಯ ಶರದೊಳನಿಲಜನ ||೨೪|| ಕೊಂಬವೇ ಕಣೆ ಕದನ ವಿಜಯ
ತ್ರಿ | ಯಂಬಕನ ವಿಕ್ರಾಂತ ಲಕ್ಷ್ಮಿಯು | ಚುಂಬಕನ ಚಾತುರ್ಯ ಸಮರ ಸರೋರು
ಹಾಂಬಕನ || ಅಂಬುಧಿಯ ಸಿಡಿಯೊಡಲ ನೆರೆಬಲಿ | ದಂಬರವ ಚುಂಬಿಸುವ ರಸನಾ |
ಡಂಬರದ ಬಡಬಾಗ್ನಿಯವೊಲುಪ್ಪರಿಸಿದನು ಹನುಮ ||೨೫|| ಎಲವೊ ಖಳ ಕಾಲಾಗ್ನಿ
ಮಂಜಿನ ಮಳೆಗೆ ನ್ಯೆದೆಗೆವುದೆ ನಿದಾಘದ | ಸುಳಿವಿನಿನಮಂಡಲವ ತಡೆವುದೆ ತಿಮಿರ
ಲತೆಕಡುಗಿ || ಅಳಿದವರ ಕಂಡಾ ವಿವೇಕವ | ಬಳಸುವರೆ ನ್ಯೆದೆಗೆ ದಶಾಸ್ಯನ | ಕಳುಹು
ಮಿಕ್ಕಿನ ಭಟರು ಪ್ರತಿಭಟರಲ್ಲ ತನಗೆಂದ || ೨೬ || ತಗರುಗಡ ತಲೆಯೆತ್ತಿ ತೋಳನ |
ತೆಗೆಸಿ ಕರೆವುದು ಗಡ ಮೃಗೇಂದ್ರನ | ಹೊಗಳಿಕೊಳದಿರು ನೋಡು ನಿಮಿಷಕೆ ನಿನ್ನ
ಜಠರದಲಿ || ತೆಗೆವೆ ನಳಿದ ನಿಶಾಟರನು ಮಾ | ಜಗದ ದೇವರ ಹಿಂಡಿ ಹಿಳಿವರ | ಮಗ
ಕಣಾ ಹಿಡಿಯೆನುತಲಿಟ್ಟನು ಗದೆಯ ಲನಿಲಜನ || ೨೭ || ಉಡಿದ ವಿಕ್ಕಡಿಯಾಗಿ ಹನು
ಮನ | ಮುಡುಹಿನಲಿ ಮಂಡಿಸಿದ ಗಡೆ ತುದಿ | ಸಿಡಿದು ಶರನಿಧಿಯೊಳಗೆ ಬಿದ್ದುದು
ಸುರಿವ ಕಾಜಲವ || ನಡುಗಿದುದು ಬಲುಗದೆಯ ಲಕ್ಷ್ಮಿಯು | ನಡುಗಿ ನಿಮಿಷದೊಳುಗ್ರ
ರೋಷಂ | ಬಡೆದು ಹೊಯ್ದನು ತೋರಣದ ಕಂಭದಲಿ ಹನುಮಂತ || ೨೮ || ಹೊಯ್ದ
ಗಾಯವ ಪರಿಘದಲಿ ಖಳ | ಕಾಯ್ದು ಕೊಂಡುಪ್ಪರಿಸಿದನು ಮನ | ಹೊಯ್ದು ಪಕ್ಕಡಿ
ಯಾದುದೆದೆಯಲಿ ಬಿದ್ದ ಬಲುಕೈದು || ಅಯ್ದದಾದುದು ಸಮತೆ ಸಿಡಿಲಿನ | ನಾದದಲಿ
ಪುಟನೆಗೆದು ರಣರಸ | ಮದಿ ಹಗೆವನ ತೇರತಿರುಹಿಟ್ಟನು ನಭಸ್ಥಳಕೆ ||೨೯|| ತಿರುಗು
ತಿರ್ದುದು ತೇರು ಸೂರ್ಯನ | ಸರಿಸದಲಿ ಬಳಿಕಕ್ಷನುರು ಸಿಂ | ಧುರಕೆ ಲಂಘಿಸಿ ನೂಕಿ
ಹೊಯ್ದನು ಶಿರವ ನನಿಲಜನ || ಪರಿಘದಿಂದ ವನಣದು ಕಪಿಮದ | ಕರಿಯ ತಿವಿದನು
ತಿವಿಯ ರಕ್ಕಸ | ತುರಗದಲಿ ಧುಮ್ಮಿಕ್ಕಿ ಸೆಳೆದನು ಹೊಳೆವ ಖಂಡೆಯವ ||೩೦|| ದಂತಿ
ಯೊಡಲೊಳಗದ್ದುದಾ ಹನು | ಮಂತದೇವನ ಮುಷ್ಟಿ ನೆಗಹಿ ನಭೋಂತರಕೆ | ಝಾಡಿ

ದಿಟ್ಟ ನಂಬರ ಚರರು ಘೋಯೆನಲು ॥ ಅಂತಕನ ಕರಕಂತುಕವು ಬೀ । ಳ್ವಂತೆ ಬಿದ್ದುದು ರಾವಣನ ನಗ । ರಾಂತರಾಳದ ಲಕ್ಷ ನೆರೆಗಿದ ನಸಿಯ ಲನಿಲಜನ ॥ ೩೧ ॥
ಎರಗಿದ ಸುಘಾತವಲಿ ನಡುಹಣೆ । ಹರಿಯ ಲತಿರೋಷದಲಿ ಹಯುದೆಲು । ಮುರಿಯ ಲೊದೆದನು ಸಿಡಿದ ಕಲಿಗಳವೇನ ಫಡಯೆನುತ ॥ ಬರೆಯು ಲುಗಿದು ಕಠಾರಿಯಲಿ ಜೊ । ಬ್ಬರಿದು ತಿವಿದನು ಲೇಸ ಲೇಸೆಂ । ದರಚೆ ವಿದ್ಯಾಧರರು ಗಗನದ ಲಂಜನಾಸುತನ ॥ ೩೨ ॥
ತಿವಿದ ಹಿಂಗುವ ಭಟನ ಪವನಜ । ನವಚಿ ತೆಡೆಗಾಲಿಂದ ಕೆಡಹಲು । ಕವಿದು ಬೀಳುತ ಕಾಲಡೊಕ್ಕರಿಸಿದನು ಪವನಜನ ॥ ಅವನಿಗಂಘ್ರಿಗೆ ಕೀಲ ಕೊಟ್ಟಂ । ತವನು ಝಾಡಿಯಲು ಧಡಧಡಿಸಿ ಕಲಿ । ಪವನಸುತ ತರಹರಿಸಿಕೊಳ್ಳುತೆರಗಿದನು ರಾಕ್ಷಸನ ॥ ೩೩ ॥
ಎರಗಿ ದಶನೀ ಘಾತ ಮುಷ್ಟಿಯ । ಬಿರುಬಿನಲಿ ಬುಡುಭುಡಿಸೆ ನೆತ್ತರ । ನೊರೆತೆ ಹಾಯ್ದುದು ವದನದಲಿ ನಾಸಿಕದ ನಾಳದಲಿ ॥ ಅರಸಿ ತಕ್ಷ ಕುಮಾರನಸು ಜವ । ಪುರದೊಳಳಿದ ಕುಮಾರಕರ ಖಳ । ಶಿರವ ಕಿತ್ತಿಟ್ಟನು ದಶಾಸ್ಯನ ಸಭೆಯ ಸರಿಸದಲಿ ॥ ೩೪ ॥
ಉಳಿದ ಮುಂಡವ ತಂದು ಬಾಗಿಲ । ಬಳಿಯ ನೆಲೆಯುಪ್ಪರಿಗೆ ಯಗ್ರದ । ಕಲಶವನು ಕಿತ್ತಲ್ಲಿ ಸೆಕ್ಕಿ ಮನೋನುರಾಗದಲಿ ॥ ಕಲಹಕೊದಗುವ ಭಟರ ಬಲವನು । ಜಲಿಯತಿರ್ದನು ದೈತ್ಯ ಕೋಳಾ । ಹಳ ನೃಕಂಠೀರವನ ಬಂಟ ನುದಗ್ರತೇಜದಲಿ ॥ ೩೫ ॥

ಐದನೆಯ ಸಂಧಿ ಸಮಾಪ್ತಂ.

ಆರನೆಯ ಸಂಧಿ.

ಸೂಚನೆ॥ ವಿತತ ರಾಕ್ಷಸರಾಜ ಬಲಸಂ । ಗತವನುರೆ ಸಂಹರಿಸಿ ರಾವಣ । ಸುತನ
ನಬುಜಭವಾಸ್ತ್ರದಲಿ ಬಿಗಿವಡೆದನಾ ಹನುಮ ॥

ಪದ್ಯ॥ ಕೇಳಿದೈ ರಘುವಂಶಲಕ್ಷ್ಮೀ । ಲೋಲ ಖುತ ಹರಿಸುತನ ಕೈಯಲಿ । ಕಾಲಕಂಡ ಕರಾಳ ಲಂಕೇಶ್ವರನ ನಂದನನ ॥ ಬೀಳುದಲೆ ರಾವಣನ ಸಭೆಯಲಿ । ಜೀಳಿ ಬಳಿಕಾಹದನ ನಾಕ್ಷಣ । ಕೇಳಿ ಬಂದಳು ತವಕದಲಿ ತಲೆಯೆಡೆಗೆ ಮಯ ತನುಜೆ ॥ ೧ ॥
ಆರು ಕೊಂದರು ಕಂದ ಮುನಿದವ । ರಾರು ಪೇಳಿಲೆ ಮಗನೆ ಬೇಟವ । ಜೇರು ಕೊಲೆಮಿತ್ತಾದುದೇ ಯಕಟಕಟ ತವಪಿತನ ॥ ವೀರ ಹಾ ಸುಕುಮಾರ ಹಾರಣ । ಧೀರ ಹಾ ಹಾ ಕಂದ ಯೆಂದು ಮ । ಹಾರುಭಟೆಯಲಿ ತಲೆಯ ತಕ್ಕೈಸಿಕೊಂಡು ಹೊರಳಿದಳು ॥ ೨ ॥
ಕಂಡನಣುಗನ ತಲೆಯ ತಕ್ಕೈಸಿ । ಕೊಂಡು ಹೊರಳುವ ಸತಿಯ ನುದರವ । ಗಂಡಿಗೆಯ ನೊಡೆವುಚ್ಚಳಿಸಿದುದು ಕೋಪ ಶಿಖಿ ಮುಖದ ॥ ಮುಂಡಳಿಗಳಳಿ ಮಾತವೇ ನು । ದ್ದಂಡ ಪುರಹರಲಯದಲಾ ಬ್ರ । ಹ್ಮಾಂಡವನು ಸುಡಬಗೆದ ಬಗೆಯನು ಬಗೆದ ನಸುರೇಂದ್ರ ॥ ೩ ॥ ಬರಲಿ ಕಮಲಜದತ್ತ ರಥ ಸಂ । ಗರ ಭಯಂಕರ ಘೋರತರ ಹಿಮ । ಕಿರಣ ಹಾಸವೆನುತ್ತ ರಕ್ಕಸರಾಯ ಮೀಸೆಗಳ ॥ ಮುರಿದು ಸಿಂದಿರಲಿಂದ್ರಜಿತು ಬಲು । ಬಿರಿಕಿ ನುಬ್ಬರವಾತಿನಲಿ ಕಿಡಿ । ಸುರಿಯೆ ಖಡ್ಗವ ಝಡಿದು ರಕ್ಕಸರಾಯಗಿಂತೆಂದ ॥ ೪ ॥
ನಿಲಲುಬೇಕೇ ಜೀಯ ನೀ ಹಗೆ । ಗಲಹದಲಿ ಹರನೊಡನೆ ವಿಕ್ರಮ । ಗಲಬೆಕಾದರು ಪಾಡೆಸಿನಗಿಂದಮರರೊಗ್ಗಿನಲಿ ॥ ಹುಲುಕಪಿಗೆ ನೀನೇಕೆ ನೇಮಿಸು । ಸಿಲಿಸುವೆನು

ಹಿಡಿತಂದು ನಿಮ್ಮಯ | ಬಳಿಯೊಳೆಂ ದಮರೇಂದ್ರಜಿತು ಹೊರವಂಟನರಮನೆಯ ॥೫॥
ಕೂಡಿತಾಕ್ಷಣ ಜಂಬುಮಾಲಿಯ | ಕೂಡಲವ ರಕ್ಷಕನಬಳಿ ಯೊಡ | ನಾಡಿಗಳು ದೇವಾಂ
ತಕ ಪ್ರಮುಖಾದಿ ಭಟರುಗಳ ॥ ಜೋಡಿಗರು ಚೀವಾಳ ಜೋಕೆಯ | ಗಾಡಿಕಾರರು
ಗಂಡಿಗರು ರಣ | ಬೇಡರ ಗ್ಗದಕೊಂತಕಾರಿಗ ಳೊಂದುನಿಮಿಷದಲಿ ॥ ೬ ॥ ಪೀರಭಟ
ರಬ್ಬರಣೆ ಸಿಗುರುವ | ತೇರ ಚಿತ್ಕೃತಿ ಗಜದ ಬೃಂಹಿತ | ವಾರುವಂಗ ಹೇಷಿತಧ್ವನಿ
ಝಡವು ಹರಿಗಗಳ ॥ ಭೇರಿ ಶಂಖ ಮೃದಂಗ ರಣಕಹ | ಳಾರವದ ರಭಸದಲಿ
ಮೇಲ್ಗಗ | ದೋರಣೆಗೆ ಪೈಸರಿಸೆ ನಡೆತಂದನು ಸುರೇಂದ್ರಜಿತು ॥ ೭ ॥ ಮುತ್ತಿತಾ
ಬಲಜಲಧಿ ವಡಬನ | ಮುತ್ತುವಂಬುಧಿಯಂತೆ ಬಳಿಕಾ | ಹತ್ತುಗೆಯ ಹನಣಿನಲಿ
ಹರಿಸುತನಿರ್ದ ನಂಜಿಕೆಯ ॥ ಹತ್ತರಕೆ ಹೊಂಗ ಡದ ಶೌರ್‍ಯದ | ಸತ್ತುಗೆಯ ನೇಲಿನಲಿ
ಸಮರೋ | ನ್ಮತ್ತ ರೋಷಾವೇಶದಲಿ ಲೆಕ್ಕಿಸದೆ ರಿಪುಬಲವ ॥೮॥ ಝಳು ಪಿಸುವ ಕೈದು
ಗಳ ಹೊಳಹಿನ | ಬೆಳಗು ಬೆರಸಿತು ಬರಿಯ ಬೊಬ್ಬೆಯ | ಕಳವಳಿಕೆ ಕಲಿಯೇರಿಸಿತು
ಕಡುಗಲಿಯ ಸಾಹಸದ ॥ ಮೊಳಗುವಭಿನವ ವಾದ್ಯರವ ಹೆ | ಕ್ಕಳಿಪ ಹುಟ್ಟಿಸಿ ತಧಿಕ
ಚಾಪಳ | ಕಲಿಗಳೌಕುವ ರಭಸವುಬ್ಬಿಸಿ ತಧಿಕರೋಷದಲಿ ॥೯॥ ಎಲ್ಲಿಕೋಡಗ ಬಂವ
ನುರೆ ಹುಡಿ | ಹುಲ್ಲಮಾಡಿದ ಮರ್ಕಟಾಧಮ | ನೆಲ್ಲಿ ರಾಜಕುಮಾರಕರ ನುನ್ಮತ್ತ
ಮಾರ್ಗದಲಿ ॥ ಕೋಲುಗೊನೆಯಲಿ ಕೊಂದವಾನರ | ನೆಲ್ಲಿ ಯೆನುತುರವಣಿಸಿತಾಹವ
ಮಲ್ಲ | ಹನುಮನ ಹೊರೆಗೆ ಹೊಗಿಸಿದ ನಿಂದ್ರಜಿತು ರಥವ ॥ ೧೦ ॥ ಒಡನೆ ನೂಕಿತು
ತೋಕುವಂಪಿನ | ತಡೆವ ಶೂಲದ ಹೊಯ್ಲ ಖಡ್ಗದ | ಬಿಡುವ ಚಕ್ರದ ಬೀಸುಗಣೆ
ಯಲಿ ಬಹಳ ಭಟನಿಕರ ॥ ಆಲಿವಿಡುಕದ ತೋರಣದ ತುದಿ | ಗಡೆಯಲಿರ್ದನು ತ್ರೂಳ
ವದ್ರಿಗೆ | ಸಿಡಿಲು ಸಮರಕೆ ಸಂವರಿಸಿಕೊಂಬಂತೆ ಕಲಿಹನುಮ ॥೧೧॥ ಭರದ ಬೇಸಗೆ ಕಾಲ
ದೊಳಗಿಲು | ವರನ ವಿಪಿನದೊಳೆದ್ದ ವೈಶ್ವಾ | ನರನವೊಲು ಕೋಪದಲಿ ಕಿಡಿಕಿಡಿಯಾಗಿ
ಕಲಿಹನುಮ ॥ ಧರೆಗೆ ಧುಮ್ಮಿಕ್ಕಿದನು ಕೊಂಡನು | ಗಿರಿಯ ಸಾರದ ತೋಟಹತ್ತರ |
ಭರದ ಭಾರದ ತೂಕದುಕ್ಕಿನ ಲಾಳವಿಂಡಿಗೆಯ ॥ ೧೨ ॥ ಹೊಕ್ಕದಾ ಸಮಯದಲಿ
ಹುಂಡಿಲ | ಸೊಕ್ಕಗಳ ಖಂಡೆಯದ ಗಜದಳ | ಬಿಕ್ಕಲಿಳೆ ಬೆರೆಸಿದುದು ರಣ ರಥವಾಜಿ
ಲವುಡಿಗಳ ॥ ರಕ್ಕಸರು ನೂಕಿದರು ಹಯಗಳ | ದಕ್ಕಡಿಯ ದುವ್ವಾಳಿಯಲಿ ಕೈ |
ಯಿಕ್ಕಿದುದು ಕಾಲಾಳು ಖಳಪಳಯೆನಲು ಕೈದುಗಳ ॥ ೧೩ ॥ ವೀರ ಹೇಳುವುದೇನ
ನಸುರರೊ | ಳಾರು ಸೆಣಸಿದು ಬದುಕಿದವರ ಸು | ರಾರಿಯಲ್ಲದೆ ಪೂರ್ವದಲಿ ನಾನಾ
ಯುಗಂಗಳಲಿ ॥ ಆರಮಾಧೀಶನ ಸಮಾನಕೆ ಸೇರಿಸಲು ಬಹುದನಿಲಜನ ಕೈ | ಹಾರ
ದಂಗದ ಕೊಲೆಯ ಕವತೆಯ ಕೇಳು ನೀನೆಂದ ॥ ೧೪ ॥ ಅಟ್ಟೆ ಸದೆದನು ಕವಿವ
ಕಂತದ | ಬಟ್ಟೆಯಿದ ಪರಿಘದ ಪದಾತಿಯ | ಥಟ್ಟನೊಳ ಹೊಗುವಾನೆ ಕುದುರೆಯ
ತೇರ ತಿಂಥಿಣಿಯ ॥ ಘಟ್ಟಿ ಕೆಡುಹುವ ನಿದಿರಲೊದಗುವ | ಘಟ್ಟಿಯರ ಗರ್ಭಿತರ
ಗಗನದ | ಬಟ್ಟೆಗಳ ಹತ್ತಿಸಿದ ನರೆನಿಮಿಷದಲಿ ಹನುಮಂತ ॥ ೧೫ ॥ ಹೊರೆದ ದಿಳೆ
ಹಸುಮ ಂತದೇವನ | ಧುರಕೆ ಕಠಿಣ ಕರೋಗ್ರದಂಡದ | ಕರದ ಬಲು ಹೊಯ್ಲಿನಲಿ
ಕರಿ ರಥ ಹಯ ಪದಾತಿಗಳ ॥ ತೊರಳೆ ತೊಗಲೆಲು ಮಜ್ಜೆ ಮಾಂಸದ | ಹೊರಳಿಯಲಿ
ರಣಭೂತದುಗುಸಿಗೆ | ಹರಿವಣಿವ ಸಿಟ್ಟಂತೆ ಹೊಸಪರಿಯಾಯ್ತು ರಣಭೂಮಿ ॥ ೧೬ ॥

ಹೇಳುವರೆ ಬೆರಗನಿಲಜನ ವಿಕ | ರಾಳ ದಭಿನವ ರಣವ ನೊಂದೇ | ವೇಳೆಯಲಿ
ಕೊಂಡುದು ದಶಾಕ್ಷೋಹಿಣಿ ನಿಶಾಟಬಲ || ಬಾಲ ಕೇಳಪವರ್ಗ ಲಕ್ಷ್ಮಿಯ | ಬಾಲಕಿಯ
[illegible]ವ ಮಿಕ್ಕಸು | ರಾಳಿ ಕಾಣುತಲಿರ್ದುದೆಡೆಯಲಿ | ಪಡೆಯುದೆಡೆಸರವ || ೧೭ ||
ಒಡೆದು ಜಾರುವ ಭಟರ ಭಟರಿಂ | ದಿಡುತ ಕರಿಗಳ ಕರಿಗಳಿಂ ದಡೆ | ಗೆಡಹು ತಶ್ವವ
ನಶ್ವದಿಂ ದಪ್ಪಳಿಸು ತಡೆಹಾಯ್ವ || ಬಿಡು ರಥವ ರಥದಿಂದ ಹಾಯ್ದು ರೆ | ಹುಡಿಗೆದರು
ತರೆಯಟ್ಟೆ ಸದೆದನು | ಸುಡಲಿಸಂಸಾರವ ನೆನಲು ಕಣನೊಳಗೆ ಕಲಿಹನುಮ || ೧೮ ||
ಸಿಡಿಸಿಡಿದು ಹೊಗಲೆಡೆಯು ಕಾಣದೆ | ಪಡಿತಳಿಸಿನಿಂದಸುರ ರಸುಗಳ | ಕೊಡಹಿ
ಹಾಯ್ಕುತ ಕೊಂದನೀಪರಿ ಕೋಟಿ ಸಂಖ್ಯೆಯಲಿ || ಹೊಡೆವ ಹಿಮದುಬ್ಬರಕೆ ಬೆಸ
ಗೆಯ ಯಡಸಿದ ವೊಲಸುರೇಂದ್ರಜಿತು ಮ | ಲುಡಿಯುಬಿದ್ದನು ಕಣೆಯ ಕೋಳಾ
ಹಳಗಳೆಸುಗೆಯಲಿ || ೧೯ || ಮುತ್ತಿದವು ಶರಜಾಲ ಜೇನಿನ | ಹತ್ತುಗೆಯ ನೊಣ
ದಂತೆ ಬಳಿಯಿಂ | ಬತ್ತಿದವು ಕೋಪಾಗ್ನಿಯನು ಮಹದಗ್ನಿಸಖ ಸುತನ || ಎತ್ತಿಬಹ
ಬಲುದಂಡವನು ನಭ | ಕೊತ್ತಿ ಹಲುಗಳ ನಾಡಿನಲಿ ಲಯ | ಮಿತ್ತು ಮೊಗನೆಗಬಿ
ದನೊ ಮದದಬ್ಬಿನಲಿ ರಾವಣಿಯ || ೨೦ || ಸಿಡಿದು ಬಿದ್ದನು ತೇರಿನಿಂದಿಳೆ | ಗಡಿ
ಮಗುಚಿ ನೆಲನಾಳೆ ನಡುನಡು | ಗಿದುದು ರಾವಣಿಯ ತನು ಕರಘಾತಕನಿಲಜನ ||
ಪಡಿಭವಿಸಿ ಸಂತೈಸಿಕೊಳುತ ವ | ಪಡಿರಥಕೆ ಧುಮ್ಮಿಕ್ಕಿ ವಿಲಯದ | ಒಡಿದ ವೊಲು
ಸೀವರಿ ಸುರಿದನು ಸರಳ ಸರಿಮಳೆಯ || ೨೧ || ನೂಕಿದುವು ಶರಜಾಲ ಹನುಮನ
ಸೋಕಿನಲಿ ಮದಗಜವ ನೆಳೆವು | ಳ್ವೋಕುವವೊಲಂಜನೆಯಸುತ ನಂಜುವನೆ ಶರ
ಹತಿಗೆ || ನಾಕವರಚಲುಬೊಬ್ಬಿರಿದು ರಣ | ದಾಕೆವಾಳರ ದೇವ ದಿವಿಜಾ | ನೀಕ
ಹೊಗಳಲು ಮತ್ತೆ ಹೊಯ್ದನು ಹೊಕ್ಕು ರಾವಣಿಯ || ೨೨ || ಹೊಯ್ಲಿಗವ ನೊಳ
ಗಾಗದಾಕ್ಷಣ | ಮೆಯ್ಲಿಳಿಯಲುಪ್ಪರಿಸಿ ಸೋಲದ | ಮೆಯ್ಲಿಗೆಗೆ ವೈಗೊಡದೆ ಪಡಿ
ರಥಕಾಗಿ ಪುಟನೆಗೆದು || ಕೆಯ್ಲಿಳಿಯ ಕಣೆಗಳಲಿ ಕೊಂದನ | ಲೆಯ್ಲಘು ಪ್ರಕ್ರರ
ಪ್ರಯೋಗದ | ಲಯ್ಲಿಪೆಯ್ಲದ ವೀರನೇ ವಿಬುಧೇಂದ್ರಜಿತುವೆಂದು || ೨೩ || ಹಿಂದೆ
ದಿಗುವಿಜಯದಲಿ ಸೋತು ಪು | ರಂದರಾದ್ಯರು ಕೊಟ್ಟ ಬಹಗ | ಳಿಂದ ಹೊಳಿದ
ನುಬ್ಬಿ ಬೊಬ್ಬಿರಿ ದಂಜನಾಸುತನ || ಮೂದಲಿಸಿ ಮುಸುಕುವ ಬಲಾಹಕ | ವೃಂದದು
ಪಟಳ ಕಳಕುವನೆ ರವಿ | ಕಂದ ಕೇಳ್ ಕೌತುಕದನೆಳಬಿದ್ದೆರಗಿದನು ಹನುಮ || ೨೪ ||
ಎರಗಿದರಿಭಟ ಭೈರವನ ಬೊ | ಬ್ಬಿರಿದು ಗದೆಯಿಂದಣದು ಬೊಬ್ಬೆಯ | ಬಿರುಬಿನಲಿ
ಬೀಸಿಟ್ಟನಾ ಲಂಕಾ ಭಯಂಕರನ || ಮುರಿವ ಗದೆಯಲ್ಲಿದು ಸುರೇಶ್ವರ | ನುರುವ
ವಜ್ರದ ಸಾರತರವದ | ತರುಬುವರೆ ಪವಮಾನನಂದನ ನಲ್ಲದಿಲ್ಲೆಂದ || ೨೫ || ಇಟ್ಟ
ಭಾರಕೆ ಸಿಡಿದು ತರಣಿಯ | ತಟ್ಟೆಬಿದ್ದುದು ಖಳನ ತೇರಿನ | ನಟ್ಟನಡುವೆ ಸುರೇಂದ್ರ
ಜಿತು ಪಡಿರಥಕೆ ಲಂಘಿಸಲು || ಇಟ್ಟದೋರಿತು ತೇರು ಬಳಿಕವ | ನಿಟ್ಟ ಸಬಳ
ಮುಸುಂಡಿ ಮುದ್ಗರ | ಪಟ್ಟಿ ಪರಿಘ ಪರಶ್ವಧಾದಿ ಮಹಾಯುಧಂಗಳಲಿ || ೨೬ ||
ಬಳಿಕ ಕಮಲಜವತ್ತವನು ನಿಲಿ | ಸ ಲಡರಿ ಸುರೇಂದ್ರಜಿತು ಕಳಕಳ | ವಳಿಸೆ ಜಗ
ವಿದಪ್ರಗ್ನಿ ಯಮಪುರ ನಿರುತಿ ವಾರಣವ || ಇಳುಕಗಳ ಸಂದರ್ಭದಲಿ ಮುಂ |
ಕೊಳಿಸಿ ವಾಯು ಕುಬೇರ ಹರ ಗಿರಿ | ಕುಲಿಶ ಪವರಾದಿಗಳ ಲೆಚ್ಚನು ವಜ

ವಿಗ್ರಹನ ॥ ೨೭ ॥ ಆವದಿವ್ಯಾಸ್ತ್ರಂಗಳೀತನ । ನೋವಿ ಗೊದಗಿದುದಿಲ್ಲ ವಸುರ ಶ । ರಾವಳಿಗ ಳಳುಕಿಸಲು ನೆರೆದುದ ಕಾಣೆ ನನಿಲಜನ ॥ ದೇವರಿಪು ಕಿಡಿಗೆದರಿ ವರರಾ । ಜೀವ ಸಂಭವ ಶರವ ಹೂಡಿದ । ನಾ ವಿಬುಧ ರಸು ಝಡಿಯೆ ಝುಮ್ಮಿಡೆ ತನು ತ್ರಿಯಂಬಕನ ॥ ೨೮ ॥ ಓಡಿದನು ಯಮರಾಜ ಸರಿದನು । ಬೀಡಿಕೆಗೆ ಭವಭಯದ ಲಾನೆಯು । ಚೋಡ ಕಳಚಿ ಸುರೇಂದ್ರನಂಕುಶ ವಿಕ್ಕಿದನು ಕರಿಗೆ ॥ ಕಾಡಹೀಶರ ಕಟ್ಟಿದರೆ ಕೈ । ಗೂಡುವುದು ಕಡುಗೋಪವಲೀನನು । ಮಾಡುವನೊ ಮಾರುತಿಯು ನೆನು ತುಳಿದಮರ ರಡಗಿದರು ॥ ೨೯ ॥ ರಣದಿಳೆಯ ಹೊಗಲಂಜೆ ಶಾಕಿನಿ । ಗಣಸರಿ ದುದತ್ತತ್ತ ತೊಲಗಿದ । ಹೆದನ ಜೀವವ ನೊಯ್ವಕಾಲನ ದೂತರಲ್ಲಲ್ಲಿ ॥ ಮಣಿ ಕಟಿಯು ಮರೆಮಾಡಿಸಮರಾಂ । ಗಣದ ಭೂಮಿಯ ಸೀಮೆಯಲಿ ವೈ । ಹಣುಗಿ ಹೆದರುತಲಿರ್ದರಂಜಿಕೆ ಗನಿಲನಂದನನ ॥ ೩೦ ॥ ಆತುಕೋ ಕಪಿಯರೂಪಿನ । ಭೂತ ಪತಿ ಸೀನಾಗು ಬೊಮ್ಮನ । ತಾತನಾಗಲ್ಲದೊಡೆ ಮೇಣಾಬೊಮ್ಮಸೀನಾಗು ॥ ಈ ಕುತಾಂದ ತೋಮರವ ನಿ । ರ್ಭೀತಿಯಲಿ ನೀಗಲಿದೆ ಯಾದರೆ । ಸೋತವನು ತಾ ನೆನಗೆನುತ ತಗೆದೆಚ್ಚು ಬೊಬ್ಬಿರಿದ ॥ ೩೧ ॥ ಸುರವ ಕಿಡಿಯುಡೇದುವು ಕಾರ್ಬೊಗೆ । ಹರೆದು ದುರಿ ಸಮುಸಿಸಿತು ಕೊಲುವು । ಬ್ಬರದಬಗೆ ಬಯಲಾಯ್ತು ಕುಶಕೇಳಾ ಮಹಾ ಶರದ ॥ ಅರರೆ ಹನುಮನ ವಿಕ್ರಮಾಗ್ನಿಯ । ಹರುಹದೆಂತುಟೊ ಹೋಹಲಮ್ಮದೆ । ತಿರುತಿರುಗಿ ಬರುತಿರ್ದುದೊಂದರೆಗಳಿಗೆ ಮಾತ್ರದಲಿ ॥ ೩೨ ॥ ಕರವಮುಗಿ ದಂಭೋಜ ಭವನಂ । ಬರದ ಲೀತನ ಬೇಡಿಕೊಂಡನು । ವರವಕೊಡು ನೀನೆನಗೆ ನಾನ್ಮುನ್ನಿತ್ತ ವರದಿಂದ ॥ ಶರವದೆಮ್ಮದಮೋಘವೆನೆ ಮ । ತ್ತುರಿಭಯಂಕರ ಹನುಮನಾ ಬಲು । ಸರಳ ಕರೆದನು ಕಟ್ಟುವಡೆದನು ಕದನಕೇಳಿಯಲಿ ॥ ೩೩ ॥ ಒದರಿದುವು ರಣವಾದ್ಯ ತತಿ ಖಳ । ಕೆದರಿಕೊಂಡ ವರೂಥವಿಂ ದೊದೆ । ದೊದೆದು ಬಿಗಿದನು ಸೇದಿದನು ಬ್ರಹ್ಮಾಸ್ತ್ರದಲಿ ಕಪಿಯು ॥ ಬೆದರಿಹೊಯ್ದಂಣಗಳು ಕೈಗಳ । ಲೆದೆಯ ಸೀನರಿ ಮತ್ತ ರಣಸಂ । ಪದಪ ನರಕೇಸರಿಯ ದೂತನನೆಯ್ದಿ ದೊಗ್ಗಿನಲಿ ॥ ॥ ೩೪ ॥

ಆರನೆಯ ಸಂಧಿ ಸಮಾಪ್ತಂ.

ಏಳನೆಯ ಸಂಧಿ.

ಸೂಚನೆ॥ ಚಂಡಬಲ ರಾವಣನ ಸಭೆಯಲಿ । ಗಂಡ ಗಂಡರಗಂಡ ರಣದು ದ್ದಂಡ ಮಾರುತಿ ಜರೆದು ಮೆರೆದನು ಸುಪ್ರತಾಪದಲಿ ॥

ಪದ್ಯ॥ ಕೇಳಿವೈ ಕುಶ ಮುತ್ತಿಕೊಂಡುದು । ಸೋಲ ದಸುರರು ವಿಷಮ ರಾಕ್ಷಸ । ಕಾಲಭೈರವನನು ಕನಲ್ದು ಕಠಾರಿ ಕುಂತದಲಿ ॥ ಲಾಳವಿಂಡಿಗೆ ಭಿಂಡಿವಾಲ ಕ । ರಾಳ ಖಡ್ಗ ಮುಸುಂಡಿ ಮುದ್ಗರ । ಶೂಲ ಪಟ್ಟಿಸ ಸುರಗಿ ಪರಶುಗದಾದಿ ಶಸ್ತ್ರದಲಿ ॥ ೧ ॥ ಒಡೆದ ರಿರಿದರು ಹೊರಳಿಚಿದ ರೆಡೆ । ಗೆಡಹಿದರು ಕೋಳಾ ಹಳದ ಬಲು । ಗಡಿಯ ಭಟರಬ್ಬರಿಸಿ ಸವೆದರು ಸೂಳುಪಾಡಿನಲಿ ॥ ಒಡೆಯುದಿರಿರೋ ಸಾಯದೀ ಕಪಿ । ಹೆಡಗುಡಿಯ ಬಿಗಿದಸುರ ವಲ್ಲಭ । ನೆಡೆಗೆ ಹೊರಕೊಂಡೊಯ್ವೆವೆನೆ ಹೊತ್ತುದು

ಖಳವ್ರಾತ ॥ ೨ ॥ ಹೊತ್ತು ಹೊತ್ತೇಳೆಂಟು ಸೂಳಲಿ । ಸತ್ತು ದೆಂಭತ್ತೈದು ಸಾವಿರ ।
ನಿತ್ತು ಧರೆಯನು ಧರಿಸು ವತಿಬಲಸರಿಗ ರಕ್ಕಸರು ॥ ಎತ್ತಿದಿರ ಬಲುಮಿಣಿಯಲಿ
ದನನು ॥ ಸುತ್ತಿ ಸಿಂಧುರ ಘಟೆಗಳಿಂ ದೆಳೆ । ಸುತ್ತ ಕೊಂಡೊಯ್ಯೆನಲು ಹಮ್ಮಿದ
ರಾನೆಯಲಿ ಕಪಿಯು ॥ ೩ ॥ ಎಳೆಯು ಲಿರ್ವಾಸಿರ ಘಟಾವಳಿ । ನೆಲಕೆ ದಾಡೆಯಸೂರಿ
ಘೀಳಿ । ಟ್ಟಳಿದ ವನಿಲಜ ಜಡಿದ ಜವದುಗ್ಗಡದ ಸತ್ವದಲಿ ॥ ಛಲವಿದರ ಕೂಡೆನುತ
ಹರಿರಿಪು । ಹಲುಮೊರೆದು ತರಿಸಿದನು ವಜ್ರದ । ಹಳಿಯು ರಥವನು ಕುಂಭಕರ್ಣ
ಮಹಾನಿಶಾಚರನ ॥ ೪ ॥ ಮಿಣಿ ನೊಗನು ಕೀಲಚ್ಚು ಕೂಬರ । ಬಳಿ ಮೊಳೆಯು
ನಾರ್ಸೈದು ಹೊರೆಯನು । ಬಲಿದು ಹೂಡಿದರಿದ್ದೆಸೆಯ ನೆಂಭತ್ತು ಸಾವಿರದ ॥ ಇಳೆಯು
ಹೊತ್ತಿಭರಾಜಿಯಿಂದ । ಗ್ಗಳಗಳದ ಗಜಕೂಡೆ ಬನದಲಿ । ಬೆಳಗಿದುವು ಬೊಂಬಾಳ
ದೀವಿಗೆ ಲಕ್ಕಸಂಖ್ಯೆಯಲಿ ॥ ೫ ॥ ಸರಿಗರಕ್ಕಸ ಕಿಂಕರರು ಬೊ । ಬ್ಬಿರಿದು ಬಲುಸನ್ನೆ
ಗಳ ಲುಕ್ಕಿನ । ತರುಬುಗಳಲೆತ್ತಿದರು ಕೇರಿಗೆ ತಗ್ಗಲವನಿತಳ ॥ ಅರಚಿದನು ಫಣಿರಾಜ
ಕೂರುಮ । ನೊರಲಿದನು ಕೂಗಿಟ್ಟವಿಭವಿಳಿ । ಯರಗಿ ತಗ್ಗಿತು ಮೇರುಗಿರಿ ಮಾರು
ತಿಯ ಭಾರದಲಿ ॥ ೬ ॥ ಎತ್ತಲಳಿದುದು ರಕ್ಕಸರು ತರು । ಜೊತ್ತಿ ಹನುಮನ ಭಾರ
ದಲಿ ಕರಿ । ಸತ್ತ ವನಿಲಜನೊಲದ ವ್ಯೆಯ್ಯಲಿಬಗೆಯ ದುರವಣಿಸಿ ಅತ್ತಿಸಿದರಾನೆಗಳ
ನಸುರರು । ಸುತ್ತಿದರು ಸೂಳೆಂಟರಲಿ ಬೇ । ಸತ್ತುಬಳಿ ಕಮರೇಂದ್ರಜಿತುವಿಂತೆಂದ
ನಸುರರಿಗೆ ॥ ೭ ॥ ಸೆಡೆಯದಿದು ಕೈದುಗಳ ಕವತೆಗೆ । ನಡೆಯದಿದು ಕರಿಗಳಿಗೆ ಖಳ
ರಿಗೆ । ಮಡಿಯದಿದು ಮಿಕ್ಕಾದ ಕೊಲೆಗಿದರೊಡನೆ ಹೋರದಿರಿ ॥ ಬಿಡಿರೂಸಾಯಲಿ
ಬೇಡನಿಲ್ಲಿದ । ರೊಡನೆ ಬಲುಮರಗಿಚ್ಚನೊಟ್ಟಿದು । ಸುಡಿಯೆನುತ ನೇಮಿಸಿದ ನಿಂದ್ರಾ
ರಾತಿ ನಿಜಬಲಕೆ ॥ ೮ ॥ ಒಟ್ಟಿದರು ಶಾಳೇಳರುದ್ಧದ । ಲಿಟ್ಟಣಿಯ ಹಳೆಮರನಲುರಿ
ಗಳ । ಲಿಟ್ಟಬೊಬ್ಬಿರಿ ದಬ್ಬರಿಸಿದರು ನಾಲ್ಕುವ್ಯೆಗಳಲಿ ॥ ಪಟ್ಟಣವನುರಿಗೊಳಿಸಲಿದು
ತಾ । ಬಟ್ಟೆತನಗೆನು ತರಚಿಹಲುಗಿರಿ । ದೊಟ್ಟದಿಂನಗೆಗೆದರೆಬಿದ್ದನುರಥದಮಧ್ಯದಲಿ ॥
ಬಿರುನಗೆಯ ಲಿಂದ್ರಾರಿ ಧಳ್ಳುರಿ । ದುರುಗಲಿನ ಕೊಳ್ಳಿಗಳಲಿ ದ್ದೆಸೆ । ಗೊರಗದಂತಿರೆ
ಕಟ್ಟಿದರು ಕಂಭದಲಿ ಹಳಿವಿಗೆಯ ॥ ಕಿರಿಕಿರಿನೆ ಹಲುಗಿರಿದು ಹುಣುಗುತ । ಗಿರಿಕು
ಗುಟ್ಟುತ ಮಿಣಿಕಿನೋಡುತ । ವರಿವ ನಗರಕೆ ನಡೆವುತಿರ್ದನು ವನಮೊಳಗೆ
ಹನುಮ ॥ ೧೦ ॥ ನಡೆದುದಲ್ಲಿಂಮೇಲೆ ನೆಲ ದಡ । ಧಡಿಸಲಾನೆಯ ನಂಕುಶದ
ಬೆಂ । ಗೂಡತಿಗಳ ಬಲುಹೊಯ್ಲು ಬೊಬ್ಬೆಯ ಬಿರುಬು ಗಹಳೆಗಳ ॥ ಒಡೆವ ಹರೆ
ಗಳ ಕಳಕಳಿಕೆಕೂ । ಗಿಡೆ ಫಣೀಂದ್ರ ನಗೇಂದ್ರ ಚಯವೋ ಗರ್ಜಿಸೆ ಬಂದುದು
ತ್ತೇರು ತೋಪಿನ ತುದಿಯ ಬಾಗಲಿಗೆ । ೧೧ ॥ ಬಳಿಮೊಳೆಯನಾರ್ಸೈವ ಕಮ್ಮರ । ರುಲು
ಹುಗಳ ಕೈಬಾಚಿ ಚೀಲಣ । ದುಳಿಯ ಕೆಲಸದ ಬಡಗಿಯರ ಬಿರುದನಿಯುಕುಳಿತಿವರ ॥
ತಳಪಟವ ಮಾಡುವ ಪದಾಗ್ರದ । ಯಲುಗುಗುದ್ದಲಿ ಗೋರೆಗಳ ಬಲು । ಗೆಲಸ
ದೊಡ್ಡರ ಕಳಕಳದಿರುತಿರ್ದ ದಸುರರಥ ॥ ೧೨ ॥ ನಟ್ಟಗಾಲಿಯ ಕೀಳುತರೆಗಳ ।
ಕುಟ್ಟುತಚ್ಚಿನ ಕಿಚ್ಚಿನುರುಜಿಯ । ದಟ್ಟಣೆಗೆ ಧಾರೆಗಳ ಬಿಡುವೆಣ್ಣೆಗಳ ಪಖ್ಖಲಿಯ ॥
ಘಟ್ಟಗೆಡುವಾನೆಗಳಿ ಗಾನೆಯ । ಕಟ್ಟ ತಸುರರಿ ಗಸುರರನು ಹೊಗ । ಗುಟ್ಟತೀಪರಿ
ನಡೆಸಿತಂಪರು ನೃಡಪರಾಕ್ರಮನ ॥ ೧೩ ॥ ಕೆಡಹಿದರು ಮುರಿಮುರಿದ ಕೇರಿಯ ।

ತೊಡಕು ವೀಧಿಯು ಮನೆಮನೆಯು ನೊಡ | ಬಡದ ರಾನುವ ವಿವಿಧ ಸೌಧದ್ವಾರ ಸಂ
ಕುಳವ ‖ ರಡಿಯು ಬಾಲವಬೀಸಿ ಬೀದಿಗ | ಳೆಡಬಲದ ನೆಲೆಯುಪ್ಪರಿಗೆಗಳ | ನಡಿ
ಮುಗುಚುತ್ತೈಯ್ತಂದ ನನಿಲಜ ನಂಜ ಲಖಿಳಜನ ‖ ೧೪ ‖ ಕಳಕಳಿಕೆ ಕಡುಹಾಯ್ತು
ಖಪುರ | ದೊಳಗಿ ದೆತ್ತಣ ವಾರಿಯುನು ಕೊಳ | ಲೊಳಗೆ ಹೊಗಿಸಿದಿರಕಟ ಖಳರಿಗೆ
ಕೇಡುಗಾಲವಿದು ‖ ತಿಳಿಯ ಲಿಲ್ಲಿಂಬಾರದೆಂ ದಳ | ವಳಿವು ತಲ್ಲಿಯುದಲ್ಲಿ ಬಲ್ಲವ |
ತಿಳಿವು ದುರ್ಗವನ್ನೈದಿದರು ಶಾಖಾಪುರಾದಿಗಳ ‖ ೧೫ ‖ ಊರಕೊಗಿಸಿದ ರರಿದು
ಸೀತೆ | ವ್ಮಾರಿಯುನು ಕೇಡಾಯ್ತೆನುತ ಧವಳಾರ ಗೋಪುರದೇಕೆಯು ನೋಟಕರ
ಮುರಿಗೆಡೆದು ‖ ದೂರದಲಿ ನಿಂದಿದರು ಬಳಕವ | ಗೋರಿದನು ಕುಡಿಯಿರಿದ ಬಾಲದ |
ಗೋರೆಯುಲಿ ತಳಮುಗುಚಿದನು ತೋರಣದ ಸಾಲುಗಳ ‖ ೧೬ ‖ ಘಳಿಕಿನರೆ ನೆಗ್ಗಿದುವು
ವಜ್ರದ | ಹಳಿಯ ಹೊಯ್ಲಿಗೆ ಹೊರಗೆ ಬೀದಿಯು | ಬಳಿಯ ಮಣಿಮಯಭದ್ರ ಭವನಾ
ವಳಿಗ ಳನಿಲಜನ ‖ ಬಳಲುಗ್ಗೈಸೋಂಕಿನಲಿ ನೆಲಕ | ಪ್ಪಳಿಸೆ ಬಿದ್ದುದು ಪುರದೊಳಗ
ಲಕೆ | ಕಳಕಳಿಕೆ ಕಡುಹಾಗೆ ಖಳ ಬಂದಿತ್ತ ನೋಲಗವ ‖ ೧೭ ‖ ತಂದನಲ್ಲಿಗೆ ಯಿಂದ್ರ
ಜಿತು ಯರಿ | ಮರ್ದನನ ರಾಕ್ಷಸಮದದ್ವಿಭ | ವೃಂದ ಕಂಠೀರವನ ಖಳಕುಲ ಕಾಲಭೈರ
ವನ ‖ ನಂದನವ ಕಿತ್ತಕ್ಷಮುಖ್ಯರ | ಕೊಂದ ಕೋಡಗವಿದಕೊ ಮನಸಿಗೆ | ಬಂದಪರಿ
ಯನು ಮಾಡೆನುತ ಕೈಮುಗಿದನೈಯಂಗೆ ‖ ೧೮ ‖ ಈತನಿದ್ದನು ಬಲೆಗೆ ಸಿಲುಕಿದ |
ಕೋತಿಯುಂದದ ಲುಸುರುದೊಡಕಿನ | ಧಾತುಗುಂದಿದ ಮುಖದ ಮುರುಹಿನ ಮುಚ್ಚ
ಗಂಗಳಲಿ ‖ ಹೂತುದಾನನ ದಶಶಿರನ ದು | ಷ್ಪ್ರೀತಿ ವಾಕ್ಯಸ್ಫುರಣೆಗಳ ನಿಜ | ರೀತಿ
ಗಳ ನೆರೆ ನೋಟವಿಂದೀಕ್ಷಿಸುತ ಕಲಿ ಹನುಮ ‖ ೧೯ ‖ ಕೊಲ್ಲು ಕಡಿ ತಿವಿ ತಿದಿಯುನುಗಿ
ಹೊ | ಯ್ದಲ್ಲುಗಳ ತರಿ ಕೊರೆಯೆನುತ ಕಿಡಿ | ಯಲ್ಲೊಗುವ ಕೋಪದಲಿ ಖಳಪತಿ ಬೆಸಸೆ
ಭಟನಿಕರ ‖ ಘಲ್ಲಿಸಿದ ರೀತನನು ಗಾಡೆಯು | ಘಲ್ಲಣೆಯು ಗಾಯುದಲಿ ಹನುಮನು | ಹುಲ್ಲ
ಕಡ್ಡಿಗೆ ಬಗೆಯದಿದ್ದನು ನಿಖಿಳ ಕೈದುಗಳ ‖ ೨೦ ‖ ಸೈರಿಸಿರೊ ಹೊಯ್ಯದಿರಿ ಹೋ
ಹೊ ವಿ | ಚಾರವುಂಟಿವನೆಲ್ಲಿಯವ ನಿವ | ಗಾರೊಡೆಯ ನವಿಮ್ಮಾಪುರಕ್ಕಿವ ಬಂದ ಕಾರಿ
ಯದ ‖ ಕಾರಣವ ಬೆಸಗೊಂಬೆವೆಂದು ಚ | ಮೂರಮಣನನುಚರನ ಜರೆದು ಸ | ಮೀರ
ಜನ ನೀನಾರಭಂಟನೆನುತ್ತ ಬೆಸಗೊಂಡ ‖ ೨೧ ‖ ನೋವುಘನ ಮಾತಾಡಬಾರದು | ಜೀವ
ಸಂಚಲವಾಗುತದೆ ಸ | ಜ್ಜೀವಿಗಳು ನಾವಾದಡೈಸಲೆ ಮಾತು ಬಳಿಕೆಮಗೆ ‖ ನಾವು
ಮಾಡಿದ ಹೊಲ್ಲೆ ನಾವುದು | ನೀವು ನಮ್ಮನು ಕಟ್ಟಿಕೊಲುವುದಿ | ದಾವರಾಯರ ರಾಜ
ಪದ್ಧತಿ ಯೆಂದನಾ ಹನುಮ ‖ ೨೨ ‖ ಮುಗುಳು ನಗೆಯುಲಿ ನಗುತ ಹನುಮನ | ಮೊಗದ
ಮೋಡಿಯು ಧೂರ್ತವದನದ | ಬಗೆಯ ಭಂಗಿಯುನಾ ಪ್ರಹಸ್ತ ವಿವೇಕದಿಂದರಿದು ‖ ವಿಗಡ
ಭಟನಿವ ಕುಟಿಲ ಶಾಖಾ | ಮೃಗವಿವನು ನಾನಾಡಿಕೆಯ ವನ | ಮೃಗದ ಪರಿಯಲ್ಲಿವನ
ನುಡಿಸಿದು ನೋಡಬೇಕೆಂದ ‖ ೨೩ ‖ ತೋಳಕಟ್ಟೊಂದುಳಿಯೆ ಮಿಕ್ಕಿನ | ಕಾಲು ಕೈ
ನಡು ತೊಡೆ ಕೊರಳ್ಗಳ ಕಾಲಪಾಶದ | ಕಟ್ಟ ಸಡಿಲಿಸಿ ಕೇಳಲಿಕೆ ಹನುಮ ‖ ಹೇಳ
ಬೇಕೇ ನಿನಗೆ ಕಿವಿಗೊ | ಟ್ಟಾಲಿಸಾದಡೆ ನಿಮ್ಮ ರಕ್ಷಿಸು | ವಾಳಿದನ ತಲೆಗೊಳಲು ಬಂ
ದೆನು ದೂತ ತಾನೆಂದ ‖ ೨೪ ‖ ಆತನಾರೆನಲಹುದು ಕೇಳುವ | ರೀತಿ ಲೇಸು ಪುಲಸ್ತ್ಯ
ಕುಲ ಸಂ | ಭೂತ ಭೂಭಾರಕ ದಶಾನನನೊಬ್ಬನುಂಟುಗಡ ‖ ಆತನೊಡಹುಟ್ಟಿದ

ಖರಾರಿ ಮ । ಹಾತಿಬಲ ಭಟರುಗಳ ಸುಗ್ರೀವ । ರೀತಪುರ ಕಟ್ಟಿದನನರಿಯಾ ಕೇಳು
ನೀನೆಂದ ॥ ೨೫ ॥ ಮಾಯೆಯಲಿ ಸುಳಿದಸುರ ನಸುವನು । ಸಾಯಕದ ಲುಗಿದವನ
ಬಲ್ಲೈ । ರಾಯಸಭೆಯಲಿ ರಾಜಮೌಳಿಯ ಚಾಪದಲಿ ಸಿಲುಕಿ ॥ ಸಾಯುಬಗೆದವನನುಜೆ
ಯಭಿಮಾ । ನಾಯತನ ಕೊಂಡವನ ಬಲ್ಲೈ । ಬಾಯಕರುಹಿನಲಾ ನರೇಂದ್ರನ ದೂತ
ತಾನೆಂದ ॥ ೨೬ ॥ ಮಗುಳೆ ಮತ್ತೀನುಂಟು ಕೇಳುವ । ಸೊಗಸು ಮಾತುಗಳುಳ್ಳವೆನೆ
ಹುಸಿ । ಸೊಗದವೊಲು ಹೇಳಿದೆವು ನಮಗಿದ ಕಂಜಲೇಕೆನಲು ॥ ನಗೆಯ ನಸುಕೋಪ
ದಲಿ ನವಿರ್ಮಾ । ನಗರಕೇತಕೆ ಬಂದೆ ಹುಲುಕೋ । ಡಗವ ಕಳುಹಿದನೇನುಕಾರಣ ನಿನ್ನ
ಪತಿಯೆಂದ ॥ ೨೭ ॥ ಆವಡೆಲವೋ ಕೇಳು ಶಿರವೀ । ರೈದರವ ನೀ ಪುರದರಸುಗಡ ।
ಕಾವಲರಿಯದೆ ಕಳವಿನಲಿ ಕುಂಭಿನಿಯನಂದನೆಯ ॥ ವೊಯ್ದಗಡ ನಾವರಿಯೆವಿವ
ಬಳಿ । ಕಾ ದಿನೇಂದ್ರಕುಲೇಂದ್ರ ತನ್ನ ತ । ಳೋದರಿಯ ನರಿಯೆಂದು ಕಳುಹಲುಬಂದೆ
ವಾವೆಂದ ॥ ೨೮ ॥ ಎಲವೊ ನೀನಾಶತಿಯ ಕಂಡಾ । ಕೆಲಸ ಮುಂಚಿತು ಕಂಡೆನಲ್ಲದೆ ।
ಗಲಬೆಗಾರರು ಗಾಸಿಮಾಡಿದ ರಣಕ ಸಣಕದಲಿ ॥ ಬಳಿಕ ಕೈನೈ ಸೋಂಕಿಗಾರದೆ ।
ಸಿಲುಕಿದೆವು ಸೋಲದಲಿ ಬಂಧನ । ಕೊಳಗುಬಟ್ಟುದು ವಿಧಿಪುರಾಕೃತವಾರವಶವೆಂದ ॥
ಬಟ್ಟಿದೆಗೆದೆವು ನಿಮ್ಮ ರಕ್ಕಸ । ಘಟ್ಟಿಯರ ಗಾಢಕೆಗೆ ಸೈರಿಸ । ದಟ್ಟಿಹಿಡಿದರು ಹಿಡಿದು
ಸದೆಬಡಿದೆನ್ನನೀಪರಿಯ ॥ ಕಟ್ಟಿ ತಂದರು ನಾವು ಲೋಗರ । ಬಟ್ಟೆಯವರೇ ಧಿಟ
ವಿಚಾರಿಸಿ । ಬಿಟ್ಟಡೆಯು ಬಿಡಿ ಬಿಡದೆ ಕೊಲುವರೆ ಕೊಲ್ಲಿ ನೀವೆಂದ ॥ ೩೦ ॥ ಆಗಲಿ
ದ್ದುದು ನಮ್ಮದೃಷ್ಟದ । ಭೋಗವಿನಿತಿದ ನೊಲ್ಲೆನೆಂದಾ । ವೀಗಲಳವೇ ಮರುಗಿ
ಮಾಡುವುದೇನು ತಾನಿನ್ನು ॥ ಆಗಲದಕೇನುಸುರು ಬಡುಕಿ । ದ್ದಾಗ ಲಾಳ್ದನ ಹಗೆಯ
ಹರಹಿನ । ವೈಗುರುಹ ನಾವರಿವೆವಾತನ ತೋರಿತನಗೆಂದ ॥ ೩೧ ॥ ತೋರಬೇಕೇ ನಿನಗೆ
ಕರುಣಾವ । ತೋರಬೇಕಾದರೆ ಯೆನುತ್ತಲೆ । ತೋರಿಸಿದನಾ ಸಚಿವಪತಿ ಸುರರಾಜ
ದಲ್ಲಣನ ॥ ತೋರಿಸಲು ತಲೆದೂಗಿ ನಸುನಗೆ । ದೋರಿಕೆಯ ನಯನಾಗ್ರದುಗ್ರವ ।
ಬೀರಿಕೆಯಲೀ ಮಾತನಾಡಿದನಾ ಪ್ರಹಸ್ತಂಗೆ ॥ ೩೨ ॥ ಆಯತಾಕ್ಷಿಯತಂದ ರಕ್ಕಸ ।
ನಾಯಿನೇತಕೆ ಕಾಕತಾಳ । ನ್ಯಾಯದಿಂದಲೆ ಕಂಡೆವೈ ಶಿವಶಿವ ಮಹಾದೇವ ॥ ಆಯ
ಸದ ಕತ್ತಲೆಗೆ ಕಂದೆರೆ । ವಾಯಿತಿನ್ನಾವ್ ಧನ್ಯರೆಬುಜ ದ । ಳಾಯತಾಕ್ಷನ ಪಾದ
ಸೇವೆಯುಲೆಂದನಾಹನುಮ ॥ ೩೩ ॥ ಎಲವೊ ರಾವಣ ತೋರುವೀಜಗ । ದೇವ ಪಟ್ಟಿಂ
ತರ ನಿರರ್ಥಕೆ । ಘಳಿಸಿಕೊಂಡೆಯಲಾ ಮಹಾಂಧ ತಮೋನಿವಾಸಕವ ॥ ಕಳವಿನಲಿ
ಕಾಕುತ್ಸ್ಥ ಭೂಪನ । ಲಲನೆಯನು ತರಲಹುದೆ ಹೋಗೆಲೊ । ಹೊಲೆಯ ಸುಡುಸುಡು
ನಿನ್ನ ಮೋರೆಯ ನೋಡುವರೆಯೆಂದ ॥ ೩೪ ॥ ಕಂಡು ಸೈರಿಸಿ ಬಿಡುವುದಕಟಾ । ಭಂಡ
ತನ ಬಲುವೀರರಿಗೆ ಹಿಸಿ । ಖಂಡ ಕೊಯ್ಯಲು ಬೇಕು ಬಲ್ಲರೆ ಶಾಸ್ತ್ರಸಿದ್ಧವಿದು ॥ ಭಂಡ
ತನವಾಯ್ತೇನವಮಾನವೆ । ಗಂಡುಗಲಿ ರಾಮನಲಿ ನೇಮವ । ಕೊಂಡುಬಾರದೆ ಕೊಳ್ಳ
ಹೋದೆನೆನುತ್ತ ಹಲುಮೊರೆದ ॥ ೩೫ ॥ ಜಳ್ಳ ರಕ್ಕಸನಿವನ ನೀ ಕೊಂ । ಗಳ್ಳನೆನು ಸಂ
ತಾಪಿಸುತ ರಣ । ಗಳ್ಳನನು ಗತಿಗೇಡಿಗನ ನೀ ದ್ರೋಹಿ ರಕ್ಕಸನ ॥ ಎಳ್ಳನಿತು ತರಿ
ಖಂಡಮಾಡಿಯೆ । ತೊಳ್ಳ ಪರಿಸಲೂದುವೆನು ಕೈ । ಕೊಳ್ಳದಾದೆನು ಬರುತ ನೇಮವ
ನಕಟ ತಾನೆಂದ ॥ ೩೬ ॥ ತೋರಿದಿ ಸಂವಣೆಯ ಸಾಲಿನ । ಮೋರೆಗಳ ವಿಶಾಸಿಗಳ

ಗತ್ತವ | ಕಾಂಡಲು ಸಡಬೇಕು ಬಲ್ಲಡೆ ಕೊಯ್ದು ಖಂಡಗಳ || ಬೀರಬೇಕಕಟಕಟ
ನೈರಣೆ | ದೋರಿತಿದು ಕಡುಹೀನ ತನಗೇನು | ತೇರಿಸಿದ ಬಲುಗೋಪದಲಿ ಹಲುಮೊರೆದ
ನಾ ಹನುಮ ||೩೭|| ಎಲವೊ ನಿನ್ನೀ ಪುತ್ರ ಮಿತ್ರಾ | ವಳಿ ಸಹಿತ ನಿನ್ನೀ ತ್ರಿಕೂಟಾ| ಚಲ
ಸಹಿತ ನಿನಗೊಸದು ಸೇರಿದ ಸಕಲ ಸಿರಿಸಹಿತ || ಕಲಕುವೆನು ಕಡಲೊಳಗೆ ತಪ್ಪಿದ |
ಕೆಲಸಕಿನ್ನೇನೆಂದು ಹಲುಮೊರೆ | ದಳಲಿ ಹೂಂಕೃತಿಗೆಯ್ದು ಕಿಡಿಕಿಡಿಯಾದನಾ
ಹನುಮ. ||೩೮|| ಇವನ ನುಡಿಸಿವಡೇನು ಹುರುಡಿ | ಪ್ಲವನ ನೊಯ್ದು ನಿಕುಂಭಿಣಿಯ
ನಿಜ | ಭವನ ದಿದಿರಿನ ಶೂಲದಲಿ ಕಳಸೆಂದು ತನುಜಂಗೆ || ದಿವಿಜರಿಪು ನೇಮಿಸಲು
ಪುಣ್ಯ | ಶ್ರವಣ ವೀರ ವಿಭೀಷಣನು ಬಳಿ | ಕವಿರಳ ಕ್ರೋಧಂಗೆ ಕೈಮುಗಿದೆಂದನೀ
ಹದನ ||೩೯|| ಚರರು ಮಾತುಪ್ರದಾವ್ರದಾಳ್ವನ | ನಿರತಿಶಯ ವಿಕ್ರಾಂತ ಲಕ್ಷ್ಮೀಯು |
ಸಿರಿಯ ನಗ್ಗದ ಸುಪ್ರತಾಪವ ಹೊಗಳುವುದೆ ಸಹಜ || ಅರಿವಿರೋಧಕೆ ದೂತಹಿಂಸಾ |
ಚರಣೆ ಚದುರೇ ರಾಯರಿಗೆ ತರು | ಚರ ವಧಾವರಿ ಸಮಯ ಪರಿಹಾಸಕ ವಲಾಯೆಂದ ||
ಆದಡೀ ಕಪಿವರನ ಕೈಗಳ | ಕೊಯ್ದು ಬಿಡಿ ಸಂಗಸ್ಫುರದ ಸಂ | ಪಾದನೆಯ ಸೂರ್ಯಾ
ನ್ವಯಂಗೆ ಗೆಚ್ಚರಿಸಲಿವನೆನಲು || ಮಾದುದಾಕೊಲೆ ಕಪಿಯ ಕಿವಿ | ಗೊಯ್ವುದಕೆ ಚಾಚಿದ
ಖಡ್ಗ ವಿಕ್ರಮಿ | ಯಾದುದಲ್ಲದೆ ಹರಿದುದಿಲ್ಲನಿಲಜನ ರೋಮಾಚಯ || ೪೧ || ಬೆದರು
ಗೊಂಡಸುರೇಂದ್ರ ಮೂಗಿನ | ಬೆರಳಲಿರೆ ಬಳಿಕಾ ಪ್ರಹಸ್ತನು | ಕಿರುನಗೆಯ ಕೇವಣಿಸಿ
ನುಡಿದನು ರಾಮಭೃತ್ಯಂಗೆ || ಉರುವ ನವಿರ್ಮ್ಮವನವ ನೇತಕೆ | ಮುರಿದೆಯೆನೆ ಕಿವಿ
ಮುಚ್ಚನಾವಿದ | ನರಿಯೆ ನಮ್ಮಯ ಬಾಲವೆಸಗಿದ ಕೆಲಸವೈಸೆಂದ || ೪೨ || ಇವನ
ಸಮ್ಮತ ವಲ್ಲಗಡ ತ | ದ್ವ್ಯವಹರಣೆ ಲಾಂಗೂಲದಲಿ ಸಂ | ಭವಿಸಿದುದುಗಡ ಗಡಿಯ
ಲಸದಳವಾದತಗ್ನಿಯಲಿ || ನಿವಸನದ ಲೆಣ್ಣೆಯಲಿ ಹರಿನವ | ಹವಣಿಸುವುದೆನೆ ತಪ್ಪ
ದೆಂದಾ | ದಿವಿಜಪತಿಜಿತು ಬಿನ್ನವಿಸಿದನು ರಾಕ್ಷಸೇಂದ್ರಂಗೆ || ೪೩ || ಹೋರಬೇಡಿದ
ದೊಹನೆ ಶಸ್ತ್ರದ | ಗಾರುಡವು ಗರ್ವಿಸದು ಸೆಡೆಯದು | ಭೂರಿಬಾಧೆಗೆ ಬಾಲವನು
ಸುಡುವದೆ ಸುನೀತಿಯೆನೆ || ಭೂರಿಬಲ ಬಾಲದಲಿ ಬಳಲಿವ | ಹಾರಿಬಳಲಲು ಬಳಿಕಲಾ
ಶ | ಕ್ರಾರಿ ಕೈದೀವಿಗೆಗಳಿಂ ದಿರಿಕಿವನು ಕಪಿವರನ ||೪೪|| ಚೀರಿ ಕಿರಿಕಿರಿಗುಟ್ಟುತಲಿ ತಳ|
ವಾರಿ ಬಿದ್ದನು ಹಲುಗಿರಿದು ಹು | ಬ್ಬೇರಿಸುತ ಹುಣಗುತ್ತ ಹೆದರುತ ತಲೆಯ ಚಟ್ಟೈಕ್ಕಿ||
ತೋರಿಸಿದ ದೀವಿಗೆಗೆ ಕರುಣವ | ತೋರಲಿತ್ತನು ಬಾಲವನ ನಗೆ | ಗಾರರಿಗೆ ನಾಟ
ಕವ ನಟಿಸುತ ವೀರ ಹನುಮಂತ || ೪೫ || ಭಾವಸಿಕ್ಕಿದನೆಂದು ಸಭೆಯಲಿ | ಬಾವಕಿಯ
ಚರರುಬ್ಬು ನಗೆಯಲಿ | ಪಾವಮಾನಿಯ ಮುಕ್ಕುರಿಕಿವವರಳ್ಳೆ ಗುತ್ತಿನಲಿ || ತೀವಿವತಿ
ಶಯ ರೋಷದಿಂದಾ | ರಾವಣನ ಬೆಸಸಿವನು ಬಳಿಕಸು | ರಾವಳಿಗೆ ಸುಡಿ ಕಪಿಯ
ಬಾಲವನೆಂದು ಸಭೆಯೊಳಗೆ || ೪೬ || ಅಡಸಿ ಬಳಿಕರುವತ್ತು ಸಾವಿರ | ದಡಿಗಿ ರಕ್ಕಸ
ರನಿಲಜನ ಬಲು | ಗಡಿಯ ಬಾಲವ ನುಗಿದ ರಾಲಯ ದಹಿಯ ನುಗಿವಂತೆ || ಜಡಿದು
ತೈಲದೊಳದ್ದಿ ಸೀರೆಯ | ನುಡಿಸಲುದ್ಯೋಗಿಸಿದರೇ ಜಗ | ದೊಡೆಯ ತೊರವೆಯ
ರಾಯ ನರಕೇಸರಿಯ ಕಿಂಕರನ || ||೪೮||

ಏಳನೆಯ ಸಂಧಿ ಸಮಾಪ್ತಂ.

ಎಂಟನೆಯ ಸಂಧಿ.

ಸೂಚನೆ। ತ್ರಿಪುರ ದಹನದ ಭಾಳಲೋಚನ। ನುಪಮೆ ಗೈವುಡಿಯೆನಲು ಮಾರುತಿ।
ವಿಪುಳವಹ್ನಿಯ ವದನದಲಿ ನೂಕಿದನು ರಿಪುಪುರವ॥

ಪದ್ಯ॥ ಕೇಳಿದೈ ಕುಶ ಕಲ್ಪಿತೋಗ್ರ ಕ। ರಾಳ ಕಾಯದ ಕಪಿಯ ಕರ್ಬುರ। ರಾಳುಗಳು ಕೈಮಾಡಿ ಕೈದೀವಿಗೆಗಳೊಗ್ಗಿನಲಿ॥ ಬಾಲವನು ಬರಸೆಳೆದು ಧಾಳದ। ತೈಲ ಗಮ್ಮಿಗೆಯುರುವೆಗಳಲು। ಬ್ಬಾಳಿಗರು ಸುತ್ತಿದರು ಸೂರ್ಯಾನ್ವಯನ ಕಿಂಕರನ॥ ೧॥ ಸುತ್ತಸುತ್ತಲು ಬೆಳೆವುತಿರ್ದುದು। ಹತ್ತುನೂರಿನ್ನೂರು ತದ್ವಿಗು। ಣೋತ್ತರದ ಪರಿವಿಡಿಯ ಪರಿವೃದ್ಧಿಯಲಿ ಸೀರೆಗಳ॥ ಸುತ್ತುತಿರ್ದರು ಬೆಳೆವುತಿರ್ದುದು। ಹೊತ್ತುಹೊತ್ತಿಗೆ ನೋಡನೋಡಲು। ಸುತ್ತಿದುದು ಕಂಗಳಿಗೆ ಕೌತುಕ ವಸುರವಲ್ಲಭನ॥ ೨॥ ತಿದ್ದಿಮೀಸೆಯ ಮುರುಹಿ ರಕ್ಕಸ। ನೆದ್ದು ನಿಂದಿರ್ದನುಚರರು ಬಿಡ। ದದ್ದಲಿಸೆ ತಂದೊಟ್ಟಿದರು ಗತಜೀರ್ಣ ವಸ್ತ್ರಗಳ। ಅದ್ದಿ ತೈಲದೊಳರುವೆಗಳನು। ಬ್ಬಿದ್ದು ಸುತ್ತಿದ ರನಿಲಜನ ಹೊರ। ಬಿದ್ದ ಬಾಲವ ನೊದೆನೊದೆದು ಗುರಿಗಟ್ಟಿ ಖಳನಿಕರ॥ ೩॥ ತೀರು ತೀವಲಿ ಕಟ್ಟುತಿರ್ದುದು। ಭಾರ ಸಂಖ್ಯೆಯ ಬಣ್ಣಬಿಳಿದನ। ಶೀರೆ ಬುದ್ದಲಿ ಹಾಡ ಪಕ್ಕಲೆ ಕಂಬಿಗಳ ಕೊಡನ॥ ಧಾರೆಗಳ ಘೃತತೈಲ ಬಸೆಗಳ। ಸಾರಕಟ್ಟಿತು ತೋದು ಸುತ್ತುವ। ಭೂರಿರವ ಹಿಡಿಸಿತ್ತು ಹನುಮನ ಹೇಳಲೇನೆಂದ॥೪॥ ಥಂಘವದ ಕೊಪ್ಪರಿಗೆಗಳ ಸಾ। ಸಿರದ ಸಂಖ್ಯೆಯಲಿಳುಹಿದುವು ಸುರಿ। ಸುಂದ ತೈಲತಟಾಕ ಜೀರ್ಣದ ವಾಸವಪರಿಮಿತ॥ ಹರಿಪದಾಬ್ಜ ಪರಾಗ ಮುದ ಮಧು। ಕರನ ಮಹಿಮೋನ್ನತನ ಬಾಲದ। ಹರಹಿನಲಿ ಹಿಂಗಿದವು ಹವಣೆಂದಾಯ್ತು ಲಾಂಗೂಲ॥೫॥ ಸುರಪ ಧನಪನ ಸಿರಿಗೆ ಶತಸಾ। ವಿರದ ಮಡಿ ದಶಕಂಠನಷ್ಟೈ। ಶ್ವರ್ಯ ವಾಜ್ಞಾತ್ರಯಕೆ ವಸ್ತ್ರಾವಳಿಯ ದಿಂಡುಗಳ॥ ಸಿರಿನೆರೆದ ವಗಣಿತ ಸಮುದ್ರಕೆ। ಸರಿಯೆನಿಸಿ ಘೃತಪೂರಿತವ ಕೊ। ಪ್ಪರಿಗೆಗಳು ತೀವಿದುವು ಸಮ್ಮುಖದಲಿ ದಶಾನನನ॥ ೬॥ ಧರಣಿಜಾಸುತ ಕೇಳು ಮಖರ। ಗುರುವಲಾ ಫಲಪದ ಪರಿಗ್ರಹ। ದುರುಳ ದುರ್ನೀತರಿಗೆ ಕರ್ತುವಲಾ ದಶಗ್ರೀವ॥ ಪುರದಹನ ಕವದಹನ ನವನಿಂ। ದೊರಕುವಪಲಾ ಯೆಂಬ ಬುದ್ಧಿಗೆ। ಬಳಡನಾಗಿ ಬಳಿಕ್ಕ ರಕ್ಕಸರಾಯ ನಿಂತೆಂದ॥ ೭॥ ಒಡೆಯಿರೋ ಕಣಜಗಳ ನಜ್ಜ್ಯ। ನಡಕಿರೋ ಸೀರೆಗಳ ದಿಂಡನು। ಬಿಡಿಸಿರೋ ತಂದುಡಿಸಿರೋ ತಡವೇನು ಜೀಗೆನುತ॥ ಜಡಿಯೆ ಜಡಿತೆಗಳಿಂದ ರಕ್ಕಸ। ರಡಕೆ ತೈಲಾಂಬರದಲೀತನ। ಸಿಡಿಯ ಬಾಲವ ಸುತ್ತುತಿರ್ದರು ಲಕ್ಷಸಂಖ್ಯೆಯಲಿ॥ ೮॥ ಎಡೆಯಡೆಗೆ ಹತ್ತಿಗಳ ಹೊರೆಗಳ। ಹೊಡಚಿವರಳೆಯ ಸುತ್ತಿದರು ಮ। ತ್ತೆಡೆಗಡೆಗೆ ಪುಡಿಯರಗು ಸಜ್ಜರಸಾದಿ ಧೂಸರದ॥ ಹೆಡೆಗೆಗಳ ಹೊಯ್ಹೊಯ್ದು ಹೋದೆಡೆ। ಗೆಡೆಗೆ ಬಸೆಗಳ ಬಳಿಯ ಬಾಲವ। ಜಿಡಜಿಸುತ್ತಲು ಬೆಳೆವುತಿರ್ದುದು ಮತ್ತೆ ಲಾಂಗೂಲ॥ ೯॥ ತೀರಿದುವು ಹಳೆಸೀರೆ ವಸ್ತ್ರಾ। ಗಾರ ಪಖಿಳಾಂಬರದ ಹೊರೆಗಳ। ಸಾರಸವದು ದುಸವದ ವಸುರನ ಕಣಜ ಪಟ್ಟಿಗೆಯ॥ ಮೀರೆಯಲ್ಲದ ತೈಲ ಘೃತ ಬಳಿ। ಕೂರ ಹರದರ ಹಾರುವರ ಬೀ। ಡಾರಗಳ ಬಲುಸೂರೆ ಯಾದುದು ಕೇರಿಕೇರಿಯಲಿ॥ ೧೦॥ ದೊರೆದೊರೆಯ ರಶಮನೆಸು

ಮಂತ್ರೀ | ಶ್ವರರ ಮಂದಿರದರಸು ಮಕ್ಕಳ | ಪರಿಸರದ ನಿಳಯಂಗಳಾಪ್ತರ ಮನೆಯ ಪರಿಜನದ ॥ ಪುರಜನದ ಸಂಚಿತದ ವಸ್ತ್ರಾ | ಕರುಷಣವು ಬಳಿಕಾಯ್ತು ಲಂಕಾ | ಪುರದ ಗಾವಳಿ ಗುಡಿಯಿರಿದು ಗಾಢಿಸಿದು ದಗಲದಲಿ ॥ ೧೧ ॥ ಅಂಗಡಿಯ ಗಾಣಿಗರ ವಣಿಜ ಗೃ | ಹಂಗಳೂರೊಳಗುಳ್ಳ ಕುಸುಮೆ ಗ | ವುಂಗು ಬೇವೌಡಲಿಕೆ ಹುಲುಗಿ ತ್ತಾರೆ ಯಗಸೆಗಳ ॥ ತೆಂಗು ಸಾಸಿವೆ ಯಿಪ್ಪೆ ಗೇರು ವಿ | ಳಂಗ ವಂಚಲೆ ಮುಖ್ಯ ತೈಲವ | ಸಂಗಡಿಯ ಸಂವರಣೆ ಸವೆದುದು ಕಪಿಯ ಬಾಲದಲಿ ॥ ೧೨ ॥ ಪೊಳಲ ಧನಿಕರ ಧಾರ್ಮಿಕರ ಮನೆ | ಗಳಲಿ ಧೊರೆಗಳ ಭವನ ವಸನಗ | ಳುಳಿಮದಿಲ್ಲ ವರವರ ಗೃಹ ಘೃತ ತೈಲ ವಿನಿತಿನಿತು ॥ ಬಲಿದು ಬಿದ್ದುದು ಜೀಯಬಾಲದ | ಬೇವಿಗೆಗೆ ಬಡವಿಲ್ಲವೆನೆ ಖಳ | ತಿಲಕ ತರಿಸಿ ನಂಬರವ ನಂತಃಪುರೀ ಜನದ ॥ ೧೩ ॥ ರಂಗ ಚಿತ್ರ ವಸಂತ ರತಿ ಸಾ | ಳಂಗ ಗುಜ್ಜರ ರತುನ ರವೆಯ ಭು | ಜಂಗವಲ್ಲರಿ ಪಲ್ಲವಾವಳಿ ಪಚ್ಚೆನೈಮರವ ॥ ಶೃಂಗಲಕೆ ಸುವರ್ಣಪಳಿ ಮದ | ನಾಂಗರೇಖೆ ಸುರಾಗ ರಜಿತ ಕು | ರಂಗ ವಿಲಸಿತ ವಸನ ಬಾಲಕೆ ಸೇರಿದುವು ಕಪಿಯ ॥ ೧೪ ॥ ಹಳದಿ ಸಂಧ್ಯಾರಾಗ ಹರಿಣಾ | ವಳಿ ಹಯಾವಳಿ ಹಸ್ತಿ ಹರಿಮುಖ | ವಿಲಸಿತಾವಳಿ ವಿವಿಧ ಚಿತ್ರಲತಾಂತ ಲತಿಕೆಗಳ ॥ ಫಳಿ ಸುರೇಖ ಮಯೂರಹಾಸಾ | ವಳಿ ಸುರಾವಳಿ ಮೇಘ ವರ್ಣಗೆ | ಸಿಳ ವಿವಿಧ ನಿವಸನಗಳೆಸೆದುವು ಕಪಿಯ ಬಾಲದಲಿ ॥ ೧೫ ॥ ಮಾದಳಿರು ಮಂಚಟಿಕೆ ಮಾವಲಿ | ವೈದೊಡವಿ ಸಾವಂತಿ ಸೊಗಸಿನ | ಬೀದಿ ಬಿಳಿದೆಳೆಗಾವಿ ಸಂಪಿಗೆ ಗಾವಿ ತೆಳುಗಾವಿ ॥ ಆದೆ ಸೀರೆ ಸರೋಜವಲ್ಲರಿ | ಪಾದಪಾವಳಿ ಪಟ್ಟೆಗಳ ನೊದ | ಲಾದ ವಿವಿಧಾಂಬರ ಗಳೆರೆದುವು ಕಪಿಯ ಬಾಲದಲಿ ॥ ೧೬ ॥ ಗೌರಿಕಣೆ ಗುರುಗಂಜಿ ಕುಂಕುಮ | ಪಾರನಾರೀ ಬೆಡಗವರಸಿಂ | ಧೂರ ಮಂಜರಿ ಮನ್ಮಥಾವಳಿ ಮಕರ ಚಿತ್ರಲತೆ ॥ ಚಾರುಚಾಪಳ ಚತುರತರ ಶೃಂ | ಗಾರ ನಾಯಕಿ ಮರ ನವಾಂಬರ | ಮಾರುತಿಜ ಬಾಲದಲಿ ಬೆಳೆದುವು ಬಿಡದೆ ಬೆಂಬಳಿಯ ॥ ೧೭ ॥ ಬಳಿದು ಬೆಂಬಳಿ ದಳಿಬಿಳಿದು ಪೊ | ಪ್ಪಳಿ ಪಸುರ್ಮಡಿ ಪಟ್ಟೆ ಪೊತ್ತಿಯ | ಫಳಿ ಸುರಂಗ ಸುರಾಗ ಬೊಂಬೆಯ ಬಣ್ಣ ಮೊದಲಾದ ॥ ಹಲವು ದೇಶದ ದೇಶಿಯದ ಭೂ | ತಳ ಭುಜಂಗವ ಭುವನ ವೀಥಿಯ | ವಿಲಸಿತಾಂಬರ ವಿಂಬುಗೊಂಡುದು ಕಪಿಯ ಬಾಲದಲಿ ॥ ೧೮ ॥ ಉಡುವ ಶೀರೆಗಳುಳಿಯೆ ಬಂದವು | ಬಡವು ಬಿಸುಗು ಸರ್ವರೆನ್ನದೆ | ನುಡಿಯಲನ್ಮವು ಜೀಯ ಮೊರೆ ಬಲುಹಾದು ದೂರೊಳಗೆ ॥ ಬಿಡದು ಬೆಳವಿಗೆ ಬಾಲದಲಿ ನಿಲ | ಕಡೆಯ ಕಾಣೆವು ನಿಲುವೆನೆನೆ ಕಾ | ಳೆಡೆಯ ದೂರನು ಸುಲಿಯ ಹೋಗೆಂ ದಸುರಗರ್ಜಿಸಿದ ॥ ೧೯ ॥ ಕೇಳಿದನು ಹನುಮಂತನಾ ಕಡು | ಖೂಳ ರಕ್ಕಸನೆಂದ ಮಾತನು | ಕೇಳಿ ಕಿವಿಗಳ ಮುಚ್ಚಿಕೊಂಡನು ರಾಮ ರಾಮೆನುತ ॥ ಖೂಳನಿವ ತಾ ನಾದಡಾ ಪತಿ | ಖೂಳರಹ ದನುಚಿತವು ನಾವ್‌ನೆರೆ | ಹೇಳುವೆವು ಬಾಲಕ್ಕೆ ಬುದ್ಧಿಯನೆಂದನಾ ಹನುಮ ॥ ೨೦ ॥ ಭಂಡ ನಿವನೀ ಖಳನು ಲೋಕದ | ಭಂಡರಿಗೆ ಗುರುನಾಣು ನಪಿಕನ | ಚಂಡಿ ಯಿವನಲಿ ಬಾಲನೇ ಸಾಕಿನ್ನು ಬೆಳೆಯದಿರು ॥ ಕಂಡವರ ನಿವ ಸುಲಿಸದಿರನೀ | ಭಂಡತನದ ವರಲ್ಲ ನಾವ್‌ಕೈ | ಗೊಂಡಕೆಲಸದ ಕಡೆಯ ನಿನಗಿನ್ನರುಹಲೇನದನು ॥ ೨೧ ॥ ಹೊಳಲ ಪುಣ್ಯಾಜನದ ನಾಚಿಕೆ | ಗೊಳಲು ಬಂದೆನೆ

ಬಂದಕಾರ್ಯವ । ನೆಲೆಯ ನೀನೇ ನೋಡಿಕೋ ಯೆನೆ ನಿಂದು ದಾ ಬಾಲ ॥ ಇಳೆಯ
ಲಲನಾಜನವೆನಗೆ ತಾಯ್ । ಗಳು ಮರುಳುತನ ಬೇಡ ಬಂದೇ । ಬೆಳೆಯದಿರು
ಬೆಳೆಸದಿರು ನರ್ವಾಪಕೀರ್ತಿ ಸಾಧನವ ॥ ೨೪ ॥ ಕಟ್ಟಿದೀ ಕೌಪೀನ ಕಮಲಜ ।
ಕೊಟ್ಟ ನಿನಿತಕೆ ಪೂರ್ವ ಭವದಲಿ । ಕೊಟ್ಟ ಹುಟ್ಟಿದುದಿಲ್ಲವಾಗಿ ನಿಧಾನವಿದು
ನಮಗೆ ॥ ನೆಟ್ಟನಾದಿಯೊಳಾವ ಸುಕೃತವ । ಮುಟ್ಟನೀಮಾಡಿದೆಯೊ ನಿನ್ನವೊ ।
ಲುಟ್ಟು ಮರೆದವರಾರು ಸಾಕಿನ್ನಧಟು ತನವೆಂದ ॥ ೨೫ ॥ ಸಂತವಿಸಿದುದು ಬಾಲ
ಬಳಿಕಸು । ರಾಂತಕನ ನಿಜಚರನ ನೇಮದ । ಲಂತರಿಕ್ಷವ ನಳ್ಳಿರಿದು ದೀತನ ಪ್ರತಾಪ
ದಲಿ ॥ ಕಂತುಪಟ ಸಾಕಿನ್ನು ಬೆಳವಿಗೆ । ಸಂತವಾದುದು ಸುಲಿಯದಿರಿ ಹೋ
ಸಂತವಿಸಿ ಯೆಂದೊದರಿದುವು ಡಂಗುರ ಗಳಲ್ಲಲ್ಲಿ ॥ ೨೬ ॥ ಕುಮತಿ ರಾವಣನೆದ್ದು
ಬಳಿಕು । ಭ್ರಮಿ ನಿಶಾಟರ ಕರೆದು ನೇಮಿಸೆ । ನಿಮಿಷದಲಿ ಹತ್ತಿದರು ಹೊತ್ತಿಕ್ಕಿದರು
ಹುತವಹನ ॥ ಆವುರಿ ತುದಿ ಬಾಲದಲಿ ರಘು ಭೂ । ರಮಣ ನನುಚರನ ರಚಿಕೆಡೆ
ಸುಲು । ತಮತಮಗೆ ಘೋಳೆಂದುಗುಹಾಲಿಕ್ಕಿತು ಭಟ ಸ್ತೋಮ ॥ ೨೭ ॥ ಜಾಣ
ನೀಶಕ್ರಾರ ಮರ್ಮವ । ಕಾಣಿಸಿದ ನೀಕಪಿಗೆ ನುತ ಗೀ । ರ್ವಾಣ ರಿಪುವಡಬಿದ್ದು
ತಂಬುಲ ಸೂಸಲೆಡಬಲಕೆ ॥ ಗೋಣುಗಳ ನೊರಗಿಸುತ ನಗುತ । ಕ್ಷೀಣಬಲನದ
ಕಂಡು ಮನದಲಿ । ಮಾಣಿಸುವೆ ನೀನಗೆಯ ಸೈರಿಸು ನಿಮಿಷ ನೀನೆಂದ ॥ ೨೮ ॥
ಪೂರೊಳೀತನ ಮೆರೆಸಿ ಮಹಿಜಾ । ನಾರಿಗೀತನ ತೋರಿ ತಡೆಯದೆ । ಮಾರುಧಿಯ
ಹೊರವಡಿಸಿ ಬಿಡಿ ಮೊಡೆಯ ನಿದ್ದೆಡೆಗೆ ॥ ದಾರಿದೆಗೆಯಲಿಯೆಂದು ನಾರೀ । ಚೋರ
ನೇಮಿಸೆ ಬಳಿಕ ಬಲ್ಲಿದ । ವೀರಭಟರೊತ್ತಾಗಿ ಹೊರವಡಿಸಿದರು ಮಾರುತಿಯ ॥ ೨೯ ॥
ಹಣೆಗೆ ಮಸಿಯನು ಬರೆದು ನಿಡುದಾ । ಸಣದ ದಂಡೆಯ ಹಾಯ್ಕಿ ಹಗ್ಗದ । ಕುಣಿಕೆ
ಗಳ ಸಂದೆರಡು ಮೈಗಳ ಲುಬ್ಬಿ ಬೊಬ್ಬಿರಿದು ॥ ಕುಣಿಸಿ ಕೈಚಪ್ಪಳೆಗಳಲಿ ಮೀ । ರಣ
ಕೊಳಲ್ಕೊಂಬುಗಳ ಸಬುದುದ । ಲಿಣಿಯ ರದರನಿಲಜನ ತಂದರುರಾಜಬೀದಿಯಲಿ ॥
ನೆರೆದುದೈ ನೋಟಕರು ನಗೆಗಳ । ಹೊರಳಿಗಳ ಲಂಗಡಿಯ ಹಸರದ । ಹುರಿಗಡಲೆ
ಗುಡ ಹಣ್ಣು ಹಂಪಲುಗಳನು ಹಾಯ್ಕುತಲಿ ॥ ನೆರೆನೆರೆದು ಕುಣಿದಾಡಿಸುತ ನಿಜ ।
ಪುರದ ಕಡೆಗೋಟೆಯ ಕವಾಟದ । ಹೊರಗೆ ತಂದಲ್ಲಿಂದ ಬೊಬ್ಬಿರಿದೆಬ್ಬಿಸಿದರು ಕಪಿಯ ॥
ಅಧಿಕಬಲ ನಸುನಗುತ ಲಕ್ಷ್ಮಿಯ । ವಿಧಿಯ ಪಾಶವ ಬಲಿದು ಕೋಪದ । ಕದವಕಳಚಿದು
ಕೆಕ್ಕರಿಸಿ ಕೈಯಿಕ್ಕಿ ಪರಿಘದಲಿ ॥ ನಿಧನ ಗೊಳಿಸಿದ ನೆಡಬಲದ ಮೈ । ಬಾಧ ವಿರೋಧಿ
ಗಳನು ಬಳಿಕ್ಕರಿ । ವಧೆಗೆ ಹೇಸದೆ ಹನುಮ ತಿರುಗಿದ ವಟ್ಟೆ ವತಿಬಲದ ॥ ೩೦ ॥
ತಿರುಗಿ ಬಾಲದ ಕೊನೆಯ ಪಚ್ಚೆಯ । ನುರಿಗೊಳಿಸಿ ಪುಟನೆಗೆದು ನಿಂದನು । ಸಂಸ
ದಲಿ ಸುರ ನರ ಭುಜಂಗಮ ಭುವನ ದಲ್ಲಣನ ॥ ಮರಳಿ ಬಂದುದೆ ಮಾರಿ
ಕೊಯ್ದುದು । ಕೊರಳ ಸಿಂದ್ರಾರಾತಿಯನು ತು । ಬ್ಬರದ ಭೀತಿಯಲೋಡಿದುದು
ದೆಸೆದೆಸೆಗೆ ಪೌರಜನ ॥ ೩೧ ॥ ತರಣಿವಂಶಜ ಕೇಳು ಪವನಜ । ನುತವಣೆಗೆ ಸಭೆ
ಬೆಚ್ಚಿದುದು ದಶ । ಶಿರನು ಧೈರ್ಯೋತ್ಕರನು ಕೊಂಡನು ವೀರಖಂಡೆಯವ ॥ ಉರಿ
ಬಲುಹು ನಿಮಗೆಲೆ ವಿಭೀಷಣ । ತೆರಳು ಕೈತಪ್ಪಹುದೆನುತ ಕಪಿ । ಕರದ ಖಂಡೆಯ
ದಶವದನನ ಕೇರಿಸಿದ ನುರಿಯ ॥ ೩೨ ॥ ಬೆದರಿ ಬಳಿಕಸುರೇಂದ್ರ ಗರ್ವವ ।

ನುದರಿಸುತ ಗಗನಕ್ಕೆ ಹಾಯ್ದನು । ಹೊದರೆಗಳ ಬಿಸುಟೋಡಿತಲ್ಲಿಯ ದಲ್ಲಿ ಭಟ ನಿಕರ ॥ ತುದಿವೆರಲಲುಬ್ಬಿಂದು ಕಪಿ ಕೈ । ಗುಡಿಗೆಯಲಿ ನೆಗೆವಿಟ್ಟು ನೆಟ್ಟಿದು। ಸೆದೆದು ಸುಳಿದನು ಮತ್ತೆ ರಕ್ಕಸರಾಯ ನರಮನೆಯ ॥ ೩೩ ॥ ತುರುಕಿದನು ತುದಿ ವಾಲದಗ್ನಿಯ । ನಿರಿಸಿ ನುದಿತ ಶಿಖಾಳಿಯನು ಬೊ । ಬ್ಬಿರಿದು ಬಹಿರ್ನುಖ ವಿರೋಧಿಯ ಭದ್ರ ಭವನದಲಿ ॥ ನೊರೆಯ ಬಾಯ್ಗಳ ಬಾಯಹೊಯ್ಲಳ । ತೆರೆದ ಮೇಲು ದಿನಪುರರಾಯನ । ಕುರುಹಿನರಸಿಯರಂಕೆಯಾಯಿತು ಪರಿಜನಂಗಳಿಗೆ ॥ ೩೪ ॥ ಮುಸಗಿ ಮಾರಾಂತಸುರರಾಯನ । ಮುಕುಡಗಳ ಮುಂಭಾಗದಲಿ ಜಾ । ಡಿಸಿದ ನುರಿಯು ವಿಮಾನದಗ್ರದ ಲಭ್ರಮಂಡಲಕೆ ॥ ಒಸತಿ ಯನಿತನಿತನು ಮಹಾಗ್ನಿಯು। ಬಸುರೊಳಗೆ ಬೈಚಿಟ್ಟು ಬೊಬ್ಬಿರಿ । ದಸಮಬಲ ತಿರುಗಿದನು ತಿರುಹುತ ಲಾಳವಿಂಡಿಗೆಯ ॥೩೫॥ ಗಗನದಲಿ ಬಳಿಕಸುರಪತಿ ಧಗ। ಧಗಿಪ ಕಿಚ್ಚನು ಕಂಡು ಬೆಚ್ಚಿದ। ಬೆಗಡಿನಲಿ ಬೆಸಸಿದನು ಬಳಿಸಂ ದಸುರಸಂಕುಲಕೆ ॥ ತೆಗೆಯ ಹೇಳಿದು ಕುಂಭಕರ್ಣನ। ನಗಿವ ಬೊಬ್ಬೆಯ ಉಳಿವಿ ಗಳುಕದೆ। ವಿಗಡರಕ್ಕಸ ರಕ್ಕೆತುಳದಲಿ ಹೊಕ್ಕರುರವಣಿಸಿ ॥ ೩೬ ॥ ಮುರಿದು ಬಾಗಿಲುಗಳನು ಸಂಧಿಸಿ । ಸರಿಗ ರಕ್ಕಸಕಿಂಕರರು ನೆಲ । ನರಚಿ ಹೊಣಿಸಿ ಹೊತ್ತಿರಮರಾಚಲವ ಹೊರುವಂತೆ ॥ ತೊರೆದ ಜೀವದ ಹೆಣನ ನಗರದ। ಹೊರಗೆ ಬಿಸುಡುವ ವೊಲು ಬಿಸುಟರು। ಮುರಿಗೆಡದು ಖಳರೋಡಿದುವು ಲಂಕೆಯಲಿ ರಕ್ಕಸನ ॥೩೭॥ ಚಾಲೆಯರ ಬಿಡುಮುಡಿಯ ಸೀರೊರೆ । ವಾಲಿಗಳ ಕರತಳದ ಜಠರದ । ಸೂಳವಿಸ ಹಾಹಾರವದ ಕಳಕಳದ ಕಳವಳವ ॥ ಕೇಳಿ ಬಳಿಕಸುರೇಂದ್ರನಬಲಾ । ಜಾಲವನು ಪುಷ್ಪಕದೊಳಿರಿಸಿ ವಿ। ಶಾಲಬಲ ನನಿಲಜನ ಘರ್ಜಿಸಿ ನಿಂದ ನಿದಿರಿನಲಿ ॥೩೮॥ ಎಡೆಯೆಡೆಗೆ ಮಾರಾಂತು ತರುಬಿದು । ದಡಿಗ ರಕ್ಕಸಭಟರ ಬೀದಿಯೊ । ಳಡಿಸಿದುವು ತಕ್ಷವನ ಸದನ ದೊಳನಿಲ ಬಾಂಧವನ ॥ ಬಿಡಿಸು ತತಿವೇಗದಲಿ ಕೋಪದ। ಕಿಡಿಯ ನುಗುಳುತ ಬಂದ ನಿಂದ್ರನ । ಹಿಡಿದು ತಂದ ನಿಶಾಚರನ ಮುಸಗಾಗಿ ಕಲಿಹನುಮ ॥೩೯॥ ಕೆಡಹಿ ಕಟ್ಟಿದನೆಮ್ಮ ನೀ ಮನೆ । ಯೊಡೆಯ ನೀ ನಿಳಯಂಪನು ಮಲ್ಲನೆ। ಸುಡಿ ಸಮಾಧಾನದಲಿ ನೀವೆಂದಗ್ನಿ ದೇವರಿಗೆ ॥ ನುಡಿದು ಕೈಗಳ ಮುಗಿದ ನಲ್ಲಿಯೆ । ಬಿಡಿಸಿ ಮುರಿದನು ಮೂಗಿನುಸುರಿನ । ತೊಡಕಿ ತಾ ಸಿಕ್ಕಿದ ನಿಶಾಟನ ನಿಜ ನಿಕೇತನಕೆ ॥೪೦॥ ಈತನೀಕೆಮ್ಮುವನು ಮೂಗಿನ । ಮಾತರಿಶದ ಬಿರುಬಿನಲಿ ನೆರೆ । ಧಾತುಗೆಡಿಸಿದ ನಿವನು ಜಗಕತಿಬಲ ನಲೇಯೆಂದು ॥ ಭೀತಿಗೊಳ್ಳದೆ ಬೆಚ್ಚ ದಳುಕದೆ । ಕಾತರಿಸ ದನುಮಾನಿಸದೆ ಸಂ । ಪ್ರೀತಿಯಲಿ ಕೈಕೊಂಬುದೆಂದೊಳಪೊಗಿಸಿದನು ಶಿಖಿಯ ॥ ೪೧ ॥ ಬಳಿಕ ಶುಕ ಶಾರ್ದೂಲ ಸಾರಣ । ಕಲಿಶ ದಂಷ್ಟ್ರ ಸುಪಾರ್ಶ್ವ ಮಹೋದರ । ಖಳ ಶಿರೋಮಣಿ ಕುಂಭ ದೇವಾಂತಕ ನರಾಂತಕರ ॥ ನಿಳಯ ನಿಳಯದ ಲಗ್ನಿದೇವರ । ಜೆಳವಿಗೆಗೆ ಬಿಸನೇಳ್ದು ಬಂದನು । ಕುಲ ಲಬಾವನು ಕೂರ್ಪನವಿಸು ನಿಕೇತನಾಂತರಕೆ ॥ ೪೨ ॥ ತಾಪಿಡುವ ಕಿಚ್ಚಿಲ್ಲ ಮೊದಲೀ। ಕೈನೆ ಮುಕ್ಕಿದ ಕಿಚ್ಚು ವೈರಿದ । ಕಾನನಂಗಿಪಳಿಂದ ಬಂದುದು ಪೂರ್ವಕೃತ್ಯದಲಿ । ಈ ನಶಿಕಿ ರಕ್ಕಸಿಯು ಪೆಸೆಗನು। ಮಾನಿಸದೆ ಭವದುದರ ತೀವ್ರ ಕೃ। ಶಾನುವಿಂಗಾಹುತಿಯ ಕೊಡಿ ನೀವೆಂದು ಕೈಮುಗಿದ ॥೪೩॥ ತಿರುಗಿ ಮನೆಮನೆಗಗ್ನಿದೇವರ । ನಿರಿಸುತತಿ

ಕಾಯು ಪ್ರಹಸ್ತರ । ಕರೆದು ಹೊರವಡಿಸುತ್ತ ಹೊಗಿಸುತ ಪರಮ ಪಿತೃಸಖನ ॥ ಮುರಿದು ಧೂಮ್ರಾಕ್ಷನ ನಿಕುಂಭನ । ದುರುಳ ಯುದ್ಧೋನ್ಮತ್ತ ಖಳ ದು । ರ್ಮುರುಷಣರ ದರುಶನವ ಮಾಡಿಸಿದನು ಧನಂಜಯನ ॥ ೪೪ ॥ ವಿಕ್ಕು ಮುಂಬರಿವರಿದ ನೀಡಿವ । ನಿಕ್ಕೆಲದ ಕೇರಿಗಳ ಕಿಡಿ ಸಿಡಿ । ದಿಕ್ಕಿ ಬಾಲದ ಶಿಖಿಯು ಸೀವರಿಸುವ ಶಿಖಾಳಿಗಳ ॥ ಅರ್ಕಕೇತುವ ಕಂಪನರ ಸದ । ನಕ್ಕೆ ಲಂಘಿಸಿ ಗಾಳವೇಳಿನ । ರಕ್ಕಸರ ಬೀಡಿನಲಿ ಬಿಡಿಸಿದ ನುರಿಯು ಸಾಳಯವ ॥ ೪೫ ॥ ರಾಯಕ ವರ ಶಿಖಾಮಣಿಯೆ ಕೇ । ಳಾಯಶೋಸಂಭೃತನ ಸಂಭ್ರಮ । ದಾಯತವ ನೇನೆಂಬೆನೈ ಶಿವಶಿವ ಮಹಾದೇವ ॥ ಈಯಶೋಷದ ಭುವನದಳಿವಿನ । ವಾಯುಬಾಂಧವ ಭಾಳನೇತ್ರನ । ಕಾಯದಂತಿರೆ ಮೆರೆದನಗ್ನಿಗೆ ಕಲಿ ವಿಭೀಷಣನ ॥ ೪೬ ॥ ಗೆರೆಯ ಬರೆದನು ಕಂಡು ವೈಷ್ಣವ । ರರಸನಾಲಯದಿದಿರಿನಲಿ ನಿಂ । ದುರವಣೆಗೆ ತಾವಲ್ಲವಿದು ಹೊಗದಿರಿ ವಿಭೀಷಣನ ॥ ಅರಮನೆಯು ನೀವೆಂದು ವಹ್ನಿಗೆ । ಕರವಮುಗಿದಲ್ಲಿಂದ ಮುಂದಕೆ । ತಿರುಗಿದನು ತುದಿವಾಲದಗ್ನಿಯನುರಿಗೊಳಿಸಿ ಹನುಮ ॥೪೭॥ ಕುಣಿಕುಣಿದು ಕೈಚಪ್ಪಳೆಯ ಕ । ಟ್ಟಣಿಯುರದಿ ಕಿಪ್ಪುರಿವತಾಡಿದ । ಕಣಗುರುಹನಸುರರ ಪಥಾನಿಸಿ ತರುಬಿ ಬಾಲದಲಿ ॥ ಕಣಜ ಕಮ್ಮಟ ಶಸ್ತ್ರಶಾಲಾ । ಗಣವ ವಸ್ತ್ರ ಸುರತ್ನ ಸದ್ಭೂ । ಷಣದ ಕೋಶಂಗಳಲಿ ಹೊಗಿಸಿದ ನನಿಲಬಾಂಧವನ ॥೪೮॥ ಕರಿಘಟೆಯ ಶಾಲೆಗಳ ಹಯವಂ । ದಿರದ ಬೀದಿಯ ಬಾಲದಲಿ ಬೋ । ಹರಿಸಿದನು ಬಿರಿತೋಡೆ ಹಯ ಗಜ ಬೀದಿಬೀದಿಯಲಿ ॥ ಮುರಿದು ಹರವರ ಹಾರುವರ ಶೂ । ದ್ರರ ಮಹಾಕ್ಷತ್ರಿಯರ ಕೇರಿಯ । ಕಳವಳಿಕೆಯನು ತಂದೆಗಿತ್ತೊಡೆ ಮುರಿದನಾ ಹನುಮ॥೪೯॥ ಮುಸಗಿ ಮುಂದಣ ಬಡಗಿ ಕಮ್ಮಟ । ವಸುವಿಭೇದ ತಾಂಬ್ರಮರ್ದನ । ಮುಸಗ ಮುಚ್ಚಿಗರಜಕ ಚಿತ್ರಕ ಕಟಿಗ ಕಂಕುಟಿಗ ॥ ಕುಸುಮ ಮಾಲಿಕ ಹಾವಡಿಗ ಹೊಲ । ಸಿ ಸರದರ ಕೇಳಿಗಳಲುಬ್ಬಿಸಿದ ನುಬ್ಬರದುಬ್ಬರದಿ ಕಪಿ ಹನ್ಯವಾಹನನ॥೫೦॥ ಕಳಕಳಿಕೆ ಕೋಳಾಹಳಿಕೆ ಕ । ದ್ದಳಿಗದೂಷಿಗ ಭೂಷಡಗರಿಗ । ಕೊಲಪ ಚಿಪ್ಪಿಗ ಬಚ್ಚರಣೆ ಬಳೆಗಾರ ಬೋಗಾರ ॥ ತಿಲವಿಘಾತಕ ವಾಳಸಿಗ ತಂ । ಬುಲಿಗ ಜಂಗಮ ಯೋಗಿಗಳ ಜಂ । ಗುಳಿಗ ಕೇರಿಗಳೊಳಗೆ ಜಾಡಿಸಿದನು ಶಿಖಾಳಿಗಳ ॥ ೫೧ ॥ ತಳವರರ ಸುಂಕಿಕರ ದಂತಾ । ವಳ ರಥಾಶ್ವಾರೋಹಕರ ಮನೆ । ಗಳಲಮಾತ್ಯ ನಿಯೋಗಿ ಸಚಿವ ವಸಾಯ್ತ ಪರಿಜನರ ॥ ದಳಪತಿಗಳ ಸಂಧಿವಿಗ್ರಹ । ಗಳಲಿ ಸುಪ್ರೌಢರ ನಿವಾಸಂ । ಗಳವಿವಾಸ ಮಾಡಿಸಿದ ನೊಲಿಸಿದನು ತಚ್ಛಿಖಿಯ ॥೫೨॥ ಉಳಿಯಲೊಂದು ವಿಭೀಷಣನ ನಿಜ । ನಿಳಯವೆಲೆ ಕುಶ ಕೇಳು ಕೋಟಾ । ವಳಿಯ ಮಧ್ಯದ ಮಿಕ್ಕ ಧೊರೆಗಳ ಬನುಗು ಬಿಚ್ಚಟಿಯ ॥ ಹಲವು ಜಾತದ ವರ್ಣಭೇದದಿ । ಹೊಳಲ ಜನದ ಸಮಸ್ತ ಭವನಾ । ವಳಿಯ ಭರಭರವನು ಹೊರಿಸಿದ ವಹ್ನಿದೇವರಿಗೆ ॥೫೩॥ ಮುರಿದು ಮನೆಗಳನುರಿಗೊಳದ ಮುಂ । ದಿರಕೆ ನೂಕಿದಸೊವೆದು ಕೆಲವನು । ಹಿರಿದು ಹೆಗ್ಗೊಳ್ಳಿಗಳಗಿಟ್ಟನು ಹೊಗೆಯುದಾಲಯವ । ಚರಿಸಬಾರದ ಸಂದಿಗೊಂದಿಯ । ತಿರುಕ ಜಾತಿಯ ಜಳ್ಳ ಜರುಗಿನ । ನೆರವಿಗಳ ನಿಳಯದಲಿ ಬಾಲವ ನೀಡಿದನು ಹನುಮ ॥ ೫೪ ॥ ಉರಿ ಭಡಾಳಿಸಿ ಬಾಲ ವಳವಳ । ಸರಿವುರಿತರ್ದುದು ಹೆಚ್ಚಿ ಹಿಂಗುವ । ವರಸುಧಾಸೂತಿಯು ಕಲಾಪ್ನೈಚಿತ್ರದಂದದಲಿ ॥ ಧರಣಿ ತನುಜೆಯು ವಹ್ನಿ ಸೂಕ್ತದ । ಪರಮ ವಹ್ನಿನೊಯೊ

ಮೇಣು ವಿಶ್ವಂ । ಭರನ ಮಹಿಮೆಯೊ ಸೋಕದಾದುದು ಶಿಖಿ ಸಮೀರಜನ ॥ ೫೫ ॥
ತಂದೆ ಮಾರ ತ ಹಿತವನೈ ಪ್ರಿಯ । ದಂದವಾದುದೊ ನೋಡು ದಶಮುಖ । ನಿಂದ ಬಲಿ
ಮುಖ ರಗ್ಗಳದೊ ನಿರ್ಗಳದೊ ಚಿತ್ರೈಸು ॥ ಸಾಧಿಸದೆ ಭೀತಿಯನು ಪುರಹರ । ಗಂಡು
ಕೈ ನೆರವಾಗಿ ಕಾಣಿಸಿ । ದಂಡವನು ಕಹಣಿಸಲು ಬೇಕೆಂದೆರಗಿ ಕೈಮುಗಿದ ॥ ೫೬ ॥
ಮಗನ ಮಾತನು ಸಲಿಸಬೇಕೆಂ । ದೊಗುವಿ ಗೆಯ ಹರುಷದಲಿ ವಹ್ನಿಯು । ನೆಗಹಿದನು
ನೀರಜಜಾಂಡ ಕಟಾಹಪರಿಯಂತ ॥ ಘುಗಿಘುಗಿಲ್ಭುಗಿಲೆಂದು ಧಗಧಗ । ಧಗಿಲು ಧಗಿ
ಲೆಂದೊದರಿತುದಿನಾ । ಲಿಗೆಗಳನು ನೀಡಿದುದು ನಿಖಿಳಾಮರ ಪುರಂಗಳಿಗೆ ॥೫೭॥ ಛಿಳಿ
ಛಿಳಿಲು ಛಿಳಿಲೆಂದು ಚಿಮ್ಮಿತು । ಜಲಜಜಾಂಡದ ಚಿಪ್ಪು ಕುದಿದುದು । ಥಳಪಳನೆ
ತಕ್ಕವುಲಜಾಂಡಾವರಣ ಜಲರಾಸಿ ॥ ಇಳಿದುದಂಬುಧಿ ಕಾದ ಕಡುಕಾ । ವಲಿಯೊಲಾ
ಯ್ತಿಳೆ ವಾಸುಗಿಯ ಹೆಡೆ । ತಲೆಯ ಮಣಿಯುರಳಿದುವು ಹೊಗಲುವೆ ನೇನ ನದ್ಭುತವ ॥
ಥಾಳಿಗಿಚ್ಚಿಗೆ ಬೆಚ್ಚಿ ತೆಗೆದವು । ಪಾಳಪ ವ ನಲ್ಲಲ್ಲಿ ಸುರನಗ । ರಾಳಿ ನದಿಯೇನಾಯ್ತೊ
ನಭದಿಂದಿಳಿದ ನಿರ್ಜರರ ॥ ನಾಲಿಗೆಯ ನೆರೆಗಚ್ಚಿದವು ಖರು । ಗಾಳಿ ತರಣಿಯ ತಿಂಥಿ
ಣಿಯ ತಾ । ರಾಳಿ ಶಿಡಿದರಳಿದವು ಲಂಕಾನಗರ ದಹನದಲಿ ॥೫೯॥ ಛಿಳಿಛಿಳಿಧ್ವನಿ ಛಟ
ಛಟಾಕೃತಿ । ಘುಳುಘುಳುಸ್ವನ ಘನಶಿಖಾ ಸ । ಮ್ಮಿಳಿತ ಧೂಮಧ್ವಾನ ಧಗಧಗ ಧಗಿಲು
ಘುಗಿಲೆಂದು ॥ ಗಳಗಳಿಗೆ ತಲೆದೋರಿಸಿತು ಕಪಿ । ಕುಲ ಲಲಾಮನು ಭಾಪುರೇ ಪಿತ ।
ನೊಲಿವ ಸಖ ನೀನಹುದೆನುತ ಕೊಂಡಾಡಿದನು ಶಿಖಿಯು ॥ ೬೦ ॥ ಪರಮ ಪಿತೃಸಖ
ಕೇಳು ಗಗನಾಂ । ತರದ ಪುರದಹನದಲಿ ಹೊಟ್ಟೆಗೆ । ನೆರೆಯದಾದುದು ಕೇಳ್ದ ನರ್ಥ
ಗ್ರಾಸವಾಯ್ತೆಂದು ॥ ಪರಿಹಂಸು ಮಿಕ್ಕಿರ್ದಹಸಿವನು । ಹರದ ಭೀತಿಯ ಹರುಷದಲಿ
ಸು । ಸ್ಥಿರ ಸಮಾಧಾನದಲಿ ಹನುಮನ ಹರಸು ಬಳಿಕೆಂದ ॥ ೬೧ ॥ ಪರವಧೂ ವ್ಯಸನಿ
ಗಳ ಭಂಗವು । ನರಕ ಭಾಜನವೆಂದು ನೇರಿಧಿ । ಕ್ಕರಿಸಿ ದಶಕಂಧರನ ನಗರಾಂಗನೆ
ಯಿರಾಗದಲಿ ॥ ಪರಮಪ್ರಾಯಶ್ಚಿತ್ತ ವಂಗೀ । ಕರಿಸಿ ಹೊಗಲುದ್ಯೋಗಿಸಿದ ನಿ ।
ರ್ಭರನೆ ಸಿಡುಗಿಚ್ಚಿನ ಪೊಲಿರ್ದುದು ದಹನ ರಿಪುಪುರದ ॥ ೬೨ ॥ ಕುಶಕುಮಾರಕ
ಕೇಳು ಗಾವಳಿ । ಮುಸುಕಿ ತೂರೊಳು ತಾಯ್ಗಳೊಂದೆಸೆ । ಶಿಶುಗಳೊಂದೆಸೆಯಾಯ್ತು
ಕಟ್ಟಿದ ಕಿಚ್ಚಿನುರುಬೆಯಲಿ ॥ ಸುಸರವಾದರು ಕೆಲರು ಕೊರಲಿನ । ಪುಸುರು ಹಿಡಿದರು
ಕೆಲರು ಕೆಲರು । ಬ್ಬಸದ ಲ್ಲೋಡಿದ ರುರಿಯ ಧಾಳಿಗೆ ಹೇಳಲೇನೆಂದ ॥ ೬೩ ॥ ಕರೆವ
ಕೂಗುವ ಬೊಬ್ಬಿರಿವ ಕಾ । ಹುರದ ರಕ್ಕಸರೊಂದು ದೆಸೆಯಲಿ । ಮುರುಟಗೈ ಮೋರೆ
ಗಳ ಕೌರಿನ ಖಳ ರದೊಂದೆಸೆಯ ॥ ತರುಣ ಯವ್ವನ ವೃದ್ಧ ಪುಂ ಸ್ತ್ರೀ । ನೆರಪಿಗಳ
ದೊಂದೆಸೆಯ ವಿಗತಾಂ । ಬರದ ಭಟರೊಂದೆಸೆಯ ಕಾಣಿಸಿ ತನಿಲ ನಂದನಗೆ ॥ ೬೪ ॥
ಕೊಡುಸನೇಕಾ ದೌಂದು ತನಗು । ಗ್ಗಡದ ಧನಿಕರು ನೀವು ನಾವೇ । ಬಡವರಿಂದಿಗೆ
ಬಲುಸಮರ್ಥ ದಶಾಸ್ಯ ನವತಾನು ॥ ಸುಡಿಸಿದನು ಶೀರೆಗಳ ಮೆಲ್ಲನೆ । ನಡಯ್ತು
ಹೆಂಡರು ಮಕ್ಕಳನು ಕೈ । ವಿಡಿದು ನೀವೆಂದವರ ನುಪಚರಿಸಿದನು ಕಲಿಹನುಮ ॥೬೫॥
ಉರಿ ಛಡಾಳಿಸಿ ವೆಂತಣಿಸಿದುದು । ತಿರುಗಿಬರ ಬಳಿಕಮನು ಲಂಕಾ । ಪುರವ ನುಪ್ಪ
ರಿಸಿದುದು ಗಾವಳಿ ಗಗನ ದಗಲದಲಿ ॥ ಸರಕ ಸಂವರಿಸುವ ಸುವರ್ಣಾ । ಭರಣ ವಸ
ನಾದಿಗಳ ತೆಗೆವತಿ । ಭರದ ಕಳವಳ ಕಾಣಿಸಿತು ಕಂಗಳಿಗೆ ಕಪಿವರನ ॥೬೬॥ ಮುಮುಕಿ

ಹೊರವಡು ಹೊರಪಡೆಂ ದೊದ| ರು ದೊದತಾಯ್ ಮುತ್ತ್ಯವೇಯರ ಕೈ| ದುದಿಗಳನು
ಹಿಡಿದೆಳೆದು ಶಿಶುಗಳ ಹೊಕ್ಕೊ ಹಿಡಿದಿಕ್ಕಿ || ಗದರಿನಲಿ ಹೆಂಡಿರನು ಜರೆನರೆ| ಹುದಿದ
ವೃದ್ಧಪಿತಾಮಹರ ನೆಳ| ದುದುಭುತದ ಕಳಕಳಿಕೆ ಬಲಿದ ದು ಗಗನದಗಲದಲಿ |೧೭|
ಮಗನ ಕಾಣೆವು ಕಂಡಿರೇಸೀವ್ | ಮಗಳತೆಗೆದಿರೆ ಸೊಸೆಯುಬಂಗಾ| ರಗಳ ತಂದಿರೆ
ದೇವಪೂಜೆಯು ನಕಟಸಾಕಿನ್ನು || ಹೊಗದಿ ರುರಿಘನ ಮಿಕ್ಕದ್ರವ್ಯಾ| ದಿಗಳ ಧಾರೆಯು
ನೆರೆಯಿ ಕಕ್ಕುಲಿ| ತೆಗಳು ಬೇಡೆಂಬ.ಲ.ಹು ಬಲುಹಾ ಯ್ತುವನಿ ಯುಮರರಲಿ || ೧೮ ||
ತೆಗೆ ತಿಲವ ನೌಸಾಸನದಿ ಕೊಳ | ಪಿಗಳ ಧೋತ್ರದ ಪುಸ್ತಕಂಗಳ | ಜೆಗಿಯು ಗುಡ
ಹಪ್ಪಳವ ಸಂಡಿಗೆಗಳನು ಹಾರಿಗೆಯು || ಬಗೆರಗೆಯು ಸೇವಗೆಯೊರಳ ಬೇ | ಳಿಗಳ
ಸಾಲಗ್ರಾಮಗಳ ಡೋ| ಸಗಳ ಕಾವಲಿಗಳನು ತೆಗೆಸೆಂದುದು ಬುಧವ್ರಾತ || ೧೯ ||
ಜರೆಯ ಜಾಡ್ಯದ ವಿಪ್ರರು ಖಳ| ನರಮನೆಯ ಮುಖರಾಗಿ ನೆಗಹಿದ | ಕರದಲಲು
ಗುವ ಶಿರದ ಸರಣಿಯ ಲಸಮ ರೋಷದಲಿ || ಹರಸಿದರು ಸೇಲಾಗಲೋನಿ | ಶ್ಚಲಿತೆ
ಯಲಿ ದೀರ್ಘಾಯುವಾಗೆಂ| ದುರಿಗೆ ನಿಲ್ಲದೆ ತಡೆದ ರೆಡಹುತಮುಗ್ಗು ತಲ್ಲಲ್ಲಿ ||೨೦||
ನೀರಹೊಯ್ಸೆಂದಿಸು ಕೆಲಕ್ಕೊಡೆ| ನಾರಿಯರ ಹೊರವಡಿಸು ತೆಗೆಕಾ| ಮೂರವರ್ಗವ
ಜೋಡುಸೀಸಕ ಕೈದು ಕವಚಗಳ || ದೂರಕಿಚ್ಚಂಜದಿರಿ ತೆಗೆ ಹಯ | ತೇರುಗಳ
ತಳ್ಳಿರಿಕ ಬೇಡೆಂ | ಬಾರುಭಟೆ ಬಲುಹಾಯ್ತು ಬಹು ರಾಜಾಲಯಂಗಳಲಿ || ೨೧ ||
ತೊತ್ತಿಬಾ ತೆಗೆಹಾಸುಮಂಚವ| ನಿತ್ತಹಾಯಿಕು ಗಣಿಯಗೂಡನು | ನೆತ್ತವಲಗೆಯ
ನೈಪಿಕದ ಮುದ್ದುಗಳ ಭರಣಿಗಳ || ಹೊತ್ತುಕೊಳ್ಳಿಲೆ ಸಿಳ್ಳಿ ಮುಸುಡಿನ| ತೊತ್ತಿ ನಡೆ
ಮುದಿಮುಂಡೆ ನೀನೆಂ| ಬೊತ್ತುವಲ್ಲಿವ ಸಬುದವೆಸೆದುದು ಸೂಳೆಗೇರಿಯಲಿ || ೨೨ ||
ಬಿಟ್ಟಮುಂಡೆಯ ಬೀದಿವಂಗಳ | ಕಟ್ಟಲಹುಗಳ ತೆಗೆದ ಸರಕಿನ | ಮೊಟ್ಟೆಗಳ ಕೈ
ಪಿಡಿದು ಮಕ್ಕಳ ಗಾಳು ಮೇಳದಲಿ || ಇಟ್ಟಣೆಯ ಬೀದಿಗಳ ಉರೆಕಂ | ಗೆಟ್ಟು ಪುರ
ಜನವಖಿಳದೆರೆಯಲಿ| ಪಟ್ಟಣವ ಹೊರವಡುತ ಲಿರ್ದುದು ಕೋಟಿಸಂಖ್ಯೆಯಲಿ ||೨೩||
ಕೂಡೆ ನಗರದ ನಿಖಿಳಜನ ತೆಗ| ದೋಡಿತಲ್ಲಿಯ ದಲ್ಲಿ ಧಳ್ಳು ರಿ| ಯೆಡೆಯೊಳಗೆ ಸಿಲು
ಕಿದ ನಿಶಾಚರ ದಾಪುರಾಂತರವ || ಖೋಡಕುಣಿ ವಕ್ಕರಣೆ ಗಳ ಲ| ಕ್ಕಾಡಿದರು ಲಾಯ
ದಲಿ ಹಯುಬಿರಿ| ತೋಡಿದುವು ಗಜ ಬೀದಿವರಿದುವು ಕೇರಿಕೇರಿಯಲಿ || ೨೪ || ಕರಗಿ
ಹರಿದುವು ಹೇಮರಸ ತೆ | ಮ್ಮೊರೆಯ ಪ್ರೊಲು ಬಹುರತ್ನಚಯ ಬಿಡ | ದರಳಿದುವು
ಹುರಿದರಳಿ ನಂತಿರೆ ಹೊಳಬೊಳಗಲದಲಿ || ಮರಕತದ ಮಾಣಿಕದ ವಜ್ರದ| ಥರಥರದ
ಭಿತ್ತಿಗಳು ಬಿಕ್ಕನೆ| ಬಿರಿದವಡಗೆಡ ದುರುಳಿದುವು ಪ್ರಾಸಾದ ಸೌಧಚಯ |೨೫|| ಕಳಶ
ಕುಚವ ನಮುಚಿಕೇತನ| ಲಲಿತ ಕೇಶಾಕರುಷಣವಿ ನು| ಜ್ವಲಿಪ ಪಿವ್ರುಮ ತೋರಣ
ದ್ವಾರಗಳ ಚುಂಬಿಸುತ || ಸೊಳವ ಹರ್ಮ್ಯನಿತಂಬವನು ಹೊ | ಯ್ದೆಳೆದು ನಖದಲಿ
ಘೊಳುಘೊಳು ಧ್ವನಿ| ಗಳರವದಿ ರಮಿಸಿದನು ವಿಟನವೊಲಗ್ನಿ ಪುರ ವಧುವ || ೨೬ ||
ಮಂಡಳಿಸಿ ಮುರಿದೇಳ್ವ ವಹ್ನಿಯ| ಕುಂಡದವಲಿ ತಳೆತೆಗೆದ ಮಂಟಪ | ಮಂಡಲದ
ವಳಿಯುದಲಿ ಪಿಲುಮ ಶಿಖಾಗ್ನಿ ಕಣದಂತೆ || ತುಂಡುಗಿಡಿಗಳ ತೂರುಗಿಡಿಗಳ| ಗುಂಡು
ಗಿಡಿ ಗಾವಣೆಯ ಕಿಡಿಯಲಿ | ಚಂಡಿಮಾಯ್ತು ಚತುರ್ದನ ನಿರ್ಮಿತ ಮಹಾ
ಭವನ || ೨೭ || ಕುಶನೆ ಕೇಳ್ವೆ ಯೂಪವಾದುದು | ಜಿಸರುಹಾಕ್ಷನ ಕೀರ್ತಿತರು ಪಾ|

ಕ್ಷಸಪುರ ತ್ರೇತಾಗ್ನಿಕುಂಡಗಳಾದ ವನನಿಜೆಸು ॥ ಏಪನು ವಿಸ್ಫಲ ಶೋಕಶಿಖಿ ತೋ।
ಭಿಸುವ ಹುತವಹನಾದ ನಸುರರು। ಪಶುಗಳಾದರು ಯಜ್ಞದೀಕ್ಷಿತನಾದ ನಾಹನುಮ ॥
ಬಂದನಿಕ್ತಲು ವಹ್ನಿಯನು ಬಲ । ವಂದು ಬಳಿಕುತ್ತರದ ಗೋಪುರ । ಕಿಂದಿರೇಶ
ಪದಾಭಿಗತ ವಿಶ್ರುತಿ ವಿಲಾಸಕದ ॥ ಇಂದಿರೇಶ ಪದಾಭಿಜನಿ ತಾ। ನಂದನದಿ ಯುದಕ
ದಲಿ ಕಪಿ ರಘು। ನಂದನಾರ್ಪಣವೆನುತ ಧಾರೆಯುಸೆರೆದ ನನಿಲಂಗೆ ॥ ೭೯ ॥ ತರುಣ
ಕೇಸರಿ ನಾಲಗೆಗಳು । ಜ್ವರದೆಸಳ್ಗಳು ವಿಸ್ಫುಲಿಂಗೋ । ತ್ಕರ ಪರಾಗದ ಧೂತ
ಧೂಮ್ರ ಭ್ರಮರಮಾಲಿಕೆಯು ॥ ಸರಘಸದ ಸಾಗರ ಸರೋವರ। ಪದನುಧ್ಯದ ಸರಸಿ
ಜದವೊಲು। ಸುರಕದಂಬಕ ಕಣ್ಗೆ ಕೌತುಕವಾಯ್ತು ಪುರದಹನ ॥ ೮೦ ॥ ಅಹಹ
ಲೇಸಾಯ್ತುಮನು ನಿಷ್ಪ್ರ। ತ್ಯೂಹದಲಿ ನಾವ್ ಬಂದಕಾರ್ಯ ವು। ಹಾಹವನ ಜಯಿಸಿ
ದೆವು ದಹಿಸಿದೆ ವಹಿತ ಪುರವರವ ॥ ಈಹದನ ಮೇಲಿನ್ನು ಗಮನೋ । ತ್ಸಾಹವೇ
ಕರ್ತವ್ಯವೆಂದು ವಿ । ದೇಹಜಾ ವರಚರನು ಘನಪರಿತೋಷ ಮನನಾದ ॥ ೮೧ ॥
ಬಂದ ಕೆಲಸ ಸುಸೂತ್ರವಲ್ಲದ । ಕೆಂದು ಹಾರೈಸಿದನು ಕೈಯ್ಯೊಡ । ನಂದಗೆಟ್ಟನು
ನೆನೆದು ನಿಮಿಕುಲರಾಜನಂದನೆಯ ॥ ಇಂದುಮುಖಿ ಯೇನಾಗಿಹಳೊ ತ । ನ್ನಿಂದ
ತೋರಿತು ದೂರು ದುರ್ನಯ। ಸಂಧಿಸದಲೇ ತಾಯೇನೆನು ತಳವಳಿದನಾ ಹನುಮ ॥
ಅನುಚಿತವು ವನಭಂಗವಾಸುರ । ಹನನವದು ತಾ ತತ್ಪುರದ ದಹ । ನನವಧಿಕ
ಗತ್ಯಂತ ದೂತರಿಗಾತ ತಾಯಿತನ ॥ ಇನಕುಲೇಂದ್ರನ ಚರನು ತಾನೆಂ । ದನು
ವರಿಸುವುದು ಮಾತು ಮೂರ್ಖರ । ಮನೆಗಳಿಗೆ ತಾ ಮಾನ್ಯನಾದೆನೆ ಯೆಂದನಾ
ಹನುಮ ॥ ೮೨ ॥ ಏನುಹದನಾಗಿಹರೊ ದೇವಿಯ। ರೇನನೆನೆವರೊ ಖಳರು ತನ್ನಿಂ।
ದೀ ನಿರೋಧ ನಿಯುಕ್ತವಾಯ್ತೆಂದಳ್ಳಿ ಬಾರರಲೆ ॥ ಮಾನಸದ ವಿಹ್ವಲದ ವಿದನನು ।
ಮಾನಿನಿಯ ಮಂಡನೆಯ ಘನಮಹಿ । ಮಾನುಭೃತ ಪದದರುಶನದಲಪಹಂಸ
ಬೇಕೆಂದ ॥ ೮೩ ॥ ಮಗನದೇನಾದನೊ ನಿಶಾಟರ । ಹಗೆತನವ ಗಂಟಿಕ್ಕಿಕೊಂಡನು ।
ವಿಗಡತನ ವಸುರರಲಿ ಸಲುವುದೆ ತನಗೆ ಯಕಟಕಟ ॥ ಮಗುಳಿ ಗವಿಸುವಡರಿದು
ದುಷ್ಕೃತ । ಮಿಗಿಲುತನಗೆಂದಳ್ಳೆ ಬಾಯುವ । ಜಗದಮಾತೆಯು ಬಳಿಗೆ ಬಂದನು
ವೀರಹನುಮಂತ ॥ ೮೪ ॥ ತಂದೆ ಬಂದ್ಯೆಹನುಮ ಮಾರಿಯ । ತಂದೆ ಖಳರನು
ಕೆಣಕಿ ತಾನಿಂ । ನೆಂದು ಮಾಡುವುದೇನು ರಕ್ಕಸರರಿಯದಪೊಲಿನು ॥ ತಂದ ತೆರ
ಳೆನ್ನೈಯ್ಯ ತೆರಳೆಲೆ । ಕಂದನಡೆ ಯಿನ್ನಿರದೆ ಯೆಂದಾ । ನಂದ ಭಯ ಸಮ್ಮಿಳಿತೆ
ವೈದಡಹಿದಳು ಮಾರುತಿಯು ॥ ೮೫ ॥ ಅಂಜಲೇತಕೆ ತಾಯೆ ತವಸದಕಂ । ಜವನು
ಕಂಡುದಯ ಸುಮನಸ । ಮಂಜಸನಲೇ ತಾನು ತಪ್ಪಿದ ಕೆಲಸಕಿನ್ನೇನು ॥ ಅಂಜಿ
ದೆನು ಬೇಡಲಿಕೆ ದಶಮುಖ। ಭಂಜನೆಗೆ ನೇಮವನು ರಘುಕುಲ। ಕುಂಜರನ ರಾಕ್ಷಸ
ಮಹಾರ್ಣವ ಬಾಡಬಾನಲನ ॥ ೮೬ ॥ ಚಿಂತಿಸದಿರಿನ್ನೆನ್ನಡೆಗೆ ಭೂ। ಕಾಂತ ನಂಘ್ರಿ
ಸರೋಜ ದರುಶನ। ವೆಂತು ಘಟಿಸುವುದೆಂಬ ಕರಣೇಂದ್ರಿಯದ ಕಳಕಳದ ॥ ಭ್ರಾಂತು
ಸಾಕಿನ್ನೆಂದು ಜನನಿಯ। ಸಂತವಿಸಿ ಮುರಿದಕ್ಷಿ ವಾರಿಯ। ತುಂತುರಿನ ಲಡಿಗೆರಗಿ ಬೀ
ಳ್ಕೊಂಡನು ಮಹೀಸುತೆಯ ॥ ೮೭ ॥ ಕೊರಲಸೆರೆ ಬಿಗಿದರಸಿ ಬಿರಿಬಿರಿ। ದುರುಳು ವಶ್ರ
ಗಳಿಂದ ಹನುಮನು । ಹರಸಿಕಳುಹಿದ ಳುಕ್ಕುವಕ್ಕಿಯ ಬಿಕ್ಕುಳಿನ ಬಳಿಯ ॥ ಸುರಿವ

ನಯನೋದಕದ ಧಾರೆಯ | ವರುಷದಲಿ ನೆನೆದಮಲ ತೊರವೆಯ | ನರಹರಿಯು ನಿಜ ದಾಸನೈತಂದಡರಿದನು ನಭವ ॥ |೪೯||

ಎಂಟನೆಯ ಸಂಧಿ ಸಮಾಪ್ತಂ.

ಒಂಬತ್ತನೆಯ ಸಂಧಿ.

ಸೂಚನೆ॥ ರಣಭಯಂಕರ ಹನುಮನಾ ದಿನ | ಮಣಿ ಕುಲೇಂದ್ರನಿ ಗಮಲಚೂಡಾ |
ಮಣಿಯ ತಂದಿತ್ತನು ಸುರೇಂದ್ರಾದಿಗಳು ನಲಿದಾಡೆ ॥

ಪದ್ಯ॥ ಓಡಿದನು ಕಪಿಯೆಂದು ಮನದಲಿ | ಮಾಡದಿರಿ ನಾದೀ ನಿಜಾಯುಧ | ಮೂಡವಿಸಿತದವಿಶಿಖ ಸಮ್ಮೇಳದಲಿ ಸಂಗರವ ॥ ಪಾಡಿಗೈವುದೆ ಸಂಘಪಿದು ತಾ | ವಾಹಿ ತಪ್ಪೆವು ನಮ್ಮ ರಣಬಂ | ಢಾರ ಜೋಕೆಯ ತೋರಸೆನು ನಾನೊಮ್ಮೆ ನಿಮಗೆಂದ ೧ ಅರಸವಿರಿ ಬಳಿಕಿತ್ತಲಿತ್ತಲು | ತೆರನು ದೋರಿವೆ ನೋಡಿ ಸಮರನ | ಮೆರವಡುಳ್ಳಡೆ ನ್ಯೈಗೊಡುವು ದಗ್ಗಳಿಕೆ ನಿಮಗೆನುತ | ಅರಿಚಲಳಿದುಳಿ ದಸುರಬಲವನು | ಕ್ಕುರಿಕು ಗೊಂಡುದು ಬೆಟ್ಟವನು ಕ | ಟ್ಟರುವೆ ಕವಿವಂದದಲಿ ಕವಿದುದು ಕೂಡೆ ಖಳನಿಕರ ॥೨॥ ಕುಶನೆ ಕೇಳ್ಳೈ ಕುಲಿಶಹತಿ ನೋ | ಯಿಸಲು ನೆರೆಪದ ಹನುಮ ನೆರೆಕಂ | ಪಿಸುವನೇ ಖಳರಿರಿತದಲಿ ಲವಕೇಳು ಕೌತುಕವ ॥ ಮುಸುಕುವತಿಬಲ ರಕ್ಕಸರ ಕ | ರ್ಕಶ ಕಶೆಗ್ರ ಸಿಘಾತದಿಂ ದೆ | ಬ್ಬಿಸಿದ ನಂತಕಪುರಿಗೆ ನಿಮಿಷದಲಾ ಸಮೀರಸುತ ॥ ೩ ॥ ತಿರುಹಿ ಸದೆದನು ಕುಂಭನನು ನೆಲ | ಕುರುಳಿಚಿದನು ನಿಕುಂಭನನು ನಡು | ಶಿರವನೆರ ಗಿದನಾ ಸುರಾರಿಯನಾ ನರಾಂತಕನಾ ॥ ಬಿರಿಯಲಪ್ಪಳಿಸಿದನು ತ್ರಿಶಿರನ | ಕೊರಳ ಹಿಡಿದನು ಶುಕ ದು | ರ್ಧರುಷ ಸಾರಣ ವಜ್ರದಂಷ್ಟ್ರಾದಿಗಳ ನೋಡಿಸಿದ ॥ ೪ ॥ ಅಡಕಿ ಕೆಡಹಿದ ಕಂಪನನು ಮುಸು | ಡೊಡೆಯ ತಿಪಿದು ಮಹೋದರನ ಹೇ | ರೊಡಲ ನೊಪೆದ ಸುಪಾರ್ಶ್ವ ಯುದ್ಧೋನ್ಮತ್ತ ರಕ್ಕಸರ ॥ ಮಡದಲುರೆಘಾಟ್ಟಿಸಿ ಸವಿಾಕವ | ಹಿಡಿದು ಹಳಚಿದ ಶಕ್ರಜಿತುವನು | ಹುಡುಕಿ ನೀರಲದ್ದಿದನು ನಡೆದು ಸಮುದ್ರಮಧ್ಯದಲಿ ॥೫॥ ವಿಕ್ಕವರ ಸದೆಬಡಿದು ಸಾಕೇ | ನಕ್ಕಜವ ಕಪಿಯೊಡನೆ ನಿಮಗೇನು | ತೆಕ್ಕತುಳದಲಿ ಬರಲಿದಿರ್ಗೊಂಡನು ನಗೇಂದ್ರಸುತ ॥ ತಕ್ಕ ಸನ್ಮಾನದಲಿ ಕೈಕೊಂ | ಡೆಕ್ಕತುಳದಲಿ ಬಂದನಮರರ | ಹೆಕ್ಕಳದ ಹೂಮಳೆಯ ಸೋನಲಿನ ಹೂರದಲಿ ಹನುಮ ॥೬॥ ಅದೆ ಬರಹು ಪವಮಾನಜನ ಜಯ | ವದನ ವಿಕಸಿತ ವಿಸ್ಮರಣದ | ಭ್ಯುದಯ ಮಹಿ ವೆನಗರುಹು ತಪೆ ಯೆಂದಖಿಳ ಕಪಿಸೇನ ॥ ತುದಿವೆರಲ ಬೊಬ್ಬೆಗಳ ತಿಗೆಗಳ | ತಗಹು ದುಬ್ಬರವತಿ ಮುಲೀತನ | ನಿದಿರುಗೊಂಡಪ್ಪಿದರು ನಮಿಸಿದ ಜಾಂಬವಂತಂಗೆ ॥೭॥ ವೀರ ಬಂದೈ ಸ್ವಾಮಿ ಕಾರ್ಯೋ | ದ್ಧಾರ ಬಂದೈ ಕೀಶಕುಲವನ | ನಾರುಹದಿನನಾಥ ಬಂದೈ ತಂದೆ ಬಾ ಯೆಂದು ॥ ಸೋರುವಾನಂದಾಶ್ರುಪುಳಕದ | ಪೂರಣದಲೆತ್ತಿದನು ಪವನ ಕು | ಮಾರಕನ ಮಸ್ತಕವ ನಲಿವೊಲಿವಬುಜಭವಸೂನು ॥ ೮ ॥ ಪವನಸುತ ನಿಟ್ಟೆಲುಮಿಲಿ ಲವಣಾ | ರ್ಣವವ ದಾಂಟಿದ ಬಳಿಕ ರಚಿಸಿತು | ದಿವಿಜರಿಪು ಪುರ ವಿಶ್ವಕರ್ಮನ ಮಹಾನು ಮತಗಳಲಿ ॥ ನವವಿಚಿತ್ರದ ಮಣಿಖಚಿತ ಭವ | ನವನು ಹೊಕ್ಕನು ನಗುತ ಭೃಗುಸು

ಭವ ಸುರಾಚಾರಿಯರ ನೇಮುದಲಾ ದಶಗ್ರೀವ ॥ ೯ ॥ ಏನನ ಡಿ ಯೆಂದು ಕಲಿಸವ ।
ಮಾನುಜನ ನಾ ಕನುಲಗರ್ಭನ । ಸೂನು ಬೆಸಗೊಂತನು ಮುಗುಳ್ನಗೆ ಮುಖದೊಳವ
ತರಿಸೆ । ಏನನೆನಗೆ ನಿರೂಪಿಸಿದಿರಿಂದ । ರಾನಿಕೆಯೆಲೇ ಹೋಗ ಕಂಡೆನು । ಜಾನಕಿಯ
ಬಳಿಕಿತ್ತೆನವರಿಗೆ ದಿವ್ಯ ಮುದ್ರಿಕೆಯ ॥೧೦॥ ತನು ಬಡವು ದೇವಿಯರ ದೇವರ । ನೆನಹ
ದಲ್ಲದೆ ಕಾಣೆನನ್ಯವ । ಮನವಚನಕಾಯದಲಿ ಶಿವಶಿವ ಶಿವನುಹಾದೇವ ॥ ಎನಿತು ಪಾತಿ
ವ್ರತೆಯೊ ಜಗದೊಳು । ತನಗೆ ಬಳಿಕೀರನ್ನವನು ಕೊ । ಟ್ಟನೆಯ ನಲ್ಲಿಗೆ ಹೋಗೆನ ತ
ಬೀಳ್ಕೊಟ್ಟರವರೆಂದ ॥೧೧॥ ಮೇಲೆ ಮಾಡಿದ ಕೆಲಸವೇನದ । ಹೇಳೆನಲು ತಲೆಗುತ್ತಿ
ದನು ವೈ । ತಾಳಿಕರು ಹೊಗಳಿದರು ಮೇಲೆ ಸುರೇಂದ್ರನೊಲಿದಾಗ ॥ ಕೇಳು ಜಾಂಬವ
ದೇವ ರಿಪು ವನ । ಪಾಲಕರ ಸವೆಬಡಿದು ಸವರಿದ । ನಾಲರಿತ ನಂದನವ ನೊಂದೇಕ್ಷಣ
ದಲೀ ಹನುಮ ॥೧೨॥ ಬವರಕ್ಕೈತಂವಸುರರಾಯನ । ಕುವರರೇಳ್ನೂರರನು ಕಾಲನ ।
ಭವನವನು ಕಾಣಿಸಿದ ನಕ್ಷಾದ್ಯಖಿಳ ರಾಕ್ಷಸರ ॥ ತವಿಸಿ ಸಭೆಯ ರಾವಣನ ಪರಿ ।
ಭವಿಸಿ ಪುಚ್ಛಾಗ್ರದಲಿ ಸುತ್ತಿದ । ನಿವಸನದ ಶಿಖಿಯಿಂದ ಸೀಕರಿಮಾಡಿದನು ಪುರವ ॥
ತಾಗಿತರುಬಿದ ಖಳರ ಬಟ್ಟೆಯ । ಸಾಗರದೊಳದ್ದಿದನು ದೂತೋ । ದ್ಯೋಗವಿದು
ನಿಮ್ಮಾತ್ರ ಮಾಡಿದ ರಾಜಕಾರಿಯವ ॥ ಮೇಗೆಹೇಳುವುದೇನೆನುತ ದಿವ । ಕಾಗಿ ನಡೆದರು
ನುಡಿಯನಿದ ಕೇ । ಳ್ದಾಗಲಾ ಕಪಿಸೇನೆ ಕೊಂಡಾಡಿತು ಸವಿಾರಜನ ॥ ೧೪ ॥ ಬಳಿಕ
ಬೀಡೆತ್ತಿದುದು ಹರುಷದ । ಹೊಳಹಿನಲಿ ಹೊದರೆದ್ದ ಗಗನದ । ಜಲಭರದ ಜವಗತಿಯ
ಲದ್ರಿವನೋಪ ಪರ್ವತವ ॥ ಕಳೆದು ಮಾರ್ಗಶಿರೋಷಿತದ ಶಶಿ । ನಳಿನ ಸಖಸಂಗಮದ
ದಿವಸದ । ಲಿಳಿಯುಬಿದ್ದರು ಕೋಟಿಯನು ಫಲವರದ ಮಧುವನವ ॥೧೫॥ ಕಾಪಿನಗ್ಗದ
ಬಲಿಮುಖರ ಭಟ । ರೀಪರಿಯ ಹೊಗಗುಡದೆ ತಡೆಯಲು । ತೋಪಸೂರೆಯ ಕೊಂಡು
ಕೊಡಹಿದರಾ ವನೌಕಸರ ॥ ಆಪರೇ ಬಳಿಕವದಿರಿವರಾ । ಟೋಪ ಕೊದಗುವ ಡರುಣ
ಜಲದಲಿ । ಲಾಸಮುಖಕ್ಕೈತಂದು ದೂರಿದ ರಿನತನೂಜಂಗೆ ॥೧೬॥ ಅರಿದ ನಸಿತರವೇಲಿ
ಹುಯ್ಯಲ । ಕೊರೆಗೆಯನು ದೇವಿಯರ ಸುದ್ದಿಯ । ಸರಿಗೆಯನು ಬಳಿಕಿವರ ಸಂತೈಸಿ
ದನು ಸುಗ್ರೀವ ॥ ನೆರೆಯ ದಂಬರ ವಿವರ ಗಮನದ । ತೆರಹಿಗೆನೆ ತೀರ್ವೈಸಿ ತೊಡೆಗಳ ।
ಹರೆಯ ಚೊಯ್ಲಿನಲಿಳಿದರಾ ಪ್ರಸ್ರವಣಗಿರಿಗಾಗಿ ॥೧೭॥ ದೇವನಿದ್ದನು ವೀರಭಟ ಸು ।
ಗ್ರೀವ ಲಕ್ಷ್ಮಣರುಗಳ ಗಡಣದ । ಲೀವನೌಕಸರಿವಿರಿನಲಿ ಜಯಜಯನಿನಾದದಲಿ ॥ ತೀವಿ
ದುತ್ಸವದಿಂದ ವಿಮಲಫ । ಲಾವಳಿಯ ಕಾಣಿಕೆಯನಿತ್ತಾಭಿ । ಭಾವಭಕ್ತಿಯ ಲೆರಗು
ತಿರ್ದರು ಪದಕೆ ರಘುಪತಿಯ ॥೧೮॥ ಬಳಿಕ ಜಾಂಬವದೇವ ನುದಧಿ । ಕ್ರಮಣ ಕಾಣಿಸಿ
ದೋಮುಹರುಷೋ । ದ್ಗಮದ ಉಪಚರಿಸಿದನು ಜನಪತಿ ಜಾಂಬವಾದಿಗಳ ॥ ಗಮನ
ಕಾಸ್ಯವಿಸಂಚಷಾಗದೆ । ವಿಮುಖವಿಲ್ಲದೆ ಕಂಡಿರೇ ಸೀ । ವಮರ ವೈರಿ ದಶಾನನನ
ನೆಂದಪಸ ಬೆಸಗೊಂಡ ॥೧೯॥ ದೇವರನು ಬೀಳ್ಕೊಂಡು ನಡೆದೆವು । ದೇವ ಚಿತ್ತೈಸವ
ನಿಜೆಯ ವಿವಿ । ಧಾವನಿಯ ಹೊಕ್ಕರಸುತಿದ್ದೆವು ವಿತಳ ಕುಹರದಲಿ ॥ ತಾವರೆಯ ಸಖ
ಸುತನ ತನುಜೆಯ । ಠಾವಕಂಡೆವು ತೊಳಲಿದೆವು ಬಳಿ । ಕಾ ವಿಚಿತ್ರದ ವಿವರವೀಥಿಯ
ನೆಂದ ನಜಸೂನು ॥೨೦॥ ಬಲುಹ ಮೆರದಲ್ಲಿಂದ ಹೊರವಂ । ಟಳಿಯ ಸಾರ್ವೆವು ಮುಂದೆ
ಕಂಡೆವು । ಕಲಿಜಟಾಯುವಿ ನಗ್ರಜನನಾ ವಿಹಗಪತಿಯಿಂದ ॥ ಖಳನ ಸುದ್ದಿಯನರಿದು

ಸಾರ್ದವು। ಜಲನಿಧಿಯನಲ್ಲಿ ದ ಹನುಮನ। ಕಳುಹಿದೆವು ಗುಪ್ತದಲಿ ಸೀತೆಯನರಿದು
ಬಾಯೆಂದು ॥೨೧॥ ಈತ ಬಳಿಕ ಸಮುದ್ರಮಧ್ಯದ। ಲಾತ ಕಂಟಕ ಹಲವ ಕಳೆದು ಪ
ರೇತಪತಿ ಶಂಕರ ವಿರಿಂಚಾದಿಗಳಿ ಗಸದಳದ ॥ ಯಾತುಧಾನನ ರಾಜಧಾನಿಯ। ಲಾತ
ಮಿಶ್ರಿತ ಲರಸಿ ಕಂಡನು। ಮಾತೆಯನು ಮುಲ್ಲೋಕದಮರ ನರೋರಗಾವಳಿಯ॥೨೨॥
ಬಡವು ಗಡ ದೇವಿಯರು ಸೆರೆವನೆ। ಗಡ ಮಹೋದ್ಯಾನದಲಿ ಕಾವಲು। ಗಡ ಮಹೋಗ್ರ
ನಿಶಾಚರರು ಗಡ ನೃಪತಿ ಚಿತ್ತ್ರೈಸ ॥ ನಡೆನುಡಿಯಲಲಸಿಕೆಗಳಲಿ ನಿ। ಮ್ಮಡಿಯ ಸಿರಿ
ಚರಣಾರವಿಂದದ। ದೃಢತರದ ನೆನಹಲ್ಲದಿಲ್ಲವನೀಶ ಕೇಳೆಂದ ॥೨೩॥ ಕಳಲಿ ಸೂಸಿದ
ಕೇಶಪಾಶದ। ಮಲಿನ ವಸನದ ಮಸಳಿಸಿದ ಕೋ। ಮಲತೆಯಂಗದ ಕೋಡಿವರಿವಶ್ರು
ಗಳ ಲೋಚನದ ॥ ಬಳಲಿಕೆಯ ಬಾಯ್ದೆರೆಯಲಿದ್ದಳು। ಜಲಜಮುಖಿ ಯೆಂದೀತ
ಹೇಳಲು। ಸಲೆಮರುಗಿ ತೆನ್ನೊಡಲೆನಲು ತಲೆಗುತ್ತಿದನು ರಾಮ ॥೨೪॥ ಘುಡುಘುಡಿಸಿ
ಮಾಗಧಿಯ ಮನದಲಿ। ಝುಡಿದವಿಳೆ ಗಶ್ರುಗಳು ಮನದಲಿ। ಮಿಡುಕಿದನು ಸುಗ್ರೀವ
ನನಿಬರ ಸಂತವಿಸಿ ಬಳಿಕ ॥ ನುಡಿದನಾ ಜಾಂಬವನು ಹನುಮನ। ಕಡುಹ ಹೇಳಿದು
ವನವ ಕಿತ್ತು। ಗ್ಗಡದ ಕದನದ ಕಥೆಯ ಲಂಕಾನಗರಕಾರಣವ ॥೨೫॥ ಆಳಿದುದನಿತರ
ಮೇಲೆ ಚಿಂತಾ। ಕುಳಿತೆ ರೋಮಾಂಚನದ ಹರುಷದ। ಹೊಳೆಯಲೀಸಾಡಿದರು ರಘು
ಪತಿ ಲಕ್ಷ್ಮಣಾದಿಗಳು ॥ ಬಲುಸಖರು ಬಲುಭೃತ್ಯರುಳ್ಳಡೆ। ಬೆಳಗದೇ ಸತ್ಕೀರ್ತಿ ಚಂ
ದ್ರಿಕೆ। ಕಲಿಯೆ ಬಾಯೆಂದಪ್ಪಿದನು ರಘುರಾಮ ನನಿಲಜನ ॥೨೬॥ ಪಟುತನವು ದೊರ
ಕಿದರೆ ಶುಚಿತನ। ಘಟಿಸಲರಿಯದು ಶುಚಿತನವು ಸಂ। ಘಟಿಸಿದರೆ ಪಟುವಾಗದುಭಯ
ಗುಣಂಗಳುಳ್ಳವಗೆ॥ ಘಟಸದಧಿಕ ವಿವೇಕವಲೆ ವಿ। ಸ್ಫುಟಗುಣಂಗಳು ನಮ್ಮ ಭಾಗ್ಯೋ।
ತ್ಕಟದಲೀ ಸೇರಿದುವು ನಿನಗೆಂದರಸ ಹರುಷದಲಿ ॥ ೨೭ ॥ ಮುರಿದು ಚರಣಕೆ ನಮಿಸಿ
ವಿಶ್ವಂ। ಭರೆಯ ಸುತೆಯ ಶಿರೋಮಣಿಯ ಬಳಿ। ಕೆರಡು ಕೈಗುಡಿತೆಯಲಿ ಧರಿಸಿ
ಮನೋನುರಾಗದಲಿ ॥ ಅರಸ ರಾಮಂಗಿಯ್ಯೆ ಬಳಿಕಾ। ದರದಿ ನಾ ಹನುಮಂತ
ದೇವನ। ಪರಮ ಕರುಣ ಕಟಾಕ್ಷರುಚಿಯಲಿ ಹೊಗಿಸಿದನು ರಾಮ ॥೨೮॥ ಉದಧಿ ಮಥ
ನದ ಲಮಲ ಕೌಸ್ತುಭ। ದುದಯದಂತದರಲ್ಲಿ ಜನಿಸಿ। ತ್ತಿದು ಸುರೇಂದ್ರಂಗಾಯ್ತು
ಹಸುಗೆಯ ಲೀಮಹಾಮಣಿಯ। ತ್ರಿದಶಪತಿ ಜನಕಂಗೆ ನೃಪ ಯ। ಜ್ಞದಲಿ ಕೊಟ್ಟನು
ಜನಕಸೀತೆಯ। ಮದುವೆಯಲಿ ತನಗಿತ್ತಡಿತ್ತೆನು ಸೀತೆಗಾನೆಂದ ॥೨೯॥ ಕುರುಹಿವಹು
ದೆಂದರಸ ನೆಳೆನೇ ಸರಿನವೊಲು ರಂಜಿಸುವ ರತ್ನವ। ತುರುಗಿ ತೂಳುವ ಹರುಷವುಳು
ಕವಿ ಯಿತ್ತನನುಜಂಗೆ ॥ ನೆರೆಯದೀತಂಗೀವ ವಸ್ತ್ರೋ। ತ್ಕರವ ದಂತಿರಲೆಂದು
ಬೊಮ್ಮನ। ಪರಮ ಪದವಿಯನಿತ್ತು ವಿಗೆ ಮನದಣಿಯೆ ಮನ್ನಿಸಿದ ॥೩೦॥ ತೀರದೇ
ತಾ ಬೇಡ ತನ್ನಯ। ಸಾರಿ ಯಮಲ ಕಟಾಕ್ಷದಗ್ರದ। ಧಾರೆ ಸೋಂಕಿದಡಹುದಲೀ
ಬ್ರಹ್ಮೇಂದ್ರ ಪದವಿಗಳು ॥ ಸಾರತರ ನಿಗಮಾರ್ಥ ವಿದುಬರಿ। ಗಾರಿಗಾ ಲಕ್ಷ್ಮೀಶ
ನೊಲಿದರೆ। ವೀರಕೇಳ್ ವಿಚಿತ್ರವಿದಕೇನೆಂದನಾ ಮುನಿಪ ॥ ೩೧ ॥ ಕೇಳಿದನು ಬಳಿಕ
ವರ ಮಂತ್ರಿ। ಘೀಳನಗರದ ಪಥವನಾ ದಶ। ಮೌಳಿಯನುಪಮ ದುರ್ಗದುಗ್ರಾಟೋಪ
ವನು ರಾಮ ॥ ಆಳು ಕುದುರೆ ರಥಾಶ್ವದುಬ್ಬರ। ದೇಳಿಗೆಯ ನವಗಿರ್ದ ಸಿರಿಯು।
ಬ್ಬಾಳುಗಳ ಧಾಳಿಸುವ ನಗೆನೊಗವಲಿ ಸಮಿರಾರಜನ ॥ ೩೨ ॥ ಸೂರುಯೋಜನ ಜಲಧಿ

ಮೇಲೆ। ನೂರುಯೋಜನ ಪಥ ಮಹಾಪುರ। ನೂರುಯೋಜನ ದುಷ್ಕೃತದ ಗಿರಿ ಮೂರ
ರಗ್ರದಲಿ ॥ ತೋರುತಿಹು ದಿನಬಿಂಬದ ವೊಲದ । ನೇರಲವ ರಂಗಸನಳವು ಪದಿ ।
ನಾರು ಯೋಜನದುದ್ದ ಕೋಟಾವಳಯುಲದಕೆಂದ ॥೩೩॥ ಅಗಲು ತಾನೈವತ್ತು ಯೋ
ಜನ। ದಗಲ ಕೆಳಗಣ ಕೋಟೆಯೋಟಿ ಯೊತ್ತಿನ । ಲಗಡು ರಕ್ಕಸ ಸಿರಿಯು ಹೊಗಳುವ
ಡಳವೆತನಗೆಂದ ॥ ಪುಗದು ಪತಿ ಸೈನಿಕದ ಸಂಖ್ಯೆಯು। ಸೊಗಸು ಜಿಹ್ವೆಗೆ ಜೀಯಯಿನಿ
ತರ। ಬಿಗುಹು ದೇವರು ಮುನಿದು ನೋಡಿದಡೇನಹುದೊಯೆಂದ ॥ ೩೪ ॥ ಹರದು
ದೋಲಗವನಿತರಿ ಮ್ಮೇ । ಲರಸ ಸುಗ್ರೀವಾದಿ ಸುಭಟರ । ಕರಸರೋಜದಿ ಬೀಳು
ಕೊಟ್ಟನು ಬಳಿಕ ಬೀಡಿಕೆಗೆ ॥ ತೊರವೆಯುಧಿಪತಿ ರಾಮ ನರಕೇ । ಸರಿ ನಿಜಾನುಜ
ಗೂಡಿ ನೂಕಿದ। ನಿರುಳದಹಿತ ವಧಾ ವಿರೋಧದ ಬಹಳ ಚಿಂತೆಯಲಿ ॥ ॥೩೫॥

ಒಂಬತ್ತನೆಯ ಸಂಧಿ ಸಮಾಪ್ತಂ.



ಯುದ್ಧಕಾಂಡ.

ಮೊದಲನೆಯ ಸಂಧಿ.

ಸೂಚನೆ॥ ಪೇಳ್ವ ರಾಘವ ನಧಿಕಬಲ ಖಳ । ರಾವಣನ ವಧೆಗೆಂದು ಕಲಿ ಸು। ಗ್ರೀವ
ಬಲ ಸಹಿತೈದಿದರು ನಿರುಪಮ ಮಹಾರ್ಣವವ ॥

ಪದ್ಯ॥ ದಾಶರಥಿಸುತ ಕೇಳು ಬಳಿಕದಿ । ನೇಶನುದಯದ ಲಿವರಲೇ ಪ್ರ।
ತ್ಯೂಷ ಕರ್ಮವ ರಚಿಸಿ ನಡೆತಂದಿತ್ತ ನೋಲಗವ ॥ ಕೀಶಕುಲ ಕಮಲಾರ್ಕ ಮುಖ್ಯ
ರ. । ಹಾ ಸುಭಟರೈತಂದು ಕರವಿ। ನ್ಯಾಸ ಮಸ್ತಕರಾಗಿ ಕುಳ್ಳಿರ್ದರು ಸಭಾಂಗದಲಿ ॥೧॥

ನಡೆದುದೀ ಪರಿಯಂತ ಕಾರ್ಯದ | ಕಡುಹು ಕುಂದದೆ ಮುಂದಣದ ಪಂ | ಗುಡಿಯ
ದಾಯಕೆ ದಾರಿಯಾವುದು ವೀರ ಹೇಳೆಂದು || ನುಡಿಯಲಿನಸುತ ಕೈಮುಗಿದು ದಳ |
ನಡೆಯ ಲೆಣಿಕೆಗಿದೇನು ದೊಡ್ಡಿತು | ಕೊಡಲಿಯೇ ಕೆಳೆಗೊನೆಯ ಕಾರ್ಯಕೆ ಬೆರಗದೇ
ನೆಂದ ||೨|| ಜೀಯ ಕೇಳೀದಳಕೆ ನೀಲನ | ನಾಯಕನ ಮಾಡುವುದು ಸೇವೆಗೆ | ವಾಯು
ವಿನ ನಂದನನು ದೇವರಪಾದಪಂಕಜವ|| ರಾಯಕುವರನ ನಿರಿಸು ನಿಜಬಲ | ದಾಯತದ
ರಕ್ಷಣೆಗೆ ಮೇಲಣ | ದಾಯದನುಭವ ಕಜಸುತನ ಕೈಪಿಡಿದುಕೊಯ್ಯೆಂದ ||೩|| ಅದುದಾ
ಮುಗಿಯಾದೆಯಲಿ ಸಂ | ಪಾದಿಸಿತು ಸೇನಾಧಿಪತ್ಯಕೆ | ವೈದಿಕೋಕ್ತಿಯ ವಿವಿಧ ಪರಿ
ಕರವಗ್ನಿ ನಂದನಗೆ || ಐದಿತಮರ ವಿಮಾನ ಮಂಬರ | ವೈದದೆನ ಸುರಮುನಿಗ ಳೆಸೆದರು |
ಮೇದಿನಿಗೆ ಮಾಂಗಲ್ಯ ತೂರ್ಯತ್ರಯದ ರಭಸದಲಿ ||೪|| ಗುರುವಿ ನಭಿಜಿತು ಲಗ್ನ
ದಲಿ ಸು | ಸ್ಥಿರ ಸುಮಾರ್ಗದೊಳಾಯ್ತು ವೈಶ್ವಾ | ನರನ ಸುತಗಭಿಷೇಕ ಕಪಿಸೇನಾಧಿ
ಪತ್ಯತನ|| ಹರಸಿ ಶಾಸೆಯ ಹಾಯ್ಕಿದರು ಸುರ | ತರುಣಿಯರು ಹೂಮಳೆಯ ಹೊನಲು |
ಬ್ಬರಿಸಿದುವು ಹೊದರೆದ್ದುದಾ ಪ್ರಸ್ಥಾನ ತೂರ್ಯರವ ||೫|| ಹರಿಬಲವ ನತಿಹರುಷ
ದಲಿ ಸಿಂ | ಗರಿಸಿದನು ಸುರರಾಜ ರುಚಿರಾ | ಭರಣ ನವ್ಯ ಸುಗಂಧ ಮಾಲ್ಯಾಂಬರ
ಸಮುಗ್ರದಲಿ || ಶಿರವ ಮಣಿ ದಣಿಮಾದಿ ಸಿದ್ಧಿಯ ನರಸನಂಘ್ರಿಗೆ ಬೀಳುಕೊಟ್ಟರು |
ಸುರಗಣದ ಸಂಮೇಳದಿಂ ದಮರಾವತೀಪುರಿಗೆ ||೬|| ಬಳಿಕ ಲುತ್ತರಫಲ್ಗುಣೀ ಸ |
ಮ್ಮಿಳಿತ ವಿಶ್ರುತ ಮಾರ್ಗಶಿರ ದು | ಜ್ವಲವ ಶುದ್ಧಾಷ್ಟಮಿಯ ಲಭ್ರದ್ಯೋತ ನಂಬರವ||
ವಳೆಯಮಧ್ಯದಲಿರಲು ತಾರಾ | ಬಲದ ಬಲದುಸುರಿನಲಿ ನೀಲೋ | ತ್ಪಲ ನಿಭಾಂಗನು
ತೆರಳಿದನು ವಿಜಯಾಭಿಧಾನದಲಿ ||೭|| ಎದ್ದುದೊಡನೆ ಸಮಸ್ತಬಲ ಬಳಿ | ಎದ್ದ
ಲಹರಿಯ ಸುಳಿಯ ಶರಧಿಯ | ಒದ್ಧಿಯಲಿ ಕುಜ ಕುಧರ ದುಬ್ಬರ ದಾಯುಧಂಗಳಲಿ ||
ಗದ್ದುಗೆಯ ನಿಳಿದಬುಜಭವ ರಿವ | ರಿದ್ದಬೀಡಿಗೆ ಬಂದು ವಿನಮಿತ | ಮುದ್ರೆಯಲಿ
ಮುಗಿದಿರ್ದ ನನುಪಮ ಕರಪುಟಾಂಜಲಿಯ ||೮|| ಜಯಜಯಧ್ವನಿ ಜಡಿಯೆ ಲಂಕಾ |
ಹಯ ಸುರುಸ್ಕಂಧದಲಿ ರಿಪುನಿ | ರ್ಭಯನು ಮಂಡಿಸಿದನು ಮರುದ್ಗಣರಾಜ ಸುತ
ಸುತನ | ನಿಯತ ನಿಜಕಂಧರದ ಲಬುಜ | ಪ್ರಿಯ ಕುಲಾನುಜ ನೊಪ್ಪೆ ರವಿಜಾ |
ಜ್ಞೆಯಲಿ ನಡೆದುದು ದಂಡು ಕದನೋದ್ದಂಡರಾಘವನ ||೯|| ಅರರೆ ರಘುರಾಜೇಂದ್ರ
ಸೈನ್ಯದ | ಸಿರಿಯನೇವಣ್ಣಿಸುವೆ ನಗ್ಗದ | ಕರಡಿಗಳ ಕರಿಘಟೆಗಳಾ ಮುಸುಕುಗಳ
ತುರಗಚಯ || ಕರಿಯ ಕಪಿಗಳ ತೇರುಗಳು ತರು | ಚರರೆ ಪದಚರ ರಾಯತದಿ
ಕೊಸ | ಪರಿಯ ಚತುರಂಗದ ಗಭಾವಣೆ ಯಡರಿಸಿತು ನಭವ ||೧೦|| ತೋಳುಗಳ ಪರಿ
ಘಾಳಿ ಸಿಡಿಲಾಂ | ಗೂಲವೇ ಸಬಳಂಗ ಳುಗ್ರಕೆ | ರಾಳನಖ ವಸಿ ಧೇನುವಂಷ್ಟ್ರಂಗಳ
ಕ್ಷಪಾಣಚಯ || ಮೇಲುಗೈದುಗ ಳುಳಿದಗಿರಿ ತರು | ಕೇಳಿದೈ ಕುಶನೆ ರಹಿದವೃತ
ಘ | ಲಾಳಿಕೊಟ್ಟಿಗೆಯೆನಲು ಕಂಗೊಳಿಸಿತ್ತು ರಿಪುಸೇನೆ ||೧೧|| ನಡೆಮುದ್ದೈ ಬಲ
ಬಳಿಕ ಬಲಿಮುಖ | ಪಡೆಯ ಪದಹತಿ ಗಹಿಪ ನಸುವ | ಕ್ಕೈಡಿಸೆ ಕುಲಗಿರಿ ಜರಿಯೆ
ಕೂರುಮ ಸುಸುರ ಕಂಠದಲಿ || ಬಿಡುಕೆ ಮದ ದಿಗುದಂತಿಗಳು ತಲೆ | ಗೊಡಕೆ
ಕಮಲಭವಾಂಡ ಮಂಡಲ | ಜಡಿಯೆ ಜರಿದುವು ಧರಣಿ ಸೇನಾಗಣದ ಭಾರದಲಿ ||೧೨||
ಕೀಲುಕಳಚಿದ ವಮರಶೈಲದ | ಮೇಲು ಜಗವುಘ್ಘಡಿಸಿ ದಿಕ್ಕಿನ | ಮೂಲೆ ಹರಿದುವು

ಬಿಟ್ಟುದತಳದ ಬೆಸುಗೆ ಭೂತಳದ || ತಾಳುವವರಿಂನಾರೊ ಯೆನೆ ತಾಂ | ದೋಳ
ಮಾನಸನಾಗಿ ಬೆಂಬಿತ | ದೋಲಗಿಸಿ ಬರುತಿರ್ದ ನಿಜನಂ ಭೋಜಲೋಚನನ ||೧೩||
ಹರಿ ಚಮೂವರ ಚರಣ ಪ್ರಹತು | ಬ್ಬರದ ರಜವಲಿ ಮುಳುಗಿ ತಗ್ಗದ | ಹರಿಪದವು
ಹರಿಬಿಂಬ ಹರಿಪತಿ ಹರಿಜನಾಸ್ಥಾನ|| ಹರಿಯವೊಲು ಹರಿಸೂನು ನಿರ್ಮಿತ | ಥರಥರದ
ಭುವನಗಳ ಜಠರಾಂ | ತರದ ಳಳನಡಿಸಿತು ಪೊಗಳುವೆನೇನ ನದ್ಭುತವ ||೧೪|| ಕಟಕ
ಪೇಪರಿ ನಡೆದು ಹರಿಗಿರಿ | ಕಟಕದಲಿ ಬಿಟ್ಟುದು ಕಣಾ ಗಿರಿ | ತಟದೊಳಾಯಿತು
ಪಯಣ ಮರುದಿನ ಮೇಚಕಾಹ್ವಯದ || ಅಟವಿ ತಳಪಟವಾಗೆ ನಡೆದು | ಬ್ಬಟೆಯ
ಮಲಯಾದ್ರಿಯಲಿ ಬಿಟ್ಟುದು | ಪಟುಪರಾಕ್ರಮಿ ನೀಲನಾಜ್ಞೆಯಲೀ ಮಹಾಸೇನೆ ||
ಪಯಣ ನಾಲ್ಕಕೆ ಸಾರಿದರು ಶರ | ಧಿಯ ತಟಾಕವ ನವನು ನೆಲನಾ | ನಿಯುತ ಬಲ
ರಾಶಿಯಲಿ ಮುಳುಗಿತ್ತಾತ್ಕ್ಷಣಾರ್ಧದಲಿ || ಭಯದ ಭಾರಣೆಯಿಂದ ಸೀತಾ | ಪ್ರಿಯನ
ಚರಣದ ಮೌಕ್ತಿಕವ ಮಣಿ | ಮಯದ ಕಾಣಿಕೆಗೊಡುವವೊಲು ಕಡಲುಬ್ಬಿತಿದಿರಿನಲಿ||
ತೆರೆಯ ಗುಡಿಗಳ ಫೇನಪಿಂಡೋ | ತ್ಕರದ ಧವಳಛತ್ರದುರು ಸೀ | ಕರದ ಚಾಮರ
ದಮಲ ಸಲಿಲಾವರ್ತ ನರ್ತನದ || ಭರಿತ ಘುಳುಘುಳುಘುಳು ನಿನಾದದ | ಮೊರೆವ
ಭೇರಿಯ ಲಿದಿರುಗೊಂಬಂ | ತಿರೆ ಮೆರೆದುದಾ ಶರಧಿ ವಸುಧಾ ಪರಿಧಿ ರಘುಪತಿಯ||೧೭||
ಒದೆದು ವೇಳಾಚಲವ ನಭ್ರದ | ತುದಿಗೆ ಲಂಘಿಸಿ ಮುರಿದು ವಿತಳವ | ಸದೆದು ಭೋ
ರೆಂದೊಲಿದು ದಿಗುಭಿತ್ತಿಗಳ ಹೊಯ್ದಾಲದು || ಮದದಹಂಕಾರದಲಿ ತನಗಿ | ಲ್ಲಿದಿರಹ
ಪ್ರತಿಭಟರೆನುತ ಹರು | ಷದಲಿ ಮಲದೊಲೆದಾಡುತಿರ್ದನು ಶರಧಿ ಧೃತಿಶರಧಿ ||೧೮||
ಬೀಡು ಬಿಟ್ಟುದು ಸಕಲನಾಯಕ | ವಾಡಿಗಳು ಗುಡಿಹೊಯ್ದು ದಸುರ ವಿ | ಭಾಡಗೆಳೆ
ದಳಿರುಗಳ ಹೊದಕೆಯ ರಾಜವೈಭವದ || ನೋಡೆ ಶರಧಿಗೆ ಪಡಿ ಸಮುದ್ರದ | ಪಾಡು
ಮೆರೆದುದು ಪಾಳೆಯವು ತೆಗೆ | ದೋಡಿತಲ್ಲಿಯ ಠಾಣೆಯದ ಖಳರಸುರಪುರವರಕೆ ||೧೯||
ಎಲೆ ರಘುಕ್ಷಿತಿನಾಥಸುತ ಕೇಳ್ | ಖಳ ಶಿರೋಮಣಿ ಸುಪ್ರತಾಪಾ | ನಲವ ತೇಜದ
ತೀವ್ರಶೌರ್ಯದ ಸಕಲ ವೈಭವದ || ಕಲಿತ ವದದುಬ್ಬಿನಲಿ ಸುಭಟಾ | ವಳಿ ಸಹಿತ
ವೋಲಗದೊಳಿರೆ ತಂ | ದಿಳುಹಿದರು ಭಯಭರಿತ ಬೇಜದ ಹೊರೆಯನಾ ಚರರು ||೨೦||
ಜೀಯ ಬಂದಿದೆ ಸಕಲ ಕಪಿಕಟ | ಕಾಯ ಕಲ್ಪಿತ ಕಾಮರೂಪಿನ | ಕಾಯದತಿಬಲ
ಇಂದ್ರ ಯಮ ವರುಣಾದಿ ನಿರ್ಜರರ || ಆಯತವ ನಣಕಿಸುವ ಕುಲಶೈ | ಲಾಯು
ಧರು ಕಣ್ಣೆಕ್ಕಲಸವಳ | ವಾಯಿತೆಮಗೆಲೆ ದೇವ ಎಂದರು ಖಳರು ಕೈಮುಗಿದು ||೨೧||
ಎತ್ತ ನೋಡಿದಡತ್ತ ವಿಲಯದ | ಲೆತ್ತುವಂಬುಧಿಯಂತೆ ಬಲವದು | ಕೃತ್ತಿವಾಸಂ
ಗಸುರಹರ ಕಮಲಜಂಗಸದಳದ || ಮಿತ್ತು ಮೊಗದವರದೆ ಮಹೀಜವ | ಕಿತ್ತು ನಮ್ಮಾ
ಪುರವನಗ್ನಿಗೆ | ತುತ್ತುಕೊಟ್ಟವ ನಂದದವರದೆ ದೇವ ಚಿತ್ತೈಸು ||೨೨|| ದೇವರಂಡೆಳೆ
ತಂದ ಸೀತಾ | ದೇವಿಯರಸನ ದಂಡುಗಡ ಸು | ಗ್ರೀವನೆಂಬ ಕಪೀಂದ್ರನಾ ದಳಭಾರ
ಕೊಡೆಯುಗಡ || ಆವುದಭಿಮತ ರಾಜಕಾರ್ಯದ | ಜೀವಳನನದ ದೇವರೇ ಸಂ | ಭಾವಿ
ಸುವುದಾವ್ ಬಂದ ಹದನಿದು ಯೆಂದರಾ ಖಳರು ||೨೩|| ಹುಲು ನೃಪಾಲರ ಹಗೆತನವ
ಹೆ | ಕ್ಕಳವ ಗಳಹುವ ಹಂದೆಗಳ ಬಾ | ಯ್ಗಳನು ಹೊಯ್ಸೆಂದಸುರಪತಿ ನಸುನಗೆಯ
ಕೋಪದಲಿ || ಇಳಿದು ಸಿಂಹಾಸನವ ಪರಿಮಿತ | ನಾಳ ಕಭಿಮುಖನಾಗಿ ತರಿಸಿದ |

ನಳುಕಿನಲಿ ಬಳಿಕಾ ಪ್ರಹಸ್ತ ಸುರೇಂದ್ರಜಿತು ಖಳನ ॥ ೨೪ ॥ ಇಂದಿನಾತ್ರರದೆಸೆಮ ವಾರ್ತೆಯ । ಚಂದವನು ಕೇಳಿದಿರೆ ಸೀತೆಯ । ಹಿಂದಣರಸನು ಹೊಳಕಿದನು ಗಡ ಬೆಳಿದವೈರದಲಿ ॥ ಅಂದು ನವಿಸ್ಮಾಪುರವ ನುರಿಯಲಿ । ಸಂಧಿಸಿದ ಭಟನಂದದಲಿ ಕಪಿ । ವೃಂದ ನರೆದೈದಿದರು ಯಿದಕಿನ್ನೇನು ಹದನೆಂದ ॥೨೫॥ ಅರಿಯ ಜಾರದೆ ಜೇಯ ರಿಪು ನೃಪ । ರಿಂತ ಕೆವ್ಮೊಳಗೊದಗುವುದು ಕಡು । ವೆಗು ಕದನದ ಲಿಂದುಧರ ನಳುಕುವನು ದೇವರಿಗೆ ॥ ಮರೆದುಕೊಂಡಿರಲೇಕೆ ನೀವೆ । ಚ್ಚರುವೆವೀ ಸಮಯದಲಿ ನಮ್ಮನು । ಕೊರತೆ ನೆವ್ಮಿಹುದಾಗಿ ಯೆಂದಾ ಸಚಿವಪತಿ ನುಡಿದ ॥೨೬॥ ಸಮನು ಸಮನಲಿ ಬಿಟ್ಟಿ ಹನು ವಿ । ಕ್ರಮವಿಹೀನನು ತೆತ್ತಿಹನು ಸಂ । ಭ್ರಮಿಸುವನು ಸತ್ವಾಧಿಕನು ಸಪ್ತಾಂಗ ವೈಭವದಿ ॥ ಕ್ರಮವಿದೀಗೆಲೆ ಜೇಯ ವಸುಧಾ । ರಮಣರಿಗೆ ದಂಡೆತ್ತಿ ಬಹುದೀ । ಸಮಯದಲಿ ನಾವರಿಯ ಬೇಹುದು ರಾಜಕಾರಿಯವ ॥ ೨೭ ॥ ಅದರಿನಹಿತನ ಬಲದ ಬಲುಮೆಯ । ಹದಸನಾ ಬಲದೊಳು ರಣೋತ್ಸವ । ದಧಟರನು ರಣಧಟರೊಳು ಹೆಸರುಳ್ಳ ಸಾಹಸರ ॥ ವಿದಿತ ಸಾಹಸರೊಳು ಸುಮಂತಾ । ಸ್ಪದರ ನಾ ಮಂತ್ರಜ್ಞರೊಳಗ । ಗ್ಗಳ ವಿಶುದ್ಧ ವಿವಾದ ವಿಭವರ ನರಿಯಬೇಕೆಂದ ॥೨೮॥ ಅಹುದು ಸೀಕಿಯಿದೆಂದು ಮನದಲಿ । ವಹಿಸಿ ಖಳ ಬಳಿಕ ಪ್ರಹಸ್ತನ । ವಿಹಿತ ವಚನದಮೇಲೆ ಕಳುಹಿದ ನಾಪ್ತ ಗುಪ್ತಿಕರ ॥ ಅಹಿಮುಕರ ಕುಲನೆಡೆಗೆ ಮಂತ್ರಿಯ । ಗೃಹಕೆ ಕಳುಹಿದು ತಂದೆ ಮಕ್ಕಳು । ರಹವ ಮಾಡಿದರೆಲೆ ಕುಮಾರರು ಕೇಳಿರೈಯೆಂದ ॥ ೨೯ ॥ ಭೂರಿ ಭುವನದ ಬಹಳ ಭುಜಬಲ । ಭಾರಕರು ನಾವೀ ನೆಲೆಗೆ ನಮ । ಗಾರು ಸರಿ ನಾವಂಜಲೇತಕೆ ಜಣಗು ಭೂಪಂಗೆ ॥ ವೈರದಲಿ ನಿಮ್ಮುವನು ಗೆಲಿದೀ । ನಾರಿಯನು ಕೊಂಡೊಯ್ವ ಭಟನ ವಿ । ಕಾರವನು ನಾವರಿವೆವೆನುತುಬ್ಬಿದರು ತಮ್ಮೊಳಗೆ॥೩೦॥ ನೆನೆದುದನಿತರವೇಲೆ ತನ್ನಯ । ಮನದ ಸಂಶಯ ಬೀಳುಕೊಟ್ಟನು । ವನೆಗೆ ಮಗನನು ಮಗ್ಗದಿರದಿಂದಸುರವಲ್ಲಭನ ॥ ಘನತರದ ಬಾಹುಪ್ರತಾಪದ । ವಿನುತ ದೀಪಕವೆನಲು ಬಿದ್ದುದು । ವನಧಿಯೊಳಗಿನ ಬಿಂಬ ವಂಬರದಿಂದ ಪಶ್ಚಿಮದ ॥ ॥೩೧॥

ಮೊದಲನೆಯ ಸಂಧಿ ಸಮಾಪ್ತಂ.

ಎರಡನೆಯ ಸಂಧಿ.

ಸೂಚನೆ॥ ಹಲವು ನಯನೀತಿಯಲಿ ರಾಮನ । ಲಲನೆಯನು ಬಿಡಹೇಳಲನುಜನ । ಹೊಳಲ ಹೊರವಡಿಸಿದನು ಕನಲಿದು ಕಲಿ ದಶಗ್ರೀವ ॥

ಪದ್ಯ॥ ಕೇಳಿದೈ ಕೋಸಲ ಧರಿತ್ರೀ । ಪಾಲಸುತ ಸರವಂಶ ಕುಲ ಹೃ । ಚ್ಛಾಲ ನೆದೆಯಲಿ ಹಿಳುಕಿ ಪೋರಿತು ಹಗೆಯ ಹಮ್ಮುಗೆಯು ॥ ಏಳುತೊರಗುತ ಕುಳ್ಳಿರುತ ಚಿಂ । ತಾ ಲತಾಂಗಿಯ ರತಿಯುಕ್ತ ಸಂ । ಮೇಳದಲಿ ನೂಕಿದನು ನಿಶಿಯನು ನಿಂತ ಸಿದ್ದೈಯಲಿ ॥೧॥ ಕಮಲಿನೀ ವನಿತಾ ಹಸಿತ ವಿ । ಭ್ರಮ ವಿಲೋಕನ ನನ್ಯರಜನೀ । ರಮಣಿಯ ಶಿತಾಂಬರ ನಿಕರ್ಷಣ ಕರಚಮತ್ಕಾರ ॥ ಅಸುರರಾಜ ದಿಶಾಂಗನಾರತಿ । ಸಮುಖ ಸುಪ್ಪವಣಿಸಿದ ನತಿ ಸಂ । ಭ್ರಮದಿ ನುಡಿದ ನಗೇಂದ್ರ ವಣಿಸರಿಪಾಂಕ

ಪೀಠದಲಿ॥೨॥ ಉಲಿವ ಮಂಗಳ ಪಾಠಕರ ಕಳ । ಕಳಿಕೆಯಲಿ ಮಣಿಮಯದ ಮಂಚವ ।
ಇಳಿದು ಶುಕ್ರಾಚಾರ್ಯ ಗುರು ಕಮಲಜರ ಹರಕೆಗಳ ॥ ತಳೆದು ತತ್ಕಾಲೋಚಿತದ ಸ ।
ಮ್ಮಿಳಿತ ಸತ್ಕರ್ಮ ಪ್ರಪಂಚವ । ನಳವಡಿಸಿ ಖಳ ದೇವ ಪೂಜಾಲಯಕೆ ನಡೆತಂದ॥೩
ನವವಿಧದ ಭಕ್ತಿಯಲಿ ನಿರುಪಮ । ಶಿವನ ಸರ್ವೇಶ್ವರ ಭವಾನೀ । ಧವನ ಭವನ ನಭ
ವನ ಭರ್ಗನ ಭಾಳಲೋಚನನ ॥ ದಿವಿಜಕುಲ ವಂದಿತನ ಸಾವೋ । ದ್ಭವ ಸುರಾರಿ
ಮದೇಭ ಕಂಠೀ । ರವನ ನರ್ಚಿಸಿ ಬಳಿಕ ನಡೆತಂದಿತ್ತ ನೋಲಗವ ।೪॥ ವೀರ ಕೇಳ್
ಕುಶನೆ ರಾಕ್ಷಸ । ವೀರ ನೋಲಗಕತುಳಬಲ ಜಂ । ಭಾರಿಜಿತು ಮಂತ್ರಿ ಪ್ರಹಸ್ತ
ಪ್ರಮುಖ ನಾಯಕರು ॥ ಸಾರತರ ರತ್ನಪ್ರಭಾ ಕೋ । ಟೀರ ಬದ್ಧನಿಯುದ್ಧ ಬಲು
ಜಂ । ಝೂರ ಭಟ ಕೋಟಿಗಳು ನಡೆತಂದರು ಸರಾಗದಲಿ ॥ ೫ ॥ ಮಕರ ನಯನ
ನಿಕುಂಭ ದೇವಾಂ । ತಕ ನರಾಂತಕ ಧೂಮ್ರಲೋಚನ । ಸುಕರತೇಜ ನಿಕಾಯ
ಯುದ್ಧೋನ್ಮತ್ತ ವಿರೂಪಾಕ್ಷ ॥ ಸಕಲ ರತ್ನಪ್ರಭೆ ಬೆಳಗೆ ಮಣಿ । ಮಕುಟವರ್ಧನ
ಕೋಟಿ ಬಂದುದು । ಸಕಲ ರಾಕ್ಷಸಪತಿಯ ವೋಲಗ ಕಣುಗ ಕೇಳೆಂದ ॥ ೬ ॥ ಜಡಿವ
ಖಡುಗದ ತೊಡವರಿಕೆಗಳ । ಝಡಪುಗಳ ಝಣರವದ ಕೊಡರಿಸ । ಕಡೆಯ ಹೀರಾ
ವಳಿಯ ದಿವ್ಯ ಸುಗಂಧ ಪರಿಮಳದ ॥ ಮುಡಿಯಲರ ಸುಭಟಾವಳಿಯ ವಂ । ಗಡದ
ವೈಭವ ಮಿಗಿಲೆನಲು ನು । ಗ್ಗಡಣೆಯಲಿ ಬಂದನು ವಿಭೀಷಣ ನಣ್ಣನೋಲಗಕೆ ॥೭॥
ಬಂದ ತಮ್ಮನ ನಸುರಪತಿ ಮುದ । ದಿಂದ ಮನ್ನಿಸಿ ತನ್ಮುಖಾವಳಿ । ಯಿಂದ ಪರಮ
ಸ್ನೇಹರಸ ವಚನಾನುರಾಗದಲಿ ॥ ಸಂದಣಿಪ ಕೈಸನ್ನೆಯನು ಕೆಲ । ಕೊಂದಿಸುತ
ಬಾಯಿತ್ತ ಬಾರೈ । ಯೆಂದು ಕುಳ್ಳಿರಿಸಿದನು ಕೆಲದಲಿ ತನ್ನ ಗದ್ದುಗೆಯ ॥ ೮ ॥ ಎಸೆದು
ದೋಲಗ ವಮರರಾಯನ । ಝಸಕ ಕಿಮ್ಮಿಗೆಲೆನಲು ಮಿಗೆ ರಂ । ಜಿಸುವ ಭಟರುಬ್ಬಿ
ನಲಿ ಮಣಿಭೂಷಣದ ಬೆಳಗಿನಲಿ ॥ ಕುಶನೆ ಕೇಳಾ ಸಮಯದಲಿ ರಾ । ಕ್ಷಸ ಶಿರೋ
ಮಣಿ ಮಂದಹಾಸದ । ಲಸಮವೀರರ ಮೊಗವ ನೀಕ್ಷಿಸಿ ನುಡಿದ ನಿಂತೆಂದು ॥೯॥ ನಾವು
ತಂದಂಗನೆಯ ಪತಿಗತಿ । ಹೇವ ಬಲಿದಭಿಮಾನದಲಿ ಸು । ಗ್ರೀವ ಸೈನ್ಯ ಸಮೇತ ನಡೆ
ತಂದುದುಗಡಾ ಹವಕೆ ॥ ಆವುದಿದಕನುಮಾನ ರಣಸಂ । ಭಾವನೋಚಿತ ಕಾರ್ಯದೆಣಿ
ಕೆಗೆ । ನೀವದೇನನು ಕಂಡಿರೆಂದನು ನಗುತ ದಶಕಂಠ ॥ ೧೦ ॥ ಏನ ಬೆಸಸಿದೆ ಜೀಯ
ಮನದನು । ಮಾನ ವೇನಿದಕೇನು ದೊಡ್ಡಿತು । ಹಾನಿಯಾವುದು ನಮಗೆ ಹೇಳಾ ರಾಜ
ಕಾರಿಯವ ॥ ವೈನತೇಯನ ವಿಲಗಕಹಿಕುಲ । ವಾನಲಾಪವೆ ಜೀಯ ಹೇಳದಿ । ರಾ
ನರೇಂದ್ರನನೆಂದು ಕೆದರಿತು ಕೂಡೆ ಭಟನಿಕರ ॥೧೧॥ ತಲೆಯ ತರಹೇಳಂತಕನ ಬಾ ।
ಳ್ದಲೆಯ ತರಹೇಳಜನ ವಿಠಳಕೆ । ನಿಲಿಸಹೇ ಳಮರೇಂದ್ರ ನಗರವೊಳುರಗವಲ್ಲಭನ ॥
ಹೊಳಲಿಕಿತ್ತಮರೇಂದ್ರ ನಗರದೊ । ಳಿಳಿಸಹೇಳೆಲೆ ಜೀಯ ಮತ್ತೇ । ನುಳಿದುದುಳ್ಳಡೆ
ಬೆಸಸೆನುತ ಝಳಪಿಸಿದ ರುಬ್ಬಣವ ॥೧೨॥ ಅಸುರಪತಿ ಚಿತ್ತೈಸು ಕಾಲಂ । ಗಸದಳದ
ಕಲ್ಪಾಂತರುದ್ರನ । ವಿಷಮ ನಯನಜ್ವಾಲೆ ಗಳುಕದ ವೀರಭಟರೊಡನೆ ॥ ಉಸುರ
ಬಹುದೇ ಜೀಯ ಹುಲು ಮಾ । ನಸನ ಮೃದುರಣರಾಜಕಾರ್ಯಕೆ । ನಿಶಿತ ಕರ್ಕಶ ವೀರ
ದೊಳಗೆಂದಿಂದ್ರಜಿತು ನುಡಿದ ॥೧೩॥ ಈತಗಳ ಪರಿಯಂತಲೇತಕೆ । ತಾತ ಕೇಳ್ ತವ
ಛತ್ರಧರನಿಕ । ರಾತಿ ನರ ಮೃಗವಿಂಡ ಬೆದರಿಸಿ ಬೀಳಗೆಡಹಿಸುವೆ ॥ ಸೀತೆ ದೇವರಿ

ಗೊಲಿವುಪಾಯದ | ಮಾತನಾಡುವದಲ್ಲದೀನುಡಿ | ಯೇತಕೀಯಾಸ್ಥಾನದೊಳಗೆಂದೊಗಿಸಿದನು ನಗೆಯು | ೧೪ || ಅವನ ಹಾಸ್ಯರಸೋಕ್ತಿ ವಿಮಲ | ಶ್ರವಣ ಪಥದಲಿ ಬೀಳೆ ಭುಗಿಲೆಂ | ದನತರಿಸಿದವು ಕೋಪಶಿಖಿ ಮುಖಮಂಡಲಾಗ್ರದಲಿ || ಖವಖವಿಸಿ ನಗುತಾ ವಿಭೀಷಣ | ನನಯುವವ ನೊಲದೊಲದಿದೇನೆಲೆ | ನಮಗೆ ತಿಳಿಯದು ತಿಳಿಯ ಹೇಳ್ವಾವ್ ಕೇಳಬೇಕೆಂದ ||೧೫|| ಖರೆಯನಹೆ ಯಾವಾಪರಾಕ್ರಮ | ಭರಿತನಲ್ಲಾ ನೀನು ನಿನ್ನಯ | ಪರಿನಮಗೆ ನೂತನವೆ ನಾವಿದಕಾಣೆ ಯಡಲೇಕೆ || ಧೀರೆಗಳಿವರೇ ನರಿಯರೇಕ | ಣ್ಗುರುಡರೇ ನಾಶಮವು ರಿಪುನೃಪ | ಚರನ ಕದನದೆ ಹೊದಗಿದವ ನೀನಲ್ಲದೆರೆಂದ |೧೬|| ಇವರು ಪರಿಯಂತೇಕೆ ಸತ್ತಿಗೆ | ಯವರು ಸಾವದೆ ಯೆಂಬ ಸಾಹಸ | ದವಗಡೆಯುತನ ವಾರಿಗುಂಟೇನೆರೆದ ಭಟರೊಳಗೆ || ಅವದಿರೇ ಹೊಗಳುವರು ಬಗುಳುವ | ನಿವನೆ ಶಿವಶಿವ ಮರುಳುಗೀತಕೆ | ಕಿವಿಯಗೊಟ್ಟರೆ ಮರುಳು ತಲೆದೂಗುವವೊಲಾಯ್ತೆಂದ||೧೭|| ತರಳತನ ಮೇಲುಬ್ಬುಗೊಬ್ಬಿನ | ಭರದ ಜವ್ವನ ಸುಪ್ರತಾಪೋ| ಜ್ವಲದ ತಾಮಸ ವದರ ನೀಲಾಸುರ ಕುಲಾತಿಶಯ || ದೋಕಲಿವು ಬಳಿಕೇನು ಬಾಯಿಗೆ | ಬರವಿಹುದೆ ತಾ ಹೆಚ್ಚಿ ಬಗುಳುವ | ದರಿದೆ ನೆನೆಯಾ ನಿನ್ನ ರಣಸಂಗತಿಯ ನೀನೆಂದ ||೧೮|| ಈ ಮಹಾಬಲ ಕುಂಭಯಾನಿ | ಸ್ಸೀಮ ದೇವಾಂತಕ ನರಾಂತಕ | ಯಾಮಹೋದರ ವಜ್ರದಂಷ್ಟ್ರ ಪ್ರಮುಖ ನಾಯಕರು || ಈ ಮಹಾ ನಗರವನು ಮಾರುತಿ ಹೋಮಗೈವಂದೇನ ಮಾಡಿದಿ | ರೀ ಮದಿರ ಪಾಪಿಗಳ ಮಾತೇಕರಸ ನಿನಗೆಂದ ||೧೯|| ಅಕ್ಷ ಮೊದಲಾದತುಳ ಭುಜಬಲ | ರಾಕ್ಷಸರ ರಣರಂಗ ದಿಳೆಯಲಿ | ಶಿಕ್ಷಿಗಳ ಬಗಿದಸುವ ನುಗಿದ ಕಪೀಂದ, ನಿದಿರಿನಲಿ || ಯಕ್ಷಗಂಧರ್ವಾಮರೇಂದ್ರರ | ಶಿಕ್ಷಿಸಿದ ಬಲುಪ ನಿದನಾಶ್ರಯ | ಭಕ್ಷಣದೆ ಒಳಾ ಭೋಜನದೊಳೇನಾಯ್ತು ಹೇಳೆಂದ ||೨೦|| ಅಣ್ಣ ಕೇಳೀತಗಳ ಮಾತಿನ | ಒಣ್ಣಣೆಗಳಂತಿರಲಿ ಭೂಮಿಯ | ತಿಣ್ಣವನು ತಿದ್ದಲಿಕೆ ಹರಿ ನರನಾಗಿ ರೂಪಿಸಿದ || ಹೆಣ್ಣನೆವದಲಿ ನಮ್ಮನೆಲ್ಲರ | ಮಣ್ಣುಗೂಡಲಿ ಬಂದನಾವಿ | ನ್ನಣ್ಣ ದುರಿಯಲುಜೇಡ ಸೀತೆಯನಿತ್ತು ಬದುಕೆಂದ ||೨೧|| ಏಕೆ ನಿನಗೀಭ್ರಮೆ ವಿದೇಹಜೆ | ಸೋಕುವವಳಲ್ಲರಸ ನೀನವಿ | ವೇಕಿಯಾಗದಿರೀ ಮದೋನ್ಮತ್ತರುಗಳುಬ್ಬಿದರೆ || ಆ ಕಕುಸ್ಥಜ ಮನುಜನಲ್ಲ | ವನೌಕಸರು ಮೃಗವಲ್ಲ ತಾನಿದು | ಲೋಕಕಂಟಕ ರಳಿವಗೊಡ್ಡಿದ ಬೀಸುವಲೆಯೆಂದ || ೨೨ || ಅರಿಯಬಾರದೆ ನಿನಗೆ ನಿನ್ನನು | ಜರೆದ ಹರ ಕೋದಂಡವನು ಜಗ | ವರಿಯೆ ಮುರಿದವನಿಜೆಯ ಪರಿಣಯವಾದ ಪದ್ಧತಿಯ || ಕಿರಿಯತನದಲಿ ತಾಟಕಿಯ ತಲೆ | ಗುರಿಯಮಾಡಿದ ಹದನನಾ ಪೊ | ಮ್ಮರಿಯ ರೂಹಿನ ರಕ್ಕಸನ ನಿಕ್ಕಿದುದ ನೆನೆಯೆಂದ ||೨೩|| ಖರನು ಸಾಮಾನ್ಯನೆ ಖರಾನುಜ | ಹುರುಳುಗೇಡಿಯೆ ದೂಷಣಾಸುರ | ಧುರದಪಂದ್ರನೆ ಬಣಗನೇ ಭುಜಶೌರ್ಯದಲಿ ವಾಲಿ || ಅರಸಕೇಳಾ ಶೂರ್ಪನಖಿ ಬಡ | ತರುಣಿಯೇ ತೊಳಸಾಟವಿದು ಗೋ | ಚರಿಸಲರಿಯದು ಗೋಪಿ ನೀಧವನೊಡನೆ ನಿನಗೆಂದ || ೨೪ || ಕುಲದಲಲ್ಪನೇ ನೀನು ಮುನಿಕುಲ | ತಿಲಕ ಪೌಲಸ್ತ್ಯಜನಲಾ ನಡ | ವಳಿಯೊಳಧಮನೆ ನೀನು ಶಿವಪೂಜಾಪ್ರಸಿದ್ಧನಲ || ತಿಳುಹಿನಲಿ ಬರಡನೆ ಬಹುಶ್ರುತಿ | ಗಳು ಮುಖೋದ್ಗತವಕಟ ನಿನಗೀ | ತಿಳಿಯ ಜಾರರ ಜೋಲಿ ಬಿಡು ಜಾನಕಿಯ ನೀನೆಂದ || ೨೫ || ಜಾರೆಯೋ ಜಾನಕಿ ಬಗ

ತ್ರಿಯು | ವೀರಪಾತಿವ್ರತ್ಯೆಯುಳ್ಳ ನರ | ನಾರಿಯೇ ವೈದೇಹಿ ನಾರಾಯಣನ ಪತ್ನಿಯೆಲ ||
ತ್ರೀರಮಣಿ ಚಂಚಲೆಕಣಾ ಕೈ | ಸಾರಿದಳು ನಿನಗೆಂಬ ಮನದ ವಿ | ಕಾರವೇಕೆಲೆಯಣ್ಣ
ಬಿಡು ಜಾನಕಿಯ ನೀನೆಂದ ||೨೬|| ಮರುಳು ಹತ್ತಿತೆ ತಮ್ಮ ನೆರೆ ನಿ | ಷ್ಠುರತೆ ನಿನಗೇ
ಕೆನಿತು ಭಟರಂ | ತರವ ನರಿಯದೆ ನುಡಿವರೇ ಗರ್ವಾಪಹಾಸ್ಯದಲಿ || ಹರದು ನಮ್ಮೊಡ
ನಂಜಿಕೆಯ ನೀ | ಹರಹಿ ಮಾತಾಡುವುದು ತಾಸಿದು | ಗರುವರಂಗವೆ ಗಾರುಗೆಡುವುದು
ಗುಣವೆ ಹೇಳೆಂದ ||೨೭|| ಗಾರುಗೆಡುವವನೇ ವಿವೇಕದ | ಚೌರುಗಂಡಿಯ ಜಣಗನೀ
ಖತಿ | ಯೇರಿಸಿಯೆ ಭಟರುಬ್ಬಿನುಡಿದರೆ ಹಿತವರೇ ನಿನಗೆ || ತೋರುವೀ ಸಚರಾಚರದ
ವೈ | ದೋರಿಕೆಯ ಮಹಿಮನು ಕಣಾ ಮತಿ | ದೋರದಕಟಾ ನಿನಗೆ ನೀನೇ ನೋಡಿ
ಕೋಯೆಂದ ||೨೮|| ಮನುಜನಲ್ಲಕಣಾ ರಘುಕ್ಷಿತಿ | ಜನಪ ಹರಿಯಾದಿಯ ಚರಾಚರ |
ವನರುಮುಖವಲಿ ತೀರಲುಬ್ಬಿತು ನೀರು ನೀರಿನಲಿ || ವನರುಹಾಂಬಕನಿರಲು ಕಿವಿ
ಯಲಿ | ಜನಿಸಿದರು ಮಧುಕೈಟಭರು ಮದ | ಜನಿತ ಗರ್ವದ ಳಳಿದರವರೆಲೆ ಅಣ್ಣ
ಕೇಳೆಂದ ||೨೯|| ಅರಿದು ನಾಭೀ ಕಮಲದಲಿ ಕಂ | ದೆರೆದ ಕಮಲಭವಂಗೆ ಸೇರಿತು |
ನೆರೆಚತುರ್ದಶ ಭುವನದುದ್ಭವದಾಧಿಪತ್ಯತನ || ಅರಿಕೆಯೇ ಪ್ರಾಧಾನ್ಯ ಹರಿಯಿಂ |
ದರಿದು ಬದುಕಿದ ರವದಿರೂಟವ | ಕುರಿಗಳಾದರು ಮೃತ್ಯುದೇವತೆಗೆಂದನಸುರೇಂದ್ರ ||
ಕೃತಯುಗದೊಳಜನೊಡನೆ ಗರ್ವಿಸಿ | ಶ್ರುತಿಯ ಕದ್ದೊಯ್ದವನ ಮತ್ಸ್ಯ | ಕೃತಿಯ
ಲಳಿದನು ತಳೆದನಂಬುಧಿ ಮಥನದಲಿ ಗಿರಿಯ || ಕ್ರತುಭುಜರ ರಕ್ಷಿಸಲು ಕೂರ್ಮಾ |
ಕೃತಿಯ ಲವನಿಯ ಕದ್ದ ತಳಕಿಳಿ | ದತುಳಬಲ ಖಳರಸುವ ನುಗಿದನು ಕ್ರೋಡ
ರೂಪಿನಲಿ ||೩೧|| ಶಿಶುವ ಸಲಹಿದ ಸುರವಿರೋಧಿಯ | ಬಸುರ ಬಗಿದೆಳಗರುಳನುಗು
ರಲಿ | ಹಿಸಿದು ಕೊರಳಲಿ ಹಾಯ್ಕಿದನು ನರಹರಿಯ ರೂಪಿನಲಿ || ವಸುಧೆಗತಿಶಯ
ವೆನಲು ಮಿಗೆ ಗ | ರ್ವಿಸಿದ ಬಲಿಯನು ಬಿಗಿಬಿಗಿದು ಬಂ | ಧಿಸಿದನೀ ರಘುರಾಮ
ವಾಮನನಾಗಿ ಜಗವರಿಯೆ || ೩೨ || ಹೆಚ್ಚಿದವನೀಭಾರವನು ಮಿಗೆ | ಕೊಚ್ಚಿದನು
ಕೊಡಲಿಯಲಿ ವಿಪ್ರರ | ಹೆಚ್ಚಿಸಿದನೀ ರಾಮ ಭಾರ್ಗವರಾಮ ನಾಮದಲಿ || ಮುಚ್ಚು
ಮರೆಯೇ ಕಣ್ಣ ತಿಣ್ಣದ | ಕಿಚ್ಚುದೋರಿದ ಬಳಿಕ ನಾವಿ | ನ್ನೆಚ್ಚರವಪಡೆ ಸಮಯ
ಸೀತೆಯನಿತ್ತು ಬದುಕೆಂದ || ೩೩ || ನಿನಗೆ ನಾಚಿಕೆಯಾದಡದಕೇ | ನೆನಗೆ ನೇಮಿಸು
ಭುವನಮಾತೆಯ | ನಿನಕುಲೇಂದ್ರಂಗಿತ್ತು ಮನ್ನಿಸಿಕೊಂಡು ಬಹೆ ಬಳಿಕ || ನಿನಗೆ
ಜಗದಲಿ ಕೀರ್ತಿಕೈದರವ | ವನಜ ಸಖಕುಳನ್ನ ಬರದು | ರ್ಜನರ ಗರುಡಿಯೊಳಾಡ
ಬೇಡಸುರೇಂದ್ರ ಕೇಳೆಂದ || ೩೪ || ಏನೆಲವೊ ನೀನಿನಿತು ಹೊಗಳುವ | ಡೇನಹನು
ನಿನಗಾ ನರೇಂದ್ರನು | ಸೂನುವೋ ಮೊಮ್ಮಗನೋ ಮರಿಮಗನೋ ಸಿಥಾನಿಸಲು ||
ಹಾನಿ ಹಿಂದಣಹಿಂದೆಗರಿ ಗಾ | ದಾನುಡಿಯ ನುಡಿವೆನ್ನ ನಂಬಿಸಿ | ಜಾನಕಿಯ ನೀ ಬಿಡಿ
ಸುವವನೇ ಭ್ರಷ್ಟ ಹೋಗೆಂದ || ೩೫ || ಬಲ್ಲೆವಾವ್ ಸಾಕಿನ್ನು ನಿನ್ನಯ | ಬಲ್ಲವಿಕೆ
ಬಾಯ್ ಬಡಿಯದಿರು ರಣ | ಮಲ್ಲರಿವರಿಂದಿರಿನಲಿ ನಿನ್ನನು ಕರೆದು ಕೇಳಿದೆವೆ || ಬಲುಹು
ಗೆಡಿಸುವ ಚಂಡ ಚಪಪಟ | ಮಲ್ಲ ಚಾಪಲ ವಿದ್ಯಪಿದು ನ | ಮ್ಮಲ್ಲಿ ಸಲ್ಲದು ಸಾಕು
ಗಳಹದೆ ಕೆಲಕೆ ಸಾರೆಂದ || ೩೬ || ಗಳಹುವವ ನಾನೇನೆ ಮಾರ್ಗ | ಸ್ಥಳದ ತಾಮಸ
ನಿನ್ನ ಹೃದಯಕೆ | ನಿಳಯವಾಗಿದೆ ನೀತಿಗೇಡುಗರಂಗ ನಿನಗಾಯ್ತು || ನಳಿನನಾಭನ

ಕೊಡೆ ವೈರವ | ಬೆಳಸಿಕೆಟ್ಟೆ ನಿರರ್ಥ ನೀನಿ | ನ್ನಳಿವುಪಾಯುವ ಕಾಣೆನಿದು ಸಿದ್ಧಾಂತ
ಮತವೆಂದ || ೩೭ || ಓತನ ನುಡಿವರು ಮುಂದೆ ಹಿಂದಪ | ಗೃತಿಯು ನೆಣಿಸುವರಿದುವೆ
ಕುಜನರ | ಕೃತಕ ಬೇಡಕಟಕಟ ಸಾರಿದೆ ಬಿಡು ಮಹೀಸುತೆಯ || ಶೃತಿಮತವಿದೀ
ಗಜ್ಞಾತರ ದನು | ಚಿತವ ನಂಗೀಕರಿಸುವಡೆ ಅ | ಚ್ಯುತನ ಪದವಿಯ ಕೇಳು ಹೇಳುವೆ
ನೆಂದನಸುರೇಂದ್ರ ||೩೮|| ಆದಡಾತನ ಮುಖದ ಲಮರೇಂ | ದ್ರಾದಿ ದೇವರು ನಯನ
ದಲಿ ರವಿ | ಪಾದದಲಿ ಭೂದೇವಿ ಮನಸಿನಲಿಂದು ಕಿವಿಗಳಲಿ || ಆದಿಶಾವಳಿ ನಾಭಿಯಲಿ
ನಭ| ನಾದುದುಚ್ಛ್ವಾಸದಲಿ ಮಾರುತ | ನಾದ ಡವತರಿಸಿದುದು ಸಿರದಲಿ ಸುರರ ಜಗ
ವೆಂದ || ೩೯ || ಶರಧಿ ನಿದ್ರೆಯೊಳಾಯ್ತು ಮಾಯಾ | ತರುಣಿ ನಗೆಯಲಿ ಜನಿಸಿದಳು
ಸರ | ಸಿರುಹಭವನುದಿಸಿದನು ನಾಭೀಕಮಲ ಮಧ್ಯದಲಿ || ಸ್ಫುರದ ರೂಪು ರಸಾದಿ
ಭುವನದ | ನೆರವಿ ನೆನಹಿನೊಳಾಯ್ತು ತೋರಿದ | ವರಸಕೇಳ್ ನಾಮತ್ರಯದ ರೂಪ
ಕವು ಬಳಿಕೆಂದ ||೪೦|| ಶೃತಿಗಳೀತನನಾತು ವಿಮಲ | ಸ್ಮೃತಿಗಳೀತನ ಶಿಕ್ಷೆ ಜೀವ |
ಪ್ರತತಿ ಯೀತನ ಸೂತ್ರವಾಟದ ಬೊಂಬೆ ಯೀಜಗದ || ಸ್ಥಿತಿಲಯೋದಯವಿವು ನಿಜ
ಭ್ರೂ | ಲತೆ ವಿಲಾಸಪ್ರೌಢಿಮ್ನಾ | ಸ್ಥಿತಿಗೆ ರಾವನು ಕಾಣೆ ತಾಮಸವೇಕೆ ನಿನಗೆಂದ ||
ಇಳಿದುದಿಲ್ಲೀತನ ವಿರೋಧದ | ಲಳಿವುದಿಲ್ಲೊಲುಮೆಯಲಿ ಶೃತಿಮತ | ದುಲುಹ್ಯ
ಶಾನಿದು ನಿಗ್ರಹಾನುಗ್ರಹ ಮಹಾಶಕ್ತಿ || ಉಳಿದ ದೇವರಿಗುಂಟೆ ನಿನ್ನಳ | ಬಳವ
ನೀತಾನರಿಯೆ ಕೆಡಬೇ | ಡಿಳೆಯಮಗಳನು ಕೊಟ್ಟು ಸುಖಿಯಾಗೆಂದ ನಗ್ರಜಗೆ ||೪೧||
ಎಲವೊ ನೀನೀಗೆಂದ ದೈವದ | ತಲೆವಿಡಿದು ಪಾದಾಂತಪರಿಯಂ | ತಿಳಿದ ದೇವ
ಸಮೂಹ ನಂಟರೋ ಭಂಟರೋ ತನಗೆ || ತಿಳಿಯಲೀ ಭುವನಂಗಳೊಡೆತನ | ಕೆಲ
ರದೋ ತನ್ನದೋ ವಿಚಾರಿಸಿ | ಗಳಹದಾದೆ ಗಯಾಳವಿದ್ಯವ ನಮ್ಮಕೂಡೆಂದ ||೪೨||
ಆದಡೆಲೆ ಖಳರಾಯ ಕೇಳ್ ಖರ | ಸೂದನನ ಸೂರ್ಯಾನ್ವಯನ ಸಂ | ಪಾದಕದ ಶರ
ಪರಶು ಸಿನ್ನಯ ಕೊರಳ ಹಳುವದಲಿ || ಬೀದಿವರಿವುದು ಪುತ್ರ ಮಿತ್ರ ಸ | ಹೋದ
ರರು ಸಾವರು ನೃಪಾಲ ತ | ಳೋದರಿಯ ನೀನಿಯ್ಯದಿರೆ ನಿಶ್ಚಯವಿದೀಗೆಂದ || ೪೪ ||
ಬೀಳಲಾನುಡಿ ಕರ್ನದಲಿ ಲಯ | ಭಾಳನೇತ್ರನ ಭೀಮರೌದ್ರ ಕ | ರಾಳಕಿಡಿಗ್ಗಿಲಿ
ನಲು ಸುರಿದವು ಕಂಗಳಲಿ ಕಿಡಿಯು || ಬೀಳ ಹೊಯ್ಯೊಯ್ಯೊಯ್ಯ ಬೊಗುಳುವ | ನಾಲ
ಗೆಯ ಕೊಯ್ಯಾಲ ಹಿಡಿದೆಳೆ | ಕಾಳಮಾಳನ ನೆನುತ ಝಡಿದನು ಚಂದ್ರಹಾಸಕವ ||
ಕೊರಳ ಕಡಿತದ ಲಾಡುವುದುಗಡ | ಧರಣಿಜೆಯ ಬಿಡದಿರಲು ರಾಮನ | ಸರಳು ಸೋ
ದರ ಪುತ್ರ ಮಿತ್ರಜ್ಞಾತಿ ಬಾಂಧವರ | ಹರಣವನು ಹೋಗಾಡುವುದು ಗಡ | ಹರ
ಮಹಾದೇವಿವನ ಬಾಯನು | ಹರಿಯಕೊಯ್ವವರಿಲ್ಲಲಾ ಯೆನುತಸುರ ನಳವಳಿದ||೪೬||
ಕೊಲ್ಲುವೆನೆ ಕೈಕಸೆಯ ಬಸುರಿಂ | ದಿಳಿದನೆಂಬೀ ಬಿಡೆಯ ಜಿಹ್ವೆಯ | ನಿಳಿಯನೊ
ಯ್ವನೆ ಸೈರಿಸಲ್ ಬೇಕಪಜಯ ಸ್ಥಿತಿಯ || ತಲೆಯ ಹಿಡಿದೀನಾಯ ನಮ್ಮಯ |
ಕೊಳಲ ಹೊರವಡಿಸೆಂದು ಹರಿಹೆಯ | ನಳವ ಮುರಿದಸುರರಿಗೆ ನೇಮಿಸಿ ನೂಕು
ನೂಕೆಂದ ||೪೭|| ನೂಕಲೇತಲೆ ನಮ್ಮ ನಾವೇ | ಸೂಕಿಕೊಂಬೆವೆನುತ್ತ ಸುಜನ ಜ |
ನೈಕ ಚೂಡಾಮಣಿ ಮಹೋತ್ಸವದಳಿದು ಮನದೊಳಗೆ || ಶ್ರೀಕುಚಾಗ್ರ ಸುಕುಂಕುಮಾಂ
ಕಿತ | ಸೌಕುಮಾರಸ್ಥಲನ ಸಾಲೋ | ಕೈಕವಂದ್ಯನ ನೆನೆವುತಾ ಸಭೆಯಿಂದ ಹೊರ

ವಂಟ ॥ ೪೮ ॥ ಎಲವೊ ನೀನೀ ಮುನಿದಕೈಯ್ಯಲಿ । ಕಲಹಕಾ ರಾಘವನ ತಾರದೆ ।
ತೊಲಗಿದರೆ ನಿನ್ನಂದದಸುರನ ಹಿಂದೆ ಹರಿದೆಯುಲ ॥ ತಿಳುಹಿ ನಿನ್ನನು ತಂದನಾದಡೆ ।
ಬಳಿಕ ತನಗದು ಸೂರುಳೆಂದೆತ । ಬಲದ ವಲಕೈ ಹೊಯ್ದು ವುಬ್ಬಿದ ನಗೆಯು ಲಸು
ರೇಂದ್ರ ॥ ೪೯ ॥ ಆಗಲದಕೇನೆವಗೆ ನಿಮ್ಮವೊ । ಲಾಗದಿರ ದಾಯತಿಕೆ ನೀವ । ಭ್ಯಾಗ
ಮಿಕ ರರಿಗಳಲಿ ನಾವೇ ಶರಣಾಗತಿಕರೆಲೆ ॥ ಮೇಗೆ ಬರಲದರಿಂದ ಬಂದಾದ । ಭೋಗ
ಸುವೆ ಯೆನುತೊತ್ತ ಬರವ ಏ । ರಾಗದಲಿ ಹರಿ ಶರಣ ಬಂದನು ತಾಯ ಮಂದಿರಕೆ ॥
ಮಗನೆ ಬಂದ್ಯೆ ಕೇಳಿದೆನು ಹೆ । ಮ್ಮಗನು ನುಡಿದ ದುರುಕ್ತಿಗಳ ಮತಿ । ನಿಗರನಿನ್ನದು
ಮರೆಯೊಗುವಡಿದು ಸಮಯ ರಾಘವನ ॥ ಅಗಲದಾಯುವು ಸಿರಿಯ ಸುಖವನು
ಹೊಗಿಸುವನು ನಿನ್ನೊಳಗೆ ನೀನೆಮ । ಗೊಗಿಸಿ ತಿಲಸಲಿಲಾಂಜಲಿಯ ನೆಂದಪ್ಪಿದಳು
ಮಗನ ॥ ೫೦ ॥ ಇಂದವರೆ ನಡೆಯೆಂದು ಕಂಬನಿ । ದಂದು ವೋಹದಿ ಮಗನ ಬೀ
ಳ್ಕೊಡೆ । ಸಂದಣಿಸು ವಶ್ಯಗಳ ಲಂಘ್ರಿಗೆ ನಮಿಸಿಮಣಿಮಯದ ॥ ಸ್ಯಂದನವನೇರಿ
ದನು ಬಳಿಕರ । ವಿಂದನಾಭನ ನೆನೆದು ನಗುತ । ಲ್ಲಿಂದ ನಭಕುಪ್ಪರಿಸಿದನು ನಿಜಭಾವ
ಶುದ್ಧಿಯಲಿ ॥ ೫೧ ॥ ನುಡಿವವಿನ್ನೊಮ್ಮೆಗೆ ಕರಳ್ಗಳು । ತೊಡಕಿಕೊಂಡಿಹವಾಗಿ ನಮ್ಮಯ ।
ನುಡಿಗಳೀ ಸರಳಾಗಿ ಮಗುಳಿಮ್ಮಡಿಸಿ ನೂಕದಲೆ ॥ ಕಡೆಗೆ ಕಮಲಸಖಾನ್ವಯನ ಮೆ ।
ಲ್ಲಡಿಗಳೇ ಗತಿಯೆನುತ ಗಗನದ । ನಡೆಯರಥದಲಿ ಬಂದನಣ್ಣನ ಸಭೆಯ ಸರಿಸದಲಿ ॥
ಹೋಗ ಹೇಳವನೇಕೆ ಬಂದನು । ಬಾಗಿಲಲಿ ಹೊಗಲಿಸದಿರಿ ಯೆನೆ । ಕೈಗದಿಗೆಗಳ
ಖಳರು ತರುಬಿದರಾ ವಿಭೀಷಣನ ॥ ನೀಗಲವರಸುಗಳನು ಗದೆಯಲಿ । ತಾಗಿಸುತ ತನ್ನ
ವಗೆ ನುಡಿದನು । ಕೂಗಿವಾರಿಯ ಕರೆದುಕೊಂಬುದು ಕಣೆಯ ನಲ್ಲೆಂದ ॥ ೫೨ ॥
ಬಿಡುವುದೊಳ್ಳಿತು ಸೀತೆಯನು ಕೈ । ವಿಡಿವುದೊಳ್ಳಿತು ಕೀರ್ತಿ ಕಾಂತೆಯ । ಕೊಡುವು
ದೊಳ್ಳಿತು ತೀರಿಕೆಯ ಭವಭವದ ಕಿಲ್ಬಿಷವ ॥ ನುಡಿಯದೀಗ ಸಮಸ್ತಸಿಗಮದ ।
ನುಡಿಯದೆಂದರಿ ಬೇಡಮೇಣ್ ಕೆಡ । ಬೇಡ ಕೊಡಬೇಡುಂಗುರವ ಲಯಭಾವಿಸಿಗೆ
ನೀನೆಂದ ॥ ೫೩ ॥ ಹೇಳಿಕರದೆವೆ ತನ್ನನಾಯ ವೊ । ಲೂಳದತ್ತಲೆ ಹೋಗಹೇಳೆಂ । ದಾಳಿ
ಕಾರರ ಕಂಡು ಘರ್ಜಿಸಿಯ್ಯೆಸಲೀ ಯೆನುತ ॥ ಭಾಳದಲಿ ಬೆರಳಿಟ್ಟು ಕರ್ವರ್ಘ । ಲಾಳಿ
ತಪ್ಪದೆನುತ್ತ ವೈಷ್ಣವ । ಮೌಳಿ ಮಣಿಮುರಿದಿಳಿದನಾ ಲಂಕಾ ಮಹಾಪುರವ ॥ ೫೪ ॥
ಆ ವಿಭೀಷಣ ನಗಲಿಕೆಗೆ ಕೇ । ಳ್ಕೆ ವಿಭಾಕರ ಕುಲಜ ಲಂಕಾ । ಶ್ರೀವನಿತೆ ಚಿಮ್ಮಿದ
ಳುಗುರಲಿಮ್ಮಡಿದು ಕಂಬನಿಯ ॥ ರಾವಣನ ಬಾಹುಪ್ರತಾಪದ । ದೀವಿಗೆಯ ಕಡಬತ್ತಿ
ಸಿಡಿದವೊ । ಲಾವಿಯ ದ್ಭಾಗದಲಿ ಮೆರೆದುದು ಬಿಂಬವಿನಮಣಿಯ ॥ ॥ ೫೫ ॥

ಎರಡನೆಯ ಸಂಧಿ ಸಮಾಪ್ತಂ.

ಮೂರನೆಯ ಸಂಧಿ.

ಸೂಚನೆ । ಶರಣುಹೊಕ್ಕ ವಿಭೀಷಣನ ಪತಿ । ಕರಿಸಿ ಲಂಕಾವನಿಯ ಜನಪದ ।
ದರಸುತನವನು ಕೊಟ್ಟು ಮನ್ನಿಸಿದನು ಮಹೀರಮಣ ॥

ಪದ್ಯ॥ ಕೇಳಿದೈ ರಘುವಂಶ ಲಕ್ಷ್ಮೀ । ಲೋಲಸುತ ಭವಕೋಟಲೆಯು ಕೈ । ಗೋಳ ಕಳಚಿನ ಕಲೆವಿಭೀಷಣದೇವ ನಿರ್ಗಮವ ॥ ಕೇಳಿಬಂದರು ತನ್ನ ಪೂರ್ವದ । ನಾಲುವರು ಮಂತ್ರಿಗಳ ಬಳಿವಿಡಿ । ದೋಲಗಿಪ ಚಾತುರ್ವಿಧದ ಪುರುಷಾರ್ಥದಂದದಲಿ ॥೧॥ ದಾಟಿವನು ಲವಕೇಳು ಘೋರ ನಿ । ಶಾಟ ಭವಕಲ ಷಾಂಬುಧಿಯ ನುರೆ । ದಾಟುವಂತೆ ಸಮುದ್ರವನು ಶತಯೋಜನಾಂತರವ ॥ ಸಾಟಿಯಾರೀತಂಗೆ ಪೂರ್ವದ । ಕೂಟ ದುತ್ತಮ ವೈಷ್ಣವರೊಳಿಂ । ದಾಟದಲಿ ನಾರದನು ನರ್ತಿಸಿದನು ನಭೋಂಗ್ರದಲಿ॥೨ ಹರಿಬಲಾಂಬುಧಿ ಪಾಲ್ಗಡಲ ವೈ । ಸಿರಿಯುವೊಲು ರಘುರಾಮ ಲಕ್ಷ್ಮೀ । ವಸನವೊಲು ಭುಜಲಕ್ಷ್ಮಿ ಲಕ್ಷ್ಮೀದೇವಿಯಂದದಲಿ ॥ ವರಸುಮಿತ್ರಾಸೂನು ಶೇಷನ । ಪರಮವೈಭವದಂತೆ ಮಾರುತಿ । ಗರುಡನವೊಲೆಸೆದಿರ್ದ ನಿದಿರಿನಲಾ ವಿಭೀಷಣನ॥೩॥ ಒರೆದ ಸದ್ಯೋಜಾತ ಘನತ । ತ್ಪುರುಷ ನಿರ್ಮಳ ವಾಮದೇವ । ಸ್ಫುರಿತ ಘೋರಮಹಾ ಮಹೇಶಾನ ಪ್ರವಿಸ್ತರದ ॥ ಹರನವೊಲು ನಾಲ್ದೆಸೆಯ ಮಂತ್ರೀ । ಶ್ವರರು ಸಹಿತ ವಿಭೀಷಣನು ಭಾ । ಸುರತೆ ಮಿಗಿಲೆಸೆದಿರ್ದನಾ ಕಪಿಬಲದ ಕಣ್ಮನಕೆ ॥೪॥ ಅವಧರಿಸು ನೃಪಸೂನು ವಸವೈ । ಷ್ಣವದ ವಿಮಳಪ್ರಭೆಗೆ ಭುವನದೊ । ಳವಧಿಯಾವುದು ಮುಸುಕಿಕೊಂಡುದು ನಿಮ್ಮನರಸೇನೆ ॥ ತವಕದಲಿ ತುದಿಪಾಳೆಯದ ಕಪಿ । ನಿವಹ ಖೋಯೆಂದೆದ್ದು ಮುತ್ತಿದ । ರವನಿಜೌಘದ ಲಧಿಕ ನಾರಾಯಣ ಪರಾಯಣನ ॥೫॥ ಶರಣುಜನ ಸುರಧೇನು ಸುಧೆಯಾ । ಕರಸದಾರ್ತಜನೌಘರಕ್ಷ್ರ । ಕರ ಕೃಪಾಕರ ದೇವ ದೀನಾ ನತಜನೋದ್ಧರಣ ॥ ಶರಣು ಸರ್ವೇಶ್ವರ ಸನಾಥನೆ । ಶರಣು ಸದ್ಗುಣ ಧಾರ್ಮಿಕ ಶೃತಿ । ಶರಣು ರಘುಪತಿ ಶರಣು ಶರಣೆನುತಿರ್ದ ನಸುರೇಂದ್ರ ॥೬॥ ಶೃತಿಶಿರೋಮಣಿ ಶರಣು ಶರಣು । ಪ್ರತಿನು ಶರಣು ಸಮಸ್ತ ದೇವ । ಪ್ರತತಿ ವಂದಿತ ಶರಣು ಸನಕಾದ್ಯಖಿಳ ಮುನಿನಿಕರ॥ ನುತಜನೋ ವಿಸ್ತರಣ ಶರಣಾ । ಗತ ಸಮಸ್ತ ಮನೋಭಿವಾಂಛಿತ । ವಿತತ ವರದಾನಂದ ಬಂಧುರ ದೇವ ಶರಣೆಂದ ॥೭॥ ಶರಣಾ ಶರಣೆಂದೊದರಲಾ ಹರಿ । ಶರಣನೆಂಬಬಿಧಾನವನು ವಿ । ಸ್ತರಿಸಿದರು ಸನಕಾದಿಗಳು ಸಜ್ಜನ ಶಿರೋಮಣಿಗೆ ॥ ಸುರರು ಗುಡಿಗಟ್ಟಿದರು ಮುತ್ತಿದ । ತರುಚರರು ಹಿಸ್ಮ್ರಿದರು ಹರಿ । ಶಿರಿ ಪರಾಯಣರೇನು ಜಗದಲಿ ಧನ್ಯರೋಯೆಂದು ॥೮॥ ಪೊಗದು ಹೊಗಳುವ ಶೃತಿತತಿಯ ನಾ । ಲಿಸದ ದೈವದ ಕರ್ಣದಲಿ ಸೊಗ । ಯಿಸಿತಲ್ಲೈ ಶರಣ ವಸುಧಾಸಂಭೃತ ವಚೋಲಹರಿ ॥ ಎಸಳುಗಂಗಳ ನುರುಕೃಪೋದಯ । ದೆಸಕದಲಿ ನೋಡಿದನು ನೂತನ । ಪಶುಪತಿಯವೊಲು ಮೆರೆವ ತೇಜೋಮಯ ವಿಭೀಷಣನ ॥೯॥ ಮನದ ಹರುಷದಲರಸ ಬಳಿಕಾ । ತನನು ಕಾಣಿಸಿಕೊಂಬೆ ನೆಂಬೀ । ನೆನಹನೇ ನಿಶ್ಚಯಿಸಿ ನೋಡಿದ ನನಿಲಜನ ಮುಖನ ॥ ಹನುಮನಾಳ್ದನ ಬಗೆಯರಿತು ಹರಿ । ತನುಜ ಸೂನು ಸಮೇತ ನೂತನ । ವನರುಹಾಕ್ಷನ ದಾಸನಿದ್ದೆಡೆಗಾಗಿ ಲಂಘಿಸಿದ ॥೧೦॥ ತುಂಗಭುಜಬಲ ಬಳಿಕಲಾ ಗಗ । ನಾಂಗಣದ ಮನದಲಿ ನಿಜೈಕನ । ಲಿಂಗಿತವ ನರಿದರಿದ ನಂದಿನ ಪೂರ್ವ ದರುಶನವ ॥ ಹೊಂಗಿವಾನಂದಾಶ್ರುಗಳ ಲಾ । ಲಿಂಗನಂ ಗೈದೊಡನೆ ಸಹಸುಖ । ಸಂಗದಲಿ ಸಂದಣಿಸಿ ನಗುತಿಂತೆಂದ ನಸುರಂಗೆ ॥೧೧॥ ಜಲವಿದೇಸಿದ್ದಿ ಮದಕಂ । ಧರನಸುಜ್ಞಾಯೊ ಮೋಕ್ಷವೇಕ । ಸ್ಫುರಿತದುದಿತ ಭವಿಷ್ಯದಸುಷಮಗತಿಯು ಗಾಢಿಕೆಯೊ ॥ ಎಲವಳೊಳಗೇನೆಂದು ಬೆಸ

ಗೊಳಿ । ವಿರಚಿಸಿದನು ಭಯಾನಮತ ವಿ । ಸ್ತರಣವನು ಬಳಿಕಾ ವಿಭೀಷಣ ನನಿಲ
ತನಯುಂಗೆ ॥ ೧೨॥ ಐಸೆ ಮತ್ತೇನೆಂದು ವೀರ ವಿ । ಭೀಷಣನ ಕಾಹಿಂಗೆ ವಾನರ । ವಾಸ
ವನ ನಂದನನ ನಂಗದನೆಂಬ ಸೌಜ್ಞಾಜಲಿ ॥ ಆಶ್ರಿತಜನವತ್ಸಲನ ನಿಜ । ದಾಸವರ್ಗ
ಪ್ರಿಯನ ಮಾನವ । ವೇಷದಚ್ಯುತನೆಡೆಗೆ ಬಂದಿಂತೆಂದನಾ ಹನುಮ ॥ ೧೩ ॥ ಜೀಯ
ಬಂದವನೀಗ ರಕ್ಕಸ । ರಾಯನನುಜನು ನೀತಿವಿದ ನಸ । ಹಾಯ ಶೂರ ಸುದಾರಧೀರ
ಗಭೀರ ಧಾರ್ಮಿಕನು ॥ ಮಾಯೆ ಹೊಗದೀತನಲಿ ಹಿಂದೆ ಸ । ಹಾಯ ವಚನದೊಳೆನ್ನ
ಬಂಧನ । ದಾಯತವ ಬಿಡಿಸಿದನು ತಪ್ಪಲ್ಲಸುರರೊಳಗೆಂದ ॥ ೧೪ ॥ ಮನ ಮುನಿಸು ಬಳಿ
ಕಾಯ್ತುಗಡ ಖಳ । ಜನಪ ನೊಡನೀತಂಗೆ ದೇವರ । ವನಿತೆಯನು ಬಿಡಹೇಳಿದರೆ
ಬಿಡದೀ ವಿಭೀಷಣನ ॥ ಅನುಜನೆಂದೋವದೆ ವಿರೋಧಿಸಿ । ಕನಲಿ ನೂಕಿಸಿದಗಡ
ತ್ವತ್ಪದ । ವನರುಹವ ನೋಲೈಸಲೆಂದೈ ತಂದತಾನುಗಡ ॥ ೧೫ ॥ ಅಹುದು ಮತ್ತೇ
ನೆಂದು ಜಾಂಬವ । ಮಿಹಿರಸುತ ಕೇಸರಿ ಸುಷೇಣರ । ವಿಹಿತವಚನ ಪ್ರೌಢಿಗಳ
ನಾಲೈದು ನಿಜಮತವ ॥ ಸಹಭನನಲರಿದುಳಿದ ಘನವಿ । ಗ್ರಹ ಸಮರ್ಥರಿಗೊರೆದು
ರಿಪುಭಟ । ರಹಿತ ಬೋಳೆಯು ರಾಮಬಳಿಕಿಂತೆಂದ ನುಚಿತದಲಿ ॥ ೧೬ ॥ ಧುರದೊಳಿದಿರಾ
ದವರ ನಿರಿವುದು । ಶರಣುಹೊಕ್ಕರ ಸಲಹುವುದು ಪತಿ । ಕರಿಸುವುದು ಧರ್ಮವ
ನಧರ್ಮವಳಿವುದವನಿಯಲಿ ॥ ಅರಸುಗಳಿಗಿದು ನಯವಿನಿತು ಗೋ । ಚರಿಸದಿಹರೆ
ಹಗರಣದ ನಾಟಕ । ದರಸುತನವೀ ಜಗದೊಳೆಂದನು ನಗುತ ರಘುನಾಥ ॥ ೧೭ ॥
ತೋಳ ಬಲುಹೆಮಗಿಲ್ಲದಿರೆ ಭಯ । ದೋಲಗವು ನಮಗೈಸಲೇ ಧಿಟ । ಕೇಳು ಬಂದೊಳ
ಹೊಕ್ಕು ಮಾಡುವವೇನು ನಮ್ಮವನು ॥ ಮೇಲೆ ಮರೆಹೊಕ್ಕವರ ಸಲಹುವ । ಶೀಲ
ವೆಮ್ಮದು ಬಂದವನ ನಾಪ್ತ । ಮೋಲಗಿಸಿಕೊಂಡರಿವೆನೆಂದನು ದೂಷಣಧ್ವಂಸಿ ॥ ೧೮ ॥
ಇನ ತನೂಭವ ಕೇಳು ತನ್ನಯ । ತನುವನಿತ್ತಾದಡೆಯು ಮರೆಹೊ । ಕ್ಕವರ ಮನ್ನಿಸು
ವಡೆ ಮಹಾಕ್ಷತ್ರಿಯರ ಪಂಥಕಣ ॥ ನಿನಗೆ ಹೇಳುವದೇನು ನೀನ । ಜ್ಞನೆ ವಿಚಾರಿಸಿ
ಕೇಳಿದರಿಯಾ । ವಿನುತ ವಿಮಲ ಕಪೋತ ಚರಿತವನೆಂದನಾ ರಾಮ ॥ ೧೯ ॥ ದೇವ
ನಿಮ್ಮಯ ವೈಸಿರಿಯು ಸೊಬ । ಗಾವ ದೇವರಿಗುಂಟು ದೇವರ । ದೇವನಲ್ಲಾ ನೀನು
ಪ್ರಾಕೃತನರನೆ ನಾಟಕದ ॥ ಹೇವನೆಮ್ಮಯ ಮತಿಗಖಿಳ ಕ । ಳಾವಿಶೇಷನೊಳೆಂದು
ಕಲಿಸು । ಗ್ರೀವ ಜಾಂಬವ ಹನುಮ ನೀಲಾದಿಗಳು ಹೊಗಳಿದರು ॥ ೨೦ ॥ ಕರೆಸಿದನು
ಬಳಿಕಿನಸತಾದ್ಯರ । ವರ ವಚೋಭಿಪ್ರಾಯ ಮತದಲಿ । ಶರಣನನು ಶರಣ್ಯೈಕಜನ
ವತ್ಸಲನು ಹರುಷದಲಿ ॥ ಧರಣಿಜಾಸುತ ಕೇಳು ಗಗನದ । ತರಣಿ ಧರಣೀಮಂಡಲ
ಕ್ಕವ । ತರಿಸುವೆಂಬಂತಿಳಿದನಾ ರಥದಿಂ ವಿಭೀಷಣನ ॥ ೨೧ ॥ ಆಯುಧವ ತನ್ನವರಿ
ಗಿತ್ತು ನ । ಗಾಯಿತನು ಮಣಿಖಚಿತ ಕನಕದ । ಸಾಯಕವ ನಂಘ್ರಿಗೆ ಸಮರ್ಪಿಸಿ
ಚಾಚಿದನು ಶಿರವ ॥ ಕಾಯಬೇಕೆಲೆ ದೇವ ಭವಗತ । ಕಾಯನನುಭವ ದೀಯಭಕ್ತ
ಸಿ । ಕಾಯನನು ಕರುಣಾಸ್ಪದನ ನೆಂದೆರಗುತಿದಿರಿನಲಿ ॥ ೨೨ ॥ ರಕ್ಷಿಸೆನ್ನ ನನಾಥಬಂ
ಧುವೆ । ರಕ್ಷಿಸೈ ಕಾರುಣ್ಯಸಿಂಧುವೆ । ರಕ್ಷಿಸೈ ರಾಕ್ಷಸವಿದೂಷಣನನು ವಿಭೀಷಣನ ॥
ಅಕ್ಷಯನೆ ಅಭವನೆ ಜಗತ್ರಯ । ರಕ್ಷಕನೆ ತಾರಕ ಪರಾಯಣ । ಶಿಕ್ಷಕನೆ ಶರಣಾಗತನ
ಸಲಹೆಂದ ನಸುರೇಂದ್ರ ॥ ೨೩ ॥ ನೀಲಮೇಘಶ್ಯಾಮ ನೀರಜ । ಲೋಲ ಲೋಚನ

ಕಂಬುಕಂಠ ವಿ । ಶಾಲ ವಕ್ಷಸ್ಥಲ ಮನೋಹರವದನವಾರಿರು ಹ ॥ ಸ್ಥೂಲ ಕಂಧರ
ಕಲಿತ ಮದ ಶುಂ । ಡಾಲ ಕರಿಕರಯುಗಳ ಸೀತಾ । ಲೋಲ ರಕ್ಷಿಸು ರಕ್ಷಿಸೈ ಶರಣಾ
ಗತನ ನೀನೆಂದ ॥೨೪॥ ಧ್ರುವನ ರಕ್ಷಿಸಿದಂತೆ ರವಿಸಂ । ಭವನ ರಕ್ಷಿಸಿವಂತೆ ದಿತಿಸುತ ।
ಭವ ಸುರೇಂದ್ರ ಮುನೀಂದ್ರ ಮಾರ್ಕಂಡೇಯ ನಾರದರ ॥ ವಿವಿಧ ವಿಕೃತೋಪದ್ರ
ಕೋಟಿಯ । ತವಿಸಿ ರಕ್ಷಿಸಿದಂತೆ ಮಾಯಾ । ಜವಸಿಕೆಯ ಮಧುಕೈಟಭಾಂತಕ ರಕ್ಷಿಸು
ವುದೆಂದ ॥ ೨೫ ॥ ವರ ಗಜೇಂದ್ರನ ನಂಬರೀಷನ । ದುರಿತ ಶೀಲನಜಾಮಿಳನ ಶುಭ ।
ಚರಿತ ಧರ್ಮಾಂಗದನ ಕನಕಾಂಗದನ ॥ ಕರುಣದಲಿ ಕೈವಿಡಿದವೊಲು ತವ । ಚರಣ
ಕಮಲವ ನೆನ್ನ ಶಿರದೊಳ । ಗಿರಿಸು ವರಿಸು ವಿಲಾಸಮುಖದಿಂದೆನ್ನ ನೀನೆಂದ ॥ ೨೬ ॥
ಏಳು ಭಯಬೇಡೆಲೆ ವಿಭೀಷಣ । ಕೇಳು ಲಕ್ಷ್ಮಣನಂತೆ ಕಾಂಬೆ ನ್ನ । ಪಾಲ ದಶರಥ
ನಾಣೆ ಮನದಲಿ ಚಿಂತೆ ಬೇಡೆಂದು ॥ ಮೌಳಿಯನು ಹಿಡಿದೆತ್ತಿ ಸೀತಾ । ಬಾಲಕಿಯ
ನಪ್ಪುವ ಸುಕೋಮಲ । ತೋಳಿನಲಿ ಬಿಗಿಯಪ್ಪಿದನು ಬಳಿಕಾ ವಿಭೀಷಣನ ॥ ೨೭ ॥
ಅರಸು ರಾಮನ ಕರುಣದಳತೆಯ । ಹರುಷ ಕಂಡಿನ ಸೂನು ಜಾಂಬವ । ಹರಿತನುಜ
ನಳ ನೀಲ ಮುಖ್ಯ ಸಮಸ್ತನಾಯಕರು ॥ ಬರಸೆಳೆದು ಬಿಗಿಯಪ್ಪಿ ಜಡದಾ । ದರಿಸಿ
ದನು ಸುರರುಬ್ಬಿ ಹೂವಿನ । ಸರಿಯ ಸುರಿದರು ಮೊಳಗುವಾಸಕವಾದ್ಯರಭಸದಲಿ॥೨೮ ।
ಕರೆದು ರಘುಪತಿ ತನ್ನ ನಿಜವಿ । ಷ್ಟರವ ಕೆಲದಲಿ ನಿಲಿಸಿ ವಿಕಸಿತ । ವರವಚನ ಸರಸಿ
ಜದಿ ನೊಯ್ಯನೆ ಕೇಳ್ದನುಚಿತದಲಿ ॥ ಪುರಜನಂಗಳು ಸುಖಿಗಳೇ ದಶ । ಶಿರನು ಹದುಳಿ
ಗನೇ ನಿಜಾಗ್ರಜ । ವಿರಹವೇನು ನಿಮಿತ್ತ ಸಂಭಾವಿಸಿತು ನಿನಗೆಂದ ॥ ೨೯ ॥ ಜಗದ
ವೀರರೊಳಗ್ಗಳನು ಸಂ । ಯುಗ ಸಮರ್ಥನು ಸುರನರೋರಗ । ಜಗತಿಗೊಡೆಯನು
ಸುಪ್ರಸಿದ್ಧನು ಸಿರಿಯ ಸೊಂಪಿನಲಿ ॥ ನಗಸುತಾವರ ನೊಲುಮೆ ನೆಟ್ಟಿಸೆ । ಸೊಗಸಿ
ಹುದು ನಿನ್ನಗ್ರಜಗೆ ನೀ । ನಗಲಿ ಬಹುದಿದು ಚಿತ್ರವೆಂದನು ರಾಮ ನಸುನಗುತ ॥ ೩೦ ॥
ಆವ ದೇಶದೊಳಾದಡೆಯು ಸತಿ । ಮಾವ ಸುತ ದೌಹಿತ್ರ ಮಿತ್ರಜ । ನಾವಳಿಯ ಜೋಡಿ
ಸಲು ಬಹುದಗ್ರಜ ಸಹೋದರರ ॥ ಆವ ಪರಿಯಲಿ ಗಳಿಸಬಹುದೈ । ಭೂವಳಯ ದಲಿ
ನಿನ್ನ ಬರವಿನ । ಭಾವವೇನೆಗೇನರಿಯಬಾರದ ಯೆಂದನಾ ರಾಮ ॥ ೩೧ ॥ ದೇವ ಕೇಳ್
ಪರನಾದಡೆಯು ಹಿತ । ನಾವ ಗುಂಟವ ಬಂಧು ಬಾಂಧವ । ನಾವ ನಹಿತನೆ ಪರನು
ತಾನಿದು ಶಾಸ್ತ್ರಸಿದ್ಧವಲೆ । ಈವುದೇ ರಾಜೆ ಹಿತವ ತನ್ನ ಕ । ಳೇವರದ ರುಜೆಗಡವಿ
ಯ ಮೂಪಥ । ವೀವವೊಲು ರಾಜೇಂದ್ರ ಚಿತ್ತೈಸೆಂದ ನಸುರೇಂದ್ರ ॥೩೨॥ ದೇವ ಕೇಳಿ
ನ್ನೊಂದು ಜಗದಲಿ । ಜೀವಿಸುವುದುಂಟಾದಡವಿಯ । ಜೀವನವ ಕೊಂಡಿಹುದು
ಮೆಲುವುದು ಗಡ್ಡೆಗೆಣಸುಗಳ ॥ ಸೇವಿಸುವುದು ಚತುರಾರು ಹಿತ್ತವ । ಗಾವಳಿಯ
ನತಿಮೂರ್ಖ ದುಷ್ಕೃತ । ಜೀವಿಗಳ ಬಳಿವಿಡಿದು ಬದುಕುವುದುಚಿತವಲ್ಲೆಂದ ॥೩೩॥
ಬಾಳಬೇಕೆಂದೆಂಬವಗೆ ಜಾಂ । ಡಾಲ ಗೃಹವೀಥಿಯಲಿ ಭಿಕ್ಷವ । ಕೂಳ ತಿರಿತಂದುಂಡು
ಬದುಕುವುದಧಿಕ ಸೌಖ್ಯಕರ ॥ ಕೇಳಿದೈ ರಾಜೇಂದ್ರ ಮೂರ್ಖರ । ಕೇಳಮೇಳದ
ಲಿದ್ದು ಬದುಕುವ । ಖೂಳವೃತ್ತಿಯ ಬದುಕು ಕಷ್ಟಕೆ ಕಷ್ಟತರವೆಂದ ॥ ೩೪ ॥ ಅದರಿ
ನಘಸಂದಷ್ಟ ವಣ್ಣಂ । ಗುಡಿಸಲುಳ್ಳಡೆ ಹೊದುಗಿ ದುರ್ಗತಿ । ಗೀವುದೊಳ್ಳಿತೊ ಬಿಡು
ವುದೊಳ್ಳಿತೊ ದೇವ ಚಿತ್ತೈಸು ॥ ವಿದಿತ ಲೌಕಿಕ ವೈದಿಕವ ವಿಸಾ । ರದಾದು ನಡವಳಿ

ಯುಣ್ಣನೆಂಬೀ | ಹದನರಿವು ನಿಮ್ಮಂಘ್ರಿಕಮಲನ ಸಾರ್ದನಾನೆಂದ ‖ ೩೫ ‖ ಐಸೆ ಮಾತ್ರೇನಾದಡೆನ್ನುಯು | ಭಾಷೆಯನು ಕೇಳ್ಗೆಲೆ ವಿಭೀಷಣ | ದೋಷಕಾರಿಯ ನಳಿದು ಲಂಕಾರಾಜ್ಯದೊಡೆತನವ ‖ ಈ ಸರೋರುಹ ಬಂಧ ಯಿಾ ತಾ | ರ ಶ ಯಿಾಧರೆ ರಾಮ ಕಥೆ ತಾ | ನೇಸುದಿನವುಳ್ಳವರ ಬರನಿನಗಿತ್ತೆ ನನೆಂದ ‖ ೩೬ ‖ ಬಲುಹ ಬಲ್ಲಾದರಿಂದ ಕಪಿಕುಲ | ತಿಲಕ ಹಾ ಯೆಂದುಬ್ಬಿದನು ನೃಪ | ರೊಳಗೆ ಬಲ್ಲಿದನೆಂದು ಜಾಂಬವ ದೇವ ಹಿಗ್ಗಿದನು ‖ ಉಳಿದ ನೀಲಾಂಗದ ಭಟಾದಿಗ | ಳೊಲಿದು ಕೊಂಡಾಡಿದರು ಲೇಸೆಂ | ದೊಲಿದಲಂಕರಿಸಿತು ನಭೋವಚಸ್ಸೈಕ ಸಂಸದನ ‖ ೩೭ ‖ ಸವೆದುದರಮನೆ ವಿಶ್ವಕರ್ಮನ | ವಿವಿಧ ಚಿತ್ರೋತ್ಕರದ ಲಾನಕ | ನಿವಹ ವಬ್ಬರಿಸಿತ್ತು ಮಂಗಳವಸ್ತು ಕಾರವಲಿ ‖ ದಿವಿಜ ಸತಿಯರು ಸಂದಣಿಸಿದರು | ನಿವಡಿಸಿದ ಸುಮುಹೂರ್ತದಲಿ ವೈ | ಭವದಿ ನಾಯ್ತಭಿಷೇಕವಾ ರಾಜೇಂದ್ರ ಶರಣಂಗೆ ‖ ೩೮ ‖ ಸೂಸಿದರು ಶಾಸೆಯನು ಸುರರ ಸು | ವಾಸಿನಿಯ ರಾರತಿಯ ಬೆಳಗುರೆ | ಬಾಸಣಿಸಿ ಗುಡಿಸಿದರು ಬಣ್ಣದ ಸೊಡರ ಸೊಂಪಿನಲಿ ‖ ವಾಸವಾದಿ ಸಮಸ್ತಸುರರು ವಿ | ಭೀಷಣನ ನಪ್ಪಿದರು ಜಾಂಬವ | ಕೇಶಪತಿ ಲಕ್ಷ್ಮಣರು ತಕ್ಕೈಸಿದರು ತವಕದಲಿ ‖ ೩೯ ‖ ರಾವಣನ ತಮ್ಮನಿಗೆ ಲಂಕೆಯ | ನೋವಿ ಕೊಟ್ಟೆರಿ ದೇವ ಬಳಿಕಾ | ರಾವಣನು ಜಾನಕಿಯ ನೊಪ್ಪಿಸಿ ನಿಮ್ಮಪದಯುಗವ ‖ ಭಾವಶುದ್ಧಿಯಲೀಗ ಕಂಡರೆ | ನೀವದಾವುದ ನೀವಿರೆಂದಾ | ಪಾವಮಾನಜ ರವಿಜರುರೆ ಬಿನ್ನಹವ ಮಾಡಿದರು ‖ ೪೦ ‖ ಕೇಳು ಜಾಂಬವ ಕೇಳು ಲಕ್ಷ್ಮಣ | ಕೇಳು ನಳ ನೀಲಾದಿ ಸುಭಟರೆ | ಕೇಳಿರೈ ದಶಮುಖನು ಕಂಡರೆ ನಮ್ಮ ಪದಯುಗವ ‖ ಬಾಲಿಯನು ತಂದಿತ್ತನಾದರೆ | ಕೋಳುಗೊಡುವೆ ನಯೋಧಿನಗರವ | ನಾಳುವವೊಲಾ ಕಮಲಜನ ಕಲ್ಪಾಂತ ಪರಿಯಂತ ‖ ೪೧ ‖ ವರವಿಭೀಷಣದೇವ ಲಂಕಾ | ಪುರದರಸನೆಂದಮರಪತಿ ಡಂ | ಗುರವ ಹೊಯ್ಸಿದನಮರ ವಾನರ ಕಟಕ ವೆರಡರಲಿ ‖ ತರಣಿ ವಂಶದರಾಯ ತೊರವೆಯ | ನರಹರಿಯ ಶ್ರೀಪಾದದಲಿ ನಿಜ | ಶಿರವ ಮಣಿದಮರೇಂದ್ರನಮರಾವತಿಗೆ ಬೀಳ್ಕೊಟ್ಟ ‖ ೪೨ ‖

ಮೂರನೆಯ ಸಂಧಿ ಸಮಾಪ್ತಂ.

ನಾಲ್ಕನೆಯ ಸಂಧಿ.

ಸೂಚನೆ ‖ ತುಡುಕಿ ದಂಜಿನ ವೊನೆಯ ಲಬುಧಿಯ | ಕಡುಹ ಬಂಧಿಸಿ ಸೇತು ಬಂಧನ |
ಕೊಡಬಡಿಸಿದನು ವೀರ ಧೀಶೋದ್ಧಾರ ರಘುನಾಥ ‖

ಪದ್ಯ ‖ ತರಣಿವಂಶ ಲಲಾಮಸುತ ಕೇ | ಸರಿಯ ಬಳಿಯಿಂ ಬಂದ ನಿಜಪದ | ಶರಣ ನಮಲಾಭ್ಯುದಯ ದೊಸಗೆಯಮೇಲೆ ರಘುನಾಥ ‖ ಹೊರದ ಹರುಷದಲೊಯ್ಯನಟವೀ | ಚರ ಕುಲೇಂದ್ರನ ಮೊಗವ ನೀಕ್ಷಿಸು | ತರಿ ವಧಾ ಪ್ರಾರಂಭದಾಹವಕೇನು ಹದನೆಂದ ‖ ೧ ‖ ಅರಸು ಚಿತ್ತೈಸೈಸಲೇ ಸಂ | ಗರದ ಬಿಡೆಯಕೆ ಬೀದಿಯಿದೆ ಸುರ | ಸರಣಿ ನೆರವಡೆ ಬೇಹ ಭಟರಿಂದೆ ಬೇಡಿದಂದದಲಿ ‖ ಗಿರಿತರುಗಳಿವೆ ಕೈದುಗಳಿ ಗು | ಬ್ಬರದ ತೋಳಿವೆ ತೋಟಗಬುಧಿಯ | ಹರಹು ಹೋಳಿದರೊಂದು ನಿಮಿಷಕೆ ಹೂಳಿಸುವೆನೆಂದ ‖

ತೋರಿಸುವೆ ನಹಿತನನು ದೇವರ । ಕೂರುಗಣೆ ತುದಿಗಡೆಗೆ ಜೀವವ । ಜಾರಿಸಲಿ ನೋ
ಣ್ಣುಳುಹಲಾ ಶರವನನು ಸಮರದಲಿ ॥ ಬೇರೆ ದೇವರ ಮತಿಯು ವ್ಯಸಿರಿ । ತೋರಲಾ
ನದ ನರಿಯೆನೀಪರಿ । ತೋರಿ ನುಲಿದುದ ಕೋಸರಿಸೆ ತವ ಭೃತ್ಯನಲ್ಲೆಂದ ॥ ೩ ॥ ಎಲೆ
ಕಪಿ ಶ್ವರ ನುಡಿದ ನುಡಿಗಳು । ಕಲಿಗಳಂಗವೆ ಹೊಳಲೇಕೀ । ಜಲಸಿಧಿಯು ತೋರಿಸ
ಲದೇಕೀ ರಾಘವೇಂದ್ರಂಗೆ ॥ ಹುಲುಪರೆಯು ರಕ್ಕಸ ನಸಿರುಬಡ । ಗೆಲನಕೇಳೀ ಬಾಲ
ವೊಂದನು । ಕಳುಹಿ ಹಿಡಿತರಿಸ ವೆನೆನುತ್ತ ಗವಾಕ್ಷ ಗರ್ಜಿಸಿದ ॥೪॥ ಕೆಲಕೆ ಸಾಕಟ್ವಾ
ಳುತನ ದ । ಗ್ಗಳಿಕೆಯೇ ರಿಪುಭಟನ ನೊಬ್ಬನ । ನಳಿದು ತಹುದಿದು ಪಂಥವೇ ಪೌರು
ಷದ ಪದ್ಧತಿಗೆ ॥ ಖಳನನಾ ಖಳಬಲವನಾ ಖಳ । ಹೊಳಲ ನಿವಿಷದೊಳದಿರಿನಲಿ ತಾ!
ದಿಳುಹದಿರೆ ತಾ ಭಂಟನಲ್ಲೆಂದೊದರಿದನು ಗವಯ. ॥ ೫ ॥ ಕಡಲ ನುಳುಹಿ ವಿರೋಧಿ
ಯನು ಖಳ । ಪಡೆಸಹಿತ ಖಳಪುರಿಯು ತಂದೀ । ತಡಿಯಲಿರಿಸುವೆ ದಾನಕೀರ್ತಿ
ಭಟಂಗೆ ಭುವನದಲಿ ॥ ಕೊಡನವಗ ನಂವದಲಿ ಕಡಲನು । ಕುಡಿದು ರಿಪುರಾವಣನ
ತಲೆಯನು । ಹೊಡೆದು ತಂದೊಪ್ಪಿಸುವೆನೆಂದುರಿದೆದ್ದನಾ ಶರಭ ॥೬॥ ಕುಡಿಯ ಲರಿದ
ಲ್ಲಂಬುಸಿಧಿಯನು । ಹೊಡೆವುದರಿದಲ್ಲರಿಯು ತಲೆಯನು । ಬೆಡಗದೇತರದೆಲೆ ವನೌಕಸ
ರರಸ ಚಿತ್ತೈಸು ॥ ಒಡೆವೆ ನೀ ಬ್ರಹ್ಮಾಂಡ ಖಾಂಡವ । ನಡಿಮಗುಚುವೆನು ಧರೆಯ
ನರಿಭಟ । ನೆಡೆಯು ಕೆಲಸವಿದೇ ನೆನುತ ಚುಬುಕಿಂದನಾ ನೀಲ ॥ ೭ ॥ ಕೇಳಿದೈ ಬಳಿ
ಕುಳಿದ ಶತಬಲಿ । ವಾಲಿಸುತ ಗಜ ವೃಷಭ ಸಮರಾ । ಭೀಳ ವೈಂದದ್ವಿವಿಧ ದುರ್ಮುಖ
ಸುಮುಖರೆಂಬವರು ॥ ತೂಳುವಬಧಿಯ ಸಬುದದವೊಲು । ಬ್ಬೇಳು ವಗ್ಗದ ಗಾಢಿ
ಕೆಯ ಕ । ಟ್ವಾಳುತನವನು ಮೆರೆದರಿದಿರಲಿ ರಾಘವೇಶ್ವರನ ॥೮॥ ಭಟರ ಹೊಳಕೆಯ
ಪಂಥದುಬ್ಬಿನ । ಪಟು ಪರಾಕ್ರಮದುದಿತ ವಾಕ್ಯ । ಸ್ಫುಟಪರಿಗ್ರಹಕರಸ ಹಿಗ್ಗಿದ ನಧಿಕ
ಹರುಷದಲಿ ॥ ಘಟಣೆಯಾವುದು ತನ್ಮ್ನವುದಿತೋ । ದ್ಭಟ ಮನಃಪ್ರಜ್ಞತೆಯು ರಣ ಸಂ
ಘಟನೆಗೆಂದವನಿಶ ನೋಡಿದ ನನುಜನಾನನವ ॥ ೯ ॥ ಅರಸಚಿತ್ತೈಸೇಳು ಶರಧಿಯ ।
ಹೊರಗಿರಲಿ ರಿಪುಪುರವಣಾಂಡದ । ಶಿರದ ಮೇಲಿರಲಲ್ಲಿಗಲ್ಲಿಗೆ ಬಾಣಪಂಜರವ ॥ ವಿರಚಿ
ಸುವೆ ನಮರಾದ್ರಿಯನು ಕಿ । ತ್ತಿರಿಸಲಣುವಿಗೆ ತಗ್ಗುವರೆ ತವ । ಚರಣ ಸೇವಕನಲ್ಲ
ಮೇಲೇನುಂಟು ಬೆಸಸೆಂದ ॥ ೧೦ ॥ ಅನಜ ನಧಿಕ ಪರಾಕ್ರಮದ ನುಡಿ । ಗಿನಕುಲೇಂ
ದ್ರನು ಹಿಗ್ಗಿ ಹನುಮನ । ಮನವ ನೋಡುವೆನೆನುತ ನುಡಿಸಿದನಾ ಸಮೀರಜನ ॥
ನಿನಗೆ ತೋರಿದ ಮತಿಯು ಹದನೇ । ನೆನೆ ಸಮೀರಜನೆದ್ದು ಕೈಮುಗಿ । ದಿನಕುಲದ
ರಾಮಂಗೆ ಬಿನ್ನಹ ಮಾಡಿದನು ಹನುಮ ॥ ೧೧ ॥ ಏತರವನಾ ನೀ ಕಪೀಂದ್ರ । ಕ್ಯಾತ
ರಲಿ ಬಿನ್ನಹವ ಮಾಡುವ । ಮಾತದಾವುದು ಜೀಯ ದೇವರ ನೇಮವನಿತನಿತು ॥ ಓತು
ಸಿರದಲಿ ಧರಿಸಿ ನಡೆಸುವು । ದೇ ತನಗೆ ಕರ್ತವ್ಯವೆಂದುವಿ । ದೂತರಿವು ಬಿನ್ನವಿಸಿದನು
ಭಾಸ್ಕರ ಕುಲೇಂದ್ರಂಗೆ ॥ ೧೨ ॥ ಮೆಚ್ಚಿದನು ಪವನಜನ ಬಿನ್ನಹ । ದೊಚ್ಚತಕೆ ಹಿರಿ
ದಾಗಿ ಮನದಲಿ । ಮೆಚ್ಚಿದನು ಹನುಮಂತ ದೇವನ ಬಲವ ಭಾವಜ್ಞನೆ ॥ ಒಚ್ಚತನ ನಿಜ
ಸತಿಯ ನೊಯ್ದನ । ಬಿಚ್ಚಿ ಬಂದವನಲಿ ಪರೀಕ್ಷಿಸುವ । ನುಚಿತ ನೋಡುವೆನೆನುತ ನುಡಿ
ಸಿದನಾ ವಿಭೀಷಣನ ॥ ೧೩ ॥ ಏನು ನಿನ್ನಭಿಮತ ಮಹೋಪಧಿ । ಗೇನು ಮಾಡು ದಶಾ
ನನನ ಪಥೆ । ಗೇನು ಬುದ್ಧಿ ವಿಲಾಸವಾವುದು ರಾಜಕಾರಿಯದ ॥ ನೀನು ನಮ್ಮವನೈಕಲೀ

ಸಂ। ಸ್ಥಾನ ಸಮಯೋಚಿತದ ಕೃತ್ಯಕೆ । ದೇನು ಮನದಲಿ ಕಂಡೆ ಯೆಂದನು ನಗುತ ರಘುನಾಥ ॥೧೪॥ ದೇವ ನಿಮ್ಮಯ ಮನದ ಮಹಿಮೆಯ। ನಾವನೈ ಬಲ್ಲವನು ಸೀಮನು । ಜಾವತಾರದ ವಿಷ್ಣುವೆಂದೇ ನರಿಯದೇ ಲೋಕ ॥ ಆವನೈ ಹಗೆಗೊಂಡು ನಿನ್ನಲಿ। ಜೀವಿಸಿದ ಜೀವಿಗಳು ಜಗದೊಳ । ಗಾವನೈ ನೀ ಕೊಲುವ ಹಗೆಗಳ ಸಲಹಿದವನೆಂದ ॥೧೫॥ ಆದರೆಯು ನರನಾಟಕದ ಸಂ। ಪಾದನೆಗೆ ಕಂಡನಿತ ದೇವರ। ಪಾದಕೊಸುರುವೆ ನದುವೆ ಚಿತ್ತಕೆ ಬರಲಿ ಬರದಿರಲಿ ॥ ಭೇದದಂದವಿದೀಗ ಮೇಲಣ। ಹಾದಿ ಮಂತ್ರಜ್ಞರಿಗೆ ಮೊದಲು ವಿ। ವಾದ ವಿರಹಿತ ಸಾಮ ದಾನಗಳೆಂದ ನಸುರೇಂದ್ರ॥೧೬॥ ಶರಧಿ ಯೀತರದೀ ಪರಾಕ್ರಮ। ಶರಧಿಗಳಿಗೆಲೆ ಜೀಯ ದಶಕಂ। ಧರನಿ ವಧೆಗೀನರಿದು ದೇವರು ನೆನೆದ ವೈಸಿಂಗೆ ॥ ಕರೆದು ಬಟ್ಟೆಯ ಬೇಡುವುದು ಸಾ । ಗರವ ಸಂಧಿಗೆ ಕಳುಹಿ ಕದನದ। ಪರಿಯ ನರಿವುದು ಖಣೆಯವಿದು ನಮಗೆಂದು ಕೈಮುಗಿದ ॥೧೭॥ ಪಥನ ನಂಬುಧಿ ತೋರದಿರೆ ಸುರ। ಮಥನ ಸೀತೆಯ ನೀಯದಿರೆ ತಾ । ಸಿಥಿಲವಲ್ಲಾ ಮೇಲೆ ನೆಗಳುವ ದಾಯ ದೇವಂಗೆ ॥ ಪೃಥುಳಬಲಸೀ ನಿನ್ನ ಬಾಣ। ವ್ಯಥೆಗೆ ನರಳದನಾವನೆಂದ। ಪ್ರತಿಮ ಶರಣಾಭರಣ ಬಿನ್ನೈಸಿದನು ರಘುಪತಿಗೆ ॥೧೮॥ ಮತವಹುದು ತಪ್ಪಿಲ್ಲ ಶರಣಾ। ಗತನ ಸೂಕ್ತಿನಿಯುಕ್ತ ನೆಂದಜ। ಸುತ ಸುಷೇಣಕ ಕೇಸರಿಗಳೊಪ್ಪಿದರು ಹರುಷದಲಿ ॥ ಮತವನದ ನೊಡಬಟ್ಟನಾ ರಘು। ಪತಿ ಬಳಿಕ ಮಹೋದಧಿಗೆ ಸೂ। ವ್ರತವ ಕೈಕೊಂಡನು ಸರಾಗದ ಲಣುಗ ಕೇಳೆಂದ ॥೧೯॥ ಶೋಧಿಸಿತು ಬಳಿಕವನಿ ನಿರುಪಮ। ವೈದಿಕೋಕ್ತಿಯಲೊಡನೆ ಬಂದುದು। ವೇದಿದರ್ಭಾಸ್ತರಣ ಸಮ್ಮೋಕ್ಷಣೆ ಸುಸಾಂಗದಲಿ ॥ ಆದಿನಾರಾಯಣನು ನರನೋ । ಪಾದಿಯಲಿ ಕೈಕೊಂಡನಾಗ ಮ। ಹೋದಧೀಶಂಗಧಿಕ ತಪವನು ತರುಣ ಕೇಳೆಂದ ॥೨೦॥ ವರಸಮಾಧಿಯ ಲಮಳ ರತ್ನಾ। ಕರ ಪರಿಧ್ಯಾನದಲಿ ದೃಷ್ಟಿಯ । ನಿರಿಸಿದನು ನಾಸಾಗ್ರದಲಿ ನಳಿನಾಸನವ ಬಿಗಿದು ॥ ಭರಿತ ರೇಚಕಪೂರಕಾದಿ। ಸ್ಫುರಿತ ಮೂಲಾಧಾರ ಮಾರ್ಗಂ। ತರದಲಿದ್ದನು ನಿರಶನ ವ್ರತದಲಿ ದಿನತ್ರಯವ ॥೨೧॥ ಕುಶನೆ ಬಲ್ಲೈ ಹಿಂದೆ ಶುಕನೆಂ। ಬಸುರ ಬೇಹಿಗೆ ಬಂದುದನು ರಾ। ಕ್ಷಸ ಶರೀರವ ಮರಸಿ ಮರ್ಕಟರೂಪ ಕೈಕೊಂಡು ॥ ಹೆಸರೆನಿಪ ಕಪಿನಾಯಕರ ಸಾ। ಹಸವ ನವರಭಿದಾನ ಭುಜಬಲ। ದೆಸಕಗಳ ನರಿವಿರ್ದ ನವ ನರನಾಕ ಪರಿಯಂತ ॥೨೨॥ ತಪವನೀ ರಘುನಾಥ ಕೈಕೊಂ। ಡ ಪರವಲಿ ಗಣಿಯಾಗಿ ಸೂರ್ಯ। ತಪನ ನಪಹರಿಸುತ್ತ ಶುಕ ನುಪ್ಪರಿಸಿದನು ನಭಕೆ ॥ ಕಪಿಬಲಾಂಬುಧಿ ಕೂಡೆ ಪಕ್ಷದ । ಪಿಪುಳ ತೇಜದ ಲಮಳ ಮರಕತ । ದುಪಲವರ್ಣವನೈದಿಕೊಂಡಿರೆ ಕಂಡನಾ ರವಿಜ ॥೨೩॥ ಎಲೆ ವಿಭೀಷಣ ನೋಡು ಪಕ್ಷಿಯ। ಕುಲಶಿಲೋಚ್ಚಯ ಪೆದ್ದವೊಲು ಕಂ। ಗೊಳಿಸುತಿದೆ ಮಾಯಾವಿಲಾಸವಿದಲ್ಲಲೇ ಖಳರ ॥ ಗಿಳಿಯ ರೂಪಿನ ಗುಪ್ತಚರ ನೆಂ। ದುಲುಕುತಿದೆ ಚಿತ್ತದಲಿ ಚಿತ್ತವ। ತಿಳುಹೆನುಲು ಕಂಡರಿದು ಬೇಹಿನ ದೂತ ನಿವನೆಂದ ॥೨೪॥ ಇವನು ಶುಕನೆಂಬಸುರನೀ ಕಟ। ಕವನು ನೋಡಲು ಬಂದನಿಂದಾ। ರಿವನ ಹಿಡಿಯದೆ ಬಿಟ್ಟಿಪ ದಡೆ ಬಹುವಪಖ್ಯಾತಿ ॥ ಇವನು ಸುಖ ಮುಖದಿಂದ ಲಂಕಾ । ಭುವತಿಯರಸನ ಕಂಡನಾದಡೆ । ಭುವನಸಿಥಿ ತಾ ಕಟ್ಟುವಡೆಪ್ಪದಸಾನ್ಯ ನಮಗೆಂದ ॥೨೫॥ ತಪ್ಪದೆನುತಿನಸೂನು ಕಪಿ ಕಂ । ದರ್ಪ ಸಾನನವನು ನಿರೀ

ಕ್ಷಿಸ। ಉಪ್ಪರಿಸಿ ಮಾರ್ಜಾಲ ಲೀಲಾಗತಿಯ ಗಾಢಿಯಲಿ ॥ ಒಪ್ಪವಭ್ರದ ಶುಕನ
ಕಂಠವ । ಕಪ್ಪಿನೆಡೆಯನು ಹಿಡಿಯೆ ಖಳನಸು । ಕುಪ್ಪಳಿಸಿದುದು ಕಳವಳದಲಿ
ಕುಮಾರ ಕೇಳೆಂದ ॥೨೬॥ ಕೊರಳ ಹದರಿನ ತಾಕಿ ಹಿಡಿದೊಡೆ। ಮುರಿದು ರೆಕ್ಕೆಯ
ನಿಳುಹಿ ತಂವನು। ಹರಿಕುಲೇಂದ್ರನ ಬಳಿಗೆ ಹರಿಸುತನನುಜನಾ ಖಳನ ॥ ವರವಿಭೀ
ಷಣ ನವನವೇಲಣ। ಕರುಣದಲಿ ಕೊಲಲೀಸದವನನು। ಸೆರೆವನೆಗೆ ನೂಕಿಸಿದ ನಭಿ
ಮತದಿಂದ ಜಾಂಬವರ ॥ ೨೭ ॥ ಅವನಿಜಾಸುತ ಕೇಳು ಸರಿಮುವು ॥ ದಿವಸ ನಾಲುಕ
ಬಳಿಕ ನಿಮ್ಮಯ। ಭುವನಪತಿ ಕಂದೆರೆದು ನೋಡಿದನಾ ಮಹೋದಧಿಯ ॥ ಇವನು
ನಮ್ಮನು ಬಗೆಯದಾದನೆ । ಶಿವಶಿವಾ ನಾವೇನು ಸದರವೊ। ಹರ ಮಹಾದೇವೆನುತ
ರೌದ್ರಾರೋಷ ಮನನಾದ ॥೨೮॥ ಪಟುತರಾಗ್ನಿಯನುಗಿದು ನಾಸಾ। ಪುಟದ ನಯನದ
ವಿಸ್ಫುಲಿಂಗೋ। ತ್ಕಟದ ರೋಷೋದ್ಧೂತ ಘೂರ್ಮೋದ್ರೇಕ ವಿಗ್ರಹದ ॥ ಚಟುಳ
ವಿಲಯಾನಲನ ಶಿಖಿ ಸಂ। ಘಟಿತ ಸಕ್ರೋಧಾನುಭವ ಧೂ। ರ್ಜಟಿ ವಿಡಂಬಕನೆದ್ದು
ಬೇಡಿದ ನನುಜನನು ಧನುವ ॥೨೯॥ ಬಳಿಕಲೇ ಪೇಳುವೆನು ಧನು ಕರ। ತಳಕೆಸಾರಲು
ಸಾರಿದುದು ವೈ। ವಳಿಯ ಲಬುಜಭವಾಂಡ ಗರ್ಭದ ಜೀವರಾಶಿಗಳು ॥ ನಿಲುಕಿನಲಿ
ಸುರಚಾಪ ಮೌರ್ವಿಯೊ । ಳಿಳಿಯೆ ಸರಳನು ಸಪ್ತಸಾಗರ। ವಿಳಿದವಾಕ್ಷಣ ಮಹಿಮೆ
ಯೆಂತಟೊ ಮನುಕುಲೇಶ್ವರನ ॥೩೦॥ ಹುಟ್ಟಿ ತುರಿ ಶರಮುಖಮೊಳಣದುದು। ತಟ್ಟಿ
ತುದಿಯೊಳಜಾಂಡ ಭಾಂಡವ। ಧಟ್ಟವಿಸಿ ತುರಿಮುರಿದು ದಿಗುಭಿತ್ತಿಗಳ ಬಳಿವಿಡಿದು ॥
ಬಿಟ್ಟನೂರ್ವಿಯ ನಹಿಪಕೂರುಮ। ರೊಟ್ಟುಗಿಚ್ಚಿನ ಸೆಕಳೆಯಲಿ ತನು। ತುಟ್ಟಿಸಿತು
ತನುತಾಪದಲಿ ಶಂಕರ ವಿರಿಂಚಿಗಳ ॥ ೩೧ ॥ ಉರಿವ ಕರಡಿಗೆಯಂತೆ ಶಿಖಿ ಡಾ। ವರಿಸಿ
ತಬುಜ ಭವಾಂಡ ಭವನವ। ನಿರದೆ ಸಚರಾಚರಗಳಡಗಿದ ವಜನ ಗರ್ಭದಲಿ ॥ ಧರೆ
ಮಹೋದಕ ದಹನ ವಾಯುಗ। ಳಿರವು ಗಗನದೊಳಡಗಿದುವು ಸಂ। ವರಣ ತೇಜೋ
ಮೂರ್ತಿಯಪೊಲಸುರಾರಿ ರಂಜಿಸಿದ ॥ ೩೨ ॥ ಇಳಿದುದುರಿ ಬಗಿದಂಬುನಿಧಿ ಯೊಡ।
ಲೊಳಗೆ ಥೆರೆಥೆರೆ ಬಳಿಯ ಬಗಿಬಗಿ । ದಿಳಿದಡರಿದುದು ಛಟಛಟತ್ಕೃತಿಗಳ ಛಡಾಳ
ದಲಿ ॥ ತುಡುಕಿ ತೂಳುವ ತುಂತುರಿನ ಕಿಡಿ। ಹಳಚಿದವು ಹೊದರೆದ್ದ ವಡಬಾ। ನಲನ
ನೊದೆದುದು ರಾಮಭದ್ರನ ಭೀಮ ಬಾಣಾಗ್ನಿ ॥೩೩॥ ಉರಿ ಮಳಲರಾಶಿಯಲಿ ರತುನಗ।
ಳರಳಿದುವು ಜಲಜಂತುಗಳು ಸೀ। ಕರಿಗಳಾದವು ಶಿಖಿಗೆ ಪಥವಾದುದು ರಸಾತಳಕೆ ॥
ವರುಣನರಮನೆ ಹನುಮ ದಹಿಸಿದ। ಪುರವಪೋಲ್ದುದ ಕೂಡೆ ಧಳ್ಳುರಿ। ಜಿಗಿ ತಂತಃ
ಪುರದ ಸತಿಯರ ತನುಲತಾವಳಿಯ ॥೩೪॥ ಕೇಸರಿಯ ಕಾರ್ಬೊಗೆಯು ಶಿಖಿ ವೇ। ಢೈಸಿ
ತಬುಧಿಯ ಮದದ ಗಾಢಿಕೆ। ಘಾಸಿಯಾದುದು ಗಾಳುಮೇಳುಪ್ಪರಿಸಿ ತಂಬರವ ॥ ಹಾ
ಸರಸ್ವತಿಯೆನುತ ಮೇಲು ದಿ । ನೋಸರದ ಬಿಡುಮುಡಿಯ ಬಾಯ್ಗಳ। ಬಾಸುಳಿನ
ವನಿತೆಯರು ಬೆರಸಿದರಾ ನಿಜೇಶ್ವರನ ॥೩೫॥ ಪಾಪಿ ಹೊರವಡು ವಿಶ್ವರೂಪನ। ಕೋಪ
ವಲಿ ಗಂಭೀರತನ ದಾ । ಳಾಪ ಕೊಂಬುದೆ ಕಮಲಜಾಂಡೋದರನ ಮುಳಿಸಿನಲಿ ॥
ರೂಪು ಗೆಡಬೇಡಕಟ ನಡೆ ಯೆನು। ತಾಪಗಾ ವನಿತೆಯರು ಮಾನವ। ರೂಪಿನಚ್ಯುತ
ನೆಡೆಗೆ ಹಿಡಿದೆಳೆತಂದ ರಂಬುಧಿಯ ॥ ೩೬ ॥ ಯಮುನೆ ಭಾಗೀರಥಿ ಸರಸ್ವತಿ। ವಿಮಲ
ನರ್ಮದೆ ಸರಯು ವರ ಗೌ । ತಮಿ ಕುಮಾರೀ ಭವೈ ಕೌಶಿಕೆ ಕೃಷ್ಣೆ ವೇಗವತಿ ॥

ಸುಮತಿ ಭೀಮರಥ ಪ್ರಮುಖ ನಿಜ । ರಮಣಿಯರು ನಿಂದಿರಿಸಿದರು ವಿ । ಭ್ರಮದ
ನೀರಜಮುಖದ ನಿಜಪತಿಯನು ಸರಾಗದಲಿ ॥ ೩೭ ॥ ಎಡದ ಕೈಯ್ಯಲಿ ಕರ್ಣಪತ್ರವ ।
ಹಿಡಿದು ಬಲಗೈಯಂಗುಲಿಯ ಬಾ । ಯ್ಗಡಸಿ ಬಳಲುವ ಬಾಯ್ದೆರೆ ನಿಜದೈನ್ಯ ಭಾವ
ದಲಿ ॥ ಅಡಿಗೆ ಚಾಚಿವಳನುಪಮದ ಸೋ । ಮ್ರ್ಗಡಿಯ ನೀ ಸೌಭಾಗ್ಯ ವಿಭವವ ನಡು
ಗಿಸಲು ಬೇಡೆಂದು ಜಾಂಹ್ನವಿ ಜಾನಕೀಪತಿಗೆ ॥೩೮॥ ಮಗಳಲಾ ಯೆಲೆದೇವ ನಿನಗಾ ।
ನಗಡುತನ ವೇಕೈಯ್ಯ ತನ್ನಲಿ । ಸಗರ ವಂಶೋದ್ಭವೆಯೆಲಾ ಮೋಹೇಕೆಯಲಿ ನಿನಗೆ ॥
ಮಗಳಿಗಕಟಾ ತಂದೆ ಮುನಿವರೆ । ನಗದಿಹರೆ ಬಲ್ಲವರು ಕರುಣಾ । ಳುಗಳ ದೇವಂಗೇಕೆ
ಮುನಿಸಿನ್ನಂದಳೈಯ್ಯಂಗೆ ॥೩೯॥ ಈತ ಲಕ್ಷ್ಯವೆ ನಿನಗೆ ನೀನಖ್ಯಾ । ತನೇ ಭೂಮ್ಯಾದಿ
ಪಾಂಚೀ । ಭೂತ ಮಾರಿಂದುದಯ ಮಾರಿಂದಡಗುವುದು ಕಡೆಗೆ ॥ ಯೇತಕೀ ನರನಾಟ
ಕದ ಮಾ । ಯಾತಿರೋಧಾನತೆಯುದಾರ್ಗೆ ನಿ । ಶಾತ ಶರಸಂಧಾನ ಸಮಯ ವಿದೆಂದ
ಳೈಯ್ಯಂಗೆ ॥೪೦॥ ಶರಣು ಹೊಕ್ಕರ ಸಲಹುವಗ್ಗದ । ಬಿರುದು ದೇವತ್ವದಲಿ ಭೂವಿಶಾ ।
ಶ್ವರ ಪತಿತ್ವದಲಾವನೈ ಸಿರಿ ಶರಣು ಗತಿಕರಲಿ ॥ ಶರಣು ಹೊಗ ಬಂದವನೊ ಮೇಣ್ಮ ।
ತ್ಸರಿಸ ಬಂದವನೊ ಮಹೋದಧಿ । ಇರವ ನೋಡೆಲೆ ದೇವ ನೀನೆಂದಳು ಕೃಪಾನಿಧಿಯ ॥
ಸರಗ ನೆಲದಲಿ ಹಾಯ್ಕಿ ತನತನ । ಗೊರಲಿದರು ಮಾಂಗಲ್ಯ ಸೂತ್ರವ । ಹರಿಯ
ಬೇಡೆಲೆ ತಂದೆಯೆಂದು ಸುಮಸ್ತ ನಾರಿಯರು ॥ ಮರೆಯುಮಾಯಾನರನ ಕೃಪೆ ಕಂ ।
ದೆರೆದುದೈ ಬಳಿಕಸಿತರಲಿ ಶರ । ದುರುಗಲಿನ ಶಿಖಿ ಸಂತವಿಸಿದುದು ಝಳದ ಝಾಡ
ಸೆಯ ॥೪೨॥ ಕರುಣದಳತೆಯ ಕಂಡು ಜಾಂಬವ । ತರಣಿಜಾದ್ಯರು ಬೇಡಿಕೊಂಡರು ।
ಕರಸರೋಜವ ಮುಗಿದು ಶರಧಿಯ ಸಲಹಬೇಕೆಂದು ॥ ತರುಣ ಕೇಳ್ದೈ ಬಳಿಕ ಜಲನಿಧಿ ।
ಕೊರಗಿದಾನನ ಮಳಿದ ಹಮ್ಮಿನ । ಕರುಣ ಭಾವದಲೊಡಲ ಚಾಚಿದ ನಂಘ್ರಿಯಲಿ
ನೃಪನ ॥೪೩॥ ದೇವದೇವ ಜಗನ್ಮಯನೆ ಲ । ಕ್ಷ್ಮೀವಿಲಾಸ ವಿನೋದ ವೈಭವ । ಭಾವ
ಕನೆ ಭಕ್ತಪ್ರಿಯನೆ ಭಾಗೀರಥೀ ಪಿತನೆ ॥ ದೇವ ನರನಾಟಕ ವಿನೋದ ಕ । ಲಾವಿದನೆ
ಕಮನೀಯತರ ಲೀ । ಲಾವತಾರನೆ ಕಲುಷಹಾರನೆ ಕಾಯಬೇಕೆಂದ ॥೪೪॥ ಸ್ತಿಮಿತ
ನನು ದುಶ್ಮಬ್ದ ನಿಗಮ । ಕ್ರಮಿತನನು ವಿಭ್ರಮಣ ಶೀಲ । ಭ್ರಮಿತನನು ಸುಗ್ರಹನನಾ
ಪರಿಬದ್ಧ ವಿಗ್ರಹನ ॥ ಅಮಿತ ಪಂಚಕ ಸಂಭೃತನ ಸಂ । ಕ್ರಮಿತ ದೋಷಾಕರನ
ಗರ್ವನ । ಕ್ಷಮಿಸಬೇಕಪರಾಧ ಶತವನು ಮರೆದು ನೀನೆಂದ ॥೪೫॥ ಪ್ರಣವರೂಪ
ಸುರೂಪ ನಿರ್ಗುಣ । ಗುಣ ನಿತಾಂತ ಕೃತಾಂತ ವನಿತಾ । ಪ್ರಣಯ ಮಾಯಾ ಪ್ರಕೃತಿ
ರಹಿತಧ್ವಾಂತ ಲಘುಶೂನ್ಯ ॥ ಅಣುಮಹತ್ಪರಿಪೂರ್ಣ ಚಂದ್ರಾ । ರುಣ ಹುತಾಶನ
ತೇಜರಿಪು ರಾ । ವಣ ವಧಾ ಸಂಭೂತ ಕಾರಣ ಕಾಯ ಬೇಕೆಂದ ॥ ೪೬ ॥ ಅನುಪಮಾ
ನಂದಾತ್ಮಸದ್ವ್ಯಯ । ನನಘ ನಮಿತನಸಾಧ್ಯ ನಗಣಿತ । ನನಪಸಾನನ ಜಾತ ನವ್ಯಯ
ನಭವ ನನೆಸೂಯ ॥ ಘನಮಹಿಮ ಘನತೇಜ ಘನಗುಣ । ಘನತರೋದ್ಯಪ್ರಬಲ
ಘನನಿ । ಗರ್ತ ಘನಾಯುತ ದೇವ ತನ್ನನು ಕಾಯಬೇಕೆಂದ ॥ ೪೭ ॥ ವಿಶ್ವತೋಮುಖ
ವಿಶ್ವಲೋಚನ । ವಿಶ್ವವಿಶ್ರುತ ವಿಶ್ವತೋಭುಜ । ವಿಶ್ವವಿಗ್ರಹ ವಿಶ್ವಪಾದ ಸವಿಶ್ವ ವಿಶ್ವ
ಪತಿ ॥ ವಿಶ್ವಚೇತನ ವಿಶ್ವಭಾವನ । ವಿಶ್ವಗತ ವಿಶ್ವೇಶ ಯೀಶ್ವರ । ವಿಶ್ವ ವಿಶ್ವಾತ್ಮಕ
ಜಡಾತ್ಮನ ಕಾಯ ಬೇಕೆಂದ ॥೪೮॥ ಅವನಿಂದುದಿಸಿಹವು ಬಹು ಭುವ । ನಾವಳಿಗಳೆಲೆ

ದೇವ ಚಿತ್ತೈ | ಸಾವನಿಂ ಪರಿರಕ್ಷಣವು ತೋರ್ಪೀ ಜಗತ್ರಯವು || ಅವನವಿಲಯ
ಭೂತ ಪಂಚಕ | ಪಾವನಾಜ್ಞಾಮಾತ್ರ ವಿದ ಸಂ | ಭಾವಿಸದೆ ಸಂಹರಿಸ ಬಗೆವರ ದೇವ
ನೀನೆಂದ || ೪೯ || ಕೋಟಿ ಕಮಲ ಭವಾಂಡ ಗರ್ಭನೊ | ಳಾಟವಿಕತನ ಸಲುವುದೇ
ಕತ | ಕೋಟಿ ಕಾಲ ಪರಾಕ್ರಮನೊಳುದ್ದಂಡವೇ ತನಗೆ || ಕೋಟಿ ರುದ್ರನ ರೌದ್ರ
ನೊಳು ಮುಸಿ | ಸಾಟವೇ ಸಂವರ್ತ ಹುತವಹ | ಕೋಟ ತೇಜನೊಳಿದಿರೆ ತಾ ತನ
ಗೇಕೆ ಶರವೆಂದ || ೫೦ || ಸಿಡಿಲ ಸುರುಬೆಯು ನಾಸ ಬಲ್ಲುದೆ | ಕೊಡೆ ಲಯಾಗ್ನಿಯ
ತೂರು ಗಿಡಿಗಳ | ತಡೆವುವೇ ತೃಣವಕಟ ಕಲ್ಪದ ಕಡಲ ಕಡುಹಿಂಗೆ || ಕೊಡನು
ಕೊಂಬುದೆ ದೇವ ನೀ ಮುನಿ | ದೆಡೆಯಲಾನೇ ನಿನಗೆ ಗುರಿ ನನೆ | ಗೆಡೆಯ ಹೊತ್ತೆ
ಸಿರರ್ಥ ಲೋಕದೊಳೆಂದನಾ ಜಲಧಿ ||೫೧|| ಮೇರು ವೆತ್ತಣುವೆತ್ತ ಸಿಡಿಲ | ಕಠೋರ
ನಿಸ್ವನವೆತ್ತ ಜಂಬುಕ | ನಾರುಭಟಿ ತಾನೆತ್ತ ತರಣಿಯ ಕಿರಣದುಬ್ಬರವಿ || ಧಾರಿ
ಯೆತ್ತಲು ಮಿಂಚು ಬಳವಿಸು | ನಾರತೆಯ ಬೆಳಗೆತ್ತ ವಿಶ್ವಾ | ಧಾರ ನೀ ತಾನೆತ್ತ
ಸರಳಿನಗುಚಿತವೇ ಯೆಂದ || ೫೨ || ಹನುಮ ದಾಂಟದಡೇನಮಾಡಿದೆ | ಮುನಿದೆನೇ
ನಾನಾತನಲಿ ಮುನಿ | ಮುನಿದು ಕುಡಿದಂದೇನಮಾಡಿದೆ ನಾ ಮುನೀಂದ್ರಂಗೆ || ಕನಲಿ
ಭಾರ್ಗವ ಕೋಪಿಸಿದ ಡಾ | ಕನಲಿ ತಾ ಖತಿಗೊಂಡೆನೇ ಸಂ | ಹನನ ಕಂಪೈಸುವುದು
ಯೋಗ್ಯವೆ ದೇವ ನಿನಗೆಂದ ||೫೩|| ಈ ಸಮುದ್ರ ಕುಲಾದಿ ಭೂಮ್ಯಾ | ಕಾಶ ಚಂದ್ರಾ
ದಿತ್ಯ ವಾಯು ಹು | ತಾಶನ ಗ್ರಹ ತಾರೆ ತಾಮರಸಾಯನಾದಿಗಳು || ಈ ಶರೀರದ
ರೋಮ ಕೂಪ ನಿ | ವಾಸಿಗಳಲಾ ದೇವ ನೀ ಮುಳಿ | ಹೇಸರವನೆಂದೇಕೆ ದಾಂಟಲು
ಬಾರದೇ ಯೆಂದ || ೫೪ || ತಾನು ಜಡಮುಖನಾಪಡಜ್ಞನೆ | ನೀನು ನೀ ತಾಮುನಿಯ
ಬಹುದೇ | ಹೀನನಲಿ ಹಿರಿದಾದ ಪ್ರಯತ್ನವದೇಕೆ ನಿನಗಿನಿತು || ಹೀನನೊರಸುವಡೇಕೆ
ಶರಸಂ | ಧಾನ ವಕಟಾ ನಗದಿಹರೆ ವಿ | ಜ್ಞಾನಮುಖವುಳ್ಳವರು ನಿನಗಿದು ಗುಣವೆ
ಹೇಳೆಂದ ||೫೫|| ಅಂಬುನಿಧಿ ಕೇಳ್ ನೀನದೇನೆಂ | ದೆಂಬಪರಿ ಗವಸರಣೆಯಲಿ ನುಡಿ
ಗಿಂಬು ಗೊಡುವವನಲ್ಲ ಜಗಕನ್ಯಾಯ ಕೃತರಲ್ಲ || ಇಂಬು ಬೇಡಲಿಕೋಸುಗವೆ ತಮ |
ಪೆಂಬುದನು ಕೈಗೊಂಡೆವದು ನಮ | ಗಿಂಬು ಗೊಡದಿರೆ ಬಳಿಕ ಬರಿಸಿದೆನೈಸೆವಾವೇದ||
ದೇವ ರಾ ವೆಂದೆಮ್ಮನುದ್ಧಕೆ | ನೀವು ಸಿಗುಚದಿ ರಾವು ಮರ್ತ್ಯರು | ದೇವತನ ನಮಗು
ಳ್ಳಡೀಯ ಶ್ಲಾಘ್ಯವೇ ನಿಮಗೆ || ನೀವು ಘನ ಗಂಭೀರರೆಂಬುದ | ನಾವು ಬಲ್ಲೆವು
ಹಧವ ಕರುಣಿಸಿ | ನೀವು ಸುಖವಲಿ ಬಿಜಯಮಾಡುವುದೆಂದನಾ ರಾಮ || ೫೭ || ಬಲ್ಲೆ
ನಿನ್ನಂತರವ ನಾಕಿ | ನ್ನೆಲ್ಲಿ ಪರಿಯಂತರವು ತೆರೆ ಮರೆ | ಯಿಲ್ಲ ಈಗಲೆ ಕಟ್ಟುಕೊಂ
ಬೆನು ನಳನ ಕೈಯಿಂದ || ಕಲ್ಲನಲಿ ನಳನೀಗ ನಿರ್ಜರ | ರಲ್ಲಿ ಕೃತಮುಖ ವಿಶ್ವಕರ್ಮನು |
ಬಲ್ಲನೀ ಹದನವನು ಹೇಳುವುದೇನು ತಾನೆಂದ ||೫೮|| ಜೀಯ ನಮ್ಮನು ಪತಿಕರಿಸಿದ
ವೊ | ಲೀ ಯಪಾರ ಸಮುದ್ರವನು ತಲೆ | ಗಾಯಬೇಕೆಂದೆರಗಿದರು ತರುಚರರು ಓರಿ
ಪದಕೆ || ರಾಯ ಕೇಳ್ದ ಮೇಲೆ ರಾಘವ | ರಾಯ ನಬುಧಿಗೆ ಕೊಟ್ಟ ಘನಶಿಖಿ | ಸಾಯ
ಕಾಗ್ರದೊಳುಗಿಸಿದನು ಕರುಣಾಮೃತಾಂಬುಧಿಯು || ೫೯ || ನುಡಿಗೆ ಜೋಡಿಗೆ ಕೃಪೆಗೆ
ವಿಕ್ರಮ | ದೆಡೆಗೆ ಸಲ್ಲಿಟವುಂಟೆ ನಿಮ್ಮಮ | ಪೊಡವಿಪತಿಗೆಲೆ ಕೇಳ್ದೈ ಕಾಕುತ್ಸ್ಥ ನೃಪ
ಸೂನು || ಕವಲಿಗೆಂದನು ಬಳಿಕ ಕರುಣದ | ನುಡಿಯ ನರಿಘಟರುಳ್ಳರವರ | ದ್ವಿಷವ

ಹೇಳಸುಗೊಂಬೆ ವಂಜದಿರಿನ್ನು ನೀವೆಂದ ॥೬೦॥ ಹೇಳಿದನು ಹಗೆಗಳನು ರಘು ಭೂ। ಪಾಲಗಂಬುಧಿ ರಾವಣನಾ ನುಡಿ । ಗೇಳುತಾಕ್ಷಣ ಬಿಟ್ಟನಾಯುಡಿಗಾ ಮಹಾಶರವ ॥ ಕೇಳಿದೈ ಬಳಿಕಳಿದು ದೆಂಭ। ತ್ರೀಳುಕೋಟಿ ನಿಶಾಚರರು ತೃಣ। ವೇಳಿದವೊಲಾ ದ್ವೀಪ ಮರುವನವಾಯ್ತು ನಿಮಿಷದಲಿ॥೬೧॥ ಸ ರರು ಸವಾಗ್ರನಿಸಿದರಬುಧಿಯು ತರುಣಿಯುರು ರತುನಾರತಿಯು ವಿ। ಸ್ತರಿಸಿದರು ರಿಪುವಿಜಯು ನಾಗೆಂದು ಹರಸಿ ಸೇಸೆಯನು ॥ ಚರಣ ಕಾನತನಾಗಿ ರಘುಕುಲ। ದರಸ ತೊರನೆಯುರಾಯು ನರಕೇ। ಸರಿಯ ಬೀಳ್ಕೊಂಡನು ಸಮುದ್ರನು ಸಕಲ ವಿಭವದಲಿ ॥ ॥೬೨॥

ನಾಲ್ಕನೆಯ ಸಂಧಿ ಸಮಾಪ್ತಂ.

ಐದನೆಯ ಸಂಧಿ.

ಸೂಚನೆ॥ ನಳನು ರಿಪುಸಂಹಾರ ಕಾಲಾ । ನಲನು ಕಾರುಣ್ಯದಲಿ ಬಿಗಿದನು । ಜಲ ನಿಧಿಗೆ ಸೇತುವನು ಸಕಲ ಸುರೌಘ ನಲಿದಾಡೆ ॥

ಪದ್ಯ॥ ಎಲೆ ಭಗೀರಥ ವಂಶವಾರುಧಿ। ನಳಿನಳಿನಸುತ ಕೇಳು ಕರುಣಾ। ಜಲಧಿ ಯಲ್ಲಾ ಕಾದನನ್ವಯ ಸಾಮಧಾರಕನ॥ ಇಳೆಯ ನರನೇ ನೋಡೆ ರಘುಪತಿ। ಸುಲಭ ನಲ್ಲಾ ಭಕ್ತರಿಗೆ ಹೊ । ಕ್ಕಳವ ಕೇಳೈ ಹೇಳುವೆನು ಬೇಗಾ ಮಹೋದಧಿಯ ॥ ೧ ॥ ಜಗದ ಜನನ ಲಯಂಗಳಿವೆ ಯಾ । ಟಗಳ ಪವಣಡಗುವವು ರಾಮನ । ದೃಗುನಿರೀ ಕ್ಷೆಯ ಲುಬ್ಬಲರಿವೇಸಿದ್ದುದಂಬುಧಿಗೆ ॥ ಹಗೆಗೆ ಕವಳವಗೊಂಡಭಟನು। ಬ್ಬುಗಳ ರವದವೊಲುಬ್ಬಿದನು ತೆರೆ। ಗಗನವನು ಘುಮ್ಮಿಡಲು ಗಾಢಿಯ ಜಲಚರಂಗಳಲಿ ॥೨॥ ಸುಳಿಸುಳಿಯ ಲಣದಾಡಿಮುವು ಘುಳು। ಘುಳು ಘುಳುಧ್ವನಿಗೂಡಿರಿದು ಮುಂ। ಡಲಿಸಿ ಮುಗಿಲಲಿ ಹೆಳಚಿಮುವು ಹೊದರಿನ ತುಷಾರದಲಿ ॥ ತೊಲಗಲೆಚ್ಚನೆ ಬರಿಯ ಬಾಣವ। ನೊಳಗರಿಯ ದಕಟಿನುತ ನೃಪ ಕಳ । ವಳಿಸಲುಬ್ಬಿದ ವಬುಧ ವಿಬುಧರ ಲೋಕಪರಿ ಯಂತ ॥೩॥ ಕರೆಸಿ ನಳನಿಂದರಿವ ಸೀತನ । ಪರಿಯ ನಾತನೊಳಾಗದಿರೆ ಬಳಿ। ಕರಿಗೆ ಕುಡಿನೀರ್ರೈಸತೇ ಯೆನುತತುಳ ಬಳನಳನ ॥ ಬರಿಸೆ ಕೈಮುಗಿದೆಂದು ಬೆಸಸೆನೆ। ಹರುಹ ಕಂಡೈ ಸಾಗರನ ಸಡ। ಗರವ ಕಂಡೈ ಕಾಣೆ ಲಿ ನಿನ್ನಧಟುತನವೆಂದ ।೪॥ ಎನೆ ಹಸಾದ ವೆನುತ್ತ ಲಂಕೆಗೆ। ಹನುಮ ಹಾರಿದ ಗಿರಿಗೆ ಲಂಘಿಸಿ। ವನಧಿ ಕಂಪಿಸೆ ಕಿತ್ತು ತಂದಂ ಬುಧಿಯು ನೆತ್ತಿಯಲಿ ॥ ಅನಿಮಿಷರು ಭಾಪೆನಲು ಹೊರಿಸಿದ । ನಸಿತ ಕಂಡಸುರಾರಿ ನಸುನಗು। ತಿನತನುಜ ಕೇಳುತ್ತರಾಯುಳ ಗಂಬುನಿಧಿಯೆಂದ ॥೫॥ ಐಸಲೇ ತಾನೇನು ವೆಗ್ಗಳ। ದೀಸರಲಿ ತಾನೆಂದು ಕಿತ್ತನು । ವಾಸಿಸಾಡಿಸ ಲದ್ರಿಯನು ಶತಯೋಜನಾಂ ತರವ ॥ ದಾಶರಥಿಸುತ ಕೇಳು ಬೊಬ್ಬಿರಿ। ದಾ ಸಮುದ್ರದೊಳಿಳುಹಿದನು ಜಲ। ರಾಶಿ ಝುಡಿಯಲು ಝುಡಿತೆಯಲಿ ಶತಬಲಿ ಸಗಾಢದಲಿ ॥ ೬ ॥ ಇಳುಹಿದದ್ರಿಯು ಕಾಣೆ ಧರೆ ಯಿಂ। ದಿಳುಹಿ ತೊಡಲಲಿ ತಿಮಿ ತಿಮಿಂಗಿಲ। ನಳವಡಿಸಿದುದು ತಿಮಿಯ ನುಂಗಿದುದಾ ತಿಮಿಂಗಿಲನು ॥ ಗುಳಿಗೆಗೊಂಡುದು ದಾತಿಮಿಂಗಿಲ। ಜಲಜ ಬಳಿಕಾ ಮಿಾನ ನುದರಾ। ನಳಗೆ ಕೊಟ್ಟೊಡ ನೊರಸಿತೆಡೆಯ ನು ಮಕರವಬುಧಿಯಲಿ॥೭॥ ಒಡನೆ ಗಜ ಗವಯಾದಿ

ನಾಯಕ | ರಡಸಿ ಹಾಯ್ದವ ರದ್ರಿಗಳನವ | ನೊಡನೊಡನೆ ನುಂಗಿದುವು ನೆರೆದುವು ಮತ್ತೆ ಮಕರಚಯ || ಕಡಲು ಕಲಕಿತು ನೆಗಳುಗಳ ಬಲು | ಗಡಿಯ ಮೀನಿನ ಬವರ ದಲಿ ಜಗ | ದೊಡೆಯ ರಘುರಾಜೇಂದ್ರ ಚಂದ್ರನು ಕಂಡು ಬೆರಗಾದ || ೮ || ಬಳಿಕ ರಘುಪತಿ ಕರೆದು ಸುಭಟಾವಳಿಗೆ ನುಡಿದನು ನಿಮ್ಮ ಭುಜಬಲ | ದಳವ ಮೆರೆಯೆ ದಶಾನನ ಸಂಗ್ರಾಮ ಸೀಮೆಯಲಿ || ಅಳವು ನಳನೊಳದೇಕೆ ಸಾಕಿದ | ರಳಿಕೆ ನಮ್ಮ ದೆನುತ್ತ ವಾಸಿಯ | ಬಲುಹ ಜಡಿಸಿ ಬಳಿಕ ನಿಂದಿದ ನಬುಜಭವಸೂನು ||೯|| ಕರೆದು ನೀಲಾಂಗದರ ಹನುಗೆಗೆ | ಹರಿಬಲವ ನೆರಡಾಗಿ ಸೇರಿಸಿ | ಗಿರಿಗಳಿಗೆ ಬೆಸಸಿದನು ಬಂದನು ಸಾಗರದ ತಡಿಗೆ | ಸರಸಿಜಾಸನ ಸುತನ ಮತವಿ | ಸ್ತರಣದಲಿ ಶತಯೋಜನದ ಪರಿ | ಸರದ ಪಾರಾವಾರವನು ಸೂತ್ರಿಸಿದ ರಗಲದಲಿ||೧೦|| ಒಳಗೆಲಸ ದವರಿವರು ಗಿರಿಸಂ | ಕುಳವ ನೀಡುವರಿವರು ಕಳುಸಂ | ಕಲೆಯುವರು ಸಂವರಣೆಗಿವರಿವರೆಂದು ಬಲುಭಟರ | ಹೊಳಕೆಗರ ಹೊನ್ನಿರಿದು ಕೊಟ್ಟನು | ನಳನ ವಶಕೇನೆಂಬೆ ಬೊಬ್ಬೆಯ| ಕಳವಳಿಕೆ ಕಡುಹಾಯ್ತು ಕಾಲ್ವೆಳೆಯಲಿ ಕಪೀಶ್ವರರ || ೧೧ || ಕರೆದು ರಾಕ್ಷಸ ಸಾರ್ವಭೌಮನ | ನಿರಿಸಿದನು ಪ್ರತ್ಯೂಹ ದಶಕಂ | ಧರನ ದೆಸೆಯಿಂದಾಗದವೊಲಂಬುಧಿಯ ದಕ್ಷಿಣದಿ || ತಳವುಗುಚಿದುವು ತೋರ ಗಿರಿ ಕರ | ತಳದ ಬಿಗುಹಿಗೆ ಕುಲಮಹೀಧರ | ಕಳಲಿದುವು ಕಡುಹಿಂದ ಕಪಿರಾಜೇಂದ್ರ ಸೈನಿಕದ ||೧೨|| ಸಾರಗಟ್ಟಿತು ಸಾಗರಕೆ ಮಂ | ದಾರಕಾಚಲ ನೆರೆದು ಗಿರಿಗಳ | ಭಾರಕಿಳೆ ತಪಿಗೆಗ್ಗತಿರ್ದುದು ನಿಮಿಷ ನಿಮಿಷದಲಿ || ಆರು ಧರಿಸುವರನುಮ ಫಣಿಪತಿ | ಕೂರುವರ ಕೊರಲೆಡೆಗಳಲಿ ಬೀ | ಡಾರವಾದುದು ಹೃದಯಗತ ಸತ್ಪ್ರಾಣ ಮಾರುತನ ||೧೩|| ಬೀಳುತಿರ್ದುವು ಬೆಟ್ಟ ಕಪಿಗಳ | ತೋಳ ನೆಗಹಿನ ಲದ್ರಿಘಾತಗ | ಳೇಳುತಿರ್ದುದು ತೆರೆಗಳೊಡೆ ದಂಬರದ ತುದಿವರೆಗೆ || ತೂಳ ತೋರೈಸುವ ಜಲೋಗ್ರ | ವ್ಯಾಳ ಗಜ ಪಾಠೀನ ಕುಲವ.ಕ | ರಾಳ ವ್ಯೈಮರೆಸಿದುವು ಮದವಕ್ಕುಡಿಸಿತಂಬುಧಿಯ ||೧೪|| ಕಡಲ ಕಾಹುರ ಕಳ್ಳಿಹುಯಿಲಿನ | ಲಡಗುದರಿಸು ತ್ತಿರ್ದುದಗ್ಗದ | ವಡಬನಘುಮರುಪಣದೊಳಿರ್ದನು ಮೇಲೆ ನಳಿನಸಖ || ನಡುಗು ತಿರ್ದನು ನೀತದಲಿ ಮೇ | ಲ್ಗಡೆಗೆ ಮಳಲುಪ್ಪರಿಸುತಿರ್ದುದು | ನುಡಿವಡೆ ನಗರಿ ದಣುಗ ಕೇಳಾಸಿಂಧು ಬಂಧನದ ||೧೫|| ತೀರಿದುವು ಗಿರಿ ಮರು ಯಾವನ ಗಾಂ | ಧಾರ ಗುಜ್ಜರ ಗೌಳ ಮಾಳವ | ಪಾರಸಿಕ ಪಾಂಚಾಲ ಸೇವಣ ಸಿಂಧು ಕಾಂಭೋಜ || ಕೇರ ಳಾಂಧ್ರ ಕರೂಷ ಕುರು ಹಂ | ಮ್ಮೀರ ವಂಗ ಕಳಿಂಗ ದೇಶದ | ಭೂರಿಭೂಧರ ಸಿಕತ ನಳನ ಸಮುದ್ರ ಬಂಧದಲಿ ||೧೬|| ಹರಿದು ಪಲ್ಲಂಮೇಲೆ ಬಲನೋ | ಹರಿಸಿ ಹೊಕ್ಕುದು ಕಿನ್ನರರ ಕಿಂ | ಪುರುಷ ಗುಹ್ಯಕ ಯಕ್ಷ ವಿದ್ಯಾಧರರ ಖೇಚರರ || ಗರುಡ ಗಂಧರ್ವಾದಿ ನಾನಾ | ಪುರಣೆಗಳ ಧರಣೀಧರಾಳಿಯ | ಶರಧಿಗಡರಿಕಿತು ಸೇನೆ ರಘುರಾಜೇಂದ್ರ ಚಂದ್ರಮನ ||೧೭|| ಗಿರಿಗಳೋ ಗೀರ್ವಾಣ ಶರಧಿಯ | ಸರಿಗಳೋ ಸಂವರ್ತಮೇಘದ | ಕರಗಳೋ ಕಾಕುತ್ಸ್ಥ ವಂಶ ಸ್ತ್ರೀ ನಿತಂಬಿನಿಯ || ಪಿಂಚಿತಾಲಂಕೃತಿಯಲಾಸ್ಯದ | ಕರತಳದ ಕಂತುಕವೊ ಯೆನಲು | ಪ್ಪರಿಸಿ ಕುಪ್ಪರಿಸುತ್ತಲಿರ್ದುದು ಗಿರಿ ಸಮುದ್ರದಲಿ || ಗಿರಿಗಿರಿಯ ಹೊಯ್ಲಿಗೆ ಜಲಸಿ | ಕರಗಳಾದುವು ನ್ಯೆಪನ ಘನನದ | ಸಿರಿವ ಮುಗುಳಪ್ಪರಿಸಿ ಬೀಳುವ ಶೈಲದುರದ ಬಯಲಿ || ಜರುಗಿದುವು ತೆರೆ ವಿಗುಳಟದ ಬಲು | ಗಿರಿಯ

ಲಂಬುಧಿ ಗುವನ್ಮತಿವರ್ಣದು | ಸುರರ ಕಡಹದ ಕಡಲ ರಭಸಕೆ ಕೋಟಿ ಮಡಿಯೆನಲು||
ಇಡುವ ಗಿರಿಘಾತವಲಿ ಘಾತಿಸು | ಕಡಲ ರಭಸಕಜಾಂಡಘಟ ಘು | ವ್ಮಿಡುತ
ಲಿರ್ದುದು ಕೂಗುತಿರ್ದುದು ತನುವಿಸಿಳೆ ಬಳಿಕ || ಸಿಡಿದ ಸೀರ್ಪನಿವಾಗಿ ಕನಲಿಸೆ |
ವಡವಡಿಸಿದುದು ವ್ಯೋಮ್ನಗಕೆ ಜರು | ಹಿಡಿ ಕಡಿಗಳಿದ ಗಿರಿಯುರಗರಾಜಿಗಳ ಜೋಡಿ
ಗಳ || ೨೦ || ಇಟ್ಟು ಗಿರಿಗಳ ಹಿಡಿಹಿಡಿವು ನಳ | ನೊಟ್ಟಿದನು ಪೆಟ್ಟಿದನು ಕಟ್ಟಿದ |
ನಿಟ್ಟಣಿಸಿಬಹ ಗಿರಿಯನಾ ಬಳಿಸಲಿಸಿ ಬಹಗಿರಿಯು || ಕೊಟ್ಟ ಗಿರಿಗಳ ಕೊಡುವ ಗಿರಿಗಳ|
ಕಟ್ಟಿಲಿ ಕಾಚಿಕ್ಕಿ ಕೋಪವ | ದಿಟ್ಟಯಲಿ ಗಿರಿ ಬರಲೆನುತ ದೂಡಿದನು ಪಟು
ಘಟರ ||೨೧|| ತನುಜ ಕೇಳ್ಳೈ ಕೇಳಿದಾ ವೂ | ತಿನ ಗಥಾವಣೆಗಾ ವನೌಕಸ | ಜನಪ
ನೆದ್ದನು ಹೊದ್ದಿದನು ಬಳಿಕುದಯಪರ್ವತವ|| ಕನಲಿ ಕಿತ್ತಸ್ತಾಚಲಕೆ ಲಂ | ಘನೆಯು
ಕೊಟ್ಟಿದ ಕಿತ್ತು ತಂದಿ | ತ್ತನು ನಳಂಗೆ ಸುರೌಘ ದಬ್ಬರವರೆಯ ಬೊಬ್ಬೆಯಲಿ ||೨೨||
ಮೇಲೆ ಮೇಲಬ್ಬರಿಸಿದುವು ನಿ | ಸ್ಸಾಳ ಲತೆಗಳ ಮುಗುಚು ವಗಣಿತ | ಶೈಲ ದೆಡೆಗಳ
ವಟ್ಟ ಗಹಳೆಗಳಿಟ್ಟಣಿಸಿ ಹರಿವ || ಥಾಳಿಗಳು ವೃದರಿದುವು ಗಿರಿಗಳ | ಬೀಳಿಕೆಯ
ಲಬ್ಬರಿಸಿದುವು ಸಂ | ಭಾಳಿಸಿತು ಸೌರಂಭ ಸುರುಚಿರ ಸೇತುಬಂಧನದ ||೨೩|| ವಿನುತ
ಕಪಿ ಶತಕೋಟಿ ಪರ್ವತ | ವನು ಸುಷೇಣ ಸುದರ್ಶನಾದ್ರಿಯು | ಪನಸ ಸಗ್ಗದ ಪಾರಿ
ಯಾತ್ರ ಮಹಾಮಹೀಧರವ || ಘನವೃಷಾಧಿಪ ಗೋ ವೃಷಭ ವ | ರ್ಧನವ ಗವಯ
ಗವಾಕ್ಷ ಬಳಿಕಂ | ಜನನ ನರ್ಧವನುಳಿಹಿ ತಂದೊಟ್ಟಿದರು ಜಲಧಿಯಲಿ || ೨೪ ||
ಸುಮುಖ ದುರ್ಮುಖ ತಾರ ದಧಿಮುಖ | ಕುಮುದ ಮೈಂದ ದ್ವಿವಿದ ಶತಬಲಿ | ರುಮ
ರುಮಣ್ವ ಜ್ಯೋತಿರ್ಮುಖ ಗಜ ಗಂಧಮಾದನರು || ಅಮರ ಶೈಲದ ಸಾಗರದ ಮ |
ಧ್ಯಮದ ಗಿರಿ ಕೂಟಗಳ ನಹಿಪತಿ | ಕಮಠ ರೊರಲಲು ಕಿತ್ತು ತಂದೊಟ್ಟಿದರು ಜಲಧಿ
ಯಲಿ || ೨೫ || ಅರರೆ ಶಿವಶಿವ ಹೊಗಳುವರೆ ಸಾ | ಸಿರಗಳೆರಡರ ನಾಲಿಗೆಯು ನಿಡ |
ಗರದ ಶೇಷನ ಪಾಡದೇನೈ ಕೇಳಿದ್ಯೆ ಕುಶನೆ || ಗಿರಿಗಳೋ ತಿರಿಕಲ್ಗಳೋ ವಾ | ನರರೊ
ವಜ್ರಾಯುಧರೊ ವಿಶ್ವಂ | ಭರೆಯೊ ವಿಗಳಿತಜೀನ ಹುಟ್ಟಿಯೊ ಹೇಳಲೇನೆಂದ ||೨೬||
ಆರ ಹವಣಲ್ಲಮುಮು ವಾಲಿ ಕು | ಮಾರ ನುಬ್ಬಟೆ ಮೀರಿದುದು ಜಂ | ಭಾರಿ ಪೌತ್ರ
ನಲಾ ಪರಾಕ್ರಮ ಚಕ್ರವರ್ತಿಯಲ || ಧಾರುಣಿಯು ಮೇಲುದ್ದಿ ಕರವನೀ | ಹಾರದಲಿ
ಜೊಬ್ಬಿರಿದು ಹಾರಿದ | ನರರೆ ಸುರರಸುರರು ವ ಹಾ ಕೈಲಾಸ ಪರ್ವತಕೆ ||೨೭|| ಸಾಕಿ
ದೀಗಿರಿ ಯೆನುತ ತೋಳ್ಗಳ | ಳಾಂಕಿ ಬಿಡದಲ್ಲಾಡಲಾ ಜಗ | ದೇಕನಾಥನ ನಗರ
ನಡುಗಿತು ನೆನೆದು ರಾವಣನ || ಈ ಕುತೂಹಲ ವೇನಿದೆನುತ ಪಿ | ನಾಕಿ ದಿವ್ಯಜ್ಞಾನ
ದಿಂದರಿ | ದಾ ಕಪಿಯು ಹೊರೆಗೈದಿದನು ಹರಗಣದ ಗಡಣದಲಿ || ೨೮ || ಆರು ನೀನೀ
ಗಿರಿಯ ಕೀಳಲಿ | ಕಾರ ಹೇಳಿಕೆ ಕೆಲಸಕೆಸರ್ ತ್ರಿಪು | ರಾರಿ ಕೇಳಿದ ನಾರದಂತಿಹೆ ಬಂದೆ
ಕೋಹುದೆನೆ || ಸಾರೆನಲು ಸಾರೆಂಬ ಸಲುಗೆಯ | ನಾರು ಕೊಟ್ಟರು ನಿನಗೆನುತ್ತಡಿ |
ಬೇರಬಿಡೆ ಕಿತ್ತೆತ್ತಿದನು ಕೈಲಾಸ ಪರ್ವತವ || ೨೯ || ಪುರಮಥನ ಬೆರಗಾಗಿ ಬಳಿಕಾ |
ಹರಿಸುತಾತ್ಮಂಗೆಂದನೀ ಗಿರಿ | ವರನು ನಮ್ಮದು ನಾವು ಮಿತ್ರರು ನಿಮ್ಮ ರಾಘವಗೆ ||
ನಿರುತವಿದು ಪುಸಿಯಲ್ಲ ನೀನಾ | ದರಿಸಿ ಕೊಂಡೈ ನಮ್ಮನೆನುತಾ | ಹರನು ವೈದೋರಿ
ದನು ಪಂಚಬ್ರಹ್ಮ ವಕ್ತ್ರದಲಿ ||೩೦|| ಜಟ್ಲಿ ನಾಣಿದನಜ್ಞನೇ ಸರಿ | ಯಿಲ್ಲ ನಿಮಗೆಂಬು

ದನು ನೀವ್ ಧಿಟ। ಬಲ್ಲಿರೇ ರಘುಪತಿಗೆ ಬಿಡೆವಾವ್ ಸ್ವಾಮಿಕಾರಿಯುವ ॥ ಎಲ್ಲಿವೇತರಕೆ
ದೂರವೇ ರಘು। ವಲ್ಲಭನ ನಪ್ಪಣೆಬರಲಿ ಯಿಂದನಾವ್ । ಯಿಲ್ಲಿಬಿಸುಟಾವ್ ಬಂದಗತಿ
ಯಲಿ ಗಮಿಸದಿರೆನೆಂದ ॥೩೧॥ ಎನೆ ಮಹೇಶ್ವರ ನಗುತ ಮನದು। ಬ್ಬಿನಲಿ ಹಂಯು
ಮಹಾಮುಹಿನೆ ಗಾ। ನನವ ನೊಲಿವೀಕ್ಷಿಸಿದ ನಿದಿರಿನ ಗುಹ ಗಣಾಧಿಪರ॥ ಇನಕುಲೇಂ
ದ್ರನ ಮೂರ್ತಿಯನು ಬಳಿ। ಕನುಕರಿಸಿ ಕರೆದಂಗದಂಗೆಂ। ದನು ಮುಗುಳ್ನಗೆ ಮಿನುಗೆ
ಮಧುರವಚೋ ವಿಲಾಸದಲಿ ॥೩೨॥ ತನುಜಕೇಳ್ಳೈ ವಿಶ್ವರೂಪನ। ತನುವಿಗೆಮಗೆ ವಿಭಿ
ನ್ನವೇ ಶೃತಿ । ವಿನುತ ವಾಕ್ಯಾರ್ಥ ಪ್ರಬಂಧವ ನರಿಮದಿಲ್ಲನಲ ॥ ಎನಲು ಜೀಯ
ಹಸಾದವೆಮಗದ। ರನುಭವವದೇನೆಂದು ಕೆಲಬಲ। ಕೊನೆಯದಂತಿರೆ ಹಾಯ್ಕಿ ಹವಣಿಸಿ
ಕೊಂಡ ನುಬ್ಬಟೆಯ ॥ ೩೩ ॥ ಮುರಿದನಾ ಪರ್ವತದ ಸುತ್ತಣ। ಹೊಸವಳಯ ದಾಪ
ಪರ್ವತಂಗಳ । ನಿರುಕಿ ಬಳಿಕೀ ಮಾತನೆಂದನು ಮದನರಿಪುವಿಂಗೆ ॥ ಅರಿಯದಾವ್
ದಂಡಿಸಿದುದನು ನೀವ್ । ಮರೆವೃದ್ಧೈ ಗಿರಿ ನಿಮ್ಮದೆಂದೆ। ಚ್ಚರಿಸಿ ವಹಿಲದಲ್ಲೈದಿ ತಂದಿ
ತ್ತನು ಮಹೀಧರವ ॥೩೪॥ ಇತ್ತ ಗಿರಿಗಳ ನಳನು ಕಟ್ಟೆಗೆ। ಹತ್ತಿಸಿದ ನಳವಡಿಕೆಯಲಿ
ನಡೆ। ಯಿತ್ತು ಸೇತು ಸಮುದ್ರದಲಿ ಶತಯೋಜನಾಂತರವ ॥ ಮತ್ತೆ ಕೇಳ್ಳೈ ಕುಶನೆ
ನೀಲನು। ದತ್ತ ಚರಿತವ ನಮಮ ಹಾಯ್ಕಿದ। ನುತ್ತರದ ಮಂದರ ಮಹಾಗಿರಿಯಧುತ
ರಬ್ಬರಿಸೆ ॥ ೩೬ ॥ ಪಟುಪರಾಕ್ರಮಿ ಯಲ್ಲವೇ ಕಪಿ। ಕಟಕದಲಿ ಕಲಿ ನೀಲ ನೀರಲಿ।
ಗಟುವ ನಲುಗಿದ ಗಿರಿಯನೀ ಕೈಗೊಂಡು ಕೀಳುತಿರೆ ॥ ನಿಟಿಲು ನಿಳಿಲೆಂಬುಬ್ಬು ರಂಭಾ
ವಿಟನು ಕೇಳಿಸಲಿಳಿದು ಕರಸಂ। ಪುಟದಲೀತನ ಬೇಡಿಕೊಂಡನು ಮಧುರ ವಚನದಲಿ।
ಈ ಮಹಾಗಿರಿ ಯಗ್ರದಲಿ ನಾ। ನಾ ಮಣಾಳಿಗಳಿವೆ ನಿಧಾನಿಸ। ಲೀ ಮಹಾಗಿರಿಯಗಲ
ದಲಿ ದಿವ್ಯೌಷಧಂಗಳಿವೆ ॥ ಗೋಮಿನೀಧವ ಸುಪ್ರತಿಷ್ಠಾ। ರಾಮಣೀಯ್ಯಕ ಶೈಲವಿದು
ನಿಜ। ರಾಮ ಭೃತ್ಯರು ಮುರಿವುದನುಚಿತವೆಂದ ನಮರೇಂದ್ರ ॥ ೩೭ ॥ ಆರು ನೀನೇ
ನಿಂದ್ರನೆಂದೆನ । ಲೋರೆಗಣ್ಣಿನ ಲಿಂದ್ರನಾಗು ಪು । ರಾರಿಯಾಗಜನಾಗೆನುತ ಬಗೆ
ಗೊಳದೆ ಕೀಳುತಿರೆ ॥ ವೀರ ಬಿಡು ಪರ್ವತವ ನಿದು ದೈ। ತ್ಯಾರಿ ಸಂಸ್ಥಿರ ಶೈಲವೆಂದಾ।
ನಾರದನು ನಡೆತಂದು ಕೈಮುಗಿದೆಂದನೀ ಹದನ ॥೩೮॥ ನುಡಿದು ತಪ್ಪೆವು ನಾವು ನಿಮ
ಗೆನು। ಗೊಡೆಯನಲ್ಲಾ ರಾಮ ರಾಮನು । ವೊಡೆಯಲರ ನೆಂದರಿಯಲಾರದೆ ನಿನಗೆ
ಹರ ವಶವೆ ॥ ಬಿಡುಬಿಡೆನಲಾ ಗಿರಿಯನಲ್ಲಿಯೆ ನೆಡಿಸಿ ತದ್ಗಿರಿ ಶಿರಗಳೆಂಟವ। ನುಡಿದು
ತಂದಿತ್ತನು ನಳಂಗೆ ನರೇಂದ್ರ ಬೆರಗಾಗೆ॥೩೯॥ ಆತತಂದದ್ರಿಯಲಿ ನಡೆದುದು। ಸೇತು
ದಶಯೋಜನ ವಜನ ಸಂ। ಜಾತನೆನೆ ದದ್ಯೋಗವನು ಕೇಳ್ಳೈ ಕುಮಾರಕನೆ ॥ ಯೇತ್ರ
ರವ್ರ ವಿಕ್ರಮದ ಸುಭಟ। ವ್ರಾತ ದಾಬ್ಬಟೆ ಹಾಯ್ದು ದವನಿ ರ। ಸಾತಳಕೆ ವ್ಯೈಗುಂದೆ
ವಿಂಧ್ಯಾಚಲವ ನುತ್ತರಿಸಿ ॥೪೦॥ ನೆಗಹಿ ಜೋಲುವ ಜೋಬುಗೂದಲ। ನಿಗುರಿಸುತ
ನೋಡಿದನು ಕಂಡನು। ನಗಕುಲೇಂದ್ರನ ಶಿಶಿರಸಾಂದ್ರನ ಪಾರ್ವತೀಪಿತನ॥ ಹೊಗುವ
ಡುತ್ತರ ಪಥಕೆ ಚೈತ। ನ್ಯಗಳು ನಮಗಿಲ್ಲಾವು ವೃದ್ಧರು। ನಗುವವರು ನಗಲಿಮ್ಮನಿದು
ಸಾಕೆಂದು ಮಂಡಿಸಿದ ॥೪೧॥ ಎರಡುಸಾವಿರದಗಲ ಯೋಜನ। ಯೆರಡುಸಾವಿರದುದ್ದ
ವೈವ। ತ್ತೆರಡುಸಾವಿರ ನೀಳದದ್ರಿಯ ನಮರರಬ್ಬರಿಸೆ ॥ ಉರಗರಾಜನ ಹೆಡೆಯ
ನುಗುರು। ಪ್ಪರಿಸೆ ಕುಕ್ಕಿದನವನಿ ಬಿಕ್ಕನೆ । ಬಿರಿಯೆ ಸಾಗರಬರಿಯೆ ಜಾಂಬವದೇವ

ಝುಡಿತೆಯಲಿ ||೪೨|| ಎತ್ತಲೊಲದುದೋ ಮೇರು ಮೇನಕಿ | ಹತ್ತರಕೆ ನಡೆತಂದು ಬಾಯ್ ವಿಡಿ | ವೃತ್ತ ಬಿನ್ನಹ ಮಾಡಿದಳು ತಾ ಬ್ರಹ್ಮಪುತ್ರಂಗೆ || ಕೃತ್ತಿವಾಸನ ದಾಸನೀ ತಾ | ಹೆತ್ತಮಗ ಛರೆನೋಡಿಕೋ ನಿ | ನ್ನುತ್ತಮಿಕೆ ಗಪಕೀರ್ತಿ ಬರದ ವೊಲೆಂದಳಾಕಾಂತೆ ||೪೩|| ಮುರಿದು ನೋಡಿದ ನದ್ರಿರಾಜನ | ತರುಣಿಯನು ತಪ್ಪ ವದಲಾ ಶಂ | ಕರನ ಚಿತ್ತಕೆ ದೂರವಹು ದನುಚಿತವಲಾ ಯೆನುತ || ಇರಿಸಿ ಗಿರಿಯನು ತೆರಳೆ ನೀವೆಂ | ದೆರಡು ಕೈಗಳ ಮುಗಿದು ಸುತ್ತಣ | ಗಿರಿಗಳನು ಕಿತ್ತೆತ್ತಿ ಹೊತ್ತರು ಹೊಗಳೆ ಸುರಕಟಕ ||೪೪|| ಶಿರದೊಳೆಂಟದ್ರಿಯನು ನಿಜಭುಜ | ಶಿರಗಳೆರಡಲಿ ನಾಲ್ಕು ಕಂಕುಳ | ಲೆರಡೆರಡು ಕರತಳದ ಲೊಂದೊಂದನು ನಿಜಾಂಘ್ರಿಯಲಿ || ಎರಡೆರಡು ನುರುಳೆಸುತ ತಂದನು | ಸುರರು ಸೈವೆರಗಾಗೆ ರಘು ಭೂ | ವರನು ವಿಸ್ಮಿತನಾಗೆ ನಳನೆಡೆಗಬುಜಭವ ಸೂನು ||೪೫|| ಇದಿರುವಂದತಿ ಭಕ್ತಿಗಳ ಭಾ | ವದಲಿ ಜಾಂಬವ ತಂದಗಿರಿಗಳ | ನುದುರವೋಲುಪ್ಪರಿಸೆ ತಂದು ಸಮುದ್ರಮಧ್ಯದಲಿ || ಹದಹದಿಸಿ ಹವಣಿಸಿದ ನೆಡೆಗೆಡೆ | ಗಿದಿರುಗಳ ಲೆಣೆಗಳಲಿ ನಡೆತಂ | ದುದು ನಿಜೋನ್ನತ ಸೇತು ಬಂಧನ ಹತ್ತುಯೋಜನವ ||೪೬|| ಬೆರಗಕೇಳ್ಳೆ ಸ್ವಾಮಿಕಾರ್ಯವ | ಹೊರಿಗೆ ವಾಳನ ಕೆಲಸವನು ಬೊ | ಬ್ಬಿರಿದು ಹಾರಿದ ನನಿಲಸುತ ನುದಯಾದ್ರಿಯಿದ್ದೆಡೆಗೆ || ಹರೆಗಳಬ್ಬರಿಸಿದುವು ಸುರರು | ಬ್ಬಿರಿತದಲಿ ಸುಮ್ಮಾನಮಿಗೆ ಕಡು | ಹೇರಿನಿಂದೀಕ್ಷಿಸಿದನಾ ಗಿರಿಯಗ್ರ ಪರಿಯಂತ ||೪೭|| ಲಕ್ಕಯೋಜನದುದ್ದಗಿರಿಯು | ಲಕ್ಕಯೋಜನದಗಲ ವಂಬುಧಿ | ಸಕ್ಕ ಸಮನೀಗಿರಿಯು ನಳವಡಿಸುವೆನು ಶರಧಿಯಲಿ || ರಕ್ಕಸಾರಿಯ ಕೀರ್ತಿ ಸಲಿಲಜ | ನೊಕ್ಕತನ ಪರಿಯಂತ ಕೆಲಸವಿ | ದೆಕ್ಕಸರವೆನು ತನಿಲಸುತ ಬೆಳೆದನು ನಭಾಂತರಕೆ || ಅಬ್ಬರಿಸಿ ಕೈ ಚಪ್ಪಳೆಯ ಬಿಡಿ | ದೆಬ್ಬಿಸಿದನಾಗಿರಿಯ ಶಿಖರದ | ಹಬ್ಬುಗೆಯ ಹುತ ಭೋಜನರ ನಜಲೋಕ ಪರಿಯಂತ || ತಬ್ಬಿದನು ತದ್ಗಿರಿಯ ನತಿಬಲ | ನುಬ್ಬುಗವಳವ ಗೊಂಡವೋಲ್ ಬಲು | ಬೊಬ್ಬೆಯಲಿ ಬೇರುಡಿಯೆ ಜಡಿದಲ್ಲಾಡಿದನು ಗಿರಿಯ || ಒರಲಿತಂಬರ ವವನಿತಳ ಬಾ | ಯ್ತೆರೆದುದಬುಜಭವಾಂಡ ವಳೆ ಬಾ | ಯ್ದೆರಗಿದಂಬುಜ ವಂತೆ ಹಾಪ್ರಲ್ಲಾಡಿ ತೆಡಬಲಕೆ || ಆರೆಗಳಲಿ ನಳ ಬಿಗಿದ ಕಟ್ಟೆಯ | ಕುರುಹು ಮುಳುಗಿತು ಮುದುಡಿ ಬಿದ್ದನು | ಮುರುಕದಬುಜಜ ನೊಲದು ನಿಜ ಸಿಹ್ಮಾಸನಾರ್ಧದಲಿ || ಏನಿದಚ್ಚರಿ ವಿಲಯ ನುರು ಪವ | ಮಾನ ದುದ್ಭವದೂರ ಜಗದವ | ಸಾನಕೆನುತಜ ನಮಲ ದಿವ್ಯಜ್ಞಾನದಿಂದರಿದು | ಶ್ರೀನಿವಾಸನ ಮನುಜ ಲೀಲಾ | ನೂನ ನಾಟಕರಚನೆಯಿದಲಾ | ವಾನರರಿಗೀ ಬಲುಹಿದೆಲ್ಲಿಯದೆನುತ ನಡೆತಂದ ||೫೧|| ಕಂಡನೀ ಪವಮಾನ ತನುಜನ | ದಂಡಿಸರವ ನಿದೇನಿದೇ ಸು | ದ್ದಂಡ ಮರುಳನೊ ಮೂರ್ಖನೊ ಮರ್ಕಟರ ಕಟಕದಲಿ || ಚಂಡಕರ ವಂಶಾಧಿಪನ ಹಗೆ | ಗೊಂಡವನೊ ಮೇಣ್ ಸೇವಕನೊ ಕೈ | ಗೊಂಡ ಕೆಲಸವಿದೇನು ಹೇಳದ ಕೇಳ್ವೆ ನಾವೆಂದ || ೫೨ || ಕೇಳಿ ಮಾಡುವದೇನು ಕೇಳದೆ | ಹೇಳಿ ಮಾಡುವದೇನು ನಿಮಗೆ | ಮ್ಯೂಳಿಗದ ಹದನೇಕೆ ಹೀನಿಸಿ ನುಡಿಯಲೀಕೆವ್ಯಾ || ಹೇಳಿ ನಿಮ್ಮ ಮಾತ ಮರೆಯದೆ | ಕೇಳುವವರಿಗನುತ್ತ ಬಗೆಗೊಳ | ದಾಳುಗಳ ಬಲ್ಲಿ ಹನುಬರೆಸೆಳೆದೊಲದನಾಗಿರಿಯ ||೫೩|| ತರಳನೈ ನೀನಕಟ ನೀನೀ | ಗಿರಿಯ ಕಿತ್ತರೆ ಕೇಳದಿಹುದೇ | ಸುರನರೋರಗ ಜಗದ ಜನಗಳ ಜೀವಜಾಲಲತೆ || ಥರಥರದ

ಭುವನಾವಳಿಯ ವಿ। ಸ್ತರದ ಸೂತ್ರಸ್ತಂಭವಿದು ನಿ। ಮ್ಮರಸ ರಭಿವೃದ್ಧಿಯ ವಿಚಾರಿಸ
ದಾದೆ ನೀನೆಂದ ॥ ೫೪ ॥ ಗಿರಿಯಿದನು ಕೀಳಲಿ ಕದೆಲ್ಲಿಯು। ಶರಧಿ ನೀತಾನೆಲ್ಲಿಧಿಟ ನಿ।
ಮ್ಮರಸನಾವೆಡೆ ಲಂಕೆಯೆತ್ತಣ ದೆಲ್ಲಿ ಜನಕಸುತೆ ॥ ಅರಿಗಳಾದ ವಿಚಾರನಿಮ್ಮನು ।
ಕೊರದುಕೊಂಡಿರೆ ಮೊದಲುಗೆಟ್ಟಹ। ಹರದ ಪಡವನೆ ಲಬ್ಧಿಯನು ಮನಮರಡ ಹೋ
ಗೆಂದ॥ ಐಸಲೇ ನಿಮ್ಮರಿತ ನಿಮಗೆ ವಿ। ಶೇಷತರ ವಿಜ್ಞಪ್ತಿಯುಂಟೆಂ। ದೀಸುದಿನನಾವ್
ಮಾಡಿಕೊಂಡಿದ್ದೆವು ಮನಸ್ಸಿನಲಿ॥ ಈಸುರಾ ಚಲದಂತೆ ಬಾಲದ। ಲೀ ಸಕಲಲೋಕ
ವನು ಧರಿಸುವೆ। ನೀಸು ಕಂದೆರೆವನ್ನ ಬರನೀನಂಜ ಲೇಕೆಂದ ॥ ೫೬ ॥ ಬಾಲವಿರುತಿರಲಿಲ್ಲಿ
ರಘುಭೂ । ಪಾಲನೋಲಗಕಲ್ಲಿ ನಿಲುವೆವು । ಮೇಲಣುತ್ತರ ನಾವುಯಿದಕೆಂ ದಜನ
ಬಗೆಗೊಳದೆ ॥ ಕೀಳುತಿರೆ ಕೈವಿಡಿದು ಸಾಲುಕು । ಮೌಳಿಯನು ಚಾಚಿದನು ಸೀತಾ।
ಲೋಲ ಭೃತ್ಯನ ಜಠರದಲಿ ಕಾರ್ಪಣ್ಯ ಭಾವದಲಿ ॥ ೫೭ ॥ ಹನುಮ ಕೇಳ್ಕೆ ಕಲ್ಪದ
ಭಿರಂ। ಜನೆಗೆ ಕರ್ತುಗಳಾವು ಮುಂದಣ। ನೆನಹುನಿನ್ನದು ನಿನ್ನರಾಜಸತನದ ಲೊಲಿ
ದಂತೆ ॥ ಅನುಕೊಳಿಸು ನಿನ್ನೀಪ್ರತಿಜ್ಞೆಯ । ನನುಸರಿಸು ಪರುಷಾರ್ಥವಿದು ನೀ।
ನೆನಗೆ ಮಾಡುವ ಲೇಸಿದೀಗೆನು ತಪ್ಪಿದನು ಕಪಿಯ ॥ ೫೮ ॥ ಆದಡೆವ್ಮಗ್ರೆ
ನಿಮ್ಮನುಜ್ಞೆಯ । ಸಾದರಿಸಿದೆನು ಬಿಜಯ ಮಾಡಿ ವಿ । ವಾದವೇ ನಿಮ್ಮೊಡನೆ
ನೀವೆಮಗೈಯ ನೋಪಾದಿ॥ ಕೈದೆಗೆದೆವಾವ್ ಯಿನಿತುಪದ್ರದ । ಹಾದಿಯುವರಾವಲ್ಲೆ
ನುತ ನೆಗಹಿ । ದರ್ ದಿವೌಕಸ ನಗವ ನಿಲುಹಿದ ನೊರಗಿದಂದದಲಿ ॥ ೫೯ ॥ ತೆರಳಿ
ನೀವೆಂದಜನ ಬೀಳ್ಕೊಂ । ಡರಿ ದಿಶಾಪಟಮಲ್ಲ ಕಿತ್ತನು । ಸುರಗಿರಿಯ ಶಿಖರದಲಿ
ಮಣಿಬಂಧನದ ಕಾಂಚನದ ॥ ಸುರುಚಿರದ ಶಿಖರವನು ಜಂಗಮ। ಗಿರಿಯು ಪೋಲ್
ಝುಡಿತೆಯಲಿ ನಡೆತಂ। ದೆರಡು ತಡಿಗಳವಡಿಸಿದನು ಸುರರುಲಿಯೆ. ಸಾಗರಕೆ ॥ ೬೦ ॥
ಆಗಿರಿಯ ಬೆಂಬಳಿಯ ನಳಕೈ। ಲಾಗಿನಲಿ ಸಂಧಿಸಿದ ನಿಮ್ಮ್ರ। ದಾಗಿನಲಿ ಭಟಂತ್ರ
ಬಲುಕುಲಪರ್ವ ತಂಗಳಲಿ ॥ ಆಗಗನದಿಂದಿಳಿದು ಸೇತುವ। ಸಾಗಿಸಿದ ನಳವಡಿಕೆಯಲಿ
ಶತ। ಯಾಗವರ್ಧಕಿ ವಿಶ್ವಕರ್ಮ ನನೇಕ ರಚನೆಯಲಿ ॥ ೬೧ ॥ ಅಡಲಚ್ಚರಿ ಶರಧಿ
ಶಿರದಲಿ। ಸೂಡಿದುದು ಸೇತುವನು ಜಗದಲಿ । ನಾಡೆಬ ಲ್ಲಿದರೆಸಗಿದ ಸದಳ ಕಾರ್ಯ
ಕಿದಿರೇನು ॥ ಕೂಡೆಮುಗಿದುದು ಸೇತು ಬಳಿಕೀಡಾಡಿ ತದ್ರಿಯ ಬೇಡವೆನೆ ಯಿಾ।
ಡಾಡಿ ತಲ್ಲಿಯದಲ್ಲಿ ವಾನರ ರಾಜಭಟ ನಿಕರ ॥ ೬೨ ॥ ಮೊಳಗಿದುವು ನಿಸ್ಸಾಳತತಿ ನಭ।
ದೊಳಗೆ ಸುರಪನ ನೇಮದಲಿ ಹೂ। ಮಳೆಯು ಹೊನಲುಪ್ಪರಿಸಿದುದು ಕಪಿಕಟಕ
ವಗಲದಲಿ ॥ ಸ್ಥಳದವಾರತಿ ತೊರವೆಯರಸನ । ಬಳಿಯಲರಿ ವಿಜಯಾಭಿವಚನವ।
ವಿಲಸ ದಮಲ ಸುವಾಸಿನಿಯರಕ್ಷತೆಯ ಹರಕೆಯಲಿ ॥ ॥ ೬೩ ॥

ಐದನೆಯ ಸಂಧಿ ಸಮಾಪ್ತಂ.

ಆರನೆಯ ಸಂಧಿ.

ಸೂಚನೆ ॥ ಅಂಕದಲಿ ಬಲಸಹಿತ ಲಾ। ನಿಶ್ಶಂಕ ರಘುಪತಿ ಬಂದು ಬಿಟ್ಟನು।
ಲಂಕೆಯೊತ್ತಿನ ಲಸುರಪತಿ ನೆರಹಿದನು ನಿಜಬಲವ ॥

ಪದ್ಯ || ಕುಶನೆ ಕೇಳೈ ಪುಷ್ಯಶುದ್ಧದ | ದಶಮಿದಿವಸದ ಮುಖದ ಲಾರಂ|
ಭಿಸಿತು ಮುಗಿದುದು ಸೇತು ದಿನನಾಲ್ಕರ ಸಮಾಪ್ತಿಯಲಿ || ಒಸಗವರೆ ವೊಳಗಿದುವು
ದೇವ | ಪ್ರಸಾದಲಿ ಕಪಿಸಾರ್ವಭೌಮಕ | ನಸುರಹರನಿದ್ದೆಡೆಗೆ ಬಂದನು ಭಟರ ಗಢಣ
ದಲಿ ||೧|| ಜಲಧಿಗಾದುದು ಸೇತು ಕರುಣಾ | ಜಲಧಿ ಚಿತ್ರೈಸೆಂದು ವಿಕ್ರಮ | ಜಲಜ
ಜಲಜಪ್ರಿಯ ತನೂಭವ ಮಾಡೆ ಬಿನ್ನಹವ || ಕಲಿತಹರುಷದ ನಗೆಮೊಗದ ಮಂ|
ತಲದ ಲನುಜನ ಕೈವಿಡಿದು ಬಳಿ | ಕೆಳದ ನನುಪಮ ಸಿಂಹಪೀಠವ ನಾ ರಘುಪ್ರಭವ ||
ಸುರರು ಜಯಜಯ ಯೆನಲು ಸುರಮುನಿ | ವರರು ಸ್ತುತಿಸಲು ಸಕಲವಿದ್ಯಾ | ಧರರು
ಪೊಗಳಲು ಸೂತಮಾಗಧ ವಂದಿಸಂದೋಹ || ಬಿರುದ ನುತ್ಸಾಹಿಸಲು ಮಾರುತಿ |
ಧೀರುಪಾ ಯವಧಾರೆನಲು ಬಂ | ಧುರದ ಬಹಳಿತ ಸೇತುವಿದ್ದೆಡೆಗಾಗಿ ನಡೆತಂದ ||
ಅರಸ ನಿಂದಿ ದರಿನಲಿ ತಾರಕಿ | ತೊರೆಯುವೊಲು ಬಲುಸೇತು ಸಾಗರ | ನೊರೆಯ
ನುಗಿದುಬ್ಬಣದವೊಲು ಯಾದಕುಲಾಧಿಪನ || ಪುರದ ಪಥದ ವೊಲಂದಶಾಸ್ಯನ |
ಕರೆದು ತೋರುವ ಮೃತ್ಯುನೀಡಿದ | ಕರದವೊಲು ಕಣ್ಗೆಸೆದ ದನುಪಮ ಸೇತುಬಂಧ
ನವ ||೪|| ಕೀಶಬಲ ದೋರ್ವಳ ಸಿಲಾಪರಿ | ಶಾಸನವೊ ರಘುಪತಿಯ ಪುಣ್ಯಾ | ಶ್ರೀ
ಸತಿಯ ಸೀಮಂತಮಣಿಗಣವೊ ವ ಹಾದೇವ || ಪಾಶ ಧರನುಡಿದ ಪ್ರಕಾಶವಿ | ಲಾಸ
ವಿಜಯಸ್ತಂಭವೊಯೆನ | ಲಾ ಸುರಾಳಿಗೆ ಬೆರಗ ಬೀರಿದುದಾಮಹಾಸೇತು ||೫|| ವಿಜಯ
ರಾಘವನಹಿತವಿಜಯಕೆ | ಬಿಜಯ ಮಾಡುವುದೆಂದು ಬಂದಜ | ರಜಕ ರಚಿಸಿದ
ಮೋಲ್ಮಡಿಯ ವ ಡಿವಾಸಿ ನಶಿಶಯವೊ || ತ್ರಿಜಗ ದಧಿದೇವತೆಯೊ ನಂಬುಧಿ | ಭಜಿಸಿ
ಭಾಳದಲಿಟ್ಟ ತಿಲಕವೊ | ಗಜಗಲಿಸಿ ತಿದಿನಲಿ ಸೇತು ಭವಾಬ್ಧಿಸೇತುವಿನ ||೬|| ನೋಡಿ
ರಘುಪತಿ ಮೆಚ್ಚಿ ವಿಗೆ | ಕೊಂಡಾಡುತಿರ್ದನು ಬಳಿಕ ಮುದದಲಿ | ಮೂಡಣಾಶಾಧೀಶ
ಸದವಿಯ ನಳ ಕಪೀಂದ್ರಗೆ || ಬೀಡು ಬಳಿಕೆತ್ತಿದುದು ವೊಳಗುವ | ಮೋತಗಂ
ಡಂಬುಧಿಯವೊಲು ತುಡು | ಮೂಡಿದುವು ನಭದೊಳಗೆ ನಿಸ್ಸಾಳದಲಿ ನಿರ್ಜರರ||ಬಲದ
ಮುಂಗಡಿ ನೀಲನದು ಪಿಂ | ಗಡೆಯ ಕಾಹು ಸುಷೇಣನದು ತ | ದ್ಬಲದ ಮೇಲಾ
ರೈಕೆ ನಳಶತಬಲಿ ಗವಾಕ್ಷರದು || ಖಳಲ ಕಳ್ಳೇರುಗಳ ಮೇಗಾ | ವಲು ವಿಭೀಷಣ
ದೇವನದು ಸಡಿ | ಬಲದ ತೆರಳಿಕೆ ಕೇಸರಿಯ ವಶವಾಯ್ತು ಪಯಣದಲಿ ||೮|| ಏನು
ಮಹಿಮೆಯೊ ಕಂಪಕೇಳ್ ಲ | ಕ್ಷ್ಮೀನಿವಾಸನ ಸಿರುಪಮದ ಲೀ | ಲಾ ನಟಣೆಯಿಳ
ನವದ ನರರೂಪಕದ ರಾಜಸದ || ಅನಳಿನ ಭವ ಶಂಕರರು ಸುಯಿ | ವಾನವಾಯ್ತಾ
ಸಕಲವಾನರ | ಸೇನೆ ಯಿಂದ್ರಾದಿಗಳು ಸೇವಕರಾಯ್ತು ಪಯಣದಲಿ ||೯|| ಅಮಲ
ತಾರೆಯ ಲನುಳಜಯ ಸಂ | ಕ್ರಮಣ ಲಗ್ನದಲರಸ ಸುದಧಿ | ಕ್ರಮ ನುರುಸ್ಕಂಧಾ
ವಲಂಬನನಾದ ನೊಲವಿನಲಿ || ಅಮರಪತಿ ಮೊದಲಾದ ದಿವಿಜ | ಪ್ರಮುಖ ರುಗ್ಗಡ
ಣೆಯಲಿ ಗಮನೋ | ದ್ಯಮವ ಮಾಡಿದ ಸಖಿಳ ಕಪಿನಾಯಕರ ಗಢಣದಲಿ || ಪಡೆಯ
ಪದಘಟ್ಟನೆಯ ಘಟ್ಟಣೆ | ಗಡಿಗಡಿಗೆ ಪಿಂಗಡಿಸು ತಬುಧಿಯ | ಹಡಗಿನವೊ ಲೊಲ
ದಾಡುತಿರ್ದುದು ಕಟ್ಟಕಡಲಿನಲಿ || ನಡೆವಂಟ್ಟೆಡೆ ಯೆನಲುಕದನದ | ಕಡುಗಲಿಗಳ್
ಬ್ಬೆದ್ದ ಲಯುದಲಿ | ಘುಡುಘುಡಿಪ ಸಿಡಿಲಂತೆ ಮುಂಚಿತು ಮಾರುತಾಧ್ವದಲಿ || ನೆರು
ಜಾದಾಯ್ತಾಕಾರ ಗಿರಿಗಳ | ಹೊರಿಗೆವಾಳರ ತೆಮ್ಮಂಗಳ | ಸಿರುಕಿವಡಿ ಮನ ದಡಳ

ಬಲ ರುತ್ತಾಳಗಮನದಲಿ ॥ ಧರದ ಮುಡುಹಿನ ಗಿರಿಗ ಲಣಕಿನ। ಕುರುಹುಗಳ ಕೈ
ಕಾಲು ಮೆಟ್ಟಿನ। ತುರಿಸು ತೋಟಿಯ ಸುಭಟ ರತಿಧೃತಿ ಗೆಡೆದುದು ಜಗವ ॥೧೨॥
ಈಸಿ ಹಾಯ್ದರು ಕೆಲರು ಬಾಲವ। ಬೀಸಿ ಹಾಯ್ದರು ಕೆಲರು ಬೆಂಗೊ। ಟ್ಟಾಸುರದಿ
ನಡಸಿದರು ತಮತಮ್ಮಖಿಳ ಸೈನಿಕವ॥ಏಸು ಬಲ್ಲಿದಭಟರೊ ಹರಿಯುವಿ। ಲಾಸ ವೈಚಿತ್ರ
ಕದ ಘನತೆಯ। ಮೈಸಿರಿಯುದೆಂತುಟೊ ಮಹಾದೇವೆಂದು ದಮರಗಣ॥೧೩॥ಜಗದ ವಿಲ
ಯದ ಮುಗಿಲು ಮೋಹರ।ದೆಗೆದವೊಲು ನಗವೈದೆ ಶಾಖಾ। ಮೃಗದ ಮಯವಾಯ್ತಣುಗ
ಕೇಳುಬ್ಬವುರ ಕಪಿಬಲದ॥ ನೆಗಳಿಕೆಯ ಗಮನದಲಿ ಕತ್ತಲೆ। ಬಿಗಿದು ಬಿಡದಿರತಿದುರ್
ದೈನರ। ಜಗತಿಯೆನೆ ದಿವಿ ರಾತ್ರಿ ಕಾಣಿಸದಾಯ್ತು ಮೂಜಗಕೆ ॥೧೪॥ ಮೂರುದಿನ
ಪರಿಯಂತ ಹಾಯ್ದುದು। ಧಾತುಘಟ್ಟಿನ ಲಂಬುಧಿಯ ಮೇ। ಲಾರುದಿನ ಪರಿಯಂತ
ಬಿಟ್ಟುದು ಬೀಡು ಬಲಿಮುಖರ। ಬೇರೆ ಸೃಷಿಯ ನಬುಜಭವ ಮೈ। ದೋರಿಸಿದು ದಿಲ್ಲೆಂಬ
ವೊಲು ಮೈ। ದೋರಿದುದು ಕಪಿಸೇನೆ ನೆಲನೆನಿ ತನಿತ ರಳವಿಯಲಿ ॥೧೫॥ ತೆರಳಿತಲ್ಲಿಂ
ಮೇಲೆ ಬಲಮೋ। ಹರಿಸಿ ಮುಂಗಾರುಗಳ ಮುಗಿಲ್ಗಳ। ಮೊರಹಿ ನಬ್ಬರಣೆಯಲಿ
ಬೊಬ್ಬಿರಿವುತ್ತ ತರುಗಿರಿಯ॥ ಶರಧಿ ನಿಲಯದ ಲಮರಶೈಲದ। ಶಿರವ ನೊದೆದುಬ್ಬೇಳ್ವ
ವೊಲು ನಿ। ಷ್ಠುರತೆಯಲಿ ಮುಂಬರಿದು ಮುಂಚಿತು ವೈರಿ ಜನಪದವ ॥೧೬॥ ತೊಲಗ
ದೆಡೆಗೆಡೆ ಗಿರಿವ ತಲೆಗಾ। ವಲಿನ ರಕ್ಕಸಭಟರ ತಲೆಗಳ। ತೊಲಗಹಾಯ್ಕುತ ಕೋನೆ
ಕುತ್ತರಕೂಡೆ ಶೋಧಿಸುತ ॥ ಅಳಿಬಲರ ತಲೆಗಾಯ್ದು ಲಂಕೆಗೆ। ಕಳುಹು ತೊತ್ತಂಬ
ಬರಿಸಿ ಜನಪದ। ದೊಳಗೆ ನಡೆದುದು ರಘುವರೂಥಿನಿ ರಾವಣಾಸುರನ ॥೧೭॥ ಉಸುರ
ಲುಚ್ಚರಿಸುರ ನಹೋರಗ। ವಿಷಯ ವೀಧಿಯ ಲಮಲ ಲಕ್ಷ್ಮಿಯ। ನೊಸಲ ಮಾಣಿಕ
ದಂತೆ ಮೆರೆದುದು ರಾಷ್ಟ್ರ ರಾವಣನ ॥ ಪಶುಗಳೇ ಸುರಪಶು ಮಹೀಜ। ಪ್ರಸರವೆ
ಗೀರ್ವಾಣ ಕುಜ ಘನ। ರಸವೆ ನಿರುಪಮ ಸಿದ್ಧರಸವೆನೆ ಸಕಲ ವಿಭವದಲಿ ॥೧೮॥
ಕಳವೆ ಮಯವಾ ನೆಲನು ಕಬ್ಬಿನ। ಹಳುವ ಮಯವಾಹೊಲನು ಮಂದಾ। ನಿಲನ
ಮಯ ವನನಿಚಯ ಕೃತಕಾಚಲ ಮಹಾದ್ರಿಚಯ ॥ ಹೊಳಲಮಯ ಮಾರ್ಗ
ಮಂದಾ। ನಿಲನಮಯ ದಿಗುವರ್ಗ ಸಿರಿಯೊ। ಬ್ಬುಳಿಯ ಮಯವಾ ವಿಷಮ ವೀಧಿ
ಕುಬೇರ ಸಹ ಭವನ ॥೧೯॥ ಕಳಿಯಲಮ್ಮವು ಕೂಡೆಕಂಜದಲಿ। ಫಲನಿಚಯ ನೀರ್ದೆ
ಗೆಯಲಮ್ಮವು। ಕೊಳಗಳಲಿ ಪೂಬಿರಿಯಲಮ್ಮವು ಗಿರಿಲತಾವಳಿಯ ॥ ಬೆಳೆಯಲಮ್ಮವು
ತಾಮರಸನು ಕಾ। ಡೊಳಗೆ ಕಮಲಜ ಮಿತ್ರನಲ್ಲದೆ। ಸುಳಿಯಲಮ್ಮವು ರುತುಗಳಾ ರಾವ
ಣನ ರಾಜ್ಯದಲಿ ॥೨೦॥ ಕರೆದಡಾ ಯೆನುತಿಹುದು ಸಿರ ದಶ। ಶಿರನ ಘನವಿಷಯಾಂತ
ರಾಳ ದೊ। ಳರಸುತನ ದಗ್ಗಳಿಕೆಯೆಂತುಟೊ ಶಿವಮಹಾದೇವ ॥ ದೊರೆಯುನಿಸಿದುದು
ಬಲಿಯ ರಾಜ್ಯದ। ಸಿರಿಯುವಿಭವಕೆ ಮೂರುಜಗದಲಿ। ಸರಿಯುದಾರ್ಯ ಸಿರಿಯೊಳಾ ಲಂಕಾ
ಧಿನಾಥಂಗೆ ॥೨೧॥ ಕೆಡುವುದೇ ನರಿದೈಯ್ಯ ಮಾರ್ಗದಿ। ನಡೆವರಾಯರ ದೆಸೆಯ
ಲಂಕಾ। ಪೊಡವಿ ತಳವಟವಾಯ್ತು ಕಪಿವಾಹಿನಿಯ ಕಾಲ್ದುಳಿಗೆ। ಒಡೆದ ಮಖಿಳ
ಗ್ರಾಮ ಪುರ ಖ। ರ್ವರಿ ಮಡಂಬಸುಬೇಡವಗಲಕೆ। ಹುಡಿಯೊಳಿದ್ದುದು ಹರಿಬಲದ
ಹರಿಧಾಳಿಯಲಿ ಧರಣಿ ॥೨೨॥ ಪಯಣ ಪಯಣಕೆ ನಿಂದು ಸೀತಾ॥ ಪ್ರಿಯನ ಬೀಡಿಕೆ
ಗಸಮನೆಯ ಹರಿ। ಹಯನ ನೇಮದ ಲಮರವರ್ಧಕಿ ಮಾಡಿದನು ಮನೆಯ ॥ ಭಯವ

ನುಳಿದಮರೇಂದ್ರನಾ ಪಾ । ಳಿಯುಕೆ ಕಲ್ಪದ್ರುಮದ ಫಲ ಸಮು । ದಯವ ಕಳುಹುತ
ಲಿರ್ದನನುಚರರಿಂದ ನಂದನದ ॥೨೩॥ ದಿವಸ ಮೂರಕೆ ಬಂದು ಮುಟ್ಟಿತು । ಭುವನ
ಗಿರಿಯಲಿ ಪಾಳೆಯವು ಪಾ । ರ್ಥಿವ ಮಹಾನ್ವಯ ಕುಮುದ ರಘುರಾಜೇಂದ್ರ ಚಂದ್ರ
ಮನ ॥ ತಿವಿವ ತೀವ್ರ ಮಣಿದ್ಯುತಿಯ ಖವ । ಖವಿಪ ಹೇಮಪ್ರಭೆಯ ಲಿನನನು । ಗವ
ಸಣಿಗೆಯಿಂದುಗಿದವೊಲು ಕಣ್ಗೆಸದುದಾ ನಗರ ॥೨೪॥ ಜೀಯ ಲಂಕೆಯಿದೀಗ ರಕ್ಕಸ ।
ರಾಯ ನರಮನೆ ತೋರುತಿದೆ ಪೂ । ರ್ಣಾಯತದ ನಿರುಪಮ ನಿಶಾಕರ ಬಿಂಬದಂದ
ದಲಿ ॥ ಆಯಿತೊಂದೇ ಪಯಣ ಸಮರೋ । ಪಾಯಕರು ಸಂವರಿಸಿಕೊಳಲೆಸ । ಹಾಯ
ಶೂರನ ಸಮರಕೆಂದಸುರೇಂದ್ರ ಕೈಮುಗಿದ ॥ ೨೫ ॥ ಬಂದರಾ ಸಮಯದಲಿ ಸನಕಸ ।
ನಂದನಾದ್ಯರು ಗುಪ್ತದಲಿ ರಘು । ನಂದನಂಗಾಮ್ನಾಯ ವಿಧಿ ವಿಜಯಾಭಿಷೇಚನವ॥
ಅಂದು ವಿರಚಿಸಿ ಹಾಯ್ದರವ ರರ । ವಿಂದ ಸಂಭವ ಸಭೆಗೆ ಬಳಿಕ । ಲ್ಲಿಂದ ಮೇಲಿನ
ಬಿಂಬ ಚುಂಬಿಸಿತಪರ ಜಲಧಿಯಲಿ ॥೨೬॥ ಬೀಡು ಬಿಟ್ಟುದು ಬಳಿಕ ಸಿಡಿಲ ಸ । ಗಾಢ
ಶಬ್ದದ ನಿಶಿತ ಗಿರಿಗಳ । ಕೋಡು ಕಲ್ಗಳ ಖಣಿ ಖಟಿಲ ಕಡುಹುಗಳಲಿನಸುತನ ॥
ಗಾಢಿಸಿದುದೀ ವಾರ್ತೆ ವಿಬುಧ ವಿ । ಭಾಡ ಸಭೆಯಲಿ ಸಾರಣನ ಖಳ । ನೋಡ ಕಳು
ಹಲು ಬಂದನವ ತರುಮೃಗದ ರೂಪಿನಲಿ ॥ ೨೭ ॥ ಅಂದಿನಿರುಳೋಲಗದಲವನನು ।
ಹಿಂದೆ ಸಿಕ್ಕಿದ ಶುಕನ ನಿಬ್ಬರ । ನಿಂದಿರಿಸಿದರು ಹಿಡಿದು ಬಳಿಯಲಿ ರಾಘವೇಶ್ವರನ ॥
ಇಂದು ಬಂದವನಿವನು ಬೇಹಿಗೆ । ಹಿಂದೆ ಬಂದವನಿವನು ಚಿತ್ತೈ । ಸೆಂದು ಕಪಿಪತಿ
ತೋರಿದನು ಭಾಸ್ಕರ ಕುಲೇಂದ್ರಂಗೆ ॥೨೮॥ ದೂತರಹ ದೇಯೆಂದು ರಿಪು ನಿ । ರ್ಧೂತ
ಧೂಳೀಪಟನು ರಿಪು ಸಹ । ಜಾತನನು ಬೆಸಗೊಳಲು ಕೈಮುಗಿದಂಜು ತಹುದೆನಲು ॥
ಭೂತಳಾಧಿಪ ನವರನಾಗ ಕೃ । ಪಾತಿಶಯದಲಿ ನುಡಿಸಿದನು ನೀ । ವೇತಕಿಲ್ಲಿಗೆ ಬಂದಿರೆಂ
ಬಭಿಭಾವ ವಚನದಲಿ ॥೨೯॥ ಜೀಯ ನಿಮ್ಮಯ ಬಳಿಗೆ ರಕ್ಕಸ । ರಾಯ ಕಳುಹಿದನೆಮ್ಮ
ನಿಮ್ಮಡಿಯ । ಚಾಯ ತಾಕ್ಷಿಯ ಮನವಚನ ಕಾಯದಲಿ ಕಾವಿಸದೆ ॥ ಕಾಯುವನು ಕೈಗಾವ
ನೀತಿಯ । ದಾಯವನು ಕೈವಿಡಿದು ಕಪಿಕಟ । ಕಾಯ ಸಹಿತವೆ ಹೋಗಹೇಳಿದರೆಂದ
ರರಸಂಗೆ ॥೩೦॥ ಹೇಳುವರೆ ನಾವ್ ಸ್ವಾಮಿ ಸಂಪದ । ದಾಳುತನದಲಿ ನುಡಿವನಲ್ಲ ನೃ ।
ಪಾಲ ಚಿತ್ತೈಸೀ ಚತುರ್ದಶಭುವನನಾತಂಗೆ ॥ ಆಳುವುದು ತೆತ್ತೀಶರಾಮಂ । ಗಾಳು
ತನ ವಾಗಿಹರು ನೀವಿದ । ಕೇಳಿಗೆಯ ನರಿದರಿವ, ಬಹರೇ ಬವರ ಕರಿಭಟನ ॥ ೩೧ ॥
ಹಿಂದೆ ವೈರವನೆಸಗಿ ಸೋತು ಪು । ರಂದರಾದ್ಯರು ಭಂಟ ಗೆಲಸಕೆ । ಸಂದರೆಂಬುದ
ನರಿಯಬೇಹುದು ಕೇಳಿ ನಿಮ್ಮಡಿಗೆ ॥ ಬಂದ ವೀರ ವಿಭೀಷಣಾಸುರ । ನಿಂದ ವಿಕ್ರಮದರಿ
ಭಟರು ತೃಣ । ವೆಂದು ಬಗೆವವನಲ್ಲ ಚಿತ್ತೈಸೆಂದರರಸಂಗೆ ॥ ೩೨ ॥ ಮಲತು ನಿಮ್ಮ
ನರಣ್ಯ ಭೂಪತಿ । ತಲೆಯ ತೆತ್ತುದ ನರಿಯಿರೇ ಧಿಟ । ಹಳಚಿ ಹದುಳದಿ ಹೋಗಬಲ್ಲರೆ
ಬಗೆಯ ಹರಿಬದಲಿ ॥ ಬಲವಿದನು ನೀವ್ ನೆಚ್ಚಿ ರಿಪುವನು । ಗೆಲ ಸಮರ್ಥರೆ ಸೂಸ
ಲಿಸಪರಿ । ಮಳಕೆ ಸಿಕ್ಕಿದಿರಲಿಯ ತೆರನಹುದೆಂದ ರರಸಂಗೆ ॥ ೩೩ ॥ ಕೆಣಕಿ ಹೆಂಡಿರ
ಬಿಟ್ಟು ಸಮರಾಂ । ಗಣದೊಳಗೆ ಶರಣೆಂದ ಶೂರಾ । ಗ್ರಣಿಗಳಸುವನು ಸಲಹಿಕೊಂಡರ
ಸುರ ನರೋರಗರು ॥ ಮಣಿದು ಬದುಕಿದ ನಿಂದ್ರ ಯಮ ದಿನ । ಮಣಿ ವಿರಿಂಚಾದಿಗಳು
ನಿಮ್ಮಡಿ । ಯೆಣಿಕೆ ಲೇಸಾಗಿರದು ಚಿತ್ತೈಸೆಂದ ರರಸಂಗೆ ॥ ೩೪ ॥ ಭ್ರಮೆಯಿದೇಕೆಲೆ

ಬೇಯ ನೆರೆದೀ | ದ್ಯಮ ಮೃಗಂಗಳಿಗಳುಕುವನೆ ಕೇ | ಳ್ಕಮಲಭವರನು ಬಗೆವರೇ
ಮನದಧಟ ರಕ್ಕಸರು || ಚಮತುಕಾರದ ಚಟುಳ ಜಂಘಾ | ಕ್ರಮವೆ ತೊಗ್ಗೆಯ ಜೇನ
ತೊನೆವರ | ದಮಲ ಫಲರಾಜಿಗಳೆ ಚಿತ್ತೈಸೆಂದರಾ ಚರರು || ೩೫ || ಗಿರಿಯ ಪಡೆಗಲ್ಲೆ
ವಗೆ ನಿಜವಾಂ | ದಿರವ ಕಾಲ್ಗಳ ಸಂಬಳವು ಸಿಂ | ಗರವ ನಾಣೆನಕಾಣದ ಡಿಗೆಗೆ ಬಾಲ
ಬೇಟೆಗಡ || ಸರಳ ಕಂಡರೆ ಹಲುಗಿರಿದು ಗಿರಿ | ಗಿರಿಕುಗುಟ್ಟುವ ರಿವರ ಕೈಯಲಿ |
ಧುರವ ಜಯಿಸುವಡರಿದು ದೇವರಿಗೆಂದರಾ ಚರರು ||೩೬|| ಊರ ಕೊಂಡುಂಬಳಿಯನುಂ
ಡುಪ | ಚಾರಣೆಗೆ ಹೊಕ್ಕಿರಿವಡೊಬ್ಬನೆ | ವೀರ ಶತಸಾವಿರಕೆ ಸಂಧಿಸಿದಸಮ ಸಮರ
ದಲಿ || ಊರಕೊಂಡುಂಬಳಿಯ ನುಣ್ಣದೇ | ಹೋರಿ ಸಾವರೆ ಸಂಗರದಲಿ ವಿ | ಚಾರ
ವುಂಟೋ ಯಿಲ್ಲವೋ ನಿಮಗೆಂದರಾ ಚರರು || ೩೭ || ಜನಪ ಚಿತ್ತೈಸಿವರದಂತಿರ |
ಲನುವರವದಂತಿರಲಿ ರಾವಣ | ನನುಜನನಿಗತಿ ಹಿತವನೆಂದೇ ಮನಕೆ ತೋರ್ಪತಲ ||
ಕೊನೆಯೊಳರಿವಿರಿ ಕಪಟದಭಿಗತ | ಘನತರದ ಕಾರ್ಯವನು ನಮಗೇ | ಕೆನಿತು ಕಪ್ಪದ
ಮಾತು ಹೋಗಲಿಯೆಂದರಾ ಚರರು ||೩೮|| ಈತನೀಗಲಿ ನಿಂದು ಕೈಯಲ | ರಾತಿ ಭಟ
ರನು ಕೊಲಿಸಿ ಕಡೆಯಲಿ | ಕೈತವದಲೊಳಹೊಕ್ಕು ಪಾಯುವ ನೆನೆದು ನೀವಾಳ್ವ || ಘಾತ
ಳವ ನೆಮ್ಮಾತ್ರನಾಳ್ವ ಮ | ಹೀತಳವ ನೊಂದಾಗಿ ಸಿಕ್ಕಿದ | ಸೀತೆ ಸಹಿತಲೆ ಸೆಳೆವ
ಬುದ್ಧಿಗೆ ಮಾಡಿದನು ಮನವ ||೩೯|| ಲಲನೆಗೋಸುಗ ರಣದೊಳಣ್ಣನ | ಕೊಲಿಸಿದವ
ನಂಗನೆಯ ಭೋಗಿಸ | ಲಲಗಿಗೊಡಲೊಡ್ಡುವನೆ ಹುಸಿಯದು ದೇವ ಚಿತ್ತೈಸು ||
ಕಲಹವನು ಗಂಟಿಕ್ಕಿ ಹಗೆವನ | ಕೊಳುಗುಳಕೆ ಗುರಿಮಾಡಿ ಮೆಲ್ಲನೆ | ತೊಲಗ
ಬಲ್ಲವನೀ ಕಪೀಶ್ವರನೆಂದರರಸಂಗೆ ||೪೦|| ಆತಮೆಲ್ಲನೆ ರಾಜಕಾರ್ಯದ | ನೀತಿಯನ್ನು
ನಿಶ್ಚಯಿಸಿ ನೆಗಳುವ | ದಾತುರದ ಸಂಗ್ರಾಮ ಲೇಸಾಗಿರದು ನಿಮ್ಮೊಡೆಯ || ಈತ
ಗಳ ನಂಬದಿರು ಸೇರುವ | ಸೀತೆ ಹುಸಿ ಕೈಯಿಕ್ಕಿ ಸಿಕ್ಕದ | ಕೋತಿಗಳ ತೆರ
ಸಹದು ದೇವರಿಗೆಂದರಾ ಚರರು ||೪೧|| ಧರಣಿಪತಿ ಕೇಳ್ ದರಿವಿನೊಯ್ಯನೆ |
ತೆರಳುವುದು ನಿಜಪುರಿಗೆ ನೃಪರನು | ನೆರಹುವುದು ನೆಲೆಗೊಳಿಸುವುದು ನಿಜರಾಜ
ಸೈನಿಕವ || ಅರಸಿ ಬೇಕಾದರೆ ಮಹಾಸಂ | ಗರಕೆ ನಿಲುವುದು ಕಾದಿಗೆಲುವುದು |
ಪರಮ ಮಂತ್ರವಿದೆನಲು ಕಪಿರಾಜೇಂದ್ರ ಕೋಪಿಸಿದ ||೪೨|| ಬಾಯಿಹೊಯ್ಬುಗಳುವ
ನಿಶಾಚರ | ನಾಯಿಗಳನೆಂದನಿಲಜಗೆ ಕಪಿ | ರಾಯ ನೇಮಿಸೆ ಕಂಡು ತಪ್ಪೇನೆಂದು
ರಘುನಾಥ || ವಾಯುಜನ ನಿಲಿಸಿದನು ದೂತರ | ನೋಯಿಸುವುದಪಕೀರ್ತಿ ನಿಮ
ಗಿದ | ರಾಮತಿಕೆ ಬೇನೆಂದು ವಿಗೆಮನ್ನಿಸಿದ ನವರುಗಳ || ೪೩ || ಚರರು ತಂತಮ್ಮರ
ಸುಗಳ ಭುಜ | ಸಿರಿಯ ಸಾಹಸವದುಬ್ಬುಗೊಬ್ಬಿನ | ಹರುಷ ನೂರ್ಜಿತ ಸುಪ್ರತಾಪವ
ಹೊಗಳುವುದೆ ಸಹಜ || ಅರಿವಿರೋಧಕೆ ದೂತ ಹಿಂಸಾ | ಚರಣೆ ಸಲ್ಲದು ಚತುರ
ನೃಪರಿಗೆ | ಕರಿಸಿ ನುಡಿವುದು ನಮಗೆ ಗುಣವಲ್ಲೆಂದ ನಿನಜಂಗೆ ||೪೪|| ಕರಿಘ ಕಾಣಿಕೆ
ಗೊಟ್ಟು ರತ್ನಾ | ಭರಣಗಳ ನವಗ್ಗಿತ್ತು ನುಡಿದನು | ಘೋರಕೆ ನೀವಿಂದಿರಿಸಿಕೊಂಡಿರಿ
ನಿಮ್ಮನಿಜಪತಿಯ || ಚರರು ನೀವ್ನಿಮಗೀಗ ನಮ್ಮಯ | ಬರವು ನಿಮ್ಮವ ಗರುಹಿಸುವ
ದಿಂ | ದರಿ ವಿರಾಪಟನಲ್ಲಿ ನುಡಿದೊಳವರ ಬೀಳ್ಕೊಟ್ಟ ||೪೫|| ನೋಡಲವರಿಗೆ
ತೋರಿಸಮ್ಮಯ | ಜೋಡಿ ಸರಿಘಟ ಬಲವನೆಲ್ಲವ | ನೋಡಲಂಜದೆ ಕಳುಹು ಬಳಿಕೆಂ

ದನಿಲ ಸಂಭವಗೆ ॥ ಖೋಡಿ ಹೋಗದ ಜಯವು ಜನಗದ । ಬೇಡತನ ಧಾರಿಸದೆ
ನೃಪರವ । ರಾಡಿ ತೋರಿಸಿ ಕಳುಹೆ ಕಂಡರು ಬಂದು ರಾವಣನ ॥೪೬॥ ಅಸುರಪತಿ
ಶುಕಸಾರಣರ ಸೀ । ರಸದ ಮುಖಚೇಷ್ಟೆಗಳ ನಾಭಯ । ರಸದ ಬಳಿಯಿಂಗಿತದ ಮನ
ದನುಮಾನ ಮಾರ್ಗದಲಿ ॥ ಸಸಿನ ವಿಂದೀ ರಾಜಕಾರ್ಯದ । ವಿಷಮ ವೆಂದರಿದವರ
ಮಾತಾ । ಡಿಸದೆ ಮೊಗಸನ್ನೆಯಲಿ ಕಳುಹಿದ ನಖಿಳ ಪರಿಜನವ ॥೪೭॥ ಹರದು
ದೋಲಗ ವಾಕ್ಷಣದೊಳಾ । ಚರರ ನೊಳಮುಂದಿರಕೆ ರಾವಣ । ಕರೆಸಿಕೊಂ ಡರಿಭಟನ
ಗಮನಸ್ಥಿತಿಯ ಬೆಸಗೊಳಲು ॥ ಹರಹಿದರು ಬಳಿಕವದಿ ರದ್ಭುತ । ಬವರ ಭಯ
ಭರಣೆಯ ಜಯಸಂ । ಗರದ ಹೆಸರವನಿದಿರಿನಲಿ ಲಂಕಾಪುರಾಧಿಪನ ॥೪೮॥ ನೆರೆದು
ಬಂದದೆ ಜೀಯಜವನು । ಬ್ಬರದ ಲಯಭೈರವನ ಕಲ್ಪದ । ಹರನ ಕಲ್ಪಾಂತದ ಕಠೋ
ರದ ಘನಕೃತಾನುವಿನ ॥ ಹರಹಿದಗ್ಗದ ಸೇನೆ ಮಂದರ । ನುರುಶಿಲೋಚ್ಚಯ ತಾರ
ಕಾದ್ರಿಯ । ಸರಿಸದೆಪ್ಪತ್ತೇಳು ಕೋಟಿಕಪೀಂದ್ರ ರೊಗ್ಗಿನಲಿ ॥೪೯॥ ಆ ವನೌಕಸ
ಬಲಕೆ ಕಾಲ । ಗ್ರೀವಗೆಣೆಯೆನಿ ಪತುಳಬಲ ಸು । ಗ್ರೀವನೆಂಬ ಕಪೀಂದ್ರನಾ ಕಪಿಯೂ
ಕುಲೇಂದ್ರಂಗೆ ॥ ದೇವ ರಾಘವನೊಡೆಯ ನಾತನ । ವೈವಳಿಯಲದೆ ಜೀಯಬಾಳೆಂ ।
ದಾ ವಿರಿಂಚಿಪ್ರಮುಖ ದಿವಿಜಗಣಂಗಳಿದಿರಿನಲಿ ॥೫೦॥ ಸುಳಿಯಲಂಜುವರಾ ನೃಪಾಲನ ।
ಬಲದೊಳಗೆ ಜವಮಿತ್ತುಗಿತ್ತುಗ । ಳುಲುಕ ಲಂಜುವ ರಭವ ಕನುಲಭವಾ ಮಹೇಶ್ವ
ರರು ॥ ಬೆಳಗ ಲಂಜುವ ನಬುಜಸಖ ಮರೆ । ತೊಲಗಲಂಜುವ ನನಿಲನೇನ । ಗ್ಗಳನೊ
ಡಯುರೊಳಮನು ರಘುರಾಜೇಂದ್ರ ಸ್ಯೈನ್ಯದಲಿ ॥೫೧॥ ಹೊಗ ಬಹುದು ಲಯಪಾಲಕನ
ನಾ । ಲಿಗೆಗ ಳಿರುಬಿನ ನುಡುವೆ ನಡುಗದೆ । ಹೊಗಬಹುದು ಹಾಲಾಹಲದ ನಡುಗಡಲ
ಹೊಗರೇಳ್ವ ॥ ಹೊಗಬಹುದು ಲಯಮೃತ್ಯುವಿನ ತಾ । ಳಿಗೆಯೊಳಗೆ ಹೊಗಬಾರ
ದರಿಸಂ । ಯುಗ ಭಯಂಕರ ರಾಘವೇಂದ್ರನ ರಾಜಸೈನ್ಯದಲಿ ॥೫೨॥ ಎಲೆ ನಿಶಾ
ಚರರಾಯನೇನ । ಗ್ಗಳನೊ ನಿನಗಿಂದಾ ಧರೇಂದ್ರನ । ಯಲಘುಬಲ ನೀನೆಂದು
ಬಗೆದಿಹೆ ನಿನ್ನ ಚಿತ್ತದಲಿ ॥ ತಿಳಿವಡಾ ವಾನರರು ಯುದ್ಧಕೆ । ನಿಲುಕುವುದು ಬೆರಗಲ್ಲವೇ
ಜಯ । ದುಲುಹ ನಿನ್ನಲಿ ಕಾಣೆನೆಂದನು ಸಾರಣನು ನಗುತ ॥೫೩॥ ಸಾಕು ಗಳಹದಿ
ರತ್ತ ಸಾರ್ ನೀ । ನೇಕೆ ತಡೆದೆಯೊ ಶುಕಯೆನಲು ಲೊ । ಕೈಕ ಬಲಚಿತ್ರೈಸು
ತನ್ನಯ ವಿಧಿಯ ನೀನೀಗ ॥ ಈ ಕಡಲ ನುತ್ತರಿಸಿ ವೀರವ । ನೌಕಸರ ಕಟಕವನು
ಹೊಕ್ಕೆನು । ಕೈಕಸೆಯ ಮಗಸಿಂದ ಬಂಧನವಾಯ್ತು ತನಗೆಂಬ ॥೫೪॥ ಕಟ್ಟಿದರು
ಸಿನ್ನವಗೆ ಲಂಕೆಯ । ಪಟ್ಟವನು ಪತಿಕರಿಸಿ ರಘುಪತಿ । ತೊಟ್ಟಬಾಣಕೆ ಬಂದು
ಶರಧಿಯ ಹೊಳೆ ಶೈಲದಲಿ ॥ ಕಟ್ಟಿದರು ಸೇತುವನು ಕಪಿಗಳು । ಬಿಟ್ಟರೀಚೆಯ
ತಡಿಯ ಲಮರರು । ಕಟ್ಟಿದರು ಬಳಿಕರಮನೆಗಳನು ಪಯಣ ಪಯಣದಲಿ ॥೫೫॥
ಕಲಿ ಲಲಾಮ ಲಲಾಟಕೇಳ್ ತ । ದ್ಬಲದ ಮೇಲಾರೈಕೆ ಶೂಲಿಯ । ಕೆಲಸವಾ
ಬಲದಂಗರಕ್ಷಣೆ ಕಮಲಗರ್ಭಸದು ॥ ನಿಲುಕಡೆಯ ಪಾಳೆಯದ ಶೋಧನೆ । ಬಲಿದಿ
ಹುದು ನಿನ್ನವಗೆ ಚಕ್ರಿಯ । ಜಳೆನಲಸಿ ಕೊಂಡದ ನೃಪಾಲಂಗರಸ ಕೇಳೆಂದ ॥೫೬॥
ಹೂಳಿ ತಂಬುಧಿ ಕಪಿಬಲದ ಕಾ । ಲೂಳಿಯಲಿ ನೀನಾಳ್ವ ರಾಜ್ಯವ । ಕೇಳಿಕೋ
ಯೇನಾದಡೆಂಬುದ ಯಿಂದು ನಾಳಿನಲಿ ॥ ಧೂಳಿ ಗೋಂಟೆಯುಕೊಂಡು ಲಂಕೆಯ ।

ಹಾಳ ಮಾಡಿ ನರೇಂದ್ರ ತನ್ನಯ । ಬಾಲಕಿಯ ಕೊಂಡೊಯ್ಯನೀ ನಿದನೋಡಿಕೋ ಯೆಂದ ||೫೭|| ನೀನು ಬಲ್ಲಡೆ ಮುಂತುಟಾಗಿ ನು । ಹಾನರೇಂದ್ರರ ಮಾನ್ಯ ಮಾರ್ಗದ । ಮಾನಿನಿಯ ಕೊಂಡೊಯ್ದು ಕೊಡು ರಕ್ಷಿಸುವನಿದು ಸಿದ್ಧ || ಹಾನಿ ಹೊಗದನಿತರಲಿ ನಿನ್ನ ನಿ । ಜಾನುಜನ ಕರೆತಂದು ರಾಜ್ಯವ । ನೀನು ಸುಖದಿಂದಾಳುವುದು ಕಂಲೇಸು ಲೇಸೆಂದ ||೫೮|| ಎಲವೊ ಶುಕ ಕೇಳಿನ್ನು ದಯ ವಿಹಿ । ದಲಿತನಕಸಮಬಲನ ಕಾಣವೆ । ಕಲಹನರೆ ಭಂಡಾರಿ ಸಿದ್ಧ್ರದ ಲೇಸ ಸೂಚಿಸಿದೆ || ಲಲನೆಯನುವರಕಿತ್ತು ಜೀವವ । ಸಲಹಿಕೊಂಬೀ ಹೇಸಿಕೆಯ ಕ । ಕ್ಕುಲಿತೆಯನೇ ಕಾಳುಗೆಡೆಯದೆ ಕೆಲಕೆ ಸಾರೆಂದ ||೫೯|| ವೀರರರಸುವರೇನ ನಗ್ಗದ । ವೀರದಕ್ಷುನನ ನೈಸಲೇ ಸಿಂ । ಗಾರವಿದು ಶೂರರಿಂಗೆ ಸಮರದ ಭಾರಕೇಳಿಯಲಿ || ಭಾರಿ ಭುಜ ಕಂಡುವಿನ ತಿವಿರ ವಿ । ಕಾರವನು ಪರಿಹರಿಸಿಕೊಂಬ ವಿ । ಚಾರಿಸಲದೇಕೀಗ ನಿನ್ನನು ಮೆಚ್ಚಿಸುವೆನೆಂದ ||೬೦|| ಎಂದ ಶುಕ ಸಾರಣರ ನವದಿರ । ಮಂದಿರಕೆ ಕಳುಹಿದನು ಕರೆಸಿದ । ನಂದಿನಿರುಳಿನಲಾ ಪ್ರಹಸ್ತನ ನೀತಿ ಕೋಪಿದನ । ಬಂದಗಡ ವನಿತೆಯನು ಬಿಡಿಸುವೆ । ನೆಂದು ರಣಕಿನವಂಶನಿದ ಕೇ । ನೆಂದು ತೋರಿದು ದೆಣಿಕೆ ಮನಸಿನಲೆಂದ ನಸುರೇಂದ್ರ ||೬೧|| ಎಣಿಕೆ ತಪ್ಪಿತು ಜೇಯ ಮಾನವ । ಗುಣವಚನನನು ದಾಂಟಿ ಧಾರ್ಮಿಕ । ಗುಣನಿಧಿಯ ಮಾನಿನಿಯ ಮರಹಿಸಿ ತಂದಕಾಲದಲಿ । ಮಣಿಯಲೀಚಿಯ ಲಾಪ್ತ ಸಚಿವಾ । ಗ್ರಣಿಗಳುಚಿತೋಕ್ತಿಗಳ ಹನುಮನ । ತಣಿಸುದಲಿ ವೈಮರವುದಿತ್ತಲು ಖೂಳತನವೆಂದ ||೬೨|| ಜಡಿದ ಪೀರ ವಿಭೀಷಣಾಸುರ । ನುಡಿದ ಪರಮ ಹಿತೋಕ್ತಿಗಳ ನೀ । ನೆಡಹಿ ಕಳೆದೆ ನಿಚಾರವಿನ್ನೇಕರಸ ರಿಪುಭಟನ । ಖಡುಗ ಮುಖದಲಿ ನಿಲುವುದೇ ದು । ಗ್ಗಡದ ಮತವೀ ಹೊತ್ತಿಗೆನೆ ಕೈ । ಹೊಡೆದು ಬಳಿಕೀ ಮಾತನೆಂದನು ಕಲಿ ಪ್ರಹಸ್ತಂಗೆ ||೬೩|| ಬಲಿಸು ದುರ್ಗವ ನಸ್ತ್ರಶಸ್ತ್ರಾ । ವಳಿಗಳನು ಮೇಳೈಸು ನಕಿಹೆ । ಗ್ಗಳದ ರಕ್ಕಸನಾಯಕರ ನಿಭ ಹಯ ರಥಾವಳಿಯ । ನಿಲಿಸ ರಣಮುಖಕಿನ್ನು ನೀನಣಿ । ಯಣಿಗು ಹೋಗೆಂದಾ ಪ್ರಹಸ್ತನ । ಕಳುಹಿ ಕಳೆದನು ರಾತ್ರಿಯನು ಕಳವಳದ ಕಣದಲಿ || ||೬೪||

ಆರನೆಯ ಸಂಧಿ ಸಮಾಪ್ತಂ.

ಏಳನೆಯ ಸಂಧಿ.

ಸೂಚನೆ|| ನೇಹಿ ನಿಜಸೈನ್ಯವನು ದುರ್ಗದ । ಧುರದ ಕಡೆಗಟ್ಟನ ಸಗಾಢದ । ಸರಭಸದ ಲಸುರೇಂದ್ರ ನಿದ್ದನು ಸಮರ ಭಾರದಲಿ ||

ಪದ್ಯ|| ವೀರ ಧೀರೋದ್ಧಾತ ರಾಜಕು । ಮಾರ ಕೇಳಂದಿರುಳಿನಗ್ಗದ । ನಾರಿರುಹ ಬಾಂಧವನ ತಲೆದೋರಿಕೆಯುಳ್ಳೈತಂದು || ಆ ರಜೋಗುಣ ಭರಿತನನು ರಣ ಧೀರ ಲಂಕಾನಾಥ ನಧಿಕ ಚ । ಮೂ ರಮಣನೊಳಗವ ನಿತ್ತನು ತನ್ನ ನಿರ್ಣಯವ ||೧|| ಕರೆಸಿ ಮಯನನು ವಿಶ್ವಕರ್ಮನ । ಬರಿಸಿ ಬವರಕೆ ದುರ್ಗವನು ವಿ । ಸ್ತರಿಸ ಹೇಳಿ ನೇಮವನಿತ್ತು ಸಮಸ್ತ ಭವನಗಳ || ಚರಮುಗಳ ಬರಹೇಳಿ ವ್ಯೋಲೆಯ । ಬರೆಸಿ ಕಳುಹಿದ ನತುಳಬಲ ಖಳ । ಚರರ ನಿಭ ರಥ ತುರಗ ಪಾದಾತಿಸಹಿತ ಸಂಗರಕೆ ||೨|| ಖಳ

ಕಲಾ ಮಯ ವಿಶ್ವಕರ್ಮರು । ಬಲಿದರಾ ದುರ್ಗವನು ಬಹುವಿಧ । ಗಳ ಭಯಾನಕ
ದುಬ್ಬರದ ಕೌಶಲದ ಕೌತುಕವ ॥ ಕೆಲಸದಲಿ ಕಂಡೆರೆದರಮರಾ । ಚಲದ ಕಣ್ಣೆನೆ
ಸೀಪವೊಲು ಕೈ । ನಿಲುಕಲಜ ಹರಿ ಹರರಿ ಗರಿದೆನೆ ವಿವಿಧ ರಚನೆಯಲಿ ॥೩॥ ನಿಲುಕಿ
ಮುವು ರವಿ ಮಂಡಲವ ನ । ಟ್ಟಳಿಯ ಸಾಲುಗಳೆಡೆಗೆಡೆಗೆ ಕೊ । ತ್ತಲ ಗಳೊತ್ತಂಬರಿಸಿ
ಮುವು ದಿಗುತಟದ ಭಿತ್ತಿಗಳ ॥ ವಳಿಸುವಳಿಯುದ ವಂಕಗಳ ಬಾ । ಗಿಲುಗಳುಪ್ಪರಿಗೆ
ಗಳು ಚಂದ್ರನೆ । ಕಳಶವೆನಲೊಪ್ಪಿದುವು ನೆಲೆನೆಲೆಗಳ ವಿಲಾಸದಲಿ ॥ ೪ ॥ ಎಸೆದವಗ
ಳಂಭೋನಿಧಿಯ ನೇ । ಳಿಸುವ ಬಿಂಕದ ಲತಳವನು ಗಾ । ಧಿಸುವ ಘನತರದಿಂದ
ಯೋಜನ ಹತ್ತರಗಲದಲಿ ॥ ಅಸದಳದ ಪರಿಗೋಂಟೆ ಪಡಿಯಗ । ಳಸಮರಣ ರಾಟಾ
ಳಗಳ ಸು । ಪ್ರಸರದಲಿ ನೆಲೆಗೊಟ್ಟೆ ಬೆದರಿಸಿ ತಮರ ಸಂತತಿಯ॥೫॥ ಮೇಲು ದುರ್ಗದ
ಕೋಟೆ ಕೊತ್ತಳ । ದೇಳುಸುತ್ತಿನ ಕನಕ ಬದ್ಧದ । ದಾಳುವೇರಿಯ ವಿವಿಧ ರತ್ನದ
ತೆನೆಯ ತಿಂಥಿಣಿಯ ॥ ಸಾಲ ಸಬಳದ ಹರಿಗೆಗಳ ಕರ । ವಾಳಗಳ ಹೇರೀಟಗಳ ಹೇ ।
ರಾಳ ಕೈದುಗಳಿಂದ ಕೈಗೈದೆಸೆದುದಾ ದುರ್ಗ ॥೬॥ ಮರುಳು ಕೈಡೆಂಕಣಿ ಶತಘ್ನಿಗಳು ।
ರುಳುಗಲ್ಲರೆ ಗವಣೆ ಹುರಿಮುಳ । ಲುರಿಯುರಗು ಸಿಡಿಲಂಬು ಡಂಬುಕ ಜಂತ್ರ ರಾಟಗಳ ॥
ಸುರಗಿ ಕಕ್ಕಡೆ ಕುಂತವನು ಮು । ದ್ಗರ ಮುಸುಂಡಿ ಕೃಪಾಣ ಪಟ್ಟಿಸ । ಪರಶು ಪರಿಘ
ಗದಾದಿ ಶಸ್ತ್ರಾದಿ ನೆರೆದುದಾ ದುರ್ಗ ॥ ೭ ॥ ಅರೆದ ಸಾಸುವೆ ಕೊಡನು ಹಾವಿನ । ಹರವಿ
ಕಾಸಿದ ಮೇಣಗಳ ಕೊ । ಪ್ಪರಿಗೆ ಕಾದುಕ್ಕಿನ ಕಠೋರದ ಗುಂಡು ದುಂದುಭಿಯ ॥
ಹರಹಿನಲಿ ಕಲಿಶರಭ ವೃಕ ಸೂ । ಕರ ಮಹೋಗ್ರ ವ್ಯಾಘ್ರಕುಲ ದು । ಬ್ಬರದ ಸಂ
ವರಣೆಯಲಿ ಸಂತತ ಬೀರಿದುದು ಭಯವ । ೮॥ ದಸಿಗಳಲಿ ತಲೆನೇಣಿನಲಿ ವಿಷ । ರಸದ
ಚೀಕರ್ೋಳವೆಗಳ ಅಡಸಿ । ದ್ದೆಸುವ ಭಂಡಿಯ ಕಣೆಯ ದಾಣೆಯ ಕವಣೆಗಲ್ಗಳಲಿ ॥
ಮಸೆದಲಗು ತೆತ್ತಿಸಿದ ತೊಲೆಗಳ । ಬಸಿವ ಶೂಲದ ನೂಕುಗಲ್ಲಿನ । ಹಸರದಲಿ ಹರ
ಗಿರಿಯ ನೇಡಿಸುತಿರ್ದುದಾ ದುರ್ಗ ॥ ೯ ॥ ಲಾಳವಂಡಿಗೆಗಳಲಿ ಭಂಡಿಯ । ಗಾಲಿಗಳ
ಗಾಢಣೆಗಳಲಿ ಗಿಡ । ಮೆಳೆಯ ಬತ್ತಳಿಕೆಗಳಲಿ ಬಲು ಬಂಧುರಂಗಳಲಿ ॥ ತೋಳ ಸಿಂಹ
ವರಾಹ ಕರಿ ಶಾ । ರ್ದೂಲ ಘೂಕಧ್ವಾಂಕ್ಷ ಮುಖದ ಕ । ರಾಳ ರಕ್ಕಸ ಭಟರ ನಕ್ಕಜ
ವಾದುದಾ ದುರ್ಗ ॥೧೦॥ ಇಡುವ ಗುಂಡರೆ ಗಲ್ಲುಗಾಣದ । ಗಡಿಸುವಲೆ ಗಂಗಸದ ಸೀ
ಕಿನ । ಸಿಡಿವಲೆಯ ಗಾಢಣೆಯ ಸಮರದ ಕಣೆಗಳುರುಬುಗಳ ॥ ತೊಡಕುಗಳ ತಡಿಗಲ್ಲ
ತುಡುಕಿನ । ದಡಿಯ ದಾಣೆಯುಲಕುಟಪಾಣಿಯ । ಕಡುಹುಕಾರರಲೆಸೆದು ದನುಪಮ
ದುರ್ಗ ದಶಶಿರನ ॥ ೧೧ ॥ ತೆನೆತೆನೆಯ ಸಂದಿಯಲಿ ಮೋಹಿದ । ಮೊನೆಯ ಸಬಳದ
ಹೊನ್ನ ರನ್ನದ । ಘನತರದ ಸಾಲುಗಳ ಗಡಿಯಲಿ ಪೀಟ ಕಕ್ಕಡೆಯ ॥ ಧನುಸರಳ
ಸಕಲಾಯುಧಂಗಳ । ತಸಿವೆಳಗುಗಳ ಹರಿಗೆ ಹಲಗೆಯ । ಕನಕ ಕವಚದ ಸೀಸಕದ
ಭಟರಿಂದ ಭಾರಿಸಿತು ॥ ೧೨ ॥ ಕಡದುರಿಗಳುಬ್ಬರದ ಕೆಂಜೆಗೆ । ಕೊಡನದೊಸಚಿಯ
ಹರವಿಗಳ ಬಸಿ । ದಡಪಿಕೆಯ ಕಾವೆಣ್ಣೆಗಳ ಕಟ್ಟುಂಕು ಕಬ್ಬುನದ ॥ ಬಡಿಗೆಗಳ ನಸು
ಗುನ್ನಿ ದುರುಜೆಯ ಪುಡಿಯ ತೀವಿದ ತಿತ್ತಿಗಳ ಕಾ । ಲ್ವೊಡಕುಗಳ ಹಗ್ಗಗಳ ಹರಹಿನ
ಲೆಸೆದುದಾ ದುರ್ಗ ॥೧೩॥ ಬೆಟ್ಟ ಸೊಳಿಗಳ ದಾಣೆಗಳ ಬೆ । ನ್ನಟ್ಟಿ ನೋಡುವ ಮರುಳ
ತಂಡದ । ಥಟ್ಟಲಿಸಿ ಬೊಬ್ಬಿರಿದು ನಗುವ ಭೂತಕೋಟಿಗಳ ॥ ನಟ್ಟ ಶೂಲದ

ಸೂತ್ರ ಜಂತ್ರದ । ಜಟ್ಟಿಗಳ ಬಲುಬೊಮ್ಮ ರಕ್ಕಸ । ಲಟ್ಟಿಡೆಯಲಿವೆ ಸೀವವೊಲು ರಂಜಿಸಿದುದಾ ದುರ್ಗ ॥೧೪॥ ತೇರುಗಳ ತೇಜಿಗಳ ಬಲುಮದ । ವಾರಣಂಗಳ ತೆರಳಿಕೆಯ ರಣ । ಚೋರ ಗಂಡಿಯ ಹುಲುಮುಖದ ಹೊನಸುಸುಳು ಗಂಡಿಗಳ ॥ ಭೇರಿ ಶಂಖ ಮೃದಂಗ ತಂಬಟ । ವೀರಣಾನಕ ಮುಖ್ಯ ನಾನಾ । ಬೀರವರೆಗಳ ರಭಸದಲಿ ರಂಜಿಸಿದುದಾ ದುರ್ಗ॥೧೫॥ ಹತ್ತುವರಿಗಾಕಾಶ ಮುಳಿದರೆ । ಮುತ್ತುವರಿ ಗುರಿಗೋಂಟಿ ಜಾಲ । ಮೃತ್ಯುವಿನ ಬಾಯಿಗಳು ನಂಜಿನ ಮಂಜಿನಬ್ಬರಣೆ ॥ ಸುತ್ತ ಕತ್ತರಿ ಪಾಣಿಯುಗಳು ಗ । ಳುತ್ತರಿಸ ಲವರಾರಿಗರಿದೆನೆ । ಕೊತ್ತಳದ ಹುಲಿಮುಖದ ಹಂಹಿನ ಲೆಸೆದುದಾದುರ್ಗ ॥ ೧೬ ॥ ಕುಣಿವ ಪಲ್ಲವ ಝಲ್ಲರಿಯ ಡೆಂ । ಕಣಿಯ ತಲೆಜಾಂಕೆಯ ಗಗನಾಂ । ಗಣವ ನಣದ ಪತಾಕೆಗಳ ಸೀಗುರಿಯ ಸಾಲುಗಳ ॥ ಹಣಿಕ ಕುಂಗಳ ಕೋಣಗಳ ದಾ । ಸಣದ ಬೇಲಿನ ದಂಡೆಗಳ ಭಾ । ರಣೆಯ ಬೊಗ್ಗಿನ ಲಗ್ಗೆವರೆಗಳ ಲೆಸೆದುದಾದುರ್ಗ ॥೧೭॥ ಕಾದುವರೆ ಬರಹೇಳು ಭಾಳದ । ಲೈದು ಕಣ್ಣುಳ್ಳವನ ಮಿಗೆ ಹದಿ । ನೈದು ಮಕ್ಕಳ ಹೊಕ್ಕಳಲಿ ಹೆತ್ತವರ ನುಳಿದವರ ॥ ಐದೆ ನಂಟರು ಭಂಟರಡವಿಯ । ಹಾದಿಗಳ ಹೇಳದಿರೆನುತ್ತಲೆ । ಹೊಯ್ದು ದುರ್ಗದಲಿ ಡಂಗುರವ ಡಾವರಿಸಿ ಜಗವ ॥೧೮॥ ವೀರನಲ್ಲ ಮೂರು ಲೋಕದ । ವೀರರಲಿ ದಶಕಂಠ ಹೇಳಿದ । ನಾರು ಮಾಡಿದರು ದನುಜ ದಿವಿಜ ಭುಜಂಗರೊಗ್ಗಿನಲಿ ॥ ತಾರಕನ ಜಂಭನ ನಿಶುಂಭನ । ತಾರಕಾಕ್ಷನ ಬಲನ ನಮುಚಿಯ । ಸೇರುವೆಯ ಸುರವೈರಿಗಳು ಬರುತಿರ್ದರಗಲದಲಿ ॥ ಇಳೆಯ ಮೇಲುಳ್ಳಖಿಳ ದಾನವ । ಖಳರು ಬಂದರು ಹರಿಹಯಾದ್ಯರ । ಬಳಿಯ ಭಾರಿಯ ಭೂರಿರಕ್ಕಸರೈದಿತೊಗ್ಗಿನಲಿ ॥ ತಳವು ಮೇಲಣ ಜಗದ ಜೋಡಿಯ । ಹಲವು ಕಾಲದ ದೈತ್ಯ ದನುಜಾ । ವಳಿ ನಿಶಾಚರ ನಿಕರ ಬಂದುದು ಭೂಮಿಯುಗಲದಲಿ ॥೨೦॥ ಭುವನ ದವಸಾನದರು ಭೈರವ । ನ ವಣಿಕೆಯಲಾ ಭಟರ ನುಚ್ಚೈಲ । ಶ್ರವದ ತೂಕದ ತೇಜಿಗಳ ಕರಣೆಯ ರಥೋಪವದ ॥ ನವ ವರೂಥಾವಳಿಯ ಸುರಪನ । ಧವಳದಂತಿಯ ವಿಗಡ ಸಾಮೊ । ದ್ಭವ ಘಟಾಳಿಯ ಗರುವ ಸೇನೆಯ ಕಾಣಲಾಯ್ತಲ್ಲಿ ॥ ೨೦ ॥ ಹರಿಯ ಚಕ್ರದ ಹರನ ಶೂಲದ । ಹರಿಯ ವಜ್ರವನಾ ಕೃತಾಂತನ । ಪರಿಘ ದಂಡದ ಪಾಶಪಾಣಿಯ ವರಪರಶ್ವಥದ । ಹರನ ಮಿತ್ರನ ಗದೆಯ ವೈಶ್ವಾ । ನರನ ಖಡ್ಗವ ವಾಯುವಿನ ಬಲು । ಸರಳ ಸರಿಸದ ಕೈದುಗಳ ನೆರೆ ಕಾಣಲಾಯ್ತಲ್ಲಿ ॥ ೨೧ ॥ ಧರೆಯ ನಡಿ ಮೊಗುಚುವ ದಿಶಾಸಿಂ । ಧುರದ ದಾಡೆಯ ನುಗಿವ ಫಣಿಪನ । ಕೊರಲಿಗಿಕ್ಕುವ ಕಮಲಜಾಂಡ ಕಟಾಹ ಖರ್ಪರವ ॥ ಬಿರಿಯ ಲೊಡೆವ ಮೃಗಾಂಕ ಪರಣಿಯ । ತರಿದು ಕುಂಡಲವಿಕ್ಕುವರಿಬಲ । ದುರುಪರಾಕ್ರಮ ಭಟರ ಸಂಪಿಯ ಕಾಣಲಾಯ್ತಲ್ಲಿ ॥೨೩॥ ಎಣಿಕೆಗೇಳ್ನೂರಾದು ದಕ್ಷೋ । ಹಿಣಿ ದಶಾಸ್ಯನ ಮೂಲಬಲ ಪರಿ । ಗಣನೆಯನು ನಾನರಿಯೆ ನೆರೆದ ಸಮಸ್ತ ರಕ್ಕಸರ ॥ ಹಣಿಯ ಲಿಸಿಯೆನಿಪರಿಗೆ ತೀರಿತು । ಗುಣನಿಧಿಯ ಕೇಳ್ ಘಯುತರ ಸು । ಪ್ರಣೆಯ ಸಂಗವ ನೇನವಗಾಡಲೊ ಲೋಕದೊಳಗೆಂದ ॥ ೨೪ ॥ ಬಳಿಕ ಶಾರ್ದೂಲನನು ಸುರಕುಲ । ನಿಲಯ ಬೈರವ ಕಳುಹಿದನು ರಿಪು । ನಳಿನ ಮದ ವಾರಣನ ಬಳಿಗಾ ಹವಕೆ ಬರಹೇಳಿ ॥ ಇಳಿದನನಸಾ ಮೇಘಕಾಲದ । ಕುಲಿಶ ದುಬ್ಬರದಂತೆ ಗಗನ । ಸ್ಥಳದ ಗತಿಯಲಿ ಗಗನಮಣಿ ವಂಶಜನ ಹೊರೆಗಾಗಿ ॥೨೫॥ ಉಪ್ಪರಿಸಿ

ಕಪಿಭಟರು ಕದನದ | ದರ್ಪದುಬ್ಬರ ದಬ್ಬರಣೆಯಲಿ | ಚಪ್ಪರಿಸಿ ನೆಗಹಿದರು ಬಲು
ಮುಷ್ಟಿಗಳ ನೆಗಹುನಲಿ ‖ ತಪ್ಪದಿವ ರಾಳಗಳೆ ಕರೆಯಲು | ಬಪ್ಪ ಬಲು ಭಟನೆಂದರಿದು
ಕೈ | ತಪ್ಪಮಾಡಲು ಬೇಡೆನುತ ರಘುರಾಯ ನೇಮಿಸಿದ ‖೨೬‖ ತಂದು ನಿಲಿಸಿದರವನ
ನವಬಳಿ | ಕೆಂದನೆಲೆ ರಾಜೇಂದ್ರ ರಣದಲಿ | ನೊಂದು ಹಿಂಗದ ಮುನ್ನ ಹಂಬಲಿಸದೆ
ಮಹೀಸುತೆಯ ‖ ಮುಂದರಿದು ತೆರಳುವುದು ಸುಖ ನಿಮ | ಗೆಂದು ಹೇಳಿದೆ ನಿದುವೆ
ಚಿತ್ತಕೆ | ಬಂದಿರದಿರಾಹವಕೆ ಬರಹೇಳಿದನು ಬೇಗೆಂದ ‖೨೭‖ ನಗುತ ರಾಘವರಾಯ
ನೆದ್ದನು | ಗಗನಚರ ರುಗ್ಗಡಿಸೆ ಶಾಖಾ | ಮೃಗ ಕಟಕ ಕಡಲುಪ್ಪರಿಸುವವೊಲಸುರ
ಪುರಿಗಾಗಿ ‖ ನಗ ಮಹೀರ ಹ ದುಬ್ಬರದ ಬೊ | ಬ್ಬೆಗಳ ಲಿಳೆ ಕಳವಳಿಸೆ ನಡೆದವು |
ಜಗದರಸ ರೈತಂದನಿಲಜಾದಿಗಳ ಗಡಣದಲಿ ‖ ೨೮ ‖ ಅರರೆ ಜಂಗಮ ಗಿರಿಗಳೋ
ಮೇಣ್ | ಧರೆಯ ನವಲಂಬಿಸುವ ಲಯಜಲ | ಚರ ಕದಂಬವೊ ಕಾಲದಗ್ಗದ ಕಡಲ
ಕಾಹುರವೊ ‖ ಹರಿಬಲವೊ ಯೆನೆ ಬಂದುದಸುರೇ | ಶ್ವರನ ನಗ್ಗದ ಜನದ ಬಾಯಲಿ |
ಕರಸಿ ಸುತ್ತಲು ಕಾತರಿಸೆ ಕರುಣದಲಿ ದಶಕಂಠ ‖ ೨೯ ‖ ಬಾಂಸಿದ ಬಲು ಭೀತಿಯಲಿ
ಹೊರ | ಕೇರಿ ಹೊಕ್ಕುದು ದುರ್ಗವನು ಪ್ರಾ | ಕಾರದೊಳವೈಗಳಲಿ ಹೊಳಿದ ರಖಿಳ
ಜಂತ್ರಗಳ ‖ ಭೇರಿಗಳ ಹೊಯ್ಲಿನಲಿ ಖಳ ಪರಿ | ವಾರ ಪಡಿತಳಿಸಿದುದು ಕೇಳು ಕು |
ಮಾರಕರು ಸಹಿತಸುರಪತಿ ಹೊರವಂಟ ನರವನಿಯ ‖ ೩೦ ‖ ಕರೆದು ವೀರ ಮಹೋ
ದರನ ತ | ತ್ಪುರದ ತೆಂಕಣ ಭಾಗಕವನನು | ಪರುಠವಿಸಿ ಪಡುವಲು ಸುರೇಂದ್ರ ವಿರೋ
ಧಿಯನು ಬೆಸಸಿ ‖ ಹರಿಹಯನ ದೆಸೆಗಾ ಪ್ರಹಸ್ತನ | ಹರಿಕೊಳಿಸಿ ಬಳಿಕುತ್ತರದ ಗೋ |
ಪುರಕೆ ನಡೆತಂದಿತ್ತ ನೋಲಗವನು ದಶಗ್ರೀವ ‖೩೧‖ ಬರುತಲೇ ಮುತ್ತಿಗೆಯ ನಿಕ್ಕಿದು |
ವೆರಡು ವೈಯಲಿ ಬೀದಿವರಿ ದೆಡೆ | ಮುರಿದು ವೇಡೈಸಿದನು ಸುರಪರ್ವತವ ನಂಬು
ನಿಧಿ ‖ ಉರವಣಿಸುವ ವೊಲೇನನೆಂಬೆನು | ತಿರುಗಿ ಬರೆ ಶತಯೋಜನದ ವಿ | ಸ್ತರದ
ವಳಯದ ಲಿದ್ದುದದ್ಭುತರಸದ ಲಹರಿಯಲಿ ‖೩೨‖ ಬೆರೆಸಿದುವು ಬಲನೆರಡು ಬಲು ಕ |
ರ್ಬುರರ ವಾದ್ಯದ ವೀರ ಕಪಿ ಸಂ | ಗರದ ಸಂಕುಳರವ ವಿಳಯ ನೊತ್ತಿ ತಳಕುಚ್ಚ
ಳಿಸಿ ‖ ಗಿರಿ ಮಹೀರುಹ ಖಡ್ಗ ಕರ್ಬುರ | ದುರುಮಹಾದ್ಭುತ ರಭಸ ಗಗನದ | ಶಿರವ
ನೊದೆದುಪ್ಪರಿಸೆ ಹಳಚಿತು ಸೇನೆ ಸೇನೆಯಲಿ ‖೩೩‖ ಹಿಡಿದಿಡುವ ಕರಿಘಟೆಯ ಮೇಘವ |
ಝಾಡಿವ ಖಡ್ಗದ ಮಿಂಚುಗಳ ಸಿಡಿ | ಸಿಡಿದು ಸೂಸುವ ಮಕುಟಮಣಿಗಣ ವಾಲಿಗಲ್ಲು
ಗಳ ‖ ಗಡಣಿಸಿದ ಗಾಯುಗಳ ಲಭ್ರವ | ತುಡುಕಿ ತೊಳುವ ರಕುತವಾರಿಯ | ಮಡ
ಲಿರಿದ ಮಳೆಗಾಲ ವಂಚಿಸಿತಸಮ ಸಮರದಲಿ ‖ ೩೪ ‖ ಆಲ ತರುಪಾಲಾಶ ದಾಲಾ |
ವಳಿಯ ವಿಪಿನವೊ ವಿಮಲತರ ಶಾ | ಲ್ಮಲಿಯ ಹೂಮರುಗಲಿನ ಹೊದರಿನ ಬಹಳ
ಕಾನನವೊ ‖ ದಳಿತ ಕುಸುಮಿತ ಕಿಂಶುಕಾವನ | ನಿಳಯವೋ ನಿರ್ದಳಿತ ರಕ್ತೋ |
ತ್ಪಲದ ಕೊಳಗಳೊ ಕೊಳುಗುಳವೊ ತಾ ಹೇಳಲೇನೆಂದ ‖೩೫‖ ಜಾಳಿಸಿತು ಬಜ್ಜಾರ
ಬಲದು | ಬ್ಬಾಳುತನ ವೆರಡಂಕದಲಿ ಕೈ | ಮೇಳವಿಸಿದುದು ವಜ್ರದಂಷ್ಟ್ರಾಂಗದರಿಗತಿ
ಮಥನ ‖ ಕೀಳ್ಮನದ ಮೇಲ್ಮದದ ದಿಗು ಶುಂ | ಡಾಲ ತಲೆವಟ್ಟಂತೆ ಹಳಚಿದ | ರೋಳ
ಬರಿಯಲು ಬಗಪ ಜಡಬಿಡ ದಮರರಾಲಿಗಳ ‖ ೩೬ ‖ ಹೇಳಲಚ್ಚರಿ ವಾಲಿಜನ ಕೈ |
ಜಾಳಿಗೆಯ ಜಿಟ್ಟಗಳ ಜೊಗರಿಯ | ಜೀಳುಗಳ ಡಂಭೋಳಿ ದಂಷ್ಟ್ರನ ಗನ್ನಗಾಯ

ಕದ || ಕಾಳರಕ್ಕಸನುಗ್ರ ಪರಿಘದ ತೂಳಿಕೆಯ ತೋಟಿಗಳ ಧಾಳಾ | ಧೂಳಿ ತುಂಬಿತು ಕಡೆಗೆ ಕಮಲ ಭವಾಂಡ ಮಂಡಲವ || ೩೭ || ಇಡುವ ಹೊಡೆವ ಮಹಾದ್ರಿ ಪರಿಘದ | ಲಡಸಿ ಹುಟ್ಟಿದ ಧೂಮದಲಿ ಮಂ | ಜಿಡಿಸಿ ತಂಬರದಂತೆ ಯೆಸೆದುದು ಭುವನ ವಿಸ್ತಾರ || ಕಿಡಿಯ ಹಬ್ಬುಗೆ ಹೊದಿಸಿದುವು ನಭ | ದುಡುಗಣೌಘವ ನಮಮ ಕದನದ | ಕಡುಹು ಮಿಕ್ಕುದು ವೀರಜಂಭನ ಪಾಕಶಾಸನನ || ೩೮ || ನೆರೆಯದಂಬರ ವೀನತನ ದ | ಬ್ಬರಿನ ರಣಕಾರಣರ ಶವಕ | ಟ್ಟೊರತೆ ಸೂಸಿತು ಶೈಲ ಪರಿಘಾಯುಧಂಗಳನು ಬಿಸುಟು || ತೆರಹ ಕೊಂಡು ತಳಾಯದಲಿ ಬೊ | ಬ್ಬಿರಿದು ಬಾಹಪ್ಪಳಿಸಿ ನಿಂದಿದಿ | ರೆಂಚಿ ನೆಲಕು ಕ್ಕುರಿಸೆ ದಿಕ್ಕರಿಕಮಠ ನಾಯಕರು || ೩೯ || ವಾಮಕರ ದಂಡೆಗಳ ದಂಡೆಯ | ಮೈ ಮುರಿವಿನುಬ್ಬರದ ಮುಷ್ಟಿಯ | ಭೀಮ ಬಾಹು ಭ್ರೂ ನಿಬದ್ಧಾರುಣ ವಿಲೋಚನದ || ಧೂಮಧೂತ ಶಿಖಾಸ್ಫುಲಿಂಗ | ಸ್ತೋಮ ದುಶ್ವಾಸ ಪ್ರಪೂರದ | ತಾಮಸದ ತವಕಿಗರು ತಿವಿದಾಡಿದರು ತೀವ್ರದಲಿ || ೪೦ || ಇರಿಸಿದನು ಸುಯಿದಾನ ಕಮಲೇ | ಶ್ವರನ ನೊಮ್ಮನ ಕರೆದು ತೆಂಕಲು | ಹರಿಸುತನ ಪಡುವಲು ಪುರಂದರ ದೆಸೆಗೆ ಪಾವಕನ || ವರ ಕುಮಾರನನಿರಿಸಿ ತಾನು | ತ್ತರದ ದಿಕ್ಕಿಗೆ ರಾಯ ದಳಸಹಿ | ತರಿ ಯಮುನ ನಂದನನು ನಿಂದನು ಸಮರ ಭಾರದಲಿ || ||೪೧||

ಏಳನೆಯ ಸಂಧಿ ಸಮಾಪ್ತಂ.

ಎಂಟನೆಯ ಸಂಧಿ.

ಸೂಚನೆ|| ರಾಯ ರಘುರಾಜೇಂದ್ರ ಸೇನಾ | ನಾಯಕರ ಬಲಸಹಿತ ರಕ್ಕಸ | ರಾಯ ದಶಕಂಠಂಗೆ ಶುಕ ವಿಸ್ತರಿಸಿ ತೋರಿಸಿದ ||

ಪದ್ಯ|| ಇತ್ತನೋಲಗವನು ಬಲಾರಿಗೆ | ಹತ್ತುಮುಡಿ ತೇಜದಲಿ ಖಳರೆಂ | ಬತ್ತು ಕೋಟಿ ಕಿರೀಟವರ್ಧನರುಗಳ ಗಡಣದಲಿ || ಮಿತ್ತು ಜವ ಗಿವರುಗಳ ಬಗೆ ಮದ | ಚಿತ್ತ ದುಮ್ಮಹ ದುಬ್ಬರದ ಸಂ | ಪತ್ತಿನಲಿ ಸುರಯುವತಿಯರ ಚಾಮರದ ರಚನೆಯಲಿ ||೧|| ಕರೆದು ಶುಕನನು ಕೇಳಿದನು ಮೋ | ಹರದ ಮೊದಲಿನ ನಾಯಕರವಾ | ರರಸ ನಾರೀಬಲಕೆ ಬಲ್ಲಿದರಾರು ಬವರದಲಿ || ಧುರವ ಜಯಿಸಲು ಬಂದ ಬಿರುದಿನ | ನರಪತಿ ಯದಾರೆಂಬುದನು ವಿ | ಸ್ತರಿಸಿ ಹೇಳೆ ನಲೆದ್ದು ಶುಕ ನಿಂತೆಂದ ನರಸಂಗೆ ||೨|| ಅರಸ ನೋಡಾದಡೆ ರಘುಕ್ಷಿತಿ | ವರನ ದಳಪತಿಯರನು ವೈಶ್ವಾ | ನರನ ಮಗನವ ನೀಲನೆಂ ಬಭಿಧಾನ ವಾಕಪಿಗೆ || ಹರಿಬಲದ ಮುಂಭಾಗದಲಿ ಸಂ | ಸಾಗರಕೆ ನಂದವ ನಮ್ಮನಗರವ | ನೊರಸಿ ನೋದುವ ಮೋಡಿ ಮೋಕೆ ಯೊಳವ ನೊಳದೆಯೆಂದ ||೩|| ಕಾಲ ನಳುಕುವ ನವಗೆ ಕಲ್ಪಕ | ಪಾಲ ಹುಣುಗುವ ನವಗೆ ಮಿಕ್ಕಿನ | ತೋಳುವಲ ರಿದಿರಿನಲಿ ನಿಲುವರ ಕಾಣೆನಾ ಕಪಿಯ || ಆಳುತನವುಳ್ಳವನೆ ನೋಡೆರ | ಡ.ಲಿ ನಮ್ಮವು ಜೇಯ ಕಥೆಗಳ | ಕೇಳಿಕೆಯ ಮಾತಲ್ಲ ಮರೆಯಲ್ಲರಸ ನೋಡೆಂದ. ||೪|| ನಿಲವ ನೋಡವ ನಂಜನಾದ್ರಿಯ | ನಿಲವಿಗೊಂ ದೊಳಮಿಗಿಲು ನೋಡವ | ನಳವಿದೆಂತುಟೊ ಕೈಯ್ಯಲಡೆ ಗಿರಿ ಹತ್ತು ಯೋಜನದ || ಕಲಹ ವಿವನಲಿ

ಜಯಿಸುವುದು ಪುಸಿ । ಖಳಶಿರೋಮಣಿ ಚಿತ್ರವಿಸು ಹೆಡ । ತಲೆಯ ಮೃತ್ಯುವೊ ಕಪಿಯೊ ನೀನೇನೋಡಿಕೋ ಯೆಂದ ॥೫॥ ಅವನ ದಳವದೆ ನೋಡು ಗಂಳಾ । ರ್ಣವನ ಗಾಥಿಯ ಮೋಡಿಯಲಿ ಸಾ । ಕವನ ಬಿಡು ಗೂಡಿತ್ತ ರಾಕ್ಷಸ ವನ ದವಾನಲನ ॥ ಭುವನನಿಧಿ ವಡಬಾನಳನ ರಿಪು । ನಿನಹ ತಲ್ಲಾ ನಳನ ರಘುಸಂ। ಭವನ ಮೆಚ್ಚಿನ ನಳನ ವಾನರ ರೂಪಿ ನತಿಜಲನ ॥೬॥ ಹೇಳಲಚ್ಚರಿ ಯಿವನಸಾಹಸ। ದೇಳಿಗೆಯ ನಂಬುಧಿಯ ನೆತ್ತಿಯ । ಮೇಲೆ ಬೆಟ್ಟವ ನೊಟ್ಟ ನಡೆಸಿದ ನವನಿಪಾಲ ಕರ ॥ ಪಾಳಿಯ ದೊಳಿವ ನಿವನ ವೊಲು ಕ । ಟ್ಟಾ ಳದಾಲೀಲೋಕದಲಿ ರಣ। ದೊಳಗದ ಲಿನ್ನೇನ ನೆನೆವನೊ ನೋಡಿಕೋ ಯೆಂದ ॥೭॥ ಸಾಕವನ ನೋಡದಿರು ನೋಡು ವ। ನೌಕಸರ ವಲ್ಲಭನ ತನುಜನ । ಪಾಕಶಾಸನ ನಂದನನ ನಂದನನ ನಂಗದನ ॥ ಈಕುಮಾರನ ಮೇಲೆ ಘನಲೋ। ಕೈಕ ನಾಥನ ಮೋಹ ವಿವನ ಸ। ಮಾಕ ತಾಕುವ ಭಟರ ನಿನ್ನಲಿಕಾಣೆ ನಾನಂದ ॥೮॥ ಉಗುರು ಸೋಕಿನ ಲಬುಜ ಜಾಂಡವ । ಬಿಗುಹು ಬಿಡುವುದು ತಳವಿಘಾತಿಗೆ । ಜಗತಿ ಜರಿವುದು ಜಾನುಹತಿ ಗಡಿಮುಗುಚುವುದು ಮೇರು ॥ ಹೊಗಳ ಲೇಸಿವನ್ನೆಯನೀ ತ್ರೈ । ಜಗಕೆ ವೀರ ನಲಾವಿವೇಚಿಸು । ತೆಗೆದು ಹೋದಭಿಮಾನವನು ಪೂರ್ವದಲಿ ನೀನೆಂದ ॥೯॥ ಉಸುರಲೇ ನೀ ನಗ್ಗಳದ ಸಾ । ಹಸವ ನಿದನೀಕಾಬೆ ಮೋಹದ । ವಿಷ ಮರಣ ದಲಿ ಹೊಗಳ ಲೇನಕ್ಕಾರಿಗನೇ ತಃನು ॥ ಅಸುರ ಪತಿ ಕೇಳವನ ಬೀಡಿನ । ವೃಷಭ ನೆಂಬ ಕಪೀಶ್ವರನ ನೀ । ಕ್ಷಿಸು ವೃಷಧ್ವಜನಂದದಲಿ ತೋರ್ಪವನ ನೀನೆಂದ ॥೧೦॥ ರಜಿತ ಶೈಲದ ಪೋಲುಕೈಯಲಿ । ಸೃಜಿಸಿದಂತಿದೆ ನೋಡು ಭೂಧರ । ವಜನ ಲೋಕಕೆ ಬಾಲನಿಲುಕುತ್ತದೆ ನಿರೀಕ್ಷಿಸಲು ॥ ಗಜದುಳಿದ ಪಾಳೆಯಃವೊಲೀ ಪುರ। ವ ಜಿಗಿಜಿಗಿಯ ಮಾಡುವನು ಪಾಪವ । ಭಜಿಸಿ ಕೆಟ್ಟೆ ಯೆ ಲಾ ದ ಶಾ ನ ನ ನೋಡು ನೀನೆಂದ ॥೧೧॥ ಹರನ ಸಭೆಯೊಳಗಿವನ ನೋಡಿಸಿ । ಹುರುಳು ಗೆಡಿಸಿದೆಗಡ ಬಳಿಕ್ಕವ । ತರುಚರರ ರೂಪಿಂದ ಕೈನೆರವಾಗಿ ಬಂಡಗಡ ॥ ಮೊರೆಯ ತವನಹ ನಿನ್ನ ಮೇಲಣ। ಹರಿಬದಲಿ ಜಗದಳಿವಿ ನಗ್ಗದ । ಹರನವೊ । ಹಗರಣದ ವೊಲು ಬಲ ವವನೊಳದೆ ಯೆಂದ ॥೧೨॥ ಚಲಿಸದೀಕ್ಷಿಸು ಮುಂದೆ ಕದನದ। ಕಲಿಯ ಕಲಿಗಳ ಭವಿಯ ಭವಿಗಳ । ಬಲಿಯ ಬಾಹಾದಂಡ ಚಂಡಮಲೀಚಿ ಶತಬಲಿಯ ॥ ಲಲನೆ ಯನು ನೀನೊಯ್ದುನರಿ ದರ। ಸಲು ಕುಬೇರನ ನಗರವನು ಹೊ। ಕ್ಕಲಸ ದತಿಬಲ ಭುಜಬಲಾನ್ವಿತ ನೀಗವಯನೆಂದ ॥೧೩॥ ಅವನ ಬಿಡ ಸೋಡಿತ್ತ ಸೀತಾ। ಲಲನೆ ಯನು ನೀನೊಯ್ದು ಡರಸಲು । ಘುವನವನು ಶೋಧಿಸುತ ವರಕೈಲಾಸ ಪರ್ವತವ॥ ತವಕಿಗಾವರ ಗೆಲಿದು ಗೌರೀ । ಧವಗೆ ಮೂಗು ಬ್ಬ ಸ ವ ಮಾಡಿದ । ಭುವನ ಮೂರರ ವೀರನೀತನ ನೋಡು ನೀನೆಂದ ॥೧೪॥ ಜವನ ನೀದಿಗುಪಿಜಯದಲಿ ಪರಿ । ಭವಿಸಿ ನೋಯಿಸಿ ಗೆಲಿದೆಗಡ ಹಂ । ಗವನಲಿದ್ದೀ ರಾಘವೇಂದ್ರನ ರಾಜ ಕಾರಿಯಕೆ ॥ ಗವಯ ಗವನ ಗವಾಕ್ಷ ಶರಭ । ಪ್ರವರ ರಣಗಲಿಗಂಧಮಾದನ। ರವತರಣ ಪಾಯ್ತುಂತರಂಗದಲೀಗ ನೋಡೆಂದ ॥೧೫॥ ಮೃತ್ಯುತಾ ನಾ ರಾಮ ನುದ್ಭವ। ದತ್ತ ಜನಿಸಿದ ರಸುರ ಡಸುಗಳ। ತುತ್ತಲೋಸುಗ ಸುಮುಖ ದುರ್ಮುಖ

ರೆಂಬ ಹೆಸರಿನಲಿ ॥ ಹತ್ತುತಿದೆ ಕೋಪಾಗ್ನಿ ವಿಲಯದ । ಕೃತ್ತಿವಾಸನ ಖಿತಿಯ
ವೊಲು ರಣ । ದುತ್ತರಣ ನಿನಗಹುದು ಲೋಕಕೆ ಚಿತ್ರತರವೆಂದ ॥ ೧೬ ॥ ಅರಸ
ಚಿತ್ತೈಸಧಿಕ ಕೋಪವ । ಧರಿಸದಿರು ಮನದಲಿ ರಘುಕ್ಷಿತಿ । ಪರನ ಕಟಕದ
ವಾತು ಹುಸಿಯೋ ನಿಜವೊ ನಾನರಿಯೆ ॥ ಧುರದೊಳಿದವ ರಿವನ ಕರ ಸಂ।
ಸ್ಪರುಶನ ದೊಳೇಳುವರು ಗಡ ಸರ । ಸಿರುಹ ಭವನಿಗಿದು ತೀರುವುದೆ ಹೇಳರಸ
ನೀನೆಂದ ॥೧೭॥ ವಾನರರಲಿ ಸುಷೇಣನೆಂ ಬಬಿ । ಧಾನ ವಿವನಲಿ ಪೂರ್ವದಲಿ ಸುರ।
ಸೇನೆಯನು ಸಂಜೀವನಿ ಯೊಳೆಬ್ಬಿಸಿದ ವೈದ್ಯಗಡ । ನೀನವನ ನೋಡಾ ತ್ರಿಯಂ
ಬಕ । ನಾನಿಕೆಯ ಭಟನಹನೆ ಎಂದಣ । ಸೇನೆಯಲಿ ನೋಡರಿ ಭಯಂಕರ ಕಪಿ
ಪಿತಾಮಹನ ॥ ೧೮ ॥ ನುಡಿದ ವಾತಿಗೆ ಜೇಯಹಾತಿಯ । ಹಿಡಿಯದಿರು ಕಂಡೆಣಿಕೆ
ಯಿದು ಕಾ । ವೆಡೆಯ ಕಾಣೆನು ರಾಮ ಮುನಿದಡೆ ಸಪ್ರಸಿದ್ಧವಿದು ॥ ನುಡಿವ ದನುಚಿತ
ವೆನಗೆ ನೋಡಾ । ದಡೆ ನಿಶಾಚರರಾಯ ಜೆರಗಿನ । ಬೆಡಗ ಚಿತ್ತೈಸಜನ ಚೊಚ್ಚಲ
ಮಗನ ನೀನೆಂದ ॥೧೯॥ ಇವನ ಜನನದ ಮೇಲೆ ಜನಿಸಿದು । ದವನಿಗಡ ಬಳಿಕಾದ
ವೀ ತ್ರೈ । ಭುವನಗಡ ಸಲೆಜಗದೊಳೀತಗೆ ಹಿರಿಯರಿಲ್ಲಗಡ ॥ ಶಿವನ ಮದುವೆಯೊಳಿ
ವನು ಜವ್ವನ । ದವನುಗಡ ಚಿತ್ತೈಸು ವಿಲಯದ । ಜವನ ಜೂಜಿಗೆ ಸಿಕ್ಕಗಡ ಲೇಸಾಗಿ
ನೋಡೆಂದ ॥೨೦॥ ತರಣಿಯಲಿ ಮತ್ಸರಿಸಿ ಜವ್ವನ । ಜರಿಯ ದಂತೀ ಜಾಂಬವನು
ಸುರ । ಗಿರಿಯ ಸುತ್ತಿದ ನೆರಡು ಭಾರಿಯ ಲೊಂದು ದಿವಸದಲಿ ॥ ತರು ಮೃಗಂಗಳ ಗೀ
ಬಲಹು ನಿ । ರ್ಜರರೊಳಂಟೀ ಜೇಯ ಮೃತ್ಯುವ । ಸವಕು ಮಾಡದ ಸುಭಟನಹನೀ
ನೋಡು ನೀನೆಂದ ॥೨೧॥ ತೋರ ಲಂಜುವೆ ರಾಮ ನೋಲೆಯ । ಕಾರನೊಬ್ಬನ
ನಿನಗೆ ನಿನ್ನೇ । ಳ್ಳಾರು ಮುಖ್ಯಳನಕ್ಷ ಮೊದಲಾದಖಿಳ ರಾಕ್ಷಸರ ॥ ವಿರಿಸಿದ ನಂತಕನ
ನಗರವ । ನೂರಿಸಿದ ನುರಿಯಿಂದ ನಗರವ । ನಾರಿಸಿದ ನವಸಿಜೆಯ ಶೋಕಾನಲನ
ನಿವನೆಂದ ॥೨೨॥ ನೆರೆಯ ದವನ ಪರಾಕ್ರಮದ ಕ । ಟ್ಟರಿತ ಕೆವಿಕ್ರಮೂಲ ಬಲ ವನ ।
ನುರುಬೆ ಗೊನುವರಿಲ್ಲ ವೀರರು ದನುಜ ದಿವಿಜರಲಿ ॥ ಬರಿದೆ ಮದನನ ಗರುಡಿ ಯಂಬಿನ ।
ಗರಿಗೆ ಗೊತ್ತಾಗಾ ದನುಚಿತವು ನಿನ । ಗರುಹಿಸು ವವರಿಲ್ಲ ಕೆಟ್ಟೆ ನಿರರ್ಥ ನೀನೆಂದ ॥
ಸರ್ವಕೊಂಡಿದೆ ನಿನ್ನ ನಗರದ । ದುರ್ವಲರ ಸದೆಬಡಿದ ನೆಂಜೀ । ಗರ್ವಲತೆ ಕುಡಿ
ವರಿದು ಪಾದಾಂಗುಷ್ಠ ಪರಿಯಂತ ॥ ನಿರ್ವಹಿಸ ದಿವಸಿರಲು ರಿಪುಜಯ । ಪರ್ವ
ನಿನಗಿ ದಪಥ್ಯ ಖಳನಿವ । ಚರ್ವಣನ ನುಡಿಗೆಂದು ಕುಂದಿತಗೊಳಲು ಬೇಡೆಂದ ॥೨೪॥
ಹನುಮ ನೆಂಬಭಿಧಾನವ ನವ । ನನವರಕೆ ನಿವ ನಂಜುವನು ನಿ । ಕ್ಕಿನ ಸರೋಜ
ಭವಾಮರಾಸುರ ನರ ಭುಜಂಗಮರ ॥ ಮನದೊಳವರೆಸು ಹುಲ್ಲುಕಡ್ಡಿಗೆ । ವೊನೆಯ
ಲಿಕ್ಕಿ ಸನಾತನಾತನ । ನೆನಹುಗಿಮ್ಮಿಗಿ ಲಘಟಿಪದೆ ನೋಡವನನೀನೆಂದ ॥ ೨೫ ॥
ನಿರುತ ವಿದು ನೋಡವನ ನೋಡವ । ಶರಭನ ಕುಮುಣ್ವಕನ ನಾಕೇ । ಸರಿಯ
ಮೈಂದ ದ್ವಿವಿದನ ಪನಸಂಭನವರುಮನು ॥ ಜವಸನೋಡವ ದಧಿಮುಖನು ದು ।
ರ್ಧರುವ ಪನಸ ವೃಷಭುಖವಾನರ । ರಣಸರದಿ ಕೋಟಾನುಕೋಟಿಗಳತ್ತ ನೋಡೆಂದ ॥
ಮುಸುಗಳದೆ ಕಾಲದ ಕಪರ್ದಿಯ । ನೊಸಲ ಕಣ್ಣಿನ ಕಿಡಿಯ ವೊಲು ಲಳಿ । ಮುಸಗಿ
ಕೋಡಗಪಿಂಡು ಕಾಣಿಸುತದೆ ಲಯಾನಲನ ॥ ರಚನೆಗಳ ಕಾಹುರದವೊಲು ಕ ।

ಕ್ಕೆ ಸೆವೃತಿದೆ ನೋಡಿರುಳು ವೋಡದ। ಲಸದಳಿಪ ಸಿಡಿಲಂತೆ ಸೇನೆಯು ಸಿಂಗಳೀಕ
ಗಳ ॥೨೭॥ ಕರಡಿಗಳೊ ಕಗ್ಗಲಿಯು ಬಲುತ। ಮೊಮ್ಮರಡಿಗಳೊ ಧ್ವನಿಗೊಡುವ ಸಿಡಿ
ಲಿನ। ಗರುಡಿಗಳೊ ಗತಿವಿಡಿದ ಕಲ್ಪದವೇಘ ದೊಡ್ಡಗಳೊ ॥ ಹೊರಳಿಗಳೊ ಹೊಸ
ತಲ್ಲವೇ ಸಂ। ಗರಕೆ ಬಹುದಿದು ಜೀಯ ನೋಡ। ಚ್ಚರಿಯ ಚತುರಂಗದ ಭಡಾಳದ
ಗಾಢಣೆಯು ನೆಂದ ॥೨೮॥ ಕರಿ ತುರಗ ರಥ ಪಾಯಿದಳ ದು। ಬ್ಬರದ ಹಂಗಿನಿತುಂಟೆ
ಸಲೆ ಸಂ। ತರಿಸಿ ಕೊಂಡಿಹ ಕಟ್ಟಳೆಯು ಕೈದುಗಳು ಬೇರುಂಟೆ॥ ಅರಸ ಚಿತ್ತೈಸಾಳ್ದ
ನಿಕ್ಕಿವ। ಧುರದ ಜೀವಿತ ವುಂಟೆ ರಣದು। ಬ್ಬರಕೆ ಹಿಂಗುವ ಹೇಡಿತನ ತಾನುಂಟೆ
ಹೇಳೆಂದ ॥೨೯॥ ತಡೆನರಿಲ್ಲೀತಗಳ ನಬುಜಜ। ಮೃಡ ಸುರೇಂದ್ರಾದಿಗಳು ಫಣಿಪನ।
ಹೆಡೆವಿಡಿದು ಜನಲೋಕ ಪರಿಯಂತಾವಕಾಲದಲಿ॥ ಕಡುಹು ನಿನ್ನೀ ಸಾವು ಕೇಡಿಂ।
ಗೊಡಲು ಗೊಡುವ ಸಮರ್ಥರಿದೆ ತೋ। ಳಿಡೆಯು ಪೂಜೆಸಿ ಕೊಂಬಸುಭಟರಿ ಗುಂಟೆ
ನೋಡೆಂದ ॥೩೦॥ ಬೇರೆ ನೋಡಸುರೇಂದ್ರ ನೆರೆದದೆ। ತೋರಿಕೆಯ ಜವ್ವನದ
ಭಟರೀ। ಳ್ನೂರು ಕೋಟಿಗ ಳವರ ಮಹಿಮೆಯ ಹೊಗಳ ಲರಿದೆನಗೆ॥ ತೋರುತಿದೆ
ಬೇರತ್ತ ಸಿಡಿಲು। ಬ್ಬೇರಿ ನೆರೆದಂದದಲಿ ಸಿಂಹದ। ಜೀರಿಕೆಯವೊಲು ನೋಡು ಮರಿ
ಕೋಡಗವ ನೀನೆಂದ ॥೩೧॥ ನೆಗೆ ನೆಗೆದು ನಭಕುಪ್ಪರಿಸಿ ತಾ। ರೆಗಳ ತಿರಿತಿರಿ ದಬುಜ
ಮಿತ್ರನ। ಮೊಗಕೆ ಹುಬ್ಬುಕ್ಕುವವು ಹಬ್ಬದ ಜವನ ನಡೆಗಟ್ಟೆ ॥ ಜಗಳವಾಡುವ
ವಮರ ರಾಯನ। ನಗರ ದಬಲಾಜನವ ನೇಡಿಸಿ। ನಗಿಸುವವು ನಿರ್ಜರ ಕದಂಬವ
ನರಸ ನೋಡೆಂದ ॥೩೨॥ ಗಿರಿಗಳಿವೆ ನೂರಾರು ಕಟಿಗಳ। ಕರಗಳಲಿ ಬಾಲದಲಿ
ಸುತ್ತಿದ। ಮರಗಳಿವೆ ಕೋಟಾನು ಕೋಟಿಗ ಳಸಮ ಸಂಗರಕೆ॥ ಆರಸ ಚಿತ್ತವಿಸೆಮ್ಮ
ಸುಭಟರು। ಧರಿಸಬಲ್ಲರೆ ನೋಡಿವನ ದು। ರ್ಧರ ಧುರಂಧರ ರಹರೆ ನೆರೆ ಲೇಸಾಗಿ
ನೋಡೆಂದ ॥೩೩॥ ದಾಂಟುವವು ಕಡಲೇಳ ನವಸಿಯು। ಮೀಂಟುವವು ಮುನಿದಡೆ
ಕಪರ್ದಿಯ। ಗೊಂಟಗೊಳಿಸುವ ವಡದ ವತಿ ಕೋಪಿಸಿದ ದಬುಜಭವ॥ ಪಾಟಿ
ಸಿವ ಖರ್ಪರ ಕಟಾಹವ। ನಾಟವಿಕ ತನ ವಿಸಿತು ನಮ್ಮನಿ। ಭಟರಲಿ ತೋರಿ ನಿತು
ಮಹಿಮೆಯನೆಂದ ನಸುರಂಗೆ ॥೩೪॥ ಕುಲಗಿರಿಗ ಳಲ್ಲಾಡುವವು ಹಿಡಿ। ದೊಲದ ಡೀ
ಕಪಿತಿಶು ಗಳಂಬುಧಿ। ಕಲಕುವವು ನೀರಾಟದಲಿ ಹಾರಿಕೆಯ ಗುತ್ತಿನಲಿ॥ ಚಲಿಸುವವು
ಪ್ರದಯಾಸ್ತಮಾನದ। ಕುಲಶಿಲೋಚ್ಚಯ ನಿನ್ನ ದುರ್ಗದ। ಬಲುಹ ಹೇಳದಿರಿನಿ
ತಭಟರುಳ್ಳರದೆ ನೋಡೆಂದ ॥೩೫॥ ಅರಸ ಕೇಳ್ ಕಪಿ ಪೋತಕಂಗಳ। ನೆರವಿ
ತಾನಿವೆ ನೋಡು ನರಕೇ। ಸರಿಗೆ ಮಾರ್ವುರ್ಲಿವಂತೆ ಕಾಲನ ಗೋಣ ನುಲಿವಂತೆ॥
ಭರವಸದ ಲದೆ ನೋಡು ಹಿಮವ। ದ್ಗಿರಿಯ ಮೆಟ್ಟಿದು ಹಾರುವವು ಸುರ। ಗಿರಿಯ
ಪುರಗುತ್ತಾನಸಾದಜ ಪುರಿಗೆ ನೋಡೆಂದ ॥೩೬॥ ವಹಾ ಯೆ ಯಿದು ತಾ ಸ್ಸೈಸೆ ಶಿರಿನಾ।
ರಾಯಣನು ನಾಡಾಡಿ ಕೋಡಗ। ಕೀಯಶೇಷ ಗುಣಂಗಳುಂಟೇ ಪೂರ್ವ ಯುಗಗಳಲಿ॥
ರಾಯನೀ ರಕ್ಕಸ ಕುಲ ಕ್ಕಸ। ಹಾಯ ಶೂರನು ನೀನು ನಿನ್ನೊಡ। ನಾಯತದ
ರಣಕೊದಗುವ್ರದು ಬಿರಗಲ್ಲವೇ ಯೆಂದ ॥೩೭॥ ಮುತ್ತಿಕೊಂಡಿದೆ ನೋಡು ದುರ್ಗವ।
ಹೊತ್ತ ಗಿರಿ ತರು ಸಹಿತ ಬಡಿಸುವ। ಮುತ್ತಿಗೆಯ ಭಟರುಂಟೆ ನುಡಿಯಲಿ ತನ್ನ
ಮುಂದೀಗ ॥ ಇತ್ತ ಕಳೆ ಸೀತೆಯ ನಿರರ್ಥಕೆ। ಸತ್ತುಹೋಗಲುಬೇಡ ನಾಳೆ।

ಯೊತ್ತಿ ನುಡಿವವರಿಲ್ಲ ಹಿತವನು ನಿನ್ನಕೂಡೆಂದ ||೩೮|| ಸೂಸೆನನೃತವ ನೊಡ್ಡ ವೈರದ | ವಾಸಿ ಕಾರರ ಕೀಶಬಲ ವಾ | ರಾಶಿಮಧ್ಯದೊಳಿಹನೆ ನೋಡಮರೇಂದ್ರ ಗಿರಿಯಂತೆ || ದಾಶರಥಿಯ ಯಶೋವಿಲಾಸ | ಶ್ರೀಸತಿಯ ಸುಗ್ರೀವ ಶೋಭಾ | ಭೂಷಣದ ಮಣಿಗಣದ ನಾಯಕ ರತುನ ನವನೆಂದ ||೩೯|| ರಣಕೆ ನೀಲಗ್ರೀವ ರಿಪು ವಾ | ರಣಕೆ ಕಾಲಗ್ರೀವ ರಾಮಾ | ಯಣ ಮಹಾಮಾಲಾ ಸುರತ್ನಾವಳಿಗೆ ಸುಗ್ರೀವ || ಸೆಣಸು ಸುಖವಿಲ್ಲವ ನೊಡನೆ ವನ | ದೆಣಿಕೆಯನು ಬಿಡು ತಿದ್ದಿಕೊಂಬುದು | ಗುಣವಲೇ ಗರ್ವರಿಯ ತನುಜೆಯ ಬಿಟ್ಟು ಬದುಕೆಂದ ||೪೦|| ಇನಿತರೊಳು ಹರಿಯೆಂದು ರಾಮನ | ನನುಕರಿಸ ಬೇಡಬುಧಿ ಬೆಟ್ಟಕೆ | ತನುವ ತೆರುವುದೆ ವನಚರರು ಕೈಗಟ್ಟಿ ಕಾಳಗಕೆ || ಅನಿವಿ ಪಾಂತಕ ರೊಡನೆ ಸಿಲುಪರೆ | ಮನುಜ ಕಿಂಕರರಾಗಿ ಬುದ್ಧಿಯ | ನಿನಗೆ ಹೇಳಲಿಕಾವ್ ಸಮರ್ಥರೆ ಯೆಂದ ನಸುರಂಗೆ ||೪೧|| ಏನೆಲವೊ ಶುಕ ನಮ್ಮೊಡನೆ ವಾ | ಯಾಸಿಬದ್ಧೋಕ್ತಿ ಗಳೊಳೆಮ್ಮನು | ನೀನರಿಯದವನೇ ವಿಚಾರಿಸಿ ಗಳಹದಾದೆಯಲ || ವಾನರರ ಕಾಪೇಯ ಕುಶಲ ಸಿ | ಧಾನವನು ನೆರೆ ಕಲಿತಲಾ ಬಿಡು | ಮಾನವೇಂದ್ರನ ತೋರು ಸಾಕಾಮಾತದೇಕೆಂದ ||೪೨|| ಅಜ ಡೀಕ್ಷಿಸು ಮನದ ಭಯದ ಸಿ | ಹಾದಿಯಲಿ ನಿಗಮ ಪ್ರಸಿದ್ಧನ | ಭೂ ದಿವಾ ನಲಸಲಿಲ ಸೂರ್ಯಾತ್ಮಕನ ನಚ್ಯುತನ || ಆದಿನಾರಾಯಣನ ನಿನ್ನಸ | ಹೋದರನ ರಕ್ಷಿಸಿದ ಘನದೂ | ರ್ವಾದಳ ಶ್ಯಾಮಲನ ರಾಮನ ನೋಡು ನೀನೆಂದ ||೪೩|| ಎಡದ ತೋಳನು ನಿನ್ನ ತಮ್ಮನ | ಮುಡುಹಿ ಗಾಸಿಸಿ ತನ್ನ ತಮ್ಮನ | ಖಡುಗ ಹಸ್ತದ ಮೇಲೆ ಸಿರಿಹಸ್ತವನು ಸಂಘಟಿಸಿ || ಜಡಿವ ಹೆಗಲಿನ ಮೂಡಿಗೆಯ ಕೈ | ಹೊಡೆಯ ಲಸುರೇಶ್ವರನು ಹೇಳುವ | ನುಡಿಗೆ ಕಿವಿಗೊಟ್ಟಾತ ನಗ್ಗದ ರಾತ್ರಿ ಘಟನೆಂದ ||೪೪|| ಬೇಡುತದೆ ಜೊಬ್ಬಿರಿದು ರಾಮನ | ಮೂಡಿಗೆಯ ಕವಲಂಬು ಹಗೆಗಳ | ತೋಡಿ ರಕುತವ ಸುರಿವ ಭರದಲಿ ವೀರ ಲಕ್ಷ್ಮಣನ || ಝಾಡಣೆಯ ಖಂಡೆಯದ ಕಿಡಿ ಕುಣಿ | ದಾಡುತವೆ ಖದ್ಯೋತ ಮಾಲೆಯ | ನೋಡಿಯಲಿ ಮರೆಮಾತದೇ ನಸುರೇಂದ್ರ ಕೇಳೆಂದ ||೪೫|| ಕರ್ತನಾಗಿಹ ಸಮರರಂಗೆ ಸಮ | ವರ್ತಿಯಾಗಿಹ ನಸುರರಿಗೆ ಕಡು | ಧೂರ್ತನಾಗಿಹ ನಣಕ ಸನಕ ನಿಜೈಕ ಶರಣರಿಗೆ || ಭರ್ತುವಾಗಿಹ ಸಮರ ರಂಗದ | ಕೀರ್ತಿಸಲು ನೋಡರಸ ನಾನಾ | ಮೂರ್ತಿಯಲಿ ತೋರ್ಪಾತ ನೀ ರಘುರಾಮ ನೋಡೆಂದ ||೪೬|| ಸಾವು ಸಿನಗಿಲ್ಲಜನು ನೀಲ | ಗ್ರೀವರಿ ತ್ರಾಯುಷ್ಯವುಂಟಿಂ | ಬೀ ವಿಚಾರವ ಬಿಟ್ಟುಕಳೆ ಕಮಲಜ ಭವಾದಿಗಳ || ದೇವನಲ್ಲಾ ದೈತ್ಯರಿಪು ಮನ | ಕಾವ ಸಂಶಯ ಬೇಡ ಸೀತಾ | ದೇವಿಯರ ನೊಯ್ದಿತ್ತು ಮರೆಯೊಗು ರಾಘವೇಶ್ವರನ ||೪೭|| ವೀರನೀ ರಘುನಾಥ ಶೌರ್ಯೋ | ದ್ಧಾರ ನೀ ರಘುನಾಥ ಕರುಣಾ | ಸಾರ ನೀ ರಘುನಾಥ ಶರಣಾಗತ ಜನಾವಳಿಗೆ || ಚಾರುತರ ಸುರಧೇನು ವೆಂಬೀ | ಸ್ಮರಣೆಯ ಶಿರಿ ಮೈಯೊಳಿಡೆ ಕ | ಣ್ಣಾರ ನೋಡೆಲೆಯಸುರಕ ಕೇಡುಗತವ ನುಳಿವೆಂದ ||೪೮|| ಚೆಲುವನಹನೇ ನೋಡು ಸೀತಾ | ಲಲನೆ ನಗಗ್ಗ ಳಂಬುಜೆತಾಂಗಕೆ | ಬಲುಹನುಳ್ಳವನಹನೆ ನಿನಗಿಂದಧಿಕ ಗುಣಗಳಲಿ || ಬಲವು ವಗ್ಗದ ದೈವವೈಪದ | ಬಳಿಗೆ ಕೋಡಗ ಕೂಡಿ ರಾಜಿಗೆ | ಸಲೆ ಸಹೋದರ ಬಿಟ್ಟು ಹೋದನು ನಿನ್ನ ನೀಗೆಂದ ||೪೯|| ಸರಸತಿಯ ನೀ ವಾಮಜಾಂಡ್ರ | ಗರಸಕೇಳು

ಸಹೋದರರು ದು। ಶ್ಚರಿತವೀತಂ ಗಣು ಶತಾಂಶವು ಹೊದ್ದದಿದು ಸಿದ್ಧ ॥ ಸುರ
ಗೀತನು ಕಲ್ಪತರು ಭೂ । ಸುರಗೀತನು ದೇವಮಣಿ ಕ । ರ್ಬುರರಿಗೀತನು ಕಾಲ
ಭೈರವನಹನು ನೋಡೆಂದ ॥ ೫೦ ॥ ಅಸುರರೀತನ ಹೊಪ್ಪಿ ಜಗದಲಿ । ಹೆಸರು ವಡೆದವ
ರಿಲ್ಲವೇ ಭಾ । ವಿಸಿದಡಿಯ್ಯನೆ ಲೋಕಪಾಲತ್ವವನು ನೈರುತಿಗೆ ॥ ಅಸಮಬಲ ಬಲಿಗೀ
ಯನೀ ಹವ । ಣಿಸಿದ ಪಾತಾಳವ ಹಿರಣ್ಯಕ । ಶಿಶುವಿಗೀಯನೆ ಸಾರ್ವಭೌಮತ್ವವನು
ವೈಷ್ಣವದ ॥ ೫೧ ॥ ಸುರರಿಗಮೃತನ ನೆರೆವ ದಿನದಲಿ । ಶರಣು ಹೊಗೆ ಸುಧೆಯಿತ್ತು
ಶಶಿ ಸೂ । ರ್ಯರ ಸಮಾನಗ್ರಹದ ಪದವಿಯನಿತ್ತು ಮನ್ನಿಸನೆ ॥ ಧರೆಯರಿಗೆ ರಾಹು
ವನು ತೊಡೆಯೊಳ । ಗಿರಿಸಿ ಕೊಳ್ಳನೆ ಹಿರಣ್ಯಕನ ಮೂ । ರ್ಖರ ಮನೋರಥ ಬೇಡ
ಬಿಡು ವೈರವನು ನೀನೆಂದ ॥ ೫೨ ॥ ಹೋಗಲಂದಿನ ಮಾತು ಮಲತವ । ರೇಗಿದರು ಖರ
ಮೂಷಣಾದಿಗ । ಳೀಗ ಸೇರಿದು ಕೆಟ್ಟನೇ ಸುಗ್ರೀವ ನೋಡವನ ॥ ಹೋಗು ಹಗೆಯಹೆ
ಗೆಂದು ನೂಕಲು । ವ್ಯೆಗುರುಹ ಕಂಡರಿಯದನಲೇ । ಸಾಗಿ ಮನ್ನಿಸಿ ಕೊಡನೆ ಲಂಕೆಯ
ನರಪ ಕೇಳೆಂದ ॥ ೫೩ ॥ ಮೇರೆಯಾವುದು ನೋಡು ವಾನರ । ವಾರುಧಿಗೆ ದಶಕಂಠ
ಹೇಳಿದ । ದಾರು ಸರಿ ನಿನಗೆಂಬ ಸೈನ್ಯ ಸಮಾಜದೆಣಿಕೆಯಲಿ ॥ ವೀರ ನೀನೋ ರಾಘ
ವನೋ ರಣ । ಧೀರ ನೀನೋ ರಾಮನೋ ಶೃಂ । ಗಾರವಾವುದು ನೋಡು ರಣಸನ್ನಾಹ
ಸಂಭ್ರಮನ ॥ ೫೪ ॥ ನಿನ್ನ ಶೌರ್ಯದ ಸುಪ್ರತಾಪದ । ಬಿನ್ನಣವ ಕೊಂಡಾಡೆ ರಘುಪತಿ
ಖಿನ್ನನಾದನೆ ಖತಿಯ ತಾಳ್ದನೆ ಖಾತಿ ಹಿಂಗಿದನೆ ॥ ತನ್ನೊಡೆಯನನು ಹೊಗಳುವವ ನ ।
ತ್ಯುನ್ನತನು ನೃಪದೂತರೊಳಗೆಂ । ದೆನ್ನ ಕೊಂಡಾಡಿದನು ತಲೆದೂಗಿದನು ನಿನಗೆಂದ ॥
ನಿದ್ರೆಗನಸಿನ ಲಳಿವ ಕಂಡವ । ರೆದ್ದು ಕುಳ್ಳಿರದಿಹನೆ ನಿನಗಾ । ಹೊದ್ದಿಕೆಯ ಹವ
ಣಾಯ್ತು ಹೇಳುವ ಹಿತವರಿಲ್ಲಕಟ ॥ ಮೊದ್ದು ಕೈಯಾಗಿಹುದು ಮೊದಲದ । ಮದ್ದ
ರದಗುವು ದದರವನು ಹೊ । ದ್ದಿರ್ದರುಜಿಮಾತೆಷ್ಟು ವಾಕ್ಪರಿಯರಸ ಕೇಳೆಂದ ॥ ೫೬ ॥
ಏಕೆ ನಿನಗೀ ಮಾತು ಮಾನವ । ಕಾಕು ಕೋಡಗವಿಂದ ಹೊಗಳಿದ । ಡಾಕುಳಿಗೆ ಹುಲಿ
ಬುಂಜುವುದೆ ಹವಣರಿಯದಾದೆಯಲ ॥ ನೂಕಿ ನೋಡಾರಣದಿ ಯಿನಿಬರ । ನಾಕ ನಿಳ
ಯನ ಮಾಡದಿರು ಲೋ । ಕೈಕವೀರ ನೆನಿಪ್ಪ ಬಿರುದನು ಹುದು ಬಿಸುಡೆಂದ ॥ ೫೭ ॥
ಎಂದು ಹಲುಮೊರೆದಸುರ ಹೂಂಕೃತಿ । ಯಿಂದ ಗರ್ಜಿಸ ಲುದುರಿದುವು ನಭ । ದಿಂದ
ತಾರಕೆ ತಳಮಗುಚಿ ತಂಬುಧಿ ಸುರಾಲಯದ ॥ ಮುಂದಿ ಮುಮ್ಮಳಿಯಾಯಿತೀ
ಕಪಿ । ವೃಂದ ಕಂಪಿಸಿತೇಸಿದದ್ಭುತ । ವೆಂದು ತೊರವೆಯರಾಮ ಸೀಕ್ಷಿಸಿದನು ವಿಭೀ
ಷಣನ ॥ ॥ ೫೮ ॥

ಎಂಟನೆಯ ಸಂಧಿ ಸಮಾಪ್ತಂ.

ಒಂಬತ್ತನೆಯ ಸಂಧಿ.

ಸೂಚನೆ॥ ವೀರ ಲಂಕಾಧಿಪನ ಘನ ವಿ । ಸ್ತಾರ ವಿಮಲ ಚ್ಛತ್ರವನು ರಘು । ವೀರ
ಕಡಿದನು ಕೆಣಕಿದನು ಕಪಿಪತಿ ದಶಾನನನ ॥

ಪದ್ಯ॥ ಕೇಳು ಜನ್ಮೆ ರಘುವಂಶ ಲಕ್ಷ್ಮೀ । ಲೋಲ ಸುತ ರಾವಣನ ಹೂಂಕೃತಿ ।
ಕೇಳಿಸಿತು ಕಪಿಕಟಕವನು ಕೈಯೊಡನೆ ದಶಮುಖನ ॥ ಘಾಳಚೇಳಗಳ್ಳಿರಿಮದವಿಳ ದಿ ।

ಕಾಳೆಯನು ಬಳಿಕಾ ಖರಾಂತಕ । ಕೇಳಿದನು ಬಂದಾತನಾರೆಂದಾ ವಿಭೀಷಣನ ॥೧॥ ಜೇಯ ಬಂದವನೀಗ ರಕ್ಕಸ । ರಾಯ ನಮಲ ಪುಲಸ್ತ್ಯನೆಂಬ ಮ । ಹಾ ಯತೀಶನ ಪುತ್ರಪೌತ್ರನು ವಿಶ್ರವಸುವಿಂಗೆ ॥ ರಾಯ ಚಿತ್ರೈಸಿವನ ವಿಕ್ರಮ । ದಾಯತಕೆ ಸರಿ ಸುಭಟರಸುರನಿ । ಕಾಯ ನಿರ್ಜರ ನರ ಭುಜಂಗರೊಳೆಣಿಸಲಿಲ್ಲೆಂದ ॥ ೨ ॥ ಇವನ ಖಂಡೆಯಕಳುಕಿ ದಿವಿಜರ । ಯುವತಿಯರು ಸೆರೆಯಾಯ್ತು ತೆತ್ತರು । ವಿವಿಧ ವಸ್ತು ಪ್ರಚಯವನು ಸುರ ನರ ಭುಜಂಗಮರು ॥ ಭವ ವಿರಿಂಚಿ ಪ್ರಮುಖ ನಿರ್ಜರ । ನಿವಹ ಕೈವಶವಾಯ್ತು ತಾರನು । ಲವಕೆ ದೇವರು ಬಂದ ಬರ್ದದ ಭಯವ ಮನಕೆಂದ ॥ ೩ ॥ ಅರಸ ಚಿತ್ರೈಸಿಂದ್ರ ಶಿಖಿ ಯಮ । ನಿರುತಿ ವರುಣ ಸಮೀರ ಹರ ಸರ । ಸಿರುಹಸಂಭವ ಸರ್ವ ರಾಜರ ರಾಜಲಾಂಛನವ ॥ ಸುರುಚಿರವ ಕಾಂಚನದ ರತ್ನೋ । ತ್ಕರದ ಮಕುಟ ಛತ್ರವನದೆದಶ । ಶಿರನ ಶಿರದಗ್ರದಲಿ ಸಿರಿ ಯಿನಿತಾರಿಗುಂಟೆಂದ ॥ ೪ ॥ ಜನಪ ಚಿತ್ರೈಸವೆ ಮಹಾಹವ । ವೆನಗೆ ತನಗೆಂಬುಬ್ಬುವಾತಿನ । ಕೊನರ್ವ ಕೋಪದ ಖಂಡೆಯದ ಝಡಪುಗಳ ಝಾಡಣೆಯ ॥ ದಿನಪ ತೇಜದ ಬರವ ಮಣಿಮಯ । ಕನಕ ಖಚಿತ ಕಿರೀಟಬದ್ಧದ । ಘನಬಲಾಯುತ ಸುಭಟರದೆ ಸುತ್ತಲು ದಶಾನನನ ॥ ೫ ॥ ಮಲವ ನೂರಿಯ ಖಾತಿಯುಂದದ । ಕಳವರಿವ ಕುಡಿಕೋಪವುಬ್ಬಿನ । ಕಲಿತ ಕರ್ಕಶಕಾಯ ದರುಣಚ್ಛವಿಯ ಲೋಚನದ ॥ ಬೆಳಗಿಡುವ ದಾಡೆಗಳ ಶೌರ್ಯದ । ಝಳದ ಝಾಡಿಯ ಮೋಡಿವದನ । ಗ್ಗಳ ಪರಾಕ್ರಮಿ ಶಕ್ರಜಿತು ಲೇಸಾಗಿ ತಿಳಿಯೆಂದ ॥೬॥ ಹೊಗೆದೆಗೆದ ಹೆಬ್ಬುಲಿಯವೊಲು ಝಗ । ಝಗಿಸ ತೇಜದ ಸುಪ್ರತಾಪದ ಮೊಗದ ಕೋಪದ ತಾಪಕವ ತಸಿಗಿಡಿಯ ದಾಡೆಗಳ ॥ ಹೊಗರ ಹೊಸ ಜವ್ವನದ ಜವಗಿವ । ರುಗಳ ಲೆಕ್ಕಿಸದಸಿವ ಬಿರುದಿನ । ಮಗ ನರಾಂತಕ ನಸುರರಾಯಂಗರಸ ಕೇಳೆಂದ ॥೭॥ ಸುರರ ಬಿರುದಿನ ಬಾಪುಲಿಯ ಸುರು । ಚಿರದ ಮಣಿಮಂಡನದ ಕರ್ಕಶ । ತರದ ಖಂಡೆಯ ದುಪ್ಪರದ ಮುಪ್ಪುರಿಯ ಹುಬ್ಬುಗಳ ॥ ಮುರಿದ ಮೀಸೆಯ ಮೇಚಕಾದ್ರಿಯ । ಸರಿಸದವ ನವನೀಗ ಮಂಡೋ । ದರಿಯ ಮಗ ದೇವಾಂತಕನ ಸೋದರಸ ನೀನೆಂದ ॥೮॥ ಹರಿ ಹರ ಬ್ರಹ್ಮರನು ಮೋಹಿದ । ಧುರದಿ ಅಣುವಿಗೆ ತಾರದಗ್ಗದ । ಭರದ ಭೀಷಣ ದುಗ್ರವಿಕ್ರಮ ದಾನನತ್ರಯದ ॥ ಧುರಕೆ ತಾ ಪೀಳಯುವನೆಂ । ಪ್ಪರದ ಕಗದಲಿ ಬೆಡುವವನೀ । ಗರಿಭಯಂಕರ ಭಾರಿ ವೀರ ತ್ರಿಶಿರ ನೋಡೆಂದ ॥೯॥ ಅರಸ ನೋಡೆಡವಂಕದಲಿ ವಿ । ಸ್ತರದಲಿ ಯಿಳಾಭರಣ ಕಾಂತಿಯ । ಕರ ಮರೀಚಿ ಪ್ರಭೆಯ ನುಗುಳುವ ನಿಶಿತ ದಾಡೆಗಳ ॥ ವರುಷ ಕಾಲದ ಕಾರ್ಮುಗಿಲ ಜಂ । ಧುರದ ಬಣ್ಣದ ಸುಪ್ರತಾಪದ । ಸಿರಿಯ ನುಳ್ಳವನೀಗ ಕೋಮಲಕಾಯ ನತಿಕಾಯ ॥ ೧೦ ॥ ದೇವ ನೋಡು ನಿಶಾಚರೇಂದ್ರಂ । ಗೈವರೀಗಸುರಪ್ರಧಾನರು । ಕೋವಿದರು ಸಮರದಲ ಕಂಪನ ವಜ್ರದಂಷ್ಟ್ರಕರು ॥ ದೇವರಿಪು ಧೂಮ್ರಾಕ್ಷ ನಯುಸಂ । ಭಾವಿತನು ವೀರ ಪ್ರಹಸ್ತನು । ಹಾ ವಿಕೃತಿ ಬಲಕತಿ ಮಹೋದರ ರಾಗ ಲವರೆಂದ ॥೧೧॥ ಶುಕ ಮಹಾಬಲ ಕುಂಭ ಮಾಯಾ । ಮಕರ ನಯನ ಸುಮಾಲಿ ಯೂಪಾಂ । ಬಕ ಸುಬಾಹು ಸುಪಾರ್ಶ್ವ ಸಾರಣ ಶೋಣಿತಾಂಬಕರು ॥ ವಿಕಟ ಯುದ್ಧೋನ್ಮತ್ತ ಮಾಯಾ । ಪ್ರಕರ ವಿದ್ಯುಜ್ಜಿಹ್ವ ಖಳ ನಾ । ಮಕರ ನೆರವಿಯ ನೋಡು ನೋಡೆಲೆ ಜೀಯ ನೀನೆಂದ ॥೧೨॥ ಅದೆ ಧುರಂಧರ ಸಮರ

ಶೀಲ | ಪ್ರದ ಮಹಾಪಾರ್ಶ್ವಾದಿ ಭಟರ | ಗ್ಗದ ಪ್ರತಾಪರ ನುಸುರಲೇನದೆ ದೇವ ಚಿತ್ತೈಸು || ತುದಿಗೆ ನವಿನ್ಯಾ ಸೇನೆ ಸಮರ ದೊ | ಳೊದಗುವುದು ಕಡು ಚಿತ್ರವಿದರಲಿ ಕದನದಭಿಗತ ಭಾರವಿದ್ದುದು ನಿಮ್ಮ ಮೇಲೆಂದ || ೧೩ || ಇವನೊಳೊಂದಿದೆ ಕೊರತೆ ಸೀತಾ | ಯುವತಿಯನು ಕದ್ದೊಯ್ದನೆಂಬೀ | ಹವಣೆ ನದರಿಂದೇನಹನೊ ನಾನರಿಯೆ ನುಳಿದಂತೆ || ಇವನ ಗೆಲುವ ಸಮರ್ಥರಿಲ್ಲೀ | ಭುವನ ಮೂರರಲೆನಲು ನಸುನಗು | ತವನಿಪತಿ ನೋಡಿದನು ಬೆಡಿದ ನನುಜನನು ಧನುವ || ೧೪ || ಉಗಿದು ಗವಸಣಿಗೆ ಯುಲಿ ಚಾಪದ | ಹೆಗಲುಗಳ ನಾರೈದು ತಿರುವಿಗೆ ನೆಗಹಿ ಬೆರಲಿನ | ಸೇರಿಸಿದನುದ್ದಂಡ ಕಾರ್ಮುಕವ || ತೆಗೆದು ಬತ್ತಳಿಕೆಯಲಿ ನಿಶಿತಾಂ | ಶುಗ ಸಹಿತ ನೀಡಿದನು ರಘುಪತಿ ನಗೆಮೊಗದ ಲೊಂದಂಬ ಕಳುಹಿದ ನಸುರನಿದ್ದೆಡೆಗೆ || ೧೫ || ಕುಶನೆ ಕೇಳೈ ತರುಣ ತರಣಿಯ | ರಸುಮೆಗಳ ನುಗುಳುವ ಸುರತ್ನ | ಪ್ರಸರ ಮುಕ್ತಾಫಲ ವಿಕರ್ಣ ಪ್ರಭೆಯ ಪಲ್ಲವದ || ಮಿಸುಪ ಧವಳಚ್ಛತ್ರ ಪಂಕ್ತಿಯ | ಪಸರಿಕೆಯ ಪಂಟಿಸಿತು ಬೆದರಿದು | ದಸುರ ಬಲವಲ್ಲಲ್ಲಿ ಬಿಸುದಿನ ಬಲು ಭಟಸ್ತೋಮ || ೧೬ || ಕೆರಳಿ ಕೈಯೊಡನಂಬು ಸಂಧಿಸಿ | ತಿರುಗಿ ಬಾರದ ಮುನ್ನ ವಾನರ | ರರಸ ಲಂಘಿಸಿ ಹೊಯ್ದನಾ ದಶಶಿರನ ಮಸ್ತಕವ || ವುರುಳಿದನು ನೆಲ ಕುಪ್ಪಳಿಸೆ ಜ | ರ್ಝರಿತವಾಗಲು ಕೆವರಿ ಕೈದುವ ಹರಹಿದರು ಹರಿದಶ್ವ ತನುಜನನೇಳಲೆ ಭಟನಿಕರ||೧೭|| ಒತ್ತಿ ಗಂಟಲ ನಸುರರಾಯನ | ನೆತ್ತಿ ನೆಗ್ಗಲು ಬೊಬ್ಬಿರಿದು ಕಪಿ | ಕಿತ್ತ ನನುಪಮ ರಾಜ ಚಿಹ್ನದ ರತ್ನ ಬಂಧುರದ || ಹತ್ತು ಮಕುಟವ ನೆತಬಲದ ಸುಭ | ಟೋತ್ತಮರ ಸದೆ ಬಡಿದು ತಂದವ | ನಿತ್ತ ನಂಘ್ರಿ ಸರೋಜಯುಗಳಕೆ ರಾಘವೇಶ್ವರನ ||೧೮|| ಉಡಿದು ಗಗನಕೆ ನೆಗಹಿ ಛತ್ರವ | ಕೆಡಹಿದುದು ಶಾ ಕಪಿಭಟರು ಬೊ | ಬ್ಬಿಡಲು ಹರಿಕಟಕದಲಿ ಬೆಸಸೇನೆನುತ ರಘು ಪತಿಯ || ಎಡೆಗೆ ಬರೆ ಬಾಣಾವಿಯೊಳನ್ನ ಬ | ರಳಗಿರೆಂದಸುರಾರಿ ನೇಮಿಸೆ | ಸುಡಿದ ನೆತ್ತಲು ರಾವಣನು ನನುಭಯದ ಬೆರಗಿನಲಿ ||೧೯|| ಖೋಡಿಯಿಲ್ಲದ ವೀರನಹೆ ರಣ | ಭೇಡನಲ್ಲದ ಶೌರ್ಯನಹೆ ನುಡಿ | ದಾಡಬೇಹುದು ಗುಣವ ಹಗೆಯಾದಡೆಯು ಕಂಡು ದನು || ರೂಢಿಸಿದ ಬಲು ವಿದ್ಯೆಯಲಿ ಪರಿ | ಪಾಡುಸಿನನಲಿ ನಿನಗೆನುತ ಕೊಂ | ಡಾಡಿ ದನು ದಶಶಿರನು ದಶರಥರಾಯ ನಂದನನ ||೨೦|| ಮುದವಳಿದು ಮನಗುಂದಿ ಚಿಂತೆಯ | ಕದಡಿ ಮನದಲಿ ಸಂದನಾ ಖಳ | ಸದನಕತ್ತಲು ರಾಮನಿತ್ತಲು ಕಪಿಪತಿಯ ನೋಡಿ | ತುದಿವೆರಲ ನಲ್ಲಾಡಿ ಕೆಡಿಸಿದೆ | ಕಡೆಗೆ ನಮ್ಮವರಾಗಿ ನೀತಿಯ | ಸವದೆ ನಾವಿನ್ನೆಂಬು ದೇನೆಂದರಸ ಕೋಪಿಸಿದ ||೨೧|| ಅರಸು ನೀನೀ ಬಲಕೆ ರಿಪುಭಟ | ರರಸನಲಿ ನಿಲುಕಿ ದರೆ ನಿಜಬಲ | ದರಸ ಕಟ್ಟಿದ ಕರುವಿನಂತಿಹುದೆಮ್ಮಬಲ ಬಳಿಕ || ಅರಸು ನೀತಿ ಯಿದಲ್ಲ ಮಂತ್ರ | ಜ್ಞರಿಗೆ ಮಾರ್ಗವಿದಲ್ಲ ಕಟ್ಟಾ . ಸುರದ ಕರ್ಮವನೆನೆದೆ ನಾವಿನ್ನಂ ಬುದೇನೆಂದ ||೨೨|| ದೇವರಂಘ್ರಿಯ ಕರುಣಪೂರ್ತಿ | ಗಾವ ಸಂಶಯ ವೇಗುವುದು ತ | ದೈವಹೀನನೆ ಚಿತ್ತವಿಸು ರಣದಪಜಯ ಸ್ಥಿತಿಯ || ಈಪರಿಗೆ ಯೋಳುಗಿದು ಬಿಸುಟುವೆ | ಸೀಸುಬುಧ ಪದ್ಮಿನನ ಪೀಠ | ಶ್ರೀ ವಧುವಿನೋಲೆಯನು ಬೆಸಸಿನ್ನೇಕೆ ತಡವೆಂದ ||೨೩|| ಎಂಬ ಮಾತಿಗೆ ಯೂಥನಾಥ ಕ | ದಂಬ ಕೈಗೈ ದಬ್ಬರಿಸಿದುದು | ಕೊಂಬುಗಿವ ಹೆಮ್ಮರ ಶಿಲೋಚ್ಚಯ ಶಿಖರ ಸಮುಧಿಯಲಿ || ಲಂಬಿಸಿತು ಲಕ್ಷ್ಮೀರಿ

ಲಗ್ಗೆಗೆ। ಝೂಂಬಿಸಿತು ವೇಲಿದ್ದ ರಿಪುನಿಕು । ರುಂಬ ನಸ್ತ್ರಾವಳಿಯು ಚೂಣಿಯ ಚಟುಳ ಭಟನಿಕರ॥ ೨೪॥ ಸೈರಿಸಿನ್ನ ಬರರ ಸುನೀತಿಯು। ಸಾರವಿನ್ನೊಂದುಟು ಹಗೆಯಲಿ। ಸೇರಿ ಸಿಕ್ಕಿದ ವಸ್ತುವಿಗೆ ಸಂಧಾನಕೃತಸಮಯ ॥ ನಾರಿಯನು ಬೇಡಿಸುವ ವರವು। ದ್ವಾರಣೆಯು ಮುಖವರಿದು ವೇಲಪ । ಚಾರಣೆಯು ಪಂಥದಲಿ ಪಡಿತಳಿಸುವುದು ನೀ ವೆಂದ ॥ ೨೫ ॥ ಮನಕೆ ನಿನಗಿದು ಬಹುದೆ ರಾಕ್ಷಸ। ಜನಪನಲ್ಲಿಗೆ ಕಳುಹು ಸಂಧಿಗೆ। ವಿನುತ ನಯಚರಿತಜ್ಞನನು ಪಟುಭಾಷಿತಜ್ಞನನು ॥ ಅನುವರ ಪ್ರಜ್ಞನನು ನಿರ್ಭಯ। ಮನದ ಶೀಲಜ್ಞನನು ನಮ್ಮಯ। ಮನದಲಿದ್ದಭಿಮತ ವಿದೀಗೆಂದಸುರಹರ ನುಡಿದ ॥ ಲೇಸು ದೇವರು ನೆನೆದ ರೀತಿಯು। ವೈರಿಯ ಪರಿಯೆಂದು ಜಾಂಬವ। ಕೇಸಂಗಳೊಪ್ಪಿದರು ತಪ್ಪುಲ್ಲೆಂದ ನಸುರೇಂದ್ರ ॥ ಈಸು ದೊಡ್ಡಿತು ಮಾಡಲೇಕಾ। ಭಾಷನನು ಸಾಕೆಂದು ವಾಲಿ ಹು। ತಾಶನರ ನಂದನರು ಕೆದರಿದ ರುರುಪರಾಕ್ರಮವ ॥೨೭॥ ಜೇಯು ನಿಮ್ಮಯ ಮತವು ಮತವಿದ। ರಾಯತಿಕೆ ನಮಗೇಕೆ ನೀವೆಂ। ಬೀ ಯಶೇಷ ಗುಣಂಗಳಂಗದ ನಂಗ ಶೋಭೆಯಲಿ ॥ ಸ್ಥಾಯಿ ಯಾಗಿದೆ ಜೇಯಯೆನೆ ರಘು। ರಾಯ ನಹುದೆಂದೊಪ್ಪಿದನು ದಿನ। ನಾಯಕನು ಸಾರಿದನು ಬಳಿಕಪರಾಂಗನಾ ಸತಿಯ ॥ ೨೮ ॥ ವಾರಿಜಾಸನ ಮನುಜ ಮುಖ್ಯ ಮ। ಹೋರಗರ ಸೆರೆಯಾಳ್ದ ರಕ್ಕಸ। ವೀರ ದಶಕಂಧರನು ಷಡದಾಯುಷ್ಯ ರಾಶಿಗಳ ॥ ತೀರ ಲಳಿದ ಪರಾಂಬುರಾಶಿಯು। ತೀರದಲಿ ತಂದಿಳುಹಿದನುಪಮ। ಸಾರತರ ಮಣಿಮಯದ ಕೊಳಗವಿದೆನಲು ರವಿ ಮೆರೆದ ॥ ೨೯ ॥ ಸನೆದ ವೀಚಿಯಲರಸಗರಮನೆ । ತವಗ ಸಭೆ ಲಕ್ಷ್ಮಣ ವಿಭೀಷಣ । ರವಿಸುತಾದಿ ಸಮಸ್ತ ಸೇನಾಪತಿಗಳೊಗ್ಗಿನಲಿ ॥ ಭವನ ವರ ಭವನಗಳ ಬಾಹೆಯ। ಲವತರಿಸಿದುವು ಕೋಟಿ ಪರಿಯುಗ। ಳವನಿಜಾಸುತ ಕೇಳು ಸುರವರ್ಧಕಿಯ ಕೆಲಸದಲಿ ॥೩೦॥ ಬಿಜಯಮಾಡಿದ ನರಸ ನನಿಲಾ। ತ್ಮಜನ ಕೈಲಾಗಿನಲಿ ಮಿರುಪಿನ। ಗಜರು ಗಹಳೆಯ ಸನ್ನೆಯಲಿ ಸೇನಾಧಿಪರು ಸಹಿತ ॥ ನಿಜ ನಿವಾಸಕೆ ವಿಶ್ವಕರ್ಮನ। ಭಜನೆಯನು ಕೈಗೊಳುತ ಬೀಡಿಕೆ। ಗಜತನುಜ ಸುಗ್ರೀವ ಮುಖ್ಯರ ಕಳುಹಿದನು ರಾಮ ॥ ೩೧ ॥ ತೀರಿತುದಿನ ರಜನಿ ನಾರಿಯ। ಚಾರುತರದ ವಿಲಾಸ ವಿಭ್ರಮ । ವಾರಘುಕ್ಷಿತಿಪ ಪ್ರತಾಪಕದಂತೆ ದಿನ ಮಣಿಯ ॥ ಚಾರುತರ ತೇಜೋ ವಿಲಾಸ ಬ । ಲಾರಿ ದಿಗ್ಭಾಗದ ಮಹೋನ್ನತ। ಧಾರುಣೀಧರ ದಗ್ರದಲಿ ದೇದೀಪ್ಯಮಾನದಲಿ ॥ ॥೩೨॥

ಒಂಬತ್ತನೆಯ ಸಂಧಿ ಸಮಾಪ್ತಂ.

ಹತ್ತನೆಯ ಸಂಧಿ.

ಸೂಚನೆ॥ ವೀರ ವಿಜಯ ಭುಜ ಪ್ರತಾಪ ನು। ದಾರ ಸಾಹಸಮಲ್ಲ ವಾಲೀ ಕು। ಮಾರ ಸಂಧಿಗೆ ಹೋಗಿ ಸವರಿದ ನಖಿಳ ರಾಕ್ಷಸರ ॥

ಪದ್ಯ॥ ಕೇಳಿದೈ ರಾಜೇಂದ್ರಸುತ ದಶ। ಮೌಳಿ ಯಿಂದೀ ಜಗದೊಳಗೆ ಕಡು। ಖೂಳ ರುಂಟೆಂದೆಣಿಸ ಬೇಡ ತಿಶಯದ ಮೂರ್ಖನಲೆ ॥ ಕೇಳಿಕೆಯ ಮನ ಛತ್ರಭಂಗದ। ಮೇಲೆ ಮುರಿಯದ ಛಲಪದದ ಪರಿ। ಪಾಳಿಯಿಂ ದುಷ್ಟವಡಿಸಿದ ನುಪ್ಪರವ

ಗರ್ವದಲಿ ||೧|| ಉದಯ ಮುಖದಲಿ ಪೂರ್ವ ಸಂಧ್ಯಾ| ವಿದಿತ ಕರ್ಮವ ರಚಿಸಿ
ಭರ್ಗನ| ಪದವ ಭಜಿಸಿ ಬೃಹಸ್ಪತಿಯ ಜೋಯಿಸನ ನನುಕರಿಸಿ || ತ್ರಿದಶ ಕೈವಾರಿ
ಗಳ ಕಳಕಳ | ದದುಭುತದ ನೆಲನುಗ್ಗಡಣೆಯಲಿ ಸದಮಡದ ಅಸುರೇಂದ್ರ ನಡೆ
ತಂದಿತ್ತ ನೋಲಗವ ||೨|| ಬಂದುದೋಲಗ ಕಸಿರ ಸುರಮುನಿ | ವೃಂದ ಕಿನ್ನರ
ಯಕ್ಷ ರಾಕ್ಷಸ| ದಂದಶೂಕ ಪಿಶಾಚ ಗುಹ್ಯಕ ಗರುಡ ಗಂಧರ್ವ || ವೃಂದ ವಾಯು
ಕುಬೇರ ವರುಣ ಪು | ರಂದ ರಾಗ್ನಿ ಮಹೇಶ ಯಮ ನರ | ವೃಂದ ಜಾತಿ ಸಮಸ್ತ
ಸುರಗಣವಾ ದಶಾನನನ ||೩|| ಬಲದ ಭಾಗದ ಛವ್ರ ಪೀಠಂ| ಗಳಲಿ ಸತಿ ಸಹಿ ತಜ
ಭವಾದಿ ಗ | ಳೊಲವು ವಿಗೆ ಕುಳ್ಳಿದರು ಸನಕಾದಿಗಳು ಗಡಣದಲಿ || ಲಲಿತ ಶಾಂತದ
ಸುಪ್ರತಾಪದ| ಸುಲಭತೆಯ ಸುಮ್ಮಾನದಲಿ ನಿ| ಶ್ಚಲಿತ ನಿರ್ಭಯ ಭುಜಬಲಾನ್ವಿತ
ರಾಕ್ಷ ಸೇಶ್ವರನ ||೪|| ವಾಮದಲಿ ಸುರನಾಥ ಮುಖ್ಯರು| ನಾಮ ಸುಮನಸ ರೊಬ್ಬ
ರೊಬ್ಬರ| ವೈಮರೆಯ ಮುಡುಹುಗಳ ಮುಕುಳಿತ ಕರದ ಕಂಪನದ || ಕೋಮಲದ
ಕೊಂಕುಗಳ ಮಕುಟ| ಸ್ತೋಮ ದೋಸರಿಕೆಗಳ ವಿಗಡೋ | ದ್ದಾಮ ನಿದ್ದನು ಭೂರಿ
ಭಯ ರಸಭರಿತ ಭಾರದಲಿ ||೫|| ವೀರ ರಾವಣಿ ಕುಂಭ ತ್ರಿಶಿರನು| ದಾರ ದೇವಾಂತಕ
ನಿಕುಂಭ ನ| ರಾರಿ ಖಳ ನತಿ ಕಾಯ ಮುಖ್ಯ ಕ ಮಾರ ರಿದಿರಿನಲಿ || ಚೂರಿಸುವ
ಖಂಡೆಯದ ಕಡುಹಿನ | ಧಾರಣೆಯ ಭಾರಾಂಕ ರಿದ್ದುದು| ಭೂರಿ ಭೂಷಣ ಭರಿತ
ವೀರಾವೇಶ ದುಬ್ಬಿನಲಿ ||೬|| ಕಲಿ ಮಹೋದರ ಧೂರ ವಿಜಯ ದೋ| ರ್ವಳ ಸುಪಾ
ರ್ಶ್ವಕ ಸುಪ್ರತಾಪಾ | ನಲ ಮಹಾಮಂತ್ರಿ ಪ್ರಹಸ್ತ ಪ್ರಮುಖ ನಾಯಕರು ||
ಹೊಳೆವ ದಾಡೆಯ ಹೋಗರು ಮೋರೆಯ | ತಳಿತ ರೋಮದ ತೋಳ ಬಿಗುಹಿನ|
ಕಲಿಗಳಿದ್ದರು ಕಲಿತ ಘನ ಕ್ರೋಧಾತಿ ರೇಕದಲಿ ||೭|| ಮುಸಗಿ ದಂಬಿನ ಲುಬ್ಬಣದ
ಮೊನೆ| ಮಿಸುಕಿ ದೆಡೆಯಲಿ ಸುರಗಿ ಸುಳಿ ದೆ | ಬ್ಬಿಸಿದ ಠಾಣದ ಲಂಬು ಲಂಬಿಸೆ
ಹೊಕ್ಕ ಹೊಧರಿನಲಿ | ಮುಸೆಮುಖದ ಲೋಂದೇರಿ ಗೈವದೆ | ಕುಶಲಗಳ ತೋರುವ
ಮಹಾದ್ಭುತ | ರಸದರಕ್ಕಸರಾಯ ರಿದ್ದರು ಕೋಟಿ ಸಂಖ್ಯೆಯಲಿ ||೮|| ಹರಿಯು
ಹಳಚಿ ಗದಾಯುಧವ ಯಿಾ| ಶ್ವರನ ಜರೆ ದಜಗರವ ಯಿಂದ್ರನ| ಪರಿಭವಿಸಿ ರುಜು
ರೋಹಿತವ ನಂತಕನ ಸದೆಬಡಿದು || ಸಂಘವನು ಪವಮಾನ ಪಾವಕ| ವರುಣ ನಿರುತಿ
ಕುಬೇರ ಶಸ್ತ್ರವ| ಧರಿಸಿ ದತಿಬಲ ವಿಪ್ಲ ದುರಿತ ಮಹೋಗ್ರ ತೇಜದಲಿ ||೯|| ಧನಪ
ನಪಜಯ ದಭಿನವ ವಸುರ| ಪನ ಪಲಾಯನ ನರ್ತನಸ ರಪ| ತನಯ ನೋಟದ
ನಾಟಕವ ಪವನ ನಪರಾಭವನ || ವನಧಿಪನ ಸೋಲನ ವಿಚಾರಿಸಿ| ತನಿ ನಗೆಯ
ಲುಬ್ಬಿಸುವ ಹಾಸ್ಯದ| ಲಿ ನುತ ಪರಿಹಾಸಕರ ಲೆಸೆದುದು ಸಭೆ ದಶಾನನನ ||೧೦||
ಗುರು ನಿತಂಬದ ಸೋಗೆದುರುಬಿನ| ಸರಸ ವಚನದ ವಚನದುಬ್ಬಿನ| ತಿರುಹು ಗಂಗಳ
ಹಾಯಿಕುವ ಹುಬ್ಬುಗಳ ಹೊಸನಗೆಯ || ಸರಿವ ಮೇಲುದಿನಂಗಳಿನತುದಿ | ವೆರಳ
ಮಾತಿನ ಭಾವ ಭಂಗಿಯ| ಸುರರ ಸೂಳೆಯರಿರ್ದುದಪರಾಂಗದಲಿ ರಾವಣನ ||೧೧||
ಹೊಗರ ಹೊಸಜವ್ವನದ ಸೊಂಪಿನ | ನಿಗುರಿಸಿದ ಸಿಡು ತೋಳುಗಳ ಸೆ | ಳ್ಳುಗುರ
ಮಣಿಮುದ್ರಿಕೆಯ ಘನಶೃಂಗಾರ ದುಬ್ಬುಗಳ || ನಗೆಯ ನಯನದ ಸನ್ನೆ ಮಾತಿನ|
ಸೊಗಸಿ ದಬಲಾಜನದ ಕೈಗಳ ಲಗಿವ ಚಾಮರ ವಿದ್ದುದಿದ್ದೆ ಸೆಯಲಿ ದಶಾನನನ ||

ಕರೆಸಿ ಕಾರಾಗೃಹದ ರಾಯರ । ಕರುಣದಲಿ ಬಿಡುತಿದ್ದ ನಗ್ಗದ । ಭರತಖಂಡದ ರಮ್ಯ
ಕದ ಜನಪದ ದಿಳಾವೃತದ ॥ ಹರಿ ವರುಷ ಕಿಂಪುರುಷ ದೇಶದ । ಕುರು ಹಿರಣ್ಮಯ
ಕೇತು ಮಾಲಾ । ಧರಣಿಗಳ ಧರಣಿಪರ ನಾ ಸಮಯದಲಿ ದಶಕಂಠ ॥೧೩॥ ಸಚಿವ
ಸೇನಾನಾಥ ರಾಷ್ಟ್ರ । ಪ್ರಚಯ ನಿಯತ ನಿಯೋಗಿ ಜನ ಪರಿ । ರಚಿತ ಸೇನಾ ಸಂಧಿ
ವಿಗ್ರಹ ವಾಹಕವ್ರಾತ ॥ ಪ್ರಚುರ ತರ ಕರಿ ವಾಗ್ಮಿವಾದಿ । ಪ್ರಚಯ ಮಂತ್ರಿ ಪ್ರಜೆಯು
ಲಿದ್ದುದು । ವಚಿಸಲೇನದ ನಮನು ನವರಸ ದಧಿಕ ಸೊಂಪಿನಲಿ ॥೧೪॥ ಹಗೆಗಳ್ಳೆ
ತಂದಂಜಿಕೆಯುತ । ನ್ಮೊಗು ಮಿಗೆಯ ಮನಸಿನಲಿ ತಾರದೆ । ಮಿಗಡ ರಕ್ಕಸರಾಯ
ನಿದ್ದನು ಕೇಳಿದ್ದೈ ಕುಶನೆ ॥ ಸಗರ ವಂಶಜ ನಿತ್ತ ನೊಡ್ದೋ । ಲಗವ ನೀಯನು
ವಿಶ್ವಕರ್ಮನು । ವಿರಚಿಸಿದ ನಿರುಪಮ ನಿಕಾಂತ ಸಭಾಂತರಾಳದಲಿ ॥೧೫॥ ಓಲಗಕೆ
ನಡೆತಂದ ರಾ ಕಪಿ । ಪಾಲ ಪದ್ಮಜಸೂನು ಕೇಸರಿ । ಶೂಲಿ ಸಮಬಲ ಹನುಮ ಹರಿ
ಸುತ ಹರಿ ಸುಷೇಣ ಕರು ॥ ನೀಲ ನಳ ಗಜ ಗವಯ ಕಪಿಶಾ । ದೂರ್ಲ ಶತಬಲಿ
ಶರಭ ರಾಕ್ಷಸ । ಮೌಳಿಮಣಿ ವೈಷ್ಣವ ಶಿರೋಮಣಿಗಳು ಮಹೀಪತಿಯ ॥೧೬॥ ವೀರ
ರಕ್ಕಸ ವೀರ ರಾಹುವ । ಧೀರ ರತಿಬಲ ಸಾರ ದದ್ರಿಮ । ಹೋರುಹದ ಕೈದುಗಳ ಕರ್ಕಶ
ದುಬ್ಬಿನುಬ್ಬರದ ॥ ಭಾರಿಭಟ ಯೂಥಾಧಿಪತಿಗಳು । ದಾರ ತೇಜೋವರ್ಗದಲಿ
ರಘು । ವೀರ ನಂಘ್ರಿಗೆ ಕೈಮುಗಿದು ನಿಂದಿರ್ದ ರಿದಿರಿನಲಿ ॥೧೭॥ ಜವನ ನಣುವಿಗೆ
ತಾರದಗ್ಗದ । ಶಿವನ ಲೆಕ್ಕಿಸ ದಾಪ್ರಳಯ ಭೈ । ರವನಬಗೆಯದ ಭಾರಿ ಭಟ
ರೊತ್ತೊತ್ತಿ ಝಡಿವುತಿರೆ ॥ ರವಿಕುಲೋದ್ಭವ ನಾ ಸಮಯದಲಿ । ರವಿಸುತನ ಮೊಗ
ನೋಡಿ ನಮಗೀ । ಹಸಣೆಗಾವುದು ಮತವು ನಿನ್ನನುಮಾನವೇನೆಂದ ॥೧೮॥ ಅವುದಿದ
ಕನುಮಾನ ಚಿತ್ತದೊ । ಳಾವುದನುಮತ ದೇವರಿಗೆ ಸೇ । ವಾವಿಷಯ ಸಂಭೂತರಾವ್
ಬೇರುಂಟೆ ಮತವೆಮಗೆ ॥ ದೇವರೆನಿತನು ಬೆಸಸಿ ದನಿತನು । ನಾವು ಮಾಡುವವೈ
ಸೆನಲು ಮೊದ । ಲಾವು ನಿನಗೂಹಿಸಿದ ಮತವನೆ ಮಾಡಿ ನೋಡೆಂದ ॥೧೯॥ ಕಳುಹು
ಸಂಧಿಗೆ ರಾಕ್ಷಸೇಂದ್ರನ । ಬಳಿಗೆ ಚಿತ್ತದ ಲರಿಭಟನು ಸಮ । ಗಳುಕುವುದು ಹುಸಿ
ಯಾದರೆಯು ರಾಜೋಪಚಾರವಿದು ॥ ಎಳೆದು ಬಿಡಲೀ ಮಾತ ನಮ್ಮಯ । ಬಳಿಗೆ
ಬಂದರೆ ಕಾವೆವಲ್ಲದ । ರಳವಡಿಸಿ ಕೊಂಡಿರಲಿ ಕದನವ ದೆಂಬುದವಗೆಂದ ॥೨೦॥
ಆಹುದು ಮತ್ತೇನೆಂದು ಕರೆದನು । ಮಿಹಿರಸುತ ನಂಗದನ ನೀಹೋ । ಗಹಿತನೆಡೆ
ಗಿಂತೆಂದು ನುಡಿ ನೀ ರಾಜಕಾರಿಯವ ॥ ಮಹಿಜೆಯನು ತಂದಿತ್ತು ಘನವಿ । ಗ್ರಹವ
ರಕ್ಷಿಸಿಕೊಂಬು ದೆಂಬುದು । ಕುಹಕಿಗಾ ಮಾ ತುದಿಸದಿರೆ ಬಳಿಕೆಂಬು ದೀಹದನ ॥೨೧॥
ನೆರಹಿ ಕೊಂಡಿರು ಪುತ್ರ ಮಿತ್ರ । ದ್ಯರನು ನಿಜ ಬಲಸಹಿತ ಕಾಲನ । ಪುರಿಗೆ ಪಯ
ಣವಮಾಡಿ ಕೊಂಡಿರ ಹೇಳು ಬೇಗದಲಿ ॥ ಶರಣು ಹೊಗದಿರೆ ಮಾಣ ದೆರಡನು । ಸುರ
ವಿರೋಧಿಯು ಕೂಡೆ ನುಡಿವುದು । ಧುರವ ಕೊಡಗದೆ ತಿರುಗುವುದು ಹೋಗೆಂದ ನಾ
ರವಿಜ ॥೨೨॥ ಹೈ ಹಸಾದ ವೆನುತ್ತ ಕೈ ಮುಗಿ । ದಾ ಹರೀಶ್ವರ ಸೂನು ವರ ವೈ ।
ದೇಹಿ ಯರಸನ ವಿಮಲ ಜಾಂಘ್ರಿದ್ವಯಕೆ ತಲೆವಾಗಿ ॥ ಮಿಹಿರಜಂ ಗಘನಮಿಸಿ ಬಳಿ
ಕು । ತ್ಸಾಹದಲಿ ಮಣಿ ಮಕುಟ ಮುಖ್ಯಮ । ಹಾ ಹಿರಣ್ಯಾಭರಣ ಭೂಷಿತನಾದ
ನೊಲವಿನಲಿ ॥೨೩॥ ಧರಿಸಿದನು ಯೋಜನದ ನೀಳದ । ಗಿರಿ ಶಿರವ ಹೆಗಲಿನಲಿ ಕೆಚ್ಚಿನ

ಮರನ ನೌಂಕಿದ ನೆಡದ ಕಂಕುಳ ಲರ್ಧಯೋಜನದ ‖ ಹಗಿಯ ಶಿರಿಚರಣವನು ನೆನೆದು । ಪ್ಪರಿಸಿದನು ಗಗನಕ್ಕೆ ಗರುಡನ । ಗರುವಿಕೆಯ ಗಾಡಿಕೆಯ ಗಮನದ ಗಮಕ ದುಬ್ಬಿನಲಿ ‖೨೪‖ ಕೂಡೆ ವಾನರ ಕಟಕ ಬೊಬ್ಬೆಯ । ಗಾಡಿಕೆಯ ಉಬ್ಬೇಳು ತಿರ್ದುದು । ನೋಡಿ ನಿರ್ಜರ ನಿಕರ ನಿಲವಿ ನೋಳ್ದುರ್ದಭ್ರದಲಿ ‖ ಕೂಡೆ ಕಳಕಳ ಮಸಗಿ ದಿವಿಜ ವಿ । ಭಾಡ ಪುರ ಭಯ ರಸದ ಲಿರ್ದುದು । ಮೋಡದಿಂ ದಿಳಿತಪ್ಪುಸಿಡಿಲ ಪೊಲಿಳಿದ ನಾ ಪುರಿಗೆ ‖ ೨೫ ‖ ತೋಳ ಗಾಳಿಗೆ ತೂಳಿದುವು ಸೌ । ಧಾಳಿ ಸೊಗಸಿನ ಗೋಪುರಂಗಳು । ಕಾಲುಗುರು ದಾಂಕಿನಲಿ ಸಿಡಿ ಲೊಡೆದ ದ್ರಿಯಂದದಲಿ ‖ ಧೂಳು ಗೆವರಿದ ವಮಮ ತೋರಣ । ದಾಳಿ ನೆಲಕುಪ್ಪರಿಸಿ ಕಪಿ ರೋ । ಮಾಳಿ ಸೋಂಕಿನ ಲಂಜಿ ತಳವೆಳಗಾದುದಾ ನಗರ ‖ ೨೬ ‖ ನಿಳಯ ನಿಳಯದ ಲಿಕ್ಕಿದುವು ಮು । ಚ್ಚುಳ ನಿಶಾಟರ ಸತಿಯರಟ್ಟುಂ । ಬೊಲಿಗಳನು ನಂದಿಸಿ ದರವುಸಿದ ರುಡುವ ಸೀರೆಗಳ ‖ ಕೆಲರು ವಕ್ಕರಣೆಗಳ ಭಾವಿಗ । ಳೊಳಗೆ ಕೇಡಾಯ್ತೆಂದು ಬಂದವ । ಸುಳಿದ ನೇಗುವೆನೆನುತ ಸಂವರಿಸಿದರು ಸರಕುಗಳ ‖೨೭‖ ತಡೆದ ಬಾಗಿಲು ಬಾಗಿಲುಗಳು । ಗ್ಗಡದ ಖಳನನು ಹೆಮ್ಮರದ ಹೆ । ಬ್ಬಡದ ಲಿರಗುತ ಹೊಕ್ಕ ನೋಲಗವನು ಸರಾಗದಲಿ ‖ ಎಡಬಲದ ಖಂಡೆಯದ ಕದನದ । ಕಡುಹಿ ನಸುರರ ನೆರದು ಭಾಗದ । ಮುಡುಹುಗಳ ಲಣವುತ್ತ ದಿಂದಿದ ರಿದಿರಿನಲಿ ಖಳನ ‖ ೨೮ ‖ ಬೆಗಡುಗೊಂಡೇ ಹನುಮನೆಂದೇ । ಬಗೆದು ಮನದಲಿ ನೊಂದ ಭಟರರೆ । ದೆಗೆದು ನಿಂದರು ಕೆಲರು ಕೆಲರೊಳ ಸರಿದರಲ್ಲಲ್ಲಿ ‖ ಬಿಗುಹಿ ನಂಕವ ಬಿರುದಿನತಿ ಮನ । ದಗಡು ರಕ್ಕಸರುರ್ಚಿ ದಸಿ ಧೇ । ನುಗಳಲಂಕರಿಸಿದರು ಸನಿಹದ ಲಿಂದ್ರಸುತ ಸುತನ ‖೨೯‖ ಹೋಹೊ ಕಳಕಳವೇಕೆ ಕದನೋ । ತ್ಸಾಹಿಗಳು ನಾವಲ್ಲ ರಿಪು ರವಿ । ರಾಹುವಿನ ನೈಶಾಟಕುಲ ಕಾನನ ಹುತಾಶನನ ‖ ಬೇಹು ಚರರಾವ್ ಜಗದ ದೈನ । ದ್ರೋಹಿ ರಕ್ಕಸ ನೆಡೆಗೆ ನಮ್ಮವ । ರೂಹಿಸಿದುದನು ಹೇಳಿ ಹೋಗಲು ಬಂದೆ ವಾವೆಂದ ‖ ೩೦ ‖ ಮದದ ಮೋಡಿಯ ಮಂದಹಾಸದ । ಮದದ ಮುದದ ಸ್ವಾಮಿ ಕಾರ್ಯಾ । ಸ್ಪದದ ಸಂಪತ್ತಿನ ಸಘಾಡದ ಲಸುರ ನಿದಿರಿನಲಿ ‖ ಪುದಿದ ಗರ್ವವಿ ಗೌರವದಿ ಕು । ಳ್ಳಿದನು ಕುಂಡಲಿಯಂತೆ ಲಾಂಗೂ । ಲದ ವರಾಸನದಿಂದ ನಿಂಕ್ಷಿಸು ತರಿ ಭಟಾವಳಿಯ ‖೩೧‖ ಮುಖ ಚತುಷ್ಟಯ ದಾತ ನಾರೀ । ಮುಖಗಳೆರಡರ ಮಹಿಮ ನಾರೀ । ಮುಖವೆರಡು ಮೂರಾರು ನೋಡಲು ಹತ್ತುಪರಿಯಂತ ‖ ಮುಖಗಳಿವೆ ತಾ ನಿದರೊಳಗೆ ಶಶಿ । ಮುಖಿಯ ಮಾಯೆಯ ಬಳಸಿ ರಜನೀ । ಮುಖದೊಳಗೆ ತಂದಘವ ರಕ್ಕಸ ನಿವರೊಳಾರೆಂದ ‖ ೩೨ ‖ ಹೇಳಬಾರದೆ ಬಲ್ಲವರು ಭೂ । ಪಾಲ ಹೇಳಿದು ಕಳುಹಿ ದನಿತನು । ಹೇಳಿ ಹೋಗಲು ಬಂದೆನಾವ್ ಪ್ರತಿಭಟರು ನಾವಲ್ಲ ‖ ಲೋಲನಯನೆಯ ತಂದ ರಕ್ಕಸ । ಖೂಳನಿವ ನೀಗೆಂದು ತನ್ನೊಡ । ಹೇಳ ಬಾರದೆ ಹಿರಿದು ನಾಚಿಕೆಯೇಕೆ ನಿಮಗೆಂದ ‖೩೩‖ ನಗರ ದಹನದ ಕಪಿಯ ಮೋಡಿಯ । ಮಿಗಿಸುತಿದೆ ಮಾತಿನಲಿ ಮೋರೆಯ । ಹೊಗರು ಹೊಸ ಪರಿಯಾಗಿ ತೋರುತಿದೇ ವಿವೇಚಿಸಲು ‖ ವಿಗಡನಿವ ನಹುದೆಂದು ಮನದಲಿ । ಬಗೆಯರಿದು ಬಳಿಕಾ ಪ್ರಹಸ್ತನು । ಮುಗುಳು ನಗೆಯಲಿ ನುಡಿದನಾ ಕಪಿ ರಾಜಪುತ್ರಂಗೆ ‖೩೪‖ ಆರು ನೀ ನಾರವನು ನಿನ್ನ ನ । ದಾರು ಕಳುಹಿದ ರಿತ್ತ ಬರವೇ । ನಾ ರೊಡೆಯರಾರಂಟು ನಿಮಗೀ ನಮ್ಮ ನಗರದಲಿ ‖

ಆರ ಮಗ ಹೆಸರೇನು ಬರವಿಗೆ। ಕಾರಣವದೇ ನಮ್ಮ ರಾಜ। ದ್ವಾರವನು ನೀ ಹೊಕ್ಕ ಹದನೇನೆಂದು ಬೆಸಗೊಂಡ ॥೩೫॥ ಲೇಸು ಕೇಳುವ ಕಣೆಯು ೞಭಿ ವಿ। ನ್ಯಾಸವೊಳ್ಳಿತು ಕೇಳು ಲಂಕಾ। ಧೀಶನೆಂಬ ಪಿಶಾಚರೇಂದ್ರನ ನಿಜ ಸಹೋದರಿಯ॥ ನಾಸಿಕವ ಕೊಯ್ದವನ ರಣದಲಿ। ದೂಷಣಾದ್ಯರ ಶಿರವ ನಿಱುಹಿದ। ದಾಶರಥಿಯನು ಕೇಳಿ ಬಲ್ಲೈ ಹಿಂದೆ ನೀನೆಂದ ॥೩೬॥ ಕೇಳಿ ಬಲ್ಲೈ ಹಿಂದೆ ಲಂಕಾ। ಪಾಲಕನ ಮಾತುಳನ ಕೊಂಗಳಲಿ। ಕೋಲ ಕಣಿಸಿದ ಕದನ ಕರ್ಕಶರಾಯ ರಾಘವನ॥ ಮೇಲೆ ಸಿನ್ನಾಳಿದನ ತಮ್ಮನ। ಪಾಲಿಸಿದ ಪರನು ಪ್ರತಾಪನ। ಬೋಳೆಯನ ಬಲ್ಲಹನ ನಾತನ ದೂತ ತಾನೆಂದ ॥೩೭॥ ಅಲ್ಲ ಸಾಕಾಸನವ ನೊಪ್ಪಿ ಸ। ಬಲ್ಲೆನವ ನಿನ್ನಿಂದ ಬಾಯಲಿ। ಬಲ್ಲಿದನು ಬಾಯ್ ಬಡುಕತನದಲಿ ಬಗುಳಿ ಬಾಲವನು॥ ಕೊಳ್ಳಿ ಗಿಡಿಯಲಿ ಸುಡಿಸಿಕೊಂಡವ। ನಿಲ್ಲಿಸೋಡಿದ ನಂದಿನವ ನೀ। ನಲ್ಲ ಹೊಸಬನು ನೀನು ನಿನ್ನಯ ಹೆಸರ ದೇನೆಂದ ॥೩೮॥ ಹೇಳಲೇನದ ನವನ ವಿಧಿಯನು। ಕೇಳಿತಿಲ್ಲವಲಾ ಕಪೀಂದ್ರನ। ಪಾಳೆಯವ ಹೊಗಗೊಡದೆ ಕಪಿಪೋತಂಗಳುಚ್ಚರಿದು॥ ಬಾಲ ಸುಡ ಕನಗೆರವಲಾ ಕಪಿ। ಯೂಳಿಗವು ತನಗಾಯ್ತು ನವಿನ್ನಾ। ಬಾಲವನು ನೀವ್ ಕೆಣಕಿ ನೋಡಿದಡರಿಯಬಹುದೆಂದ ॥ ೩೯ ॥ ಹೊಸಬನೇ ನೀ ಕಂಗಳಿಗೆ ಹರ। ವಸವೆ ಬಲ್ಲಿದನಹನು ಕಡು ಕ। ರ್ಕಶತೆಯಲಿ ಕಂಡರಿಯಬಾರದೆ ಹೋಗಲದಕೇನು॥ ಹೆಸರದೇನಂಗದನು ಪಿತ ನಾ। ನಸುರ ಕೇಳಾದರೆ ನಿಶಾಚರ। ನಸುವ ಸಲಹಿದ ವಾಲಿ ಯಾತನ ತನುಜ ತಾನೆಂದ॥ ಅಕಟ ಕೆಡಿಸಿದೆ ಪಾಪಿ ತನು ಘಾ। ತಕನಲಾ ನೀ ನಿನ್ನ ತಂದೆಯ। ಸಕಲಜನ ವನ್ಯಾಯವೆನೆ ಕೊಲಿಸಿದ ದುರಾತ್ಮಕನ॥ ಪ್ರಕಟಿಸದೆ ಕೊಂದಧಮ ನರನಾ। ಯಕನ ನಕಟಾಸೇರಿ ಕಡು ಹೇ। ಸಿಕೆಯ ಹೊತ್ತೆ ನಿರರ್ಥ ನಿನ್ನನು ನೋಡುವರೆ ಯೆಂದ ॥೪೦॥ ಹಗೆಗಳವದಿರು ನಿನಗೆ ನೆವದಲಿ। ಹೊಗೆವ ಕೊಳ್ಳಿಯ ಹೊರಗೆ ಹಾಯ್ಕಿದ। ರಗಲಿಸಿದರವರು ವಿಂಗೆ ಕೊಲುವವರಲ್ಲ ನಾವ್ ನಿನ್ನ॥ ತೆಗೆದುಕೊಂಬೆವು ನೀ ನೆಮಗೆ ದಾ। ಯಿಗನು ನಿಮ್ಮಯ ತಂದೆ ಯಾಳುವ। ನಗರವನು ಸೇರಿಸುವೆ ನಂಜದಿರಿನ್ನು ನೀನೆಂದ ॥ ೪೧ ॥ ಗಹಗಹಿಸಿದನು ಲೇಸುವಾಡಿದಿ। ರಹಿತರೇ ನೀವ್ ನಿಮಗೆ ನಿಮಗೀ। ಬಹಳ ಭುಜಬಲವುಳ್ಳರಡಗಿಸಿ ರೂಪರುಂ ಹರಿಯ॥ ದುಹಿತೆಯನು ಕಳವಿನಲಿ ವನದಲಿ। ತಹನೆ ರಾಮನ ಬಳಿಗೆ ನಿಮ್ಮವ। ಬಹನೆ ಬಾಪ್ಪಳ ಕೆಡುವುದುಚಿತವೆ ನಮ್ಮ ಕೂಡೆಂದ ॥೪೨॥ ತಂಗಿ ಯಭಿಮಾನದ ನಿರ್ಥಕೆ। ಭಂಗ ಬಡಿಸಿದ ಹೇವದಲಿ ಹಗೆ। ಯಂಗನೆಯ ತಂದಾತ ನೀತನು ಸೋದರತ್ರಯದ॥ ಹಿಂಗಿ ದಸುವಿಂ ಗಸುಗೊಳಲು ರಣ। ರಂಗದಲಿ ನಿಂದಿರುವ ಸುಭಟೋ। ತ್ತುಂಗ ನೀತನು ನೀನು ಬಂದುದು ಬಗುಳಿ ಹೋಗೆಂದ॥೪೩॥ ತಂದೆ ಪರಸತಿ ಗೋದಕಾರಣ। ಸಂದ ನಕ್ಷತ್ರ್ಯಮುಯಕ್ಕೆ ಕೊರಳಿಗೆ। ಬಂದಿದೆಯೆಲಾ ನಿಮ್ಮವಗೆ ತಮ್ಮೈಶ್ವರ್ಯಸೂರೆಪಾಡಿ॥ ಒಂದೆರಡು ದಿನದಂತರವು ನಾ। ವೆಂದ ನುಡಿ ಕೇಳಲವೊ ಸೀತೆಯ। ತಂದವನ ತೋರಿದರೆ ತಮಗದು ರಾಜ್ಯಪದವೆಂದ ॥೪೪॥ ಎಲವೊ ಕಪಿ ಕೇಳಾಪಡೀಕ್ಷಿಪು। ಕಲಿ ಲಲಾಮನ ಕದನ ಕರ್ಕಶ। ಕುಲಿಶ ಕಾಯನ ವೈರಿ ವರ ಯುವತೀಜನ ಸ್ಮರನ॥ ವಿಲಸಿತ ಪ್ರತಿಮ ಪ್ರತಾಪಾ। ನಲನ ರಾಕ್ಷಸ ರಾಜ ಪಾಕಿಯ। ನುಲವರಿದು ನೃಪಸೊಬೆ ಕಾರೆನ ನೋಡು ನೀನೆಂದ। ೪೫॥ ಈಸೀಗ

ಸಮಸ್ತ ದಿವಿಜ | ವ್ರಾತ ಮಸ್ತಕ ಮಂಡಲಾಗ್ರ ಮ | ಹಾತಿಬಲ ನಧಿಪತಿ ಜಗಂಗಳ ಗಜಭವಾದಿಗಳ || ಈತ ಬಯಸಿದ ಸುರನರೋರುಗ | ಚಾತದಬಲಾ ಜನವ ನೋಲಿಸಿದ | ದೂತಿ ವಿಜಯ ಶ್ರೀ ಪಿಚಾರಿಸ್ಸಿ ಮಾತನಾಡೆಂದ || ೪೭ || ಕೋಪ ನಿನಗೇಕಿನಿತು ಸರಿ ಸ | ಲ್ಲಾಪವೇ ನಾವೀ ನಿಶಾಚರ | ರೂಪಿನವ ರುಂಟಾಗಿ ಕೇಳಿದೆವೈಸೆ ತಪ್ಪೇನು || ಆ ಪರಂತಪ ಬಲಿಯ ಭವನದ | ಕೈಪತಿಯ ನಾರಿಯರ ವಚನಾ | ಳಾಪ ಹಾಸ್ಯದ ಭಿಕ್ಷದವ ನಿವನಲ್ಲಲೇ ಯೆಂದ || ೪೮ || ಘನ ಪರಾಕ್ರಮಿ ಕಾರ್ತ್ತವೀರ್‍ಯಾ | ರ್ಜುನ ನೊಡನೆ ಮತ್ಸರಿಸಿ ಸಲೆ ಸೆರೆ | ವನೆಯೊಳಗೆ ಸಿಕ್ಕಿರ್ದ ರಕ್ಕಸ ನೀತ ನಲ್ಲವಲೆ || ವನಿತೆ ವೇದಾವತಿಯ ಶಾಪಕೆ | ತನುವ ತೆತ್ತವನೀತನಲ್ಲಲೆ | ಮನದ ಭಯ ನಿಮಗೇಕೆ ತಪ್ಪಡೆ ಹೇಳಿ ನೀವೆಂದ || ೪೯ || ತೊಳ ದರ್ಪದ ಲುಬ್ಬಿವಾಲಿಯ | ಬಾಲಕನ ಬಚ್ಚಣೆಯ ತೊಟ್ಟಿಲ | ಕಾಲದೆಸೆಯಲಿ ಕಟ್ಟುವಡೆ ದವನೀತ ನಲ್ಲವಲ || ಶೂಲಿಯಲಿ ಗರ್ವಿಸಿ ಮಹೀಧರ | ಮೂಲದಲಿ ಕೈಸಿಕ್ಕಿ ನಾಯಿ ಪೊ | ಲೂಳಿದವ ತಾ ನೀತನಲ್ಲಲೆ ಹೇಳಿ ತನಗೆಂದ||೫೦|| ಜನಕಜೆಯ ಮದುವೆಯಲಿ ಶೂಲಿಯ | ಧನುವಿನಲಿ ನರಿ ಸಿಕ್ಕುಸಿಕ್ಕಿದ| ಶುನಕ ತಾ ನಿವನಲ್ಲಲೇ ಸಿರಹತ್ತ ವ್ಯೆಮರೆಸಿ || ಜನಪಸಿಲ್ಲದ ಹಿಂದೆ ಜನಕನ | ತನುಜೆಯನು ಕದ್ದೊಯ್ದ ಕಾಮುಕಿ | ರನುಚರರ ಗೆಣೆವಂಟ ನಲ್ಲಲೆ ಹೇಳಿ ನಮಗೆಂದ||೫೧|| ಆಗಲಾಗದೆ ಮಾಣಲಿವ ನೊಡ | ನಾ ಗಭೀರ ಪರಾಕ್ರಮರು ಹೇ | ಳ್ದಾಗಮವ ನಿವಗೆಂಬ ಮಿಕ್ಕಿನ ಮಾತ ದೇಕೆಮಗೆ || ರೋಗಿ ಗೌಷಧ ಸೊಗಸೆ ಹಿತಕರ | ವಾಗಿರಲು ನಮ್ಮುಕುತಿಗಳು ಕಿವಿ | ದಾಗಿಸುವೆ ವಾವೊಮ್ಮೆ ಕೇಳಲಿ ಕೇಳದಿರಲೆಂದ || ೫೨ || ಆದಡೆಲೆ ಖಳ ಕೇಳು ನಾಸಾ | ಚ್ಛೇದ ವಾದವಳಿಂದ ನೀ ಮರು | ಳಾದೆ ಕಾಮುಕ ತನದಿ ಕಂಗಾಣದೆ ವಿಭೀಷಣನ || ವೇದಮಾರ್ಗವ ಮಧುರ ವಚನವ | ನಾದರಿಸದುರೆ ಕೆಟ್ಟೆ ನೀ ನಿ | ನ್ನಾದರೆಯು ರಘುಪತಿಯ ಸಾರಿದು ಬದುಕು ಜಾ ರೆಂದ ||೫೩|| ಪ್ರೇಮ ಘನ ನಿನ್ನವನ ಮೇಲೆ ಸ | ನಾ ಮನವ ನಾ ಬಿಡೆಯದಲಿ ನಿಜ | ಭಾಮಿನಿಯ ಬಿಡೆ ಬಿಡುವೆನೆಂದನು ತಿರುಗಿ ಪಾಳೆಯವ || ರಾಮ ನಾಡಿದ ನುಡಿಯಿದೀ ಗೀ | ಕಾಮಿತಕೆ ಕೈಗೂಡದಿರೆ ಲಯ | ಭಾಮಿನಿಯ ಪಾಣಿಗ್ರಹಣ ಕನುವಾಗ ಬೇಕೆಂದ || ಈ ನುಡಿಯನೇ ಕರುಣ ಮುಖದಲಿ | ಭಾನು ಸುತ ಸೂಚಿಸಿದ ನೀ ವಚ | ನಾನುಗುಣವನೆ ನಿನ್ನ ಸಹಭವ ನಾಡಿ ತೋರಿಸಿದ || ಏನು ನಿನ್ನಂಘವಣೆ ಮನ ದನು | ಮಾನ ವಾವುದು ಹೋಗ ಬೇಕಾವ್ | ಮಾನವೇಂದ್ರನ ಬಳಿಗೆ ಬೇಗದಿ ಹೇಳು ನೀನೆಂದ ||೫೫|| ಎನೆ ಘನ ಕ್ರೋಧಾನು ಮುಖದಲಿ | ಮಿನು ಗಿದುವು ಮೀಸೆಗಳು ಕುಣಿದುವು | ಕನಲಿದುವು ಕಂಗಳು ಕಳೇವರ ಕಂಪಿಸಿತು ಖಳನ || ಒನದು ಖಡುಗವ ನೆಲಪೊ ನಿನ್ನಯ | ಜನಪ ರಾಘವ ರವಿಸುತಾ ದ್ಯರ | ತನುಜರನು ಹೆಸರಿಟ್ಟಡೆಯು ಬಿಡೆ ಜಾನಕಿಯ ನೆಂದ ||೫೬|| ಮೀರಿ ನಮ್ಮೊಡ ನಣಕ ಸಣಕನಿ | ಗಾರು ಗೆಡೆದರೆ ಬಾಯ ಹೊಯ್ಸುವೆ | ಸಾರು ಕೆಲಸಾ ರತ್ತ ಹೋಗತ್ತುರನ ನಾಯಪೊಲು || ಜಾರಿ ಕೊಳ್ಗ ದಿರೆನಲು ಜಳಿ ಕು | ಬ್ಬೇರಿ ಸಿಂದನು ಕಾಳಗಕೆ ಕೈ | ದೋರಿ ನಡೆ ನೀ ನಡೆಯೆನುತ ಕೈ ದುಡುಕಿದನು ಖಳನ ||೫೭|| ತೋಳುಗಳ ಹಿಡಿದೆಳೆಯೆ ಖಳ ಕರ | ವಾಳದಲಿ ಚಿಮ್ಮಿದನು ಬಿದ್ದುವು | ಮೇಲೆ ಖಂಡೆಯ ವಂಗ ರಕ್ಷಣೆ ಗಸುರ ನಾಯಕರು ||

ತೂಳಿ ದಿಭ ದೊಡ್ಡಿನಲಿ ಹೊಯ್ದು । ಬ್ಬೀಳು ವಗ್ಗದ ಹರಿಯುಪೊಲು ಗರಿ। ಚೂಳಿ
ಕೆಯ ಉರೆ ಚೆಲ್ಲ ಬಡಿದನು ಸರಿಗ ರಕ್ಕಸರ ॥೫೧॥ ಕೆದರಿ ಕಾ ಸಭೆ ಕೈದುಃಕಾರರು।
ವೊದಗಿದರು ಹೊಳೆಹೊಳೆವ ಹೊಗರಿನ । ಹೊದರು ಗಣೆಗಳ ಹಲವು ಶಸ್ತ್ರಂಗಳಲಿ
ಕಪಿಭಟನ ॥ ಸದೆದ ನೊಳ ಹೊಕ್ಕವರ ನುಳಿದರ । ಕೆದರಿಸಿದ ಮಂಟಪವ ನೊದೆ
ದಿಳೆ । ಗುರುಳಿಸಿದ ನರೆ ಯಟ್ಟಿ ಸದೆದನು ಸರಿಗ ರಕ್ಕಸರ ॥೫೯॥ ಕೂಡೆ ಕಳಕಳ
ವಾಯ್ತು ಹಯ ಕುಳ । ಜೋಡಿಸಿದ ವಾನೆಗಳು ಹಣ್ಣಿದ । ವಾಡಲೇನದ ತೇರು
ತೇಸ್ಸೈಸಿದುವು ಗಗನದಲಿ ॥ ಕೂಡಿ ದಸುರ ಪದಾತಿ ಲಗ್ಗೆಯ । ಮಾಡಿ ಮುತ್ತಿದ
ರಂಗದನ ವು । ನ್ನೋಡ ಮುರಿದುತ್ಸಳಿಸಿ। ತರಣಿಯ ತುಡುಕುವಂದದಲಿ ॥೬೦॥
ತುಡುಕಿ ತೂಳುವ ಗಜ ಘಟಾಳಿಯ ನಿಡಿಕಿದನು ನಭ ಕೌಂಕು ಎದಿರಿನ। ಕಡುಮನದ
ಕುಮತಿಗಳ ಕೊಡಹಿದ ನಖಿಳ ದೆಸೆದೆ ಸೆಗೆ ॥ ಅಡಸಿ ಬಹ ತೇರುಗಳ ನೊದೆದನು।
ಮಡಲದ ಲಜಿ ಗಿಜಿ ಯಾಗ ಲಸುಗಳ। ಸಡಿಲಿಸಿದ ನಿಭ ಹಯ ರಥಾರೋಹಕ ಪದಾ
ತಿಗಳ ॥೬೧॥ ಕೆರಳಿ ಹೊರವಂಡಿಸಿದ ನಜ ಶಂ। ಕರರ ಸಂಗರ ವೆಮ್ಮದತಿ ಘ। ಪ್ಪು ರವು
ನಿಂದಿರ ಬೇಡ ನೋವಿರಿ ನಡೆಯಿ ನೀವೆನಲು ॥ ತಿರಳಿಸಿದ ನೀವಿನ್ನು ದಶಕಂ। ಧರನ
ಬಳಿಗೈತಂದಿ ರಾದರೆ । ಕರುಳ ನುರ್ಚುವೆ ನೆನುತ ತಿವರಿದ ನಖಿಳ ನಿರ್ಜರರ ॥೬೨॥
ವುರಿದು ನೋಡಿದ ನೊತ್ತಬರಿಸುವ । ಬಿರುದಿ ನಗ್ಗದ ಭಟರ ಬೀದಿಯೊ । ಳರುಣ
ಜಲ ಹೊಸಲೇಳೆ ಹರಹಿದ ಹೆಣನ ಹೊರಳಿಯಲಿ ॥ ಪುರದಹನ ಕಿಮ್ಮಡಿಯ ಕಡುಕಾ।
ಹುರುವ ವೆರೆದನು ಕದನದಲಿ ಕೈ । ನೆರೆದ ಬಯಸುವ ಭಟನೆ ಬರಿಗೈದನು ಚತುರ್ಬ
ಲವ ॥೬೩॥ ಬೀಳುತಿರ್ದುವು ವಾಲಿಜನ ವೈ। ಹಾಳಿಯಲಿ ನಭದಿಂದ ರಾಮನ। ಪಾಳಿ
ಯದ ಲಿಭ ಹಯ ವರೂಥ ಪದಾತಿ ಸರಗೊಳಿಸಿ ॥ ಕಾಳುಮಾಡಿದೆ ವಕಟ ಸಂಧಿ ವಿ।
ತಾಳಿಸಿತು ಕೈಲೆಡೆಯ ಶಿಶು ರಣ । ಕೇಳಿಯಲಿ ನಿಲ ಲರಿದೆನುತ ಬಾಯಾರಿದನು
ರಾಮ ॥೬೪॥ ಮಗ ನದೇನಾದನೊ ಮನಸ್ಸಿನ। ಬಗೆಯು ನರಿಯದೆ ಬೀಳು ಕೊಟ್ಟೆವು।
ಹಗೆ ಯೆಡೆಗೆ ಹನುಮಂತೆ ಹೋ ಗುಳಿದಿರ್ದ ರಂಗದನ ॥ ತೆಗೆದು ತಾ ಹೋಗೈಯ ನೀ
ನೆನೆ। ನೆಗೆದು ಪವನ ಪಥಾಂತರದ ಲರಿ। ನಗರ ಕಪಿ ಮುಖನಾಗಿ ಕಂಡ ನಖಂಡ
ಬಲ ಕಪಿಯ ॥೬೫॥ ಲೇಸು ಲೇಸೈ ಸುಭಟ ಸಮರ ವಿ । ಲಾಸ ಬಿಡು ಬದುಕಲಿ
ಯಮಾಲಯ। ವಾಸಿಗಳ ಮಾಡದಿರು ಕೆಡುವುದು ರಾಘವೇಶ್ವರನ ॥ ಘಾಸಿ ಮುಂದ
ಕ್ಕೆನಲು ಕೊನೆಗತಿ । ಹೇಸಿ ಹಿಮ್ಮೆಟ್ಟಿದನು ಲಂಕಾ। ಧೀಶ ನಿದಿರಿಲಿ ನಿಂದು ನೀರದರ
ವದ ಲಿಂತೆಂದ ॥೬೬॥ ಏ ನೆಲವೊ ದಶಕಂಠ ರಣಸು । ವ್ಮಾನ ಮನಸಿಗೆ ಬಾರದೇ
ಹದ। ನೇನು ಹೇಳಾವ್ ಹೋಗಬೇಡವೆ ಹೊತ್ತು ಹೋಗುತಿದೆ ॥ ಏನು ನಿ ನ್ನಂಘ
ವಣೆ ಹೇಳು ನಿ। ದಾನವನು ಭಯವುಂಟು ಗಡ ನಮ। ಗೇನ ಹೇಳುವೆ ಹೇಳುನಾವದ
ಹೇಳ ಬೇಕೆಂದ ॥೬೭॥ ಮನಕೆ ಬಾರದೆ ನಿನಗೆ ಮರೆ ಯೊಗು। ವನುನಯುವು ರಘು
ಪತಿಯ ನೀನಿಂ। ದಿನಲಿ ಜೀವ ಶ್ರಾದ್ಧವನು ವಿಧಿ ವಿಹಿತ ಮಾರ್ಗದಲಿ ॥ ಅನುಕರಿಸಿ
ಕೊಂಡಿರು ನಿಜಾನುಜ। ತನುಜ ಮಿತ್ರಜ್ಞಾತಿ ಬಾಂಧವ। ಜನ ನಿನಗೆ ಬಳಿಕಿಲ್ಲ ಕೇಳೆನು
ತಡರಿವರು ನಭವ ॥೬೮॥ ಅವನೊಡನೆ ಮಾತೇನು ಬಾ ಯೆ.ಂ। ದವನಿಜಾ ವರ ನಂಘ
ಸಲಿಲೋ। ದ್ಭವ ಪರಾಗ ಭ್ರಮರ ನಮರ ಕುಲೇಂದ್ರ ಸಂಭವನ ॥ ಕುವರನನು ಕೈ

ವಿಡಿದು ತೆಗೆದು। ತ್ಸವದಿ ಬಂದನು ಹಗೆಯ ಕೈದುವ। ನವನಿಪನ ಪದಕೆತ್ತು ನಮಿಸಿದ
ನಿಂದ್ರ ಸುತ ಸೂನು ॥೧೯॥ ಕಂದ ಬಂದ್ಯೆ ಕಪಿಕುಲಾಂಬುಧಿ। ಚಂದ್ರಬಂದ್ಯೆ ವೀರ
ರಸದು। ಕ್ಕಂದ ಬಂದ್ಯೆ ನಮ್ಮ ಪುಣ್ಯದಲೆಂದು ಕರುಣದಲಿ॥ ಕೊಂದ ರಕ್ಕಸ ಭಟರ
ರಕ್ತದ। ಬಿಂದುಗಳ ನ್ಯೈದೆರವ ನತುಳಾ। ನಂದ ನಯನೋದಕ ಝುಡಿಯೆ ತಡವರಿ
ಸಿದನು ರಾಮ ॥೨೦॥ ಹೊಗದು ದಧಿಕ ಕ್ರೋಧಶಿಖಿ ಬಳಿ। ಕುಗಿವ ರೌದ್ರಾವೇಶದಲಿ
ಭುಗು। ಭುಗಿಸಿ ಬಲಿಮುಖ ಚಕ್ರಿ ಕೈ ವೀಸಿದನು ಕಾಳಗಕೆ॥ ನಗ ಮಹೀರುಹ ಹಸ್ತ
ರುಬ್ಬಿರಿ। ದಗಲದಲಿ ಖೋ ಯೆಂದು ತೊರವೆಯ। ನಗರದಧಿ ಪತಿ ಹಾರವಿಸಿ ಹತ್ತಿ
ದರು ಲಂಕೆಯನು॥ ॥೨೧॥

ಹತ್ತನೆಯ ಸಂಧಿ ಸಮಾಪ್ತಂ.

ಹನ್ನೊಂದನೆಯ ಸಂಧಿ.

ಸೂಚನೆ॥ ಅಗ್ಗಳೆಯ ಕಪಿ ಸೇನೆ ಸಮರದ। ಲಗ್ಗೆಯಲಿ ಲಂಕಾಪುರದ ಬಲ। ದುರ್ಗ
ವನು ಕೆಡೆ ನೌಕಿ ಕೆಣಕಿದ ಡಸುರ ವಲ್ಲಭನ॥

ಪದ್ಯ॥ ಹತ್ತಿದುದು ಬಳಿ ಕಂಬುನಿಧಿ ತಲೆ। ಯೊತ್ತಿ ಲಯದ ಲಜಾಂಡ
ಭಾಂಡದ। ನೆತ್ತಿ ಗಡರ್ವಂದದಲಿ ರಿಪು ದುರ್ಗವನು ಕಪಿಸೇನೆ॥ ಅತ್ತಲಾದುದು
ಬೊಬ್ಬೆ ಕೋಟೆಯ। ಕೊತ್ತಳದ ಕೋಹಿನಲಿ ಕುಂಭಿನಿ। ಕಿತ್ತು ಹಾರಲು ಹೊಡವ
ಹರಿ ಹದಿನೆಂಟು ಕೋಟಿಯಲಿ ॥೧॥ ಎಲೆಲೆ ಕವಿದುದು ಕಪಿಕದಂಬಕ। ಕಲಹ
ಮುಂಚಲಿ ನಮ್ಮದೆನು ತ। ಟ್ಟಳೆಯ ಲಿಕ್ಕಣಿಸಿದರು ತೆನೆಗಳ ಒಳೆಯ ಬಳಿ ಸಲಿಸಿ॥
ನಿಲುಕಿದರು ಗೋಪುರದ ಮಕುದ। ಹುಲಿಮುಖದ ಶಾಲೆಗಳ ಕೊತ್ತಳ। ಗಳೆಗ ಳೆಡೆ
ಯಲಿ ಹೊಳಕಿ ಹೊಯ್ದರು ಹರಿ ವರೂಥಿನಿಯ ॥೨॥ ಅಡಿದುವು ಮಕರಾಬ್ಧಿ ಡೆಂಕಣಿ।
ಹಾರಿದುಕ್ಕಿನ ಗುಂಡುಗಳ ಸೀ। ಡಾಡಿದುವು ನೆರೆ ಕಾದ ಕಲ್ಗಳ ಸುರು ಶತಘ್ನಿಗಳು॥
ಡೋಡು ಗವಣೆಯ ತೂರುಗಲ್ಲನ। ಝಾಡಿ ಝುಮ್ಮಡಿಸಿದುದು ಗಗನವ। ನಾಡಲೇನದ
ನಮನು ದುರ್ಗದ ಸಮರ ಸಂಭ್ರಮವ ॥೩॥ ಬೆಟ್ಟಗಳ ನೀಡಾಡು ವತಿಬಲ। ರಿಟ್ಟ
ಕಲ್ಲುಗ ಳೇನ ಬಲ್ಲರು। ಕಟ್ಟಿರುಹೆ ಕಚ್ಚಿದರೆ ದಿಗ್ಗಜ ವಳುಕಿ ನೊಂದುವ್ರದೆ॥ ನಿಟ್ಟ
ದುರುಗಾಳಿಯಲಿ ಪೆಟಲು ಗ। ಳಟ್ಟಿ ಕಲುಗಳು ಹಾರಿದುವು ತಲೆ। ಮುಟ್ಟ ಗಿರಿ ತರು
ಚಯದ ನೆಗಹಿನ ಲಡರಿ ಕಪಿಸೇನೆ ॥೪॥ ಹೋಳವರು ಬಳಿಕಗಳು ಸಿವರು ಶಿ। ಲಾಳಿ
ಯಲಿ ಕುಶ ಕೇಳು ಶರಧಿಯ। ಹುಳಿದರಿ ಗೇನರಿದು ಲವ ಕೇಳೊಂದು ನಿಮಿಷದಲಿ॥
ಧೂಳಿ ಗೋಂಟೆಯ ಕೊಂಡರಾ ತರು। ಶೈಲ ದೊಟ್ಟಿಲುಗಳಲಿ ಹತ್ತಿತು। ಮೇಲು
ದುರ್ಗದ ಲಗ್ಗೆ ಲಸುರ ಕದಂಬ ಕಳವಳಿಸೆ ॥೫॥ ವೀರ ಕೇಳ್ಳೈ ಕಪಿ ಕದಂಬಕ।
ವೀರ ಲುಮ್ಮೊಳ ಹೆಚ್ಚುತಿರ್ದುದು। ಭೂರಿ ಭುವನದ ಭಾರಿ ಯಂತಕ ದುರ್ಗ ವಂಬ
ರಕೆ॥ ಭೈರವಾಯುತ ಭಟರ ಕೈಗಳ। ಶೋರ ಗಿರಿ ಯುಷ್ಪರಿಕೆ ದಿಗಧಿಪ। ಘೂರು
ಗೋಳೆಯ ಡೆಗೆದ ರೇನೆಂಬೆನು ಮಹಾಮ್ಯತವ ॥೬॥ ಕೋಡು ಗಲ್ಗಳ ಲಗ್ಗೆ ಗುಮ್ಮನ।
ಕೋಡು ಗವಣೆಯ ನೇಳವಡ ಮ್ಯೆ। ಗೂಡಿಕೆಯ ಹಾಸರೆಯ ನಿಡು ಬಧ್ಧರದ ಕಲ್ಲು

ಗಳ ॥ ಝಾಡಣೆಯು ನಿಡು ಡೆಂಕಣಿಯು ಕ। ಟ್ಟಾಡಿಕೆಯು ಕಪಿಸೇನೆ ಸರಿಸದ। ಲೀಡಿ
ರಿದು ಹತ್ತಿದ ದು ಕೊತ್ತಳ ದಾಳುವೇರಿಯಲಿ ॥೭॥ ಇಟ್ಟ ರಾಡುವ ಡೆಂಕಣಿಯ ತಲೆ।
ಮುಟ್ಟ ಗೈಗಳ ಗಳಚಿ ಜರುಹಿದ । ರಟ್ಟಳೆಯು ನೂಡೆಬಡಿದ ರುಪ್ಪಂಗೆಗಳ ಸಾಲು
ಗಳ ॥ ಇಟ್ಟ ಬಡಿದರು ಹೊನ್ನ ರನ್ನದ । ಪುಟ್ಟ ತೆನೆಗಳ ಲಿವರು ಚಕ್ರದ। ಲಿಟ್ಟ
ಸಬಳದ ಲಿರಿದು ತರುಬಿದ ರವರು ಕಪಿಬಲವ ॥೮॥ ನೆಗೆದುಜೀವ್ವ ಸಮಸ್ತ ವಾನರ।
ವಿಗಡ ವೀರರ ತಲೆಗ ಳಭ್ರಕೆ । ಚಿಗಿಯಲೆಚ್ಚನು ಕೊಚ್ಚಿದರು ಕೋಟೆಯ ನಡರ್ದ
ವರ ॥ ಚಿಗಿದು ಜವ ಮ್ರವ ಕಪಿಭಟರ ನೀ। ಟಗಳಲಿಟ್ಟರು ಚಾರಿವರಿ ದ। ಣ್ಣಗಳ ಜಲೆ
ಗಳ ಬೀಸಿ ಸದೆದರು ದಾಣೆ ದಡಿಗಳಲಿ ॥೯॥ ಹೊಡಕರಿಸಿ ಮುಗುಳೊತ್ತ ಬರಿಸುವ।
ಕಡುಹು ಕಾರರ ಮೇಲೆ ಸಾಸುವೆ । ಕೊಡನ ಕಾದುರಿವೆಣೆ ಮಳ ಲರಗಾಗಳ ಮೇಣ
ಗಳ ॥ ಕೆಡಹಿದರು ಕೈಗೊಳ್ಳಿಯಲಿ ಕವು । ಿಡಲು ಸುಟ್ಟರು ಮೋರೆಗಳ ನಿಳೆ। ಜಡಿ
ದುಡ್ಡೆ ಜರಿಗೆಡೆವ ಜೀವದ ಕಪಿಗಣಂಗಳಲಿ ॥೧೦॥ ಪರಿಘದಲಿ ಮುಸಲದಲಿ ಗದೆಯಲಿ।
ಸುರಗಿಯಲಿ ಶಕ್ತಿಯಲಿ ಶೂಲದ। ಲುರುಕೃಪಾಣದಲೀಟಿಯಲಿ ಬಿಟ್ಟೇರಿಕಲಿ ಹೊಗುವ॥
ಹರಿ ಕದಂಬವ ಕೊಡವು ಶೀವ್ರತ । ಜರಿಯ ಗೆಡಹಿದರು ಗಳ ಹೆಣನು । ಪ್ಪರದ
ಲರುಣಾಂಬುವಿನ ಲುಪ್ಪರಿಸಲು ನಭಸ್ಥಲಕೆ ॥೧೧॥ ಏರುವುದು ನಿಮ್ಮವರ ಬಲವದ।
ಚಾರುಗೆಡಹುವ ರವರು ಕೈಯ್ಯೊಡ । ನೇರುವವರು ಕಳಲಿಸುವ ರಿವರಾರೊಡ್ಡ ಹುರಿ
ಕಟಸಿ ॥ ಏರುವವರು ಬಳಿಕವ ರಿವರ ಕೊಲೆ । ಗೇರಿ ತಭ್ರುವ ನುಭಯ ಬಲವನು।
ಚಾರಿಕೆಯು ಬಿರುಘಾಳಿ ಬಿಡ ದರೆ ಝಾವ ಪರಿಯಂತ ॥೧೨॥ ನೆನೆದು ದಸುರರ ವಾನ
ರರ ವಾ । ಹಿನಿಯ ರಣ ದರುಣಾಂಬು ಪೂರದ। ಹೊನಲಿನಲಿ ಗಿರಿ ನೂರು ಹೋಜನ
ಮೂರ ರುದ್ದದಲಿ॥ ಅನುವರ ಪ್ರಾರಂಭಕದ ರಣ। ವನಿತೆ ಗುಣಬಡಿಸಿರ್ದ ರುಧಿರೋ।
ದನವ ಬಡಿಸಿದ ಬುತ್ತಿಯುಂತಿರೆ ಮೆರೆದುದಾ ದುರ್ಗ ॥೧೩॥ ಬಿಸಿಲು ದೆಗಹಿನಲಿ ವರ
ಬಲಘ। ಟ್ಟಿಸಿತು ಮೂಡಣ ಲಗ್ಗೆಯಲಿ ಬಳಿ । ಕಸುರ ಬಲ ಬವರದಲಿ ಬಳಲಿತು
ಘಾರಿಯಾಂಕದಲಿ ॥ ವಿಷಮ ದುರ್ಗವ ಕೊಂಡ ರಿವರು । ಬ್ಯಸವು ಬಳಿ
ಕಾಯ್ತುವ ರವರ ವಿ । ದ್ವಿಷರಿಗುಂಟೇ ಜಯವು ಜಾನಕಿಯಣುಗ ಕೇಳೆಂದ ॥೧೪॥
ಜರುಹಿದರು ಬಳಿಕಡರಿ ಚಾವಿಾ। ಕರದ ಚಟುಳಪ್ರಭೆಯ ಕೋಟಿಯ। ನುರುಳಿಚಿದ
ರಟ್ಟಳೆಯ ಮುಖಶಾಲೆಗಳ ಸಾಲುಗಳ ॥ ಉರು ಶತಘ್ನಿಯ ರಾಯ ಚಿನ್ನಕ। ಭರದ
ಭೈರವ ಬದ್ಧರದ ನಡೆ । ನರದಡಂಬಕ ಡೆಂಕಣೆಯ ಲಂಕಾ ಮಹಾಪುರವ ॥ ೧೫ ॥
ಬಿರಿಧನಿಯ ಬೊಗ್ಗುಗಳ ಲಗ್ಗೆಯ । ಹರಿಸ ನೊಡಸಿಡಿ ದೇರುವಾನೆಯ। ಸುರುಬಿ
ಘಮ್ಮಿ ಗಡಾವಣೆಯ ತೇರುಗಳ ತಿಂಥಿಣಿಯ ॥ ಹರಿದು ತೇಜಿಯ ಘಟ್ಟನಂಬರ।
ಕುರುಬಿ ರಕ್ಕಸ ಭಟರ ಬೀದಿಯ। ತೆರಹ ತಪ್ಪಿಸಿ ಚಾರಿವರಿದೊಳಹೊಕ್ಕರಗಲದಲಿ ॥
ಅರಮನೆಯ ರಣಮಂಡಲದ ಮದ । ಕರಿಂಘಾಶ್ವರೋಹಕರ ಪದ । ಚರರ ಗಿರಿ
ಕೂಟಂಗಳಲಿ ದಾಂಟಿಸಿದ ರುಸುರುಗಳ ॥ ನೆರವಿಗರ ಹೊಯ್ದೊಯ್ಯನುತ ಚ। ಪ್ಪರಿಸಿ
ಬಿಡ ದೊಳಹೊಕ್ಕು ಹಿಡಿಹಿಡಿ। ಪರಸತಿ ದ್ರೋಹಿಕನ ನೆನುತೊಳಹೊಕ್ಕ ರರಮನೆಯ॥
ಕುಶನೆ ಕೇಳ್ಳೈ ಕೇಳು ಲವ ಕೈ । ಕಸೆಯ ಮುಗ ಕೆರಳಿದರೆ ಕಲ್ಪದ । ಪಶುಪತಿಯ
ಪಾಡೇನು ಕೊಂಡನು ಹಲಗೆ ಖಂಡೆಯವ ॥ ಮುಸಗಿ ದಂಡಿನ ವೀರ ಭದ್ರನ। ವಿಷಮ

ರಣರಸಕೆಂಟು ಮಡಿಯೆನೆ । ಕುಸುರಿ ದರಿದೊಟ್ಟಿದನು ಕನಲಿದು ಕಪಿವ ಕಪಿಬಲವ ॥೧೮॥ ಎರಡು ಕೈಯಲಿ ರುಂಡ ಮುಂಡದ । ಗಿರಿ ಕಬಂಧವ ನೊಟ್ಟಿದನು ಮು । ತ್ತುರುವಣಿಸು ವತಿಬಲರ ಹೆಟ್ಟಿದ ನುಗಿದು ಸುರಗಿಯಲಿ ॥ ಸರಿದು ಹೋದ ಜಯಾಂಗನೆಯು ಖಳ । ತಿರುಹಿಸಿದ ನಾಕ್ಷಣದೊಳಸುರರು । ನರೆಮುದಾತನ ಬಳಿಯ ಬಲು ಹಾಯ್ಕುಸಮ ಸಮರಂಗ ॥೧೯॥ ಆನುವರು ನಿಮ್ಮವರು ನಿವರವ । ರಾಸಿಕೆಯ ನಿಲಿಸುವರು ನಿಲುವುದು । ಸೇನೆ ನಿಮ್ಮನ ರಸುರರುಲುಕುವ ರಂತರಿಸಿ ನಿಮ್ಮ ॥ ಸೇನೆ ಪಡೆ ಬಲಿಸ ವುದು ಸಮರದ । ಹಾನಿ ವೃದ್ಧಿಯ ಹೊಳಕೆವಾತಿನ । ಕಾನನದ ಕತ್ತಲೆಯ ಚರಿತರು ಮೆರೆದರಾಹವವ ॥೨೦॥ ರಾಸಿವೆಣ ನುಬ್ಬರದ ತೊರೆಗಳ । ಸೂಸುವ ರುಣಾಂಬುವಿನ ಗಿರಿ ಮರ । ನಾಸುವದ ಮೈದಾಗುಗಳ ಬಳಲಿಕೆಯ ಭಟನಿಕರ ॥ ಓಸರವ ಮೈಸರದ ಕದನದ । ವಾಸಿಗಳ ವೈರಿಗಳ ಸಮರವಿ । ಲಾಸಿಗಳು ಸಂಕಟಿಸಿ ಕಾದಿದ ರಳುಕೆ ಭುವನಚಯ ॥೨೧॥ ವೀರ ರಾವಣಿ ಮುಖ್ಯ ರಾಜಕು । ಮಾರ ರೊಗ್ಗಾಯಿತ್ತುರುಳು ಮೊದಲಲಿ । ತೀರಿತುಬ್ಬಟೆ ನಿಮ್ಮವರಿಗಸ್ತಮಯ ಸಮಯದಲಿ ॥ ಚಾರಿವರಿ ದೆಡಬಲದಲೊದಗುವ । ಕೇರಿಕೇರಿಯ ಕಪಿಭಟರ ಸಂ । ಸಾರ ಸಾಕೆಂಬನ್ನಬರ ಸದೆದುಳುಹಿತಸುರಬಲ ॥ ೨೨ ॥ ಇಳುಹಿದರು ದುರ್ಗವನು ಕೋಳಾ । ಹಳದ ಕೂಗಿನ ಕೋಲ ಕೊಲೆಯಲಿ । ನಿಲಿಸಲೀಯದೆ ನಿಮ್ಮ ರಘುಭೂಪತಿಯ ಪಾಳೆಯವ ॥ ಬಲಿದ ನೇತ್ರಿಯ ಮೊತ್ತ ಪರಿಯರ । ತೊಳುದೊಡೆಯ ನಣವಿಳಿವ ವೃಷ್ಟಿಯ । ಹಲುಗಿರಿಕುಗಳ ಹಳಚಿದಗ್ಗಳಿಕೆಗಳ ಹರಿಬಲವ ॥೨೩॥ ಕಂಡು ಸೈರಿಸಬಲ್ಲನೇ ದೋ । ರ್ದಂಡಬಲ ನಾಗಧಿಪ ಮಗನು । ದ್ದಂಡ ರಕ್ಕಸರಟ್ಟಿ ಕುಣಿಯಲು ಕೋಲ ಮೊನೆಗಳಲಿ ॥ ರುಂಡಗಳ ನೆಗಹಿದನು ಹರಿಸದ । ಮಂಡಲಕೆ ಮಾರ್ಕೊಂಡ ಖಳಪುರ । ದಂಡು ಪರಿಯಂತಟ್ಟಿ ಹುಗಿಸಿದ ನೂರ ನತಿಬಲರ ॥ ೨೪ ॥ ತೆಗೆದುದಳ ದುಳಿ ದಸುರಬಲ ವಿ । ವಿಗಡಬಲ ಸುಪಟಳಕೆ ಪಾಳೆಯ । ತೆಗೆದು ದಪರಾಂಬುಧಿಯ ಚಂದ್ರದ್ಯುತಿಯ ದೀಧಿತಿಯ ॥ ನಗರ ಕಾದುದು ಮೇಲೆ ನೀಲಾ । ದಿಗಳ ಮುತ್ತಿಗೆ ಬಲಿದರಡುಹವ । ರಗಲದಲಿ ಜರಿದಾಳು ಮೇರಿಪ ಕೊಂಟೆ ಕೊತ್ತಳದ ॥೨೫॥ ಮಡಿದ ದಾಜಿಯ ಲೆರಡು ನ್ಯರ್ಬುದ । ಪಡೆ ಪರಾಕ್ರಮಿ ಕಪಿಗಳಸವನು । ಸಡಿಲಿಸಿದರಿನ್ನೂರ ವಕ್ಷೋಹಿಣಿಗಳಸುರರಲಿ ॥ ತುಡುಕಿ ತಂಜಿಕೆ ಬಳಿಕ ರಕ್ಕಸ । ರೊಡೆಯನನು ಬಲು ಗೋಪುಮುಖದಲಿ । ಜಡಿದು ದಗ್ಗದ ವೀರ ತೊರವೆಯರಾಯ ನರಹರಿಯ ॥ ॥೨೬॥

ಹನ್ನೊಂದನೆಯ ಸಂಧಿ ಸಮಾಪ್ತಂ.

ಹನ್ನೆರಡನೆಯ ಸಂಧಿ.

ಸೂಚನೆ॥ ಪರಮ ಪಾತಿವ್ರತೆಯ ಪಾವನ । ವರಚರಿತ್ರೆಯ ಮುಂದೆ ಮಾಯಾ । ಶಿರವ ಹಾಯ್ಕಿಸಿ ಬೆದರಿಸಿದ ಳಳಿಮನದ ಲಸುರೇಂದ್ರ ॥

ಪದ್ಯ॥ ಕುಶನೆ ಕೇಳಾ ದಿನದ ದುರ್ಗದ । ವಿಷನು ರಣ ರಂಜಿಸಿತಲ್ಲೈ ಕೈ । ಕಸೆಯ ನಗ್ಗದ ಮಾಲ್ಯವಂತ ನಿಶಾಚರೇಶ್ವರನ ॥ ಕುಸಿದ ಹರುಹವ ಕೊರಗಿ ದಾನವ।

ದೊಸರ್ವ ನಯನೋದಕದ ಸುಯಿಲಿನ। ಹಸರಿಕೆಯು ಲೈತಂದ ರಿರುಳು ದಶಾಸ್ಯ ನರ ಮನೆಗೆ ||೧|| ಬಂದ ಮಾತಾಮಹನ ಮಾತೆಯ। ಮುಂದಹರುಷವ ನರಿದು ಧಿಮ್ಮನೆ। ನಿಂದು ಕೈಮುಗಿ ದೇನ ಬಂದಿರಿ ಯೆಂದು ಬೆಸಗೊಳಲು ॥ ಕಂದ ಕೇಳೈ ಮಗನೆ ದಿನಗಳು। ಛಂದವಾಗಿರದೇನು ಚಿತ್ರಕೆ। ಬಂದಿರದು ನಿನ್ನಭಿಮತವು ನಮಗೆಂದ ರಸುರಂಗೆ ||೨|| ಮಗ ವಿಭೀಷಣ ನಿನಗೆ ಹೇಳಿದ। ಬಗೆ ಬರುತ್ತಿದೆ ದರ್ಪವಿದ ಕೈ। ಮಗುಚಿಕೊಂಡವರುಂಟೆ ಸುರ ದಾನವ ಭುಜಂಗರಲಿ। ಹಗಲು ಕತ್ತಲೆ ಬಹುದು ಕತ್ತಲೆ। ಹಗಲಹುದು ತಾ ಸಿದುವೆ ಕಡು ಸೋ। ಜಿಗವಲಾ ನೀನೋಡಿಕೋ ಯೆಂದರು ನಯೋಕ್ತಿಯಲಿ ||೩|| ಸ್ಮರವಿಕಾರಗ್ರಹದ ಸೋಂಕಿಗೆ। ಮರುಳು ಗೊಳಬೇಡೈಯ ರಾಮನು। ಕರುಣಿಯೇ ಕೊಲೆಗಾರರಿಗೆ ಗುರು ವೈರವರ್ಗದಲಿ ॥ ಪರಸತಿಗೆ ಮನವಿಕ್ಕಿ ಕಾಲನ। ಕರಕರಿಗೆ ಸಂದವರು ಹಲಬರು। ಹರಹು ಸೌಖ್ಯದಲಲ್ಪಬಳಲಿಕೆ ಬಹಳ ವರ್ಗದಲಿ ॥ ಹರಿಯು ಕರಿ ಜಯಿಸುವುದು ಗರುಡನ। ನುರಗ ಗೆಲುವುದು ಹೆಬ್ಬುಲಿಯು ನುರೆ। ಹರಿಣ ಮುರಿವುದು ಕಪ್ಪೆ ಕಾಳೋರಗನ ನುಂಗುವುದು ॥ ನರರು ರಾಕ್ಷಸಭಟರ ರಣದಲಿ। ಹರಣ ಗೊಂಬುದು ಬೆರಗಲಾ ಯೆಲೆ। ತರುಣ ಕೇಳೀಲೋಕ ಮೂರರೊಳೆಂದ ನಸುರಂಗೆ ||೫|| ತನುಜ ಕೇಳೈ ಸೀತೆ ನಮಮಾ। ನಿನಿಯೆ ನಿನಗೇ ನರಿಯಬಾರದೆ। ವಿನುತ ಪಾತಿವ್ರತ್ಯ ದನುಪಮ ಸುವ್ರತತ್ವದಲಿ ॥ ಮನುಜನೇ ನರನಾಥ ನಾತನ। ಘನಚರಿತ್ರವ ನರಿಯ ಬಾರದೆ। ಮನದ ವೈರವ ಬಿಟ್ಟು ಸುಖಿಯಾಗೆಂದ ಳಸುರಂಗೆ ||೬|| ವಿಷಯ ಲಂಪಟತನದಿ ಮೂರ್ಖರ। ನೊಸಲ ಭೂಷಣವಾಗಿ ಕೀರ್ತಿಯು। ಹೆಸರ ನಳಿದನು ಪುತ್ರ ಮಿತ್ರ ಜ್ಞಾತಿ ಬಾಂಧವರ ॥ ಅಸುವ ಗಂತಕನಾದನೀ ಕೈ। ಕಸೆಯ ಮುನಿಪತಿ ವಿಶ್ವವಸುವಿನ। ಬಸುರಿನಲಿ ಬರತಕ್ಕ ಮಗನಲ್ಲೆಂಬುದೀ ಲೋಕ ||೭|| ಅದರಿನೀ ಜನಕಜೆಯ ಕೊಂಡೊ। ಯ್ದೊದೆದ ಚರಣವ ಹಿಡಿದು ಕರುಣವ। ವದನದಲಿ ತೋರಿಸಿ ಶರೀರವ ನುಳುಹಿ ಕೊಂಬುದಿದು ॥ ಚದುರತನ ದೇವರಲಿ ಕರುಣಾ। ಸ್ಪದನ ರಾಮನು ಕಾವ ನಿನ್ನನು। ಕವನ ಬೇಡೆಂವಪ್ಪಿದಳು ರಾವಣನ ಮಸ್ತಕವ ||೮|| ಅಳಿದರೀತನ ಚಕ್ರಹತಿಯಲಿ। ಖಳರೊಳೆನ್ನಗ್ರಜರು ಮರೆಹೊ। ಕ್ಕಳಿದೆ ನೆನಗಾಯಿತ್ತು ಮಹಾಪುರ ದಾಧಿಪತ್ಯತನ ॥ ಕಲಹದಲಿ ಕೈಯಿಕ್ಕಿ ಕೈಟಭ। ಕಲಿ ತಮಾಸುರ ಮುಖ್ಯ ರಾಕ್ಷಸ। ರಳಿದರೆಂದನು ಮಾಲ್ಯವಂತನು ರಾಕ್ಷಸೇಂದ್ರಂಗೆ ||೯|| ಆದಿಯಲಿ ಕೇಳ್ದರಿಯಲಾ ಪ್ರಹ। ಲ್ಲಾದ ಬದುಕಿದ ಕಥೆಯ ವೈರವ। ಸಾಧಿಸಿಯೆ ಸತ್ತನು ಹಿರಣ್ಯಕನೆಂಬ ಸಂಗತಿಯ ॥ ಕೈಮುಡುಕಾ ಲೇಸಲ್ಲ ಖಳ ಕುಲ। ಸೂದನನ ಕಾ ಡಕಟ ಜೀವವ। ಕಾದುಕೊ ಕಾಮುಕರ ಜಾಳಿಯಬಿಟ್ಟು ಕಳೆಯೆಂದ ||೧೦|| ಮನುಜನಲ್ಲಾ ಕಾರ್ತವೀರ್ಯಾ। ರ್ಜುನನು ಕಪಿಯಲ್ಲಾ ಸುರೇಶ್ವರ। ತನುಜ ನವರಲಿ ಬಂದ ಭಂಗವ ಮರೆದು ಕಳೆದೆಯಲಾ ॥ ಅನುಮದೊಳಾ ಕಾರ್ತವೀರ್ಯಾ। ರ್ಜುನನ ನಾ ಕಪಿಸಾರ್ವಭೌಮನ। ತನುವ ನಳಿದವರಾರು ನೀನಿದನೋಡಿಕೋ ಯೆಂದ ||೧೧|| ವರವು ನಿನಗಜನಿಂದ ಮಿಕ್ಕಿನ। ಸುರ ಸುರೋರಗ ಯಕ್ಷ ರಾಕ್ಷಸ। ಗರುಡ ಗಂಧರ್ವಾದಿ ನಾನಾ ಜೀವ ಯೋನಿಯಲಿ ॥ ಮರಣವಿಲ್ಲೆಂ ಬರಾಗ ಕೇಳುವ। ನರ ಹರೇಶ್ವರ ರರಿಗಳಾಗಿಯೆ। ಧುರಕೆ ನಿಂದರು ನೀನಿದನು ಲೇಸಾಗಿ ತಿಳಿಯೆಂದ ||೧೨|| ಕೇಳು ದಶಾನನ

ಪಿಪೀಲಿಕ । ದಾಳಿಗಿರದೇ ಗೋಷ್ಪದದ ಕೀ । ಲಾಲ ಫಲವಾಂಬು ಧಿನ ಪ್ರೌಲು ನಿಮಗೆ ನ್ನಿಗಾ ರಘುಜ ॥ ಸ್ಥೂಲ ನೆನ ಗಣುಮಾತ್ರ ಪದ ನೀವ್ । ಹೇಳದಿರಿ ಕಥೆಗಳನು ನಾವಿದ । ಕೇಳಿಬಲ್ಲೆವು ಸಾಕು ಬಿಜಯಂಗೈರಿ ನೀವೆಂದ ॥೧೬॥ ಎಣಿಕೆ ನಿಮಗಿದು ವಿಷ್ಣು ವೀತನು । ಕೆಣಕಬೇ ಡೀತನನು ನೀವಂ । ದಣಕ ಸಿಕ್ಕುವಿ ರೈಸಲೇ ನಾ ವಂಜೆ ನಾಹವಕೆ ॥ ರಣಮುಖದೊ ಳನುಸರಿಸು ತೀವಾ । ಗಣದ ಜಯ ಮುಖ ಕೀರ್ತಿಯನು ಪಡೆ । ವೆಣಿಕೆ ನಮ್ಮದು ನಿಮ್ಮ ಬಗೆಯನು ಬಗೆವ ನಲ್ಲೆಂದ ।೧೪॥ ಮರುಳು ತನ ಬೇಡೆಲೆ ಮಗನೆ ದು । ರ್ಧರವು ದೈವದ ಕೂಡೆ ಸ ಲಭವೆ । ಹಿರಿಯ ರಾಡಿದ ಮಾತ ನಕಟಾ ಮನ್ನಿಸುವು ದೆನಲು ॥ ಸ್ಮರನ ಗರುಡಿಯ ಶ್ರಮವು ಜೀವದ । ಸರಳು ಕೇಳೆಲೆ ಕಂದ ಕೇಳನು । ಸರಿಸು ನಮ್ಮಯ ಮಾತ ನೆಂದರು ಮುಗಿದು ಕರಯುಗವ ॥ ಧರಣಿ ತಲೆ ಕೆಳಕಾಗ ಲು ಬ್ಬಲಿ । ತರಣಿ ಬಿಂಬವ ನಭ್ರವಜ ಕಂ । ಕರರು ಕೂಗಿಡ ಲಬುಧಿ ಮುಸುಕಲಿ ಮುರಿಯ ಲಮರಾದ್ರಿ ॥ ತಿರುಗಿ ಸೀತೆಯ ಬಿಟ್ಟೆ ನಾವರೆ । ವರ ಪುಲಸ್ತ್ಯಜನಲ್ಲ ನಮ್ಮನು । ಕರಕರಿಸ ಬೇಡೇಳಿ ಯೆಂದವ ದಿರುಹಿದನು ಮುಖವ ॥ ಬಳಿಕವರು ಬಿಸು ಸುಯ್ಯುತಂ ಬಕ । ಜಲದ ಝಾಡಿಯುಲ್ಕೈದಿದರು ನಿಜ । ನಿಳಯವನು ದಶಕಂಠ ನಿತ್ತಲು ತನ್ನ ಮನದೊಳಗೆ ॥ ಹಲವ ನೆಣಿಸಿ ಬಳಿಕ್ಕ ಸೀತೆಯ । ನೊಳಗು ಮಾಡು ವುಪಾಯ ಕುಶಲವ । ತಿಳಿದು ವಿದ್ಯುಜ್ಜಿಹ್ವನನು ಕರೆದೆಂದ ನೀಹದನ ॥೧೭॥ ಮಾಯೆಯಲಿ ರಚಿಸಹಿತ ರಾಘವ । ರಾಯನಂದದ ಶಿರವನದ ನಬು । ಜಾಯ ತಾಕ್ಷಿಯ ಮುಂದೆ ತೋರಿದು ಹಾಯ ಮೈವಳಿಯ ॥ ಮಾಯೆಯಲಿ ಮಾತಾಡಿ ಬಹಳೋ । ಪಾಯ ದಿಂ ದೊಡಬಡಿಸಿ ತಾ ಹೋ । ಗಾಯತಿಕೆಯ ಛಲೋಕ್ತಿ ಸಂದರೆ ಸಾಕು ತನಗೆಂದ ॥೧೮॥ ರಚಿಸಿದನು ಬಳಿಕವನು ಮಾಯದ । ರಚನೆಯಲಿ ನೃಪಶಿರವ ಸಾಧ್ವಿಯ । ಶುಚಿಯ ಸೀತೆಯ ಬಳಿಗೆ ಬಂದನ ನರ್ಧರಾತ್ರಿಯಲಿ ॥ ವಿಚಕಿ ತಾಸ್ತ್ರಾಲನೆಯ ನಕ್ಕ । ಪ್ರಚಯ ದುಬ್ಬಿನ ಬೊಬ್ಬೆಗಳ ಖಳ । ನಿಚಯ ಸಹಿತೈ ತಂದು ಮುಂದಿಳುಹಿದನು ಮಸ್ತಕವ ।೧೯॥ ತಳಿರೊಡೆದ ಮಾಮರನ ಗಿಳಿಕೋ । ಗಿಲೆ ವಸಂತನ ಹಂಸೆ ತಾವರೆ । ಕೊಳನ ಚಾತಕಿ ಕಾರ ಮುಗಿಲ ಚಕೋರ ಚಂದ್ರಮನ ॥ ಹಲುಬುವಂತೆ ನಿಜೇಶನನು ಹಂ । ಬಲಿಸುತಿಹ ಜಾನಕಿಯ ಮುಂದವ । ನಿಳುಹಿದನು ಮಸ್ತಕವ ಪುರುಮಾಯಾ ವಿಲಾಸಕದ ॥೨೦॥ ನೊಸಲ ಕೀಲಿಸಿ ದಂಬಿ ನಗ್ರದ । ನೊಸರ್ವ ರುಧಿರದ ನಗೆ ಮೊಗದ ಥಾ । ಳಿಸುವ ಕದಪಿನ ಕಂಗ ಳರೆಮುಚ್ಚುಗಳ ಕಿರು ಜಡೆಯ ॥ ಹಸರಿಕೆಯ ಹಂಗೊರಳಿನಲಿ ಜಾ । ಳಿಸುವ ನೇತ್ರದ ಮಸ್ತಕವ ತೋ । ರಿಸಿದ ನಿವಕೋ ದೇವಿ ನೋಡೇ ದಸುರನಾ ಸುರವ ।೨೧॥ ಇಂದಿ ನಾಹವದೊಳಗೆ ನೊಂದುದು । ಮಂದಿ ನಮ್ಮದು ದೇವಿ ಕೇಳ್ ರಘು । ನಂದನನ ಮುಂದಾದು ನಿಂದಿರಬಹುದು ಬವರದಲಿ ॥ ಕೊಂದ ನಗಣಿತ ರಾಕ್ಷಸರ ಬಳಿ । ಕೊಂದು ಮಾಯಾರೂಪಿನಲಿ ನೆರೆ । ಸಂಧಿಸಿದೆ ನಾಜಿಯಲಿ ತಲೆಯನು ತಂದೆ ನಾನೆಂದ ॥೨೨॥ ರಣಕೆ ನಿಲಲರಿಯದೆ ವನೌಕಸ । ರಣದು ಹಾಯ್ದುದು ಕಾಣೆ ನಾ ಲ । ಕ್ಷ್ಮಣ ನದೇನಾದನೊ ವಿಭೀಷಣನಾವ ದಿಕ್ಕಿನಲಿ ॥ ಜುಣುಗಿದನೊ ಸುಗ್ರೀವ ನನಿಲಜ । ಮಣಿಯದವ ರಾಹವ ದೊಳಾಳ್ದನ । ರುಣವ ತಿದ್ದಿ ವರ ರುಳಿದ ವೀರರ ಕಾಣೆ ನಾನೆಂದ ॥೨೩॥ ವೀರಖಂಡೆಯ ವಿದಕೊ ಧನುತಾ ।

ಣೇರವಿದಕೋ ಕವಚವಿದಕೋ | ವೀರ ರಾಮನ ಖಡ್ಗ ವಿದಕೋ ನೋಡಿ ನೀವಿ
ವನು || ಆರುಸರಿ ಲಂಕಾಧಿನಾಥಂ | ಗಾರು ಸೋಲರು ಸುರ ನರೋರಗ | ನಾರಿಯರು
ನೀವಿನಿತರಲಿ ಭಜಿಸುವುದು ಲೇಸೆಂದ ||೨೪|| ಬಾಲೆಯರ ಭೂಪತಿಯ ಜಯಮುಖ |
ದೇಳಿಗೆಯ ಲಾಳ್ದವನೆ ಧರಣೀ | ಪಾಲ ನವನೀ ಹದನನೇ ಲೇಸಾಗಿ ಚಿತ್ತೈಸಿ ||
ಹೇಳುವರೆ ನೀವಜ್ಞರೇದು | ಶ್ರೀಲರೇ ನೀವ್ ಮಾತಿನೊಪ್ಪದ | ಮೇಲೆ ಮಾತನು
ಹೇಳಿ ಕಳುಹುವುದುಚಿತ ನಿಮಗೆಂದ ||೨೫|| ಕೇಳಿದೈ ಕುಶ ಬಳಿಕ ಮಿಂಚಿದ | ನಾಲ
ಗೆಯ ರಕ್ಕಸನ ನುಡಿ ಕಿವಿ | ಗೇಳಿಸಲು ಕುಡಿಯಲ್ಪೆಯಲಿ ಕೋಲುಗಿದ ತೆರನಂತೆ ||
ಸಾಲಿಡುವ ಕಂಬನಿಯ ಮರುಕದ | ಮಾಲೆಗಿಚ್ಚಿನ ಮುಚ್ಚಿನಂಗದ | ಬಾಲೆ ಬಾಯ್ಬಿಡು
ತೀಕ್ಷಿಸಿದ ಳಾಸುರಡ ಮಸ್ತಕವ ||೨೬|| ಮಾಯ ದಧಿರಂಜನದ ಶಿರವೆಂ | ದಾಯ
ತಾಂಬಕಿ ಯೇನ ಬಲ್ಲಳು | ಹಾಯೆನುತ ಹನ್ಮೈಸಿ ಮೂರ್ಛಿತೆಯಾಗೆ ಖಳ ಬಳಿಕ ||
ಸಾಯ ಬಗೆದವಳಾಪತಿವ್ರತೆ | ತಾಯಿ ತಾನಿಹು ದುಚಿತ ವಲ್ಲೆನು | ತಾಯುಸದ ಮರು
ಕದಲಿ ತಿರುಗಿದ ನಸುರ ನಿದ್ದೆಡೆಗೆ ||೨೭|| ದೇವ ರಾಜಾಜ್ಞಾಪಿಸಿದ ಪೊಲು ಮಾ | ಯಾ
ವಿಲಾಸದ ಶಿರವ ನೊಯ್ದಾ | ದೇವಿಯಿರ ಮುಂದಿಳುಹೆ ಕಾಣುತ ಕಾಯವನು ತೆಗೆದು ||
ಜೀವವನು ಬಿಡೆ ಬಗೆದ ಳುತ್ತರ | ನಾವು ದಿದಕಿನ್ನವರ ಮಾತಿಗೆ | ಠಾವ ಕಾಣದೆ ಬಂದೆ
ನಿದು ಹದನೆಂದು ಕೈಮುಗಿದ || ಈ ಲತಾಂಗಿಗೆ ಬಳಿಕ ಮೂರ್ಛಾ | ವ್ಯಾಳ ವಿಷ ಗರುಡ
ಧ್ವಜನ ನಾ | ಮಾವಳಿಗಳ ಮಂತ್ರದಲಿ ಜಡೆ ಕಂದೆರದು ಶೋಕದಲಿ || ನೀಲಘನ ಸನ್ನಿ
ಭನ ವಿಮಲ ವಿ | ಶಾಲನೇತ್ರನ ವಿಪುಳ ವಕ್ಷನ | ಸಾಲ ಸಾಲ ಭುಜಾನ್ವಿತನ ನೀಕ್ಷಿದಳಾ
ಸೀತೆ || ನೊಸಲ ನೊಸಲಿಂದೊರಸಿದಳು ಚುಂ | ಬಿಸಿದ ಳುಭಯ ಕದಂಪುಗಳ ದಿ | ಟ್ಟಿಸಿದ
ಳೊಲಿದಳು ಮುದ್ದುಗೈವಳು ಲಲ್ಲನಾತಿನಲಿ || ಒಸೆದು ಕೈ ಮುಂಡಾಡು ತಾಲಿಂ |
ಗಿಸಿದಳನುರಾಗ ಪ್ರಪಂಚದ | ಕೊಸರಿಕೆಯ ಕಳವಳದ ವೈಮನಸಿನಲಿ ಭೂಜಾತೆ ||
ಆಗದಿರ ನೆನ್ನರಸನೆಂದನು | ರಾಗ ಸಮರಸ ಭರಿತ ಮನ್ಮಥ | ಸಾಗದಿರನೆನ್ನಯ
ಮನೋವಲ್ಲಭ ಮಹೀರಮಣ || ಆಗದಿರನೆಲೆ ಸರಮೆ ತನಗಿನಿ | ತಾಗಲಿದ್ದುದೆ ತ್ರಿಜಟಿ
ಕೇಳೌ | ತಾಗಿತೇ ತನಗಕಟ ದುಷ್ಕೃತವೆಂದ ಳಬುಜಾಕ್ಷಿ ||೩೧|| ನೋತೆನೇ ಪೂರ್ವ
ದಲಿ ವ್ಯರ್ಥ | ವ್ಯಾತಿಶಯ ದುಷ್ಕೃತವ ನಕಟ | ಖ್ಯಾತಿಯಾಳಿದುದು ತನ್ನ ಘನ ಸೌಭಾಗ್ಯ
ಲಕ್ಷಣವ || ಯೀತಕೆನ್ನನು ಸೃಜಿಸಿದನೊ ವಿಧಿ | ಘಾತಕಿಯ ನಿಜಪತಿ ವಿಯೋಗದ |
ಪಾತಕಿಯ ನಕಟಕಟೆನುತ ಬಾಯ್ ಬಿಟ್ಟಳಾ ಸೀತೆ ||೩೨|| ಜರಿದುದೆಮ್ಮನು ಪೀಳಿ
ಗೆಯ ಸುರ | ಗಿರಿ ದಿಳೀಪಾನ್ವಯದ ಸುರತರು | ಮುರಿದುದೇ ರಘುವಂಶವಾರಿಧಿ ಬರ
ತುಪೇಯಕಟ || ಸರಿದುದೇ ಕಾಕುಸ್ಥಕುಲ ದು | ಬ್ಬರದ ಸಿರಿ ರಘುವಂಶದಗ್ಗದ |
ತರಣಿಮಂಡಲ ವಸ್ತಮಿಸಿದುದೆ ಯೆಂದಳಾ ಸೀತೆ ||೩೩|| ಹರಿವುತದೆ ಬಾಸಿಗದ ಸಿಂ
ಸೀ | ವರಿಸುತದೆ ಸೀಮಂತದೊಳು ಹಂ | ಕರಿಸುತಿದೆ ರಾಡಿಗೆಯ ಗಾಢಿತನದ ಸೌಭಾಗ್ಯ ||
ಮುರಿವುತಿದೆ ಮೂಗುತಿಯ ಬೆಳಗೋ | ಸರಿಸುತದೆ ಮುತ್ತೈದೆತನವೆಲೆ | ಸರಮೆ
ಕಳುಹೌ ಬೇಗ ಪತಿಯೆಡೆಗೆಂದಳಾ ಸೀತೆ ||೩೪|| ಜೀವವನು ಹಿಡಿದಿರ್ದ ನಾ ರಾ |
ಜೀವ ನೇತ್ರನ ನೆರೆವ ಭರದಲಿ | ಜೀವವಿದು ತಾನಿದ್ದು ಫಲವೇ ನೀ ಧರಿತ್ರಿಯಲಿ ||
ಜೀವವಿದನೆಲೆ ಸರಮೆ ಕೇಳ್ ಮ | ಜ್ಜೀವಿತೇಶನ ಬಳಿಯೆ ಬಿಡುವೆನು | ಸಾವುಪಾಯವ

ಹೇಳು ತನಗೆನು ತಳಲಿದಳು ಸೀತೆ ||೩೫|| ಶಿರವಿ ದಹುದಲ್ಲೆಂಬುದನು ನಿ | ರ್ಧರಿಸಲೀ ಯುದೆ ನಟ್ಟ ಬೆರಗಿನ | ಕರದ ಕದಪಿನ ಕಂಬನಿಯು ಕಾಹುರದ ಕಂಪನದ || ಕೊರಳ ಬಿಕ್ಕುಳಿ ನಕ್ಕೆಗಳಲಾ | ಸರಮೆ ತ್ರಿಜಟೆಯು ರರಿದು ಬಳಿಕರಿ | ದರು ವಿವರ್ಣವ ಕಂಡು ಮಾಯಾಕೃತಿಯು ಮಸ್ತಕವ || ೩೬ || ಬಿಸುಡು ಬಿಸುಡೆಲೆ ದೇವಿ ಶಿರವಿದು | ವಸುಮತೀಶನದಲ್ಲ ಮುಟ್ಟದಿ | ರಸುರ ಕೃತ್ಯದ ಕೃತಕವಿದು ಬಿಸುಡೆನುತ ಹರಿತಂದು || ಶಶಿಮುಖಿಯು ಸಿರಿಕರದ ಶಿರವನು | ಬಿಸುಡಿಸಿದ ರಳಿದಳಕ ಪಂಕ್ತಿಯ | ಪಸರಿಕೆಯ ನೇವರಿಸಿ ನಿಲಿಸಿದರಳಲ ನವನಿಜೆಯ || ೩೭ || ಮರೆಯ ಮಾಯಾಶಿರ ವಿದೀಗಿದು | ಮರುಗ ಬೇಡೆಲೆ ತಾಯೆ ನಿಮ್ಮಯ | ಹರೆಯ ಹಂತಿಯು ಬೈತಲೇ ಸೌಭಾಗ್ಯ ಕಳೆವುಂಟೆ|| ಅರಿಯಬಹುದೆಮ್ಮವರ ಕಬಟದ | ಕರುಬತನ ವಂಜದಿರೆನುತ ತೂ | ಸಿರಿದು ಹರಸಿದ ರೈದೆಯಾಗೆಂದವನಿ ನಂದನೆಯ || ೩೮ || ನಿವಗಿದೇಕೆಲೆ ದೇವಿ ಚಿತ್ತ | ಭ್ರಮೆ ರಘು ಕ್ಷಿತಿನಾಥ ಮನುಜನೆ | ಕಮಲನಾಭ ಕಣಾ ನಿಧಾನಿಸೆ ನೀವು ನರಸತಿಯೆ || ಉಮೆಯ ನೋಲ್ ಸೌಭಾಗ್ಯಕರ ಸಂ | ಕ್ರಮಿಸಿಹುದನೇನರಿಯ ದೇ ಜಗ | ವಮಲತೆಯ ನಪ್ಪುವುದೆ ಕಲ್ಮಷವೆಂದಳಾ ತ್ರಿಜಟೆ || ೪೯ || ಶೀರಿತಾ ಸನುಮುಕ್ಕೆ ರಜನಿ ವಿ | ಹಾರಿಸಿತು ವೆಳವೆಳಗು ಕಪಿಭಟ | ರಾರುಭಟೆ ತಲೆಕೆಳಗ ಮಾಡಿತು ಜಗದ ಜೋಡಿಗಳ || ನಾರಿ ಚಿತ್ತೈಸಿನ್ನು ತೊರವೆಯ | ನಾರಸಿಂಹನು ಹದುಳಗನು ಮನ | ದಾರಟೆಯ ಬಿಡಿಯೆಂದು ಸಂತೈಸಿದರು ಜಾನಕಿಯ || ||೪೦||

ಹನ್ನೆರಡನೆಯ ಸಂಧಿ ಸಮಾಪ್ತಂ.

ಹದಿಮೂರನೆಯ ಸಂಧಿ.

ಸೂಚನೆ|| ವೀರ ವಾನರ ಬಲದ ಬಲು ಜ | ಝ್ಝಾರ ರಕ್ಕಸ ಬಲದ ಭಟ ಘುರ | ದಾರುಭಟೆ ರಂಜಿಸಿತು ದೇವಾಸುರ ನರೋರಗರ ||

ಪದ್ಯ|| ಕೇಳಿದೈ ಮನುವಂಶ ಲಕ್ಷ್ಮೀ | ಲೋಲಸುತ ನಿಮ್ಮಯ ನಿಮಿಕ್ಷಿತೀ | ಪಾಲಜೆಯ ಬೆದರಿಸಿದ ಶಿರವಾ ಸರಮೆ ಯಾ ಬಳಿಕ || ಜಾಳಿಸಲು ಜಾಳಿಸಿತು ತಮತಂ | ಗಾಳಿ ತೀಡಿತು ತಡೆತಡೆದು ತಾ | ರಾಳಿ ತೊರೆದುವು ವೈಸಿರಿಯ ತಾವರೆಯ ನಗೆಗಳಲಿ ||೧|| ಜಲಧಿ ತಮುನನ ನಾಭಿ ಯಂಬುಜ | ದಲರ ಜೋಣ ಪರಾಗ ರುಚಿತ | ಜ್ವಲವ ನೊಡೆ ಬಗಿದಂಬರವ ಬಿಂಬಿಗಿದುದೆಂಬಂತೆ || ಥಳ ಥಳಿಸಿತಿನಬಿಂಬ ವಾಖಿಂ | ದಲ ದಿಗಂತವ ಲಬ್ಬರಣೆ ಪಡಿ | ತಳಸಿದುದು ಪರಬಲ ವೀ ಕಪಿಬಲ ಮಹಾರ್ಣವವ ||೨|| ತಲೆಕೆಳಗೆ ಮಾಡಿತ್ತು ಸೇನಾ | ಜಲನಿಧಿಯ ಬೊಬ್ಬಾಟ ಖಳರ | ಟ್ಟಳೆಗಳಲಿ ಮುರಿ ಮುರಿದ ಕೊತ್ತಳ ದಾಳುವೇರಿಯಲಿ || ನಿಲಿಸಿದರು ಕೈದುಗಳ ಕರಿ ಸಂ | ಕುಳದ ಕುದುರೆಯ ತೇರ ಸುಭಟಾವಳಿಗಳೊಗ್ಗಿನ ಯುಗ್ರತರ ಹೊರವಳಿಯಲಿ ನಿಮಿಷದಲಿ ||೩|| ಇತ್ತ ನೋಲಗವಾಗ ಬಳಿಕ ಖ | ಳೋತ್ತಮನು ಕಳಕಳನ ಕಡುಹಿನ | ಚಿತ್ತ ಚಲನೆಯ್ಯು ಝುಡಿಸಿ ದಂಶಸ್ತ್ರಾಪ ದುಬ್ಬರದ || ತೊತ್ತು ಜೋಗವನೆ ರೋಷದಳಿ ಕೆ | ಮತ್ತಿ

ವಕ್ಷಿಯ ಸಂತಸದರಸ । ಚಕ್ರಿದಾಸನ ದಸುರನಿದ್ದನು ಸಿಂಹ ಪೀಠದಲಿ ॥ ೪ ॥ ಬಂದ
ನೋಲಗಕಾ ಪ್ರಹಸ್ತ ವು । ರಂದರಾಂ ಪ್ರಮುಖ ಸಚಿವರು । ನಂದನರು ನಾಯಕರು
ರಾವುತ ರಥಿಕ ಭುಜಬಲರು ॥ ಒಂದುಳಿಯೆ ಶತಕೋಟಿ ವಾಣಿಗಣ । ವೃಂದದಮರ
ಕಿರೀಟ ವರ್ಧನ । ರಂದಿನೋಲಗವೆಸೆದುದುಗ್ರರಸೋಗ್ರ ಸಾರದಲಿ ॥ ೫ ॥ ಹೊಗ
ರೊಗುವ ದಾಡೆಗಳ ಥಳ್ಳಿಸು । ವಗಡು ಮೋರೆಯು ಕೆಂಪೆಡದ ಮೀಸೆಗಳ ಕೆಂಗಣ್ಣುಗಳ
ಮುಪ್ಪುರಿಗೊಂಡ ಹುಬ್ಬುಗಳ ॥ ನೆಗೆದ ರೋಮಾವಳಿಯ ಬಿಗುಹಿನ । ತಗಹಿನಂಗದ
ಖಂಡೆಯದ ಕೈ । ನೆಗಹುಗಳ ರಕ್ಕಸರ ನೀಕ್ಷಿಸಿ ನುಡಿದನಸುರೇಂದ್ರ ॥ ೬ ॥ ಹಿಡಿದು
ದುರ್ಗವ ಕೂಡೆ ಕದನವ । ನಡಸಿದರು ಭಾರ್ಗವನ ಘಾತಿಗೆ । ಕಡಲು ವೈದೆಗೆದಂತೆ
ತೆಗೆದುದು ನಮ್ಮ ನಿಜಸೇನೆ ॥ ಸಡಿಲಿತೆಮ್ಮಗ್ಗಳಿಕೆ ಕೋಟೆಯು । ನೊಡೆ ಬಡಿದ ರವ
ರಿಂದಿನಾಜಿಯ । ತೊಡಕಿಗೇನನು ಕಂಡಿರೆಂದನು ಮಂದಹಾಸದಲಿ ।೭॥ ಏತಕೀ ಋನು
ಮಾನ ರಿಪುಗಳೊ । ಳಾಂತು ಕಾದುವೆ ನಿಂದು ರಣದಲಿ । ಭೂತನಾಥನೆ ನಿಲಲಿ ಗೆಲು
ವೆನು ಚಿಂತೆ ಬೇಡಿದಕೆ ॥ ತಾತ ಚಿತ್ತೈಸಿಂದು ರಣದಲಿ । ಸೋತು ನಗರಿಯ ಹೊಕ್ಕೆ
ನಾದರೆ । ಮಾತು ಮಂಡೋದರಿಯ ಮಗನಲ್ಲೆಂದು ಕೈ ಮುಗಿದ ॥೮॥ ಹಿಡಿಯಲೇಕಜ
ನಿತ್ತ ರಣದು । ಗ್ಗಡದ ಶರ ಕೋದಂಡವನು ಕೈ । ವಿಡಿಯ ಲೇಕೀ ಬಾಹು ವಿಕ್ರಮ
ವಿಜಯ ಭಾಮಿನಿಯ ॥ ಕಡುಹದೇ ಕಿಂದ್ರಾರಿ ಯೆಂಬು । ಗ್ಗಡದ ಬಿರುದಿನಸುರರ
ಬಾಹೆಯ । ತೊಡರಿದೇನೆಲೆ ಜೀಯ ಬೆಸಸಿನ್ನೇಕೆ ತಡವೆಂದ ।೯॥ ಮುಗಿಲ ಮನುಜನ
ಹದ್ದ ಹಂಸೆಯ । ಟಗರ ಕೋಣನ ನೆತ್ತ ನೆರಳಿಯ । ನೆಗಳನೇರಿದ ನಿರ್ಜರರಥವ
ರಿಂದು ತನಗಿದಿರೆ ॥ ನೆಗಳದೀ ನರಮೃಗದವರ ಸಂ । ಯುಗವ ಹೇಳದಿರರಸ ಕೊಡು
ಕಾ । ಳಗಕೆ ನೇಮುವನೆಂದು ಶಕ್ರಾರಾತಿ ನೆಂದಿರ್ದ ॥ ೧೦ ॥ ಉಬ್ಬಿದನು ಖಳ ಕರ್ಣ
ಸುಖಮಯ್ಯು । ದುಬ್ಬರದ ನುಡಿಗೇಳಿ ತನುಜನ । ತಬ್ಬಿದನು ತುಳುಕಾಡು ವಾನಂದಾಶ್ರ
ಪೂರದಲಿ ॥ ಬಬ್ಬೆಯಾಗಿಹ ಹೆಬ್ಬವಿದುನಿ । ನ್ನೊಬ್ಬನಲಿ ಹುರಿಯೇರುವುದು ಮು
ತ್ತೊಬ್ಬರೆಸಗುವರುಂಟೆ ನಿನ್ನ ವೊಲಾಪ್ತರೆನಗೆಂದ ॥೧೧॥ ತರಿಸಿ ಬಳಿಕಾಭರಣ ದಿವ್ಯಾಂ।
ಬರ ವಿಲೇಪನವಿಂದ ಮಿಗೆ ಪೋ । ಸರಿಸಿ ಕೊಟ್ಟನು ಕಾಳಗಕೆ ಕರ್ಪುರದ ವೀಳೆಯವ॥
ಹಸಿ ಕಳುಹಿದ ನಖಿಳ ಸೇನೆಯ । ಧುರಕೆ ಹೇಳಿದು ಸರಗಿ ಶರ ಸಂ । ವರಣ ಶಕ್ರಾ
ರಾತಿಯನ ಬಳಿಕಾ ದಶಗ್ರೀವ ॥ ೧೨ ॥ ಆಯಿದುತ್ತಮ ತೇರುಗಳವ ನ । ವಾಯುಧಂ
ಗಳ ಸುನ್ನದ್ಧತ । ಛಾಯಿನಿಯುತದ ದಂತಿಗಳ ಮಜಯ ಧುರಂಧರರ ॥ ಆಯುತದ
ಚತುರಂಗವನು ವ । ಜ್ರಾಯುಧಾರಿ ತತ್ಕೆ ನೆರಹಿದನು ರಘು । ರಾಯ ರಣಕೇಳ್ವೊ ರಕ್ಷೋ
ಹಿಣಿಯ ಸೈನಿಕವ ॥೧೩॥ ಕಾಳಕೂಟದ ಕಡಲ ಕಟ್ಟೆ ವಿ । ತಾಳಿಸಿತೊ ಶಿವ ಯೆನಲು
ಸಲೆ ಹೊಗ । ವಾಲಿಗಳ ಹೊಡಕರಿಸುವತಿಶಯ ವಿಕೃತ ವಿಗ್ರಹದ ॥ ಕಾಳಿಕೆಯ ಕುದಿ
ನೆಳಗುಗಳ ದಂ । ಷ್ಟ್ರಾಳಿಗಳ ರಾಕ್ಷಸ ವರೂಥಿನಿ । ಕಾಳಗಕೆ ಹೊರವಂಟು ದಳುಕೆ
ಸಮಸ್ತ ಭುವನಚಯ ॥೧೪॥ ನಳಿನಬಾಂಧವ ನೆತ್ತಿ ಬಿರಿಯಲು । ಮೊಳಗಿದುವು ರಣ
ವಾದ್ಯತತಿ ದಿಗು । ವಳಯ ಘೂರ್ಮಿಸೆ ಗಜಿದುವು ಶತಕೋಟಿ ಸಂಖ್ಯೆಯಲಿ ॥ ದಳದ
ಮುಂಭಾಗದಲಿ ಕಹಳಾ ವಳಿಗಳುಗ್ಗ ಫಣಿಪಾಲಿ ರಾಕ್ಷಸ । ತಿಲಕ ಶಕ್ರಾರಾತಿ ಹೊರ
ವಂಟನು ಪುರಾಂತರವ ॥೧೫॥ ಅಣದಲಿದೆಗಳ ಅಂಜಿಕೆಗಳೋ । ರಣದ ದಿಕ್ಪಾಲಕರ

ಶಶಿ ದಿಗು | ಮಣಿಯ ಕಾಲ್ಬಡ ಘಡಿಸಿದುವು ದಿನ ಲೋಕ ಪರಿಯಂತ ॥ ಮುಳುಗಿಸಿತು
ಭಯಾಂಬುನಿಧಿ ರಾ | ವಣಿಯ ಗಮನಕೆ ತೋಟಿಯುಗ ನೆರೆ | ಬಣುಗಿದುವು ನಾ
ಕಾಣೆ ನವರಲಿ ಸರಿಯುನಿವಗೆಂದ ॥ ೧೬ ॥ ಸುರಪನಾಜ್ಞೆಯು ಲೊಡೆದವಖಿಳಾ | ಮರ
ಪುರಂಗಳು ಕೂಡೆ ಬೈಚಿ | ಟ್ಟರು ಸುಧಾ ಕಲಶವನು ಸುರಧೇನುವನು ಸುರವಣಿಯ ॥
ಸರಕ ಸಂವರಿಸಿದರು ತೆರಳಿಸಿ | ದರು ಸರೋಜಜ ಪುರಿಗೆ ಸುರ ಸೌಂ | ದರಿಯರನು
ಸುರ ಗಾಯಕರು ರಾವಣಿಯ ಗಮನದಲಿ ॥ ೧೭ ॥ ತೆಗೆದು ನಿಂದರು ಸಮ್ಮರವರು ಮು |
ತ್ತಿಗೆಯ ನಿಪ್ಪತ್ತೈದು ಯೋಜನ | ದಗಲ ದವನಿಯ ವಿಂಗಡಿಸಿ ರಣರಂಗ ಮಂಡ
ಲಕೆ ॥ ನಗ ಮಹೀರುಹ ಶತ್ರುಗೈಯಲಿ | ಗಗನವಿಟ್ಟೆಡೆಯಾಗೆ ಬಲಿದರು | ಬಗೆಗೊ
ಳಿಸಿ ಬವರಕ್ಕೆ ಗರುಡಾಕಾರದಲಿ ಬಲವ ॥೧೮॥ ನಳ ಸುಷೇಣ ಗವಾಕ್ಷ ಶತವಲಿ | ಗಳೆಡ
ವಂಕದ ಲಾಗ ನಿಂದರು | ಬಲದ ದೆಸೆಯಲಿ ಸುಮುಖ ದುರ್ಮುಖ ಗವಯ ದಧಿ
ಮುಖರು ॥ ಬಲಿದ ಜೊತ್ತನು ಮುಂದೆ ರವಿಸುತ | ಕಲಿ ಹನುಮ ನೀಲಾಂಗದರು ಬೆಂ |
ಬಳಿಯ ಮೈಂದ ದ್ವಿವಿದ ರಿನ ರೊಡ್ಡಿದರು ನಿಜಬಲವ ॥೧೯॥ ನಡುವೆ ರಘುಪತಿ ಲಕ್ಷ್ಮ
ಣರು ಶತ | ಖಡುಗ ಕಾರ್ಮುಕ ಕವಚಗಳ ಕೈ | ಹೊಡೆಯ ರಣ ಸನ್ನಾಹ ಸಮಯಿಗ
ಳಾದ ರಾಕ್ಷಣಕೆ ॥ ಎಡ ಬಲದ ಸಾಯಿದಾನ ಕಜಸುತ | ದೃಢ ಬಲಾನ್ವಿತ ವರವಿಭೀ
ಷಣ | ರಡಸಿ ನಿಂದರು ಸಂದಣಿಸಿ ತರಿಸೇನೆ ನಿಮಿಷದಲಿ॥೨೦॥ ತಲೆ ಮಗೆಯಲಿ ಖಡ್ಗ
ಗಳು ಮುಂ | ಕೊಳಿಸಿ ನಿಂದುದು ಮುಂದೆ ಬಿಲ್ಲಾ | ಳ್ಗಳಂ ಕೈಗೊಟ್ಟುದು ಬಲಿದ
ಮುಂಡಿಯದ ಬೆರಳಿನಲಿ ॥ ನಿಲಲರಿ ಮೋಹರವ ಛಲಗತಿಯ ಚಾ | ಪಲದ ಕುಂತದ
ಭಟರು ನಡೆದಿ | ಟ್ಟಳಿಸಿ ನಿಂದರು ಸಂಸದಲಿ ರಘುನಾಥ ಸೈನಿಕವ ॥ ೨೧ ॥ ಮಾಲೆತು
ನಿಂದಿದ ಮಾನೆ ನಭ ರ | ವ್ವಳಿಸಿದುವು ತೇಜಿಗಳು ನೆಲ ನಿ | ಕ್ಕಲಿಸೆ ಬಿರ್ತುವಲಿಗಳಲಿ
ತೇರ್ಸೈಸಿದುವು ತೇರುಗಳು ॥ ದಳವೊ ಲೀಲೆಯ ಗಜದ ಕೊರಳಿನ | ಕಲಶವೋ ಶಿವ
ನೆದೆಗಳು | ಹಳಚಿದವೆ ಹವಣಾವುದುಪಮೆಗೆ ವೈರಿವಾಹಿನಿಯ ॥೨೨॥ ಮಣಿಮಯದ
ಜೊತ್ತುಗಳ ಮುದವಾ | ರಣ ರಥಾಶ್ವಾರೋಹಕರ ಭಾ | ರಣೆಯ ಬಿರುದಿನ ಹಳವಿಗೆಯ
ಜೋರಹುಗಳ ಹೊಸ ಜೊಗರ ॥ ಕಣೆ ಕಠಾರಿ ಕೃಪಾಣ ಡೊಂಕಣಿ | ಗವೆ ಮುಸುಂಡಿ
ಪ್ರವರ ಗದೆಯು | ಬ್ಬರದ ನಿರ್ಭರ ಕಿರಣ ಕಣು ಮುಚ್ಚಿಸಿದ ವನಿಮಿಷರ ॥ ೨೩ ॥
ಅರರೆ ಗಗನ ಸರೋವರದೊ ಳವ | ತರಿಸಿದುವೊ ತಾವರೆಗಳೆನೆ ಪಾಂ | ಡರದ ಶೋಣ
ಚ್ಛವಿಯ ಹೇಮ ಪ್ರಭಾತ ಪತ್ರದಲಿ ॥ ಕಿರಣವಡಗಿತು ರವಿಯ ತತ್ಸರ | ಸಿರುಹ
ಕಂದದ ಬೀಳಲೆನೆ ಕ | ರ್ಬುರರ ಬಲದೊಳಗಾಡಿದುವು ಚಾಮರ ಛಡಾಳದಲಿ ॥೨೪॥
ಲವನೆ ಕೇಳ್ ಮೋಹರದೊಳಿರ್ದುದು | ಜವನ ನುಂಗುವ ಮೃತ್ಯುವನು ತು | ತ್ತುವ
ಲಯಾಗ್ನಿಯ ನಂದಿಸುತ ಭೈರವನ ಭಂಗಿಸುತ ॥ ಶಿವನ ಸೀವರಿಸುವ ನರೋರಗ |
ಭುವನ ಭಂಜಿಸುವಬುಜ ದಾಂಡವ | ಶಿಪಿ ದೊಡೆವ ವಿಕರಾಳ ರಾಕ್ಷಸವೀರಭಟನಿಕರ ॥
ಗಜಘಟೆಯ ಬೃಂಹಿತದ ತುರಗ | ವ್ರಜದ ಹೇಷಿತ ರಥದ ಚೀತ್ಕೃತಿ | ವಿಜಯಭಟ
ರುಬ್ಬರಿತ ರಣಮುಪ್ಪರಿಯ ಪಿಂಡಿಮದ ॥ ಗಜರು ಗಹಳೆಯ ಕೊಂಬುಗಳ ಮೌ | ರುಜದ
ಪಣವಾನಕ ನಿಸಾಳದ | ಗಜರು ಗುಮ್ಮಿತು ಗಗನದಗ್ರದ ಧ್ರುವನ ಮಂಡಲವ ॥ ೨೫ ॥
ಸೃಜಿಸಲುದ್ಯೋಗಿಸಿದ ವಂಭೋ | ಜಜನು ಮನದೊಳಗಂಜಿ ನೂತನ | ಭುಜಗ ರಾಜನ

ಕೊರುಮನ ಕಕುಭದ್ವಿಪಾವಳಿಯ ॥ ವಿಜಿತ ವಿಭುಜೋತ್ತಮನ ಸೇನಾ । ವ್ರಜದ
ಹೊಂಗೆಗೆ ಪೂರ್ವದವರನು । ಗಜಬಜಿಸಿದುದು ಕಂಡು ಕುಶ ಕೇಳೆಂದು ಮುಸಿ ನುಡಿದ॥
ಆತು ನಿಂದುದು ನಿಮ್ಮ ಸೇನಾ । ವ್ರಾತದಿದಿರಲಿ ವೈರಿ ಬಲವದ । ಸಾತು ಮಲೆತುದು
ಬಳಿಕ ಬಲಿಮುಖ ಬಲವು ಭಾರಿಯಲಿ ॥ ಆತು ಹಳಚಿದ ಲಯ ಸಮುದ್ರದ । ರೀತಿಯಲಿ
ಬಳಿಕಸುರ ವಂಶ ವಿ । ಘಾತ ಕೇಳಿದ ನಿವ ನದಾರೆಂದಾ ವಿಭೀಷಣನ ॥ ೨೮ ॥ ಅವಧ
ರಿಸು ರಾಜೇಂದ್ರ ರಿಪುಭಟ । ರವಿ ವಿಧುಂತುದ ರಾಕ್ಷಸೇಂದ್ರನ । ಕುವರ ನಿವ ನಮ
ರೇಂದ್ರಜಿತು ವೆಂದೆಂಬುದಭಿಧಾನ ॥ ಇವನ ಭೀತಿಗೆ ಸಕಲ ಸುಮನೋ ॥ ನಿವಹ
ಸೇವಕರಾಯ್ತು ತೆತ್ತುದು । ಭುವನ ವಿವನಂಜಿಕೆಗೆ ಕಪ್ಪವ ನರಸ ಕೇಳೆಂದ ॥ ೨೯ ॥
ಅವೆ ಸುರೇಂದ್ರ ಕುಬೇರ ಶಿಖಿ ಯಮ । ಪವನ ನಿರುತೀಶಾನ ವರುಣರ । ವಿವಿಧ ಶಸ್ತ್ರಾ
ಸ್ತ್ರಂಗಳೀ ರಕ್ಕಸನ ರಥದೊಳಗೆ ॥ ಅವೆ ಶರಾಸನ ಶರಗಳವೆ ಶಾಂ । ಭವನ ಮಹಿಮೆಯ
ಲಿವನ ಕೈಯ್ಯಲಿ । ಬವರದಲಿ ಬದುಕುವುದು ನಮಗತಿ ಚಿತ್ರತರವೆಂದ ॥ ನಗೆ ಮೊಗದ
ಲಿನಸೂನು ಸಾಕೈ । ಹೊಗಳಿಕೆಯ ಪರಿಯೆನುತ ದೇವನ । ಮೊಗವ ನೀಕ್ಷಿಸಿ ಕಾಳಗಕೆ ಕೈ
ವೀಸಿದನು ಭಟರ ॥ ಯುಗಡ ಸೀಮೆಯ ಶಿಖಿಯ ಬಾಯಿಗ । ಳುಗುಳು ಗಿಡಿಗಳ ಗಢಣ
ವತಿ ಸಂ । ಯುಗದ ಸೀಮೆಯೊಳೆಸೆದು ದೆನೆ ಹಳಚಿಮುದು ಕಪಿಸೇನೆ॥೩೦॥ ನಸಿದ ಯುಗ
ದವಸಾನದಲಿ ಲಳಿ । ಮಸಗಿ ಲಯ ಶಿಖಿ ಶಿಖಿಯೊಳಗೆ ಲಂ । ಬಿಸುವ ಪೊಲು ಹಳಚಿ
ದುದು ಬಲವೆರಡಳುಕೆ ಭುವನ ಚಯ ॥ ನಿಶಿತ ಶಸ್ತ್ರ ಶಿಲೋಚ್ಚಯುವ ಸರ । ಭಸದ
ಹೊಯ್ಲಿನ ಖಣಿ ಖಣಿಲ್ಲೆನಿ । ಪ್ಪ ಸ್ತ್ರದ ದುಭುತ ರವದ ಲೊಡೆವೆರಸಿತು ವಿಘಾತಿ
ಯಲಿ ॥೩೧॥ ಧಾಳಿ ಹರಿದುದು ಹರಹಿನಲಿ ತಾ । ರಾಳಿ ತರಣಿ ಸುಧಾಂಶು ಬಿಂಬವ ।
ತೂಳಿ ತವಕದ ಲುಭಯ ಬಲ ಪದಹತ ರಜೋನ್ಸ್ರವರ ॥ ಮೇಲು ಜನ ದರಸುಗಳ
ನಿಜಗಗ । ನಾಳಿಗಳ ಕೊಳು ತೊತ್ತುಬರ ದು । ತ್ತಾಳದಿಂ ದುತ್ತಾನ ಪಾದಜ
ಪುರಿಗೆ ದಳ ವ್ರಳಿಸೆ ॥೩೨॥ ಕರಿಗಳೊಳು ಕರಡಿಗಳು ಹಯ ಮೋ । ಹರದೊಳಗೆ
ಮುಸು ವಿಂಡು ರಥದು । ಬಬ್ಬರದ ಸಂದಣಿ ಯೊಳಗೆ ಕಡುಹಿನ ಸಿಂಗಳೀಕ ಚಯ ॥
ಚರಣ ಚಟುಳ ನಿಶಾಟ ರೊಳು ತರು । ಚರರು ಹೊಕ್ಕುದು ಬಿಕ್ಕಲಿಳೆ ಹೊಡ ।
ಕರಿಸ ಲಂಬುಧಿ ಹಳಚಿ ತಮಮ ಮಹೋಗ್ರ ಸಮರದಲಿ ॥೩೩॥ ಖಣಿಖಟಿಲು ದಡ
ಮೊಕ್ಕ ಗಳ ಬಲು । ಕಣೆಯ ಶಸ್ತ್ರರು ಕೋಡು ಗಲ್ಗಳ । ಹಣಿವಗಳ ಹೊಮ್ಮರನ
ಕಲಿಗಳ ಕಲಹ ದುಬ್ಬರದ । ರಣ ರಭಸ ಹುಟ್ಟಿಸಿ ತಜಾಂಡವ । ಹಣೆಗೆ ಬೇನೆಯ
ನೆಳೆದ ಸುಭಟರ । ಜುಣುಗುಗಳು ಯಮರಾಜ ಕರಣಕೆ ಬಾರದಾ ಯೆತ್ತಂದ ॥೩೪॥
ಜೆಸವು ದಳಿವುದು ಚಾಚುವುದು ಜಾ । ಳಿಸುವು ದೊತ್ತೆಂಬರಿಸುವುದು ಕೈ । ಹಸದ
ಲ್ಯೈಹಸ ದುಬ್ಬರದ ಸಮರಂಗ ದಬ್ಬರದ ॥ ರಸವನೇ ಹೊಗಳುವನು ಸಾಸಿರ । ರಸನೆ
ಯಾತಂಗರಿದು ಶೋಣಿತ । ವಸನ ವಿಗ್ರಹಿಯಾದಳೆನೆ ರಂಜಿಸಿತು ರಣಭೂಮಿ ॥೩೫॥
ಕರಿಯ ಕುರಿಯಿಂದಿಟ್ಟು ತುರಗವ । ತುರಗದಿಂ ದಪ್ಪಳಿಸಿ ರಥದಿಂ । ದುರುವರೂಥವ
ನುರುಬಿ ರಕ್ಕಸರಿಂದ ರಕ್ಕಸರ ॥ ತಿರುಹಿಡುವ ಕಪಿಭಟರ ಕದನಕೆ । ತೆರಳದತಿ ಬಲರ
ರಕ್ಕಸರು ವಾ । ನರರು ವಾನರರಿಂದ ಸದೆದರು ಸೂಳು ಪಾಡಿನಲಿ ॥೩೬॥ ಗಿರಿಯ
ಶಿಖರದ ಹೊಯ್ಲಿನಲಿ ಹೆ । ಮ್ಮರನ ಬೀಸಿಕೆ ಗಳಲಿ ನಖ ಮುಖ । ದುರು ವಿಘಾತಿಯ

ಲಿಡುವ ಕೈ ಗುಂಡುಗಳ ಚಂಡಿಯಲಿ ॥ ಕರುಳ ಕಾವಳ ವಜ್ರಿ ಮಾಂಸದ । ಹೊರಳಿ
ಯಲಿ ಹೊದಿಸಿದುದು ನೆಲನು । ಪ್ಪರವ ರುಧಿರದಲಡಗಿದುದು ಸಭೆ ವಿವರ ಸಮರ
ವಲಿ ॥೩೮॥ ಎತ್ತಿ ಬಾಲವ ನೆರಡು ಪಚ್ಚೆಳ । ದೊತ್ತಿಸಲಿ ಮೋಹಿಸಿದ ಸುರಗಿಯು ।
ನೆತ್ತಿಯಲಿ ತೋರಿದರು ತೋಟಿಗೆ ಜಾರುವಣ್ಣಗಳ ॥ ಕತ್ತರಿಸಿದರು ಕಣೆಗಳಲಿ ಕೈ ।
ಗುತ್ತಿ ದವರನು ಕಡಿದು ಹೆಣ । ಗುತ್ತಿರಿಯು ನೊಟ್ಟಿದರು ಕೈಗೊಂಡರಿ ಗಳಾಜಿ
ಯಲಿ ॥೩೯॥ ಇವರವರ ಸಂಯುಗದ ಸೇನಾ । ರ್ಣವದ ಸಂಕುಲ ಯುದ್ಧದಂದಧಿ ।
ನವದ ವಿರಳದ ರಂಜಕವ ನೇನೆಂಬೆ ನದ್ಭುತವ ॥ ಜವನ ಹರಿವರಿಯೋ ಮಹಾಭೈ ।
ರವನ ಕಾಲ್ಪುಳಿಯೋ ಕಪರ್ದಿಯು । ಕವಕೆಯೋ ಕಾಣೆನು ಸುರಾಸುರ ಕದನ ಕೇಳಿ
ಯಲಿ ॥೪೦॥ ಉರುಳುತಿರ್ದುವು ರಣನೊಳಗೆ ಹೆಣ । ವೆರಡು ಸೇನೆಯ ಲರುಣ ಜಲ
ವು । ಬ್ಬರಿಸುತಿರ್ದುದು ನೆಗಹಿ ನಾಲಕು ಬಲದ ತೆಪ್ಪಗಳ ॥ ಸರವುತಿರ್ದುವು ಸುಭಟ
ರಸು ಸುರ । ಪುರಿಗೆ ಬೊಮ್ಮನ ರಾಜಧಾನಿಗೆ । ನೆರವುತಿರ್ದುದು ನಲಿದು ರಣ ಭೂಮಿ
ಯಲಿ ಭೂತಗಣ ॥೪೧॥ ಕರುಳಿನಲಿ ಖಂಡದಲಿ ತುರುಗಿದ । ತೊರಳೆಯಲಿ ತರಿದೆಲು
ಗಳಲಿ ಕಡಿಕೊರಳಿನಲಿ । ಕತ್ತರಿಸಿದ ನಡು ಕಾಲು ಕೈಗಳಲಿ ॥ ಹರಿ ನಿಶಾಟರ ಭಟರ
ಹೆಣ ಸರಿ । ಬೆರಕೆಯಲಿ ರಣರಂಗದಲಿ ಹರಿ । ನೆರಡು ಮಾಳುದ್ದದಲಿ ಪರಿಯುತಿರ್ದು
ದಬ್ಬರದ ॥೪೨॥ ಜವನ ಕಣಜವೋ ಮೋಹ್ ಲಯು ಮೃ । ತ್ಯುವಿನ ಬಾಣಸವನೆಯ
ಹಿದಿರೆಯೋ । ವಿವಿಧ ಭೂತಾವಳಿಯ ಬೆಳವಿಗೆಯೋ ಖಗಾವಳಿಯ । ರವುಕುಳಪ ರಣ
ಮಂಡಲವೋ ರವ್ರ । ರವದರುಂಹರಿಯೋ ರವ್ರುದ್ರಾ । ಹವದ ಸಿರಿ ರಾಮ ಕಥೆಯೊಳ
ಗಲ್ಲದಿಲ್ಲೆಂದ ॥೪೩॥ ಹರಿದ ಚೂಣಿಯು ಮೇಳೆ ಬಂದ ಭಟ । ರಿರಿತ ಕಂಪೈಸಿದರು
ತ್ತಾಯ್ದುವು । ಹರೆ ಗಳಂಚೆಯು ಲಡಗಿ ತಾ ರವ ವಿಸರ ಬೊಬ್ಬೆಯಲಿ । ಉರುಬ ಲಿಳೆ
ವಳ ವಂಕರಿಸೆ ಮು । ಕ್ಕರಿಸಿ ತಂಕಕೆ ಗಗನ ತಳ ಬಿಡ । ದೊರಲುತಿವ ರವರದ್ರಿ
ಕೈದು ಗಳಾಗ ಕದನದಲಿ ॥೪೪॥ ಕಲಹ ಗಪ್ಪೈಕ್ಯದವು ಬಳಿಕ । ಗ್ಗಳೆಯು ರಿದೆ ಕುಶ
ಕೇಳು ರಾವಣಿ । ಯೊಳಗೆ ರಾಘವ ಭೃತ್ಯ ನಾ ವೀರ ಪ್ರಹಸ್ತನಲಿ ॥ ಮಲೆತೆ ನಗ್ನದ
ಸೀಲ ಕುಂಭನ । ಹಳಚಿದನು ನಳ ನಾ ನಿಕುಂಭನ । ಕದನದಲಿ ಕೈಗೊಟ್ಟ ರತಿಬಲ
ಗಂಧಮಾದನರು ॥೪೫॥ ತರುಬಿದರು ಧೂಮ್ರಾಕ್ಷನನು ಬೊ । ಬ್ಬಿರಿದು ಜಾಂಬವ
ದೇವ ನೆಡೆಯೊ । ಕ್ಕರುಬಿದನು ದೇವಾಂತಕನ ಶತ್ರಬಲಿ ವಿಘಾತಿಯಲಿ ॥ ತೆರಹು
ಗೊಡದೆ ನರಾಂತಕನ ಬಲ । ಮುರಿಯೆ ದುರ್ಮುಖ ಕಾದಿದನು ಕ । ಟ್ಟರಿತದಿಂದಳು
ಕಿಸಿದ ನರೆ ಕಾಯುವನು ಸೌಮಿತ್ರಿ ॥೪೬॥ ಕಾದಿದನು ಕಲಿ ವಾಲಿಸುತನು ಮ । ಹೋದರ
ನೊಳೇಕಾಂಗದಲಿ ಬಿಡ । ದಾಲಿ ಗೊಂಡಟ್ಟಿದನು ವಿದ್ಯುನ್ಮತ್ತನನು ವೃಷಭ ॥ ಹಾದಿ
ಡಗೆಸಿದನಾ ಸುಪಾರ್ಶ್ವನ । ನಾ ದಿವೌಕಸ ವೈದ್ಯಸುತ ನುಳಿ । ದಾದಿ ಭಟರಲಿ ಭಟರ್ಬ
ಬಾರಿಸಿದರು ಮಹಾಹವವ ॥೪೭॥ ತೆಗೆದು ತಾಕುವ ರೋಪರಿಸುವರು । ಹೆಗುವ ರಂತ
ರಿಸುವರುನೂತುವ । ರಗಲಿಸುವ ರಡ್ಡೈಸುವರು ತರುಬುವರು ತೇರೈಸಿ ॥ ನಗ ಮಹೀ
ರುಹ ದಬ್ಬರದ ಕೈ । ದುಗಳ ಕಣೆ ಖಟ ಲುಬ್ಬರದ ಬಲು । ಜಗಳ ನಡೆದುದು ನಡುಗ
ಲಿಂದ್ರಾಧ್ಯಖಿಲ ದೇವಗಣ ॥೪೮॥ ಮಿಕ್ಕ ದಿವ್ಯ ಯುಗಂಗಳಲಿ ಕೈ । ಯಿಕ್ಕಿ ಕಾದಿದ
ವೀರರೀ ಗಣ । ದಕ್ಕಜಕೆ ಸರಿ ಯೆಂದು ನುಡಿದರೆ ಬಾಯಿ ಹುಳಿವುದಲೆ ॥ ಉಕ್ಕು

ತಿರ್ದುದು ವೀರರಸ ರಣ । ಸೊಕ್ಕುತಿರ್ದುದು ಸೋಲ ಗೆಲುವಿನ । ಸಕ್ಕಜಕೆ ಸಂದಿಲ್ಲ
ದಿರ್ದುದು ಕಂದ ಕೇಳೆಂದ ॥೪೯॥ ನಡೆವುತಿರ್ದುದು ಸಮರ ವೀಚಿಯು । ಕಡೆಯು
ಲ್ಲವರು ರಕ್ಕಸರ ಖಳ ಬೊಡೆಯು ಕಳವಿನ ಕಾಳಗಕೆ ಕಳುಹಿದನು ಸೈಚೆಗರ ॥ ಪೊಡವಿ
ಪನ ಬಳಿಗವರು ಬಂದರು । ಕಡೆಗೆ ಕಪಿರೂಪಿನಲಿ ಕಂಡನು । ಕಡು ಗಲಿಗಳರಸನು
ವಿಭೀಷಣ ನಾ ನಿಶಾಚರರ ॥೫೦॥ ತೋರಿದನು ಮರೆ ಯಿರಿತ ದೋಲಿಯು । ಕಾರ ರಿವ
ರೆಂದಾ ಖರಾರಿಗೆ ತೋರಿದನು ತೋಮರದ ತುದಿಯಿಂ ದಸುರ ರಸುರುಗಳ ॥ ಬೇರೆ
ಬೇರವರವರ ತಲೆ ನಭ । ಕೇರಿದುವು ಮಝ್ಝುಭಾಪೆನುತ ಹೊರೆ । ಯೇರಿ ಹೊಗಳಿದ
ನಾ ವಿಭೀಷಣ ನಾ ಖರಾಂತಕನ ॥೫೧॥ ತರಣಿ ಶತ್ರುವ ದೊಬ್ಬ ವೈಶ್ವಾ । ನರ ವಿರೋ
ಧಿಯು ನೊಬ್ಬ ನೊಬ್ಬನು । ಸರಸಿರುಹ ಸಂಜಾತ ವೈರಿ ವಿಹಾರಿ ಯುವನೊಬ್ಬ ॥ ಧುರ
ಬಲಾನ್ವಿತ ರವ್ರಿ ಜಿತು ಯೆಂ । ಬುರು ಪರಾಕ್ರಮಿ ಯೊಬ್ಬ ರಿನಿಬರು । ಸುದ ರಂತಕ
ಪುರಿಗೆ ದೈವದ್ರೋಹಿಗಳು ಬಳಿಕ ॥ ॥೫೨॥

ಹದಿಮೂರನೆಯ ಸಂಧಿ ಸಮಾಪ್ತಂ.

ಹದಿನಾಲ್ಕನೆಯ ಸಂಧಿ.

ಸೂಚನೆ॥ ರಾಮ ಪದಯುಗ ಕಲ್ಪ ಕುಜ ವಿ । ಶ್ರಾಮ ವೀರ ವಿಭೀಷಣನು ಸಂ ।
ಗ್ರಾಮದಲಿ ಸೀಳಿದನು ಕಲಿ ಮಿತ್ರಘ್ನ ರಾಕ್ಷಸನ ॥

ಪದ್ಯ॥ ಕುಶನೆ ಕೇಳೈ ಪೈಕ ವೆರಡರ । ವಿಷಮ ವೀರರ ವಿಗ್ರಹದ ರಣ । ರಸದ
ಸೌರಂಭಾತಿಶಯ ನಡೆದುದು ಸುರಾಸುರರ ॥ ಅಸಮರ ಕಿಮ್ಮಿಗಿಲೆನಲು ಸಂ । ಧಿಸಿದ
ನಾ ಸಮಯದಲಿ ರಣ ಕ । ರ್ಕಶ ರಘುಕ್ಷಿತಿಪತಿಯನಾ ಮಿತ್ರಘ್ನ ನಾಜಿಯಲಿ ॥೧॥
ಧುರ ದೊಳಾ ರಕ್ಕಸಗೆ ದನುಜಾ । ಮರ ಮಹೋರಗ ರಿಂದ ಸಾಯದ । ವರವ
ಸತ್ವದ ಲವ ದಶಾಸ್ಯನ ಬಾಹುಪಿಕ್ರಮಕೆ ॥ ಎರಡು ಮಡಿ ಲವ ಕೇಳಿದೈ ಸಂ । ಗರಕೆ
ನಿಂದನು ನಿಮ್ಮ ತಂದೆಯು । ಸರಿಸದಲಿ ರವಿ ಗವ್ವಳಿಪ ರಾಹುವಿನ ತೆರನಂತೆ ॥೨॥ ಅರಿ
ದವನ ಮಿತ್ರಘ್ನನಂದಾ । ಶರಣ ಜನ ವತ್ಸಲನು ರಾಮನ । ವರೆಯ ತೊಕ್ಕ ಸುರೇಂದ್ರ
ನವ ನತಿಬಲ ನಲಾ ಯೆನುತ ॥ ಅರಸ ಚಿತ್ತೈಸೆನ್ನ ವಸು ವಶಿ । ಕರಿಸಿದುದಕೆನ್ನಲಿ
ಸೇವ । ಪರಿಣತಿಯ ಕೈ ಕೊಳ್ಳಬೇ ಕೆಂ ದೆರಗಿದನು ಪದಕೆ ॥೩॥ ಇವನ ಕೂಡಣ
ಕಲಹವನು ನೀ । ವವಧರಿಸಿ ಬಿಲು ದುಡುಕ ಬೇ ಡಿವ । ನವಗಡೆಯ ರಣ ವೆನ್ನೊಳಾ
ಗಲಿ ನೋಡಿ ಕೌತುಕವ ॥ ಇವಗೆ ಸುರ ಮಾನವ ಭುಜಂಗಮ । ನಿವಹದಲಿ ಸಾವಿಲ್ಲ
ನಿವನಲಿ । ಬವರಕೆನ್ನನು ಬೆಸ ಸೆನುತ ಬೀಳ್ಕೊಂಡ ನಸುರೇಂದ್ರ ॥೪॥ ನಿಲ್ಲೆಲವೊ
ಮಿತ್ರಘ್ನ ಶತ್ರುಗ । ಳಿಲ್ಲ ನಿನಗಾ ರಸುರರಲಿ ಕಡು । ಖುಲ್ಲ ರಪ್ರತಿಭಟರು ನಾವೇನ
ಲ್ಲಲೇ ನಿಮಗೆ ॥ ನಿಲ್ಲೆನುತ ತರುಬಿದನು ರಿಪು ರಣ । ಮಲ್ಲ ಮಣಿಪಯ ಗದೆಯ
ಝೂಡಿಸಿ । ಘಲ್ಲಣೆಯಾ ಗತಿಯಿಂದ ಗಗನದ ಚರರು ನಲಿದಾಡೆ ॥೫॥ ಸುಡು ಸುಡೆ
ಲವೊ ದ್ರೋಹಿ ಹಗೆಯನು । ಹಿಡಿದು ನಿಜ ವಂಶ ನೃಪರಾಗೆ । ಕೊಡಲಿ ಯಾದಿ
ಯೆಲಾ ನಿರೀಕ್ಷಿಸ ಲಹುದೆ ಪಾತಕನ ॥ ಪೊಡವಿ ಬಾಹಿರ ರಕ್ಷ ಶಸ್ತ್ರವ । ಹಿಡಿಯೆ ಸಾ

ಪತಿಕರಿಸಿ ಕೊಂಡಿ | ದೊರ್ಡೆಯನನ ಕೊಲೆ ಕೊಲೆಗರುಹ ನೀನಲ್ಲ ಸಾರೆಂದ ||೬||
ಬೊಗಳದಿರು ನೀ ನೇಮ ಬಲ್ಲರೆ | ನಿಗಮ ತತ್ವ ರಹಸ್ಯವನು ಪಾ | ನಿಗಳು ಪಂಡಿತ
ರಾವ ರುಸುರಲು ಬಹುದು ಭಾಷಿತವ || ಜಗದ ದೈವದ ಕೂಡೆ ಸಮರದ | ಸೊಗಸು
ಗಡ ಸಿಂಹದಲಿ ಸೀಳ್ನಾಯ್ | ಜಗಳ ಕಂಪ್ಯೈಸುವುದೆ ಕೇಳೆಲೆ ಖೂಳ ಹೋಗೆಂದ ||೭||
ಎಣಕವೇ ನಮ್ಮೊಡನೆ ನೀನೇ | ಕೆಣಕಿದವನೇ ಶಿವಶಿವಾ ರಾ | ವಣನ ಸಹಭವನೆಂಬ
ಬಿಡೆಯಕೆ ಸೈರಿಸಿದೆ ಸೈಸೆ || ರಣಕೆ ಮೊದಲಿಗ ನೀ ನೆಮಗೆ ಪಾ | ರಣ ವಿಚಿತ್ರವ
ನೋಡೆನುತ ತೋ | ರಣ ಕವಾಟ ಸ್ತಂಭ ವಿಳಿದನು ಮುಳಿದು ಮಣಿರಥವ ||೮|| ತನು
ರುಚಿ ಸ್ವರ್ಭಾನುಗನು ರಣ | ನಿನದ ನಿರ್ಘಾತವನು ಕೋಪದ | ಘನತೆ ಜನಿತ
ಲಯಾಗ್ನಿಯನು ವಿಲಯಾದಿ ಭೈರವನ || ಕನಲಿಕೆಯ ಕೋಲಾಹಳವ ನವ | ನನು
ಕರಿಸಿ ನಡೆತಂದ ನಂಬರ | ವನಿಮಿಷಾವಳಿ ಬೆದರೆ ಬೆರಸಿದನಾ ವಿಭೀಷಣನ ||೯||
ಅಂಗ ಪವುರಾಚಲದ ಕೋಪವ | ನಂಗ ವೈರಿಯ ನಸಮ ಸಂಗರ | ದಂಗ ದಬ್ಬರ
ದುಬ್ಬು ಗರ್ವಿತ ವೀರ ನರಹರಿಯ || ಅಂಘವಣೆ ಪವಮಾನಜನ ನುತ್ತುಂಗ ಬಲ
ರಘುಪತಿಯ ವಿಕ್ರಮ | ದಂಗವನು ಮಿಗಿಲಾ ವಿಭೀಷಣ ಹೊಕ್ಕ ನುರವಣಿಸಿ ||೧೦||
ಬಳಿಕ ಹೇಳುವದೇನು ಕಲ್ಪಾ | ಸಲನ ಕರುವಿಟ್ಟಂತೆ ನಿಂದಿ | ರ್ದಳವಿಯಲಿ ಹೊಗ
ರೊಗೆವ ಮೋರೆಯ ಹೊಗುವ ವಿಸಾಸೆಗಳ || ಬಲಿದ ಹುಬ್ಬಿನ ಬಿಟ್ಟ ಕಂಗಳ | ಝಳದ
ಝಾಡಿಯ ನಾಸಿಕದ ಲು | ಳ್ಪಳಿಸುವ ಸಿತಾಕಾಶ ಧೂಮ್ರ ಶ್ವಾಸ ಲಹರಿಯಲಿ ||೧೧||
ಕಲಹ ದಭಿನವ ಪಾಡು ಪಂಥದ | ಕವಿತ ವಚನದ ಕಾಯ ದುಬ್ಬಿನ ಹೊಳಕೆಯಲಿ
ಹೊಕ್ಕಪ್ಪರಿಸಿದರು ಒಲಿದ ಮುಂಡಿಯಲಿ || ನಿಲುಕಿ ಗದೆಗಳ ತಾಗಿದರು ವೈ | ವಳಿಯ
ಲಿಳಿ ತೂಗಾಡೆ ಬಾಹಾ | ಬಳತ ಬಲ ರೊಳ ಹೊಕ್ಕು ಹೊಯ್ದರು ಕಾಯ್ದು ಗಾಯ
ವಲಿ ||೧೨|| ಗದೆಗದೆಯ ಹೊಯ್ಲಿನಲಿ ಹೋರಟೆ | ಯದುಳಿಸಿತು ಕಿಡಿಗಳನು ಖಣಿ
ಖಟಿಲ | ಲದುಭುತದ ರವ ಪಣವ ದಧಿಯನು ಸಿಡಿಲ ಬಲುಹೊಯ್ಲ || ಪುದಮುಖರ
ಪದ ಘಾತಿಗಹಿಪನ | ಹೃದಯ ಕೂರುಮ ರೊಡಲು ದಿಗ್ಕರಿ | ಯ ದರಹಾತಕ ವಾರು
ತಿರ್ದುವು ಹೇಳಲೇನೆಂದ ||೧೩|| ಸಿಲುಕಿತಿವ ರುಬ್ಬರದ ನಿಬ್ಬರ | ಕಲಹ ವಾದಿ ನದು
ಭುಷು ರವುರದ | ಕಲಿಗಳಾಜಿ ತನಾ ಗಜ ಕ್ಷೋಭ ಪ್ರತಾಪ ಕದ || ಚಳ ಚಮತ್ಕೃತಿ
ಚಪ್ಪರಣೆ ಚಾ | ಪಲ ವಿಲಂಘನ ಲಘು ಟ ಲಾಘವ | ಲಳಿಯ ಲಾಗಿನ ಚಟುಳ ಭಟ
ರೊಪ್ಪಿದರು ಬವರದಲಿ ||೧೪|| ಸುಳಿವು ವಂಚನೆ ಸಂಚು ವೈಸರ | ಲುಳಿ ವಿಘಾತಿಯ
ಘಾತ ಪರಿಮಂ | ಡಲ ವಿದಾರಣ ನಿಹಿತ ಚಾರಣ ಚಟುಳ ಚೂರಣದ || ಖಳನ ನೀಕ
ರಿಸಿದರು ಗಗನದ | ಗಲಭೆಕಾರರು ಗಾವಳಿಸು ನುಲಿ | ನಿಲಿಸಿ ನೋಟಕರಾಯ್ತು ಕಲಿ
ಗಳ ಕದನ ಕೇಳಿಯಲಿ ||೧೫|| ಝಾಡಿ ಝುಂಕಣೆ ಝಡವು ಖಾಡಾ | ಖಾಡಿ ಪೃಥಗತಿ
ದೃಷ್ಟಿ ಪಾಕಾ | ಲೀಢ ಗೋಮೂತ್ರಿಕ ಪರಿ ಭ್ರಮಣ ಪ್ರವಿಕ್ಷೇಪ || ಪಾಡು ವೈಸರ
ವಿಸರು ಪಂಥದ | ಗಾಢ ಘಲ್ಲಣೆಗಳಲಿ ಗದೆ ಕುಣಿ | ದಾಡಿದುವು ಕಿಡಿ ಸೂಸ ಲಬ್ಬರ
ನಿರ್ಘರಂಗಳಲಿ ||೧೬|| ಕಪಿ ವಿಲಂಘನೆ ಕಿಡಿ ನಿಯುದ್ಧ | ದ್ವಿಪರಣ ಪ್ರಕರಣ ವೃಷಾ
ಹೆವ | ದಪರ ಸಂಚರ ಸರ್ವಗತಿ ಸವ್ಯಾಪ ಸವ್ಯಗಳ || ಚಪಳ ತರ ಪಯ ಸಾಡುಗಳ
ಕಡು | ಕುಪಿತ ಕರ್ಕಶ ಮಾನಸದ ರಣ | ನಿಪುಣ ನಿಕಷಾ ಸೂನುಗಳು ಕಾದಿದರು

ಕಡುಹಿನಲಿ ||೧೭|| ಹಾ ಯೆನಲು ಸುರಪತಿ ವಿಭೀಷಣ | ನಾಯುಧದ ಲಾವಣಿಗೆಯ ಲಿ
ಗರು | ವಾಯಿ ಪಥದಲಿ ಪಿಂಮುಳದ ಸುರ ಕುಜದ ಕುಸುಮಗಳ || ಹೋ ಯೆನುತ
ಮಿತ್ರಘ್ನ ಖಳನ ಗ | ದಾಯುಧದ ಗಾಢಿಕೆಗೆ ದೈತ್ಯ ನಿ | ಕಾಯ ಸಿಲುಪನು ಸಿವಸನ
ವನು ನಿವಾರಿಸಿತು ರಣಕೆ ||೧೮|| ಹೊಯ್ದನಾತನ ಸೀತ ನೀತನ | ಹೊಯ್ದನಾ ಖಳ
ಬಳಿಕ ಮಿಂಚಿನ | ಸೋದರದ ಸುಳಿವುಗಳೊ ಮಣಿಮಯ ಗದೆಯ ಘಲ್ಲಣೆಯೊ ||
ಮೇದಿನಿಯ ಹೊರೆಕಾರ ರುರು ಲಘು | ವಾದ ರಿವ ರಿಬ್ಬರ ಮಹಾಹವ | ಪಾದ ಘಟ್ಟಣೆ
ಗೊಲವು ತಿರ್ದುದು ಮೇರು ಮಸ್ತಕವ |೧೯|| ಮೇಲೆ ಮೇಲುಬ್ಬೇಳ್ವ ಕೋಪ |
ಜ್ವಾಲೆಗಳ ಕಿಡಿಗರೆವ ಬಿಡು ಗ | ಣ್ಣಾಲಿಗಳ ಒಲಿದುಪ್ಪರಿಸಿ ಮುಪ್ಪುರಿಯ ಹುಬ್ಬುಗಳ ||
ಸುಯ್ಲುಗಳ ಕಾರ್ಬೊಗೆಯ ಮಸ್ತಕದ | ಮಾಲೆ ಗಿಡಗಳ ಬಾಡೆಗಳ ರಣ | ಧೂಳಿ
ಯುಪ್ಪರದ ಸಮುಭಟರೊದಗಿದರು ಸರಿಸದಲಿ |೨೦|| ತೆಗೆವ ಲಟ್ಟುವ ತಡೆವ ತವಕಿಸಿ |
ಹೊಗುವ ಹೊಮ್ಮುವ ಹೊಳೆವ ನೆಡದಲಿ | ಮಿಗುವ ನೂಕುವ ಬಲದ ಲೊಯ್ಯಾರದಲಿ
ಬಿನ್ನಣದ || ಬಗೆಯ ಬಲು ಬವರಿಗರು ಮೇಲಣ | ಜಗದ ಜನ ಹಾರೈಸಿ ತಲೆ ದೂ |
ಗು ಗಳೊಳಿರ ಲಿದ್ದೆಸೆಯ ಬಲ ಮೆರೆದುದು ಮಹಾ ಹವವ |೨೧|| ಹರಿದ ವೈದೊಗ
ಲುಗಳ ಸೀಸಕ | ಮುರಿದೊಗೆವ ನೆತ್ತರಿನ ನೆತ್ತಿಯ | ಮರಿವೆಗಳ ಪಡಿತಳಿಸು ವೆಚ್ಚ
ರಿಕೆಗಳ ವಿಶ್ರಮದ || ಉರುಬಿನು ಸುವಳ್ಳಿಗಳ ಮಿಗೆತೂ | ಹಿರಿವ ರಕ್ತದ ರಣದ
ಸಾಟಕ | ದರಿಕೆ ಕಾರರು ತಾವ್ರುಡಿಯ ಲೊದಗಿದರು ಸಮರದಲಿ |೨೨|| ವೀರ ಕೇಳ್ಳೈ
ಕುಶನೆ ಬಳಿಕ ಪ | ಚಾರಿಸುತ ಹೊಯ್ದನು ವಿಭೀಷಣ | ವೀರನನು ಮಿತ್ರಘ್ನ ಶರ
ಧಾರಾ ಪ್ರಣಾದದಲಿ || ಓರೆ ಯಿಂದಣ ದೀಡೆ ರಘುಕುಲ | ವೀರ ಶರಣೆನು ತೆರಗಿವನು
ಕೋ | ಟೀರವನು ಶತಕೋಟಿ ಶಿಖರವ ನೆರಗು ವಂದದಲಿ |೨೩|| ಘಾಯವದ ನವ
ಬಗೆಯ ದಬುಜ ದ | ಳಾಯು ತಾಕ್ಷನ ಕಿಂಕರನ ಮೇ | ಲ್ವಾಯಿ ದೆರಗಿದ ಸುರವ ನದ
ನಣ ದೀತ ನಾ ಖಳನ || ಕಾಯ ಕಂಪಿತ ಕಂಥರನು ವಿ | ಡಾಯಿ ಯಿಂ ದಪ್ಪಳಿಸ
ಲವ ರೌ | ದ್ರಾಯ ಮಾಸಿತನಾಗಿ ಹೊಯ್ದನು ಕಲಿ ವಿಭೀಷಣನ |೨೪|| ಎಲವೊ
ಸೀಸೀಗಸುರ ರಾಯನ | ತೊಲಗಿ ಬದುಕಲು ಬಂದೆಲಾ ಕ | ಟ್ಟಲದು ನಿನ್ನಯ
ಭಾಗ್ಯ ತಂಮುದು ದೈವಗತಿಯೆಂದ || ನೆಲಕೆ ನಿನ್ನ ಕಾವ | ಗ್ಗಳೆಯ ರಕಟೆಲ್ಲೆನುತ
ಮುಂದಕೆ | ಸಿಲುಕಿ ಹೊಯ್ದನು ಗಗನ ಘುಮ್ಮಿಡೆ ಕಲಿ ವಿಭೀಷಣನ |೨೫|| ಕಾವ
ಕರುಣಿಯು ಕಾಣೆಲಾ ಕಡು | ಜೀವ ಗೆಟ್ಟವೆ ನಿನಗೆ ಧಟ ನಿ | ರ್ದೈವರೇ ನಿಮ್ಮಂತೆ
ಸಾವೆನು ತರಿದ ನಾಯುಧವ || ಆ ವಿಬುಧ ವಿಪ್ರವನ ಹೊಯ್ಲ | ನೋವ ಲೆಕ್ಕಿಸ
ದೆರಗಿದನು ಘನ | ರಾವದಲಿ ರಘುನಾಥ ವಿಜಯ ಯೆನುತಲಸುರೇಂದ್ರ ||೨೬||
ಘಾಯವೇ ಕಜ್ಜರಿಯ ನಳುಕಿಸಿ | ದಾಯುಧವ ದಾಯುಧವೆ ರಣದಲಿ | ನೋಯಿಸಿದ
ಭುಜ ಭುಜವೆ ಮಗುಳಿಂಗ ದರಿ ಪಟುಭಟನೆ || ಆಯತವ ನೋಡೆನ್ನೊಳೆನು ತಸ |
ಹಾಯ ಬಲ ನೆರಗಿದನು ಜಲಧಿ ವಿ | ಡಾಯುಸಕೆ ತುಳುಕಾಡೆ ಮಸ್ತಕವನು ವಿಭೀಷ
ಣನ ||೨೭|| ಉಡಿದು ಬಿದ್ದುದೊ ಮೇರು ಮಸ್ತಕ | ಪೂಡಪಿಗೆನೆ ಕಳವಳಗಯುಲಿ ಧಡ
ಧಡಿಸಿ ಬಿದ್ದನು ಹೋ ಯೆನುತ ಖಳ ರೆದ್ದು ಕುಣಿದಾಡೆ || ಮುಡುಹ ಹೊಯ್ದು ಬ್ಬರಿಸಿ
ಬೊಬ್ಬಿರು | ಸಡಗರಿಸಿ ಮಿತ್ರಘ್ನ ಮುಂದಕೆ | ನಡೆದು ನುಗಿದನು ರಾಮಕಟಕದ

ರಾಯ ಸುಭಟರಿಗೆ ॥೨೮॥ ಬನ್ನಿ ನೈನೀವ್ ಗಟ್ಟಿ ಜಿಟ್ಟಿದ । ಚನ್ನಿಗರು ಕಲು ಮಾರನ ನೆನ್ನಿಯು । ಬೆನ್ನಿನಲಿ ಬಿಸುಟೇಳಿ ಬಿಲ್ಲುಗಳವರು ಬಾಣಗಳ ॥ ಬಿನ್ನಣವ ತೋರೇಳಿ ಸಾವಿಗೆ । ಸನ್ನಹಿತರಾಗೇಳಿ ಯೆನುತು । ತ್ಪನ್ನ ಬಲ ಖಳ ನರಸಿದನು ಸಂಗರಕೆ ಸಮಬಲರ ॥ ೨೯ ॥ ಅಕಟ ಮೋಸದೊಳಿನ್ನ ನಂಬಿದ । ಭಕುತನನು ರಣಕಿಕ್ಕಿ ಕಡು ಹೇಸಿಕೆಯ ಹೊತ್ತೆನೆ ಲೋಕದಲಿ ನಗುವಂತೆ ನಿಖಿಳ ಜನ ॥ ಪ್ರಕಟಿಸಿತೆ ದುಷ್ಕೀರ್ತಿ ಯೆಂದ । ವ್ಯಕುತ ಚಿಂತಾ ಭಾರದಿಂದಂ । ಬಕ ತಟಾಕವ ತೂಬೆ ನುಗಿದೆಬ್ಬಿಸಿದ ನಂಬುಗಳ ॥ ೩೦ ॥ ತುಡುಕಿದನು ಸೌಮಿತ್ರಿ ಬಾಣವ । ನೊಡನೆ ನೀಲಾಂಗದರು ಮುಷ್ಟಿಯು । ಝಡಿದು ನಿಂದರು ಸಂದಣಿಸಿದರು ಜೇಹ ಭಟನಿಕರ ॥ ಕಡುಗಲಿಯೆ ಕುಶ ಕೇಳ್ವಿಭೀಷಣ । ಹಿಡಿದುದೇ ನಳಿಗೊಂಬೆ ಕರುಣದ । ಕಡಲು ನೆಗಹಿತು ಭಕ್ತನನು ನಿಜ ಭಕ್ತ ವತ್ಸಲನ ॥ ೩೧ ॥ ಚೇತರಿಸಿದುವು ಕರಣ ವಿಶ್ವ ವಿ । ಚೇತನನ ನೆನಹಿನಲಿ ಲಯು ಶಿಖಿ । ಕೇತನವೊ ಲೊತದೆದ್ದ ನವನಿಯು ನರಸು ತತಿಭಟನ ॥ ಪ್ರೀತು ಮರ್ಝರೀ ಭಾವುರೀ ರಣ । ಕೌತುಕದ ಸರಿ ಲೇಸೆನುತ ಸುರ । ಜಾತ ವಬ್ಬರಿಸಿದುದು ಮೇಘ ಸಮುದ್ರ ಘೋಷದಲಿ ॥೩೨॥ ಏನೆಲವೊ ಮಿತ್ರಘ್ನ ಜಯು ಸು । ಮ್ಮಾನವಾಯ್ತೆಂದುಬ್ಬಿ ಕರೆದೆ ಯೆ । ಲಾ ನರೇಂದ್ರನಕಟ ನೆನಹಿಂಗೆ ನಿಲುಕದನ ॥ ಭಾನು ಬಿಂಬವ ನುಗಿವ ಗಡ ಮೊದ । ಲೇನ ಬಗುಳಿದೆ ಹೊಯ್ಲು ಲಸುವನು । ಹಾನಿ ಮಾಡದ ಭಟನು ಭಟನಲ್ಲೆಂದೆಲಾ ಯೆಂದ ॥೩೩॥ ಆದಡಿದಿಕೋ ನಿನ್ನ ನುಡಿ ನಮ । ಗಾದರಿಸು ಲೇಸಾಗಿ ನಿನ್ನವ । ರೈದೆ ನೋಡಲಿ ಹೊಸ ಪಚಾರಣೆ ಬೇರೆ ನಮಗಿಲ್ಲ ॥ ಕೈದುಕೋ ಕಲಿಯಾಗು ಕೈ ನೆರ । ದಾದ ಕಲಿಗಳ ಕರೆದುಕೋ ಮೇ । ಲಾದ ಸಮರ ಪ್ರೌಢಿಯೇನದ ಬೇಗ ಮಾಡೆಯೆಂದ ॥ ಇದಕೊ ನಿನ್ನನು ಗೊಂಬ ವೈಷ್ಣವ । ಗದೆ ಗದಾಭ್ಯಾಸದಲಿ ಬಲ್ಲಡೆ । ತೆಗೆದುಕೋ ಕೈಗುಂದದಿರು ನೀನಿನ್ನ ಸಾಹಸವ ॥ ಇದು ಕಣಾ ದೂಷಣ ವಿರೋಧಿಯ । ಪದದ ಮೆಚ್ಚಿನ ಘಾಯವಿದ ನೀ । ನೊದೆದ ಡಸ್ತ್ರತ್ಯಾಗವೆನುತೆರಗಿದನು ರಕ್ಕಸನ ॥ ೩೪ ॥ ಅಚ್ಚರಿಯ ನೇಸೆಂಬೆನೈ ಬಿಡೆ । ಬಿಚ್ಚಿ ದೊಟ್ಟಿದ ಗದೆಯು ನೊಳ ಬಿ । ದ್ದುಚ್ಚಿ ತಸುವನು ನೆತ್ತಿಯಲಿ ಮಿತ್ರಘ್ನ ರಾಕ್ಷಸನ ॥ ಮುಚ್ಚಿ ಬೈಬಿಟ್ಟಂತೆ ಹೆಣವನು । ಕಚ್ಚಿ ತಿಂದವು ಭೂತ ನಭದಿಂ । ದಚ್ಚಮಲ್ಲಿಗೆಯರಳ ಸುರಿದರು ಶರಣನಂಗದಲಿ ॥ ೩೫ ॥ ಮಹಾ ವಿಭೀಷಣ ಮುಝು ಗದಾಸ್ತ್ರದ । ಕೋವಿದನಲೇ ಲೇಸು ಮರ ರಾ । ಜೀವನಯನನ ಗರುಡಿಯಾಶ್ರಮವುಂಟು ನಿನಗೆನುತ ॥ ಪಾವಮಾನಿ ಸುಷೇಣ ಜಾಂಬವ । ದೇವ ಸುಗ್ರೀವಾದಿ ಸುಭಟರು । ಸಾವಧಾನದ ಹೊಗಳಿಕೆಯ ಲಪ್ಪಿದರು ಹರುಷದಲಿ ॥೩೬॥ ಹರುಷ ಪುಲಕವ ಹರಹಿನಲಿ ನಿಟಿ । ಶರಣನನು ವೈದಡಹಿ ತೊರವೆಯು । ಪುರವರಾಧೀಶ್ವರನು ಶಿಬಿರಕೆ ತಿರುಗಿದನು ಬಳಿಕ ॥ ಧುರದ ಸೋಲದ ದುಗುಡದಲಿ ಕ । ರ್ಬುರ ಪತಾಕಿನಿ ಪುರವ ಹೊಕ್ಕುದು । ತರಣಿ ಮಂಡಲ ವರೆದುಗೊಂಡುದು ಪಶ್ಚಿಮಾಚಲನ ॥

ಹದಿನಾಲ್ಕನೆಯ ಸಂಧಿ ಸಮಾಪ್ತಂ,

ಹದಿನೈದನೆಯ ಸಂಧಿ.

ಸೂಚನೆ|| ವೀರ ವಿಜಯ ಭುಜಪ್ರತಾಪ ನು | ದಾರ ಬಲವೈರಿ ಜಿತ ಘನ | ಘೋರ
ಸರ್ಪಾಸ್ತ್ರದಲಿ ಗೆಲಿದನು ಸಕಲ ಕಪಿಬಲವ ||

ಪದ್ಯ|| ಕೇಳಿದ್ಯ ಯೆಲೆ ರಾಜಸುತ ಸಂ | ಸ್ಥೂಲ ಸಮರದ ಜಯದ ಜೋಕೆಯು | ಮೇಲು ಗಾಳಗ ನಿಮ್ಮವರಿ ಗಾಯ್ತಂದಿನಾಜಿಯಲಿ || ಏಳು ಸ್ವೈರ್ಬುದ ಕೀಶ ಬಲ ವನು | ರಾಳಿಯನು ಸೇರಿದುದು ಕಾಲನ | ಪಾಳಿಯಕೆ ಸಾರಿತ್ತು ಸ್ವೈರ್ಬುದವೈದು ರಿಪುಗಳಲಿ || ತೆಗೆದ ವೆರಡಂಕಗಳು ತೊಲಗಿದ | ಹಗಲ ನೀಕ್ಷಿಸುತಿವರು ಬಲು ಮು | ತ್ತಿಗೆಯ ನಿಕ್ಕಿದ ರಾ ಮಹಾ ದುರ್ಗಕೆ ರಜನಿಯಲಿ || ಜಗತಿ ಜರಿದುದು ರಣದ ಹೆಣವ | ಟ್ಟಿಗಳ ಭಾರಣೆ ಗಖಿಳ ಭೂತಾ | ಳಿಗಳು ಬೊಬ್ಬಿರಿದಾಡುತಿರ್ದುದು ಕೂಡೆ ರಣದೊಳಗೆ ||೨|| ಕೊಟ್ಟ ಬಂದೆನು ಭಾಷೆಯನು ಹಿ | ಮ್ಮೆಟ್ಟಿದುದು ಗೆಲವೆನಗೆ ರಣ ಗಂ | ಗಟ್ಟ ತರಿಗಳಿ ಗಾವ ಮೋರೆಯೊಳಸುರ ವಲ್ಲಭನ || ಪಟ್ಟಣವ ತಾ ಹೊಗುವೆನೆನು ತಲೆ | ತುಟ್ಟಿಸಿದ ಹರುಷದಲಿ ಸುರಪನ | ಕಟ್ಟಿ ತಂದವ ಕಲಿಯು ಕದನಕೆ ಮಾಡಿದನು ಮನವ ||೩|| ದಿವವಳಿಯ ಲೊಡ್ಡಿದನು ಮಾಯಾ | ಜವನಿಕೆಯ ಜೋಡಣೆಯ ಕಲ್ಪದ | ಭುವನ ಗರ್ವಿತ ಗಾಢತರ ಘನಘಟೆಯ ತಾಳಿಕೆಯ || ರವಿ ಸಹಸ್ರ ಮಯೂಖ ದಿರಿತಕೆ | ತವಿಸಿದಂತೆ ತಮಿಸ್ರಯನು ರಾ | ಘವ ಪತಾಕಿನಿ ಪಾಡುಗೆಡೆ ನಿಜ ಪೌರುಷಾಂಗವಲಿ || ೪ || ಹೊಳಕಿದುದು ಬಳಿಕಿಂದ್ರಜಿತುವಿನ | ಚಳಕ ಚಮತ್ಕೃತಿ ರಥವು ಗಗನ | ಸ್ಥಳದ ರುಚಿ ರುಚಿರ ಪ್ರಕಾಶದ ವಖಿಳ ದೆಸೆಗಳಲಿ || ಖಳನ ಬೊಬ್ಬೆಯ ಸಿಡಿಲು ಸುಳಿದುದು | ಬಲಿ ಮುಖರ ಬಲದೊಳಗೆ ಬಲುರವ | ವಳುಕಿಸಿತು ಬಲವಂತ ಸುಗ್ರೀವಾದಿ ನಾಯಕರ ||೫|| ಎಲೆಲೆ ಕವಿದುದು ಖಳರು ಕವಿಯಲು| ಕೊಲೆಗೆ ಹೊಯ್ದರೋ ಪಾಳಿಯುವ ನೆನು | ತಳವಿಯಲಿ ಬಲ ನಾಯಕರು ತುಡುಕಿದರು ಗುಪ್ತರವ || ವಳಯ ವಳಯದ ಪೆಟ್ಟಿಯದ ಲೊ | ಬ್ಬುಳಿಯ ಲಬ್ಬರಿಸಿದರು ಕೋಳಾ | ಹಳಿಕೆಯಲಿ ಹರಿದಾಡಿದರು ಬೆದಕುತ ನಿಶಾಚರನ ||೬|| ಅರಿದನಾ ಹರಿಶರಣ ನಭ್ರದ | ನಿರಿಸಿ ನಬ್ಬರ ವಿಂದ್ರಜಿತುವಿನ | ಮರೆಯ ಮಾಯಾಹವವಿದೆಂಬುದ ತನ್ನ ಮನದೊಳಗೆ || ಬಿರಿಸಿನವನೀ ರಾತ್ರಿಯಲಿ ಬಲ | ಮುರಿಯ ದಾನದೆನುತ್ತಲವ ಮನ | ಮರುಕದಲಿ ಮಾರ್ತಾಂಡ ತನಯನ ಬಳಿಗೆ ನಡೆತಂದ ||೭|| ಇರಿಸು ನೀಲಾಂಗದರ ನವನೀ | ಶ್ವರನ ಸುಮ್ಮಾನಕೆ ಸುಷೇಣನ | ನಿರಿಸು ವೇಲಾಪ್ಯಕೆ ಗಜಸುತನಿರಲಿ ಬೆಂಬಲಕೆ || ಧುರಕೆ ಸೇರಿಸು ಮಿಕ್ಕ ನಳ ಕೇ | ಸರಿ ಗವಾಕ್ಷ ದ್ವಿವಿದ ದಧಿಮುಖ | ಶರಭ ಶತಬಳಿ ಹನುಮ ಮೊದಲಾದವರ ನೀನೆಂದ ||೮|| ಮೊಳಗುವವನೀ ಗಿಂದ್ರಜಿತು ಕ | ತ್ತಲೆಯ ಕಡಹಿಂಗವನರಥ ವೆ | ಗ್ಗಳವು ಕಗ್ಗೊಲಿಯಲಿ ಸಮರ್ಥನು ಕಲಿಯು ಕಾಳಗಕೆ || ತಿಳುಹು ನೀನೀ ಹದನ ರಘುಕುಲ | ತಿಲಕರಿಗೆ ಬೇಗೆನುತ ತನ್ನಯ | ಬಳಿಯ ನಾಲ್ವರು ಮಂತ್ರಿಗಳು ಮಂತ್ರಿಸಿದ ರಂಬಿನಲಿ || ೯ || ಸಿಲುಕಿತೊಂದೆಸೆಯಲಿ ಮಹಾರಥ | ಮಲುಹು ಮತ್ತೊಂದೆಸೆಯ ಲಕ್ಷ್ಮಾ | ವಳಿಯ ಹಲ್ಲಣೆ ಹೊಳಕಿದುದು ಹೊಯ್ದೆಳ್ವ ಕೈ ಹೊಡೆಯ || ಬಿಲು ರಥಕ ಮತ್ತೊಂದು ದೆಸೆಯಲಿ | ಮೊಳಗಿದುದು ನಭ ಪೆಸಿತಸಿತರಲಿ | ಗಲಭೆಯೆದ್ದುದು ಗಾಢ ಬಲ ಬಲವೈರಿಜಿತು

ಖಳನ ||೧೦|| ಮಾಯೆಯಾ ಹವದವನ ವನ ಸಮು | ದಾಯತದ ಪರಿ ಬೇರೆ ಯಮ ವ|
ಜ್ರಾಯುಧರ ಸೋಲಿಸಿದನೀ ಪರಿಯಲಿ ಕದನದಲಿ || ರಾಯ ರಾಘವಸೂನು ಕೇಳವ |
ನಾಯಕದ ಸರಳೋಟಗಳ ರಾ | ದ್ರಾಯ ಮಾನಿತ ರಣವ ಹೊಗಳುವಡರಿದು ತನ
ಗೆಂದ ||೧೧|| ಆಡಿದವು ಬಳಿಕಭ್ರದಲಿ ಬಲು | ಕೋಡುಗಲ್ಗಳು ಬೀಸಿಕೆಯ ಲೋ |
ಲಾಡಿದವು ಕೈದುದಯ ಹೆಮ್ಮರ ನಿಕರ ಕದನದಲಿ || ಕೂಡೆ ಗವಸಣಿಸಿತು ಸರಿಸವ |
ಲೀಡಿರಿಂದ ಕಪಿಸೇನೆ ಸರಳಿನ | ಗೂಡಿನಲಿ ಹೊಗಿಸಿದನು ಹೊಡಕಿ ಸುರೇಂದ್ರಜಿತು
ಭಟರ || ೧೨ || ಲವನೆ ಕೇಳೈ ಭಾರಿಸಿತು ಬಲು | ಬವರ ಪವನರಿ ಗಾಯವಡದರು |
ಗವಯ ಗಜ ನಳ ನೀಲ ಮೈಂದ ದ್ವಿವಿದ ಮೊದಲಾದ || ಪ್ಲವಗ ಪತಿಗಳು ಬಂದು
ಬಿದ್ದುದು | ಪವನ ತನಯನ ಮೇಲೆ ರಣ ರಾ | ಘವ ಮಹೀಪತಿಗರುಹಿದನು ಸುಗ್ರೀವ
ನೀ ಹದನ ||೧೩|| ಅರಸಿದನು ಹನುಮಂತ ನಾ ಸರ | ಳಿರಿತವನು ಸೈರಿಸುತ ಗಗನದ
ಭೊರೆತನಕ ಮೈ ದೋರದವ ಮಾಯಾ ವಿಲಾಸದಲಿ|| ಮರೆಸಿ ಮಗುಳೈತಂದು ರಾಮನ|
ನರಸಿ ಸುರಿದನು ಸರಳ ಸೋನೆಯ | ನುರುಬಿದನು ಬಿಲುದುಡುಕಿ ಲಕ್ಷ್ಮಣನಾ ನಿಶಾ
ಚರನ ||೧೪|| ಏನು ವಿಗಿಲೋ ಸ್ವಾಮಿಯೆಡೆಗವ | ಧಾನ ಕಪಿಭಟರೊಗೆ ಮರುತನ |
ಸೂನುವಿನ ಸುಮ್ಮಾನದೆಸುಗೆಯ ಸುರಪಜಿತು ಖಳನ || ಆನಿಭೃತ ಕೋದಂಡ ಚಂಡ|
ಧ್ವಾನ ವಿಡಿ ದಿಳಿತಂದು ಕೊಯ್ದನು | ವೈನತೇಯನ ಘನತೆಯನು ಬಿಗಿದಡರಿದನು
ಬಳಿಕ ||೧೫|| ಹೊಕ್ಕ ಮೈಯ್ಯಲಿ ಕೈಗೆ ಕಾಲಿಗೆ | ಸಿಕ್ಕಿ ಸೆಳೆದವು ಪಾಶಪಾಶದ | ಸಿಕ್ಕಿ
ನಲಿ ಶಿಡಿಮಿಡಿಯ ಲಾಡೊತ್ತುಗಳಲನಿಲಸುತ || ರಕ್ಕಸಾಂತಕ ನೆಡೆಗೆ ಚಿಂತಿಸು |
ತಕ್ಕರಿನ ಹಂಬಲಿನಲಿರೆ ಕೈ | ಯಿಕ್ಕಿದನು ಕಾಳಗಕೆ ಕಲಿ ರಾವಣಿ ಕಕ್ಕುಜನ || ೧೬ ||
ಬಳಿಕ ಬಲುಹಾಯ್ತಿಬ್ಬರಿಗೆ ಬಲು | ಗಲಹ ಕತ್ತಲೆ ವೆಳಗುಗಳ ಸರ | ಳಳುಕಿಸಿದವಂ
ಬರವ ನಳ್ಳಿರಿದವು ದಿಲಾವಣೆಯ || ಹಲವು ಮಾತೇನಿವರ ರಣ ದ | ಗ್ಗಳದ ಸೌರಂ
ಭಾತಿಶಯ ದಶ | ದಳಕೆ ಪಡಿಯನು ಕಾಣೆ ಪೂರ್ವದ ವೀರರೊಳಗೆಂದ ||೧೭|| ಕಣೆಯ
ಕರೆದನು ಬಳಿಕ ರಾವಣ | ಹಣೆಯ ಸರಿಸದ ಲರಿಭಟನ ಮಾ | ರ್ಗಣದ ಪಥ ವಿಡಿವೇ
ರಿಸಿದನಾ ರಾಮ ನಂಬುಗಳ || ಕಣೆ ಕಣೆಯದ ಗಣಿಗಳೊಡೆದು ದುಡು | ಗಣ ವಸರ
ಗೊಳಿಸಿದವು ಬರಿ ಯು | ಬ್ಬಣದ ವಂಭಟ ನಶ್ವಸಾರಥಿ ರಥ ಪತಾಕೆಗಳ ||೧೮|| ಕರದ
ನವ ನಂಬುಗಳ ನಂಬರ | ಪ್ರೊರಲ ವಿವನೆಸುವಸ್ತ್ರನಿಕರವ | ತರಿದು ಹತ್ತಿದವೀ ಖರಾ
ರಿಯ ಕರಿಣ ಶರಜಾಲ || ಅರಚುತಿರ್ದ್ದದಜಾಂಡ ವಿಬ್ಬರ | ಗುರ-ಬಿನೆಸುಗೆಯ ಹತ್ತಿ
ಗೆಗೆ ಬಲು | ಬಿರಿತ ನಿಬ್ಬರ ಜೊಬ್ಬೆಗೇನೆಂಬೆನು ಮಹಾದ್ಭುತವ || ೧೯ || ಎರು ವಿಳಿ
ದಿಬ್ಬರ ಕಣಾಳಿಯ | ತೋರಿಕೆಯ ಕಿಡಿ ತಮದ ರಾಶಿಯ | ತೂರಿದವು ತೀರ್ಲೈಸಿದವು
ನಾನಾ ದಿಗಂತದಲಿ | ತೋರಿದವು ಬಳಿಕೀ ಖರಾರಿಯ | ತೋರು ಗಣೆ ರಿಪುಭಟರ
ಚಾಪದ | ಬೀಡಿಕೆಯ ಸರಿಸದಲಿ ರಥ ಚೀತ್ಕೃತಿಯ ವಳಯದಲಿ || ೨೦ || ಒಡಲೊಳ
ದ್ದವು ತೇಜಿಗಳ ತೇ | ರಡಿ ಮಗುಚ ಲೆತ್ತಿದವು ಬಳಿಯಂ | ಬೊಡೆಮ ಹಾಯ್ದವು ನೆತ್ತಿ
ಯಲಿ ನಿರ್ಜರ ಕುಲಾಂತಕನ || ಉಡಿದು ಬಿದ್ದವು ಸಿಂಧ ಸೀಗುರ | ಸಿಡಕು ಸತ್ತಿಗೆ
ಸುತ್ತುವಳಿಯಡ | ಲೆಡಹಿ ಕಪಿತನ ಸಂಭ್ರಮವಂತರಿಕ್ಷದಲಿ ||೨೧|| ತೂಗಿದನು ಮಸ್ತ
ಕವ ನಾ ಶತ | ಯಾಗಜಿತು ಮಾ ಮಾತ್ರಿಯಂಬಕ | ಗಾಗದೀ ಕೋದಂಡ ಚಂಡ

ಪ್ರೌಢಿ ಪರಿಕಿಸಲು ॥ ನಾಗ ನಿರ್ಜರ ನಿಶಿಚರರೊಳೀ । ಗೊಗುವ ಗಾಢಾಸ್ತ್ರಿಲ್ಲ ನಿಣ
ಶರ । ಯೋಗವನು ನಾ ಕಾಣೆ ನೆಂದರುಗಡಿಗೆ ಬೆರಗಾದ॥೨೨॥ ಇನಿತು ಬಲುಹಿಲ್ಲದೊಡೆ
ಸಮರಾ । ವನಿಯೊಳಸ್ತ್ರಮಿಸುವನೆ ಸುಮನೋ । ಜನವ ಬಗೆಯುವೆ ವೀರ ಖರದೂಷಣ
ಭಟಾದಿಗಳು ॥ ಮನುಜನಲ್ಲೀ ರಾಮನೆಂಬೀ ನೆನಹು ಮನದಲಿ ತೋರುತಿದೆ ಯೆಂ ।
ದನಿಮಿಷಾಂತಕ ನೋಡಿದನು ಮಾಯಾ ಮಹಾಶರವ ॥ ೨೩ ॥ ತೇರಿದವು ನಭದಲಿ
ಶಿಖಾಳಿಗ । ಳೇರಿದವು ಜೀಮೂತತತಿ ಸಲೆ । ಚೀರಿದವು ಚಂಚಲತೆಯಲಿ ಸಿಡಿಲಿಳಿಗೆ
ಕೆಂಡಗಳ ॥ ಕಾರಿಡಂಬರ ಹೊಗೆಯು ಹೊದರನು । ಮಿರಿತಂಬರ ಭುವನ ಬೆದರಲು ।
ಚೀರಿತಂಬರ ಚೀರಿತಂಬರವಖಿಳ ಭಯರಸವ ॥೨೪॥ ಸುರಿವ ದೊಮ್ಮೊಮ್ಮರುಣಜಲ
ಹ । ಬ್ಬುರಿ ಛಡಾಳಿಸಿ ಹಾಯ್ವ ದದ್ರಿಗ । ಳುರುವವು ಸಿಡಿಲೆರಗುವವು ತುರುಗುವವು
ತಿಮಿರಚಯ ॥ ಶರಧಿ ಜರಿಯಲು ಕಾರಮಳೆ ಭೋ । ರ್ಗರೆದು ಸುರಿದವು ಕಾಳರಕ್ಕಸ।
ನೆರವಿ ನೆರವಳಿಕೆಗಳ ನಿಲುವುದು ಮಾಯೆಯಲಿ ಖಳನ ॥ ೨೫ ॥ ಬಿದ್ದುದಗಣಿತ ಸೇನೆ
ಜಾಂಬವ । ನಿದ್ದ ನಂಬಿನ ಗೂಡಿನಲಿ ಹ । ಲ್ಲುದಿದ್ವಿಕೆಯ ಹನುಮಂತ ನಘಮರ್ಷಣ
ಪ್ರತಾಪದಲಿ ॥ ಇದ್ದನಹಿತನ ಕಾಣದಿನಸುತ । ನದ್ದನಡಿಗ ವಿಷಾದ ವಾರ್ಧಿಯೊ ।
ಳಿದ್ದ ಸುಭಟರ ಶೌರ್ಯವೇನಾಯ್ತೆರಿಯೆ ತಾನೆಂದ ॥೨೬॥ ಬವರ ಬಲಿದುದು ಬಳಿಕ ರಣ
ಭೈ । ರವ ರಘುಕ್ಷಿತಿಪತಿಗೆ ರಿಪುವಿನ । ವಿವಿಧ ಮಾಯಾ ಪ್ರೌಢಿಯನು ಮಾಯಾವಿನಿ
ರ್ಮಿತನು ॥ ತವಿಸಿ ತೋಮರ ಶತಕದಲಿ ಶಾಂ । ಭವವ ನೆಚ್ಚನು ರಾವಣಿಯ ಜವ ।
ದವರು ಸುಳಿದರು ನಯನ ವೀಥಿಯುಲಾ ನಿಶಾಚರನ ॥ ೨೭ ॥ ತುರುಗಣೆ ಗಿಂತಾಯ್ತು
ತಾ ಮೈ । ದೋರಿ ಕಾದಿದಡಸು ಶರೀರದಿ । ಜಾರದಿಹವೆಯೆನುತ ಬಾಣವ್ಯಥೆಯ
ಬಾಧನೆಗೆ ॥ ಆರಡಾಯ್ದನು ಹೊದೆಯೊಳಸ್ತ್ರವ । ನೇರಿಸಿದನಾ ಬಿಲುದಿರುವಿನಲಿ ।
ಮೂರು ಕಣ್ಣ ಮಹೇಶ ದತ್ತ ಮಹೋರಗಾಹ್ವಯವ ॥ ೨೮ ॥ ಕುಲಗಳೆಂಟರ ರಾಜ
ಸರ್ಪ । ವಳಿಗಳೊದಗಿದವಂಬಿನಲಿ ಬಳಿ । ಸಲಿಸಿದವು ಪಾತಾಳಲೋಕದ ರೌದ್ರ ಫಣಿ
ನಿಕರ ॥ ಘುಸುಘುಸಿಪ ನಿಟ್ಟುಸುರಿನಲಿ ದಿಗು । ವಳಿಯು ಮೆರೆ ದುಶ್ವಾಸ ಲಹರಿಯ ।
ಲಳಿಯ ಗರಳದ ಹೊಗೆಯ ಹೊಯ್ಲಲಿ ಹೊರಳಿದುದು ಸೇನೆ ॥೨೯॥ ಚೂರಿಸುವ ನಿಡು
ನಾಲಿಗೆಯ ಪೂ । ತ್ಕಾರ ದವ ದಕ್ಷಿಗಳ ಲುಬ್ಬುವ । ತೋರ ಗಿಡಿಗಳ ದಾಡೆಗಳ ವಿಷ
ದುರಿಯ ಝಾಡಿಗಳ ॥ ಘೋರತರ ಪೆಡೆವಣೆ ಯೆನಿಸಿತಾ ಕ । ಠೋರ ರಶ್ಮಿಯ ರೌದ್ರ
ಸರ್ಪ । ಕಾರ ಶರ ವಂಚಿಸಿತು ಗಾರುಡ ಭುವನ ರಂಜಕನ ॥ ೩೦ ॥ ಸರಳ ಹಿಳುಕಿನ
ಜೆರಳ ಬಿಗುಹಿನ । ತಿರುವಿ ನಾಕರ್ಣಾಂತ ಧೈರ್ಯೋ । ತ್ಕರದ ಮದದುಬ್ಬರದ ಘನ
ಮಹಿಮಾತಿರೇಕದಲಿ ॥ ಹರನ ವರವ್ರಂಟೆಂದು ಹರಿಮ್ನನ । ಭರದ ಬಲುಹಿನ ಲಮರ
ಕುಲ ಸಂ । ಹರಣ ಶಕ್ತ್ರಾರಾತಿ ಯಸುರಾರಾತಿಗಿಂತೆಂದ ॥೩೧॥ ಸ್ಮರಿಸು ಗಾರುಡಮಂತ್ರ
ಬೀಜಾ । ಕ್ಷರವ ತಿಳಿಯೆ ಸುಪರ್ಣ ಮಣಿ ಪಂ । ಜರವ ಹೊಗು ಘೂ ನಾಗಮಣಿ ಮುದ್ರಿ
ಕೆಯ ಬೆರಳಿನಲಿ ॥ ಧರಿಸು ಘೋರ ಭುಜಂಗಮಾಸ್ತ್ರವ । ದರಿಕೆಯುಳ್ಳರೆ ಯೆಂದು
ಸರ್ಪ । ಸ್ಮರಣ ಶಕುನನ ಸರಿಸಕೆಬ್ಬಿಸಿದನು ಮಹಾಶರವ ॥೩೨॥ ಅರಿಯವಾ ಖಳ
ನೆಚ್ಚಡೆಂಜೀ ನರಿಯಾದೇ ಮುದ್ರಿಸಿತು ಮಾಯೆಯ । ಮರೆಯ ಮನುಜಾಕೃತಿಯ
ಮಗನೊಲಿಯ ವಿವರ್ಜಿತನ॥ ಅರುಹಿ ನರನಾಟಕದ ಶ್ರೀಮನ । ನೊರಗಿಸಿತು ನೋಯಿಸಡಿ

ಬೆದರಿಸಿ । ಬರಿಯ ಭೀತಿಯಲಿನಸುತಾದಿ ಸಮಸ್ತ ಭಟನಿಕರ ॥ ೩೩ ॥ ಜಾರಿ ಮರಿ ದಟ್ಟಿದವು ಹಾವುಗ । ಳಾ ರಣಾಂಗಣ ಮಧ್ಯದಾಹವ । ವೀರ ವರ್ಗವ ಲಿಳೆಯೊಳೊರಗಿಸಿ ತೂವಿಕೆಯ ವಿಷವ ॥ ಮಾರುತನ ಧಾಳಿಯಲಿ ಬಳಿಕಿಂ । ದ್ವಾರಿ ಬೊಬ್ಬಿರಿ ದಬ್ಬರಿಸಿ ತ । ನ್ನೂರಿ ಗಭಿಮುಖನಾದ ಸೋದರುನ ವಾದ್ಯಘೋಷದಲಿ ॥ ॥೩೪॥

ಹದಿನೈದನೆಯ ಸಂಧಿ ಸಮಾಪ್ತಂ.

ಹದಿನಾರನೆಯ ಸಂಧಿ.

ಸೂಚನೆ॥ ಭುಜಗಪಾಶವ ರಾಮ ರಾಮಾ । ನುಜರ ಸರಲೀಲಾ ಚರಿತ್ರದ । ಭಜನೆಯಿಂ ದೆಬ್ಬಿಸಿದ ನಮರರು ಹೊಗಳೆ ವಿಹಗೇಂದ್ರ ॥

ಪದ್ಯ॥ ತಿರುಗಿದನು ಬಳಿಕಿಂದ್ರಜಿತು ಜಯ । ಸಿರಿಯ ಸುಮ್ಮಾನದಲಿ ಲಂಕಾ । ಪುರಿಗೆ ಸಮರೋತ್ಸಾಹ ವಾರ್ತೆಯ ಚರರು ಹರಿತಂದು ॥ ಸುರ ವಿರೋಧಿ ದಶಾನನಂಗ । ಚ್ಚರಿಸಲವರಿವಿರಿ ಗಂಗ ಚಿತ್ರವ । ಹೊರಿಸಿ ನಡೆತಂದಿತ್ತ ನೋಲಗವನು ಸರಾಗದಲಿ ॥ ೧ ॥ ಗುಡಿಯ ಕಟ್ಟಿಸು ಜೇಯ ಜಯದು । ಗ್ಗಡದ ಭೇರಿಯ ಹೊಯ್ಸು ಬಿರುದಿನ । ತೊಡರ ಸಿಕ್ಕಂಜದೆ ವಿರೋಧಿಗೆ ವಿಷನು ಲೋಚನನ ॥ ತಡವಿದೇಕಿನ್ನೆಂದು ತನುಜನ । ನುಡಿಗೆ ನಲಿದಿದಿರೆದ್ದು ನಗೆಮೊಗ । ವಡಸಿ ನಿಂದಪ್ಪಿದನು ಬಯಲ ಮನೋನುರಾಗದಲಿ ॥೨॥ ಸುಳಿದವಾರತಿ ಕೆಂಪುಗೂಳಿನ । ಬಳುವೆಗಳ ಸೊಗಸಿನಲಿ ವಂದಿಗ । ಳುಲುಹು ತೀವಿದುದು ನಭದ ಲೊಸಗೆಯ ಹರೆಯ ಥರಥರವ ॥ ತಲೆ ಕೆಳಗಮಾಡಿತು ಗುಡಿಗಳು । ತಳಿತವಗಲಕೆ ನಗರದೊಳಗರೆ । ಗಳಿಗೆಯುತ್ಸವ ವಚ್ಚರಿಯ ಬೀರಿತು ದಶಾಸ್ಯಂಗೆ ॥೩॥ ತಡನರಿಸಿದನು ಪುಳಕ ದುಬ್ಬಿನ । ಗುಡಿಯ ರೋಮದ ಹರುಷ ನಯನದ । ಬಿಡುವಸಿಯ ಕಾಮುಕನು ಕೊಂಡಾಡದನು ನಂದನನ ॥ ತೊಡರ ರನ್ನವ ತೆಗೆದು ಮಕ್ಕಳ । ಮಣಿಯೆ ಬಾ ಯೆನ್ನಾನೆ ಕೋಯೆಂ । ದೊಡನೊಡನೆ ಹರುಷಿಸುತಲಂಕರಿಸಿದನು ರಾವಣಿಯ ॥೪॥ ರಣವ ಸೊಡ್ಡಿದ ಪರಿಯ ರಿಪು ಕಪಿ । ಗಣದ ಕದನದ ಸಿರಿಯ ಪರಿವಾ । ರ್ಗಣದ ಮಹಿಮೆಯ ಝಾಡಣೆಯ ಜಯರಣದ ಜೋಡಣೆಯ ॥ ಕ್ಷಣ ರುಚಿಯ ಸಂಚಾರದುಬ್ಬಿನ । ಬಣಿತೆಯಲಿ ಬಿಸ್ತರಿಸಿ ಗರ್ವದ । ತಣಿರಿನಲಿ ನಿಜ ನಿಳಯ ಕಿಂದ್ರಾರಾತಿ ಬೀಳ್ಕೊಂಡ ॥೫॥ ಕರೆಸಿದನು ಬಳಿಕ ಸುರಪತಿ ಕಡು । ಹರುಷದಲಿ ಜಾನಕಿಯ ಕಾವಲ । ಸರಮೆಯನು ಸಂಗರದ ಜಯ ವಿಸ್ತರವ ನಾ ಸತಿಗೆ ॥ ಒರೆದು ಕೊಂಡೊಯ್ದು ವನಿಜೆಗೆ ತ । ನ್ನರಸನನು ತೋರಿಸಿ ಮನೋ ನಿ । ರ್ಭಯದ ಸಂಶಯವನು ನಿವಾರಿಸಿಕೊಂಡು ಬಾ ಯೆಂದ ॥೬॥ ಬೀಳು ಕೊಂಡಳು ಸರಮೆ ಸರಗೊಂ । ಡಾಲಿಗಳ ಬಿಡುವನೆ ಮಲಾಮಾ । ಯಾ ಲತಾಂಗಿಯ ಬಳಿಗೆ ಬಂದುಸುರಿದಳು ರಾವಣನ ॥ ಹೇಳಿಕೆಯ ಮಾತುಗಳ ನಾ ಸತಿ । ಕೇಳು ತಾಕ್ರಂದನದಿ ವಳ್ಳಿಯ । ಕೋಲು ಗೊಂಡಂ ತೊರಗಿದಳು ಬಸವಳಿದು ಮೂರ್ಛೆಯಲಿ ॥೭॥ ತಾಯೆ ಸೈರಿಸು ತಮ್ಮನವರು ಬಲು । ಮಾಯಕಾರರು ಹುಸಿಯೋ ನಿಜವೋ । ನೋಯ ಬೇಡನ್ನ ಬರ ನಡೆ ನೋಡವೆವು ನಾವೆನುತ ॥ ವಾಯು ಪಥದಲಿ ಪುಷ್ಪಕದಿ ನಬು । ಜಾಯತಾಕ್ಷಿಯ

ತಂದಳಾ ರಘು | ರಾಯನಿದ್ದ ರಣಾಂಗಣಕೆ ರವಿವಂಶ ಕೇಳೆಂದ ||೮|| ವಿಷದ ಲಹರಿಯ ಲಳಿಯಲುಸುರಿನ | ಹಸರಿಕೆಯ ಜಾರಿಸುವ ಜಿಹ್ವೆ | ಪ್ರಸರದುರು ಪೂತ್ಕಾರ ಲಹಿ ಪಂಜರದ ಮಧ್ಯದಲಿ || ಎಸೆದವೈ ಲವ ಕೇಳ ಪೂರ್ವದ | ವಿಷಧರೇಂದ್ರ ಫಣಾಳಿಯಲಿ ಬಾ | ರಿಸಿದ ನಿದ್ರಾ ಮುದ್ರಿತನವೊಲು ರಾಮ ರಘುನಾಥ ||೯|| ಕಂಡಳೈ ಕಮಲಾಕ್ಷಿ ಕಳವೇ | ತಂಡ ಕಂಠೀರವನ ಮಾಯಾ | ಖಂಡಿತನ ಮಹಿಮಾತಿಶಯನ ಮಹತ್ವ ಪರಿಗತನ || ಕಂಡು ಕಂಬನಿ ದುರುಗಲಲಿ ಹಾ | ಚಂಡಬಲ ಹಾ ರಾಮ ಹಾ ಮಾ | ರ್ತಾಂಡ ಕುಲ ಸಂಭೂತ ಹಾ ಯೆಂದೊರಲಿದಳು ಸೀತೆ ||೧೦|| ಮರುಳೆ ನೇತ್ರಣ ಮಂಡಲವು ತನು | ಜ ರೆಡೆನೇತ್ರ ವಿಲಾಸ ದರ್ಪಣ | ದರುಶನವು ಜಾತ್ಯಂಧ ನೇತ್ರಲು ಪತಿಯುಪೇಕ್ಷಿತೆಗೆ || ಪರಮ ಸುವ್ರತನೇತ್ರ ಪಾಪಿಗೆ | ಪುರುಷ ಭಾಗ್ಯತೆ ಸುಲಭವೇ ಹಾ | ನರಶಿರೋಮಣಿ ಹಾ ಯೆನುತ ಹಮ್ಮೈಸಿದಳು ಸೀತೆ ||೧೧|| ರೋಗಿಗೆಲ್ಲಿ ದಕ್ಕುವುದು ಸುಧೆ ನಿ | ರ್ಭಾಗಧೇಯನ ಮುಂದೆ ಸಿರಿ ತಾ | ನಾಗಿ ಸುಳಿವಳೆ ಜಾತಿ ಮೂರ್ಖರ ಜಾಡ್ಯ ಹೃದಯದಲಿ || ಯೋಗ ನೆಲೆಗೊಂಬುದೆ ಸರಮೆ ಕೇ | ಳೌ ಗುರುದ್ರೋಹಂಗೆ ಕೈವ | ಲ್ಯಾಗಮವು ಘಟಿಸುವುದೇ ಹಾ ಯೆಂದೊರಲಿದಳು ಸೀತೆ ||೧೨|| ಧರೆಯೊಳುದಿಸಿದ ಲಕ್ಷ್ಮಿ ಯೆಂದೇ | ಕರೆವರೆನ್ನ ನೆನ್ನ ಗಂಡನ | ನರಚರಿತ್ರದ ವಿಷ್ಣುವೆಂಬನು ಜನಕನನವರತ || ಹಿರಿಯ ರಾಡುವ ರಧಿಕ ಲಕ್ಷ್ಮಣ | ಭರತ ಯೆಂದೆನ್ನುವ ಮಾತವು | ಸುರಪ ಚಾಪದ ಜಾಳಿ ಯಾಯ್ತೇಯೆಂದ ಳಿಂದುಮುಖಿ ||೧೩|| ಬದುಕಲಾರೆನು ಸರಮೆ ಸಹಗಮ | ನದಲಿ ಸೂರ್ಯಾನ್ವಯನ ಕೈ ಕೂ | ಟದಲಿ ಕಾಂಬೆನು ನಮ್ಮ ಪೂರ್ವದ ನೃಪ ಪುರಂಧ್ರಿಯರ || ತುದಿಯ ಮಾತಿದು ಕಳುಹು ತನ್ನನು | ಹೃದಯದಲಿ ಬೇರೊಂದನುವ ನೆಣೆ | ಸದೆ ಹೃದಯದಲಿ ಕೃಪೆಯಿಂದಲಿ ಕಲುಕೇದ ಲಾಪದಕೆ ||೧೪|| ಕೊಂದವನೆ ಪರರಲ್ಲಿ ಗಂಡನ | ಕೊಂದವಳು ತಾ ನೀಗ ಸಾವೆ | ನ್ನಿಂದ ಸಿದ್ಧಿಸಿ ದಬುಜ ಭವ ಕುಲ ಸಾರ್ವಭೌಮಂಗೆ || ಚಂದವೇ ಜೀವಿಪುದು ತನಗಿ | ನ್ನಂದವೇ ಧರಣಿಯಲಿ ಬದುಕುವ | ದೆಂದು ಕೈಗಳ ಮುಗಿದು ನುಡಿದಳು ಸರಮೆ ಗಬುಜಾಕ್ಷಿ ||೧೫|| ಯುವತಿಯ ರೋಷಾತ್ಯಂತ ಮೀರಿದ | ಧವಳಿಕೆ ಯಲಾ ನೀನು ಸಿರಿ ರಾ | ಘವನ ಮರಣವ ನೀನು ನಿರ್ಧರಿಸುವ ನಿತಂಬಿನಿಯೆ || ಎನಗೆ ನಿನ್ನೀಮಾತು ಕರ್ಣಕೆ | ಸವಿಗಳಾಗಿರವೇನು ಸಾಕಿ | ನ್ನು ವಿನಯ ಪ್ರತಿಬಂಧ ವಚನಗಳೆಂದಳಾ ಸರಮೆ ||೧೬|| ಸೈರಿ ಸೊಂದೇ ಕ್ಷಣ ವಿಭೀಷಣ | ವೀರ ಗಮನ ದೊಳರಸ ರಾಘವ | ನಾರು ಭಟಿಯನು ಲಕ್ಷ್ಮಣಾಂಕನ ಹೂಂ ಕೃತ ಧ್ವನಿಯ | ತೋರಿಸುವೆನೆಂದಾ ಸರಮೆನಯ | ಸಾರದಲಿ ನಳಿನಾಕ್ಷಿಯನು ನೃಪ | ನಾರಿಯನು ನಂಬಿಸುತ ತಂದಳು ಸೀಮೆಗಾರಣದ ||೧೭|| ಲವನೆ ಕೇಳೈ ಬಳಿಕ ರಘುಪುಂ | ಗವನ ನರಸಿದ ರಿಪುಳು ರವಿಸಂ | ಭವ ಸಮೀರಜ ನೀಲ ನಳ ಜಾಂಬವ ಗವಾದಿಗಳು || ಕವಿವ ಕಂಗಳ ಜಲದ ಜಾಡ್ಯದ | ಜವಸಿಕೆಯ ಭಯ ಮುಖದ ಚಿತ್ತದ | ಭವ ಗಡಣೆಯಲಿ ತಂದು ಕಂಡರು ಕಪಟ ಮನುಜನ ||೧೮|| ಗರಳ ದುಬ್ಬರದ ಪೂ | ತ್ಕರದ ಚೂರಿಸು ಜಿಹ್ವೆಗಳ ನಿ | ರ್ಭರದ ಫಣಿಕುಲ ಮಧ್ಯದಲಿ ಫಣಿತಲ್ಪ ನಂದದಲಿ || ಅರಸನಿರೆ ಸಂಶಯವ ನದಲಿ | ಪುರರ ವೈದ್ಯನ ನಂದನನ ಸರ | ಸಿರುಹ ಬಾಂಧವ ಸೂನು ಕರೆ ದಿಂತೆಂದ ನಾತಂಗೆ ||೧೯||

ಬಾ ಸುಷೇಣ ಕಪೀಂದ್ರ ನೀ ನ । ಭ್ಯಾಸಿಸಿದಾ ವೈದ್ಯಶಾಸ್ತ್ರ ದೊ । ಳಾ ಸುರೇಂದ್ರನ ಮನೆಯ ಧನ್ವಂತರಿಯ ಪುತ್ರನಲ ॥ ದಾಶರಥಿಯನು ನೋಡು ನನಗೇ । ನಾಶೆಯುಂಟೆ ಹೇಳೆನಲು ಸಂ । ಭಾಷಣೆಗೆ ನಾ ತಾವ ಕಾಣೆನು ಹೇಳಲೇನೆಂದ ॥೨೦॥ ಐಸೆ ಮತ್ತೇನೆಂದು ಬೆರಗಿನ । ಭಾಷಣದ ಕದಪುಗಳ ಕೈಗಳ । ಭೂಷಣದ ಲೀಲಾ ವಿಭೀಷಣ ದೇವ ನಡೆತಂದ ॥ ಪ್ರೈಸರಿಸ ದೀರಣಕೆ ಮನದ ವಿ । ಲಾಸವಾವುದು ವೀರ ವಿಜಯು ಸು । ವಾಸಿಸಿಯ ಸೌಭಾಗ್ಯ ದುನ್ನತಿ ಗೇನು ಮತಿ ಯೆಂದ ।೨೧॥ ಕೊಟ್ಟ ಭಾಷೆಯ ಮರೆದು ತನ್ನನು । ಬಿಟ್ಟು ವೈಕುಂಠಕೆ ಪೋಪರೆ । ಹುಟ್ಟು ಹೊಂದೇ ನಿನಗೆ ನರ ನಾಟಕದಿ ನೀನಸುವ ॥ ಬಿಟ್ಟರೆ ನ್ನಾರಡೆಗೆ ಸೇರುವೆ । ನಟ್ಟಡವಿಯಲಿ ಹೊಲಬು ತಪ್ಪಿದ । ಬಟ್ಟೆ ಯಾದುದು ದೇವ ಲಕ್ಷ್ಮೀಕಾಂತ ನುಡಿಯೆಂದ ॥೨೨॥ ಎಲೆ ವಿಭೀಷಣ ಕೇಳು ರಾಮನ । ಛಲವೆ ತನ್ನಯ ಛಲವು ರಾಮನ । ಕಲಹ ವೆನ್ನಯ ಕಲಹ ರಾಮನ ವಚನ ಮದ್ವಚನ ॥ ಕೊಳುಗುಳ ದೊಳು ತವಾಗ್ರಜನ ದಿಗು । ಬಲಿಯ ನಿತ್ತು ತದೀಯ ರಾಜ್ಯಕೆ । ಸಿಲಿಸುವೆನು ನಿನ್ನುವನು ನೋಡೆಂ ದುಬ್ಬಿದನು ರವಿಜ ॥೨೩॥ ಅರಸ ರಾಘವ ನಾವ ಲೋಕದೊ । ಳಿರಲಿ ತಹೆ ನಡ್ಡೈಸಿ ನಿಂ ದು । ಬ್ಬರದ ಮಹಿಮೆಯ ದೇವತೆಗ ಳಾರಾವ ಡವರುಗಳ ॥ ಶಿರವ ಚೆಂಡಾಡುವೆನು ಸೀತೆಯ । ನರಹುವೆನು ರಾಘವನ ನೊ ಳಾರೆಂ । ದರಿ ಯೆಲಾ ಸುಗ್ರೀವ ದೇವನ ನೆಂದು ಗರ್ಜಿಸಿದ ।೨೪॥ ಹಾ ಯೆನುತ ಹನುಮಂತ ಬೊಬ್ಬೆಯ । ಬಾಯ ಬಿರುದನಿ ತೋರಿದನು ತಾ । ರೇಯ ನುಬ್ಬರಿ ದಬ್ಬರಿಸಿದನು ಹೊಯ್ದು ಭುಜ ಯುಗವ ॥ ವಾಯುಸುತ ಸಖ ಮುಖ್ಯ ಸೇನಾ । ನಾಯಕರು ಹುರಿಗಟ್ಟ ರಕ್ಕಸ । ರಾಯ ದುರ್ಗದ ಲಗ್ಗೆ ಕೊಡರಿಸಿದರು ಸರೋಷದಲಿ ॥೨೫॥ ಇನಿತು ಕೋಲಾಹಲವ ಕಂಡಜ । ತನುಜ ತಾ ಸಿದು ಪಂಥ ವಲ್ಲೆಂ । ದಿನಜ ನುದ್ರೇಕ ವನುನಯ ಮುಖದಿಂದ ಸಂತೈಸಿ ॥ ಅನಿಮಿಷರ ವೈದ್ಯನ ಕುಮಾರನ । ಮನದ ಬಗೆಯಂತರವ ನಾತನ । ನೆನಹ ನರಿವಡುಪಾಯವಿದಕೇನೆಂದು ಬೆಸಗೊಂಡ ॥ ೨೬ ॥ ಆ ದಿವಿಜ ವೈದ್ಯನ ಕುಮಾರಕ । ನಾ ದಯಾಂಬುಧಿ ಗೆಂದ ನಾಲುಕು । ಭೇದ ದೌಷಧ ವುಂಟು ಕೇಳುತ್ತರದ ಭಾಗದಲಿ ॥ ಆ ದಿವಿಜ ಗಿರಿಯಿಂದ ಮುಂದಣ । ಹಾದಿಯಲಿ ಹರಿದಶ್ವ ನಾಮದ । ಮೇದಿನೀ ಧವದಮಲ ಚಂದ್ರದ್ರೋಣಿ ಗಳಲೆಂದ ॥೨೭॥ ಆ ಗಿರಿಯ ಮಹ ದೌಷಧ ಗಳನು । ಬೇಗ ತಂದರೆ ರಾವಣನ ನೀ । ನಾಗಿ ಕೊಂದವರರಿ ನಿಶಾಚರ ಪಡೆಯ ತಿಂದವರು ॥ ಈಗಲೀ ಲಂಕೆಯ ವಿಭೀಷಣ । ಗಾಗು ಮಾಡಿಪದವರು ಮೇ ಲೇ । ಸಾಗಿ ನಭ್ಯುದಯ ಪ್ರಪಂಚಕೆ ಕರ್ತರಹ ರೆಂದ ॥೨೮॥ ಆಗಲಿದು ತಪ್ಪಲ್ಲ ನ ಮ್ಮನ । ರಾಗಕಿದು ಪಥವಹುದೆನುತ ಶತ । ಯಾಗ ವಜ್ರೆ ಜಯಂತರನು ಲಂಕಾ ಭಯಂಕರನ ॥ ಸಾಗರೋಲ್ಲಂಘನನ ನೆನಲು । ದ್ಯೋಗ ದಭಿಸಂಧಿಯಲಿ ದಿವದಿಂ । ದಾ ಗಗನ ಮಾರ್ಗದಲಿ ವೈದೋರಿದನು ವಿಹಗೇಂದ್ರ ॥೨೯॥ ಜಲದ ಗರಿ ಚುಕ್ಕಾಮ ಮುಖ ಮಂ । ಡಲ ಯಜು ರ್ವರ್ಮಾಂಗ ನಿರುಪಮ । ವಿಲಸ ದುಪ ನಿಷ ದಮಲ ಗಾತ್ರ ಪವಿತ್ರ ನಂಬರವ ॥ ಬೆಳಗು ತೀಳದನು ಪೂರ್ಣ ಶಶಿ ಮಂ । ಡಲದ ಸೊಂಪಿನ ಲವಮ ಹಾಲಾ । ಹಲ ಮಹೋಗ್ರ ವ್ಯಾಳ ಪಾಶವಿನಾಶ ರೋಷದಲಿ ॥೩೦॥ ಆ ಸುಪರ್ಣನ ಗರಿಯ ಗಾಳಿಗೆ । ಸೂಸಿದವು

ಸಪ್ತಾಂಬುನಿಧಿ ಕೈ । ಲಾಸ ಮಂದರ ಮೇರು ವಿಂಧ್ಯಾದ್ರಿ ಗಳು ಮುಗ್ಗಿದವು ॥ ವಾಸು ಕಿಯು ತಕ್ಷಕ ನನಂತನ । ವೈಸಿರಿಯು ನಡುಗಿದವು ಬಣಗು ಬಿ । ಲೇಶಯಂಗಳ ಕಾಣೆ ನಿದಿರಿನ ಉರಗ ಮರ್ದನನ ॥೩೧॥ ಗರಿಯ ಗಾಳಿಯು ಗವಲಿಗಸುಗಳ । ತೋಿದು ಸತ್ತವು ಕೆಲವು ನೆಲವನು । ಕೊರೆದು ಹೊಕ್ಕವು ಕೆಲವು ಕೆಲ ವಡಗಿದವು ಜಲಧಿಯಲಿ ॥ ಮುರಿವಡೆದು ಕೆಲ ವೋಡಿದವು ಕೆಲ । ವರಿಸಿದವು ಹುತ್ತುಗಳ ದೃಷ್ಟಿಯು । ಹರುಬಿನಲಿ ಸಿಕ್ಕಿದವು ಸೀಕರಿ ಗಳೆದ ವಗಲದಲಿ ॥೩೨॥ ತಾಯಿ ಗೋಸುಗ ಹಿಂದೆ ನಿರ್ಜರ । ರಾಯ ನನು ಗೆಲಿ ದಮೃತ ಕುಲಶವ । ವಾಯು ಪಥದಲಿ ತರಲು ತುಳುಕಿದ ಬಿಂದು ಪಕ್ಕ ದಲಿ ॥ ಸ್ಥಾಯಿಯಾಗಿ ದರ್ಾಸುಧಾಸ । ಕಾಯಿದವು ಕಪಿ ಬಲವ ರಘುಕುಲ । ರಾಯ ನಸುನಗು ತೊಯ್ಯ ನರಳಿಚಿದನು ವಿಲೋಚನವ ॥೩೩॥ ನರ ಚರಿತ್ರದ ಭೂಮಿ ಸಚರಾ । ಚರದ ಚೈತನ್ಯಾತ್ಮ ಜಯ ವಿ । ಸ್ತರಣ ವಿಶ್ವ ವ್ಯಾಪ್ತ ಜಯ ಮಹದಾದಿ ಭೂತಾತ್ಮ ॥ ನಿರುಪಮಿತ ಜಯಜಯ ಜಗತ್ರಯ । ಕರಣ ಕಾರಣಕರ್ತ ಜಯ ನಿ । ರ್ಮರಣ ಜಯ ಯೆನುತಿರ್ದ ರಮರರು ನೊಸಲ ಕೈಗಳಲಿ ॥೩೪॥ ಹಾ ಯೆನುತ ಬೊಬ್ಬಿ ರಿದು ಕಪಿ ಸಮು । ದಾಯ ಸೌರಂಭಾತಿ ಶಯದ ವಿ । ಡಾಯಿಯಲಿ ನಲಿದಾಡಿ ದುಬ್ಬಿರಿ ದಬುಧಿ ಘೋಷದಲಿ ॥ ರಾಯ ಕಪಿ ಸುಗ್ರೀವ ಜಾಂಬವ । ವಾಯುಸುತ ಪೌಲಸ್ತ್ಯ ಸಹ ಕಪಿ । ನಾಯಕರು ನೈಯಿಕ್ಕಿದರು ರಘುಕುಲ ಶಿರೋಮಣಿಗೆ ॥೩೫॥ ಕರೆದರಾರು ಸುಪರ್ಣನನು ಶಂ । ಕರ ಸರೋಜಭವಾದ್ಯರುಗಳುಪ । ಚರಣೆ ತಾ ನೇನುಂಟ ಹೇಳೈ ಕುಶನೆ ಕೌಶಲವ ॥ ಹರಿ ಕಣಾ ರಘುನಾಥ ಸರ್ವೇ । ಶ್ವರ ಕಣಾ ಸುಜ್ಞಾನಮಯ ಭಾ । ಸುರಕರ ಶ್ರೀಮೂರ್ತಿ ಯೆಂದರಿ ರಾಘವೇಶ್ವರನ ॥೩೬॥ ದೃಗು ನಿರೀಕ್ಷೆಯಲಾ ಸುಪ ರ್ಣನ । ಮೊಗವ ನೀಕ್ಷಿಸಿ ಮುಗುಳು ನಗೆಯಲಿ । ನಗುತ ನಿನ್ನಿಂದಾದುದೆಮಗೆ ಪುನರ್ಭ ವಾಭ್ಯುದಯ ॥ ಜಗದೊಳೆನಿತು ಮಹಾತ್ಮನೋ ಯೆಂ । ದಗಣಿತದ ಹರುಷದಲಿ ವಿನ ತೆಯ । ಮಗನನುಪಚರಿಸಿದನು ಮಧುರ ವಚೋ ವಿಲಾಸದಲಿ ॥ ೩೭ ॥ ಪರಮ ಪರ ಭವನ ಭವ ಘನ ಗೋ । ಚರನ ಗೋಚರ ಸುಗುಣ ನಿರ್ಗುಣ । ಚರನ ಚರ ಸಂಸ್ಥೂಲ ಸೂಕ್ಷ್ಮೋದಯನಸಂಖ್ಯಾತ ॥ ಕ್ಷರ ಮಹಾಕ್ಷರ ಮಿತನಮಿತ ನೀ । ನರಸ ನಿನ್ನ ಮಹತ್ವದಭ್ಯಂ । ತರವ ನರಿವವರಾರು ಯೆನುತ ಖಗೇಂದ್ರ ಕೈಮುಗಿದ ॥೩೮॥ ಅರಿಯ ದವರೊಡನೈಸೆ ಮಾಯಾ । ಮರೆಯ ಜವನಿಕೆ ಜೀಯ ನಾಚಿಸ । ದುರುವ ಭೃತ್ಯನ ಬೀಳಕೊಡು ಸಾಕೆನುತ ಕೈಮುಗಿಯೆ ॥ ಅರಿಯದವರಂದದಲಿ ಕೃಪೆ ಕಂ । ದೆರೆಯ ಮೊಗ ಸನ್ನೆಯಲಿ ಗಮನದ । ಗರಿಯ ಗರುಡನ ಬೀಳುಕೊಟ್ಟನು ಪರಮ ಹರುಷದಲಿ ॥ ನಗುತ ರಾಮನ ನರಚರಿತ್ರದ । ಮುಗುದ ತನಕೆ ನಮೋಯೆನುತ ಪದ । ಯುಗಳ ಕಾನತನಾಗಿ ಹಾಯ್ದನು ನಭಕೆ ವಿಹಗೇಂದ್ರ ॥ ಯುಗದ ಸೀಮೆಯ ಶರಧಿಯುಬ್ಬಿನ । ಬಿಗುಹನವೊಲುಬ್ಬೆದ್ದು ಮಸಗಿತು । ವಿಗಡ ವಾನರ ವಾರ್ಧಿ ಕೋಲಾಹಲದ ರಭಸ ದಲಿ ॥೪೦॥ ಅದಕೋ ಸಿನ್ನಯ ರಮಣ ನಮುಳಾ । ಭ್ಯುದಯ ಮುತ್ಸಹ ಸಿನದ ವಾಚಿಸು । ಲದಕೋ ಭರತಾನುಜನ ಭಾರಿಯ ಬಿಲ್ಲ ಬೊಬ್ಬಾಟ । ಕದತುಳಿಗ ಕಸಿಸೈಸಿಕದ ಬಲು । ಗದನ ದಧಿನವವೀರ ರಸ ವಿ । ಕ್ರಾದಗುತವೆ ನೋಡೆನುತ ಸೀತೆಗೆ ತೋರಿದಳು ಸರಮೆ ॥೪೧॥ ಅರಸಿ ಕೇಳೈ ಹೇಳೆನೇ ನಿ । ನ್ನರಸ ಹದುಳಿಗನೆಂದು ಪುಷ್ಪಕ । ಧೂಸ

ದಿದು ವೈಧವ್ಯ ಲಕ್ಷಣ ದಂಗನಾ ಜನವ ॥ ನಿರುತವಿದು ಮೇಲಬುಧಿ ಹಿವಕರ । ಮರುತ ತಾರಾಗ್ರಹವ ಹರುಷತೆ । ಹರದುದಿಲ್ಲದರಿಂದ ಕಾಣಿಸತರಸ ನಭ್ಯುದಯ॥೪೨॥ ಎಂದು ತೋರಿಸಿ ತಿರುಗಿಸಿದ ಳಾ । ನಂದಮಿಗೆ ಪುಷ್ಪಕವ ನಿದಿಕೋ । ಯೆಂದು ಮಂತ್ರಿತು ಹರಿಕಟಿಸಿ ಹರಿಪತಿಯು ಸನ್ನೆಯಲಿ ॥ ಸಂದಣಿಸಿ ಗಿರಿ ಮರನ ಗರ್ಭರ । ದಿಂದ ಗಗನ ವಿಲಂಬಿತವ ಬಾ । ಲೇಂದುಧರ ಗಿರಿಧರನ ದುರ್ಗವನೀ ಕಪಿವ್ರಾತ ॥ ॥೪೩॥

ಹದಿನಾರನೆಯ ಸಂಧಿ ಸಮಾಪ್ತಂ.

ಹದಿನೇಳನೆಯ ಸಂಧಿ.

ಸೂಚನೆ॥ ಅಮರರಿಪು ಧೂಮ್ರಾಕ್ಷರಣ ನಿ । ರ್ಗಮ ಬಲಾನ್ವಿತ ವಜ್ರದಂಷ್ಟ್ರರ ।
ಸಮರದಲಿ ಗೆಲಿದರು ಸಮೀರಜ ವಾಲಿ ನಂದನರು ॥

ಪದ್ಯ॥ ಕೇಳಿದೈ ಕುಶಲವರು ಕಪಿಗಳ । ಕಾಳಗದ ಕಡು ರಂಜಿಸಿತು ದು । ವ್ವಾಳಿಯಲಿ ದುರ್ಜನ ಶಿರೋಮಂಡನವ ಪಟ್ಟಣವ ॥ ಕೇಳಿ ರಾವಣ ನಂಜಿ ಚರಿತೆಯ । ತಾಳಿ ತಮಿಯಂತ್ಯದಲಿ ನಡೆ ತಂ । ದೋಲಗವ ನಿತ್ತನು ಸಮಸ್ತ ನಿಶಾಟ ಗಣ ಸಹಿತ॥ ಕನಸ ಕಂಡೆನೊ ಸಮರ ತಾನುಸ । ಜನಿತ ಜಾಡ್ಯದ ಲಿಂದ್ರಜಿತು ರಾ । ಮನನು ನಾಗಾಸ್ತ್ರದಲಿ ಕೆಡಹಿದನೆಂದು ಸಭೆಯೊಳಗೆ ॥ ತೊನದುಕೊಂಡನು ತನ್ನ ಬಿರುದಿನ । ಬಿನುಗುನುಡಿಗಳ ಬಹಳ ಗರ್ವದ । ಘನತೆಯಲಿ ತಾನಾರು ರಣವಾರೆಂದ ನಸುರೇಂದ್ರ ॥ ೨ ॥ ಬರಲಿ ಕಮಲಜ ದತ್ತರಥ ಶಂ । ಕರ ಸುಧಾಕರ ಚಾಪ ಶರ ಹಿಮ । ಕಿರಣ ಹಾಸಾದ್ಯಖಿಳ ಶಸ್ತ್ರಗಳೆಂದು ದಶಕಂಠ ॥ ಧುರಕೆ ನಿಲುವುದ್ಯೋಗ ಮುಖದಲಿ । ನೆರೆಹುತಿರ್ದುದು ಬಲವ ನಿತ್ತಲು । ಗಿರಿತರುವ್ರಜ ಹಸ್ತದುರುಭಟ ಮಾರಿತಾಜೆಯಲಿ ॥ ೩ ॥ ಬೀಳುತಿರ್ದುವು ಗಿರಿಗಳಟ್ಟಳೆ । ಯಾಳುವೇರಿಯಮೇಲೆ ತೆನೆಗಳ । ಸಾಲ ಸರಿಸದ ಸಬಳನೆಗಹುತಿರ್ದುವೀ ಬಲವ ॥ ಹೂಳಿತಬುಧಿಯ ಭಟರು ಸಮರಾ । ಭೀಳಬಲ ರುಬ್ಬಟೆಯ ಧಾಳಾ । ಧೂಳಿ ಮುಸಗಿತು ಶಸ್ತ್ರ ಶೈಲಾವಳಿಯ ಸಮರದಲಿ ॥ ೪ ॥ ಏರುವುದು ಕಪಿಸೇನೆ ಸೇನೆಯ । ಜಾರು ಗೆಡುಹುವು ದಸುರಬಲ ರಣ । ವೇರಗಳ ರವ್ರಕುಳದ ರಕ್ತದ ರಾಶಿ ಜಲ ನಿಧಿಸು ॥ ಮಿರಿದುದು ಮಿಸಾರಿರಿದ ಬಲುಗೊಲೆ । ಗಾರ ರಂಭಟರುಬ್ಬಟೆಯ ಕೈ । ಸೂರೆ ಯಾದುದು ನಗರದಲಿ ರಾಕ್ಷಸ ವಧೂಜನದ ॥೫॥ ಕೆಡಹಿದರು ಕೋಟೆಗಳ ತೆನೆಗಳ । ರೊಡಬಡಿದ ರಟ್ಟಳೆಗಳ ನೂಕಿ । ತ್ತುಡುಕಿದರು ಕೆಡಹಿದರು ಕೈಸೂರದ ಶತಘ್ನಿಗಳು ॥ ಪಡಿಮುಖದ ರಕ್ಕಸರ ರಕ್ತದ । ಮಡುವಿನೊಳಗದ್ದಿದರು ಗಾವಳಿ । ಗುಡಿಯುರಿದು ಗುಮ್ಮದವು ಹುಯ್ಯಲು ರಾಕ್ಷಸೇಶ್ವರನ ॥೬॥ ಕೋಟೆ ಹೋದುದು ಜೀಯ ಜವನವ । ರಾಟವಾದುದು ನಮ್ಮ ಬಲದಲಿ । ಜೇಟವಿನ್ನಾರೊಡನೆ ಬರುತಿದೆ ಪ್ರತ್ಯ ಬಲುಕರಿಸಿ ॥ ನಾಟದುತ್ತರ ಬೇಗೆನಲು ಕಿಡಿ । ನಾಟಿದುದು ಕಂಗಳಲಿ ಕಾಲಕ । ರೋಟ ಮಾಲಾಧರನವೊಲು ಮುಳಿದೆದ್ದ ನಸುರೇಂದ್ರ ॥ ೭ ॥ ಎದ್ದ ರಕ್ಕಸರಾಯ ಸಿದಿರಿನ । ಲೆದ್ದ ಕಲಿ ಧೂಮ್ರಾಕ್ಷ ರಾಕ್ಷಸ । ನುದ್ದುರುಟು ಬಲ ವಜ್ರದಂಷ್ಟ್ರನು ನುಡಿದರಿಂತೆಂದು ॥ ಮದ್ದದೇಕೆಲೆ ಜೀಯ ಹಾವಿಗೆ । ಹದ್ದಿರಲು ನಿನ್ನರ

ಭಟರ ನಿಡು । ನಿದ್ರೆಗೈಸದಿರಸುರ ರಲ್ಲಿಂದೊಲವ ರುಬ್ಬಣವ ॥೮॥ ಆವ ಹಂಕಟಕದಲಿ
ಹರಹಿದ । ಹಾವಡಿಗರೇ ತಾವು ತವಕ್ಕೃಭಿ । ಭಾವನೆಯು ಬಹಳತಿ ವಿಚಿತ್ರವ ನೋಡು
ನೀನೆನುತ ॥ ರಾವಣನ ನುಬ್ಬಿಸಿದ ರಾಹವ । ಜೀವಮಾರಿಗಳಾ ನಿಶಾಟ ಮ । ಹಾ
ವಿಭುವ ಬೀಳ್ಕೊಂಡರಮರಾರಿಗಳು ಕಳವಳಿಸೆ ॥೯॥ ಕಲಕುವೆವು ಕಪಿವಾರಧಿಯು ಕೈ ।
ದೊಳಸಿ ದೊದಗಿದ ರವಿಸುತಾವಿಗ । ಳಿಲುವ ನೆಗ್ಗೊತ್ತುವೆವು ಹಿಡಿದೆಳ ತಹೆವು ಸನ್ನ
ವಲ ॥ ಮಲತರಾದರೆ ರಾಮಲಕ್ಷ್ಮಣ । ರಳವಿ ಮುರಿವೆವು ಜೀಯ ಮಾತಿದು । ಫಲಿಸ
ದಿರ್ದರೆ ಪತಿಕರಿಸಬೇಡೆಂದ ರಸುರಂಗೆ ॥೧೦॥ ಖಳ ಬಳಿಕಲವರಿಬ್ಬರಿಗೆ ಬ । ಟ್ಟಲಲಿ
ವೀಳಯವಿತ್ತು ಬೀಳ್ಕೊಡೆ । ಕಲಹಕನುವಾಗಿರ್ದ ಚಾತುರ್ಬಲದ ಗಡಣದಲಿ ॥ ಇಳಿದ
ರವರಾ ದುರ್ಗವನು ದಿಗು । ವಳಯ ಬೆಸಲಾದಂತೆ ಬೊಮ್ಮನ । ನಿಳಯ ನೀರಲಿ ನೆರೆದ
ನ್ತೊಲಾಯ್ತೆನನಿ ನಿರ್ಘೋಷ ॥ ೧೧ ॥ ಗಜವೊ ಕಲ್ಪಸ್ಥಾಯಿಯಹದಿ । ಗ್ಗಜವೊ
ಹಯವೋ ಹರಿಪನಯವಾ । ರಿಜ ಕರದ್ವಯ ನುರುತುರಂಗಮವೋ ಭಟಾವಳಿಯ ॥
ತ್ರಿಜಗದಳಿವಿನ ಯಮನ ಸಾಭಟ । ವ್ರಜವೊ ಹೊಗಳುವೆ ನೇನರುಂಹರಿ । ರುಜೆಗೆ ಸಂ
ದಳು ಧರಿಸಲಾರದೆ ವೈರಿವಾಹಿನಿಯು ॥ ೧೨ ॥ ಒದರಿದವು ರಣವಾದ್ಯಚಯವ । ಳ್ಳೆದೆ
ಗೊಳಲು ಬ್ರಹ್ಮಾಂಡವೀಶನ । ಹೃದಯ ಹಾತಕವಾದ ಹಮ್ಮವವೋಗೆ ಕಮಲಭವ ॥
ತಂದಿಗೆ ಸಪ್ತಸಮುದ್ರ, ಶಿರವನು । ಬಿದಿರೆ ಬರ್ಹಿರ್ಮುಖ ಮಹೀಧರ । ವದರೆ ಜಗ
ವೌತ್ಪಾತನಪಾವಜ ಲೋಕಪರಿಯಂತ ॥ ೧೩ ॥ ತೆಗೆದು ನಿಂದುದು ಸೇನೆ ದುರ್ಗವ ।
ತಗುಹ ಕಾಪಲಮಾಡಿ ತಡೆದರು । ನಗ ಮಹೀರುಹ ಹಸ್ತರಮರಧ್ವಸ್ತಸೈನಿಕವ ॥
ಜಗಳ ಗಂಟಿಕ್ಕಿದುದು ತಂದಿ ತಲೆಯೊ । ತ್ತುಗಳ ಶರನಿಧಿಯಂತೆ ತುಂಬಿತು । ಗಗನ
ನಿನಿಮಿಷವಲಸ್ತ್ರಶಸ್ತ್ರಚಲ ಮಹೀಜದಲಿ ॥೧೪॥ ಲವನೆ ಕೇಳ್ಕೆ ಮಾಘಶುದ್ಧದ । ನವಮಿ
ಯಲಿ ನಾಗಾಸ್ತ್ರದಲಿ ನಿ । ಮ್ಮವರು ಬಿಗಿವಡೆದಿದ್ದರಾ ದಿನದಿರುಳಿನಂತ್ಯದಲಿ ॥ ದಿವಸ
ಮುಖದಲಿ ದಶಮಿಯಲಿ ಬಲು । ಬವರತೊಡಗಿತು ಝಾವವೆರಡರ । ಹವಣಿನಲಿ ಹರಿ
ದಶ್ವ ತನುಜನಲಾಯ್ತು ಬವರ ॥೧೫॥ ಹೆಣನ ಬೆಟ್ಟದಮೇಲೆ ಬೆಟ್ಟಿಗ । ಳಣದ ವಂಬರ
ದಂದಿಗೆ ಬಹಳಾ । ರುಣ ಜಲಾಂಬುಧಿ ಬೆರಸಿದುದು ಲವಣಾಂಬು ರಾಶಿಯಲಿ ॥ ಎಣಿಕೆ
ಯಿಲ್ಲದೆ ತುಂಬಿದವು ಪ । ಟ್ಟಣ ಪುರಂದರ ಪದ್ಮಜಾದ್ಯರ । ಗಣಿಕೆಯರ ಹಡದಾಯ್ದ
ರಮರರ ಸಂಧಾನಿಯಲಿ ॥೧೬॥ ಪರಿಘ ಹತಿಯಲಿ ಪರಶುಗಾಯದ । ಲುರು ಗದಾದಂಡ
ಪ್ರಹಾರದ । ಉರುಳುತಿರ್ದುದು ಕಪಿ ಬಲೌಘನಿಯ ತದಲಿ ॥ ತರು ವಿತಾನ ವಿಘಾತಿ
ಯಲಿ ಹೊಡೆ ಮರುಳುತಿರ್ದರು ರಕ್ಕಸರು ನೆಲ । ನರಳುತಿರ್ದುದು ಹೊರಲು ನೆರೆ
ಯದೆ ಹೆಣನಹ ಸರಗಳ ॥೧೭॥ ಆತು ನಿಂದನು ಕಪಿಬಲಕೆ ಬಳಿ । ಕಾ ತಮಿಸ್ರಚರನು
ತರು ಚರ । ದೂತ ಧೂಳೀಪಟಹ ಪಟು ಧೂಮ್ರಾಕ್ಷ ಘರ್ಜಿಸುತ ॥ ಆತ ನಾತಂಗಿದಿರಿ
ನಲಿ ರಘು । ದೂತ ಸಮರೋದ್ಧೂತ ಲಂಕಾ । ವೀತಹೋತ್ರನು ರಣತ್ರಿಣೇತ್ರ
ಸುಪುತ್ರ ಮಾರುತನ ॥೧೮॥ ತುಡುಕಿದುದು ಮಾರುತಿಯ ನಾ ಬಲು । ಗಿಡಿಯ ಖಳನ
ಕಠೋರ ನಯನದ । ಕಿಡಿಯ ಹೊದರಿನ ಹೊಗೆಯ ಹೊರಳಿಹರಾದಿಗಳು ಬೆದರೆ ॥
ತಡೆದುದಾ ಬಹಳಾಗ್ನಿ ಕಣದು । ಗ್ಗಡದ ಪುರಿಯಾಕಾಶ ಶಿಖಿಯನ । ಕಡುಹಿ ನನಿಲ
ಕುಮಾರಕನ ನಿಟ್ಟುಸುರಿನಾಟೋಪ ॥೧೯॥ ಆಗಿವಡರಿಬಲ ವಸ್ತ್ರ ಶರಧಿಯ । ತೊಗಿಸಿ

ದನು ಧೂಮ್ರಾಕ್ಷ ನಕ್ಷಯ । ಹಗೆಯ ನಾ ಹನುಮಂತ ನುಬ್ಬರಿದೇಳ್ವವಾತಜನ॥ ಬಗೆಯ
ವಿಕ್ರಮಭಟನ ತೇರಿಗೆ । ಬಿಗಿದು ಚಿವ್ಮಿದನು ವರೂಥವ । ನಗಲಿ ತಮರ ವಿಮಾನ
ತತಿ ತೀವ್ರತೆಗೆ ಮಣಿರಥವ ॥೨೦॥ ತೇರು ನಭದೊಳಗಿರ್ದುದಾ ಖಳ । ವೀರನಿರ್ದನ
ಹಲಗೆ ಖಡ್ಗದ । ಭೈರವಾಕಾರದಲದಾವ ಶ್ರಮ ಚಮತ್ಕೃತಿಯೊ ॥ ವೀರ ಸುಗ್ರೀವಾದಿ
ಸುಭಟರ । ಜಾರಿವರಿದಟ್ಟಿದನು ಕೊಂದನು । ಕಾರ ಮುಗಿಲಬ್ಬರದ ಬೊಬ್ಬಿರಿತದಲಿ
ಕಪಿಬಲವ ॥೨೧॥ ರುಂಡ ಹೊರಳಿದುದಾ ಪ್ರಜಂಘನ । ಮುಂಡ ಬಿದ್ದುದು ದಧಿಮುಖನ
ದೋ । ರ್ದಂಡ ನೆಲಕುರುಳಿತು ವಿಜಂಘನ ವೀರ ದುರ್ಮುಖನ ॥ ದೊಂಡೆ ಗರುಳಾರಿ
ದವು ಪನಸನ । ತುಂಡುಗಳು ತೂರಿತು ಮರುಳ್ಗಳ । ತಂಡದಲಿ ತಂದೊಟ್ಟಿದನು
ಮುಕ್ತಾದ ನಾಯಕರ ॥ ೨೨ ॥ ತೋಳ ನರೆ ಗಾಯದಲಿ ನಿಂದನು । ನೀಲ ನಳ ಗಜ
ಗವಯ ರುಮನು । ಜ್ವಾಳುತನ ಕನಸಾಯ್ತು ಕೇಸರಿ ಗಂಧಮಾದನರ ॥ ಹೇಳದಿರು
ಹೆಸರೆನಿಸಿ ದಣ್ಮಗ । ಳೋಳಿ ಮುರಿದುದು ಹೊಕ್ಕನನಿಲಜ । ಹೇಳಲೇನದ ನೊರಸಿ
ದನು ಧೂಮ್ರಾಕ್ಷ ರಾಕ್ಷಸನ ॥೨೩॥ ಆರು ನಿಲಬಹು ದನಿಲಜನ ಘನ । ಘೋರ ಮುಷ್ಟಿ
ವಿಘಾತದಲಿ ಶತ । ಧಾರ ಶತ ಚೂರ್ಣವಹ ದಳಿದವರ ಪಾಡೇನು ॥ ವೀರ ಧೂಮ್ರಾ
ಕ್ಷಕನ ಘಾಲ ವಿ । ದಾರಿಸಿತು ಸಮುಸೀಳಿನಲಿ ಸುರ । ನಾರಿಯರು ನಗುದವನ ಕೊಂಡೊ
ಯ್ದರು ಸರಾಗದಲಿ ॥ ೨೪ ॥ ಜಾಗುರೇ ರಣ ಚಮತ್ಕಾರ ಸ । ರಾಗ ರಂಜಿತ ವೀರ
ಸಮರದ । ಯೋಗ ಸಾಹಸ ಮಲ್ಲವಾ ಮರ್ಝು ಭಾಪು ಹಾ ಯೆನುತ ॥ ಆ ಗಗನವಮಲ
ಪ್ರಕರ ಘನ । ಸಾಗರ ಧ್ವನಿಯಿಂದ ಕಂಪಿನ ಪೂಗಳಲಿ ಹೊಗಸಿದರು ಹರಿ ಸಿರಿ ಚರಣ
ಸೇವಕನ ॥೨೫॥ ತೆಗೆದುಕೊಂಡವು ಹೆಣನ ನಲ್ಲಿಯ । ವಿಗಡ ಭೂತವ್ರಾತಗ ಳಸುರ ।
ನಗರಿಗೈದಿದ ನನಿಲಜನ ಕೊಂಡಾಡು ತಭ್ರದಲಿ ॥ ಮಗನೆ ಕೇಳೈ ಕುಶನೆ ಬಲಕ್ಕೆ ।
ಮುಗುಚಿ ನಿಂದುದು ಮತ್ತೆ ಮರುತನ । ಮಗನ ಸರಿಸದ ಲರಸುಗಳ ಕಲಿ ವಜ್ರದಂಷ್ಟ್ರ
ಕನ ॥೨೬॥ ತಿರುಗಿದನು ಹನುಮಂತನಾ ಕ । ರ್ಬುರರ ಕದನಕೆ ಕಂಡು ಮುಗಿದನು ।
ಕರವ ನಂಗದ ಬೆಸಸಬೇಕೀ ಬಹ ನಿಶಾಚರನ ॥ ಧುರಕೆ ತನ್ನವನೆನಲು ಹೋಗೆಂ । ದರಿ
ದಿಶಾಪಟ ನಂಗದನ ಕೈ । ನೆರವಿಗೊತ್ತಾಳಾಗಿ ಪೊಗಿಸಿದ ನಸುರ ಸೈನಿಕವ ॥ ೨೭ ॥
ಆಜೆಬಿರಿಸೋ ಪೊಕ್ಕನೋ ಯುವ । ರಾಜನೊಬ್ಬನೆ ರಣದ ಜಯಮುಖ । ನೋಜೆಮಲಿ
ಯೆಲುಬಾರದೆನೆ ಸೌಮಿತ್ರಿ ಹೋಗೆನಲು ॥ ಆ ಜಿತ ಕ್ರೋಧಂಗೆ ಕೈಮುಗಿ । ದಾ ಜಯಾ
ಹವ ಶೀಲ ಬಳಿಕ ಬಿ । ಡೌಜಸುತ ಸುತನೆಡೆಗೆ ಬಂದನು ಧನುವ ನೊದರಿಸುತ ॥೨೮॥
ಅದು ಬಳಿಕ ಕಲ್ಪಾವಸಾನದ । ಲೊದಗಿ ದಂಬಧಿಯಂತೆ ಚತುರಂ । ಗದ ಛಡಾಳತೆ
ಯಿಂದ ಚೂರಿಸುವಸ್ತ್ರ ಶಸ್ತ್ರದಲಿ ॥ ಹೊದಿಸಿ ಕೊಂಡುದು ಕಪಿಬಲನ ಸರಿ । ಸದವ
ದೊಳಗೇಳ್ವಂತೆ ರಿಪುಗಳ । ನೊಡದು ಭುಗಿ ಭುಗಿಸಿತು ಸೇನಾ ಸಿರಿ ಜನಾಂಗದಲಿ ॥
ಬೆರಸಿದವು ಬಲವೆರಡು ಬಲು ಕ । ರ್ಬುರನ ವಾದ್ಯದ ವೀರ ಕಪಿ ಸಂ । ಗರದ ಸಂಕುಳ
ರವದಿ ಯನ್ನೊಡದ ತಳಕುಚ್ಚಳಿಸಿ ॥ ಧುರ ಮಹೀರುಹ ಖಡ್ಗ ಕರ್ಬುರ । ಧುರ ರಣಾ
ದ್ಭುತ ರಭಸ ಗಗನದ । ಶಿರವ ನೊಡೆದುಪ್ಪರಿಸೆ ಹಳಚಿತು ಸೇನೆ ಸೇನಯಲಿ ॥ ೩೦ ॥
ಹಿಡಿದಿಡುವ ಕರಿಘಟೆಯ ಮೇಘನ । ಝಡಿವ ಖಡುಗದ ಮಿಂಚುಗಳ ಸಿಡಿ । ಸಿಡಿದು
ಸೂಸುವ ಮುಕುಟ ಮಣಿಗಣ ಮನೆ ಕಲ್ಲುಗಳ॥ ಗಫಣಿಸಿ ಗಾಯಗಳ ಲಪ್ರವ । ತುಡುಕಿ

ತೂರುವ ರಕುತವಾರಿಯ । ಮಡಲಿರಿದು ಮಳೆಗಾಲವಂಜೆಸಿತಸಮಸಮರದಲಿ ॥೩೧॥ ಅಲರಿದಿರು ಪಾಲಾಶ ಶಾಲಾ। ವಳಿಯ ವಿಪಿನವೊ ವಿಪುಳತರ ಶಾ। ಲ್ಮಲಿಯ ಹೋದುರು ಗಲಿನ ಹೊದರಿನ ಬಹಳಕಾನನವೊ ॥ ದಳಿತ ಕುಸುಮಿತ ಕಿಂಶುಕಾವನ। ವಳಯವೋ ನಿರ್ದಳಿತ ರಕ್ತೋ। ತ್ಪಲವ ಕೊಳಗಳೊ ಕೊಳುಗುಳವೊ ತಾವ್ ಹೇಳಲೇ ನೆಂದ ।೩೨॥ ಜಾಳಿಸಿತು ಜರ್ಝರ ಬಲರು। ಬ್ಬಾಳುತನ ವೆರಡಂಕದಲಿ ಕೈ। ಮೇಳ ವಿಸಿದುದು ವಜ್ರದಂಷ್ಟ್ರಾಂಗ ದರಿಗತಿ ಮಥನ ॥ ಕೀಳು ಮದಮೇಲ್ಮದದ ಘನ ಶುಂ। ಡಾಲ ತಲೆಪಟ್ಟಂತೆ ಹಳಚಿದ। ರೋಳಿ ಹರಿಯಲ ಜಗದ ಜಡಬಿಡ ದಮರ ರಾಲಿ ಗಳ ॥೩೩॥ ಹೇಳಲಚ್ಚರಿ ವಾಲಿಜನ ಕೈ। ಚೂಳಿಗಳ ಜೆಟ್ಟಿಗಳ ಬೊಗುರಿಯ। ಬೀಳು ಗಳ ದಂಭೋಳಿ ದಂಷ್ಟ್ರನ ಗುಪ್ತದತಿಮಥನ ॥ ಕಾಳರಕ್ಕಸ ರುಗ್ರಪರಿಘದ। ತೂಳಿ ಕೆಯ ತೋಟಗಳ ಧಾಳಾ। ಧೂಳಿ ತುಂಬಿತು ಕಡೆಗೆ ಕಮಲಭವಾಂಡ ಮಂಡ ಲವ ॥೩೪॥ ಇಡುವ ಹೊಡೆವ ಮಹಾದ್ರಿ ಪರಿಘದ। ಬಡಸಿ ಹುಟ್ಟಿದ ಧೂಮದಲಿ ದುಂ। ಜಡಸಿ ತಂಬರದಂದ ವಾದುದು ಭುವನವಿಸ್ತಾರ ॥ ಹೊಡೆವ ಹಬ್ಬುಗೆ ಹೊದ ಸಿದವು ನಭ। ದುಡುಗಣೌಘವ ನವಮ ಕದನದ। ಕಡುಹು ಮಿಕ್ಕುದು ವೀರಭಂಜನ ಪಾಕಶಾಸನನ ॥೩೫॥ ನೆರೆಯು ದಂಬರ ವೀರ ತನದ। ಬ್ಬರಕೆ ರಣಕಾರಣರ ಸದಕ। ಟ್ಟೊರತೆ ಸೂಸಿತು ಶೈಲ ಪರಿಘಾಯುಧಗಳನು ಬಿಸುಟು ॥ ತೆರಹ ಕೊಂಡು ಕಳಾಯ ದಲಿ ಬೊ। ಬ್ಬಿರಿದು ಬಹಪ್ಪಳಿಸಿ ನಿಂದಿದ। ರರಿ ಚೆನಲ ಕುಕ್ಕುರಿಸೆ ಕರಿಕಮುಖಾದಿ ನಾಯಕರು ।೩೬॥ ವಾಮಕರೆ ದಂಡೆಗಳ ದಂಡೆಯ। ಮೈ ಮುರುಹಿ ನುಪ್ಪರದ ಮುಷ್ಟಿಯ। ಭೀಮ ಬಾಹಾ ಭೃಕುಟಿ ಬದ್ಧಾರುಣ ವಿಲೋಚನದ ॥ ಧೂಮ ಧೂತ ಶಿಖಾಸ್ಫುಲಿಂಗ। ಸ್ತೋಮನು ದುಶ್ವಾಸದ ಪ್ರಪೂರದ। ತಾಮಸದ ತವಕ ಗರುತಿ ವಿದಾ ಡಿದವು ತೀವ್ರದಲಿ ।೩೭॥ ಅಣದಣದು ತಿವಿ ತಿವಿದು ಮುಷ್ಟಿಯ। ಜಣುಗು ನಿಡುಗುಡಿ ಯಿರಿದು ಗಗನಾಂ। ಗಣವ ತುಂಬಿದ ಕಾಲ ಯಾನಳ ತುಗುಳು ಗಿಡಿಯಂತೆ ॥ ಫಣಿ ವಿಭೂಷಾಂಧಾಸುರರ ಬಲು। ಕಣೆಯ ಬವರವ ನಸುರ ಕುಲಭೀ। ಷಣ ಹಿರಣ್ಯಕ ರಧಟು ಮಿಕ್ಕಿದು ಹೇಳಲೇನೆಂದ ।೩೮॥ ಶಿರವು ಕರ್ಣ ಕಪೋಲ ಭುಜ ಕಂ। ಧರ ಮಹೋ ರಸ್ಥಲದ ತಾಣದ। ಸರಿಸದಲಿ ಸಡಗರಿಸಿದವು ಸಿಡಿಲಂತೆ ಮುಷ್ಟಿಗಳು ॥ ಬುಳುಬುಳನೆ ಪೋರೆಗಳಂಗದೊಡ। ನರುಣಜಲ ದೇರುಗಳ ಲಿಬ್ಬರು। ತರಣಿಶಶಿಯ ಪೊಲೊಪ್ಪಿ ವರು ಕಡೆವಗಲ ಪೌರ್ಣಮಿಯ ॥೩೯॥ ಎಲವೊ ನೀವ್ ರಕ್ಕಸರು ದಿವಿಜರಿ। ಗಲ ಗಣಸುಗಳು ನಾವ್ ಕಪಿಗಳು। ಗಲಬೆಗಂಜುವೆ ವೆಮಗೆ ಭಯವಹು ದಸುರ ದರುಶ ನಕೆ ॥ ಕಲಹ ನಿಮ್ಮದು ಬಿರುಸು ಕಡು ಕೋ। ಮಲವು ನಮ್ಮದು ಕದನ ವೆನಡರ। ಹಳವಳಿಕೆಯನು ನೋಡೆನುತ ತಿವಿದನು ನಿಶಾಚರನ ॥೪೦॥ ಹಾರಿಬಿದ್ದನು ನೆಲಕೆ ನೆಣಲನು। ಕಾರಿದನು ಘುಳುಘುಳನೆ ಬೆರಡ ಶ। ರೀರವೊ ಲುಗುವ ಕೈಯ್ಯ ಕಂಪಿಸು ವಂಘ್ರಿ ಯುಗಳಗಳ ॥ ಘೂರಿಡುವ ಜಲದರುಣ ವಾರಿಯ। ಜೋರಿನಾಸ್ಯದ ಜಯ ಭಯಾಪ। ಸ್ಮಾರಕದ ಖಳ ನಿರ್ದನೂರ್ಧ್ವಶ್ವಾಸ ಲಹರಿಯಲಿ ॥೪೧॥ ಭುಜಯುಗವ ಸೂಳೈಸಿ ಸತ್ತ್ರತು। ಭುಜಂಗೊಪ್ಪರ ಗೊಟ್ಟ ರಕ್ಷ। ಧ್ವಜ ನಿಗಾ ಯೆಂದುಬ್ಬಿ ಮಲ ಡೊಲ ದರಿನಿಶಾಚರನ ॥ ಅಜ ಕಪಾಲಿಯ ಬಳಿಯ ಭೂತ। ವ್ರಜಕೆ ಕೈವರ್ತಿಸಿ

ಖರಾಸುರ | ವಿಜಯ ಗಭಿವಂದಿಸುತ ಕೆವರಿದ ನುಳಿದಖಿಳಬಲವ ||೪೨|| ಬಳಿಕ ತಳ ಘಾತದಲಿ ಮೊಳಕೈ | ಗಳಲಿ ಮುಡದಲಿ ಮುಷ್ಟಿಯಲಿ ಕಾ| ಲ್ಬಳಿಯ ಲಡ ಹೊಯ್ಲಿನಲಿ ತಡೆಗಾಲಿನ ಮುಡುಹಿನಲಿ || ಕೊಳುಗುಳದ ಭೂತಾಳಿ ಕೈಚ | ಪ್ಪಳಿಯ ಲೊದರಲು ನಗರ ದಗಳಿನ ' ವಳಯ ಪರಿಯುಂತಟ್ಟಿ ಕೊಂದನು ಖಳ ಚತುರ್ಬಲವ ||೪೩|| ಇಳಿದು ಸುರಪತಿ ತನ್ನವೊವ್ಮ್ರಗನ| ಕಲಹ ಕತಿಪರಿಣಮಿಸಿ ಸ.ರಕುಜ | ದಲರು ಮಯ ಹಾಯ್ಕಿದನು ಹಾರಾಂಗದಲಿ ಭೂಷಣನ || ವಿಲಸ ದೇಕಾವಳಿಯ ಮಣಿ ಕುಂ | ಡಲವ ನಿತ್ತು ಸರಾಗ ರಸದೊ | ಬ್ಬಳಿಯ ಪುಳಕದಿ ನಪ್ಪಿ ಸರಿದನು ಸುರರ ಸಭೆಗಾಗಿ ೪೪|| ತಿರುಗಿದನು ಬಳಿಕಂಗದನು ದಿನ | ಕರ ಭಯಂಕರ ನೆಡೆಗೆ ಘಟರಿ | ಬ್ಬರು ಸುಮಿತ್ರಾಸೂನು ಸಹಿತೈದಿದರು ನರಹರಿಯ || ತರಣಿ ಸಂಧ್ಯಾಸಮಯ ಕರ್ಮಾಂ | ತರವ ನನುವರ್ತಿಸಲು ಪಶ್ಚಿಮ | ಶರಧಿಗಿಳಿದನು ಶಿಬಿರಕಭಿಮುಖನಾದನಾ ರಾಮ || ||೪೫||

ಹದಿನೇಳನೆಯ ಸಂಧಿ ಸಮಾಪ್ತಂ,

ಹದಿನೆಂಟನೆಯ ಸಂಧಿ.

ಸೂಚನೆ|| ರಣ ಭಯಂಕರ ಭಟನ ನಸುರಾ | ಗ್ರಣಿಯಕಂಪನನಸನು ಸಮರಾಂ | ಗಣ ದೊಳಗೆ ಮುರಿದನಿಲಸುತ ಮೆರೆದನು ಪರಾಕ್ರಮವ ||

ಪದ್ಯ|| ಕೇಳಿರೈ ಕುಶಲವರು ಕಪಿಗಳ | ಕಾಳಗದ ಕೌತುಕವ ಸಭೆಯಲಿ ಕೇಳಿಸಿತು ಕಡು ಭಯದಲಾ ಕೈಕಸೆಯ ನಂದನನ || ಮೂಳೆಯೊಲಹಿನಲಖಿಳ ಮಣಿಗಣ| ಮೌಳಿಗಳ ಬೀಳ್ಕೊಟ್ಟು ಚಿಂತಾ | ಕುಲಕಿಯ ಒಳವಿಡಿದು ಹೊಕ್ಕನು ತನ್ನ ಮಂದಿರವ ||೧|| ಆಳುತನವತಿ ಬಲುಹು ರಕ್ಕಸ | ಕಾಳಗವು ಅತಿ ಬಿರಿಸು ಸಮರ ಶ | ರಾಳಿ ತಾಗದೆ ಮಾಣನೆಂಬಿನ ನಧಿಕ ಹರುಷದಲಿ || ಧಾಳಿಸುವ ಮಣಿ ಕನಕವಭ್ರದ | ಛಾಳಿಗಳ ನಳವಡಿಸಿ ಕಿರಣದ | ಪಾಳಿಯದ ಸುಯಿದಾನದಲಿ ಒಂನಡರ್ದ ನಂಬರವ ||೨|| ಉದಯ ಮುಖದಲಿ ಲಗ್ಗೆ ವರೆ ಮೊಳ | ಗಿದವು ದುರ್ಗದಮೇಲೆ ಗಜ ಹ | ಣ್ಣಿದವು ಹಯ ಹಲ್ಲಣಿಸಿದವು ರಥ ಹೂಡಿದವು ರಣಕೆ || ಪದ ಚರಾವಳಿ ಪೌಡುಪಂಥದ | ಮದದಹಂಕಾರದಲಿ ಶರ ಧನು | ಗದೆ ಕೃಪಾಣವ್ರಾತದಿಂದನುವಾದ ರೊಗ್ಗಿನಲಿ ||೩|| ಆಯುಧದ ಸಂವರಣೆಯಲಿ ವಾ | ನಾಯುಜದ ವಾಹಕರು ಮದ ಶೀ | ಷಾಯಿನೀ ದಂತಾವಳರೋಹಕ ಹೊಗಳಿಕೆಯ || ರಾಯರಥಿಕರು ಚಟುಳ ಚರಣ ಭ | ಡಾಯ ಮಾನಿತ ವಿಳಿದುದಾ ಖಳ | ರಾಯ ದುರ್ಗದ ವೊಳಗುವಗಣಿತ ವಾದ್ಯ ಘೋಷದಲಿ || ೪ || ಓಲಗದೊಳಿದ್ದ ಸುರರಾಯನ | ಬೀಳುಕೊಂಡನಕಂಪ ನಿನ್ನೂ | ರೇಳ ರಕ್ಷೋಹಿಣಿಯ ಸಂಖ್ಯೆಯ ನಸಮ ಸಂಗರಕೆ || ಆಳು ಮೇಳಾಪದಲಿ ಕೈದುಗ | ಳೋಳಿ ವೆಳಗಿನಲಮರ ಸೇನಾ | ಜಾಲ ಸಹಿತಮರೇಂದ್ರ ಬಂದನು ನೋಡಲಾಹವವ || ೫ || ಹೇಳಲೇನದ ನಸರ ಕೈದುಗ | ಳೋಳಿ ವೆಳಗಿನ ಲಿಭ ತುರಂಗ ಭ| ಟಾಳಿಗಳ ಮಣಿಗಣದ ಜೋಡಿಯ ಝೂಡಿವಳಗಿನಲಿ || ಕಳವಳಿಸಿ ಕಮಠೇಂದ್ರನಂಡಿಸೆ | ಬಲದ ಭಾರ ಕುಭೇಂದ್ರ ಚಯ ಭಯ | ಬಳಿ ಸಲಿಸೆ ಬರ್ಹಿರ್ಮುಖೇಂದ್ರಾದ್ಯಖಿಳ ಸುರಬಲವ || ೬ || ಅರಿಬಲದ ಗಮನವನು ಕಪಿಕುಲ | ದರಪ ಕಾಣುತ ಕಂಡು ಕಾಣದ | ಪರಿಯ ಪೋಲ್ಪರಮಾಣು

ವಿನ ಭಾವನೆಯ ಭಂಗಿಯಲಿ ॥ ಇರಲು ಸಂಧಿಸಿದಧಿಕ ನಿರ್ಮಲ । ಪರಮ ವಿದ್ಯೆಯ ನೆರವಿ ನಿಲುಕುವ । ಚಳವಳಿಕೆ ಮೊಳಗುವ ಜ । ಯಂತದ ವಾದ್ಯರಭಸದಲಿ ॥ ೭ ॥ ಕೆಣಕುವನ್ನವು ಕನಲಿದರು ಸೈ । ರಣೆಯಲಿರ್ದರು ಶೂನ್ಯವಾದುದು । ಕುಣಿಕೆ ಗೂಕವ ತತ್ವಮಯ ಸಿದ್ಧಾಂತದೊಡ್ಡಣ ॥ ಭಣಿತೆಯಲಿ ಬಳಿಕಿತ್ತು ಲಿಕ್ಕಿತು । ಕುಣಿದು ಕುಬು ಬಿರಿದಾಡಿ ಭೈರವ । ಗಣದಿನೇಂದ್ರ ಕಲೇಂದ್ರಬಲ ನೆಲೆ ಕಂದ ಕೇಳೆಂದ ॥೮॥ ತೋಳ ತುಳುಕಿನ ಡೊಕ್ಕರದ ಕೈ । ಕಾಲು ಮಡವಳುಕುಗಳ ಕಿವಿಗಳ । ಬಾಲಹತಿಗಳ ಬೆಟ್ಟ ವಿಡುಹುಗಳಡಸಿ ಮಹೀರುಹದ ॥ ಬೋಳಿಗಳ ಕಲು ಗುಂಡುಗಳ ಬಲು । ಗಾಳಗದ ಭಾರಣೆಯ ಬಲುಹು ಚ । ಡಾಳಸುತ್ತಿರ್ದುದು ಚತುರ್ದಶಭುವನ ವೀಥಿಗಳ ॥ ೯ ॥ ಹೊತ್ತ ಬರಡಾಹವದ ಸೈನಿಕ । ನತ್ತಣತ್ತಣ ಬೊಬ್ಬೆಯಬ್ಬರ । ವೆತ್ತುತಿರ್ದುದು ಕಮಲಜಾಂಡ ಕಟಾಹ ಖರ್ಪರವ ॥ ಬಿತ್ತರಿಸ ಲಗಿದಾದಿ ವೀರ । ಹತ್ತುಗೆಯ ಹವಣು ಗಳ ಸಂಗರ । ವೆತ್ತ ನೋಡಲು ಕೊಲೆಗೆ ನೇಲಹ ಬಲುಹಿದೀಗೆಂದ ॥ ೧೦ ॥ ಅಳಿದು ಭಯ ಸೈನಿಕವ ನಡುಕಿತು । ಬಳಲಿ ಘಾತವಾಂತ ಬೆವರನು । ತೊಳೆದು ಕೊಂಡುದು ಹರಿವ ರಕುತವ ಹೊಳೆಯೊಳಗಲದಲಿ ॥ ಹೊಳಲಿಗಸುವನು ನೊಯ್ಯುಜನನವ । ರಳ ವಳಿಯ ಬಾಯಾರಿ ನಿಡುಸ । ಖ್ಖಲೆಗಳಲಿ ತುಂಬಿದರು ರಕುತವ ನಾಚೆರಂಗದಲಿ ॥೧೧॥ ಮುರಿದುದುಭಯ ಚೂಣಿಯ ಹೂಣಿಸಿ । ತರುಬಿದನುದರದಲಿ ಕಂಪನು । ಪುರಬಗಣೆ ಗಳಲಿಭ ತುರಂಗಮ ರಥ ಪದಾತಿಯಲಿ ॥ ಹರಿದುದಿನಸುತನೂಡ್ಡು ಮುಂದಕೆ । ತೆರಹು ಗೊಟ್ಟುದು ಬಟ್ಟೆ ಬಿದ್ದುದು । ಹರುಬು ಹನುಮನಮೇಲೆ ಬಲು ಗಾಳಗವು ಕಂಪನನ । ತಿರುಗಿ ಮುರಿದವುಕವ ಗವಾಕ್ಷನ । ನುರುಳ ಲೆಚ್ಚನು ಗಂಧಮಾದನ । ನುರದೊಳಾರ ತೆಯ ತೋಡಿದನು ತುಳುಕಿದನು ಶೋಣಿತವ ॥ ಶರಭ ಶತಬಲಿ ಗಜ ಗವಯ ಕೇ । ಸರಿಯ ಮೈಂದರುಮಾಧಿಗಳ ಸಂ । ಗರದ ಭಂಗವ ಮಾಡಿ ಕೆಣಕಿದ ನಸಿಲನಂವ ನನ ॥೧೩॥ ಮುಳಿದರಾರೈ ನಿಲುವವರು ನೈ । ಥಿಲಿಯ ಗಂಡನ ಗರುವ ಕಿಂಕರ । ನೊಳಗೆ ಕದನದಲಸುರಸುರ ಮಾನವ ಭುಜಂಗರಲಿ ॥ ಮುಲಿತು ಮೊಹಿದ ಗಜ ತುರಗಾ । ವಳಿ ವರೂಥ ಪದಾತಿ ಹರಿಕಿಂಕರನ ಕದನದಲಿ ೧೪॥ ಮುರಿದ ಬಲ ಲಂಕಾಭಯಂಕರ । ನುರುಬೆಗತಿ ನುಗ್ಗಾಗಲವ ಕೈ । ಮರದನೇ ಖಳ ವೀರನೆಸುತಿರ್ದನು ನಭಾಂಗಣವ ॥ ತೊರೆಯ ಜಲಕಿಂಪಾಗೆ ಕಪಿಗಳ । ಹರಿದಲೆಯ ರಕುತದಲಿ ಹನುಮನ । ನರಸಿ ಹೊಳದ ನಸುರನು ಸಮಶರೌಘ ಶರಧಿಯಲಿ ೧೫॥ ಅಹಹ ಹನುಮನ ಹವಣ ವೇನಾ ॥ ಗಿಹುದೋ ಸೈರಣೆ ಗುಚಿತವಲ್ಲೆನು । ತ ಹಿಮಕರ ಸುತ ನೀಲ ನಳ ಜಾಂಬವ ಸುಷೇಣಕರು ॥ ಬಹಳ ಬಲಸಹಿತಬ್ಬರಣೆ ಮಿಗೆ । ಮಹಿಜಕುಲ ಪರ್ವತಂಗಳ । ಬಹಳತೆಯ ಭಾರದಲಿ ಮುಕ್ಕರುಕಿದರು ಕಂಪನನ ॥ ೧೬ ॥ ಸಾಲ ಬಕುಳ ಕರಂಜಿ ಕರ್ಮರ । ಜೀಲ ಬೇವಿಬಾಬ್ಬಲಿ ತೇಗರು । ಟಾಳ ತಂಡಸ ತಡಸಿ ತಗಿಗ್ಗಲು ತದಿಕು ತಡಗಳ ॥ ಜಾಲಿ ಗೊರರೇ ನೆಲ್ಲಿ ಬಿಲ್ವ ತ । ಮಾಲ ತರು ಮೊದಲಾದ ವನ ಭೂ । ಜಾಳಿಯಲಿ ಹೊಳದರು ಕಂಪನ ನಸಮರಥನ ॥೧೭॥ ಮುರಿಮುರಿದು ಗಿರಿ ತರುಗಳಲಿ ಹಾ । ಸರೆಗಳಲಿ ಹೆಗ್ಗಂ ಡಿನಲಿ ಬಲು । ಜರಿಗಳಲಿ ವಿಡುಗಲ್ಗಳಲಿ ಬೊಬ್ಬಿರಿದು ರಿಪುಭಟನ ॥ ತರುಬಿದನು ತುರುಗಿರಿಯ ಮುರಿದುರೆ । ಕೋಡಿದು ಸೂಸಿದ ಬರಿಬಲವ ಹೆ । ಡ್ಮೊರೆಯ ಪೊಲು ಹರಿ

ಗಡಿದು ಹಾಯ್ಕಿದ ನಸುರ ನಿರ್ಜರಘನ ।೧೮। ಆತು ನಿಂದ ಸುಷೇಣ ಜಾಂಬವ । ವೀತಿಹೋತ್ರಜ ಬಲ ಮಹಾಬ್ಧಿಗೆ । ಸೇತುವನು ಕಟ್ಟಿದನು ಬಾಣ ಶಿಲಾಪ್ರಕೀರ್ಣದಲಿ ॥ ಮಾತದೇನುಳಿ ದಂಗದಾದಿಮು । ಹಾತಿ ಬಲರನು ಲಯದ ಹುತವಹ । ರೀತನವುಲೊಡೆದುಳಿಸಿ ಹಾಯ್ಸಿದನಸುರ ನಿರ್ಜರಘನ ॥ ೧೯ ॥ ಮುರಿಯಲಿಚ್ಚನು ಮುಂಚಿ ಮುಂದಣ । ತರುಬಿನೊಡ್ಡನು ಬಲಿಯುಲುಕ್ಕಿನ । ನರಸಿನಾಹವ ಮೋಹರದ ಮೆದೆಗೆಡಹಿದನು ನೆಲಕೆ ॥ ಜರಿದು ಮುರಿದಿಡು ವಧಟ ಕಪಿಗಳ । ದುರುಬಿ ಗುಮ್ಮಿದನಿನಕುಲೇಂದ್ರನ । ನರಸಿ ಹೊಕ್ಕನು ಕಂಪನನುಪಮ ರಾಯ ಮೋಹರವ ॥ ೨೦ ॥ ಇವನಿದಾರೈ ರಾಕ್ಷಸಾಂಬರ । ದಿವಸಕರ ಕಟಕದಲಿ ಬಲ್ಲಿದ । ನಿವನು ಕೋಳಾಹಳಿಸಿದನು ಕಪಿಬಲದೊಳಗಲದಲಿ ॥ ಬವರ ನೋಡಲು ಲೇಸು ಮಹದು । ತ್ಸವವ ಬೀರಿದನಮಗೆ ಹೆಸರೇ । ನಿವನ ಹೇಳೆಂದರಸ ಬೆಸಗೊಂಡನು ವಿಭೀಷಣನ ।೨೧॥ ಜೇಯ ಸಮರದ ಸಪ್ತಸೇನಾ। ನಾಯಕರಿಗಿವ ಮೊದಲಿಗನು ವ । ಜ್ರಾಯುಧನ ಗೆಲುವಂದು ಗೆಲವಾಯ್ತಿವನ ದೆಸೆಯಿಂದ ॥ ಸಾಯಕದ ಕಟ್ಟಿಸುಗೆಯಲಿ ಕಾ । ತ್ಯಾಯನೀಶಂಗೆಣೆ ರಣಾಂಗಣ । ದಾಯ ಬಲುಹೀಖಳನ ಕಂಪನನೆಂಬ ಪೆಸರೇದ ॥ ೨೨ ॥ ಅಹುದು ಸಂಶಯವಿಲ್ಲ ಸಾಹಸಿ । ಮಹನು ಸಂಗರ ಸಮಯವನು ನಿ । ರ್ವಹಿಸಬಲ್ಲವ ಬಿಲ್ಲಿನಲಿ ಬಹುಭಂಟ ನೆಂದೆನುತ ॥ ಸಹಭವನ ಮೊಗನೋಡಲಮರರ । ಕಹಳೆಗಳು ಕಳಕಳವಲಲ್ಲಿಗೆ । ವಹಿಲದಲಿ ವಿಸ್ಮಯ ಬಲಾನ್ವಿತ ಹನುಮನೈತಂದ ॥ ೨೩ ॥ ಏನೆಲವೋ ರಘುರಾಯರಲಿ ಸು । ಮ್ಮಾನವೇ ನಿನಗಕಟ ಶರಸಂ । ಧಾನವೇ ಕೋದಂಡದೀಕ್ಷಾಚಾರ್ಯನಿದಿರಿನಲಿ ॥ ಆ ನರೇಂದ್ರನ ಸೇವೆಕಾರರ । ಮಾನಿಸರು ನಾವ್ ಸಾರು ನಿಮಗೆ । ವಿಮ್ಮಾನಿಕೆಯ ನೋಡೆನುತ ಜೊಬ್ಬರಿದೆರಗಿದನು ಖಳನ ॥ ೨೪ ॥ ಮದಿಸಿ ಮಲತಾಹವದ ಗಜ ಹರಿ । ಪದವಿಘಾತಿಗೆ ಕೆಡವವೋಲು ಕೆಡ । ದೊದೆದು ಕೊಂದನು ಕಂಪನನು ಕೋಪದಲಿ ಕಳದೊಳಗೆ ॥ ಇದರ ಘೋರದ ಕಂಪನವ ನೆಂ । ಬದ ಮಹಾಹಯವೇಕೆ ನಾಯ್ಗಳ । ಬದುಕ ಸುಡು ಸುಡುಯೆನುತ ಲೊದೆದನು ಪದವಿಘಾತಿಯಲಿ ॥ ೨೫ ॥ ಕಳಚಿ ಸಿಡಿದವು ನೆಲಕೆ ಚವುಕದ । ಹಲುಗಳಿಡಿ ಮೇಲಾದ ವಾಲಿಗ । ಳಿದು ದಾನನದಿಂದ ಮೂಗಿನ ಲರುಣ ಜಲಧಾರೆ ॥ ಸುಳಿದರಾಸಮಯದಲಿ ಜವನವ । ರೆಳವ ಹೆಣನನು ಹೊತ್ತುಕೊಂಡರು । ಖಳನ ಹಸುಗೆಯ ಕಾಪಿಗರು ಹರಸುತ ಸಮೀರಜನ ॥೨೬॥ ಅಟ್ಟಿದನು ಬಳಿಕುಳಿದ ರಕ್ಕಸ । ಘಟ್ಟಿಯರು ನಡೆಗೆಡಹುತಸುರರ । ಪಟ್ಟಣದ ಪರಿಯಗಳು ಪರಿಯಂತೀಶ ನುಬ್ಬಟೆಗೆ ॥ ದಿಟ್ಟಿಯನು ಕೋರವಿಸಿ ತನ್ನವ । ನಟ್ಟಿದಿರನೆಂದಂಜಿ ರವಿಕಂ । ಗೆಟ್ಟು ಹೊಕ್ಕನು ಜಲವನುರೆ ಜರಿದಪರ ಜಲಧಿಯಲಿ ॥೨೭॥ ಮುರಿದನಲ್ಲಿನ್ನೆಲ್ಲೆ ಮಾರುತಿ । ಹರುಷರಸದುಬ್ಬಿನಲಿ ತೊರನೆಯ । ಪುರವರಾಧಿಪ ನಿನತನೂಜಾದಿಗಳ ಗಡಣದಲಿ ॥ ತಿರುಗಿದನು ಪಾಳೆಯಕೆ ಲಂಕಾ । ಪುರಿಗೆ ಮುತ್ತಿಗೆ ಯಾದುದಾದಿನ । ದಿರುಳು ಮುಖದಲಿ ಮುಟ್ಟಳೆಯ ಕಟ್ಟಳೆಯ ಕಾಹಿನಲಿ ॥ ॥೨೮॥

ಹದಿನೆಂಟನೆಯ ಸಂಧಿ ಸಮಾಪ್ತಂ.

ಹತ್ತೊಂಬತ್ತನೆಯ ಸಂಧಿ.

ಸೂಚನೆ॥ ಅಪ್ರತಿಮ ರಣರಂಗ ವಿಜಯ ಭು। ಜಪ್ರತಾಪನ ನಸುರ ಸೇನಾ । ನಿ ಪ್ರಹ
ಕೆಡಹಿದನು ಸಮರದಲಿ ಕಲಿ ನೀಲ ॥

ಪದ್ಯ॥ ಇರುಳಿ ನೋಲಗ ದೊಳಗೆ ಕಂಪನ । ಮರಣ ವಾರ್ತೆಯ ನಸುರ ಚಕ್ರೇ। ಶ್ವರನ ಸಭೆಯಲಿ ಅರುಹಿದರು ಹರಿಕಾರರೈತಂದು ॥ ಹರದು ದೋಲಗ ವಾಕ್ಷಣದೊಳು। ಜ್ವರದ ಚಿಂತೆಯ ಲಾಪ್ರಹಸ್ತನ। ಕರಸಿ ಕೊಂಡೇಕಾಂತ ಭವನಕೆ ಬಂದ ನಸುರೇಂದ್ರ ॥೧॥ ರಕ್ಕಸರು ನಾವೆಂಬ ಭುಜಬಲ। ದುಕ್ಕ ಮುರಿದುದು ಕದನದಲಿ ಜಯ। ವುಕ್ಕಿತಿಂದಿನ ಲಿನಗೆ ರಿಪು ನೃಪ ಕಪಿ ವರೂಥಿನಿಗೆ ॥ ಒಕ್ಕರಸುಗಳ ನಮ್ಮವರು ಗುಹಿ। ಲಿಕ್ಕಿ ನಗುವಂತಾಯ್ತು ದಿವಿಜರಿ । ಗಿಕ್ಕು ಪಾಯುವ ನೇನ ನೆಣಸಿದೆ ನೆಂದ ನಸುರೇಂದ್ರ ॥೨॥ ಎಣಿಕೆ ಯಾವುದ ಜೀಯ ಜವನನು । ಗಣಿಸ ದತಿಬಲ ರಳಿದುದರಿ ಕಪಿ। ಗಣ ಗಳೊಳಗಾ ರಾಮಲಕ್ಷ್ಮಣ ರಾಜಿ ಯಿನ್ನೆನಿತೊ ॥ ರಣ ಗಲಿಯೆ ಚಿತ್ತೈಸು ನರರಂ। ಬೆಣಿಕೆ ತೋರದು ರಾವಣನಲಿ ನೆರೆ। ಕೆಣಕಿದೆವು ಮುಚ್ಚಿರ್ದ ಕಲ್ಪದ ಕಿಚ್ಚನಾವೆಂದ ॥೩॥ ಕಟ್ಟಿದರು ಸಾಗರವ ಕಲು ಮರ। ಮುಟ್ಟನಲಿ ಸುರ ನರ ಭುಜಂಗರ। ದಿಟ್ಟಿಗೊಳ್ಳದ ದುರ್ಗವನು ಕೆಡಹಿದರು ಕದನದಲಿ ॥ ಇಟ್ಟಣಿಸಿ ರಣರಂಗದಲಿ ಸರಿ। ಪಟ್ಟನಲಿ ಕಾದಿದರು ಕಡೆಯಲಿ । ಕಟ್ಟಿಯನು ಕಳಚಿದರು ರಿಪುಸೇನಾ ಮಹಾಂಬುಧಿಯ ॥೪॥ ಇವರು ಕಪಿಗಳೇ ಜೀಯ ಸೀತಾ। ಯುವತಿ ಯರಸನು ನರನೇ ನೀನೀ। ಹವಣಿಸುವ ಬುದ್ಧಿಯ ಕಾಣೆ ಧುರಪಥದ ॥ ಅವಘಡಿಸಿದೆ ದುರುಕ್ತಿಯಲಿ ಪೇ। ಳ್ದವರ ಹಿಂದೆ ತವಾನುಜನ ನುಡಿ । ದವರ ತಲೆಯನೆಸಗಿ ವಿವೇಕಿಸದಾದೆ ನೀನೆಂದ ॥೫॥ ಮುರಿದುದರಿಗಳ ಸಂಧಿ ಕಡೆಯಲಿ । ಕುರಿತನವು ನಾವಿನ್ನು ಬೇಗೆ। ಚ್ಚರಿನ ಪದ್ಧತಿ ನಡೆದು ದಿಂದಿನ ದಿನಕೆ ಛಲಪದವ ॥ ಉರುವ ವಿಜಯ ಭುಜಪ್ರತಾಪವ। ನುರುಕಿಸದೆ ನಡೆಸುವುದೆ ನಯವೆ। ನ್ನರಿಕೆ ತಾ ವೀಳೆಯವ ನೆನೆಗಂ ದನಸುರ ॥೬॥ ಐಸೆ ಮತ್ತೇನ ಸುವಿನಲಿ ಬಯ। ಲಾಸೆಯನು ಮಾಡುವುದು ಭಟರಿಗೆ। ಹೇಸಿಕೆಯ ಹೊರೆ ಹೋಗಲಾ ಮಾತೇಕೆ ನಾಳಿನಲಿ ॥ ವಾಸಿ ನಗರದ ಲಸ್ತ್ರ ಶಸ್ತ್ರ ವಿ । ಲಾಸಿಗಳ ಕೂಣಿಕ್ಕಿ ಕೋಮೇ। ಲೈಸಿ ಕೋ ವಾರಣ ವರೂಥ ಪದಾತಿ ಹಯ ಬಲವ ॥೭॥ ಧುರಕೆ ಬಲುವಲೇ ನೀನು ಕದನ। ತರದ ಲಿಂದ್ರಾರಾತಿ ಸಮನಂ। ತರದ ಲತಿಬಲ ಕುಂಭಕರ್ಣನು ನಮ್ಮ ಕಟಕದಲಿ ॥ ನಿರುತ ವಿದು ನಿಶ್ಚೈಸದೀ ನಾ। ಲ್ವರಿಗೆ ನೆನವುಳ್ಳತಿಬಲನು ನೀ। ಹರಿಬವಿದು ತಾ ನಿನ್ನದೆನು ತನುಕೊಳಸಿದನು ರಣವ।೮॥ ಎಲೆ ನಿಶಾಚರ ರಾಯ ಚಿತ್ತೈ। ಸೊಲಿಸುವೆನು ಭುಜ ವಿಜಯ ಲಕ್ಷ್ಮಿಯ । ಸಲಿಸುವೆನು ರಿಪುವಿಜಯಕೀರ್ತಿ ಸ್ತಂಭ ಡಂಬರವ ॥ ಕಲಹವಿದು ಭವದೀಯ ಭಾಗ್ಯದ। ಬೆಳಸು ದೈವಾಧೀನ ತನ್ನ । ಗ್ಗಳಿಕೆ ಗಿದು ತಪ್ಪಲ್ಲವೆಸೆವೆನ ಭಟರ ॥೯॥ ಎಂದು ಬೀಳ್ಕೊಂಡಾ ಪ್ರಹಸ್ತನ। ನಂದಮಿಗೆ ತಕ್ಕೈಸಿ ತನ್ನಯ। ಹೊಂದೊಡವ ತೊಡಿಸಿದನು ಹೊಂಬಟ್ಟಲಲಿ ವೀಳಯವ। ಸಂದ ಸಕಲ ಶಿರಃಪ್ರಧಾನರಿ । ಗಂದಿ ನಿರುಳಿ ನೋಳಿತ್ತು ಸುರಕುಲ । ಬಂದಿಕಾರನು ಕಳುಹಿದನು ಬಳಿಕಾ ಚಮೂಪತಿಯ ॥೧೦॥ ಬರಿಸಿದನು ಬಳಿಕಾ ಪ್ರಹಸ್ತನ। ಹರ ಸರಕು

ಮಾಡದ ಸಾಹಸಾನ್ವಿತ ಸುಭಟ ಸಂಕುಲವ ॥ ತರಿಸಿ ನಿಖಿಳಾಭರಣ ದಿವ್ಯಾಂ | ಬರದಿ ಮನ್ನಿಸಿ ಕುಡಿತೆಯಲಿ ಕ | ರ್ಪುರವ ಮೊಗೆಮೊಗೆದಿತ್ತು ಬೋಳೈಸಿದನು ನಿಜಬಲವ ॥೧೧॥ ಕರಿಘಟೆಯು ಹದಿನೆಂಟು ಕೋಟಿಯ | ವರರಥವ ನಿಪ್ಪತ್ತು ಕೋಟಿಯ | ತುರಗವನು ತೊಂಭತ್ತು ಕೋಟಿಯು ನಸುರ ಪದಚರರ ॥ ಬವರ ಕೆರಡರ್ಬುದವನಾದಿನ | ದಿರುಳು ಮೇಳೈಸಿದನು ಕೂಗುವ | ಕರವ ಹೂಡುವ ಹಲ್ಲಣಿಪ ಹೊಡರಿದ್ದ ರಭಸದಲಿ ॥೧೨॥ ಮಗನ ಕಾಳಗ ನಾಳಿನದು ವೈ | ದೆಗವ ನೋವುಲಿತಃನುವನೊಸಂ | ಯುಗದೊಳೆಂ ದಳಬಳವ ನಸುರ ರೊಳರಿಯ ಬೇಕೆಂದು | ಪೊಗಿಸಿನನೊ ನಿಖಿಳಪುರದೊಳಗೆ ಗು | ಪ್ತಿಗರ ನೆಲನೆಲವಾಡಿದವು ದೀ | ವಿಗೆಗಳುರು ಸನ್ನಾಹ ಸೇನಾಮುಖದ ಮುಂಬಿನಲಿ ॥ ಕೇಳಿವೈ ಕುಶ ವೈರಿ ಸೇನಾ | ಜಾಲ ದುಬ್ಬರ ಸಮರದೊಳುನಿ | ಸ್ಸಾಳ ದಬ್ಬರ ವೆಬ್ಬಿಸಿತು ಹರಿ ಹಯ ದಿಶಾಂಗನೆಯ ॥ ತೋಳ ಮೇಲೊರಗಿರ್ದನಳಿಸೀ | ಲೋಲನನು ಕಂದೆರೆದು ರಕ್ಕಸ | ಕಾಳಗವಲಾ ಯೆನುತ ಹರಿತಡರ್ದನಂಬರವ ।೧೪॥ ಉದಯ ಮುಖದಲಿ ವೈರಿ ಬರವಿಳಿ | ದುದು ಮಹಾ ಗಿರಿ ದುರ್ಗವನು ಲಯ | ದೊಡಲಿ ನಗ್ಗದ ಹರಿನ ಹಣೆಗಣ್ಣೊಂದಿ ನಾಹವಕೆ ॥ ಉದುರುವಗಿಕಣಾಳಿಗಳ ಬಲು | ಹೊದರ ಪಾಳೆಯದಂತೆ ಮೊಳಗುವ | ಕದನಹರೆ ಹದಿನೆಂಟು ಕೋಟಿಯು ಘೋರ ಘೋಷದಲಿ ।೧೫॥ ಕಿಡಿಯನುಗುಳುವ ದಾಡೆಗಳ ಕೆಂ | ಪಡರ್ದಕಣ್ಣಾಲಿಗಳ ಕರ್ಕಶ | ವಡೆವ ವದನದ ಝಡಿವ ಕೆಮ್ಮೀಸೆಗಳ ಕೆದರಿಕೆಯ ॥ ಬಿಡುದಲೆಯ ನವ ಶೋಣಿತಾಂಬರ | ದುಡಿಗೆಗಳ ಘನರೌದ್ರಮಯ ದು | ಗ್ಗಡದ ರಕ್ಕಸ ಸೇನೆ ನಿಂದುದು ನಳನ ಕೋಹಿನಲಿ ॥೧೬॥ ಬರಸಿಡಿಲು ಸಿಡಿಲಂಬು ಡಂಬುಕ | ಗರವಳದ ಹಾಯ್ವಿಟ್ಟ ಹೊಯ್ವ | ಬ್ಬರದ ಹುಲಿ ಹರಿ ಯಕ್ಷ ಕುಲ ಮಲತಿರವ ಕಾಡ್ಗೋಣ ॥ ಎರಗು ವಗ್ಗದ ಶರಭ ಕುಲ ಮುರಿ | ಮುರಿದು ಮೋದುವ ಭೂತ ಗಣದು | ಬ್ಬರಿತ ದೊಡ್ಡನು ಮುಂದೆ ನಿಲಿಸಿದ ನಾ ಚಮೂ ರಮಣ ।೧೭॥ ನಿಲಿಸಿದನು ಸುರಗಿಯಲಿ ಭಂಡಿಯ | ಹಲವ ನೊಡ್ಡಿದನದ್ರಿ ಸಾರದ | ತಳಿಯ ತುಡು ಕಿಕ್ಕಿದನು ರಣ ರಾಟಣಿ ಸೂತ್ರಗಳ ॥ ಬಳಿವಿಡಿದು ಬಳಿಕಾಳು ತುರಗಾ | ವಳಿ ವರೂಥ ಮದೇಭ ದೊಡ್ಡನು | ನಿಲಿಸಿ ನಿಂದಿದ ನಸುರ ಸೇನಾನಾಥ ನಾಹವಕೆ ॥೧೮॥ ಉಬ್ಬರಿದವು ರಣದ ಚೂಣಿಯ | ಲುಬ್ಬುವರೆ ಶತಕೋಟಿ ಸಂಖ್ಯೆಯ | ಳುಬ್ಬಿರಿವ ರಣರಭಸಿಗರು ಮುಖ ಸನ್ನಿವೇಶದಲಿ ॥ ಕರ್ಬುರಾಶ್ವ ಪದಾತಿ ಹಯಬಲ | ದುಬ್ಬರದ ಭಾರಣೆಯ ನಿರ್ವಹಿನ | ನಿಬ್ಬರದ ಲೋಲಾಡುತಿರ್ದುದಜಾಂಡ ವನವರತ ॥ ೧೯ ॥ ಅಮಮ ಕಲ್ಪಕ ಕೋಟಿ ಮಾಲೆಯ | ಸಮರಮುಖ ಕಬ್ಬೇಳ್ವ ಕಾಲ | ಕ್ರಮದ ಯಮ ಕೋಟಿಗಳ ಕೋಳಾಹಲಕೆಯಂದದಲಿ ॥ ದ್ಯುಮಣಿ ತನುಜನ ಮುಂದೆ ನಿಂದಿ | ರ್ದಮರರಿಪು ಬಲ ದವನಿತನುಜಾ | ರಮಣ ನೀನಾ ರೆಂದು ಬೆಸಗೊಂಡನು ವಿಭೀಷಣನ ॥೨೦॥ ಈತನಾರೈ ಬಂದಹನು ಸಹ | ಜಾತನೋ ಸಂಭವನೋ ದಿವಿಜಾ | ರಾತಿ ದಶಕಂಠಂಗೆ ಹೇಳೆಂದರಸ ಬೆಸಗೊಳಲು ॥ ಈತನೀಗಲೆ ಜೀಯ ನಮ್ಮ | ಯಾತುಧಾನ ಶಿರಃಪ್ರಧಾನನು | ನೀತಿ ನಿಗಮ ನಿಧಾನ ಸತ್ವ ನಿಧಾನ ನಿವನೆಂದ ॥೨೧॥ ಇವನ ದೆಸೆಯಿಂದಾಯ್ತು ನಾನಾ | ಭುವನ ದೊಡೆತನ ಜೀಯ ಕೇಳೆ | ಮ್ಮವಗೆ ಸೇರಿತು ಸಕಲ

ತೋರದಿವರಿದು ವದ್ರಿ ಕುಜ ದು । ಬ್ಬೇರು ವೈಲಿಗೆ ಮಾಯೆಯುಲಿ ವೈ । ದೋರುವನು
ಜಯಮುಖದೊಳಬ್ಬರ ದುಬ್ಬುಗವಳದಲಿ ॥ ತೋರಿ ತೋರದೆ ಕೋದಸೇಪರಿ ।
ಮೂರನೈರ್ಬುದ ಬಲವು ಬಿದ್ದುದು । ದೂರು ದೂಷಣ ಭೀಷಣನ ಬಳಿಯಲಿ ಸಿಶಾ
ಚನನ ॥೪೫॥ ಹನುಮನೊಡ್ಡನು ಮುರಿದು ಹರಿ ನಂ । ದನನ ಸೇನಾವನಧಿಯನು ನೆರೆ ।
ತುಳುಕಿ ಮೋಗದೀಂಟಿದನು ನಳ ನೀಲಾದಿ ನಾಯಕರ ॥ ಮೊನೆಯ ಮೋಹನವನು
ನಿವಾರಿಸಿ । ಪನಸ ಗವಯ ಗವಾಕ್ಷ ಶತಬಲಿ । ವಿನತ ವೀರ ಸುಷೇಣರನು ಹಲಗಡಿದು
ಬೊಬ್ಬಿರಿದ ॥೪೬॥ ಗಾಯವಡೆವರು ವಿುಕ್ಕ ಸೇನಾ । ನಾಯಕರು ಬಳಿಕಾ ಪ್ರಹಸ್ತನ ।
ಸಾಯಕದ ಬಲುಗಲಹ ಸೀವರಿಕೆಯನು ರಘುಕುಲದ ॥ ರಾಯರಲಿ ಮುಟ್ಟಿಸಿತು
ಸೇವಿದ । ನಾಯುಧದ ಹೊಳಹಿನಲಿ ಘನ ರಾ । ದ್ರಾಯಮಾನಿತ ನಾ ವಿಭೀಷಣನಸುರ
ನಿದಿರಿನಲಿ ॥೪೭॥ ಮರುಳೆಲೇ ನೀನಕಟ ಮೊಲನು । ಬ್ಬರ ಮೃಗೇಂದ್ರನಕೂಡೆ ನೀತ ।
ಜ್ಞರಿಗೆ ಗುರು ನೀನೆಸಗಬಹುದೇ ವಿವೇಕಶೂನ್ಯತೆಯ ॥ ನರನೇ ರಘುಪತಿ ಕೆಲಕೆಸಾ ಕ।
ರ್ಬುರವಜಾಳಿಯ ಮಿಕ್ಕ ದಿವಿಜರ । ನೆರವಿಯಲ್ಲಿದು ಮೆರೆಯದಾಹವವಿಲ್ಲ ನಿನಗೆಂದ ॥
ಗದೆ ಬಿರಿಸು ನನ್ನದು ವಿವೇಕವ । ನೊವೆದು ರಣವನು ರಾಮಭದ್ರನ । ಲೊದಗಿದರೆ
ಸೈರಿಸುವರಲ್ಲಾವ್ ಕೆಲಕೆ ಸಾರೆನುತ ॥ ಇದಿರೊಳಯ್ದುವ ರಕ್ಕಸನ ರಥ । ದಿದಿರಿನಲಿ
ನಿಂದಾ ವಿಭೀಷಣ । ನುದುರಿಸಿದ ನುರುಗಿಡಿಯ ಝಾಡಿಯ ಗದೆಯ ಗಾಢದಲಿ ॥೪೮॥
ಎಂಬ ನುಡಿಯಿಂದೊಳಗೆ ಲಯದು । ಗ್ರ್ಯಾಂಬಕನ ಲಳಿಯಂತೆ ರೋಷಾ । ಡಂಬರದ
ಡಾವರದ ಲಗ್ನಿಕುಮಾರ ಖತಿಯಲಿ. ॥ ಅಂಬುಜಾಕ್ಷನ ಸರಿಸದಲಿ ರಣ । ಡೊಂಬಿಗನ
ಕಂಡನುವು ವಿಲಯಾ । ಡಂಬರದ ಕೋಪದಲಿ ಕಿಡಿಗೆದರಿದನು ಕಲಿ ನೀಲ ॥ ೪೯ ॥
ಅಕಟ ರಘುರಾಜೇಂದ್ರನಲಿ ಹಾ । ಯಿಕಿದನೇ ಸಮರವನು ತಾ ನೀ । ಸಕಲ ಬಲ
ದೊಡೆತನವ ಹೊತ್ತುದು ವ್ಯರ್ಥವಾಯ್ತೆನುತ ॥ ಭೃಕುಟ ಬದ್ಧ ಸರೋಷ ದಂತ ।
ಪ್ರಕಟ ಪೀಡಿತ ಕಂಪಿತಾಧರ । ನಿಕಟ ನಿರ್ಭರ ಶೌರ್ಯನೈದಿದ ನಸುರ ದಳಪತಿಯ ॥೫೦॥
ಈತ ಬರಲೀತನ ಕಠೋರದ । ರೀತಿಯನು ಕಂಡಸುರರಾಯ ನ । ಜಾತ ಶತ್ರುವಿಗೆರಗಿ
ಹಂಬರಿಕೆಯಲಿ ಹೆಜ್ಜೆಗಳ ॥ ಆತು ನಿಂತೈದಿದನು ಬಳಿಕೀ । ವೀತಿ ಹೋತ್ರನ ಸುತನ
ಘನ ರೋ । ಷಾತಿಶಯ ದುಬ್ಬರವ ಹೊಗಳುವದೇನು ತಾನೆಂದ ॥೫೧॥ ಏನೆಲವೊ ಖಳ
ಖಳನ ದಳಪತಿ । ನೀನೆ ತಾಸಿದು ಅರಿದುದಿಲ್ಲ ದ । ಶಾನನ ಸಹಭವನ ಸೂಚಿಸಲಾದು
ದರಿವೆನುಗೆ ॥ ಈ ನರೇಂದ್ರನಕೂಡೆ ಕದನವ । ನೀನು ಕೈಕೊಳಬಹುದೇ ಕಪಿಸೇ ।
ನಾನಿ ತಾನಿದೆ ತರಳತನ ನಿನಗ ಚಿತನೇ ಯೆಂದ ॥೫೨॥ ಅಹುದು ನೀವಾ ನರವರೂಥಿಗ।
ಗಣಿತಬಲ ಸೇನಾನಿ ರಣವೆನ್ನಿ । ಹುದು ಹೇಳಿದು ಲೇಸುಮಾಡಿದೆ ದೋಷಹೊರದಂತೆ॥
ಇಹ ಪರಂಗಳೊಳೆರಡರಲಿ ಸ । ನ್ನಿಹಿತವಾವುದು ನಿನಗೆ ಹೇಳೆನ । ಲಹುದು ಮಾಡುವೆ
ನೆನುತ ಹೊಳೆದ ನಂಬಿನಲಿ ಕಪಿಯ ॥೫೩॥ ಅದ್ದನೋ ದಳಪತಿ ಧರಿತ್ರಿಯ । ವದ್ದಳವ
ವಾರುಧಿಯೊಳೆನು ತೊಳ । ಬಿದ್ದು ಹೊಕ್ಕುದು ಹನುಮ ಹರಿಸುತಸುತ ಸುಷೇಣಕರು ॥
ಉದ್ದುರುಟು ಖಳನವರ ಸಮರವ । ಶಿದ್ಧವನಿತರೊಳಂಬ ನಗಲಿಸು । ತೆದ್ದ ನಬುಧಿಯ
ಸುರಿದು ಸೊಕ್ಕುವ ಶಿಖಿಯವೊಲು ನೀಲ ॥ ೫೪ ॥ ಕುಲಿಶಕೋಟಿಯ ಕೂಟ ನೀತನ ।
ಬಲದ ಮುಷ್ಟಿಯಲಿದ್ದುದೋ ಜಗ । ದಳವಿ ನಸಮಾಂಬಕನ ನೊಸಲಿನ ವಿಷಮ

ಲೋಚನನ| ಕುಳುಗಳಿಗಗ್ನಿ ಜನ ಮುಷ್ಟಿಯ| ಬಲಿಯ ಲವತರಿಸಿದುದೋ ಪೇಳೆನೆ|
ಲೊಲಮ ತಿವಿದನು ತೀವ್ರಗತಿಯಲಿ ಖಳ ಚಮೂಪತಿಯ || ೫೬ || ಓಟಿಮುರಿದುದು
ಸೀಸಕದ ರಥ| ನಟ್ಟುದಿಳೆಯಲಿ ರಕುತಜಲ ಪೊಸ| ಲಿಟ್ಟು ಹರಿದುದು ಹಣೆವಿಡಿದು
ಪಾದಾಂತ ಪರಿಯಂತ || ಇಟ್ಟನವ ಬಳಿಕೀತನನು ಹೇ| ರಿಟ್ಟಿಯಲಿ ಓರಿಕಿನಲಿ
ಹಾಯ್ದುದು| ಬೆಟ್ಟಗೈಗಳ ಘಟರು ಹಾಯೆನುತೊದರಿತಿದಿನಲಿ |೫೭|| ಉಗುಳಿತಾಗರು
ಣಾಂಬುಧಾರೆಯ| ನಗಲದಲಿ ಬಳಿಸಲಿಸಿ ರಕ್ಕಸ| ನಗಿದು ತಿವಿದನು ಕಪಿಯ ಕಿಗ್ಗ
ಟ್ಟಿನ ಕಠಾರಿಯಲಿ || ಜಗದೊಳೇನತಿಬಲಸೋ ವಹ್ನಿಯ| ಮಗನು ಮನದಲಿ ನೋವ
ನೋತದೆ| ಜಗವು ಫೇಯೆನಲೆರಗಿದನು ರಕ್ಕಸನ ದಳಪತಿಯ ||೫೮|| ಕಳಚಿ ಖಳನಾ
ಕಪಿಯ ಗಾಯವ | ನೋಲೆದು ಪರಿಘದಲೆರಗಲದ ಕಪಿ| ಸೆಳೆದು ಬಿಸುಟಬ್ಬರಿಸಿ ತಿವಿ
ದನು ಹಗೆಯ ಹೇರುರವ || ಮಲಕು ಮಂಡೆಯಲಸುರನಾಯಂ| ದಿಳುಪಿದನು ಮುಸಲ
ವನು ಮಸ್ತಕ| ದಲಿ ಮರುತ್ಸಖ ಸುತನು ಸುಮ್ಮಾನಿಸೆ ಸುರವ್ರಾತ || ೫೯ || ನೋವ
ನೋವವೆ ಬಗೆದ ವೀರರ| ದೇವನೊಳಹೊಕ್ಕವನಜನ ಹರ| ರಾವು ಮಜ ಭಾಪೆನಲು
ತಿವಿದನು ಬೀಳಲರಿಭಟನ || ಹಾವು ಹದಿನ ಪದಹತಿಗೆ ನೆರೆ | ನೋವವೊಲು ಕೆಲ
ಕೊರಗಿ ರಕ್ಕಸ| ನಾಲಿ ಘಾತಿಯೊಳೆದ್ದು ಡೊಕ್ಕರವಾಯ್ದನಗ್ನಿಜನ ||೬೦|| ಡೊಕ್ಕರಿಸಿ
ದರಿಭಟನ ಬೀಸಿದ| ಛಕ್ಕೆ ಬಿಸುಟುಬ್ಬರಿದು ಬೊಬ್ಬೆಯ| ನಿಕ್ಕಿ ಬಾಹಪ್ಪಳಿಸಿ ನಿಲೆ
ನಿಮಿಷದಲಿ ಖಳಮುಳಿದು || ಇಕ್ಕಲಿಸಿ ನಭದಿಂದ ಗಿರಿಶಿಖ| ರಕೆ ಸುಳಿವ ಮಹೋಗ್ರ
ಜಲದವೊ| ಲೆಕ್ಕತುಳದಲಿ ಬಂದು ಹಳಚಿದ ನಗ್ನಿನಂದನನ ||೬೧|| ಬಿದ್ದನಗ್ನಿಜನಿಳೆಗೆ
ಬಲು ಸಿಡಿ| ಲೊದ್ದ ಗಿರಿಯಂದದಲಿ ಮನದೋ | ಳದ್ದ ಶರಧಿಯೊಳೇಳ್ವ ಮಂದರ
ದಂತೆ ಕಲಿ ನೀಲ || ಎದ್ದು ತಿವಿದನು ಖಳನ ಕಾಲನ| ಬಿದ್ದಿನರು ಕಂಗಳಿಗೆ ಸುಳಿಯಲು|
ಹೊದ್ದಿ ಹೇರುರದೊಳಗೆ ಮಂಡಿಸಿ ಖಳನೊಳಿಂತೆಂದ || ೬೨ || ಬರಿಸಿ ನಸುರನ ದಳದ
ಭಾರದ| ಹೊರಿಗೆವಾಳನು ನೀನು ನಮ್ಮನು | ಹೊರಲು ಸೈರಿಸದೆಪೆನೆ ಸಾಹಸವುಳ್ಳ
ಭಟನಹುದು || ಮರೆಯ ಮಾತೇಕೆಲವೊ ಬಂದಿಹೆ| ತೆರಪಿನಲಿ ಬಲು ವೃತ್ತ್ಯ ಬನ
ರದ || ಲರಿವು ನಿನಗುಂಟಾದಡೆಚ್ಚರು ಬೇಗ ನೀನೆಂದ ||೬೩|| ಎನುತ ವದನದಮೇಲೆ
ಮುಷ್ಟಿಯ | ಹನುಮ ಹೊಗಳಲು ಹಾಯ್ದಿದನು ಕ| ಗ್ಗರಿಯ ಕತ್ತಲೆ ಕವಿಯೆ ಕಂ
ಗಳಿಗಸುರ ದಳಪತಿಯ || ವನಚರರ ದಳಪತಿಯ ಗಾಯವಿ| ದೆನುತ ಮೆತ್ತೊಮ್ಮೆರಗಿ
ದನು ಲೇ| ಸೆಸೆ ವಿಭೀಷಣದೇವ ದೇವಾದಿಗಳು ಕೊಂಡಾಡೆ || ೬೪ || ಎಲವೊ ರಕ್ಕಸ
ಮಾರಿಯ ಡಾಣಲಿಗೆ || ಸಿಲುಕಿ ಶಿಶು ಜೀವಿಸುವುದೇ ಗಂ| ಟಲಿನ ಗಾಳದ ಮೀನು ನುಗು
ವುದೇ ಮರಣಭರದ || ಅಳಿವು ನಿನಗಿನ್ನೆಂದು ಕೈಯಲಿ | ನೆಲೆ ಕಣಾ ನಿನಗೆನುತ
ಬಾಹಾ| ಲುಳಿತ ಬಲನುಬ್ಬೆದು ತಿವಿದನು ಮತ್ತೆ ರಕ್ಕಸನ ||೬೫|| ತಪ್ಪದೀ ನೀನೆಂದ
ನುಡಿಯನು| ತುಪ್ಪರಿಸಿದುದು ಜೀವ ನಭದೊಳ| ಗಪ್ಪಿದುದು ಹೆಸರೆನಿಸಿದಗ್ಗದಸುರ
ನಿತಂಬಿನಿಯ || ಉಪ್ಪರದ ಹರುಷದಲಿ ನಿಜಸುತ| ನಿಪ್ಪೆಡೆಗೆ ಕಳುಹಿದನು ಕನಕದ|
ಕಪ್ಪಡವ ಸಿಖಿ ಸುರಿದರಮರರು ಕುಸುಮಮಯ ಮಳೆಯ || ೬೬ || ತೆಗೆದುಕೊಂಡವು
ಹೆಣನಸಲ್ಲಿಯ| ವಿಗಡರಕ್ಕಸಭೂತ ಹಗೆ ಕಾ| ಳಗವು ನಿನಗೇಕೆನುತ ಹರಸುತ ಹವ್ಯ
ವಾಹಜನ || ಮಗನೆ ಕೇಳ್ವೆ ಬ್ರಹ್ಮದೇವರ | ಮಗನ ವಾಲಿಯ ಮಗನ ವೈಂದನ|

ಪಿಗಡ ವೀರದ್ವಿವಿದರಹಿತರು ಸಾರಿದರು ದಿವವ॥೬೭॥ ತುಂಗಬಲ ಕಲಿನೀಲ ಸುರು ಸಮ। ರಾಂಗಣದೊಳಹಿತ ಪ್ರಹಸ್ತನ । ಸುಂಗಿ ನೊಣದಭಿಗತ ಮಹೋತ್ಸವ ವಾರ್ತೆಯನು ಜಗದ ॥ ಕಂಗಳಧಿಪತಿ ತನ್ನ ಸಖವಡ । ಬಂಗೆ ಸೂಚಿಸಲೆಂದು ಕಡಲ ತ । ರಂಗವನು ಬಿಗಿದಿಳಿದನುತ್ಸಾಹದಲಿ ಪಶ್ಚಿಮವ ॥೬೮॥ ಇವನದಾರೆಂದೆನೆ ವಿಭೀಷಣ । ನವನಿಪತಿ ಗಿಂತೆಂದನೀತನು । ತನಪದಾಬ್ಜವ ಮರೆ ವೊದಲು ತಾನಸುರದಳಪತಿಯ ॥ ಯುವತಿ ಗಿವ ಮಗ ಬಂದನೀಗೆನೆ । ಯುವರಳದ ಸಂತೋಷದಲಿ ಭೂ । ಧವನು ತೊರವೆಯ ರಾಯ ನಸುರಾನುಜಗೆ ನೇಮಿಸಿದ ॥ ॥೬೯॥

ಹತ್ತೊಂಭತ್ತನೆಯ ಸಂಧಿ ಸಮಾಪ್ತಂ.

ಇಪ್ಪತ್ತನೆಯ ಸಂಧಿ.

ಸೂಚನೆ॥ ವೀರ ಧೀರೋದ್ಧಾತ ರಣ ಲಯ । ಭೈರವನು ಬಾಹು ಪ್ರತಾಪನು । ದಾರ ಲಂಕೇಶ್ವರನು ರಾಮನ ಸಮರ ಕನುವಾದ ॥

ಪದ್ಯ॥ ಮಗನೆ ಕೇಳ್ಕೈ ಕುಶನೆ ಕಾಲನ । ನಗರಿಗಭಿಮುಖನಾದ ಮಂತ್ರಿಯ । ಜಗುಳಿಕೆಯ ಕೇಳ್ದಸುರಪತಿ ಕಳವಳದ ಕರಣದಲಿ ॥ ಉಗುಳಿದನು ತಂಬುಲವ ತಾನೇ । ಹೋಗುವೆ ನಹಿತನ ರಣಕೆನುತ ಹೊಗೆ । ನೆಗೆದ ಕೋಪಜ್ವಾಲೆಯಲಿ ಧಳ್ಳಿಸಿದ ನಡಿಗಡಿಗೆ ॥೧॥ ನಾಳಿನಲಿ ನರಪತಿಯ ತನು ಕೀ । ಲಾಲವನು ಕಳಚುವೆನು ರಣ ಭೂ । ತಾಳಿಗನುಚರ ನಾಗಬಂದ ವನೌಕಸಾಧಿಪನ ॥ ಕಾಲ ನಣನೊಳ ಗಡ ಸುವೆನು ರಣ । ದಾಳುತನ ಕೊದಗಿದ ವನೇಚರ । ಜಾಲವನು ಜರುಗಿಸುವೆನೆಂದಲುಗಿದನು ಖಂಡೆಯವ ॥೨॥ ಕಳುಹಿದನು ಕೈಸನ್ನೆಯಲಿ ಮಂ । ಡಳಿಯ ಮನೆಯ ರಕ್ಕಸರ ನತಿ । ಬಲರ ನನುಪಮ ರಣದ ಘಾಟ ಕಿರೀಟ ವರ್ಧನರ ॥ ಹಳಹಳಿಕೆ ಹಲುವಾದ ಮುಖ ಮಂ । ಡಲದ ಜಯ ಮುಖ ನಾದಿಯಲಿ ದಶ । ಗಳನು ದಂತಾರವನು ಬಿಗುಹಿನಲಿಳಿದ ನಾಸನವ ॥೩॥ ಪಿತನ ಮನದಷ್ಯಂತರವ ನರಿ । ದತುಳ ಬಲ ಬಲ ವೈರಿ ಜಿತು ಪರಿ । ಮಿತನ ಕೇತನ ಕೈಯ್ಯ ನೊಡನೈದಿದನು ಬಳಿ ಸಲಿಸಿ ॥ ಮತವು ಬೇರಿನ್ನೇನು ಸಮರ । ಸ್ಥಿತಿಗೆ ಮಿಕ್ಕಿನ ಭಟರು ರಣ ದಾ । ಯತದ ಲೊದಗಲಿ ತನ್ನ ಬಳಿಯಲಿ ನಿಲುವೆ ತಾ ನೆಂದ ॥೪॥ ಹೊಕ್ಕು ಹೊಡಕರಿಸುವೆನು ನಾಳಿನ । ಲೆಕ್ಕತುಳದಲಿ ರಣವ ನೌತಣ । ವಿಕ್ಕುವೆನು ವಿಲಯಾವಿ ದೇವರಿ ಗರಿ ಭಟಾವಳಿಯ ॥ ಸಿಕ್ಕಿ ಕೊಂಡಿರ್ದ ಪ್ರತಾಪದ । ರಕ್ಕಸಾಗ್ನಿಯ ಸಾಹಸದೊಳು । ಬ್ಜಿಕ್ಕಿಸುವೆ ನೆಂದಗಲಿಸಿದ ನಂತಸ್ಥ ವಿಹ್ವಲವ ॥೫॥ ಧ ರಧುರಂಧರಿಕೆಯಲಿ ತಾನೇ । ಧರಿಸಿ ಕಳುಹಿದ ನಿಂದ್ರಜಿತುವನು । ನೆರಹಿ ಕೊಂಡರು ನಾಳಿನಾಹವ ಕುರು ಚತುರ್ಬಲವ ॥ ಮರಳಿ ಮತ್ರಿಸ್ವಾವ ಮತವನು । ಸ್ಮರಿಸ ಬೇಡೇಳೆಂದು ಮಂಡೋ । ದರಿಯ ಮಗನನು ಕಳುಹಿದನು ನಿಶಿಯಲಿ ದಶಗ್ರೀವ ॥೬॥ ಮೇಳವಿಸಿದನು ಬಲದ ಮಣಿಗಣ । ದೋಳಿ ವೆಳಗಿನ ರಂಜೆ ಹಣ್ಣಿದ । ನೀಲಗಿರಿ ಸನ್ನಿಭ ಮದೇಭ ವಜೋಘ ಧರೇಜೆಯಲಿ ॥ ಏಳು ಕೋಟಿಯ ಹೊನ್ನ ರನ್ನದ । ಕೀಲಣದ ಹಲ್ಲಣದ ಹಯ ಹದಿ । ನೇಳು ಕೋಟಿಯ ರಾವುತರು

ಸಹಿ ತಸವು ಸಂಗರಕೆ ॥೭॥ ತೋರವಿಪ ಮಣಿ ಚಿತ್ರಗಳ ಚೀ । ತ್ಕಾರಗಳ ಪಡಿತಳದ
ಪಚ್ಚೆಯ । ಪಾರಿಯದ ಪಲ್ಲವ ಪತಾಕಾವಳಿಯ ಪಳಹರದ ॥ ಸೂರಿಯನ ತುರಗಗಳ
ನೇಳಿವ । ವಾರುವಗಳುಪ್ಪರದ ಹೊಸ ಹೊಂ । ದೇರು ಹೊಳಕಿದ ವೇಳುಕೋಟಿ
ಮಹಾ ರಥರು ಸಹಿತ ॥೮॥ ಖಡುಗ ಖೇಟಕ ಕುಂತ ಬಿಲು ಕ । ಕ್ಕಡೆ ಕಠಾರಿ ಮುಸುಂಡಿ
ಮುದ್ಗರ । ಕಡೆಯ ಸರಪಳಿ ಹಾರ ಹೀರಾವಳಿಯ ಕುಂಡಲದ ॥ ತೊಡಹಿ ದನು ಲೇಪ
ನದ ಹುವ್ವಿನ । ಮುಡಿಯ ರಕ್ಕಸರಾಯ ದಳ ಬರ । ಸಿಡಿಲ ಜಂಗುಳಿಯಂತೆ ಕೈಗೆ
ಸಿತು ಶತಕೋಟಿ ॥೯॥ ಆ ದಿವಸದಿರುಳೀಪರಿಯ ಸಂ । ಪಾದಿಸಿದ ಸಾಹವಕೆ
ರಕ್ಕಸ । ಕೈದುಗಳ ಸುಬ್ಬರ ದತುಲ ತೇತ್ರವನು ಬಳಿ ಕೀತ ॥ ಬೂದಿವವ ನೊಳ
ಕೊಂಬ ತಿಮಿರ ಮ । ಹೋದಧಿಯ ಬಗೆದೆದ್ದ ನಬುಧಿಯ । ಭೇದಿಸಿದ ವಡ ಬಾಗ್ನಿಯ
ವೊಲಿನ ನುದಯ ಶಿಖರಿಯಲಿ ॥೧೦॥ ಬವರ ದಾದಿಯ ಲಸುರಪತಿಯು । ಪ್ಪವಡಿಸಿದ
ನಿದ್ವೆಸೆಯ ಮಂಗಳ । ರವದ ಪಾಠಕ ಸೂತ ಮಾಗಧರುಗಳ ಸೂಕ್ತಿಯಲಿ ॥ ರವಿಗೆ
ಸೂಸಿ ಜಲಾಂಜಲಿಯ ನಜ । ಭವ ನಿಶಾಚರ ಗುರುಗಳಿಗೆ ಮಣಿ । ದವಗಡೆಯ ಖಳ
ರಾಯನನುವಾದನು ಮಹಾಹವಕೆ ॥೧೧॥ ಹರನ ಮಕುಟಗಳೈದ ನಾ ಸರ । ಸಿರುಹ
ಭವನ ಕಿರೀಟ ನಾಲ್ಕನು । ವರ ನಿಕುಂಭಿಣಿ ಯಿತ್ತ ಜೀವಸ್ಫುರಿತ ಮಣಿಮಯದ ॥
ಸುರುಚಿರದ ಕೋಟೀರ ವಂದನು । ಧರಿಸಿದನು ದಶಮೌಳಿಯಲಿ ಶಶಿ । ತರಣಿ ಕಿರಣದ
ಕುಂಡಲವ ನಿಕ್ಕಿದನು ಕಿವಿಗಳಲಿ ॥೧೨॥ ಸುರಪ ಶಿಖಿ ಯಮ ನಿರುತಿ ಜಲಧೀ । ಶ್ವರ
ಸವಿಹಾರಣ ರಾಜ ರಾಜರ । ರೊಳಗೆ ಗೆದ್ದವರುಗಳ ಹೆಸರಿನ ಹಲವು ಹಾಹೆಗಳ ॥ ಬಿರು
ದುಗಳ ಕಡಗವನು ಕಾಲಲಿ । ಧರಿಸಿದನು ಕವಿರಂಗ ರಂಜಿತ । ಸುರುಚಿರದ ಪದಕವ
ನಲಂಕರಿಸಿದನು ಕೊರಳಿನಲಿ ॥೧೩॥ ಸುರ ನರೋರಗ ಜಗದ ವೀರರ । ಕೊರಳಿಗಿಕ್ಕಿದ
ಖಂಡೆಯವ ಸಿರಿ । ಕರಗಳಲಿ ಘಟಿಸಿದನು ಸಲೆನಗಗಳ ನನುವರದ ॥ ಸಿರಿಗೆ ಶೃಂಗಾರ
ಸುವ ವೊಲು ಬಂ । ಧುರದ ಶೋಣ ಸುರಾಗ ರಚಿತಾಂಬರವ ರಕ್ಕಸ ದೇಶಿಯಲಿ ಬಿಗಿ
ದುಟ್ಟನಸುರೇಂದ್ರ ॥೧೪॥ ಮೃಗಮದದ ತಿಲಕವನು ನೊಸಲಲಿ । ನಿಗುರಿಸಿದ ನೀರ್ಕೈ
ದರಲಿ ಮಘ । ಮಘಿಪ ನೂತನ ಯಕ್ಷ ಕರ್ದಮವನು ನಿಜಾಂಗದಲಿ ॥ ಒಗಿಸಿ ಸುರ
ನಂದನದ ಹೊಂ ಗೇ । ದಗೆಯ ತುರುಬಿ ನೊಳಿರುಕಿ ಪೂದಂ । ಡೆಗಳ ಹಾರಾವಳಿ
ಸಹಿತ ಹಸರಿಸಿದ ನಸುರೇಂದ್ರ ॥೧೫॥ ಹರನು ಹರಸಿದು ಕೊಟ್ಟ ರಣಭೀ । ಕರದ
ಕೊಗರಿನ ಚಂದ್ರಹಾಸವ । ಕರಗಳೀರ್ಕೈದರಲಿ ಝಾಡಿಸಿ ಝಡಿದು ಲುಳಿವಡೆದು ॥
ಥರದ ಮೈ ಯುಬ್ಬಿನಲಿ ಮದ ಮ । ತ್ಸರದ ಮನ ದಾಯತಿಕೆಯಲಿ ದಶ । ಶಿರನು
ನಿಂದಿರೆ ನಿಂದು ಜಯ ಜಯ ವೆಂದುದಮರಗಣ ॥೧೬॥ ವಿಲಯ ಕಾಲದ ರುದ್ರ
ನಿಮೈತ್ರ । ದಳದನೋ ಸಂವರ್ತ ಭೈರವ । ನಳಿವು ದಶ ಗುಣವಾಯ್ತೊ ದಶ ದಿಗು
ದೇವತಾ ಶಕ್ತಿ ಬಲಿದು ಬಿಡಪೊಂದಾಯ್ತೊ ಯೆನೆ ಸ । ಮ್ಮಿಳಿತ ಶೌರ್ಯದ ಸುಪ್ರ
ತಾಪದ । ಝಳದ ಝಾಡಿಯಲಾ ನಿಶಾಚರ ರಾಯ ರಂಜಿಸಿದ ॥೧೭॥ ಎತ್ತಿದರು
ರತುನಾರತಿಗಳನು । ಹೊತ್ತ ಹೊಸ ಜವ್ವನದ ಹೊರಗಿನ । ಹೊತ್ತ ನಗೆಗಳ ಮುಗದ
ಹೊಗ ದವ್ವಳಿಪ ನಯನಗಳ ॥ ಉತ್ತಮದ ಯುವತಿಯರು ಹಣೆಯಲಿ । ಹತ್ತಿಸಿದ
ರಕ್ಷತೆಯ ಭಾಗ್ಯದ । ಬಿತ್ತ ಬಳಿ ಬಳಿ ದಿಡುಕುವವೊಲಡಕಿದರು ರತುನಗಳ ॥೧೮॥

ಹರಸಿ ಮುತ್ತಿನ ವೀರ ಸೇಸೆಯ | ತರುಣಿಯರು ಸೂಸಿದರು ವಿದ್ಯಾ | ಧರರು ಹೊಗ
ಳದ ರಂಕಮಾಲೆಯ ನಾರದಾದಿಗಳು || ಸುರಪ ಸೋಂಕುವ ಸೂಳೆಯರು ಸಿಂ | ಗರಿಸಿ
ನರ್ತಿಸಿದರು ನಭಾಗ್ರದೊ | ಳರರೆ ವೈಭವ ವೆಂತುಟೋ ತ್ರೈಲೋಕ್ಯ ದಲ್ಲಣನ ||೧೯||
ಹೊಡೆಯ ಹೇಳೋ ಭೇರಿಗಳ ಪಡೆ | ನಡೆಯಲೋ ಸಂಗರಕೆನುತ ಲವ | ಗಡೆಯ
ರಕ್ಕಸರಾಯ ಹೊರವಂಟನು ನಿಜಾಲಯವ || ಎಡಬಲದ ಮಂದಿಗಳ ಸೆಲಸು |
ಗ್ಗಡದ ಪಾಠಕರುಗಳ ರನ್ನದ | ಪಡಿಯ ಕಂಚುಕಿಗಳ ಗಢಾವಣೆ ಗಾಢಿಸಿತು ನಭವ ||
ಅರರೆ ಪಾಯವಧಾರು ಜೀಯನೆ | ಸರಕುಗಟ್ಟಿತು ಭವನ ಭುಜಗೇ | ಶ್ವರನ ಕೆಲ
ಸಂಭಾಳಿಯನೆ ಹಾಳಾಯ್ತು ಸುರಲೋಕ || ಅರರೆ ಮಾ ಮಜಮಾಯೆ ಮೇಲು |
ಪ್ಪರವು ಹುಳುಹುಳು ಯೆನೇ ಬೊಮ್ಮನ | ಪುರಿಗೆ ಗೂಳಿಯ ಡೆಗೆದ ವಭ್ರದ ಭೂರಿ
ಭುವನಚಯ ||೨೦|| ಮಲೆವ ಸುಭಟರ ಗಂಡ ಸುರತತಿ | ಕಳಶ ಕುಲ ಭೇರುಂಡ
ಕಂಪಿತ | ಕುಲಿಶ ಸದೃಶ ಮಹೋಗ್ರ ಕೌಕ್ಷೇಯಕ ಭುಜಾದಂಡ || ವಿಲಸ ದಭಿನವ
ರುದ್ರ ರೌದ್ರಾ | ಕಲಿತ ಶೌರ್ಯ ಸಮುದ್ರ ಮುದ್ರಿತ | ಫಲ ಸುಭೋಗ ಸಮುದ್ರ ಜೀ
ಯೆಂದೊದರಿತಮರಗಣ || ೨೧ || ಸುರಪ ಶಿಖಿ ಜಯ ವಿಜಯ ಯಮ ಕಂ | ಧರ
ಕೃಪಾಣ ನಿಶಾಟ ಕರುಣಾ | ಕರ ಸಮುದ್ರಾಧೀಶ ಘನ ಪೌರಿನ ಗಳಪಾಶ || ಪುರಹರ
ಪ್ರಿಯ ಹೃದಯ ಶೂರೋ | ತ್ಕರ ಗುಣಾನ್ವಿತ ಹರ ಸರೋರಜ | ಪರಮರಕ್ಷಕ
ಯೆಂದು ಹೊಗಳಿತು ರಾಕ್ಷಸವ್ರಾತ ||೨೩|| ಕೂಡಿ ತಾ ಕ್ಷಣ ರಾವಣಿಯ ಕೈ | ಗೂಡಿ
ಕೆಯ ಜೀವಾಳ ಜೋಕೆಯ | ಜೋಡಿ ಸೀಸಕ ಶರ ಶರಾಸನ ಶಸ್ತ್ರ ಪಾಣಿಗಳು ||
ಜೋಡಿಕೆಯ ಚತುರಂಗ ಬಲ ವ | ಲ್ಲಾಡಿ ತಿಳಿ ವಿಲಯಾಗ್ನಿ ಜಿಹ್ವೆಗ | ಝಾಡಿಕೆಯ
ಕುಡಿಯಂತೆ ಪಡಿಗೆದರಿದುವು ಕೈದುಗಳು ||೨೪|| ಅರಸುತನ ಔದಾರ್ಯ ಶಕ್ತಿಯ |
ಪರಮ ವೈಭವ ವೆಂತುಟೋ ದಶ | ಶಿರನು ಸೂಸಿದ ನಖಿಳ ಸುಭಟಾವಳಿಗೆ ಮನ
ದಣಿಯೆ || ವರ ರತುನ ಭಂಡಾರ ಬಹಳಿತ | ಸುರು ಚಿರಾಭರಣಾದಿಗಳ ಕ | ರ್ಪೂರ
ಸುಗಂಧಾ ದ್ಯಖಿಳ ವಸ್ತ್ರೋತ್ಕರವ ಸೊಲವಿನಲಿ ||೨೫|| ಜೋಳವಿಸಿದನು ಸಕಲ ಸುರ
ಸುಭ | ಟಾಳಿಗಳ ಸನ್ಮಾನದಲಿ ಸಂ | ಸ್ಥೂಲತರ ಸಂಸ್ಕೃತಿಗಳಲಿ ಸುಮ್ಮಾನ ದುಬ್ಬಿ
ನಲಿ || ಕೇಳಿದೈ ಯೆಲೆ ರಾಜಸೂನು ಸು | ರಾಳಿ ಬೆದರಲು ಸಕಲ ಸೇನಾ | ಜಾಲ ಪೊರ
ಮಡು ತಿರ್ದುದಾ ಲಂಕಾ ಮಹಾಪುರವ || ೨೬ || ತುರಗ ಶತಮಿತದಮಲ ಘಂಟಾ |
ತುರಕೆ ರತುನವ ಸುರಿದು ಬಲವಂ | ದರಿ ದಿಶಾಪಟಮುಲ್ಲ ಸೇರಿದ ರಥವ ನಾ ಬಳಿಕ ||
ಸುರರ ಸೂತರ ಮಾಗಧರ ತುಂ | ಬುರರ ಜಯಜಯ ರಭಸದಲಿ ಶಂ | ಕರ ವಿರಿಂಚಿಗ
ಳಿೀವ ವಿಮಲ ಸ್ವಸ್ತಿ ವಾಚನೆಯ ||೨೭|| ತೇರ ರಾವಣ ಸೇರೆ ತರಿವರು | ಭೂರಿ ಕುರಿ
ಕೋಣಗಳ ಬೊಬ್ಬೆಯ | ವೀರಣದ ಹೊಗ್ಗುಗಳ ಲಗ್ಗೆಯ ಉಭಯ ಪಾರ್ಶ್ವದಲಿ ||
ತೆರಲುದುರಿದ ವಿಳೆಗೆ ಗಗನದ | ತಾರೆಗಳು ಬಿರಿದೊಡೆದು ದುರ್ಗಕೆ | ಮೇರು ಕಲ
ಕಿತು ಜಲಧಿ ರಾವಣ ನಸಮ ಸಂಗರಕೆ ||೨೮|| ವಸುಮತೀಪತಿ ಸೂನು ಕೇಳ್ ಲಯ |
ದಸಮ ನಯನನ ತೋರಿಕೆಗೆ ಜಗ | ದುಸುರು ತೆಗೆಬಗೆಯಂತೆ ನೆರೆದ ಸಮಸ್ತ ದೇವ
ಗಣ || ನಭಿಪ್ರ ದಿದುರ್ವಿಪ್ರ ತಾರಕಾ ಗ್ರಹ | ವಿಸರ ಸನಕ ಸನಂದನಾದಿ ಗ | ಳಸ್ರ
ವಿಡಿದು ರಕ್ಷೋಘ್ನ ಸೂಕ್ತದ ಲಿರ್ದ ನಭ್ರದಲಿ ||೨೯|| ಮೂರು ಲೋಕದ ಗಂಡ

ಗರ್ವಿತ । ಸೂರೆ ಕಾರರ ದೇವ ನುರೆ ಮೈದೋರಿದನು ಕಪಿ ಬಲಕೆ ಕತ್ತಲಿಸುವ ತಮೋನಿಧಿಗೆ ॥ ತೋರುವಿನನಂದದಲಿ ತವು ನು । ಬ್ಬೇರೆ ದಾರಕ ನಾರೆ ಜಂಭನು । ಚೀರೆ ಹಿಂದಣ ವೀರ ರಕ್ಕಸ ರಾಯ ರುಬ್ಬೇಳೆ ॥೩೦॥ ಹರಿಬ ನಿನ್ನದು ಲೇಸೆನುತ ಮಧು । ಹರಸಿದನು ಕೈಟಭನು ಹೊಗಳಿದ । ನರರೇ ವೀರರ ದೇವ ಭಾಪೆಂದೋಲದ ನವಯುವವ ॥ ಬೆರಲ ತುದಿಯಲಿ ತೋರಿ ರಜನೀ । ಚರ ಹಿರಣ್ಯಾಕ್ಷಕ ಹಿರಣ್ಯಕ। ರರೆ ಮುಸುಕಿ ನಮುರೌಘ ವಿಪ್ಪುದು ದಿಕ್ಕು ಧಿಗಿ ಲೆನುತ ॥೩೧॥ ರಥಿಕ ರತಿರಥ ರರ್ಧ ರಥಿಕರು । ಪೃಥುಳ ರಥರು ಮಹಾ ರಥರು ಸು । ಪ್ರಥಿತ ಸಾವೋದ್ಭವ ಹಯಾರೋಹಕರು ಪದ ಚರರು ॥ ಪೃಥಿವಿ ಸೆಗ್ಗಲು ಮುಗ್ಗಲಹಿಪತಿ। ಶಿಥಿಲ ವಾಲ ಲಜಾಂಡ ಮನಸ್ಕೃಫ । ಮಥನ ಕಂಪಿಸೆ ಕಾಳೆಗಕೆ ಕೈ ಗೈದು ದರಿಸೇನೆ ॥೩೨॥ ಈದುದೋ ನಭವಮಮ ಧರೆ ಬೆಸ । ಲಾದುದೋ ದಿಗುಚಕ್ರ ನೆರೆ ರೂಪಾದುದೋ ಲಂಕೇಶ್ವರನ ಚತುರಂಗ ಸೈನಿಕವ ॥ ಕೈದುಗಳ ಕುಡಿ ವೆಳಗು ತರಣಿಯ । ಹೊಯ್ದು ಹೊಳಕಿದು ದಖಿಳ ವಾದ್ಯ ನಿ । ನಾದ ನಳಿನ ಭವಾಂಡ ಭಾಂಡವ ನೊದೆದು ದಗಲದಲಿ ॥೩೩॥ ಹೂಳಿತಂಬರ ರತ್ನಮಯ ಕಲ । ಶಾಳಿಗಳ ಕದಳಿಕೆ ಗಳಲಿ ಪದ । ಧೂಳಿಯಲಿ ಜಲಸಿಧಿ ರಜೋ ನಿಧಿ ಯಾಯ್ತು ನಿಮಿಷದಲಿ ॥ ತೂಳುತಿಭ ಹಯ ರಥ ಪದಾತಿಯ । ಮೇಳದುಬ್ಬರದ ಲಿದಿ । ರಾಳಿ ಬಿದಿರಿತ ವಾಯ್ತು ಹೊಗಳುವದೇನ ನದ್ಭುತವ ॥೩೪॥ ನಿಂದುಬ್ಬರದ ದೆಡದಲಿ ಬಲದ ಲಸುರನ । ಹಿಂದು ಮುಂದಣ ಭಾಗದಲಿ ಬಳಿ । ಸಂದ ಭಾಸ್ಕರ ಮಂಡಲದ ಪರಿವೇಷ ದಂದದಲಿ ॥ ನಂದನರು ಸೇನಾನಿಯರು ಮಣಿ ವೃಂದ ಖಚಿತ ಕಿರೀಟ ಧರ ರೇ । ನೆಂದು ಹೊಗಳುವೆ ನಾರು ಸಿರಿಯಲಿ ಸರಿ ದಶಾನನಗೆ ॥೩೫॥ ವೀರ ಕುಂಭ ನಿಕುಂಭ ರಣ ಜ । ಝ್ಝುರ ದೇವಾಂತಕ ನರಾಂತಕ । ಘೋರ ಬಲ ಮಕರಾಕ್ಷ ವಿದ್ಯುಜ್ಜಿಹ್ವ ನತಿಕಾಯ ॥ ಸಾರಣಾಸುರ ಶುಕ ಮಹೋದರ । ವೀರ ಯುದ್ಧೋನ್ಮತ್ತ ಸಮರೋ । ದ್ಧಾರರಿರ್ದುದು ತವಕದಲಿ ತಮತಮ್ಮ ಬಲ ಸಹಿತ ॥೩೬॥ ಹುಲಿಯ ನೇರಿದ ರಾವುತರು ಹರಿ । ಕಲವ ಮೂಡಿದ ರಥಿಕ ರಗ್ಗದ । ಬಲು ಶರಭ ಸೈರಿಭವ ನಡರಿದ ಜೋಧ ರಪರಿಮಿತ ॥ ಹಲವು ಮೃಗಗಳ ಮೋರೆಗಳ ಮಂ । ಡಳಿಯ ಪದಚರ ನಿಕರ ವಿಭ ಸಂ । ಕುಲದ ಸೌರಂಭದ ಮಹಾಭಟರಿದ್ದರಗಲದಲಿ ॥ ೩೭ ॥ ತೆಗೆದು ನಿಂದುದು ರಾವಣನ ಮೈ । ಸೆಗಳಿಕೆಗೆ ನಿಮ್ಮವರ ಬಲ ಕೈ । ಮಿಗುವ ಮೀರುವ ವೀರ ರಂತರಿಸಿದರು ದೂರದಲಿ ॥ ಜಗದ ನಯನ ಸುತಾದಿಗಳ ತನು । ಧಿಗು ಧಿಗಿಲ್ಲೆನು ತಿರ್ದ ದಸುರನ । ಸೊಗಡಿಗಹಿತನ ಹೊಗರ ಪರಿಕಿಸು ತಿರ್ದ ನಾ ರಾಮ ॥ ೩೮ ॥ ಇಳಿದು ಬಳಿಕಸುರೇಂದ್ರನಾ ಕೊಳು । ಗುಳದ ಮಧ್ಯದ ಲನ್ವಯಾಗತ । ದೊಲುಮೆ ಕಾತಿ ನಿಕುಂಭಿಣಿಯ ನಾಹ್ವಾನವನು ಮಾಡಿ ॥ ವಿಲಸಿ ತಾಸುರ ಮಾಜೆಯಲಿ ಕೈ । ನೊಳಿಸಿದನು ವಿವಿಧೋಪ ಚಾರಾ । ವಳಿಗಳನು ಬೊಬ್ಬಿರಿನ ಬಹುವಿಧ ವಾದ್ಯ ರಚನೆಯಲಿ ॥ ೩೯ ॥ ಇರಿಸು ಕೈದುವ ಬೀಜ ಮಂತ್ರಾ । ಕ್ಷರದ ಸಾಂಗೋಪಾಂಗ ಮುದ್ರೆಯ । ನಿರತಿಶಯ ನಿಗಮಾಗಮದ ಪೂಜಾ ವಿಧಾನದಲಿ ॥ ನರ ರುಧಿರ ಮಾಂಸೋಪಹಾರದ । ಪರಿವಿಡಿಯ ಪರಿಭಾವ ಶುದ್ಧಿಯ । ಪರಮ ಭಕ್ತಿಯ ಲೊಲಿಸಿದನು ಶಸ್ತ್ರಾಧಿ ದೇವ

ತೆಯ ॥೪೦॥ ಏನ ಮಾಡಿದರೇನು ಸದ್ಧ । ರ್ಮಾನುಚರಿತರಂಗೈಸಲೇ ದೈವಾನುಕೂಲತೆ
ಧರ್ಮಹೀನರಿಗಸುರ ಕರ್ಮರಿಗೆ ॥ ಆನನವ ನದುರುವುದು ನಿಗಮ ನಿ । ಧಾನವಿದು
ಕೇಳೈ ನರೇಶ್ವರ । ಸೂನು ಸುಮ್ಮಾನಿಸಿದ ಸಾಹವಕಮರಪತಿ ಬಳಿಕ ॥೪೧॥ ಮಣಿದು
ವನದೇವತೆಗೆ ನಾನಾ । ಮಣಿಖಚಿತ ಮೌಳಿಗಳ ನುರು ರು । ದ್ಗಣವ ರೌದ್ರಾಕಾರದಾ
ಯುಧ ನಿಕರವನು ಧರಿಸಿ ॥ ರಣದ ಭೂಮಿಗೆ ನಮಿಸಿ ರಿಪು ಕಪಿ । ಗಣವ ನೀಕ್ಷಿಸು
ತೇರಿದನು ಸುರ । ಗಣ ಭಯಂಕರ ನಬುಜ ಸಂಭವದತ್ತ ಮಣಿರಥವ ॥೪೨॥ ಹತ್ತು
ಸಾವಿರ ಧನುವ ನೆರೆ ದೈ । ವತ್ತು ಸಾವಿರ ದಿವ್ಯ ಬಾಣವ । ಬತ್ತಳಿಕೆಗಳ ತುಂಬಿಸಿದ
ನೆಡಬಲದ ತೇರಿನಲಿ ॥ ಕೃತ್ತಿವಾಸನು ಕಮಲಜನು ತನ । ಗಿತ್ತ ದಿವ್ಯಾಯುಧಗಳನು
ತ । ನ್ನೊತ್ತಿನಲಿ ಸಂವರಿಸಿಕೊಂಡನುವಾದನಾ ಹವಕೆ ॥೪೩॥ ಮೊರೆದ ವಗಣಿತ ಭೇರಿ
ಜಲಸಿಧಿ । ಜರಿಯೆ ಜವನೆದೆ ಬಿರಿಯೆ ಮೊಳಗಿದ । ವರರೆ ನಿಸ್ಸಾಳಗಳು ಕಮಲಭವಾಂಡ
ಕಳವಳಿಸೆ ॥ ಮುರಜ ತಮ್ಮಟ ಪಟಹ ರಣಗಳ । ಲಾರವಗಳಬ್ಬಿದುವು ತಾರಕಿ ।
ಸುರಿಯೆ ಸೂಳೈಸಿದುವು ಚಂಬಕ ಕೊಂಬು ಕಹಳೆಗಳು ॥೪೪॥ ಢಕ್ಕೆ ಡಮರುಗ ಮೊಳ
ಗಿದುವು ಕುಂ । ಭಿಕ್ಕೆ ನೆಲ ಕುಣಿದಾಡಲಿಳೆ ಬೊ । ಬ್ಬಿಕ್ಕಿದುವು ಮೊಬ್ಬುಳಿಗಳಾಶಾಬದ್ಧ
ಬಿಸುಗೆ ಬಿಡೆ ॥ ರಕ್ಕಸರ ರಣವರೆಗಳೊರಲಿದ । ವೆಕ್ಕತುಳದ ಲಜಾಂಡ ಮಂಡಲ ।
ಬಿಕ್ಕುತಿರ್ದುದು ಬೀಳುತಿರ್ದುದು ಹೇಳಲೇನೆಂದ ॥ ೪೫ ॥ ಆನೆಯಲಿ ತುರಗದಲಿ ರಥ
ಸಂ । ತಾನದಲಿ ಪದಚರರ ನೆಣಿಸ । ಲ್ಕೇನ ಹೇಳುವೆ ನಾದು ದಷ್ಟಾದಶ ಮಹಾಕ್ಷೋಣಿ॥
ಆ ನಿಭೃತ ರಣದರೆಯ ರಕ್ಕಸ । ಸೇನೆಗಳ ಸಂಖ್ಯೆಗಳನುಸುರುವ । ಡಾನನದ ಸಾಸಿರದ
ಶೇಷಂಗರಿದಲೇ ಯೆಂದ ॥ ೪೬ ॥ ರಾಯರಿವು ಸಂಹಾರ ನಿರ್ಜರ । ರಾಯ ಮಸ್ತಕ
ಶೂಲ ಮಾನವ । ರಾಯ ಕೋಳಾಹಳ ಭುಜಂಗಮ ರಾಯರಿಪು ಗರುಡ ॥ ರಾಯ
ರಾಯರ ರಾಯ ರಾಘವ । ರಾಯ ರಣ ಭೈರವ ನಿಶಾಚರ । ರಾಯ ಜಯ ಜಯಯೆಂದ
ಹೊಗಳಿತು ವಂದಿ ಸಂದೋಹ ॥ ೪೭ ॥ ಆರು ಸರಿ ನಿನಗೆಂದು ನಭದಲಿ । ನಾರದನ
ಕೊಂಡಾಡಿದನು ವೃಂ । ದಾರಕರು ಹೊಗಳಿದರು ಹೂಮಳೆ ಗರೆವುತಭ್ರದಲಿ ॥ ವೀರ
ಶೇಸಾಕ್ಷತೆಯ ನಮರರ । ನಾರಿಯರು ಸೂಸಿದರು ಜಯ ವಿ । ಸ್ತಾರ ಜಯಜಯ
ಯೆನುತ ಕೊಂಡಾಡಿದರು ರಾವಣನ ॥ ೪೮ ॥ ಬಳಿಕ ವ್ಯೆಯುಬ್ಬಾಗಳ ರೋಮಾ ।
ವಳಿಯ ಬಿಗುಹಿನ ಭೈರವಾಂಗದ । ವಿಲಸಿತಾನನದ ಪ್ರತಾಪದ ಶಿಖಿಯ ಸಿಗುರಿಕೆಯ ॥
ಝಳದ ಝಾಡಿಯ ಕಪಿಬಲಕೆ ವ್ಯೆ । ದೊಳಲಿದನು ಬಿರುದನಿಯ ಬರ ಬರ । ಬಿಲು
ದನಿಯ ಸಿಡಿಲಿನಲಿ ನಬುಜಭವಾಂಡ ಘಟಬಿರಿಯೆ ॥ ೪೯ ॥ ಲಗ್ಗೆ ಮಸಗಿತು ಕೂಡೆ
ರಕ್ಕಸ । ಮೊಗ್ಗರದ ಮುಂಚನಲಿ ಬವರದ । ಬೊಗ್ಗಿ ನಬ್ಬರ ವರೆಗಳೊಡೆದವಜಾಂಡ
ಮಂಡಲವ ॥ ಹಿಗ್ಗಲಳ್ಳಿಗಳಂಬು ರಾಶಿಯ । ಜಗ್ಗರಿಳೆ ದಿಗುತಟದ ಬಂಧವ । ಹಗ್ಗ
ಹರಿಯಲು ಹಳಚಲನುಗೈದುದು ನಿಶಾಟಬಲ ॥ ೫೦ ॥ ಕುಣಿದವಸುರನ ರಥದ ಹಯ
ದಿನ । ಮಣಿಯ ದಿವ್ಯ ವರೂಥವಾಜಿಯ । ಹಣೆಗೆ ಹೊಂಚುವ ಖುರದ ಚುಳಬಳಿಕೆಯ
ಛಡಾಳದಲಿ ॥ ಅಣುಗ ಕೇಳ್ ಶೃಂಗಾರ ಗಗನಾಂ । ಗಣದ ನಾಟ್ಯಕೆ ನಿಂದ ಮಿಂಚಿನ ।
ಭಣಿತೆಯ ನ್ತೊಲಸುರೇಂದ್ರ ರಥ ಹೊಳಕಿದುದು ಕಣದೊಳಗೆ ॥ ೫೧ ॥ ಹೊಗುವ ಕಪಿ
ಸೇನಾ ಸಮುದ್ರಕೆ । ಬಿಗಿದ ಕಟ್ಟೆಯಿದೆನಲು ಬಂದುದು । ಬಗೆವಡೀಶಂ ಗೋಚರಿಸವೆಂ

ಬಂತೆ ರಿಪು ಸೇನೆ ॥ ವೊಗಸಲಾದುದು ನೋಡಲಮರರ । ದೃಗಗಳಸುರನ ಸುಪ್ರತಾ
ಪದ । ಸೆಗಳಿಕೆಯು ಕಿಬಿ ಯುಬ್ಬರದ ಸಂತಾಪ ಲಹರಿಯಲಿ ॥೫೨॥ ಏನಿದದ್ಭುತ ವಿಂದಿ
ನಾಹವ । ದಾನಿಕೆಯು ರಿಪುಬಲದ ಸಂಭ್ರಮ । ವೀನಿಸುತ್ತಿದೆ ಕಂಗಳಿಗೆ ಕಾಸಾರದ
ಕೌತುಕವ ॥ ನೀನು ಬಲ್ಲೈ ಬಂದ ಭಟನ ನಿ । ದಾನವನು ಯುವರಾಜನೋ ಸೇ । ನಾ
ನಿಯೋ ಶತೃವೋ ವಿಭೀಷಣ ಹೇಳು ತನಗೆಂದ ॥೫೩॥ ಹೇಳಲಮ್ಮೆನು ಜೀಯ ಹೇಳಿದ ।
ರಾಲಿಸುವರೋ ಮೇಣು ಕಿವುಡಿನ । ಕೇಳಿಕೆಯು ಲನುಸರಿಸುವಿರೂ ತನಗರಿಯ ಬಾರ
ದೆನೆ ॥ ಹೇಳು ಸಾಕಂಜದೆ ವಿರೋಧಿ ಗ । ಳಾಳುತನ ದುಬ್ಬಟೆಯು ರಣದಲಿ । ಕೇಳು
ವುದ ಭೂಷಣವಲೇ ನಮಗೆಂದ ನಾರಾಮ ॥ ೫೪ ॥ ಹೇಳಬೇಕೇಜೀಯ ಕಿವಿಗಳು ।
ಕೇಳಲಾದರೆ ಕಟುಲ ವದನಯು । ಖೂಳತನದಲಿ ತಂದ ಯುವ್ವನದೆಸಕ ಮುಸುಳಿಸಿದ ॥
ಬಾಲತನ ವೃದ್ಧತ್ವ ಹೊದ್ದದ । ಸೋಲಲಯು ಸಂಕ್ರಮಿಸದಭಿನವ । ಶೂಲಿ ಸಮರ
ಕಪಾಲಿ ಖಳ ದಶಮೌಳಿಯಿವನೆಂದ ॥೫೫॥ ದೇವ ನೋಡೀ ಸಂಭ್ರಮವು ತಾ । ನಾವ
ರಾಯುರಲುಂಟು ಸೇನಾ । ರವವಿದು ಲಯಸಾಗರದಲುಂಟೇ ನಿದಾನಿಸಲು । ದೇವ
ದನುಜ ನರೋರಗರ ಸುಭ । ಟಾವಳಿಯಲಿವನಂತೆ ಧೈರ್ಯದ । ದೀವಸಿಗರುಂಟೇ
ವಿಚಾರಿಸಲೆಂದನಸುರೇಂದ್ರ ॥ ೫೬ ॥ ಅರಸ ಚಿತ್ತೈಸದೆ ಲಯಾಬ್ಧಿಯು । ತೆರೆಯು
ತೆಕ್ಕೆಯ ತೆರಳಿಕೆಯುವೊಲು । ತುರಗ ರಥದಳವದೆ ಸಮುದ್ರದ ಸುಳಿಗಳಂದದಲಿ ॥ ಸುರ
ಪತಿಗೆ ಮಾರಾಂತಕುಲ ಭೂ । ಧರದ ದಳವೆನೆ ತೋರುತಿದೆ ಸಿಂ । ಧುರ ಘಟಾವಳಿ
ಸಿಂಧುವೋ ರಿಪುಸೈನ್ಯವೋ ಯೆಂದ ॥೫೭॥ ಅದೆ ಪದಾದಿ ಕೃತಾಂತನೊಡ್ಡಿದ । ಹೊದರ
ಹೊಳಹಿನ ಲಸ್ತ್ರಶಸ್ತ್ರದ । ಉದುರ್ವ ಕಿಡಿ ಸುಡುತದೆ ಸುರೇಂದ್ರಾದಿಗಳ ಪಟ್ಟಣವ ॥
ಕೆದರಿಕೊಂಬೀ ಸಮರ ಸೇನೆಯು । ತುದಿಯು ಮುಂದಲೆ ಗಹಳೆಗಳ ರವ । ಸದೆವುತದೆ
ಸುರಬಲವ ಬೆರಗೇನಲ್ಲವೇಯೆಂದ ॥೫೮॥ ಹೇಳುವರೆ ಕಥೆಯಲ್ಲ ಗರ್ಜಿಸಿ । ಸೀಳುತದೆ
ಸಿಡಿಲೊಡಲ ರಣ ನಿ । ಸ್ಸಾಳತತಿ ಸೀರಜಭವಾಂಡಾವರಣ ಮಂಡಲವ ॥ ಹೊಳ್ಳಿಸುತ
ಲಿದೆ ಭೇರಿ ಭೀಮ ಕ । ರಾಳರವವಾದ್ಯದ ಗಥಾವಣೆ । ಹೂಳುತದೆ ದಿಗುಭಾವಿಸೀಜನ
ಕರ್ಣಕೋಟರವ ॥೫೯॥ ಅರಿಯ ಚಕ್ರವಿಘಾತಿಯಲಿ ಕೊರ । ಳರೆ ಹರಿದ ರಣವೀರರದೆ
ನರ । ಹರಿಯ ನಿಶಿತ ನಖಾಗ್ರ ಹತಿಯಲಿ ಶೀಳಿದೊಡಲುಗಳ ॥ ಕರುಳಹೊಲಿಗೆಯ ವೀರ
ರದೆ ಸೂ । ಕರನ ದಾಡೆಯ ಲಿರಿತವಂಗದ । ಬರಿಯ ಭಾರಣೆಗಲೆಯ ಭಟರದೆ ದೇವ
ನೋಡೆಂದ ॥ ೬೦ ॥ ಒಡೆದು ಸಿಡಿಲುಚ್ಚಳಿಸಿ ದಂಕ ಗ । ಳಿಡೆಯ ಡೋರಿದ ಡಾವರದ
ಖಳ । ರಡೆ ಮದೇಭ ವಿದಾರಿಸಿದ ಹಳಿದಲೆಯ ಹತ್ತುಗೆಯ ॥ ಕದನ ಕರ್ಕಶ ಶರದೆ
ಕೃತಾಂತನ । ಗದೆಯ ಘಾಯದ ಲರೆಜರಿದ ರಣ । ದಥಟ ರಕ್ಕಸರಾಯರದೆ ರಾಜೇಂದ್ರ
ನೋಡೆಂದ ॥೬೧॥ ಹರನ ಶೂಲದ ಹರಿಯ ಹುತಹವ । ನುರುಶಿಲೀಮುಖ ವಿಹರಣದ
ಕಿ । ನ್ನರಪತಿಯ ಕಾಂಕ್ಷೇಯಕದ ಕಟ್ಟುರಿತದಾರಿಕೆಯ ॥ ಭರಿತ ಬಲರದೆ ಜೀಯಯುಗ
ಶತ । ತಿರುಗಿಬರೆ ಸಾವಿಲ್ಲ ದಸ್ಸುರೇ । ಶ್ವರ ಕದಂಬಕವದೆ ಕಟಾಕ್ಷಿಸು ದೇವ ನೀನೆಂದ॥೬೨
ಗರಳಮಯ ಸಾಗರವ ನಂಜನ । ಗಿರಿಯ ಕಡೆಗೋಲಿನಲಘೋರದ । ಶಿವದಲೆಸೆವ
ತಮೋಗುಣಾದಿ ಸಮಸ್ತ ಭೂತಗಣ । ಭರಿತ ವಿಷ ದಹಿವರನ ತೆಗೆಹಿದ । ತೆರಳಿಕೆಯ
ಲುದಿಸಿದ ತಮೋ ಸಿ । ರ್ಭರ ಶರೀರದ ಸುಭಟರದೆ ನರನಾಥನೋಡೆಂದ ॥೬೩॥ ಅವನಿ

ಹುಟ್ಟಿದ ಕಾಲದಲಿ ಸಂ। ಭವಿಸಿತಗ್ಗದ ವೀರಭಟರದೆ। ಜವನು ಜನಿಸಿದನುನ್ನ ಜನಿಸಿದ ಪೂರ್ವದೇವರದೆ ॥ ಶಿವ ಸರೋಜಾಸನರ ಸರಿಯುರಿ। ಸವೆಯದಾಯುಪಿನಸುರರಜೆನ। ವ್ಮವನ ಬಳಿಯಲಿ ಬಯಲ ಮಾತಲ್ಲರಸ ಕೇಳೆಂದ ॥೬೪॥ ದಳವಿದರ ಹಿಂದೆಸೆಯ ನೀಲಾ। ಚಲದ ನಿಭದಿಭದಗ್ಗದಲಿ ಹೊಳೆ। ಹೊಳೆವ ಮಕುಟದಹಾರ ಹೀರಾವಳಿಯ ಕುಂಡಲದ ॥ ಖಳ ಮಹೋದರ ನೆಂಬವನ ನೋ। ಡಿಳೆಯ ಲಯದಲಿ ಮಲವಕಾರನ। ಕಲಿತನದ ಕಡುಹಲ್ಲವೇ ಲೇಸಾಗಿ ನೋಡೆಂದ ॥೬೫॥ ಅದೆ ಕೃತಾಂತನ ಕೋಟಿಸಾಹಸ। ರಥಟರವನೊತ್ತಿನಲಿ ಮೂರ। ರ್ಬುದ ಮಹಾಬಲವದೆ ದಶಾನ ನೆಡದ ಭಾಗದಲಿ ॥ ತ್ರಿದಶರಾಯನ ಹಯದ ಹವಣಿನ। ಕುದುರೆಯವ ನವನೀಗ ನರಲೋ। ಕನ ನೃಪಾಲರಗಂಡ ವೀರ ನರಾಂತಕನುದೇವ ॥ ೬೬ ॥ ಗೆಲಿದನವನಂತಕನ ನಾಜಿಯು। ಲೆಳೆಯ ಹರೆಯುದಲಾ ನರಾರಿಯ। ಬಳಿಯ ಭಟರದ ನೋಡು ಭೈರವ ಕೋಟಿ ಬಲಯುತರು ॥ ತಲೆ ಹರಿದರಟ್ಟಿಯಲಿ ಕಾದುವ। ಕಲಿಗಳರ್ಬುದ ವೀರರದೆ ತ। ದ್ಬಲದ ಬಲದಲಿ ಭಾರಿ ಭಟರಹರರಸ ನೋಡೆಂದ ॥೬೭॥ ಮಾತು ಪುಸಿಯಲ್ಲರಸ ಕೇಳ್ ಪುರು। ಹೂತ ಪುರವನು ದಳದುಳವ ಹಾ। ಯ್ದಾತ ಸೂರೆಯ ಕೊಂಡನೂರ್ವಶಿ ರಂಭೆ ಮೊದಲಾದ ॥ ಖ್ಯಾತರನು ಸುರಪತಿಯ ಮೋರೆಯ। ಲೀತ ನೆರಗಿದ ಡೋರುಗಲೆಯದೆ। ಭೂತಳಾಧಿಪ ನೋಡು ದೇವಾಂತಕ ನಿಶಾಚರನ॥೬೮॥ ಇವನರಥ ಚರಿಸುವುದು ನಾನಾ। ಭುವನದಲಿ ಭುವನೈಕಬಲ ನೆಂ। ದಿವನ ಕೊಂಡಾಡುವರು ಕಮಲಭವಾಮರೇಶ್ವರರು ॥ ಅವನದಂತಿರಲಾಜೆಯಲಿ ನೋ। ಡವನು ಧನಪನ ಪುರವ ನಾತನ। ನವ ನಿಧಿಗಳನು ಸೂರೆಗೊಂಡತಿಕಾಯ ನೆಂಬವನ ॥೬೯॥ ಪಡಿಯಿಡುವ ಪೂರ್ವದ ತ್ರಿವಿಕ್ರಮ। ನೆಡೆಗೆವೆಗ್ಗಳ ನಾಯುಗಾಂತದ। ನ್ಮಡಗೆ ಮಿಗಿಲು ಕೃತಾಂತ ಕೋಟಿಗಳಿವಗೆ ಪಾಡಲ್ಲ ॥ ಪೊಡವಿಪತಿ ಕೇಳೊಂದುಗುಣ ವಿವ। ನೊಡನಿಹುದು ದುಶ್ಚರಿತವಿವನಲಿ। ಮಿಡುಕಲಮ್ಮವು ಧರ್ಮಕೃತವೆಲೆ ಜೀವ ಕೇಳೆಂದ ॥ ೭೦ ॥ ಕುಂಭನಿವ ನಾಜೆಯಲಿ ನೋಡು ನಿ। ಕುಂಭನನು ಕುಂಭಶ್ರುತರತನು। ಸಂಭವರಲಯ ಸಂಭವಿಸುದಸಾಧ್ಯ ಗೆಲುವೆಮಗೆ॥ ಜಂಭರಿಪು ಶಿಖಿಯಮ ನಿಶಾಟ ಮ। ಹಾಂಭಸಾಧಿಪ ವಾಯು ಧನಪರ। ನಂಬೆಯೆನಿಸಿದ ನಾಜಿಯಲಿ ದಿಗ್ವಿಜಯದೊಳಗೆಂದ ॥೭೧॥ ಚಿತ್ತವಿಸು ರಾಜೇಂದ್ರ ಯುಪ್ಪೋ। ನ್ಮತ್ತನೆಂಬ ನಿಶಾಚರನ ಬೆಂ। ಬತ್ತಿ ಸದೆದನು ಕೈದುಕೊಡದಿರೆ ಕಮಲ ಸಂಭವನ ॥ ಇತ್ತನವನು ಪಟ್ಟಕೆ ತೆಕ್ಕಿ ಮ। ಹೋತ್ತಮದ ದಿವ್ಯಾಯುಧವ ನುರೆ। ಹೊತ್ತುತೆಡೆ ಕೋಪಾಗ್ನಿ ಕದನಕೆ ಕಪಿ ವರೂಥಿನಿಯ ॥ ೭೨ ॥ ಆರುನಿಲಬಹುದಿವನೊಡನೆ ಪು। ರಾರಿ ಗಸದಳದವನು ಬೇರೆ ಕು। ಮಾರರದೆ ರಣಗಲಿ ವಿರೂಪಾಕ್ಷಾದಿ ಭಟನಿಕರ ॥ ಕಾರಿರುಳು ತಿರುಳಂತೆ ಗರಳದ। ವಾರುಧಿಯ ತೆರೆಯಂತೆ ಕಲ್ಪದ। ವಾರಿಧರ ಘಟೆಯಂತೆ ರಾಹುವಿನಂತೆ ನೋಡೆಂದ ॥೭೩॥ ಆ ಕುಮಾರರ ಮಧ್ಯದಲಿ ಲೋ। ಕೈಕಬಲ ಜಲವೈರಿಜಿತುವಹ। ನೇಕಮೇವಾದ್ವಯ ಪರಾಕ್ರಮನೆಂಬ ಹಮ್ಮಿನಲಿ ॥ ಆ ಕವನ ಕರ್ಕಶನ ಕಾಂಡವ। ಶೋಕಗಿಮ್ಮಡಿ ಕಂಡಿರಗ್ಗದ। ಕೋಕನದ ಸಂಭವನ ಶರವವಗಲ್ಲದಿಲ್ಲೆಂದ ॥ ಮಿಕ್ಕ ದಿವ್ಯಾಸ್ತ್ರಂಗಳಿವನಲಿ। ಸಿಕ್ಕಿಕೊಂಡಿಯದೇನರಿಮ ಹು। ಬ್ಬಿಕ್ಕಿದರೆ ಶಂಕರ ಸರೋಜಭವಾಮರೇಶ್ವರರು ॥ ಸಿಕ್ಕಿ ಜೀಯ ಹಸಾದ ವೆಂದೇ। ಸುಕ್ಕಿ ಕೊಂಡಿಹ ರಿವಗೆ ಹೊಗ

ಳುವ | ಡಕ್ಕರಿಗ ತಾ ನಲ್ಲಿ ನಿಜವಹ ಮಾತ ದೀಗೆಂದ ||೭೫|| ಆ ನಿಶಾಟನ ಬಿಟ್ಟು ಕಳಿ
ರಘು | ಭೂಸಿತಂಬಿನಿ ಯರಸ ಕೇಳು ನ | ವೀನ ಶತ ಕೋಟಿ ಪ್ರಸಿದ್ಧ ಕಿರೀಟ ವರ್ಧ
ನರ|| ಮಾನ ವಾಮರ ರಥಟ ಭಟರನು | ಸೂರೆಗಾರರ ಸಮರಜಯ ಸು | ಮ್ಮಾನಗಾರರ
ನೋಡು ಹೊಗಳುವೆ ನೇನ ತಾನೆಂದ ||೭೬|| ಕೇಳಿದೆವು ಕಂಡೆವು ನಿಧಾನವು | ಹೇಳ
ದುದು ದಿರವಹು ದಿವಲ್ಲೆಂ | ಬೇಳಿಗೆಯು ದಿರ ವೆನಿಸ ಲೊಡಬಟ್ಟೆವು ಮನಸ್ಸಿನಲಿ ||
ಕೇಳಿದೈ ಯೆಲೆ ಕಲಿ ವಿಭೀಷಣ | ಕಾಳಗ ದೊಳಾವ್ ಹೆದರಿ ಹಿಂಗದೆ | ಸೋಲ ಲಹು
ದಾದಡೆಯು ತೋರರಿಗಳನು ನಮಗೆಂದ ||೭೭|| ಆದ ಡೀಕ್ಷಿಸು ಜೀಯ ವಿಲಯ ಮ |
ಹೋದಧಿಯವೊಲು ತೋರು ವೀರ | ವ್ಯಾಧ ಸೇನಾ ಮಧ್ಯದಲಿ ಬಡಬಾಗ್ನಿ ಯಂದ
ವಲಿ || ಕೈದುಗಳ ಬೆಳಗಿನಲಿ ಘನ ಸಿರು | ಹಾದದಬ್ಬರಣೆಯಲಿ ಬಲು ಛಲ | ವಾದಿ
ಗಳ ಬಿರುದಾಂಕ ನಹ ನೆರೆ ದೇವ ನೋಡೆಂದ ||೭೮|| ಕೋಪವದೆ ಕಾಲಾಗ್ನಿ ರುದ್ರನ|
ಕೋಪದ ವೊಲಗ್ಗಳದ ಶೌರ್ಯ | ಟೋಪವದೆ ಸಂವರ್ತ ಭೈರವ ಗೆಂಟುಮಡಿ
ಯೆನಲು || ಭೂಪ ಚಿತ್ರೈಸಾತ ನೀಗ ಮಹಾ ಪತಿವ್ರತೆಯನು ವಿಹಾರ ಕ | ಲಾಪ
ದಲಿ ಕೊಂಡೊಯ್ದ ರಕ್ಕಸರಾಯ ನವನೆಂದ ||೭೯|| ಹೊಗಳುತವೆ ಸುರ ರಾಜ
ನೊಡ್ಡೋ | ಲಗ ದಸುರ ವಂದಿಗಳು ಕೈಗಳ | ನೆಗಹಿ ಕೈವಾರಿಸುತ ಲದೆ ಬೇರಭ್ರ
ದಲಿ ಸುರರ || ಹಗೆಗಳಾ ಹೈರಣ್ಯ ಪುರ ದರ | ಸುಗಳ ಮಾಗತೆ ಯರ ಸುರಾಸುರ |
ಜಗದ ವೀರನ ಬಿರುದ ಕಿವಿ ಗೊಟ್ಟಾಲಿಸಿದ ನೆಂದ ||೮೦|| ಕಾಲ ನಳವಿಗೆ ಮೊಗಸಿ
ನಿಂದ ಕ | ಪಾಲಿ ಗಿವ್ಮಿಗಿಲೆನ ಬಹುದು ಯಮ | ಕಾಲ ಭೈರವನಿಗೆ ಶತಾಧಿಕ ಸುಲಭ
ನೆನಬಹುದು || ಕೇಳು ರಘುಪತಿ ಮಿಕ್ಕ ವೀರ ಭ | ಟಾಳಿಗಳ ಹೇಳದಿರು ದಿವಿಜರ |
ಕಾಲುಗಳ ಕಂಪನವ ನಿತ್ತಲು ನೋಡು ನೀನೆಂದ ||೮೧|| ಆರಿ ಗಜನ ಪುರೋಹಿ
ತತ್ವದ | ಸೇರುವೆಯು ಪಡಿಯುಂಟೆ ಜಗದೊಳ | ಗಾರಿ ಗೀಶನ ಹರಿಕೆ ದಿನ ದಿನ
ವುಂಟು ರಾಯರಲಿ || ಆರಿ ಗುಂಟೋಲಗವು ತುಂಬುರ | ನಾರದರು ನಿರ್ಜರರು
ಸೇವಕ | ರಾರಿ ಗಾವನ ಕಾಲದಲಿ ನೀವ್ ಬಲ್ಲಿರೇ ಯೆಂದ ||೮೨|| ಮಾರಿ ಮುಳಿದುದು
ಕಾಣೆ ಕಾಲನ | ನಾರು ಬಲ್ಲರು ವಿಧಿಯ ಲಿಪಿಯ ವಿ | ಕಾರ ವಿವ ನರಿಹೊದ್ದ ದೊಡ
ಬಡದಶುಭ ದಾರೈಕೆ || ವಾರಿಜಾಸನ ವಿಷ್ಣು ರುದ್ರರ | ವೀರ ನೆಂದಿವ ನೆಣಿಸ
ಮಿಕ್ಕಿನ | ಭೂರಿ ಭುವನದ ಜಣಗು ಭಟರನು ಬಗೆವನಲ್ಲೆಂದ ||೮೩|| ಮರಳಿ ಮಾತೇ
ನರಸ ದಶಕಂ | ಧರನು ವಿಜಯ ಶ್ರೀಗೆ ನಿಜ ಮಂ | ದಿರವಲಾ ಬ್ರಹ್ಮಾಂಡ ಕರ ಭೋನ
ಗಳಲಾ ಭುವನ || ಧರಣಿ ಮಂಚ ವಿತಾನ ವಂಬರ | ತರಣಿ ದೀಪ್ತಿ ಸುಧಾಂಶು
ದರ್ಪಣ | ಸುರ ರತಿಯ ರಾಳಿಯರು ಸುರ ರನುಚರಲೇ ಯೆಂದ ||೮೪|| ಅಂಜುವೆನು
ಬಿನ್ನಹಕೆ ಜೀಯ ಸ | ಮಂಜಸನು ಸಮರದಲಿ ಸಾವಿಂ | ಗಂಜುವವನಲ್ಲರಿಯ
ಬಾರದು ದೇವ ಬಿಲು ಗೊಲೆಗೆ || ಶಿಂಜನಿಯ ಸಮತಳಿಸು ಸಂಗರ | ಕಂಜ ದಂಬು
ಗಳಿರಲಿ ನಿಜಕರ | ಕಂಜದಲಿ ಕಡುಹಿರಲಿ ಕಾಯುದ ಲೆಂದ ನಸುರೇಂದ್ರ ||೮೫|| ಅರಸ
ಚಿತ್ತೈಸವನ ವೈಯಲಿ | ಕೊರತೆ ಯೊಂದಿದೆ ಯದುರಿ ನಪಜಯ | ದೊರಕುವುದೊ
ತಾ ನರಿಯೆ ನುಳಿವಂತೀ ದಶಾಸ್ಯಂಗೆ || ಸರಿ ಯಡಾ ರೀ ಲೋಕದಲಿ ಶಂ | ಕರ
ಸರೋಜ ಭವಾ ಮರೇಂದ್ರರ | ಸರಕು ಮಾಡುವನಲ್ಲ ಮರೆ ಮಾತೇಕೆ ತನಗೆಂದ ||೮೬||

ನಗೆಯ ನಸುಕೋಪದಲಿ ಲಕ್ಷ್ಮಣ | ಮೊಗವ ನೋಡ್ಯನೆ ತಿರುಗಿದನು ಮೊಗ | ವೊಗದು ನಮಗೀಮಾತೆನುತ ಮಿಹಿರಜನು ಚುಬುಕಿರಿದ || ಅಗಿದು ದಂತದ ಲವುಡ ನನಿಲನ | ಮಗನು ಹೂಂಕರಿಸಿದನು ಹಗೆಯನು | ಹೊಗಳಿ ಕೆಡಿಸಿದೆ ಯೆಂದು ಕಿಡಿಗೆದರಿತು ಘಟಸ್ತೋಮ ||೮೭|| ಹೋಹೊ ಕಳಕಳವೇಕೆ ತ್ರಿಜಗದ | ಸಾಹಸಿ ಯಲಾ ದಶವದನ ನು | ತ್ಸಾಹ ಮಿಗಿಲದ ಕೇನು ತೋರಿಸಿ ತುದಿಯ ಲಾಹವವ || ಬೇಹ ಬುದ್ಧಿಯ ನೀ ವಿಭೀಷಣ | ನೂಹಿಸಿದು ದೇನಹುತವೇ ನಿ | ಮ್ಮಾಹವದ ಭುಜ ಶೌರ್ಯ ವಿಂದಿನ ಲರಿಯ ಬಹುದೆಂದ ||೮೮|| ಕೇಳು ತೀ ಮಾತಿನಲಿ ಸಿಡಿಲಿನ | ಪ್ಪಾಳಿಯವು ಪಡಿಮುಖದ ಗಿರಿಗಳ | ಮೇಲೆ ಮುರಿದೇಳುವ ವೊಲೆದ್ದುದು ಗಗನ ಲಂಘಿಸುತ || ಶೈಲ ತಾಲ ತಮಾಲ ತರುಗಳ | ತಾಳಿಕೆಯ ತೋಳುಗಳ ನಗಹಿನ | ಲಾಳೆಕಾರರ ದೇವ ತೊರವೆಯ ರಾಯ ನಾಜ್ಞೆಯಲಿ || |೮೯||

ಇಪ್ಪತ್ತನೆಯ ಸಂಧಿ ಸಮಾಪ್ತಂ.

ಇಪ್ಪತ್ತೊಂದನೆಯ ಸಂಧಿ.

ಸೂಚನೆ|| ರಾವಣನ ನಗ್ಗದ ಜಗತ್ರಯ | ರಾವಣನ ದಿವಿಜೇಂದ್ರ ಕುಲ ವಿ | ದ್ರಾವಣನ ಸಮರದಲಿ ನೊಂದನು ರಾಮ ಸುಗ್ರೀವ ||

ಪದ್ಯ|| ಲವನೆ ಕೇಳಸುರೇಂದ್ರ ಸೇನಾ | ರ್ಣವದ ಮುಂಗುಡಿ ದಾಣದಲಿ ರಾ | ಘವನ ಕಾಣುತ ಜರೆದು ಮೂದಲಿಸಿದುವು ಕಹಳೆಗಳು || ಬವರ ಬೇಡಂ ದಾಮತ್ತ ರಣ ಭೈ | ರವ ನೊಳಾಹವ ಬೇಡ ರಿಪು ರಣ | ಯುವತಿ ಯಭಿನವ ರತಿ ವಿಲಾಸನೊಳೆಂದು ಬಿರುಬಿನಲಿ || ೧ || ತೋಟಿ ಬೇಡ ಭವಾಬ್ಧಿ ಮೂಲೋ | ತ್ಪಾಟ ಯುಗ್ಗದ ಬಹಳ ಬಾಹಾ | ಸ್ಫೋಟ ನಾ ಕಂಪಿತ ಸರೋಜ ಭವಾಂಡ ಮಂಡಲವ || ನೋಟ ನಯನ ಕಸಾಧ್ಯ ಬೀಯಕೆ | ಕೂಟ ದುರ್ಘಟವವ ನಿಜೆಯ ತೆಗೆ | ದೋಟವೇ ಸುಖ ಸಮರ ಬೇಡೆಂ ದೊದರಿದುವು ಕಹಳೆ ||೨|| ಲೋಕಪಾಲರ ಗೆಲಿದವನ ಮೂ | ಲೋಕಗಳ ನಾಳ್ದವನ ನಾ ಜಗ | ದೇಕ ವೀರನ ವಿಶ್ರುತನ ರಣರಂಗ ಭೈರವನ || ಏಕ ಮೇವಾದ್ವಯನ ಛಲಪದ | ದಾಕೆ ವಾಳಿಕೆ ತೋಟಿ ಬೇಡೆಂ | ದೌಂಕಿದುವು ಕಹಳೆಗಳು ಕದನೋದ್ದಂಡ ರಾವಣನ || ೩ || ಕೆಣಕ ರಕ್ಕಸ ಗಹಳೆ ಕೇಳ್ದುದ | ನಣಿಕೆಗೊಂಬರೆ ಕಪಿಗ ಳುರಿ ಬೊ | ಟ್ಟಣವ ನೊಡದಂದದಲಿ ಹೊಕ್ಕುದು ಹೊರಳಿ ಕೊಲಲುಬ್ಧ || ರಣದ ಮಂಗುಡಿ ಗಹಳೆಗಳ ಸಂ | ದಣಿಯ ಸೂಳಗಿ ವಖಿಳ ಲಗ್ಗಿಯ | ರಣವರೆಯ ನೊಡೆ ಬಡಿದು ಬೆರಸಿದ ರರಿ ವರೂಥಿನಿಯ ||೪|| ಎವೆ ಹಳಚು ವನಿತರಲಿ ಹಳಚಿತು | ಹವಣಿಸಿದ ಕಪಿಸೇನೆ ಕಳಚಿತು | ಒವರದಲಿ ಘಟ ರಸುವ ಸೇನೆಂಬೆನು ಕ್ಷಣಾರ್ಧದಲಿ || ಜವನ ನಗರಿಯ ದಾರಿಗರ ಮೈ | ಬೆವರಿಗರೊ ಳಡಗಿದುದು ಸೇನಾ | ನಿವಹ ಮೆರೆಡರ ಚಟುಳ ಚರಣೋದ್ಧೂತ ಧೂಳಿಯಲಿ || ೫ || ಹಳಚಿದವು ಬಲವೆರಡು ಖಿಬಿಖಿಡಿ | ಹಳಚುವಂತಿರೆ ಹೊಕ್ಕ ಮೈಯ್ಯಲಿ | ಕಳಚಿದವು ಕಪಿಗಳ ಕದಂಬದ ಕಾಯ ದುಸುರುಗಳ || ಕಳಚಿದವು ಭವಭವದ ದುಷ್ಕೃತ | ಗಳು ಬಳಿಕ್ಕಾ ಕೈಯೊ

ಡನೆ ದಳ | ವ್ರೆಸಿದವು ದಿವಿಜೇಂದ್ರ ನಗರದ ಸೂರೆಗುಭಯಬಲ ||೬|| ಹೆಣದ
ಮಯ ರಣಭೂಮಿ ಗಿರಿದು | ಗಣದ ಮಯ ಮಂಬರದ ಸಿಖಿ ಸಂ | ದಣಿಯ
ಮಯ ಸುಭಟಾವಳಿಯ ಸತ್ಕ್ರೋಧ ಶಿಖಿಮಯವು || ಮಣಿದ ಭೂತ ವ್ರಾತ
ಮಯ ದಿಗು | ಣ ದಿಶಾಂಗದ ವಮನ ಪರಿರಂ | ಭಣದ ಮಯ ವೆ ದಮರ
ಸದ ವಿಯ ವೀರ ರಮಣಿಯರ || ೭ || ಮೊರೆವ ವಾದ್ಯಧ್ವನಿಯ ಬಲು ಜ | ಝ್ಝುಂಗೆ
ಜವನಾಯ್ತು ಬುಜಜಾಂಡದ | ಸರ ಶಿರೋವ್ಯಥೆ ಭಾರಿಸಿದು ದಃತ್ರಾನಪಾದಜನ ||
ಕರಿ ರಥಾಶ್ವ ಪದಾತಿ ಬಲ ದು | ಬ್ಬರವ ಜೊಬ್ಬೆಗೆ ಬಿರಿದವತಳದ | ಥರ ಥರದ
ಭುವನಾಳಿ ಬಣ್ಣಿಪೆ ನೇನ ನದ್ಭುತವ || ೮ || ತರುಣ ಕೇಳಿವರೊತ್ತಬರ ದು |
ಬ್ಬರದ ವಾದ್ಯಧ್ವನಿಯ ನಾ ಬಲ | ದುರುವಿನಾದದಲಿ ವರ ಹೆಡೆವರೆಗಳ ಮಹಾ
ರಭಸ || ಬೆರಗುಗಳ ಜೊಬ್ಬಾಟ ಬಿಡದಪ | ಹರಿಸೆ ರಿಪು ಬಲ ಹಮ್ಮಯಿಸಿ ದುದು |
ಬೆರಗು ಭಾಂಸೆ ಬೆದರಿದನು ಮನದಲಿ ದಶಗ್ರೀವ || ೯ || ನೂರು ಯೋಜನ ವಿವ
ರವರ ರಣ | ದೇ ೀ ರಿ ನ ಂ ಗ ಣ ವಂಕಣದ ಲು | ಬ್ಬೇರಿ ಹೊಕ್ಕದು ಹೊಡಕರಿಸಿ
ತಿಳೆ ವೀರರುಭಯದಲಿ || ಕಾರುಗಿಡಿಗಳ ಕೈದುಗಳ ಬಲು | ಜೇರಿಕೆಯ ಕುಲಶೈಲ
ಸಮಿತಿಯ | ಬೀರುಗಳ ಬಲ್ಪುರಭಸ ಬೆದರಿಸಿತಖಿಳ ಭುವನಗಳ || ೧೦ || ಸಬಳದಲಿ
ತಿವಿದೆತ್ತಿ ಭೂತಕೆ | ಕಬಳವನು ಕೊಡು ತಟ್ಟಿ ಚಕ್ರದಿ | ಕುಟುಲಿರಿದು ಕಳೆದಿಡುತ ಕರಿ
ವುತ ಕೋಲ ಪೇರ್ಮಳೆಯ || ಸಬುದ ಭೋರನೆ ನಭಕೆ ನೆತ್ತರಿ | ನಬುಧಿ ಲಂಘಿಸಿ
ಹಲವು ಮುಖದಲಿ | ವಿಬುಧರಿಪುಗಳು ಕೊಂದರಗಣಿತ ಕಪಿಕದಂಬಕವ ||೧೧|| ಶಿರದ
ಚಿಪ್ಪುಗಳರಳೆ ಹೊಯ್ವುತ | ಪರಿಘದಲಿ ಪಾರುಂಬಳೆಗಳಲಿ | ಕರುಳನುಗಿವುತ ಸುರಗಿ
ಯಲಿ ತಿವಿದವು ಕೃಪಾಣದಲಿ || ಎರಡೆರಡು ತುಂಡುಗಳ ತೋರುತ | ಕೊರಳುಗಳ
ಕತ್ತರಿಸುತಂಬಿನ | ಗರಿಗಳಲಿ ಸಂಹರಿಸುತಿರ್ದರು ಖಳರು ಕಪಿಬಲವ || ೧೨ || ನೂಕಿ
ಕುದುರೆಯ ರಾವುತರು ಕವಿ | ದೌಕುವತಿಬಲ ವಾನರರ ತಲೆ | ನಾಕ ಕಡರಲು ಘನ
ಶರೌಘದಿ ನೆಸುತ ಖಡುಗದಲಿ || ನೂಕುತೆರಳಲು ನೆತ್ತಿಲೌಡಿಯ | ಸೋಕಿನಲಿ ಸರ
ಕಟಿಸಿ ಸಕಲವ | ನೌಕಸರ ಸೇನೆಯನು ಸವರಿದ ರಸಮಸನುರದಲಿ || ೧೩ || ತೂಳಿ
ದಾಡೆಯಲಿರಿಸಿ ಮೆಟ್ಟಿಸಿ | ಕಾಲುಗೊಲೆಯಲಿ ಸುಂಡಿಲಲಿ ಸಮ | ಸೀಳಿ ತೋರಿಸಿ
ಹೋರಿ ಹೊಂಚುವ ವೀರ ವಾನರರ || ಸಾಳಿಸುಂಬಿನ ಲಡೆಗೆಡಹುತು | ತ್ರಾಳದಲಿ
ಜೋಧರುಗಳಂತಕ | ನಾಲಯವ ಹೊಗಿಸಿದರು ಕಪಿ ಕೋಟಾನು ಕೋಟಿಗಳ || ೧೪ ||
ತೇರುಗಳನೇ ಸೂಟಿಯಲಿ ಮಿಗೆ | ಜಾರಿವರಿಸುತ ಹೊಕ್ಕ ಮೈಯಲಿ | ಕಾರುಮಳೆ ಸುರಿ
ವಂತೆ ರಕ್ಕಸರಥಿಕರುರವಣಿಸಿ || ಕೂರಲಗುಗಳ ಸುರಿದು ಕೆಡಹಿದ | ರಾರಿಡುತ ಕಪಿ
ಸೇನೆಯನು ಪೇ | ರ್ಮಾರಿ ಪೊಕ್ಕಂದದಲಿ ಹೆಣಮಯವಾಯ್ತು ರಣಭೂಮಿ || ೧೫ ||
ಹುರಿಕಟಿಸಿ ಯೂಥಾಧಿನಾಥರು | ನೆರೆದ ಸಿಡಿಲಬ್ಬರಿಸು ವಂದದ | ಲುರವಣಿಸಿದಿರಿ
ಕೋಟದಲಿ ಬಲುಗಂಧ ಶೈಲದಲಿ || ಮರಗಳಲಿ ಮುಂಬರಿವ ಖಳಪದ | ಚರರ ರಾವುತ
ರಖಿಳಬಲ ಜೋ | ಧರ ತದೀಯ ಮಹಾರಥರ ಸದೆಬಡಿದರಗಲದಲಿ ||೧೬|| ರೂಹರಿಯ
ಭಾರದವೊಲಸುರ ಸ | ಮೂಹ ಜಿಗಿಜಿಗಿಯಾಯ್ತು ವಾರಣ | ವಾಹರಖಿಳಪರೂಥ
ಪದಚರರಾ ಸಮಿಾಪದಲಿ || ಕಾಹುರದ ಕಾವಣ್ಣ ರಕ್ತದ | ವಾಹಿನಿಗಳುಪ್ಪರಿಸಿ ಹರಿ

ದವು | ಕಾಹುವೆಗೆದಂತಕನ ಕೊಲೆಗೆಲಸದ ವೊಲಾಯ್ತೆಂದ || ೧೭ || ದೋಣಿದುರ್ಗಗ
ಳಿಂದ ಭೂತ | ಶ್ರೇಣಿ ಹಿಡಿದವು ಹೆಣನ ಹೋಹೋ | ಕೋಣಪರ ಕೋಟಾನು ಕೋ
ಟಿಯ ನಖಿಳ ಖಗಜಾಲ || ಶೋಣಿತವ ನೀಂಟಿದವು ತಡಿಗಳ | ತಾಣಗಳ ಮರನೇರಿ
ಘನ ಗೀ | ರ್ವಾಣ ವಸನ ಜಸಾಕುಸುಮದಂತಾದುದಭ್ರದಲಿ || ೧೮ || ಮಡಿದುದುಭ
ಯದಚೂಣಿ ಕದನವ | ಹಿಡಿದುದಗ್ಗದ ಯೂಥನಾಥರ | ಗಡಣ ಗರ್ವಿತ ವೀರರಗ್ಗದ
ರೆರಡು ಪೈಕದಲಿ || ನಡೆವುತಿರ್ದುದು ಸಮರಸುರರು | ಘುಡಿಸೆ ಸುರವೈರಿಗಳು ಹರಿ
ಗಳು | ಹೊಡೆಯು ಸರಿಪಟ್ಟನಲಿ ಸಂಗರರಂಗ ಮಧ್ಯದಲಿ ||೧೯|| ರಾಯನಿದ್ದನು ನಿಮ್ನ
ಬಲದಸ | ಹಾಯುಶೂರರ ಮುಂದೆ ಮುಂಗರಿ | ರಾಯದಳ ವುಳಕಾರ ಲಕ್ಷ್ಮಣನಿದ್ದ
ನಂತರದ || ಆಯುತದ ರಣಭೂಮಿಯಲಿ ಕಪಿ | ರಾಯನಿದ್ದನು ಮುಂದೆ ವಾನರ |
ನಾಯಕರ ಸೇನಾನಿಯಿದ್ದನು ಸಕಲ ಬಲಸಹಿತ || ೨೦ || ಮುಂದೆ ಗವಯ ಗವಾಕ್ಷ
ದುರ್ಮುಖ | ವೈಂದ ಪನಸ ದ್ವಿವಿದ ರಥರಿಂ | ಮುಂದೆ ವಿನತ ಸುಷೇಣ ಜಾಂಬವ
ಗಂಧಮಾದನರು || ಸಂದಣಿಯ ಸಂಗರದ ಸೇನಾ | ವೃಂದ ಸಹಿತಿದಿರಾದ ರಾಹವ |
ದಂದವಿದು ತರುಬಿದರು ಹನುಮನ ಪಡುವಲಂಜಿಸಿತು || ೨೧ || ಹಿಡಿದರಂಗದರೊಡನೆ
ಸಮರವ | ತುಡುಕಿ ದೇವಾಂತಕ ನರಾಂತಕ | ರೊಡನೆ ನೂಕಿತು ಮಿಕ್ಕ ಕುಂಭ
ನಿಕುಂಭ ಮೊದಲಾದ || ಕಡುಗಲಿ ಗಳಿವರಂಕದಲಿ ಮುರಿ | ವಡೆದತ್ತ ಬಳಿಕವರು ಭರಿ
ತದ | ಕಡಲು ತೆಗೆವಂದದಲಿ ತೆಗೆ ದಂಡಿಸಿತು ರಾವಣನ || ೨೨ || ತರುಬಿ ಹಳಚುವ
ತೆರೆಯ ತೆಕ್ಕೆಯ | ಭರವಸವ ನೊಡೆಬಗಿದು ಮುಣ್ಣಿಂ | ಗುರುವಣಿಪ ಬಲ ಚೈತ್ರದ
ವೊಲಾಂತಖಿಳ ಕಪಿಬಲವ || ಹೊರಳಿಯನು ಹರೆಗಡಿದು ದೆಸೆಗೆಯ | ಸರಳ ಸಾರಪ
ಲಮರರೆದೆ ಜ | ಝ್ಝುರಿತವಾಗಲು ಝುಡಿತೆಯಲಿ ಹೊಕ್ಕನು ದಶಗ್ರೀವ ||೨೩|| ವಿಶಿಖ
ನಡೆದುದು ಹತ್ತು ತೋಳುಗ | ಳಿಸುಗೆಗಳ ಲೊಂದೊಂದು ಸರಳಿನ | ವಿಸರದಲಿ ಶತ
ಸಾವಿರದ ಲಕ್ಷೋಪಲಕ್ಷಗಳ || ವಿಷಮುವಾನರ ಭಟರ ಕೊರಳಿನ | ಬೆಸುಗೆಬಿಟ್ಟವು
ಬಿಡುದಲೆಯ ಬಲು | ವಸರವಾದವು ಲಯ ಕೃತಾಂತನ ಸಂತೆಯಂದದಲಿ ||೨೪|| ನೆಗಹಿ
ದದ್ರಿಯ ನೀಳ್ದ ತೋಳುಗ | ಳಗಲುತಿರ್ದವು ನಭಕೆ ಲಂಘಿಸಿ | ಚಿಗಿದ ತೊಡೆ ಕಡಿದಡಿಕಿ
ಲಾದವು ಕಪಿಕದಂಬಕವ|| ಒಗುರಕುತವುಪ್ಪರಿಸಿ ಗಗನಕೆ | ನೊಗವುತಿರ್ದವು ಕೊಲೆಗೆ
ಹಿಂದಣ | ಯುಗದ ವೀರರೊಳಿವನವೊಲು ಸಾಹಸಿಗಳಾರೆಂದ ||೨೫|| ಆತುಮುರಿದನು
ಸುಮುಖ ದುರ್ಮುಖ | ಸೋತು ಹಿಂಗಿದ ನಳನ ನಥಟ | ಜ್ಯೋತಿಮುಖ ದಧಿಮುಖನ
ಬಲ್ಲವರಾರು ಸಮರದಲಿ || ಬೀತುದಸು ಕುಮುದಂಗೆ ವೈಂದನ | ಮಾತು ಮುಗಿದುದು
ನಳ ಸುಷೇಣರು | ಹೂತಮುತ್ತಕವಂತೆ ಹಿಂಗಿದರೇರ ನೋವಿನಲಿ ||೨೬|| ತಾಗಿ ನೊಂ
ದನು ಗವಯ ಗಜ ಸುರೆ | ಕೂಗಿದನು ಕಲಿ ವಿನತನಸು ತುದಿ | ಮೂಗಿನಲಿ ತೆರಳಿದುದು
ತೆರಳಿದವ ಳುತಲಜಸೂನು || ಹೋಗಲೆಂದುಸುರುಗಳ ನಗಲಕೆ | ನೀಗಿದರು ಹೆಸರುಳ್ಳ
ಸಾಹಸ | ಸಾಗರರು ಸಮ್ಮುಖದೊಳಾಂತವರಿಲ್ಲ ಸುಭಟರಲಿ ||೨೭|| ಒದೆದು ಕೊಂಡನು
ಶರಭಕಪಿ ಕಪಿ | ಸವೆದಗಾಯಕೆ ಗಂಧಮಾದನ | ನೆವೆಯೊಳೊಕ್ಕುದು ರುಧಿರಜಲ
ಚಾರಿದನು ಕಲಿವೃಷಭ || ಮದವದರಿ ಭೈರವನ ಕಾಲಾ | ಟವ ಧರಿತ್ರಿಯೊ ಕಾಲ
ರುದ್ರನ | ಕದನವೋ ಕಡೆಯಾವ್ರದಳಿವಿಂಗರಸ ಸೇನೆಯಲಿ || ೨೮ || ಆಕೆನಾಳನ

ದಾವನೈ ಲೋ। ಕೈಕ ವೀರನ ವಿಷಮ ವಿಶಿಖ ಸ। ಮಾಕದಿದಿರಿನ ಲಸಮ ನಿರ್ಜರ ನರ
ಭುಜಂಗರಲಿ॥ ನಾಕ ತುಂಬಿತು ಮೃತ್ಯುತುಷ್ಟಿಯು। ಲೋಕರಿಸಿದಳು ಕಾಲ ಗಂಡವ।
ನೌಕಸರ ನೇಸಂಜೆನಾ ಹವವನು ದಶಾನನನ ॥೨೯॥ ತೂಳಿದಡವಿಯು ಥಳ್ಳುರಿಯ ದೆ।
ಬ್ಬಾಳದಲಿ ಧಟ್ಟೈಸಿನಿಂದು। ಬ್ಬಾಳುತನ ದೊರೆಯುಂದದಲಿ ಬಗೆ ಭೂಜರಾಜಿಯಲಿ॥
ವಾಳಿ ಹತ್ತರ ರಕ್ಕಸನ ರಣ। ದೂಳಿಗವ ತರುಬಿದನು ಗೋಲಾಂ। ಗೂಲ ಪತಿಗೂಡಿ
ರಿದ ಕೋಪಾಟೋಪ ದುಬ್ಬಿನಲಿ ॥೩೦॥ ಆನುವನು ಮೊದಲೊಮ್ಮೆ ಮಹಿಜಾ। ಮಾನಿ
ನೀಶನ ಮುಂದೆ ಖಳ ಕುಲ। ಹೀನನೇ ಹೊಗಗುಡದೆ ಹಳಚುವೆ ವಿವನೊಳೆಂದೆನುತ॥
ಏನಿದೆಲ್ಲಿಗೆ ಭರವಸದ ಸು। ಮ್ಮಾನ ಸಮರವೊ ಶರಣಾಗತಿ ಸಂ। ಧಾನವೋ ರಾಜೇಂದ್ರ
ಚಂದ್ರನೊಳೆಂದನಾ ರವಿಜ ॥೩೧॥ ಸಮರವಲ್ಲದೆ ತರಣಿ ಹೊಗುವೀ। ಭ್ರಮೆಯಿದೇ
ಬಾಹುಬಲ ವಿ। ಕ್ರಮದ ಚೇಷ್ಟಾಲಾಪ ತಾನಿದು ನಮ್ಮೊಡನೆ ಸೊಗಸೆ॥ ಕಮಲಜಾದಿ
ಕಪರ್ದಿಗಳ ನಾ। ಕ್ರಮಿಸಿದವು ಭುಜವಿವು ನರಾಧಮ। ರೆಮಗೆ ಪಾಡೇ ಪಥವಬಿಡು
ಹೋಗೆನುತ ತೆಗದೆಚ್ಚ ॥ ೩೨ ॥ ಎಚ್ಚ ಬಾಣಕೆ ಬಾಹುದಂಡದ। ಮುಚ್ಚಳನು ಮರೆ
ಮಾಡಿ ಸುರಕುಲ। ಮೆಚ್ಚೆ ಬೊಬ್ಬಿರಿದೆರಗಿದನು ಭೂಧರದ ಶಿಖರದಲಿ॥ ಅಚ್ಚುಬಳೆ
ಕೂಬರ ಯುಗಂಧರ। ನುಚ್ಚು ನುರಿಯಾದವು ದಶಾನನ। ನೆಚ್ಚರಿಕೆಯಲಿ ಪಡಿರಥಕೆ
ಹಾಯ್ದುಬ್ಬಿ ಬೊಬ್ಬಿರಿದ ॥ ೩೩ ॥ ಒಡನೆ ಲಂಘಿಸಿ ಬಾಲದಂಡದ। ಕಡುಹಿನಿಂದೆರಗಿ
ದನು ಮಕುಟದ। ಗಢಣ ದನುಪಮ ರತ್ನಚಯ ಚಲ್ಲಿದವು ದೆಸೆದೆಸೆಗೆ॥ ಕಡುಗಲಿಯೆ
ಕೇಳ್ಕಾಂಚನಾದ್ರಿಯು। ಸಿಡಿಲ ಸಂಗರದಂತೆ ದಿವಿಜರ। ಪಡೆಗೆ ಕಾಣಿಸಿತಮಮ ಕಡು
ಹದೆಂತುಟೊ ಕಪೀಶ್ವರನ॥೩೪॥ ಎಲವೊ ಬಲ್ಲಾ್ಯ ತನ್ನ ಭುಜಬಲ। ದಳವ ಪೂರ್ವದ
ಮಕುಟಭಂಗದ। ಲುಳಿಹಿದುದ ನಕಟಾವು ತರುಮೃಗವೇ ವಿಚಾರಿಸದೆ॥ ಗಳಹು
ವುದು ನಿನಗುಚಿತವೇ ಸುರ। ಕುಲವೆ ಹೇಳೈ ತಾವೆನುತ ಹಲು। ಕಳಚೆ ಹೊಯ್ದನು
ಹಲು ಮೊರೆದು ಹರಿರಾಯನಾ ಖಳನ ॥ ೩೫ ॥ ಹಾರಿಬಿದ್ದನು ರಥದಿ ಯಿಳೆಗು। ಬ್ಬೇರಿ
ದುದು ಕಪಿಸೇನೆ ಬೊಬ್ಬೆಯ। ಚೀರುಗಳ ಚಳಗತಿಯ ಚಟುಳ ಧಡಾಳ ಜಾಳೆಯಲಿ॥
ಮೂರು ಕೆಜ್ಜೆಯ ಹಿನ್ನೆಲೆಗೆ ಕರೆ। ಸಾರೆ ಹಿಮ್ಮೆಟ್ಟಿದನು ರಾಮಗೆ। ಮಾರಿದವನಿವ
ನಕಟ ತಪ್ಪಾಯ್ತೆನುತ ಸುಗ್ರೀವ ॥ ೩೬ ॥ ಅನಿತರೊಳು ಸಾರಥಿ ರಥ ಸ್ಯಂ। ದನದ
ಮುಂದಿರಿಸಿದನು ಕಳೆದನು। ಧನುವ ಸಂವರಿಸುತ್ತ ಸಮರಕ್ರೋಧ ಮನನಾಗಿ॥ ವನಜ
ಭವ ಮಂತ್ರದಲಿ ಬಾಣದ। ಮೊನೆಯ ಮಂತ್ರಿಸಿ ಬೊಬ್ಬಿರಿದು ಶಿಂ। ಜಿನಿಯ ಬಿಲುದನಿ
ದೋರಿ ಮಿಗೆ ಕವಿದೆಚ್ಚ ನಿನಸುತನ।೩೭॥ ಕೊಂಡ ಕೋಲಿನ ಕೋಲಿಗಿನಸುತ। ಡೆಂಡ
ಣಿಸಿ ಬಸವಳಿಯೆ ಬಲಿಮುಖ। ತಂಡಕದ ಶಿಬ್ಬೇಡೆ ತೆಗರುಟ್ಟಾಳ ಹಿಂತಾಳ॥ ದಿಂಡು
ಬೇವು ತಮಾಲದಲಿ ಕಲು। ಗುಂಡಿನಲಿ ಹೂಳಿದನು ದಿನಮಣಿ। ಮಂಡಲದ ಮುತ್ತಿ
ಗೆಯ ಮುಗಿಲಪೊಲರಿ ದಶಾನನನ ॥೩೮॥ ತರಿದ ನಮರ ವಿರೋಧಿ ಬಳೆಯಲಿ। ತುರುಗು
ವವು ತರುಶೈಲ ಶೈಲದ। ಹೊರೆಯ ಹೊದರಲಿ ಹೊಳಕಿ ಹೊಂಚುವ ಹೊಂತಕಾರಿಗಳ॥
ಹರಿಬ ಹಸರಿಸ ಹರಿಕುಲೇಂದ್ರನ। ವರಸಿತಾಗಿತು ಮುಂದನೊಡ್ಡನು। ಮುರಿಯಸುರ
ಮುಂಚಿದನು ನೀಲನ ದಳದ ಸರಿಸದಲಿ ॥ ೩೯ ॥ ಅರಿಸೆಲೆಯ ಹವಣಿನಲಿ ಹಿಂಗಿದ।
ಧರೆಯ ತುದಿಯಲಿ ನಿಲುಪ ವೈಶ್ವಾ। ನರನವೊಲು ವಾನರರ ಸೇನಾನಾಥ ಕೋಪದಲಿ॥

ಬರಲಿ ಬರಲಿವ ನಸುವ ನುರ್ಚುವೆ | ಹರಿದು ಹಗೆಯಸು ಕೊಂಡನೆಂದ | ಬ್ಬರಿಸಿ ಮುಳಿದಡೆ ಮುಳಿಯಲಾಪ್ಪನೆನುತ್ತ ಗರ್ಜಿಸಿದ || ||೪೮||

ಇಪ್ಪತ್ತೊಂದನೆಯ ಸಂಧಿ ಸಮಾಪ್ತಂ.

ಇಪ್ಪತ್ತೆರಡನೆಯ ಸಂಧಿ.

ಸೂಚನೆ|| ವೀರ ಧೀರೋದ್ಧಾತ ನಿಶಿಚರ | ವೀರ ನಧಿ ಮಥನದಲಿ ವಹ್ನಿಗಳ | ಮಾರ ಹಳಚಿ ಹಮ್ಮೈಯಿಸಿದನು ಕದನ ಕೇಳಿಯಲಿ ||

ಪದ್ಯ|| ಕುಶ ಕುಮಾರಕ ಕೆಳಿದ್ಯ ಕೈ | ಕಸೆಯ ನಂದನ ನಂದನನು ಕಂ | ಡಸಮ ಬಲ ಕಲಿ ನೀಲ ವಿಲಯದ ಕಾಲನಂದದಲಿ || ದಶನ ಪೀಡಿತ ಕಂಪಿತಾಧರ | ವಸಮ ವೀರಾವೇಶ ರೋಷದ | ಮಸಕದಲಿ ಮದವೇರಿ ಮಹಿಜಾ ಚೋರ ಗಿಂತೆಂದ ||೧|| ಎಲ್ಲಿ ಗೆಲವೋ ಗತಿಯ ಗಾಡಿಯ | ಘಲ್ಲಣೆಯ ಗರುವಾಯಿ ಬವರದ | ಭುಲ್ಲವಣೆಯ ವಿಲಾಸ ವೈಭವ ವಾರಕೂ ಡೆಲವೊ || ನಿಲ್ಲು ನೀದವನಾರು ನೋಡಿದ | ರಿಲ್ಲಿ ನಮ್ಮನು ನಮ್ಮ ಬವರದ | ಬಲ್ಲವಿಕೆಯನು ನೋಡಿ ಬಳಿಕೇನಾದ ಡಾಗೆಂದ ||೨|| ವಿಶಿಖ ವಂಗುಲಿ ಯೊಲಹಿನ ರೆನಗೆ | ಮುಸುಡ ಮಡಲಿರಿವಮರ್ಷಣದಲಾ | ಶ್ವಸನ ಭಾಂಧವ ನಂದನಂ ಗಿಂತೆಂದ ನವ ಬಳಿಕ || ವಿಷಮ ಬಲನಹೆ ಬಂದ ವಿಪಿನಾ | ಕಸ ರೊಳಂಜಿದೆವಾವು ನವ ಗು | ಬ್ಬಸವ ಮಾಡದೆ ಮಾಣೆ ಮನದಲಿ ತೋರುತಿದೆಯೆಂದ ||೩|| ಖೂಳ ಮರ್ಕಟ ಕೇಳು ಮದಶುಂ | ಡಾಲ ಜೀರ್ಣಿಸಿದವರು ಮೋಡಿಗೆ | ಕಾಲನರುಹಿಸಿ ಕೊಂಡರುಂಟೇ ಪೂರ್ವಕಾಲದಲಿ || ಕಾಲ ಕಲಿತಗ್ರೀವ ಸದೃಶ ವಿ | ಶಾಲ ಬಲ ಸುಗ್ರೀವ ನಾ ರವಿ | ಕಾಲ ಕಂಡನು ನೋಡು ನೋಡಳಿ ದುಳಿದ ರವರೆಂದ ||೪|| ಹೋರಿ ಬದುಕಿದರಿಲ್ಲ ವೆಮ್ಮೊಯ | ವೈರದಲಿ ವಿಬುಧಾಸು ರೋರಗ | ವೀರರಲಿ ವಿಕ್ಕಿನ ಮನುಷ್ಯ ಮೃಗಂಗಳೆನಗಿದಿರೆ || ದಾರಿವೆಗೆ ನಿಸ್ಸವರೊಡನೆ ಬಲು | ವೀರತನ ನಿನಗುಳ್ಳ ಡೆಳಿಸೆಳೆ | ಗೋರಿಗಲ್ಗಳಲೆಂದು ತಡೆ ಸೋಜಿಗವ ದೇನೆಂದ ||೫|| ಜೋರರಂಗದ ಮಾತು ತಳವರ | ಗೇರಿಯಲಿ ಭೂಷಣವೆ ದೇಹ ವಿ | ಕಾರ ದಾತ್ಸು ಮಾತ್ರ ವೆಮ್ಮೊಳು ಧರ್ಮವೇ ನಿನಗೆ || ವಾರಿಜಾಕ್ಷನ ಭೃತ್ಯರಿಗೆ ಭಯ | ಸಾರುವುದೆ ಬಾಯ್ಬಡುಕುತನ ನಿ | ನ್ನಾರವರ ಕೂಡ್ಯೈಸೆ ನಮ್ಮೊಳು ಸೊರಹಬೇಡೆಂದ ||೬|| ಕೆಲವು ಕಳವಿಕ್ಕಿದಡೆ ಕಡೆಯಲಿ | ನಿಲುವು ಪೆದೆಯಲಿ ಶೂಲ ಕಳ್ಪನ | ಕೆಲಸವಿದು ಕೇಳೆಲವೊ ನಿನ ಗಂತಕನ ನಗರಿಯಲಿ || ನಿಲವು ನಿನಗಿನ್ನೇಕೆ ನಯದ | ಗ್ಗಳಿಕೆ ನಿಲ್ಲೆನು ತುಬ್ಬುವಬುಧಿಯ | ಜಲವ ಝಾಡಿಪ ಬಡಬನವೊಲುಬ್ಬಿರಿದ ನಾ ನೀಲ ||೭|| ಬರಿಯ ಬೀರದ ಮಾತಿ ನಮ್ಮನು | ಜರೆದು ನುಡಿವವ ನೀನೆ ನೋಡಾ | ಬೆರಗನೆನು ತುಬ್ಬಿರಿದು ಬೊಬ್ಬಿರಿದೆಚ್ಚ ನಗ್ನಿಜನ || ಇರಿತ ದಿಂಧನ ಕಗ್ನಿ ನೋವೆಂ | ದುರಿಸುವುದೆಲವ ಕೇಳು ಮೆಲ್ಲನೆ | ಯೆದ್ದರಗಿದನು ಮರ್ಛು ಭಾಷಿಸಲು ಸುರರಿಪು ದಶಾನನನ ||೮|| ಬಳಿಕ ಬಲಿದಿದು ಬವರ ವಿಬ್ಬರಿ | ಗಳವಿಯಲಿ ನಂದೀಶ್ವರಂಗ | ಗ್ಗಳದ ವಿವ್ಯಸ್ತಾಲಿ ಗಂಡಾ ತ್ರಿಪುರ ದಹನದಲಿ || ಬಲಿದ ಬವರಕೆ ಸೂರು ಮುಡಿಯೆನೆ | ಕಲುಮರನ

ಕಣೆಗಳ ಕಠೋರದ । ಕಳಚಿಕೆ ಗಳುಪ್ಪಡಿಸು ತಿರ್ದವು ವೀರ ರುಭಯದಲಿ ॥೯॥
ಸೆಳೆದಿಡುವ ಗಿರಿ ಶಿಖರ ಮಹಿಜಾ । ವಳಿಯು ಲಂಬರ ತಂಬಿ ತೆಸುಗೆಯ । ಥಳಥಿಲೀ
ಮುಖ ಜಾಲದಲಿ ಜಡಿದುದು ದಿಶಾನೀಕ ॥ ಅಳವಿ ಥಟ್ಟಿಸೆ ನೆಗೆದು ಗಿಡಗನು । ಗಿಳಿಗೆ
ಹಾಯ್ದಂದದಲಿ ನೆಗೆ ದಪ್ಪಳಿಸಿ ಬಿಗಿದನು ನೀಲ ಬಾಲದ ಲಾ ದಶಾನನನ ॥೧೦॥ ಬೆಳದ
ನಂಬರಕಾಗಿ ಸುಮನೋ । ಲಲನೆಯರ ಸುಮ್ಮಾನದಲಿ ಜೋ । ಗುಳಕೆ ಕರೆದನು
ತೂಗಿದನು ತುದಿವಾಲದಲಿ ಖಳನ ॥ ಅಳವಿರೆನ್ನಯ ಕಂದ ಜೋ ಮ । ಕ್ಕಳ ಮಹಾ
ಮಾಣಿಕವೆ ಜೋ ಮೂ । ಗಳಿದವಳ ಕಡುಮುಗ್ಧ ಶಿತಕರ ಶಿಶುವೆ ಜೋ ಯೆಂದ ॥
ಹೋರಿ ಜೋ ಜೋ ಹರಿ ಹಯನ ಬಡಿ । ಹೋರಿ ಜೋ ಜೋ ಬಳಿಯ ವಿಮಳಾ ।
ಗಾರ ದಬಲಾಜನದ ಜೋಗುಳಿಯರಸ ಜೋಯೆಂದ ॥ ಚಾರುವೇಣಿಕೆ ಮುಖ್ಯ
ಸುಮನೋ । ನಾರಿಯರು ಸವೆತ್ತಿ ತೂಗಿದ । ನಾ ರಣಾಂಗಣ ಮಧ್ಯದಲಿ ಲಂಕಾ
ಪುರಾಧಿಪನ ॥೧೨॥ ಇಳುಹಿದನು ಬಳಿಕವನ ಮಣಿರಥ ದೊಳಗೆ ಬಾಲದಲಾ ವರೂ
ಥದ । ಹಳವಿಗೆಯ ಕಂಭದಲಿ ಬಿಗಿ ದಿಂತೆಂದ ನಸುರಂಗೆ ॥ ಎಲವೊ ರಕ್ಕಸ ರಣಕೆ
ನಾವತಿ । ಬಲರೊ ದುರ್ಬಲರೋ ತುತಾರದಿ । ನಿಳಿಕೆ ಗಂಡೆಯಲಾ ಮೃಗಾಥಮರೆಂದು
ಮೊವಲೆಂದ ॥೧೩॥ ಏನು ನಾವ್ ತರು ಮೃಗವೆ ರಕ್ಕಸ । ನೀನೆ ಹೇಳಾ ನಾಚ
ಬೇಡವಿ । ಮಾನ ದನುರತು ಕಾಣ ರೈಸಲೆ ನಮ್ಮ ಕೆಲಸಗಳ ॥ ಜಾನಕಿಯ ಕಳವಿನಲಿ
ಕಪಟದ । ಕೈ ನೆಗಹಿನಲಿ ಕೊಂಡು ಮೋಹನು । ಮಾನ ವೆಲ್ಲಿ ಯೆನುತ್ತ ಮತ್ತೆರಗಿ
ದನು ರಕ್ಕಸನ ॥೧೪॥ ಎರಗಲಾ ಖಳರಾಯ ನುಗಿದು । ಬ್ಬಿರಿದು ಹೊಯ್ದನು ಚಂದ್ರ
ಹಾಸದ । ಉರುಗಿ ತಪ್ಪಿಸಿಕೊಂಡು ಹೊಯ್ದನು ಮತ್ತೆ ರಕ್ಕಸನ ॥ ಮುಂದ ವಣಲಿವ
ಹಲ್ಲು ಹಲು ನೊರೆ । ದರಿದ ನವ ಸುರಗಿಯಲಿ ಸುರಗಿಯ । ನುರುಬಿ ತಿವಿದನು ಮತ್ತೆ
ಮಧ್ಯದ ಶಿರವ ನಾ ಖಳನ ॥೧೫॥ ಒಟ್ಟಿ ಮುರಿದುದು ಸೀಸಕದ ತಲೆ । ಪಟ್ಟಿ ಗಾಂ
ತುಮು ಬಗೆವನೇ ಜಗ । ಝುಟ್ಟಿ ರಕ್ಕಸರಾಯ ಚೀಲಾಯುದಲಿ ಶಿಖಿಸುತನ ॥ ಹೊಟ್ಟೆ
ಯನು ತಿವಿ ದಿಳೆ ಬಿರಿಯೆ ಬೊಬ್ಬಿಟ್ಟನಾ ಕೈಯೊಡನೆ ಕಪಿ ಬಲು । ಬೆಟ್ಟವನು ಸಿಡಿ
ಲೆರಗುವ ವೊಲೆರಗಿದನು ರಕ್ಕಸನ ॥೧೬॥ ಉಲಿವು ತಿಟ್ಟಿಯು ಲಿಟ್ಟ ನವ ನದ ।
ನೊರುದು ತಪ್ಪಿಸಿಕೊಂಡು ಕೊಂಡನು । ಕಲಚಿ ಕದಪಿನ ಚಿಪ್ಪು ಕಲಿಗಳ ದೇವ ಕಲಿ
ನೀಲ ॥ ಕುಲಿಶ ಬಂಧ ಗದಾಯುಧದ ನವ । ನಳುಕ ದಪ್ಪಳಿಸಿದನು ಕಪಿಮುದೆ । ಕಾಚಿ
ಕರ್ಣಾಂತವನು ತಿವಿದನು ತೀವ್ರ ಮುಷ್ಟಿಯಲಿ ॥೧೭॥ ತಿವಿದ ಕೈಯ್ಯೊಡ ನಸುರಪತಿ
ಮರು । ದಿವು ದಿವಿಗೆ ಕೈ ಗೂಡದಂತಿರೆ । ತಿವಿದ ನಪಸವ್ಯದ ಸಗಾಥದ ಮುಷ್ಟಿಯಲಿ
ಕಪಿಯ ॥ ಪರಿಯ ಘಾಯಕೆ ಸಿಡಿದ ಶಿಖರಿಗೆ । ಸವಡಿಯನೆ ಸಡಿ ದನಿಲ ಸಖ ಸಂ ।
ಭವನು ಸಿಡಿದಲ್ಲಿಂದ ಹರಿತಂದೆರಗಿದನು ಖಳನ ॥೧೮॥ ಚಟುಳಬಲ ಮತ್ತೊಡನೆ ಗಗ
ನಕೆ । ಪುಟನೆಗೆದು ಪೌಲಸ್ತ್ಯಜನ ಕಾ । ವಟಿಯ ನಪ್ಪಳಿಸಿದನು ಚಪ್ಪರಿಸಿದನು ಭುಜ
ಯುಗವ ॥ ಅಟಕಟಿಸಿ ಖಳರಾಯ ಕಪಿ ಚಾ । ವಟಿಯ ಚಪ್ಪಳಿ ಕೆಮ್ಮೊಡನೆ ವಿ ।
ಸ್ಫುಟವೆ ವೀರನ ಪರಿಯ ನೋಡೆನು ತೊಡೆದ ನಗ್ನಿಜನ ॥೧೯॥ ಒದೆದಪದಹತಿ
ಗೀತ ನಸುಗವ । ಗವಿಸಿ ನೊಂದನು ನೊಂದ ವೇಳೆಯ । ಲೊದಗಿದನು ರಥಕಾಗಿ
ಸಾರಥಿ ಜಾಚಿದನು ರಥನ ॥ ಆದರ ಹವನನು ಕಂಡು ತುದಿ ವಾ । ಲದಲಿ ಬಳಿಸಿದು

ಬೀದಿವರಿಗಳ । ಕುದುರೆಗಳ ಕಾಲ್ಗಳಿಪೆ ಬಾಲವ ಹಾಯ್ಕಿದನು ನೀಲ ॥೨೦॥ ಮುಗ್ಗಿ
ಕೆಡೆಯಲು ಕುದುರೆ ಸೂತನ । ಬಗ್ಗಿಸಿದ ನಸುಸೇಂದ್ರ ನವ ನಾ ಹಗ್ಗಗಳ ಹಮ್ಮು
ಗೆಯ ಸಡಿಲಿಸಿ ಹಯವ ನಬ್ಬರಿಸಿ ॥ ಹಿಗ್ಗದೆಗೆದುದು ಬಾಲ ಹಿಂದಕೆ। ತಗ್ಗಿ ನೋಡಿದ
ನಸುರ ಕಂಡಳಿ । ದಗ್ಗಳದ ಖಡುಗದಲಿ ಹೊಯ್ದನು ಹವ್ಯವಾಹ ಜನ ॥೨೧॥ ಉಗಿದು
ಬಾಲವ ನಸುರ ರಾಯನ । ಹೆಗಲಿ ಗುಪ್ಪಿರಿಸಿದನು ಮುಕುಟವ । ತೆಗೆದು ಬಿಸುಟನು
ಬೀದಿವರಿದನು ಬಹಳ ರಂಗಳಲಿ ॥ ನೆಗೆದು ಕೂಬರ ದುಡಿಗೆ ಕುದುರೆಯ । ನೊಗನ
ಸಡಿಲಿಸಿ ಸಾರಥಿಯ ನಂ । ಘ್ರಿಗಳ ನೊದೆ ದಂಬುಗಳ ಕಂಬುಗೆ ಯಿಂದ ಬರಿಕೈದ ॥
ಹಿಡಿದ ಶಸ್ತ್ರವ ನುಗಿದು ಕೆಲಬಲ । ಕಡುಕಿ ಕೀಲಚಕ್ರಗಳ ಕಳೆ ಕಳೆ। ದಡಿವುಗುಚಿ
ದನು ತೇರ ತವಕಿಸು ತಸುರ ವಲ್ಲಭನ ॥ ಮುಡುಹು ಮುಸುಡವ ಕೊರಳ ಕಂಕುಳ ।
ಹೆಡಕುಗಳ ಭಾರಿಸಿ ಭಯಾನಕ । ವಡಿಸಿ ಗರುವಾಯ್ ಗೆಡಿಸಿ ಕೆಂಗೊಲ ಗೋಳಿಸಿದನು
ನೀಲ ॥೨೩॥ ಎಲೆವೊ ನೀನೇ ರಘುವೇಂದ್ರನ । ಕಲಹ ಕೊಡಗುವ ಭಟನು ವಿಟತನ।
ದಳವರಿಕೆಯಲಿ ವಿಷಯ ಲಂಪಟ ತನದ ತವಕದಲಿ ॥ ಇಳೆಯ ಖೂಳರ ಖೂಳ
ಹೋಗೆನು । ತುಲಿದು ಭುಜವನು ನೆಗಹಿ ನಿಮಿತಾಂ । ಗುಲಿಗಳನು ನಡು ನೆತ್ತಿಯಲಿ
ಹಾಯ್ಕಿದನು ದಶ ಮುಖನ ॥೨೪॥ ಘೊಳ್ಳೆನುತ ಸುರ ವಾರನಾರಿಯ । ರಳ್ಳೆಯನು
ಹಿಡಿ ದುಬ್ಬು ನಗೆಯಲಿ । ಗುಳ್ಳಿರಿದು ಗಹಿಲಿಕ್ಕಿ ನೀಲನ ಪರಿಯ ಲೇಸೆನುತ ॥ ಬಲ್ಲಿದ
ಲೆಗಳ ಮೇಲೆ ಕಪಿ ಕೈ । ಗೊಳ್ಳೆಯನು ಸಡಗರಿಸಿ ಹೆಂಗಸು । ಗಳ್ಳ ಹೋಗೆನು ತೊದೆದ
ನಂಘ್ರಿಯಲಾ ದಶಾನನನ ॥೨೫॥ ನಾಣುಗೇಡಿ ಗಳುಸುರು ರಣ ಕ । ಟ್ಟಾಣೆ ನೀನದ
ರೊಳಗೆ ಲೋಕದ । ಪ್ರಾಣಜನ ಪುರುಷ ಪ್ರತಾಪದ ಪಾಡು ಪಂಥಗಳ ॥ ಪಾಣಿಯಲಿ
ಪಂಟಿಸಿದ ಹಲುಗಳ । ಕಾಣ ಕರಿಗರಿ ಗಾಹ ವವನಿ । ತ್ರಾಣದಲಿ ಕಾದವನ
ಭಂಟನೊ ಭಟನೊ ನೀನೆಂದ ॥೨೬॥ ಸುಡು ಸುಡೆಲವೋ ಖೂಳ ಹಾವಿನ । ಹೆಡೆವಣಿ
ಯಲಾ ಸೀತೆ ಶೂಲಿಯ । ಖಡುಗ ಧಾರೆಯ ಮಡುವಲಾ ಹರಿಗಳಿದ ಗಂಡಿಯಲಿ ॥
ಡಿಲ ಕಿವಿ ಕುಂಡಲವಲಾ ಲಯ । ಮೃಡನ ಹಣೆಗಂಣುರಿಯುರಾ ಖಿಶ ರಡವಿ ಗಿಕ್ಕಿದ
ಕಿಚ್ಚಿ ಗಾಶಿಸಿ ಕೆಟ್ಟೆ ನೀನೆಂದ ॥೨೭॥ ಚಿಟ್ಟೆ ನೆಲವೋ ನಿನ್ನ ನಾಚಿಕೆ । ಗೆಟ್ಟವನೆ
ಹೋಗಸುರ ವಂಶಪ । ರಟ್ಟನಲಿ ಹೋಗಾ ನೃಪಾಲನ ರಣಕೆ ಗುರಿ ನೀನು ॥ ಉಟ್ಟು
ಕಟ್ಟಲಿ ನಸ್ತ್ರ ಶಸ್ತ್ರ । ಕೊಟ್ಟು ಲಂಕರಿ ಸೆಲವೊ ನಿನ್ನನು । ಮುಟ್ಟೆ ನಂಜದಿರೆನುತ
ಬೋಳೈಸಿದನು ಸಾರಥಿಯ ॥೨೮॥ ಬಳಿಕಲವ ನೀ ಮಾತ ಕೇಳುತ । ಕಳಲಿ ದಸುರ
ವರೂಥವನು ಸಂ । ವರಿಸಿದನು ಸಿಂಗರಿಸಿದ ನಾಳ್ಡನ ರಥವ ನೇರಿಸಿದ ॥ ಕಲಚಿ ಗವ
ಸಣಿಗೆಯನು ಚಾಪವ । ಕೊಳಸಿರಣಿಗಳ ನಿತ್ತು ತುರಗಾ । ವಳಿಯ ಚಪ್ಪರಿಸಿದನು
ವಿದ್ಯುಜ್ಜಿಹ್ವ ನಾಹವಕೆ ॥೨೯॥ ಅಳಲು ಗಡಿ ಯಿಂದುಗಿದು ನವ ಬ । ತ್ತಳಿಕೆ ಯಿಂಪಾ
ಗ್ನೇಯ ಬಾಣವ । ನಿಳುಹಿ ತಿರುವಿ ನೊಳಾರ್ದು ಹಿಂಗಿದು ಹೋಹ ಸಮಯದಲಿ ॥
ಕಳವಿನಲಿ ಕವಲಾಸನಾದ್ಯರು । ಖಳನ ನಲ್ಲಿಂ ದೊಡೆಸುತಿರೆ ಕಳ । ವಳಿಗನಡ ಕೈ
ಕೊಳ್ಳದೆಚ್ಚರು ವಹ್ನಿ ನಂದನನ ॥೩೦॥ ಓಸರಿಸಿ ಕೆಲಸಾರ್ದ ಪಥವಿ । ತ್ತಾ ಸಮೀರ
ಸಖಾತ್ಮಜನ ವೇ । ಧೈಸಿ ಕೊಂಡುದು ಬಾಣ ವಾ ಗೀರ್ವಾಣ ದಲ್ಲಣನ ॥ ಸೈಸರಿಸಿ
ಪಾಂಡಳಿದು ಬಳಲಿದು । ಘೂಶಯನ ಕೊಡಲಿತ್ತ ನರಿಭಟ । ನಾಸುರದ ಲಬ್ಬರಿಸಿ

ಮುಂದಕೆ ನೂಕಿದನು ರಥವ ||೩೧|| ಬಿದ್ದನೋ ದಳಪತಿ ಯೆನುತ ಹೊದ | ರೆದ್ದ
ಹೆಮ್ಮರ ಗಿರಿ ಕದಂಬವ | ಲದ್ದಿದರು ಯೂಥಾಧಿನಾಥರು ಬಹಳ ಬೊಬ್ಬೆಯಲಿ ||
ಹೊದ್ದಿತೀ ನುಡಿ ಕಡಲ ದಾಂಟಿದ | ಕದ್ದಿ ಕಾರನ ಕೋಪಶಿಖಿ ಮುರಿ | ದೆದ್ದು ದಾಳಿಸಿ
ನೋಡಿದನು ನಾಲ್ದೆಸೆಯಲಾ ಹನುಮ ||೩೨|| ಅಹುದು ರಾವಣ ನಿವನು ತಾ ವಿ
ನ್ನಿಹುದು ತಪ್ಪುವದೆನುತ ತರುಬಿದ | ಬಹುಮುಖನ ನಂದನನ ನೊಂದೇ ಮುಷ್ಟಿ
ಘಾತದಲಿ || ಮಹಿ ಬಳಿಕ ಬಳಸಲಿಸಿ ಬಿಗೆ ಕವಿ | ದಹಿತ ರಸುಗಳ ಕೊಳುತ ತೊರ
ವೆಮ | ಬಹಳ ಬಲ ನರಹರಿಯ ದೂತನು ತರುಬಿದನು ಖಳನ || ||೩೩||

ಇಪ್ಪತ್ತೆರಡನೆಯ ಸಂಧಿ ಸಮಾಪ್ತಂ.

ಇಪ್ಪತ್ತಮೂರನೆಯ ಸಂಧಿ.

ಸೂಚನೆ|| ತಿವಿವ ತಿವಿಗಳ ನಾಂತು ಪುನರಪಿ| ತಿವಿ ದತಿ ವಿಗಳ ನಾನಲಾರದೆ | ಪವನ
ಜನ ಮರವೆಯಲಿ ಹಾಯ್ದನು ರಣದೊಳಸುಸೇಂದ್ರ ||

ಪದ್ಯ|| ಗಾಯ ಬಿರಿಸೋ ಬಿದ್ದನೋ ರಘು | ರಾಯ ಕಪಿ ಸೇನಾಧಿ ನಾಯಕ | ನಾಯುವಿನ ಹವಣರಿಯ ಬಾರದು ಬವರ ದೊಳಗೆಂದ || ಬಾಯ ಬೊಬ್ಬೆಯ ಭಟರ ಬಿರುದಿನ | ಸಾಯಕದ ಹರಿ ವಾಯುಪುತ್ರನ | ನೋಯಿಸಿತು ನಿಗುರಿಸಿತು ನಿಶಿತ ಕ್ರೋಧಮಯ ಶಿಖಿಯ ||೧|| ಕೊರತೆ ಬಂದರೆ ಬರಲಿ ರಘುಪತಿ | ತೊರೆಯಲೆನ್ನನು ಸುಪ್ರತಿಜ್ಞೆಯ | ಮುರಿದನೆಂದು ಭ್ರಮಿತ ನಿವನೆಂದುದು ಲಯಾಲೋಕ || ಮುರಿವೆ ನೀ ಖಳ ನೆಲುವ ರಕುತವ | ಸುರಿಸುವೆನು ಶಾಕಿನಿಯರಿಗೆ ರಣ | ಮುರುಕ ನಿವ ನಿನ್ನರಿಯ ಬಹುದೆನು ತುಬ್ಬಿದನು ಹನುಮ ||೨|| ದೊದ್ದೆಗರ ಸದೆಬಡಿದು ಶಕ್ರನ | ಗೆದ್ದ ಸುಭಟರ ನೂರು ಯೋಜನ | ಕೊದ್ದು ಮಡಳಿದು ಮಾರುತಾಭ್ರಕೆ ನೆಗೆದು ಲಳಿ ಮಸಗಿ || ಹದ್ದು ಹಾವಿಗೆ ಹೊಂಚುವ ವೊಲು | ಬೈದ್ದು ಮಾರುತಿ ನಿಂದನುವೇ | ಲಿದ್ದ ಸುರಗಣ ಹೊಗಳೆ ರಕ್ಕಸ ರಾಯ ಸಿದಿರಿನಲಿ ||೩|| ಏನೆಲವೊ ದಶಕಂಠ ರಣ ಸು | ಮ್ಮಾನ ರಂಜಕ ವಾಡೊಡನೆ ಸಂಧಾ| ನವೋ ಸಂಗರವೋ ಸಮುಚಿತ ವಾವುದುದ್ಯೋಗ || ಭಾನು ಕುಲಜನ ಕಾಣಬೇಕೆಂ| ಬೀನೆನಹು ನಿನಗುಂಟೇ ಹೇಳನು | ಮಾನವಾವುದು ಸುಮ್ಮನಿರಬೇಡೆಂದ ನಾ ಹನುಮ ||೪|| ಬೆರಗದೇ ಕೆಮ್ಮುವನು ನೀ ತಾ | ನರಿಯ ಬೇಹುದು ಪುರವ ಸುಲಿ ತ | ದರುವೆ ಯಲ್ಲಿ ಡೆಗಳಲಿ ಸುತ್ತಿ ಸಮೀರ ಬಾಂಧವನ || ತುರುಕಿ ತರುಪಲಿ ರಕ್ಕಸರ ರಣ | ವರೆಯ ಹೊಯ್ಲಿನ ಲೆಮ್ಮ ನೂರೊಳು | ಮೆರೆಸಿದುದ ನೀ ಮರೆವುದುಚಿತವೆ ಯೆಂದ ನಾ ಹನುಮ ||೫|| ಅರಿವಡೆಲವೋ ನೀನು ನೆತ್ತಿಯ| ಹೆರೆಯುವನೆ ಮೇಣ್ ಬೊಮ್ಮನೇ ಸುರ | ದೊರೆಯನೇ ಶಿರ ಯಮ ನಿಶಾಚರ ವರುಣ ವಾಯುಗಳ || ನೆರವಣಿಗೆ ಯವನೇ ವಿಚಾರಿಸಿ | ತರುಚುಗೆಡದರೆ ಬಲ್ಲೆನೇ ಹಲು | ಮೊರೆಯ ಕಪಿ ನೀ ಕೆಣಕಿ ನಾಯದೆ ಕೆಲಕೆ ಸಾರೆಂದ ||೬|| ಆದಡರುಹಿಸ ಬೇಕೆ ಬಲು ಭಟ | ನಾದಲಾ ನೀನೀಗ ಕಾಲದ | ಹಾದಿ ತಾ ವಿಪರೀತ ಮೆರೆವರು ಮಧುಪ ರದಕೇನು || ಕಾದಿ ನೋಡುವ ಜಯ ಮುಖವು ನಿನ | ಗಾದಡೀ

ಮಾತುಚಿತವೆಂದು ವಿ । ನೋದದಲಿ ಕೆಡಹುವನು ತೇರಿಂ ದಶರ ವಲ್ಲಭನ ॥ ೭ ॥
ಎಲವೊ ಸಾರಥಿ ನಿಮ್ಮೊಡೆಯ ನೀ । ಕಲಹವನು ಜಯಿಸಿದಡೆ ಕೊಡು ಕೋ । ಳಿಳಕ
ಬವರಕೆ ತೇರ ನವಗೆಂ ದಿತ್ತು ಕೈದುಗಳ ॥ ಕಳಚಿ ಹಾಯ್ಕಿದ ನವನೆಡೆಗೆ ನಿ । ನ್ನಳವ
ತೋರ್ರೈ ನಮಗೆನುತ ದಶ । ಗಳನ ಕಿವಿಯಲಿ ಬೊಬ್ಬಿರಿದ ನೆದೆ ಬಿರಿಯೆ ಕಲಿ
ಹನುಮ ॥೮॥ ಸೆಳೆದು ಕೈದುವ ಬಿಸುಟ ನೆಲ ದಳ । ವಳಿಯದಿರು ನಿನಗಾದ ಬಳಿಯಲಿ ।
ಬಳಕೆ ಬಯಸಲೆಯಕ್ಕನಂಗದನಂಜ ಬೇಡ ನುಡಿ ॥ ಹೋಳಕೆ ಕಾರರು ನಾವು
ನಮ್ಮ । ಗ್ಗಳಿಕೆಯನು ಸುರ ರೀಕ್ಷಿಸಲಿ ನುಡಿ । ತಳುವ ಮಾಡದೆ ಹೇಳೆನುತ ಹನುಮಂತ
ಘರ್ಜಿಸಿದ ॥೯॥ ಎಳೆಗೊನೆಯ ಚಿವುಟುವರೆ ಕೊಡಲಿಯ । ತಳಿಸುವರೇ ಕೇಳೆಲವೊ
ಕಪಿನಿ । ನ್ನೊಡನೆ ಕಾದುವ ಡೇಕೆಕೈದುಗಳಸ್ತ್ರಹೀನನಲಿ ॥ ತಳವಿ ಘಾತಿಯೆ ಕೈ
ದು ನೇ ಖಳ । ಖಳಿಸಿ ನಕ್ಕನು ಹನುಮ ನಹುದೋ । ಖಳ ರೊಳಗ್ಗದ ವೀರನಹೆನೆಚ್ಚಿ
ದೆನು ನಿನಗೆಂದ ।೧೦। ಧುರದ ಖಾಡಾಖಾಡಿ ನಮ್ಮಿ । ಬ್ಬರಿಗೆ ಬೇರೊಂದು ಗುದ್ದಿನ ।
ಗುದು ಲಘುತ್ವದ ಘಾಯ ಮೂರರ ಗಣನೆ ಪರಿಯಂತ ॥ ಪುವಿಡಿ ಗಳಾಗಿರಲಿ
ಗೆಲವಿನ । ಪತಿಯ ಕಂಡರೆ ಸೋತವರು ಕಿಂ । ಕರರು ಕೈಕೋ ಮೊದಲು ನೀನೆಂದನಿಲ
ಸುತ ನುಡಿದ ॥೧೧॥ ತಿವಿ ಮೊದಲು ನೀನೆಲವೊ ಕಪಿ ಮರು । ದಿವಿ ಗಳೆನ್ನವು ನೋಡು
ನೀನೆನೆ । ತಿವಿದ ಘಾಯವು ಮರೆದೆಲಾ ವನಭಂಗದಲಿ ನಿನ್ನ ॥ ಕುವರರೇಳ್ನೂರರನು
ಕೊಂದುದು । ತಿವಿಗಳಲ್ಲವೆಯೆನಲು ಜಠರ ದೊ । ಳವತರಿಸಿದುದು ಕೋಪಶಿಖಿ ಬಳಿಕಾ
ದಶಾನನ ॥೧೨॥ ಅಸುರನಾ ನುಡಿಗೇಳಿ ಮಿಗೆ ಘ । ರ್ಜಿಸುತ ಕಣು ಗಿಡಿಗೆದರಿ ಕೈಗಳ ।
ದೆಸೆಯ ಲುದುರ್ದವು ಕಿಡಿಗಳುಬ್ಬುವ ಕಾರ್ಬೊಗೆಯ ನಣದು ॥ ವಸುಧೆಯುದುರಲ್ಕೆ
ತೀಡಿ ಬಲು ಡಾ । ಯಸಕೆ ಮುಷ್ಟಿಯ ನೆಗಹಿ ಸಿಡಿಲಿನ । ಬಸಿರು ಬಿಚ್ಚಲು ಬೊಬ್ಬಿ
ರಿದು ತಿವಿದನು ಸಮಿರಾರಜನ ॥೧೩॥ ಭರದ ಭಾರದ ಲೊಸೆದ ಸಿಡಿಲಿನ । ಚರಣಹತಿಗೆ
ಕುಲಾದ್ರಿ ಕಂಪಿಸಿ । ಧರೆಗೆ ದತದಿಪ್ಪಂತೆ ತರಹರಿಸುತ್ತ ಕಲಿಹನುಮ ॥ ತರಹರಿಸಿ
ಕೊಂಡಹುದೋ ತಿವಿಗುಳ । ಬರವು ಬಿಟ್ಟಿತು ನಮ್ಮ ಘಾಯದ । ಪರಿಯ ನೋಡೆನು
ತುದ್ದಿದನು ಕರದಳವ ನಿವನಿಯಲಿ ॥ ೧೪ ॥ ಒಲವು ದಿಳೆಯಲಿ ಪಾಯ್ದು ಪದಹತಿ ।
ಗೊಲವ ತಾವರೆಯಂತೆ ತೂಗಿತು । ಜಲಜ ಸಂಭೂತಾಂಡ ತುಳುಕಿತು ಕೂಡೆ ಜಲರಾಶಿ॥
ಒಲಿದು ಮುಷ್ಟಿಯ ನೆತ್ತಿನೆತ್ತಿಯ । ತೊಲಗಿಸಿದ ನಿನ ನಮರಗಣ ನೆಡ । ಬಲಕೆ ಚೆಲ್ಲಿತು
ಚಲಿಸಿದವು ಜಗವಮರ ಸಂತತಿಯ ॥೧೫॥ ಆತುಕೋ ಕಂಡ್ಯಾ ಮನೋ ನಿ । ರ್ಭೀತಿ
ರಣರಂಗವನು ವೀರರ । ಜಾತಿಯಲಿ ಜೀವಾಳವುಳ್ಳವ ನೆಂಬುದೀಲೋಕ ॥ ಕೋತಿ
ಕುಲದವರಾವು ಕದನದ । ರೀತಿ ನಮ್ಮದು ಸ್ವಲ್ಪ ನಿನ್ನೊಳ । ಗಾಂತು ನಿಲುವುದು ದೊಡ್ಡಿ
ತೆನುತೆರಗಿದನು ರಕ್ಕಸನ ॥ ೧೬ ॥ ಹಾರಿಬಿದ್ದನು ನೆಲಕೆ ರಕುತವ । ಕಾರಿ ಕಾರಿಮ
ನೆಲನ ಕಣೆ ವೆ । ಚ್ಚಾರಿದವು ಕರಣೇಂದ್ರಿಯದ ಕಳವಳದ ಝೋಂಪಿನಲಿ ॥ ಗೂರು
ಮಸಗಿತು ಶಸ್ತ್ರ ಸರ್ಪನ । ತೋರಿಕೆಯ ರುಚಿಯಂತೆ ಚಲಿಸಿದ । ವೇರಿಳೆಯ ಜೀವದಲಿ
ಕೈಲಾಸುರ ವಲ್ಲಭನ । ೧೭ ॥ ಭಾಪುರೇ ರಣವೀರ ವೀರರ । ಸಾಪಗಾಪತಿ ವಿಲಯ
ಶಂಕರ । ರೂಪ ನಪರಬ್ರಹ್ಮ ನಚ್ಯುತ ಪದಕಮಲ ಭೃಂಗ ॥ ಗೋಪ ಮುಖ್ಯ ಸಮಸ್ತ
ಸುರಮುಕು । ಟೋಪಲಾಲಿತ ಚರಣ ಕರಣ ವಿ । ಲಾಪ ವಿಜಿತೇಂದ್ರಿಯ ನಮೋಯೆಂ

ದಮರಮುನಿ ನುಡಿದ ||೧೮|| ಸುರರು ಘೇಯೆಂದುಬ್ಬಿ ಮುರಿದರೆ | ಯೆರಡು ಮೈಪ್ಪಾಲಿ
ಹಾಡಿದರು ತುಂ | ಬುರರು ನರ್ತಿಸಿ ನಲಿದರಾ ರಂಭಾದಿನಾರಿಯರು || ಥರಥರನೆ ನಡು
ಗಿದನು ಮಾರುತಿ | ತರಹರಿಸಿ ಕೋಪವನು ಕದಪಿನ | ಕರದಲಸುರನ ನೋಡುತಿರ್ದನು
ಬಿಗಿವ ಪೆರಗಿನಲಿ ||೧೯|| ಅರೆಘಳಿಗೆಗಸುರೇಂದ್ರನಸು ಚೇ | ತರಿಸಲೊಯ್ಯನೆ ರಾಘ
ವೇಂದ್ರನ | ಕರಹತಿಯ ಲುಪಹತಿಯುವಂಗದು ಮುನ್ನಿನಾವೇಶ || ತರುಣ ಕೇಳವರಿಂದ
ಪಗೆವನ | ಹರಣ ಸತ್ರಾಣಿಸಿತು ಮೆಲ್ಲನೆ | ಶಿರವನೆಗಹಿದ ನೀಕ್ಷಿಸಿದ ನೆವೆದೆರೆದು
ಪವನಜನ ||೨೦|| ಅಂಜಿದೆವು ನಾವ್ ನಿನಗೆ ಮರಣದ | ಮಂಜು ಮುಸುಕಿದುದೆಂದು
ಸಮರ ಸ | ಮಂಜಸದ ಸತ್ರಾಣಿಯಹೆ ಸಾಮಾನ್ಯನೇ ನೀನು || ಅಂಜದೇಳೆನುತುಬ್ಬು
ವಾತಿನ | ಲಂಜನಾಸುತನಾ ವಿವೇಕರ | ಭಂಜನನ ನೆಬ್ಬಿಸಿದನುಬ್ಬುವ ರೋಮ ಹರುಷ
ದಲಿ ||೨೧|| ಎದ್ದನವನಂದಬುಧಿಯೊಳಾ | ಗದ್ದಗಿರಿ ನೆಗೆವಂತೆ ಬಾಯೊಳ | ಗಿದಿರಣ
ಧೂಳಿಯನು ಥೂ ಯೆಂದುಗುಳು ತೆಡಬಲನ | ಇದ್ದೆಸೆಯ ನಾರೈದು ಹಲುಗಳ | ನುದ್ದಿ
ಹಾಯ್ಕುತ ಮಸ್ತಕವ ಮನ | ಗೆದ್ದು ಮಂಡಿಸಿಕೊಂಡು ಕುಟುಬಿರಿದಾರ್ದ ನಸು
ರೇಂದ್ರ ||೨೨|| ಸರಿಸವವರಿಲ್ಲೆಂದು ಪರಿಯಂ | ತರ ಪುರಾತನ ಸುಭಟರಲಿ ಸಂ | ಗರಕೆ
ರಣ ಸಾಹಸಿಗ ನೀನಹೆ ಗುಣಕೆ ಮತ್ಸರವೆ || ಕರಹತಿಯನಿದನೊಮ್ಮೆ ನೀತರ | ಹರಿಸಿ
ದರೆ ಭಟನಹೆ ಯೆನುತ | ಬ್ಬರಿಸಿ ಬಲುಗೈ ಹತ್ತ ಬಲಿದೆತ್ತಿದನು ದಶಕಂಠ ||೨೩||
ಕೆಡಿಸಿ ಮಾತಾಡಿದೆಯಲಾ ನಿ | ನ್ನೊಡನೆ ಕಾದಿದನೆಂದು ಸರಿಯಂ | ದೆಡಹಿ ವಾಚಿಸ
ಲಹುದೆ ಬದುಕಿದೆನೆಂಬ ಗರ್ವದಲಿ || ತುಡುಕಿ ನೀ ನಿನ್ನೊಮ್ಮೆ ಮೇಲು | ಖ್ಯಡಿಸ
ದೆಮ್ಮಯ ಹತಿಗೆ ನಿನ್ನನು | ಸಡಿಲದಿರೆ ಸನ್ಯಾಸ ನಿನ್ನೊಳು ಸಮರವೆನಗೆಂದ ||೨೪||
ಘಾಯವಿದರೊಳು ಬದುಕಿದರೆ ಸಮ | ರಾಯತದ ಸನ್ಯಾಸವೈಸಲೆ | ವಾಯುವಿನ
ವೈಹಾಳಿಗೆಡೆಗೊಡು ನಿನ್ನವದನವನು || ಕಾಯ ಕಳೆಯದಮುನ್ನ ಮುತ್ತಿನ | ದಾಯ
ಕರ ದಾರುಂಟು ನೆನೆಯೆನು | ತಾಯ ತಾಹವನುಲ್ಲ ತಿವಿದನು ವಜ್ರವಿಗ್ರಹನ ||೨೫||
ಕುಕ್ಕರಿಸಿದುದು ಗೋಣು ಪ್ರಾಣ ದೊ | ಳೊಕ್ಕ ವರುಣಜಲೌಘ ಜಡಿದುದು | ಬಿಕ್ಕು
ಕಂಠದಲರಿವು ಮರವೆಯ ಜೀವ ಚಂಚಲದ || ಸೊಕ್ಕು ಬಂದುದು ಶ್ರಮದ ಸೋಂಕಿಗೆ |
ಪಕ್ಕಜವು ಬಲುಹಾಯ್ತು ಮಿಗೆ ಮಡ | ದಿಕ್ಕಿಕೊಂಡುದು ಮೂರ್ಛೆ ಮರವೆಗೆ ಸಂದನಾ
ಹನುಮ ||೨೬|| ಕೇಳಿದೈ ಕುಶ ಕುಲಿಶಕಾಯುದ | ಮೇಲೆ ಬಿದ್ದ ದಶಾನನ ಕರ | ಜಾಲ
ಕಂಪಿಸುತಿರ್ದವಳುಕಿನ ಬಳುಕುವೆರಳಿನಲಿ || ಸೀಳುವುದು ಕರಘಾತದಲಿ ಕುಲ | ಶೈಲ
ಪಡಿಲೊಡೆವುದು ಮಹಾ ದೇ | ವಾಳುತನ ವಿವಗೆಂತುಟೋ ಯೆಂದಸುರ ಬೆರಗಾದ ||೨೭
ಗುದ್ದುಬಿರುಸಿವನುಳಿವುದರಿ ದೆಮ | ಗಿದ್ದ ಹದನಿದು ಬೇಗ ಮಾಡೆನು | ತದ್ದರಿಸೆ ಚಾಚಿ
ದನು ರಥವನು ಸೂತನಸುರಂಗೆ || ಬಿದ್ದ ಭಟನಿವ ಸಂತವಿಸಿ ಕೊಂ | ಡೆದ್ದನಾದಡೆ
ಸೂತ ಕೇಳೆನು | ತಿದ್ದಿ ತಮ್ಮಯ ದೆಸೆ ವರೂಥವ ಹೊಡು ಬೇಗೆಂದ ||೨೮|| ಸರಿವುದೇ
ಪಾಡೆನುತ ಸೂಸಿದ | ಶರ ಶರಾಸನ ಶಸ್ತ್ರವನು ಸಂ | ವರಿಸಿಕೊಳುತಡರಿದನು ತನ್ನಯ
ತೇರ ತವಕದಲಿ || ತೊರವೆಯಧಿಪತಿ ರಾಯ ನರ ಕೇ | ಸರಿಯ ಭೃತ್ಯನ ನಸುರಪತಿ
ತಿರು | ತಿರುಗಿ ನೋಡುತ ಸೂರಿಯಲಿ ಪಡಗರಿಸಿದನು ರಥವ || ||೨೯||

ಇಪ್ಪತ್ಮೂರನೆಯ ಸಂಧಿ ಸಮಾಪ್ತಂ.

ಇಪ್ಪತ್ತ್ನಾಲ್ಕನೆಯ ಸಂಧಿ.

ಸೂಚನೆ॥ ವೀರ ರಕ್ಕಸರಾಯ ರಿಪುಜ । ರ್ಝರ ನಾಹವ ಧೀರ ರಘು ಕುಲ । ವೀರ ಲಕ್ಷ್ಮಣನೊಡನೆ ಹಳಚಿತು ಗೆಲಿದ ನಸುರೇಂದ್ರ ॥

ಪದ್ಯ॥ ಕೇಳಿದೈ ಕುಶ ನಿಮ್ಮ ರಘು ಭೂ।ಪಾಲಕ ಮನ ದಚ್ಚು ಮೆಚ್ಚಿನ । ಪಾಲ ನೆಮ ನಿಜಭೃತ್ಯನನು ವಂಚಿಸಿ ದಶಗ್ರೀವ ॥ ಕೋಲ ಕೋಲಾಹಳಿಕೆಯಲಿ ಕಪಿ। ನಾಳ ಕೆಡಹುತ ಕದನ ಮುಖ ದು । ಚ್ಛಾಳಿನಲಿ ರಘು ಸಾರ್ವಭೌಮನ ನರಸು ತೈತಂದ ॥೧॥ ಎತ್ತ ಲೀವೋ ಹರಿತ ಹಗೆಗಳು । ಮತ್ತೆ ನಮ್ಮೀ ಬಲದ ಬಾಹು ಬ। ಲೋತ್ತಮರ ಲಾರುಂಟು ಹೇಳವ ರೆಮ್ಮ ಭೃತ್ಯರಲಿ ॥ ತತ್ತ ಕಡ ಹಗೆ ಕಾರ ರಿಲ್ಲೀ । ಹೊತ್ತಿ ಗೆಮ್ಮಯ ರಣವ ಜಯಿಸಿದು । ಮತ್ತೆ ಮುಂದಕೆ ಗಮಿಸೆನುತ ಸೌಮಿತ್ರಿ ಮಾರಾಂತ ॥೨॥ ಹೋಗದಿರು ನಿಲ್ಲೆಲವೋ ನಾವ್ ಶತ । ಯಾಗ ನೂರವರಲ್ಲ ನೀವ್ ನಿ । ಮ್ಮಾಗವ ದ ಬಗೆ ಬೇರೆ ಭಂಟತನಕೆ ಬೆರೆಯದಿರು ॥ ಕೈಗಣಿಯ ಕಳುಕುತ್ತ ಕದ ನದ । ಮೇಲೆ ನೀ ತಾ ನೆಲ್ಲಿಗಾದರು । ಹೋಗೆನುತ ನಿಜಧನುವ ದನಿ ದೋರಿಸುತ ಬೊಬ್ಬಿರಿದ ।೩॥ ಬಿರಿದು ಡಿಳೆ ಬಿರುದನಿಕೆ ರಿಪು ತನು । ಬಿರಿಯದಿಹುದೇ ಸೂತ ನಸು ಜ । ರ್ಝರಿತ ವಾದುದು ಝಡಿತೆಯಲಿ ಜವ ಗೆಟ್ಟ ನಶ್ವಚಯ ॥ ಭರದ ಭೀತಿಯ ಲಸುರ ಪತಿ ಮೈ । ಮರೆದು ಮೌನ ಧ್ಯಾನದಲಿ ನಿಜ । ಶಿರವ ನೊಲೆದೊಲೆ ದಹುದೋ ವೀರರ ದೇವ ನೀನೆಂದ ॥೪॥ ಸುರರ ರಣ ಕಿಮ್ಮಡಿ ಮಹಾ ವಾ । ನರರ ರಣ ಮಿಗಿ ಲಾಯ್ತು ವೈ ವಾ । ನರರ ರಣ ಕಿಂದೀ ನರೇಂದ್ರನ ಕಲಹ ಬಲುಹಾಯ್ತು ॥ ಅರರೆ ಚಂದ್ರಾರ್ಕ್ಯತಿಯ ನಂಗೀ । ಕರಿಸಿ ಕೊಂಡಿದೆ ರಿಪು ನೃಪಾಲನ । ಧುರ ವಿಭೀಷಣ ನುಡಿದ ನುಡಿ ಸಡಗರಿಸುತಿದೆಯೆಂದ ॥೫॥ ಬಿಲ್ಲ ತುದಿ ಯಿಂದುರಿಯ ಚಂಡಿಯ । ಚಲ್ಲಿ ಸಿದ ಯುಗದಂತಕದ ಕಡು । ತಲ್ಲಣದ ತೇಜಿಗಳ ಜೋಳ್ಳೈಸಿದನು ಹಸ್ತದಲಿ ॥ ಬಲ್ಲಿ ದನು ನೀ ನಹುದಲೇ ನರ । ರಲ್ಲ ನಮ್ಮಯ ಹಗೆಗೆ ನೀ ತಾ । ನೊಲ್ಲ ದಳಿಯನೋ ಮಗನೋ ಹುಸಿಯದೆ ಹೇಳು ತನಗೆಂದ॥೬॥ ಅಳಿಯ ಮಗನೆಂಬೀ ವಿಚಾರದ । ಬಳಕೆ ನಿನಗೇಕೆಲವೋ ನೆಲತರ । ರಳಿವೆವಾವು ಮರೆ ಹೊಕ್ಕವರ ಮಗನೆಂದು ಮನ್ನಿಪೆವು ॥ ಅಳವವನೊ ನೀ ನಿನ್ನ ತಮ್ಮನ । ಬಳಿಯ ಜೀವಿಸುವವನೋ ಹೇಳೈ । ಬಳಿಕೆ ಯಿಲ್ಲದೆ ಸಾವು ಬದುಕುವ ಬಗೆಯ ನೀನೆಂದ॥೭॥ ಅರಿ ವಧುವ ನೆಳೆತಂದು ರಿಪುವಿನ । ಶರಹತಿಗೆ ಗುರಿಯಾಗಿ ಮತ್ತದ । ಪರಿಹರಿಸಿ ಜೀವಿಸುವ ಭಟನೇ ಬಣಗ ಹೋಗೆಂದ ॥ ಸರಳ ಸಾರದ ಲರಿ ನೃಪಾಲಾ । ವರಜನನು ಮುಸುಕಿದನು ಮೋದದ । ತರಣಿ ಯಂತಿರೆ ತೋರಿದನು ಸೌಮಿತ್ರಿ ಸುರ ಕುಲಕೆ ।೮॥ ಧುರದೊಳಾ ಲಕ್ಷ್ಮಣನು ಈಕ್ಷಿಸಿ । ಸರಳ ತೊಟ್ಟರೆ ನಿಲುವ ನಾವನು । ಸುರ ನರೋರಗ ರಾಕ್ಷಸ ರೊಳೀನೆಂಬೆ ನದ್ಭುತವ ॥ ಅರಿ ಶರೌಘವ ಕಾಣೆ ಕಾಣೆನು । ಸುರರ ಸರಣಿಯ ಚಾಪ ಶಿಕ್ಷೆ । ಗುರುಗಳಲ್ಲಾ ರಾಮ ಲಕ್ಷ್ಮಣರೆಂದು ಮುನಿ ನುಡಿದ ॥೯॥ ಸರಳ ಮಯ ದಿಗುವಳಿಯ ಚೀತ್ಕೃತಿ । ಸರಳ ಮಯ ವಂಬರ ಧರಾತಲ । ತೊರಳಿ ಮಯ ಕೊಸ ತಪ್ಪನಳ ತಾಗುಗಳ ತನಿ ಗಿಡಿಪ್ಪ ಲರರೆ ನರಕೇಸರಿ ಹಿರಣ್ಯಕ । ಮುರುತಪದ ವಿಕ್ರಮಕೆ ಶತ ಸಾ । ವಿರದ ಮಡಿಯೆನೆ

ಮೆರೆದುದಾಚೆ ನರೇಂದ್ರ ರಾಕ್ಷಸರ ॥ ೧೦ ॥ ಎಸೆವ ಘಟ ರಿಬ್ಬರ ಶರಾಳಿಯು । ಬೆಸುಗೆ
ಯಲಿ ಬಲು ತಿಮಿರ ಲತೆ ಲಂ । ಬಿಸಿದುದವನೀತಳವ ನಾಲಯದಂಡ ತಮದಂತೆ ॥
ಮಸೆ ಗಳಿಬ್ಬರ ವೆ್ಗಗಳಲಿ ಸಂ । ಧಿಸಿದು ದನು ನಾ ಕಾಣೆ ಕವಿತೆಯ । ವಿಶಿಖ ವಿದ್ಯೆಯ
ಗರುಡ ಯೊಬ್ಬನೊಳಲ್ಲ ದಿಲ್ಲೆಂದ ॥೧೧॥ ಸುರರು ಮೆಚ್ಚಿದ ರೀತ ನೆಸುಗೆಯ । ಕರ
ಚಮತ್ಕೃತಿ ಗೂಡನೆ ರಜನೀ । ಚರರು ಹಾರೈಸಿದರು ಸರಳೋಟಕೆ ದಶಾನನನ ॥
ಶರ ನಿಧಿಯು ಧರೆ ಮಾಲೆಗಳ ಮೋ । ಹರದ ವೊಲು ಬಳಿಕಿಬ್ಬ ರೆಸುಗೆಯ । ಸರಳ
ಸಂಗರ ನಡೆದು ದೊಂದರೆ ಝಾವ ಪರಿಯಂತ ।೧೨॥ ಕೋಪ ಕೊನರಿ ದವಿಬ್ಬರಿಗೆ
ಶಿಖಿ । ರೂಪೆ ರಾದರು ಬಳಿಕ ವಿಮಲ ವಿ । ರೂಪ ನಯನನ ಫಾಲ ಲೋಚನ ನಗ್ನಿ
ಕಣವಂತೆ ॥ ತಾಪಿಸಿದವು ಜಗತ್ರಯವ ಸುರ । ತಾಪದಲಿ ತಳ್ಳಂಕಿಸಿತು ಪೌಲೋ
ಪುರಂದರ ಧನದ ಯಮ ವರುಣಾದಿ ಸುರ ನಿಕರ ॥೧೩॥ ಏಕೆ ನಾ ವಂದಿನದುಪದ್ರಕೆ ।
ನಾಕಜರ ನೆರಹಿದು ಪಯೋನಿಧಿ । ಏಕೆ ನಡೆತಂದಸುರ ಧೂಳೀವಟಗೆ ದೂರಿದೆವೊ ॥
ಸೋಕುತಿದೆ ಶರ ದಗ್ನಿ ತಾಪ ಸ । ಮೀಕ ವಿವರಲಿ ಮನವು ಮರಣವ । ಕೈಕೊಳಿಸು
ತಿದೆ ಕೆಟ್ಟೆ ವೆಂದಜ ಸುರಪ ರೊರಳಿದರು ॥೧೪॥ ಸುರರ ಕಟ್ಬೊರಲಿಕೆಯ ನದ ಕೇ ।
ಳ್ದರಿ ಭಯಂಕರ ಲಕ್ಷ್ಮಣನು ಲಘು । ಕರದ ಶರಸಂಧಾನದಲಿ ಲಂಕಾಪುರಾಧಿಪನ ॥
ಕರದ ಕಾರ್ಮುಕ ಹಸ್ತ ಶತ ಸಾ । ವಿರದ ಕಡೆಯಲಿ ಕಡಿದು ವಕ್ಷದ । ಹೊರೆಯ
ಹೊಮ್ಮಿನ ವರ್ಮ ದಂತವ ನೆಚ್ಚು ಚೊಬ್ಬರಿಂದ ॥೧೫॥ ಕುಶಿಕ ಸುತ ನಾ ಲಕ್ಷ್ಮಣಗೆ
ಕರುಣಿಸಿದ ಪೂರ್ವದ ಮೇಘ ಭಾಸುರ । ವಿಶಿಖವದು ಕೀಲಿಸಿತು ಕೀಬಾಲಪ ನುರಸ್ಥ
ಳವ ॥ ಪಿಷವ ಕೊಂಡವನಂತೆ ತನು ಕಂ । ಪಿಸಿತು ಕಳವಳಿಕೆಯಲಿ ಕಂಗಳ । ರಸವೆ
ಮಡಗಿದ ವಂಗ ಭಾರಿಸಿ ನೆಮ್ಮಿದನು ಮಲಗ ॥ ೧೬॥ ಹೆದರಿ ಸಾರಥಿ ಸಮರ ಮುಖ
ಕಾ । ಳಿದನ ಲೆಸುಗೆಯ ಕಾಣದಕಟಾ । ಕದನ ಕುಂಟಿಸಿ ತೇನುಗತಿ ತಂ ನಸುವಿ ಗೆಂದೆ
ನುತ ॥ ಬೆದರಿ ಮೊರೆಯ ದೆಬ್ಬಳವಿ ಗದ । ಬದಿಸುತಿದೆ ತಪ್ಪಾಯಿ ತೆಂದಾ । ಕದನ
ಗಲಿ ಸಂಧಿಸಿದ ಸೌಮಿತ್ರೀ ಸುರಾಂತಕನ ।೧೭॥ ಹೂಡಿದಾ ಬಳಿಯೆಂಬ ಮೆಲ್ಲನೆ ।
ಮೂಡಿಗೆ ಯೊಳಿಂಬಹಿದನು ಮನದಲಿ । ನೋಡಿದನು ಕಾಕುಸ್ಥ ನಂಕಿತ ಶಾಸನ
ಸ್ಥಿತಿಯ ॥ ನೋಡಿದನು ಬಳಿಕೇರಿಳಿಯ ಲುಸು । ರಾಡಿಕೆಯ ಜಡತನವ ಬಳಿಯ ।
ಸ । ಘಾಡವನು ಕಂಡೀತ ಕೃಪೆಯಲಿ ಸೂತ ಗಿಂತೆಂದ ॥೧೮॥ ಬಾರೆಲವೋ ಸಾರಥಿ
ಸಮೀಪವೋ । ದೂರವೋ ನಿನ್ನವಗೆ ಸಾವು ವಿ । ಕಾರ ದೇಹದೊಳಿಲ್ಲಲೇ ನೋಡು
ಸುರ ನಾರ್ಯದು ॥ ನೀರ ನೆರೆ ಯೌಷಧಿಗಳುಳ್ಳಡೆ । ಸಾರಿ ಸೇಚನವೇಲೆ ಮಾರ್ಗದ ।
ದಾರಿಗರು ನಾವಲ್ಲ ಬೇಗುಪಚರಿಸು ನೀನೆಂದ ॥೧೯॥ ಎದ್ದು ಬಳಿಕವ ನಸುರ ನಕ್ಷಿಗೆ ।
ತಿದ್ದಿದನು ಹೊಂಗಳಶ ವಾರಿಯ । ಸುದ್ದಿನು ಘಾಯದಲಿ ಶುಕ್ರಾಚಾರ್ಯ ನೌಷಧಿಯ ॥
ದೊದ್ದೆ ವಾಯನೋ ಖಳನೋ ಹೊಯ್ದಡೆ । ಬಿದ್ದನೆಂದೆಂಬವರ ಕಥೆ ನಿನ । ಗಿದ್ದ
ಹೇಳೆಂದೆಬ್ಬಿಸಿದ ನುಬ್ಬಿರಿಮ ದಶಮುಖನ॥೨೦॥ ಏಳುತವ ಪರಮೇಶ ದತ್ತ ಕ । ರಾಳ
ಶಕ್ತಿಯ ನೆಗಹಿ ತಿಟ್ಟನು । ಕೇಳದೈ ಕುಶ ಕೊಂಡು ಬಿಟ್ಟುದು ರಾಘವಾನುಜನ ॥
ಮೇಲು ಗಗನವ ಮುಸುಕಿದುದು ಧೂ । ಮಾಳಿ ಪಕ್ಷವ ನುಗಿದು ಮೊನೆ ಪಾ । ತಾಳ
ದಲಿ ಲಂಬಿಸಿತು ಚುಂಬಿಸಿ ತುರಿ ರಸಾ ತಳವ ।೨೧॥ ಬಿದ ನೋ ಹಗೆ ಯೆನುತ

ಬೆನ್ನಾ | ಗಿರ್ದ ಬಲ ಖೋ ಯೆಂದು ದಮರರು | ತಿದ್ದಿ ತಿನ್ನೇನೆಂದು ನೋಂವರು ಮನದ ಮರುಕದಲಿ || ಉದ್ದುರುಟು ಖಳ ನಿಳಿನು ರಥವನು | ಹೊದ್ದಿದನು ಲಕ್ಷ್ಮಣನ ಸೀತೆಯು | ಕದ್ದು ಕೊಡೊಯ್ವಂತೆ ಕೊಂಡೊಯ್ಯಲು ಮನತಂದ |೨೩|| ಒಯ್ದದನ ನಿವ ನಗ್ರಜನ ಕೊಂ | ಡೊಯ್ದು ತೋರುವೆ ನೆನ್ನ ನೊಲ್ಲದ | ವೇದಿಸೀ ನಂದನಗೆ ತುತ್ತಾದಸಿತರಲಿ ಮನವ || ನೆಯ್ದು ಕೊಂಡಹ ಪತಿಯು ದೆಸೆಯನು | ವಾದ ವೆಮ್ಮ ಮನೋಂಥದ ರಸ | ವಾದ ಸಿದ್ಧಿ ಪುದೆಂದು ಹಿಡಿದೌಂಕಿದನು ಲಕ್ಷ್ಮಣನ ||೨೩|| ಔಂಕ ಲೌಕಿದವಳ್ಳೆ ಥಳ್ಳಿಸಿ | ನೂಕಿ ತುರಿ ಸಿಟ್ಟುಸುರಿನಲಿ ಬಿಡ | ದೋಕರಿಸಿ ದುದು ವದನ ಹಾಲಾಹಲ ವಹಾವಿಷನ || ತೀಕರೆಯ ತಳ್ಳಂಕಲಿ ಬಹು ಲೋಕ ಗರ್ಭಾಧಾರಕನ ಜಗ | ದೇಕ ವೀರನ ನೆಗಹಿ ನೆಗಹದೆ ನಿಂದನಸುರೇಂದ್ರ ||೨೪|| ಹಿರಿದು ಬೆರಗಿಟ್ಟಿ ಸುರಪತಿ ನಿಜ | ಶಿರವ ತೂಗುತ ಲಾಗ ಲದಕೇ | ನರಿ ದಿವನ ಮುಸ್ತಕವ ಸೊಯ್ವೆ ನೆನುತ ಖಂಡೆಯವ || ಕೊರಳಿಗಾನಿಸು ವನಿತ ಟೋಳೆ | ಜ್ವರದ ಟೋಗಿಯು ಮುಂದೆ ಸೆಯು ನಿಂ | ದಿರುವ ಮೃತ್ಯುವಿನಂತೆ ನಿಂದಿದ ನೊದರಿ ಕಲಿ ಹನುಮ||೨೫|| ಏನೆಲವೋ ದಶಕಂಠ ಕೃತ ಸಮು | ರಾನು ಭಾಷಿತವೆಲ್ಲಿ ರಣದ | ಪ್ರಾಣಾಸ್ತ್ರಾಭ್ಯಾಸ ವಾರಿಂದರಿಕೆ ನಿನಗಾಯ್ತು || ಈನಿಶಿತ ನಿಸ್ತ್ರಿಂಶಕವು ತಾ | ನೀನದಾರಿಗೆ ಹೋಗಲವ ಕೊಂ | ದೇನು ನಮ್ಮಯ ಕೊಡುವ ಸಾಲವ ಕೊಟ್ಟು ಕಳೆಯೆಂದ ||೨೬|| ನೆತ್ತಿ ಗೇರಿತು ಜೀವ ವನಿಲಜ | ನುತ್ತರಕೆ ಕೈಗುಂಧಿ ಖಂಡೆಯ | ಕಿತ್ತು ಬಿದ್ದುದು ಬೆದರಿ ಕೈಕಾಲುಗಳು ಕಂಪದಲಿ || ವೃತ್ಯು ಮಗುಳ್ಳೈತಂದು ದಡಗಲು | ಹತ್ತ ತಾಯೊಡ ಲಲ್ಪವಿದ ಕಿಂ | ನುತ್ತರವ ದೇನೆನುತ ತಳವೇಗಾದ ನಸುರೇಂದ್ರ ||೨೭|| ಕೊಡದೆ ಘಾಯುವ ನಮ್ಮ ರಣದ | ಕೆಡಹಿ ವಂಚಿಸಿ ಬಾಹು ದುಚಿತವೇ ಪೊಡವಿ ನಗದೇ ನಿನ್ನ ನೆಲವೋ ನಿನ್ನ ಚಿತ್ತವನು || ಪಡೆಯುಡಿರೆ ತಾ ಹನುಮ ನಲ್ಲಿಂ | ದೊಡೆಯು ಲದ ರವಸಿಗಿದು ಮುಷ್ಟಿಯ | ಝಡಿದು ಜಗದು ದ್ದಂಡಬಲ ನಿಂತೆಂದ ನಸುರಂಗೆ ||೨೮|| ಕರೆದುಕೋ ಬ್ರಹ್ಮನನು ಭೃಗುಜನ | ಜರಿಸು ಮೃತ ಸಂಜೀವಸಿಯನೀ | ಧರಿಸು ಸಾಯ ದುಪಾಯವೇನುಂಟನಿತನನು ಕೊಳಿಸು || ನಿರುತ ವಿದು ಕೇಳೆಲವೋ ನಾ ವನು | ಸರಿಸುವವರಲ್ಲದಕೊ ರಘು ಭೂ | ವರನ ಮೆಚ್ಚಿನ ಘಾಯವೆನುತೆರಗಿದನು ರಾವಣನ ||೨೯|| ದೆಸೆ ದೆಸೆಗೆ ಚಲ್ಲಿದವು ಕರುಳನ | ಕುಸುರಿ ಕೊಡಹಿದ ಚೀಲದ ವೊಲಿಲು | ಬಸಿದು ಬಿದ್ದವು ಬೆರಸಿ ಚಿಮ್ಮಿತು ರುಧಿರ ನಿರ್ಝರ || ಮುಸ ದೆಡೆಗೆ ಮದವೇರಿ ದಿಭಪತಿ | ಕುಸುರಿ ವೆಳೆಗುಂಬಳದ ವೊಲು ರ | ಕ್ಕಸನ ನಿಜದಾಕಾರವಮಯ ವಾಯಿತ್ತು ನಿಮಿಷದಲಿ || ೩೦ || ಅಡಗಿತೀತನ ಕೋಪ ವಸು ಸಡಿ | ದೊಡಲಿ ನಸುರನ ಕಾಣಾ ತೆದೆಯಲಿ | ಮಿಡುಕಿ ನಂಶಾಂಶ ಪ್ರಮಿತ ಮಸುವರಿಕೆ ಗೆಡದಂತೆ || ಮೃಡ ಸರೋಜಜ ರಿತ್ತವರ ದು | ಗ್ಗಡದ ಬಲುಹಿಂದಿದ್ದು ದವ ಮು | ಗ್ಗಡ ಕರಾಳಾಪ ಲೇಪಿಸಿ ತನಿಲ ನಂದನಗೆ ||೩೧|| ಆಟ ಸ್ವಾಮಿದ್ರೋಹಿಕೆಯ ಪಾ | ತಕಕೆ ತಾ ಗುರಿಯಾದೆನೇ ನರ | ಕಕ್ಕೆ ನಾಯಕನಾದೆನೇ ಶಿವ ಶಿವ ಮಹಾದೇವ || ಪ್ರಕಟಿಸಿದೆನೇ ಮೂರ್ಖತೆಯ ನ | ವ್ಯಾಕುಲಿತ ರಾಮು ಸುಭಾಷಿತದ ಸು | ಪ್ರಕಟ ಸೂರ್ಯಾತಪಕೆ ತಾರಮನಾದೆನೇ ಯೆಂದ || ೩೨ || ರಾಮು ರಘುರಾಜೇಂದ್ರಮನದಲಿ | ನೋಯುವಿರಹಿಂ ನಕಟಕಟ ರಾ |

ನಾರಾಯಣದ ಹೆಸರಂತರಿಸಿತೆಂ ದಧಿಕ ಚಿಂತೆಯಲಿ ॥ ನ್ಯಾಯವಲ್ಲೆಂದಮರ ಮನುಜ ನಿ । ಕಾಯ ಬೈಯ್ಯುದೆ ಮಾಣದೆನ್ನನು । ಪಾಯವಿದ ಕೇನೆನುತ ಮರಗಿದನಾಗವನ ದೊಳಗೆ ॥ ೩೩ ॥ ಐಸೆ ಮತ್ತೀನೆಮ್ಮ ದುಷ್ಕೃತ । ದೋಷವಿದೆಲಾ ವೀರಲಾರಳ । ವೇಷು ಮರುಗಿದಡೆ ನು ನೋಡುವೆ ನೆಮ್ಮಗೀ ಖಳನ ॥ ವಾಸಿಯುಂತರ್ಗತ ಕಳ ಪ್ರಾ । ಣಾಸುಗತ ಸತ್ಪ್ರಾಣಗತ ಪರ । ಮಾಶುಗನು ಹಿಂಗಿದಡೆ ಹೊಗುವೆನು ಹವ್ಯವಾಹನನ॥ ಎಂದು ಮನದಲಿ ನಿರ್ಧರಿಸಿ ಸಂ । ಕ್ರಂದಮನು ಸುರವೈರಿಗೆಡೆ ಗೈ । ತಂದು ನೋಡಿದ ನಸುರ ನೆದೆಯಲಿ ಮಿಡುಕನಾರೈದು ॥ ಸಂಧಿಸಿದ ನಳಿದವಯವಂಗಳ । ನಂದಮಿಗೆ ಪುರುಷಾಕೃತಿಯನ । ಲ್ಲೀದ ಮೇಲೊದೆದನು ಕಣಾ ಮತದಲಿ ಮಹೀತಲವ ॥ ೩೫ ॥ ಧರಣಿಜಾಸುತ ಕೇಳು ಹನುಮನ । ಚರಣಹತಿಗಿಳೆ ಬಿರಿಯಲುದಿಸಿತು । ಸುರ ತರಂಗಿಣಿ ಯೆನಿಪ ನದಿಮಿಗೆ ತನ್ಮಹಾನದಿಯು ॥ ಪರಮ ಪಾವನಜಲವ ನೊಗದೆ ವೊ । ಉರದ ನವ ನಕ್ಷಿಗಳಲಾ ದಶ । ಶಿರನ ವದನದಲ ಗಿಸಿ ಸೈಮುಗಿದೆಂದನೈಯ್ಯಂಗೆ ॥೩೬॥ ತರಳ ತನದಲಿ ತಾನು ಮಾಡಿದ । ಮರುಳತೆಯದುಂಟಿಕ್ಕಿ ನಿಮ್ಮಯ । ಹಿರಿಯತನವನು ಮೆರೆವುದೀ ರಾಕ್ಷಸಕುಲಾಧಮನ ॥ ಅರಿಯದಸುವಿಗೆ ಮೃತ್ಯುವಾದೆನು । ಮರೆಯ ಮಾತೇಕೆನ್ನ ನಾಲ್ವನ । ಚರಣ ಸೇವೆಯ ಚಲಿಸುವಂತುದ್ಧರಿಸಬೇಕೆಂದ ॥ ೩೭ ॥ ಮಗನ ಮಾತಿಗೆ ಮರವೆಯಸುರನ । ನೆಗಹಿದನು ಮಾರುತನು ಮೆಲ್ಲನೆ । ಮುಗಿದೆವೆಯ ಕಣ್ಣರಳಿದವು ಸಪ್ರಾಣ ಶಕ್ತಿಯಲಿ ॥ ಜಗದ ಜೀವ ಕುಮಾರನೈಯ್ಯನ । ಹೊಗಳಿ ತಲೆಯನು ತೂಗಿ ನಾಟಕ । ನಗೆಯ ನವ ಹರುಷಕದ ವಾರಿಯೊಳಸುರಗಿಂತೆಂದ ॥೩೮॥ ಏನೆಲವೊ ಖಳ ರಥನ ನವಯವ । ದೇರಿನಲಿ ತೊಡೆಯೌಷಧಿಯನು । ಬೈರು ಕದನಕೆ ಕರಣದಲಿ ನೀ ನಂಜಬೇಡಿನ್ನು ॥ ಬೇರೆ ಮಾತಿಲ್ಲೆಮಗೆ ತಾವ್ ಕೈ । ವಿರುವವರಲ್ಲಿನ್ನು ಮನದಳ । ಲಾರಿ ತೆಮಗಾಹವಕೆ ರಾಮನೊಳೊದಗು ಹೋಗೆಂದ ॥೩೯॥ ಹೋಗು ಕಾಡೆನು ನಿನ್ನೊಡಲ ಖಳನಾಗ ಕುಲ ಹರಿಯಕ್ಷ ನಾಣೆ ವಿ । ರಾಗಿಗಳು ನಾವ್ ರಣಕೆ ತಪ್ಪೆವು ನುಡಿದ ಭಾಷಣವ । ಹೋಗು ಹೋಗದಿರೇಳು ಕೊಲ್ಲೆನು । ಹೋಗುತಿರಲಸುರ ರಿಪುವನು । ತಾಗು ತೋಟಿಯ ಫಲವ ತುದಿಯಲಿ ಕಾಣು ನೀನೆಂದ ॥ ೪೦ ॥ ಎಂದು ಮಾರುತಿ ನುಡಿದ ಮಾತುಗ । ಳಂದದಲಿ ಹೂಡಿದನು ಮೇಲೆ ಪು । ರಂದರಾದ್ಯರು ಬೈದರೀ ಪವಮಾನ ನಂದನನ ॥ ಕೊಂದು ಹಗೆಯನು ಮರಳಿ ಜೀವವ । ತಂದು ಕೆಡಿಸಿದ ನಕಟ ಖಳನಿವ । ನೇದಿಗಳಿವ ನೆನತ್ತ ತಳವೆಳಗಾಯ್ತು ಸುರ ಕಟಕ ॥ ೪೧ ॥ ಕಳುಹಿದನು ರಕ್ಕಸನ ಬಳಿ । ಕೂರ್ಮಿಳೆಯ ಗಂಡನ ಬಳಿಗೆ ಬಂದನು । ಬಳಲಿದಂಗದ ಘಟನ ನೀಕ್ಷಿಸಿ ನಯನ ವಾರಿಗಳ ॥ ತುಳುಕುಗಳ ತುದಿ ಮೂಗಿನಕ್ಕೆಯ । ಬಳಿಯ ಭಾರಿಯ ದುಗುಡದಿಂ ದೊಲ । ದೊಲದು ನಟ್ಟಾಲಿಗಳ ಜೆರಗಿನೊಳಿದ್ದ ನಾ ಹನುಮ ॥ ಸಾರಿತೇ ಅಕಟಕಟ ರಾಜಕು । ಮಾರರಿಂಗಾಪತ್ತು ರಾಜ್ಯ । ಶ್ರೀರಮಣಿ ಹಗೆಯಾಪಳೇ ಹರಹರ ಮಹಾದೇವ ॥ ಘೋರ ಗಗನ ಪರಿಭ್ರಮಣ ವಿ । ಸ್ತಾರವಾದನಿತಲ್ಲ ಪಹಿತರ । ಕೂರಲಗಿ ಗೊಡಲಾದಿರೇ ಹಾಯೆಂದನಾ ಹನುಮ ॥೪೩॥ ಮರುಗಿ ಮಾಡುವದೇನು ಮುಂದಣ । ಹರುಷ ಕಾಬ ದೆ ಪೌರುಷಾಂಗದ । ಹೊರಿಗೆಯೆಂದನು ಮಾನಿಸಿದ ನಿಜ ಪರ ಕೃತಾಂತಕರ ॥ ಉರುವ ಜೀವವ ನುಗಿದು ತಂದೀ । ತೊರೆದ ಜೀವನ

ಲಕ್ಷ್ಮಣನ ಕಂ | ಣ್ದೆರೆಸುವೆನು ಕಥೆಯೇಕೆನುತ ಬೊಬ್ಬಿರಿದನಾ ಹನುಮ || ೪೪ || ಕಮಲ ಸಂಭವ ನಂಜಿ ಗಿರಿಜಾ | ರಮಣ ನಡುಗಿದ ನಂತಕನ ತನು | ಬೆಮರಿದುದು ಕಲಿ ಪವನಸುತ ಕೈಕೊಂಡ ಕೆಲಸದಲಿ || ಸಮತೆಯನು ಕೈಕೊಂಡಡಾಗ್ರಹ | ವಮರ್ಷಣವ ಬಿಡು ಹನುಮ ಲಯ ಸಂ | ಭ್ರಮಗ ಬಲ್ಲುದೆ ಲಕ್ಷ್ಮಣಂಗೆಂದುದು ನಭೋನಿನದ || ೪೫ || ಶ್ವಸನಸುತನಾ ನುಡಿಯ ನನುವ | ತಿಸಿದನಾ ಲಕ್ಷ್ಮಣನ ನಾಡಿಗ | ಳಸವಿನಾರೈಕೆಯಲಿ ಕಂಡನು ಜೀವ ಮಾರುತನ || ಶಿಶುವನಾ ತೊಲು ಸೋಗಲಿಗೆ ಸೇರಿಸುವವೊಲು ತಕ್ಕೈಸಿ ತಂದನು | ವಸುಮತೀಶನ ಬಳಿಗೆ ಬಳಿಕಾ ವೀರ ಹನುಮಂತ || ತೋರಿಸಿದ ನಾಚಿಯಲಿ ತೇರಿನ | ಜೇರಿಕೆಯ ಚೀತ್ಕೃತಿಯ ಲಸುರನ | ತೋರಿಸಿ ನನೀಚಿಯಲಿ ತಾ ತಂದೂರ್ವಿಳಾಪತಿಯ || ಏರಿಸನುಪವ ಧನುವ ನರಮುಖ | ಕೇರಿ ಸಹಿತನ ಬಳಿಕ ಭಾಯುವ | ನಾರಿಸನುಜನ ಮನುಜ ರಂಗದ ಬಳಕೆ ಬೇಕೆಂದ || ೪೬ || ಏನು ಹದನೈ ಹನುಮನವಗೆ ಖು | ಣಾನು ಬಂಧನವುಂಟೊ ತಮ್ಮನ | ಹಾನಿ ನಂಬುಗೆಗಾಗದಲೆ ಪರಿಯಾಯಿ ದಂಜಿಕೆಯ || ಏನು ಮನದನುಮಾನ ಮೌನ ದ | ಶಾನನ ರಣ ಕೊದಗದಿದೆ ಸು | ಮ್ಮಾನವನು ಬಿಡಿಸೈಯ್ಯ ಹೇಳೆನ್ನಾಣೆ ಹೇಳೈಯ್ಯ ||೪೭|| ದೇವರಲಿ ಮರೆಮಾತೆ ಬಿನ್ನಹ | ಕಾವ ಸಂಶಯ ಬೇಡ ಲಕ್ಷ್ಮಣ | ದೇವ ನಪಗತನಾದಡೆನ್ನಲಿ ಸಮತೆ ಸಮನಿಪುದೆ || ದೇವರಿಪುವಿನ ಕೊಲೆಗೆ ಕೊಂಕಿನ | ಭಾವವನು ಕೈವಿಡಿಯ ದವನೀ | ದೇವ ದೇವೋದ್ಧಾರ ನಾಗೆಂದನು ನಿಜೇಶಂಗೆ || ೪೮ || ಎತ್ತಿದನು ಬಳಿಕ ಮಮ ವಜ್ರಾ | ವರ್ತ ಕಾರ್ಮುಕ ದಂಡವನು ಹಗೆ | ಯತ್ತ ಮುಖದಿರುಹಿದನು ಪೂಡಿದ ಸಂಜ್ಞೆಯಲಿ || ಕೃತ್ತಿವಾಸ ವಿರಿಂಚಿ ವಿಬುಧ ಕು | ಲೋತ್ತಮರು ಹಾರೈಸೆ ರಾಜ ಕು | ಲೋತ್ತಮ ನಘರ ಧುರವ ದರ್ಶನ ಮತುಳ ಹರುಷದಲಿ ||೫೦|| ಬಂದುದೈ ಬಳಿಕಸುರ ರಥ ವೇ | ನೆಂದು ಪೊಗಳುವೆ ನಸುರ ರಾಯಂ | ಗೊಂದಿ ದತಿಶಯ ತಪದ ಮಹಿಮೆ ಯದೇನು ವಿಸ್ಮಯವೊ || ನೊಂದ ನೋವೇನಾಯ್ತು ಶಿಶುತನ | ದಿಂದುಲಿವ ಕಳಯಂತೆ ಹೆಚ್ಚಿತು | ಕಂದ ಕೇಳಸುರೇಂದ್ರನುಬ್ಬಟೆ ರಾಮ ನಿದಿರಿನಲಿ ||೫೧||

ಇಪ್ಪತ್ತೇಳನೆಯ ಸಂಧಿ ಸಮಾಪ್ತಂ.

ಇಪ್ಪತ್ತೆಂಟನೆಯ ಸಂಧಿ.

ಸೂಚನೆ|| ಖೇಚರರು ಕೊಂಡಾಡೆ ಸಕಲ ಚ | ರಾಚರಾತ್ಮಕ ನಸುರ ರಾಯನ | ನಾಚಿಕೆಯ ಕೊಂಡುಳುಹಿ ಕಳುಹಿದನಸಮಸಮರದಲಿ ||

ಪದ್ಯ|| ಕುಶನೆ ಕೇಳಚ್ಚರಿಯ ಕಂಡವು | ರಪವ ನೆರಡಕ್ಷಿಗಳು ಲಕ್ಷ್ಮಣ | ದಶಮುಖನ ಮೇಲಿಂದು ಸೂರ್ಯ ದಶಾಂತ ರೌದ್ರಕದ || ಕುಶನನುಜ ಕೇಳ್ ರಕುಣ ವೆಡದಲಿ | ವಿಷನು ಕೋಪಜ್ವಾಲೆ ಬಲದಲಿ | ಬೆಸುಗೆ ಬಿಡ ದವಧಾನದಲಿ ನಿಂದನು ಮಹಾಹವಕೆ ||೧|| ಜೀಯ ಬಿನ್ನಹ ವೈರಿ ಘಟನ ವಿ | ಡಾಯವನು ಚಿತ್ತೈಸದಿರೆ ವಾ | ನಾಯಿ ಬಂಗಳ ಒರಪ ಕಂಡರೆ ಸೂತ ಸುಜ್ಞಟಿಯ || ಬಾಯ ಬಿರಿಸನು ಕೇಳಿದಿರೆ ಸರಿ | ರಾಜಸೇ ಸಿಮುಗಿವನು ಪದ ಚರ | ರಾಯತದ ರಣರಂಜಕವ ನಿಮಗೆಂದನಾ

ಹನುಮ ॥ ೨ ॥ ರಥವ ಮೇಲವ ದೇವರಿಗೆ ಪದ । ರಥನ ರಣವ ಸಮಾನ ಮಂ
ದಣ । ಕಥೆಗೆ ಸಾಚಿಕೆ ನಮಗೆ ನಾ ವಿದ್ವೇಸು ಫಲ ನಿಮಗೆ ॥ ರಥನಹೇಸು ದೇವರಿಗೆ ।
ದೇವರು । ರಥಿಕ ರಾದರೆ ಜಗದೊಳಗೆ ಸು । ಪ್ರಥಿತ ನಹೆ ತಾನೆಂದು ತಲೆವಾಗಿದನು
ಕಲಿ ಹನುಮ ॥೩॥ ಆವಡಾಗಲಿ ಯೆಸುತ ನೃಪನದ । ನಾದರಿಸೆ ಜಾತ್ಯಾಶ್ವ ವಕ್ರಿಗ ।
ಳಾದ ನಂಘ್ರಿಗಳಸವು ರಣ ರಥ ಚಲಿತ ಚಕ್ರಗಳು ॥ ಆದು ದಗ್ಗದ ಮನವ
ಸಾರಥಿ । ಯಾದು ದುನ್ನತ ಪಾಲ ಕೇತನ । ವಾಮದಸುರಾಂತಕ ಮಹಾರಥ ನಾದ
ನಾಹವಕೆ ॥೪॥ ವಿಷಮಗತಿ ವೈಚಿತ್ರ್ಯ ಗತಿ ನಿ । ಪ್ಪಸರ ನಿರ್ಗಮ ಸೂಟಿ ಥಳಗತಿ ।
ಯುಷಮ ಸಮ ಸಂಚಾರದಲಿ ಸೊಬಗೆನಿಸಿ ರಿಪುರಥವ ॥ ಸಸಿನದಲಿ ತೋರಿದನು ಕಪಿ
ರಥ । ಕುಶಲವನು ಕಂಡಾ ವೃಷಾಪತಿ । ವೃಷಭ ನಾಸನ ವನು ನಿರೀಕ್ಷಿಸಿ ತೂಗಿದನು
ತಿರವ ॥ ೫ ॥ ಭೃತ್ಯರೊಳಗೀ ಪವನ ಸುತ ಗಿಂ । ದತ್ಯಧಿಕ ರಾರುಂಟವೇಂ ಕೃತ ।
ಕೃತ್ಯನೋ ಸೇವೆಯಲಿ ಸೆರೆ ವಿಡಿದನು ಸನಾತನನ ॥ ನಿತ್ಯ ಶುದ್ಧನ ನಿರ್ವಿಕಲ್ಪನ ।
ಮೃತ್ಯುರಹಿತನ ನೆಂದು ನಾಕದ । ನೃತ್ಯದಲಿ ನಲಿದಾಡಿ ಹೊಗಳಿದ ನಂಜನಾ ಸುತನ॥
ಹರಿಣ ನುಪ್ಪರ ಗಮನ ಕಿದಿರೆ । ದ್ದುರವಣಿಪ ಹುಲಿಯಂತೆ ಮದ ಸಿಂ । ಧುರದ
ಮುಖ ಕೇಳ್ವಬ್ಬರಿಸಿ ಹೊಯ್ದೆಳ್ವ ಹುಲಿಯಂತೆ ॥ ದುರಿತ ದುಮ್ಮಹ ದುಬ್ಬರದ
ವೈ । ರಿಗೆ ಮೇಲೊಡೆ ಬೀಳ್ವ ವಿಷ್ಣು । ಸ್ಮರಣೆಯಂತಿದಿರಾದ ನಾಖಳ ನಿದಿರಿನಲಿ
ರಾಮ ॥೭॥ ಅವನಿಜಾ ಸುತ ಕೇಳು ಬಳಿಕಾ । ಭವನ ವೀರರ ಖತಿಯ ಹುತವಹ ।
ಗವಮ ಗರ್ಭೀಕರಿಸಿತಬುಜ ಭವಾಂಡ ಮಂಡಲವ ॥ ಅನಯುವದ ನಿಗುರುಗಳ ಕಡೆ
ಗಣ್ಣ ವಿರಣದ ನೋಟಗಳ ಸೇದಿದ । ಕವಲು ಗೋಲಿನ ಲೊತ್ತ ಬರಿಸಿದ ರಳವಿಯಲಿ
ನೆಲನ ॥೮॥ ಮಲೆತು ಸಿಂಹಕೆ ಸಿಂಹ ಕುಲಿಶಕೆ । ಕುಲಿಶ ಕದನಕೆ ನಿಲುವ ವೊಲು
ರಣ । ಗಲಿ ಮನದವನ ಮನಿಸುಗಳ ಛಲಪಲದ ಹಬ್ಬುಗೆಯ ॥ ಕಲಹ ಲಂಪಟ
ರಾಯ ಸುತ ಕ । ಟ್ಟಳಿವಿಯಲಿ ಕೈಕೊಂಡು ಕಣೆಗಳ । ತಳುಕಿದರು ತುಂಬಲು ಜಗ
ತ್ರಯ ಕಿಡಿಯ ಗಾಢದಲಿ ॥೯॥ ಝುಮ್ಮೆನಲು ಶಿಖಿ ಮುಖದ ಕಣೆಗಳು । ಚಿಮ್ಮಿದವು
ಚಾಪಗಳ ನೊದೆ ದುರೆ । ಘಮ್ಮ ಘಳ ಲೆಂಬೊಬ್ಬ ರಣೆ ಗೊಬ್ಬರಿಸಿ ದಿಗುತಟವ ॥
ನಿಮ್ಮ ತಂದೆಯ ಶರವು ಅಹಿತನ । ನೆಮ್ಮಿದವು ಹಗೆ ಯಂಬು ರಾಯನ । ನೆಮ್ಮಿದವು
ನೆಲೆಗೆಡಸಿದವು ನಿಮಿಷದಲಿ ನಿರ್ಜರರ ॥೧೦॥ ಇಬ್ಬರೆಸುಗೆಯ ವಿಶಿಖ ವಧ್ರವ ।
ಹಬ್ಬಿ ಮುದು ಹೊಂಬಿಸಿಲು ಕಳನೊಳು । ಮಬ್ಬು ಕವಿದುದು ಸಂಜೆ ಗೆಂಪಡರಿತು ದಿಶಾ
ವಳಿಯ ॥ ತುಬ್ಬಿ ದಲಗಿನ ಬೇಗಿನಲಿ ಕಣೆ । ಯುಬ್ಬರದ ತಲೆ ಕತ್ತಲೆಯಗರಿ ।
ಯುಬ್ಬುಗಳ ಕೆಂಪುಗಳ ಬಿಡದರೆಡ್ಡಾವ ಪರಿಯಂತ ॥೧೧॥ ಭುಳುಗಿಸುವ ವಂಬುಗಳು
ಸುರ ಕುಲ । ಜಲಧಿ ವಡಬಾನಲನ ನೆಸುಗೆಯ । ಲಲಘು ಜಲ ರಾಘವನ ವರ ರಾಜೀವ
ಲೋಚನನ ॥ ತಳಿತು ಮುಸುಕುವ ವಸುರ ನೆಸುಗೆಯ । ಚಳ ಶಿಲೀಮುಖ ನಿಚಯ
ರಣ ನಿ । ಶ ಲಿತ ಸಾಹಸ ರಸ್ತ್ರ ಸಾರ ವಿಚಿತ್ರ ತರವೆಂದ ॥ ೧೨ ॥ ಹನುಮ ನಬ್ಬರ
ವೈರಿ ಸೂತನ । ನಿನದ ರಾಮನ ಬೊಬ್ಬೆ ದಶಕಂಠನ । ಮಹಾ ಕಂಠೀರವ ಧ್ವನಿ ರಾಘ
ವೇಶ್ವರನ ॥ ದನುವಿ ನಬ್ಬರ ರಾವಣನ ಬಿಲು । ಧನಿ ಛಟಿಸ್ವಯ ಬಾಣ ಧೀತ್ಕೃತಿ ।
ವನಜ ಭವ ಕಲ್ಪಾಂತ ಶರಧಿಯ ಶರಕೆ ಗುರಿಯಾಯ್ತು ॥ ೧೩ ॥ ಎಸುಗೆಗಳ ಸವ್ಯಾಪ

ಸವ್ಯದ | ವಿಶಿಖ ಗಮನದ ಗರಿಯ ಹಿಳುಕಿನ | ಬೆಸುಗೆಗಳ ಬೆರಳುಗಳ ಸೇದುವ ಬಿಡುವ
ಬಿನ್ನಣದ || ಕುಸಿದು ನಿಗುರುವ ಮೈಯ ನಿಗೆ ದಿ | ಟ್ಟಿಸುವ ದೃಷ್ಟಿಯ ಹೂಂಕೃತಿಯು
ರಣ | ರಸಿಕ ರಿಚ್ಚಾಡಿದರು ಮೆಚ್ಚೆ ಸುರಾಸುರ ವ್ರಾತ ||೧೪|| ಖಳಪಳನೆ ಕಣೆಕಣೆ
ವಿತಾಳಿಸಿ | ಹಳಚುತಿರ್ದವು ಖಂಡಿಕಾಸ್ತ್ರವ | ಹಿಳುಕು ಗರಿ ಗಣೆಯಲಗು ಹೊದಿಸಿದ
ವವನಿ ಮಂಡಲವ || ಬಿಲುಸರಳ ಬರುಗಾಳಿ ಗಂಬುಧಿ | ತುಳುಕು ತಿರ್ದುದು ಮೇಲೆ
ಮೇಲು | ಚೃಳಿಪ ಬಾಣಕೆ ಬೆದರಿ ಬಾಯ್ಬಿಡುತಿರ್ದ ದಮರಗಣ ||೧೫|| ವೈರಿಸೂತನ
ಕಾಯದಲಿ ಹೊಂ | ದೇರಿನಲಿ ಹಯ ದೊಡಲಿನಲಿ ರಿಪು | ವೀರನಂಗೋಪಾಂಗದಲಿ
ಹಳವಿಂಗೆ ಕಂಭದಲಿ || ವೀರ ಹನುಮನ ದೇಹದಲಿ ರಣ | ಧೀರ ರಘುರಾಜೇಂದ್ರ
ನಮಲ ಶ | ರೀರದಲಿ ಶರಮಯುವದಲ್ಲದೆ ಕಾಣೆ ನಾನೆಂದ ||೧೬|| ಶರ ವಿಘಾತಿಗೆ ರಕ್ಕ
ಸರು ಮೊಗ | ದಿರುಹಿ ನಿಂದರು ಹಿನ್ನೆಲೆಗೆ ರಿಪು | ಶರ ವಿಘಾತಿಗೆ ಸರಿದು ನಿಂದುದು
ಸೇನೆ ವಾನರರ || ಸರಳ ದನಿ ಬಿಲು ಮಂಡಳಾಕೃತಿ | ಬೆರಳ ಜೊಬ್ಬೆಯ ರಿಬ್ಬರವ
ಬಿಡ | ದೆರಡು ಝಾವ ಪರಿಯಂತ ನಡೆದುದು ಹೇಳಲೇನೆಂದ ||೧೭|| ಹೊಗಳ ಲೇಕೆ
ಗಾಣೆನು ಪುರಾತನ | ಯುಗದ ವೀರರ ಲಿವರ ಸರಿಸಕೆ | ಮಗನೆ ಕೇಳೈ ಲವನೆ ಲವ
ಣೆಯ ಲಾಗು ಬೇರಿವರ || ಗಗನ ಗಗನಕೆ ಜಲಧಿ ಜಲಧಿಗೆ | ಮಗುಳೆಲೇ ಪ್ರತಿ ರಾಮ
ರಾವಣ | ರಿಗೆ ರಘುಕ್ಷಿತಿನಾಥ ರಾವಣರಲ್ಲದಿಲ್ಲೆಂದ ||೧೮|| ವೀರ ರಿಬ್ಬರ ರಣಕೆ
ಬೇಸರು | ಬಾರಿಸದು ರಮರರಿಗೆ ಶರದಲಿ | ಬಾರಿಸಿತು ಭುವನಾಳಿ ಬಳಲಿಕೆ ದೋರ
ದಿಬ್ಬರಿಗೆ || ಸೂರಿಯನ ಗತಿ ಪಶ್ಚಿಮಾಬ್ಧಿಗೆ | ಮೇರ ಗಾಂತುದು ಹದನಸಿದ ಕಂ |
ಡಾ ರಘುಕ್ಷಿತಿನಾಥ ಮಾರುತ ಸುತನೊಳಿಂತೆಂದ ||೧೯|| ಹಲಬರಲಿ ಕೈಗಟ್ಟಿ ಕಾದಿದು
ಬಳಲಿದವನನು ಕೊಲುವ್ರ ದೆನ ಗ | ಗ್ಗಳವು ರಾಮನನೆಂದು ನಗುವುದು ಜಗದ ಜನ
ನಿಕರ || ಎಲೆ ಹನುಮ ಕೇಳಿಂದಿಗಿವನನು | ಕಳುಹುವೆನು ಕೈ ಗಾದು ತೋಪಿಸಿ | ಕಳೆ
ಯಲೇ ನೀ ನಮ್ಮ ನಿನ್ನಭಿಮತವಿದೇನೆಂದ || ೨೦ | ಕಲಿಗಳಂಗವಿದೀಗತಪ್ಪದು |
ಕೊಲುವು ದನುಚಿತ ವಿಂದಿಗೆನೆ ಕಪಿ | ಕುಲ ಲಲಾಮನ ಬಿನ್ನಹಕೆ ಕಡುಮೆಚ್ಚಿ ಕರುಣ
ದಲಿ || ಕಳುಹಿದನು ಕೃತ ಶರವನದು ಕೈ | ಲುಳಿಯ ಬಾಣವ ನಲ್ಲಿ ಖಂಡಿಸಿ | ಕಳಚಿ
ದುದು ಕೈ ಹತ್ತ ರಸಗೆಯ ಹತ್ತು ಬಿಲ್ಲುಗಳ ||೨೧|| ಮುಳಿದು ಕೈಯೊಡ ನಸುರ ಪತಿ
ಕೈ | ಬಳಿಯ ಲೆತ್ತಿದ ಪರಿಘ ಪಾರುಂ | ಬಳಕೆ ಪರುಶದ ಮುಸಲ ಮುದ್ಗರ ಶೂಲ
ಶಕ್ತಿಗಳ || ತೊಲಗ ಕಡಿ ದುಬ್ಬಿರಿಯೆ ಕಾಲಾ | ನಲನ ಪೊಲು ಧಗಧಗಿಸಿ ಬಾಹ |
ಪ್ಪಳಿಸಿ ಬಳಿಕೀ ಮಾತನೆಂದನು ತನ್ನ ಸಾರಥಿಗೆ ||೨೨|| ಹುಲಿಯ ಗಂಟಲ ಬಳಿಯ
ಹುಲ್ಲೆಯ | ನಲುಗಿ ತೆಗೆಯಲು ಬಂದ ಹರಿಣನ | ಬಲುಹ ನೋಡೈ ಸೂತ ಯೆನು
ತುರ್ಬಿದನು ಖಂಡೆಯವ || ಎಲೆ ಹನುಮ ಮೃಗರಾಜ ವಸಿತೆಯ | ಮೊಲನು ಕವ್ವೊ
ಯ್ದುಳಿ ವ್ರದೇ ಜಗ | ದೊಳಗೆನುತ ಮುಟ್ಟಿಸು ವಸಾರನ ನೆಚ್ಚ ನಾ ರಾಮ ||೨೩||
ಶಚಿ ಸರಸ್ವತಿ ಮುಖ್ಯ ನಾನಾ | ಪ್ರಚುರ ಸುರ ನಾರಿಯರು ನಾಚಿವು | ರಚಿಸಿದರು
ಮೇಲುದನು ಮುಸುಡಿಗೆ ಮಂದಹಾಸದಲಿ || ಖಚರ ಕಿನ್ನರ ಯಕ್ಷ ನಿರ್ಜರ | ನಿಚಯ
ಬಿಯನಗೆಗಳಲಿ ರಾಘವ | ನುಚಿತ ಪೆಸುಗೆಗೆ ಹಾರವಿಸಿದುದು ಹೊಯ್ದು ಭುಜ
ಯುಗವ ||೨೪|| ನಾಟಿ ತಿರುಗಿದ ನಸುರ ನಾ ಮಾ | ರೀಚ ವೈರಿಯ ಸುಡಿಗೆ ಗುರುವ |

ಲಾ ಚತುರ್ದಶ ಬಗದ ಜಗ ಘಂಡರಿಗೆ ದಶಕಂಠ || ಕೂಚು ಮಾಡಿತು ಮೇಲಿ ಸಾಸಿರ | ಲೋಚನನ ಕಟಕದಲಿ ಸಂಧ್ಯಾ | ಸೂಚನೆಯ ಲಿರತಂಕ ತೆಗೆದುದು ತಮದ ಮುಂಬಿನಲಿ ||೨೬|| ಕಪಿ ವರೂಥನ ನಿಳಿದು ರಾಘವ | ನೃಪತಿ ಚಿಂತಾ ಭಾರದಲಿ ನಡೆ ತಂದು || ತಪನ ತನುಜನ ಕಂಡು ಮನದಲಿ | ತಪಿಸಿ ತಂದನು ಕಂಕಳಿಗೆ ತನ | ಗಪ ಯಶವು ಸಂಭವಿಸಿತೇ ಯೆಂದಶ್ರು ವಾರಿಗಳ || ೨೭ || ಮಕೆಯ ಮಾಯಾ ಮನುಜ ನೆಂಬುದ | ನರಿಯದೇ ಜಗ ವಣುಗ ಕೇಳ್ ಕಂ | ಣ್ದೆರೆದನ್ಯ ಕಮಲಾಂಬಕನು ಕರುಣೋದಯಾಂಬುವದ || ಬಿರುವಳೆಯ ಬಸವಿನಲಿ ಬಿಸಿಲಿಗೆ | ಬರಹ ಹಳ್ಳದ ಮೇಲೆ ತಂಪಿನ | ತೊರೆ ತುಳುಕಿ ಹರಿದಂತೆ ಹರಿ ರಾಜೇಂದ್ರ ನಿಮಿಷದಲಿ || ನಮಿಸಿದನು ಬಳಿಕೆದ್ದು ವಿಶ್ವ | ಕ್ರಮನ ವಿಮಲ ಪದಾರವಿಂದಕೆ | ಸುಮುಖತೆಯ ಸುಮ್ಮಾನ ಸುಮನೋಜನಕೆ ಕುಡಿಗೊಂಡು || ಅಮರಿದುದು ಕಪಿಬಲವ ನಾ ಕಪಿ | ರಮಣ ಸಹಿ ತಮುರಾರಿ ಬಂದನು | ಮಮತೆ ಯತಿಶಯ ದರಿಕೆಯಲಿ ಲಕ್ಷ್ಮಣನ ಹೊರೆ ಗಾಗಿ ||೨೯|| ಕರೆದು ರಾಘವ ರಾಯ ಧನ್ವಂ | ತರಿಯ ತನುಜಂ ಗೆಂದ ನನುಜನ | ಪರಿಯದೇನು ಪರೀಕ್ಷಿಸೈ ಪವನನ ಪರೀಗತದ || ಹರಿಪತಿಯ ನಾರೈದು ರಕ್ಷಿಸಿ | ದುರು ಪರಾಪರ ವಸ್ತು ನೀ ಸರ | ಚರಿತ ದಂಗವ ಬಿಟ್ಟು ನೀನೇ ನೋಡು ಸಾಕೆಂದ|| ಎನುತ ನಾಡಿಯ ಜೀವ ಪರಮಾ | ನನ ಪರೀಕ್ಷಿಸಿ ಲಕ್ಷ್ಮಣನ ಮುಖ | ವನರುಹವೊಲು ಗಿಸಿದನು ಮಾರುತ ಮಂತ್ರ ಮಯ ಜಲವ || ತನುವ ಮುರಿವುತ ಮುಗಧ ತನು ಜಾ | ತನುಜ ನೆದ್ದನು ಮೇಲೆ ನೀಲನ | ತನುವಿನಲಿ ತುಂಬಿದನು ಮುಖ್ಯಪ್ರಾಣ ಮಾರು ತನ |೩೦|| ಬಳಿಕ ಬವರ ದಲಳಿದ ಸುಭಟಾ | ವಳಿಯ ನೆಬ್ಬಿಸಿ ಹಬ್ಬಿಸಿದ ನು | ಜ್ವಲ ಮನೋರಥ ಲತೆಯ ಮನು ಕುಲ ರಾಜಶೇಖರನ || ಜಲಧಿ ಕಲ್ಪದ ಲಬ್ಬರಿಸಿ ಭೂ | ತಳವ ಲಂಬಿಸುವಂತೆ ಸೇನಾ | ಜಲಧಿ ಲಳಿಯೇರಿದುದು ತೊರವೆಯರಾಯ ನಿದಿರಿನಲಿ || ||೩೧||

ಇಪ್ಪತ್ತ್ಯೆದನೆಯ ಸಂಧಿ ಸಮಾಪ್ತಂ.

ಇಪ್ಪತ್ತಾರನೆಯ ಸಂಧಿ.

ಸೂಚನೆ|| ರಣವ ಜಯಿಸುವೆನೆಂದು ಛಲಪದ | ವೆಣಿಕೆಯಿ ಂದೆಬ್ಬಿಸಿದನಾಸುರ | ಗಣ ಭಯಾಂಕರ ಕುಂಭಕರ್ಣನ ನಾ ದಶಗ್ರೀವ ||

ಪದ್ಯ|| ಭೂತಳಾಧಿಪಸೂನು ಕೇಳ್ ರಿಪು | ಜಾತ ಜನಿತಾಭ್ಯುದಯದಲಿ ರಾ | ಗಾತಿಶಯ ಸಂಪೂರ್ಣದ ಸೌರಂಭ ಸಾಗರದಲಾ || ತಪಾನುಜರು ತಿರುಗಿದರು ಲಾ | ಭಾತಿಶಯದಲಿ ವಿಶ್ವಕರ್ಮನ | ನೂತನದ ಸುರುಚಿರದ ಶಿಬಿರದ ರಾಜಮಂದಿರವ ||೧|| ಇಕ್ಕಿದರು ಮುತ್ತಿಗೆಯ ನಿಮರಾ | ರಕ್ಕಸನ ಪಟ್ಟಣಕೆ ಪಡಿತಳ | ವಿಕ್ಕಿಪರಿಗತವಾದ ಬಗ್ಗಿಯ ಸುಯ್ಲ ಸೂಳಿನಲಿ || ಬೆಕ್ಕಸಂಬಡುತ ಸುರಪತಿ ತ | ನ್ನಿಕ್ಕೆಲದ ಕದತಳದ ಮುಸುಕಿನ | ಧಕ್ಕಡಿಯ ದುಮ್ಮಾನದಲಿ ಹೊಕ್ಕನು ಪುರಾಂತರವ || ೨ || ಅಹುದು ರಾವಣನೆಂದು ಬಾಗಿಲ | ಬಹಳ ಭಟರಿಂಗೆ ಕುರುಹು ದೋರುತ | ಮಹಿಯ ನೋಟದ

ನಗೆಯು ಸರದುಬ್ಬುಗಳ ಕೊರಳುಗಳ ॥ ಸಹಸ ನಳಿದಾನನದ ಲಜ್ಜಾ । ವಿಹರಣದ
ವಿಹ್ವಲದ ಭೂತ । ಗ್ರಹ ವಿಕಾರನು ಬಂದನಳಲುತ ರಾಜಮಂದಿರಕೆ ॥೩॥ ಮೂಡಿ
ದಗ್ಗದ ಪುಣ್ಯ ಪಾಪಗ। ಳೂಡಿದಲ್ಲದೆ ಮಾಣದೆಂದುರೆ। ಝಾಡಿಗಳ ಝುಕ್ಕಿಲಿನ ನಗೆ
ಗಳ ಮುಸುಕುದಲೆಗಳಲಿ ॥ ಬೀಡ ಸುಲಿಸಿದ ಪಥವಿದೀಗೆಂ । ದಾಡಿ ತಲ್ಲಿಯದಲ್ಲಿ ಜನ
ಕೇ। ಡಾಡಿಗಳು ಮುಸುಕಿಕ್ಕಿಕೊಂಡೊಯ್ದರು ನಿಜಾಲಯಕೆ ॥ ೪ ॥ ನಿಂದವಲ್ಲಿಯದಲ್ಲಿ
ಸತಿಯರ। ಹೊಂದಳಿಗೆಯಾರತಿಗಳಿದಿರಿನ । ವಂದಿಜನ ದುಗ್ಗಳಣ ಕಂಚುಕಿ ಜನದ
ಕಳಕಳಿಕೆ ॥ ಸಂಧಿಸಿದ ಮುಮ್ಮಾಗಿಯಂಬರ । ದಂದವಾದುದು ರಥದ ಸೋಲದ ।
ಕಂದುಗಳ ಕಳವಳಿಗ ಹೊಕ್ಕನು ತನ್ನ ಮಂದಿರವ ॥ ೫ ॥ ಮುಕ್ಕವರ ಹೊಗಗುಡಿ
ಕಂಬಿಗ। ಳಿಕ್ಕೆಲದ ಲಾಡಿದವು ಕದಗಳ। ನಿಕ್ಕಿ ಬಾಗಿಲು ಬಾಗಿಲುಗಳಲಿ ಬಳಿಕಾ ದಶ
ಗ್ರೀವ ॥ ಉಕ್ಕಿನವಳಲಿನ ಮುರಿವಡೆದ ಮನ । ದಕ್ಕಜದ ಮನನುರಿದ ಮೊಗದ ।
ಹೆಕ್ಕಳದೊಳೊರಗಿದನು ಸೂಸುವ ಸುಯಿಲಿನಲಿ ಮಗನ ॥೬॥ ಹಲ್ಲುಗಳಚಿದಹಿಯಂತೆ
ಬರಿಕೈ। ಗಳಚಿದಿಭಪತಿಯಂತೆ ಕಣಸೊಳ। ಗಲಗುಡಿದ ಕಲಿಯಂತೆ ಧನಪತಿ ಸುಲಿಗೆ
ವಡೆದಂತೆ ॥ ಬಳಲುತಳಲುತ ಬಸವಳಿವು ತೊಲ। ದೊಲದು ಸುಯಿಲಿಡುತ ಹಲವಣಿ
ಸುತ। ತೊಳಲಿ ಹಂಬಲಿಸುತ್ತ ಪೆಂಪುಳಿದಿರ್ದನಸುರೇಂದ್ರ ॥೭॥ ಮಾಡಿಕೊಂಡೆನು
ದುರ್ಗುಣವ ಹಗೆ। ಪಾಡುಬಿದ್ದುದು ಬಲ್ಲಿದನ ಕೂ। ಡಾಡಿ ಬಳ್ಳವ ಕೆಡಹಿ ಕೊಂಡೆನು
ವಿಷಯ ಲಂಪಟವ ॥ ಬೇಡುವೆನು ಮಾನವನು ಮರಣಕೆ । ಜೋಡಿಸಿದೆ ಹಿತವಾಗಿ
ಹೇಳಿದ। ರೋಡಿಸಿದೆ ತಮ್ಮನನು ಕಾಮುಕತನದಲಕಟೆಂದ ॥ ೮ ॥ ಜನನಿ ಜನನಿಯ
ಜನಕನನುಚಿತ। ವೆನಲು ಜರಿದೆನು ಜನಕಜಾಪತಿ । ಜನಪನೆಂದೇ ಕೂಡಿ ಮಾಡಿದೆ
ನಪ್ರಬುದ್ಧಿಕೆಯ ॥ ದಿನದಿನಕೆ ಕಡೆಗೇಡು ಕೈಯೊಡ । ನೊನದುಕೊಡುತಿದೆ ಕಾಮು
ಕತ್ರದ। ನೆನಹು ನೆಗ್ಗದೆ ಮಾಣದೆಂದಸುರೇಂದ್ರ ನಳವಳಿದ ॥೯॥ ಉಣಿಸಿದನು ಹಲ
ವಂಗದಲಿ ಖಳ। ನಣದಣದು ರಣಮುಖದ ಮಾರ್ಗದ । ಗುಣಿತದಲಿ ರಿಪುಜಯವ
ಕಾಣದೆ ಕಾನನಾಂತರವ॥ ಕಣುಗುರುಡ ಹೊಕ್ಕಂತೆ ಚಿಂತೆಯ। ಜಿಣೆಯ ಬಿಗುನಲಿದಿ
ತಂದನು। ಗುಣನಿಧಿಯೆ ಕೇಳೊಂದುಪಾಯವನಾ ದಶಗ್ರೀವ ॥೧೦॥ ಎಬ್ಬಿಸುವೆ ನನುಜ
ನನು ಮನುಜನ। ಮಬ್ಬುದುಳಿಸುವೆ ನುಳಿದ ಭೂತಕೆ। ಹಬ್ಬವಿಕ್ಕುವೆ ನುಕ್ಕಿಸೊಕ್ಕಿದ
ಮರ್ಕಟವ್ರಜವ ॥ ಉಬ್ಬರದ ಸಂಗರದ ಸೋಲವ। ಮಬ್ಬಿಗಿದು ಬೆಳಸೆಂದ. ಚಿತ್ತ್ರವ।
ನೊಬ್ಬುಳಿಯಲೇತಂದು ಬಳಿಕಿಂತೆಂದ ನಸುರೇಂದ್ರ ॥ ೧೧ ॥ ದೈವವೆಂದರಿದರಿದು
ಮೂರ್ಖರ। ವೈವಳಿಯ ಲನುಸರಿಸಿ ಸಮರದ । ಸೈವಳಿಯಲೇ ಸಾವುದೇ ಕರ್ತವ್ಯ
ಸಹಭವನ ॥ ಕೈವಶಕೆ ಗೆಲವಾಗದಿರೆ ಬಳಿ। ಕೈವಡಿಯ ಹಗೆತನದಿ ಹೊಗುವೆನು।
ದೈವವರು ದೈವ್ಯಲಿ ಸವಿಾಕನನೆಂದನಸುರೇಂದ್ರ ॥ ೧೨ ॥ ಎಂದು ತನ್ನೊಳು ತಾನೆ
ತೊಡಹಕೆ । ತಂದು ಕೊಂಡನು ಮನಸನಲ್ಲಿಗೆ । ಬಂದನೈಯ್ಯನ ಸೋವ ನುಪಚರಿ
ಸಲು ಸುರೇಂದ್ರಜಿತು ॥ ಮುಂದಣ ಹಿತಾಹವದ ಕಾರ್ಯಕೆ। ಸಂದಿರುವ ಬುದ್ಧಿಯಲಿ
ಬಳಿಕಿಂ। ತೆಂದ ನಸುವರಿವಾ ದಶಾಸ್ಯಂಗಾ ಸುರೇಂದ್ರಜಿತು ॥ ೧೩ ॥ ಹಗೆಯ ನಾಚಿಕೆ
ತೋಷುದದರಿಂ। ಮಿಗಿಲೆ ಮಿಗೆಗೆಳೆ ಬೇಯ ಜಾಡ್ಯದ। ಜಗುಳುದಲೆಗಿಡಲಾ ಜಯಾಭಿ
ಪ್ರಮುಖ ಕಾಪಸಿಬಿ ॥ ತಗರು ತಿರುಗಿದಡೇನು ಮಡುಸ। ನ್ನೆಗಳ ಸಮರವ ಜಯಿಸ

ವೇಕೈ । ಜಗಕೆ ಬೆರಗೆಸಿಸುವೆನು ಬೆಸನನ್ನು ಕೊಟ್ಟು ಕಳುಹೆಂದ ॥೧೪॥ ನೆರೆದ ಶಾಖಾ
ಮೃಗ ಸಮೂಹನ । ನರಗೆ ನಾಂಗಣೆಯಾಗಿ ಬಿಂಕದ । ನರಪತಿಯನು ಪರೇತಪತಿಯ
ಪುರಾಂತರಾಳದಲಿ ॥ ದೊರೆಯೆನಿಸುವೆನು ಕಾವ್ಯಸಿದ್ಧಿ । ಸ್ಫುರಣವೀ ತ್ರೈಲೋಕ್ಯದಲಿ
ಕ । ರ್ಬುರ ಕುಲೇಂದ್ರನಿಗಲ್ಲದಿಲ್ಲೆನಿಸುವೆನು ತಾನೆಂದ ॥೧೫॥ ಮಗನ ಮಾತಿಗೆ ಮಂದ
ಹರುಷವ । ನೊಗಿಸಿದನು ಹೃದಯದಲಿ ಶಾಂತದ । ಲಗುಳಿಯನು ಮುರಿದಧಿಕ ಚಿಂತಾ
ಭಾರದುಬ್ಬರದ । ಮಗನೆ ಕೇಳೀ ಕಣೆಯದಲಿ ಸಂ । ಯುಗದ ಭಾರಕೆ ಕುಂಭಕರ್ಣನ।
ಒಗಿಸಿ ನೋಡುವ ಮನದಲಿ ತನ್ನಭಿಮತವಿದೀಗೆಂದ ॥೧೬॥ ನೋಡುವೆನು ತಮ್ಮನಲಿ
ತಮ್ಮನ । ಪಾಡು ತಪ್ಪಿದ ಬಳಿಕ ಪಂಥದ । ಪಾಡು ಪಾಡಿನಮೇಲೆ ಪೌರುಷದುರು ಪರಿ
ಗ್ರಹವ ॥ ಮೋಡಿ ಮುರಿಯಡೆ ಮನದ ಖಾಡಾ । ಖಾಡಿಯಲಿ ಹೊಯ್ದಾಡಿ ಕೀರ್ತಿಯ।
ಜೋಡಿಸುವುದೇ ಜಾಣತನ ದಭಿಯೋಗತನವೆಂದ ॥೧೭॥ ಎಂದು ಕಳುಹಿದನಾ
ಕುಮಾರನ । ಮಂದಿರಕೆ ಮನದಾದಿಯಲಿ ಏಗೆ । ಕೊಂದು ಕೂಗಿದುದಿರುಳಿ ನಗ್ರ
ಸವ ಗ್ರ ಮೂರುಖನ ॥ ಕಂದಿದವು ತಾರೆಗಳು ತಾಮಸಿ । ಯಂದಗೆಟ್ಟುದು ತಾಮರಸ
ನಲ । ವಿಂದ ನಗೆವೇರಿದುವು ನೆರೆದುವು ಜಕ್ಕವಕ್ಕಿಗಳು ॥೧೮॥ ಕುಂಭಕರ್ಣನ ನೆಬ್ಬಿ
ಸುವ ಸೌ । ರಂಭನನು ಸಲೆದೋಡಲೆಂದಾ । ಜಂಭಭೇದಿ ದಿಶಾಂಗನಾ ಸುರದೋಷ
ಚಾರಕರ ॥ ರಂಭದ ರಮಣೀಯತರ ದೋ । ಸ್ತಂಭಗಳ ನಗಲಿಸುತ ತಿಮಿರ ವಿ ।
ಜೃಂಭಣನು ಮಣಿಖಚಿತ ರಥದಿಂದಡರ್ದ ನಂಬರವ ॥೧೯॥ ತೊಲಗಿದಾಹವ ದಪ
ಜಯದ ಮು । ಮ್ಮೃಳಿಯ ಮನವಾಕುಳದ ಬೇಗೆಯ । ಬೆಳಸಿನ ಸುರಾಧೀಶ ನಂದಿನ
ಸುಪ್ರತಾಪದ ॥ ಕಳಕಳದ ಕೈವಾರಿಗಳ ಕ । ಟ್ಟುಲುಹ ಕೇಳದೆ ನಿತ್ಯನಿಯಮಾ ।
ವಳಿಯ ನಿರ್ವರ್ತಿಸಿ ಮಹೇಶನನೊಲಿದು ಪೂಜಿಸಿದ ॥ ೨೦ ॥ ಒಲಿದನೇ ಶಿವನಸುರ
ಕಮರ್ಾ । ಕಲಿತ ಕ್ರೂರಾತ್ಮರಿಗೆ ಪೂಜೆಯ । ತಳದು ಕೊಳ್ಳದೆ ಕೊಡಹಿದನು ಮೌಳಿ
ಯನು ಮದನಾರಿ ॥ ಎಲೆ ಕುಮಾರಕ ಕೇಳು ಲೋಕಾ । ವಳಿಯ ಲುಳ್ಳ ಸಮಸ್ತ
ಮೂರ್ಖರ । ತಿಲಕನಲ್ಲಾ ರಾವಣನು ರಣಮುಖಕೆ ಮನತಂದ ॥೨೧॥ ಸಭೆಗೆ ಬಾರದೆ
ನಾಚಿ ಬಳಿಕೊಳ । ಸಭೆಯೊಳೋಲಗವಿತ್ತು ಮಂತ್ರಿ । ಪ್ರಭುಗಳನು ಕರೆದನು
ಕೇಳಿದನವರ ಮತದನುವ ॥ ಉಭಯಮತದೇಕಾರ್ಥದಲಿ ಬಳಿ । ಕುಭಯ ಪೂರ್ಣನ
ಕುಂಭಕರ್ಣನ । ತ್ರಿಭುವನ ಕ್ಷೋಭಕನ ರಣಕೆಬ್ಬಿಸಲು ನೇಮಿಸಿದ ॥ ೨೨ ॥ ತುಳಿಸು
ವುದು ಗಜಘಟೆಗಳಾದಿ । ಗ್ವಲಯಗಳ ನೊಡೆಮುರಿದು ಜಡಿದ । ಪ್ಪಳಿಸುವುದು
ಕಬ್ಬಿಣದ ಕೊಡತಿಗಳಿಂದ ಮೂಗಿನಲಿ ॥ ಹಲವು ಕುರಿ ಕೋಣಗಳ ಪೊಗಿಸುವು ।
ದುಲಿವ ಹೆಬ್ಬರೆಗಳಲಿ ಕಿವಿಗಳ । ಬಳಿಯ ಬೊಬ್ಬಿಡಿಸುವುದು ಹೊಸೆವುದು ತಲೆಯ
ಲಲಗುಗಳ ॥೨೩॥ ಅಂಜವೇನಳ್ಳಿನಿತು ಸಾಯುವ । ನಂಜನಾಚಲ ಸಮನ ಸಮಸಾ ।
ಮಂಜಸನ ಸುಪ್ತಿಯ ಸಮಾಪ್ತಿಯ ಮಾಡಿ ನಮ್ಮೆಡೆಗೆ ॥ ಅಂಜದಿಲ್ಲಿಗೆ ಕೊಂಡುಬಹು
ದುರಿ । ಮಂಜಮನ ನೆಂದಸುರ ನುಡಿಯೆ ಕ । ರಾಂಜುಳಿಯಲಿ ಮಹಾ ಪ್ರಧಾನಕ
ಪೈದಿದರು ಖಳನ ॥೨೪॥ ಮೇಳವಿಸಿ ಮದದುಬ್ಬಿನಗ್ಗದ । ಖಿಳ ರಾಕ್ಷಸ ಭಟರ ಪೊಗಿ
ಸಿದ । ರೇಖಾಲಕ್ಷದ ಲೆಕ್ಕದದ್ಭುತ ಘೋರ ರಕ್ಕಸರ ॥ ಕೇಳಿದೈ ರಘುವಂಶ ಲಕ್ಷ್ಮೀ ।
ಲೋಲಸುತ ಲಳಿಮೇರಿ ದುಬ್ಬಿನ । ತೋಳಬಲ ರಪ್ಪಿಕಿದರು ತಂತ್ರಿಯ ತಾಮಸೀ

ಚರನ ॥೨೫॥ ಮುರಜ ಡಿಂಡಿಮ ಪಟಹ ಕಾಹಳೆ । ಕರಡೆ ಚಂಬಕ ಕೊಂಬು ರಣವಾ । ದ್ಯರಿ ಮೃದಂಗಕ ಭೇರಿ ಕಹಳಾರವದ ರಭಸದಲಿ ॥ ಬಿರಿಯ ಲಬುಜ ಭವಾಂಡ ವಂಬುಧಿ । ಜರಿಯೆ ಲುಕ್ಕಿನದಾಡೆ ದಡಿಯುಲ ಹೊಯ್ದರಾ ಖಳನ ॥೨೬॥ ತೋರದಿರಲವಗೆಚ್ಚರಿಕೆ । ಕ । ವ್ಯಾಮ್ರರುಕ್ಕಿನ ಚಮ್ಮಟಿಕೆಗಳ । ಲೇರಿ ಹೊಯ್ದರು ಹೊಯ್ಲಗಿರಿಗಳ ಸಿಡಿಲಕೊಡತಿ ಯಲಿ ॥ ವರೆಮುರಿವ ರಿಕ್ಕಳಗಳಲಿ ಕೈ । ಗೊಡತಿಗೊಳ ಲಪ್ಪಳಿಸಿದರು ಹರ । ದೊರೆಯ ಹೊಯ್ದರು ಸರಳುಗಳ ನುಗುರುಗಳ ಸಂಧಿಯಲಿ ॥ ೨೭ ॥ ಬಿಡದೆ ಬೆಟ್ಟದ ರಲಗುಗಳ ನು । ಗ್ಗಡದ ಮರಿಯಾಳುಗಳು ಮಿಣಿಯಲಿ । ಝಡಿದ ರಿಂದರು ಬದಿಯ ಸಹಳದ ಲಳ್ಳೆಗುತ್ತಿನಲಿ ॥ ಕೋಡುಗಲ್ಲುಗಳಿಂದ ವದನದ । ದಾಡೆಗಳ ನುದ್ದಿದರು ಹೊಗೆದದು । ಕೂಡೆ ಕಾರ್ಬೊಗೆ ಕಿಚ್ಚು ನರಕೇಸರಿಯ ಮಸಕದಲಿ ॥ ೨೮ ॥ ಹುಂಕರಿಸಿ ರಕ್ಕಸರು ಹೊಕ್ಕರು । ನೆರೆದು ಮಂತ್ರಿಗಳಬ್ಬರಣೆಗಳ । ಲರಿವಿಶಾಪಟವಲ್ಲಿ ನಿದಿರಿನ ಲುಲಿವ ಬೊಬ್ಬೆಯಲಿ ॥ ನೊರಜುಗಳ ನೆಣಗೊಬ್ಬಿನಲಿ ಕುಲ । ಗಿರಿಯ ನಲುಗಾಡಿಸುವವೊಲು ಮು । ದ್ಗರ ಮುಸಲ ಪರಿಘಂಗಳಲಿ ನಡೆವಡರಿದರು ಖಳನ ॥ ೨೯ ॥ ಸೂಳಗಿವ ನಿಟ್ಟು ಸುರ ನಿಡುವ್ವೆ । ಹಾಳಿಯಲಿ ತರಗೆಲೆಯ ವೊಲು ಕೊ । ಕ್ಕಾಳು ಹಾರಿತು ಲಕ್ಕ ಸಂಖ್ಯೆಯ ಲಭ್ರಮಂಡಲಕೆ ॥ ಬೀಳುತಸುಗಳ ನೀಗಿದರು ಕೈ । ಕಾಲು ನಿಗುರಿನ ಲಳಿದರಕ್ಕಸ । ಜಾಲ ಕೆಣಿಕೆಯ ಕಾಣೆ ನೆಂತುಟೋ ನಿದ್ರೆ ರಕ್ಕಸನ ॥೩೦॥ ಏರಿ ತುಸುರಿಸಲರದ ವೇಣ ಸಿನ । ಭಾರ ನೆತ್ತಿಗೆ ಶೀನು ಸಿಡಿಲಾ । ಕಾರದಲಿ ಪೊರವಟ್ಟು ಪೊಡೆವದು ಪುರದ ನೆರವಿ ಗಳ ॥ ಮಾರಿ ರಕ್ಕಸ ನೆದ್ದಡಿವನೀ । ಪೂರ ತಿನ್ನದೆ ಮಾಣನೆಂದಾ । ಪೌರಜನ ಸರಕು ಗಳ ಸಂವರಿಸಿತು ಭೀತಿಯಲಿ ॥ ೩೧ ॥ ಬಿಗಿದ ನಿದ್ರೆಯ ವದನದಾಕಳಿ । ಕೆಗಳ ಸಂಟರ ಗಾಳಿ ನಗರದೊ । ಳಗಲದಲಿ ಬೀಸಿದುದು ಪವನೋತ್ಪಾತದಂದದಲಿ ॥ ಹೊಗಿಸಿದರು ಕುರಿ ಕೋಣಗಳ ಹಿಂ । ಡುಗಳ ಮೂಗಿನ ಲಾಳದಲಿ ಶಿಖಿ । ಸೆಗೆದು ಕೊಂಡುದು ಕುಂಭ ಕರ್ಣನ ಬಸುರ ಬಗೆರಗೆಯ ॥ ಅನಿತರಿನ್ಮೇಲುಕ್ಕು ಸೊಕ್ಕಿವ । ಘನ ಮತಂಗದ ಘಟೆಗಳಲಿ ಗಾ । ಢಣೆಯ ಬೊಬ್ಬೆಗಳುಬ್ಬಿನಲಿ ತುಳಿಸಿದರು ರಕ್ಕಸನ ॥ ತನುಜಕೇಳ್ ತಲೆಗೂದಲಲಿ ಕಾ । ಸನದ ಕಾಡಾನೆಗಳ ಪೋಲ್ಪಥ । ದನುವ ಕಾಣವೆ ಹೊಲಬು ಗೆಟ್ಟುದು ಹೇಳಲೇನೆಂದ ॥ ೩೨ ॥ ಎಡಹಿ ರೋಮಾವಳಿಯ ಕಾಳಿಯಲಿ । ಕೆಡದ ವಿಭಕ ಲ ಕೆಲವು ಸೀನಿಲಿ । ಸಿಡಿದ ಸಿಂಬಳದೊಳಗೆ ಸಿಕ್ಕಿದ ದಂತಿಕೇಶಗಳ ॥ ಅಡಿಯ ಲಣಗಿದ ನೊಲವಿನವೊಲಡಿ । ನಿಡುಕವಿಪ್ಪುದು ಕೆಲವಸತ್ವದ । ನುಡಿಯಿದೆನ್ನದಿರೆಲಿ ಕಕುಸ್ಥಜಸೂನು ಸೀನೆಂದ ॥೩೩॥ ಮೆಟ್ಟದರು ಸಬಳಗಳ ಕಿವಿಗಳ । ಲಿಟ್ಟಿಣೆಸಿ ಹನ್ನೆಗಳ ಗರಿಗಳ । ಕಟ್ಟಿ ಸೆಳೆಗಟ್ಟಿನಲಿ ಕಿವಿಗಳ ಕೊಂಗೆ ತೆಗೆದಂತೆ ॥ ನೆಟ್ಟ ನಾಯ್ತು ಸುರಂಗೆ ಸುಖ ಹೆ । ಬ್ಬೆಟ್ಟುಗಳಲಿದೆ ಖಳನ ಮೈಕರ । ಘಟನೆಯ ಮರ್ದನದ ಪೊಲು ಸುಖಿಸಿ ದನು ನಿದ್ರೆಯಲಿ ॥೩೪॥ ಹೊಗಿಸಿದರು ಕಾಡ್ಗೋಣ ಕಾಡೆಂ । ಮೆಗಳ ಹುಲಿಕರಡಿಗಳ ನಂಮಾ । ವೃಗಳತೋಳನ ಹಿಂಡುಗಳ ಹೆಮ್ಮರೆಯ ದೊಡ್ಡಗಳ ॥ ವಿಗಡ ರಕ್ಕಸ ಭಟರ ಮೂಗಿನ । ಹುಗಿಲಿನಲಿ ಹೊರವಂಟುದಿಲ್ಲವು । ಬಗೆಯ ದೆಂತುಟೋ ಖಳನ ನಿದ್ರೆಯ ಸುಖದ ಸಂಭ್ರಮವ ॥೩೫॥ ಭರದ ನಿದ್ರೆಯಲಾಕಳಿಸಿ ಮೈ । ಮುರಿದು ಕೈ ಕಾಲುಗಳ ನಿಗುರಿಸೆ । ಹರಣಗಳು ಹಾರಿದುವು ಬಾಯ್ದೆರೆ ದುಸುರುಗಾಳಿಯಲಿ । ನರಕ

ಕುಂಡದಲಿ ಲಿಕಿದಸಾಸಾ | ತ್ಮರ ಪೊಲಿಳಿದುದು ಕೂಡೆರಕ್ಕಸ | ನೆರವಿ ಸತ್ತ್ತುದು ನಿದ್ರೆ
ಗಲಹಡೊ ಳಸುರ ರಾಖಳನ ॥೩೭॥ ಕಡೆಯ ಲೊಂದೇಲಗ್ಗಯಲಿ ಪರೆ | ಹೊಡೆದ
ವಗಣಿತ ಬೊಬ್ಬೆಯುಬ್ಬರ | ಜಡಿಯ ಲುಕ್ಕಿನ ಡಾಡೆದಡಿಯಲಿ ಹೊಯ್ದರಾಖಳನ ॥
ನಿಡುರಭಸ ನೀಂಫಯ ಪನ್ನಗ | ನೊಡಲ ನಿದ್ರೆಯ ಹರಿಯನೆಬ್ಬಿಸಿ | ತಡಸಿ ದಗ್ಗದ
ಬೆದರಿ ಬರ್ಹಿರ್ಮುಖ ಪುರಂಗಳಲಿ ॥೩೮॥ ಏಳದವ ನಿದ್ರಾಂಗನೆಯ ಸಂ | ಮೇಳವದ
ಸುಖ ಸುರತ ನಿಂದಿರ | ಲೂಳಿಗದ ಮಂತ್ರಿಗಳು ಬಂದರು ಬಳಿಗೆ ದಶಮುಖನ ॥
ಕೇಳು ಜೀಯ ತವಾನುಜನ ನಿ | ದ್ರಾಲತಾಂಗಿಯ ಕದನದಲಿ ಕ | ಟ್ಟಾಳು ಮಡಿ
ದುದು ಮರಳಿ ಮಾತಿಲ್ಲೆಂದ ನಸುರಂಗೆ ॥೩೯॥ ಕರೆಯಿರೋ ಬೊಮ್ಮನನು ತಮ್ಮಗೆ |
ವರವ ಕೊಟ್ಟವ ತಾನು ತಾನೇ | ಪರಿಹರಿಸಲನುಜಾತ ಜಾಡ್ಯ ಸಮಗ್ರ ಸುಪ್ತಿಯನು ॥
ಕರೆಯೆ ಬೇಗನೆ ಹರಿದುರಾಕ್ಷಸ | ಚರರು ಚತುರ್ಮುಖ ಕರೆದ ಡವಂ | ದರಿಭಯಂಕರ
ಬಾಹುಬಲ ನಿದಿರಿನಲಿ ನಿಲಿಸಿದರು ॥೪೦॥ ಗಡಗಡನೆ ನಡುಗುತ ಯುಗದ್ವಯ | ವದನ
ಕೈಮುಗಿದೆನ್ನ ಕರೆಸಿದ | ಹದನದೇನೆನೆ ಹರವ ಸವೆ ನೀನೆಮ್ಮ ಬೆಸಗೊಂಬ ॥ ಹದನ
ಬೇರೇನಬ್ಜಿ ಸಾನುಜನ | ತುದಿಯಮಾತಿದು ಹೋಗು ಬೇಗನೆ | ನೆದೆಯಕೈಯಲಿ ನೇವ
ರಿಸು ತೈತಂದನವ ನೆಡೆಗೆ ॥೪೧॥ ಬಿಸಜ ಭವ ನಾಕುಂಭಕರ್ಣನ | ಮುಸುಡ ಮುಂದಕೆ
ಸುಳಿಯಲಮ್ಮದೆ | ಕುಸಿದ ಮೌಳಿಯ ಭರದ ಭಾರದ ಲಪರಭಾಗದಲಿ ॥ ನಸುನಗೆಯ
ಲೈತಂದು ಸುರವಿ | ದ್ವಿಷನ ಶಬ್ದಗ್ರಹಣದಲಿ ಮಂ | ತ್ರಿಸಿದು ವಾರಿಯ ನೆಂದನನು
ಪಮ ಕರಕಮಂಡಲವ ॥೪೨॥ ಬೆದರುತೆದ್ದ ನಿದಾರೊ ನಿದ್ರೆಯ | ನೊದೆದ ಪಾಪಿಗಳೆ
ನುತ ಪುರಜನ | ಕೆದರಿ ಹಾಯ್ದುದು ಕಂಡಮುಖದಲಿ ಕೋಟಿಸಂಖ್ಯೆಯಲಿ ॥ ಉದುಂ
ಖಳಕಂಣ್ದೆರೆಯ ಕಣ್ಗಳ | ಉದುರಿದುವು ಕಿಡಿ ಕೂಡೆಲಯಕಾ | ಲದ ಮಹಾಭೈರವನ
ವೊಲು ಮುಡಿದು ನಿಂದಿರ್ದ ॥೪೩॥ ವಿಳಲೊಲದುದು ಕಂಡಸಾಸಿರ | ಮೌಳಿಗಳ
ಸಾಸುಗಿಯ ಕರಿಗಳ | ಕಾಲುಕುಪ್ಪರಿಸಿದುದು ಕಕುಭಾವಳಿಯ ಕೂರುಮನ ॥ ಆಲಿತಳ
ಮುಗುಚಿದವು ಬಲುಕುಲ | ಶೈಲವದ ನಿನ್ನಾರುಬಲ್ಲರು | ಹೇಳದಿರು ಹದಿನಾಲ್ಕು
ಲೋಕದ ಭುವನದನೆಂದ ॥೪೪॥ ತಿಂಬೆನೋ ಬ್ರಹ್ಮಾಂಡವನು ಸ | ಪ್ತಾಂಬುಧಿಯ
ನೀಂಟುವೆನೊ ತಾ ನೀ | ಗೆಂಬ ಹಸಿವಿಗೆ ತೃಷೆಗೆ ಕಡೆಕಟ್ಟಿರ್ದ ದಿದಿರಿನಲಿ ॥ ಅಂಬ
ರವ ನಳ್ಳಿರಿವ ಮಾಂಸ ಕ | ದಂಬ ದರುಣ ಜಲೋದನಂಗಳ | ಬಣ್ಬೆ ಬೆಟ್ಟಗಳಿರ್ದ
ವಿಟ್ಟೆಡೆ ಯಾಡೆ ಭಕ್ಷ್ಯಗಳ ॥೪೫॥ ತರುಗಿ ದದ್ರಿಗಳಿರ್ದ ದಿದಿರಲಿ | ತರಿದ ಕುರಿ
ಕೋಣಗಳ ಗರಿಗಳ | ಹರಿದ ಹಕ್ಕಿಯ ರಾಸಿಯಿರ್ದವು ಕೋಟಿಸಂಖ್ಯೆಯಲಿ ॥ ಇರಿದ
ಕರುಳುಚರ್ಮಗಳ ಮರೆವ್ವ | ಮರದ ಜೀವದ ಮೃಗ ಕದಂಬದ | ತಿರುಗಲಿರ್ದವು ತಿನಿಸಿ
ತಿದಿರಿನ ಲಾ ನಿಶಾಚರನ ॥೪೬॥ ತರಿದ ಮಿಾನಿನ ತಾಳಿಸಿದ ವ | ಗ್ಗರಣೆಗಳ ಕುಸುಕಿ
ರಿದ ಹಂದಿಯ | ಗಿರಿಗಳಿರ್ದವು ಸಾಸುವೆಯ ಶಿಖರಣದ ಷಡುರಸದ ॥ ಪರಿಪರಿಯ
ಪರಿಮಳದ ಸಂಣೆಳೆ | ಗರುಳ ಹರುವಿಗಳಿರ್ದ ನಗಣಿತ | ಸರಸಿಗಳ ಸಾಲಿರ್ದ ವಾಜ್ಯ
ಕ್ಷೀರ ಮಧು ದಧಿಯ ॥೪೭॥ ತಾಳೆತೆಂ ಗೀಚಲು ಸುಧಾನ್ನರ | ಸಾಳೆ ಗುಡ ಶರ್ಕರೆ
ಸಮೇತ ಫ | ಲಾಳಿ ರಸ ಸಮ್ಮಿಶ್ರ ದಪಣ ಸುಧಾಫಿರಂಚಿತದ ॥ ಸಾಲ ಸರಸಿ ಗಳಿರ್ದ
ವಮಲ ಫ | ಲಾಳಿಗಳ ಹೇರಾಸಿ ಕುವಿಸಿದ | ಕೂಳಗಳ ಗುಗ್ಗರಿಯ ಪೇರ್ಗಿರಿ

ಮೆರೆದು ದಿದಿರಿನಲಿ ||೪೮|| ವಚಿಸ ಲಚ್ಚರಿಯಮನು ಲೋಕ | ಪ್ರಚುರ ನಲ್ಲ ಶಿರಿಯೊ ಳಜ ಭವ | ಶಚಿಯರಸ ಮುಖ್ಯರುಗಳೀ ಬೆಸಗೈವ ಸೇವಕರು || ಅಚಲ ಸಂಪದ ಗರಿದೆ ನೆರೆದುದು | ವಚನಮಾತ್ರಕೆ ಬಹುಪದಾರ್ಥದ | ರುಚಿತರವು ದ್ರವ್ಯಂಗಳಾದೋ ಗಣೆಗೆ ರಕ್ಕಸನ ||೪೯|| ನೋಡಿದನು ಮನವಣಿಯೆ ಬಿಡೆ ಬಿಡು | ತೋ ಡೆಲರ ನಕ್ಷಿ ಗಳ ಮಿಗೆ ಕೊಂ | ಡಾಡು ತಣ್ಣನ ನಂಘವಿಸಿದನು ತಿನಿಸಿ ನಸುರೇಂದ್ರ || ಜೋಡಿ ಸಿದ ರುಧಿರೋದನ ಗಿರಿ | ಕೂಡೆ ಪಂಚಪ್ರಾಣವಾಯುಗ | ಳಾಡಿಕೆಯಲೇ ಸವೆದ ವಿನ್ನುಣಿಸೆಂತೊ ರಕ್ಕಸನ ||೫೦|| ಕಾಣೆನಾ ಮಾಸಂದ ಮಹೇಂದ್ರ | ಶ್ರೇಣಿಗಳ ರುಧಿ ರದ ರಸಾಲ | ದ್ರೋಣಿಗಳ ನಾ ಭಕ್ಷ್ಯಗಳ ಮೃಗಗಣದ || ಪ್ರಾಣಹಿಂಸೆಯ ಕೋಳಿ ಕುರಿಗಳ | ಕೋಣಗಳ ತೆಗೆದಾಣಗಳ ತೆಗ | ದೋಣಿಗಳ ಮಧುರಾಮ್ರಫಲ ಭೋಜ್ಯಾದಿ ವಸ್ತುಗಳ ||೫೧|| ಅದು ದರ್ಭಗ್ರಾಸ ಖಳ ಸಂ | ಪಾದಿಸಿದ ಪರಿಕರದ ಲೆದ್ದುದು | ಬೀದಿಗಿ ಚ್ಚುದರದಲಿ ಬಳಿ ಕರೆಯಟ್ಟಿ ರಕ್ಕಸರ || ಹಾದಿಗರ ಸಂಘೈಸಿ ರಣದಲಿ | ಹೋದ ಜೀವವ ತರುಚರ ಕ್ರ | ವ್ಯಾದ ಸುಭಟರ ಹೆಣನ ಬನಬೆಯ ನೊಟ್ಟಿದರು ಮುಂದೆ ||೫೨|| ತಿಂದ ನವನೆಲ್ಲವನು ಕಿಚ್ಚುರಿ | ನಂದದಿರೆ ಬಳಿಕಣುಗ ಕೇಳ್ ಹಿಡಿ | ಹಂದಿಗಳ ನೂರೊಳಗಲದ ಹರಹರದ ಹಾರುವರ || ಮಂದಿರ ದೊಳು ಕೃತ್ತು ಕತ್ರೆಯ | ಸಂದಣಿಯ ನೂಕಿದರು ನಾಯಿಗ | ಳೊಂ ದುಳಿಯೆ ತಿನುತಿರ್ದನವ ಲಯ ಮೃತ್ಯು ವಂದದಲಿ ||೫೩|| ಸೆರೆವನೆಯ ಸಿಕ್ಕಿರ್ದ ಕಳ್ಳರ | ಸಿರಿದಿರಿದು ನೂಕಿದರು ಲಾಯದ | ಲರಸಿ ವೃದ್ಧ ಮಥೇಭ ಹಯ ರುಜೆಯಶ್ವ ಗಜ ಘಟೆಯ || ಅರಸಿ ಪುರದಲಿ ಸತ್ತ್ರಹೆಣಗಳ | ತುರುಕಿದರು ತಿನಿಸಿಂಗೆ ಹಸಿವೆಗೆ | ನೆರೆಯ ದಾದುದು ನೆನೆವ ನವ ಪುರಜನರ ಭಕ್ಷಣವ ||೫೪|| ಜಗದೊಳಾಹಾರದಲಿ ವಡಬನೆ | ಮಿಗಿಲು ಮಿಗಿಲಾ ವಡಬ ಗಿಂದವೆ | ಕೊಡನೆಮಗ ನವನಿಂದ ಮಿಗಿಲೀ ಕುಂಭಕರ್ಣಖಳ || ಮಗನ ಕೇ ಳನಿತ ರಲಿ ಗೂಳಿಯ | ದೆಗೆದು ದಾ ಪಟ್ಟಣದ ಜನ ಪೋ | ಲಗದೊಳಗೆ ದೂರಾಯ್ತು ರಾಕ್ಷಸ ಸಾರ್ವಭೌಮಕನ ||೫೫|| ಕರೆಸಿದನು ಖಳ ಬಳಿಕ ದೈತ್ಯರ | ಗುರುವ ಬಂದನು ಬೆಸನ ದೇನೆನೆ | ಪರಿಹರಿಸು ಪವನ ಪ್ರಿಯನ ಪಟುತರವ ಸಹ ಭವನ || ಉರುತರದ ಜತ ರಾಂತರವ ಹೋ | ಗಿರದೆ ಬೇಗನೆ ಬಂದು ತೃಪ್ತಿಯ | ಭರಿತ ಮಂತ್ರದ ಸಿದ್ಧಗುಳಿ ಗೆಯ ನಿತ್ತ ನಸುರಂಗೆ ||೫೬|| ತೇಗಿದನು ಘೋರ್ರನೆ ಧರಾತಳ | ಕೂಗಿಡಲು ಘುಮ್ಮೆಂದು ಬೊಮ್ಮನ | ಮೇಗಳಂಬರ ದನಿಗೊಡಲು ಖಳ ನಧಿಕ ತೃಪ್ತಿಯಲಿ || ಕೈಗಳನು ತೊಳೆ ದಮರನದಿಯಲಿ | ತೂಗಿದನು ಮಸ್ತಕವ ಗುರು ನಮ | ಗೀಗ ಸೇನೆ ತಪ್ಪದೆಂದುಕೆ ಪೊಗಳಿ ಭಾರ್ಗವನ ||೫೭|| ಪೂಸಿದರು ಸೇವಕರು ಪರಿಮಳ | ವಾಸಿಸಿದ ಶ್ರೀಗಂಧವನು ಮೇ | ಲೈಸಿ ದುತ್ತಮ ಪೂಗಳಲಿ ಪೊದಿಸಿದರು ರಕ್ಕಸನ || ವಾಸವನ ಪುರವರದ ದಿವ್ಯ ಸು | ವಾಸಿಸಿಗಳನೊಡಲಲಿ ತರುಡಕೆಯ | ರಾಸಿಗಳ ನೂಕಿದರು ಹಲವನು ಖಳನ ವದನದಲಿ ||೫೮|| ಬಿಳಿಯೆಲೆಯ ಹೇರುಗಳ ಬಲುಹೊ | ತ್ತಳದ ನಾ ರಜಸೀಚಪನ ಬಾ | ಯೊಳಗೆ ಸುರಿದರು ಲಕ್ಕಲೆಕ್ಕದ ಲರೆದ ಸುಣ್ಣಗಳ || ಹಲವ ಮುದ್ದೆಯ ಹಾಯ್ಕಿದರು ಪರಿಮಳದ ಪಚ್ಚೆಯ ಹೇರ ಮಾಲೆಯ | ನಿಳೆಯ ಗೊಂಡರು ಸುಳಿಸಿದರು ನಾರಿಯರ ಲಾರತಿಯ ||೫೯|| ಸಾರಿದರು ಮಂತ್ರಿಗಳು ಬಳಿ ಕರಿ | ಭೈರವನ ರಣ ಕೆಬ್ಬಿ

ಸಿದ ವಿ । ಸ್ತಾರವೆಲ್ಲವ ನರುಹಿದರು ಸೀತಾ ಮಹಾಸತಿಯ ॥ ಚೋರತನದಲಿ ತಂದ
ಲಂಕಾ । ನಾರಿ ಯರಸನ ರಣ ಪಲಾಯನ । ದಾರುಭಟೆ ಪರಿಯಂತವಾ ಕಲಿ ಕುಂಭ
ಕರ್ಣಂಗೆ ॥೬೦॥ ಅಕಟ ಕೆಡಿಸಿದ ನನ್ನ ವನಿತಾ । ಶಕುತಿಯಲಿ ಮನವಿಕ್ಕಿ ವ ಹಿಮ।
ಪ್ರಕರಣದ ಪೌಲಸ್ತ್ಯ ವಂಶದ ವಿಮಲ ವೈಭವದ ॥ ಮಕರಕೇತನ ನಸ್ತ್ರ ನಿರ್ಬಂ।
ಧಕವ ನಕಟಕಟೈರಿ ಕಾಮು । ಷ್ಕ್ರಕದ ಸಲ್ಲದ ಮತಿಯ ಮನದಲಿ ನೆನೆದನೇ
ಯೆಂದ ॥೬೧॥ ಐಸೆ ಮತ್ತೇನೆನುತ ಗತ ಸಂ। ತೋಷಿಸಿದನು ನಡೆತಂದ ನಿನ್ನುವಿ।
ನಾಶ ತಪ್ಪದು ತನಗೆನುತ ಸಭೆಗಾ ದಶಾನನನ ॥ ಅಸುರದ ಸಂಭ್ರಮದಲಾ ಲಂ।
ಕೇಶ ನಿದಿರ್ವಂ ದಪ್ಪಿ ನಿಜ ಭ । ದ್ರಾಸನಾರ್ಧದ ಲನುಜನನು ನಿಲಿಸಿದನು ಹರುಷ
ದಲಿ ॥೬೨॥ ಏನು ಕಳೆಗುಂದಿದೆ ವದನ ದು। ಮ್ಮಾನ ವಾರಿಂದಾಯ್ತು ನಿನ್ನಾ । ಸ್ಥಾನ
ಬಯಲಾಗಿದೆ ವಿಭೀಷಣನೋ ಮಹೋದರನೋ ॥ ಆನರಾಂತಕನೋ ಪ್ರಹಸ್ತನೋ।
ಸೇನೆಯೋ ಅತಿಕಾಯನೋ ಮದ । ದಾನೆ ದೇವಾಂತಕನೋ ದುಗುಡ ವಿದೇನು
ಹೇಳೆಂದ ॥೬೩॥ ಸುರಪನರುಹನೊ ಪಾದತಳ ದೆ। ಚ್ಚರಿಕೆಯನು ಯಮನಟ್ಟಿದಲ್ಲಿಗೆ।
ಹರಿಯನೋ ಧನಪಾಲ ಧನಬತ್ತಿದಡೆ ಮುಗುಳಸಿತು ॥ ಸುರಿಯನೋ ನೈರುತಿ ಮಖಾ
ಬ್ಜದ।ವರ ದುಕೂಲದ ಪಾವಡವ ಧರಿ । ಸಿರನೊ ವರಿಸರೊ ರಂಭೆಯರು ದುಗುಡವು
ಇದೇಕೆಂದ ॥೬೪॥ ಕೀಳು ಮೇಲಣ ಜಗದವರು ನಿ । ನ್ನಾಳು ಕೆಲಸದೊಳಿರರೊ ಪುನ
ರಪಿ। ಕೀಳುವರೆ ರಜತಾದ್ರಿ ಭಾರವಿಸಿದುದೋ ಪುಷ್ಪಕವು ॥ ಹೇಳಿದಲ್ಲಿಗೆ ತೆರಳದೋ
ತ್ರಿವ । ಪಾಲಿಸಿದ ಚಂದ್ರಾಸಮಿಳೆ ಬಲದೊಳುವಲರ್ಯೈದಿಸದೊ ದುಗುಡವಿದೇನು
ಹೇಳೆಂದ ॥೬೫॥ ನೆನಹುಗೊಡದಗನೊ ರುದ್ರ ಪುನರಪಿ। ಮನೆಯ ಬಾಗಿಲಗಜನಿರನೊ
ಬಂ । ದನುದಿನವು ರಾಜಾಂಗಣವ ಜೋ ಹರಿಸನೊ ಮರುತ ॥ ಅನಲ ಬಾಣಸ
ಗೈಯ್ಯನೋ ತಿಥಿ। ದಿನವನುಸುರನೊ ಸುರ ಗುರುವು ನೀ । ರನು ವರುಣನೈದಿಸನೋ
ದುಗುಡವಿದೇನು ಹೇಳೆಂದ ॥೬೬॥ ಬಳಿಕ ಶೂರ್ಪನಖಿಯ ಸುನಾಸಾ। ವಳನ ಕದನ
ಸ್ಥಳವಿಡಿದು ಮಾ। ತುಳನ ಮರಣವ ಜನಕಜಾತಾಹರಣ ವಿಸ್ತರವ ॥ ತಿಳುಹಿ ಮೇಲೆ
ಸಮುದ್ರಬಂಧನ। ದಳವ ನಹಿತನ ಲರುಹ ಸಮರದ। ಲಳಿ ದನೂಸ್ಥಿತಿಯ ನುಸುರಿದ
ನನುಜ ಗಸುರೇಂದ್ರ ॥೬೭॥ ಕೇಳಿದೆವು ನಾವಾಗ ಲೊಸಗೆಯ । ಹೇಳಲೇನದ ಸಾಕು
ಕೇಳುವ। ಖೂಳತನವದು ತಮ್ಮದೈಸಲೆ ಹೋಗಲಾವಮಾತು ॥ ಕೇಳಿದೈ ಯೆಲೆ ಯಣ್ಣ
ಪರವೆಂ। ಣಾಳಿಗವ ಲಿಂದ್ರಾದಿ ದೇವರು । ಕೋಳುಹೋದರು ಕಾಮನಾರಿಗೆ ಹಿತನು
ಹೇಳೆಂದ ॥ ೬೮ ॥ ಅರಿಯ ಬೇಡಿಂಗಿತದಿ ತನ್ನೊಳ । ಗರಿವು ದೊರೆಕೊಳದಿರ್ದ
ಡಾಪ್ತರು। ಮುರಿದು ನುಡಿವ ಸುನೀತಿಯನು ಕೈಕೊಂಬುದಿದು ವಿಹಿತ ॥ ಅರಿವತೊರೆ
ದಾಪ್ತರುಗಳಿಂದುಡ। ಮುರಿದು ದುರ್ಮಾರ್ಗದೊಳ ಗಡಿಯಿಡೆ। ಹರಿವಹುದು ತನ್ನ
ಸುವಿಗೆಲೆ ದಶಕಂಠ ಕೇಳೆಂದ ॥ ೬೯ ॥ ವೀರ ಕೇಳಾಚಾರಮುಖದಲಿ। ಸಾರುವುದು
ಸದ್ಧರ್ಮ ಧರ್ಮವ। ಸಾರಿಹುದು ಸತ್ಕೀರ್ತಿ ಕೀರ್ತ್ಯಂಗನೆಯ ಮೈವಳಿಯ ॥ ಬೇರು
ವರಿದಿಹು ದಧಿಕಸಿರಿ ಶಿಂ। ಗಾರಿ ಸಿಹಳಾ ಸಿರಿವಿಡಿದು ಜಯ। ನಾರಿ ನಮಗಾ ಮಾರ್ಗ
ದುರ್ಘಟ ವಾಯ್ತೆಲೇ ಯೆಂದ ॥೭೦॥ ಸುರರು ಸೇರರು ನಮಗೆ ಪರಮೇ। ಶ್ವರನ ಕೃಪೆ
ಸಾಮಾನ್ಯ ತನ್ನಯ। ವರವು ಪರವದರಿಂದ ದಿಗಧಿಪರಂಜೆ ಭೀತಿಯಲಿ ॥ ಕರವ ಮುಗಿ

ಪರು ಕಾರ್ಯವಾಸಿಗೆ । ನೆರವುಯಲ್ಲಿವೆ ಸರ್ವಜನ ವೆ । ಮಿತ್ರರವಿಗೊಪ್ಪುದು ಮುಪ್ಪಡಸಿತಸುರೇಂದ್ರ ಕುಲಕೆಂದ ।೨೧॥ ಕೆಡದ ಸಿರಿ ಸುರ ರುರಗ ನರರಿಂ । ದುಡುಗ ರಾಯುಷ್ಯ ಶುಕ್ರ ಸೂರ್ಯರ । ಹಿಡಿಗಡಿಪ ಭುಜಶೌರ್ಯ ವುಗ್ರತಪಃ ಪ್ರಭಾವ ದಲಿ ವೃಡನ ಮೆಚ್ಚಿಪ ಧೈರ್ಯಮುಂದಕೆ । ಕುಡಿವರಿವ ಸತ್ಕೀರ್ತಿ ಲೋಗರ । ಮಡದಿಗಳುಪಿದ ಕಥನದಿಂ ಬಯಲಾಯ್ತು ನಿನಗೆಂದ ॥೨೨॥ ಅಣ್ಣ ಕೇಳ್ ಹದಿನಾಲ್ಕು ಲಕ್ಷವು । ಕಣ್ಣ ಜೇಟದ ಸತಿಯರಿದೆ ಹೊಸ । ಹೆಣ್ಣಿದೆಲ್ಲಿಯು ದೀ ಕುಲವ ಮೂವಣ್ಣ ಮಾಡುವುದು ॥ ಬಣ್ಣಗೆಟ್ಟವಯದ ಹೀಲಿಯು । ಕಣ್ಣನಂತೆ ಸಹಸ್ರಯೋನಿಯು । ಬನ್ನಬಟ್ಟವ ರಿರಲು ನೋಡಿದುರಳುವುವರೆ ಯೆಂದ ॥೨೩॥ ಸೀತೆ ಯಮ್ಮಯು ಮಾತೆ ಭುವನ । ಖ್ಯಾತೆ ರಘುಪತಿಯು ಜನಪಿತ । ಮಿತಗಾತ್ರ ನದರಿಂ ಪಿತನ ಪಿತಾ ಮಹನು ನಮಗೆ ॥ ಈತನಲಿ ಛಲಬೇಡಯುದು ಪುರು । ಹೂತರಂತ ಲ್ಲವನಿಜಯು ಬಿಡು । ಪಾತಕಕೆ ಗುರಿಯಾಗಬೇಡೆಂದಗ್ರಜನ ಜರೆದ ॥೨೪॥ ಕೇಳದಾ ಮಾರೀಚ ವಚನವ । ಬೀಳುಕೊಡುವುದು ನಮಗಿದಗ್ಗದ । ಖೂಳತನವನು ಜನ ನಯೋಕ್ತಿಯು ನೀತಿಗಳ ವಕುದು ॥ ಖೂಳರೊಳಗಣ ಖೂಳತನ ಮೇ । ಲೂಳಿಗದ ಕಪಿವರನ ಕದನದ । ಮೌಳಿಯುಲಿ ಮತಿಗೆಡುವು ದಗ್ಗದ ಖೂಳತನವೆಂದ ।೨೫॥ ಆದರೆಯು ಕೇಳಣ್ಣ ರಣದಲಿ । ಹೋದವರು ಹೊಗಲಿ । ವಿವೇಕವ । ನಾದಂಸ ಬಲ್ಲರೆ ಮಹಾಯುವ ನಧಿಕ ಸಂಪದವ ॥ ಸಾಧಿಸುವದುಳ್ಳರೆ ನೃಪಾಲ ತ । ಳೋದರಿಯ ಕೊಂಡೊಯ್ವುದಿದು ನಯ । ದಾದಿಮತ ನಿನ್ನನುಮತವ ದೇನೆಂದು ಬೆಸಗೊಂಡ ॥೨೬॥ ಹಗೆಯ ಹೊಗಳುವ ನೊಬ್ಬಸಾಲದೆ । ಹಗಲಿರುಳು ಯಿಲೆ ತಮ್ಮ ತಮ್ಮನ । ಬಗೆಯ ಲರಿ ಬಿರುದಾವಳಿಯ ಸುಘ್ಘಡಿಸಿ ಪಾಳೆಯುವ ॥ ಹೋಗುವನೊ ಖಂಡೆಯದ ಮೊನೆಯುಲಿ । ಹೋಗುವನೋ ಹೊಗಲಂಜಿ ರಣದಲಿ । ನುಸುಳು ಗಂಡಿಯ ನಡೆಸುವವನೋ ಹೇಳು ನೀನೆಂದ ॥೨೭॥ ಕಾದಲಂಜಿದುದಿಲ್ಲ ಮುಕುತಿಯು । ಹಾದಿ ಮಾಜಿಕ್ಕಿಂದೆನ್ನೈಸೇ । ಮೇದಿನೀ ನಂದನೆಯ ನೀತಂದಂದು ಮೊದಲಾಗಿ ॥ ತೀರಿದ ವೆಮ್ಮಾಯುಷ್ಯ ವಿಧಿಬಲ । ದಾದಿ ಲಿಖಿತ ವಿದೀಗ ಡರಿಯೊಳು । ಕಾದಿಗೆಲುವ ಡಸಾಧ್ಯ ನಿನ್ನೊಳು ತಿಳಿದು ನೋಡೆಂದ ॥೨೮॥ ಎಲವೊ ನೀನೀ ಸಮರಭಾರವ । ಗೆಲುವ ನೆಂದೆಬ್ಬಿಸಲು ಬಳಿಕೀ । ಕಲಹ ಕಮ್ಮದೆ ನೀತಿಯಾಡುವೆ ಕಲಿತ ವಿದ್ಯೆಯನು ॥ ಬಲಿದ ನಿದ್ರಾಪ್ರಧಮನ ನಿದಿರಿಲಿ । ಸಿಲಿಸಿ ನುಡಿದುದೆ ತಪ್ಪು ಮುನ್ನಿನ । ಬಳಿಕೆಯಲಿ ಸತ್ತಂತೆ ಕೆಡೆ ಹೋಗೆನುತ ಗರ್ಜಿಸಿದ ॥೨೯॥ ಕಿಡಿಗಳುದುರಿದ ವಕ್ಷಿಯಲಿ ಕೌರಿಡಲು ಕುಡಿ ಮಿಸೆಯುಲಿ ದಾಡೆಯು । ಕಡೆಯು ಲುದಿಸಿತು ಕಿಚ್ಚು ಕಡು ಹೊಗರೇರಿದುದು ವದನ ॥ ಕಡುಹಿ ಕಾಹೇರಿ ರಿದನ ಕದನವು । ಕಡೆಯು ವಿಷದಂತವನು ತನುಘುಡು । ಘುಡಿಸಿ ಜರಿವಾಡಿದುದು ದಶವದನನ ಮಹಾಧ್ವನಿಗೆ ॥೩೦॥ ವೀಳೆಯುವ ತಾನೋಡು ತನ್ನಯ । ಕಾಳಗದ ಹೊಸಪರಿಯು ಜಗದೊಳ । ಗಾಳು ಗೆಲಸದಿ ಮಿಗಿಸಿದಗ್ಗದೆ ಯುರಸು ನೀಬಲ್ಲೆ ॥ ಕೂಲಿಯುಡ್ಡೈಸಿದಡೆ ಕೊಲುವೆನು । ಜಾಳುಗಳ ಹೇಳದಿರು ಮದನಗೆ । ಕೋಳುಹೋದರು ಕೆಡವರೆನೆ ಖತಿಯಾಯ್ತು ನಿನಗೆಂದ ॥೩೧॥ ಮರುಳಲಾ ಯಿಲೆ ತಮ್ಮ ಮದನನ । ಗರುಡಿಯುಲಿ ಗುರುವಾದವರು ನಾವ್ । ಮರಣಕಂಜಿವ ರವಿಳ ಜನ ನಗದಿಹುದೆ ನಾವ್ ಸೊದಲು ॥ ಹರಣದಾಯುವ ನೋಡ

ದಂಗೀ | ಕರಿಸುವುದೆ ಮತವೈಸಲೇ ಸಂ | ಗರಕೆ ಸಾಧನ ವೆಮಗೆ ನೀನಿವ ಕಳುಕ ಬೇಡೆಂದ ||೮೩|| ಕರಿಯ ನಿಟ್ಟಾಡದ ನಮಾರವನು | ಮರೆಯು ಹೋಗುವರೆ ತಮ್ಮ ಕೈಪ್ಪೈ | ವೆರಸಿ ಖಾಡಾಖಾಡಿಯಲಿ ಕಲಿಗಳಿಗೆ ಗುರುವೆನಿಸಿ || ಧುರದೊಳಳವುದೆ ಕೀರ್ತಿಯಿದನಿ | ರ್ಧರಿಸಿ ಕೊಂಡಿಹೆವಾವು ನಡೆ ನೀ | ನರವರಿಸದೆಂ ದಿತ್ತ ವನುಜಂ ಗಸುರಪೀಳಿಯುವ ||೮೪|| ತಪ್ಪದೆನುತಗ್ರಜನ ವಚನವ | ನೊಪ್ಪುಗೊಂಡೀತೆಂದ ಸಾಹವ | ದರ್ಪವನು ಕೇಳಾವರೆಲೆ ಲಂಕೇಶ ರಾಘವನ || ಒಪ್ಪುವಗ್ಗದ ಸೈನ್ಯ ಸಾಗರ | ದರ್ಪವನು ನೆರೆ ಕಡಿದು ಹಿಡಿತಂ | ದೊಪ್ಪಿಸುವೆ ನೀ ಕೀಶರಾಜನ ನಿನಗೆ ತಾನೆಂದ ||೮೫|| ಹುಚುವೆನು ರಘುರಾಮಚಂದ್ರಮ | ನೊಳು ಜಗತ್ರಯ ಮೆಚ್ಚೆ ಮೋಹಿಣ | ಕೆಲಸ ದೈವಾಧೀನ ನಿನ್ನಯ ಭಾಗ್ಯದಂತರವ || ಕಳುಹು ಕಾಳಗಕೆನುತ ನೀಲಾ | ಚಲನಿಭಾಂಗನು ನಿಂದಿದನು ನೆರೆ | ಮೊಳಗಿದವು ಭೇರಿಗಳು ರಣಯಾತ್ರಾ ಪರಿಗ್ರಹದ || ತರಿಸಿ ಬಳಿಕ ಸುರತ್ನ ಖಚಿತಾ | ಭರಣಗಳ ತೊಡಿಸಿದನು ತರಣಿಯ | ಕಿರಣ ಲಹರಿಯ ಲಳಿಯ ಶೋಭಿತ ಲಲಿತ ಕಾಂಚನದ || ಧರಿಸಿತೋ ಮಂದರವ ನಂಜನ | ಗಿರಿಯೆನಲು ಕಲಿ ಕುಂಭಕರ್ಣನ | ಶಿರದ ಲೊಪ್ಪಿತು ಮುಕುಟ ನಿಕಟ ದಿಶಾಂಗ ಜಗಝುಗಿಸಿ ||೮೬|| ಹೊದರ ಕಪ್ಪಿನ ಮುಗಿಲ ಮುಖದಲಿ | ಸುರಪ ಧನುವೆದ್ದಂತೆ ಮೆರೆದುದು | ಕೊರಳಲನುಪಮ ಪದಕ ವಜ್ರೈಯ ಪದ್ಮರಾಗಗಳ || ಸುರಗಿರಿಯ ಪೂರ್ವಾಪರದ ವಿ | ಸ್ತರದ ಜನನಾಪ್ತಮಯ ಸಮಯದ | ತರಣಿ ಶಶಿಮಂಡಲದ ವೊಲು ಕುಂಡಲಗಳೊಪ್ಪಿದುವು ||೮೭|| ಖಡೆಯ ಮೆರೆದುದು ಮೌಕ್ತಿಕದ ನಿಡು | ಪೊಡಗ ವಾಸುಗಿ ಸುತ್ತಿದಂಬುಧಿ | ತಡಿಯ ಗಿರಿಯಂದದಲಿ ಚರಣದಲಾ ನಿಶಾಚರವ || ಉಡಿಯ ಲೊಪ್ಪಿತು ಶೋಣಪಟ ಕಂ | ಪಡರ್ವ ಸಂಧ್ಯಾರಾಗ ಮೇಲು | ಪ್ಪಡಿಸುತಿರ್ದುದು ಬಿರುದ ನಮರರ ವಂದಿ ಸಂದೋಹ ||೮೮|| ಸರಿಯಿಡಲು ಕಲಿ ಕುಂಭಕರ್ಣಂ | ಗೆರಡ ಯುಗದಲಿ ಕಾಣೆ ನರನಿ | ರ್ಜರ ಭುಜಂಗನು ಭಟರೊಳಿನ್ನೀದವರ ಪಾಡೇನು || ಭರಿತ ಭಟರು ಗಳೇತರವರೆಲೆ | ತರುಣಕೇಳ್ ಕಲಿ ಕುಂಭಕರ್ಣಂ | ಗರಿ ಸರಿ ತತ್ಕುಂಭಕರ್ಣನೆ ನಿಜವಿದೀಗೆಂದ ||೮೯|| ಕಾಲ ನಡುಗಿದನಾ ನಿಶಾಚರ | ಕಾಲದಂಡವ ಕೊಳಲು ಮಿಗೆ ತಾ | ಶೂಲಿ ಮೃನುರೆಸಿದನು ಶೂಲವ ಧರಿಸೆ ಖಂಡೆಯವ || ಮೇಳವಿಸೆ ಮುಸುಕಿಕ್ಕಿದನು ಸುರ | ಪಾಲ ಸುರಗಿಯ ಕಟ್ಟಿ ಬಿಟ್ಟುದು | ಪಾಳೆಯವು ಪದ್ಮಜನ ಪಡಿ ಮುದ್ರಿಸಿತು ಸುರಕಟಕ || ಬೀಳುಕೊಂಡನು ಕರವ ನೊಂದನು | ಮೌಳಿಗಾನಿಸಿ ಮಾರುತಾಧ್ವದ | ಸಾಲ ಸಂದಣಿಯುಮರ ರೋಟವ ಹೇಳಲೇನದನು || ಕಾಲಭೈರವಗೆಂಟು ಮಡಿಯ ಕ | ರಾಳ ತೇಜೋಗರ್ವದಲಿ ರಾ | ಜಾಲಯವ ಹೊರವಂಟು ಬಂದನು ರಾಜಬೀದಿಯಲಿ || ||೯೦||

ಇಪ್ಪತ್ತಾರನೆಯ ಸಂಧಿ ಸಮಾಪ್ತಂ.

ಇಪ್ಪತ್ತೇಳನೆಯ ಸಂಧಿ.

ಸೂಚನೆ|| ಸಕಲ ಸೇನೆಯ ಝಾಡಿದು ಕಪಿನಾ | ಯಕರ ರಣದಲಿ ಹಿಡಿದು ಪೆರೆದನು | ಶಕುತಿಯಾನು ಕಲಿಕುಂಭಕರ್ಣನುದಾರ ಶೌರ್ಯದಲಿ ||

ಪದ್ಯ॥ ಕೇಳೆಲೈ ಕುಶ ಕುಂಭಕರ್ಣಸು। ವೀಳಯುವ ಕೊಂಡುಗ್ರತರ ಕರ। ವಾಳ ಕೈಯಿಂ ದಗ್ರಜಂ ಗಭಿನಮಿಸಿ ಕಾಳೆಗಕೆ॥ ಬೀಳುಕೊಂಡನು ಭೀಮಕುಲ ದಶ। ಮೌಳಿಯನು ಬಲು ಬಿರುದುಗಳ ಸಂ। ಬಾಳಿಗಳ ಸಂದಣಿಯು ಬಹುವಿಧವಾದ್ಯ ರಭಸದಲಿ ॥ ಉಸುರುಬಾರದು ರಾಕ್ಷಸನ ಕ। ರ್ಕಶದ ಕದನದ ಕಡುಹನೆಲನಾ! ಗಸಕೆ ಕೂಗಿಟ್ಟಾದಿ ಭೈರವನಗೆಂಟುಮುಡಿ ಯೆನಲು ॥ ಪಶುಪತಿ ಬ್ರಹ್ಮಾಮರಾಳಿ। ಪ್ರಸರ ಪೈಸರಿಸಲು ಫಣೀಶ್ವರ। ನ ಸುರು ತೆಗೆಬಗೆಯಾಗೆ ಬಂದನು ರಾಜಬೀದಿಯಲಿ ॥ ೨ ॥ ಅಚರಿಸಿದರು ಕಾಣುತಾ ರಜ। ನೀಚರನ ಸುರವಘುಗಳಭ್ರದ। ಖೇಚರಿಯರಿನ ನಡುಗಿ ಘನರಕ್ಷೋಘ್ನ ಸೂಕ್ತ್ರಕವ ॥ ವಾಚಿಸಿದನಂಬುಧಿಯು ಹರುಷದ। ವೀಚಿ ನಿಂದುದು ನಿಮಿಷದಲಿ ಸಂ। ಕೋಚಿಸಿದುವು ಮುಖಾರವಿಂದ ದಿಶಾಂಗನಾಜನದ ॥೩॥ ಬಂದುದವನ ವರೂಥ ಕಬ್ಬಿಣ। ದಿಂದ ರಚಿಸಿದ ಹೊರಜೆಗ ಟ್ಟ। ಕ್ಕಿಂದ ಕೀಲಿಸಿದಚ್ಚು ಲೋಹದ ಘಾಲಿ. ಮೇಲ್ಪವಗೆ ॥ ಗೊಂದಣಿಸಿ ಹದಿನೆಂಟು ಸಾವಿರ। ಮುಂದೆಳವ ಕಿಂಘಟಿಯ ಮೇಳವ। ದಿಂದಲೆಸೆವ ಪತಾಕೆ ಕನಕಧ್ವಜದ ರಚನೆಯಲಿ ॥ ೪ ॥ ಏರಿದನು ರಕ್ಕಸ ವರೂಥವ। ಚೀರಲಹಿ ಕೂರುಮರು ದಿಗ್ಗಜ। ಪೂರೆ ಮೊಳಕಾಲುಗಳ ಭೂತಳವಲಯ ದಂಬುನಿಧಿ। ತಾರೆಮಳಲನು ರಥದ ತೊಂಭ। ತ್ತಾರು ಘಾಲಿಯು ಚೀತ್ಕರಿಸಿ ಪುರ। ದಾರು ಬಾಗಿಲ ಹೊಡಗೆಡವುದೆಂದಿಳಿದು ನಡೆತಂದ ॥೫॥ ದಾಟಿವನು ಪುರದೇಳು ಸುತ್ತಿನ। ಕೋಟೆಗಳನೊಂದೊಂದು ಹೆಜ್ಜೆಯ। ಲೋಟ ವಿಕ್ಕಿತು ಕಂಡು ನಿಮ್ಮನರೇಂದ್ರ ಪರಿವಾರ ॥ ದೊಟವಿಳೆತಾಯ್ಮಳಲ ನಭಕೆ। ಮಿಾಟಲಂಬುಧಿ ಧೃವನ ಕರ್ಣದ। ಕೋಟರಂಗಳು ಕಿವುಡುಗೊಳೆ ಕುಬು ಬಿರಿವುತೈತಂದ ॥ ೬ ॥ ನೆರೆದುದಾಕ್ಷಣ ಬೊಮ್ಮರಕ್ಕಸ। ರೆರಡ.ಕೋಟಿ ಮಹಾತಿಶಯ ಭೀ। ಕರ ಕರಾಳ ಪ್ರಮುಖ ಶಾಕಿನಿ ಡಾಕಿನೀನಿವಹ ॥ ಧೀರರೆ ಪಾಯುವಧಾರು ರಕ್ಕಸ। ರರಸ ಹಳುಹಳು ಜೀಯ ಬಾಳೆಂ। ದೆರಡು ಕೈಗಳಲುಗ್ಗಡಿಸಲಸುರೇಂದ್ರ ನೈತಂದ ॥ ೭ ॥ ಝಳಪಿಸುವ ನಿಜಕರದ ಖಡುಗದ। ಬೆರಗು ಬೆದರಿಸಿತಿನನ ದಾಡೆಯ। ಹೊರಹು ಹೊದರೆದ್ದಂಜಿಸಿತು ಕಲ್ಪಾಂತ ಭೈರವನ ॥ ಕಲಿತ ಕಾಯದ ಕಾಳಿಕೆಯ ಕ। ತ್ತಲೆಯೊಳಿದ್ದುದು ಧರಣಿಧುರದ। ಗ್ಗಳದ ಗಮನಕೆ ಕಲಿಗಳೆಡೆಗೆಡದವು ಧರಾಧರದ ॥ ೮ ॥ ಅಂಜಿದನು ಸುಗ್ರೀವ ಪವನಧ। ನಂಜಯರ ಸುತರಳವಳಿದರಾ। ಕಂಜಸಂಭವ ಸುತ ಸುಷೇಣ ಗವಾಕ್ಷ ಮೊದಲಾದ ॥ ಅಂಜಪತಿ ಬಲ ರಾನನಾಬ್ಜಕೆ। ಮಂಜು ಮುಸುಕಿತು ಮಿಕ್ಕ ಸಮರಸ। ಮಂಜಸರ ಹೇಳದಿರು ಹೇಳುವೆ ನೇನ ನದ್ಭುತವ ॥ ೯ ॥ ನೋಡಿದನು ರಕ್ಕಸನ ಮರಳಿದು। ನೋಡಿದನು ನಿಜಬಲವ ನಗುತ। ಲ್ಲಾಡಿದನು ಮಸ್ತಕವ ಧೀರೋದಾತ್ತ ರಘುನಾಥ। ಕ್ರೋಡಿಸಿದ ಕಡೆಗಣ್ಣಿನಲಿ ನೃಪ। ನೋಡಿದನು ನಿಜಶರಣನನು ನಿ। ರ್ಭೀಡ ರಕ್ಕಸರಾಯನಿವನಾರೆಂದು ಬೆಸಗೊಂಡ ॥೧೦॥ ತಮ್ಮನಹ ನೆಲೆಜೀಯ ಚಿತ್ತೈ। ಸೆಮ್ಮ ಪೂರ್ವಜಗಿವ ಪುಲಸ್ತ್ಯನ। ಮೊಮ್ಮಗನು ಮಿಗೆ ವಿಶ್ರವಸುವಿಂಗಸುರ ಕೈಕಸೆಗೆ ॥ ಬೊಮ್ಮರಕ್ಕಸನಿವನು ಜವಗಿವ। ಗಮ್ಮುವವನಲ್ಲರಸ ನೋಡಿವ। ನುಮ್ಮಹವ ಸವನಿರವ ನವನಾಯತವ ನೀವೆಂದ ॥ ೧೧ ॥ ಕಾಲಗನಿತುಂಟೀ ಮಹೋಗ್ರಕ। ಪಾಲಿಗನಿತುಂಟೀ ತ್ರಿವಿಕ್ರಮ। ನೇಳಿಗೆಯ ವಿಕ್ರಮಕೆ ತಾನಿನಿತುಂಟೆ ಪಡಿಯಿಡಲು ॥ ಹೇಳಿವರು

ಮಿಕ್ಕಿಂದ್ರಚಂದ್ರರ । ತುಸಸತ್ತ್ವವ ನರಸ ಕೇಳಿವ । ನೂಳಿಗವ ಹೇಳಿದರೆ ಬೆಕ್ಕಸ ಬೆರಗು ನಿಮಗೆಂದ ॥ ೧೨ ॥ ಅಟ್ಟಿತಂದನು ಜಗವ ನಿವ ತಾ । ಹುಟ್ಟಿದೇಳ್ದಿವಸದಲಿ ಜಗವನು । ಗೆಟ್ಟುಬಾಯ್ ಮೊರೆಯಿಂದ ದೂರಿತು ಕಮಲ ಗರ್ಭಂಗೆ ॥ ಕಟ್ಟಿದನು ನಿದ್ರೆಯಲಿ ಬಳಿಕೀ । ಘಟ್ಟಿಯನ ನರೆವರುಷ ಕೇಳುವ । ಕಟ್ಟಳೆಯ ನಗ್ರಜನ ನೇಮದಲರಸ ಕೇಳೆಂದ ॥೧೩॥ ಎದ್ದದಿನದಲಿ ಮೂರುಲೋಕವ । ನುದ್ದಿ ನುಂಗುವ ಹಸಿವಿಗಿಂ ನಿವ । ನು ದ್ದುರುಟುತನ ಕಾರು ಸರಿ ವಿಲಯಾದಿ ದೇವರಲಿ ॥ ಎದ್ದ ಜಠರಾನಲನ ತೀವ್ರವ । ನದ್ದಿ ಸುವ ನೊಬ್ಬನೆ ಸಮರ್ಥನು । ಮದ್ದಿ ನಘಿ ಮಂತ್ರ್ಯೈಕ ವಟಕದ ಲಸುರ ಗುರುವೆಂದ ॥೧೪॥ ಧುರಕಿವನು ಕೈಗಟ್ಟಿ ನಿಂದರೆ । ತರಹರಿಸುವವರಾರು ನಿರ್ಜರ । ನರ ಭುಜಂಗಮ ಭಟರೊಳಿದು ತಾ ಸುಪ್ರಸಿದ್ಧ ಕಣಾ ॥ ಪರಿಕಿಸುವಡೊಂದಿದೆ ಪರಸ್ತ್ರೀ । ಹರಣ ದನುಬಂಧಿತೆಯ ನಂಗೀ । ಕರಿಸಿದುದ ರಿಂದೇನಹನೋ ನಾನರಿಯೆ ನಿದನೆಂದ ॥ ೧೫ ॥ ಬಲದ್ವ ಬಲುಹಿಲ್ಲಿದೆ ನಿಯುದ್ಧಕೆ । ನಿಲುತಹ ನೆಲೇಜೀಯ ನಮ್ಮಯ । ಬಲ ಫಲಾಯನ ದಾಯತವ ಲೇಸಾಗಿ ಚಿತ್ತೈಸು ॥ ನಿಲಲು ಕರಗಳ ನೆತ್ತಿ ಗಗನ । ಸ್ಥಳ ದಗಡಿಗರ ನೋಡು ಸಮರದ । ನೆಲೆ ಮೊಗದ ಮುನ್ನೀತಕಿನ್ನೇನಹುದೊ ನಮಗೆಂದ ॥೧೬॥ ಅವ ಧರಿಸು ರಾಜೇಂದ್ರ ನೋಡೆ । ಮ್ಮವನ ಹೆಗಲಿನ ಶೂಲ ವೋಲಗ । ದ ವರನದು ತಾ ನಂತಿರಲಿ ಶೂಲಾಗ್ರ ದಲಗಿನಲಿ ॥ ಜವನೆದೆಯ ಜಿಗಿನತ್ತರದೆ ವೈಶ್ರವಣ ನಾಮಿಷ ಬಂಧವದೆ ಮಿ । ಕ್ಕವರ ರಣದೋಸರಿಯ ತುಪ್ಪದ ಲೇಪವಿದೆ ಯೆಂದ ॥೧೭॥ ಕಾಡಿ ಗೆಲಲರಿದೀ ನೆರೆ ದಮರ । ಗೈದುಗಳ ಮರ್ಕಟರಿ ಗನುವರ । ಕೈದುಕೊಳ್ಳದು ನಿಮ್ಮಡಿಯ ನೀವಾದ ಡರಿಯಿರದ ॥ ಊದಿ ಬಿಸುಡುವ ನವನು ಮುಳಿದಡೆ । ಭೂದಿವ ಸ್ಥಾಯಿಗಳ ದೇವರ । ಪಾದದಾಣೆಮಾತು ತಪ್ಪಿದಡೆಂದ ನಸುರೇಂದ್ರ ॥೧೮॥ ಎಂಬನುಡಿ ಯಿಂದೊಳಗೆ ಕೀಶ ಕ । ದಂಬ ಪತಿ ಘುಡಿಘುಡಿಸಿ ಲಯ ನು । ಗ್ರಾಂಬಕನ ಹೊಳಹಿನಲಿ ನಿಂದಿದ ನಿದಿರಿನಲಿ ಖಳನ ॥ ಬೆಂಬಲಕೆ ಹನುಮಂತ ಶಿಖಿಸುತ । ಜಾಂಬವ ಪ್ರಮುಖ ಪ್ರಬಲ ಕುಪಿ । ತಾಂಬಕರು ಸಂವರಿಸಿ ಕೊಂಡರು ಸಕಲಗಿರಿತರುವ ॥ ೧೯ ॥ ಎತ್ತಿದದ್ರಿಕುಜೌಘದಲಿ ನೆಲ । ಕತ್ತರಿಸಲಂಬರಕೆ ದಿಕ್ತಟ । ಕೆತ್ತುಹಾರಲು ಕಾಲ್ಧೂಳಿಯ ಧೂಳಿ ಧ್ರುವಾಲಯವ ॥ ನೆತ್ತಿಗೇರಲು ಹಳಚಿದುವು ಬಲು । ಮೃತ್ಯುವನು ಕೆಣಕುವೊ ಪೊಲುಗ್ರ ನಿ । ಮಿತ್ತ ವೈದೋರಿದನು ನಖಿಳ ದಿಗಂತರಾಳದಲಿ ॥೨೦॥ ಉಸದಳಿಸಿ ಮಾರ್ನುಲಿವ ಮುತ್ತಿದ । ರಸಮನೀರನ ನದ್ರಿ ಕುಜ ಸಹಿ । ತುಸುರ ಗಾಳಿಯೊಳೂದಿ ಹಾರಿಸಿದನು ದಿಗಂತರಕೆ ॥ ಬೆಸುಗೆ ಕಳಚಿದ ಶಾಲ್ಮಲಿಯ ಘೂ । ಧರದ ವೋಲ್ ಬಯಲಾಯ್ತು ಬಲನಿ । ಪ್ಪಸರದಲಿ ಬೊಬ್ಬಿಡಲು ಬಿರಿದುದು ಗಿರಿ ಸುರೇಶ್ವರನ ॥೨೧॥ ಆರಲರ್ಬುದ ಕಪಿ ಭಟಾವಳಿ । ತೀರುತಿರ್ದುದ ದಜಾಂಡ ಖರ್ಪರ । ಪೋರಣಿಸುತಿರ್ದುದು ಧರಾತಳ ವತಳ ಪರಿಯಂತ ॥ ದಾರಿಗೊಡುತಿರ್ದುದು ಮಹೋದಧಿ । ಮೇರೆಗಳ ಮೀರಿದುದು ರಕ್ಕಸ ನಾರುಭಟೆ ಗೀ ಕದನ ಕಡುಹುಗಳೆಂತುಟೋ ಯೆಂದ ॥೨೨॥ ಹೊಕ್ಕನೈಯಲಿ ಕೋಟಿಸಂಖ್ಯೆಯ । ಸಿಕ್ಕಿದನು ನಾಲಿಗೆಯ ಸಿಗುರಿನ । ನೆಕ್ಕಿದುವು ಶತಕೋಟಿ ಸಂಖ್ಯೆಯ ನೊರಸಿಕ್ಕೆಗಳಲಿ ॥ ಮುಕ್ಕಿದನು ನೈರ್ಬುದ ಮಹಾದ್ಭುತ । ಲೆಕ್ಕವತಿ ಬಲ ವಾನರರ ಬಿ ।

ದ್ದಿಕ್ಕಿದ ಪೊಲಾಯ್ತು ಸುಮನ ವಿಲಯದ ಮೃತ್ಯುದೇವತೆಗೆ ॥೨೩॥ ಗಜನ ಪೋಹರ ಮುರಿದು ನೀಲಾ । ತ್ಮಜನ ದಳ ಸುಗ್ಗಾಡು ದಂಭೋ । ಜ ಜನ ಸುತನೊಡ್ಡೊಡೆದು ನೆಲಗತವಾಯ್ತು ವಾರಿಜನ ॥ ನಿಜಪತಾಕಿನಿ ಪವನ ಮಿತ್ರಾ । ತ್ಮಜನ ಪಡೆ ಪಡ ಲಿಟ್ಟು ದುಳಿದವ । ರಜಿಗಿಜಿಯು ರಣ ನಾಟಕವ ಬಣ್ಣಿಸುವ ಡರಿದೆಂದ ॥೨೪॥ ಜವನ ಕೊಲೆಗೆಲಸವೊ ಮಹಾಭೈ। ರವನ ಕಾಲಾಟವೊ ಕಪರ್ದಿಯ। ಕಪಿತೆಯೋ ಕದಕುಂಭ ಕರ್ಣನ ಸಮರ ಸಂಭ್ರಮವೊ ॥ ದಿವಿಜಪುರತುಂಬಿತು ಸರೋರುಹ । ಭವನ ಪುರಿ ಹೊರಗೇರಿಗಟ್ಟಿತು । ಜವನ ನಗರದವಾರಿ ಕತ್ತಿದು ಕೇಳಲೇನೆಂದ ॥೨೫॥ ಸಾಯಲಾ ಸುಗ್ರೀವ ತನ್ನಯ । ದಾಯಿಗನ ಕೊಂದಿತ್ತ ರಾಜ್ಯ । ಶ್ರೀಯು ಬಿಡಿಯಕೆ ಬಿಡಲಿ ಹರ ಣವ ರಾಮ ನಿಜಪತಿಯು ॥ ಮಾಯೆಯತಿಶಯ ಪಾಶಬಂಧಕೆ । ಸಾಯಲೆಮಗೇಸಿದ್ದು ದೆನುತವೆ । ಹೋಯಿತಲ್ಲಿಯದಲ್ಲಿ ವಿ ಕ್ಕಿನ ಮರ್ಕಟವ್ರಾತ ॥೨೬॥ ಹೆಸರೆನಿಸಿ ತಗ್ಗದ ಮಹಾಭಟ । ರಸುವ ಕೈಯಲಿ ಹಿಡಿದು ಹೊಕ್ಕರು । ವಸುಮತೀವಲ್ಲಭನ ಮರೆಯನು ಮರೆಯ ಮಾತೇನು ॥ ಶ್ವಸನಸುತ ಸುಗ್ರೀವ ವಿಪಿನೌ । ಕಸರು ಸೇನಾನಾಥ ವಾಲಿಜ। ರಸದಳಿಸಿದರು ನಿಜಪತಿಯ ಸೇವಾಭಿಮಾನದಲಿ ॥೨೭॥ ಬಲಸಲಿಸಿ ದಾಯತಿಕೆಯಲಿ ಗಜ । ನಳ ಸುಷೇಣ ಗವಾಕ್ಷ ರಮ ಶತ । ಬಲಿ ರುಮಣ್ವ ಜ್ಯೋತಿಮುಖ ದಧಿಮುಖ ಭಟಾಳಿಗಳು ॥ ಕಲುಮರದ ಕೋಳಾಹಳದ ಕೈ । ಚಳಕ ಗಾರರು ಕವಿದು ಹಳಚಿದ । ರಳೆ ಬಲುಕೆ ಕಲಿಕುಂಭಕರ್ಣ ನಿಶಾಚರೇಶ್ವರನ ॥೨೮॥ ಸಿಲುಕಿತಾ ರಕ್ಕಸನ ದೋರ್ವಾ। ವಳಿಗಳಲಿ ಕುಲಶೈಲ ದಾಡೆಯ । ಬಳಿಯ ಬದ್ಧ ಮಹಾದ್ರಿ ಹುಡಿಗೆದರಿಂದವು ದೆಸೆ ದೆಸೆಗೆ ॥ ಉಳಿವ ಪರಿಘದ ಲಣವ ಶೈಲಾ । ವಳಿಯ ಉದಿಸಿದ ಕಿಚ್ಚು ಗಗನ । ಸ್ಥಳವ ಚುಂಬಿಸುತಿರ್ದುದದ್ಭುತವಾಯ್ತು ರಣರಭಸ ॥೨೯॥ ಶಿಡಿಲು ಹೊಯ್ದರೆ ಸಿಗುರು ದೋರದ । ಕಡುಹಿ ನುಕ್ಕಿನ ಶೈಲ ಮುಗ್ಗಿಯ । ಪಡಿಗೆ ಧಳ್ಳಿಸುವ್ರದೆ ವಿವೇಕ ವಿಹೀನರ್ಕೈ ಯೆನುತ ॥ ಕೊಡಹಿದನು ಪರಿಘದಲಿ ಗದೆಯಲಿ । ಖಡುಗದಲಿ ಪ್ರವೀಣನ ಸಂಬಳ । ದಡಪುಕಾರರ ಕಾರಿಸಿದ ನರುಣಾಂಬು ವಾಹಿನಿಯ ॥೩೦॥ ಮತ್ತೆ ಮುರ ದುದು ಸೇನೆ ರವಿ ತಲೆ । ಯೊತ್ತಿ ಮುರಿವ ತಮೌಷಧಂ ತಿರ । ಲೊತ್ತಿ ಬರಿಸಿದ ನಸುರ ನರಸುತ ರಾಘವೇಶ್ವರನ ॥ ಉತ್ತಮನಲಾ ಬಂಧುಕೃತ್ಯದ । ಹತ್ತಿಗೆಯ ಲಿನ ನೊನು ತರುಬಿದ । ನಿತ್ತ ತಿರುಗಲು ಖೂಳ ಖಳಯೆನುತುಗ್ರರೋಷದಲಿ ॥೩೧॥ ಅಳುಕದಿರಿರೋ ಸ್ವರ್ಗವಿಟ್ಬರ । ಕಳತ್ರೆಗಿದೆ ಕೈಸೋಂಕಿನಲಿ ಸುರ । ಲಲನೆಯರ ಕಡು ಕಠಿನ ಪೀನ ಪಯೋಧರಾಳಿಗಳ ॥ ಬಳಿಯಲಿದೆ ಸುರ ಕುಜಸುಧಾರಸ । ಕಳಶ ವೈಹಿಕ ದಿಂದ ಪರವತ । ಸುಲಭ ಸಾವಿಗೆ ಕಡದ ವಿಹಪರ ವಿಲ್ಲ ನಿಮಗೆಂದ ॥೩೨॥ ಎಂಬ ಜಾಂಬವ ವಚನ ಕೊಡ ನೊಡ । ಸಿಂಬು ಗೊಂಡುದು ಸೇನೆ ವಿಜಯನಿ । ತಂಬಿನಿಯ ನಿಲಯವನುಭಯ ಭಾರಣಿಗಳನು ಬಿಸುಟು ॥ ಅಂಬುನಿಧಿಯಲಿಮುಸಗಿ ಲಯದೋಳ । ಗಂಬರವ ನಡಸರಂತೆ ಕಪಿ ನಿಕು । ರುಂಬ ಹಳಚಿತು ಮತ್ತೆ ಮರ ಗಿರಿಗಳಲಿ ರಕ್ಕಸನ ॥೩೩॥ ಅಳವಿಗಳು ಕದೆ ಕವಿವ ಕಪಿಗಳ । ಕಳವಳಿಯ ಮಾಡಿದನು ಮೀರಿದು । ಹಳಚಿ ಹೊಂಚುವ ಹೊಂತಕಾರಿ ವನೌಕಸಾಧಿಪರ ॥ ಬಳಿದು ಬಾಯೊಳಗಡಕಿದನು ಕಲು । ವಳೆಯ ಕೋಳಾಹಳದ ಕಪಿಗಳ । ತಳಪಟವ ಮಾಡಿದನು ದುಗುಡದ ಕುಂಭ

ಕರ್ಣಖಳ ||೩೪|| ಜೇರೆ ನೂತೇನದ್ರಿ ಗುಂಗುರಿ | ನೂರಿಕೆ ವೈಯುಳು ಕುವುದೆ ಮು೦|
ಚೇರಿದರೆ ನಡುಗುವುದೆ ನಡುಹಗಲೇರಿದಿನಬಿಂಬ || ತೂರಿದನು ತೂಳಿದನು ತುಳಿ
ದನು || ಬೀರಿದನು ಬಿಸುಟನು ಸುರಾವನಿ | ಗೇರಿಸದ ನರಿಬಲ ವನೌಕಸ ರಾಜಸೈನಿ
ಕವ ||೩೫|| ಮೊಗೆ ಮೊಗೆದು ಮುಕ್ಕಿದನು ಘಾಟದ | ವಿಗಡ ಕಪಿನಾಯಕರ ಕಿವಿಮೂ
ಗುಗಳ ರಂಧ್ರಂಗಳ ಗುದದ್ವಾರದಲಿ ವದನದಲಿ || ಚಿಗಿಚಿಗಿದು ಹೊರವಡುತಲಿರ್ದು
ದು | ಮೊಗೆ ಮೊಗೆದು ರಾಟಾಳದುದಕದ | ಬಗೆಯ ಪೊಲು ಬಣ್ಣಿಸುವೆ ನೇನದು
ಭುತವ ರಣಾಂಗಸ ||೩೬| ಅಡಸಿ ಖಳ ನುಂಗಿದ ಭಟಾಳಿಗೆ | ಕಡೆಯು ದಾವುದು ರಕ್ಕ
ಸನ ಹ | ಲ್ಲಡಿಯ ಲಜಿಗಿಜಿಯಾದ ಕಪಿಗಳಿಗಾವುದೈ ಸೀಮೆ || ಮಡವು ಮೊಳಕಾ
ಲಂಘ್ರಿಮೊಳಕೈ | ಮುಡುಹು ಮುಷ್ಟಿಪ್ರಹರಣದ ಲಡೆ | ಗೆಡವ ವಾನರ ಗಣದ ಗಣ
ನೆಯು ನರಿವನಾರೆಂದ ||೩೭|| ಚೆಲ್ಲಿದನು ಮೊಗೆ ಮೊಗೆದು ಚಾಪಟ | ಮಲ್ಲರನು ಮಹ
ದಂಬುಧಿಗೆ ಮಿಗೆ | ಬಲ್ಲಿದರ ಬಿಸುಟನು ಬಲಾಂತರ ನಗರದುಪವನಕೆ || ಘಲ್ಲಿಸಿವ
ನುಬ್ಬಿರಿದು ತಪ್ಪದ | ತೆಲ್ಲಟಿಯ ತವಕಿಗರ ತೋಟಿಯ | ತಲ್ಲಣಿಗ ನರೆಯಟ್ಟಿ ಸದೆ
ದನು ಸಕಲವಾನರರ ||೩೮|| ಹೇಳಲೇನದು ಕುರಿಯ ಹಿಂಡಿನ | ತೋಳನೋ ಕರಿ
ಘಟೆಯ ಕದನಕ | ರಾಳಸಿಂಹವೊ ಶಿಖರಿಗಳ ಹಿಂಡುಗಳ ಹೆಬ್ಬುಲಿಯೊ || ಮೇಳವಿಸಿ
ದಹಿಕುಲದ ಕೋಲೆ ಗು | ಬ್ಬಾಳಿಸಿದ ಖಗಪತಿಯೊ ತಾನನೆ | ತೂಳಿದನು ರಕ್ಕಸನ
ಮರ್ಕಟರಾಯ ಸೈನಿಕವ ||೩೯|| ಅರಿಸಿದನು ಮಾರ್ವಸೆವ ಕಪಿಗಳ | ನುರುಬಿ ಮನು
ಕುಲ ರಾಜಮೌಳಿಯ | ನರಸಿದನು ಹೊಕ್ಕೊಕ್ಕಲಿಕ್ಕಿದ ಭಟರ ನುರೆಮುರಿದು || ಎರೆ
ಯಳನು ಹೋಗಾಡಿ ಬವರದ | ಬರಿಯ ಲಂಬಾಸೆಯಲಿ ಕಪಿಗಳ | ತರುಬಿ ತೋಟಿಗೆ
ತರುಬಿಸಿದ ನರನಾಥ ನಾರೆನುತ ||೪೦|| ಮುಟ್ಟವಿಸಿದನು ರಾಮುನನು ಜಗ | ಜಟ್ಟಿ
ರಕ್ಕಸರಾಜ ಕಾರಿಯ | ಕೆಟ್ಟುದಕಟೆಂ ದಳ್ಳು ಜಾರವ ಸುರರ ಕಳಕಳವ || ತೊಟ್ಟನ
ನಿಲಜ ಕೇಳು ಕೋಪದ | ದಿಟ್ಟೆಯಲಿ ಕಿಡಿಗೆದರಿ ಹರಿತಂ | ದಿಟ್ಟಣಿಸಿ ಬೊಬ್ಬಿರಿದು
ತಿವಿದನು ತಿಣುಕಲಸುರೇಂದ್ರ ||೪೧|| ಪ್ರಳಯಕಾಲದ ಕುಲಿಶ ಹತಿಯಲಿ | ತಲೆ
ಗೊಡಹು ವಮರಾದ್ರಿಯ ಪೊಲೊಲ | ದೊಲದು ಕಣ್ಣಿಗೆ ಕವಿವ ಕತ್ತಲೆಯಿಂದ ಕಳ
ವಳಿಸಿ || ಚಲಿಸಿ ಚಟುಳ ಕ್ರಮನು ವಿಕ್ರಮ | ತಿಲಕನನು ನಿಡು ಶೂಲದಗ್ರದ |
ಲೊಲದು ತಿವಿದನು ಹೊಗಳೆ ಬಳಿಯ ಸಮಸ್ತ ಭೂತಗಣ ||೪೨|| ಅಣದು ಶೂಲವ
ನನಿಲ ಸುತ ಸುರ | ಗಣವು ಮರ್ಝಭಾಪೆನಲು ಖಳ ಡೆಂ | ಢಣಿಸಲೆರಗಿದ ನುರುಬೆ
ಗೋಣಿನ ರಕುತ ವದನದಲಿ || ಗಣಿಸುವನೆ ಕಪಿ ಕರಹತಿಯುಲಾ | ಕ್ಷಣ ನಿಶಾಚರ
ರಾಯ ನುರು ಡೆಂ | ಢಣಿಸ ಲಪ್ಪಳಿಸಿದನು ಪರಿಘದ ಲಂಜನಾ ಸುತನ ||೪೩|| ಎದ್ದು
ಕಡುಗೋಪದಲಿ ಕೈಗಳ | ಸುದ್ದಿ ಕುಂಭಶ್ರವಣ ವಳೆಯ | ಗುದ್ದಿದನು ಘುಮ್ಮೆನಲು
ನಭನಲಿಯಲು ಸುರವ್ರಾತ || ಅದ್ದಿ ತುಪ್ಪದ ಲುಂಡ ಕೂಳಿನ | ಮುದ್ದೆಗಳು ಹೊರ
ಪಾಯ್ದು ನೆಲದಲಿ | ಬಿದ್ದವೈ ಬಾಯಿಂದ ಜರ್ಜರ್ಮುಖ ಕುಲಾಂತಕನ ||೪೪||
ಮುರಿದು ನೋಡಿದ ನಹುದೊ ಕಪಿಗಳ | ನೆರವಿ ಗಗ್ಗಳನಹೆ ಸುರೇಂದ್ರನ | ಹಿರಿಯ
ಮಗ ಗೆಣೆಯಹೆ ಪರಾಕ್ರಮ ಪೌರುಷಾಂಗದಲಿ || ತಿರುಗಿ ನೀನಿನ್ನೊಮ್ಮೆ ನಮ್ಮಯ |
ಧುರಕೆ ನಿಂದರೆ ವೀರನಹೆ ಯೆಂ | ದರಿಭಯಂಕರ ಭಟನ ತಿವಿದನು ಬಡಪ ಲಾಯ

ಧದ ॥೪೫॥ ಹಾರಿಬಿದ್ದನು ಹನುಮ ರಣಕ್ಕೆ । ನೂರು ಕೋಲಳತೆಯಲಿ ಕೈಯ್ಯೊಡ । ನೇರಿ ತಿವಿದನು ತೀವ್ರದಲಿ ತಾರೇಯ ನುಬ್ಬಿರಿದು ॥ ಸೀರು ಗಾಯದ ಲಬ್ಬಿರಿದು ಕೈ । ಯ್ಯಾರಿ ಕೈಯ್ಯೊಡನೆದ್ದು ಬನವನು । ಸೂರೆಗೊಂಡವ ನೆಡೆಗೆ ಖಳ ತಿವಿದುಬ್ಬಿ ಬೊಬ್ಬಿರಿದ ॥೪೬॥ ಫಡಫಡೆನು ತಾರ್ಭಟಿಸಿ ಭುಜವನು । ಹೊಡೆದು ಹೊದರೆದ್ದ ಹರುಷದಲುಗ್ಗಡದ ಮುಷ್ಟಿಯ ಲೆರಗಿದನು ಕೈಯೊಡನೆ ಕಲಿನೀಲ ॥ ಬುಡುಬುಡಿಸಿ ಬಿಸಿರಕುತ ಮೂಗಿನ । ಲೊಡೆದು ಹಾಯ್ದುದು ಗಾಯವದ ಕೈ । ವಿಡಿಪ ದವರಂಬ್ಬರ ಸಮೀಪಕೆ ಕಳುಹಿದನು ಕಪಿಯ ॥೪೭॥ ಕೆಣಕಿ ನೋಡುವೆನೆನುತ ಜಾಂಬವ । ರಣಲ ಹಲುಗಳ ಮಸೆದು ಹೊಂಕೃತಿ । ರಣಿತದಲಿ ರಣವೀರ ನುರವನು ತಿವಿದು ಕೆಲಸಿಡಿಯೆ॥ ತೃಣಕೆ ಲೆಕ್ಕಿಸ ದಸುರ ನವನನು । ಸೊಣದು ಮುರಿಯಲು ತಿವಿದ ನಾಯುಧ । ದಣಿಸಿನಲಿ ಸರಿಯಾದುದವರಾಹವದ ಸೌರಂಭ ॥೪೮॥ ಮೊಗವ ತಿರುಹುತ ಮೆಲ್ಲಮೆಲ್ಲನೆ । ಜಗುಳಿದರು ಜಾಂಬವರು ಮಿಕ್ಕಿನ । ವಿಗಡ ವೀರ ಸುಷೇಣ ವೃಂದ ದ್ವಿವಿದ ಮುರ್ಮುಖರು ॥ ತೆಗೆದು ನಿಂದನು ತಾಗಿ ಸೂರ್ಯನ । ಮಗನ ಮೇಲಾಪ್ರಾಜಿ ಬಳಿಕಾ । ಳುಗಳ ದೇವರ ದೇವ ನೊದಗಿದ ಸಸಮ ಸಮರದಲಿ ॥೪೯॥ ಬೆಳೆದ ನವನಂದದಲಿ ಗಿರಿ ಗಿರಿ । ಹಳಚುವಂತಿರೆ ಪಂಘ ಗಿರಿ ಶಿರ । ಗಳಲಿ ಹೊಯ್ದಾಡಿದರು ಹೊಗಳೆ ಸುರಾಸುರ ವ್ರಾತ ॥ ಬಲದೊಳಗ್ಗದ ವಾಲಿ ವಾಲಿಯ । ಬಳಿಯ ಬಂದ ಭಟಾಗ್ರಣಿ ಯಲಾ । ಕಲಹದತಿಶಯ ದಂಗ ಲೇಸೆನುತೊಲದ ನವಯುವವ ॥೫೦॥ ಕೇಳೆಲವೊ ಕಪಿರಾಜನೆಂಬುದ । ಕೇಳತಿಲ್ಲವಲಾ ಮಹಾಹವ । ಕೇಳಿಯಲಿ ಕೈಗುಂದಿ ಸೋಲುವ ಭಟನೆ ತಾನೆನುತ ॥ ತೋಳ ನೆಗಹಿನ ಮುಷ್ಟಿಯಲಿ ದಂ । ಭೋಳಿರವದಲಿ ಶಿಡಿದು ತಿವಿದನು । ಬೀಳೆನುತ ಬೊಬ್ಬಿರಿದು ಬರ್ಹಿರ್ಮುಖ ಕುಲಾಂತಕನ ॥೫೧॥ ಹಾರಿಬಿದ್ದನು ನೆಲಕೆ ಖಳ ತಲೆ । ಯೂರಿ ತಳಕದ್ದಿದುದು ನಲಸಿ । ನ್ಸೂರು ವರೆ ಪುರುಷ ಪ್ರಮಾಣವ ನಾ ರಸಾತಳಕೆ ॥ ಬೇರೆ ಮಾತೇಕಣುಗಕೇಳ್ ಖತಿ । ಯೇರಿ ದಂದಿನ ಕಾಲರುದ್ರನ । ನೂರು ಮಡಿಯೆನೆ ವೀರ ರಕ್ಕಸರಾಯ ಹಲು ಮೊರೆದ ॥೫೨॥ ವಿಳುತೆತ್ತಿದ ರುದ್ರಭಕ್ತ ಕ । ರಾಳ ಶಕ್ತಿಯ ನುರಿ ಛಡಾಳಿಸಿ । ತೂಳಿ ತಂಬರ ತಳವ ಘುಗು ಘುಗು ನಿನಾದದಲಿ॥ ಪಾಳಿ ಗಿಡಗಳ ಗಹಣದಲಿ । ಗೋಮಾಳಿ ನೆಗೆದುದು ಸುರ ವಿಮಾನ ಗಳೋಳಿ ಮುರಿದುದು ಸುರಿದುದುದಕವ ನಭ್ರವಾಹಿನಿಯು ॥೫೩॥ ಎಲವೊ ಕಪಿ ಕೇಳೀ ಮಹಾಯುಧ । ದಲಗಿ ಗಳಿಯದೆ ಸಮರದಲಿ ಸೀನುಳಿದೋಯದರೆ ಮೂಗು ಹೋದವನೈಸೆ ತಾನೆನುತ ॥ ಸಿಲುಕಿ ಲಾಗಿಸು ತಿಟ್ಟ ಸಿಟ್ಟಿಯ । ಬಲುಗಡಿಯ ಕಟ್ಟಿರಕಿ ತಿಬ್ಬರಿಯೊಳಗೆ ಗಬ್ಬರಿಸಿದ ಪ್ರೌಲಿನ ಹಾಯ್ತೆನುತ ಬಸವಳಿದ ॥೫೪॥ ಏಸಿದೆಚ್ಚರಿಕೆಯೊ ಸಮೀರನ । ಸೂನುವಿನ ಸುಯಿದಾನವೆಂತುಟೊ । ಹಾನಿ ಹೊಗದಂತಿನ ತನೂಜಗೆ ಬಹ ಮಹಾಯುಧವ ॥ ಆನೆ ಕಬ್ಬಿನ ಕೋಲ ಕರದಿಂ । ಪಾನುವಂತಿರೆ ಪುಟನೆಗೆದು ಹಿಡಿ । ದಾ ನಿಶಾಟನ ನಿಡಲು ಹೊಣಿಸಿದನು ಸಟೋಪದಲಿ ॥೫೫॥ ಹರಿಶರಣನೈತಂದು ಹನುಮನ । ಕರವ ಪಿಡಿದಿಂತೆಂದ ನಿದರಲಿ ಮರಳಿ ಮಗುಳೀ ರಕ್ಕಸನ ನಿಟ್ಟವನ ತಲೆ ನೆಲಕೆ ॥ ಜರಿದು ಬೀಳುವುದೆಂಬುದಿದು ತಾ । ವರ ವಿವಂಗೆಲೆ ಹನುಮ ಕೇಳೆನೆ । ತಿರುಗಿ ಮೊಳಕಾಲಿನಲಿ ಮುರಿದಿಟ್ಟನು ಮಹೋದಧಿಗೆ ॥೫೬॥ ಹಾರವಿಸಿ ಹನುಮಂತ

ದೇವಗೆ | ವಾರಿಜಪ್ರಿಯ ಕಳುಹಿದನು ಶೃತಿ | ಸಾರಮಯ ಸುಮನೋಹರದ ಮಣಿ ಖಚಿತ ಕುಂಡಲವ || ತೀರಿತೀ ಮಹದಾಯುಧವು ಕಪಿ | ವೀರನಾರಿದನೆ ಯೆನುತ ಹರಿ ತಂ | ದಾರಣಾಂಗಣ ಭೀಮಹಿಡಿದನು ಭಾನುನಂದನನ |೫೭|| ಇವನಲೇ ಕಪಿರಾಯ ನಿವನಿಂ | ದಿವರು ಬವರಕೆ ಬಂದರಾಮಿಂ | ದಿವನ ಕೊಲ್ಲದೆ ಕೊಂಡು ಹೋದರೆ ಹೋಹುದೀನೆರೆವ || ಪ್ಲವಗಬಲ ಬಳಿಕುಳಿವರಿಬ್ಬರೆ | ಸವರಿ ಹಾಯ್ಕಿದ ಬಡಿಗೆಯ ವೊಲೀ | ಹವಣ ತಪ್ಪಿದೆನುತ್ತ ಕಂಕುಳ ಲವುಚಿದನು ಕಪಿಯ ||೫೮|| ಆಹಹ ವಾನರ ವಂಶ ವಾರಿಜ | ಮಿಹಿರ ಸಿಕ್ಕಿದನ್ಯೆ ಕಪೋವಿ | ಗ್ರಹಕೆ ಹಾ ಯೆನುತರಸ ನೀಕ್ಷಿಸಿದನು ಸಮೀರಜನ || ಸಹಭವನ ನವರಿಬ್ಬರಾ ಹವ | ವಿಹಿತ ಶರಸಂಧಾನ ಮುಷ್ಟಿಯ| ಪ್ರಹರಣದಲೇ ಸಂಧಿಸಿದರಾ ರಾವಣಾನುಜನ ||೫೯|| ಬೇರೆ ಬವರದ ಬಲುಮೊಗಳ ಕೈ | ದೋರದಿರಿ ವಿಜಯಾಂಗನೆಗೆ ತಾ | ನೀರ ನಿಂದಿನ ದಿನಕೆ ಸಿಕ್ಕಿದ ನೆಂದು ಬಗೆಯದಿರಿ || ತೋರಿಸುವೆ ನರೆ ಗಳಿಗೆಯಲಿ ನಗೆ | ಗಾರರಿಗೆ ಹಗರಣದ ಸನ್ನೆಯ | ಸಾರಿಕೆ ಯಿದೀಗೆಂದು ಸಂತೈಸಿದನು ಸುಗ್ರೀವ ||೬೦|| ಗೆಲಿದೆ ನಿಂದಿನ ರಣವ ಹಿಡಿದೆನು | ಬಲಿಮುಖಾಧೀಶ್ವರನ ಮೇಲಣ | ಕೆಲಸ ನಾಳಿನದೆನುತ ಹೊಕ್ಕನು ಹೊಳಲ ವಹಿಲದಲಿ || ಮೊಳಗಿದುವು ನಿಸ್ಸಾಳ ಗುಡಿಗಳು | ತಳಿತ ವಗಲಕೆ ಕಳಶ ಕನ್ನಡಿ | ಗಳ ವಿಡಾಯಿಯ ವಾಮನಯನೆಯ ರೈದ ರೊಗ್ಗಿನಲಿ ||೬೧|| ಎದಿರು ಗೊಂಡರು ಬಹಳ ಸೌರಂ | ಭದಲಿ ಸುರಭಿ ಲತಾಂತ ಜಾಲದ | ಕೆದರಿದರು ಗಂಧೋದಕದ ಪೂರ್ಣಾಭಿಷೇಕವಲಿ || ಮದದ ವಾರುಣಿ ಯರಸ ಮಧು ಪಾ | ನಡಸುಖಾವಸ್ಥೆಯಲಿ ಮರೆದನು | ಕವನದಲಿ ಕಪಿಸಾರ್ವಭೌಮನ ಕುಂಭಕರ್ಣ ಖಳ ||೬೨|| ಸಡಿಲವಾದುದು ಕಂಕುಳಿನ ಕೈ | ಯ್ಯಡೆ ಕಪೀಂದ್ರನ ಸೊಯ್ಯನಸುರನ | ಹೆಡಕಿನಲಿ ಕೈಯೂರಿ ಕುಳ್ಳಿದ ನೊತ್ತಿ ಹೆಗಲಿನಲಿ || ಕೇಡಗಿರಿ ನೆರಡೆರಡ ಕೈಯಲಿ | ಝಡಿದ ನಾಸ್ಯವ ನಾಸ್ಯದಂತದ | ಲಡಸಿ ಹಾರಿದ ನಭ್ರತಳ ಕಂಭೋದ ನಾದದಲಿ ||೬೩|| ಜೆದರಿತಾ ಕಲಿ ಕುಂಭಕರ್ಣನ | ನಿದಿರು ಗೊಂಬಬಲೆಯರು ಪುರಜನ | ಕೆದರಿದುದು ಹನುಮಂತನೆಂದೇ ಬಗೆದು ಭೀತಿಯಲಿ || ನಸುಳು ನಗೆಗಳಲಿವರು ಮೂವರು | ಪುದಿದ ಸಂತೋಷದಲಿ ರಾಮನ | ಪದಪಯೋಜವ ಸಾರಿದರು ಕಪಿಕಟಕ ನಲಿದಾಡಿ ||೬೪||

ಇಪ್ಪತ್ತೇಳನೆಯ ಸಂಧಿ ಸಮಾಪ್ತಂ.

ಇಪ್ಪತ್ತೆಂಟನೆಯ ಸಂಧಿ.

ಸೂಚನೆ|| ರಾಯರಿಪು ಜರ್ಝರ ನಿರ್ಜರ | ರಾಯ ನರಹರಿ ಯಕ್ಷರಕ್ಷಸ | ರಾಯ ಭುಜಬಲ ಕುಂಭಕರ್ಣನ ಗೆಲಿದನಾ ರಾಮ ||

ಪದ್ಯ|| ಕೇಳಿದೈ ಕಾಕುಸ್ಥ ಧರಣೀ | ಪಾಲ ಪುತ್ರರು ಪುಣ್ಯವೀಧಿಯ | ನಾಳು ಮೇಳಂತರಿಸಿದುದು ಬಳಿಕಾ ದಶಾನನ || ಓಲಗಕೆ ಸರಸರಿಸಿ ಜಯದು | ಬ್ಬಾಳಿಗನು ನಡೆತಂದು ಗೋಲಾಂ | ಗೂಲ ರಾಯನ ತಂದೆನೆನುತಡರಿದನು ಭುಜಯುಗವ ||೧|| ಕಾಣದಾ ಕಪಿರಾಜ ವಂಶದ | ಜಾಣನನು ಬೆರಗಿಟ್ಟು ಗಳಿತ | ಘ್ರಾಣವಲಿ ಮೋಹಿ

ದನು ಮುಮ್ಮೃಳಿಯಲಿ ಕರಾಂಜಳಿಯ ॥ ಶೋಣಿತದ ಬಿಡುವನಿಯ ಸೆರದಾ । ಕ್ಷೀಣಪರಿತೋಷಿತನು ಸಡಿಲಿದ । ನಾಣಿನಲಿ ತಿರುಗಿದನು ಘರ್ರನೆ ಘನವಿಷಾದದಲಿ ॥೨॥ ತಡದು ಗೆಲಿದವರಿಲ್ಲ ನಾಚಿಕೆ । ಗೆಡಿಸಿ ದಿವರಲಿ ನೆಲೆಯ ಕೈಕೈ । ವಿಡಿದುದಿಲ್ಲಪಜಯ ನಿತಂಬಿನಿ ನಮ್ಮ ನಾಜಿಯಲಿ ॥ ಸುಡು ಬದುಕ ಸಾಕಿನ್ನು ಹರಣವ । ಹಿಡಿವುದನುಚಿತವೆಂದು ಕದನದ । ಕಡುಹಿನಲಿ ಕಲಿ ಕುಂಭಕರ್ಣನು ಬಂದನಾ ಹವಕೆ ॥೩॥ ನಾಚಿದನು ಲಂಕಾಧಿನಾಥ ವಿ । ಲೋಚನಾಳಿಯ ಬೆರಗಿನಲಿ ಬಳಿ । ಕಾಜಿಯೊಳ ಭಟಕೋಟಿ ಕಂಠಗತಾಭಿವಿಸ್ಮಿತನ ॥ ವೀಚಿಗಳ ವಿಹರಣದ ಭಟಸಂ । ಕೋಚದಿಂದಿರಲಿತ್ತ ಮೂಗಿನ । ಮೋಚಿಕೆಯ ಭಟ ಖತಿಯ ಭರದಲಿ ಒಂದನಾ ಹವಕೆ ॥೪॥ ಕರೆದು ತಂದರು ಕುಂಭಕರ್ಣನ । ಧುರದ ಜಯವನು ಹೇಳಿ ನಿದ್ರಾ । ಭರದ ಭಾರಿಯ ಶೂರ್ಪನಖಿಯನು ಧೂರ್ತವಟುನಿಕರ ॥ ಸರಸರಿಸಿ ನಡೆತಂದು ಕಂಡಳು । ಸರಸದಲಿ ಸಹಭವನ ಸಂಕಟ । ಸರಿಯ ಮಾಡಿದೆ ವಿಧಿಯೆನುತ ಮರುಗಿದಳು ಖೇದದಲಿ ॥ ೫ ॥ ನಗೆಯ ನದುಳಿನಲಲ್ಲಿಗಲ್ಲಿಗೆ । ನಗರದೊಳಗಣ ನೋಟಕರು ಮೂ । ಗುಗಳ ಮೋಚನ ರಕ್ಕಸಿಯ ರಕ್ಕಸನ ಸೀಕ್ಷಿಸುತ ॥ ಮುಗಿದುದಿಂದಿನ ವಿಬ್ಬರಿಗೆ ಸಂ । ಯುಗದೊಳಿಂಕಿವರಣ್ಣಗೇನನು । ಬಗೆವರೋ ಬಲಿಮುಖರೆನುತ ಗುಹಿಲಿಕ್ಕಿತಖಿಳಜನ ॥ ೬ ॥ ಅಂಘವಿಸಿದನು ಬಳಿಕ ರಿಪುಗಳ । ನುಂಗುವತಿಬಲ ದಾಯತದ ಲುರಿ । ರಂಗಳಲಿ ನಡೆತಂದರಸದರವ ನಗಿತಾ ಹವಕೆ ॥ ಸಂಗರಕೆ ಬಳಿಕಸುರಪತಿ ಚತು । ರಂಗವನು ಮೇಳೈಸಿ ಸಹಜಾ । ತಂಗೆ ಕಳುಹಿದ ನೇಳುನೂರಕ್ಷೋಹಿಣೀ ಬಲವ ॥ ೭ ॥ ಕಳುಹಿದನು ಮಯ ವಿಶ್ವಕರ್ಮನ । ಕೆಲಸದಲಿ ಕೈಗೈದ ರಥವನು । ಬಳಿಕ ಬಲುಗೈದುಗಳ ಭಂಡಿಯ ಕೋಟಿ ಸಂಖ್ಯೆಯಲಿ॥ ಇಳಿದನವ ದುರ್ಗವನು ಭರ್ಗದ । ಬಳಿಯ ಭಾಳದ ಕಿಚ್ಚಿನವೊಲಾ । ಬಳಿಯ ಬಲುಗಿಡಿಯಂತೆ ಬಲವೈತಂದುದೊಗ್ಗಿನಲಿ ॥ ೮ ॥ ತೇರನೇರಿದ ನಸುರ ನುಕ್ಕಿನ । ನೂರುಗಾಲಿಯ ಸುರವದಂತಿಯ । ಭಾರಣೆಯ ಗಡಿಘಟೆಗಳಾರ್ನೂರರ ಗಡಾವಣೆಯ ॥ ಆಲಿಬೊಬ್ಬಿಡು ತೆಡಬಲದ ರಣ । ಭೈರವನ ಭುಲ್ಲವಣೆಯಲಿ ಮುಂ । ಗಾರ ಮುಗಿಲಂಬರದವೊಲು ನಡೆತಂದನಾ ಹವಕೆ ॥೯॥ ಬೆದರಿ ಹಾಯ್ದುದು ಘೋರ ರಕ್ಕಸ । ನದುಭುತಾಕಾರದ ಮಹಾಭಯ । ಕಧಟ ಭಟರನು ದುಮ್ಮುದುಡುಕೆನುತಿರ್ದುದಲ್ಲಲ್ಲಿ ॥ ವದನ ವಿಕಸಿತವಾಯ್ತು ರೋಮದ । ಹೊದರು ಹರೆಯೇರಿದುದು ವಿಜಯಾ । ಭ್ಯುದಯ ತಲೆದೋರಿದುವು ರಾಮುಂಗರಿಯ ಬರವಿನಲಿ ॥೧೦॥ ಬೆರಗಿದೇನೈ ಮೊದಲು ಬಂದ । ಬ್ಬರಿನ ರಕ್ಕಸನಂತೆ ನೋಟಕೆ । ತೆರಹುಗೊಡುತದೆ ಚಿತ್ತದಲಿ ಯಿವನಲ್ಲವೇ ನೋಡು॥ ಹರುಕು ಮೂಗಿನಲಿವನವೊಲು ಮೂ ॥ ಕೊರೆಯುರುಂಟೇ ನಿಮ್ಮ ರಾವಣ । ನುರುವ ಬಲದಲಿ ಭಾರಿ ಭಟನಿವನಾರು ಹೇಳೆಂದ ॥ ೧೧ ॥ ಎನಲು ಕಿರುನಗೆಯಿಂದ ರವಿನಂ । ದನನ ಕೆಲಸವಿದೆಂದು ಮಾರುತ । ತನುಜ ಕರಪಲ್ಲವದ ಸಂಜ್ಞೆಯಲರುಹಿದನ್ನ ನೃಪಗೆ ॥ ಅನುಜ ಲಕ್ಷ್ಮಣದೇವ ಬೆರಳಿನ । ಕೊನೆಯಲೀಪರಿ ತಪ್ಪದೆಂದನು । ಮನದೊಳಗೆ ನಾಚಿದನು ಮರೆಹೊಕ್ಕಸುರಪತಿ ಬಳಿಕ ॥೧೨॥ ಶರಣ ನಾಳ್ದನನುಡಿಗೆ ಮಾರುತ್ತರವ ನೀಯದೆ ನಾಚಿ ಶಿರವನು । ಧರೆಗೆ ಬಾಗಿಲು ಭಾವಕರ ಸರ್ವಜ್ಞನದ ನರಿದು ॥ ಘುರಕೆ ನಿಂದನು ಲಕ್ಷ್ಮಣಾಂಕನ । ಕರೆಮ ಕೈಸನ್ನೆಯಲಿ ಕರುಣಾ । ಕರನು ಬಳಿಕೀ

ಮಾತ ನುಡಿದನು ಮಧುರ ವಚನದಲಿ ॥ ೧೩ ॥ ತಮ್ಮ ಬಾ ಬಲಜಿದರುತದೆ ಬಲು ।
ಗುಮ್ಮನಿವನನು ಕಂಡು ರಣವಿದು । ನಮ್ಮ ಭಾಗಕೆ ಬರಲಿ ಬಳಲಿಸಬೇಡ ಕಪಿಭಟರ ॥
ಚಿಮ್ಮಿ ಕೆಲಕಡೆ ಗರಿಭಟನ ರಣ । ವೆಮ್ಮದರಿ ವಾಹಿಸಿಯು ಕದನದಿ । ಕೆಮ್ಮುಗೆಯ
ಕಡುಹೀಗ ನಿನ್ನದು ಬೇಗ ಹೋಗೆಂದ ॥ ೧೪ ॥ ಹನುಮ ಬಾ ನೀ ಹೋಗು ಲಕ್ಷ್ಮಣ ।
ನನುವರಕೆ ಬೆಂಬಲಕೆ ರವಿನಂ । ದನ ವಿಭೀಷಣರಿಂಲಿ ನಮ್ಮಾ ಯಂಗರಕ್ಷಣೆಗೆ ॥
ಅನುಜನಾಜ್ಞಿಯ ಲೇಸು ಹೊಲ್ಲಹ । ನೆನಹು ನಿನ್ನದೆಸುತ್ತ ನಿಜಭೃ । ತ್ಯನನು
ಬೀಳ್ಕೊಟ್ಟರಿಭಟನ ಸಂಗರಕೆ ನಿಂದಿರ್ದ ॥ ೧೫ ॥ ಅಳವಡಿಕೆಯಲಿ ಪೀತ ಪಟಸ ।
ನ್ನಿಳಿತ ಬದ್ದುಗೆ ಧಾರವನು ಬಿಗಿ । ದೋಳಜೆಡೆಗಳ ಸೊಬ್ಬಳಿಸಿ ಬಿಗುಹಿಕ್ಕಿ ಬಾಣ
ಧಿಯ ॥ ಹಳುಕುಗಳ ನಾರೈದು ದನುವನು । ನಿಲಿಸಿ ಮೊಳಕಾಲಿಂದ ಬಾಗಿಸಿ । ಬಿಲು
ವಿರುವ ಬಲುಗೊಲೆಗೆ ಸಂಧಿಸಿ ನಿಂದನಾ ರಾಮ ॥೧೬॥ ಬೆರಳ ತುದಿಯಲಿ ಭಾರಿಚಾಪವ।
ತಿರುಪಲುಳಿವಡ ದುಭಯ ಭಾಗವ । ಕರತಳದಿ ನೇವರಿಸಿ ನಿಜದಾಲೀಢಗತಿಗಳಲಿ ॥
ಬರಸೆಳೆದು ಸಿಂಜಿನಿಯ ಬೊಮ್ಮನ । ಪುರಿಗೆ ಧಸಿದೋರಿ ಝೇವಡೆ । ದರಸನುರೆ ಬೊಬ್ಬಿ
ರಿದು ಕರೆದನು ಸರಳಲರಿಭಟನ ॥೧೭॥ ಪೊಡವಿಪನ ಬಿಲುದನಿಗೆ ವಿಲಯದ । ಸಿಡಿಲು
ಹೊಡೆದಂತಾಯ್ತು ರಕ್ಕಸ । ನೊಡಲು ಮಾಯಾರಾಮ ರಣಗಲಿಭೀಮ ಭಾಪೆನುತ ॥
ಸಿಡಿದ ಕಿವಿಮೂಗುಗಳ ಭಟನು । ಗ್ಗಡದ ರಥವನು ನೂಕಿ ಬಾಣವ । ತುಡುಕಿ ಬಾಣಾ
ಸನಕೆ ಸಂಧಿಸಿ ರಾಮಗಿಂತೆಂದ ॥ ೧೮ ॥ ರಾಮನೇ ನೀನೀಗ ಜನದಲಿ । ಭಾಮಿನಿಯ
ತೋಗಾಡಿದಾತನು । ಭೀಮ ಬಲನಹೆ ಲೇಸು ಮನದಾಯತಿಕೆ ಛಲವದದ ॥ ನೀವೆ
ಯೊಳ್ಳಿತು ಜಗದೊಳಧಿಕ ಸ । ನಾಮ ನೀ ಕಟ್ಟಭಿಮಾನಕೆ । ವ್ಯೈಮರಸಿ ಬಾಳುವರ
ಬಳಿಯುವನಲ್ಲ ನೀನೆಂದ ॥ ೧೯ ॥ ಬವರ ಮುಖದಲಿ ಸೋತು ಭೋಗದ । ಲವನಿಯರ
ನಮ್ಮಸುರ ವಂಶೋ । ದ್ಭವಗೆ ಕೊಟ್ಟನು ರಕ್ಷಣೆಯ ಸುರನರ ಭ ಜಂಗಮರು ॥ ನವ
ಸಹಸ್ರವದಂತಿರಲಿ ಸಾಕವರ ಮಾತೇಕೆಮ್ಮ ರಣದು । ತ್ಸವದ ರಚನಾಗಮವ ನೋಡೆಂ
ದಸುರ ಘರ್ಜಿಸಿದ ॥೨೦॥ ನೀವು ರಕ್ಕಸರಾಯ ಕುಲದವ । ರಾವು ರಕ್ಕಸರಲ್ಲ ನಿಮಗಾ।
ದೇವಕುಲ ವಂಜುವದು ದೇವರಿಗಂಜುವೆವು ನಾವು ॥ ಆವುದಭ್ಯಂತರವು ನಿಮಗೆ ಮ ।
ರಾವುದನುಚಿತಕಾರ್ಯವದ ಸಂ । ಭಾವಿಸ್ಯೆ ನೀನೆನುತ ಹೂಡಿದ ನಸಮ ಮಾರ್ಗದಲಿ ॥
ಹೊಡಲಸ್ತ್ರವ ನಸ್ತ್ರದಿದಿರಲಿ । ಮೂಡಿ ಮಂಚದ ಮುನ್ನ ಬಾಣದ । ಜೋಡ ತೊಡಿಸಿದ
ನತುಳನಸುರ ವಿಭಾಂಡ ರಾಮಂಗೆ ॥ ಆಡಲೇನಾ ರಾಘವನ ಕೈ । ಗಾಢಣಿಕೆಯ ಕಣೆ
ಕತ್ತಲೆಯ ಕ । ಟ್ಟಾಡಿಕೆಯ ಖಳ ನವಯುವವ ಬಿಗಿದುಗಿದ ವಗಲದಲಿ ॥ ೨೧ ॥ ದೇವ
ಲೋಳಗಗ್ಗಳನಲಾ ರಾ । ಜೀವನಯನನು ಯಾತುಧಾನ । ಕುಲಾವಳಿಯ ಲತಿಬಲನಲಾ
ಮಧ್ಯಮ ಪುಲಸ್ತ್ಯಸುತ ॥ ಆವ ಗುರುಲಘು ಚಿತ್ರದಸ್ತ್ರ ಕ । ಲಾವಿದರೋ ಕದನೈಕ
ವಿಶ್ರುತ । ಕೋವಿದರೋ ಕೋದಂಡ ಮಹಿಮೆಯೊಳಣುಗ ಕೇಳೆಂದ ॥ ೨೨ ॥ ಬಿಡುವ
ಹೊಡುವ ಸರಳೆಸುವ ಸರ । ಳಿಡೆದೆರಹಿಗಿಲ್ಲವಧಿ ಸುಭಟರ । ತಡೆವ ತವಕಿಸುವಂಬಿನಂ
ಬುಧಿಗಾವುದೈ ಸೀಮೆ ॥ ಕಡುಮನದ ಕೋಪಗಳ ಬಲಿದಿ । ಟ್ಟಡೆಯ ಮುಷ್ಟಿಯ ದೃಷ್ಟಿ
ವಾಳದ । ಸಡಿಫಡದ ಸೌರಂಭರೆಚ್ಚಾಡಿದರು ಸರಿಸದಲಿ ॥ ೨೪ ॥ ಧನುಗಳೋ ಸುರ
ಧನುಗಳೋ ನಿಡು । ದನಿಗಳೋ ನಿರ್ಘಾಣ ನಿನದದ । ತನುಗಳೋ ತುಂಬಿದ ಮಹೋ

ದಕ ದಭ್ರಕಾಂತಿಗಳೋ ॥ ಘನಶರೌಘ ನಿಪಾತಗಳೋ ಘನ । ಜನಿತ ವರುಷಾಸಾರ
ಗಳೋ ತಾ । ನೆನೆ ಭಟದ್ವಯ ದಾಹವಾಕೃತಿ ಮೋಹಿಸಿತು ಜಗವ ॥ ೨೫ ॥ ಹಾಯಿ
ದಸ್ತ್ರದ ಬಿರುಬಿಗಮರ ನಿ । ಕಾಯ ಕಂಪಿಸುತಿರ್ದುದಬ್ಬರ । ದಾಯತಿಕೆ ಗಬ್ಬರಿಸು
ತಿರ್ದುದಜಾಂಡ ಬಿಲುರವಕೆ ॥ ಬಾಯ ಬಿಡುತಿರ್ದುದು ಧರಾತಳ । ವಾಯಿತೀ ಕದನ
ದಲಿ ತ್ರಿಜಗ ವನ । ದಾಯುವಿಗೆ ನಿರ್ವಾಹವೇ ನೆನುತಿರ್ದನಬುಜಭವ ॥ ೨೬ ॥ ಅಂಬು
ತಿರುವಿನ ಲೊದವಗತಿ ಗಾ । ಯಂಬ ನಮರರ ಗುರುಮಹಾ ದೇ । ವೆಂಬ ನಸುರಾಚಾರ್ಯ
ನಸುರಾಸುರರ ಮುಂಬಿನಲಿ ॥ ಅಂಬೆ ಗರ್ಭಿಣಿಯಾದಳೋ ಜಗ । ದಂಬಿಕಾಸತಿಯೆನಲು
ಭುವನ ಕ । ದಂಬ ಬಾಣದ ಲದ್ದಿದುದು ಭಟರಬ್ಬರಿಸುಗೆಯಲಿ ॥ ೨೭ ॥ ಬಿಡುಸರಳ
ಮಂಡಳಿಯ ಖಂಡದ । ಗಿಡಿಯಲಂಬುಧಿ ಬತ್ತ ಬಂದುದು । ಸಿಡಿದ ಕಿಡಿಗಳಿ ಹೊತ್ತಿ
ಹೊಗೆದುದು ಹೊರಳಿ ಗಿಡಿಗಳಲಿ ॥ ಜೊಡಕರಿಸಿ ಹೊದರೆದ್ದ ಝಳದಲಿ । ಝಡಿದು
ದಶಾಭಿತ್ತಿ ಬವರವ । ನಡಗಿಸಿದ್ದಂದಿನ ನೃಸಿಂಹ ಹಿರಣ್ಯಕಾಹವವ ॥೨೮॥ ಕಾದಿದರು
ಕೈಗುಂದದೀಪರಿ । ವೈದೆಗೆಯ ದಳಪಿಯಲಹಳಮೆಯ । ಕೈದುಕಾರರ ಕದನ ಕುಶಲಕೆ
ಕೋಟಮಡಿಯೆನಲು ॥ ಆದರಿಸಿದನು ಬಳಿಕಲಾ ಕ್ರ । ವ್ಯಾದ ಸುಭಟನ ಕೃಪೆಯಲಾ
ದೂ । ರ್ವಾದಳಶ್ಯಾಮಳನು ಹೊಡಿದ ಕೋಲ ಕೋಹಿನಲಿ ॥ ೨೯ ॥ ಅಸುರ ಕೇಳು
ಕಠೋರ ಬಲರೊಳು । ಹೆಸರೆನಿಸಿ ದಗ್ಗಳದ ಭಟ ನೀ । ಝುಸದಲತಿಬಲ ನೀ ಜಗ
ತ್ರಯಕಧಿಕ ವೀರನೆಲ ॥ ವಿಶಿಖ ವೆಮ್ಮದಮೋಘ ಮೇಲನು । ವಶನು ನಿನ್ನ ಸಹೋ
ದರನು ನಮ । ಗಪಹೃದಯ ನೀನಲ್ಲ ಕೊಲ್ಲೆನು ಹೋಗು ನೀನೆಂದ ॥೩೦॥ ಕಳುಹು
ನಿನ್ನಗ್ರಜನ ವಿಗ್ರಹ । ದೊಳಗೆ ನಿನ್ನವ ನುಳಿಯೆ ನೀ ತಾ । ನುಳಿದವನು ರಿಪುವಳಿದ
ರೊಡಹುಟ್ಟಿದ ವಿಭೀಷಣನ ॥ ಬಳಿಯ ಬದುಕುವದಿದುವೆ ನೀತಿಯ । ನೆಲೆ ನಿರರ್ಥಕೆ
ಸತ್ತು ಕಾಬ । ಗ್ಗಳದ ಸ್ವರ್ಗವದೇಕೆ ಮನದೊಳು ತಿಳಿದುಕೋ ಯೆಂದ ॥ ೩೧ ॥
ತಿಳಿಯಲಾವ್ ತಾಮಸರು ತಂದ್ರಿಯ । ಬಳಿಯವರು ಮೇಲಸುರ ಕರ್ಮದ । ಬಳಗೆ
ನಮಗುಂಟೆಳಿಯ ಮೂರ್ಖರು ಶಿಷ್ಯಜನವೆಮಗೆ ॥ ತಲೆಹರಿದರಟ್ಟಿಯಲಿ ಕಾದುವ ।
ಕಲಿಗಳೆಂಬುದ ಕೇಳಿದರಿಯಾ । ಕಲುಹೃದಯತನವಿರಲಿ ಕರುಣದ ಮಾತದೇಕೆಂದ ॥
ನೋಡು ನಮ್ಮಯ ಸರಳ ಸಮಯ ಸು । ಗಾಢತರ ಸಂಗ್ರಾಮವನು ಖಯ । ಖೋಡಿ
ಇಲ್ಲದೆ ಬಲ್ಲಿದನು ಖಳನೆಂದು ಲೇಸಾಗಿ ॥ ನೋಡೆನುತ ಸಬಳದ ಸಮಾನದ । ಜೋಡ
ಣೆಯ ಜವಗತಿಯ ಸರಳಲಿ । ಜೋಡಿಸಿದರುಬ್ಬರಿದು ರಘುಕುಲ ಸಾರ್ವಭೌಮಕನ ॥
ಮುನಿಪ ಕೌಶಿಕದತ್ತ ಮಂತ್ರದ । ಘನತನುತ್ರಯ ಮಹಿಮೆಯಿಂ ಗೋ । ಮಿನಿಯುಪಶಿ
ತನಾಗಿ ಬದುಕಿದನಲ್ಲದುಳಿದಂತೆ ॥ ತನುಜಕೇಳಾ ಕುಂಭಕರ್ಣನ । ಕನಲಿಕೆಯ
ಕದನಗಳ ಕಲಿಗಳ । ಮೊನೆಯ ಲುಳಿವವರಾರು ಮರ್ತ್ಯಾಮರ ಕದಂಬದಲಿ ॥ ೩೪ ॥
ಲಾಘವದೊಳವನೆಚ್ಚ ನಿಶಿತ ಶ । ರೌಘವನು ತರಿದೊಟ್ಟಿ ರಾಕ್ಷಸ । ಮೇಘಮಾರುತ
ನಿದಿರಿನಲಿ ಮಡವೇರಿ ಬೊಬ್ಬಿರಿದು ॥ ಆಘನೋದ್ಧತ ನುಗ್ರ ಧನುವ ನ । ಮೋಘಶರ
ದಿಂದೆಸಲು ಸಕಲ ಸು । ರೌಘವಾ ಯೆಂದುಲಿಯೆ ಕಿಡಿಗೆಡದವು ನಭೋಂತರಕೆ ॥೩೫॥
ನೆಗಹಿದನು ಬಳಿಕವನು ಕಮಲದ । ಮಗನು ಪೂರ್ವದಲಿತ್ತ ಶಕ್ತಿಯ । ಧಗಧಗಲ್ಹ ಗ
ಲೆಂದು ಥಳ್ಳರಿ ಥಾಳಿಸಿತು ನಭವ ॥ ಜಗಳ ಗಿಡಿಗಳ ಗಣನಾಗಳ ದೆಸೆ । ಗುಗುಳಿ ಮುಡು

ದಿಗುಭಿತ್ತಿಗಳ ಕಾ | ರ್ಬೊಗೆ ವಿತಾಳಿಸೆ ಕಾಡಗೂಡಿದುದಮರ ಸಂದೋಹ || ೩೬ || ಇದು ಕಣಾ ಹರಿಯಜ ಭವಾದ್ಯರ | ಹೃದಯ ಕಂಪನ ಶಕ್ತಿ ನೋಡೆಂ | ತಿದು ಜಗತ್ಸಂಹರಣ ಕಾಲದ ಘೋರತರ ಶಕ್ತಿ | ಇದನು ನೀನುತ್ತರಿಸಿದರೆ ದಶ | ವದನ ತಂದಂಗನೆಯು ಮುಂದಣ | ಪದವಿ ನಿನ್ನದು ನಿನಗೆ ಸರಿಯಹ ಸುಭಟರಿಲ್ಲೆಂದ ||೩೭|| ನಡುಗಿದನು ಮನದಲಿ ವಿಭೀಷಣ | ನಡುಗಿದೇ ಮಹಿಮಾತಿಶಯ ದು | ಗ್ಗಡದ ರಘುನೃಪ ಕೀರ್ತಿ ರಾಮಾಯಣದ ನಾಟಕವ || ತಡೆವರಾರೀ ಪ್ರಳಯಶಕುತಿಯ | ನುಡುಹ ನಕಟಾ ಮುಕ್ತಿಮಾನಿನಿ | ಹಿಡಿದಳೀ ಹರಿದಶ್ವವಂಶನ ನೆನುತ ನಡೆತಂದ ||೩೮|| ಏನು ಬಲ್ಲವಿಕೆಯೊ ವಿಭೀಷಣ | ನೇನ ಹೇಳಲು ಬಂದ ನದರೊಳ | ಗಾ ಸರಾಂಗದ ನಿಗಮ ಚೂಡಾಮಣಿ ಸರೋಜಜನ || ಧ್ಯಾನ ದಭಿಮಂತ್ರಕದ ಶರಸಂ | ಧಾನದಲಿ ಬೊಬ್ಬಿರಿವುತೆಚ್ಚನ | ನೊನಬಲ ಕಲಿ ಕುಂಭಕರ್ಣನ ಕರವಲಾಯುಧವ ||೩೯|| ನೆಗಹು ತರಿಶಕುತಿಯನು ಶರವಾ | ಗಗನ ಗಂಗೆಯು ಕುಡಿದುದಲ್ಲಿಯ | ಹೊಗೆಯು ಹೊರಳಿಯು ಲುದಕವನು ಹಶಿವಡಗದಿರೆ ಬಳಿಕ || ನಗಕುಲಾಂತಕ ಮುಖ್ಯ ದಿವಿಜಾ | ದಿಗಳ ನರೆಯುಟ್ಟಿದುದು ಸುಟ್ಟುದು | ನಗರಗಳ ನಿರ್ಜರರ ನಿಂದುದು ಪುರದೊಳಬುಜಜನ ||೪೦|| ಕೈದು ಕೈನಿರಾಂದುದ ಕಂಡು ಮ | ಹಾ ದುರಾಗ್ರಹಿ ರಕ್ಕಸನು ಬಲು | ಗೈದು ವಿದೆಲಾಯೆನುತ ಪರಿಘದಲಿಟ್ಟ ನಿನಕುಲನ || ಐದಿತಿದು ಕಿಡಿಗೆದರುತಂಬರ | ವೈದೆ ಥಳ್ಳಿರಿ ಮುಸಗೆ ಮಸೆಗೋ | ಲ್ಲೈದರಲಿ ಶತಚೂರ್ಣವಾಗಲು ಕಡಿದನಾ ರಾಮ ||೪೧|| ಪರಿಘವಳಿದುದ ಕಂಡು ಬಾಹಾ | ಪರಿಘನಿಟ್ಟನು ಕೋಟಿ ಭಾರದ | ಗಿರಿಯುಭಾರದ ಗದೆಯಲಾ ಗಂಭೀರ ವಿಕ್ರಮನ || ಭರದಿ ತಿರುಗುತ ಬಹ ಗದಾ ನಿ | ರ್ಭರದ ಸುಳಿಘಾಳಿಯಲಿ ಪುಷ್ಪಕ | ತಿರುಗುತಿರ್ದುದು ಮೇಲೆ ಕಮಲಭವಾದಿ ಸುರಕುಲದ || ೪೨ || ಜಗವ ಬೆದರಿಸುತೈದಿ ಬರುತಿಹ | ವಿಗಡ ರಕ್ಕಸ ಗದೆಯ ಬಾಣದ | ಜಗದ ಜಾಣರದೇವ ಝುಡಿತೆಯಲಾಶುಗಾಸ್ತ್ರದಲಿ || ಜಗುಳ ನೆಚ್ಚನು ಬಿದ್ದುದರಿರಿವು | ನಗರ ಮಧ್ಯದಲಿದ್ದ ರಕ್ಕಸ | ರುಗುಳಿದರು ಜೀವಗಳ ಜವಪುರವಾಯ್ತು ರಿಪುನಗರ ||೪೩|| ಇಟ್ಟನವ ಕಕ್ಕಡದ ಲಸುರ ಘ | ರಟ್ಟನನು ಬಲಿಸಲಿಸಿ ರಘುಪತಿ | ತೊಟ್ಟ ಬಾಣದ ಲೆಚ್ಚುತುಂಡಿಸಿ ತೋರಲಸುರೇಂದ್ರ|| ಇಟ್ಟ ತೋಮರ ಮುಸಲ ಮುದ್ಗರ | ಪಟ್ಟ ಪರಶು ಮುಸುಂಡಿಗಳ ಮೊರೆ | ದಿಟ್ಟನಂಬರವೈದೆ ಕೈದು ಕದಂಬಮಯವಾಗೆ || ೪೪ || ತರಿದನವ ಹೇರೀಟ ತೋಮರ | ನಿರಿಸಿ ನಗ್ಗದ ಮುಸಲ ಮುದ್ಗರ | ಮಿರುಪ ಪಟ್ಟಿಯ ಪರಶು ನಿಶಿತ ಮುಸುಂಡಿ ಮೊದಲಾದ || ತುರುಗಿಬಹ ಬಲುಗೈದುಗಳ ನೆಡೆ | ದೆರಹು ದೋರದೆ ಚಾಪತಂತ್ರದ | ನೆರವಣಿಗೆಗಳ ದೇವದೇವ ಕದಂಬ ಬೆರಗಾಗೆ ||೪೫|| ಆಲಿ ಬೊಬ್ಬಿರಿದಸುರನಳವಿಗೆ | ತೀರ ನೂಕಲು ನಾಕಕೆಚ್ಚನು | ವಾರುವಂಗಳ ತಲೆಯ ತರಿದೊಟ್ಟಿದನು ಸಾರಥಿಯ || ವೀರ ರಕ್ಕಸ ಬಳಕಲಾ ಮದ | ನಾರಿ ಗಹಗಂಪಿಸಲು ತೆಗೆದ ಕ | ಠಾರಿಯನು ತೆಗದೊತ್ತಿ ಬರಿಸಿದ ನಳವಿಯಲಿ ನಲನ || ೪೬ || ಚರತಳದುಪ್ಪರಕೆ ಫಣಿಪನ | ಶಿರಕೆ ಪೀಡನೆಯಾಯ್ತು ದಂಡೆಯ | ಧುರವ ಮಂಡಿಯ ಲಾಗು ಲಂಘನೆಗೊಲದುದವನಿತಳ || ತಿರುಗೆ ತಿರುಗಿತು ಪ್ಯೋಮ್ಯ ಘಾಳಿಗೆ | ತರಣಿಮಂಡಲ ಬೀಸೆ ಸುರಗಿಯ | ಗರಳವಂಟಿತ್ತು ಗಗನ ಪಥಿಕರ ಹೇಳಲೇನೆಂದ || ೪೭ || ಜಾರಿಯನು ಜಾರಿಗಳ ಪಯಗತಿ | ಯೋರೆ

ನೋರೆಯ ಬವರಿಗರ ಸಂ। ಚಾರಣೆಯ ಲಬ್ಬರಿಸಿ ತಿವಿದನು ರಾಘವೇಶ್ವರನ ॥ ವೀರ ಭಟರೇ ಭಾಪುರೇ ರಣ । ಧೀರು ಮಾ ಜಗಜಟ್ಟಿ ಯೆನುತಸು। ರಾರಿ ಹೊಳದೆಳೆವೆಯ ಬಾಣದಿ ನೆಚ್ಚು ಬೊಬ್ಬಿರಿದ ॥೪೮॥ ದಂಡೆಗೊಡ್ಡಿದ ಕರತಳವ ನು। ದ್ದಂಡ ಸುರ ಗಿಯ ನೋಹರವ ಕೈ। ಕೊಂಡ ಹಸ್ತವ ಕತ್ತರಿಸಿದುದು ಕಣೆ ಕೃತಾಂತಕನ ॥ ದಂಡಿ ಸರದ ವಸಂತದೋಕುಳಿ । ಯುಂಡೆಯುನೆ ನೋಟೆರಡರಲಿ ಹೊರ ! ವಂಡ ದರುಣ ಜಲೌಘ ಹೊರೆದುದು ದಿಕ್ತಟಾವಳಿಯ ॥೪೯॥ ಬಿಟ್ಟ ಕರವು ಕಠಾರಿಯಿಂ ದರೆ। ಯಟ್ಟಿ ತಿವಿದುದು ತೀವಿದಡವಿಯ । ಬಟ್ಟೆಗರನಾ ದಂಡೆಗೊಡ್ಡಿದ ಕೈಯ್ಯ ಕಡುಹಿನಲಿ ॥ ಹೊಟ್ಟೆಯಲಿ ಕರುಳೊಕ್ಕು ಕಪಿಗಳ । ಬೆಟ್ಟವಗಣಿತವಾದವಾ ನೊರೆ । ಗಟ್ಟ ಸುರಿ ವರುಣಾಂಬುನದಿ ಹಲವಾದುದಗಲದಲಿ ॥೫೦॥ ತೊಡಕು ಗರುಳಿನ ತೊಂಗಲಿನ ತೊರ। ವಡುವ ನೆತ್ತರ ಬಾಣದ ಬಳೇ। ಬಿಡುವ ಕಂಗಳ ನರಳಿಕೆಯ ಲರೆದೆಗೆದ ದಾಯಿಗಳ। ಗಿಡಿಗಿರಿದ ಹಲುದೆರಕುಗಳ ಹೊಡೆ। ಗೆಡದು ಹೊರಳುವ ಹೆಣನ ರಾಶಿಯು। ಲಿಡಿದು ದಿಳೆ ಕಲಿ ಕುಂಭಕರ್ಣನ ಕರದ ಕದನದಲಿ ॥೫೧॥ ನೋಟಿನಲಿ ಬಳಿಕಸುರ ಬಹಳಾ। ಸ್ಫೋಟನಂ ಗೈದೊಡನೆ ಹೊಯ್ದನು। ತಾಟಕೀ ಮರ್ದನನ ಸಿಡಿಲಸ್ಸಳಿಸುವಂದದಲಿ ॥ ದೂಟ ಕೆಲಕೊದದ ಸುರರಿಪು ಕೆಲ। ಮೀಟಿಸಿದ ನಂಬುಗಳ ನಂಬರ। ಕಾಟವಿಗ ರಕ್ಕಸನ ದೋರ್ದಂಡವನು ನಿಮಿಷದಲಿ ॥೫೨॥ ಬೀಳು ತಪ್ಪಳಿಸಿದವು ಗೋಲಾಂ। ಗೂಲ ಸೇನೆಯ ನೆರಡು ಭುಜವಾ । ಕಾಲ ಕಲ್ಪಾಂತದಲಿ ಕರದಂಡದಲಿ ಭುಜಯುಗವ ॥ ಬೀಳಗೆಡವುವವೋಲು ಕೊಲೆಯನು। ಹೇಳಲೇನವ ನೆಂಟುಕೋಟಿಯ। ಮೇಲೆ ಮೂವತ್ತೈದು ಲಕ್ಷವ ಕೊಂದ ನಗಲದಲಿ ॥೫೩॥ ಉರಿವ ಜಲದಲಜಾಂಡ ರಂಧ್ರದ। ಲುರವಣಿಪ ಶಿಖಿಯಂತೆ ರಕುತ ಗ। ಳೆರಡು ಭುಜಗಳ ಬಾಣದ ಲುಚ್ಚಳಿಸಿ ಕಪಿಬಲವ ॥ ಹರಣಗೊಳುತಿರೆ ಕಂಡು ರಘುಪತಿ । ಬೆರಳಿಲಸುರನ ಪೊಗಳುತಿರೆ ಧರೆ । ಬಿರಿಯೆ ಬಾಯ್ದೆರೆ ದಬ್ಬರಿಸಿ ಸುಂಗಲ್ಕೆ ಹರಿತಂದ ॥೫೪॥ ಬೆದರಿಬಿದ್ದನು ಖಳನ ಕರ್ಕಶ। ವದನದಬ್ಬರ ಕಿಂದ್ರನಹ್ನಿಯ । ಹೃದಯ ನಡುಗಿತು ಸಿಡಿಲ ಹೊಡೆದಂತಾಯ್ತು ಕಾಲಂಗೆ ॥ ಎದೆ ಬಿರಿದುದಸುರಂಗೆ ನಡುಗಿದ । ನುದಧಿಪತಿ ಮೆಚ್ಚಿದನು ಶಿವಸಖ। ಗೊದನತಜಿಕೆ ಧನಪತಿಗೆ ಭಯವಾಯಿತಭವಂಗೆ ॥ ಆರು ನಡುಗಿವರೇನು ರಘುಕುಲ। ವೀರ ಬೆದರುವ ಭಟನೆ ಮೃತ್ಯು ಶ। ರೀರ ನುದಿತ ಶಿರೋದರನ ನುರು ವೈಷ್ಣವಾಸ್ತ್ರ ದಲಿ ॥ ವಾರಿಜಪ್ರಿಯ ಬಿಂಬ ದತ್ತಲು । ಸಾರಲೆಚ್ಚನು ಕೊರಳ ರಕುತದ। ಧಾರೆ ತಾರಾಮಂಡಲವ ನಣದಿಳಿದು ದಿಳೆಗಾಗಿ ॥೫೬॥ ವಿಸ್ತರಿಸಲೇ ನವಮ ರಾಹು। ಗ್ರಸ್ತವಾದಂದದಲಿ ಚಂಡ ಗ। ಭಸ್ತಿಮಂಡಲ ವಿಳೆಗೆ ಕಾಣಿಸದಾಯ್ತು ರಕ್ಕಸನ ॥ ಮಸ್ತಕದ ಮಹಿಮೆಯಲಿ ತನ್ನಿಜ । ಹಸ್ತದಭುಜವ ಬಿಸುಟು ಸೆಳೆದನು। ದುಸ್ತರದ ಮಂದೇಹ ವಿಜಯದ ವೀರಖಂಡೆಯುವ ॥೫೭॥ ಒಡೆದವನುರರ ನಗರ ನಗಸುತೆ। ನೃಡನ ನಪ್ಪಿದಳಾಚರಿಸಿ ಹಿಂ। ದೊಡೆದು ಹಾಯ್ದರು ಕಂಡು ನೈಯ್ಯಲಿ ಕಮಲಜಾದಿಗಳು ॥ ಪಡಿಘವಿಸೆರವಿ ಸೋತು ಶರಧಿಯ । ತಡಿಗೆ ಹಾಯ್ದನು ಕಾಹುವಗ್ಗದ । ಕಡುಹು ಕಾರರ ಕಾಣದಿಳಿತರುತಿದುರ್ದಭ್ರದಲಿ ।೫೮॥ ತೊಲಗು ತೊಲಗೆಲೆ ರಾಮ ಕೈದುವ। ತೊಲಗ ಬಿಸುಟರೆ ಬಿಡುವದಲ್ಲದೆ । ತಲೆ ಬಿಡದು ಬವರಿಗರನೆಂದು ವಿಭೀಷಣನು

ನುಡಿಯೆ || ತೊಲಗ ದಾಹವ ಭೀಮನಗ್ಗದ | ಕಲಿ ಲಲಾಮ ಧನುರ್ಧರಾಯತ | ವಿಲಸಿತೋತ್ಸವರಾಮ ನಿಲಿಸಿದ ನಸ್ತ್ರಸಾರದಲಿ ||೫೯|| ಇದ್ದುದಾ ತಲೆ ಶೂಲದಗ್ರದ | ಕದ್ದ ಕಳ್ಳನ ತಲೆಯವೊಲು ಬಳಿ | ಕೊದ್ದು ನಡೆದುದು ಮುಂಡ ಕವಿದೌಂಕುವ ಕಪಿವ್ರಜವ|| ಅದ್ದರಿಸಿದುದು ತಲೆ ರಘೂತ್ತಮ | ನಿದ್ದ ಠಾವನು ಕೇಳುತಾ ಕಪಿ | ದೊದ್ದೆಗರ ನರೆಯಟ್ಟಿ ಕೊಲುತಿಟ್ಟಣಿಸಿತಿದಿರಿನಲಿ || ೬೦ || ಕಾಲುಗೊಲೆಯಲಿ ಕೊಂದುದರ್ಬುದ | ವೇಳ ನೇಳರ್ಬುದ ನುಳಿದುದು | ಮೂಲೆಗರು ಳುಪ್ಪರಿಸೆ ರುಧಿರದ ನದಿಗಳವತರಿಸೆ || ಮೇಲೆಮೇಲಾ ಖಳನ ಕಡಿಗಳ | ಕಾಳಿಗವು ಕಡುಹಾಯ್ತು ಹೂಡಿದ | ಕೋಲಿನಲಿ ತರದಿಳುಹಿದನು ತೊಡೆ ಜಾನು ಜಂಘೆಗಳ || ೬೧ || ಶರಧಿಮಥನದ ಮಂದರಾಚಲ | ಧರೆಗೆ ಬೀಳ್ವಂದದಲಿ ಬಿದ್ದುದು | ಬಿರಿಯೆ ನೆಲ ಬಿಡು ರಕುತಧಾರೆಯ ಸೂಸುತಲ್ಲಲ್ಲಿ || ಸುರ ವಿರೋಧಿಯ ಮುಂಡ ಕೊಂದುದು | ಹೊರಳಿ ಕಪಿಗಳ ನೆರವಿಯನು ಬಲ | ವರೆದ ಹೂರಣದಂತೆ ಗಿಜಗಿಜಿಯಾಯ್ತುದಗಲದಲಿ ||೬೨|| ನೆಗೆನೆಗೆದು ತೊಡೆ ಜಾನು ಜಂಘೆಗ | ಳಗಲದಲಿ ಬೆನ್ನಟ್ಟಿ ಶಾಖಾ | ಮೃಗ ಗಣವ ಕೊಲುತಿರಲು ಬಳಿಕ ನರೇಂದ್ರ ಬೆರಗಾಗಿ || ಮೊಗವ ನೋಡಿದನಾ ಪುಲಸ್ತ್ಯನ | ಮಗನು ಪುತ್ರಾನುಜನ ತಮ್ಮನ | ಮುಗಿದ ಕೈಯ್ಯಲಿ ಬಿನ್ನಹವ ಮಾಡಿದನು ರಘುಪತಿಗೆ || ೬೩ || ದೇವ ನವಿಮ್ಮಾ ಕುಂಭಕರ್ಣಂ | ಗಾ ವಿರಂಚಿ ಮಹಾ ಸುಪುಷ್ಟಿಯ | ನೀವ ಕಾಲದಲಿತ್ತನೈ ಖಳ ಬೇಡಲನುಪಮದ || ಜೀವರತ್ನವ ನಿದರ ದೆಸೆಯಿಂ | ಸಾವು ಸಮನಿಸದಿವಗೆ ಕೇಳಿಲೆ | ದೇವ ಕಳುಹು ಖಳೋತ್ತಮನ ಮಸ್ತಕದ ಮಣಿಯೆಂದ || ೬೪ || ಅದೆ ಶಿರೋ ಮಧ್ಯದಲಿ ವಿಂಗಡಿ | ಸಿದರೆ ವಿಂಗಡಿಸುವುದು ವೈರಿಯ | ಹೃದಯಗತ ದಸು ಸುರರ ಸಂಗರ ಬಳಿಕ ನಿಮಗೆನಲು || ತುದಿವೆರಳ ತೋಮರದ ನಾರಿಯ | ಲೊದಸದಭ್ರದ ಬಾಣಧಾರೆಯ | ತುದಿಯ ರಕ್ಕಸದಲೆಯ ರತುನವ ನುಗಿದುದಾಕ್ಷಣಕೆ || ೬೫ || ಸರಳೊದದ ತೀವ್ರತೆಗೆ ಬಿದ್ದುದು | ಸುರುಚಿರದ ಮಣಿವ ಕುಟಿ ಶಿಂಗಣ | ದರಸು ಭೂಮಿಯಲಿಳಿ ರಸಾತಳಕಾಳಿ ರಕ್ಕಸನ || ಶಿರಕೆಡದುದಾ ಕೊಲುವ ಕಡಿಗಳ | ಹರಹು ನಿಂದವು ಕೊಂಡು ಬಂದುದು | ಬರುತ ಬಾಣ ತದೀಯರತುನವ ನರಸ ನಿದ್ದೆಡೆಗೆ || ೬೬ || ಅರಸ ಬಳಿಕಾ ರತುನವನು ನಿಜ | ಶರಣ ನುರು ಶೋಕಾಗ್ನಿಯನು ಪರಿ | ಹರಿಸಿ ಕೊಟ್ಟನು ಕುಸ್ತರಿಸಿ ಕರುಣಾಮೃತವ ಸುರಿದು || ಸುರಿದವಾಕ್ಷಣ ಸುರರ ಯವ್ವನ | ತರುಣಿಯರ ಕೈಯಿಂದ ಸೇಸೆಗ| ಳರಸ ಸಂಗದಲೊಗುವ ಪರಿಮಳದಲರ ಹೊನಲಿನಲಿ ||೬೭|| ಹಿಂಗಿದುದುಭಯ ವರ್ಧನವಮರರಿ | ಗಿಂಗಿದುದು ಸಂತೋಷರಸದು | ತ್ತುಂಗಬಲ ಲಂಕಾಧಿನಾಥಂಗಿನಸುತಾದಿಗಳ || ಅಂಗಲತೆ ಕುಡಿಕೊಂಡವಮರದಿ | ಶಾಂಗನೆಯ ಸಾರಿದನು ರವಿ ರಘು | ಪುಂಗವನು ನೆನೆದನು ನಿಜಾನುಜ ನಾಹವದ ಹದನ || ೬೮ || ಧುರವದತ್ಯಾಶ್ಚರ್ಯಹನುಮನ | ಕರ ವಿಘಾತಿಯ ಲೂರ್ಮಿಳೇಶನ | ಶರವಿಘಾತಿಯ ಲೆರಡುನೂರಕ್ಷೋಹಿಣೀ ಸೇನೆ || ಪುರವ ಕಟ್ಟಿತು ಬೇರೆ ಸಂಯಮ | ಪುರದ ಮುಂಭಾಗದಲಿ ಜಯ ದು | ಬ್ಬರದ ಭಟರ್ಕೈತಂದರವಸೇನಾಥ ನಿದ್ದೆಡೆಗೆ ||೬೯|| ತಿರುಗಿದನು ಬಳಿಕಮಳ ತೊರವೆಯ | ವರ ಪುರಾಧೀಶ್ವರನು ಜಯ ದು | ಬ್ಬರದ ಹರುಷದಲನುಜ ಸುಗ್ರೀವಾದಿಗಳು ಸಹಿತ || ಸುರು

ಚಿರದ ಶಿಬಿರಾಂತರಕೆ ಶಂ । ಕರ ಸರೋಜಭವಾಮರೇಂದ್ರರ । ನೆರವಿ ಹರಿದುದು ಹೊಗಳುತಿನಕುಲ ಸಾರ್ವಭೌಮಕನ ॥ ॥೭೦॥

ಇಪ್ಪತ್ತೆಂಟನೆಯ ಸಂಧಿ ಸಮಾಪ್ತಂ.

ಇಪ್ಪತ್ತೊಂಭತ್ತನೆಯ ಸಂಧಿ.

ಸೂಚನೆ॥ ವೀರ ದೇವಾಂತ ನರಾಂತಕ । ಘೋರ ತ್ರಿಶಿರ ಮಹೋದರಾ ಸುರ । ವೀರ ಯುದ್ಧೋನ್ಮತ್ತರನು ಗೊಳಿಸಿದರು ಸಂಗರಕೆ ॥

ತಿರುಗಿತೀ ಬಲವತ್ತಲಿತ್ತಲು । ನರಿದ ರಳಿದುಳಿದಸುರರಿಕ್ಕಿತು । ಪುರಕೆ ಮುತ್ತಿಗೆ ಮುಸುಕಿ ಕೊಂಡುದು ನಿಶಿ ಮಹೀತಳವ ॥ ಇರಿಸಿ ಬಂದಿರೆ ನಿರ್ಜರ ಸ್ಮರ । ಹರಣ ರುದ್ರನ ನಧಿಕ ಸತ್ವೋ । ತ್ಕರ ಸಮುದ್ರನ ನೆಂದು ಖಳ ತುಂಬಿದನು ಕಂಬನಿಯ ॥೧॥ ಬೀಳುದೋಳಾ ಯೊಂದು ಹರಿದುದು । ತೋಳು ಮತ್ತೊಂದಳಿದುದೇಮು । ಬ್ಬಾಳುತನ ವಕಟ ನಮಗೇಕಾಕಿ ತನವಾಯ್ತು ॥ ಕೇಳ ದೊಬ್ಬನ ನೂಕಿದೆನುರಣ । ಕೇಳಿ ಗೊಬ್ಬನ ಚಾಚಿದೆನು ಸುರ । ರಾಳಿ ಗೊಂಬವೊಲಾಯ್ತೆ ಬದುಕೆಂದಸುರನಳವಳಿದ ॥೨॥ ತಂದನನುಜನ ಶೋಕದಲಿ ಜಲ । ಬಿಂದುಗಳ ನಕ್ಷಿಯಲಿ ಮರುಗಿದ । ನಂದಿನಿರುಳಲಿ ಕರುಳುಗಳ ತೊಳಲಿಕೆಯ ತಾಪದಲಿ ॥ ಕುಂದಿತೀ ಕಡುದೀಪ ಗರ್ವತೆ । ಮಂದವಾದುದೆ ಮದದ ಹೂಂಕೃತಿ । ಯೆಂದು ಹಮ್ಮೈಸಿದನು ಮೂರ್ಛೆಯಲಾ ದಶಗ್ರೀವ ॥ ೩ ॥ ಹೊರಳಿದನು ಸಹಜಾತ ಶೋಕ । ಜ್ವರದ ಜಾಡ್ಯದ ಜಿನುಗಿನಲಿ ರಘು । ವರನ ನೆನಹಿನ ಘನ ಸಮಗ್ರ ಸ್ಮರಣ ವಿಕಳದಲಿ ॥ ತರುಣ ಕೇಳಾ ರಾಕ್ಷಸೇಂದ್ರಂ । ಗಿರುಳು ಶತಯುಗ ವಾದು ದಂದಿನ । ತರಣಿ ತೋರದ ಮುನ್ನ ನಡೆತಂದಿತ್ತ ನೋಲಗವ ॥೪॥ ಗೆಲುವನೋ ಗೆಲದಿಹನೊ ರಕ್ಕಸ । ಗಲಹವನು ನಿಜ ಪುತ್ರ ನಿಂದಿನ । ಕೊಳುಗುಳದೊಳೆಮ್ಮರ ಚಕ್ರೇಶ್ವರನು ತವಕದಲಿ ॥ ಬೆಳಗು ಝಾವದ ಲೆದ್ದ ಪೂರ್ವಾ । ಚಲಕೆ ಬರೆ ಮುಂಗುಡಿಯ ಲೆತ್ತಿದ । ತಳಿತ ದೀಪಪ್ರಭೆ ಯೆನಲು ತಲೆದೋರಿದನು ದಿನಪ ॥೫॥ ನೆರೆದು ದೋಲಗ ದೊಳಗೆ ನಾನಾ । ಪರಿಯ ರಕ್ಕಸ ವೀರಭಟರು । ಬ್ಬರದ ಖಂಡೆಯ ದರುಣ ಮಣಿ ಕೋಟೀರ ಭಾರದಲಿ ॥ ಹರನ ಗಣಿಸದ ಮೃತ್ಯುಗಿತ್ತುವ । ಸರಕು ಮಾಡದ ಮಾಯೆ ಯತಿಶಯ । ದುರು ಭಯಂಕರ ವೀರ ರೌದ್ರಾದ್ಭುತ ವಿಲಾಸದಲಿ ॥೬॥ ಗೆಲವು ಗುರುತರವಾಯ್ತು ಹಗೆಗಳ । ಗೆಲವು ಲಘುತರವಾಯ್ತು ನಮಗತಿ । ಬಲರು ಮಡಿದರು ನಮ್ಮೊಳಗೆ ಧೂಮ್ರಾಕ್ಷ ಮೊದಲಾದ ॥ ಉಳುಕರಿಯ ಭಟರುಳಿದವರು ಹಗೆ । ಬೆಳಸಿ ತಮ್ಮಲಿ ಪರಿಹರಿಸಿ ಕೈ । ನಿಲುಕುವವರಿಲ್ಲೆನುತ ರಕ್ಕಸರಾಯ ಚಿಂತಿಸಿದ ॥೭॥ ಚಿಂತೆ ಯೇತಕೆ ದೇವ ಹೋದವ । ರಂತಿರಲಿ ಹೊಸ ರಣರಸದಿ ನಿ । ನ್ನಂತರಂಗದ ಶೋಕವಹ್ನಿಯ ನಂದಿಸುವೆನೆನುತ ॥ ಅಂತರಹಿತ ಪರಾಕ್ರಮದ ದೇ । ವಾಂತಕ ತ್ರಿಶಿರ ಪ್ರಸಿದ್ಧ ನ । ರಾಂತಕ ಮಹೋದರರು ಯುದ್ಧೋನ್ಮತ್ತ ರುರುಕಿದರು ।೮॥ ಕಳುಹಿನೋಡೆಲೆ ಜೀಯಬರಿಯ । ಗ್ಗಳಿಕೆ ಯುವರಾವಲ್ಲ ಹಿಂದಣ । ಕೊಳುಗುಳ ಕೈದು ಕೋಟಿಗುಣ ವಿಗಿಲೆನಿಸಿ ತೋರುವೆವು ॥

ಬಳಿಕ ದೇವಶ ಸುಪ್ರತಃಪದ । ಬೆಳಸು ದೈವಾಧೀನವೆನು ತರಿ । ಗಳ ರಣಾರಂಭಕಕೆ
ಬೇಡಿದ ರವತು ವೀಳೆಯುವ ||೯|| ತರಿಸಿ ಹೊಂಬಟ್ಟಲಲಿ ಖಳ ಕ । ರ್ಪುರದ ವೀಳಯು
ವಿತ್ತು ಘನ ಸಂ । ಗರಕೆ ಕಳುಹಿದ ನಸುರ ವಲ್ಲಭ ನಾ ನಿಶಾಚರನ || ಧುರಕೆ ಬಲು
ಸನ್ನಾಹ ಸೇನೆಯು । ನೆರಹಿದರು ನಿಮಿಷಾರ್ಧದಲಿ ನೆಲ । ಬಿರಿಯೆ ಮೊಳಗುವ ವಿವಿಧ
ವಾದ್ಯದ ಘೋರ ಘೋಷದಲಿ ||೧೦|| ತುರಗ ಬಂದುದು ತಳುವದಾಕ್ಷಣ । ನಿರತಿಶಯ
ನಿರ್ಮಾಂಸ ಚಳಬಳ । ಚರಣ ಕಾಂಡದ ನಿಶಿತ ಘಂಟಾಘುರದ ಭೊಪ್ಪರದ || ಉರು
ಲಲಾಟದ ನಿಳ್ವಮೊಗ ದು । ಪ್ಪರದ ತಿತ್ತಿರಿ ನಾಸಿಕದ ನಿ । ಷ್ಠುರ ನಿನಾದದ ಲಮವು
ವೀರ ನರಾಂತಕಾಸುರಗೆ ||೧೧|| ತಡಿ ಸುಖಾಸನ ಸುಗದೆ ಪೊಂಬಾ । ವಡೆ ಜನಾಷಿ
ಲಗಾಮು ಮೊಗಗ । ನ್ನಡಿ ಲಲಾಟ ನಿಬಂಧಿಯಲಿ ಲಣ ಕಬ್ಬಿ ಕಡಿಯಣದ || ಮುಡಿ
ಚವರ ಲಾಗೈಚೆ ಕನಕದ । ಸಡಕು ಮಣಿ ಲಂಬಳದ ಹಯ ಮಿಗೆ । ಗುಡಿಯಿರಿದು
ಮೊಗವೆತ್ತಿ ನರ್ತಿಸಿ ತಸುರ ನಿದಿರಿನಲಿ ||೧೨|| ಅವಿಲಣದ ಸೂಕ್ತಿಕೆಯು ಕಬ್ಧಿಯು ।
ಚವರಗಳ ಹೊಂಗೆಜ್ಜೆಗಳ ಬಲಿ । ದವಯುವದ ಮುತ್ತಿಟ್ಟ ಹಕ್ಕರಿಕೆಗಳ ಹಲ್ಲಣದ ||
ಕವಿವ ಸಗತಿಯ ಗುಬ್ಬಿ ತಾರಾ । ನಿವಹದಂತಿರೆ ಮೆರೆಯೆ ವಾಘಿಯು । ಲವಲವಿಕೆಯಲಿ
ಜೋಡಿಸಿದರು ಜವಾಯ್ಲ ತೇಜಿಯನು ||೧೩|| ಸಿಂಳ ಮೊನೆಗಳು ಕದಿರು ಮರ್ಕಟ ।
ರುರುವಚಿಸು ತಗ್ಗದಿರು ಲಕ್ಷ್ಮಣ । ನಿರಿಶ ಕಂಜದಿ ರರ್ಕಸುತ ಮೊದಲಾದ ನಾಯಕರ||
ಧುರಕೆ ಹೆದರದಿ ರೋಸರಿಸದಿರು । ತಿರುಗದಿರು ಕಲಿಯಾಗು ತನ್ನನು । ಧುರವಿಜಯ
ನೆನಿಸೆಂದು ಬೋಳೈಸಿದ ಮಹಾ ಹಯುವ ||೧೪|| ಮೆಟ್ಟಿ ನಡೆವುದು ವೈರಿ ಸುಭಟರೊ।
ಳೊಟ್ಟವಿಸದರಿ ಸೈನಿಕವ ನಡ । ಗಟ್ಟುವುದು ತುಳಿವುದು ಕಪೀಶರ ಸೆಣಿಕೆಗೊಳ್ಳದಿರು||
ಇಟ್ಟ ಕಲುಗಳಿ ಗಳುಕದಿರು ಹಗೆ । ತೊಟ್ಟ ಬಾಣಕೆ ಹೆದರದಿರು ಜಗ । ಜಟ್ಟಿ ಮಗ್ಗ
ದಿರೆಂದು ಬೋಳೈಸಿದ ಮಹಾ ಹಯುವ ||೧೫|| ಹಿಣಿಲ ಮುತ್ತಿನ ಜಾಳಿಗೆಯ ಮಣಿ ।
ಗಣದ ವಜ್ರಾಂಗಿಗೆ ಯಡವ್ರಳಿಯ । ಮಣಿಕಟಿಯ ಸರವಳಿಯುಪರಮೋಚ್ಚಯದ
ಸುತ್ತಣಿಯು || ಹಣಿಯು ಕತ್ತುರಿಯೊಳಗೆ ಸಿರಿ ಯು । ಬ್ಬಣದ ಸಲ್ಲೆಹ ಬಲ್ಲೆಹದ
ಬಲು । ಗಣಿಯು ಬಿರುದಿನ ಭಟ ನರಾಂತಕ ನೇರಿದನು ಹಯುವ ||೧೬|| ಬಿರಿಗಡದ ಕರಿ
ಯಣದ ಕಬ್ಬಿಯು । ಘುರುಘುರು ಸ್ವನ ಘಣಘಣಧ್ವನಿ । ಗುರುವೆನಿಸಿದುದು ಗಾಢ
ಘನ ಘರ್ಜನೆಯು ರವುರವಕೆ || ಖುರದ ಲವನಿಯ ನಣೆಯು ಲಹಿಪನ । ಶಿರಕೆ ವೇದನೆ
ಯಾಯ್ತು ನಭಕು । ಪ್ಪರಿಸ ಲಳುಕಿದು ದಶ್ವವಾ ಹರಿದಶ್ವ ಮಂಡಲವ ||೧೭|| ಈಳಿ
ದಾಹಯುವ ತ್ರಿಕೂಟಾ । ಚಲದ ದುರ್ಗವ ಸಾಹಯುದ ಬೆಂ । ಬಳಿ ಬೆರೆಸಿದ ವಖಿಳ
ದೇಶದ ನಿಖಿಳ ಕರವಳಿಯ || ಹಲವು ವರ್ನದ ಹಲವು ಜಾತಿಯ । ಹಲವು ಸಮರಾ
ಭ್ಯಾಸ ಶಿಕ್ಷಾ । ವಿಲಸಿ ತಶ್ವನಿಕಾಯ ನಿರುಪಮರಾವುತ ರೊಗ್ಗಿನಲಿ ||೧೮|| ವಿಾನ
ಚಿಪ್ಪಿನ ಲೋಹಬದ್ಧದ । ಜೀನ ಗೆಲಸದ ವ್ಯಾಗನಖದ ಪರಿ । ಥಾನಕದ ಪಾರಿಯದ
ಪಚ್ಚೆಯು ಪಳಿಸುವರ್ನಗಳ || ಸ್ಥಾನಕದ ಕಾರ್ಪಾಸ ಕವಚದ । ಕೈನೆಗಹಿ ನುಬ್ಬರದ
ಚೂರಿತ । ಮಾನಕದ ಕರ್ಕಶದ ರಾವುತರು ಬಳಸಿದರು ಖಳನ ||೧೯|| ಭಾಳ ಝುಳ
ಪಿನ ಬೆಳಗು ದಿನಕರ । ನಾಲಿಗಳ ಕದುಕಿರಿಯೆ ರಾವುತ । ರೋಳಿ ಸಹಿತಿಳಿದನು
ತ್ರಿಕೂಟ ಮಹಾ ಮಹೀಧರವ || ಮೇಲೆ ಬಂದುದು ಸುರ ಸತಿಯ ಶುಂ । ಡಾಲ

ಮನ್ಮಥ ಶೌರ್ಯಗರ್ವವ । ನೇಳಿಸುವ ಮದದಂತಿ ವೀರ ಮಹೋದರಾಸುರನ ॥೨೦॥
ಅರರೆ ದಿಗ್ಗಜ ನಿಕರ ಮೀ ಮದ । ಕರಿಗೆ ಜನಿಸಿದವೋ ಗಜಾಸುರ। ಮರಳಿ ರೂಹಿಸಿ
ದನೊ ಚತುರ್ಮುಖ ನಂಜನಾಚಲವ ॥ ಕರುಗೊಳಿಸಿ ಕಡದಸುಗೊಳಿಸಿ ಕ। ರ್ಬುರಗೆ
ಕೊಟ್ಟನೋ ಯೆಂಬವೊಲು ಹ । ನ್ನೆರಡು ಯೋಜನ ವಿಭ ವಿರಾಜಿಸಿ ತಸುರ ನಿದಿರಿ
ನಲಿ ॥೨೧॥ ಹೊರಜೆ ಹೊಮ್ಮಿಳಿ ನಿಗಳ ನಿಡಿಯು। ಗ್ಗರಣೆ ಜೊತ್ತಿಗೆ ಜೀನ ಪಂಕಣಿ।
ತಿರಿಚಿ ತೋದರು ಘಂಟೆಗಳ ರೇಂಭೆಗಳ ಸೊಬಗುಗಳ ॥ ಥರಥರದ ಮಣಿಗಣದ
ಖಚಿತೂ। ತ್ಕರದ ಹೇಮದ ಪಕ್ಕ ಘಂಟೆಯು ಕರದ ಮೊಗರಂಬದ ವಿಲಾಸದಿ ನೆಸೆದು
ದಾ ದಂತ ॥೨೨॥ ಕಾಲುಗಾಹಿನ ಕುದುರೆಗಳ ಕಡೆ। ಗೋಲ ಸಿಲ ಕಿನ ರಕ್ಕಸರ ಪಡಿ।
ತಾಳ ವಿಭ ಸಂಕುಳದ ದಾಡೆಯು ಮೆರೆವ ಜಾಗಟೆಯು ॥ ತೂಳಿಸುವ ಬೆಂಗೊಡತಿಗಳ
ಸಿ। ಟ್ಟೇಳಿಸುವ ನಿಶಿತಾಂಕುಶದ ವಿಕ । ರಾಳ ಮದಕರಿ ಮಲೆವುತಿರ್ದುದು ರಣದ
ಸೊಗಸಿನಲಿ ॥೨೩॥ ತರಣಿ ಬಿಂಬವ ನಣವ ಮದ ದು। ಬ್ಬರದ ಕದಳಿಕೆಗಳ ವಿಡಾ
ಯಿಯು। ಕರದ ನೆಗಹಿನ ಖಂಡೆಯದ ಕೆತ್ತಿಸಿದ ಸೂಸಗೆಯ ॥ ಚರಡೆ ಬಂಧದ ಕತ್ತಿ
ಗಳ। ಪರಿಯ ಕೊಲೆಗಳ ಕೈದುಗಳ ನಿ। ರ್ಭರದ ನಿರುಪಮ ದಂತಿ ಬೀರಿತು ಭಯವ
ನಮರರಿಗೆ ॥೨೪॥ ಅಸುರರ ರಣಗಲಿ ಮಹೋದರ। ನಾ ಸುದರ್ಶನನೆಂಬ ದಂತಿಯ।
ನಾಸುರದ ಜಯಜಯ ನಿನಾದದ ಕುಸುಮ ವರುಷದಲಿ ॥ ಪಾಶ ಪಟ್ಟಸ ಪರಿಘ
ಬದ್ಧಶ। ರಾಸನಾದಿ ಸಮಸ್ತ ಶಸ್ತ್ರ ಕ। ಲಾಸ ವಿಭವದಿ ನೇರಿದನು ರಣವಾದ್ಯ ರಭಸ
ದಲಿ ॥೨೫॥ ಇಳಿದನಾ ದುರ್ಗವನು ಬಳಿಯಲಿ। ಬಳಸಿದುದು ಬಲುದಂತಿ ಘಟೆಗಳ।
ಕಳವಳಿಸಿ ಕಾವಿದ ರಪ್ರತಿ ಪ್ರಮುಖಾವನೀಧರರು ॥ ಹೊಳಕ ದುತ್ತರ ಹೊಗಳುವಘ
ಸಂ। ಕುಲದ ಸಂಖ್ಯೆಯ ನಮವ ಕದನದ । ಕುಳದಗುರ್ವಿನ ದಂತಿದಳ ವುಳಿಸಿದವು
ರಣದೊಳಗೆ ॥೨೬॥ ಏನ ಹೇಳುವೆ ವಮಮ ವೀರ ಮ। ಹಾ ನಿಶಾಟನ ಗಮನ ಗುಪ
ಗಮ । ನಾಸುರಾಗಿಗಳೈದಿದರು ಶತಕೋಟಿ ಸಂಖ್ಯೆಯಲಿ ॥ ಹಾನಿ ಕಪಿಬಲಕಾಗ
ದಿರದೆಂ । ಬೀ ನುಡಿಯ ಸಡಗರ ನಭೋ ವೈ । ಮಾನಿಕರ ಸಂದಣಿಯ ಲಾದುದು
ಕಾಣುತೀ ಬಲವ ॥ ೨೭ ॥ ಅರುಣಮಯ ಮಣಿಖಚಿತ ಚಾಮಿಾ। ಕರದ ಚಕ್ರಯು
ಗಂಧರದ ಕೂ । ಬರದ ಕುಣಿವಶ್ವಗಳ ಕನಕಧ್ವಜ ಪತಾಕೆಗಳ ॥ ಶರಶರಾಸನ
ಶಸ್ತ್ರ ಮುಖ್ಯೋ । ತ್ಕರದ ಕವಚದ ಸೀಸಕದ ಸಂ । ಗರ ವರೂಥವ ನೇರಿದನು
ದೇವಾಂತಕನು ನಗುತ ॥೨೮॥ ಇಳಿದು ದಾತನ ತೇರು ತ್ರಿಶಿರನ। ಚಳಬಳದ ಹೊಂ
ದೇರು ರಥಿಕಾ। ವಳಿ ಗಳೊಗ್ಗಿನ ಲಾಹವಕೆ ಶತಕೋಟಿ ಸಂಖ್ಯೆಯಲಿ ॥ ಖಳಕೋಳತಿ
ಬಲ ಕುಂಭಕರ್ಣನ। ಕಲಿಗೆ ಮಿಗಿಲೆಂಬಗ್ಗಳದ ಖಳ। ತಿಲಕ ಯುದ್ಧೋನ್ಮತ್ತ ನನು
ವಾದನು ಮಹಾಹವಕೆ ॥೨೯॥ ತಿಗುರಿದನು ಕಾಯವನು ಕುಂಕುಮ। ದಗರು ಕಸ್ತೂರಿ
ಸಾದಿನಲಿ ಮಘ । ಮಘಿಪ ಚಂದನ ಗಂಧದಲಿ ಲೇಪಿಸಿದ ನವಯುವವ ॥ ಬಗಿವ
ಕಾಶಯ ತಲೆವಿಣಿಲ ಸೊನೆ । ದೆಗೆದ ಹೂ ಮೊಗ್ಗೆಗಳ ಹೊದರಿನ। ಹೊಗರ ಹೊಸ
ವೇಸಿಯಲಿ ಯುದ್ಧೋನ್ಮತ್ತ ನನುವಾದ ॥೩೦॥ ಕಡೆಯ ಹೀರಾವಳಿಯ ಕಾಂತಿಯ।
ನಿಡುಸರದ ಸರಪಣಿಯ ನಿಡುಮಂ । ಕುಡಿಯ ಘೋರವರಾಹ ದಾಡೆಯ ಕಟೆನತಂಬ
ಕದ ॥ ತೊಡರ ತೋಳಿನ ಮಣಿಯ ಮುತ್ತಿನ। ಕಡುಕುಗಳ ರಣ ಚೋರ ಕತ್ತಿಯ।

ಕಡ ಗ ನತಿಬಲ ಯಿಳಿದ ನಾದುರ್ಗವನು ಶೀಘ್ರದಲಿ ||೩೧|| ನಡೆದುದವನ ವರಾಂಗ ವಲಿ ಕೆಂ | ಪಡರ್ದ ವಿಾಸೆಯು ರೌದ್ರಮುಖ ದಿದಿ | ರಡರ್ದ ರೋಮದ ಬಿಟ್ಟಕಂಗಳ ಬಿಗಿದ ಹುಬ್ಬುಗಳ || ಕುಡಿವರಿವ ದಾಡೆಗಳ ಹೊಸ ಹೊಗ | ರಿಡುವ ವೈಯುಬ್ಬುಗಳ ರಕ್ಕಸ | ಗಡಣ ವೈದಿತು ಸಂಗರಕೆ ಶತಕೋಟಿ ಸಂಖ್ಯೆಯಲಿ ||೩೨|| ಗಡನ ಗೆಲಿ ಮುದು ನಾಲ್ಕು ಬಲ ಬಡ | ಗಣ ದಿಶಾಭಾಗದಲಿ ಘೋಷಂ | ದಣದು ದಂಬರದುದಿಯ ನಾನಾ ವಾದ್ಯ ನಿರ್ಘೋಷ || ಕುಣಿವವಶ್ವ ಸಿಕಾಯ ಬೀದಿಯ | ಕೆಣಕಿದುವು ಮದ ಧಾರೆ ರಥವಿ | ಟ್ಟಣಿಸಿದುವು ಕಾಲಾಳು ಕೈಗೈದುದು ಮಹಾಹವಕೆ ||೩೩|| ತುರಗದಳ ದಲಿ ನಿಂದ ನಗ್ಗದ | ನರಕುಲಾಂತಕ ನಿಭ ಘಟಾಳಿಯ | ನೆರವಿಯಲಿ ವೈದೋರಿದನು ಬಳಿಕಾ ಮಹೋದರನು || ಸುರ ವಿರೋಧಿ ತ್ರಿಶಿರ ನೊಪ್ಪಿದದುರು ವರೂಥ ನಿಕಾಯ ದಲಿ ಪದ | ಚರರ ಪಡಿಮುಖದೊಳಗೆ ಯುದ್ಧೋನ್ಮತ್ತ ರಂಜಿಸಿದ ||೩೪|| ಎಲೆ ಕುಮಾರಕ ಕೇಳು ಕದನದ | ಕಲಿಗಳೊಡ್ಡಿನ ಕೈದುಗಳ ಕುಡಿ | ವೆಳಗು ಕದುಕಿತು ಕಂ ಗಳನು ಕಪಿರಾಜ ಸೈನಿಕದ || ಕಳವಳಿಸಿ ಕಳೆಯೇರಿ ತಾಜಿಗೆ | ಕಲಿಲಲಾಮರು ಮುಂದೆ ಕೈಗಳ | ಕಲುವೊರನ ಕದನದಲಿ ಕೆಣಕಿದರರಿ ಪತಾಕಿನಿಯ ||೩೫|| ಆತುದಾ ಬಲವೀ ಬಲಕೆ ಹಗೆ | ವಾತಿನಂಕದ ಬವರದಲಿ ಬಲು | ಖತಿಯಲಿ ಕೈ ದೊಳಸು ಕಾರರು ಹೊಕ್ಕ ರುರವಣಿಸಿ || ಏತರವು ರಣ ಹಿಂದಣವು ಹೊಸ | ರೀತಿಯಿದು ಹೊಗೆ ಳಿಕೆಗೆ ತೊರವೆಯು | ನೂತನ ಶ್ರೀಮೂರ್ತಿ ತಾನೇ ಬಲ್ಲನಿದನೆಂದ || ||೩೬||

ಇಪ್ಪತ್ತೊಂಭತ್ತನೆಯ ಸಂಧಿ ಸಮಾಪ್ತಂ.

ಮುವ್ವತ್ತನೆಯ ಸಂಧಿ.

ಸೂಚನೆ|| ವೀರರಿಪು ಜರ್ಝರ ನಾಹವ | ಧೀರ ವಾಲಿಕುಮಾರ ನಾಜಿಯೊ | ಳಾರು ಭಟೆಯಲಿ ಗೆಲಿದ ನಗ್ಗದ ಕಲಿ ನರಾಂತಕನ ||

ಪದ್ಯ|| ಎರಡು ಬಲದುರುಭಟರ ಬಲು ಸಂ | ಗರ ಸರೋಷದ ಲುಗುಳ ಕಿಡಿಗಳ| ಹೊರಳಿಯಲಿ ನೆಲಹೊತ್ತಿ ಹೊಗದುಬ್ಬರಿಸಿತೆಂಬಂತೆ || ಚರಣ ನಿಹತೋದ್ಭೂತ ಧೂಳೀ | ಭರವು ನಡೆದುದು ಘನಸಮಾರಣ | ಸರಣಿ ಸಿಂಧುವ ದಾಂಟಿ ಸರಸಿಜ ಭವನ ಪಟ್ಟಣಕೆ || ೧ || ಮುಸಗಿ ಹೊಕ್ಕುವು ಬಲವೆರಡು ಲಳಿ | ಮುಸಗಿದಂಬುಧಿಯಂತೆ ಕಿಡಿ ಕಿಡಿ | ಮುಸಗಿ ಮೋಹಿದ ಮುಖದೊಳೊಳಹೊಕ್ಕಿಕ್ಕಿದುದು ಹೆಣನ || ಒಸರಿಸಿದರೆ ನಲಿ ಯೆಡೆಡೆಗೆ ಕೆಂ | ಪೆಸೆವ ನೀರರವಟಿಗೆಗಳ ಸುರೆ | ಹಸಿದ ಶಾಕಿನಿಗಣಕೆನಲು ರಂಜಿಸಿತು ರಣಭೂಮಿ ||೨|| ಕಾಲನಿಕ್ಕಿದ ಕಡಿತವೋ ದಂ | ಭೋಳಿಧರ ನಟ್ಟುಳಿಯೋ ಶೈಲದ | ಶೀಳುಗಳೋ ಬಿರುದನಿಯೋ ಬಲುಕೈದುಗಳ ಖಣಿಖಣಿಲೋ || ಹೇಳಲೇನಿದ ನಮಮ ರಣಭೂ | ತಾಳಿಗಳ ರಣನರ್ತನದ ಕರ | ತಾಳವೋ ಯೆನೆ ಕಾದಿತುಭಯವೀರ ಭಟನಿಕರ || ೩ || ಊರು ತುಂಬಿತು ಹರಿಹಯನ ಹೊರ | ಕೇರಿಗಟ್ಟಿತು ಹರಿಸುತನ ನಡು | ದಾರಿಯಾದುದು ಮರುತ ಮಾರ್ಗದ ತರಣಿ ಮಂಡಲವ || ಸೇರಿದರು ಸುರಸತಿ ಯರಿಗೆ ಸುರ | ಭೂರುಹದ ಫಲ ಭೋಜನಕೆ ರಣ | ಧೀರ ರಾಹವಶೂರ ರುಭಯದ

ವೀರಭಟನಿಕರ ||೪|| ಅವರಿವರ ಪಡಿಮುಖದ ಚೂಣಿಯ | ಬವರ ಮೊದಲಿಸಿತಾಯ್ತು ಬಹಳಾ | ಹವದ ಭಾರಿಯ ಭಟರು ಬಲುಗಾಳಗದ ಘಸಣಿಯಲಿ || ಅವನಿನೊಂದುದು ಚೀರಿಕೊಂಡುದು | ಪವನಪಥ ವಮರಾಳಿಗಳು ಜೀ | ವವನು ಕೈಗಳ ಲಟಿಸಿಸಿರ್ದರು ಹೇಳಲೇನೆಂದ ||೫|| ಆನೆಯಲಿ ತೇರುಗಳ ತೇರಿಂ | ದಾನೆಗಳನಾನೆಯಲಿ ಹಯ ಸಂ | ತಾನಗಳ ಹಯದಿಂದಲೀ ಕಾಲಾಳ ಸಂದಣಿಯ || ಆನೆಗಳ ತೇರುಗಳ ಹಯ ಸಂ | ತಾನಗಳ ಕಾಲಾಳ ಗಿರಿಗಳ | ಲಾನೆ ವರಿವರಿದಿಟ್ಟು ಕೊಲುತಿರ್ದುದು ಕಪಿವ್ರಾತ ||೬|| ಕರಡಿಯಲಿ ಕಪಿಗಳನು ಕಪಿಯಲಿ | ಕರಡಿಗಳನಾ ಕರಡಿ ಕೋಡಗ | ವೆರಡರಲಿ ಮುಸು ಸಿಂಗಳೀಕವ ಸೂಳು ಪಾಳಿನಲಿ || ತಿರುಹಿಡುತ ತರಿದಿರಿವು ತೆತ್ತು | ತ್ರಿರಿಬಲವ ಬರಿಗೈವುತಿರ್ದುದು | ಹರಿಬದತಿಬಳ ಖಳಕದಂಬಕವಸಮ ಸಮರದಲಿ || ೭ || ಎರಡು ಬಲದಬ್ಬರದ ಬಲು ಸಂ | ಗರವು ನಡೆದುದು ಸಮರದಿಳೆಯಲಿ | ಹೊರಳಿ ವೆಣನುಪ್ಪರಿಸಿದುದು ತಾಳೀಳ ರುದ್ಧದಲಿ || ಗುರುವೆನಿಸಿತಿವರಾಹವವು ಲಘು | ತರವೆನಿಸಿ ತವರಾಜಿ ಸೋಲವ | ಹರಹರಿದು ಹೊಕ್ಕನು ನರಾಂತಕ ನಬ್ಬರಿಸಿ ಹಯವ ||೮|| ಹೊಳದುದಾ ಹಯವಂಬರದ ಪರಿ | ವಳಿಯದ ಚಿರರುಚಿ ಪ್ರಭಾ ಮಂ | ಡಲದವೊಲು ಕರಕಮಂಡಲಾಗ್ರದ ಬೆಳಗು ಬಳಿಸಲಿಸೆ || ಚಳ ಚಮತ್ಕೃತಿ ಚಟುಳ ಖುರಪುಟ | ದಳಿತ ಧೂಳೀಬಿಂಬ ಚುಂಬಿತ | ವಿಲಸದಭಿನವ ದರ್ಪಗೆಲಿದುದು ನೆಲನ ನಿಮಿಷದಲಿ || ೯ || ತೊಡೆಯ ಬಿಗುಹಿನ ಲಗಿದುನರ್ತಿಸಿ | ತಡಿಗಡಿಗೆ ಗಮಕಗಳ ಗತಿಗಳ | ಕಡುಹಿನಲಿ ನಸುಕುಸಿದ ವತ್ಸಳ ದುಬ್ಬರದ ಮುಖದ || ದೃಢಗತಿಯ ದೃಷ್ಟಿಗಳ ಕೋಪದ | ಸಿಡಿದ ಕಿವಿಗಳ ನಿಟ್ಟುಸುರ ನೊರೆ | ಗಡಿಯಣದ ಹಯವಂಜೆಸಿತು ಹರಿಹಯ ತುರಂಗಮವ || ಶೂರವಾಹಕ ಸುಭಟ ನಸಮ | ಕ್ರೂರವಾಕ್ಯ ಸಿಪುಣರಿವು ಸಂ | ಹಾರವಾಹಕ ಕುಶಲ ಚಮ್ಮಟ ಚಪಳರೇವಂತ || ಚಾರಣತ್ರಯ ಚಮಕಾರ ನಿ | ಹಾರ ನಿಸ್ತ್ರಿಂಶಕ ನಿಬದ್ಧವಿ | ಶಾರದಾಹುವ ಮಲ್ಲ ಮುಝು ಭಾಸೆಂದುದಮರಗಡ || ೧೧ || ಪೂತು ವೆಡವೇಡಂಗುದಾಹುಕ | ದಾತು ದೋಹಳ ಬಂಧಗತಿ ಪುರುಹೂತ | ದೃಢಗತಿ ದೃಹಿಣ ಶೀಘ್ರಗರೇ ಪ್ರಸಿದ್ಧ ಬಲು || ಭೂತನಾತುಲಯಿತ್ರಯಿಾ ಪ್ರ | ಖ್ಯಾತ ನಾರಾಯಣ ಸುಪರ್ಣಾ | ರಾಶಿ ರಾವುತು ರಾವುತೆಂದುದು ವಂದಿ ಸಂದೋಹ || ೧೨ || ಏರಿದುದು ಹಯವಮನು ಗರುಡನ | ಹಾರಿಕೆಯ ಹವಣಿನಲಿ ಘೆರೆಮುರಿ | ದೇರುವಂಬುಧಿಯಂತೆ ತುರಗದ ಘಟ್ಟ ಬಳಿಸಲಿಸಿ || ಏರದುವು ಪಡಿಮುಖದೊಳುಚಿತದ | ಕಾರುಗಿಡಿಗಳ ಖಂಡೆಯವ ಕೈ | ದೋರಿಕೆಯ ಲಗಲದಲಿ ನೆಲಕಡಿ ಖಂಡಮಯವಾಗೆ ||೧೩|| ಬೆರಸಿಕೊಬ್ಬರು ಹರಹಿನಲಿ ಹೊಡ | ಕರಿಸಿ ಮಾರಾಂತತಿಬಲರ ಮೋ | ಹರವು ಮುಕ್ಕಡಿಬಾಯ್ತು ಮುಂಬಿಗೆ ಬಿದ್ದ ಭಟನಿಕರ || ಸೊರೆಯ ನುಬ್ಬಿರಿದೇಳ್ವ ರಣದು | ಬ್ಬರದ ರಕುತದ ತೊನಲು ಹೊಳಕಿತು | ಹೊರಳಿದುವು ಹೇರಾಳ ಹೆಣದಿಂಡುಗಳು ಕಪಿಬಲದ || ೧೪ || ಆರು ನೋಡಿದ ರುರುಕೃಪಾಣದ | ಧಾರೆ ಗಿಕ್ಕಡಿಯಾದವರು ಮುರಿ | ದಾರ ನೋಚಲುಕೂಡೆ ಲವುಡಿಯ ಲರಳ್ವ ತಲೆಯುವರು || ಆರ ನೋಡಿದರವರು ಗವೆ ಸುಕು | ಮಾರಿ ತಾಗಿದ ತಳಿತ ಮಿಡುಳಿನ | ಪೂರಣಿವ ಭಟರಲ್ಲದಿಲ್ಲಾ ಕಪಿ ಕದಂಬದಲಿ ||೧೫|| ಅಸುರಸುರ ಬಲ್ಲಿಹದ ಶಿವಿಗಳು | ಬಸುರ ಬಾದಣಮುಚ್ಚು ಕರುಳಿನ | ವಿಶಿಖ ವಿಹರಣದಳಿತಗಳ

ನೋರ್ದಂಡ ಮಂಡಲಿಯ ॥ ಮುಸು ಕರಡಿ ಸಿಂಗಳೀಕ ಕೋಡಗ। ವಿಸರಗಳ ಕಿಂಕಿ
ಣಿಯ ಸಂಭ್ರಮ। ವೆಸೆದುದೈ ಲವ ಕೇಳು ಕಾಲನ ಸಂತೆಯಂದದಲಿ ॥ ೧೬ ॥ ಏತರು
ಬ್ಬಟೆ ಪೂರ್ವಯುಗದ ಮ। ಹಾತಿಬಲ ಖಳರೀ ನರಾರಿಯ। ರೀತಿ ಗೆಣೆಯಿಡೆ ಪಡಿಯು
ಕಾಣೆನು ಕದನ ಕೇಳಿಯಲಿ ॥ ಕೌತುಕವ ನಿಮ್ಮ ಸೇನಾ। ವ್ರಾತವನು ನಡುವಿಕ್ಕಿ ತಿರು
ಹುತ। ಲಾತ ಚಕ್ರದ ಚೂಣಿಯಲಿ ಹಯವಾ ನರಾಂತಕನ ॥ ೧೭ ॥ ಆರು ಲಕ್ಷಿಸ
ಬಹುದು ಹೂಣಿಸಿ। ದಾರುಭಟಗಳ ಭಟರ ಕೈಗಳ। ಭೂರಿ ಭೂಧರ ಭೂಜತತಿ ಬೆರ
ಗಿಟ್ಟವಾಜಿಯಲಿ ॥ ಸಾರೆ ಬೀಳ್ವುದನರಿದು ಮಿಕ್ಕಿನ। ವೀರರಿಡುವದ್ರಿಗಳು ವಿಶ್ವ ವಿ।
ಹಾರ ವಿಶ್ವಪಾತ್ರ ಮಯವಾಗಿರ್ದುದಗಲದಲಿ ॥ ನೀರೊಳೆಳೆದಸಿಯಂತೆ ರಕ್ಕಸ। ವೀರ
ನುಗ್ರಕರಾಗ್ರ ಬಂಧದ। ವೀರ ಖಂಡೆಯ ವಿಹರಿಸಿತು ವಾನರ ಸಮುದ್ರದಲಿ ॥ ಧಾರೆ
ಗಾಣೆಸದೊಲದ ವೈಯ್ಯಲಿ। ಧಾರುಣಿಗೆ ಬೀಳ್ವಭಟ ಕಪಿಭಟ। ರೋರಣದ ಸಾಲಿ
ರ್ದವಾ ರಣರಂಗ ಮಧ್ಯದಲಿ ॥ ೧೯ ॥ ಬಿದ್ದ ನಳ ಹೊರಳಿದನು ಗಾಯದ। ಮದ್ದವರ
ಸಿದನಾ ಸುಷೇಣಕ। ನೊದ್ದುಕೊಂಡನು ಶರಭ ಶತಬಲಿ ಗೇರು ಬಲುಹಾಯ್ತು ॥ ಇದ್ದ
ಮಿಕ್ಕಿನ ವೀರ ವಾನರ। ರುದ್ದುರುಟತನವಾವತಾವಿನೊ। ಳಿದ್ದುದೋ ನಾನರಿಯೆ
ಹೊಗಳುವೇನೆನ ರಣರಸವ ॥ ೨೦ ॥ ಕಟಕ ಕಡೆಯಾಡುವ ಕೃತಾಂತನ। ಭಟರ ಪಥ
ದುರುಬುಗಳಿಗಿಟ್ಟರ। ವಟಿಗೆಯೋ ರಣಭೂತದೆಂಜಲುಗೈಗೆ ನೀರೆರೆವ ॥ ಘಟದ
ವಾರಿಯೋ ವೀರಖಳ ನಿ। ಚ್ಚಟದ ಖಡುಗದ ತುದಿಯಲುದಿಸಿದ। ತಟನಿಯೋ ತಾನೆ
ನಲು ಕರೆದುದು ಖಡುಗ ಶೋಣಿತವ ॥ ೨೧ ॥ ರಣಕೆ ಬಂದನು ರಂಭ ರುಮನಸು। ಜುಣು
ಗಿದುದು ಜಾಂಬವನ ತನು ಡೆಂ। ಥಣಿಸಿ ತೇರಿನ ಲಗ್ನಿಸುತ ಗಜ ಗಂಧಮಾದನರು ॥
ಮುಳುಗಿದರು ರಕುತದಲಿ ರವಿಜನ। ಗುಣಿಹ ನಿಂದುದು ಸುಮುಖ ದುರ್ಮುಖ।
ರಣವು ಚಿಮ್ಮಿದ ರಟ್ಟೆಯಾಡಿದನನಿತು ವನಚರರ ॥ ೨೨ ॥ ಆರಿವನು ಶಿವಶಿವ ವಿಭೀಷಣ।
ವೀರರೊಳಗಗ್ಗಳನು ರಣ ಜಂ। ಝಾರಸಿವನಹ ನಮಮ ಜನನಿಯ ಜಠರದಿಂದಿವನು ॥
ನಾರುವನು ಸಹಿತುದಿಸಿದನೆ ಸಮ। ಸೇರುವೆಯಲಿವಸಹಿತ ರಡೆದೀ। ಧಾರುಣಿಗೆ ದಿವಿ
ಜೇಂದ್ರ ಪಶುವೆಂದರಸ ಬೆಸಗೊಂಡ ॥ ೨೩ ॥ ದೇವ ಚಿತ್ತೈಸೀ ಮಹಾಹಯ। ದೇವ
ಪಶುವಿಂಗುದಿಸಿ ಸೇರಿತು। ರಾವಣಂಗೀ ಮೊದಲ ಕಪ್ಪದಲಮರ ವಲ್ಲಭನ ॥ ಈ ವಿಗಡ
ಹಯವಿವನ ಕಲಿಕೆಯ। ನೈವಳಿಯ ವಶವಾಯ್ತು ಮಗನಿವ। ನಾ ವಿಬುಧರಿಪು
ರಾವಣಂಗೆಲೆ ರಾಮ ಕೇಳೆಂದ ॥ ೨೪ ॥ ಎಂಬ ಮಾತೇನಿವ ನರಾಂತಕ। ನೆಂಬ ರಕ್ಕಸ
ನಿವನಲೀ ಪ್ರತಿ। ಬಿಂಬವಿಲ್ಲೀ ನೆಲೆಗೆ ಸುರ ನರ ನಾಕ ಲೋಕದಲಿ ॥ ನಂಬುಗೆಯ ಭಟ
ನಿವನು ಯುಗಳದ। ಶಾಂಬಕಂಗೆಲೆ ಜೇಯ ಸಮರಾ। ಡಂಬರದ ಸಂಭ್ರಮವ ಚಿತ್ತೈ
ಸೆಂದನಸುರೇಂದ್ರ ॥ ೨೫ ॥ ಎಂದು ನುಡಿವನಿತರೊಳು ಹಯವೈ। ತಂದುದಾ ನೃಪ
ಮೋಹರಕೆ ರಘು। ನಂದನನ ಸಮ್ಮುಖಕೆ ನೂಕಿದ ನವ ತುರಂಗಮವ ॥ ನಿಂದು
ನಿಬ್ಬಗೆಯಾಗಿ ರವಿಜನ। ಮಂದಿ ಬಳಿಕಾಸಮಯದಲಿ ಶಿಶು। ಲಂದದಲಿ ಹೀವರಿಸು
ತಂಗದ ನೆರಗಿದನು ಖಳನ ॥ ೨೬ ॥ ದೂಟಿ ಬಿದ್ದುದು ಶಿರದ ಸೀಸಕ। ದೂಟ ದಮಳಾ
ಸಹಸ್ರ ರತ್ನ ಕಿ। ರೀಟ ಯಂಬರದಿಂದಲೇ ನೆಲಕುರುಳಿ ಬೀಳ್ವಂತೆ ॥ ದಾಟಿ ಮುರು
ಮುಷ್ಟಿಯಲಿ ರಕ್ಕಸ। ಘೋಟಕದ ಕಟವಾಯ ಪಥಿಕಾ। ಸ್ಫೋಟಿಸೆಂದೆರಗಿದನು

ಬೆರಗಿಡೆ ಸುರಕಟಕ ॥೨೭॥ ಭಾಪು ವೀರರ ದೇವದೇವ । ಸ್ಥಾಪನಾಚಾರ್ಯ್ಯಕನ ಮಗನ । ಲಾ ಪುರಂದರ ಪೌತ್ರನಲಾ ಲೇಸು ಲೇಸೆನುತ ॥ ಆ ಪುರಾಂತಕ ಹೊಗಳಿದನು ಗಿರಿ । ಜಾ ಪುರಂಧ್ರಿಗೆ ತೋರಿ ಖಳನಿವ । ಕೋಪದಲಿ ಕಿಡಿಗೆದರಿ ಝಡಿದೆತ್ತಿದನು ಖಂಡೆಯವ ॥ ೨೮ ॥ ಕಡಿಯಣವ ಕೊಡಹುತ ತುರಂಗಮು । ಮಡದ ಲೌಕಿದು ತಿರುಹಿ ಹಾಯ್ಕಿದು । ಹೊಡೆದ ಸಿವನೀತ ನಡಹಾಯುಧದಲಿ ಸೀಹಾರದಲಿ ॥ ಶಿಡಿದು ಬೊಬ್ಬಿರಿದುಬ್ಬಿ ಕಂಗಳ । ಕಿಡಿಯ ಕೋಪದಲಸುರಹಯ ನೆಲ । ಕಡಿಮುಗುಚ ಲೆರಗಿದನು ವಾಲಿಜ ನುಗ್ರಮುಷ್ಟಿಯಲಿ ॥ ೨೯ ॥ ತುರಗದೇರಾಟಿಕೆಯ ಭಟಂಗೆ । ಗುರುಪಲಾ ಜಗದಲಿ ನರಾಂತಕ । ನುರುಳಿಪಶ್ವವ ನುಪ್ಪರಿಸಿ ಚಪ್ಪರಿಸಿ ಹಾ ಯೆನುತ ॥ ಕರದ ಒಲ್ಲೆಹದಿಂದ ವಾಲಿಯ । ವರ ಕುಮಾರನ ತಿವಿಯೆ ಹಲಕಿನ । ಸರಕಿನಲಿ ಮೊನೆದೋರಿ ತುಗುಳುತ ರಕುತ ಧಾರೆಯಲಿ ॥ ೩೦ ॥ ಮನದ ಮುರವೆಯ ಝೋಂಪಿನಲಿ ಕಪಿ । ತನುವ ಸಂತೈಸುವ ರಣಶ್ರಮ । ದನಿತರೊಳಿ ನೂಕಿದನು ತುರಗವ ತರಣಿವಂಶಜನ॥ ಮೊನೆಯ ಮೋಹರಕೊನದು ಸೂಸಿದ । ವನಚರರು ಪಡಿಭವಿಸಿ ನೂಕಿದ । ದಿನಕುಲೇಂದ್ರನ ಮುಂದೆ ಮಂಡೋದರಿಯ ನಂದನನು ॥ ೩೧ ॥ ಕೆರಳಿ ಬಳಿಕವ ನಸ್ತ್ರ ಶಸ್ತ್ರವ । ಸರಿಗೊಳಿಸಿ ಸವ್ಯಾಪಸವ್ಯದ । ಉರುಳುಗೆಡಹಿದ ನೂಕುವತಿಬಲ ವೀರ ವಾನರರ ॥ ಗಿರಿತರುಗಳಿರಿತವನು ಒಗೆಯದೆ । ಹರಿಸಿದನು ಖಳ ಹರಿಹಯಪ್ರತಿ । ತುರಗವನು ನಿಲಿಸಿದನು ರಾಘವರಾಯನಿದಿರಿನಲಿ ॥ ೩೨ ॥ ಅರಳ್ದ ನಾಸಾಪುಟದ ಪವನನ । ಘುರುಘುರುಸ್ವನದ ವಿಲಣದ ಕಿರು । ನೊರೆಯ ಕಬ್ಬಿಯ ಘಣಘಣತ್ಕಾರದ ಗಡಾವಣೆಯ ॥ ಸುರಿವ ಬೆಮರಿನ ಬಾಯಲೊದಳಿಯ । ಪರಿಸರದ ಪತ್ಸಳಡ ಫೇನದ । ಖುರದ ಕುಣಿಹದ ಕುದುರೆ ಬೀರಿತು ಭಯುವನರಸಂಗೆ ॥ ೩೩ ॥ ಎಲೆಲೆ ರಾಮನ ಪಡಿಮುಖದೊಳಿಟ್ಟಣಿಸಿತೋ ಹಯ ಬದುಕಿನಾಶೆಯ । ಬಳಿಯ ಬಿಡಿರೋ ಸ್ವಾಮಿಕಾರ್ಯಕೆ ಬಿಸುಡಿರೋ ತನುವ ॥ ಉಳಿದರುಳಿವುದು ಕೀರ್ತಿ ರಣದೊಳ । ಗಳಿದ ರಳಿವುದು ಜನ್ಮಜನ್ಮ । ವಳಿಯ ಕಲ್ಮಷವೆನುತ ಕಪಿರಾಜೇಂದ್ರ ಗರ್ಜಿಸಿದ ॥೩೪॥ ಕೆಣಕಿದದು ಕಟ್ಟಳವಿಯಲಿ ಬಲು । ಗಣೆಯ ಬವರದ ಭಟರ ಬಲು ಭಾ । ರಣೆಯ ಬೆಟ್ಟಗಳಿಂದ ಬಲ್ಲಿದ ಕಪಿಭಟವ್ರಾತ ॥ ಆಣದನವನಾ ಶೈಲಗಳ ಸಂ । ದಣೆಯ ಸಂಧಿಸುವತಿಬಲರ ಕಡಿ । ವೆಣನನುಬ್ಬಿಸಿ ಬೊಬ್ಬಿರಿದು ನೂಕಿದನು ನಿಜಹಯವ ॥೩೫॥ ಇದಿರಲೌಕುವ ಪನಸ ವಿನತರ । ಹೊದರ ಮುರಿದನು ವಿಾರಿ ವಾಮದ । ಲೊದಗುವಗ್ಗದ ಕುಮುದ ಮೈಂದ ದ್ವಿವಿದ ದಧಿಮುಖರ ॥ ಕೆದರಲಿಚ್ಚನು ಜಲದಲೌಕುವ । ಕುದುಕುಳಿಗ ಕಪಿಭಟ ಸಮೂಹವ । ಕದಳಿ ದರಿದನು ಕೊಂಡನಪರದ ಲೌಕು ವತಿಬಲರ ॥ ೩೬ ॥ ತಿರುಹಿ ತೇಜಿಯ ಮತ್ತೆ ಮುಸುಕುವ । ಶರಭ ಶತಬಲಿ ಗಜ ಗವಾಕ್ಷರ । ನೆರವಿಯನು ನಿಂದಿರಿಸಿದನು ಸೇತುವಿನ ಸರಿಸದಲಿ ॥ ಧುರದ ಹಂಬಲ ಬಿಡಿಸಿ ಲಂಕಾ । ಪುರದ ಭಯಕರ ನೊಡನೆ ಬಲು ಸಂ । ಗರವ ಸಂಘಟಿಸಿದನು ಹೊಗಳೆ ಸಮಸ್ತ ಸುರನಿಕರ ॥ ೩೭ ॥ ತಿಳಿದ ಮೂರ್ಛೆಯಲಿಂದ್ರಸುತ ಸುತ । ನಳವಿಗಭಿಮುಖನಾಗಿ ಕಾದಿದ । ಖಳನ ಕಾಣದೆ ಕೇಳಿದನು ರಘುನಾಥನೊಡ್ಡಿಸಲಿ ॥ ಕಳಕಳದ ಕಾಳಗವ ನಿದಕ್ಕೆ । ಗೋಳಿದನಲಾ ರಾಮಚಂದ್ರನ । ಬಳಿಯಲೆನುತೌಡಗಿಮ ಹಲುಮೊಡೆದುಬ್ಬಿ ಬೊಬ್ಬಿರಿದ ॥ ೩೮ ॥ ಕೂಡಿದುದು ಕಡುಗೋಪ

ಬಳಿಕವ | ನಾತಲೇನದ ವಿಲಯ ರುದ್ರನ | ಪಾಡಿನಲಿ ಫಣಿರಾಜ ಕೂರುಮರಸುಗಳು ಕ್ಕಡಿಸೆ ॥ ತೀಡಿ ನೆಲದಲಿ ಕರವನಬ್ಬರ | ಗೂಡಿ ಪುಟನೆಗೆದವನಿ ಮಂಡಲ | ಬೀಡ ಬಿಡಲೈತಂದು ತಿವಿದನು ಕಲಿ ನರಾಂತಕನ ॥ ೩೯ ॥ ಎರಗಿದಶನೀಘಾತ ಮುಷ್ಟಿಯು | ಲೊರಗಿದನು ನೆಲಕಸುರ ಕೈಯೊಡ | ನೆರಗಿದನು ಮತ್ತೀಳ್ವವನ ನುಬ್ಬಿರಿದು ಬೊಬ್ಬಿರಿದು ॥ ಮುರುಕೊಳಿಸಿ ಮತ್ತೀಳ್ವವನ ಗೋ | ಣರುಗೆ ತಿವಿದನು ಪರಿಭವಿಸಿ ನಿಲು | ವರಕೆ ಘನ ಲಿಕ್ಕಿತಸು ಮುಗುಳೆ ಮಡ ಪ್ರಹಾರದಲಿ ॥೪೦॥ ಏಳ ಲೇಳಲು ತಿವಿದ ನಂಗದ | ಬೀಳ ಬೀಳಲು ಭಟನ ನಿಪ್ಪ | ತ್ತೀಳು ಸೂಳಿನ ಮೇರೆ ಶರಣನು ಸನ್ನೆಯನು ಮಾಡೆ ॥ ಮೇಲೆ ಸುರ ರುಬ್ಬಿರಿಯೆ ವಾಲಿಜ | ನಾಲಿ ಬಳಿಕ ತುಂಗಮದ ಹಿಂ | ಗಾಲ ಹಿಡಿದೆರಗಿದನು ವೀರ ನರಾಂತಕಾಸುರನ ॥೪೧॥ ಎರಗಿದಾ ಕ್ಷಣ ಹಯಸಹಿತ ನೆಲ | ಕೊರಗಿದನು ಖಳ ಬಳಿಕ ಹೊಕ್ಕನು | ಮೆರೆಸಿ ಕೊಳುತೂರೊಳು ನರಾಂತಕ ನಾಕೃತಾಂತಕನ ॥ ಉರುತರದ ಸಂತೋಷವಲಿ ಹೆ | ಬ್ಬರೆಯ ಹೊಯ್ಸಿದ ನಿಂದ್ರ ಸೇನೆಯ | ಕರೆದುದಮರ ವಧೂ ಕದಂಬಕ ಹರಸುತಂಗದನ ॥ ೪೨ ॥ ರಣಗಲಿಯ್ಯೆ ಮುಝು ಭಾಪು ವೀರಾ | ಗ್ರಣಿಯೆ ಬಳಲಿದೆ ಯೆಂದು ಮೊಮ್ಮಗನನ | ಹಣೆಯ ವೇಲುಗಿಸಿದನು ಪನ್ನೀರಿನಲಿ ಮೇದಿಸಿದ ॥ ಕಣಲಿಕೆಯ ಕುಸುಮಗಳ ನಮರಾ | ಗ್ರಣಿ ಶಚೀದೇವಿಯರು ವರ ಘೂ | ಷಣವ ಕಳುಹಿದ ರಂಗದಂಗಮಲಾಂಗ ದಾಹ್ವಯದ ॥೪೩॥ ಕೆದರಿದನು ಬಳಿಕಟ್ಟಿ ಮುತ್ತಿದ | ಕುದುರೆಗಳ ರಾವುತರ ರಣದಲಿ | ಮೆದೆಗೆಡಹಿದನು ಬಾಹುದಂಡ ಪದಾಭಿಘಾತದಲಿ ॥ ಇದಿರ ವ್ಯಗ ವೇನಾನುವವೆ ಕೆದ | ರಿದರೆ ಪುರುಷಾ ಮೃಗದ ಗಾವಳಿ | ಗಿದಿರದಾವ್ನೈ ತೊರವೆಯುರಸನ ಕೃಪೆಯು ಕಿಂಕರಗೆ ॥೪೪॥

ಮುವ್ವತ್ತನೆಯ ಸಂಧಿ ಸಮಾಪ್ತಂ.

ಮುವ್ವತ್ತೊಂದನೆಯ ಸಂಧಿ.

ಸೂಚನೆ॥ ರಣ ದಿಶಾಟ ಮಲ್ಲ ಮಲ ಪರಿ | ಗಣ ಭಯಂಕರ ಹನುಮನಾ ರಾ | ವಣ ತನೂಜ ತ್ರಿಶಿರ ದೇವಾಂತಕರ ಮರ್ದಿಸಿದ ॥

ಪದ್ಯ॥ ಕುಶ ಕುಮಾರಕ ಕೇಳು ಬಳಿಕಾ | ತ್ರಿಶಿರ ದೇವಾಂತಕರು ಸಲೆ ಸೈರಿಸುವರೇ ಸಂಗರ ದೊಳಳಿದ ನರಾಂತಕನ ಕಂಡು ॥ ಮುಸಗಿ ದ್ಗ್ದದ ಕೋಪ ಶಿಖಿಧಗ್ಧೈಸೆ ದಿವಾಕರ ಸುತನ ದಳದಲಿ | ದೆಸೆಯು ದೇವಕದಂಬ ಕಂಪಿಸೆ ನೂಕಿದನ್ರಥವ ॥೧॥ ಬಳಿ ಸಲಿಸಿದುದು ವೀರರಿಬ್ಬರ | ಬಳಿಯ ಲತಿರಥ ವಾಜಿ ವಾಜಿಗ | ಳಳುಕೆ ವಾರಿಜಸಖನ ವಾರಿಜ ಬಂಧು ಕಳವಳಿಸೆ ॥ ತೊಲಗದಿಹೆನೇ ಸೂರ್ಯಸುತ ನಾ | ಬಳಿಯವರ ಬಲುಹೇನು ಸಮರಕೆ | ಮಲೆತ ನೊಬ್ಬನೆ ವೀರ ಸಾಹವ ಧೀರ ಕಲಿಹನುಮ ॥ ಉಳಿಯ ನಿಂದುದು ನಿಂದಿರ್ದನು ಕೋ | ಳಳವಿಯಲಿ ಕಪಿನಾಥನಾತನ ಬಳಿಯ ಕಲಿ ನೀಲ ॥ ಹೊಳಕಿದನು ಹುತವಹಜನೊತ್ತಿನ | ಳವಿ ಗೊಟ್ಟನು ಬೆಟ್ಟಗಳ ಬಲು | ಗಲಹ ವಿಂದ್ರನ ಸುತನ ಸುತ ದುರ್ಮಾನ ದುಬ್ಬಸಲಿ ॥೩॥ ಅತ ನೆಡವಂಕದಲಿ ಪದ್ಮಜ | ಜಾತ ಜನಿತನು ನಿಂದಿದನು ವೈ | ಯಾತು ನಿಂದನು ಬಲದಲಾ ಧನ್ವಂತರಿ

ಮಸೂನು ॥ ಆತನುಬ್ಬಟೆ ವಿಕ್ರಮದೀಚಿಪು । ಲಾ ತಮಿಸ್ರೀಚರನ ಪರಿಪದ । ಲಾತು
ಹಳಚಿದ ರವದಿರಾಲಂಕಾ ಭಯಂಕರನ ॥೪॥ ಹೊಕ್ಕ ನಟವೀ ಸಂಗಡಲಿ ಮೊಗ ।
ವಿಕ್ಕ ಕಂಬರ ಗಿಚ್ಚಿನ ಪೊಲಾ । ರಕ್ಕಸನ ರಥ ವಾಜಿಯಲಿ ರೌದ್ರಾತಿ ರೇಕದಲಿ ॥
ಮುಕ್ತ್ರರುಪಡಿ ರಥರ ರಥವ ನ । ಭಕೆ ಬಿಸುಟನು ಬೀದಿವರಿ ದೆಡೆ । ಹೊಕ್ಕ ರಥಿಕರ
ರಥವ ನಂಭುಧಿಗಿಟ್ಟ ಬೊಬ್ಬಿರಿದ ॥೫॥ ತುಳಿದ ನೆಡಬಲಸಾರಿಯಲಿ ಸಂ । ಕುಳದ
ರಥಿಕರ ತೂರಿದನು ನಭ । ಕಳವಿ ಗೊಂಡೆಸೆವತಿರಥರ ಚಾಚಿದನು ಬಳಿರಥವ ॥
ಆಳಿದ ಜಗಕುಬ್ಬೆದ್ದ ಗಾವ್ರನ । ಕೊಲೆ ಕೆಲಸಕೆಣೆಯೆನಲು ರಥಿಕರ । ತಳಪಟವ
ಮಾಡಿದನು ನಿಮಿಷಾರ್ಧದಲಿ ಕಲಿಹನುಮ ।೬॥ ಭಯದಲೋಡಿದ ಸೇನೆ ಹನುಮನ ।
ಜಯಮುಖ ದೊಳೊದಗಿದುದು ರಿಪು ನಿ । ರ್ಭಯ ಮನೋರಾಗಿಗಳು ತರು ಶೈಲಾಯು
ಧಂಗಳಲಿ ॥ ನಿಯುತ ರಣ ಕೃತ ಮುಖರ ಪರಿ ಸಂ । ಚಯ ಪರಾಕ್ರಮ ಸಖರ ರಿಪು
ನಿ । ರ್ಭಯ ಮನೋರಾಗಿಗಳು ತರು ಶೈಲಾಯುಧಂಗಳಲಿ ॥ ೭ ॥ ಬಳಿಕಲಾ ಖಳ
ರಿಬ್ಬರುಬ್ಬಿದ । ಹಳುವಟಿಯ ಕಪಿಭಟರ ಮೋಹರ । ದೊಳಗೆ ಮೋಹರಿಸಿದ ಸುಮಾ
ರ್ಗಣವಾ ಮಹಾಂಬುಧಿಯ ॥ ಕಲುಮರನ ಕೋಲಾಹಲದ ಕೈ । ಚಳಕದಿಂದವೆ
ಕೊಂದ ರಗಣಿತ । ಬಲಿಮುಖರ ಬರ್ಹಿರ್ಮುಖಾವಳಿ ಬೆದರೆ ಗಗನದಲಿ ॥೮॥ ನೆಗಹಿ
ಹರಿದುವು ಹೆಣನ ಬಣಬೆಗ । ಳಗಲದಲಿ ನೆತ್ತರಿನ ಹೊಳೆ । ಲುಗಳ ಸಂದಣಿ
ಯಾಯ್ತು ರಣರಂಗದಲಿ ಭೂತಗಣ ॥ ಹಗಲಿರುಳಿ ನೊತ್ತಂಬರಿದ ಕಾ । ಳಗದವೊಲು
ಕಪಿಗಳ ಕದಂಬದ । ವಿಗಡ ರಣ ರಂಜಿಸಿತು ಘನ ರೌದ್ರಾಭಿಧಾನದಲಿ ॥೯॥ ಧುರ
ಧುರಂಧರ ಭಟರೊಳಗ್ಗಳ । ಸುತನಲಾ ತ್ರಿಶಿರನು ಸುರಾಂತಕ । ರೆರಡು ವ್ಯೆಯಲಿ
ಮುಸುಕು ವತಿಬಲ ವೀರ ವಾನರರ ॥ ಶಿರದ ತೋರಣ ದೋರಣವ ನಂ । ಬರ
ದೊಳಕೆ ವಿರಚಿಸುತ ವಿಶ್ವಂ। ಭರನ ಕರುಣದ ಕಿಂಕರನ ಕೆಣಕಿದನು ಖತಿಯಲಿ ॥೧೦॥
ಸರಳ ಸಾರದ ಸಂಣೆಯ ಲಂ । ಬರ ದಿಶಾವಳಿ ತುಂಬಿ ತಿಬ್ಬರ । ಕರಚಮತ್ಕೃತ
ಚಾಪ ನಿಪುಣ ಕಲಾಪ ಮುತ್ತ್ರಕದ ॥ ಧರಿಸಿತೋ ಗಿರಿ ಮೇಣು ವಿಪಿನೋ । ತ್ತ್ರರ
ತನುತ್ರ್ರವ ನೆಂಬ ವೊಲು ನಿರ್ಭರ ಶರೌಘ ಶರೀರ ನಾಗಿರ್ದನು ಸಮೀರಸುತ ॥೧೧॥
ಎಲೆಲೆ ರಕ್ಕಸ ವೀರ ರಿಬ್ಬರ । ಕಲಹ ಕೆಡುಹೋಹನುಪ ನಬ್ಬರ । ಗಲಹ ಹವಣಿಸಿ
ತೆನುತ ನಳ ನೀಲಾಂಗದಾದಿಗಳ ॥ ಕಲುಮರದ ಕೋಳಾಹಳ ದೊ । ಳಾ ಕಲಿಗ
ಳಿಬ್ಬರ ನಧಿಕ ರಬ್ಬರ । ಸೆಳೆದು ಸಮರವನಿತ್ತು ಕಾದಿದ ರಖಿಳಚಿತ್ರದಲಿ ।೧೨॥ ಆತು
ಕಾದುವ ಕಪಿ ಬಲಾಬ್ಧಿಗೆ । ಸೇತುವನು ಕಟ್ಟಿದರು ಶರ ಸಂ । ಪೂತದಲಿ ಸರಿಯಿಲ್ಲ
ಸಂಗತ ಕೆಮ್ಮ ಸಾಹಸವ ॥ ಮಾತ ಮರೆದರು ಕೇಳಿರೈ ರಘು । ಜಾತರಿರ ಜಾಳಿಸಿದ
ಸೇನಾ । ವ್ರಾತಕವಧಿಯ ಕಾಣೆನಾ ರತಿರಥರ ಸಮರದಲಿ ॥೧೩॥ ಕೊಂದ ರೆರಡಬ್ಬು
ದವ ನನಿಬರು ಸಂದಪ್ಪೆ ತಲೆ ಗಾಜಿಯಲಿ ರವಿ । ನಂದನನ ಕರುಣದಲಿ ರವಿನಂದನನ
ಪಟುಭಟರು ॥ ಮುಂದನೊಡ್ಡಿ ನೊಳಾಯ್ತು ದಶರಥ । ನಂದನನ ನೋಲಾಗ ತಾಗುವ
ರೆಂದು ಬಲು ಬೊಬ್ಬಾಟವವ ಕೇಳಿದನು ಕಲಿ ಹನುಮ ।೧೪॥ ಕೇಳಿದಾಕ್ಷಣ ಮುಸುಕಿ
ಕೊಂಡಿತು । ಕಾಲುಗಳ ನುರೆ ಕೆದರಿ ಘನದಂ । ಷ್ಟ್ರಾಳಿ ಯಿಂದೌಡಗಿದು ಕೇಳಿದನಾ
ಖರಾಂತಕನ ॥ ಮೇಲೆ ಕವಿ ದೆಸೆವಿಬ್ಬರಸುರರ । ಕೋಲ ಕೋಳಾಹಳವ ನಿದುಕಾ ।

ವೇಳೆ ಸೇವೆಗೆ ಸಾಕಿ ದೊಡೆಯುಂಗೆನುತ ಪುಟನೆಗೆದ ॥೧೫॥ ಸಾರಿದನು ಸಿವ್ಮೈತ್ರ್ಯನಿದಿರಲಿ। ಸಂಧಿಸಿದ ರಣಗಲಿಗಳುಗ್ರ । ಸ್ಯಂದನದ ಮುಂಭಾಗದಲಿ ಮುಂಬರಿವ ಹೊದ್ಬೊರೆಯು ॥ ಮುಂದೆ ನಿಲುವ ಮಹಾದ್ರಿಯ ವೊಲು। ಯೇದು ಬೊಬ್ಬಿರಿ ದುಬ್ಬಿ ದಶರಥ । ನಂದನರ ನೀಕ್ಷಿಸುತ ನಲವೇರಿದನು ಕಲಿಹನುಮ ॥೧೬॥ ತೀರಿಸುವೆ ನೀ ರಕ್ತಸರ ರಣ। ದಾರಟಿಯ ನೆನುತಿಬ್ಬರಸುರರ। ತೇರನನು ಕೈಗೊಂಡು ತಿರುಹಿಟ್ಟನು ನಭಸ್ಥಳಕೆ ॥ ಊರು ಸುಡುಕನ ಕದನ ಕೌತುಕ। ಸಾರವನು ಚಿತ್ರೈಸೆನುತ ರಘು। ವೀರ ನಿದಿರಲಿ ಭುಜವ ಹೊಯ್ದುಬ್ಬರಿಸಿದನು ಹನುಮ॥೧೭॥ ಆವ ಸಮರಾಭ್ಯಾಸಿಗಳೋ ಸಭ । ಟಾವಳಿಯ ಲಸುರರಲಿರದ ಗಗ । ನಾವಲಂಬಿತವಾಗಿ ವಿದ್ಯಾಧರರ ಕರುಣದಲಿ ॥ ಆವಿಬುಧರಿಪುವಾ ತ್ರಿಶಿರ ಖಳ । ರಾ ವಿಮಾನದ ಸುರರು ಬೆರಗಿಡೆ। ಪಾವಮಾನಿಯು ಮುಂದೆ ಸಿಂದರು ಹಲಗೆ ಖಡ್ಗದಲಿ ॥೧೮॥ ವಿಗಡನೈ ಪವಮಾನಸುತನಸು । ನಗೆಯ ಲಿವರೊಡ ನವರ ವೊಲು ಕಾ । ಳಗವ ತೋರುವೆ ನೀ ಕಕುಸ್ಥಜ ನೃಪರ ಕಂಗಳಿಗೆ ॥ ಸೊಗಸ ಸಲಿಸುವೆ ನೆನುತ ನೋಡುವ। ಗಗನ ವಳಯದ ವೀರಭದ್ರನ । ನುಗಿದ ಖಡ್ಗವ ಕೊಂಡು ಬಾಹುಪ್ಪಳಿಸಿ ಬೊಬ್ಬಿರಿದ॥೧೯॥ ಚಾಚಿದರು ಖಂಡೆಯವನು ಭಯ ನಿ । ಶಾಚರರುಪಾಯ ಪಾಡುಪಾಡಿನ । ಕೈಚಳಕ ಧಟ್ಟಣದ ಚಟ್ಟಣ ದಧಿಕ ಚಿತ್ರದಲಿ ॥ ಈ ಚಟುಳ ವಿಕ್ರಮ ಘನ ಕ್ಷಣ । ರಾಜೆಯಂತಿರ ಹೊಳೆವ ಖಡುಗವ । ನಾ ಚರಾಚರ ವಿಭು ನಿರೀಕ್ಷಿಸೆ ನೆಗೆದನಾ ಹನುಮ ॥ ೨೦ ॥ ಅಣವ ನೆಡದಲಿ ಬಲದ ಲಾತಗ। ಕೊಣವ ಖಡ್ಗವ ಖಡ್ಗದಲಿ ಖ। ಡ್ಡಣಿಸೆ ಕೈಮೈ ಉಳಿಯ ಲಿಬ್ಬರಿ ಗೊಬ್ಬ ನುರವಣಿಸಿ ॥ ರಣ ರಹಸ್ಯದ ರಕ ತನ ದು। ಬ್ಬಣವ ವಿದ್ಯಾಪ್ರೌಢಿಯಲಿ ಸುರ। ಗಣ ಹೊಗಳೆ ಹೊಯ್ದಾಡಿದರು ಕಣಿಖಟಿಲ ಸಟುದದಲಿ॥ ಖಳಪಳನೆ ಕಟ್ಟುಲಿಹಿ ನುಜ್ವಲಿ । ವಳಕಗಳ ಪಡಿತಳದ ಮುಂಡಿಯ । ಹೊಳಹುಗಳ ಹೊಯ್ಲುಗಳ ಖಡ್ಗದ ಕಡಿಯ ತುಂತುರಿನ ॥ ಉಳಿಯ ಪಯಪಾಡಿನಲಿ ಬವರಿಯ। ಸುಳಿವುಗಳ ಲಂಘನೆಯ ಲಾಘವ। ದೊಳು ವಿಚಿತ್ರದ ವೀರ ರೊಪ್ಪಿದ ರಸಮ ಸಮರದಲಿ ॥ ೨೧ ॥ ಆಟವಿಕ ರಕ್ಕಸರು ಹನುಮನ । ಘಾಟ ಕಲಹದ ಖಡ್ಗಗಳ ಹೊ। ಯ್ಲಾಟವಿದ್ದುದು ಹರಹಿ ನಮರಾವಳಿಯ ಕಣ್ಮನಕೆ ॥ ಪೌಟಿಸಿದ ಸಂಗರವ ನಮರವ। ಧೂಟಿಯರ ಕಮನೀಯಕದ ಕೋ। ಲಾಟದ ವೊಲೇನೆಂಬೆನಾ ಸಂಗ್ರಾಮ ಸಂಭ್ರಮವ ॥೨೨॥ ಉಸಿರಲಚ್ಚರಿ ಪವನ ಪುತ್ರನ। ನಿಶಿತ ಖಂಡೆಯವಾ ನಿಶಾಟ। ತ್ರಿಶಿರನುದರವ ಬಿಟ್ಟಳಿದುದಾ ಕಲಿ ಸುರಾಂತಕನ॥ ವಸನ ಲಂಬಿತ ಕಟಿಯುಲೀ ವ। ರ್ಣಿಸುವೆನೈ ಲವ ಕುಂಭವನು ಭಾ। ರಿಸಿದ ಸೂತ್ರದ ಸೊಗಸ ನೆರೆದುದು ಕುಂಭಕಾರಕನ॥ ಅವಧರಿಸು ರಾಜೇಂದ್ರ ನೋಡೆಲೆ। ರವಿಜ ಲಕ್ಷ್ಮಣ ಚಿತ್ತ ವಿಭುದಭಿ । ನವರಣದ ಕೌತುಕವ ಕಾಂಕ್ಷೆಯ ಕದನ ಕೌಶಲವ॥ ಬವರಕಿಮ ಕಡೆನೋಡಿ ನೀವೆನು। ತ ವಿರಳದ ಪದ ಚಿತ್ರ ಗತಿಗಳ। ಲವಣಿಯಲಿ ಲಾಗಿಸುತ ಹೊಯ್ದನು ಹನುಮನಾ ಖಳನ ॥ ಝುಳಪಿ ನುಬ್ಬಣ ವಡ್ಡಣದ ಪಡಿ । ತಳದ ಪಾಡುಗಳಿಂದಲನಿಲಜ । ನೊಲ್ಕೆಯ ಪುಲ ದೊಲವು ಮೇಲಣ ತುಂಡುಗಳು ಬಳಿಕ॥ ಗಳದ ಕಪ್ಪಿನ ದೇವ ಪೌಳಿಯ। ನಲುಗಿದನು ಹಾರೈಸೆ ಹೂವಿನ । ಮಳೆಯ ಕರೆಸಿದ ನಬುಜ ಭವ ನನಿಲಜನ ಸಂಶ

ದಲಿ ||೨೬|| ಭಾಪುರೇ ಬಲವಂತ ಬಲಿಮುಖ | ರೂಪನ ಪರಬ್ರಹ್ಮ ಸಮರ ವಿ | ರೂಪ ಲೋಚನ ವಿಪುಳ ಲಂಕಾ ನಗರ ನಿರ್ದಹನ || ಕೋಪ ಮಂಡಲ ಮಂಡಿತೋಗ್ರ ಕ | ಳಾಪ ಭೈರವ ದಶ ವದನ ಗ | ರ್ವಾಪಹರ ಜಯಜಯ ಯೆನುತ ಕೊಂಡಾಡಿ ತಮರ ಗಣ ||೨೭|| ಇತ್ತ ಸೈ ಬಳಿಕಸುರರಸುಗಳ | ನುತ್ತರಿಸಿದವ ಖಂಡೆಯವನು ವಿ | ಯತ್ತಳದ ವಿಸ್ಮಯದ ನೋಟದ ವೀರಭದ್ರಂಗೆ || ಹೊತ್ತ ಹರುಷದ ಹರಿ ಹಯಾದಿ ಸು | ರೋತ್ತಮನು ತೊರವೆಯ ನೃಸಿಂಹನ | ಚಿತ್ತವನು ಹಿಡಿದಡಿಸಿ ನಡೆದನು ಮುಂದಣಾಹವಕೆ || ||೨೮||

ಮುವ್ವತ್ತೊಂದನೆಯ ಸಂಧಿ ಸಮಾಪ್ತಂ.

ಮುವ್ವತ್ತೆರಡನೆಯ ಸಂಧಿ.

ಸೂಚನೆ|| ಗಜದಳವ ನೊರಸಿದನು ಪವನಾ | ತ್ಮಜನು ಪರಸೈನ್ಯವದ ಸುದರ್ಶನ |
ಗಜವ ಮುರಿದು ಮಹೋದರನ ಕೆಡಹಿದನು ಕಲಿ ನೀಲ ||

ಪದ್ಯ|| ದಶರಥಾತ್ಮಜಸೂನು ಕೇಳ್ ಸುರ | ರೊಸೆಗೆ ವರೆ ವೊಳಗಿದುವು ಹನುಮನ | ಹೊಸಪರಿಗೆ ಪರಬಲದ ಲಬ್ಬರಿಸಿದುವು ಪಟಹಚಯ || ಕೊಸರು ಗಹಳೆಯ ಸಬುದ ಸದೆ ದೆ | ಬ್ಬಿಸಿದ ವಿವರವ ತರು ಶಿಲೋಚ್ಚಯ | ವಿಸರ ಪಾಣಿ ಗಳೋರಣಿಸಿ ಮೋಹಿದುದು ಸಂಗರಕೆ ||೧|| ತವಕದಲಿ ತರು ಶೈಲ ಸಾರದ | ಬವರಿಗರ ಬಲದೊಳಗೆ ಸಾಮೋ | ಧ್ಭವ ಭಟಾವಳಿ ಕವಿದು ದಾ ಘನಘಟೆಯ ಕಡುಹಿನಲಿ || ಸ್ರವಿಸುವಗ್ಗದ ಗಂಡಮದಜಲ | ದವಿರಳದ ಲಿಳೆ ನೆನೆಯೆ ಬರಿ ಕೈ | ಯವ ತರಣಿದ ಬಲೌಘ ಮುಳುಗಿಸೆ ಸುರಕದಂಬಕವ ||೨|| ಆರು ನಿಲಬಹುದಮಮ ರಕ್ಕಸ | ವಾರಣದ ವೈಹಾಳಿಯಲಿ ಮದ | ನಾರಿಯಲಿ ಮಾರಾಂತು ಮದ ಗರ್ವಿತ ಗಜಾಸುರನ || ವೀರತನ ಶತ ಕೋಟಿ ಮುಖದಲಿ | ಸೇರಿತೋ ಶುಂಡಾಲ ಕುಲಕೆನ | ಲಾರುಭಟೆಗಳ ಜೋಧರೋಜಿಯುಲೇರಿ ತುರವಣಿಸಿ ||೩|| ಗಜಘಟೆಯ ಕಾಲ್ದುಳಿಗೆ ಹೆಡೆಯುಜಿ | ಗಜಿ ಗಳಾದುವು ವಾಸುಗಿಯ ಕಾ | ಳಿ ಜವ ನೋಕರಿಸಿಮವು ಕಕುಭ ಮದೇಭ ಕೂರಮನು || ಭಜಿಸಿ ತಗ್ಗದ ಮೂರ್ಛೆ ಕಂಪಿಸಿ | ತಜನ ನಗರದ ಮೆಲುಗದೆ ಪದ | ರಜದೊಳದ್ದುದು ಭುವನವೆನ ಲುರ ವಣಿಸಿ ತಜಸೇನೆ ||೪|| ಇಡುವ ಗಿಂಗಳ ನಣವು ಕೌತುಕವ | ಗಿರಿ ಮರನ ಸೆಳೆಸೆಳೆದು ಬಿಸುಡುತ | ಬಿಡುವರಿಯ ಬೀದಿಗಳ ರಟ್ಟಿದ ರಖಿಳ ಕೊಲೆಗಳಲಿ || ಕಡುಹು ಕಲಹ ಕುಲಂಗಳಿಂದ್ರನ | ಪಡೆಯ ವೊಲು ಸಂಧಿಸೆ ರಣಾಗ್ರದೊಳ್ | ಪಡೆಯ ಕೊಂದುವು ಕೋಟಸಂಖ್ಯೆಯಲಾ ಮದೇಭಚಯ ||೫|| ಕಿತ್ತಣಾಯ್ಕಿದ ವಟ್ಟೆಮೆಟ್ಟೆ ವಿ | ಯತ್ತಳದ ತರು ಮೃಗದ ತಲೆಗಳ | ಕತ್ತರಿಸಿದುವು ಖಂಡೆಯದ ಕಾಹುರದ ಹೌಳಿನಲಿ || ಕೆತ್ತಿಸಿದ ಶೂಲಿಗೆಯ ಲಿರಿದಿರಿ | ದತ್ತಲಿತ್ತಲು ಕೆದರಿ ಪದನಖ | ದೊತ್ತುಗಳ ಲುಗುಳಿಸಿದ ನಸುಗಳ ನಸಮ ಕಪಿಬಲವ || ೬ || ಎಸೆವ ಜೋಧರ ನಾಳಿಯಂಬಿಗೆ | ಕುಸಿದು ಕಿರಿಕಿರಿಗುಟ್ಟಿ ಹಲುಗಳ | ಪಸರಿಸಿದವಲ್ಲಲ್ಲಿ ಒಲ್ಲಿದ ಭಲ್ಲ ಕವ್ರಾತ || ಮುಸಲ ಮುದ್ಗರ ಪರಿಘ ಗದೆಗಳ | ಘಸಣಿವ್ಯೆಲಿಗೆ ಬಿದ್ದ ಕೋಡಗ | ಮುಸುಗಳಿಗೆ ಕಡೆಮಾವು

ದೆಂಬುದ ನಾಯಿನಾನೆಂದ ॥ ೭ ॥ ತುರುಗಿ ತೂಳವ ಮತ್ತವಾರಣ । ದುರುಬೆಗಾರದೆ ವೀರಹನುಮನ । ಮರೆಯ ಹೊಕ್ಕುದು ಘೋರ ವಾನರಸೇನೆ ಪ್ರೈಸಂಸಿ ॥ ಮೊರನ ಬಡಿತಕೆ ಸಿಡಿಲು ಭಯದಲಿ । ಬಿರಿತು ಹಾಯ್ದುವು ಹೊಕ್ಕನಾಕ್ಷಣ । ಕುರಿಯ ಹಿಂಡಿನ ತೋಳನವೊಲುಬ್ಬಾಳ ಕಲಿ ಹನುಮ ॥ ೮ ॥ ಅವುದಾನುವುದ್ಯೆ ತೆರಳ್ವರೆ । ಪಾವಮಾನಿಯ ಕೊಲೆಗೆ ರಿಪುಗಳ । ಜೀವಹಿಂಸೆಗೆ ಹೇಸದವನೊಬ್ಬನೆಕಣಾ ಜಗಕೆ ॥ ದೇವತತಿ ಬೆರಗಾಗೆ ಮದವ । ತ್ರಾವಳಿಯ ಬೆರಸಿದನು ಗಜರಿಪು । ರಾವದಲಿ ರಜನೀಬಲವ ರವಿ ಬೆರಸುವಂದದಲಿ ॥೯॥ ಝಡಿದು ಜೋಧರು ಸಹಿತ ಕರಿಗಳ । ಹಿಡಿಕೆಯಲಿ ನುಗ್ಗೊತ್ತಿದನು ನೆಲ । ಕಡಗಿ ತೀಡಿದನಲ್ಲಿ ಶತಸಾವಿರ ಮದೇಭಗಳ ॥ ಮಡದ ಹೊಯ್ಲಲಿ ಲಕ್ಕಸಂಖ್ಯೆಯ । ನೊಡೆಬಡಿದನುಬ್ಬರಿಂದು ಬಾಲದ । ತೊಡಕಿನಲಿ ತೂರಿದನು ಕರಿ ಕೋಟಾನು ಕೋಟಿಗಳ ॥೧೦॥ ಬೀಸಿ ಬಿಸುಟ ಮದೇಭಮಾರುತ । ಪಾಶದಲಿ ಸಿಲುಕಿದುವು ಕೆಲವು ಸು । ರೇಶನಾನೆಯ ನೈದಿದುವು ಕೆಲಕೆಲವು ದಿಗಧಿಪರ ॥ ದೇಶವನು ಸಾರಿದುವು ಘನರಸ । ರಾಶಿಯಲಿ ಬಿದ್ದಿಭಕುಲಂಗಳು । ಭೂಸುತಾಸುತ ಕೇಳು ಜಲಗತವಾದುದವನಿಯಲಿ ॥೧೧॥ ಹೋದವಾ ಗಜ ಮುಗಿಲ ಮುತ್ತಿಗೆ । ಹೋದ ಶಶಿರಾಂಬರದವೊಲು ನೆರ ॥ ನಾದುದರೆ ನಿಮಿಷದಲಿ ಕೈ ಘಾಟದಲಿ ಪವನಜನ ॥ ಬೀದಿಯಲ್ಲದೆ ಬವರ ಕೈದುವ । ಕೈದುಕಾರರ ಕಾಣೆ ಬಳಿಕ ಮ । ಹೋದರನ ಗಜ ತಡೆದುದೀತನ ಕಡುಹಿ ನುಬ್ಬಟೆಯ ॥ ೧೨ ॥ ಏನಪಕೆ ಸುರಪತಿಯ ದಂತಿ ಸ । ಮಾನವೆಂಬರ ದಪ್ಪದಿಕ್ಕುಗ । ಳಾನೆಗಳ ಪಡಿಕಟ್ಟ ತೂಗಲು ತೂಕುವವು ಕಿರಿದು ॥ ಆ ನಿಶಾಟಂಗಾ ನಿಶಾಧಿಪ । ರಾನಿಕೆಗೆ ಕಡುಹೀನ ವನಿಲಜ । ನಾನುವುದು ಕಡುಚಿತ್ರವೆಂದುದು ಮೇಲೆ ಸುರಕಟಕ ॥೧೩॥ ಅವಘಟಿಸಿದುದು ದಂತಿ ದಂತಿಯ । ಜವಗತಿಗೆ ಜವಗುಂದಿದರು ಬಹು । ಭುವನ ಕೋಶದ ಹೊರೆಯ ಹೊರಿಗೆಯ ಹೊಂತಕಾರಿಗಳು ॥ ಬವರದಗ್ಗದ ಗಜದ ಪದಹತಿ । ಗವನಿ ಮುಂದಕೆ ತಗ್ಗುತಿರ್ದುದು । ಭುವನನಿಧಿ ತುಳುಕಾಡುತಿರ್ದುದು ಹೇಳಲೇನೆಂದ ॥ ೧೪ ॥ ಕರಿಯ ನಿಶಿತಾಂಕುಶದಿ ನವನುತೆ । ಕೆರಳಿಸುತ ನೂಕಿದನು ಹನುಮನ । ಸರಿಸದಲಿ ಬಳಿಕಾ ಸುದರುಶನ ಭದ್ರಮುದ ದಂತಿ ॥ ಭರದ ಬರಿಕೈಯಿಂದ ಪವನಜ । ನುರವ ನೆರಗಲು ಪ್ರತಿಸಬುದ ಸುರ । ಗಿರಿಯೊಳಾದುದು ನೊಂದ ವನಿಲಜ ನೆನೆದು ರಾವಣನ ॥ ೧೫ ॥ ತರಹರಿಸಿ ಕೊಂಡನಿಲಸುತನಾ । ಕರಿಗೆ ಕೈಯಿಕ್ಕಿದನು ಧೂರ್ಜಟಿ । ಕರಿವೆಸರ ಬಲು ರಕ್ಕಸಗೆ ಕೈಯಿಕ್ಕುವಂದದಲಿ ॥ ಹರುಹನದನಾ ಖಳನರಿದು ಬಲು । ವರುಣ ಪಾಶದಲೀತನನು ಬಿಗಿ । ದುರುಳಿಸಿದ ನೆಟ್ಟೆದನು ಮುಂದಣ ಥಟ್ಟನತಿಬಲರ ॥ ೧೬ ॥ ಮುಸಗಿದುದು ಬಳಿಕೀ ಮಹಾಂಕುಶ । ನಿಶಿತ ಧಾರಾಹತಿಗೆ ರಣದಲಿ । ಘಸಣಿಗೊಂಡರೆ ಯಟ್ಟೆ ಬೀಸಿತು ಕರದ ಖಂಡೆಯವ ॥ ಮುಸುಕಿ ಬಿದ್ದ ಮಹಾದ್ರಿಗಳ ಹುಡಿ । ಮುಸಗಿದಾಡೆಯ ಲಣದು ತಲೆಗಳ । ನಸಿದು ಹಾಯ್ಕಿತು ಚಾರುವರದಿಭಕುಳನೊಳಗಲದಲಿ ॥ ೧೭ ॥ ಮೆಟ್ಟೆ ಮುರಿದುದು ಮುಸಗಿ ದಾಡೆಯೊ । ಳಟ್ಟೆ ಸೀಳಿತು ಹೆಣನ ರಾಶಿಯ । ನೊಟ್ಟೆದುದು ಕಟ್ಟೆದುದು ರುಧಿರಾಂಬುಧಿಗೆ ಸೇತುವನು ॥ ಜಟ್ಟಿಗರ ರಣಭೈರವರ ನರೆ । ಯಟ್ಟೆದುದು ಯಮಕಿಂಕರರ ನ । ಬ್ಬಟ್ಟೆದುದು ಕಿಕ್ಕಿರಿಸಿದುದು ಮಲೆತಿಭಕೆ ಸುರಪತಿಯ ॥೧೮॥ ಆರು ನಿಲಬಹುದಮಮ ದಂತಿಯ । ಭಾರಣೆಯ

ಬಲುಗೊಲೆಗೆ ಹೊಕ್ಕುದು । ವಾರಿಜಪ್ರಿಯ ನಂದನನ ಸೇನಾ ಸರೋವರದ ॥ ಚೂರಿ ಸುವೆ ಖಂಡೆಯದ ಸೊಂಡಿಲ । ಹಾರದಲಿ ಬಹುವಿಧದ ಕೊಲೆಯಲಿ । ಕಾರಗಲಸಿದು ದಖಿಳಕಟ ವಾರಿಜ ಕದಂಬಕವ ॥೧೯॥ ನೆಗಹಿಹಾಯ್ಕಿತು ಶತಬಲಿಯ ಕರು । ಉಗಿಯೆ ಮೆಟ್ಟಿತು ದುರ್ಮುಖನ ತಲೆ । ಚಿಗಿಯಲೊದೆದುದು ತಾರದಾರುವ ವೇಗವರ್ತಿಗಳ ॥ ಅಗಿದುದಣಲಲಿ ಧೂಮ್ರವಕ್ತ್ರನ । ದುಗುಳಿಸಿತು ರುಧಿರವನು ಮೇಣವ । ತಿಗುಳಿದುಳಿದುದು ಮಿಕ್ಕ ಹಳಚ ವ ಮರ್ಕಟವ್ರಜವ ॥೨೦॥ ಕಪಿಬಲವೋ ಕೂಶ್ಮಾಂಡವಲ್ಲಿಯ । ವಿಪುಳ ಫಲವನವ ಮಹೋಗ್ರ । ದ್ವಿಪದ ಪದಹತಿಗಳಿದು ದರ್ಬುದಸೇನ ಸಮರದಲಿ ॥ ಉಪಕರಿಸಿದುದು ಮೃತ್ಯುವಿಗೆ ಕಡು । ಕೃಪೆಯ ಮಾಡಿತು ಮಾಂಸಭೋಜನ। ದಪರಿಮಿತ ಭೂತಕೆ ಸುದರ್ಶನ ಭದ್ರಮದದಂತಿ ॥೨೧॥ ಮತ್ತೆ ಕವಿದರು ನಳ ಸುಷೇಣರು । ಮತ್ತೆ ದಂತಿಯಮೇಲೆ ಹೆಮ್ಮರ । ಮತ್ತಗಳ ಪೇರ್ಗಿರಿಯ ಮೊದಲಿನ ಘೋರ ಘೋಷದಲಿ ॥ ಸತ್ತ ಸಾವನು ಲೆಕ್ಕಿಸದೆ ತಲೆ । ಯೊತ್ತಿದರು ಮುಂಭಾರದಲಿ ದಿಗು । ಭಿತ್ತಿ ಬಿರಿಯಲು ಸುಮುಖ ದುರ್ಮುಖ ರಖಿಳ ಬಲಸಹಿತ ॥ ೨೨ ॥ ಬಿಕ್ಕಿದರು ವ್ಯಂದಾದಿ ಸುಭಟರು । ನಾಕುವ್ಯೆಯ್ಯಲಿ ಗಜ ಗವಾಕ್ಷಕ । ಪಾಕಶಾಸನ ಪೌತ್ರರೊಂದೆಸೆಯಲಿ ಗಜಾನುಜರು ॥ ನೂಕಿದರು ಮತ್ತೊಂದು ದೆಸೆಯ ಲ । ನೋಕಹದ ಕುಲಪರ್ವತವ ತಾ । ರಾಂಕುಲಿಶ ಶಬ್ದದಲಿ ಸಮರ ಸುದರ್ಶನಾಧಿಭವ ॥ ೨೩ ॥ ಕಣೆಗಳಾಡಿದ ವನಿತರಲಿ ಬಲು । ಗಣಿ ಮಹೋದರ ನೆಸುಗೆಗಳ ಮಾ । ರ್ಗಣೆಗಳಂಬುಧಿಯೊಳಗೆ ನಿಮ್ಮಯ ಬಲದ ಪಟುಭಟರು ॥ ಮುಳುಗಿದರು ಹರಣಿನಲಿ ಹೃದಯದ । ಮುಳುಬುದಾಗದ ಯೂಥನಾಥಾ । ಗ್ರಣಿಗಳನು ನಾ ಕಾಣೆನಾ ರಕ್ಕಸನ ಕದನದಲಿ ॥೨೪॥ ನೆಲೆಯರಿದು ದಾಟಿದುದು ನೆತ್ತರ । ಹೊಳೆಗಳನು ಹೆಣನೊಟ್ಟಿಲಲಿ ಗಿರಿ । ಗಳ ನಡರ್ದೇರಿದುದು ಬಲಿಮುಖ ವಿಪಿನ ವೀಥಿಯಲಿ ॥ ಹೊಳಕಿದುದು ಹೊಸಮುದದ ಗಂಡ । ಸ್ಥಳದ ಗಂಧಕೆ ಕವಿವ ತುಂಬಿಗೆ । ತಲೆಯ ಕೊಡಹಿತು ಕದನಕೇಳಿಯ ಲಿಭ ಮಹೋದರನ ॥ ಕೋಲ ಕುರುಮಟ ಕರಿಯ ಕದನ ಕ । ರಾಳ ಘಟ್ಟನೆ ಗೊಡನೆ ಸಾಲಿನ । ಸೂಳುಪಾಡಿನ ಭಟರು ಮುರಿದರು ಸೂಳುಪಾಡಿನಲಿ ॥ ತೂಳಿದಿಭವರಯಟ್ಟಿ ಸಿಕ್ಕಿದ । ವಾಳದಭಿ ರಂಜಕರ ನಂಜದೆ । ಕೀಳಿ ಹಾಯ್ಕುತ ಬೀದಿವರಿದುದು ಬಲದೊಳಗಲದಲಿ ॥೨೫॥ ಆರತೆ ರಣಸಿಂಧೂರ ವನವು । ಷ್ಕರಣೆಯಲಿ ಪುಷ್ಕರಕವರ ನಿಜ । ಪುರದ ಮುಖದಲಿ ಚಲ್ಲಿದುದು ನವರುಧಿರ ಪುಷ್ಕರವ ॥ ಕರುಳ ನಾಳ ಮೃಣಾಳಗಳ ನುರಿ । ಧರಿಸಿದಾಮೊದಾಡೆಗಳ ನಿನಕುಲ । ದರಸ ನೆಡೆಗವ್ವಳಿಸುತಿರ್ದುದು ಸಮರ ಕೇಳಿಯಲಿ ॥೨೬॥ ಕರಿಬಿರಿಸು ಕಾದುವರೆ ಕಪಿಗಳ । ಹೆರುಹು ನಿಂದುದು ಜೀಯ ಹನುಮನ । ಪೆರಿಯ ನರಿಯಲು ಬಾರದಳುಕಿತು ನಮ್ಮ ಪರಿವಾರ ॥ ಉರವಣಿಸುತಿದೆ ಮುಂಗಕಿಭವಿದು । ಸಾರಲಿಗಸದಳವೆಂಬ ಹಿಡಿ ಯೆಂ । ದರಸಗಾ ಹರಿ ಶರಣ ನುಡಿಯಲು ಕೇಳಿದನು ನೀಲ ॥ ಏಸು ಕೋಪವೋ ಮನದಿ ಕನಲಿದ । ನಾ ನೃಸಿಂಹನ ರೌದ್ರ ರೋಷವ । ಸ್ವಾನುಭವ ಸಂಘಟಿಸಿದಂತೆ ನರೇಂದ್ರ ನಿದಿರಿನಲಿ ॥ ಈ ನಿಶಾಟನ ನೀ ಮದೇಭವ । ನೀ ನಿಮಿಷದೊಳಗಂತಕನ ಪರಿ । ಧಾನಕೀಯದಡೆಲೆ ವಿಭೀಷಣ ನೀಲ ನಲ್ಲೆಂದ ॥೨೮॥ ಎನುತ ಮದಗಜ ದತ್ತ ಬೊಬ್ಬೆಯ । ನಿನಾದದಲಿ ತಿರುಗಿದನು ಬಳಿಯಲಿ । ವಿನುತ ದಧಿಮುಖ

ನಳ ಸುಷೇಣಕ ಗಜ ಗವಾಕ್ಷಿಗಳು ॥ ಕನಲಿ ಕವಿದುದು ಕೋಟಿ ಸಂಖ್ಯೆಯು । ವನಚರಾ
ನೀಕದಲಿ ಸಿಡಿಲಿನ । ಘನತರದ ಗಾಢಣೆಗಳಲಿ ಗುಮ್ಮುವ ಶಿಲಾಳಿಯಲಿ ॥೩೦॥ ಕೆದರಿ
ಕಿಭ ಮುರಿಮುರಿದು ಗಿರಿಗಳ । ನುದುರು ಗುಟ್ಟುತ ಬೀದಿಯಲಿ ಬೀ । ಸಿದುದು ಬಿರುದಿನ
ಭಟರ ಹಿಂಗಾಲುಗಳ ಹಿಡಿ ಹಿಡಿದು ॥ ಕದಳಿಯಲಿ ಕೈಯಿಕ್ಕಿದ ವೊಲುರೆ । ಮೆದೆಗೆಡಹಿ
ದುದು ಮತ್ತೆ ಮತ್ತದ । ರದಿಂನಲಿ ಕಲಿ ನೀಲನಿಂದಬ್ಬರಿಸಿ ಬೊಬ್ಬಿರಿದ ॥೩೧॥ ಕಾಲ
ಸುರವಣೆಗಾಂತು ನಿಂದ ಕ । ಪಾಲಿಯಂತಿರೆ ನಿಶಿತ ರೋಷ । ಜ್ವಾಲೆಯಲಿ ತಜ್ವಲನ
ಸುತ ನಿಂದನು ಸುದರ್ಶನದ ॥ ತೂಳಿಕೆಯ ಸರಿಸದಲಿ ಭುಜಾ । ಸ್ಫಾಲನಂಗೈದಬ್ಬ
ರತ ಶಾ । ರ್ದೂಲ ಘರ್ಜನೆಯಲಿ ಖಳಾಧಮ ಖೂಳ ಕೇಳೆಂದ ॥ ೩೨ ॥ ಜಳ್ಳುಗಳ
ಜಾಳುಗಳ ಕೂಟವ । ಕೊಳ್ಳೆಗರ ಕೊಂದುಬ್ಬುಗಿಜ್ಜಿನ । ಕೊಳ್ಳೆಗಿದೆಲಾ ಕಲ್ಪದಂಭೋ
ರಾಶಿ ಕೇಳೆಲವೊ । ಉಳ್ಳ ಸಾನೆಯ ನಿತ್ತ ಮೋಹನ । ಗುಳ್ಳ ಕದನದ ಕಡುಹುಗಳ ಹೆಂ
ಗಳ್ಳ ಸಾಕಿದ ಸಾಹಸವ ನೀನೆನುತ ಮೇಲ್ವಾಯ್ದು ॥೩೪॥ ಬಣಗು ಕಪಿ ಕೇಳೆಲವೊ ರಣ
ಕಲ । ಗಣಸಹನು ಹನುಮಂತ ನಾತನ । ಕುಣಿಹ ವೇನಾಯ್ತೆಂಬುದನು ನೋಡಳಿದ
ಕಪಿಭಟರ ॥ ಎಣಿಸಿಕೋ ನೀನವರ ದಂತಿಯ । ಹಣಿದಕೊದಗಿದ ಹೇಡಿಗುರಿವಾ ।
ರಣದ ಕದನದ ಪರಿಯ ನೋಡೆನು ತುರುಬಿದನು ಗಜವ ॥೩೫॥ ತೋಳ ನೆಗಹಿನಲಟ್ಟೆ
ಹಾಯ್ದುದು । ನೀಲನನು ನೀಲಾದ್ರಿಯನು ದಂ । ಭೋಳಿ ಥಟ್ಟಿಸುವಂತೆ ನೊಂದುದು
ಹೊಯ್ಲಲಿಭಪತಿಯು ॥ ಕಾಲಗಿದರೇ ಕೆರಳಿದರೆ ಕಲಿ । ನೀಲ ನಮುನು ಮಹೋಗ್ರ
ಮದ ಶುಂ । ಡಾಲದೆಡದ ಕಪೋಲಭಾಗವ ತಿವಿದು ಬೊಬ್ಬಿರಿದ ॥೩೬॥ ಏನ ಹೇಳುವೆ
ನವಮ ನೀಲ ನ । ನೂನ ಶೌರ್ಯವ ನಿಳೆಯ ತಳದಿ । ರ್ದಾನೆ ಘೀಳಿಡೆ ಗಗನ ಮಾರ್ದ
ನಿದೋರೆ ಮಣಿಮಯದ ॥ ಸಾನು ಸಡಿಲೆ ಸುದರ್ಶನ ಪ್ರತಿ । ಮಾನವನು ಮಗುಳೆರಗಿ
ದನು ಮದ । ದಾನೆ ತಿರುಗಿತು ಹಿನ್ನೆಲೆಗೆ ಹದಿನೆಂಟು ಹೆಜ್ಜೆಗಳ ॥೩೭॥ ಬಿರಿಯೆ ಬಿಡು
ವಸೆ ರುಧಿರ ಜಾಜಿನ । ಗಿರಿಯ ನಿರ್ಝರದಂತೆ ಮದಕರಿ । ಕರದಲೊಸರಿತು ಬಿದಿರಿ
ಕೊಂಡುದು ಶಿರವ ನೆಡಬಲಕೆ ॥ ಹರನು ನೆನೆದನು ತನ್ನ ಕದನದ । ಕರಹತಿಯ
ಲೊದಗಿದ ಗಜಾಸುರ । ನಿರವ ನಹುದೋ ಯೆಂದು ಹೊಗಳಿದ ನಗ್ನಿನಂದನನ ॥೩೮॥
ತಿರುಹಿದನು ಬಳಿಕಸುರನಾನೆಯ । ಶಿರವ ನಂಕುಶದಿಂದ ಹೊಯ್ದ । ಬ್ಬರಿಸಿ ಭರಿಭರಿ
ಯೆನುತ ಬಹಳತರ ರೌದ್ರ ರೋಷದಲಿ ॥ ಕೆರಳಿ ಗಜವಾ ವಹ್ನಿ ತನುಜನ । ಕೊರಳ
ಡೊಕ್ಕರಿಸಾಯ್ದು ತೋಳಲಿ । ಮುರಿದು ಬರಸೆಳೆ ದಿಳೆಗೆ ಗುಸುಕಿತು ದಸುರಬಲ ನಲಿಯೆ ॥
ಸಿಕ್ಕಿದಗ್ನಿಜ ಗಿಭದಸುಂಡಾಲ । ಡೊಕ್ಕರಿಸಿ ಘನ ಸಿಂಹನಾದದ । ಲಿಕ್ಕೆಲಕೆ ಬರಸೆಳೆಯೆ
ಸೆಳೆದೀಡಾಡಿದುದು ನಭಕೆ ॥ ಕೆಕ್ಕರಿಸಿ ಕುಡಿದಾಡೆಗಳ ಗಗ । ನಕೆ ಲಂಘಿಸಿ ಮರಳಿ
ಬಹ ಬಲು । ಮರ್ಕಟನ ನಾಂತಿಟ್ಟುದೊಡ ನುದ್ರೇಕ ರೋಷದಲಿ ॥ ೩೯ ॥ ಪಡಿಭವಿಸಿ
ಸಂವರಿಸಿಕೊಳು ತು । ಗ್ಗಡದ ಭಟನುಬ್ಬಿದ್ದು ದಾಡೆಯ । ಹಿಡಿದು ತಿವಿದನು ತೀವ್ರ
ಕರಹತಿಗಾನೆ ಘೀಳಿಡಲು ॥ ಮಡದಲೊದೆವ ಮಹೋದರನು ಮುರಿ । ವಡೆದ ಗಜ
ವನು ತಿರುಗಿ ನೀಲನ । ಹಿಡಿಯ ಲಂಕುಶಹತಿಯ ಲೌಂಕಿದನಾ ಮಹಾಗಜವ ॥ ೪೦ ॥
ಬೀಳುತಪ್ಪಳಿಸಿದದು ಗಿಗರಿನ । ತೋಳಿನಲಿ ಬಿದ್ದ ವನಕರಿ ಮುಂ । ಗಾಲಿನಲಿ ಮೆಟ್ಟಿ
ದುದು ಮುಂದಿಟ್ಟ ಶಿರವ ಹಸ್ತದಲಿ ॥ ಜಾಲದಲಿ ಬರಿಗೈದನಾ ಕಲಿ । ನೀಲ ಬಿಗಿದನು

ಸಿಟ್ಟುಸುರ ನೈ । ಹಾಳಿನಿಂದಬ್ಬಸದಿ ನಿಂದಿದುದಾ ಮಹಾದಂತಿ ॥ ೪೧ ॥ ಏಳುತಿಡಗೈ ತುದಿಯುಲುನೆಯು । ತೋಳ ನೆಗಹುತವೆಟ್ಟ ಸರ್ವರಿ । ಸೀಳಿದನು ಸೀವರಿಸಿ ಕರಿಯಿಂದಾ ಮಹೋದರನು ॥ ಶೈಲಕೆರಗುವ ಸಿಡಿಲವೊಲು ನೆಗೆ । ದಾಲಿ ಬಂದೆರಗಿದನು ರಣದಲಿ । ನೀಲನನು ನಿಶಿತಾಂಕುಶದ ಲಮರಾಳಿ ಕಳವಳಿಸೆ ॥ ೪೨ ॥ ಎರಗಿದಸುರನ ಶಿರವ ಮುಷ್ಟಿಯು । ಲೆರಗಿದನು ಪ್ರತಿ ಸಬುದ ನಭನೋ । ಳೊರಲೆ ನಿರ್ಜರನಿಕರ ಬೆದರೆ ಮಹೋಗ್ರ ಕೋಪದಲಿ ॥ ತರಹರಿಸು ತವಕದಲಿ ಕೈಮರೆ । ಮರೆಯು ದೋಃಹೊಕ್ಕಗ್ನಿ ಜನನು । ಬ್ಬರಿದುಡೊಕ್ಕರವಾಯ್ತು ಕೆಡಹಿದ ನವನಿತಳ ಕುಶಿಯೆ ॥ ೪೩ ॥ ತಳವ ನೋಲಡಿ ಮೇಲು ತಳಕಾ । ಲ್ಬುಳುಕು ಮುಷ್ಟಿನಿಘಾತ ಬಾಹು । ಗಳ ನಿಬದ್ಧನಿಯುದ್ಧ ಜಾನುಸ್ಫುರದ ಪದಘಾತ ॥ ತಳನಿಹತ ಪತನ ಪ್ರಹಾರಾ । ಕಲಿತ ದಂತಾ ದಂತಿಯಲಿ ನಿ । ರ್ಗಳಿತ ಕೇಶಾಕೇಶಿಯಲಿ ಕಾದಿದರು ಕಡುಹಿನಲಿ ॥ ೪೪ ॥ ಹೋರಿದರು ಹರಿಜಂಭರಿಬ್ಬರ । ಹೋರಟೆಗೆ ಹದಿನೆಂಟು ಮಡಿಯೆನೆ । ವೀರ ಕೇಳೈ ಬಳಿಕ ವೈಶ್ವಾನರ ಕುಮಾರಕನ ॥ ಘೋರಮುಷ್ಟಿ ನಿಘಾತದಲಿ ಕೆರೆ । ಸಾರಿತಸು ರಕ್ಕಸನ ನಿರ್ಜರ । ನಾರಿ ಸುರಿದರು ಸುರಮಹೀರುಹದಲರ ಸರಿಮಳೆಯ ॥ ೪೫ ॥ ಕೋಪದಲಿ ಕೊನರುಡುವ ಮನದನು । ತಾಪದಲಿ ತಿರುಗಿದನು ತಾತನ । ರೂಪಿನಲಿ ಕಲಿ ನೀಲ ನೀಚೆಯ ಲಂಜನಾಸೂನು ॥ ರೂಪದೋರಿದನೊಡನೆ ಸಮರಾ । ಟೋಪದಲಿ ರಿಪುಬಲಕೆ ರಿಪು ನಿ । ರ್ವಾಪಣನು ಕಲಿ ವೃಷಭ ನೋಡಿದನಾ ಮಹಾಹವವ ॥ ೪೬ ॥ ಹನುಮ ಕೇಳೈ ಕಾಳಿಗವನಿದ । ನೆನಗೆ ಕೊಡು ಕೂಡುವೆ ಕೃತಾಂತನ । ನನುಚರರಿಗೀ ಭಟನ ತೊರವೆಯರಾಯ ನರಹರಿಯ ॥ ವನರುಹಾಂಘ್ರಿಯ ಸೇವೆ ತನ್ನಿಂ । ದನುಭವವ ನೈದಿದರೆ ಜಗದಲಿ । ಘನ ಕೃತಾರ್ಥನು ತಾನೆನುತ ಮಾರಾಂತನಾಹವಕೆ ॥ ॥೪೭॥

ಮುವ್ವತ್ತೆರಡನೆಯ ಸಂಧಿ ಸಮಾಪ್ತಂ.

ಮುವ್ವತ್ತ ಮೂರನೆಯ ಸಂಧಿ.

ಸೂಚನೆ॥ ತುಂಗ ಭುಜಬಲಸಹಿತ ಮದ ಮಾ । ತಂಗ ಕೇಸರಿ ವೃಷಭ ನಾಹವ ।
ರಂಗದಲಿ ಕೆಡಹಿದನು ಯುದ್ಧೋನ್ಮತ್ತ ರಾಕ್ಷಸನ ॥

ಪದ್ಯ॥ ಕುಶನೆ ಕೇಳು ಮಹೋದರನು ಜೀ । ರ್ಣಿಸಿದ ಝಷಾವದ ಮೇಲೆ ನಡೆದುದು । ವಿಷಮ ವಿಗ್ರಹ ವೀರ ಯುದ್ಧೋನ್ಮತ್ತ ರಾಕ್ಷಸನ ॥ ದೆಸೆಗಳಿಂಟರ ಬಿಗುಹುಗಳ ಬಲು । ಬಿಸುಗೆ ಬಿಡೆ ಬಿರುಘನಿಯ ವಾದ್ಯ । ಪ್ರಸರ ಮೊರೆದುವು ಮೋಹಿದುವು ಮೋಹರಗ ಳುಭಯದಲಿ ॥೧॥ ಕೈಟಭನ ಕಲಿತ ಮನ ಮಹಿಷ ನಿ । ಶಾಟ ಜಂಭನ ನಮುಚಿಯ । ಪಾಟಗಿಮ್ಮಗಿಲೆಂಬ ಕಲಿಗಳು ಕೋಟಿ ಸಂಖ್ಯೆಯಲಿ ॥ ವಿಾಟಿ ತಲೆ ಮುಂಡದಲಿ ಕಾದುವ । ಘೋಟಿ ಬಲಮಾಸಾಳುಗಳು ನಡೆ । ಗೋಟಿಕಾರರು ಕೆಣಕಿದರು ಕಪಿರಾಜ ಸೈನಿಕವ ॥ ೨ ॥ ಬಲಿದು ದನಿತರಮೇಲೆ ರಣ ಗಡು । ಗಲಿಗಳಿಬ್ಬರಿಗೊಡನೆ ಪಡಿಬಲ । ಸಿಲುಕಿ ತಿನ ನಂದನನ ಸನ್ನೆಯ ಸೂಚನೆಯ ಒಳಿಯ ॥ ಕುಲಶಿಲೋಚ್ಚಯ ಕುಲ ನಿನಾದದ । ಕಲಿ ವನದ ಕಪಿ ಸೇನೆ ಸಂಧಿಸಿ । ಹೇಳಿದುದು

ಹರಹಿನಲಿ ಹರನಯನಾಗ್ನಿ ಕಣದಂತೆ ॥ ೩ ॥ ತಿವಿದು ದಸ್ತ್ರ ಶಿಲೋಚ್ಚಯದ ಬಲು ।
ದಿವಿಗುಳಿನ ಪೆಟ್ಟಾಳ ದಿಂ ದು । ದ್ಭವಿಸಿ ದುಬ್ಬರ ಧೂಳಿ ಕವಲ ಭಷಾಂಡ ಗಬ್ಬ
ರದ ॥ ತವಕದಲಿ ತಕ್ಷಣದಿ ನಭ್ರಕೆ । ನವ ರುಧಿರ ಉಚ್ಚೆದ್ದು ಸುರ ಸೈ । ನ್ಯವನಾ
ವರಿಸಿ ತೀನ ನೆಂಬೆನು ಸಮರ ಸಂಭ್ರಮವ ॥ ೪ ॥ ಆವ ವೀರರೋ ರಾಕ್ಷಸರು ರಣ ।
ದೀವಿಸಿದ ಕಪಿಬಲದ ಭಟರಲಿ । ಸಾವಿಗಳುಕದೆ ಕಾದಿದರು ಸರಕಟಿಸಿ ಸರಿಸದಲಿ ॥
ಸಾವು ಸರಿಯಾಯ್ತು ಭಯದಲಿ ನೆಲ । ತೀವಿದುದು ತಿಂತಿಣಿಯ ವಿಪಿನ ವಿ । ಭಾವರೀ
ಚರರಗಲಿ ದಸುವಿನ ಹೆಣನ ರಾಶಿಯಲಿ ॥೫॥ ಮತ್ತನಲ್ಲಾ ವೀರ ಯುದ್ಧೋನ್ಮತ್ತ
ಖಳರಲಿ ಕುಂಭಕರ್ಣನ । ಹತ್ತು ಮಡಿ ಸಾಹಸವ ಮೆರೆದನು ಸಮರ ಕೇಳಿಯಲಿ ॥
ಪತ್ತು ನೂರಿನ್ನೂರು ಸಾವಿರ । ಹತ್ತು ಸಾವಿರ ಲಕ್ಷ ಲಕ್ಷದ । ಹತ್ತುಗೆಯ ಹವಣಿನಲಿ
ತೊಳಕಿಸಿ ನುಂಗಿದನು ಭಟರ ॥ ೬ ॥ ಅಗಿದ ನಣದಲಿ ಲಕ್ಷ ಸಂಖ್ಯೆಯ । ವಿಗಡ ಕಪಿ
ನಾಯಕರ ಶಸ್ತ್ರದ । ಉಗುಳಿದನು ಸಮ್ಮುಖಕೆ ಸಂಧಿಸಿ ದಧಿಕ ಬಲುಭಟರ ॥ ಜಗಳ
ಪಾಟದ ಭೈರವನ ಘಣಿ । ತ್ರಿಗಳ ಲಿರ್ದನು ಭಯ ರಸದ ಸೋ । ನೆಗಳ ಸೂಸುತ
ನಿಮ್ಮ ರಘುರಾಜೇಂದ್ರ ಸೈನ್ಯದಲಿ ॥ ೭ ॥ ಹೇಳ ಲದ್ಭುತವವನ ಬಳಿಯಲಿ । ಕಾಳ
ರಕ್ಕಸ ಭಟರು ಕವಿದುದು । ಕಾಳಕೂಟದ ಕಡಲು ಕವಿದಂದದಲಿ ಕಪಿಬಲವ ॥
ಮೇಲೆ ಮೊಳಗುವ ತಮ್ಮಟದ ನಿ । ಸ್ಸಾಳ ದಬ್ಬರದ ದುಬ್ಬ ಗಹಳೆಯ ಧಾಳಿಯಲಿ
ಧರೆ ಬರಿಯೆ ಧೃತಿಗೆಡೆ ಧ್ರುವನ ಪೌರಜನ ॥೮॥ ಮಲತುದಾ ಖಳ ಪಾಯ ದಳ ವ ।
ಗ್ಗಳದ ಕಪಿಭಟ ರೊಡನೆ ಸಂಧಿಸಿ । ಹಳಚಿ ಕಳಚಿದ ವಸುಗಳನು ಬಲವೆರಡು ಬವರ
ದಲಿ ॥ ಕಲ ಮರನ ಕೈದುಗಳ ಕಲೆಗಳ । ಕಲಹ ಮರೆದುದ ಸಿಡಿಲ ಶಿಖರದ । ಕಳ
ಕಳದ ಕಟ್ಟುಲುಹ ಪೋಲೆರಡಂಕ ದಗ್ರದಲಿ ॥೯॥ ತರಹರಿಸಲರಿಯದೇ ಕಕುಸ್ಥಲ ।
ದರಸು ನಾಯಕ ರೋಡಿಕೆಯ ಕಂ । ಡರಿ ದಿಶಾಪಟ ಪಟುಪರಾಕ್ರಮ ವೃಷಭ ನೆಡೆ
ಹಾಯ್ದು ॥ ಧುರಕೆ ಮುಂಚುವ ರಕ್ಕಸನ ರಥ । ದುರವಣೆಯ ತಡೆ ದವನಿಮಂಡಲ ।
ಬಿರಿಯೆ ಬೊಬ್ಬಿರಿ ದಬ್ಬಿ ಬಾಹುಪ್ಪಳಿಸಿದನು ವೃಷಭ ॥೧೦॥ ದೇವಿ ನೋಡೆಂದೆಮ್ಮ
ಸಭೆಯಲಿ । ರಾವಣಾಸುರ ನೋಡಿಸಲು ಕಡು । ಹೇರದಲಿ ಕಪಿರೂಪ ನಿಂದುದಿಸಿದ
ವೃಷಾಧಿಪನ ॥ ಈ ವಿಗಡ ಕಪಿಭಟನ ಕೈಯಲಿ । ಸಾವನಿವ ನೀ ಘಳಿಗೆಯಲಿ ನೋ ।
ಡಾ ವಿಚಿತ್ರವನೆಂದು ಪುರಹರನುಮಿಗೆ ತೋರಿಸಿದ ॥ ೧೧ ॥ ಮಲೆತು ತಲೆಪಟ್ಟುಬ್ಬ
ಕೆಂಗಲೆ । ಗಲಿದು ಹೂಂಕೃತಿಗೈದಿ ಧಟ್ಟಿಸಿ । ನೆಲನ ನಂಘ್ರಿಯ ಲಣದು ನೆಗಹಿದ
ನಡಿಯ ಬಾಲದಲಿ । ಸಲಗಲಗಿ ನೋಳುಬ್ಬಿ ಹಳಚುವ । ಹಳಹಳಿಕೆಯಲಿ ತಾಗಿದರು
ತಳ । ವೆಳಗು ಗೊಳೆ ತಳೆದಿಳೆಯ ಭಾರಕರುಸುರು ನಿಮಿಷದಲಿ ॥ ೧೨ ॥ ವಿಷಮ
ಯುದ್ಧೋನ್ಮತ್ತ ನೆಂಬೀ । ಹೆಸರಿವಂ ಗೊಪ್ಪುವುದೆಲೇ ಘ । ರ್ಜಿಸಿದ ನವ ನಿಳೆ
ಬಿರಿಯೆ ಭುಜವನು ಹೊಯ್ದು ಹುರಿಯೇರಿ ॥ ಅಸಮ ಸಮ ಪಾಡಿನಲಿ ಮಿಗೆ ಭಾ ।
ರಿಸಿದ ಮುಷ್ಟಿಯ ದೃಷ್ಟಿವಾಳದ । ಕುಸುಗಿತೆಯ ಕೋಪದಲಿ ಕೈಗೊಂಡನು ಮಹಾ
ಹವವ ॥೧೩॥ ಮಲತ ರಿಭಜಾಳಿಯಲಿ ಚಂಡಿಸಿ । ಚಲಿಸ ದೊಬ್ಬರಿ ಗೊಬ್ಬ ರುಬ್ಬರ ।
ದಳವ ಮೆರೆದರು ದಂಡೆಗಳ ದಂಡಿಗಳ ಮಂಡಿಯಲಿ ॥ ತಲೆಯ ತಗ್ಗಿನ ಬಗ್ಗಿ ದುರ
ದಪ್ಪಳಿಸ ಚರಣಾಲೀಢ ಗಾಢಿಯ । ಕುಲಿಶ ಮುಷ್ಟಿಯ ಕಲಿಗ ಳುಪ್ಪರಿಸಿದರು ಕಲಹ

ಪಲಿ ||೧೪|| ಊರಿ ನಿಂದವು ರೋಮತತಿ ಕಾ | ಹೇರಿದವು ತನು ತೋರ ಗಡಗಳ | ಕಾರಿದವು ಕಣ್ಣುಗಳು ಕಾರ್ಬೊಗೆ ಹೊಯ್ದುದುಸುರಿನಲಿ || ತೋರಿದವು ದಾಡೆಗಳ ಮುಸಕದ | ತೋರ ಗಿಡಿ ಕುಡಿಯಿರಿದು ಕೋಪದ | ತೋರಿಕೆಯ ಮದಮುಖರು ತಿವಿದಾಡಿದರು ತೀವ್ರದಲಿ||೧೫|| ಸಿಡಿಲ ಕುಡಿಯೋ ಪ್ರಲಯ ಹರನು | ಗ್ಗಡದ ರಭಸವೋ ಕಲ್ಪದಲಿ ಬಿರಿ | ದೊಡ ವಜಾಂಡದ ಘಟ್ಟಘಳಸ್ವನವೋ ಮಹಾದೇವ || ಕಡುಗಲಿ ಗಲುಗ್ಗಡದ ತಿವಿಗಳ ನುಡಿಯೋ ಶಿವಶಿವ ಗಗನತಳ ಗುಂ | ಮಿಡುತಲಿರ್ದುದು ಮಣಿವ ಮುಷ್ಟಿನಿಘಾತದಲಿ ಭಟರ ||೧೬|| ಬೀಳುತಿರ್ದವು ಮುಷ್ಟಿ ಮುಷ್ಟಿಗ | ಳೀಕಿಗೆಯು ಶಿಖಿಯಂತೆ ಜೂಜಿನ | ಶೈಲದಗ್ರದ ಲೊಪರ್ವ ನಿರ್ಝರದಂತೆ ರುಧಿರ ಜಲ || ಜಾಳಿಸಿದ ಬಿಬ್ಬರಲಿ ಕರ್ನ ಕ | ಪೋಲ ಕಂಧರಗಳಲಿ ತಿವಿಗಳ | ಸಾಲ ಸಬುದದ ಲಬುಧಿ ತುಳುಕುತಲಿರ್ದು ದನವರತ ||೧೭|| ಮಂಡಿಸಿದ ನವನೆದೆಯೊಳಾ ದೋ | ರ್ದಂಡ ಬಲ ಕಲಿವೃಷಭ ನಂದಿನ | ಖಂಡ ಪರುಶುವಿನಂತೆ ನೆಗಹಿದ ಮುಷ್ಟಿ ಕಿಡಿಗೆದರೆ || ತಂಡ ತಂಡದ ಹರಗಣಂಗಳು | ತಾಂಡವದ ತೊಡೆವರೆಯ ಬಾಹು | ದ್ದಂಡ ದಬ್ಬರ ದುಬ್ಬರಂಗಳ ಲೆಸೆದು ದಭ್ರದಲಿ ||೧೮|| ಅವನೆ ಕೇಳಾ ಖಳನು ಪೂರ್ವದ | ಭವದ ಲಂಥಾಸುರನು ವೃಷಭನು | ಶಿವನು ಸಂಘಟಿಸುವುದೇ ಸೋಲವು ಕಾಲ ಕಂದರಗೆ || ತೀವಿದುನ್ನತ ಶಕ್ತಿಯಲಿ ರಾ | ಘವನ ಮೆಚ್ಚಿನ ಘಾಯ ವೆನುತಲೆ | ಕವಿದು ಬಿದ್ದನು ಬೀಳೆನುತ ಶುಂಡಾಲ ತವಕದಲಿ ||೧೯|| ಒತ್ತಿ ಗಂಟಲ ನೆಂದ ನೆಲವೋ | ಸತ್ಯಶುದ್ಧರು ನೀವು ನಿಮಗೀ | ಉತ್ತಮದ ಹೆಸರೇಕೆ ಹೆಸರಿದು ನಮ್ಮ ಕಟಕದಲಿ || ಹತ್ತುವ್ರಜೆ ಕೇಳೆಲವೊ ಯುದ್ಧೋ | ನ್ಮತ್ತ ನೆಂಬಭಿದಾನ ಖಳ ಕೋ | ಕತ್ತಿಗಳೋ ನೀವೆನುತ ಮುಗುಳೆರಗಿದನು ರಕ್ಕಸನ ||೨೦|| ಅರು ಕಲ್ಲೊಳಗುಂದಿ ಶಿಖಿತಾ | ಧಾರುಣಿಗೆ ಕಡುಚಿತ್ರವಲಾ | ವೀರ ತನ ನಿಮಗುಳ್ಳಡೆಮ್ಮ ಕಪಿಗಳಾಜಿಯಲಿ ತೀರಿಸುವರೇ ಹರಣಗಳ ನೀ | ತಾರತಮ್ಯವ ನರಿದು ಮುಗುಳೆ ವಿ | ಚಾರವಿಲ್ಲದೆ ಕಾದುವುದು ಕಡು ಭಂಡತನವೆಂದ ||೨೧|| ಬಡ ನರಾಂತಕನೆಂಬ ನೊಬ್ಬನು | ಗಡ ಸುರಾಂತಕ ನೆಂಬ ನೊಬ್ಬನು | ಗಡಭವ ಬ್ರಹ್ಮಾಮುರಾಳಿಗಳೆಂಬ ಹೆಸರುಗಡ || ಕಡು ಭಯಂಕರ ಹೆಸರು ಭಸ್ಸುಟ ರಕ್ಕಸರಿವದಿರುರೆ ಖಳ | ಗುಡುಹಿ ಗಳಲಾ ಯೆನುತ ತಿವಿದನು ಮತ್ತೆ ರಕ್ಕಸನ ||೨೨|| ತಪ್ಪದೀ ನೀನೆಂದ ನುಡಿ ಯೆಂ | ದುಪ್ಪರಿಸಿದುದು ಖಳನ ಹೃದಯದೊ | ಸಿಪ್ಪ ಮಾರುತಾಧ್ವರಕೆ ನಿಮಿಷ ಮಾತ್ರದಲಿ || ದಶಮುಖ ನುಪ್ಪರಿಸಿ ಭುಜವನು | ಚಪ್ಪರಿಸಿ ಬೊಬ್ಬಿರಿದು ಭುಜವನು | ನಿಪ್ಪಸರದಲಿ ಸಿಗುರಿವನು ಬಳಿ ಕುಳಿದ ಸೇನೆಯಲಿ ||೨೩|| ಹೇಳಲೇನುದ್ದಂಡ ಕದನ ಕ | ರಾಳ ಕರ್ಕಶ ಕದನ ಕೌತುಕ | ದೇಳಿಗೆಯ ಕೈಗೊಂಡು ಕೈಮಾಡುವ ನಿಶಾಚರರ || ತೂಳಿದನು ತೂರಿದನು ತುಳಿದನು | ಸೀಳಿದನು ಸವೆದಿಕ್ಕಿ ಹೊಳಕಿದು | ಹೂಳಿದನು ಹೊಯ್ದುರಪಿ ಹರವಿದನಮರ ರಬ್ಬರಿಸೆ ||೨೪|| ಚಲ್ಲ ಬಡಿದನು ಮಿಕ್ಕ ಪಿರಾರುವ | ಬಲ್ಲಿದರ ನತಿಬಲರ ರಣದಲಿ | ಹುಲ್ಲ ಕಚ್ಚಿಸಿ ಹುತ್ತವೇರಿಸಿ ಹಾಯ್ಸಿ ಸಾಗರವ || ಬಿಲ್ಲ ಬಿಸುಡಿಸಿ ಬಿರುದ ಹರಯಿಸಿ | ಹಲ್ಲ ಕಿರಿಯಿಸಿ ಮುಗುಳ್ದನಪ್ರತಿ | ಮಲ್ಲ ನುಬ್ಬಿದ ವೈಯ್ಯಾರ ರಸನ ತೊಂಗೆ ಹರುಷದಲಿ || ||೨೫||

ಮುವ್ವತ್ತಾರನೆಯ ಸಂಧಿ ಸಮಾಪ್ತಂ.

ಮುವ್ವತ್ತಾಲ್ಕನೆಯ ಸಂಧಿ.

ಸೂಚನೆ॥ ರಾಮ ರಾಕ್ಷಸ ವಿಜಯ ರಾಮರ । ರಾಮ ಲಕ್ಷ್ಮಣ ಸಾಹವದೊಳತಿ ।
ಕಾಯನನು ಗೆಲಿದೊಲಿಸಿದನು ಭುಜ ವಿಜಯ ಭಾಮಿನಿಯ॥

ಪದ್ಯ॥ ಕೇಳಿದೈ ರಘುವಂಶಲಕ್ಷ್ಮೀ । ಲೋಲಸುತ ನಿಮ್ಮವರ ವೀರಭ । ಟಾಳಿ ಬಲಿದುದು ಮುತ್ತಿಗೆಯ ನಸುರೇಂದ್ರಪುರವರಕೆ ॥ ಕೇಳಿಸಿತು ಕದನದಲಿ ಜೀವವ । ಜಾಳಿಸಿದ ರಾಕ್ಷಸರ ವಾರ್ತೆ । ಖಳ ಭೀಷಣ ವಚನ ಖಳ ಕುಲೋತ್ತಮನ ॥ ೧ ॥ ಎದ್ದ ನೋಲಗದಿಂದ ಹರುಷವ । ಕದ್ದ ಕದಡಿನ ಹೃದಯದಲಿ ರವಿ । ಬಿದ್ದ ನಪರಾಂಬುಧಿಯ ಮಧ್ಯದಲೊಡನೆ ನಿಮಿಷದಲಿ ॥ ಎದ್ದನಾ ಪೂರ್ವಾಬ್ಧಿ ಸಲಿಲವ । ನೊದ್ದು ಮನದಾದಿಯಲಿ ರಾವಣ । ಹೊದ್ದಿದನು ಸಿಂಹಾಸನವ ಸಾವಂತರೊಗ್ಗಿನಲಿ ॥ ೨ ॥ ಹೊಗೆಯ ಹೊರಳಿಯ ನೊದೆದು ಧಳ್ಳುರಿ । ಧಗಧಗಿಸುವಂದದಲಿ ದುಃಖದ । ದುಗುಡವನು ದೂಟಕ್ಕಿ ಧಳ್ಳಿಸಿ ತಧಿಕ ರೋಷಾಗ್ನಿ ॥ ಹಗೆಗೆ ಜಯವಿಂದಿನಲಿ ರಣ ಸಂ । ಯುಗವು ತನಗಿಂದಿನಲಿ ಕಣವನು । ಹೊಗುವೆ ಹಳಚುವೆನೆನುತ ವೀರಾವೇಶ ವ್ಮನ ನಾದ ॥೩॥ ಅಬಲನೆಂದೇ ತಂದನೇ ಮು । ನ್ನಬಲೆಯನು ಕಿರಿದಸುರ ರಳಿದೀ । ಶಬುದ ಮಾತ್ರಕೆ ಸರಿವುದೇ ಸಾಹಸದ ಸಿರಿತನಗೆ ॥ ಅಬುಧಿ ಗಭುವಂಜುವುದೆ ಸಂಗರ । ಲಬುಧನೇ ತಾನಂತಕನ ಕರ । ಕಬಳ ವರಿಭಟನೆನಿಸದಿರೆ ದಶಕಂಠನಲ್ಲೆಂದ ॥ ೪ ॥ ಇಂದು ರಾಮನ ರಣದಿ ಕೆಡಹದೆ । ಹಿಂದು ಮುಂದಾ ನಾದೆನಾದಡೆ । ತಂದೆ ಮುನಿಪತಿ ವಿಶ್ರವಸು ಕೈಕಸೆಗಳುದರದಲಿ ॥ ಬಂದವನು ತಾನೆನುತ ಹೂಂಕೃತಿ । ಯಿಂದ ಘರ್ಜಿಸೆ ನಗುತ ಬಳಿಕಿಂ । ತೆಂದನಯ್ಯಂಗೊಯ್ಯ ನಘಕೃತ ಕಾಯ ನತಿಕಾಯ ॥ ೫ ॥ ಎಲೆ ನಿಶಾಚರರಾಯ ತಾಮಸ । ತಿಳಿಯದಿನ್ನೂ ನಿನಗೆ ನೀನೆ । ಕೊಲುವವನು ಲಯಕನಿತ ರಹಿತನ ನಿನ್ನ ಗಂಟಲಲಿ ॥ ಇಳಿವನೇ ರಘುನಾಥ ನಾರಂ । ದೊಳಗ ನರಿದೆಯಲಾ ನಿಶಾಚರ । ಕುಲ ಕುಲಾಚಲ ವಜ್ರದಂಡ ನೊಲಕಟ ನೀನೆಂದ ॥ ೬ ॥ ನೂಕಲರಿಯದು ಜಯವು ನಿನಗೆ । ಕ್ಷ್ವಾಕುಕುಲ ಪಾಲಕನೊಳೀ ಜಗ । ದೇಕನಾಥನೊಳಕಟ ನರನೇ ರಾಮ ನೋಡಲಿಕೆ ॥ ಯೇಕೆ ನಿನಗೀ ಮರುಳುತನ ವೈ । ಸೋಕು ಸಲ್ಲದು ಸೀತೆಯಲಿ ಪರಿ । ಪಾಕ ಚಿತ್ತದೊಳಿಲ್ಲ ವಕಟಕಟೆಂದ ನತಿಕಾಯ ॥ ೭ ॥ ಮಾರಿ ಕಾದಿದಡೀತನಲಿ ಜಯ । ವೇರುವುದೆ ನಿನಗಕಟ ಜಯ ದು । ಬ್ಬೇರೆ ಬಡನರಿಗುಂಟೆ ತೊತ್ತು ಕಣಾ ಸುರಾಂತಕನ ॥ ಸಾರಿದೆನು ನಿನಗಕಟ ಛಲವನು । ಕೂರುಕೊಳದಿರು ಕೇಳು ಹೇಳುವೆ । ತೋರುವೀ ದೈವದ ಮಹಾತ್ಮವ ನೆಂದ ನತಿಕಾಯ ॥ ೮ ॥ ಭುವನ ವೀತನದೇಹವೀ ದಿಗು । ನಿವಹ ವೀತನ ಕಿವಿಗಳೀ । ರವಿಗಳೀತನ ಕಂಣ್ಗಳೀ ಪವಮಾನನುಸುರುಕಣ ॥ ಭುವನ ನಿಧಿಯಾಗೀ ಮಹಾತ್ಮನ । ಬೆವರು ಕಮಠನು ಪಾದ ಮಸ್ತಕ । ದವಿಕಳದ ಕೇಶಾಗ್ರವೀಗಾಕಾಶ ಪರಿಯಂತ ॥೯॥ ನೆಲೆಯ ನರಿವ ಮಹಾತ್ಮರ್ಗಳಿ ಗಂ । ಗುಲವ ಹತ್ತನು ಮಿಕ್ಕ ಹನುಮನ । ನಿಲುಕಿತೆಂ ಬರಿಯುಳ್ಳರಿಗೆ ವೈದೋರದಿಹನುಕಣ ॥ ಸುಲಭನೆಂಬ ಮಹಾನುಭವರಿಗೆ । ಜಲದಲಿಪಿಯಂತಿಹನು ಯೋಗಿಗ । ಳೊಲುಮೆ ಗೊಲಿದೊಲಿಯದವೊಲಿಹನೀ ರಾಮ ನೋಡೆಂದ ॥ ೧೦ ॥ ಆರೊಡನೆ ಕೈಸೋಂಕು

ಕದನವ | ದಾರ ಕೂಡ ಪಚಾರಣೆಯು ಬಿರಿ | ದಾರ ಹತ್ತಿರೆ ಮೊದಲೆಯು ಮಾತಾರ ಸರಸದಲಿ || ಆರಿದಿರ ಲತಿಮಥನ ಕೇಳೆ ಶ | ರೀರನೊಳು ಗೋಚರ ವಿಹೀನ ನೊ | ಳಾರುಭಟೆ ನಿನಗೆಂತು ಮೆರೆವುದು ತಂದೆ ಹೇಳೆಂದ ||೧೧|| ಇರಿತ ಕಂಬರ ವಳುಕುವುದೆ ನೊರ | ಜರುಬ ಲಗ್ನಿಗೆ ನೋವುದೇ ಕ | ಟ್ಟರುಹೆ ಕಚ್ಚಿದರಳುವುದೇ ಸುರಗಿರಿ ನಿಧಾನಿಸಲು || ಉರುಬಿ ಗೊಂಡೆಳೆ ಗುಬ್ಬಿ ಗುಡಿದರೆ | ಬರವುದೇ ಜಲರಾಶಿ ರಾಮನೊ | ಳಿಂತ ಕೊಂಬುದೆ ನಿನಗೆ ಹೇಳ್ವೈ ತಂದೆ ತನಗೆಂದ ||೧೨|| ತರಣಿ ಶತ ಸಂಕಾಶನಲಿ ಶಂ | ಕರ ಸಹಸ್ರ ಬಲಾಢ್ಯರಲಿ ಸರ | ಸಿರುಹ ಸಂಭವ ಕೋಟಿ ರಾಜಸಗುಣ ಸಮಗ್ರದಲಿ || ಜರೆದ ಜನನಸ್ಥಿತಿ ಲಯದ ವೈ | ಸೊರೆಹುಗಾರನೊಳೆಂತು ಗೆಲವಿನ | ತೆರೆ ಮನಂಗೊಳಿಸುವುದು ಹೇಳ್ವೈ ತಂದೆ ತನಗೆಂದ ||೧೩|| ದಿಟ ವಿಚಾರಿಸ ಲೀತನನು ನೀ | ನಟಮಟಿಸಿ ಗೆಲುವವನೆ ಸೀತೆಗೆ | ವಿಟತನವ ಮಾಳ್ಪವನೆ ಮಾಯ ಪ್ರಕೃತಿ ಪುರುಷನಲಿ || ಘಟಿಸುವುದೆ ದುರ್ನಯವು ಮೃಣ್ಮಯ | ಘಟವಜಾಂಡವಕೆ ತಗುವುದೆ ಚಾ | ವಟೆಯು ನವಿದುದು ಜೇಯಜ್ಞಾನರ ಮತವಿದಲ್ಲೆಂದ || ೧೪ || ಈತ ಮುಳಿದ ಹಿತರನು ರಕ್ಷಿಸಿ | ದಾತಗಳು ಮುನ್ನುಂಟೆ ಪೂರ್ವದ | ಲೀತ ರಕ್ಷಿಸಿದವರ ಕೊಂದವರುಂಟೆ ಪೂರ್ವದಲಿ || ಯೇತಕಕಟಾ ಭ್ರಾಂತಿ ಭೂಸಂ | ಜಾತೆಯನು ಕೊಂಡೊಯ್ದು ಕೊಡು ಸಹ | ಜಾತನನು ಕರೆತಂದು ಸುಖದಲಿ ರಾಜ್ಯವಾಳೆಂದ || ೧೫ || ನಿನ್ನ ಹವಣೇ ನೀತನಲಿ ರಣ | ರನ್ನವನು ಸವೆದರು ಸೆಣಸಿದರು | ಮುನ್ನಿನವರೊಳಗೇಕದೇಶಕೆ ಬಹೆಯೋ ಬರದಿಹೆಯೋ || ನನ್ನಿಯಿದು ಮಧು ಕೈಟಭಾದಿಗ | ಳುನ್ನತಿಕೆಯೇನಾಯ್ತು ಶೃತಿ ಭೂಕನ್ನೆಯನು ಕದ್ದವನ ಕಡುಹೇನಾಯ್ತು ಹೇಳೆಂದ || ೧೬ || ದೇವನೀತನು ಸಕಲ ದೇವರ | ದೇವನೀತನು ಬಂಧುವೀತನು | ಭಾವುಕರ ಕುಲದೈವವೀತನು ಭಕ್ತಿಲೋಲುಪನು || ಸಾವು ತಪ್ಪಿದರೀತನಿಂ ದಂ | ತಾವಳೇಂದ್ರಂ ಗಂಬರೀಷ ಮ | ಹಾವಿಭು ಪ್ರಹ್ಲಾದ ದೇವಂಗರಸ ಕೇಳೆಂದ || ೧೮ || ಅಂಬುನಿಧಿ ಬಡವರಿತೆರೆಗೆ ತೆಗೆ | ದಂಬಿಗೊಡಲೊಡ್ಡುವುದೆ ಕಪಿಗಳ | ಡೊಂಬಿಗೀವುದೆ ಬೆನ್ನ ಬೆಟ್ಟಕೆ ಕಥೆಯು ಮಾತಲ್ಲ || ಅಂಬುಜಾಸನ ಮುಖ್ಯ ಸುರ ನಿಕು | ರುಂಬಕಳುಕದ ಖಳರ ಜೀವವ | ಕೊಂಬಕೇ ನರರರಿಯಬಾರದೆ ತಂದೆ ನಿನಗೆಂದ || ೧೯ || ಖರ ವಿರಾಧ ಸುಬಾಹು ಮಾರೀ | ಚರುಗಳೇನಾದರು ಬಲಾನ್ವಿತ | ಸುರಪಸುತ ನೇನಾದ ನಿತ್ರ್ರಲು ನಿಮ್ಮ ಸೇನೆಯಲಿ || ಕರವ ಮಾಜೆಸಿಕೊಂಬ ಸುಭಟರ | ನೆರವಿ ತಾನೇನಾಯ್ತು ರಕ್ಕಸ | ರರಸನಲಾ ಕುಂಭಕರ್ಣನನೆಲ್ಲಿ ತೋರೆಂದ ||೨೦|| ಮರೆಯದೇಕಿನ್ನಾದರೆಯು ಬಿಡು | ಸೆರೆಯ ಸೀತೆಯ ಹೆಚ್ಚುಕುಂದಿನ | ಕೊರತೆ ಬಾರದು ಭಾವಿಸೀನುಡಿ ವೇದಮತವೆಂದ || ಹೊರದಿರಪಕೀರ್ತಿಯನು ಪಾತಕ | ತುರಿಸದಿರು ದುರ್ಜನರು ಬಳಸುವ | ಕೆರೆಯ ಕಲ್ಲನಕಟ್ಟೆಯಾಗದಿರೆಂದ ನತಿಕಾಯ || ೨೧ || ಎಲವೊ ಕೇಳತಿಕಾಯ ಮತಿಗಳು | ನಿಲುಕಲರಿಯವು ತುದಿಗೆ ನಿಮ್ಮವ | ನಿಲುಕಡೆಗಳವು ಬೇರೆ ಮಾರೀಚನ ವಿಭೀಷಣನ || ಬಳಿಕ ಕೈಕಸೆ ಮಾಲ್ಯವಂತರ | ತಿಳುಹುಗಳ ತುದಿ ನಿನ್ನದೈಸಲೆ | ಕಲಹ ಕಂಜುವಡತ್ತ ಸಾಕಾಳಿಡೆಯ ಬೇಡೆಂದ ||೨೨|| ಕಥೆಯನಾಸಿದ ಕೇಳಿದೆನು ಕಡು | ಶಿಥಿಲವಾದುವು ಹಿಂದಕಿವು ರಿಪು | ಮಥನವುಂಟೇ ಹೇಳು ಬೊಮ್ಮನ ಮಾತದಂತಿರಲಿ || ಮಿಥಿಲಜೆಯ

ಬಿಡೆಬಿಡೆ ಭಲೋಕ್ತಿಯ | ಮಥನವನು ಬಿಡೆ ರಾಮನಲಿ ಮರ | ಮಥನ ಕೂಗಿಟ್ಟೆ
ಡೆಯು ಕಡೆಯಣ ಮಾಡಿದೀಗೆಂದ || ೨೩ || ಅಹುದು ಮತ್ತೇನಾರಚಿತ್ತದ | ಲಿಹುದ
ನವರೇ ಬಲ್ಲರಿದು ತಾ | ವಿಹಿತವೇ ನಿನಗಾದಡೀ ವೀಳೆಯವ ನೆನಗೆನಲು || ವಿಹಿತ
ವಿದು ನಮಗೆನುತಲಾ ದು | ಸ್ಸಹನು ಬಳಿಕಾ ನಿರ್ಭಯನ ನಿ | ಸ್ಪೃಹನ ಕಳುಹಿದ
ನಿತ್ತು ವೀಳೆಯವನು ಮಹಾಹವಕೆ ||೨೪|| ತರಿಸಿ ತುಲಸೀದಂಡೆಗಳ ನಿಜ | ಶಿರಕಲಂ
ಕರಿಸಿದನು ಕೊರಳಿನ | ಲಿರಿಸಿದನು ಕೋಮಲದ ವಿವಿಧಾಭರಣಗಳು ಸಹಿತ || ವರ
ಲಲಾಟದ ಲೂರ್ಧ್ವತಿಲಕವ | ಧರಿಸಿ ತಾಯಿಗೆ ನಮಿಸಿ ವೈಷ್ಣವ | ರರಸ ನಡೆದನು
ಜನ ಮನೋಹರಕಾಯ ನತಿಕಾಯ ||೨೫|| ಬಹಡೆ ಬನ್ನಿ ಭವಾಬ್ಧಿ ಪೋತನ | ಬಹಳ
ಪದವಿಯ ಬಯಸುವರೆ ನೀವ್ | ಬಹಡೆ ಬನ್ನಿ ಜರಾಮರಣ ವರ್ಜಿತವ ನೆಲಸುವಡೆ ||
ಬಹುದುಮತ ವೈಕುಂಠವಾಸಿಯ | ಗೃಹದ ಭಕ್ತರ ಕೇಳಮೇಳದ | ಲಿಹುದು ನಿನಗುಂ
ಟಾದರೆಂದು ಭಟರಿಂಗತಿಕಾಯ || ೨೬ || ಇಲ್ಲಿ ನಿಂದ ಸಹಸ್ರವರುಷ ನಿಮ | ಗಲ್ಲಿ ಸುಖ
ಸಾಮ್ರಾಜ್ಯ ಸಂಪದ | ಗಲ್ಲಿಗಿಂದವೆ ಕೋಟಿಗುಣ ಬೀಯಕೆ ಫಲಪ್ರಾಪ್ತಿ || ಇಲ್ಲಿಗಿಂ
ದತಿಶಯ ಮನೋಹರ | ವಲ್ಲಿ ಹುಸಿಯೆನಬೇಡಿ ಲಕ್ಷ್ಮೀ | ವಲ್ಲಭನ ಪದದಾಣೆ ಬಹು
ದತಿಲೇಸು ನಿಮಗೆಂದ || ೨೭ || ಈಶನಹುದುಮಂಟಾದ ಡಂಭೋ | ಜಾಸನನ ರೂಪಹಡೆ
ದಿವಿಜಾ | ಧೀಶನಹಡೆ ಚತುರ್ವಿಧದ ಮುಕ್ತಿಯನು ಬಯಸುವಡೆ || ಕೇಶವನಕೂಡ್ಯ
ವರೆ ತಪದಭಿ | ಲಾಷೆಯಿಲ್ಲವೆ ತೀರ್ಥ ಯಾತ್ರಾ | ಯಾಸವಿಲ್ಲದೆ ಬಹುದೆನುತ ಹೊಯ್ಸಿ
ದನು ಡಂಗುರವ || ೨೮ || ಮನೆಗೆ ಮನವಾರತೆಗೆ ಧನವಿಗೆ | ವನಿತೆಯರಿಗಭಿಲಾಷೆ
ಮಾಡುವ | ಮನ ಬರಡರಿರಿ ಜೀವದಾಸೆಯ ಜವನ ಕೈವಶದ || ಲನುವರದ ಭಯ
ಭರಿತರಿರಿ ಹಿಂ | ದನು ವಿಚಾರಿಸ ದಂಜದೊಂದೇ | ಮನದ ವೀರರು ಬನ್ನಿ ತನ್ನೊಡ
ನೆಂದ ನತಿಕಾಯ ||೨೯|| ಅಕಟ ಕೆಡಬೇಡಿದುವೆ ಪರವ | ರ್ಥಕದನುಡಿ ಪರಬೊಮ್ಮ
ವಿದರಲಿ ಪ್ರಕಟಿಸುತ್ತಿದೆ | ಮರಳಿ ಬಯಸಿದಡಿಲ್ಲ ಗತಿ ನಿಮಗೆ || ಸಕಲ ತೀರ್ಥಸ್ನಾನ
ದಾನಾ | ಧಿಕ ತಪೋ ಯಜ್ಞಾದಿ ಫಲವಿವು | ಮುಕುತಿ ಪದ್ಧತಿಯೆಲ್ಲ ಬಲ್ಲರೆ ಬಹುದು
ಲೇಸೆಂದ || ೩೦ || ಅರಿಯಬೇಡಧ್ಯಾತ್ಮ ವಿದ್ಯೆಯ | ನರಿದೆನೆಂದೆನಬೇಡ ಬೊಮ್ಮವ |
ನರಿದು ಭಜಿಸಲು ಬೇಡ ಭಕ್ತಿಯ ಲಕಟ ಕರ್ಮದಲಿ || ಕುರಿಗಳಾಗಲುಬೇಡ ಬೇಗೆ |
ಚ್ಚರ ಪಡೆದು ತಾ ಸಮಯ ವಿದ ನುಳಿ | ದರಸಿದರೆ ಬಳಿಕಿಲ್ಲ ಕಲ್ಪ ಸಹಸ್ರ ಪರಿಯಂತ ||
ಆವ ಸುಕೃತವಮಾಡಿ ನೋಡಿದ | ಡೀವ ಫಲವಿನಿತಿಲ್ಲ ನೋಡಿದ | ಡಾವ ಸಿದ್ಧಾಂತ
ದಲಿ ನಾನಾ ದರ್ಶನಂಗಳಲಿ || ಈ ವಿಶೇಷವಕಾಣೆ ನಿದು ಮ | ತ್ತಾವ ಮಾರ್ಗದೊಳಿಲ್ಲ
ಬಹು ಮಾ | ಯಾ ವಿಲಾಸದ ಬಲೆಗೆ ಬೀಳದೆ ಬಹುದು ಲೇಸೆಂದ ||೩೨|| ಆದಿಪುರುಷನ
ಅಪ್ರಮೇಯನ | ವೇದ ಸಿದ್ಧನ ವಿಶ್ವಪೂಜ್ಯನ | ಭೂದಿವಾನಲ ಸಲಿಲ ಸೂರ್ಯಾತ್ಮಕ
ಸನಚ್ಯುತನ || ಐದುವವರ್ಗೈ ತನ್ನಿ ಹರಿಸಿರಿ | ಪಾದ ಭಜಕರು ಬನ್ನಿ ಪರತರ | ವಸ್ತು
ವಿದಲ್ಲ ದಿಲ್ಲೆಂದೆತ್ತಿದನು ಕರವ || ೩೩ || ಮುತ್ತು ನೀರಿನಲಾದ ಬಳಿಕದು | ಮತ್ತೆ
ಅಧಿಕ ನೀರಹುದೇ ಸುವರ್ಣಕ | ವೆತ್ತ ಕಬ್ಬಿನ ಮರಳಿ ಕಬ್ಬಿನವಹುದೆ ರಸತಾಗಿ ||
ಸತ್ತು ಹುಟ್ಟುವ ಹುಟ್ಟಿ ಹೊಂದುವ | ಸುತ್ತುದೊಡಕಿನ ತೊಡಹಸೊಲ್ಲದ | ಚಿತ್ತ
ಶುದ್ಧಿಯ ಸುಭಟರೈತಹುದೆಂದ ನತಿಕಾಯ ||೩೪|| ಬಳಸಿ ಬಂದುದು ಬಳಿಕ ತತ್ವದ |

ತಿಳಿವಿನಸುರರು ರಾಮನೇ ನಿಜ। ವಳಿಯ ದಮಲ ಬ್ರಹ್ಮವೆಂದೇ ಬುದ್ಧಿ ಭಾವದಲಿ ॥ ಕಲಿಗಳೈದಿದ ವಶ್ವದಂತಿ। ವಳಿವರೂಥ ಪದಾತಿಯುಲಿ ಸಿ। ರ್ಮಳ ಮನೋರಂಜಕ ನನಘ ಶತಕೋಟಿ ಭಂಜಕನ ॥೩೫॥ ನೊಳಗಿದುವು ಬಂಧದವಸಿಯು ಹೊಲಿ। ಹೊಲಿಗೆ ಹರಿಯಲು ವಾದ್ಯತತಿ ನಭ। ದೊಳಗೆ ಗುಡಿವಿಡಿದಾಡಿದನು ನಾರದನು ನಲವಿನಲಿ ॥ ಉಲಿಯೆ ಸನಕಾದಿಗಳು ಹುವ್ವಿನ। ವುಳೆಯ ಕರೆದರು ಪರಮ ವೈಷ್ಣವ। ತಿಲಕನಂಗದ ಲಜಭವಾಮರ ನಿಕರ ನಲಿದಾಡೆ॥ ಹೊಳಲ ಹೊರವಂಟನು ಸರಾಗದೊ। ಳೊಳು ಘಟಾ ವಳಿಸಹಿತ ಕಹಳಾ। ವಳಿಯ ಬಿರುದಿನ ಪಾಠಕರ ಕಳಕಳದ ರಭಸದಲಿ ॥ ನೆಲನ ನಳೆದ ತ್ರಿವಿಕ್ರಮನ ವೈ। ಯಳತೆಯಲಿ ವೈದೋರಿದನು ಕಪಿ।ಬಲಕೆ ಬಲವಿದ ಕಂಡು ಕಳವಳಿ ಸಿತ್ತು ನಿಮಿಷದಲಿ॥೩೬॥ ಮಾರಿ ಬಂದುದು ಮತ್ತೆ ಬಂದನೆ। ಘೋರರಕ್ಕಸ ಕುಂಭ ಕರ್ಣನು। ವೀರ ರಾಘವನಿವನ ಕೊಂದುದು ನಿಜವೊ ಮೇಣ್ಪುಸಿಯೊ॥ ಆರು ಕಾದುವ ರಿವನೊಡನೆ ಮದ। ನಾರಿ ಮಲೆವಡಸಾಧ್ಯ ಸಾಕು ಖ। ರಾರಿ ತಾನೇ ಕಾದಿ ಕೊಲಲೆನು ತೋಡಿ ತಗಲದಲಿ॥೩೭॥ ನೊಗ್ಗರದ ನೊದಲಿಗರ ತಪ್ಪಿಸಿ। ನುಗ್ಗುವಿದರಲಕಾಣೆನಸು ರನ। ನಿರ್ಗಮನಕೆನುತ ದಿಗ್ಗುಥಿಗಿಲೆನುತಿರ್ದು ದಿನಸುತನ ॥ ತಗ್ಗುತಿರ್ದುದು ಧರಣಿ ದಿಗ್ಗಜ। ಮುಗ್ಗುತಿರ್ದುದು ಕಂಡು ರಘುಪತಿ। ಹಿಗ್ಗಿದನು ಹೇರಾಳ ನಗೆಯಲಿ ನೋಡಿ ರಕ್ಕಸನ॥೩೮॥ ಇವನದಾರೈ ಸತ್ತ ಕುಂಭ। ಶ್ರವಣ ಮತ್ತುದಯಿಸಿದನೋ ಬರಿ। ಸುವಿ ತದೇ ಗೆಲವೆಮಗೆ ಕಡು ಕೌತುಕದ ಭಟನಹನ॥ ಇವನ ರೂಪಿನ ರಕ್ಕಸರುನಿ। ಮ್ಮವನ ಕಟಕದಲೆನಿಬರೆಂಬುದ। ನಮಗೆ ಹೇಳೆಂದರಸ ಬೆಸಗೊಂಡನು ವಿಭೀಷಣನ ॥ ೪೦ ॥ ಈತ ನೀಗೆಲೆ ಜೀಯಬಾಹು ಬ। ಲಾತಿಶಯ ಸಾಹಸಕೆ ಹಾವಿನ। ಲಾ ತಮಿಸ್ರಿಯು ಲೆಮ್ಮ ಬಲವನು ಬೆದರಿಸಿದ ಭಟನ ॥ ವಾತೆಗಿವ ಮಗ ನಿವ ನವನ ಸಹ। ಜಾತ ನಿವನು ಕುಮಾರರಲಿ ವಿ। ಖ್ಯಾತನಿವ ನತಿಕಾಯ ನೆಂಬುದು ಹೆಸರಲೇ ಯೆಂದ॥೪೧॥ ಅವನು ಕಡುಪಾತಕನು ಪುಣ್ಯ। ಶ್ರವಣ ನಿವ ನೆಲೆ ಜೀಯ ಜಗದೊಳ। ಗವನು ದೈವ ದ್ರೋಹಿ ಯಿವನು ಸದ್ದೈವ ನಸುರರಲಿ ॥ ಇವಗವನ ಪಡಿಗಟ್ಟ ಬಹುದಾ। ಹವದ ವೈಚಿತ್ರತೆಗೆ ಮಿಕ್ಕಾಂ। ತಿವಗೆ ಸರಿಯಹ ಸುಭಟ ರಿಲ್ಲೆಲೆ ದೇವ ಕೇಳೆಂದ। ೪೨॥ ಇನಿತ ಕೇಳ್ದಿನಸುತನು ಜಾಂಬವ। ಹನುಮ ನಳ ನೀಲಾಂಗದಾದ್ಯರು। ಮನದ ಭೀತಿಯ ಬಿಸುಟು ಮನುಕುಲ ಸಾರ್ವಭೌಮಕನ ॥ ಮನವ ಮೆಚ್ಚಿಸಲಿದು ಸಮಯ ವೆನ। ಗೆನುತ ತನುಗಳ ನೋವ ನೋಡದೆ ಮನದ ಲಂಭಟ ನಿದಿರಿನಲಿ ಮಾರಾಂತ ರಾಹವಕೆ ॥ ೪೩ ॥ ಹದನ ನಿದ ಕಂಡಂತರಿಸಿ ನಿಂ। ದಿದರು ಗವಯ ಗವಾಕ್ಷ ದುರ್ಮುಖ। ರದರ ಹವ ಣರಿದಾ ಶರಭ ಶತಬಲಿ ಸುಷೇಣಕರು ॥ ಎದೆಯ ಹೊಯ್ಲಂ ಜೆಕೆಗಳನು ಕೆಲ। ಕೊದದು ನಿಂದರು ಮಿಕ್ಕ ವರು ದೂ। ರದಲಿ ಥರಥರಗಟ್ಟಿ ಕದನಕೆ ಮಾಡಿದರು ಮನವ ॥ ೪೪ ॥ ಹಿಡಿದ ಗಿರಿ ತರುಗಳಲಿ ಬಲವಂ। ಗಡದ ವಿಂಗಡಗಳ ಕಲ್ಪದ। ಸಿಡಿಲ ಸಡಗರದಂತೆ ಬಲನೆಡ ಕೋಡ ಕೈಗಳಲಿ ॥ ಪಡಿಮುಖದೊಳಾಹವ ದುಪಕ್ರಮ। ಕೊಡರಿಸಿ ತತಿಕಾಯ ರಕ್ಕಸ। ಪಡೆಯ ಗಡಣ ಲೇರಿದರು ರಣವಾದ್ಯ ರಭಸದಲಿ ॥ ೪೫ ॥ ಹರಿಗೆ ಖಡ್ಗ ಕಠಾರಿ ಕುಂತದ। ಚರಣ ಚರ ರುಪ್ಪರದ ಕುದು ರೆಯ। ಕರದ ಖಡುಗದ ರಾವುತರ ರಣವಾದ್ಯ ರಭಸದಲಿ ॥ ಕರಿ ಘಟೆಯ ಮೇಲಿಡಿವ

ಜೋಧರ । ವರ ವರೂಥಾ ರೋಹಕರ ವೊರ । ಹರದಿ ಮೇಳದ ಲಬ್ಬರಿಸು ತೊಳ
ಹೊಕ್ಕ ನತಿಕಾಯ ।೪೬॥ ಏನ ಹೇಳುವೆ ಕುಂಭಕರ್ಣ ಮ । ಹಾ ನಿಶಿಚರ ಗಿವ್ಮ
ಡಿಯು ರಣ । ವೆನಲು ರಣದಾಯತಿಕೆ ರಣ ರಂಜಕದ ಗೌರವದ ॥ ಸೊರೆಕಾರನ
ಕೊಲೆಯ ಲಮರರ । ಮಾನಿನಿಯ ಲಪ್ಪುಗೆಯ ಲಡರುವ । ಲಾನರರನೇ ಕಾಣಲಾ
ಯ್ತಂಬರದ ವಳಯದಲಿ ॥೪೭॥ ಹರಣದಾಸೆಯ ನೋಡಲೀ ಬಲ। ಬೆರಸಿ ತಾ ಬಲ
ದೊಡನೆ ಕೈ ವೈ । ಮುರಿಯೆ ದೋಸರ ಪೈಸರದ ಲೊಳ ಪೊಗದ ಹರಿಹಿನಲಿ ॥ ಸರಿ
ಬೆಸನ ಸಂಗರವ ಮೆರೆದರು। ಸುರ ಕದಂಬಕ ಮೆಚ್ಚಿ ಹೆಣ ನು। ಪ್ಪರಿಸೆ ರುಧಿರಾಂಬು
ಪ್ರವಾಹದ ಲಣುಗ ಕೇಳೆಂದ ॥ ೪೮ ॥ ಚಟುಳ ಭಟ ರುಭಯದಲಿ ಮೆರೆದರು। ವಿಟ
ತನವ ನಸವರ್ಗ ಸ್ವರ್ಗ । ಸ್ಫುಟ ನಿಕೇತನ ವೀಥಿಗಳ ಲಂಭೋಜ ಭವ ಪುರದ ॥
ಘಟಿಸಿ ತಲ್ಲಿಂ ಮೇಲೆ ಕಪಿ ಪಟು । ಭಟ ರೊಳಾಹವ ವಾ ನಿಶಾ ಪರಿ । ಭಟನ ರಥ
ಹಯ ವಾರಣಾರೋಹಕರ ಸೇನೆಯಲಿ ॥೪೯॥ ಸೀಳಿ ಹಾಕಿದ ರಾನೆಗಳನು ನ। ಖಾಳಿ
ಯಲಿ ಬಿಗಿ ಬಿಗಿದ ಕರುಳ್ಗಳ। ಮಾಲೆಗಳ ಮರುಳುಗಳ ಕೊರಳಿನ ಲಿಕ್ಕಿದರು ಹಯವ॥
ತೂಳು ವತಿರಥ ವಾಜಿಗಳ ಗಿರಿ । ಚೂಳಿಕೆಯಲೇ ಚೆಲ್ಲಿ ಬಡಿದನು ರಾಳಿ ಹೊಗಳಲು
ಕಾದಿದರು ನೀಲಾಂಗದಾದಿಗಳು ॥೫೦॥ ಬಳಿಕಲೇ ವೇಳುವೆನು ತೆದುರಾ । ವಳಿಯ
ಕಾಳಗ ದೊಳಗೆ ವಜ್ರಿಯ । ಕುಲಿಶ ಕೇಳಾಹಳಿಸು ವೊಲತಿಕಾಯ ನುರವಣಿಸಿ ॥
ಹಳಚಿದನು ಹರಿದಶ್ವ ತನುಜನ । ನಳನ ನೀಲನ ಜಾಂಬವನ ಶತ। ಬಲಿ ಸುಷೇಣ
ಗವಾಕ್ಷ ವೈಂದ ದ್ವಿವಿದ ಪಟುಭಟರ ।೫೧॥ ಕೋಲಿ ಗೊಬ್ಬೊಬ್ಬರ ಸವಿಾಕಸ।
ಲೀಲೆಯನು ಸಂತೈಸಿ ಮುಕ್ಕಿನ । ಬಾಲ ದಣ್ಣಗ ಳಸುವ ನುಗಿವುತ ಹೊಕ್ಕ ವೈಗಳಲಿ॥
ಕಾಲ ನುರವಣೆಯೋ ಕಪರ್ದಿಯ। ಕೋಲ ಗೊರೆಯೋ ಭೈರವನ ರಣ। ಕೇಳಿಯೋ
ನಾನರಿಯೆ ನತಿಕಾಯನ ರಣೋತ್ಸವವ॥೫೨॥ಎತ್ತ ನೋಡಿದಡತ್ತ ತಲೆಗಳು। ಕತ್ತ
ರಿಸಿ ಬಿದ್ದಿರ್ದ ಕಪಿವೆಣ । ವೆತ್ತ ನೋಡಿದಡತ್ತ ಕೈ ಕಾಲುಡಿದ ಕಪಿಸೇನೆ ॥ ಎತ್ತ
ನೋಡಿದಡತ್ತ ಕಪಿಗಳ । ನೆತ್ತಿಗಳ ನುಪ್ಪರಿಸಿ ನಿಗುರಿನ । ನತ್ತರಿನ ಮಯ ವಲ್ಲ
ದಿಲ್ಲಾ ಕಣನೊಳಗಲದಲಿ ॥೫೩॥ ಮುಟ್ಟಿ ಕಾದಲು ಬಂದ ಹನುಮನ। ಕಟ್ಟಿದನು
ಕಮಲಜ ಭವಾಸ್ತ್ರ ದೊಳಿಟ್ಟಣಿಸುವತಿಬಲರ ಹೇರೊಡಲುಗಳೊ ಳಂಬುಗಳ ॥ ಒಟ್ಟಿ
ದನು ನೂಡನೆ ಬವರದ। ಬಟ್ಟೆಯನು ಬಾರದವೊ ಲಸುರಘ। ರಟ್ಟ ನಿದಿರಿಲಿ ಹೊಳಕಿ
ದನು ಹೊಂದೇರೊಳತಿಕಾಯ ॥ ೫೪ ॥ ಅಹುದು ಜೀಯ ಸಮಗ್ರ ಸಾಹಸ । ನಹನೆ
ನೋದಲೇ ದೇವರಿಂಗೆ ಬಿ। ನ್ನಹವ ಮಾಡುವ ಮಾತಿಗನೃತವು ಹೊಂದದೆಲೆ ತನಗೆ ॥
ಅಹತ ಬಲ ನಿವ ನಿವನ ಘನ ವಿ। ಗ್ರಹವ ನಾನುವ ದರಿದೆನಲು ಗಹ। ಗಹಿಕೆಯಲಿ
ತೂಷ್ಣೀಂಕರಿಸಿ ಸೌಮಿತ್ರಿ ಮಾರಾಂತ ।೫೫॥ ರಾಯ ಚಿತ್ತೈಸಿವನ ಗೆಲುವರ। ಣಾಯ
ತದ ರಂಜಕವ ನೆನು ತಸ । ಹಾಯ ಶೂರನು ಹೊಕ್ಕ ನೇಕಾಂಗದಲಿ ಸಂಗರವ ॥
ಸಾಯಕದ ಬಿಗುಹಿನಲಿ ಕಂಡತಿ । ಕಾಯ ನಿಂಗಿತದಿಂದ ಸಿರಿ ನಾ। ರಾಯಣಾಂಶೀ
ಭೂತ ನೆಂದರಿ ದಂತರಿಸಿ ನಿಂದ ॥ ಏನ ಹೇಳುವೆ ಬಳಿಕಲಾ ರಘು। ಸೂನುವಿನ ಸಹ
ಭವನು ಚಾಪ। ಧ್ಯಾನವನು ಸಡಗರಿಸುತಾ ಲಂಕಾಪುರಾಧಿಪನ ॥ ಸೂನುವಿನ ಸರಿಸ
ದಲಿ ಸಿಂಹ । ಧ್ಯಾನದಲಿ ನಿಲುಕಿದನು ಮುದಮುಖ। ದಾನೆಯಲಿ ಮುಳಿದೆದ್ದ ಮೃಗ

ರಾಜೇಂದ್ರ ನಂದದಲಿ ||೫೭|| ಬಂದ ಭಾರದಲಾತ ನೀತನ | ನೆಂದ ನಳವಿಯ ಉಬ್ಬಿ ರಿದು ರಘು | ನಂದನನೋ ಲಕ್ಷ್ಮಣನೋ ನಿವನಾರೆಂದು ಸರಿಸದಲಿ || ನಿಂದು ಕೇಳಲು ಕೇಳಿ ಲಕ್ಷ್ಮಣ | ನೆಂದ ನೆಲವೋ ನಿನ್ನ ಮನಕೇ | ನೆಂದು ತೋರಿತು ತೋರಿ ದಸಿ ತನು ಬಗೆದುಕೋ ಯೆಂದ || ೫೮ || ರಣಕೆ ನಮಗಾರಿದರಾದಡೇನದ | ರೆಣಿಕೆ ನಮ ಗಿಲ್ಲಾವು ಸಮರಾಂ | ಗಣದೊಳಾತ್ಮ ನಿವೇದಕರು ಸಚರಾ ಚರಾತ್ಮಂಗೆ || ರಣ ಕುತೂಹಲ ರಚನೆಯನು ಸುರ | ಗಣವು ನೋಡಲು ತೋರುವೆವು ಭಾರಣೆಯ ಭಟ ನಾರಾದ ಡನುವಾಗೆನುತ ಬೊಬ್ಬಿರಿದ ||೫೯|| ಜರಿದುವ ಮರ ವಧೂಜನದ ನಿರ್ಭರದ ಗರ್ಭದ ಪಿಂಡಗಳು ಧರೆ | ಗುರುಳಿ ಬಿದ್ದುವು ಕೈಯ್ಯಕೈದುಗ ಳಜಸುರಾದಿಗಳ || ಹರನ ಶಿರದ ಸುಧಾಂಶುಮಂಡಲ | ಬಿರಿದು ದರ್ಪಕೆ ರಾಘವೇಂದ್ರನ | ಚರಣ ಕಳವ ಳಿಸಿದುವು ಬೊಬ್ಬಿರಿತಕೆ ನಿಶಾಚರನ || ೬೦ || ಮೋಹಿದರು ಬಳಿಕಿಬ್ಬ ರಳವಿಯ | ಲಾಹವದ ಸಂಕೇತ ಸಮಯದ | ಸಾಹಸದ ಸೌರಂಭ ದುಬ್ಬಿನ ಮೊಬ್ಬಿಗನಿ ಬಳಿಯ|| ಕಾಹುರದ ಕಳೆಗಳಲಿ ರಣ ಸ| ನ್ನಾಹ ರೆಚ್ಚಾಡಿದರು ಸುರ ರು| ತ್ಸಾಹಿಸಲು ನರ ರಾಕ್ಷ ಸಾನ್ವಯ ರಾಜ ರಂಗದಲಿ ||೬೧|| ಎಸುಗೆಗಳ ಕೈ ಚಳಕಗಳ ಬಿಂ| ಬಿಸಿದ ಬಿಲುಗಳ ಚಂಡ ಕಾಂಡ | ಪ್ರಸರ ದುಬ್ಬರ ದಬ್ಬರದ ಬೊಬ್ಬೆಗಳ ಭಟರುಗಳ || ವಿಷನು ರಣ ರಂಜನೆಗೆ ದೇವ | ಪ್ರಸರ ವಿದ್ದುದು ನಪ್ಪ ದೃಷ್ಟಿಯ | ಮುಸುಡಿ ನೊಲಹಿನ ಬಿಗಿದ ಬೆರಗಿದ ಸುಖದ ಸುಗ್ಗಿನಲಿ ||೬೨|| ಬಿಸಿಬಿಸಿಯು ಬೋಳೆಗಳ ತಳಪದ | ರಸುಮೊಗಳ ಕವಲಂಬುಗಳ ಧಾ | ಳಿಸುವ ಹೆಗರಿನ ಖಂಡಗಳ ಕಣಲಿಕೆಯ ಕೋಲುಗಳ || ವಿಶಿಖ ಗಳ ಮನ ವಿಸ್ಫುಲಿಂಗ | ಪ್ರಸರಗಳ ನಾನಾ ಶರಾವಳಿ | ಮುಸುಕಿದುವು ಮುಂಬರಿದು ಭೂವ್ಯಾಕಾಶ ಮಂಡಲವ ||೬೩|| ಬಳಿಕಲೇವೇಳುವೆನು ಬಾಹಾ | ಲುಳಿತ ಬಲ ನತಿ ಕಾಯ ನೆಸುಗೆಯ | ಚಳಕ ಚಮತ್ಕೃತಿ ಚಟುಳ ನಿಶಿತ ಮಹೋಗ್ರ ಬಾಣಗಳ || ಹಿಳುಕಿ ಹೊಗಿಸಿದ ನಗಜೆಯನು ಜಗ | ಜಲಧಿ ಬೈಚಿಟ್ಟಂತೆ ನಿವಿಷದೊ | ಳಳವಳಿದ ವತಿಕಾಯ ಸಾಹಸ ದೆಸುಗೆ ನಸುರಾರಿ ||೬೪|| ಬಿಚ್ಚಿದನು ಬಳಿಕೀತ ನಸುರನ | ನಿಚ್ಚ ದೋಲ್ಪರ ಪಂಜರವ ಮಗು | ಳೆಚ್ಚಬಾಣವ ಕಡಿದು ನೋಯಿಸಿದನು ನಿಶಾಚರನ || ಚುಚ್ಚು ವಸ್ತ್ರ ವ್ಯಥೆಯ ಸೈರಿಸು | ತೆಚ್ಚ ನವ ನೀತನು ಕವಚವ | ನುಚ್ಚಿ ಮುಳಿಗಿದ ಪಂಬು ಲಕ್ಷ್ಮಣದೇವ ನಂಗದಲಿ || ೬೫ || ಸಂಧಿಸಿದ ಶರಳಿರಿತದಲಿ ಸಲೆ | ನೊಂದ ಲಕ್ಷ್ಮಣದೇವ ನಹುದೋ | ನಂದ ಸುಭಟರೊಳಗ್ಗಳನು ಮಾಮಾ ಪ್ರಸಿದ್ಧನಲ || ಅಂದ ಲೇಸೇಸುಗಳ ಹಗೆಗಳ | ಲೊಂದೆರಡು ಗುಣ ವಿರ ಲಸೂಯೆಯ | ದಂದ ಡಿತ ರರು ನಗುವನು ತಿಂತೆಂದ ನಸುರಂಗೆ ||೬೬|| ಬಲ್ಲಿದರು ನೀವ್ ನಮ್ಮ ಸಾಹಸ | ಕಿಲ್ಲ ಸರಿ ಸುರ ನರ ಭುಜಂಗಮ | ರಲ್ಲಿ ನಾನಾಸುರ ನರೋರಗ ಭುವನದ ವಸ್ತೈಸೆ || ಕಲ್ಲ ಮರ ನವ ರುಳಿದವರು ಬಡ | ಬಿಲ್ಲಿ ನವನಾ ವಿಬ್ಬ ರಿದಿಕೊಳು | ಬಲ್ಲಿದನು ತಾನಲ್ಲ ತನ್ನಯ ಪರಿಯ ನೋಡೆಂದ ||೬೭|| ಎನುತ ಸರಳೈದರಲಿ ದಶಮುಖ | ತನುಜ ನುರು ವಕ್ಷನನು ಕೀಲಿಸಿ | ದನು ಸುಮಿತ್ರಾ ಸೂನು ಸುಮ್ಮಾನಿಸೆ ಸುರವ್ರಾತ | ಧನು ಸಡಲಿ ಕಾಲ್ನಡುಗಿ ಕಂಪಿಸಿ ತನಬಳಲಿ ಕೈಗುಂದಿ ಕಡುಹಿನ | ಮೊನೆ ಮುರಿದು ಮೈಮರೆದು ಸೋಲಕೆ ಸಂದ ನತಿಕಾಯ ||೬೮|| ಮೆಲ್ಲ ನೆಚ್ಚರಿಕೆಯಲಿ ಸಿತಾ | ವಲ್ಲಭನ ನೆನಹಿನಲಿ

ಸಡಿಲಿವ | ಬಿಲ್ಲು ಬಲುಘಡಿ ದುಗಿದು ಮೂಡಿಗೆ ಯೆಂಬ ನತಿಕಾಯ || ತೆಲ್ಲವಿಸಿ ತಿರುಪ
ನಲಿ ಭಾರಿಯ | ಘಲ್ಲವಣೆಯಲಿ ಮುಕ್ತಿ ವಧು ಧ | ಮ್ಮಿಲ್ಲ ಹಸ್ತ ನ್ಯಸ್ತ ನಿದಿರಾದನು
ಸರಾಗದಲಿ ||೧೯|| ನೀವು ಜಗಕಧಿದೈವ ವೆಂಬುದ | ನಾವು ಬಲ್ಲೆವು ನಮ್ಮ ಕುಲದ
ಸ್ವ | ಭಾವ ವಿದ ನಾವ್ ಬಿಡಲು ಬಹುದೇ ಪೂರ್ವ ಪದ್ಧತಿಯ || ನಾವು ಮಾಡುವ
ಸಮರ ಮುಖ ಸಂ | ಭಾವನೋಚಿತ ಸರಳ ಭಕ್ತಿಯ | ನೀವು ಕೈಕೊಳ ಬೇಕೆನುತ
ತೆಗದೆಚ್ಚ ನತಿಕಾಯ ||೨೦|| ಕೇಳು ಕುಶ ನಿಮ್ಮಯ್ಯನನು ಜನ | ಭಾಳದಲಿ ಬಿದ್ದು
ಗಿದ ಕೆಂಗರಿ | ಗೋಲು ನೂಕಿದ ಮರಣ ಜಲಧಾರೆಗಳ ಲಿದ್ದೆಸೆಯ ಕೇಳಿದ್ಯೆಲವ
ಕೋಪಿಸಿದ ಕಡೆ | ಗಾಲ ದುಗ್ರಾಂಬಕನ ನಯನ | ಜ್ವಾಲೆಯಂತಿರೆ ತೋರಿದುದು
ಸುರಬಲದ ಕಣ್ಮನಕೆ ||೨೧|| ಲೇಸು ಲೇಸೈ ಚಾಪ ತಂತ್ರ ವಿ | ಲಾಸ ಪೊಳ್ಳಿತು ವೀರ
ನಹೆ ಮಾ | ಮಾ ಸಮಗ್ರ ಪ್ರಬಲನಹೆ ರಘುಪತಿಯ ಪದದಾಣೆ || ಈಸು ದಿನಕಾದಿದ
ನಿಶಾಟ ಮ | ಹಾ ಸುಭಟ ರಾಹವಕೆ ಮಿಗಿಲೆಂ | ದಾ ಸುಮಿತ್ರಾಸುತ ಸುರಾರಿಯ
ನೆಚ್ಚ ಬೊಬ್ಬಿರಿವ |೨೨|| ಕಾಯ ಕಂಪಿಸಿ ತುರದೊಳದ್ದಿದ | ಸಾಯಕದ ಭೀತಿಯಲಿ
ನೊಂದನು | ಘಾಯದಲಿ ಹೆರುಹಿಸುವ ಮೂರ್ಛೆಯ ಳಳಿಯ ಮರುಕದಲಿ || ಆಯಿ
ತಕಟಾ ತಂದೆ ರಾವಣ | ನಾಯುವಿಗೆ ಕಡೆಯೆನುತ ಸಿರಿ ನಾ | ರಾಯಣನ ಧ್ಯಾನದಲಿ
ಮುಕ್ತಿಗೆ ಮಾಡಿದನು ಮನವ || ೨೩ || ನರರಿಗೀ ಬಲುಹೆಲ್ಲಿಯದು ವಾ | ನರರಿಗೀ
ಕಡುಹೆಲ್ಲಿಯದು ನರ | ಹರಿಯ ಲೀಲಾ ಚರಿತವಿದು ನಾವಿನ್ನು ಕಾದುವುದು ' ಮರುಳು
ತನ ವೆನುತಂತರಂಗದ | ಸರಸಿಜದ ಕರ್ಣಿಕೆಯ ಮಧ್ಯದ | ಲಿರಿಸಿ ರಾಮನಮೂರ್ತಿ
ಯನು ಸೌಮಿತ್ರಿಗಿಂತೆಂತ ||೨೪|| ಕಲಹಕಾವ್ ವೆಗ್ಗಳರು ಲೋಕಾ | ವಳಿಯ ವೀರ
ರೊಳರಿದೆವಾವ್ ನೀವ್ | ಜಲರುಹಾಕ್ಷನ ಬಿಂಬವೆಂಬುದು ಮರೆಯ ಮಾತೇನು ||
ತಿಳಿಯಲಿದು ಕಡೆಗಲಹ ವೆನುತಾ | ಕಲಿತ ಶರ ಸಂಧಾನದಲಿ ಕೈ | ಲುಳಿಯ ಲೆಚ್ಚನು
ವೀರ ವೈಷ್ಣವ ನೂರ್ಮಿಳಾಪತಿಯ ||೨೫|| ಬಾಣವದ ಕಡಿ ದಬ್ಬರಿಸೆ ಗೀ | ರ್ವಾಣ
ತತಿ ಹೊಗಳಲು ಚತುರ್ಮುಖ | ಬಾಣದಲಿ ಕಡಿ ದಿಳುಹಿದನು ಶಿರವನು ನಿಶಾಚರನ||
ಪ್ರಾಣ ತೊಲಗದು ಮುನ್ನ ಜಿಹ್ವ | ತ್ರಾಣದಲಿ ಹರಿ ವಿಷ್ಣು ಲಕ್ಷ್ಮೀ | ಪ್ರಾಣನಾಥ
ಯೆನುತ್ತ ಶಿರವಡರಿತು ನಭಸ್ಥಳಕೆ ||೨೬|| ಅಡರೆ ಮಸ್ತಕ ನಭವ ಹರಿಪದ | ಕಡರಿ
ತಾತ್ಮಜ್ಯೋತಿಗೇ ಬೆಳ | ಗಿಡುತ ಲುಚ್ಛಳಿಸಿದುದು ರವಿಮಂಡಲದ ಮಧ್ಯದಲಿ ||
ಝುಡಿವ ಪರಮಾನಂದ ರಸ ದು | ಗ್ಗಡದಲಿರೆ ಬೊಮ್ಮಾದಿಗಳು ಬೆರ | ಗಿಡೆ ಬಹುಶೃತಿ
ಹಾಂವಿಸೆ ಸನಕಾದಿಗಳು ನಲಿಯೆ || ೨೭ || ಮಿಸುಪ ಮಣಿಮಯ ಮಂಡಲವ ಥಾ |
ಳಿಸುವ ಕದಪಿನ ಮುಗುಳು ನಗೆ ಲಂ | ಬಿಸಿದ ವದನದ ವೀರರಸ ದಛಿನವದ ಲೋಚ
ನದ || ಅಸುರಪತಿ ಲಂಕೇಶ್ವರನ ಮೊಗ | ರಸದ ಸಿರಿ ಕೆಲಸಿಡಿವ ಪ್ರೋಲ್ತಲೆ | ವಿಶಿಖ
ಮುಖದಲಿ ಕೆಡದು ದಳೆ ಗತಿಕಾಯರಕ್ಕಸನ ||೨೮|| ಹೊರಳಿದನು ಬಳಿಕವನ ಸಾರಥಿ |
ಸುರಿವ ಕಂಬನಿಗಳಲಿ ಮಡಿದನು | ಬೆರಳಲಶ್ವ ಜಲಂಗಳನು ಲಂಕೇಶ ನೆರಡನೆಯ ||
ಹರಿ ಪರಾಯಣ ನಸ್ತಮಿಸಿದನೆ | ಹರ ಮಹಾದೇವೆನುತ ದುಗುಡದ | ಲರಿಯ ಮನ
ಹಮ್ಮೈಸಿ ಬಿದ್ದನು ಪಡುವಣಬುಧಿಯಲಿ ||೨೯|| ಉಳಿದ ಬಲವೀ ಲಕ್ಷ್ಮಣಾಂಕನ |
ಹಳಚಿ ಹರಿದುದು ಹರಿಪದದ ಪದ | ಮೊಳಗೆ ಹೊನಲೆದ್ದುದು ಸುರಾವಳಿ ಯಮಲ

ಹೂ ಮಳೆಯ ॥ ಮೊಳಗಿದುವು ದುಂದುಭಿಗ ಳಮರರ । ಹೊಳಲೊಳಗೆ ಹರಿಸೇನೆ ಮಾಯಾ । ಬಲದ ಬಿಡುಗಡೆ ಯಿಂದ ಬೊಬ್ಬಿರಿದಾಡಿತಗಲದಲಿ ॥೮೦॥ ರಥವ ತಿರುಗಿಸಿ ಕೊಂಡು ರಿಪು ಸಾ । ರಥಿ ಪುರಾಂತರ ಕೈದಿದನು ಬಲಿ । ಮಥನ ಹೊಗಳಲು ಹರುಷ ದುಬ್ಬಿನ ಲನುಜ ನೊಡಗೂಡಿ ॥ ಪೃಥುಳ ಬಲ ತೊರೆವೆಯು ಹಿರಣ್ಯಕ ಮಥನ ತಿರುಗಿದ ನಿತ್ತ ಲಧಿಕ । ಪ್ರತತಿ ವಿಜಯಾಭ್ಯುದಯ ದೇಳಿಗೆ ಯಿಂದ ಪಾಳಯಕೆ ॥ ॥೮೧॥

ಮುವ್ವತ್ನಾಲ್ಕನೆಯ ಸಂಧಿ ಸಮಾಪ್ತಂ.

ಮುವ್ವತ್ತೈದನೆಯ ಸಂಧಿ.

ಸೂಚನೆ॥ ರಾಯ ವೈರಿಘರಟ್ಟ ನಮರರ । ರಾಯದಲ್ಲಣ ನಿಂದ್ರಜಿತು ಅಜ । ಸಾಯಕದ ಸಮರದಲಿ ಗೆಲಿದನು ಸಕಲ ಕಪಿಬಲವ ॥

ಪದ್ಯ॥ ಕೇಳಿದೈ ಕುಶನಿಪ್ಪು ರಘುಭೂ । ಪಾಲ ನನುಜನ ಸಮರ ಮುಖದಸ । ಲೀಲೆಯಲಿ ಸಾಯುಜ್ಯ ಪಡೆ ದತಿಕಾಯ ರಕ್ಕಸನ ॥ ಕಾಳಿಗದ ವಾರ್ತೆಯನು ಬಳಿ ಕೊ । ಡ್ಡೋಲಗದ ಲಿದ್ದಸುರ ಪತಿ ಕೇ । ಳ್ದಾಲಿಗಳ ಬಿಡುವನಿಯೊ ಳಿಳಿದನು ಸಿಂಹ ಪೀಠಕವ ॥ ೧ ॥ ಕಳುಹಿ ರಕ್ಕಸ ನಾಯಕರ ನೊಳ । ನಿಳಯ ಕೈತರೆ ಧಾನ್ಯಮಾಲಿನ ಯಳಲಿದಳು ಸುತ ಶೋಕದಲಿ ಹಳವಳಿಸಿ ನಂದನನ ॥ ಬಳಿಕ ಶಕ್ರಾರಾತಿ ತಂದೆಯ । ಬಳಿಗೆ ಬಂದಾ ಜನನಿ ಜನಕರ । ತಿಳುಹಿ ತನ್ನ ಪರಾಕ್ರಮವ ಪಸರಿಸಿದ ನೈಯಂಗೆ ॥೨॥ ಜನಪ ಚಿತ್ತೈಸುದಯ ಮುಖದಲಿ । ಮನುಜ ಮರ್ಕಟ ಮಾಂಸದಲಿ ಶಾ । ಕಿನಿ ಜನೌಘನವ ಸಾಕದಿರೆ ಮಂಡೋದರೀ ನಿಮಗೆ ॥ ಜನಿಸಿದವ ನಲ್ಲೀ ಪ್ರತಿಜ್ಞೆಗೆ । ಜಿನುಗಿದಲೆ ಜಾರುವೆದು ಶಿಖಿಯಲಿ । ಮನದ ದುಗುಡುವ ಬಿಟ್ಟು ಬಯಸು ಮನೋರಥವನೆಂದ ॥೩॥ ಎಣಿಸ ಬೇಡನ್ಯವನು ಕದನದ । ಕಣಿಯ ಕಿದು ಕಡೆಯೆನುತ ಕಲಿ ರಾ । ವಣಿ ದಶಗ್ರೀವಂಗೆ ಭಾಷೆಯನಿತ್ತು ರೋಷದಲಿ ॥ ಮಣಿರಥವ ನೇರಿದನು ರಿಪು ಮಾರಣದ ಮಂತ್ರದ ರಾಕ್ಷಸರ ದ್ವಿಜಗಣ ಸಹಿತ ಬಂದನು ನಿಕುಂಭಿಣಿ ಯೆಡೆಗೆ ರಜನಿಯಲಿ ॥೪॥ ಬಿಷರುಹಾಸನ ನಿನ್ನ ಪರ ವವ । ಗೊಸುವ ದಾಸುರ ಹೋಮದಲಿ ರಿಪು । ವಿನರುಹಾ ಬ್ರಹ್ಮಾಸ್ತ್ರ ಸೇರುವುದಾನಿಶಾಟಂಗೆ ॥ ನಿಶಿ ಯೊಳಿದು ತಾ ಸಿದ್ಧವಾಗಿಹು । ದಸುರ ವಿಪ್ರರ ಮುಖದಿ ನಾರಂ । ಭಿಸಿದನಧ್ವರವನು ಮಹಾ ಮಾರಣ ಮಹಾಹ್ವಯದ ॥೫॥ ಉರಿಯ ನುದರವ ಬಗಿದು ತಾ ವಿ । ಸ್ತರಿಸಿದನು ಕುಂಡದಲಿ ಮಾಂಸದ । ಚರುವಿ ನರುಣ ಜಲಾಜ್ಯ ಧಾರೆಯ ನೆರೆದ ದರ್ಭೆಗಳ ॥ ಬಿರಳ ಸವಿಧೆ ಯಲಾಭಿಚಾರ । ಧ್ವರವ ನಿರ್ವರ್ತಿಸಿದನೈ ನಡು । ವಿರುಳು ನಿರ್ವಿಘ್ನದಲಿ ವರವಾ ಯ್ತಬುಜ ಸಂಭವನ ॥ ೬ ॥ ಮುರಿದನವ ಪುರವರಕೆ ಪುರಹರ । ಹರಿ ಯಮಾದಿಗಳಳುಕಿ ತಂದೆಯ । ಭರದ ದುಗುಡವ ಬಿಡಿಸಿ ತೋರಿಸಿದನು ಸರೋಜಜನ ॥ ವರದಿ ನೊದಗಿದ ದಿವ್ಯರಥ ಹಯ । ಶರ ಶರಾಸನಗಳನು ಹರ್ಷೋ । ತ್ಕರುಷವನು ಬಗೆಗೊಳಿಸಿ ಬಳಿಕಿಂತೆಂದ ನೈಯ್ಯಂಗೆ॥೭॥ ಅಸುರಪತಿ ಕೇಳೆನ್ನ ಸೋಲದ । ಸಸಿಯ ಕೀರ್ತಿಕ್ಕುವೆನು

ರಾವಣನ। ಬಸುರಿನಲಿ ಬೆಳಗುವೆನು ಲಕ್ಷ್ಮಣನುಸುರ ವಾರಿಯಲಿ ॥ ಒಸೆದು ಸುಗ್ರೀವಾದಿ ವಿಪಿನೌ। ಕಸರು ತತ್ಕುಜ ಫಲಗಳನು ಭುಂ। ಜಿಸುವವೊಲು ಮಾಡುವೆನು ತಾವೀಳೆಯುವ ತನಗೆನುತ ॥೮॥ ಅಳಿದ ಧೂಮ್ರಾಕ್ಷಾದಿ ಸುಭಟರ। ವಳಿಯ ನಿರ್ನೋಲಗದ ಸಭೆಯುಲಿ। ಸುಳಿಸುವೆನು ಕೊಡವಿರೆ ಕೃತಾಂತನಕ್ಷಿಯನು ಬಗೆದು ॥ ಕಲುಮರನ ತುಂಬುವೆನು ಹಿಂದಣ। ಗಲಭೆ ಕಲಹದ ಗಾವಳಿಗರೊಳು। ಜಲಗಿನಾಹವದವನೆ ತಾನೆಂದುಬ್ಬಣವ ಝಡಿದ ॥೯॥ ಇಂದ್ರಜಿತುವಿಂತೆಂದು ಬಳಿಕಸು। ರೇಂದ್ರನಾನನ ಕುಮುದದಲಿ ಮುದ। ಚಂದ್ರಿಕೆಯ ಹರಹಿದನು ಕಳುಹಿಸಿಕೊಂಡನಾ ಹವಕೆ॥ ಇಂದ್ರನಿನಕುಲ ಚಕ್ರಿಗುದಯ ನ। ಗೇಂದ್ರದಲಿ ನಿಂದಿರ್ದು ತೋರುವ। ಸಾಂದ್ರಮಣಿ ಮುಕುರದವೊಲುದಿಸಿತು ಬಿಂಬ ದಿನಮಣಿಯು॥೧೦॥ ಶರಧಿ ಮುಮ್ಮಳೆ ಗಾಲದಲಿ ಭೋ। ರ್ಗರೆವವೊಲು ಭೋರೆಂದು ಹರೆಯು। ಬ್ಬರಿಸಿದುವು ಕೂಗಿಡೆ ಕುಲಾಚಲ ಕೋಟಿ ಸಂಖ್ಯೆಯಲಿ ॥ ತುರಗ ತಲೆದೋರಿದುವು ಮದ ಸಿಂಧುರದ ಮೋಹರ ವಿಾರಿತತಿರಥ। ರುರವಣಿಸಿದರುಪಾಯದಳ ದಳವಳಿಸಿತೊಗ್ಗಿನಲಿ ॥೧೧॥ ನಿಮ್ಮವರು ಬಳಿಕರಿಬಲದ ಬರ। ದುಮ್ಮಹವ ನೀಕ್ಷಿಸುತ ಹೊಸ ಗಿರಿ। ಹೆಮ್ಮರಗಳನು ಲುಬ್ಬರದ ಲಬ್ಬರದಿ ಮೋಹರವ ॥ ಸಮ್ಮುಖದೊಳೊಡ್ಡಿದರು ನೆರೆದುದು। ಬೊಮ್ಮ ಮೊದಲಾದವರು ಜಲನಿಧಿ। ಗುಮ್ಮಗುಳ್ಳಿಗಳೇಳೆ ರಣ ದುಬ್ಬರಿನ ಬೊಬ್ಬೆಯಲಿ ॥೧೨॥ ಎಲೆ ರಘುಕ್ಷಿತಿನಾಥಸುತ ಕೇ। ಳಳವಿಗೊಂಡೆರಡೊಡ್ಡು ಜಲಸಿಧಿ। ಜಲನಿಧಿಗೆ ಮಾರಾಂತವೊಲು ಮಾರಾಂತರಿದಿರಿನಲಿ ॥ ಬಳಿಕ ಮಹದುತ್ಪಾತ ಕಪಿಬಲ। ದೊಳಗೆ ವೈದೋರಿದುದು ಬಲು ಕಳ। ವಳಿಕೆ ಕಾಲೂರಿದುದು ಕುಂದಿದು ದಭ್ರದಿನಬಿಂಬ ॥೧೩॥ ಶೈಲಜರಿದುದು ಕಪಿಕದಂಬಕ। ತೋಳು ತುದಿಯಿಂದಿಳಿಗೆ ಸುಂಟರ। ಘಾಳಿ ಯೆದ್ದುದು ಜಗಿಸಿದುದು ಬಲ ಬೆದರೆ ದೆಸೆದೆಸೆಗೆ ॥ ಜಾಳಿಸಿದು ದಿಳೆಗಗ್ರತರ ತಾ। ರಾಳಿಗಳು ತಳಮಗುಚಿತಂಬುಧಿ। ಮಾಲೆಗಿಡಿಗಳ ನುಗುಳಿತಂಬರ ವರುಣಜಲ ಸಹಿತ ॥೧೪॥ ಉಕ್ಕಿದವು ನದಿ ಧೂಮಕೇತು ವಿ। ದಿಕ್ಕಿನಲಿ ತೋರಿದರು ನೆಲ ಬೊ। ಬ್ಬಿಕ್ಕಿದವು ನೆಗೆದವು ನಗಂಗಳಲುರಿ ಛಡಾಳದಲಿ ॥ ಮುಕ್ಕುರುಕಿ ಸಿಡಿಲೊದರಿದವು ರಣ। ರಕ್ಕಸಿಯ ಪರಿಸಿದರು ಕಾ। ಲಿಕ್ಕಿದುದು ಕಡು ಭೀತಿಯಲಿ ಕಪಿರಾಜೇಂದ್ರ ಸೇನೆಯಲಿ ॥೧೫॥ ಎಂದು ಜಾಂಬವದೇವ ಭಾಸ್ಕರ। ನಂದನನನೇಕಾಂಗದಲಿ ಕರೆ। ದೆಂದ ನಿಂದಿನ ರಣವು ದೀಯ ಬಲಕೆ ಮಾರಣವ। ತಂದು ಕೊಡದಿರದೀ ಭಗೀರಥ। ನಂದನನ ಸುಯಿದಾನ ನಿಂದದು ಮುಂದನರಿದಾಹವವ ನೆಸಗುವುದಣುಗ ಕೇಳೆಂದ ॥೧೬॥ ಇರಿಸಿದನು ಬಳಿಕವನಿಪತಿ ಸಹ। ಶಿರೆ ಸವಿಾರ ಸುತನ ಸುಷೇಣರ। ಧುರದ ಮೂಡಣ ಬಾಹೆಯಲಿ ಶತಬಲಿ ವಿಭೀಷಣರ ॥ ಪರುಠವಿಸಿ ಪಡುವಲು ಗವಾಕ್ಷ। ಶರಭ ಮೈಂದ ದ್ವಿವಿಧನನು ನಿಂ। ದಿರಿಸಿ ನೀಲಾಂಗದರು ಸಹಿತಿದಿರಾದರಾಹವಕೆ.॥೧೭॥ ಉದಯವಾದರೆ ಝುಷಾವದಲಿ ಮೋ। ಹಿದವು ಬಲವೆರಡುದಧಿಯುದಧಿಯ। ನೊದವವೊಲು ಹಳಚಿದವು ಹೊಳಹೊಳ ವಸ್ತ್ರಶೈಲಗಳ ॥ ಹೊದರು ಹೊಗಿಸಿ ದಿಗಂತವನು ಹರಿ। ಪದವ ಪದ್ಮಭವಾಮರೇಂದ್ರರ। ಹೃದಯ ಹಾತಕವಾರೆ ಮೊರೆಯುವ ರಭಸದಂಡದಲಿ ॥೧೮॥ ಹರಿಬಲದ ಹರಿವೈರಿಬಲ ದು। ಬ್ಬರದ ಚೂಣಿಯ ಚಟುಳತರ ಸಂ। ಗರದ ಸೌರಂ

ಭಾತಿಶಯ ಸುರನರಭುಜಂಗಮರ ॥ ಸರಕುದಿಗೆಸಿತು ಶಸ್ತ್ರಶೈಲದ । ಸರಘಸದ ಸಂ
ಗ್ರಾಮ ಕುಬ್ಬಿದ । ಹೊರಳಿಗಿಡಿ ಹೋಗಾಡಿತಬುಧಿಯ ನೀರ ನಿರ್ಝರದ ।೧೯॥ ಅರತಿ
ಲಯ ಭೈರವರ ವಿಸ್ತರ । ತರವಸಂತ ಕ್ರೀಡೆಯೋ ಸಂ । ಗರದ ಶಾಕಿನಿ ಡಾಕಿನಿಯ
ರುತ್ಸಾಹದೋಕುಳಿಯೋ ॥ ತರುಚರರರಜನೀಚರರ ಸಂ । ಚರದ ಚರಣೋದ್ಧೂತ
ಧೂಳೀ । ಶರಗಿರಿ ಘಾತ ರುಧಿರೋದ್ಭೂತವೋ ಯೆಂದ ॥ ೨೦ ॥ ಮಡಿದುದುಭಯದ
ಚೂಣಿ ಶೋಣಿತ । ಗುಡುಹಿಕ್ಕೈಗಳ ಬೆಳದಿವರನು । ಹಿಡಿಯ ಬಗೆದಳು ಜಯವ
ಧೂಟ ನಿಶಾಟ ಸೈನಿಕವ ॥ ಬಿಡ ಬಗೆದಳಾ ಸಮಯದಲಿ ಮುಡಿ । ವಿಡಿದನೈ ಮಂಡೋ
ದರಿಯ ಮಗ । ನುಡಿಯುಲಚ್ಚರಿ ಕಂದ ಕೇಳಿಂದ್ರಾರಿಯುಬ್ಬಟೆಯ ॥ ೨೧ ॥ ಮಾಯೆ
ಯಲಿ ಶಂಬರನು ದಿವಿಜರ । ರಾಯಗಲಿ ಕಾದಿದನು ಹಿಂದೆ ಸ । ಹಾಯವಿಲ್ಲದೆ ಗೆಲಿದನಾ
ಮಾರೀಚದಿಗಧಿಪರ ॥ ತಾಯಿವನೆ ಯಿವರಿಬ್ಬರಿಗೆ ವಜ್ರ । ಯುಧಾರಿ ಸಮಸ್ತ
ಸೇನೆಯ । ನೋಯಿಸಿದ ನಿರ್ಣಯವ ಕುಶ ಕೇಳೆಂದು ಮುನಿ ನುಡಿದ ॥೨೨॥ ವಿಲಯ
ಕಾಲದೊಳಖಿಳ ಭುವನಾ । ವಳಿಯ ಕೊಲೆ ಗೆಲಸಕೆ ಹೆಕ್ಕಳ । ಗಳದ ಭಾಳಾಂಬಕನ
ಪೋಲು ಬಲಿಮುಖ ವರೂಥಿನಿಯ ॥ ಬಲದೊಳಗೆ ಮೈದೋರಿ ಮಾಯೆಯ । ಬಳಸಿ
ಬಹುರೂಪಿನಲಿ ಬಲುಗೊಲೆ । ಗಳಲಿ ಕೊಂದನು ಕಡುಹಿನಗ್ಗದ ಕಪಿಭಟಾವಳಿಯ ॥
ಕಣಿಗಳಲಿ ಕರಗಸಗಳಲಿ ಖ । ರ್ವಣಗಳಲಿ ಡೆಂಕಣಿಗಳಲಿ ಕೊಂ । ಕಣೆಗಳಲಿ ಪರಿಘ
ದಲಿ ಪರಶುಗಳಲಿ ಮುಸುಂಡಿಯಲಿ ॥ ಮಣಿಗದಾಯುಧದಲಿ ಮುಹಾ ಮಾ । ರ್ಗಣಗ
ಳಲಿ ಚಕ್ರದಲಿ ಬಲು ಭಾ । ರಣೆಯ ಕೈದುಗಳಿಂದ ಕೆಡಹಿದ ನಖಿಳ ಕಪಿಭಟರ ॥೨೪॥
ಉರವಣಿಸಿ ಕೈಯೊಡನೆ ಭೋಜದ । ಲುರು ಕೃಪಾಣದ ಲೀಟಿಯಲಿ ಭೀ । ಕರವ
ಶಲ್ಲೆಹ ಬಲ್ಲೆಹದ ವ್ರಗ್ರಾಸಿ ಕುಂತದಲಿ ॥ ಸುರಗಿಯಲಿ ಶೂಲದಲಿ ಯಸಿ ಮು । ದ್ಗರ
ಮುಹಾ ಮಂತ್ರಾಸ್ತ್ರ ಶಸ್ತ್ರೋ । ತ್ಕರಗಳಲಿ ಸಂಹರಿಸಿದನು ಸಂಗರದ ಕಪಿಬಲವ ॥೨೫॥
ಕೊಲೆ ಬಿರಿಸು ರಕ್ಕಸನವಿಕ ವಿಕ । ತಲೆಯ ಹೊರದಿರಿ ಹೇಡಿತನದ । ಗ್ಗಳವ ಮೆರೆ
ಯಿರೋ ವೀರತನದ ಯಶೋವಿಲಾಸಕವ ॥ ತಲೆಯನೊಡೆಯಗೆ ಕೊಡುವಡಿದು ರಣ ।
ಗಲಿಗಳಿಗೆ ತಾ ಸಮಯವೆನುತರಿ । ಬಲ ಭಯಂಕರ ಭಾನುಸುತ ಬೊಬ್ಬಿರಿದನಗಲ
ದಲಿ ॥ ೨೬ ॥ ಬೀಳೆ ಕರ್ನದೊಳಿನಸುತನ ನುಡಿ । ಕೇಳಿ ಕವಿದುದು ಕದನ ಕೆಪ್ಪ ।
ತ್ತೇಳುಕೋಟಿ ಕಪೀಂದ್ರ ರಸುಮಿಗಿಸುವವ ಬಗೆಗೊಳದೆ ॥ ಶೈಲತರು ಸಂಗದಲಿ ಹಗೆ
ಯನು । ಹೂಳಿದರು ಬಳಿಕಸುರರ ಮಾಯೆಯ । ಮೇಳವಿಸಿ ಮೈದೋರದೀಪರಿ ಕೊಂದ
ನತಿಬಲರ ॥ ೨೭ ॥ ತಾಗಿದನು ತಗರಾಗಿ ಕಾರ್ಬೋಗೆ । ಯಾಗಿ ಕವಿದನು ಹೊಯ್ಸ
ನಾರೀ । ಯಾಗಿ ತೊರೆದ ನದ್ರಿಯಾಗಿ ಸಮುದ್ರರೂಪಿನಲಿ ॥ ಮೇಗೆ ಕವಿದನು ಕಾಲ
ಭೈರವ । ನಾಗಿ ಜಟ್ಟಿಗನಾಗಿ ವಿಷದರಿ । ಯಾಗಿ ಬೆಚ್ಚಿಸಿ ಬೆದರಿಸಿದನತಿಬಲ ವನೇ
ಚರರ ॥ ೨೮ ॥ ಎರಗಿದನು ಶಿಡಿಲಾಗಿ ಶಿಖಿಯಾ । ಗುರುಬಿದನು ಭೇರುಂಡನಾಗಿಯೆ ।
ತುರುಬಿದನು ಸೀಳಿದನು ಸೈರಿಭನಾಗಿ ಹುಲಿಯಾಗಿ ॥ ಮುರಿವನಹಿಯಾಗಾಡಿನಲಿ ಹಿಡಿ ।
ದಿರುಕಿದ ನಗ್ರಹವಾಗಿ ರಣದೆಡ । ದೆರಹಕಾಣೆನು ಕೊಂದನೀಪರಿ ಕೋಟಿ ಸಂಖ್ಯೆ
ಯಲಿ ॥೨೯॥ ಅವನ ಮಾಯಾ ಸಮರಕೊಡೆದುದು । ರವಿಸುತಾದಿಗಳೊಡ್ಡು ನಿಲ್ಲದೆ ।
ರವಿಕುಲೇಂದ್ರನ ಮರೆಯ ಹೊಕ್ಕುದು ಮರೆಯಮಾತೇನು ॥ ಬವರ ಬಲಿದುದು ಬಳಿಕ

ಲಗ್ಗದ | ಭುವನಪತಿಗಮರೇಂದ್ರಜಿತುವಿಂ | ಗವಿರಳಾಹವ ರಬ್ಬರಣೆಗಬ್ಬರಿಸೆ ದಿಗು ತಟವ || ೩೦ || ಕಡೆದನವನಿಪ ನಿದಿರಿನಲಿ ಹೊಂ | ಗರಿಯು ಹೊಸಹೊಸ ಹೊಗರುಗಳ ತಳ | ಮಿಗುರು ವಸ್ತ್ರದ ಸಾರವನು ಕಾರ್ಮುಗಿಲ ಮಳೆಯಂತೆ || ತೆರಹುಗೊಡದಿವ ರವ್ರಕುವಸ್ತ್ರವ | ತರಿದು ತೂಳಿದ ನಂಬುಗಳ ನೆಡ | ದೆರಹಕಾಣೆನು ಕಾಳೆಗಕೆ ರಾವಣ ನರೋತ್ತಮರ || ೩೧ || ಕವಿದುದಾ ಸಮಯದಲಿ ಕಪಿಭಟ | ನಿವಹ ನಿಡು ಕಲ್ಲುಗಳ ಮಳೆಗಳ | ಲವ ನಿಜೌಘಗಳಂದ ಹೊಳಕುವ ರಘವ ಸರಿಸದಲಿ || ಅವನ ರಣ ರಂಜಕದ ಪರಿಯಭಿ | ನವವಲೇ ವೈದೋರದವ್ರುಕುವ | ಪವನಜಾದ್ಯರಪಾಡು ಗೆಡಿಸಿದ ನಸ್ತ್ರಸಾರ ದಲಿ || ೩೨ || ಕಪಿಬಲವ ಮುರಿಯಚ್ಚು ರಘು ಭೂ | ಮಿಪರ ಸಂಗರಕೊದಗಿದನು ಮಗು | ಳಪರಿಮಿತ ಶರ ಸಮಿಧಿಯನು ಸುರಿವುತ ಸರೋಷದಲಿ || ತಪನಕುಲ ದವ ರಲ್ಪರೆ ರಣ | ನಿಪುಣರಲ್ಲಾ ನಿಶಿತ ವಿಶಿಖದ | ಲಪಜಯಕೆ ನಿಲಿಸಿದರು ನೈರುತರಾಜ ಸಂಭವನ ||೩೩|| ಒತ್ತಬರಿಸಿದುದಾ ಸಮಯದಲಿ | ಪತ್ತಿ ರಥಹಯ ಗಜ ಘಟಾವಳಿ | ಕುತ್ತುಗಂಬಿನ ತರಿವ ಖಡ್ಗದ ಹೊಡೆವ ಸಂಘದಲಿ || ಚಿತ್ರವೆಂತುಟೋ ರಣದೊಳಿನ ವಂ | ಶೋತ್ತಮರ ಕವಿವರಿ ಬಲಾಂಬುಧಿ | ಬತ್ತಿದವು ಬಡಬಾಗ್ನಿಯಲಿ ಭಾಸ್ಕರ ಕುಲೋತ್ತಮನ ||೩೪|| ಔಕುವುದು ಬಲವೈದುವುದು ಸುರ | ಲೋಕವನು ಶಸ್ತ್ರದಲಿ ಹದಿ | ನಾಲ್ಕು ಸೂಳಲಿ ಸುಳಿದು ಸುರರಲಿ ನೊಂದುದರಿಸೇನೆ || ಸಾಕು ಸಮರಪ್ರೌಢಿ ಯೆನುತ ಸ | ಮಾಕ ಕೊಡರಿಸು ತಿಂದ್ರಜಿತು ನೆರೆ | ನೂಕಿದನು ದಿನಪನು ದಿನೇಂದ್ರ ಕುಲೇಂದ್ರ ನಾಜಿಯಲಿ ||೩೫|| ವೀರನವ ಬಳಿಕಿರುಳು ಕಾಳಗ | ಕಾರನಿವ ಮುಂದಿದಿರು ಮಾಯಾ | ಸಾರವನು ನಿರ್ಮಿಸಿದನೈ ವಿಲಯಾಂಧಕಾರವನು || ಭಾರಿಸಿತು ಬಲು ತಿಮಿರ ಘೋರಾ | ಕಾರದಲಿ ಶತಕೋಟಿ ರಾಹು ಶ | ರೀರ ದುರುಕೌಳಿಕೆಯವೊಲು ಕುಪ್ಪರಿಸಿ ತೂರ್ವರೆಯ || ೩೬ || ವಿಸ್ತರಿಸಲೇನದನು ನಿಮ್ಮ ಕ | ಕುಸ್ಥ ಬಲ ನಯನೇಂದು ರಾಹು | ಗ್ರಸ್ತವಾದುದು ಕಾಣರೊಬ್ಬರನೊಬ್ಬ ರಾಜಿಯಲಿ || ಹಸ್ತಗಳ ಸೊಂಕುಗಳ ಕುರುಹಿನ | ಕುಸ್ತರಣೆಗಳ ಭರದಿ ಕರ ವಿ | ನ್ಯಸ್ತಗಿರಿ ತರುಗಳ ಸಘಾಥವಲಿದ್ದರ್ದೀ ಸೇನೆ ||೩೭|| ಹೊಳದುದೈ ಬಳಿಕಿಂದ್ರಜಿತ್ತಿನ | ಚಳಚಮತ್ಕೃತಿ ರಥ ನಭೋಮಂ | ಡಲದ ವಬ್ಬರವಾಯ್ತು ಕಮಲಜದತ್ತ ಕಾರ್ಮುಕದ || ಪ್ರಳಯ ದಿವಸದ ಸಿಡಿಲ ಜಂಗುಳಿ | ಗಳ ಭಯಂಕರ ರವದ ಕೋಳಾ | ಹಳದ ಹೆದರಿಕೆ ತೀವಿದಬುಜಭವಾಂಡ ಮಂಡಲವ ||೩೮|| ಬೆದರಿ ಬಿದ್ದುದು ಬಿಲುರಭಸ ತಾ | ಗಿದ ವನಚರನಿವಹ ವಂಬುಧಿ | ಯೊದೆದುಕೊಂಡುದು ಮೇರು ಮಸ್ತಕವ || ಬೆದರುವಂಕುಶವಿಕ್ಕಿ ಬೊಮ್ಮನ | ಸದನ ಕಭಿಮುಖನಾದ ನಗ್ಗದ | ತ್ರಿದಶಪತಿ ಬೆಚ್ಚಿದರು ಪಟ್ಟಣವಾ ದಿಶಾಧಿಪರ || ೩೯ || ಸರಿದ ನಂತಕನಗ್ನಿ ಹಾಯ್ದನು | ವರುಣ ನೋಡಿದ ನಡುಗಿದನು ಕಿ | ನ್ನರ ಕುಲಾಧಿಪ ನನಿಲ ಮರೆ ಹೊಕ್ಕನು ಪಲಾಯನವ || ತರುಣ ಕೇಳೀಶ್ವರನ ದೃಶ್ಯಾ | ಕರಣ ನಾದನು ನಿರುತಿಯಸುರನ | ಮರೆಯ ಹೊಕ್ಕನು ಹರಿ ವಿರೋಧಿಯ ಕದನ ಕೇಳಿಯಲಿ || ೪೦ || ಕಟ್ಟಿದನು ಕಮಲಜ ಭವಾಸ್ತ್ರದ | ಲಿಟ್ಟಣಿಸುವ ವಿಭೀಷಣನ ನೆ | ಬ್ಬಟ್ಟಿದನು ಯಮಲೋಕಕಾತನ ಬಳಿಯ ಮಂತ್ರಿಗಳ | ಮುಟ್ಟಿಸಿದನು ಮತ್ತೆ ಯಸುರಘ | ರಟ್ಟೆ ನಿದಿರಿಲಿ ಸುರರ ಗಮನದ | ಬಟ್ಟೆಯಲಿ ಬಹು

ವಿಧದ ಮಾಯೆಯ ಲಿಂದ್ರಜಿತು ಬಳಿಕ ॥೪೧॥ ಘೋರನುತ ಮುಂಗಾರ ಮುಖದಲಿ।
ವಾರಿ ಧಾರಾ ಸಾರ ವಿಳೆಗೆ ಏ। ಹಾರಿಸುವ ಪೊಲು ಬಾಣ ವೃಷ್ಟಿಯು ಕಾಣ ಲಾಯ್ತಲ್ಲ॥
ಆರು ಹವಣಿಸ ಬಹುದು ಶಿವಶಿವ । ಮಾರಿ ಮುನಿದಂತಾಯ್ತು ನೆತ್ತರ। ಮಾರವಲಿ
ಹೋಹ ಪ್ಲವಂಗಮ ಕವಧಿ ಯಿಲ್ಲೆಂದ ॥೪೨॥ ವಿಲಯ ಮೇಘದ ಮೇಚಕವೊ ದಶ।
ಗಳನ ತನುಜನ ಕಾಯ ಕಾಂತಿಯೋ। ಪೊಳಗುಗಳೋ ಮುರಿಮುರಿದು ಚಲಿಸುವ ಬಿಧದ
ಚೀತ್ಕೃತಿಯೊ ॥ ಹೊಳೆವ ಮಿಂಚಿನ ಸಂಚರವೊ ಹೊಂ। ಜೇಳಕುಗಳ ಹರಹುಗಳೊ
ಸಿಡಿಲಿನ। ಸುಳಿಯೋ ಸರಳುಬ್ಬರವು ತಾ ನೆನೆ ಮರೆದನಿಂದ್ರಾರಿ ॥೪೩॥ ಬೆಟ್ಟವನು
ಕೊಡೆವಿಡಿದು ಮರದಿಂ। ದಿಟ್ಟ ಪುಟನೆಗೆದಂಬರ ದೊಳರೆ। ಚಿಟ್ಟ ಮುರಿಯಾಡುವ
ನಳಾದಿ ಪ್ರಮುಖ ನಾಯಕರ ॥ ಹೊಟ್ಟೆಯನು ತುಂಬಿದನು ತಲೆಗಳ। ಲೊಟ್ಟಿದನು
ಬಾಣ ವರಣಾಂಗಣ । ದಿಟ್ಟಡೆಯ ನೇನೆಂಬೆ ನಸು ಕಳಚಿದ ಕಪಿವ್ರಜವ ॥೪೪॥
ಹೆಣಗಳನು ಬಗಿಬಗಿದು ಕಪಿಗಳು । ಹುಣಿಗಿದವು ಕೆಲ ವದ್ರಿ ಕುಜ ಸಂ। ದಣಿಗಳ
ಲಿಹುದುಗಿದುದು ಹರಿ ವರುಣಾಂಬು ನದಿಗಳಲಿ ॥ ಮುಳುಗಿದುದು ಮುಂಬರಿ ದೆಸೆವ
ಮಾ। ರ್ಗಣದ ಹತಿ ಗೇನೆಂಬೆ ನಸುರನ। ಕಣೆಯ ಕೋಳಾಹಳಕೆ ಯೆಂತುಟೊ ಹೇಳ
ಲೇನೆಂದ ॥೪೫॥ ಹರಿದ ತಲೆ ತೋಳುಗಳ ಬಾಣದ । ಕೊರೆದ ಬಸುರುಗಳುರ್ಚ
ಗರುಳಿನ। ಮುರಿದ ಮೂಳೆಯ ಲುಡಿದ ನಡು ತೊಡೆ ಜಾನು ಜಂಘೆಗಳ ॥ ನಿರಿಕಿಸುವ
ಹಲು ಗಿರಿಕುಗಳ ನೆಗೆ । ಡರಚಿ ಬೀಳುವ ಕಪಿ ವೆಣಂಗಳ। ಹರುಬಿನಲಿ ರವುಕುಳದ
ಮಯವಾ ಯ್ತವನಿ ಯುಗದಲಿ ॥ ೪೬ ॥ ಆಡಲೇನದ ನಿಂದ್ರಜಿತ್ತಿನ। ಮೋಡಿ ಬೇ
ರೋಸರಿಸಿ ದಿನ ದಿನ । ಕೋಡಿ ಹಿಗ್ಗಿದ ಜಯ ವಧುವ ತಿರುಹಿದನು ನಿಮಿಷದಲಿ ॥
ಕೋಡಿ ನೆತ್ತಿ ಯಲುಗಿದು ಪದದಲಿ । ಮಾಡಿ ದಂಬಿನ ಕಪಿಗಳಿಂ ದ। ಕ್ಕಾಡಿ ತಿಳಿ
ಹೆದರದ್ದ ಹೊನಲಿನ ಹರಿವ ರಕುತದಲಿ ॥೪೭॥ ಕೋಲು ಹೆಣ ನೊಂದಾಗಿ ಬೀಳುವ।
ಬಾಲ ಯವ್ವನ ವೃದ್ಧ ಮರ್ಕಟ । ಜಾಲ ದೆಣಿಕೆಗೆ ಕಡೆಯ ಕಾಣೆನು ಕದನ ಕೇಳಿ
ಯಲಿ ॥ ಕೇಳಿದೈ ಕುಶ ಕೂಡಿ ದೆಪ್ಪತ್ತೇ । ಳು ಕೋಟಿ ಪ್ಲವಗ ನಾಯಕ । ರಾಳು
ಸಹಿತೊರಗಿದರು ಮಿಕ್ಕಿನ ಮಾತ ದೇಕೆಂದ ॥೪೮॥ ಹನುಮನನು ಕಟ್ಟಿದನು। ಬಿಗಿ
ದನು। ವನರುಹಾಸನ ನಂದನನ ನುಳಿ। ದಿನಸುತಾದಿ ಸಮಸ್ತ ಸೇನೆಯ ನಾ ರಣಾಂಗ
ಗನೆಯ ॥ ಸ್ತನದ ಮೇಲೊರಗಿಸಿದ ನಾ ಯೋ। ಜನ ದಶ ತತಿಯ ವಿಸ್ತರದ ಕುಂ।
ಭಿನಿಯ ಮಂಚದ ಮೇಲೆ ಮೇಲಣ ಕಥೆಯ ಕೇಳೆಂದ ॥ ೪೯ ॥ ಮಡದಿ ಗೋಸುಗ
ಹಂಗ ಕೊಳ್ಳದ । ಕೊಡದ ಕಪಿಗಳ ಸಿಕ್ಕಿ ಹೊತ್ತೆನು। ಕಡೆಯ ಲಪಕೀರ್ತಿಯನು
ಕಮಲಜ ಕಲ್ಪ ಪರಿಯಂತ ॥ ಸುಡು ಸುಜಾತನ ಮಾತದೇ ಕೆಂ । ದಡಿಗಡಿಗೆ ಜನ
ವೆನ್ನ ದೀಪರಿ । ನುಡಿಯ ದಿರದೆಂ ದಂಗನಾಚಿದ ನರಸ ನಾಚಿಸಲಿ ॥೫೦॥ ಮುಟ್ಟಿ
ವಿಲಾಸಿದವು ಸರಳು ತಂ ನೊಡ । ಹುಟ್ಟಿದನ ಮೇಲೊಡನೆ ತನ್ನನು । ಕಟ್ಟಿದವು
ಕಾತುರದ ಕಟ್ಟಿಸಗೆಯಲಿ ಶರಜಾಲ ॥ ಕಟ್ಟಿದನು ತಡನರಿಸ ಲವ ತರಿ । ದೊಟ್ಟಿ
ದನು ಬಹು ಬಾಣಗಳ ತಲೆ। ಮುಟ್ಟಿ ಸಂಧಿಸುವೆಂದು ಸಂಹರಿಸಿದನು ರಘುನಾಥ॥೫೧॥
ಇಳಿದ ಕಣೆಗಳ ಲೇರುಕಣೆ ಮು । ಕ್ಕಸಿದವು ಬೀಳ್ವಂಬು ನಡುವಂ । ಬುಲಿದು
ಬೀಳುವ ಬಹು ಶರೌಘದ ಮೇಘ ಶರಜಾಲ ॥ ತೊಲಗ ಗಡಿದವು ಹೇಳ ಲೇನದ।

ಸಿಳೆಯು ಗಗನದ ಸರಕು ಸರಳಿನ । ಹೊರಿಗೆಯಲಿ ಹುದುಗಿದದು ರಾವಣಿ ರಾಮ ನೆಸುಗೆ
ಯಲಿ ॥ ೫೨ ॥ ತರಣಿ ಬಿಂಬವ ಸಿಡಿಲ ಜಂತ್ರಗೆ । ಯೊರಳೊಳೊತ್ತಿದನೋ ಲಯಾ
ಗ್ನಿಯ । ಹುರಿಯ ನುಡಿದನೊ ಹೊದರೊ ವೆಳಗಿನ ಹೊಳೆವ ಮಿಂಚುಗಳ ॥ ಸರಿದೆಗೆ
ದನೋ ನಭದಿಳೆಗೆನೆ । ಸರಳು ಸರಿದವು ಸಾರ್ವಭೌಮನ । ಸರಿಸದಲಿ ಸೆರೆಗೊಳಿಸಿ
ಸುರಕುಲ ರಾಜ ದಕ್ಷಿಣನ ॥ ೫೩ ॥ ಖಚರಿಯರ ಹೂಮುಡಿಗೆ ಸುರಪನ । ಶಚಿಯ ಮುಖ
ಸಾರಸಕೆ ರುದ್ರನ । ಕಚದ ಗಂಗಾಂಬುಧಿಗೆ ಸಂಸಿಜ ಭವನ ಗದ್ದುಗೆಗೆ ॥ ಪ್ರಚುರ
ದಿಗ್ವನಿತಾಬ್ಜ ಕುಟ್ಮಲ । ಕುಚಗಳಿಗೆ ಮೊಗಚುವ ಶಿಳೀಮುಖ । ಸಿಚಯ ವೆನಲಡರಿ
ದವು ರಾಮಶಿಳೀ ಮುಖೋದ್ಧೂತ ॥ ೫೪ ॥ ಜಾಣರೊಳ ಗಿಬ್ಬರೆ ಬವರದ । ತ್ರಾಣ
ತೋಮರ ವಿದ್ಯದಲಿ ಗೀ । ರ್ವಾಣ ರಿಪು ಮತ್ತಿನ ಕುಲೇಂದ್ರನ ಸರಳ ಸಮರದಲಿ ॥
ಬಾಣ ಬಾಣವ ಬವರ ಕಭ್ರ । ಕ್ಷೋಣಿ ಬೇಸರ ರೈದಿದರು ಕಡೆ। ಗಾಣೆ ನಿಬ್ಬರ ನಿರ್ಭ
ರದ ನಿರ್ಭಯದ ರಣಕೆಂದ ॥ ೫೫ ॥ ಹೋಗ ಗೊಡದ ಕಣೆ ಕಣೆಯ ಕಣೆಗಳಾ। ಗಳಿಬ್ಬರಿ
ಗಾಯ್ತು ಸಂಧಿಸಿ । ಹೂಗುವ ಸರಳಿಗೆ ಲಕ್ಷ್ಯನಾದನು ನಭದೊಳಿಂದ್ರಜಿತು ॥ ಉಗಿ
ದನೈ ಬಳಿ ಕಾಭಿಚಾರದ । ವಿಗಡ ಮುಖ ಮ ಖದುದಿತ ಮಂತ್ರಾಂ । ಶುಗವ ನಾಶುಗ
ಸರಳಿನಲಿ ಮೈದೋರ ಲಿಂದ್ರಾರಿ ॥ ೫೬ ॥ ಮಾತು ತೋರದೆ ರಥದ ಸಬುದದ । ಸೂರ
ನಿಂದರುಹಿಸಿದೆ ಮೇಘ । ವ್ರಾತವನು ಮರೆಗೊಂಡು ಮಾಯಾಸುರ ವಿಚಾರದಲಿ ॥
ಘಾತಕನು ರಣ ಚೋರ ವಿದ್ಯಾ । ಪಾತಕನು ಬಳಿ ಕೆಚ್ಚಸೈ ಮಾ । ಯಾತಿರೋದ್ಧಾ
ಮನುಕ್ಷಿತಿ ರಾಜ ವಲ್ಲಭನ ॥ ೫೭ ॥ ಒಡನೆ ಲಕ್ಷ್ಮಣನನು ಶರೌಘದ । ಝಡಿತೆಯಲಿ
ಹುಗಿಸಿದನು ಕೀಲಿಸಿ । ಗಿಡಿ ಕಿಸಿದ ಮಂಬುಗಳು ರಘು ರಾಜೇಂದ್ರ ಚಂದ್ರಮನ ॥
ಮಡಿದ ಮುಂಡಿಯ ಕಿವಿ ಗಡಿಯ ಬೆರ। ಳಿಡೆಯ ಹುಳುಕಿನ ಮಾನುಷಾಂಗದ। ಕೊಡಹ
ದಮಲ ಪುರಾಣ ಪುರುಷರು ಮೆರೆದ ರಾಜಿಯಲಿ ॥ ೫೮ ॥ ಹಾ ಯೆನುತ ನಲಿ ದಬ್ಬರಿಸಿ
ಮುಝು । ಮಾಯೆ ದೇವಿ ನಿಕುಂಭಿನಿಯೆ ವರ । ದಾಯಕಿಯೆ ನಮೋ ಯೆನುತ ನೂಕಿದ
ನಾಗ ನಿಜರಥವ ॥ ವಾಯು ಮೇಘ ಗಳಿಲ್ಲ ದಂಬುಧಿ । ಯಾಯತವ ಪಡೆದಿರ್ದ ಪಾ
ರಘು । ರಾಮ ಸೇನಾ ಜಲಧಿ ಬಳಿಕೆಲೆ ಕಂದ ಕೇಳೆಂದ ॥ ೫೯ ॥ ಇಳಿದು ರಥವನು ಕೈ
ಮುಗಿದು ರಣ । ಲಲನೆ ಗಭಿವಂದಿಸಿ ಲಲಾಟಕೆ । ತಿಲಕವನು ರಚಿಸಿದನು ಸಂತೋಷ
ದಲಿ ಶೋಣಿತವ ॥ ಹೊಳಲಿಗಭಿ ಮುಖನಾದ ನವ ಹೆ । ಕ್ಕಳದ ಹರುಷದಲಿ ಲಿತ್ತ
ರಘುಕುಲ । ತಿಲಕ ನಭ್ಯುದಯ ಪ್ರಪಂಚವ ಕೇಳಿತ್ತೈ ಯೆಂದ ॥ ॥ ೬೦ ॥

ಮುವ್ವತ್ತೆರಡನೆಯ ಸಂಧಿ ಸಮಾಪ್ತಂ.

ಮುವ್ವತ್ತಾರನೆಯ ಸಂಧಿ.

ಸೂಚನೆ॥ ರಣದೊಳಳಿದ ಸಮಸ್ತ ವಾನರ । ಗಣವ ನಮಲ ಬ್ರಹ್ಮ ಮರುಜೇ ।
ವಣಿಯ ತಂದೆಬ್ಬಿಸಿದ ನಬ್ಜಭವಾದಿಗಳು ನಲಿದಾಡೆ ॥

ಪದ್ಯ॥ ಕುಶನೆ ಕೇಳಿಂದ್ರಾರಿ ತಂದೆಯ । ವಸತಿಯನು ಸಾರಿದನು ಹೊಯ್ಗಿದ ।
ನೊಸಗೆವರೆಗಳ ನೆತ್ತಿಸಿದ ನೂರೊಳಗೆ ತೋರಣವ ॥ ಕುಶನನುಜ ಕೇಳ್ ದುರ್ಜನಗೆ

ಸಂ। ಧಿಸಿದ ಸಿರಿಯು ವೊ ಲುಬ್ಬಿದನು ರಕ್ಕಸರ ರಾಯನು ರಾಜ ಸಭೆಯಲಿ ರಾಗರಸ ಪೊಸರ ॥೧॥ ಮಗನೆ ತಂದೆಯು ಹಾನಿ ಹರಿಬಕೆ । ನಗೆಗೆಡೆಯು ಮಾಡದೆ ಭಲೋಕ್ತಿಯ। ಮಿಗಿಸಿ ಕೊಂಡ ನರೋರುಗಾ ಮರ ಜಗದ ಜನರುಗಳ ॥ ಬಿಗುಹ ಬಿಡಿಸಿದ ಮನ್ಮನೋ ರಥ । ದುಗುಳುವನೆ ನೀನಾದೆಲಾ ಯೆಂ। ದೊಗು ಮಿಗೆಯು ಹರುಷದಲಿ ಹೊಗಳಿದ ನಿಂದ್ರಜಿತು ಖಳನ ॥೨॥ ಕಳುಹಿದನು ಬಳಿ ಕಾಚಿತ ದುಡುಗೊರೆ। ಗಳಲಿ ಮನ್ನಿಸಿ ಮನೆಗೆ ಮಗನನು। ತಳಿತ ರೊಮಾಂಚನದ ತನು ಪುಳಕಾಂಬು ಕೈಮಿಗಿಲು ॥ ಖಳಪತಿಗೆ ಬಳಿಕ ಚೆಯಲಿ ನಿ। ಶ್ಚಲಿತ ರಣವನು ಕಂಡು ಕಂಗಳ। ಲಿಳುಹಿದನು ಕಂಬನಿಯ ಗುಂಭಿನಿಗಾ ವಿಭೀಷಣನ ॥ ೩ ॥ ಮರುಗಿದನು ಮನದೊಳಗೆ ಮೋಸದ। ಮೊರೆಯ ರಕ್ಕಸನ ಕದನಕಕಟಾ। ಬರುತಿದೇ ಒಲಿಮುಖ ಬಲಾಂಬುಧಿ ರಾಘವೇಶ್ವರನ ॥ ತೆರ ನವಾವುದೋ ಜೀವ ಕಳೆಯನು । ತೊರೆಯದಲೆ ಸುಗ್ರೀವ ಜಾಂಬವ। ರುರುವ ಪವನಾತ್ಮಜ ರೆನುತ ನಡೆತಂದ ನಸುರೇಂದ್ರ ॥೪॥ ಸುಳಿವ ನಂಬಿನ ಧಾರೆಗಳ ಮೊಗ । ದುರುಹಿ ದುಸ್ಸ್ಮಹ ದಾನ ನಾಬ್ಜದ । ಹರಹು ಮುಗ್ಗಿದ ಮತಿಯು ಮನದ ಸ್ವಾಮಿಕಾರಿಯದ ॥ ಹುರಿಯ ಹಮ್ಮುಗೆ ಹರಿದ ಚಿಂತೆಯು। ಭರವಸಿಗ ಬರುತಿರ್ದನೈಸಂ । ಗರ ಮನೋರಂಗದಲಿ ನೋಡುತ ರಾಘವೇಶ್ವರನ ॥೫॥ ಮೊರೆವುತಿರ್ದವು ಹೆಣನು ರಣದೊಳ । ಗುರುವ ಬಲ ವುಹಿರಿಕ್ಕುವವೊಲು । ಬ್ಬರದ ರಕುತದ ಹೂರಗಳ ಹೊನಲುಗಳ ಹಂದಲೆಯು ॥ ಕರಿ ತುರಂಗವು ರಕ್ಕಸರ ವಾ । ನರರ ಕಾಳಿಜ ಕಾವಣದ ದು। ಸ್ತರ ರಣಾಂಗಣ ದೊಳಗೆ ನಡೆತರುತಿರ್ದ ನಸುರೇಂದ್ರ ॥೬॥ ಜಗಿಯ ನೆತ್ತರ ಮಡುಗಳನು ಪುಟ। ನೆಗೆದು ತೊಬ್ಬಲ ವೆಣನ ನಗಲಕೆ। ಮಗುಚಿನೋಡುತ ದನಿಯ ನಾಗೈಸಿದರು ಬಲ ನೆಡನ ॥ ಹೊಗುವ ರಣ ಭೂತಾಳಿಗಳ ಹು । ಬ್ಬುಗಳ ಲೆಬ್ಬುತ ಶಕ್ರಜಿತುವಿನ । ಸೊಗಡ ನಾರಿಸು ತೊಯ್ಯ ನೈತರುತಿರ್ದ ನಸುರೇಂದ್ರ ॥೭॥ ವೀರರನು ಕೊಂಡೆಯ್ದು ನಿರ್ಜರ। ನಾರಿಯರ ಹಿಡಿಹಿಡಿದು ರಘುಕುಲ। ವೀರರನು ಕೊಂಡೊಯ್ಯರಲೆ ನೀವೆಂದು ಶೋಧಿಸುತ ॥ ಘೋರ ಭೂತದ ಹೆಗಲ ಹೆಣಗಳ। ತೋರಿಸಿ ತೊಳಲುತ್ತೈದಿದನು ರಣ । ಧೀರನನು ವೀರನನು ಹೃದಯು ಸವಿಸಾರನನು ನೃಪನ ॥೮॥ ಹೋರಿ ಹೊದಕುಳಿ ಗುಟ್ಟು ತೊಲವುತ। ಭಾರಿ ಭುಜವನು ಪಸರಿಸುತ ಪಂ । ಕೇರುಹಾಸನ ಪಾಶಬಾಣದ ಕಲಹ ದನುಪಮದ ॥ ಪೀರರನು ಕಂಡೀ ಕಪೀಶ್ವರ। ನಾರೋ ನೋಡುವೆನೆನುತ ಶರಿಸಕೆ। ಸೇರಿದನು ತೂರ್ಯದೊಳು ಸಂತೋಷಾಂಗನಾ ತನುವ ॥೯॥ ಹನುಮ ನೆಂದರಿ ದೀತ ಹನುಷಾ । ನನದ ಹೊನಲಿನ ಲುಬ್ಬಿ ನುಡಿದನು । ನೆನೆ ಪುರಾತನ ವರವ ನಜ ಹರಿ ಹರ ಸುರೇಶ್ವರರ ॥ ಹನುಮ ನಿನಗಿದು ಗಹನವೇ ಬೇ। ಗೆನುತ ಬೆಳೆದನು ಬಿಚ್ಚಿ ಬಿಸುಟನು। ವನಜ ಸಂಭವ ಶರವ ಶರಣನ ನಪ್ಪಿದನು ಹನುಮ ॥೧೦॥ ಇಬ್ಬರಾದರು ನೋಡಲಿಕೆ ಜಗ। ದೊಬ್ಬ ವೀರನ ನರಸಿದರು ಕಡು। ಮೊಬ್ಬಿನಲಿ ಕೈದೊಳಸಿ ಕೆಡದಿಹ ಹಯು ವರೂಥಿನಿಯು ॥ ಒಬ್ಬುಳಿ ರಕದ ಕನಲಿ ನೋಡುತ । ನಿರ್ಭರದ ನಡೆಗಳಲಿ ಬರೆ ಬರೆ । ವುಬ್ಬಿ ದಟವೀ ಚರ ಕುಲೇಂದ್ರನ ಕಂಡು ಹಲುಬಿದರು ॥೧೧॥ ಅಳಲಿದರು ಹಿರಿದಾಗಿ ಕೈಯ್ಯೊಡ। ನಳವಳಿಸಿದರು ಬಿಟ್ಟೆರಾ ಕಪಿ। ಕುಲ ಲಲಾಮನ ಕಂಡರೆಡೆಯಲಿ ವಾಯು ನಂದನನ ॥ ಕೊಳಕಿ

ದಶ್ಶ ಕಣಾಳಿಗಳ ನಂ । ಗುಲಿಸು ತುದಿಗಳ ಲುರುಬಿ ಮುಂದಕೆ । ನಿಲುಕಿ ಕಂಡರು
ನೀಲ ನಳ ಗಜ ಗಂಧಮಾದನರ ॥೧೨॥ ಹಿರಿದು ಸಂಕಟ ಗೊಂಡು ಮುಂದಕೆ । ಚರಿಸಿ
ದರು ಚೈತನ್ಯ ವಡಗಿದ । ಶರಭ ಶತಬಲಿ ಕುಮುದ ದುರ್ಮುಖ ದಧಿಮುಖಾದಿಗಳ ॥
ಇವರ ಕಂ ಡಕಟೆಂದು ಬಳಿ ಕು । ಜ್ವರದ ಚಿಂತೆಯ ಳಳಿದ ಸುಭಟರ । ನೆರವಿಗಳ
ನೀಡುಗಳ ನೋಡುತ ನಡೆದ ರಿದಿರಿನಲಿ ॥೧೩॥ ಪನಸನನು ಸುಮುಖನನು ಕಡುಗಲಿ ।
ವಿನತನನು ಕೇಸರಿಯ ನಗ್ಗದ । ಘನ ಬಲಾಯುತ ವೃಷಭನನು ಕಂಡಸುವ ನವರು
ಗಳ ॥ ತನುಗಳಲಿ ತಡವರಿಸಿ ಕಾಣದೆ । ಮನದ ಮರುಕದ ಮುಸುಡ ದುಗುಡದ ।
ಮೊನೆ ಮುರಿದ ಮತಿವಂತರೈದಿದ ರಿದಿರ ಕೊಳುಗುಳವ ॥೧೪॥ ಕಂಡ ರಡಗಿದ ಜೀವಿ
ಗಳ ರಣ ಗಂ। ಡು ಗಲಿಗಳ ವುಗ್ರ ಬಾಹಾ । ದಂಡ ಬಲ ಮೈಂದ ದ್ವಿವಿದ ಮೊದಲಾದ
ಯೂಥಪರ ॥ ಕಂಡು ಮರುಗುವ ದಾವುದಿನ್ನೆನು । ತಂಡಲೆವ ಚಿಂತೆಯಲಿ ಬರೆಬರೆ ।
ಕಂಡರಾ ಕಪಿರಾಜ ಕಟಕದ ವೈದ್ಯ ವಲ್ಲಭನ ॥೧೫॥ ಈತನೀ ಪರಿಯಾದನೇ ಯಿ ।
ನ್ನೇತರದು ನಮ್ಮಭ್ಯುದಯ ವೆನು। ತಾತನನು ತಳಮುಗುಚಿ ಮೂಗಿನ ಲುಸುರ ನಾಸ್ಯೈದು॥
ಪಾತಕನಲಾ ವಿಧಿಯೆನುತ ನ । ವ್ಮಾತಗಳ ಬಿಡೆ ಬೈದು ಮಿಕ್ಕವ । ಧೂತ ಜೀವರ
ಬಿಡುತ ಬರೆ ಕೇಳಿದನು ಕಿರು ಧನಿಯ ॥೧೬॥ ಹವಣಿಸಿದ ರಾ ಯೆಡೆಯ ಲತಿಭೀ ।
ದವನು ಕಿವಿಗೊ ಟ್ಟೊಯ್ಯನೆ । ತವಕಿಸದೆ ತಡೆ ತಡೆದು ತೋರುವ ಧ್ವನಿಯ ನಾಲಿ
ಸುತ ॥ ಇವರು ಬರೆ ಬರೆ ರಾಮ ಕವಚ । ಸ್ತವದ ರಾಮಧ್ಯಾನ ಪರ ಜಾಂ । ಬವನ
ಜಗ ದಧಿಜನಕ ತನುಜನಕಂಡ ರಿದಿರಿನಲಿ ॥೧೭॥ ಅರಿದ ನಲ್ಲಿಂಮೇಲೆ ವಿದ್ಯವ ।
ನುರುಬಿ ತತ್ವ ಜ್ಞಾನದಲಿ ಕ । ಣ್ದೆರೆದು ನಿರ್ಮಳ ಪರಮ ಹಂಸನ ಹರುಷ ನಂದದಲಿ॥
ತೊರೆದ ಜೀವದ ಕಪಿಕದಂಬಕೆ । ಹೊರಿಗೆವಾಳನು ಸಿಕ್ಕಿದನು ನಮ । ಗುರುವುದಿನ್ನ
ಭ್ಯುದಯವೆಂದುಬ್ಬಿದರು ತಮ್ಮೊಳಗೆ ॥೧೮॥ ಸರಸರಿಸಿ ಸಾರಿದನು ಬಳಿಕಾ । ಶರಣ
ನಾ ಶರಣ್ಯೈಕ ಜನ ವಿ । ಸ್ತರಣನನು ನುಳಿದರಿದಿರಾರೋ ಮಾರುತಾತ್ಮಜನೆ ॥
ತರಣಿವಂಶ ಲಲಾಮ ಸೇವಾ । ಪರಿಣತನೆ ಪೌರಂದರ ವ್ಯಾ । ಕರಣ ವಿದ್ಯಾ ಪಂಡಿತನೆ
ನೀನಾರು ಹೇಳೆಂದ ॥೧೯॥ ಜೀಯ ತಾನು ವಿಭೀಷಣನು ಬರ । ವಾಯಿತರಸಲು
ತಮ್ಮಡಿಯ ನಾ । ವಾಯುಸುತ ತಾನಲ್ಲ ನಿಮಗೇಕಾರನೆಂದೆನಲು ॥ ನೋಯದೈ ತಂದೈ
ಮಗನೆ ವ । ಜ್ರಾಯುಧಾರಿಯ ರಣದಲಾ ರಘು । ರಾಯ ಪದ ಪದ್ಮದ್ವಿರೇಫನ ಕಾಣೆ
ಯಲೆ ಯೆಂದ ॥೨೦॥ ದೇವರಾತನನೇಕೆ ಬೆಸಗೊಂ । ಬೀ ವಿಚಾರಣೆ ವೀರ
ರಾಘವ । ದೇವ ಲಕ್ಷ್ಮಣರಿರಲು ಕಪಿಕುಲ ಸಾರ್ವಭೌಮರಿಗೆ ॥ ಪಾವಮಾನಿಯ
ಮುಖ್ಯ ಬಹಳ ಫ । ಟಾವಳಿಗಳಿರ ಲಂಜನಾಸುತ । ನೇವ ನಿವದಿರಲೆಂದು ಬಿನ್ನಹ
ಮಾಡಿದನು ನಗುತ ॥೨೧॥ ಮಗನೆ ಕೇಳಾದರೆ ಸಮೀರನ । ಮಗನು ಮುಖ್ಯ
ಪ್ರಾಣ ಮಾರುತ । ನಗಲದಿರ್ದಡೆ ಯೆದ್ದುದೆಂದರಿ ರಾಮ ಮೊದಲಾದ ॥ ತೆಗೆದು ಸುರ
ಕಪಿಸೇನೆ ಹನುಮನು । ವಿಗಡ ವಿಗತಹನಾದಡಸುಸಿಂ । ದಗಲಿ ತೆಂದರಿ ಮರಳಿ
ಮಾತಿನ್ನೇಕೆ ನಿನಗೆಂದ ॥೨೨॥ ತೋರಿ ಕೊಡು ಸಾಕಿರ್ದಜಾತನ । ತೋರುವೆನು
ಮೇಲೊಗುವ ಲೇಸಿನ । ತೋರಿಕೆಯ ಕಣ್ಣುವನು ನಿನ್ನ ಸಮಕ್ಷಮಲೆನಲು ॥
ತೋರಿದುತ್ಸವ ರೋಮಪುಡುಬ್ಬಿನ । ತೋರಿಕೆಯವರು ಸಾಕ್ಷಿಮಾರಿಸು । ತೋರಿಕೆಯ

ಯಲ್ಲಾ ವಿಭೀಷಣ ನೊಲದ ನವಯುವವ ॥ ೨೩ ॥ ರಾಮನೆಂಬುವ ವಿಮಲ ಲಕ್ಷ್ಮೀ।
ಧಾಮಗಿದು ಸಿದ್ಧಾಂತ ನಾತಂ। ಗೀ ಮರುತ್ಸುತನೇನು ವೆಗ್ಗಳನೋ ಗುಣಂಗಳಲಿ ॥
ಸೋಮಧರನೇ ಬಲ್ಲ ಶಿವಶಿವ। ನಾಮಧಾರಕರೇನು ಧನ್ಯರೊ। ಹಾ ಮಹಾದೇವೆನುತ
ಕೊಂಡಾಡಿದನು ಪವನಜನ ॥ ೨೪ ॥ ಹನುಮ ನಹನೆಲೆಜೇಯ ಹನುಮನ। ಕೊನರಿ
ಕೊಂಡಾಡಿದಿರಿ ನಿಮಗೀ। ತನಲಿ ನೃಪನಭ್ಯುದಯವುಳ್ಳರ ಬೆಸಸಿ ಬೇಗೆನಲು ॥
ಹನುಮ ಬಂದೈ ತಂದೆ ರಘುನಂ। ದನನ ಭಾಗ್ಯೋದಯವೆ ಬಂದೈ। ವನಚರಾಂಬುಧಿ
ಸೋಮ ಬಂದೈಯೆಂದ ನಜಸೂನು ॥೨೫॥ ಚರಣಕೆರಗಿದ ಪಾವಮಾನಿಯ। ಶಿರವಸಿರಿ
ಹಸ್ತಾಬ್ಜದಲಿ ತಡ। ವರಿಸಿ ತಕ್ಕೈಸಿದನು ಪರಮಾನಂದ ಮಯನಾಗಿ ॥ ಸುರರ
ಭಾಗ್ಯತೆ ಚಲುವು ನಮ್ಮ। ವರೆಯ ಹರಪತಿ ಲೇಸು ಲಂಕೆಯ। ಸಿರಿ ವಿಭೀಷಣ
ಗಿನ್ನು ನಿಶ್ಚಯವಾಯ್ತುಲೇಯೆಂದ ॥ ೨೬ ॥ ಬನ್ನಿರೈ ನೀವ್ ತರಣಿ ವಂಶೋ। ತ್ಪನ್ನ
ರನು ಕಂಡರಿತುಕೊಂಡೊ। ಯ್ದೆನ್ನ ನೀವಲ್ಲಿರಿಸಿ ಬೇಗೆನ ಒಳಿಕವಹಿಲದಲಿ ॥ ಜೊನ್ನ
ವಿಲ್ಲದ ರಜನಿಯಲಿ ಸಂ। ಪನ್ನ ಬಲವೈತಂದು ಜನಕನ। ಕನ್ನಿಕೆಯ ಗಂಡನನು
ಕಂಡರು ಕಣನ ಮಧ್ಯದಲಿ ॥ ೨೭ ॥ ಧುರದ ಮಂಡಿಯ ಮಂಡಲಾಕೃತಿ। ಹರೆಯ
ದುಶ್ಶಾಸಗಳ ನಾಹವ। ದುರವಣದ ಕರ್ಣಾಂತ ಮುಷ್ಟಿಯ ಮುಗಿದವಕ್ಷಿಗಳ ॥
ಮುರಿಯ ಹಲುಗಳ ಲೌಕಿದಮಲಾ। ಧರದ ಗಿರಿ ದೋರಿಕೆಯ ಸರಳಿನ। ನರ ಶರೀರದ
ನಿರ್ವಿಕಾರನ ಕಂಡರಿದಿರಿನಲಿ ॥ ೨೮ ॥ ದೇವದೇವನ ಸಕಲ ದೇವರ। ದೇವ ಚಕ್ರೇ
ಶ್ವರನ ನಾನಾ। ಜೀವ ನಾಟಕ ಸೂತ್ರಧಾರನ ಚರಾ ಚರಾತ್ಮಕನ ॥ ಪಾವಕಾನಿಲ
ಪೃಥ್ವಿ ಪುಷ್ಕರ। ಜೀವನಖಿಲ ತತ್ವಮಯ ಮಾ। ಯಾ ವಿನೋದನ ಕಂಡು ಮೈ
ಯಿಕ್ಕಿದರು ಭಕ್ತಿಯಲಿ ॥ ೨೯ ॥ ಜನನ ಮರಣ ವಿಹೀನನನು ಮುನಿ। ಜನ ಮನೋ
ಶವ್ಯನನು ಕಮಲಾ। ಸನ ಸುರೇಂದ್ರರ ಶರಣನನು ಸರ್ವೇಶ್ವರೇಶ್ವರನ ॥ ಅನಘ
ನವ್ಯಯನನು ನಿರೀಕ್ಷಿಸಿ। ತನು ಪುಳಕ ದುಬ್ಬುಗಳ ರೋಮಾಂ। ಚನದ ಬಿಗುಹಿನ
ಲೆದ್ದು ಜಯಜಯವೆಂದ ರಿದಿರಿನಲಿ ॥೩೦॥ ಕರ ಸರೋಜವ ನುತ್ತಮಾಂಗದೊ। ಳಿರಿಸಿ
ವಿನಮಿತರಾಗಿ ಬಂ। ದುರು ಪರಾಕ್ರಮ ಭಟರು ಬಂದೈದಿದರು ಜಾಂಬವರ। ಇರವ
ಬಿನ್ನಹಮಾಡಿ ಕೊಂಡೋ। ದರು ಸರಾಗದಲಾ ಚರಾಚರ। ಭರಿತ ಬಹಳಬ್ರಹ್ಮನೆಡೆ
ಗೆಲೆ ಕಂದ ಕೇಳೆಂದ ॥೩೧॥ ಕೊಟ್ಟ ಭಾಷೆಯ ಮರೆದು ತನ್ನನು। ಬಿಟ್ಟು ವೈಕುಂಠಕ್ಕೆ
ಪೋಪರೆ। ಹುಟ್ಟುವೊಂದೇ ನಿನಗೆ ನರನಾಟಕದಿ ನೀನಸುವ ॥ ಬಿಟ್ಟರಿನ್ನಾನಾರ
ಸೇರುವೆ। ನಟ್ಟಡವಿಯಲಿ ಹೊಲ ಬಳಿದವಗೆ। ಬಟ್ಟೆಯಾವುದು ದೇವ ಲಕ್ಷ್ಮೀಕಾಂತ
ನುಡಿಯೆಂದ ॥ ೩೨ ॥ ಎಡದಲರ್ಕಜ ಬಲದ ಭಾಗದಿ। ಮಡಿದ ಲಕ್ಷ್ಮಣ ಕಾಲ ದೆಸೆ
ಯಲಿ। ಮಡಿದ ನಂಗದ ನೀಲ ಮೊದಲಾದಖಿಲ ನಾಯಕರ ॥ ಅಡಸಿಬಿದ್ದಿರೆ ಕಂಡು
ಮನದಲಿ ॥ ಮಿಡುಕಿದರು ಜಾಂಬವರು ಮಾರುತಿ। ಯೊಡಲ ನವಸಿಗೆ ಹೆರಹಿ ಹಂಬಲಿಸಿ
ದರು ಘೋಳಿಡುತ ॥೩೩॥ ಕಾಣಿಸಿದಡೊಳ್ಳಿತು ಮದೀಯ ಸು। ಷೇಣಕರು ನೀವೆಂಬ
ಜಾಂಬವ। ನಾಣತಿಗೆ ತಂದಿಳುಹಿದರು ಮುಂದಾ ಸುಷೇಣಕನ ॥ ಮಾಣಲದಕೇನಿನ್ನು
ಭುವನ। ಪ್ರಾಣಸುತ ಬಾ ಸುಭಟರಲಿ ಕ। ಟ್ಟಾಳಿ ಬಾರೈ ತಂದೆ ಬಾ ಯೆನ್ನಾನೆ ಬಾ
ಯೆಂದ ॥೩೪॥ ಮನದೊಳಿಂತೆನುತಿರ್ದನಾ ಹನು। ಮನು ಭವಬ್ರಹ್ಮಾಮರೇಂದ್ರರ।

ನಿನಕುಲೇಂದ್ರನ ಬಳಿಗೆ ತರಹೇಳರಿಯುವಡಾದಿಗಳ ॥ ತನುಗತ ಪ್ರಾಣಂಗಳನು ತರ।
ಲೆನಲಿತಹೆ ನೀ ಘಳಿಗೆಯಲಿ ತಾ। ನೆನುತ ತುದಿಗಾಲಾಂತು ನಿಂದನು ವೀರ ಹನು
ಮಂತ ॥ ೩೫ ॥ ಕೊಡು ಬೆಸನ ನಹಿಪತಿಯು ತುಡುಕುವೆ। ತಡೆವೆನರ್ಕನ ಕಾಲ ನಸು
ವನು। ಹಿಡಿಕಿಸುವೆ ಬ್ರಹ್ಮಾಂಡ ತಲೆಕೆಳಗಾಗಿ ಬೀಳ್ವಂತೆ ॥ ಕೆಡಹುವೆನು ಖಳರೊ
ಡೆಯ ನಿವಿರಿಂ। ವ್ಯಡನ ತರಹೇಳಿದರೆ ತಹೆ ರಘು। ಪೊಡವಿಪನ ಪದದಾಣೆ ನುಡಿನುಡಿ
ಯೆಂದನಾ ಹನುಮ ॥ ೩೬ ॥ ಆತ ಬಳಿಕೇನುವನು ಹೇಳದೆ। ಮಾತನಾಡಿದ ನೊಂದ
ಬಾರ್ಯೆ। ವಾತಸುತ ಕಂಡೈ ರಘು ಪ್ರಭವಾದಿ ಭಟರುಗಳ ॥ ಕಾತ ನೀನೀಜಗಕೆ
ಬೊಮ್ಮನ। ತಾತ ಮುಖ್ಯ ಸಮಸ್ತ ಸೇನಾ। ವ್ರಾತವನು ತಾ ನಿನ್ನ ವಶವದು ಕಂದ
ಕೇಳೆಂದ ॥ ೩೭ ॥ ಈ ಸುಷೇಷಣನು ಹಿಂದೆ ಪನ್ನಗ। ಪಾಶದಲಿ ರಾಘವನ ರಣದಲಿ।
ವಾಸವಾಂತಕ ದಿನ ವರು ಜೇವಣೆಗಳೆಂಬ ॥ ಔಷಧಿಯು ತರ ಹೇಳಿದನು ಹೋ। ಗೀ
ಸಮಯದಲಿ ತತ್ತ ಕೆಲಸ ವಿ। ದೈಸಲೇ ಯೆಂದೆನ್ನ ದೀಕ್ಷಣ ತೆರಳು ನೀನೆಂದ ।೩೮॥
ದಾರಿ ನಿನಗುತ್ತರದ ನಾನಾ। ದಾರುಣೆಯ ಕಳೆದಾಂಟ ಹಿಮವ। ತ್ಪಾರಿಯಾತ್ರಕ
ನೀಲ ನಿಷಧ ಮಹೇಂದ್ರ ಪರ್ವತವ ॥ ಮೇರು ತುದಿಯಲಿ ನಿಂತರತ್ತಲು। ಗೌರಿಯರ
ಸನ ಗಿರಿಯ ನೀಕ್ಷಿಸಿ। ಸಾರು ಬಳಿಕೀಶಾನ್ಯ ಮುಖವನು ಕಂದ ಕೇಳೆಂದ ।೩೯॥ ಬೆಳಗಿ
ಗಿಹುದಿಂದೀಗ ಲೇಳೇ। ಘಳಿಗೆ ಯಿದರೊಳು ನಮ್ಮಬಲವನು। ಬೇವಿಗೆ ಮಾಡದಿರೆ
ಸೂರ್ಯೋದಯದಿ ರಾವಣನು ॥ ಇಳೆಯ ಮಗಳನು ತಂದು ತೋರಿಸ। ಲುಳಿವುದಿಲ್ಲ
ಪತಿವ್ರತಾ ಸತಿ। ಬಳಿಕ ರಾಘವಗೆಂತೊ ಬೇಗದಲೆಸಗು ನೀನೆಂದ ॥ ೪೦ ॥ ರಣದೊ
ಳಳಿದವರುಗಳು ಜೀವಿಸು। ಕ್ಷಣದೊಳಿದನೇ ಮಾಡು ಮರು ಜೇ। ವಣೆಯ ತಹ ಬುದ್ಧಿ
ಯುನೆ ನೆಗಳೀ ಹೊತ್ತು ನೆಗಳಿದಡ ॥ ಗಣನೆ ಗೆಡುವುದು ರಾಮ ಮರ್ಕಟ। ಗಣ
ಹೆಸರಡಗುವುದು ಬೇಗದೊ। ಳೆಣಿಸು ಕಾರ್ಯವನೆನಲು ತಹೆನಾ ಗಿರಿಯ ಹೇಳೆಂದ॥೪೧॥
ಲಕ್ಷಯೋಜನ ಮೊದಲು ಶರನಿಧಿ। ಲಕ್ಷವೆರಡೆರಡನೆಯ ವಾರಿಧಿ। ಲಕ್ಷ ನಾಲ್ಕಾ
ಗಿಹುದು ಮೂರನೆ ಯೆಂಬುನಿಧಿ ಯೆಂಟು ॥ ಲಕ್ಷ ನಾಲ್ಕ್ಯದಕ್ಕೆ ಹದಿನಾ। ರ್ಲಕ್ಷ
ಮೂವತ್ತೆರಡು ಹೆಚ್ಚಿದ। ಲಕ್ಷ ಚೌಷಷ್ಟಿಗಳೊಳಿಹುದಾಕಡೆಯ ವಾರಾಸಿ ॥೪೨॥ ಶರಧಿ
ಗಿಮ್ಮಡಿ ಶರಧಿಮಧ್ಯದ। ಧರಣಿಗಿಮ್ಮಡಿ ಧರಣಿಗೀಪರಿ। ಶರಧಿಯೊಳಗಿಹವದರ
ಮಧ್ಯದ ಧರಣಿಯೊಳಗಿಹುದು ॥ ಮರುತ ಸಂಭವ ಕೇಳು ಈಪರಿ। ಶರಧಿಯನು ದಾಂಟೆ
ದರೆಯತಿವಿ। ಸ್ತರದ ಲೊಪ್ಪುವ ಚಂದ್ರಗಿರಿಯದೆ ಜೀವ ರಕ್ಷಕವು ॥ ೪೩ ॥ ಕಾಣ
ಬರುತಿಹುದಲ್ಲಿ ಚಂದ್ರ। ದ್ರೋಣ ಮೊದಲಾದ್ಯೆದುಗಿರಿ ಗೀ। ರ್ವಾಣ ಬಲಕಾದಿಹುದು
ಕದನವ ನೆಸೆಗದವರೊಡನೆ ॥ ಕಾಣಿಸಿದ ನಾಲ್ಕುವ್ರಷಧಿಗಳನು। ಜಾಣನೀನಿದ ಕಿತ್ತು
ಹಗೆಯನು। ಕಾಣದ ವೊಲ್ಯೆತಹುದು ಹೋಗೆನ್ನೆಯ್ಯ ಹೋಗೆಂದ ॥ ೪೪ ॥ ಗಿರಿಯ
ಮೇಲುದಿಸಿಹದದನತ್ಯಾ। ಶ್ಚರ್ಯದವುಷಧಿ ನಾಲ್ಕು ಸಂಧ್ಯಾ। ಕರಣಿ ಶಲ್ಯಾಕರಣಿ ಮೃತ
ಸಂಜೀವ ಮೊದಲಾದ ॥ ಮುರಿವುತುರಿವುದು ಹೂಂಕರಿಸುವುದು। ತರಹುದೇನೇ
ಮರುತಸುತ ನಾ। ಲ್ಕುವುಷಧಿಯೊಳೇನೇನು ಗುಣವೆಂದರಸ ಬೆಸಸಿದನು ॥ ೪೫ ॥
ಹರಿದಕಡಿ ಹೊದ್ದುವುದು ಸಂಧ್ಯಾ। ಕರಣಿಯಲಿ ಪೊಕ್ಕರುಣ ಶಲ್ಯಾ। ಕರಣಿಯಲಿ
ತುಂಬುವುದು ಮೃತಸಂಜೀವಿನಿಯಲಿ ಹೋದ ॥ ಹರಣ ಬಹುದನಿಬರಿಗೆ ಮುನ್ನಿನ।

ಪರಿಯ ಸತ್ವಸಗಾಢತನವನು । ದೊರಕುವುದು ಸಂಜೀವಿನಿಯ ಪರಿಯೆಂದು ತಿಳುಹಿದನು ॥೪೬॥ ಕೇಳು ಜಾಂಬವ ಭಾಷೆಯಿದು ಯಿಾ । ರೇಳು ಸಾಗರವಿರಲಿ ಮತ್ತೀ । ರೇಳು ದ್ವೀಪಗಳಿರಲಿ ದಾಂಟುವೆನವನು ಬಗೆಗೊಳದೆ ॥ ಕೇಳುವೆನು ಪರಮೌಷಧಿಯ ತಹೆ। ನೇಳು ಘಳಿಗೆಗೆ ಮುನ್ನ ಲಕ್ಷ್ಮೀ । ಲೋಲ ನಂಘ್ರಿಯ ಕಾಂಬೆನೆನುತುದ್ಯೋಗ ಪರನಾದ ॥ ೪೭ ॥ ಕರವ ಮುಗಿದಾ ಹನುಮ ಹೃತ್ಸರ । ಸಿರುಹದನಿಲಗೆ ನಮಿಸಿ ರಾಮನ । ಚರಣಕಾನತನಾಗಿ ಬೀಳ್ಕೊಳ್ಳನು ವಿಭೀಷಣನ ॥ ಇರಲು ವಾಯು ಸ್ಕಂಧದಲಿ ಗೋಚರಿಸಿತ್ತೈ ಕುಶಕೇಳು ಹನುಮನ । ಪೊರೆವ ಜೀವವು ವಾಯುವೆಂದೇ ಮರುತ ಸಂಚರಿಸಿದ ॥೪೮॥ ಉದಧಿ ಯತ್ತಲು ಸಾರ್ದನೈ ದಶ । ವದನ ಬಳಿಕಿತ್ತಲು ಕುಮಾರನ । ಕದನ ಕೇಳಿಯ ಕೇಳಿ ಕುಬೇರ ವಿಮಾನವನು ತರಿಸಿ ॥ ಕದನ ಭೂಮಿಗೆ ಬಂದನೈ ಹುಸಿ । ಯದಲೆ ರಣ ವಂದಿನವೊ ಲೆನುತ । ನಧಿಕ ಮಾನಸ ನೋಡಿದನು ರಜನಿಯಲಿ ಕೊಳುಗುಳವ ॥೪೯॥ ಮೊರೆವುತಿರ್ದುವು ಹೆಣ ಸಮುದ್ರದ । ಧರೆಯ ಬಲುರವದಂತೆ ನೆಲ ನು । ಬ್ಬರದ ನೆತ್ತರಿ ನಸ್ತಿ ಮಾಂಸದ ಮಿದುಳದೊಂಡೆಯಲಿ ॥ ಶಿರದ ಮುಂಡದ ಕಾಲು ಕೈ ನಡು । ಹರುಕುಗಳ ಕಪಿಗಳ ಕದಂಬದ । ಸರಿ ಬೆರೆಕೆಯಲಿ ಸಪ್ತ ತಾಳಚ್ಛೇದ ದುದ್ದದಲಿ ॥ ೫೦ ॥ ಕಾಲ ನಿಕ್ಕಿದ ಕಡಿತವೋಲಯ । ಶೂಲಿ ಸುಳಿದಿಳೆಯೋ ನೃಸಿಂಹನ । ಕೋಲು ಕೊಲೆಯ ರಣಾಂಗಣವೋ ಮೃತ್ಯುವಿನ ಬಾಣಸದ ॥ ವಾಲೆಯೋ ಸಮರಾಂಗಣವೊ ಯೆನೆ । ಕಾಳ ರಕ್ಕಸ ರಾಯ ನಕ್ಷಿಗ । ಳಾಲಿ ಗಳಿ ಗತಿಭಯವ ಮಾರಿದು ದಣುಗ ಕೇಳೆಂದ ॥೫೧॥ ಮುಟ್ಟಿ ಸಿಲು ವವನಾರು ಮಗ ಮನ । ಮುಟ್ಟಿ ಕಾದಲು ನೊಗಗೆ ಸರಿಯಹ । ಘಟ್ಟಿವಾಳ ರದಾರು ಸುರ ನರ ನಾಗ ಲೋಕದಲಿ ॥ ಮುಟ್ಟಿಸಿದ ರಣ ವಧುವಿ ಗೋಲೆಯ । ನಿಟ್ಟಿ ನೆನಗನುರಾಗ ರಸವನು । ಮುಟ್ಟಿಸಿದ ನೆಂದುಬ್ಬಿ ಕೊಂಡಾಡಿದನು ನಂದನನ ॥೫೨॥ ತಿರುಗಿ ಬರೆ ನೋಡಿದನು ನಿಜ ಸಚಿ । ವರಿಗೆ ತೋರಿಸುತಾ ಮಹಾ ಸಂ । ಗರ ಮಹೀರಂಗವನು ವಿಂಗಡಿಸುತ ವಿಮಾನದಲಿ ॥ ಥರಥರದ ಹೆಣದಟ್ಟಿಗಳ ನಿ । ರ್ಭರದ ಸಿಡು ರಕ್ತಗಳ ಕಡು ಭೀ । ಕರದ ರಣ ರಂಜಿಸಿತು ಕಂಗಳಿಗಾ ದಶಾನನನ ॥೫೩॥ ಹಿಡಿದು ಪಕ್ಕಲೆಗಳಲಿ ರಕ್ತವ । ದುಡುಕುತಿರ್ದರು ಜಿಪ್ಪಗರು ಕಡಿ । ಕಡಿದು ಕುನಿ ಕಿಲ ಲೊಡ್ಡುತಿರ್ದರು ರಣ ಪಿಶಾಚಗಳು ॥ ಮಡಕೆ ಗಳೊಳೆಳೆದರುಳತಾಳಿಸಿ । ಹಿಡಿದು ಜೋನವ ಮಿದುಳ ದಂಡೆಯ । ಮುಡಿದು ನೆರೆ ಗರ್ಜಿಸುತ ವಲಿದುದು ರಣದ ಲಸುರೆಯರು॥ ೫೪॥ ಹೆಣಗಳನು ಬಾಯ್ಮಿಡಸಿ ಕೈ ಪರೆ । ಯಣೆಯುಲದ ಲೊಲದೊಲದು ಧ್ಯಾನಿಸಿ । ಕುಣಿವುತಿರ್ದವು ಮರುಳುಗಳು ಮದಿರಾ ವಿಕಾರದಲಿ ॥ ಹಣಿಸಿ ಕೊಂಡಕ್ಷತೆಯ ಗಂಧವ । ಹಣೆಗೆ ಹತ್ತಿಸಿ ಹಂತಿ ಯಾರೋ । ಗಣೆಯ ಲೆಸೆದರು ಬ್ರಹ್ಮ ರಾಕ್ಷಸ ರೊಂದು ತಾಣದಲಿ ॥೫೫॥ ತೊಗಲ ಲಂದರವಿಕ್ಕಿ ತಲೆಗಳ । ಜಗಲಿಗಳ ವಿಸ್ತರಿಸಿ ಸಿಡುಗರು । ಳುಗಳ ತೋರಣ ಗಟ್ಟಿ ರಣ ವರೆಗಳ ಸಿನಾದದಲಿ ॥ ಹೊಗಳಿಕೆಯ ತಲ್ಲಣಿಗೆಮಲಿ ಬೀಯಗರು ತಮ್ಮೊಳಗಾಗಿ ಕೊಡಗೂ । ಸುಗಳ ಮದುವೆಯ ಮಾಡುತಿರ್ದರು ಭೂತಸಂದೋಹ ॥೫೬॥ ಹೆಣನ ಜಂಪದ ಸಿಟ್ಟೈಲುವಿ ನು । ಬ್ಬಣದ ತೋರಗಲು ಗರುಳ ದೊಂಡೆಯ । ಹಣೆಯ ವಾಸಿಗ ಮಣಿತ ಮಕುಟದ ಹಲಗೆ ಹರಿಗೆಗಳ ॥ ಕುಣಿಹಗಳ ಕುಬು

ಬಿರಿತಗಳ ಸಂ | ದಣಿಯು ರಣ ಭೇತಾಳ ಭೈರವ | ಗಣದ ದರ್ಚನೆ ಯೆಸೆವು ತಿರ್ದದ
ದೊಂದು ತಾಣದಲಿ ||೫೭|| ತೇರು ತುಂಬಿನ ಉಡಿದ ಮುತ್ತಿನ | ಹಾರವನು ಹರಿವಿಕ್ಕಿ
ಬಿದ್ದಿಹ | ವಾರಣದ ದಂತಗಳಲೊನಕೆಯು ಲೆಳೆಯು ರಕ್ಕಸರ || ನಾರಿಯರು ಸರವೆತ್ತಿ
ಸುವ್ವಿ ಸು | ರಾರಿ ರಾವಣಿ ಸುವ್ವಿ ಜಯ ವಿ | ಸ್ತಾರ ಸುವ್ವಿ ಯೆನುತ್ತ ಹೊಡಿದ
ರೊಂದು ತಾಣದಲಿ ||೫೮|| ಆಲಿಗಳ ನುಗಿ ದುಗಿದು ಕುಟುಕನ | ತಾಳಿಗೆಗೆ ಮಾಕಿ
ದುವು ಬಕ ದಿ | ಗ್ಬಲ ವೆಳೆದುವು ನರಗಳನು ನರಿಗಳ ನಿಶಾಚರರ || ತೋಳ ತೊಡೆ
ನಡುಗಳನು ವೃಕ ಶಾ | ರ್ದೂಲಗಳು ಮುರಿ ದೌಕುತಿರ್ದುವು | ಕಾಳಗದ ಕಡೆನೆಲದ
ಸೀಮಾ ಸನ್ನಿವೇಶದಲಿ |೫೯|| ನಗುತ ನೋಡುತ ರಣಕೆ ಮೆಚ್ಚುತ | ವ.ಗನ ಕೊಂ
ಡಾಡುತ್ತ ಶರ ಸಂ | ಯುಗದ ಮಧ್ಯದಲಿದ್ದ ರಘುರಾಜೇಂದ್ರ ಚಂದ್ರಮನ || ಜಗ
ದುದರನ ಜನಾರ್ದನನ ಘನ | ಸಗುಣ ನಿರ್ಗುಣ ನಿರುಪಮ ನ ಸ | ರ್ವಗನ ವಿಮಲ
ಸುದರ್ಶನ ಪ್ರಭೆ ಬೆದರಿಸಿತು ಖಳನ ||೬೦|| ತರಣಿ ಶತ ದೀಧಿತಿ ಯಲಾ ನಿ | ರ್ಮರತ
ನಾ ಶ್ರೀ ಯಂಗರಕ್ಷಣೆ | ತಿರುಗು ತಿರುತಿರ್ದುದು ಕಣಾ ಕಾಲಾಗ್ನಿ ತೇಜದಲಿ || ಧುರದ
ಮಹದುತ್ಪಾತ ಭೀಷಣ | ಕರವಿದೆನುತಸುರೇಂದ್ರ ಭಯದಲಿ | ತಿರುಗಿದನು ಪಟ್ಟಣಕೆ
ರಜನಿಯ ಕಳೆದು ಬಹೆನೆಂದು || ೬೧ || ಕರೆಸಿದನು ಖಳ ಕಾಲನೇಮಿಯ | ಧುರದ
ವೃತ್ತಾಂತವನು ಪೇಳಿದು | ತರಣಿವಂಶನ ದೂತ ಸಂಜೀವಿನಿಯ ಗಿರಿಗೆಂದು || ವರಮ
ಹೌಷಧಿ ನಾಲ್ಕು ಶಲಾ | ಕರಣಿಯನು ತರೆ ತಾರದ ವೊಲು | ಬ್ಬರದಿ ಕಾದಿಹುದೆನುತ
ಕಳುಹಿದ ನಂದಿನಿರುಳಿನಲಿ |೬೨|| ಎಲೆ ಕುಶನೆ ಕೇಳೀತ ಹನುಮ ನು | ಕೆಲಸವನು
ಭೋರ್ಗರೆದು ಹಾರಿದ | ನಸಿಲ ಪಥದಲಿ ಭುಜವ ನೊದರಿಸಿ ಲೀಲೆ ಯುಬ್ಬಿನಲಿ ||
ಕೆಲಕೆ ಕೆದರಿದ ವದ್ರಿಗಳು ನೆಲ | ಕಳಲಿದುದು ಸಂತೋಷ ಮುಖದಲಿ | ಕೊಳು
ಕುಳಿಗ ಖಳ ರದ್ದಗಟ್ಟಲು ತೂಳು ತಡೆಹಾಯ್ದು || ೬೩ || ಉದುರಿದುವು ತಾರಾಳಿ
ರಾಹುವಿ | ನಧಟರನು ರವಿ ಕೆಲಕೆ ಸಾರಿದ | ನುದುರಿ ತದ್ಭುತ ಸತ್ತ್ವಲೋಕವ ಸಾರಿ
ದರು ಸುರರು || ಕೆದರಿದರು ಮುಂದೇಹು ರಾಕ್ಷಸ | ರ ದುರಿತಬುಜ ಭವಾಂಡವಂಬುಧಿ |
ಕದಡಿದುದು ಕೇಳಂಜನಾಸುತ ನ್ಯದಿದದ್ಭುತಕೆ || ೬೪ || ಹರಿಣ ಗಿಂದವೆ ಶರಭ ವಧಿ
ಕವು | ಹರಿಣ ಗೀ ಸರಳಿಂದ ಮಾರುತ | ಹರಿಣಗಿಂ ಶರ ಮರುತ ಗಿಂದಿವೆ ತರಣಿ
ಕಡುವೇಗ || ಹರಿಣ ಗಿಂ ಶರಗಿ ಮ್ಮರುತ ಗಿಂ | ತರಣಿ ಗಿಮ್ಮಿಗಿಲೆನಲು ಮುತ್ತ |
ಹರಿಣ ಶರಮರು ತರಣಿ ಮನಕಾ ಹನುಮ ಮಿಗಿಲಾದ || ೬೫ || ಸುರುಪ ಸುರುಬಗೆ
ಹಾರಿ ಬಹ ಕುಲ | ಗಿರಿಯ ಪೊಲಭ್ರದಲಿ ಬರೆ ದಶ | ಶಿರ ನವರು ನಿಲ್ಲೆನುತ ತಡೆದರು
ಸ್ನುಡಿದ ಕಡುಗದಲಿ || ಮರುತ ಸುತ ಕರ ಚಾಲದಿಂದಲಿ | ಶರಧಿ ಯೊಳಗೀಡಾಡಿ
ತಳುವಾಯ್ | ತರರೆ ಯೆನು ತಲ್ಲಿಂದ ಮಿರಿದ ನೇಳು ಸಾಗರವ ||೬೬|| ಮೇಘ ಮಂ
ಡಲ ಕಡು ಜವದಿ ಕಡೆ | ಸಾಗರಕ್ಕೈದುದ ಪೊಲೈದಿದ | ನಾಗ ಲೀ ವರ್ಣಿಸುವೆ |
ಮನೊವೇಗಕೆ ಮಿರಿ ಬರೆ || ಆಗಿರಿಯ ಕಾದಿಪ್ಪ ಖಳಖುಪಿ | ಯಾಗಿ ದಿವ್ಯ ತಪೋ
ವನದ ಲನು | ರಾಗ ದಿಂದಿರೆ ಕಂಡು ಪವನಜ ನಿಂದು ಬೆರಗಾದ ||೬೭|| ಜಡೆ ದಲೆಯು
ತೊಡಹದ ವಿಭೂತಿಯ | ಮಡಿವೆಳಳ ಜಪಸರದ ಪುಲಿದೊಗ | ಲುಡಿಯು ಕರದ ಕಮಂ
ಡಲದ ಲಾಕುಳದ ಸುಲಿಸಲ್ಲ || ಮಿಡುಕು ವಧರದ ನಾಸಿಕಾಗ್ರ ದೊ| ಳಡಸಿ ದಕ್ಷಿಯ

ಮುನಿಯ ವೇಷವ । ತೊಡಚಿ ಕೊಂಡಿಹ ಕಾಲನೇಮಿಪ್ಪಂತೆ ರಂಜಿಸಿದ ॥೧೮॥ ತನುಜ
ಕೇಳ್ ದಾನವನ ಕೃತ್ರಿಮ । ದನುವ ನಿಖಿಳ ಫಲೌಘ ವಲ್ಲಿಯು । ಘನ ಮನೋಹರ
ವಲ್ಲಿ ರಂಜಿಪ ರಮ್ಯಗಳು ಮಾಯೆ ॥ ಅನಿಲ ಹಾಲಾ ಹಲದ ಹೊಗೆ ಮುನಿ । ದನುಜ
ನುರು ಕಾಳಿಕವ ನರಿಯದೆ । ಹನುಮ ಸಹಜದ ಮುನಿವರೇಶ್ವರ ನೆನುತ ವಂದಿಸಿದ ॥
ಎಲೆ ಸದಾಶಿವ ಮೂರ್ತಿ ಮಾನ ವಿಗೆ । ಬಳಲಿದನು ಹಿರಿದಾಗಿ ದೂರದ । ನಿಳಯದಿಂ
ದೈತಂದು ಕಂಡೆನು ನಿಮ್ಮ ಪದಯುಗವ ॥ ಜಲವು ನೀಂಟಿವ ರುಳಿವು ಶೈತ್ಯದ । ಕೊಳನ
ವಾವುದು ತೋರಿದರೆ ತನ್ನಲಸಿಕೆಯ ಪರಿಹರಿಸುವೆನು ಹೇಳೆಂದ ನಾ ಹನುಮ ॥೧೯॥
ಎತ್ತಣಿಂದೈತಂದೆ ಕಪಿ ನಿ । ನ್ನಿತ್ತ ಲಾವವ ಕಳುಹಿದರು ನೀ । ನತ್ಯಧಿಕ ನಹೆ ಕಡಲ
ದಾಂಟುವ ವಾನ ನಿಳೆಯೊಳಗೆ ॥ ಬಿತ್ತರಿಸು ನೀ ಬಂದ ಕಾರ್ಯವ । ಹತ್ತಿರಿದೆ ತೋರಿ
ಸುವೆ ಶೈತ್ಯದ । ಪೊತ್ತದಲಿ ತೀವಿದ ಮಹಾ ಪುಷ್ಕರಣಿ ಯಿದ್ದೆಡೆಯ ॥೨೦॥ ಅವ
ಧರಿಸು ಬಂದವನು ರಘುಕುಲ ದವನಿಪನ ಕಿಂಕರನು ತಾ ದಾ । ನವರ ಹುಡಿ ಗಟ್ಟುವ
ಮಹಾ ವಿಲಯದಲಿ ನಮ್ಮರಸ ॥ ಅವರ ಮರೆ ಯಿರಿತಗಳ ಮಾಯಾ । ವಿವರದಲಿ
ಮೂರ್ಛಿಸಿದ ಬಲ ಸಹಿ । ತವರ ನೆಬ್ಬಿಸ ಲೈಸೆ ಮೃತ ಸಂಜೀವ ನೌಷಧಿಯ ॥೨೧॥
ಪುರವ ಹೊರವಂಟೀಸುದಿನ ಕಪಿ । ಶರಧಿಯನು ದಾಂಟುವರೆ ವತ್ಸರ । ಹಿರಿದಹವು
ರಣ ಮಂಡಲದೊಳುಳಿದಿಹವೆ ಯುಳಿ ದಶವ ॥ ಮುಳಿ ಲೆಷ್ಟು ದಿನಂಗಳಹನೇ । ಬಿಂವ
ನರಿಯದೆ ಬಂದೆ ಮರ್ಕಟ । ಮರುಳುಗೊಂಡೆ ಯೆನುತ್ತ ಕಬಟ ಮುನೀಂದ್ರ ನಸು
ನಗುತ ॥೨೨॥ ಅರೆ ಘಳಿಗೆ ಜಾಂಬವರ ಬೀಳ್ಕೊಂಡುರುತರ ದ್ವೀಪಂಗಳೇಳನು । ಶರಧಿ
ಯೇಳನು ಕಳೆದು ಬಂದೆನು ದಿವಸ ವೆಷ್ಟೆಂದ ॥ ಸೊರಹಿ ಕಾಲೆಡಿಸುವರೆ ಮುನಿಪತಿ ।
ಸರಸಿ ಯಾವೆಡೆ ತೋರೆನಲು ಖಳ । ಬೆರಗುಗೊಂಡನು ಕಪಿಯ ವೇಷದ ರುದ್ರನಹ
ನೆನುತ ॥ ೨೩ ॥ ನೋಡಿದನು ಮನದೊಳಗೆ ಕಪಿ ಕಡು । ಗೇಡ ಬಲ್ಲಿದನಹನು ಸರ
ಸಿಯ । ಕೂಡಿದಲ್ಲಡೆ ಸಾಯನಿವ ನಾನೆ ಗಳದೆಸೆಯ ನ್ನಾಡಿಕೊಳುವೆನು ತನಗೆ
ಜಯನೇ । ಗೂಡದಿರ್ದಡೆ ಪರಮ ಸಾಹಸ । ಗೂಡಿ ಮುರಿವುದು ಮಂತ್ರವೆನುತಾ
ಕೊಳಕೆ ನಡೆತಂದ ॥ ೨೪ ॥ ಬಳಿಕ ಕೇಳಾ ಕೊಳ ನೊಳಗೆ ಸುರಲಲನೆ ಯೊಬ್ಬಳು
ಪತಿಯ ಶಾಪದಿ । ಮುಳುಗಿ ಮೂರು ಯುಗಂಗಳಿಂವಿರುತಿಹಳು ನೆಗಳಾಗಿ ॥ ಜ್ವಲನ
ಸಖ ಸುತ ನಿಂದಮಡಿದರೆ । ಕಳೆವ ದಂದಿನ ಶಾಪ ಸರಸಿಕೆ । ಸುಳಿದವರ ಬಿಡದರಸಿ
ನುಂಗುವಳಂದು ಮೊದಲಾಗಿ ॥೨೫॥ ಆ ಸರಸಿ ಯಿದ್ದೆಡೆಗೆ ಯಾ ಮುನಿ । ವೇಷ ರಚ
ನೆಯ ದೈತ್ಯನೆಂ ದುಪ । ಹಾಸದಲಿ ತೋರಿದರೆ ಬಂದನು ವಿಷ ಸರೋವರಕೆ ॥ ವಿಸಾಸ
ಲಳಿಯುದ ಕಮಲ ಕುಮುದದ ವಾಸನೆಯ ಕರ ನೊರೆಗಳಿರು ಬರಿ । ಸೂಸುತಿಹ ತಂ
ತುರಿ ವಿಲಾಸವ ನೋಡಿ ಹರುಷಿಸಿದ ॥೨೬॥ ವರ ಮುನೀಶ್ವರ ತಪ್ಪುವನ ವಾರಿರುಹ
ಕೈರವದಿಂದ ಲೊಪ್ಪುವ । ಸರಸಿಯಮ ಸೀತೋದಕವು ಮಿಗೆ ನೋಡಿದಾಕ್ಷಣಕೆ ॥
ಹಿರಿದು ಬಳಲಿಕೆ ಯಡಗಿತೆಂ ದಾ । ಕ್ಷಣದಿ ಹತ್ತಿರೆ ಸಾರಿ ಕರ ಮುಖ । ಚರಣ ಪ್ರಕ್ಷಾ
ಳನವ ಮಿಗೆ ಮೊಗೆದನು ವಿಸೋದಕವ ॥೨೭॥ ಕುಡಿಯದಿರು ನಂಜಿನ ಸರೋವರ ।
ಬಿಡು ಕಪೀಶ್ವರ ಕಪಟ ವೇಷದಿ । ಜಡೆಯ ಧರಿಸಿರ್ದವನು ಮುನಿಪತಿಯಲ್ಲ ದಾನ
ವನು ॥ ಮಡುವ ಹೊಗದಿರು ವೀರ ತೊಕ್ಕರ । ಹಿಡಿದು ನುಂಗುವ ಜೊಂಮ ನಗಳ

ಕಡಪು ಸಾವುದು ವಿಹಿತ ವಲ್ಲೆಂದ:ದು ನಭೋನಿನದ ||೭೯|| ಸಾರುವಭ್ರದ ನುಡಿಯ
ನಾಲಿಸಿ | ವಿಾರಿ ಉಡಿದನು ಕೆಡೆಯೆ.ನುತ ಖಳ | ಬೇರೆ ರಾಮಾಂಘ್ರಿಯನು ನೆನೆದು
ಪಚರಿಸಿ ಕೊಂಡಡರ್ವ || ವೀರ ಹನುಮನುವ ನಿರೀಕ್ಷಿಸಿ | ವಾರಿ ಯುಬ್ಬೆದ್ದಿದ್ದು
ತುಡುಕಲು | ಸೇರಿ ತಭ್ರದ ಘನ ನೊರೆಯ ತುಂತುರು ತುಷಾರದಲಿ ||೮೦|| ಒಡನೆ
ಚರಣಂಗಳನು ಪಿಡಿಯಲು ಕೊಡಹಲಾ ಪವನಜನು ಮಗುಳವ | ಗಡದಿ ಜಾನೂರು
ಗಳು ಕಟಿ ಯುರು ಬಾಹು ಶಿರ ಸಹಿತ || ಪಿಡಿದು ಪಾತಾಳಕೆ ಸೆಳೆಯಲು | ಮೃಢ
ಪರಾಕ್ರಮಿ ರೋಷ ಮಿಗಿಲದ | ರೊಡನೆ ಹೋರ ಲಳವಹುದೆನುತ ಮನದೊಳು ನಿಧಾ
ನಿಸಿದ |೮೧|| ಜೆಳೆದ ನನಿಲಜ ನವಯವವು ಬಾಯ್ | ಗಳ ಪೊಡೆದ ಪೋಲದರ ತನು
ವೆ | ಗ್ಗಳಿಸಿ ತುಂಬಿಸಿತು ಕೋನೆರೆಯುದಿರೆ ಬಹಳ ಖತಿಯಲಿ || ಹಲುಗಳುರು ಮುಷ್ಟಿ
ಪ್ರಹಾರಾದಿ ಕಳಚಿ ಬಿಗಿದನು ಬಾಲದಲಿ ತನು | ಕಳವಳಿಸಿ ಚೀರಿದುದು ಖಳ ಬೆದರಲ
ಮಹಾದ್ಭುತಕೆ ||೮೩|| ಹೆಚ್ಚಿದದ್ರಿಯ ಕಿತ್ತು ಸರಸಿಯ | ಮುಚ್ಚಿ ಖಳ ಬೊಬ್ಬಿರಿದು
ಯಿರಲಾ | ನಿಚ್ಚಟದ ಸಾಹಸವ ಲವ ಕೇಳೊರಸಿ ಜಲಜ ರವ || ಪುಚ್ಛವನು ಹಿಡಿ
ದಡರಿ ಸರಸಿಯೊ | ಳುಚ್ಚಲಿಸಿ ಬರ ಗಿರಿ ತಡೆಯೆ ಮ| ತ್ತುಚ್ಚರಿಯ ಡೇನನುತ ವಜ್ರ
ಶರೀರಿ ಬೆರಗಾದ ||೮೩|| ತಳಕೆ ನೀಡಿದ ನಂಘ್ರಿಯುಗ್ಮವ | ನೆಲೆಯ ಕಾಣಿಸಿ ಬಳಿಕ
ಪುಟನೆಗೆ | ದಳ ಕದದ್ರಿಯ ಕಿತ್ತು ನಾಮ ಕರಾಗ್ರದಲಿ ಧರಿಸಿ || ಬಲದ ಕೈಯ್ಯಲಿ
ಪಿಡಿದು ನೆಗಳನ್ನು | ಕೊಳನ ಹೊರವಂ ಟನಿಲ ಸಂಭವ| ಬಲಿಯ ದಾನಕ್ಕೈದಿ ದಂದಿನ
ವಟು ವೊಲೆಸೆದಿರ್ದ |೮೪|| ಅರುಣ ಮಯವಾಯಿತ್ತು ಕೊಳ ವಾ | ವಾರಿ ಕೈರವ
ವಡಗಿ ಹೋದುವು | ಮರುತ ತನಯನ ಸಾಹಸವ ಕಂಡಡಿಗಡಿಗೆ ಹೊಗಳಿ || ಗೊರವ
ವೇಷದಿ ಮುನ್ನಿನಂತಿಹ | ಪರಿಯ ನೀಕ್ಷಿಸಿ ಹನುಮ ಹಸ್ತದ | ಗಿರಿಯ ಲಪ್ಪಳಿಸಿದರೆ
ಅಜಗಿಜಿಯಾದ ನಾ ದೈತ್ಯ | ೮೫ || ತನುಜಕೇಳ್ ಗಾಂಧರ್ವ ಸತಿ ಕಲಿ | ಹನುಮ
ನಂಘ್ರಿಗೆ ನಮಿಸಿದಳು ತ | ನ್ನಿನೆಯ ತನಗೆ ಯುಗತ್ರಯಂ ಗಳೊಳಿತ್ತ ಶಾಪವನು ||
ಅನುಮರಿಸಿದೆನು ನಿನ್ನ ಬಸುರಲಿ | ಜನಿಸಿದೆನು ತಾ ಧನ್ಯಳಾದೆನು | ನೆನಹು ಸಿದ್ಧಿಸಲೆ
ನುತಲೈದಿದ ಳಭ್ರಮಂಡಲವ ||೮೬|| ಇತ್ತ ನನಿಲ ಕುಮಾರ ಪಟ್ಟದ | ದೈತ್ಯ ನುಪ
ಟಳದಿಂದ ತಳುವಾ | ಯಿ ತ್ತೆನುತ ಲತಿ ಜವದಿ ಬರೆ ಕಂಡನು ಮಹೀಧರವ || ಮೊತ್ತ
ದದ್ರಿಯ ನಡುವೆ ಗಿರಿ ರಾ | ಜೋತ್ತಮ ನಿಲಜ ಶೈಲದಂದದಿ | ಲತ್ತದಲ್ಲಿರೆ ಕಂಡು
ಪವನಜ ನಿಂದು ಬೆರಗಾದ ||೮೭|| ಕಂಡೆನ್ನೈ ಶಿವಶಿನ ವಿಚಿತ್ರವ | ಖಂಡಿ ತೈಶ್ವರಿಯದ
ಗಿರಿಯ ಮಾ ರ್ತಾಂಡ ತೇಜೋಮಯದ ದೌರ್ವಾನಳನ ದಂಡಿಯಲಿ || ತಂಡ ವಾಡಂ
ಬರದ ರಭಸವ | ಕೊಂಡುರಿದು ಮೊರೆ ದುರವಣಿಸಿ ಹೂಂ | ಕೊಂಡುದುರುತಿದೆ ಧೂಮ್ರ
ವೆನು ತಲ್ಲಿಂದ ಲಾಗಿಸಿದ ||೮೮|| ಪ್ರಳಯ ಪವನನ ಜವದ ಲನಿಲಜ | ಗಳೆಸು ತಿರ
ಲೊಲ ದಾಡುತಿರ್ದವು | ಕೆಲ ಬಲದ ಲಿರ್ದ ಚಲ ದಿಳೆಯುಕ್ಕ ತಳ ವಸನಿಕಳ|| ಉಳಿದ
ತರು ತತಿ ಹಾರಿದುವು ತರ | ಗೆಲೆಯ ಪೊ ಲಭ್ರಕೆ ಮೃಗ ಘನ | ಕುಲ ಸಹಿತ ಲೇ
ವಣ್ಣಿಸುವೆ ಹನುಮನನು ಘಾಳಿಯಲಿ || ೮೯ || ಬಂದು ಪವನಜ ಗಿರಿಯ ಸಾರಿದು |
ನಿಂದು ಬೊಬ್ಬಿಡ ಲದ್ರಿ ತಲ್ಲಣ | ದಿಂದ ಕಂಪಿಸಿ ತೋರ ಲಲ್ಲಿಯ ಯಕ್ಷ ರಾಕ್ಷಸರು ||
ಮುಂದು ಗೆಟ್ಟೋಡಿದರು ಕಡು ಭಯ| ದಿಂದ ಹತ್ತಿದ ಗಿರಿಯ ಜಾಂಬವ|ರೆಂದ ದಿವ್ಯೌ

ಪಥಿಯು ನರಸಿದ ನಾ ನಗಾಗ್ರದಲಿ ॥ ೯೦ ॥ ಉರಿಯು ನಡಗಿಸಿ ಕೊಂಡು ಭಯದಲಿ । ಮೊರೆಯ ಲೊಲ್ಲದೆ ನಿಂದು ಹೊಗೆ ಯಂ। ಕರಿಸ ಲೊಲ್ಲದೆ ಮಾಣು ಹುಂಕೃತಿ ಯಿಲ್ಲದಿರೆ ಕಂಡು ॥ ಕುರುಹ ಕಾಣದೆ ಹೊತ್ತು ಹೋಯಿತು ಬಿರುದ ನೇರಿಸಿ ನುಡಿದೆ ಸಂಧ್ಯಾಕರಣಿ ಯಾದುದು ಮದ್ದ ಕಾಣೆನೆನುತ ಚಿಂತಿಸಿದ ॥೯೧॥ ಬರಿದೆ ಕೊಂದೆನು ಕಪಟ ವೇಷದ। ಗೊರವ ದೈತ್ಯನ ಕಟ್ಟಿತಂದರೆ। ಕುರುಹ ತೋರುವೆನೇನ ಹದನನು ಮಾಡಲಿನ್ನಿದಕೆ ॥ ಗಿರಿಯನೊಯ್ದರೆ ಬಲ್ಲಜಾಂಬವ । ರರಸಿಕೊಳಲಿತಾನೆ ನಾ ನಿ। ನ್ನರಸಲಾರೆಯೆನುತ ಧುಮ್ಮಿಕ್ಕಿದನು ಧಾರುಣಿಗೆ॥೯೨॥ ಸುತ್ತಿ ಬಾಲವ ನಲುಗಿ ಶೈಲವ। ಕಿತ್ತರೀರೇಳುಲೋಕ ನಡುಗಿತು। ಯೆತ್ತಿದರೆ ಕುಲವೆಂಟರಹಿಗಳು ಬಿಡದೆ ಜೋರಿದವು॥ಬಿತ್ತರಿಸುವರನಂತರಹಿಗಳು । ಮುತ್ತಿನಮಲ ಚರಿತ್ರವನು ಹಿಡಿ । ದೆತ್ತಿದವೊಲೆಸೆದುದು ಕರಾಗ್ರದಿ ನಘಮರುತ್ಸುತನ ॥೯೩॥ ಫಣಿಪೆಡೆವಣೀ ಬೆಳಗು ಮುದ್ರಿಕೆ। ಗಣದ ದೀಧಿತಿ ಸುರವಿಮಾನವ। ನಣದು ಬೆಳಗಿದುದಮಲ ತೇಜದ ಲಖಿಳ ದಿಗುತಟವ ॥ ಕ್ಷಣದಿ ತುಡುಕಿದ ಗ್ರಸ್ತರಾಹುವಿ। ನಣಲೊಲಮುಮ ಹಿಮಾಂಶು ತಾರಾ । ಗಣಸಹಿತವೇ ರಂಜಿಸುವೊಲೊಪ್ಪಿದುದು ಚಂದ್ರಗಿರಿ ॥ ೯೪ ॥ ಗಗನ ಸರಸಿಯ ದಾಟಲಿಕ್ಕಿದ ನಗದ ಚೈತ್ರವೊಲಾಹವದಿಯು। ದ್ಧಗಳರುಳು ನೋಳ್ಪನಿಮಿಷರ ನಿಲುಕಡೆಯುಡಪರವಿದೊ ॥ ಬಿಗಿದ ಶೈಲವರೂಥ ಚಂದ್ರಕಾಂತದಿ । ಮೃಗಧರಗೆ ನಿವಿರ್ಗಸಿ ಮರುತ್ಸುತ । ನೆಗಳಿದಮಲವವೋ ಯೆನೆ ಮೆರೆದುದಂಧಚಲ ॥ ೯೫ ॥ ಭರದಿ ಭೂರದಿಗಿರಿಯ ತಾಳಿದು । ಮರುತಸುತ ಕಡುಜವದಿ ಸಪ್ತ । ವರಣ ವೃದಧಿಯ ದಾಂಟಿ ಸಪ್ತ ದ್ವೀಪಗಳ ಕಳೆದು ॥ ಬರುತಿರಲು ಲಂಕಾಪುರದ ಲ । ಬ್ಬರವಿಸಿತು ತತ್ಪ್ರಾತೌಘವಿಕ್ರಲು। ಹರಿಶರಣ ಕಡು ದುಗುಡದಲಿ ಜಾಂಬವನೊಳಿಂತೆಂದ ॥ ೯೬ ॥ ಕೇಳು ಜಾಂಬವ ಘಳಿಗೆಯೆನಿತಾ। ಯೆತ್ತೇಳು ಶರಧಿಯು ದಾಂಟುವನೆ ಮತ್ತೇಳು ದ್ವೀಪಂಗಳನು ಕಳೆವನೇ ನೀನು ಕುರುಹಿತ್ತ ॥ ಶೈಲವಲ್ಲಿಗೆ ತೆರಳುವನೆ ಮಿಗೆ । ಕೇಳುವನೆ ಪರಮೌಷಧಿಯ ನರಿ । ದಾಳುಗಳ ದೇವನ, ಮರುತ್ಸುತ ತಹನೆ ಹೇಳೆಂದ ॥ ೯೭ ॥ ಎಲೆ ವಿಭೀಷಣ ಧರಣಿ ಜಲದಲಿ । ಕಲಸಿದರೆ ಕುಲಗಿರಿಗಳಳಿದರೆ। ನಳಿನಭವ ಹರಿಹರರು ಮಡಿದರೆ ಶಕ್ತಿಯುಡುಗಿದರೆ ॥ ಜಲಧಿಯೇಳನು ಬತ್ತಿದರೆ ಮಿಗೆ। ಕಲಿ ಹನುಮನೈತಹನು ಮೂಲಿಕೆ। ತಿಳಿಯದಿರ್ದಡೆ ಮೂಲ ಸಹಿತಾ ಗಿರಿಯ ತಹನೆಂದ ॥ ೯೮ ॥ ಧರಿಸಿ ಗಿರಿಯನು ಬಂದ ಪಥದಲಿ। ತಿರುಗಿದನು ನಿಶಿಯಲಿ ನಿಶಾಚರ । ನಿರವಿನವೊಲೊಪ್ಪಿದುದು ತದ್ಗಿರಿ ಕರದ ಲನಿಲಜನ ॥ ಶರಣನರಿದೆಚ್ಚರಿಸಿ ನುಡಿದನು। ಹಿರಿಯರಿಗೆ ಸಂಗರದ ಭೂಮಿಯ। ಮರುತಜನ ಹೊಗಲೀಸದಿರು ಹೊರಗಿರಿಸು ಹೋಗೆಂದ ॥ ೯೯ ॥ ಈತ ನಡೆದನು ವಾಯುಪಥದಲಿ। ವಾತಜನ ನಿಲಿಸಿದನು ಜಲಧಿಯ । ಸೇತುವಿನ ದಕ್ಷಿಣದದೆಸೆಯಲಿ ತಿರುಗಿ ನಡೆತಂದು ॥ ಪಾತಸುಸುರಿದ ನೊಯ್ಯನಜ ನಾ । ಜಾತಕಂಗಲೆ ಜೇಯ್ಯ ಬಂದನು । ಧೀತನೌಷಧಿ ಸಹಿತಲೇ ಬಂದಡರ್ಪ ನೀಗೆಂದ ॥ ೧೦೦ ॥ ಆದರೆನ್ನನು ಕೊಂಡು ನಡೆ ಲವ। ಣೋದಧಿ ಕ್ರಮನೆಡೆಗೆನಲು ಹರಿ। ಪಾದ ಪದ್ಮಾರಾಧಕನು ಕೊಂಡೊಯ್ದು ನಜ ಸುತನ ॥ ಆದಿಯಮಲ ಬ್ರಹ್ಮವಿದ್ಯಾ। ವಾದಿಗಳ ಸುಖಮುಯದ ಪರಮಾ। ಹ್ಲಾದ ಕಿವಿಮ್ಮಗಿಲೆನಲು ಹೊಗಿದನಾ ವಿರಂಚಿಸುತ ॥ ೧೦೧ ॥ ಹೊಗಳಿದರು ಜಾಂಬವ ವಿಭೀಷಣ । ನೆಗಳೆ

ಕೊಂಡಾಡಿದರು ಅನಿಮಿಷ | ರೊಗುವಿಗೆಯು ಹೂಮಳೆಯ ಸುರಿಸಿದ ರಂಜನಾಸುತನ || ನಗಧರನ ರಾಮಾಂಘ್ರಿ ಭೃತ್ಯನ | ವಿಗಡ ರೋಮ ಸಹಸ್ರಲಿಂಗನ | ಬಿಗಿದ ಪಂಚೇಂದ್ರಿಯದ ನಿಗ್ರಹ ವಜ್ರಕಾಯನನು || ೧೧೨ || ಮಗನೆ ಬಂದ್ಯೆ ಬ್ರಹ್ಮವೈಭವ | ಸುಗುಣ ಬಂದ್ಯೆ ಜಗದ ಜೀವ ಕು | ಮಾರ ಬಂದ್ಯೆ ಶತೃಭೀಷಣ ತಂದೆ ಹನುಮಂತ || ಮಿಗೆ ಭಗೀರಥ ವಂಶವಾರುಧಿ | ಮೃಗಧರನೆ ಬಂದ್ಯೆ ಮಹೀರುಹ | ಮೃಗ ಕದಂಬಕ ಪ್ರಾಣ ವನಿರುತ ಬಂದೆನ್ನೈಯೆಂದ || ೧೧೩ || ಮದ್ದನಾವ್ ತರಹೇಳಿದರೆ ಕಿ | ತ್ತದ್ರಿಯನು ತಂದೀ ವಿವೇಕದ | ಮುದ್ದು ತನವನು ನೋಡಿದ್ಯೆ ಲಂಕಾಪುರಾಧಿಸನೆ || ಇದ್ದಡೀ ಹನುಮಂತ ನೀ ಜಲ | ಪೆದ್ದಿತೆಂದಾವ್ ಮೇಗೆ ಮೊದಲಲಿ | ಹೊದ್ದಿಸಿದ ನುಡಿ ಗೂಣಯವು ನಮಗಿಲ್ಲವಲೆ ಯೆಂದ || ೧೧೪ || ಈತನನು ಹೊಗಳುವರೆ ಜಿಹ್ವೆಗ | ಳೀತರವು ನಮ್ಮವು ಚರಾಚರ | ಚೇತನನ ಚೈತನ್ಯವಾಯು ಕಣಾ ನಿಧಾನಿಸಲು || ಈತಗಿಂದಧಿಕರು ವಿಚಾರಿಸೆ | ಭೂತ ನಿಕರದೊಳಿಲ್ಲ ವಿದು ಸಾ | ಕ್ಷಾತ ಪುರಾಣ ಪ್ರಸಿದ್ಧ ರಹಸ್ಯವಲೆಯೆಂದ || ೧೧೫ || ಎಲೆ ವಿಭೀಷಣದೇವ ಕಾದಿರು | ದಳದುಳವ ಹಾಯಿದ ಪೊಳಸುರರು | ಬಳಲಿದ್ಯೆ ಹನುಮಂತ ಕಡುಗುಣವಂತ ಬಲವಂತ || ಅಲಸದೆನ್ನಯ ಮಾತ ಮನ್ನಿಸಿ | ಸಲಿಸಿದ್ಯೆ ಯೆಲೆತಂದೆ ಯೆನುತು | ಜ್ವಲಿಸುವವುಷಧ ನಾಲ್ಕ ಕಿತ್ತಿಳುಹಿದ ಮಹೀಧರವ || ೧೧೬ || ಭರವ ಮೂರ್ಛೆಯಳಿಸ್ಪ ರಘುಕುಲ | ದರಸನನು ನೋಡಿದನು ಪಾಡಿದ | ನರಪತಿಯ ಲೀಲಾ ಚರಿತ್ರವನೆನುತಲಜಸೂನು || ಗಿರಿಯ ಲೌಷಧಿ ನಾಲ್ಕರಲಿ ತಾ | ನರಿದು ಕರಣಿ ವಿಭೇದಗಳ ನಂ | ಚರಿತನಲಿ ಸಂಧಿಸಲು ಬಳಿಕುದ್ಯೋಗಪರನಾದ || ೧೧೭ || ಸರಸರಿಸಿ ನಡೆತಂದು ಸಚರಾ | ಚರ ಪರಿಯ ನಾಸ್ಯದಲಿ ಬೆರಳಿಂ | ದೊರಸಿ ಹಿಂಡಿದ ನಮುಲ ಸಂಜೀವನಿಯ ಮೂಲಿಕೆಯ || ನರ ಚರಿತ್ರದರಾಯ ತೊರವೆಯ | ನರಹರಿಯ ಬಹಳಾಭ್ಯುದಯದ | ವಿರಚನೆಯ ಬಣ್ಣಿಸಲು ಗೋಚರಿಸಿದುವು ತನಗೆಂದ || ೧೧೮ || ಹರುಷ ಮಿಗಿಲಾ ಸೃಷ್ಟಿಕರ್ತನ | ಹಿರಿಯ ಮಗನೆತ್ತಿದನು ಸಮನಂ | ತರದಿ ಲಾದಿ ಫಣೀಂದ್ರನನು ಮನುಜೇಂದ್ರ ಚಂದ್ರಮನ || ಶರಧಿ ಸಮ್ಮಾನಿಸಿತು ಸುರಪುರ | ದರಸ ಮೊದಲಾದಖಿಳ ಲೋಕೇ | ಶ್ವರರು ಹೊಯಿಸಿದ ರೊಸಗೆವರೆಗಳ ನಿಜಪುರಂಗಳಲಿ || ೧೧೯ || ಜಾಣನಲ್ಲಾ ಜಾಂಬವನು ಗೀ | ರ್ವಾಣ ಧನ್ವಂತರಿಯ ಮಗನಾ | ಘ್ರಾಣದಲಿ ಹಿಂಡಿದನು ತೊಟ್ಟನು ಕೈಯ್ಯಲೌಷಧಿಯ || ಕೋಣಪರು ನಟಸವರೊಲಾ ಕಪಿ | ರಾಜ ಮೊದಲಾದಖಿಳ ಸುಭಟರ | ಪ್ರಾಣವನು ನೆಗಹಿದನು ರಣದೊಳಗಾ ಸುಷೇಣಕನು || ೧೨೦ || ಎದ್ದವರ ಕೈಯಿಂದ ರಣದೊಳ | ಗಿದ್ದ ರಕ್ಕಸ ವೆಣನ ನೆಳಿವೆಳಿ | ದದ್ದಿಸಿದ ರಬುಧಿಯಲಿ ವಾರಣ ವಾಜಿಗಳು ಸಹಿತ || ಇದ್ದ ಮರ್ಕಟ ನಾಯಕರ ರಣ | ದೊದ್ದೆಗರ ನೇಳಿಸುತ ತಮ್ಮಗೆ | ಮುದ್ದನೋಡಿದ ರತುಲ ಭುಜಬಲ ರಡಗಿತದ್ರಿಯಲಿ || ೧೨೧ || ಮರ್ದಿಸಿದ ಔಷಧಿಯ ಬಾಲದ | ಲುದ್ದಿ ಕಟಕದಮೇಲೆ ಚಲ್ಲಲಿ | ಕೆದ್ದುದಸಿಬರ ಚರ್ಮಶೋಣಿತ ಮಾಂಸವೊಂದಾಗಿ || ಸಿದ್ರೆ ತಿಳಿದಂದದಲಿ ಬಲು ಉ | ಜ್ಜಿದ್ದು ಬೊಬ್ಬೆಯನಿಡಲು ನಿದ್ರೆಯ | ಲಿದ್ದ ರಾಕ್ಷಸನಿಕರ ಬಲು ಭಯದಿಂದ ಕಳವಳಿಸೆ || ೧೨೨ || ಕೇಳಿದ್ಯೆ ಬಳಿಕೆದ್ದುದೆಪ್ಪ | ತ್ತೇಳು ಕೋಟಿ ಪ್ಲವಗ ನಾಯಕ | ರಾಳು ಸಹಿತೊಂದೇ ಕ್ಷಣಾರ್ಧದೊಳೇನು ವಿಸ್ಮಯವೊ || ಶೈಲತರು ಸಂಕು

ಲದಿ ರಘು ಭೂ । ಪಾಲಕನ ನೋಲೈಸುತಿರ್ದುದು । ಕಾಳಗದೊಳಗಿವಾಯಿತೆಂಬುದ ನರಿಯುರವರೆಂದ ॥೧೩॥ ಎಲೆ ಮುನೀಶ್ವರ ಹೇಳಿದೀಕಥೆ । ನೆಲೆಗೊಳದು ಚಿತ್ರದಲಿ ಲಕ್ಷ್ಮೀ । ನಿಳಯನೆಂದೇ ನುಡಿವೆ ರಘುರಾಜೇಂದ್ರ ಚಂದ್ರಮನ ॥ ಅಳಿವ ತೋರದಿ ರಕ್ಷಿಯಂಗೊಡ । ನುಳಿವ ತೋರದಿರನುಚರರಿಗದ । ರೊಳಗನರುಹಿಪ ಬೇಕೆನುತ ನುಡಿದರು ಕುಮಾರಕನ ॥೧೪॥ ಇದು ಕಣಾ ನರನಾಟಕದ ರೂ । ಪದ ವಿನೋದವಿದೀಗಲಾ ದಶ । ವದನ ನುಳಿದಯಹಾಸುರೋರುಗ ಭಟರ ಕೈಯಿಂದ ॥ ಉದುಗಲಸಿದಾಯುಷ್ಯವನು ಕೇಳ । ದಿದ ನಚ್ಯುತನ ನಚ್ಚರಿಯ ಬೀ । ರಿದನು ಬಾಧೆಗಳುಂಟೆ ಬೊಮ್ಮಕೆ ಬೆರಗಧೇನೆಂದ ॥೧೫॥ ಬೆರಗದಲ್ಲವೆ ಮುನಿಪ ರಘುಕುಲ । ದರಿಕೆಯಿಸಿ ತಾನಿರಲು ಪವನಜ । ನರಿಕೆ ಗುಂದಿದುದಿಲ್ಲ ಶರಣನು ರಣದಿ ಜೀವಿಸಿದ ॥ ಉರುವ ಜಾಂಬವದೇವ ಕಾಯುವ । ಧೊರೆಯುನಿಹ ವಿಸ್ಮಯವೊ ನೀ ನಮ । ಗರುಹಬೇಕೆಂದೆರಗಿದರು ಕುಶಲವ ಕುಮಾರಕರು ॥೧೬॥ ಧರಣಿಜೆಯ ಸದ್ದಿಯನು ತಂದಂ । ದರಸ ರಾಘವನಿತ್ತ ವರದಿಂ । ದಿರವು ಘಟಿಸಿತು ಮಾರುತಿಗೆ ನೈರುತನ ನುರೆ ಜರೆದು ॥ ಶರಣುಹೊಕ್ಕ ವಿಭೀಷಣಂಗಾ । ಯ್ತಿರಲು ಬೊಮ್ಮನವರದಿ ನಜಸುತ । ಹರಣ ಹಿಂಗದೆ ಬದುಕಿದನು ಬಾಣದಲಿ ಕಮಲಜನ॥೧೭॥ ಉಳಿದರರದರಿಂದವರು ಮಾನವರು। ತಿಳಿಯಲಧಿಕರು ದೇವರಿಗೆ ವೆ । ಗ್ಗಳಿಯ ಭಕ್ತರು ಜನನ ಮರಣ ವಿಹೀನನರಹರನವರು ॥ ನಳಿನನಾಭನ ಭಜಕರೀ ನ । ಗ್ಗಳರೊ ಜಗದಲಿ ದೃಷ್ಟವಿದು ಕೇ । ಳೆಲೆ ಕುಶಾನುಜ ಕೇಳು ಕುಶ ಕೇಳೆಂದು ಮುನಿ ನುಡಿದ ॥೧೮॥ ಬಿನ್ನವಿಸಿದರು ಜಾಂಬವರು ಪ್ರತಿ । ಪನ್ನ ಹನುಮನ ಶಕ್ತಿಯನು ಮೇ । ಲುನ್ನತದ ಸಾಹಸದ ಸುಗ್ರೀವಾದಿ ಸುಭಟರಿಗೆ ॥ ಜೊನ್ನವಿಲ್ಲದ ರಜನಿಯಲಿ ಸಂ । ಪನ್ನನುರೆ ಭುಜಬಲವ ಮಿಗೆ ಪೇ । ಳ್ದುನ್ನತದ ಸಂತೋಷ ಶರಧಿಯೊಳದ್ದಿದನು ನೃಪರ ॥೧೯॥ ವಾಯುಜನ ಕಂಡಸುರರಿಪು ಪುಳಕಾಯ ಮಾನಿತನಾಗಿ ಸಾಸಿರ । ಬಾಯಿ ಶೇಷನ ಹೊಗಳಿಕೆಯ ಹೊಗಳಿದನಲೈ ಬಳಿಕ॥ ಆ ದಿವ್ಯೌಷಧಿಗಳನು ಕಟಕದ । ರಾಯ ವೈದ್ಯನು ಸಂವರಿಸಿದನು । ಮಾಯವಾದುದು ಶೈಲ ಹನುಮನ ಹಸ್ತದಲಿ ಬಳಿಕ ॥೨೦॥ ಕಪಿಗಳುಬ್ಬರ ದಬ್ಬರವು ಕಾ । ಶ್ಯಪಿಯ ಕುಂಭಿಕ್ಕಿದುದನಿಮಿಷ । ರಪರಿಮಿತ ಸಂತೋಷದಲಿ ಸುರಲತೆಯ ಕುಸುಮಗಳ ॥ ತಪನವಂಶದ ತೊರವೆಯರಸನ । ವಿಮಳ ಬಲದಲಿ ಸೂಸಿದರು ರಣ । ಕುಪಿತಬಲ ಬಳಿಮಸಗಿತಲ್ಲಿರಮೇಳೆ ರಜನಿಯಲಿ ॥ ॥೨೧॥

ಮುವ್ವತ್ತಾರನೆಯ ಸಂಧಿ ಸಮಾಪ್ತಂ.

ಮುವ್ವತ್ತೇಳನೆಯ ಸಂಧಿ.

ಸೂಚನೆ॥ ದೇವ ರಾಮನ ಕಟಕ ಮೃತಸಂ । ಜೀವನಿಯೊಳಸುವಡೆದ ಬಳಿಕ ವಿ ।
ಭಾವರಿಯೊಳಾಯಿತ್ತು ಲಂಕಾಪುರ ಪುನರ್ದಹನ ॥

ಪದ್ಯ॥ ಕುಶನೆಕೇಳೈ ನಿರ್ಭರದ ನಿಗು । ರಿಸಿದ ಹರುಷದ ನಿಸ್ಸಪತ್ನದಿ । ನಸುರ ಕುಲ ವಿರ್ದುದು ಸುಸಿಪ್ರಾ ಭರದ ಭಾರದಲಿ ॥ ಕುಶ ಸಮುಜ ಕೇಳವರು ಮಾಡಿದ ।

ಹೊಸ ಪರಿಯ ಕನಲಿಕೆಯ ಕೆಣಕಿದ । ವಿಷಮ ವಿಗ್ರಹದಘನವ ಪ್ರಾರಂಭ ಸಂಭ್ರ
ಮವ ॥೧॥ ರಚಿಸಿದರು ದಶಮುಖದ ಉಗ್ರ । ಪ್ರಚುರ ಪಾವಕನನು ಸರೋಷದ ।
ಲಚಲ ಸಾಹಸ ಮಲ್ಲ ರಾಘವನಾಥ ಲಕ್ಷ್ಮಣರು ॥ ವಚಿಸಲೇನದನಖಿಳ ಸುಭಟ ।
ಪ್ರಚಯ ನಿರಸನ ನಿರ್ಗಳಿತ ತರು । ನಿಚಯದಲಿ ನೆಲೆ ಗೊಳಿಸಿದರು ಪವಮಾನ ಬಾಂ
ಧವನ ॥೨॥ ರಣ ಮಹೀಮಂಡಲದ ಭೈರವ । ಗಣದ ದೀಪಾಳಿಯೋ ಮಹೇಶನ ।
ಹಣೆಯ ಹುತವಹ ನಟ್ಟಹಾಸವೋ ಶಿವಮಹಾ ದೇವ ॥ ಸೆಣಸಿ ಜ್ಯೋತಿರ್ಲೋಕ ವೀ
ರಾ। ವಣನ ಪಟ್ಟಣ ಕೈದಿ ಕದನವ । ಕೆಣಕ ಲೈದಿದ ದಂಡೋ ಕೈಗೊಳ್ಳಿಗಳೋ ಕಪಿ
ಬಲವ ॥೩॥ ಇಂದರು ದುರ್ಗವನು ಬೊಬ್ಬೆಯ । ತೋರಿಸದೆ ತುಮುವರೆಗೆ ಕಿಡಿಗಳ ।
ಹೊದ್ದಿಕೆಯ ಪೂರಿಕೆಯ ಲೊಳ ಬಿದ್ದಾಳು ವೈರಿಯಲಿ ॥ ಮೂರು ಸುತ್ತಿನ ವಳಯದಲಿ
ಕಾಲೂರಿ ನಿಂದುದು ನಿಂದ ವೈಯ್ಯಲಿ ॥ ತೋರಿತಾ ಕಪಿಸೇನೆ ಪರಿವೇಷದ ಪ್ರಲರಿ
ಯಮನ ॥೪॥ ರಣ ಪರಿಶ್ರಮ ನಿರ್ಗಣದ ಭಾ । ರಣೆಯ ನಿದ್ರಾಂಗನೆಯ ನಿಬಿಡೆ ।
ಪ್ರಣಯ ಪಟುಭಟ ರಿರ್ದ ರಬಲಾ ಜನದ ತೋಳಿನಲಿ ॥ ಮಣಿವ ಮೋರೆಯ ತೂಕ
ಟಿಕೆಗಳ । ಕಣುಗ ಳರೆಮುಚ್ಚುಗಳ ಹಯ ವಾ । ರಣ ಕದಂಬಕ ವಿದ್ದುದುರುಶಾಲಾ
ಸುವೀಧಿಯಲಿ ॥೫॥ ಬಳಿಕ ಬೊಬ್ಬಿರಿ ದಬ್ಬರಿಸಿ ಕೈ । ದೊಳಸು ಕಾರರು ಹೊಕ್ಕು
ಹೊಯ್ದರು । ತೋಳಲಿಕೆಯ ತರುಚರರ ಕೈ ಗೊಳ್ಳಿಗಳ ಕಡುಹಿನಲಿ ॥ ಬೆಳಗಿಸಿದರುರಿ
ಯನು ಮಣಿಮಯ । ನಿಳಯದ ಲೋವೆಗಳ ಗಾ । ವಳಿಯ ಮಾಡಿದರುರುವಣಿ ರೊಳ
ಹೊಕ್ಕರಗಲದಲಿ ॥ ಬೆದರಿಕೈದುವ ನರಸುತೇಳುವ । ಮದಮುಖರ ನುರಿಗೊಳ್ಳಿಗಳಲೇ ।
ಸದೆದು ಸಂಹರಿಸಿದರು ಬಾಗಿಲುಗಳಲಿ ಮನೆಮನೆಯ ॥ ಕುದುರೆಗಳ ಹಲ್ಲಣಿಸುವರ
ಮದ । ರ ದಿನಿಗಳ ಹಣ್ಣುವರ ನುರಿಯಲಿ । ಹುದುಗಿ ಹರಿದಾಡುವರ ಹೊಗಿಸಿದರಂತ
ಕನ ಪುರವ ॥೬॥ ಕಳಕಳದಲಿವ ಹನುಮ ನಿವ ನ । ಗ್ಗಳ ಸುಷೇಣ ಗವಾಕ್ಷ ಗಜ ನಿವ ।
ನಳ ಸುರೇಂದ್ರಜಸೂನುನಿವ ನೀಲ ನಿವನೆನುತ ॥ ಬಳಿಸಲಿಸಿ ಬಲಿದಂಕವಲಿ ತ ।
ಮ್ಮೊಳಗೆ ತಾವೆರಡಿಟ್ಟು ಪುರ ರವು । ಕುಳದ ರಕ್ತದೊಳಾಳೆ ಹೊಯ್ದಾಡಿದರು ಹರಹಿ
ನಲಿ ॥೭॥ ಬೊಬ್ಬೆ ಬಲಿದುದು ನಗರದಲಿ ಬಳಿ । ಕುಬ್ಬ ದುರಿದಿವದಂತ ಪರಿಯಂ ।
ತಬ್ಬಿದುದು ಕತ್ತಲೆಯ ಕಲ್ಪದ ಕಿಚ್ಚಿನಂದದಲಿ ॥ ಎಬ್ಬಿಸಿತು ಕಳಕಳಕೆ ಮೂಜಗ ।
ದೊಬ್ಬ ಗಂಡನು ಕಂಡು ಬೆಳಗಿಪ । ಬೆಬ್ಬಳದಲೇರಿದನು ಮಣಿಮಯ ದಿವ್ಯ ಪುಷ್ಪ
ಕವ ॥೮॥ ಮಾರಿ ಮತ್ತೈತಂದು ದಕಟಿಂ । ದ್ವಾರಿ ಹರಿ ಮೇಖಲೆಯ ಹರುಹಿದ ।
ನೂರೊಳಗೆ ಕರೆ ಮಗನನೆನುತುತ್ತರದ ಗೋಪುರವ । ಸಾರಿ ಸಂಧಿಸಿತಧಿಕ ಭೀತಿಯ ।
ಭಾರಣೆಯುಲಿರಲುರಿ ಛಡಾಳಿಸಿ । ಭೋರೆನುತ ಹಬ್ಬಿದುದು ಹನುಮನ ಕಿಚ್ಚಿನಂದದಲಿ॥
ಕೂಡಿದುದು ಬಳಿಕುಗಿದ ಸಿದ್ರೈಯ । ಜೋಡ ಜೋಡಿಸಿದಿಭ ವರೂಥದ । ಗಾಡಿಕೆಯ
ಸಂಘಟದ ಸಮರದ ಸೇನೆ ಚಳಕದಲಿ ॥ ತೋಡುಕೈದುಗಳುಬ್ಬರದ ಹೊ । ಮ್ಮೊಡಿ
ಗೆಯ ಹೊದರುಗಳ ಬಿರುದಿನ । ಬೀಡು ಕಾರರು ಬೀದಿ ವರೆದಟ್ಟಿದರು ಬಲಿಮುಖರ॥೧೧
ಕುಂಭ ನೊಂದೆಸೆಯಲಿ ರಣೋಗ್ರ । ನಿಕುಂಬ ನೊಂದೆಸೆಯಲಿ ಮಹಾಗ್ನಿ । ಸ್ತಂಭನೆಯ
ಖಳರೊಗ್ಗಿನಲಿ ತಗ್ಗಿಸಿದರಿವ ರಥಟ ॥ ಜಂಭರಿಪುಜಿತು ಬೆರಗುಗೊಂಡು ನಿ । ಕುಂಭಿ
ಣಿಯ ಸಮ್ಮುಖ ಸ್ವಾ । ಯ ಂಭು ಶರ ಕನಸಾಯ್ತೆನುತ ಹೊರವಂಟ ನರಮನೆಯ॥೧೨॥

ಬೆರಸಿತಾತನ ಬಳಿಯುಲಂದಿನ | ಖರನಮಗ ಮಕರಾಕ್ಷ ರಜನೀ | ಚರ ಸುಪಾರ್ಶ್ವಿಕ ಶೋಣಿತಾಕ್ಷಪ್ರಮುಖ ಭಟನಿಕರ || ಶರಳಸಾರದ ಲಕ್ಷಿಗಳ ನಿಳೆ | ಗಿರಿಸಿ ನಭಕೆಬ್ಬಿಸಿದ ರಹಿತನ | ಶಿರವ ಸುರಿಗೊಳ್ಳಿಗಳ ಬೆಳಗಂತರಿಸೆ ನಗರಿಯಲಿ |೧೩|| ಜರೆದು ಜೋಡಿಸಿ ಕೇರಿಕೇರಿಗ | ಳಿರಿತ ಕಾವರ ಸಿಕ್ಕಿದರು ಮು | ಕ್ಕುರುಕಿ ಮುಂಬರಿ ವತಿಬಲರ ಶಿಕ್ಕಿದರ ಸಬಳದಲಿ || ತರುಬಿ ಕಾದುವ ಕಲಿಗಳೆಲುಬುಗಳ | ಮುರಿದು ರಕ್ತವಹಿಂಡಿ ನೆತ್ತರ | ದೊರೆಯ ಹರಿಸಿದ ನೂರೊಳಗಲವೊಳಸುರ ಭಟನಿಕರ ||೧೪|| ಅಲ್ಲಿಗಲ್ಲಿಗೆ ತರುಬಿ ಕಾದುವ | ಕಲ್ಲುಮರ ನಣ್ಣಗಳ ನಗಲಕೆ | ಕೊಲ್ಲುಗೋಲೆಯಲಿ ಕೊಂದು ಕೆಡಹಿದ ರುಸುರು ಹಸರುಗಳ || ಹಲ್ಲುಗಿರುಕಿನ ಹಣುಗು ತಲೆಗಳ | ತಲ್ಲಣದ ತಲೆವಿಟ್ಟಿಗಳ ಹರಿ | ಗಲ್ಲುಗಳ ಹರಿಸೇನೆ ಸೈಗೆಡೆದಿದ್ದುದಗಲದಲಿ ||೧೫|| ಬಳಿಕ ನಳನೀಲಾದಿ ಸುಭಟಾ | ವಳಿಗಳೊತ್ತಂಬರಿಸಿ ರಕ್ಕಸ | ದಳವ ನಾನುತ ನಿಲುತ ತಾಕತ ತವಕದಲಿ || ಕಲಹವನು ಕೈಗಟ್ಟಿಕೊಂಡೊಳ | ನಿಳುಹಿದರು ದುರ್ಗವನು ಭಯದಲಿ | ನಳಿನಸಖ ನೇರಿದನು ದುರ್ಗವ ಸಿಂಧುದಿಗುತಟವ |೧೬|| ಮೋಹರಿಸಿದವು ಕಣನೊಳಗೆ ಸ | ನ್ನಾಹದಲಿ ಬಲವೆರಡು ಬಳಿಕು | ತ್ಸಾಹ ರಣಭೇರಿಗಳು ಮೊಳಗಿದವಸುರ ಸೇನೆಯಲಿ || ವಾಹ ವಾರಣ ರಥವರೂಥ | ವ್ಯೂಹ ವೀರ ಪದಾತಿಚಯ ವವ | ಗಾಹಿಸಿತು ಕಾಳೆಗಕೆ ಕಪಿಸೇನಾ ಕದಂಬದಲಿ || ||೧೭||

ಮುವ್ವತ್ತೇಳನೆಯ ಸಂಧಿ ಸಮಾಪ್ತಂ.

ಮುವ್ವತ್ತೆಂಟನೆಯ ಸಂಧಿ.

ಸೂಚನೆ|| ವೈರಿ ವಿಜಯಸ್ತಂಭನನು ಜ | ರ್ಝರ ಭುಜ ಸೌರಂಭನನು ರಣ | ಧೀರ ನಹ ಕುಂಭನನು ಕೆಡಹಿದ ನಾಜಿಯಲಿ ರವಿಜ ||

ಪದ್ಯ|| ಎಲೆ ಧರಾಧಿಪ ಸೂನು ಕೇಳ್ ಬಲಿ | ಬಲಕೆ ತಲೆ ಘಟ್ಟಿಂದು ದಿವಿಜಾ | ವಳಿಯೊಳಿದ್ದ ನಿಶಾಟ ಬಲ ಮಲತಾತು ನಿಂದಂತೆ || ಕಲು ಮರನ ಕೈದುಗಳ ನೆಗಹಿನ | ಕಳಕಳದ ಬೊಬ್ಬೆಗಳ ಕೋಲಾ | ಹಳದ ಕ್ಷೆಮನ ದುಭಯ ಬಲ ಮೋಹಿದುದು ಮುಂಬಿನಲಿ ||೧|| ತೆಗೆದು ತಲೆಯೊತ್ತುವ ನಿಯುದ್ಧದ | ತಗರಿನಂ ತರಿಬಲವ ಹಳಚಿದ | ನಗ ಮಹೀಜಾ ಯುದ್ಧದಲಿ ವರ ವಸ್ತ್ರ ಸಾದಲಿ || ಗಗನವನು ತೋಳ್ದರು ಹೊದಿಸಿತ | ಜಗಗಳನು ಪದ ಧೂಳಿ ಧೂಳಿಯು | ನೆಗಹಿ ನೆತ್ತರ ಕಡಲ ಲದ್ದಳವದ್ದು ದಗಲದಲಿ ||೨|| ಬೆರೆಸಿ ಥಾಳ ಧೂಳಿನಲಿ ಕೊಪ್ಪ | ರಿಸಿ ಖಾಡಾಖಾಡಿಯಲಿ ನೋ | ಹರಿಸಿ ಮೋಡಾಮೋಡಿಯಲಿ ಮುಷ್ಟಿಪ್ರಹಾರದಲಿ || ಗಿರಿಗದಾ ಘಾತದಲಿ ಖಂಡೆಯ | ತರು ವಿಘಾತಿಯ ಲಂಬು ಕಲುಗಳ | ಕರ ಚಮತ್ಕೃತಿಯಿಂದ ಕಾದಿತು ಸೇನೆ ಸೇನೆಯಲಿ ||೩|| ಚೂಣಿ ಬಿದ್ದುದು ಜವನ ಘಾತ | ಶ್ರೇಣಿ ಯೆದ್ದುದು ಭೂತ ಯೂಥಪ | ಗೋಣ ಗತಿಯ ಲಿ ಕೈಯ್ಯೊಡನೆ ಕುಂಭನ ಕರಾಯುತದ || ಬಾಣ ವೃಷ್ಟಿಯ ಬಹಳತೆಯ ಸರಿ | ಗಾಣಿಸಿತು ಕಪಿ ಯೂಥ ನಾಥರ | ತಾಣದಲಿ ತಳವೆಳಗು ಗೊಳ್ ತರಣಿಜ ಸಮೀರಜರು ||೪|| ತಾಗಿದನು ಜೋಡಿಸಿದ ರಣಗಲಿ | ಯಾಗಿ ಪವನ ಪತಂ

ಗಜರ ಪಡಿ | ಪಾಗಿನಲಿ ಪಾವಕರ ಪಂಕೇಜಜರ ನಂದನರ || ತಾಗಿ ಗವಯನ ಗಜ
ಗವ ಕ್ಷನ | ಕೂಗಿಡಿಸಿ ಪಡಿ ಭವಿಸಿ ರವಿಜನ | ಮೇಲೆ ಬಿದ್ದನು ಕುಂಭ ನಹಿತ ವಿಜೃಂಭ
ನುರವಣಿಸಿ ||೫|| ಮೂಕೊರೆಯುರ್ಕೈ ರಕ್ಕಸರು ನಿಮ | ಗೇಕೆಲವೊ ರಣವಕಟ ತಂದೆಯ
ಕೈಯ್ಕ ತನವನು ಕಾಣು ತಂಷೈಸುವರೆ ಕಾಳಗಕೆ || ಕಾಕಬಲ ಖಳನೊಬ್ಬ ನಂ
ಚಿಸು | ಸೋಕಿನಲಿ ಸುಳಿವವನು ಕಳವಿನ | ಕೈ ಕವಣೆಯುವನೊಬ್ಬ ಭಂಡರು ಜಗಕೆ
ನೀವೆಂದ ||೬|| ಎಷ್ಟು ಸಾಹಸ ಕೊಂಡಡೆಯು ನಿ| ಮ್ಮಿಷ್ಟ ಕೈನಶವಾಗದಿದು ೯ರ|
ಮೇಷ್ಠಿ ಲಿಖಿತ ತದೀಯ ಲಿಖಿತವ ಮೀರಲಾ ರಳವು || ಭ್ರಷ್ಟತನದಲಿ ನಡೆದು
ಲೋಕಕೆ | ಭ್ರಷ್ಟರಾದಿ ರಲಾ ಯೆನುತ ಬಲು | ಮುಷ್ಟಿಯಲಿ ಒಲಿದೆರಗಿದನು ಕಲಿ
ಕುಂಭನನು ರವಿಜ ||೭|| ಅಣಮ ಗದೆಯಲಿ ರವಿಸುತನ ಬಲು | ಗಣೆಯ ಮುಷ್ಟಿಯ
ಲಸುರ ನಾ ದಿಗು | ಗಣವು ಮೂರ್ದನಿ ದೋರಲಾ ಯೆಂದೆರಗಿದನು ಕಪಿಯ ||
ಕಣುಗಳಲಿ ದೀವಿಗೆಯ ಬೆಳಗೋ | ರ ರಣೆಸೆ ಬಿದ್ದನು ನೆಲಕೆ ಬಿದ್ದಾ | ಕ್ಷಣ ದೊಳೆ
ಎದ್ದದ್ದಬ್ಬರಿಸಿ ತುಡುಕಿದ ನರಿಭಟನ ರಥವ ||೮|| ಭಾರದಲೀತ ರಿಪುಭಟ | ದಗ್ಗಿ
ಗೆಯ ಪಿಡಿದಿಪ್ಪ ನಾ ರಥ | ಬಿದ್ದ ದಂಬರ ತುದಿಯೊಳಂಬರ ಚರರು ಕೊಂಡಾಡೆ ||
ಹುದ್ದು ಹಾವಿಂಗೆರಗು ವೋಲಾ | ಗದ್ದರಿಸು ತೈತಂದು ರವಿಜನ | ಗುದ್ದಿದನು ಗುತಿ
ಯಿರಿದ ಕೋಪದ ಲವನಿ ದನಿದೋರೆ ||೯|| ರಾವಣನ ಕರಘಾತದಲಿ ಕಲಿ ಪಾವಮಾನಿ
ಮಹಾವ್ಯಥೆಯ ಗತ | ರಾಪದಲಿ ರಣ ಮುರಿದು ನಿಂದವೊಲಿನಜನುರೆ ನಿಂದು || ತೀವಿ
ದತಿಶಯ ರೋಷದಲಿ ಮಗು | ಳಾ ವಿಬುಧ ವಿದ್ವಿಷನ ವಿಪುಳ | ಗ್ರೀವವನು ತಿವಿದಾ
ಯೆನುತ ಭುಜಕೊಯ್ದು ಬೊಬ್ಬಿರಿದ ||೧೦|| ಥೊಪ್ಪನವನಾ ಘಾಯದಲಿ ನೆಲ | ಕಪ್ಪ
ಳಿಸೆ ಕಂಡನಿಲಸುತ ಯ | ನ್ನಪ್ಪ ಬಾ ಯನ್ನಾನೆ ಮಾಮಾ ಲೇಸು ಲೇಸೆನುತ ||
ಉಪ್ಪರಿಸಿ ಕುಣಿದಾಡಿ ಕಡು ಬಿಗ | ದಪ್ಪಿದನು ಯುವರಾಜನನು ಮೇಲಿಪ್ಪ ಸುರರಿಗೆ
ತೋರಿ ಕೊಂಡಾಡಿದನು ಕಪಿವರನ ||೧೧|| ಎದ್ದನವ ನಿನನಂದನನ ಬಲು | ಗುದ್ದ
ಬಗೆಯದೆ ಬರ ಸಿಡಿಲು ಮುಳಿ | ದೆದ್ದು ಮಂದರ ಗಿರಿಯ ಶಿಖರಿಯ ನೆರಗು ವಂದದಲಿ|
ಅದ್ದಲಿಸು ತೆರಗಿದನು ಕಂಗಳ | ಕದ್ದವೈ ಕತ್ತಲೆಯ ನಿರುಳಿನ | ಮದ್ದ ನೆನೆದನು
ನೊಂದು ಕಲಿಗಳ ದೇವ ಸುಗ್ರೀವ ||೧೨|| ತರಹರಿಸಿ ಕೊಂಡೊಡನೆ ರವಿಸುತ | ನುರು
ತರದ ಕ್ರೋಧದಲಿ ಕುಂಭನ | ಶಿರವ ತಿಪಿದನು ತಿವಿದ ಘಾಯವ ನೆಣಿಸ ದಬ್ಬರಿಸಿ ||
ಗಿರಿ ಗುಹಾ ವಳಯದಲಿ ಬಲ ನಿ| ಷ್ಠುರದ ಮುಷ್ಟಿಯ ಶಬ್ದ ಸುಳಿಯಲು | ಮರಳಿ
ತಿವಿದನು ನಿಮ್ಮ ರಘುರಾಜೇಂದ್ರ ಬಾಂಧವನ ||೧೩|| ತಿವಿದ ಘಾಯವ ನಣದು
ಮುಷ್ಟಿಯ | ಲವಣಿಯಿಂದೆರಗಿದನು ಕುಂಭ | ಶ್ರವಣಜನ ಕುಂಭಾಂಬುವ ವೊಲಂ
ಬೋಧಿ ತುಳುಕಾಡೆ || ಕವಿದು ಬಿದ್ದನು ನೆಲಕೆ ನೆಲ ಭಾ | ರವಿಸಿ ತಹಿಪನ ಶಿರಕೆ ಶಿರ
ದಲಿ | ನವರುಧಿರ ಪೊರಮುಟ್ಟು ದಾ ಬಿರಸಿಗೆ ದಿಶಾಗಜದ ||೧೪|| ಬಿದ್ದ ಕುಂಭನ ಕಾಲ
ಹಿಡಿ ದುಬ್ಬಿದ್ದು ನಭದಲಿ ತಿರುಹಿ ಕಲಹದ | ಕದ್ದಿಕಾರರ ದೇವ ದೇವಾಳಿಗಳು ಘೇ
ಯೆನಲು || ಅದ್ದಿಸಿದ ನಿಟ್ಟಂಬುಧಿಯ ಲವ | ನೆದ್ದು ಹರಿ ತಂದಿನ ತನೂಜನ | ಗದ್ದ
ವನು ಗುಡಿಲಿರಿವ ಕೋಪ ದೊಳೆರಗಿ ಬೊಬ್ಬಿರಿದ ||೧೫|| ಮುಳಿದು ಮರ್ಕಟ ರಾಯ ಪುನ
ರಪಿ | ಮುಳುಗಿಸಿದ ನಟ್ಟಂಬುಧಿಯ ಲಯ ಲವ | ಸುಳಿದ ತಿವಿದನು ತರಣಿಜನನಾ

ತರಣಿಸುತ ಖಳನ ॥ ಜಲಧಿಗಿಟ್ಟನು ಮತ್ತೆ ಮತ್ತವ । ಹಳಚಿದನು ಹರಿದಶ್ವಜನ ನರೆ । ಘಳಿಗೆ ನಣದುದು ಸಮರ ವೀಸರಿ ಸುಮನಸರು ಪೊಗಳೆ ।೧೬॥ ಸಾಯು ನಿವ ನೀಪರಿಯ ಲೆಂ ದಸ । ಹಾಯು ಶೂರಂ ಗೆಚ್ಚರಿಸಿದನು । ಮಾಯೆ ಪೊಗ ದನಿಲಜನು ಕೈಸನ್ನೆಯನು ಮಾಡೆ ॥ ರಾಯನಲ್ಲಾ ವೀರರಿಗೆ ರಘು । ರಾಯ ಬಾಂಧವ ಬಳಿಕವನ ಬಲು । ಕಾಯವನು ಸೀಳಿದನು ಹೋಳೆರಡಾಗಿ ನಿಮಿಷದಲಿ ॥೧೭॥ ಇಟ್ಟ ನದರೊಳಗೊಂದು ಹೋಳನು । ಪಟ್ಟಣಕೆ ಪೌಲೋಮಿ ಯರಸನ । ಪಟ್ಟಣಕೆ ಮಗುಳೊಂದ ಕಳುಹಿದ ನಾ ಕೃತಾಂತಕನ ॥ ಇಟ್ಟ ಹಾರವ ಹರಸಿ ಮೂಗಿನ । ಬಟ್ಟಗರ ಕೈಯಿಂದ ಕಳುಹಿದ । ಯಿಟ್ಟಡೆಯ ಹರುಷದಲಿ ನಿಜನಂದನಗೆ ದಿನನಾಥ ॥೧೮॥ ಸುರರು ಜಳಕುಬ್ಬಿರಿದು ಹುವ್ವಿನ । ಸರಿಯ ಸುರಿದರು ಸೂತ ಮಾಗಧ । ರೆರಡು ವೈಯಲಿ ಹೊಗಳಿದರು ಕೊಂಡಾಡಿ ಕಪಿಪತಿಯ ॥ ಸರಿಯದಾರೈ ನಿನಗೆ ನಂಬುಗೆ । ಗೊರವ ದೋರಡೆ ಸ್ವಾಮಿ ಕಾರ್ಯಾ । ದರ ಧುರೀಣತೆ ನಿನ್ನೊಳಾಯ್ತೆಂ ದಮರ ಮುನಿ ನುಡಿದ ॥೧೯॥ ಕೆಲಸ ಮುಗಿದುದು ಕುಂಭನೆಂ ಬ । ಗ್ಗಳಿಯ ಸುಭಟನ ರಣದೊಳಿತ್ತಣ । ಕೆಲಸವನು ಕೇಳ್ವೆ ಕುಶಾನುಜ ಕೇಳು ಕುಶ ಕೇಳು ॥ ಸುಲಭ ಮೂರುತಿ ತೊರವೆ ಯಧಿಪತಿ । ಕಲಿ ನೃಸಿಂಹನ ಕಿಂಕರನ ಕಡು । ಗಲಿ ನಿಕುಂಭಾಸುರನ ಜನ ಸಂಗ್ರಾಮ ಸಂಭ್ರಮವ ॥ ॥ ೨೦ ॥

ಮುವ್ವತ್ತೆಂಟನೆಯ ಸಂಧಿ ಸಮಾಪ್ತಂ.

ಮುವ್ವತ್ತೊಂಬತ್ತನೆಯ ಸಂಧಿ.

ಸೂಚನೆ॥ ಕಲಿ ನಿಕುಂಭನ ನನಿಲ ಸುತ ಗೆಲಿ । ದೊಲಿಸಿದನು ಜಯ ವಧುವ ನಾಕ್ಷರ ।
ಬಲುಹಿ ನಗ್ಗದ ಶೋಣಿತಾಕ್ಷನ ಕೆಡಹಿದನು ನೀಲ ॥

ಪದ್ಯ॥ ಕೆಣಕಿ ದಾ ಕುಂಭನನು ಗಗನದ । ಗಣಿಕೆಯರು ಕೊಂಡೊಯ್ಯೆ ಕಪಿವಾ । ರಣನ ನಾ ಬಳಿಯಲಿ ನಿಕುಂಭನುದಾರ ಶೌರದಲಿ ॥ ರಣಭಯಂಕರ ಹನುಮ ನದ ಸೈ । ರಣೆಗೆ ತಹನೇ ತರುಣ ಕೇಳಾ । ಕ್ಷಣ ವಿರೂಪಾಕ್ಷನ ಪೊಲುಗ್ರದಿ ಕದನ ಕನುವಾದ ॥೧॥ ಕೆಲಕೆ ಕಪಿಕುಲ ಸಾರ್ವಭೌಮನ । ತೊಲಗ ನೂಕಿ ಮಹೋಗ್ರ ಕೋಪದ । ಕೊಲೆಗಡಿಗ ನಿದಿರಾದ ನಾ ಕುಂಭಾನುಜನ ರಣಕೆ ॥ ಎಲೆ ಕುಮಾರಕ ಕೇಳ್ ನಿಕುಂಭನ । ಬಲದ ಭಾರಿಯ ಘೋರ ಬೇಡೆಡೆ । ಗಲಿಸಿ ಕೊಂಡುದು ಖಂಡ ಚಂಡ ಪರಾಕ್ರಮಾನ್ವಿತನ ॥೨॥ ಒತ್ತಿ ಬಿರಿಸುವ ಭಾನು ಬಿಂಬವ । ನೊತ್ತಿ ತೂಳುವ ಕಾಲಮೇಘದ । ವೊತ್ತಿದ ಪೊಲುರೆ ಮುಸುಗಿ ಮುಸುಕಿದರಸ್ತ್ರ ಸಾರದಲಿ ॥ ಮೃತ್ಯುವಲಾ ರಕ್ಕಸರಿಗೆ ಮು । ರು ತ್ರನೂಜನು ವಿಲಯ ಮಾರುತ । ನೊತ್ತಬರದ ಪೊಲುರಿ ಬಲಾಂಬುಧಿ ಬಲವ ಬರಿಕೈದ ॥ ೩ ॥ ರಥಿಕರನು ನುಗ್ಗೊತ್ತಿ ಗಗನದ । ಪಥಿಕರನು ಮಾಡಿದನು ಬಳಿಯಲಿ ಪೃಥುಲ ಬಲ ರಾವುತರ ನಡಸಿದ ನವರ ಬೆಂಬಳಿಯ ॥ ಪ್ರಥಿತ ನಾಗಾರೋಹಕರ ಬಲ ಮಥನ ನಗರಿಗೆ ಕಳುಹಿ ಸುಮನೋ । ರಥನು ಕಳುಹಿದ ರವರ ಬಳಿಯಲಿ ಬಹಳ ಪದ ಚರರ ॥೪॥ ಕಾಣಲಾದುದು ಬಂದ ಸುಭಟ । ಶ್ರೇಣಿ ನಿರುಪಮ

ದೇವ ಲೋಕದ | ಜಾಣೆಯರ ಜೀವನಡೆ ಲಲನಾ ಜನದ ಮೇಳದಲಿ ॥ ಭ್ರೂಣ ಹತ್ಯಾ
ದ್ಯಖಿಳ ಪಾಪ | ಶ್ರೇಣಿ ಹರಿಪದಭಕ್ತಿ ಯುಕ್ತರ | ಕಾಣು ತಡಗುವವ್ರೋಲು ನಿಮಿ
ಷದೊಳಡಗಿ ತರಿಸೇನೆ ॥೫॥ ಪಡೆ ಮಡಿಯೆ ಪಡೆಯೆನುತ ಕಲಿಗಳ | ಕಡುಹಿ ನಧಟ
ನಿಕುಂಭ ಘರಘರ | ದಚುಕಿಲಿನ ಜಗವಳುಕೆ ಬಾ ಹಪ್ಪಳಿಸಿ ಬೊಬ್ಬಿರಿದು ॥ ಆಡಸಿ
ಹರಿತಂದನಿಲತನುಜನ | ಕೆಡಕ ನಪ್ಪಳಿಸಿದನು ನಘ ಘು | ಮ್ಮಿಡಲು ನಿರ್ಘರ ಕಾಲ
ದಂಡಸಮಾನ ದಂಡದಲಿ॥೬॥ ನೊಂದನಾ ಕರದಂಡ ಹತಿಯಲಿ | ತಂದೆಯನು ನೆನೆಹುತ
ಕರತಳ | ದಿಂದ ತಡವರಿಸಿದನು ಶಿರವನು ಬಿರಿಯದಲೆ ಯೆನುತ ॥ ಮುಂದನೆಯ ಮದ
ದುಬ್ಬುಗೊಬ್ಬಿನ | ಚಂದ ಸಾಲಂಕಾರದಲಿ ಹರಿ | ನಂದನನು ಹಲುದಿನುತ ಹರಿತಂ
ದೊದೆದ ನತಿರಥವ ॥೭॥ ಮುನ್ನ ಹನುಮನ ಪಾದಘಾತಕೆ | ಭಿನ್ನವಾಗದದೇನು ರಥ
ವದು | ಚೂರ್ಣವಾದುದು ಕೊಂಡು ಗದೆಯ ನಿಕುಂಭ ನಿನಕುಲವ ॥ ಮನ್ನಣೆಯ ಮನ
ವಚ್ಚುಕಾರನ | ಬೆನ್ನಲಪ್ಪಳಿಸಿದನು ನಿಟ್ಟೆಲು | ಭಿನ್ನವಾಗದೆ ಮಾಣದಿರದೆಂದಮರ
ಗಣ ನಡುಗೆ ॥ ೮ ॥ ಹೊಯ್ದು ಘಾಯಕೆ ಬೆನ್ನ ನಿತ್ತು ಮ | ಹೋದಧಿಕ್ರಮನಾ ಖಳನ
ಮೇ | ಲ್ವಾಯ್ದು ತಿವಿದನು ತಿವಿದ ಘಾಯದ ಲವನತಲೆ ಕೊರಳ ॥ ಆದಿಯಲಿ ನೊಡ
ದೊಡಲೊಳದ್ದುದು | ಸೇದಿದರು ಬಳಿಕುಸುರಶನಿಯ ಸ | ಹೋದರರ ಕಿಂಕರರು
ಶಂಕಿಸದಾ ನಿಶಾಚರನ ॥ ೯ ॥ ಒಡನೆ ಪಾದಾಗ್ರದಲಿ ಹಗೆವನ | ನಡಿಮುಗುಚಿ ನೋಡಿ
ದನು ನೆರೆವಿಂ | ಗಡಿಸಿದಸುವಿನಮೇಲೆ ಯಮ ಕಿಂಕರರಿಗಿಂತೆಂದು ॥ ತಡದ ನಿವನೆಂ
ದೀತನನು ಸಂ | ಗಡಿಯ ಮನದಲಿ ಮಾಡದಂತಿರೆ | ತೊಡಚಿಬಿಡಿ ನೀವೆನುತ ತಿರುಗಿದ
ನಿನಜಸಿದ್ದೆಡೆಗೆ ॥೧೦॥ ತಿರುಗುವಾತನ ಕಂಡು ಪಡೆ ಮೋ | ಹರದ ಪಟುಭಟ ಶೋಣಿ
ತಾಂಬಕ | ತಿರುಗಿದನು ಪವನಜನ ನದ ಕಂಡನಿಲಸಖ ಸೂನು ॥ ಕರವ ಮುಗಿದಿಂತೆಂದ
ನವರತಿ | ಕರ ವಿಘಾತಿಯ ಕದನವನ ನೀವ್ | ಪರಿಕಿಸಲು ಬೇಕೆಂದು ಬಿನ್ನಹ
ಮಾಡಿದನು ನೀಲ ॥೧೧॥ ಅವನ ಬಳಿಯಲಿ ಕೋಟಿ ಸಂಖ್ಯೆಯ | ನವ ವರೂಥ ತುರಂಗ
ಸಾಮೋ | ದ್ಭವ ಘಟಾಳಿ ಪದಾತಿ ಬಂದುದು ಬವರಕಗ್ನಿಜನ ॥ ಪವನಸಖನು ಪಟಳಕೆ
ಪರ್ವತ | ದವಸಿಜೌಘ ತ್ರಿಣೌಘ ಮಾರಾಂ | ತವಘಡಿಸುವವೆ ಹೊಕ್ಕು ಹಳಚಿದನಾ
ಚತುರ್ಬಲವ ॥೧೨॥ ಆವ ವ್ಯೆಯ್ಯಲಿ ಹೊಕ್ಕನೋ ಕೊಲೆ | ಗಾವರೀತಿಯ ಲಂಘಿಸಿ
ದನೋ | ಪಾವಮಾನಿಗೆ ಪಾಡೆನಲು ಪರಬಲವ ನಿಮಿಷದಲಿ ॥ ದೇವಲೋಕದೊಳಿರಿಸಿ
ದನು ಘನ | ರಾವದಲಿ ತಲೆ ಶೋಣಿತಾಕ್ಷನ | ಪಾವರಿಸಿ ಡೊಕ್ಕರಕೆ ಹಾಯ್ದನು
ಹೊಯ್ದು ಭುಜಯುಗವ ॥ ೧೩ ॥ ಎತ್ತಿ ರಥದಿಂದಿಳೆಗೆ ನೆಗೆದು ವಿ | ಯತ್ತಳಕೆ ಲಂಘಿ
ಸಿತು ಕುಸುಕಿ ಮ | ರುತ್ತನ ತನಯಂಗೆಂದ ನಹುದೋ ಷಮರ ಸೌರಂಭ ॥ ಚಿತ್ತ
ಕ್ಕೊದಗಿದೆ ನಿಮ್ಮಡಿಯ ನೀ | ವಿತ್ತ ರಣದುಪದೇಶವಿದುವೆ ಯೆ | ನುತ್ತಲಾ ಕಲಿನೀಲ
ಬಳಿಕಾ ಖಳನೊಳಿಂತೆಂದ ॥ ೧೪ ॥ ದೋಷಿ ರಾವಣನೊಬ್ಬನೇ ನಿ | ರ್ದೋಷಿಗಳು
ನೀವ್ ಕುಂಭಕರ್ಣ ವಿ | ಭೀಷಣನ ಸಂತಾನವಿರಲಜನಿರಲು ಪರಿಯಂತ ॥ ದೋಷ
ಕೃತ ದಶವದನ ಜೀವನ | ದೋಷಣಕೆ ತಾ ವ್ಯತ್ಯಯವಿದಕೋ | ಭಾಷೆ ನಿನ್ನದು ಬದು
ಕಿಸುವೆ ನಡೆ ರಾಮನೆಡೆಗೆಂದ ॥೧೫॥ ಅಳುಕಿ ಸಾವಿಗೆ ಸಹಭವನ ರಣ | ಕುಳುಹ ಹಗೆ
ವನ ಹೊಕ್ಕರಿಯ ತಂ | ಬುಲಕೆ ಕೈಯಾಂತಥಮ ರಕ್ಕಸನೆಂದು ಬಗೆದಿಸುಲ ॥ ಛಲ

ಪರಿಗ್ರಹರಾವು ಕೀರ್ತಿಯ | ಮೊಲೆಸುವೇಲಣ ಮೌಕ್ತಿಕದ ಸರಿ | ಲಲಿತ ನಿರ್ಮಲ
ಹಾರರಾವ್ ನಿಮಗಂಜಲೇಕೆಂದ || ೧೬ || ಎನುತ ಡೊಕ್ಕರಿಸಿದರು ಶಿಖಿನಂ | ದನನ
ಕಾಲ್ಬುಲುಕಿನಲಿ ಕೆಡಹಿದ | ನನುವರವ್ರ ಸರಿಸಾಟಿಯೇನೆ ನೋಟಕರ ಕಣ್ಮನಕೆ || ಘನ
ಬಲಾಯತರೊದಗಿದರು ಬಳಿ | ಕನಿಲಬಾಂಧವಸೂನು ರಿಪುವಿನ | ತನುವ ತಳುಕಿನ
ಕಾಲ್ಗಳಲಿ ಬಿಗಿದೆಂದನೀ ಹದನ ||೧೭|| ನೋಡೆಲವೋ ಖಳ ಕಪಿಯ ಕದನದ | ಪಾಡು
ಪಂಥವ ನಿನ್ನ ನಿನ್ನವ | ರಾಡಿದರೆ ಹೊಗೆ ನೀ ರಣಾಂಗಣವನು ಪ್ರತಿಜ್ಞೆಯಿದು ||
ಬೇಡಿಕೋ ನಿನ್ನಿಷ್ಟದೈವವ | ಬೇಡನಾಗದೆ ಬೇಗವೆನುತ ಸ | ಗಾಢಬಲ ನೆರಗಿದನು
ಶಿವನು ಶೋಣಿತಾಂಬಕನ ||೧೮|| ಬಿರಿದು ದೆರದಿಟ್ಟವನ ಶಿರವದ | ರರಡರೊಳಗೊಂ
ದನು ಸಮೀಪದ | ನೆರೆದ ಭೂತಗಣಂಗಳೊಡೆಯಂಗೊಂದು ಭೈರವಗೆ || ಕರೆದುಕೊ
ಟ್ಟಳಿವೆಣನ ಕಾಲನ | ಚರರ ಕೈವರ್ತಿಸಿ ಜಯ ಸ್ತ್ರೀ | ಸುರತ ಲಂಪಟ ಮೆರೆಳಿವನು
ಮಾರುತಿಯು ಹೊರೆಗಾಗಿ || ೧೯ || ಉಳಿದ ಬಲ ಹರಿಕಟಿಸಿ ಹೊಕ್ಕುದು | ದಳವ ನೀ
ಕಪಿನಾಯಕರ ಕೈ | ಗೊಳಿಸಿತಾಹವ ಮತ್ತೆ ಮೊಳಗುವ ವಾದ್ಯರಭಸದಲಿ || ಅಳವ
ಮರೆದನು ಹಿಂದಣಸುರರ | ಕಲಹ ಕೆಣೆಯೆನೆ ಕಂಡ ಮೈಯಲಿ | ಕಲಕಿವನು ಕಪಿಬಲ
ಮಹಾ ಜಲಧಿಯನು ಯೂಪಾಕ್ಷ ||೨೦|| ಆರು ಬಳಿಕಾ ದ್ವಿವಿದನೆಂಬ ಮ | ಹಾತಿಬಲ
ಕಪಿನಾಯಕನು ರಣ | ರೀತಿ ಲೇಸೆಂಬಂತೆ ಹಳಚಿವನಾ ನಿಶಾಚರನ || ಚಾತುರಂಗವ
ನುರುವ ಪೇಟವಿ | ಘಾತದಲಿ ನಿರ್ಣೈಸಿ ಯಮನ ನಿ | ಕೇತನಕೆ ಕಳುಹಿದನು ಕಲಿ
ಯೂಪಾಕ್ಷರಾಕ್ಷಸನ ||೨೧|| ಪಡಿಘವಿಸಿ ಬಳಿಕುಳುಕಲಿನ ಖಳ | ಪಡೆಸಹಿತ ಹೊಗೆದೆ
ಗೆದವಹ್ನಿಯ | ಕಡುಗಿನಲಿ ಕದನ ಪ್ರಚಂಡ ನಿಶಾಚರನೆಂಬವನು || ಕಡು ಮಲುಗಿ
ತಾಗಿದನು ಕದನದ | ಕಡುಹು ತಪ್ಪಲ್ಲೆನಲು ಕಪಿಬಲ | ಸಿಡಿಯೆ ಸೀವರಿಸುತ್ತ ಸಾದ
ದಲಿ ಬಂದು ಮಾರಾಂತ ||೨೨|| ಒಬ್ಬರನರೊಳ ಗುಳಿಯದವ್ರೊಲುರೆ | ಜಬ್ಬುದುಳಿದನು
ಜೋಹವಿಕ್ಕಿದ | ಹಬ್ಬನಭಿನವದಂತೆ ಹನುಮನನೈದ ಲಮರಗಣ || ಉಬ್ಬಿ ರಣವೇವ
ತಿಗೆ ಮಿಕ್ಕಿನ | ಕರ್ಬುರರ ತೋರಿಸಲಸುರರ | ಕೊಬ್ಬಿ ಕೊಬ್ಬನು ತೋಟ ನಿಂದುದು
ತಾಮಸೀಚರನ ||೨೩|| ಸಾಲದೇ ಸಂಗ್ರಾಮ ಶಿರಕೆ | ಣ್ಣಾಲಿದರಿದವ್ರ ನೋಡಿ ನೋ
ಡುವ | ನಾಳೆ ಮಿಕ್ಕಿನರಣವ ನೆಂದಿನ ನಧಿಕ ಹರುಷದಲಿ || ಶ್ರೀಲತಾಂಗಿಯ ರಮಣ
ನನುಪಮ | ಲೀಲೆ ಗುತ್ಸಾಹಿಸುತವರ ವರು | ಣಾಲಯವ ಸಾರಿದನು ವರಣ ದಿಶಾಂಗನಾ
ಸತಿಗೆ ||೨೪|| ಮುತ್ತಿಗೆಯ ಪುರಕಿಕ್ಕಿ ತಿರುಗಿದ | ರತ್ತಲೀ ತೊರವೆಯ ನೃಸಿಂಹನ |
ಹತ್ತಿರಕೆ ಸುಗ್ರೀವ ಮುಖ್ಯ ಸಮಸ್ತನಾಯಕರು || ಚಿತ್ತದುಮ್ಮಹ ದುಬ್ಬರದ ವಿಜ |
ಯೋತ್ತಮದ ಸುಮ್ಮಾನದಲಿ ದೇ | ವೋತ್ತಮನು ಬೀಳ್ಕೆಯ ಬಿಜಯಂಗೈದ
ನೊಲವಿನಲಿ || ||೨೫||

ಮೂವತ್ತೊಂಭತ್ತನೆಯ ಸಂಧಿ ಸಮಾಪ್ತಂ.

ನಲವತ್ತನೆಯ ಸಂಧಿ.

ಸೂಚನೆ|| ರಾಮನುರು ಕೋದಂಡ ದೀಕ್ಷಾ | ರಾಮ ನಸುರ ಕುಲೌಘ ಜಯ ರಣ |
ಭೀಮ ಗೆಲಿದನು ಕದನದಲಿ ಮಕರಾಕ್ಷ ರಾಕ್ಷಸನ ||

ಪದ್ಯ॥ ಕೇಳಿದೈ ಯಮಳರು ರಣಾಂಗಣ । ಕೇಳಿಯಲಿ ನಿಮ್ಮವರು ಗೆಲಿದರು । ಮೇಲು ಮುತ್ತಿಗೆ ಯಾಯ್ತು ದುರ್ಗಕೆ ದುಷ್ಟ ದಾನವರ ॥ ಓಲಗದೊಳಸುರೇಂದ್ರ ನನುಜನ । ಬಾಲಕರ ಮರಣವನು ಕೇಳುತ । ತಾಳುಡೆಯ ನೆಮ್ಮಿನಲಿ ಚಿಮ್ಮಿದ ನುಗುರೊಳಶ್ರುಗಳ ॥೧॥ ಹೊಳಗಿ ದಬ್ಬರ ವೀದ ಗಗನ । ಸ್ಥಳವೋ ಮೇಣ್ಮಂಗಾರ ಮೇಘವ । ಸುಳಿವ ಸಿಂದಂಬುಧಿಯೋ ವಿವಿಧೇಂದ್ರಿಯಗಳುಪಟಳದ ॥ ಕಳಕಳಿಕೆ ಕಳಲಿವ ಮಹಾತ್ಮನ । ನಿಲವೋ ದಶಕಂಠನ ಸಭಾಮಂ । ಡಲವೋ ಹೇಳುವೆ ನೇನ ಮೌನದೊಳಿದ್ದುದಾಸ್ಥಾನ ॥೨॥ ದುಗುಡ ಭಾರದ ಹತ್ತು ಮುಸುಕಿನ । ಬೆಗಡು ಮೋರಿದ ವದನದ ನೆಗಹಿನ । ತಗಹು ಕೈಗಲ್ಲಗಳ ಚಿಂತಾ ಭರದ ಭಾರಣೆಯ ॥ ದೃಗು ವಿಹೀನನು ಕತ್ತಲೆಯ ಮೊಗ । ಮೊರೆದು ಕಡೆಗಾಣದ ವೊಲರಿ ಸಂ । ಯುಗಕೆ ಸರಣಿಯ ಕಾಣದುಸು ರಿಡುತಿರ್ದ ನಸುರೇಂದ್ರ ॥೩॥ ಜೀಯ ದುಗುಡವಿದೇಕೆ ಕಮಲಜ। ನಾಯಕದ ಲುಳಿ ದುಳಿದರಿವ ನರ । ರಾಯ ರಂಬುಂಮುಳವ ಬಿಸುಡಿನ್ನೊಂದು ಕಳೆಯದಲಿ ॥ ಆಯಸವ ಬಿಡಿಸುವೆನು ನಿನ್ನ ನಿ । ರಾಯಸದ ಲರಿ ಭಟನ ಕಾಲನ । ಬಾಯೊಳಡಸದ ಲಿಂದ್ರಜಿತು ತಾ ನಸುರ ನಲ್ಲೆಂದ ॥೪॥ ಸೇವಿನಲಿ ಸುಧಿಯನು ಮಹಾಮರು । ಜೇವಣಿಯ ಲೆಬ್ಬಿಸಲಿ ವಡೆಯಲಿ । ಸಾವು ತಮಗಿಲ್ಲೆಂದು ವರವನು ಹರ ಸರೋಜಜನ ॥ ದೇವರಿಪು ಚಿತ್ತೈಸು ಮರಳಿ । ನ್ನಾವು ದತಿಶಯವಾಗಿ ಕೆಡಿಸೆನು । ರಾವಣಾಸುರ ನಲ್ಲ ದಿಲ್ಲೆಣಿಸುವೆನು ಜಗಕೆಂದ ॥೫॥ ಎಂಬ ಮಾತನು ಕೇಳಿ ಕಲಿ ಮಕ । ರಾಂಬಕನು ಕೈ ಮುಗಿದು ಹರಜಿತು । ವೆಂಬ ಮಾತು ತದೀಯಲಾಗಲಿ ನಾಳೆ ನಾಜಿಯಲಿ ॥ ತಿಂಬೆ ನಗ್ಗದ ಕದನ ಕೇಶ ಕ । ದಂಬವನು ಕಪಿಸತಿಯ ಜೀವವ । ಕೊಂಬೆ ವೀಳೆಯ ವೀಗ ತನಗೆಂದಸುರ ಘರ್ಜಿಸಿದ ॥೬॥ ಅಂದು ವನದಲಿ ತನ್ನ ತಂದೆಯ । ಕೊಂದ ಬಲು ಗೂಲಿ ಹಗೆಗೆ ಕೊಲೆಯನು । ನಿಂದಿರಿಸುವೆನು ಚಿತ್ತವಿಸು ಚಿತ್ತಕೆ ಮನೋ ರಥವ ॥ ಹಿಂದೆ ಹಿಂಗಿದ ಭಟರ ಸೋಲದ । ಸಂದ ಸಿದ್ಧಿಸಿ ಬೇಗು ವತಿಶಯ । ದಿಂದ ರಾಕ್ಷಸ ರಾಜ ತೇಜದ ಸುಪ ತಾಪಕದ ॥೭॥ ತರಿಸಿ ಬಳಿಕವ ಗಸುರ ಪತಿ ಕ । ರ್ಪೂರದ ವೀಳೆಯವಿತ್ತು ನಾನಾ । ಭರಣವನು ತೊಡವಿತ್ತು ನೇಮಿಸಿದನು ಮಹಾ ಹವಕೆ ॥ ಹರದು ದೋಲಗ ವಂದಿಸಿರುಳಿನ । ಭರವು ಬೀತುದು ಸೊತಗಿನ ನೆ । ಚ್ಚರಿಸಿ ನೂಕಿದ ಸರಣ ಮೂಡಣ ಗಿರಿಗೆ ಮಣಿರಥವ ॥೮॥ ಆಹವಕೆ ಮಕರಾಕ್ಷ ನೂರ । ಕ್ಷೋಹಿಣಿಯ ಬಲ ಸಹಿತ ಮಹ ದು । ತ್ಸಾಹದಲಿ ಹೊರವಂಟ ನಾ ಲಂಕಾ ಮಹಾಪುರವ ॥ ಮೋಹರಿಸಿ ತೀಚೆಯಲಿ ರಣ ಸಂ । ನಾಹದಲಿ ಸುಗ್ರೀವ ಬಲ ವವ । ಗಾಹಿಸಿತು ಮಕರಾಕ್ಷ ಸೈನಿಕ ಸರ್ವಲಗ್ಗೆಯಲಿ ॥೯॥ ಹೇಳಿದರೆ ಹೆದರುವುದು ಮನದ । ಖಿಳ ರಕ್ಕಸ ಬಲವ ನೆಲೆ ಕುಶ । ಕೇಳು ನಗರಾಂಬುಧಿಯ ಥೆರೆಗಳೋ ತುರಗ ದೊಡ್ಡುಗಳೋ ॥ ವ್ಯಾಳದಂತಿಯೋ ಕಾಲ ಯಮನ ಕ । ರಾಳ ಸೈರಿಭ ದೊಡ್ಡೊ ರಕ್ಕಸ । ರಾಳಿಯೋ ರಣ ಭೈರವರೊ ಬಣ್ಣಿಸ ಲರಿದು ತನಗೆಂದ ॥೧೦॥ ಉಳಿದು ದೆಡೆಯಿಲ್ಲದೆ ನಭೋಮಂ । ಡಲ ಮಹಾದೇವಮ ಬದುಕಿದ । ನೆಲುಗಳೊಳಗಿಲ್ಲದೆ ಸಮಾರಣ ನಖಿಳ ಬಲರಾಶಿ ॥ ನೆಲೆಗಳಿಲ್ಲದೆ ಸೈರಿಸಿದ ನಿನ । ನುಳಿದ ದೂರವ ಲಿರ್ದು ಸೈರಿಸಿ । ತಿಳೆ । ಕುಲಾದ್ರಿಗಳಿಂದ ರಿಪು ಸೇನಾ ನಿನಾದದಲಿ ॥೧೧॥ ಇಂಬು ದೋರದುದಿಲ್ಲ

ಕೇತು ಕ । ದಂಬದಲಿ ನಭ ವನುಮು ತರಣಿಯ । ಬಿಂಬ ವೇನಾದುದೋ ಚತುರ್ಬಲ ಚರಣ ಧೂಳಿಯಲಿ ॥ ಚುಂಬಿಸುವ ಚೂರಿಸುವ ಶಸ್ತ್ರಾ । ಡಂಬರದ ಡಾವರಕೆ ಕಪಿಗಳ । ಡೊಂಬಿ ನುಬ್ಬರ ನೆತ್ತ ಹೋದುದೋ ಹೇಳಲೇನೆಂದ ॥೧೩॥ ನಿಂದನಾ ನಿಜ ಸಕಲ ಸೇನೆಯ । ಮುಂದು ಗಡೆಯಲಿ ತಾರಕಾಗ್ರಹ । ವೃಂದ ಮಧ್ಯದ ರವಿಯವೋಲು ರಥದೊಳಗೆ ಮಕರಾಕ್ಷ ॥ ಹಿಂದಣತಿಬಲ ಖಳಂಗಿವ ಹ । ನ್ನೊಂದು ಮಡಿ ತೇಜದಲಿ ದಶರಥ । ನಂದನನ ಕಣ್ಗಳಿಗೆ ಕೌತುಕವಾಗಿ ಕಾಣಿಸಿದ ॥೧೪॥ ಇವನು ಕೈಟಭನೋ ಮಹಾದೇ । ವಿವನು ಜಂಭನೋ ತಮನೋ ತಾ ನಾ । ಹಿರಣ್ಯಾಕ್ಷನೋ ಜಗಕ್ಷೋಭಾಂಧಕಾಸುರನೊ ॥ ಇವನಿದಾರೈ ಬಂದ ರಾಕ್ಷಸ । ನಿವಹದಲಿ ಹೇಳೆಂದು ಶಿರಿ ರಾ। ಘವ ನರೇಶ್ವರ ಕೇಳಿದನು ಬಳಿಕಾ ವಿಭೀಷಣನ ॥೧೫॥ ಜೀಯ ಚಿತ್ತೈಸವನು ಜಯ ಯುವ । ತೀ ಯಶ ಶ್ರುತಿ ಪೂರ ನಿವ ನತಿ । ಕಾಯ ನಿಂ ಬಲ್ಲಿದನು ಬಲ್ಲಿದ ನಿಂದ್ರಜಿತು ವಿಂಗೆ ॥ ರಾಯ ಕೇಳಂ ದಡವಿಯಲಿ ಸಮ । ರಾಯತ ದೊಳುಬ್ಬಿದ್ದು ನಿಮ್ಮಯ । ಸಾಯಕದ ಸಂಗೊದಗಿ ದತಿಬಲ ಖರನ ಮಗನೆಂದ ॥೧೬॥ ಆದರಿವ ಬಲ್ಲಿದನು ತಪ್ಪ। ಲ್ಲೈದಲುಳ್ಳವ ನೆಮ್ಮ ರಣ ಸಂ। ವಾದ ಕಿವನೈಯನ ಪರಾಕ್ರಮ ಕಾರು ಸರಿಜಗದ ॥ ಆದಿ ವೀರರಲಂದು ಬಲುಬಲು । ಗೈದುವನು ಮುರಿದೆಚ್ಚು ಮೂವತ್ತೈದು ಹೆಜ್ಜೆಯ ಹಿನ್ನೆಲೆಗೆ ಹಿಂಗಿಸಿದ ನವನೆಂದ ॥೧೭॥ ಹಗೆಗಳಾವೈ ಸಿವಗೆ ನಮ್ಮೊಳು । ಜಗಳವನು ಗಂಟಿಕ್ಕಿ ಕೊಂಬು । ಜ್ಞಗವು ತಪ್ಪದು ಬರಿದೆ ಸೇನೆಯ ನಿವನ ಕೈಯಿಂದ ॥ ಗಗನ ಪಥಿಕರ ಮಾಡಿಸುವುದಿದು । ನಿಗರವ ಲ್ಲೆಮಗೆನುತ ಕರುಣ । ಳುಗಳ ದೇವನು ಕೊಂಡ ನಗ್ಗದಚಾಪ ಮಾರ್ಗಣವ ॥೧೮॥ ನಿಲುಕಿತವನ ವರೂಥ ಕಾಲಾ । ನಳನ ನಿಡು ನಾಲಗೆಯ ಪ್ರೋಲ್ಕಳ । ಕಳದ ಕರಿಗಳ ತೇರು ತೇಜೈಸಿದವು ತವಕದಲಿ ॥ ಸೆಳೆದ ಖಡುಗದಲೇರಿದರು ವೆ । ಗ್ಗಳಿಯ ರಾವುತರು ಮುಂಚಿದರು ಗೊಂ । ಡಲಲಿ ಸಿಕ್ಕಿದ ಪಟ್ಟೆಯದ ನೆಗಹುಗಳ ಲಿಭನಿಕರ ॥೧೯॥ ಕಿತ್ತು ಸುರಗಿಯ ಕಿವಿವರೆಗೆ ತೆಗೆ । ದೆತ್ತು ಗಣೆಗಳ ತೊಡೆವಲಗೆಗಳ । ಕತ್ತಿಗಳ ಝಳಪುಗಳ ಮೋಹದ ಸಬಳ ದುಬ್ಬರದ ॥ ಪತ್ತಿಚಯ ವಬ್ಬರಿಸು ತೊಳಹೊ । ಕ್ಕೊತ್ತ ಬರಿಸುತ ಗಾಢಲಗ್ಗೆಯ । ಲೆತ್ತಿದದ್ರಿ ಕುಜಾಯುಧರ ನೊಡೆ ಬಗಿದು ಸರಿಸದಲಿ ॥೨೦॥ ಎಲವೊ ಸಾರಥಿಕೇಳು ರಾಮನ । ಬಳಿಗೆ ಬಿಡು ರಥವನು ಬಲೀಮುಖ । ಬಲದೊಳಗೆ ಬಳಸದಿರು ಬಿಲುದುಡು ಕೇ ನಿವನಿದಿರಿಂಗೆ ॥ ಕಲಹ ರಾಮನ ಕೂಡೆ ಗೆಲವಿನ । ಬಲಹು ರಾಮನ ಕೂಡೆ ತಂದೆಯ । ಕೊಲೆಗೆ ಕೊಲೆಯನು ಕೊಂಬೆ ನಲ್ಲಿಗೆ ರಥವ ತರಿಸೆಂದ ॥೨೦॥ ತುರಗವನು ಛಪ್ಪರಿಸಿ ಸಾರಥಿ । ಹರಿಸಿದನು ಹೊಂದೇರ ಸಹಿತನ । ಛವದ ಭಾರಿಯ ಬವರ ಸಮ್ಮೊಳಗಹುದಲೇ ಯೆನುತ ॥ ಅರಿವರೂಥವ ತರುಬು ವತಿಬಲ । ಹರ ಚಮೂಪರ ಕೈಯ ಸನ್ನೆಯ । ಲೆರಡು ಭಾಗವ ಮಾಡಿ ಬಿಲುದನಿ ದೋರಿದನು ರಾಮ ॥ ೨೧ ॥ ರಸಿಕನಲಾ ರಾಮ ರಣ ಸಾ । ಹಸಿಕನಲಿ ಶಿಂಜಿನಿಯ ಶಬ್ದಕೆ । ಸಸಿದು ಬಿದ್ದವು ತಾರೆಗಳು ತಳಮುಗುಚಿತಂಬುನಿಧಿ ॥ ಉಸುರಲೇನದ ನಾ ಕಪರ್ದಿಯ । ವಿಷಮ ಕಾರ್ಮುಕ ವಿದ್ಯಗಳ ತೆಗೆ । ಹಸನು ಹರ ಕೋದಂಡ ಖಂಡನ ಬಾಣಗತಿ ಯೆಂದ ॥೨೨॥ ಈತ ನೀ ಗಾಜಿಯಲಿ ತಮ್ಮ । ತಾತನನು ತಲೆಗೊಂಡ ಹಗೆ ಕೇಳ್ । ಸೂತ ನೋಡೆನು ತುಬ್ಬಿರಿ ದಸ್ತ್ರ ಸಾರವಲಿ ॥

ಭೂತಳ ವದಾವುದು ದಿಶಾ ಸಂ। ಘಾತ ವಾವುದು ನಭ ವದಾವುವ। ರೂಥ ಸೇನೆಯ
ದಾವುದೆನೆ ಮುಸುಕಿದನು ಮಕರಾಕ್ಷ ॥೩೩॥ ಗಬ್ಬರಿಸಿ ಗಬಲಿಕ್ಕಿ ಮುಸುಕುವ। ಹೆಬ್ಬ
ಗಣೆಗಳ ನಿದಿರುಗಣೆಗಳ । ಲೆಬ್ಬಿಸಿದ ನುಬ್ಬಿಸಿದ ನೆಸುಗೆಯು ಲಮರ ಸಂತತಿಯ ॥
ಬೊಬ್ಬಿರಿದು ಮಾರಂಬುಗಳನು ಶಿ। ಟ್ಟಿಬ್ಬಿಸಿ ದನಾ ಖರತನೂಜನ। ಹೆಬ್ಬಲದ ರಥ
ಹಯ ವರೂಥ ಪದಾತಿ ಸಂತತಿಯ ॥೩೪॥ ಬಾಣ ವೊಂದೇ ಕೊಲುತ ಲಿರ್ದುದು।
ಜೂಣಿಯಲಿ ಸಂಧಿಸುವ ಸುಭಟ । ಶ್ರೇಣಿಯನು ಬಳಿಸಲಿಸಿ ಬವರಕೆ ಸಿಲುವ ಪಡಿ
ಬಲವ ॥ ಕೇಣಿಗೊಂಡೊಂದಂಬು ಕರಿಗಳ। ಗೋಣ ಕುದುರೆಯ ತಲೆಯ ಸುಭಟರ।
ಪ್ರಾಣಗಳ ನೆಬ್ಬಿಸುತ ಲಿರ್ದುದು ರಾಮ ನೆಸುಗೆಯಲಿ ॥೩೫॥ ಅರದ ತಲೆ ನಭಕಡರೆ
ನಭದಲಿ। ಸುರಿವ ರಕ್ತಾಂಬುಗಳ ಲಂಬಿನ । ಲುರವಣಿಪ ಬಿರುಘಾಳಿ ಸೂಸಿ ತಸುರರ
ವ್ಯೆಗಳಲಿ ॥ ಅರುಣ ಲೋಕದ ಪೋಲು ಗಗನಾಂ। ತರ ವಿರಾಜಿಸಿ ತವನಿ ರಕ್ತಾಂ।
ಬರವ ನುಟ್ಟಂ ತೆಸೆದು ತೋರುವ ರಕ್ತದದುಳಿನಲಿ ॥೩೬॥ ಬೇರೆ ಮತ್ತೊಂದಂಬು
ಸಮ್ಮುಖ। ಕೇರು ವರಿ ಭಟ ನಂಬುಗಳ ಕೆಲಜಾ। ರೆ ಕಡಿವುತ್ತಿರ್ದು ದೊಂದಂ ಬಖಿಳ
ಭೂತಗಳ ॥ ಸಾರಿ ಕರಿಕರ ದಖಿಳ ಸೇನೆಯ । ಸೂರೆ ಗೊಡುತಿರ್ದುದು ವಿಚಿತ್ರದ।
ತೋರಿಕೆಯುತೇ ರಾಘವೇಂದ್ರನ ಸರಳ ಸೌರಂಭ ॥೩೭॥ ಚಿಗಿದ ರಕ್ಕಸ ಭಟರ ತಲೆ
ಕುದು। ರೆಗಳ ಕೊರಳಲಿ ಬೆಚ್ಚ ಪಾ ಕುದು। ರೆಗ ಳಗಲೆ ಕುಳ್ಳಿದವು ಕುಂಜರ ದುಡಿದ
ಕೊರಳಿನಲಿ ॥ ಅಗಲಿ ದಿಭದ ಶಿರಂಗಳಾ ಭಟ । ರುಗಳ ಮುಂಡದ ಲಂಡಿಸಿದ ವಿರಿ।
ತಗಳ ಲೊಗಿಸಿತು ಮತ್ತೆ ಬಲ ವಳ್ಳಿರಿವ ವಾದ್ಯದಲಿ ॥೩೮॥ ಕದಡಿದ ಕಾಲ್ಗಳ ಭಟರ
ಮುಂಡದ। ಹೆಡಕುಗಳ ಚಿಗದೇರಿ ಹೊಯ್ದರು। ಖಡುಗ ಖರ್ಪಣ ಪರಿಘ ಮುಸುಂಡಿ
ಮುಸಲದಲಿ ॥ ಪಿಡಿದ ತಲೆಗಳು ಕೆಲವು ಮುಂಡದ । ಲಡಸಿ ಶಿರದಲಿ ಬೊಬ್ಬಿರಿದು
ನಡ । ನಡುಗಿ ತಿವಿದವು ಸುರಗಿ ಕುಂತ ಕಠಾರಿ ಭೋಜದಲಿ ॥೩೯॥ ಉಡಿದ
ತೇರ್ಗಳಲಿಟ್ಟ ರಿಟ್ಟರು । ಮಡಿದ ಮದಕರಿಗಳಲಿ ತೋಳ್ಗಳ । ಪಿಡಿದು ಹಯದಿಂ
ದಪ್ಪಳಿಸಿದರು ತೆಗೆತೆಗೆದು ಹೆಣನ ॥ ತುಡುಕಿ ತೂರಿದ ರುಧಿರ ಕಪಿಗಳ । ಹುಡುಕು
ನೀರದ್ದಿದರು ರಕುತದ। ಮಡುಗಳಲಿ ಮಕರಾಕ್ಷ ರಾಕ್ಷಸ ನಸಮಭಟ ನಿಕರ ॥ ೪೦ ॥
ಆವ ಯುಗದಲಿ ಕಂಡುದಿಲ್ಲಿಂ । ದೀವಿಗರ್ಭಣೆಯನು ಮಹಾಹವ । ಕೋವಿದರ
ಲೆಂತುಟೋ ನಿಶಾಚರ ಭಟರ ವೀರತನ ॥ ಝಾವಕಾದಿತು ಕಡಿದ ತಲೆ ಸ । ಜ್ಜೀವ
ದಾಸುರ ಸೇನೆ ರಾಘವ। ದೇವನೊಳು ದೇವಾಳಿ ಬೆರಗಿಡೆ ಬಹಳ ಚಿತ್ರದಲಿ ॥ ೪೧ ॥
ಜಲನಿಧಿಯ ಜಲಜಾರಿದಂದುರಿ। ಗೊಳುವ ಮಹದಗ್ನಿಯುವೊಲಾನನ। ವಳಯದಲಿ
ಸುಡಿಯಿಟ್ಟ ಕೋಪಜ್ವಾಲೆ ಭುಗುಭುಗಿಸೆ ॥ ಹೊಳೆಹೊಳೆವ ಹೊಂಗರಿಯ ತಳಪದ।
ತಳಿತ ಕಿಡಿಗಳ ದಿವ್ಯ ಬಾಣಾ । ವಳಿಗಳನು ಮಕರಾಕ್ಷ ಕರೆದನು ಮೇಲೆ ರಾಘವನ ॥
ಮುಸುಕುವರಿ ಶರ ಸಮಿಧಿಯನು ಖಂ। ಡಿಸುವ ನೀ ರಘುನಾಥ ನವನಿ। ಪ್ರಸರದಲಿ
ಹೊಳುವನು ಹೊರಬೀಸುವನು ರಘುನಾಥ ॥ ಎಸುಗೆ ನಡೆದುದು ಮೇಲೆಮೇ ಲಾ।
ಲಸಿಕೆ ದೋರದೆ ಕೋಮರದಲಾ। ಗಸ ಧರಾತಳತುಂಬೆ ಮಕರ ಸರೋಜನಯನದಲಿ ॥
ಹಳಚು ಪಲಗಲಗುಗಖಿಳ ಪಳ। ದುಲುಹು ಕಣೆಕಣೆ ದಾಗುಗಳ ಖಂ। ಡಳಿಗಳಬ್ಬರ
ಗರಿಯುಘಾಳಿಯ ಬೊಬ್ಬೆ ಬವರಿಗರ ॥ ಬಿಲುರಭಸ ಭೀಂಕೃತಿಯ ಸರಳಿನ । ರುಳಿವ

ನಬ್ಬರ ರಭಸ ವನಿತರ। ಕಲಹವಲಿ ಕಿವಿ ಕಿವುಡುಗೊಂಡುದಜಾಂಡ ಮಂಡಲವ ॥೩೪॥
ಬಳಿಕಗೆಯು ಬಲು ಕೋಪದಲಿ ಬಳಿ। ಕಳಲಿ ನತಿಬಲ ಖರತನೂಭವ। ನಿಳೆಯು ನಾಡಾ
ಡಿಯ ನರಾಧಿಪನೈಸಲೆಯೆಂದ ॥ ಬಳಕೆಯಲಿ ಬೊಬ್ಬಿರಿದು ಬಾಣದ । ಹಿಳುಕು
ನಂತಕ ಮಂತ್ರದಲಿ ನೆಲೆ। ಗೊಳಿಸಿ ನಿಡುದನಿ ಡೋರಲೆಚ್ಚನು ರಾಘವೇಶ್ವರನ।೩೫॥
ಕಂಜಲೋಚನ ನಗುತಲಾ ವ್ಯ। ತ್ಯಂಜಯಾಸ್ತ್ರದಿ ನಂತಕಾಸ್ತ್ರವ। ಭಂಜಿಸಲು ಖರ
ಸೂನು ಕವಿಸಿದ ನಗ್ನಿ ಮಾರ್ಗಣವ ॥ ಎಂಜಲಿಸಿತುರಿ ಜಗವನೆಂಬವ। ರಂಜಿಕೆಯನಾ
ವಾರುಣಾಸ್ತ್ರ ಸ। ಮಂಜಸದಿ ವ್ಯವಹರಿಸಿ ಹದುಳಿಸಿದನು ಜಗತ್ರಯವ ॥ ೩೬ । ರಾಮ
ಕೋರಣದಾ ಸುರಾಹ್ವಯ। ಭೀಮ ಬಾಣವ ಮರೆಯಡೇತಕೆ। ಕಾಮಹರ ಕಮಲಾಸ
ನಾದಿಗಳಿದಿರ ಎಲಗದಲಿ ॥ ವ್ಯಮರೆಸಿ ಬದುಕಿವರು ಬದುಕಿನ। ಸೀಮೆ ನಿನ್ನದು ಕೋ
ಯೆನುತ ಸು। ತ್ರಾಮಬಲ ಬರುತೋದೆ ಬೊಬ್ಬಿರಿದೆಚ್ಚ ನಿನಕುಲನ ॥ ೩೭ ॥ ಈದು
ದಾಸುರ ಬಾಣ ಘನ ಶ। ಸ್ತ್ರೋದಧಿಯ ನೀಡಿತು ಜಗತ್ರಯ । ಕೈದುಗಳ ಕಾಲಾಟ
ದಲಿ ಕವಿದಿರಿವ ರಕ್ಕಸನ ॥ ಬೇದಿವರಿಗಳ ಲಡೆಗೆಡದು ದಿಂ। ದ್ರಾದಿ ದೇವ ಕದಂಬ
ಕಪಿಬಲ। ಸಾಧಿಸಿತು ಕೈವಲ್ಯವನು ಕಮಲಾಕ್ಷ ನಿದಿರಿನಲಿ ।೩೮॥ ತಮಬಿದನು ನಾನಾ
ಸ್ತ್ರಮುಖವಲಿ। ಮರೆಯದಸುರಾರಾತಿ ಲೆಕ್ಕಿಸ। ತುರುಬಿ ತರುಗಟ್ಟಿದಿರಿನಲಿ ಹರಶರಣ
ನೀಹದನ ॥ ಅರಿದುನಾರಾಯಣನ ನಾಮವ। ನೊರಲೆ ಮರ್ಮ ಭಾಪೆನಲು ಹೂಡಿದ।
ನುರುವ ನಾರಾಯಣ ಮಹಾಸ್ತ್ರವನಾ ಖರಧ್ವಂಸಿ ॥ ಉಳುಹಿಕೊಂಡರು ಹರಣವನು
ಹರ। ನಳಿನಭವ ಶಕ್ರಾದ್ಯರಿದಿರಲಿ। ಸುಳಿಯರಂದೇ ಬಗುಳಿದೆಯಲಾ ನಿನ್ನ ಸಾಯ
ಕಕೆ ॥ ತೊಲಗುವವರಾವಲ್ಲ ಹಗೆಗಳ। ತೊಲಗಿಸುವುದೈ ಸಲ್ಲೆವಿದಿಕೋ। ಗೆಲುವು
ದುಳ್ಳಡೆ ಕಳುಹು ಕಣೆಗಳನನುತ ತೆಗೆದೆಚ್ಚ ॥ ೪೦ ॥ ವರ ಸುದರ್ಶನ ಉಗ್ರರೂಪವ।
ಧರಿಸಿ ತಂದಮಲಸ್ತ್ರ ವಾಸುರ। ಶರಮುಖದಿ ನುದಿಸುವ ಮಹಾ ರೌದ್ರದ ಶರಾವಳಿಯ॥
ಉರುಸಿಶಿತ ಧರಾಗ್ನಿಯಲಿ ಹುರಿ। ಕರಿಯ ಮಾಡಿತು ಹರಹಿತಗಲಕೆ। ನೆರೆದ ನಾನಾ
ಯುಧ ಕದಂಬವ ನುಗಿದು ಝಡಿತೆಯಲಿ ॥ ೪೧ ॥ ಮರಳಿ ಲಘು ಸಂಧಾನದೆಸುಗೆಯ।
ಭರವಸದ ಬಿನ್ನದಧಿಕಣೆಗನನು ಲಘು। ತರದಲೆಚ್ಚನು ವೀರ ಮಕರಾಕ್ಷನ ಶರಾಸನವ॥
ಕರದಲಿದ್ದುದು ಚಾಪ ಚಾಪವ। ತಿರುತಿರುಗಿದಾಸವನ ಸಾಮರ್ಥದು। ಸರಳು ಸೈವೆರ
ಗಾಗಿ ಕೈಯ್ಯೊಳಗಿರ್ದುದಾ ಖಳನ ॥೪೨॥ ಭಾಪುರೇ ಬಲುಜಾಣನೆನುತಾ। ಟೋಪದಲಿ
ಮಕರಾಕ್ಷನಾಕ್ಷಣ। ವಾಪುರಾಂತಕ ದತ್ತ ಬಾಣಾಸನವ ಧ್ವನಿಮಾಡಿ ॥ ಕೋಪಕುಡಿ
ಯಿಡೆ ಕುಬುಬಿರಿದು ಪ್ರಾ। ರ್ಪಪರ ಸ್ಥಿತಿಜನನ ಲಯ ದೂ । ರೋಪ ಮಾನಾತೀತ
ಮುಂಬರಿದೆಚ್ಚ ಬೊಬ್ಬಿರಿದ ॥ ೪೩ ॥ ದಾಟಿದುದು ಬಲು ಬಾಣ ನಡೆದು ನಿ। ಶಾಟಕುರ
ನಂಗದಲಿ ವಿಲಯು ಕ। ರೋಟಿ ಮಾಲೆಯು ಕೋಪಶಿಖಿ ಲಂಬಿಸಿದುದೆಂಬಂತೆ ॥ ನೋಟ
ದಲಿವರ ವಿಶ್ವಕರ್ಮನ । ಘಾಟ ಬಾಣದ ಲರಿಭಟನ ಕಾ । ಲಾಟವದ್ಭುತವಾಗೆ ಕೈ
ಯೊಡನೆಚ್ಚನಾ ರಾಮ ॥೪೪॥ ನಿಟಿಲದಲಿ ಕೊಂಡಂಬು ಪಶ್ಚಿಮ। ತಟದೊಳಗೆ ತಲೆ
ದೋರಿದುದು ಸಂ । ಘಟಿಸಿದವ್ರ ಮಕರಾಕ್ಷ ನಕ್ಷಿಯ ಪಕ್ಷ ವೈಸರಿಸೆ ॥ ತಟುಕುವಸಿ
ನೆತ್ತರಿನ ಲಯ ಸಂ । ಘಟದ ಸಂಚಲ ಜೀವದಂಡದ । ಘಟಿತಖಳ ಚಿಮ್ಮಿದನು
ಟಲಲಿಕೆಯಿಂದ ಹಳವಿಕೆಯ ॥ ೪೫ ॥ ಎಲವೊ ಸಾರಥಿ ನಿಮ್ಮ ರಥಿಕನ । ಬಳಲು

ಮೋರೆಯಮೇಲೆ ತಳಿಸ | ಗ್ಗಳೆಯ ಸಲಿಲವ ಸರಳ ಕೀಳೇರಿನಲಿ ಮುದ್ದುಗಳ || ಗಾಳಿಗೆ ಗಳನಿತು ಹೆದರದಿರು ನೀ | ನಾಳುಹಿಕೋ ನಿನ್ನವನ ನೊಂದರೆ | ಘಳಿಗೆ ಪರಿಯಂತೊಂದು ಮಾತುಂಟವನೊಳಿವುಗೆಂದ ||೪೬|| ಎದ್ದು ಸಾರಥಿ ಬಳಿಕ ಭಾಳದ | ಲಿದ್ದ ಬಾಣವ ನುಗಿದು ಘಾಯಕೆ | ಮುದ್ದ ಕರವಲಿ ತೀಡಿ ಕಲಶೋದಕದ ಧಾರೆಗಳ || ತಿದ್ದದನು ಕಂಗಳಿಗೆ ಕೆಲ ಸಿತಿ | ದಿರ್ದ ಕಾರ್ಮುಕನೆತ್ತಿ ಕಾಬು ಬಿರಿ | ವದ್ದರಿಸಿದನು ನಗಲು ಮೇಲೆ ಸಮಸ್ತ ಸುರನಿಕರ || ೪೭ || ಅನುಜೆಗೋಸುಗ ಹಿಂದೆ ನಿನ್ನಯ | ಜನಕ ನೆನ್ನೊಳು ಕಾದಿ ಜೀವವ | ಜಿನುಗಿಸಿದ ದಿನಸದಲಿ ಜಾರಿತು ಜಾತಿ ವೈರಿತನ || ತನಯ ಗಡ ನೀ ನವಗೆ ನಿನ್ನಯ | ಹರಣ ಕೊಡಬತ ದೆನ್ನಮನ ಸಂ | ಜನಿಸುತದೆ ಕೃಪೆ ನಿನ್ನ ದನುಮಾನವೇನೆಂದ || ೪೮ || ಮಂದಮತಿಗಳು ನರರು ಮುನ್ನೈ | ತಂದ ಕಿವಿಯಿಂದ ಪರದಲಿ ಬಳಿ | ಸಂದ ಕೋಡತಿತೂದತೆಂಬುದ ನರಿಯದಾದೆಯಲ || ಸಂದವೈರದ ಕಿಚ್ಚು ನಿನ್ನಲಿ | ನಿಂದಿರ್ದಡೇನಂದೊಡೆ ನಮಗೆನು | ತಂದಗೆಡದನು ಗತದ ಕೋಪದ ಲೆಚ್ಚು ಬೊಬ್ಬಿರಿದ || ೪೯ || ಮುಂಚಿತೇ ನಿನ್ನಸುಗೆ ಸರಳಿನ | ಸಂಚುವನು ನೋಡಾದ ಡೆನುತ ವಿ | ರಂಚಿಪಿತ ನೊಂದಂಬಿನಲಿ ರಿಪುಭಟನ ಸಾರಥಿಯ || ಒಂಚಿಸಿದನಾ ತುರಗ ನಾಲ್ಕರ | ಚಿಂಭಕೆಡಿಸಿವನಾ ಧ್ವಜವ ಹರಿ | ಹಂಚಮಾಡಿ ಮದಾಂಧ ನೆಸುಗೆಯ ಧನುವ ಖಂಡಿಸಿದ ||೫೦|| ಏರಿತಧಿಕಕ್ರೋಧ ಶಿಖಿ ಕಿಡಿ | ಹಾರಿದವು ಕಂಗಳಲಿ ತನು ಕಾ | ಹೇರಿದ ದು ಕಾರ್ಬೊಗಿಲು ವಿತಾಳಿಸಿ ತುರಿಯ ಚೂಣಿನಲಿ || ವಾರುಗೊಂಡನು ವಿಲಯರುದ್ರನ | ತೋರಿಕೆಯ ತಮದುಬ್ಬರವ ನೆನೆ | ತೂರು ಗಿಡಿಗಳ ದಿವ್ಯ ಶೂಲವ ನೆತ್ತಿ ಬೊಬ್ಬಿರಿದ ||೫೧|| ಹೇಳಲೇನದ ಹರನ ಹಸ್ತದ | ಶೂಲವನು ಜರೆದ ರುಬಿ ತುರಿಗಳ | ಮಾಲೆಗಳ ಮಂಡವಿಸಿ ಕರೆದುದು ಕಿಡಿಯ ಗಢಣಗಳ || ಮೇಲು ಜಗ ಬೆದರಿದವು ತಾರಾ | ಮಾಲೆ ಹರಿದುರುಳಿದವು ನೆಲ ಧೂ | ಮಾಳಿ ಮುಸುಕಿದುದಾಕ್ಕಿ ತಂಬುಧಿ ನಿಮಿಷಮಾತ್ರದಲಿ || ೫೨ || ಹಾ ರಘು ಕ್ಷಿತಿನಾಥ ಹಾ ರಘು | ವೀರ ಹಾಯೆಂ ಬಬ್ಬರಣೆ ಕಪಿ | ವೀರರಲಿ ಗೀಡಾಯ್ತು ನಿಗುರಿತು ನಿರ್ಜರಾಳಿಯಲಿ || ಆರಿಗರಿವಿರದಿರಲು ವಿಜ್ಞಾ | ಸಾರನಲ್ಲಾ ಶಿವನು ಜರೆದನು | ಗೌರಿದೇವಿಯರಂಜುತಿರೆ ಮೃತ್ಯುಂಜಯನು ನಗುತ || ೫೩ || ಆದಡಿದಿಕೋ ಯೆನುತಲಾ ಖರ | ಸೂದನನ ಖರಸೂನು ಘನನಿ | ರ್ಹಾದದಲಿ ಬೊಬ್ಬಿರಿಮುಝಾಡಿದಿಟ್ಟನು ಮಹಾಯುಧವ || ಆದಿನಾರಾಯಣನು ನಗುತ | ನಾದರರದ ಲಂಭೋಜಭವ ಬಾ | ಣೋದರಕಾಹುತಿಯ ನಿತ್ತುಳುಹಿದನು ಮೂಜಗವ || ೫೪ || ಕಾಣೆನಾ ಮಹದಾಯುಧವ ನಜ | ಬಾಣ ಮುಖದಲಿ ಖರಸುತನ ಹರಿ | ಮಾಣದಾರತಿಯಂತೆ ನೆತ್ತರಲಹಿಯ ಲಘುದಲಿ || ಸ್ಥಾಣುಮುಖ್ಯ ಸಮಸ್ತ ದೇವ | ಶ್ರೇಣಿಯಿದಿರಲಿ ಸುಳಿದುದಾ ಶ | ರ್ವಾಣಿ ಸಂತೋಷದಲಿ ಬಿಗಿಯಪ್ಪಿದಳು ಶಂಕರನ || ೫೫ || ಶರಕೆ ಕಾಣಿಕೆಯಿತ್ತು ನಭದಲಿ | ಕರವ ಮುಗಿದರು ಸುರರು ಸುಮನಸೋ | ವರುಷವನು ಸೂಸಿದರು ತೊರವೆಯರಾಯ ನರಹರಿಯ || ಚರಣ ಕಮಲದೊಳೊಮ್ಮೆನಾ ನರ | ಹರಿಯ ಬಳಿಗೈತಂದು ಹೊಕ್ಕುದು | ಸರಳು ಹೊಮ್ಮಾಳಿಗೆಯೊಳಗೆ ನಾರದನು ನಲಿದಾಡೆ || ||೫೬||

ನಲವತ್ತನೆಯ ಸಂಧಿ ಸಮಾಪ್ತಂ.

ನಲವತ್ತೊಂದನೆಯ ಸಂಧಿ.

ಸೂಚನೆ॥ ವಾತಜನ ಸಂಗ್ರಾಮದಲಿ ಪುರು । ಹೂತಜಿತು ಮದವಳಿದು ಮಾಯಾ ।
ಸೀತೆಯನು ಕಡಿದಂಜಿಸಿದ ಸಿನವಂಶ ವಲ್ಲಭನ ॥

ಕೇಳಿದೈಯೆಲೆ ರಾಜಸೂನು ಸು । ರಾಲಯವ ಸುರಯುವತಿಯರ ಸಂ । ನೋಳದಲಿ ಮಕರಾಕ್ಷ ಹಾಯ್ದನು ಹೊಗಳು ತಿನಕುಲನ ॥ ಮೇಲೆ ರಣದೊಳು ಕಪಿವ ರಕ್ಕಸ। ರೋಲಗವ ಮುಟ್ಟಿದನು ಗುಳ್ಳನು । ವೀಳೆಯವ ನುಪ್ಪರದ ಲುಬ್ಬಿಸಲೊಲದು ದಶವದನ ॥ ೧ ॥ ಮಡಿದನೇ ಮಕರಾಕ್ಷ ಗೆಲವಿನ । ಗುಡಿಯ ಹತ್ತಿದರೇ ವಿರೋಧಿಗ। ಳೊಡದರೇ ರಾಕ್ಷಸ ಚಮೂಪರ ವೀರರಸಕುಂಭ ॥ ಮಡಿದು ಹತ್ತಿದಳೇ ಜಯಶ್ರೀ। ತೊಡೆಯ ಸಹಿತ ನರೇಶ್ವರನ ತಾ । ಹಿಡಿದ ಚಲತನ ಸಾದುದೇ ಯೆಂದಸುರ ನಳವಳಿದ ॥ ೨ ॥ ಮಾಯಿವಾಯ್ತಹಿ ಪಾಶ ಬದ್ಧಜ । ಸಾಯಕವು ಪರಿಯಾಯ ಸದಸ। ಟ್ಟಾಯಿ ತನುಜನ ಬಿಮ್ಮು ಬೀತುದು ಗುಮ್ಮತನ ಭಟರ ॥ ಆಯುಧವ ಹೆಮ್ಮೆಗಳು ರಿಪುಬಲ । ಸಾಯದಿದೆ ಸಂಗ್ರಾಮ ವಿಜಯೋ । ಪಾಯಕೆಡೆಯನು ಕಾಣೆನೆಂದಸುರೇಂದ್ರ ಚಿಂತಿಸಿದ ॥ ೩ ॥ ಚಿಂತೆಯೇಕೆಲೆ ಜೀಯ ರಿಪುಬಲ । ದಂತಕನು ತಾನಿರಲು ನಿಮ್ಮಮು । ಖಾಂತರದ ಲಹುದೆನಿಸಿಕೊಂಬೆನು ಕಡೆಯ ಮಾತೇನು ॥ ಕಂತುಹರ ಕಮಲಾಕ್ಷ ಕಮಲಜ । ಲಂತಕಿದಕೋ ಬಾಣವರಿನೃಪ । ರಂತರವಿದೇನೆನುತ ಘರ್ಜಿಸಿ ನುಡಿದನಿಂದ್ರಾರಿ ॥೪॥ ಕೇಳಿದೈ ಯೆಲೆ ತಾತ ಮನ ಹೀ । ಹಾಳಿ ಗೆಡದಿರು ಮೇಣ ದುರಗನು । ಹೇಳಿಕೆಗೆ ಹೆದರದಿರು ಹೇಡೈಸದಿರು ಧೈರ್ಯದಲಿ ॥ ನಾಳಿನಲಿ ನರಮೃಗವ ಮಾರಿಯ । ತಾಳಿಗೆಯ ತಳಕಿಳುಹದಿರೆ ನಿ। ನ್ನಾಲಯವ ಹೊಗಗುಡದಿರೆಂದಸುರೇಂದ್ರ ಘರ್ಜಿಸಿದ ॥ ೫ ॥ ಬೀಳುಕೊಂಡೈಯನನು ಜನಿತ ಕ । ರಾಳ ರೋಷದ ಳಿಳಿದನಸುರಸ । ಖಾಲಯವ ನುಬ್ಬಣವ ಝುಳಪಿಸುತಸುರರೊಗ್ಗಿನಲಿ ॥ ಕಾಲ ಕಡೆಯದ ಝಣರವದ ರಣ । ದೇಳಿಗೆಯ ವೈಯಬ್ಬರದ ರೋ । ಮಾಳಿಗಳ ಹೊಗರಿನಲಿ ಹೊರವಂಟನು ಪುರಾಂತರವ ॥ ೬ ॥ ಜೋಡಿಸಿದ ಹೊಂದೇರಿನಲಿ ಕಾ । ಲ್ನೀಡು ತೊಡರಿದ ವಶ್ವನಿಕರದ । ನೀಡಿ ನಿಗುರಿದ ವಾತುರವೆಗಸು ವಭ್ರಮಂಡಲಕೆ ॥ ಕೂಡೆ ರಕ್ಕಸ ರಥದ ಗಡೆಬಡೆ । ಗಾಡಿಸಿತು ಗಗನವಲಿ ನೆರೆ ಕೈ । ಗೂಡಿದುದು ಬಲವಿರೋಧಿಯ ಹಗೆಯ ಬೆಂಬಳಿಯ ॥ ೭ ॥ ಕೇಳುತವ ನಿಂದ್ರಾರಿಯೆಂದೇ । ಮೇಳವಿಸಿದುದು ಸೇನೆ ಗೋಲಾಂ । ಗೂಲ ರಾಮನ ಸೇನುದಲಿ ಲಂಕಾ ಮಹಾ ಪುರವ ॥ ಮೂಲೆ ನಾಲ್ಕರ ಹೊರವಳಯದಲಿ । ಶೈಲ ಪಾಣಿಗಳಿರಲು ಸಮರಾ । ಖಿಳ ಖಳ ನದನರಿದು ಬಲನಾಲ್ಕಾಗಿ ಹೋರವಂಟ ॥ ೮ ॥ ಪಡುವಣಸಿಲಜಗಾಯ್ತು ರಣರಣಾ । ನಡೆದುದಂಗಜ ಗಂದು ತೆಂಕಣ । ಕಡೆಯ ಲಿಂದ್ರ ದಿಶಾಭಿಭಾಗದೊಳಾಯ್ತು ನೀಲಂಗೆ ॥ ಕಡುಗಲಹ ನಡುವಗಲ ಸಮಯದೊ । ಳೊಡರಿಸಿತು ಸುಗ್ರೀವ ರಘುಕುಲ । ದೊಡೆಯರಲಿ ವಿಗ್ರಹ । ವಿಚಿತ್ರ ಮಹೇಂದ್ರ ನಲ್ಲಿಣನ ॥೯॥ ಸ್ಮರಿಸಿದನು ಶಾಹುವನು ರಾಹುವಿ ನುಂಡ ಜಠರ ಮಧ್ಯದಲಿ ತರಣಿಯ । ನಿರಿಸಿದನು ನೆರೆ ಜಾಹಿದನು ಜೀಮೂತ ಕೋಟಿಗಳ ॥ ಹರಹಿದನು ನೆಲದಗಲದಲಿ ಸಿ । ಬ್ಬರವ

ನಿಬಿಡ ಮಹಾಂಧಕಾರದ | ಹೊರಳಿಯನು ಹೊದಿಸಿದನು ಕತ್ತಲೆಯಲಿ ಜಗತ್ತ್ರ
ಯವ ||೧೦|| ನೆರೆದು ಹಾಯ್ದುವು ಸಿಡಿಲುಗಳು ಮೊರೆ | ದುರವಣಿಸಿ ಕಪಿಭಟರ ಕೈ
ಗಳ | ಗಿರಿಗಳನು ಗಬಲಿಕ್ಕಿದವು ಮುಗಿಲುಗಳು ಮುಂಬರಿದು || ಭರದ ಹೊಯ್ಲಿನ
ಹೊದರಿನಲಿ ಕಡು | ಕಿರಿದವೈ ಕಂಗಳನು ಮಿಂಚುಗ | ಳರರೆ ಮೇಘ ಧ್ವಾನ ದಾಹವ
ಬೆದರಿಸಿತು ಜಗವ ||೧೧|| ಉಸುರಲೇನಚ್ಚರಿಯ ನಸುರನ | ವಿಶಿಖ ವೀ ಕಪಿಭಟರ
ನೆತ್ತಿಯ | ಲಸದಳಿಸಿ ಮೂಡಿದವು ವತ್ಸರಲೆಂಡರಂತರವ || ಸಸಿನದಲಿ ಚಿಗಿ ಚಿಗಿದು
ನೆಲದಲಿ | ಬಸವಳಿದು ಬಾಯ್ದೆರೆದು ಜೀವನ | ಬಿಸುಡು ಕಿರ್ದುದು ಕಿರಿದ ಹಲುಗಳ
ಕರದ ಮುಗ್ಗುಲಲಿ ||೧೨|| ಅರಚಿ ಬೀಳುವ ಕಪಿವೆಣನ ಕ | ಟ್ಟೊರಲಿಕೆಯ ಕೇಳ್ದಸುರ
ಮರ್ದನ | ಮರುಗಿದನು ನಿರ್ಲಕ್ಷ್ಯ ಲಕ್ಷಣ ದಾ ಚರಾಘವನ || ಕುರುಹ ಕಾಣದೆ
ಸಂಧಿಸಿದ ಹೊಂ | ಗರಿಯ ಹಿಳುಕಿನ ಸರಳ ಸಂಜ್ಞೆಯ | ಲರಸಿದನು ಮುರಿಮುರಿದು
ಮೇಘಧ್ವಾನ ನಬ್ಬರವ ||೧೩|| ಮೊಳಗು ವತಿ ರಥ ರವದ ಸರಿಸಕೆ | ಕಳುಹಿದನು ಕವ
ಲಂಬ ಕಡಿವಿಳೆ | ಗಿಳುಹಿದುದು ಕುದುರೆಗಳ ನುಡಿದುದು ಸರಳ ಸಾರಥಿಯ || ನಿಲುಕಿ
ದುದು ಮೇಲಣಿಗೆ ವೈರಿಯ | ತಲೆಯ ತಪ್ಪಿಸಿ ಕೊಂಡು ರಾವಣಿ | ಬಳಿಕ ರಥ ಕಾಲಿಕ್ಕಿ
ಕರೆದನು ಮತ್ತೆ ಮಾರ್ಗಣವ ||೧೪|| ದೇವ ರಾಘವ ಸಹಿತ ನಿಶಿತ ಶ | ರಾವಳಿಯ
ತರಿದೊಟ್ಟಿ ಮೊಳಗಿದ | ತಾವಿನಲಿ ತಡವಿಲ್ಲ ದಶ್ವವರೂಥ ಸಾರಥಿಯ || ಸಾವಿರದ
ನೂರೆಂಟು ಸೂಳಿ ನೊ | ಳೋವದೊವ ನೊಡನೆಚ್ಚು ಮುರಿದನು | ರಾವಣಿಯ ರಣ
ದುಬ್ಬರವ ನಂಬರದ ವಳಯದಲಿ ||೧೫|| ಸೂತನಾಗಲಿ ಮೇಣು ತುರಗ | ವ್ರಾತವಾ
ಗಲಿ ನಘದೊ ಳಸುರ ನಿ | ಶಾತ ಶರಸಂಧಾನ ವಾಗಲಿ ಶಬ್ಧ ತೋರಿದರ || ಯಾತು
ಧಾನ ಧ್ವಂಸಕನ ಸರ | ಜಾತ ತೂಷ್ಣನ ತರಿವುತಿರ್ದುದು | ಭೀತಿಯಲಿ ಬಿಗಿ ದಸುರ
ತೆಗೆಮೋಹಿದನು ಹಿಂಡೆಡೆ ||೧೬|| ನೆನೆದು ಕೊಂಡ ನುಪಾಯ ಕೌಶಲ | ವನು ಮಹಾ
ಮಾಯಾವಿ ಮಾಯಾ | ಜನಕಜೆಯ ನಿರ್ಮಿಸುವೆ ನಂಜಿಸುವೆನು ನೃಪಾಲಕನ || ವನ
ಚರರ ಕಾಳಗವ ಸೀಹೊ | ತ್ತಿನಲಿ ತೆಗೆಸುವೆ ನಿಂದಿನಿರುಳಲಿ | ವನಜ ಗರ್ಭನ ಮೆಚ್ಚಿ
ಸುವೆ ನೆಂದವನು ಮನದಂದ ||೧೭|| ಎಂದು ಹನುಮನ ರಣಕೆ ಸಮರ | ಸ್ಯಂದನವ
ನೂಕಿದನು ಕಪಿಗಳ | ಕೊಂದ ನಗಣಿತವನು ಮಹಾ ಮಾಯಾಭಿಯೋಗದಲಿ || ನೊಂದು
ಕಾಳಗ ಕಾನಲಾರದೆ | ಹಿಂದು ಮುಂದಾ ಯ್ತಖಿಳ ಬಲ ರಘು | ನಂದನನ ನಿಜ
ಭೃತ್ಯ ನೊಬ್ಬನೆ ಮಲೆತ ಸಾಹಸಕೆ ||೧೮|| ಕಾದಿದನು ಬೆಟ್ಟದಲಿ ಮುಷ್ಟಿಯ | ಲಾಡಿ
ಗೊಂಡಟ್ಟಿದನು ಖಳ ಬಯ | ಲಾದ ರಾವಿನ ಲರಸಿದನು ಕಿವಿಗೊಟ್ಟು ಕಿಡಿ ಮಸಗಿ ||
ಆ ದುರಾತ್ಮ ನೊಳೀ ಪರಿಯಲವ | ಣೋದಧಿಗೆ ತರಣಿಯ ತುರಂಗಮ | ವೈದು ವೆನ್ನ
ಒರೊದಗಿ ಕವಸವ ಮೆರೆದ ನಾ ಹನುಮ ||೧೯|| ಮೆರೆ ಮೆರೆಯ ಲವ ನಿಂದ್ರ ವಾರುಣ
ಹರ ಸಖರು ಯಮ ವಹ್ನಿ ಮಾರುತ | ನಿರುತಿ ನೀರಜಭವ ಭವಾಸ್ತ್ರಂಗಳಲಿ ಮಾರು
ತಿಯ || ಸರಿಸದಲಿ ಸೈವರಿದು ಗೆಲವಿನ | ಪರಿಯ ಕಾಣದೆ ಪಾಡಳಿದು ಸೈ | ಸರಿಸಿ
ಮಾಯಾ ಸೀತೆಯನು ಸಿರಿಸಂಪದಲಿ ನಿರ್ಮಿಸಿದ ||೨೦|| ಮಾಯೆ ಯೆಂದರಿವಡೆ ವಿಧಾತ್ರ
ನು | ಪಾಯವೇತರ ದಿಂದ್ರಜಿತುವಿನ | ಮಾಯೆ ಯೆಂತುಟೋ ಶಿವಶಿವಾ ಮಾಯಾ
ಮಹೀಸುತೆಯ || ಪಾಯುಜನ ಸಮ್ಮುಖದೊಳಾ ವ | ಜಿಹ್ರಯುಧಾಂ ತಕ ನೆತ್ತಿ

ತೋರಿಸೆ । ಬಾಯ ಬಿಟ್ಟಳು ಹನುಮ ಕೆಟ್ಟೆನು ಕೆಟ್ಟೆನೆಂದೆನುತ ॥೨೧॥ ಕಂಡ ನಾ ಹನುಮಂತ ಬನದಲಿ । ಕಂಡ ಸೀತೆಯ ರೂಪಿನಬಲೆಯ । ಖಂಡೆಯದ ಬಾಯ್ಧಾರೆಗೌಕಿದ ಕೊರಳ ಕಳಕಳದ ॥ ಚಂಡಿಸಿದ ಕೋಪಾಗ್ನಿ ಬಳಿಕು । ದ್ದಂಡ ಹನುಮಂಗೆದ್ದುದುದರದ । ಗುಂಡಿಗೆಯ ಘನಶೋಕ ರಸ ಗುಡಿ ದುಕ್ಕೆ ನಯನದಲಿ ॥೨೨॥ ಬೆರಳ ಬಾಯೊಳಗಡಿಸಿ ಭಯ ಸಂಗರದ ಸಲೆ ಜೀವಾಭಿಲಾಷೆಯ । ಭರದ ಬಾಯಾರಿಕೆಯ ಬಳಲುವ ಕೊರಳ ಕೊಂಕಿನಲಿ ॥ ಅರಸು ರಘುರಾಜೇಂದ್ರ ಚಂದ್ರಮ । ನರಸಿಯಲ್ಲವೆ ಹನುಮ ಕರುಣವ । ನಿರಿಸಲಾಗದೆ ತನ್ನ ಮೇಲೆನು ತೊದರಿ ತಾ ಮಾಯೆ ॥೨೩॥ ಅರಿಗೋಸುಗ ಸಮರವಿದು ತಾ । ನಾರಿಗೀ ಯಭಿಮಾನ ಲಜ್ಜಾ । ದಾರುಣವು ನಿಮಗಿನ್ನು ಕೇಳೈ ತಂದೆ ಹನುಮಂತ ॥ ಕ್ರೂರ ಕರ್ಮದ ಖಳರ ಕೈಯಲಿ । ತೀರುವಂತಾಯ್ತಕಟಕಟ ಕ । ಣ್ಣಾರ ಕಂಡೈ ತನ್ನ ಪಾಪವ ನೆಂದುದಾ ಮಾಯೆ ॥೨೪॥ ಗಂಡ ಬೇಡೆನೆ ಬಂದೆನತ್ತೆಯ । ನಂಡಲದೆ ನೀ ಹೋಗ ಬೇಡೆನೆ । ಕಂಡವರ ಕನಲಿದೆನು ಕಳುಹಿದ ನೆನ್ನ ಪತಿಯೊಡನೆ ॥ ಉಂಡೆನಾಪತ್ತನು ಸಮಗ್ರದ । ಖಂಡಿತವಲೇ ಹನುಮ ಕೇಡನು । ತಂದೆ ಕಂಡೈ ಕಡೆಯ ಕೆಲಸವೇ ನೆಂದುದಾ ಮಾಯೆ ॥೨೫॥ ಆವ ರಾಯರ ಬಸುರಲಿ ಬಂ । ದಾವರಾಯನ ಮಗನ ಕೈವಿಡಿ । ದೀವಿಧಿಯ ನುಣಲಿದ್ದುದೇ ನೋಡೈಯ್ಯ ಹನುಮಂತ ॥ ಆವ ಪೂರ್ವದ ಫಲವೊ ಬಳಿವಿಡಿ । ದಾವರಿಸಿತೆನ್ನನುವನು ಕಂಡೈ । ಕಾವ ಕರುಣಿಗಳಿಲ್ಲವಿದ ನೋಡೆಂದು ದಾ ಮಾಯೆ ॥೨೬॥ ಮುಡಿವಿಡಿದು ಕರವಾಳ ದಟ್ಟನ । ಲಡಿಗಡಿಗೆ ಹೊಯ್ದೊಯ್ದು ಕುಬುಬಿರಿ । ದೆಡಬಲಕೆ ಬರಸೆಳೆದು ಬೆದರಿಸು ತಳಿಸು ತೊದರಿಸುತ ॥ ಖಡುಗವನು ಮಗುಳೆತ್ತಿ ಝಳಪಿಸಿ । ಪೊಡೆಯಲನುಗೈದನಿಲಜನ ಖಂ । ಡಿಸಿದ ಖಳ ಹೆದರಿಸಿದ ಸುರು ಮಾಯಾ ವಿಲಾಸದಲಿ ೨೭॥ ಪವನಸುತ ನೋಡೆನ್ನ ಪ್ರಾರ । ಬ್ಧವನು ನಿಲದೆ ಹೋಗ ಹೇಳೆಂ । ದವನಿಸುತ ಮಜ್ಜೀವಿತೇಶನ ಮನುಕುಲಾಧಿಪನ ॥ ವನಿತೆ ಯಾಸೆಯ ಬಿಟ್ಟಯೋಧ್ಯೆಗೆ । ರವಿ ತನೂಭವ ಸಹ ಸುಮಿತ್ರಾ । ಭವನು ಸಹಿತವೆ ಹೋಗ ಹೇಳೆಂದೊದರಿತಾ ಮಾಯೆ ॥ ೨೮ ॥ ತೋರು ಕೊಂಡೊಯ್ದವನಿಪಂಗಸು । ಜಾರಿತೆನ್ನುವ ಮಾತ ನೀನಿದ । ಮಾರದಿರು ಕೊಂಡೊಯ್ದಧಿಕಕುಸ್ಥಾನ್ವಯ ಶಿರೋಮಣಿಯ ॥ ಬೇರೆ ಬುದ್ಧಿಯ ಬಳಸದಿರು ಕೊಳೆ । ಗಾರರ ರವದಿರು ಹರುವ ಕಂಡರು । ಸಾರಿದೆನು ನಿನ ಗೈಯ ಹೋಗೆಂದೊದರಿತಾ ಮಾಯೆ ॥ ೨೯ ॥ ಐಸೆ ಮತ್ತೇನೆನುತ ದುಷ್ಕೃತ । ದೋಷವಿದೆಲಾ ವಿಧಾರಜಾರಳ । ವೀ ಸತಿಯ ಸೌಭಾಗ್ಯ ವನಿತೆಯ ಮರಣ ದರುಶನಕೆ ॥ ವಿಾಸಲಿದ್ದುದೇ ಕಣ್ಗಳಿರ ಮರೆ । ಘಾಸಿಯಾದನು ಚಿತ್ತದಲಿ ಪೂ । ರೈಸಿ ಳೆಂದರೆ ಕೊಂಡೀ ಮಾತ ನುಡಿದನು ಮೇಘನಾದಂಗೆ ॥೩೦॥ ತ್ರಿಜಗ ವರಿಯೆ ಪುಲಸ್ತ್ಯ ಮುನಿವಂ । ಶಜನಲಾ ನಿಮ್ಮಯ್ಯ ಯನೀಶ್ವರ । ಭಜಕನಲಾ ಶೃತಿ ಸದಾಗಮಗಳಲಭಿಜ್ಞನಲ ॥ ಭಜಿಸನವನನ್ಯಾಯವನು ಮೇಣ್ । ಭಜಿಸನಿನ್ನು ಸೀತೆಯಲಿ ಕುಡು । ವೃಜಿನ ಕೊದಗಿವೆ ನೋಡು ಮಗನಲ್ಲವಗೆ ನೀನೆಂದ ॥೩೧॥ ವೀರರೊಳಗಗ್ಗಳನು ನೀ ಜಂ । ಭಾರಿಜಿತುವೆಂಬೀ ಪ್ರತಿಜ್ಞೆಯ । ಧಾರಣೆಯ ಹೆಸರುಳ್ಳವನು ಹಳಿಯದಲಿ ತಿಳಿದವನು ॥ ನಾರಿಯ ಸುವನು ಕೊಂದವನೆಂಬಸ । ಕೀರ್ತಿಯನು ಕೈವಿಡಿದು ಕೆಡದಿರು । ಸ್ವೈರಣೆಯ ಕೋ

ಕೊಲೆಗೆ ಮನವನು ಮಾಡಬೇಡೆಂದ ॥೩೨॥ ಬಿಡು ದುರಾತ್ಮರ ಬುದ್ಧಿಯನು ಕೈ।
ಬಿಡಿಸುದಿರು ದುಷ್ಕೀರ್ತಿಯನು ಸಂ। ಗಡಿಗನಾಗದಿರಸುರ ಕೇಳಪಜಯ ನಿತಂಬಿನಿಯ॥
ಕಡೆಗೆ ನೀನೀ ಸತಿಯ ಕವಿವಡೆ । ಕಡಿದು ಬಿಸುಡದೆ ಮಾಣ ನಿನಕುಲ। ದೊಡೆಯ
ನಿಮ್ಮನ್ವಯದ ಬಿಪಿನವನೆಂದ ನಾ ಹನುಮ ॥೩೩॥ ಬರಲಿದರ ದೆಸೆಯಿಂ ದಪಸ್ಪೃಥೆ।
ಮೊರಕ ಲಿವರಿಂ ದಪಜಯವು ಮೇಣ್ । ಬರಲಿ ದಿಳೆಯೊಳ್ ಜಗದ ಜನವಿದ ಕಂ
ಜುವವನಲ್ಲ ॥ ಮರುತ ಸುತ ಕೇಳಸುರರಾ ವಾ । ಸುರ ವಿಕರ್ಮವೆ ಧರ್ಮ ಪಥ
ವೆನು । ಗರಿದು ಬಿಸುಡುವೆ ನಿವಳನೆನು ತ್ತೆತ್ತಿದನು ಖಂಡೆಯವ ॥೩೪॥ ನೋಡು
ನೋಡೆಲೆ ಹನುಮ ಸೀತೆಯ। ನೋಡು ಕಂಡಾ ಕಾಣೆನೆನ್ನದೆ। ನೋಡೆನುತ ಬೊಬ್ಬಿ
ರಿದು ರಥವಗ್ರದಲಿ ಖಂಡೆಯವ ॥ ನೀಡು ಝಳಪಿಸಿ ಹಾ ಸಮೀರಜ। ಕೇಡು ಕಂಡ್ಯೆ
ಯೆಂಬ ಮಾಯಾ। ಜೋಡಣೆಯ ಜಾನಕಿಯ ಕಡಿ ದಿಳುಹಿದನು ಧರಣಿಯಲಿ ॥೩೫॥
ಕಡಿದು ಬೀಳದ ಮುನ್ನಕೋಪದ। ಕಿಡಿಸಹಿತ ಪುಟನೆಗೆದು ತಿವಿದನು। ಝುಡಿತೆಯಲಿ
ಜರ್ಝರಿತ ವಾಗಲು ತೇರು ರಾವಣಿಯ ॥ ಅಡಗಿದನು ಬಳಿಕವನು ಮಾಯೆಯ।
ನಡಪ ನೊಡ್ಡಿ ಸಮೀರಸುತ ಕಡು । ಹಡಗು ಮುರಿದನು ಬಳಿಕ ಮಾಯಾ ಸೀತೆ
ಯಿದ್ದೆಡೆಗೆ ॥೩೬॥ ನಡುಗ ವಂಘ್ರಿದ್ವಯದ ಬಾಯ್ದೆರೆ। ಮಿಡುಕು ವಮಲ ಮುಖೇಂ
ದುವಿನ ತಡೆತಡೆದು ಮುಚ್ಚುವ ತೆರವ ಕಂಗಳ ಕೆತ್ತುವಂಗುಲಿಯ ॥ ಬಿಡುವ ಜೀವದ
ಬಯಲ ಸೀತೆಯ । ಕಡಿ ಯೆರಡರಲಿ ಸುರಿವ ನೆತ್ತರ । ನಿಡು ವನಲ ನೀಕ್ಷಿಸುತ
ಮೂರ್ಛಿತ ನಾದ ನಾ ಹನುಮ ॥೩೭॥ ನಿಂದು ದಬ್ಬರ ವಭ್ರ ದಬ್ಬರ। ನಿಂದ ಗಗನ
ಸ್ಥಳವ ಪೋಲ್ಕೆಯ । ಗುಂದಿದರು ಗಜ ಗವಯ ಶತಬಲಿ ಮುಖ್ಯನಾಯಕರು ॥ ತಂದೆ
ನಕ್ಷಗೆ ಜಲವ ನಕಟಕ । ಟಂದು ಸುರನಾರಿಯರು ಸೂಚನೆ। ಸಂದು ದರಸಂ ಗನಿಲ
ಜನ ನಿಶ್ಶಬ್ದ ದಾಹವನ ॥೩೮॥ ಹನುಮ ನೊಡ್ಡಿ ನೊಳಿಲ್ಲ ಸಿಂಹ। ಧ್ವನಿ ಸುರೇಂದ್ರ
ನಿರೋಧಿ ಸುಪಟಳ। ಘನವದೇನಾದರೊ ಹುತಾಶನ ವಾಲಿ ನಂದನರು ॥ ಅನುಜ ನೀ
ಹೋ ಗಂಗದನ ಬಳಿ। ಗನಿಲಜನ ನಾರೈಲಿಕೆಯ ನೀವ್। ಮನವ ಮಾಡಿರೆ ಜಾಂಬ
ವರೆ ಯೆಂದನು ಬೀಳ್ಕೊಟ್ಟ। ॥೩೯॥ ಬಾ ವಿಭೀಷಣ ದೇವ ನೀ ನಾ। ಪಾವಕನಸುತ
ನೆಡೆ ಗೆಡೆಗೆ ತಿಳಿ। ದೀವಿಘಳಿಗೆಗೆ ಬಹುವ ನೀವೆಂದನಿಬರನು ಕಳುಹಿ ॥ ಆ ವಿರಾಧ
ವಿರೋಧಿ ಚಿಂತೆಯ। ನೋವಿಕೊಂಡಿರೆ ಹನುಮ ನಡೆಗಾ। ತಾವರೆಯ ನಂದನನ ನಂ
ದನ ನಂಜುತ್ತೈ ತಂದ ॥೪೦॥ ಬಸಿತ ಕಂಡ ನಖಂಡ ಬಲ ನು। ಬ್ಬರದ ಕರಹತಿಯಿಂದ
ಕೆಡದಿಹ । ಕರಿಘಟಾವಳಿ ಪಾದ ಘಾತಿಯ ಳಳಿದ ಪಾಯದಳ ॥ ಮರನ ಹೊಯ್ಲಲಿ
ಮುಗ್ಗಿದಶ್ವನ । ವರ ರಥಾಳಿಯ ಸಂದಣಿಯ ಸಂ । ಗರದ ಭೂಮಿಯೊಳ್ ಕಡಿದ
ಸೀತೆಯ ಕಂಡ ನಜಸೂನು ॥೪೧॥ ದೃಗು ಜಲಗಳೊರತೆಗಳ ತೊಳಪುಗೆ। ಯ ಗಳಿ
ತ್ರೋತ್ಸವ ದಸಮ ಸಮರದ। ನಗ ಮಹೀರುಹ ಮುಕ್ತ ಹರಸರ ನೋಡು ತೈತರಲು॥
ತೆಗೆದ ಹರುಷದ ಲೂರ್ವರೆಯ ವ್ಯೆ । ದೆಗಹ ನಿಕ್ಕಿದ ರಾಮಭೃತ್ಯನ। ಜಗದ ಜೀವ
ಕುಮಾರಕನು ಕಂಡಂಜಿ ನಿಂದಿದ್ದ ॥೪೨॥ ಕಂಡನೀ ಕೌತುಕವ ಮುಮ್ಮಳಿ। ಗೊಂಡು
ಮನದಲಿ ಪವನಜನ ಪೋ । ರ್ದಂಡವನು ಹಿಡಿದೆತ್ತಿ ಕರುಣದ ಲಾತಿರೇಕದಲಿ ॥
ಅಂಡಲೆವ ಶೋಕದಲಿ ಸುರರನಿ । ಗೊಂಡೊಗುವ ಕಂಬನಿಗಳಲಿ ಜಿಸ । ಗೊಂಡ

ನೇನಾಯ್ತೆಂದು ಜಾಂಬವ ನಂಜನಾ ಸುತನ ॥೪೩॥ ಚಿತ್ರವಿಸಿದಿರೆ ಜಾಂಬವರೆ ರಘು। ಜೋತ್ತಮನ ಲಲಿತಾಂಗಿಯನು ಮುಗಿ । ಯಿತ್ತು ಕಂಡಿರೇ ರಾಜಕಾರಿಯ ರಾಘವೇಶ್ವರನ ॥ ಕತ್ತಲೆಗೆ ಶಾವಾಯ್ತು ಬೆಳಗಡ। ಗಿತ್ತು ಹಗೆ ತಾನಿನ್ನು ರಣದಲಿ । ಸತ್ತಡೇನೇಣಿದ್ದಡೇನಿದ ಕಂಡಿರೇ ಯೆಂದ ॥ ೪೪ ॥ ಕಲಹಕೆಿದು ಕಡೆಯೆಂದು ಸೀತೆಯ । ನೆಳೆದು ತಂದನು ಕಲಹಕಾಖಂ । ಡಲ ವಿರೋಧಿ ವಿಭಾಡಿಸಿದ ನವಸಿಜೆಯ ತನುಲತೆಯ ॥ ಗೆಲವು ಸಿದ್ಧಿ ಸದಾಯ್ತು ಹೊತ್ತೆವು । ಕೊಲೆ ಹೊಲೆಗಳೆಂಬುವದು ದ್ರೋಹಕೆ। ಕಳಶವಾದೆನು ರಾಮ ನೇನೆಂದೆಂಬನೋ ಯೆಂದ ॥೪೫॥ ಅನುವರದೊಳರಿಭಟನ ಜೀವವ। ಜನರಿಸದೆ ಜಾನಕಿಯ ಕೊಲಿಸುವ । ದನುನಯವೆ ನಿನಗೆಂದು ರಘುರಾಜೇಂದ್ರ ನವ್ಮೊಡನೆ ॥ ಮುನಿಯದಿರನನ್ಯಾಯ ಹೋಗೆಂ। ದಿನಜ ವೋರೆಯ ತಿರುಹದಿರ ನಿ। ನ್ನನಗೆ ಗತಿಯೇನೆಂದು ಮರುಗಿದ ನಂಜನಾಸೂನು ॥ ೪೬ ॥ ಮರುಗದಿರು ಹನುಮಂತ ನಿನ್ನಲಿ । ಕೊರತೆಯುಂಟೇ ಮಗನೆ ಜೀವವ । ತೊರೆದವರ ನೆಬ್ಬಿಸುವ ದಿವ್ಯೌಷಧಿಗ ನೀನಲ್ಲ ॥ ಮರೆಯ ಮಾಯಾಸುರರ ಕಪಟದ। ನಿರಿಗೆಯೋ ನಿಜವೋ ವಿಚಾರಿಸಿ । ಯರಿವ ತೆಗೆದಿದ ಕೊಂಡು ನಡೆ ಮನಗುಂದಬೇಡೆಂದ ॥ ೪೭ ॥ ಬಳಿಕ ಮಾಯಾ ರೂಪಕದ ವೈ। ಥಿಲಿಯ ಖಂಡಿತ ತನುವೆರಡ ತಂ। ದಿಳುಹಿದನು ಮಾಯಾ ಸುರೇಂದ್ರನ ಬಳಿಯಲಾ ಹನುಮ ॥ ಎಲೆ ಹನುಮ ಕೇಳೆಂದು ಹುಯ್ಯಲ । ಕೆಲಸವೇನಾಯ್ತುದುವೆ ಯೆಂದಳ । ವ್ರಳಿದು ಮೆಲ್ಲನೆ ಮಹಿಗೆ ಮೈಯಿಕ್ಕಿದನು ಮೂರ್ಛೆಯಲಿ ॥ ೪೮ ॥ ತುರುಗಿದಶ್ರುಗಳಿಂದ ಮುಮ್ಮಲ । ಮರುಗಿದನು ಸುಗ್ರೀವ ನಂಬಕ। ಬೊರತೆಗಳ ಜೀವನದಲಿದ್ದುದು ಬೇಹ ಭಟನಿಕರ ॥ ಅರಸಿತಹೆ ನವ್ರಪಧಿಯ ಸೇತಕೆ। ಮರುಕ ವತಸಂಗೆಂದು ಗಮನದ । ಹೊರಕೆಯಲಿ ಹನುಮಂತ ನಿದ್ದನು ಕಂದ ಕೇಳೆಂದ ॥೪೯॥ ಎಚ್ಚರಿಕೆ ತನ್ನಿಮಿಷವಲಿ ಮನ। ದೊಚ್ಚತನ ವಲ್ಲಭೆಯ ನನೆ ಹಿಸಿ। ಬಿಚ್ಚಿ ಕೆದೆಯನು ಕೂಡೆ ಸೀತೆಯ ಗುಣವ ನಾಲಗೆಗೆ ॥ ಉಚ್ಚರಣೆ ಗೊಡರಿಸಿತು ದೇಹದ। ಮುಚ್ಚು ಮಕರಿಸು ತರಿದು ನೃಪ ತ। ನ್ನಿಚ್ಛೆಯಲಿ ಹಲುಬಿದನು ಹಲವಂಗವಲಿ ಜಾನಕಿಯ ॥ ೫೦ ॥ ರಾಜವಂಶದೊಳಧಿಕ ನೃಪ ಋಷಿ । ರಾಜ ಪರಮೇಶ್ವರ ನನಿಮಿ ಕುಲ। ರಾಜಾಧೀಶ್ವರನ ಸುಕ ಮಾರಿ ಗಕ ಟಕಟ ॥ ಈ ಜಿಗುಪ್ಸೆಯ ಮರಣವನು ವಿಧಿ। ಯೋಜಿಸಿವನೇ ಸೀತೆ ಹಾ ನಿಮಿ। ರಾಜನಂದನೆ ಹಾ ಯೆನುತ ಹೊರಳಿದನು ರಘುನಾಥ ॥ ೫೧ ॥ ತೆಗೆದು ತಕ್ಕೈಸಿದನು ಗುರುಕುಚ । ಯುಗದ ತುಂಡನು ನೋಡಿದನುನಯ । ನಗಳ ಲವಲವಿಕೆಗಳಾನನ ವನು ನಿತಂಬಿನಿಯ ॥ ಮಗುಳೆ ಮಗುಳಡಿಗಡಿಗೆ ತೆಲುಗರ। ಪ್ರಗಳ ಲವಲಾಧರವ ಚುಂಬಿಸಿ। ನಗೆನುಡಿಯ ನೊಡರಿಸುತ ಕರೆ ಕರೆದಳಲಿದನು ರಾಮ ॥೫೨॥ ಸೀತೆ ಸೀತೆ ವಿದೇಹ ಸುತೆ ಭೂ! ಜಾತೆ ಭುವನಖ್ಯಾತೆ ಕೇಳೆ। ಸ್ನೇತ ಕೆನ್ನೊಳು ನುಡಿಯೆ ಬಲ್ಲೆನು ನಿನ್ನ ಮನ ಮುನಿಸ ॥ ಶಾತಕುಂಭದ ಮೃಗವ ತಾರವ । ಖ್ಯಾತಿಯೇ ತಪ್ಪುಂಟು ತನ್ನಲಿ । ಮಾತು ಪುಸಿಮುದು ಕೈಮುಗಿವೆ ವಾವಿನ್ನು ನುಡಿ ಯೆಂದ ॥೫೩॥ ಹಗೆಯ ಕೊಲಲರಿಯದೆ ಛಲೋಕ್ತಿಯ। ನಗಲಿಸಿವ ನೆಂದೆಂಬ ಮನಸಿನ। ಬಿಗುಹ ಬಿಡು ನಂಬುಗೆಯ ಕೋ ಕೊಲುವೆನು ದಶಾನನನ ॥ ನಗಮುಸುತ ಮಾಡಿನ್ನು ನುಡಿ ಮಾ। ತುಗಳು ಹೊರವಡ ಲೆನ್ನ ಕೂಡಿನಿ।

ತಗಡುತನ ವೇನಕಟ ಕೃಪೆ ನಿನಗಿಲ್ಲಲಾ ಯೆಂದ ॥೫೪॥ ಏಕಪತ್ನೀ ವ್ರತದ ನಿಷ್ಠೆಯ ।
ನೂಕಿದೆನೆ ನಡವಳಿಕೆಯೊಳಮಲೇ । ಕ್ಷ್ವಾಕು ಕುಲಜರ ಕೀರ್ತಿಯನು ಕೆಡಿಸಿದೆನೆ
ದುಷ್ಕೃತಿಗೆ ॥ ಸೋಕಿದೆನೆ ಶೃತಿ ಮತಕೆ ಸಲ್ಲದ । ಕಾಕರನು ಕೂಡಿದೆನೆ ತನ್ನೊಡ ।
ನೇಕೆ ನೀಮಾತಾಡೆ ನಿನಗಿದು ಗುಣವೆ ಹೇಳೆಂದ ॥೫೫॥ ಕಾಪುರುಷರನು ಕೈವಿಡಿದು
ನಿನ । ಗೀಪರಿಯ ನುಣಲಿರ್ದುದ ಹೀ । ನೋಪಮನ ಹಿಡಿ ದಡಪಿ ಗ್ರೊಯ್ಯಪ
ಪಾದುದೇ ಯಕಟ ॥ ಪಾಪಕರ್ಮದ ಫಲಿತ ಶೌರ್ಯನ । ಕಾಪಥನ ಕಾರುಣ್ಯ ಹೀನನ ।
ವೈಪರೀತ್ಯನ ವರಿಸಿದುದ ಕಿಂತಾಯ್ತು ನಿನಗೆಂದ ॥೫೬॥ ವನಕೆ ಬರಬೇಡೆಂದು ನುಡಿ
ದರೆ । ಮನಕೆ ತಾರದೆ ಬಂದೆ ನಿಮ್ಮಯ । ಜನಕ ಕೇಳಿದಡೇನ ಹೇಳುವೆ ಮರಿಯ
ದೇನೆನಗೆ ॥ ಜನನಿಯರಿಗೇನೆಂಬೆ ಭರತಂ । ಗನುಜ ಶತೃಘ್ನರಿಗೆ ಸೀತೆಯ । ನನುವ
ರಿದು ರಣ ಬಲಿಗೆ ಚಾಚಿದೆ ನೆಂಬೆನೇ ಯೆಂದ ॥ ೫೭ ॥ ಇನ್ನು ಹಗೆಯನು ಕೊಂದು
ಕಾಂಬ ವು । ಹೋನ್ನತಿಕೆ ಯೇನಾವು ದಕಟೆನ । ಗಿನ್ನು ನಿನ್ನಯ ಮರಣದಲಿ ಮಗು
ಳಿನ್ನು ಜೀವಿಸುವ ॥ ಮನ್ನಣೆಯ ಬದುಕಾವುದೆಲೆ ಸಂ । ಪನ್ನೆ ಸೊಬಗಿನ ಕಣಿಯೆ
ಕಾಮನ । ಕನ್ನಡಿಯೆ ರತಿಸತಿಯ ಮುಂಗೈಗಿಳಿಯೆ ಹೇಳೆಂದ ॥೫೮॥ ಸೇವೆಯಲಿ
ತೊತ್ತಾಗಿಹೆ ಪ್ರ । ಜ್ಞಾವಿಶೇಷಕ ಮಂತ್ರಿಯಾಗಿಹ । ಭಾವಿಸಲು ಸಖಮಾಳ್ಪ ಪರಮ
ಸ್ನೇಹವನು ಮಾಳ್ಪೆ ॥ ತೀವಿದತಿಶಯರತಿಗೆ ವಿವಿಧಕ । ಳಾವಿಚಿತ್ರದ ವೇಶ್ಯೆಯಾ
ಗಿಹೆ । ಭೂವಧುವಿಂತನಗೆ ತೋರುವೆ ಸೈರಣೆಯಲೆಂದ ॥೫೯॥ ಮರೆವೆ ನಾ ನಿನ್ನಾವ
ಪರಿಯಲಿ । ಮರೆಯ ತೆರಹಿನ ಗುಣವ ನಿನ್ನಲಿ । ಕುರುಹುಗಳ ನೆಳ್ಳನಿತು ಕಾಣೆನು ಸೀತೆ
ಹೇಳೆನುತ ॥ ಮರುಗಿದನು ಮನದಲಿ ಮನೋರಥ । ದುರುವ ಕಲ್ಪ ಮಹೀಜ ವಕಟಾ ।
ಮುರಿಯಿತೇ ಯಿಂದಿನಲಿ ತನಗೆಂದೊರಲಿದನು ರಾಮ ॥ ೬೦ ॥ ರೂಪ ನೆನೆ ನೆನೆ
ದೊಮ್ಮೆ ಸುರತಾ । ಲಾಪ ದಭಿನಯ ಗೊಮ್ಮೆ ಪತಿಸೇ । ವಾ ಪುರಸ್ಕೃತಿಗೊಮ್ಮೆ ಸಚ್ಚ
ರಿತಾನುರಂಜನೆಯ । ನೈಪುಣ್ಯತೆ ಗೊಮ್ಮೊಮ್ಮೆ ಸಕಲ ಕ । ಳಾಪಸಂಗ್ರಹ ಕೊಮ್ಮೆ
ನಿರ್ಜಿತ । ಕೋಪಮುಖ ಕೊಮ್ಮೊಮ್ಮೆ ನೆನೆ ದಳವಳಿದ ನಾರಾಮ ॥೬೧॥ ಬಂದನಾ
ಸಮಯದಲಿ ಮಾನವ । ರಂದದಲಿ ಹಳಲಿಸುವ ಹರಿಯೆಡೆ । ಗಿಂದು ಧರನ ಸಮಾನ
ನಘದೂಷಣ ವಿಭೀಷಣನು ॥ ನಿಂದು ನೋಡಿದನುಭಯನಾಟಕ । ದಂದವನು
ಸರ್ವಜ್ಞ ರಾದವರು ॥ ಹಾವುಗಳ ಹೆಜ್ಜೆಗಳ ಬಲ್ಲವ । ರಾವು ನಮ್ಮಾ ಯಸುರಾಂ
ಗವ । ನಾವು ಬಲ್ಲೆವು ಬಿಡು ವೃಥಾನಾಟಕವ ನೀನೆಂದ ॥೬೨॥ ಇದು ಕಣಾ ಮಾಯಾ
ವಿಗಳು ಮಾ । ಡಿದ ಮಹಾ ಶಾಂಭವದಿ ಕೆಲಸದ । ಸುದತಿ ಸುಳಿದರೆ ಬಲ್ಲೆವಾವ್
ನಮ್ಮವರ ಮಾಯೆಗಳ ॥ ಇದಕೆ ಚಿಂತಿಸಬೇಡ ಮೇಲಣ । ಹದಕೆ ಕಾರ್ಯವ ನೆನೆ
ವುದೇ ತಾ । ವಿದಿತ ವೀಪರಿಯ ಪ್ರಲಾಪವು ವ್ಯರ್ಥ ನಿಮಗೆಂದ ॥೬೩॥ ಕಳುಹು
ಹನುಮನ ನಮ್ಮೊಳೊಬ್ಬನ । ಕಳುಹುವೆನು ನೀವ್ ನಂಬದಿರೆ ಮಂ । ಗಳೆಯ ಮನು
ಕುಲ ರಾಜಪುತ್ರಿಯ ಪರಮಸುವ್ರತೆಯ ॥ ಕುಲಯುತೆಯ ಕಲ್ಮಷ ವಿಹೀನೆಯ । ಕಲಿ
ಮಲ ಪ್ರಧ್ವಂಸಿನಿಯ ನಿ । ರ್ಮಲೆಯ ನೀಕ್ಷಣ ನೋಡಿ ಬರಲೆಲೆ ದೇವ ಕಳುಹೆಂದ ॥
ಅಲ್ಲಿ ಸೀತಾದೇವಿಯರು ಬಳಿ । ಕಿಲ್ಲದಿರೆ ನಿಮ್ಮಂಘ್ರಿ ಸೇವೆಗೆ । ಸಲ್ಲದವ ತಾನ್ನೈಸಲೇ
ಬಿಡು ಮನದ ಸಂಶಯವ ॥ ಕೆಲ್ಲೆಗೌಕಿ ಕಲಾಪವನು ಹುಸಿ । ಯಿಲ್ಲ ತನ್ನಲಿ ಕಳುಹು

ಯೆನೆ ಕರ। ಪಲ್ಲವದ ಸಂಜ್ಞೆಯಲಿ ಕಳುಹಿದ ನರಸ ನಸಿಲಜನ ॥೬೬॥ ಸಚಳಿನಲ್ಲಾ ಹನುಮ ಶರಣನ। ಸಚಿವ ಸಹ ನಡೆತಂದ ಸಿಂಧ್ರಿಯ। ಶುಚಿ ಯಶೋಕಾವನಕೆ ಕಂಡರು ಲೋಕಪಾವನೆಯ ॥ ಪ್ರಚುರ ಪುಣ್ಯಾಂಗನೆಯ ಜಯಜಯ। ವಚನದಲಿ ಕೈಮುಗಿದು ಮರಳಿದ । ನಚಳ ಧೀರೋದ್ಧಾತ ನೆಡೆ ಗಪರಾಹ್ನ ಸಮಯದಲಿ ॥೬೭॥ ದೇವಿಯರ ದೇವರ ಗುಣಸ್ತವ। ಸೇವೆಯಲಿ ಸಚ್ಚೀವಿಗಳು ಮಾ। ಯಾವಿ ಯೊಡ್ಡಿದ ಮಾಯೆಯಿದು ನಿಜಶರಣ ನಂದಂತ ॥ ಆವ ಸಂಶಯವಿಲ್ಲ ಹೊಲ್ಲಹ। ನೋವದಿರಿಯೆನೆ ವರ ವಿಭೀಷಣ । ದೇವನನು ಕೊಂಡಾಡಿದರು ಕಮಲಜ ಸುತಾದಿಗಳು ॥೬೮॥ ಮುಟ್ಟಲಾ ಹರಿ ಶರಣ ನಾಕ್ಷಣ । ಬಟ್ಟ ಬಯಲಾಯ್ತಿಂದ್ರಜಿತು ಕರು । ವಿಟ್ಟ ಮಾಯಾರೂಪು ರಾಮಾದ್ಯಖಿಳ ಕಪಿಬಲವ ॥ ಅಟ್ಟೆ ಗಹಗಹಿಸಿದುದು ಗುಡಿಗಳ। ಕಟ್ಟಿದುದು ಸುರಸೇನೆ ದಿವಿಜರ । ಪಟ್ಟಣದ ಲೊದರಿದವು ಬಹು ವಿಧ ವಾದ್ಯ ಸಂದೋಹ ॥೬೯॥ ಪೊಡವಿಪನ ಸಹಭವನ ಹರುಷದ। ಹಡಗು ತಿರುಗಿತು ರಘುಪತಿಯ ಕೈ। ಲೆಡೆಯ ಶಿಶು ಹೊಂಗಿದನು ಹೊಂಪುಳಿ ಯಾದ ನಾ ಸೀಲ ॥ ಅಡಗಿದುದು ಬಳಿಕಂಬುಧಿಯ ನಡು । ಗಡಲೊಳಗೆ ರವಿಬಿಂಬ ರಘುಕುಲ । ದೊಡೆಯ ತೊರವೆಯ ರಾಮ ಹೊಕ್ಕನು ತನ್ನ ಪಾಳೆಯವ ॥ ॥೭೦॥

ನಲವತ್ತೊಂದನೆಯ ಸಂಧಿ ಸಮಾಪ್ತಂ.

ನಲವತ್ತೆರಡನೆಯ ಸಂಧಿ.

ಸೂಚನೆ॥ ರಾಮ ರಘುಜಾನುಜನು ರಕ್ಕಸ । ರಾಮದಳವನು ಮುರಿದು ನಿರ್ಜರ। ರಾಮಜಿತುವಿನ ಕ್ರತುವ ಕೆಡಿಸಿದ ನಂದಿ ನಿರುಳಿನಲಿ ॥

ಪದ್ಯ॥ ಕೇಳಿರೈ ಕಾಕುಸ್ಥ ವಂಶ ವಿ । ಶಾಲರಿರ ಬಲಭಂಜನಾರಿ ಮ। ಹೀಲತಾಂಗಿಯ ಮಂಗಳ ರೂಪಿನ ಕಪಟ ಕಾಮಿನಿಯ ॥ ಬಾಳಿನಲಿ ಬರಿಕೈದು ಬವರಕೆ। ತಾಳಲಾರದೆ ಹನುಮನಲಿ ಸೇ। ನಾಳಿ ಸಹಿತೋಸರಿಸಿನಿಂದನು ಪುರದ ಬಾಹೆಯಲಿ॥೧॥ ಸೋಲವಮುಖದಲಿ ಪುರವ ಹೊಗಲ । ಚ್ಯಾಳುತನ ಕೂಣಯವು ತನ್ನಯ । ಮೇಲೆ ಬೀಳದೆ ಮಾಣದೈಯ್ಯಂಗಿತ್ತ ಭಾಷಿತವು ॥ ಖೂಳಹೆ ನೆಂದಿಂದ್ರಜಿತು ಹಿ। ಯ್ಯಾಳಿಯಲಿ ತಮ್ಮಸ್ಸಯಾಗತಿ । ಯೇಳಿಗೆಯ ಮನದೇವತೆಯ ನೋಲೈಸಲೈತಂದ ॥೨॥ ದಳವ ಮೇಳೈಸಿದನು ತತ್ಕುಂ। ಭಿಣಿಯ ಶೈಲದ ತಪ್ಪಲಲಿ ನೆಲೆ। ಗೊಳಿಸಿದನು ಸೈನಿಕವ ಸಪ್ತವ್ಯೂಹ ರಚನೆಯಲಿ ॥ ಬಳಿಕ ಮಾಲಿಸಿ ಹೋಮ ದುಜ್ಜುಗ । ವಳವಡಿಕೆಯಲಿ ರಾಕ್ಷಸ ದ್ವಿಜ। ಕುಲ ಸಹಿತ ಹೊಕ್ಕನು ನಿಕುಂಭಿಣಿ ಯಮಳ ಮಂಟಪವ ॥೩॥ ಏಳು ಸುತ್ತಿನೊಳೊಡ್ಡು ಬಲಿದುದು । ಶೈಲದೊತ್ತಿನ ಲಾಜಿ ಗಿನ್ನೊ। ರೇಳ ರಕ್ಷೋಹಿಣಿಯ ಸಂಖ್ಯೆಯ ಲಸಮ ಸಂಗರಕೆ ॥ ಭಾಳ ನೇತ್ರ ಸರೋಜಗರ್ಭ ರ। ಗೇಳುಯುಗ ಪರ್ಯಂತ ಕಾದಲು । ಕೋಲು ತೊಗವ ಪರಿಯಪೊಲು ರಚಿಸಿದನು ರಾತ್ರೆಯಲಿ ॥೪॥ ಹೊಕ್ಕನಾ ಕ್ರತುಮಂಟಪವ ನವ। ಸೆಕ್ಕತುಳದಲಿ ನವ ವಿಧವ ಲಾ। ರಕ್ಕಸರ ಮನೆದೇವತೆಯ ಮಾಯಾದಿ ದೇವತೆಯ ॥ ಎಕ್ಕತುಳದಲಿ ಪೂಜಿಸಿದ ನುಣ।

ಲಿಕ್ಕಿದನು ನರನಮಾಸಂವನು ಯ | ಜ್ಞಕೆ ದೀಕ್ಷಿತನಾದ ನಲ್ಲಿನ್ಮೇಲೆ ಶಕ್ರಜಿತು ||೫|| ವೀರಬಾಹು ಸುಬಾಹು ದುರ್ಮುಖ | ಘೋರಬಲ ದುರ್ಜಯ ದುರಾಸ | ಕ್ರೂರ ದಂಷ್ಟ್ರ ಕರಾಳ ದುಷ್ಟ ವಿಕರ್ಣ ಶಠಕರ್ಣ || ಸಾರಮೇಯಾನನ ವೃಕಾನನ | ಸೈರಿಭಾನನ ಮುಖ್ಯರನು ಸುರ | ವೈರಿ ತನ್ನ ದಿರಿನಲಿ ಸಿಲಿಸಿದ ರಂಗರಕ್ಷಣೆಗೆ ||೬|| ಅರುಣ ಸಲಿಲಾಜ್ಯಗಳ ನರುಣಾಂ |. ಬರವ ನರುಣ ಸುಗಂಧ ಸಾರವ | ನರುಣ ಪುಷ್ಪಾಕ್ಷತೆಯ ನಾಯಕಿ ಕಾಂಸ್ಯ ಪಾತ್ರೆಗಳ || ಕರಿಯ ಮೇಕೆಯ ಕಾಳಸರ್ಪನ | ತರಿಸಿ ತಾರಿಯ ಸಮಿಧೆಗಳ ಸಂ| ವರಿಸಿ ದೀಕ್ಷಿತನಾದ ನಾಖಿಳ ಮಾರಣಾಧ್ವರಕೆ ||೭|| ಬಸುರ ಬಗಿದಸು ತೆಗೆದ ನದರದ | ವಿಷಮ ವಹ್ನಿಯ ನಸುರ ನೆಲುಗಳ | ಹಸರಗಳ ಸವಿಾಧೆಗಳ ಕೋಣ ತ್ರಯದ ಕುಂಡದಲಿ || ಅಸುರ ವಿಪ್ರಾವಳಿಯ ಥರ್ವಣ | ದೆಸವ ಮಂತ್ರಾಗಮದಿ ಸಂಸ್ಥಾ | ಪಿಸಿದ ನಸ್ತ್ರಾಳಿಯ ಪಂಸ್ತರಣದಲಿ ಹುತವಹನ |೮|| ಆಗಳಾಸುರ ಕರ್ಮವಿಧಿ ವಿಹಿ | ತಾಗಮದ ಲುದಕಾಮಿಷದ ಲಾ| ಚ್ಛಾಂಗಗಳ ಛಲಗಳಲಿ ಕೃಷ್ಣೋರಗನ ಮಾಂಸದಲಿ | ಮೇಗೆ ತಿರಿಯ ಕುಜಾತಿಗಳ ಸಂ | ಚೋಗಗಳ ನೆಣಗಳಲಿ ನೆತ್ತರಿ | ನೋಗರದ ಚರುಗಳಲಿ ಪಟುಗೊಳಿಸಿದರು ಪಾವಕನ ||೯|| ಹೇಳಿದನು ಬಳಿಕಾಹುತಿಗಳನು | ತಾಳಿಸಿತು ಹೋಮಾಗ್ನಿ ಧೂಮ | ಜ್ವಾಲೆಯಲಿ ಪಸರಿಸಿತು ಪಶುಮಾಂಸದ ಮಹಾಗಂಧ || ಘಾಳಿ ನೆಗಹಿದು ದಭ್ರ ದಮರರ | ಪಾಳಯಕೆ ಬೆದರಾಯ್ತು ರಘುಭೂ| ಪಾಲ ಬಲದಲಿ ಹೊಗೆಯ ಕೊರಳಿಯ ಹೊದುರ ಹೊಯ್ಲಿನಲಿ ||೧೦|| ಕಡಲು ಕುಡಿದುಕ್ಕಿದುದು ತಾರಕೆ | ಸಿಡಿದು ದವನಿಗೆ ಧರಣಿ ಕಂಪಿಸಿ | ನಡುಗುತಿರ್ದುದು ಸುರರ ನಗರಾವಳಿಯ ಲಖಿಳಜನ || ಮಿಡುಕುತಿರ್ದುದು ತಾಪದಲಿ ಶಿಖಿ | ಪೊಡವುತಿರ್ದುದು ದೆಸೆಗಳನು ಮನ | ನಡುಗಿ ರಾಘವರಾಯ ಬೆಸಗೊಂಡನು ವಿಭೀಷಣನ || ಏನಿ ದದ್ಭುತ ತಾಪ ಶಿಖಿ ಜಠ | ರಾನುಗತ ವಾಗಿದೆ ನಿಶಾಚರ | ರೇನ ಬಗೆದರೋ ನಮಗೆ ಮಪ್ರತಿ ಕಾರ್ಯ ಸಾಧನವ || ನೀನು ಬಲ್ಲೈ ನಿನ್ನ ಮನದನು | ಮಾನವಾವುದು ಹೇಳು ನಮಗೆನ | ಲಾ ನರೇಂದ್ರಂಗಾ ವಿಭೀಷಣದೇವ ನಿಂತೆಂದ |೧೨|| ರಾಮ ಚಿತ್ತೈಸಾಭಿ ಚಾರದ | ಹೋಮವಿದು ರಾವಣಿಯ ನಿಂದಿನ | ತಾಮಸಿಯ ನವ ಕಳೆದನಾದರೆ ಹರಿವು ಬಳಿಕೆಮಗೆ || ಆ ಮಹೇಂದ್ರ ವಿರೋಧಿ ಯೆಡೆಗೆ ಸ| ನಾಮರನು ಬೀಳ್ಕೊಡು ಬಲಾನ್ವಿತ | ನಾ ಮಹಾಪಾತಕನ ಕೊಲುವದೆ ಸಮಯವೀಗೆಂದ ||೧೩|| ನಿನ್ನ ಲುಂಟೀ ವರುಷ ಹನ್ನೆರ | ಡನುವ ವಾಸರ ವವರು ಲಂಬ ವಿ| ಭಿನ್ನ ನಿದ್ರಾವಶರು ವನಿತಾ ಸಂಗವರ್ಜಿತರು || ಉನ್ನತಾಹವ ವೀರರುಳ್ಳಡೆ | ತನ್ನ ಬಳಿಮಲಿ ಕಳುಹು ತಡನೇ | ಕಿನ್ನು ಬೇಗ ವಿಚಾರಿಸೆಂದು ವಿಭೀಷಣನು ನುಡಿದ || ೧೪ || ಶಿರವ ಮುಗಿ ದಿದಿರಾಗಿ ನಿಂದಿ | ರ್ದರಿ ದಿಶಾಪಟ ಮಲ್ಲ ಲಕ್ಷ್ಮಣ | ನರಸಗೆಂದನು ಭಟರ ಬೇರಿ ನ್ನರಸ ಲೇಕಿನ್ನು || ನಿರವಿ ಸಹಿತನ ವಧೆಗೆ ವೈರಿಯ | ಶಿರವ ತಂದಿಳುಹುವೆನು ದೇವರ | ಚರಣದೆಡೆಯಲಿ ಚಿಂತೆ ಬೇಡಿಧಕೆಂದು ಕೈಮುಗಿದ || ೧೫ || ನಿನಗನಿತು ಗುಣವುಂಟೆ ವುಂಟಾ | ದನಿಮಿಷಾರಿಯ ಗೆಲಿದ ಗೆಲವಿನ | ಕೊನೆಯುಲಸುರುವೆ ನೀಗ ಬೆಸಸೆನಗೆನುತ ನಿಂದಿರಲು || ಧನು ತನುತ್ರ ಶರಾವಳಿಯ ಕೊಂ | ಡನುವರಕೆ ಕೊರವಂಟನಾ ಯಾ | ಮಿನಿ ಯೊಳಾಹವಧೀರ ಶೌರ್ಯೋದ್ಧಾರ ಸೌಮಿತ್ರಿ||೧೬||

ಕಳುಹಿದವು ಬೆಂಬಳಿಯ ತಮ್ಮನ । ಕೊಳುಗುಳದ ಹದಕಂಜುತಾ ಖಂ । ಡಲನ
ಬೊಮ್ಮನ ನಂಜನಾನಂದನನ ನಗ್ನಿಜನ ॥ ಬಳಿಕವರ ಸಂರಕ್ಷಣೆಗೆ ಕೈ । ಗೊಳಿಸಿದನು
ಜಾಂಬವರ ಹರಿದುದು । ಬಲಿಮುಖರ ಬಲುಧಾಳಿ ನೆಬ್ಬರದ ಖರ್ವ ಸಂಖ್ಯೆಯಲಿ ॥೧೭॥
ಮುತ್ತಿದರು ಬಳಿಕಾ ಶಿಲೋಚ್ಚಯ । ಕೊತ್ತನಿಕ್ಕಿದ ಬಲದ ಬೊಬ್ಬೆಗೆ । ಕಿತ್ತುಹಾರಿದ
ವದ್ರಿನಿದ್ರವವಾಗ ಲಭ್ರದಲಿ ॥ ಹತ್ತಿದುದು ಕೆಂಧೂಳಿ ಮಲತವ । ರೊತ್ತಿದರು ಬಲು
ಗಡಿತದಲಿ ನೆರೆ । ನೆತ್ತರೋಕುಳಿಯಾಯ್ತು ಶಾಕಿನಿ ಡಾಕಿನೀ ಜನಕೆ ॥ ೧೮ ॥ ನಾಕು
ವ್ಯೆಯ್ಯಲಿ ನಿಮ್ಮ ಕಪಿಬಲ । ನೌಕಿ ಹೊಕ್ಕವು ಹೊಯ್ದು ಮರದಲಿ । ನೂಕುವೆಟ್ಟಿಂಗಳ
ಕರೋಗ್ರ ಸಮಗ್ರಘಾತದಲಿ ॥ ಆ ಕಪಿಗಳುಬ್ಬಟೆಯ ಕೊಲೆಯ ಸ । ವಿಾಕಪಂಗದ
ಶಿರಗಣಿಯ ಲೋ । ಕೈಕ ವೀರರ ಮುಂಡ ಕುಣಿದವು ಕೋಟಿ ಸಂಖ್ಯೆಯಲಿ ॥ ೧೯ ॥
ಏರುವರು ತದ್ಗಿರಿಯ ನಿವರವ । ರೇರಗುಡ ದಿಳಿಗೆಡಹುವರು ಮಗು । ಳೇರಿ ಹತ್ತುವ
ರಿವರು ತಲೆವಟ್ಟವರು ಹೊರವಡಿಸಿ ॥ ಜಾರು ಗುಟ್ಟುವರೀಪರಿಯ ರಿ । ನ್ನೂರುಕಣೆ
ಯದ ಕದನದಲಿ ಕಲಿ । ಯೇರಿ ಕಾಯ್ದರು ಸೇನೆ ಸೇನೆಯೊಳಬುಗ ಕೇಳೆಂದ ॥ ೨೦ ॥
ಎಂತುಟೋ ಸುಗ್ರೀವನಾಜ್ಞಾ । ಮಂತ್ರಶಕ್ತಿ ಮಹಾಧನದ ಬೇ । ಳ್ವಂತು ದೇಶವ
ನಿತ್ತು ಮನ್ನಣೆಯಲಿ ಮಹಾ ಭಟರ॥ ಸಂತವಿಟ್ಟವ ಹೊದಗುವುದು ತಾ । ನಿಂತು ದುರ್ಲಭ
ವಖಿಳದೆಸೆಯ ವ । ನಾಂತರದ ಸ್ವೇಚ್ಛಾವಿಹಾರಿಗಳೊದಗಿ ತಾಜಿಯಲಿ ॥ ೨೧ ॥ ಪಡಿ
ಭವಿಸಿ ತಲೆಯೊತ್ತಿ ಕರಿಗಳ । ಕೆಡಹಿದರು ಕುದುರೆಗಳ ಜೀವವ । ಕೊಡಹಿದರು ಕವಿ
ದೆಸೆವ ರಥಿಕರ ರಥದ ಜೋಡಣೆಯ ॥ ಹುಡಿಬಡಿದ ರೊಳಹೊಗುವ ಪದಚರ । ಪಡೆಯ
ಪದ್ಮಜ ಪುರವರದ ಹೊರ । ಕಡೆಯ ಪಾಳೆಯವದರ ತುದಿಯಲಿ ಕಾಣಲಾಯ್ತೆಂದ ॥
ಹರಿಯವೀಪರಿ ಕೊಂದರೆಯು ನೇ । ಸರಿನ ಜನನಕೆ ಚಾಪದರ್ಪದ । ತೆರಹುನಂತರ
ವಿದುರ್ದಧ್ವರ ನಡೆದುದಾ ಖಳನ ॥ ತೆರನಿದಲ್ಲಾ ಸುಮ್ಮನಿರ್ದಡೆ । ಹರಿಯದೆನುತ
ವಿಭೀಷಣನು ರಣ । ಕುರುವ ಘನ ಭೀಷಣ ಗದಾದಂಡವನು ಘಲ್ಲಿಸಿದ ॥ ೨೩ ॥ ಬಟ್ಟೆ
ಯನು ಪವನುವೆನು ಬೆನ್ನನು । ಮುಟ್ಟ ಬಾ ಸೌಮಿತ್ರಿ ಕವಿವಿ । ತ್ತಟ್ಟೆನಸುರರನೆಸುತ
ಹಾರದೆ ಬೆಂಬಲದ ಭಟರ ॥ ಮುಟ್ಟವಿಷಿದುದು ಹೊತ್ತು ರಥವನು । ಕಟ್ಟುಳುಹಡೇ
ಮಾಣ ನಜ ಜಯ । ವಟ್ಟದ್ವೈ ಸರಮೇಲೆನತು ನಡೆಗೊಂಡನಸುರೇಂದ್ರ ॥ ೨೪ ॥ ಆಲಿ
ಜೊಬ್ಬಿರಿದಸುರಪತಿ ರಣ । ಭಾರದಲಿ ನಡೆಗೊಂಡು ತೆಗೆದನು । ದಾರಿಯನು ಸೌಮಿತ್ರಿ
ಬೆಸುವಾಸುರ ಚತುರ್ಬಲವ ॥ ಸೇರಿಸಿದ ಸಂಬಿನಲಿ ಹಿಂದೆ ಸ । ವಿಾರಸುತನಾಟುವ
ನಿಶಾಟರ । ತೀರ ಬಾಡದನು ಹೊಕ್ಕರೀ ಮೂವರು ಮಖಾಲಯುವ ॥ ೨೫ ॥ ಈತಸೀಗ
ಮಹೇಂದ್ರಜಿತು ಮಾ । ಯಾತಿಶಯ ಕೌಶಲನು ಮಾಯಾ । ಸೀತೆಯನು ಕಡಿದಂಪಿ
ಸಿದ ಕರ್ಕಶ ಸಿಶಾಚರನು ॥ ಈತಸೀಗನುಸಾರಿ ತನ್ನಯ । ಶಾತ ಸವನಿಂದಿವನು
ಬಲ್ಲಿದ । ಸೀತೆಯಲಿ ಬಿಡವಿಹ ಛಲೋಕ್ತಿಯ ನೆಂದನಸುರೇಂದ್ರ ॥ ೨೬ ॥ ಇತ್ತನೋಂ
ಡತಿಕಾಯ ವೈರಿ ವಿ । ಯತ್ತಳದ ಲೈತಹ ಸರೋಜಜ । ದತ್ತ ದಿವ್ಯ ವರೂಥವನು
ದಿವ್ಯಾಸ್ತ್ರವನು ಶರವ ॥ ಬತ್ತಳಿಕೆಯನು ಬವರಕಿದು ಕೈ । ಪತ್ತಿದಡೆ ಕಡೆಗಾಲವೆಮಗ ।
ಸುತ್ತರವದೇ ನಿಡನಿಪಾಯವ ಕಾಣು ಬೇಗೆಂದ ॥ ೨೭ ॥ ಕೋಕಶಿಖಿಯಿಡೆ ಸಮರ
ಶೌರ್ಯ । ಟೋಪ ಕಾಲೆಯಿಡೆ ವೀರರಸ ದಾ । ಲಾಪ ಕಪಲಿಡೆ ಕಲಿಮನದ ಕದನ ಪ್ರತಾ

ಪಕವ ॥ ರೂಪುರಂಜಿಸೆ ರಾಮಮೂರ್ತಾ | ಳಾಪರಾಗಿಸಲೊದೆದವನ್ನೈ ಬಳಿ | ಕಾ ಪುರಂ
ದರಜಿತುವಿನಾಹುತಿ ಪಿಡಿಯೆ ಸೌಮಿತ್ರಿ ॥ ೨೮ ॥ ತಿರುಗಿದಜ ಕಳುಹಿದ ಮಹಾರಥ |
ಮರಳಿ ಮಾಯಿತ ಮಾರ್ಗದಲಿ ಕಂ | ದೆರೆದು ನೋಡಿದ ನವ ರವರ ನುತ್ಕೀರ್ಣ
ರೋಷದಲಿ ॥ ಧುರಕೆ ಬಾರೆಲೊ ಖುಳ ಮರಣಾ | ಧ್ವರದ ಹಂಬಲಿ ಬಿಸುಡೆನುತ
ನಿಜ | ಚರಣದಿಂ ದೆಬ್ಬಿಸಿದ ನಾಹವ ಮಲ್ಲದಲ್ಲಣನ ॥ ೨೯ ॥ ಎಲು ದೈವದ್ರೋಹಿ ಛೂ
ದಿವಿ | ಜಾಳಿ ನಿಂದಿದೆ ನಿಂದಿ ರಸುರಗ | ಕಾಲ ಕರ್ಮದ ಮೃತ್ಯು ಬಂದಿದೆ ನೋಡು
ಕಣ್ದೆರೆದು ॥ ಕಾಳಗವ ಕೊಡು ಹಿಡಿ ನಿಜಾಯುಧ | ಬೇಳುವೆಯ ಬೇಳೆಂಬ ಸಾಕಿಂ |
ನೇಳೆ ಸಾತ ಕಟವಾಯ ನೂದೆದನು ಮತ್ತೆ ರಾವಣಿಯ ॥ ೩೦ ॥ ಪರಸತಿ ದ್ರೋಹಾನು
ಕೂಲಕೆ | ನರಕ ಕೊಯ್ಯದೆ ಬಿಡುವುದೇ ಸ| ಜ್ಜನರುಗಳ ಜಠರಾಗ್ನಿ ಸುಡದಿಹುದೇ
ಕಳಾಟವಿಯ ॥ ಹರಣ ರಕ್ಷೆ ನಿಮಿತ್ತ ಮರಣಾ | ಧ್ವರದ ಕೃತಕವ ನೊಡ್ಡಿದಾ ಹಿತ|
ಕರವಹುದೆ ಬಿಡು ಬೇಗ ಖಿಡ್ಡಿಯೊಳೇಳು ರಣಕೆಂದ ॥ ೩೧ ॥ ಎದ್ದನವ ಕೆಣಕಿದ ಬಣ
ಬೆಯೊ | ಳೆದ್ದ ಕಾಳ್ಗಿಚ್ಚಿನ ಪೊಲುರಿ ಹೊದ | ರೆದ್ದ ಕಂಗಳ ಕಿಡಿಯ ನಾಸಾಪುಟದ
ಕಾರ್ಬೊಗೆಯ ॥ ನಿದ್ದೆ ಎಡಿದಾ ದಖಿಳಲೋಕವ | ನುದ್ದಿ ನುಂಗುವ ಹರನ ಖತಿ
ಯನು | ಕದ್ದನೆನೆ ಕಾಲಿಕ್ಕಿದನು ನಿಜರಥ ದೊಳಿಂದ್ರಾರಿ ॥ ೩೨ ॥ ಕೊಂಡು ಬಂದನೆ
ನಿನ್ನ ನೀಗ ಮು| ಸುಂಡಿ ರಕ್ಕಸ ನಿವನ ರಕುತವ | ಹಿಂಡಿ ನಿನ್ನ ಪರಾಕ್ರಮಾಗ್ನಿಯ
ಕೆಡಿಸಿ ಕಪಿಬಲವ ॥ ದೊಂಡೆ ಕರುಳನು ತಿಂಬೆ ಹಿಡಿ ಕೋ| ದಂಡವನು ಬಿಡು ಬಾಣ
ವನು ಭಯ | ಗೊಂಡು ಹಿಂಗುವ ವೀರನೇ ತಾನೆನುತ ತೆಗೆದೆಚ್ಚ ॥ ೩೩ ॥ ಎಚ್ಚ ಬಾಣವ
ನೀತನೆಡೆಯಲಿ | ಕೊಚ್ಚಿ ಕಣೆಗಳ ಲಭ್ರತಳವನು | ಬೆಚ್ಚನೈ ಬೆಳಗಾದುದನು ಜಗವ
ರಿಯ ಬಾರದೆನೆ ॥ ಎಚ್ಚನಾತನ ನೀತ ನೀತನ | ನೆಚ್ಚನವ ನುಭಯಾಸ್ತ್ರ ದೆಸೆಗಳ |
ಚುಚ್ಚಿದವು ಚುಂಬಿಸಿದ ವಂಬರ ಮಮರ ಸಂತತಿಯ ॥ ೩೪ ॥ ಕೂಡಿತಸುರನ ಕಡೆಯ
ನಾಯಕ | ಪಾಡಿಗಳು ಬಳಿಸಲಿಸಿ ಕಪಿಬಲ | ಜೋಡಿಸಿತು ಜಾಹ್ನವಿಯ ತಂದೆಯ
ತನ್ಮನೊತ್ತಿನಲಿ ॥ ಆಡಲೇನದ ನಮಮ ಸಮರದ | ಗಾಢವನು ಬಳಿಕಿಬ್ಬರಲಿ ಕಿಡಿ|
ಯಾಡಿದವು ಕಣೆಕಣೆಯ ಹೊಯ್ಲಿನ ದಭ್ರ ದಳತೆಯಲಿ ॥ ೩೫ ॥ ಖಣ ಖಣಾದ್ಭುತ
ಖಣಿಲು ಖಣಿಲೆಂ | ದಣಿದ ಮಂಬರ ಕಣೆ ಕಣೆಯ ಕಡಿ | ತಣದ ಲಿಬ್ಬರ ಕಣೆಯ
ಕಡಿಯುಡರಿದವು ಮೇಲ್ಜಗವ ॥ ಎಣಿಸಲಾ ಯುಗದೀ ಯುಗದ ಸುರ | ಗಣದ ರಕ್ಕಸ
ಗಣದ ಸುಭಟರ | ಲೆಣಿಸು ಕಾಣೆನು ಲಕ್ಷ್ಮಣಾಂಗಮರೇಂದ್ರ ಜಿತುವಿಂಗೆ ॥ ೩೬ ॥
ಮೊಳಗಿದವು ರಣವಾದ್ಯ ಪಾಠೆಯ | ಲುಳಿದು ದುಬ್ಬರ ವಿಂಥೆಯಲಿ ಕೈ | ಲುಳಿಯ
ಸತ್ಸಂಧಾನ ವೆಸುಗೆಯ ಕರಚಮತ್ಕೃತಿಯ ॥ ಹಿಳುಕು ಹಿಳುಕಿನ ಸಂದಣಿಯ ಸರ |
ಗೊಳಿಸಿ ದಸ್ತ್ರಾನೀಕ ದುಬ್ಬಿನ | ವಿಲಸ ದುಬ್ಬರ ತುಂಬಿದುದು ಸಂಗ್ರಾಮ ಭೂಮಿ
ಯಲಿ ॥ ೩೭ ॥ ಕಡಿದ ಕಡೆ ವಿಂಡುಗಳ ಲೂರ್ವರೆ | ಝಡಿದು ದಾಶಾಭಿತ್ತಿ ಕಣೆಯಿಂ |
ದಿಡಿಮ ದಂಬರ ತುಂಬಿದುದು ಬಾಣಾಂಬು ರಾಶಿಯಲಿ ॥ ಹಿಡಿದ ಹರಿಗೆಯ ನೊಡ್ಡಿ
ತಲೆಗಳ | ಮಡಗಿಪವು ರಕ್ಕಸರ ಬಲ ಮುರಿ | ಯೊಡೆದು ಗಿರಿಗಳ ನೊಡ್ಡಿ ನಿಂದುದು
ಸೇನೆ ವಾನರರ ॥ ೩೮ ॥ ಏರಿಸಿದ ಹಬ್ಬುಗಳ ಮಿಗೆ ಕೆಂ| ಪೇರೆ ಕೆದರಿದ ದೃಷ್ಟಿಗಳ
ನಲ | ವೇರಿ ನಿಲುಕಿದ ಕಾಯಗಳ ಕರ್ಣಾಂತ ಮುಷ್ಟಿಗಳ ॥ ತೂರುಗಣೆಗಳ ತೋರಿ

ಕೆಯ ನರ | ಳೀರು ಬಾಯ್ಗಳ ಲೊಗುವ ನೆತ್ತರ | ಜೋರುಗಳ ಜೋಡಣೆಯ ಭಟ ರೊದಗಿದರು ಸರಸದಲಿ ||೩೯|| ಎಸುಗೆಯಲಿ ಸೌಮಿತ್ರಿ ಕೌತುಕ | ದೆಸುಗೆಯನು ಸುರ ಸೈನಿಕಕೆ ತೋ| ರಿಸಿದ ನೊಂದೇ ಸರಳಿನಲಿ ರಿಪು ಹಯ ಚತುಷ್ಟಯವ || ದೆಶೆ ಚತ ಪ್ಪ ಯಕೆಚ್ಚು ಸೂತನ | ನುಸುರು ಗೆಡಿಸಿ ವರೂಥ ಚಕ್ರವ | ವಸುಧೆ ಗೊರಗಿಸಿ ಪದಚರನ ಮಾಡಿದನು ಪ್ರತಿಭಟನ ||೪೦|| ಎಲವೊ ರಾವಣಿ ಮಾದುದೇ ಕ| ತ್ತಲೆಯ ಕಟಕವ ನೊಡ್ಡಿ ಗಗನ | ಸ್ಥಳ ದೊಳಗೆ ವೈದೋರ ದೆಸುವ ಬಾಳುತನ ವಿಂದು | ಕಲಿಗಳಿಗೆ ಗುಣವಿದು ಕಣಾ ದು| ರ್ಬಲದ ರಣಗಳ್ಳರಿಗದೇ ಗುಣ | ವಳಿದಡೆಯು ಜೀವಿಸಿ ದಡೆಯು ರಣ ನಿಂದ್ಯ ರಕ್ಲೆಂದ ||೪೧|| ಕಾಯನನು ಬೈಚಿಡದೆ ಬಿಡು ನಿಜ | ಸಾಯ ಕವ ಸರಿಗಲಹ ವಿನ್ನಿದು | ಮಾಯೆಯಯನು ಮರೆಗೊಂಬು ದನುಚಿತ ಜಗದ ವೀರರಲಿ|| ರಾಯ ಕಟಕದ ಭಟರು ರಣ ಕ| ಟ್ಬಾಯತಿಕೆಯನು ನೋಡ ಲವರ ನಿ | ಕಾಯ ವೆನು ತೊಂದಂಬಿನಲಿ ಕಡಿ ದಿಳುಹಿದನು ಧನುವ | ೪೨ || ಪೂತುರೇ ಬಿಲ್ಲಾಳು ಮಾಯಾ | ಭೂತನಾಥಂಗಿಲ್ಲ ವೀ ವಿ | ದ್ಯಾತಿಶಯ ಮುಝು ಭಾಪು ಲೇಸೆಂ ದೊಲದ ನವಯುವವ || ವಾತಸುತ ಸಾಹವ ಜಗದ್ವಿ | ಖ್ಯಾತನೈ ರಾಮಂಗೆ ಸರಿ ಯೆಂ| ದಾತ ಹೊಗಳಿದನಾ ವಿಭೀಷಣನಾ ನೃಪಾನುಜನ ||೪೩|| ಕೊಲ್ಲ ನಸ್ತ್ರಾಳಿಗಳು ಕೈಯ್ಯೊಳ | ಗಿಲ್ಲದನ ಗತರಥನ ಬವರಕೆ | ಬಿಲ್ಲ ಕೋ ಹೊಸದಾಗಿ ಹೊಸ ತೋಂದೇರ ವೇಳ್ಯೆಸು || ಕುಳ್ಳಿರಿಸು ಕೂಬರದ ಮಳಿ ಲೀ | ಬಲ್ಲ ಸೂತನ ಸೂತನದ ರಣ | ಮಲ್ಲನಾಗೆಂ ದಭಯ ವಿತ್ತನು ನಗುತ ಸೌಮಿತ್ರಿ ||೪೪|| ಆ ನಿಮಿಷದಲಿ ಚಾಚಿ ತಸುರ ನ | ವೀನ ರಥ ಹಾಯ್ತಡರು ತಂಬಿನ | ಸೋನೆಯನು ಸೈಗರೆದ ನಾ ಕಾರ್ಮುಗಿಲ ಮಳೆಯಂತೆ|| ಏನು ಹೇಳುವೆ ಸೀತ ಸಹಿತ ನ | ಸೂನ ಶರ ಸಂತತಿಯ ಸವರಿ ಸ| ಮಾನ ರಚನೆಯ ರಣವ ಮೆರೆ ದುಬ್ಬಿರಿದ ನಿದಿರಿನಲಿ ||೪೫|| ಎಚ್ಚ ನಿಂದ್ರಾರಾತಿ ಮಾಯೆಯ | ಮುಚ್ಚಿ ಕೆಯ ಮರೆಯೊಡ್ಡಿ ಮಾಗಧಿ | ಯಚ್ಚ ನಾ ಮಾಯಾ ವಿಕಾರಿಯ ಬಾಣ ಪಂಜರವ | ಮುಚ್ಚು ವರವೆಯ ಹದ್ದು ಮುದ್ದು ಗ| ಳೆಚ್ಚರಿಸೆ ಸೀವ್ರಳಿವ ರೆಂದೇ | ನೆಚ್ಚವಿರಲಾ ಘಡ ಯೆನುತ ಬೊಬ್ಬಿರಿದ ನಿಂದ್ರಾರಿ ||೪೬|| ಆರು ಬಲ್ಲರು ಬೊಮ್ಮ ಹರಸುವ | ಹಾರು ವನು ಜವ ಕಿಂಕರನು ಕೌ | ಮಾರಿ ಭಿಕ್ಷುಕ ನೆಮಗೆ ತೊತ್ತಿರ ಮೃತ್ಯು ಮಸಣಿಯರು|| ಹಾರವಿಸದಿರು ಹಿಂದಣವಧಿರು ತೀರಿದರು ರಣಕೆಂದು ಕದನ ಕ | ಠೋರಗತಿ ಜೀರದೆ ಯೆನುತ ತೆಗದೆಚ್ಚ ನಿಂದ್ರಾರಿ ||೪೭|| ಮತ್ತೆ ಮಾಣಿರೆ ಮಾಗು ಹೋದರೆ | ಹತ್ತಿಸಿ ದಸೇ ಕಮಲಭವ ನಿ| ಮ್ಮತ್ತೆಗಳಿ ಗಸುರರನು ಜೀವ ತಂದಿತ್ತನೇ ನಿಮಗೆ || ಮೃತ್ಯು ವನು ಗೆದ್ದಾತ ಜೀವವ | ಸೆತ್ತಿದನೆ ನಿಮ್ಮೈಯ ನನುಜನ | ಕತ್ತೆಯೋ ರಕ್ಕಸನೊ ನೀನೆನು ತೆಚ್ಚ ನಾ ಖಳನ |೪೮|| ಸರಳ ನದ ಕತ್ತರಿಸಿ ರಘುಜಾ | ವರಜ ಗೆಂದನು ಮುಂದಣಾಜಿಯ | ಹರುಹ ನೋಡಾ ತೋರಿದಡೆ ತರ ದಿಳುಹುವೆನು ತಲೆಯ || ಮರು ಳುಗಳು ನರ ರಕಟ ನೀವ್ ಕೆ | ಟ್ಟರಿ ವಿಭೀಷಣನೆಂಬ ಬಲ ಜೀ | ಸರಿಗನನು ನೆರೆ ನಂಬಿ ನಮ್ಮ ವಿರೋಧ ದಿಂದೆಂದ ||೪೯|| ಕೊಲಿಸಿ ನಮ್ಮನು ನಿಮ್ಮ ಕೈಯಲಿ | ಗೆಲವ ತೋರಿಸಿ ನಿಮಗೆ ಕಡೆಯಲಿ | ಕೊಲುವ ನಿಮ್ಮನು ಕೊಂಬ ವೆಮ್ಮಯ ನಿಮ್ಮ ಧರಣಿ ಗಳ || ಇಳೆಯ ಮಗಳಿಗೆ ಮನಸ ಮಾಡಿದು | ತೊಳಸಿ ತಂದ ಕುಮಂತ್ರ ವಿದು ನಿಮ್ಮ

ಗೊಳಗು ತೋರದೆ ಕೆಟ್ಟಿರಕಟಕಟೆಂದ ಸಿಂದ್ರಾರಿ ॥೫೦॥ ಆವ ಪರಿಯಲಿ ಹೊಕ್ಕನಿವ ನೆಂ| ಬೀ ವಿಚಾರವ ನರಿಯದಾದಿರಿ | ಜೀವನಿವ ವಿಶ್ವಾಸ ಘಾತಕ ಕುಟಿಲ ಕುಹಕರಂಗೆ॥ ಹಾವುಮೆಕ್ಕೆಯ ಹಣ್ಣೆನಂದದಿ | ಜೀವ ಯಿವ ಮಿತ್ರತ್ವ ಹದ್ದಿಗೆ | ಹಾವಿಗುಂಟೇ ತುವಿಗೆ ನಿಮ್ಮಯ ವಿಧಿಗೆ ಹೇಳೆಂದ ॥೫೧॥ ಎಲವೊ ಸುಭಟಾಧಮನೆ ಕದನದೊ | ಳಳ ವಡದ ಮಾಯೆಯಲಿ ಮಾತಿನ | ಬಳಕೆಯಲಿ ಬೆದರಿಸಲು ಬೆದರುವನೆಂದು ಬಗೆದೆ ಯಲ ॥ ಕಲುಮಷದ ಚಿಪ್ಪಿನಲಿ ಮುಕ್ತಾ | ಫಲವು ಹುಟ್ಟೇ ಕೊರತೆಯೇ ನಿರ್ಮಲ ವಿಭೀಷಣನೆಂಬುದನು ನಾವರಿಯವೇ ಯೆಂದ ॥೫೨॥ ಸಾಕು ಬಗುಳದಿರಿನ್ನು ಹಯ ವನು | ನೂಕು ಕಣೆಗಳ ಕಲುಹು ಮಾಯಾ | ವ್ಯಾಕರಣ ಪಾಂಡಿತ್ಯವನು ನಮ್ಮೊ ಡನೆ ಮೆರೆಯದಿರು ॥ ಸೋಕದೀ ಪಾತಕವು ನಿಮ್ಮನು | ಸಾಕಬಲ್ಲುದೆ ಬೇಗ ಮಾಡು ಸಮೀಕವಿದು ನಿನ್ನಸುವಿ ಗಂತ್ಯ ವೆನುತ್ತ ತೆಗದೆಚ್ಚ ॥೫೩॥ ಮುಸುಕಿ ತಂಬಿನ ಬಿಂಬ ವನು ನಿ| ಪ್ಪಸರದಲಿ ತರಿದೊಟ್ಟ ರಾವಣಿ | ಮುಸುಕಿದನು ಮಾಗಧಿಯ ಮಗನನು ಮಾರ್ಗಣಂಗಳಲಿ ॥ ಎಸುವ ಕಳಚುವ ಕಣೆಯ ಕಡುಹಿನ | ಕೊಸರು ದೋಟಿಯ ಲವನಿ ತಳ ಭಾರಿಸಿತು ತೊರವೆಯ ರಾಯ ಚಿಂತಿಸುತಿರ್ದ ನನುಜಂಗೆ ॥ ॥೫೪॥

ನಲವತ್ತೆರಡನೆಯ ಸಂಧಿ ಸಮಾಪ್ತಂ.

ನಲವತ್ಮೂರನೆಯ ಸಂಧಿ.

ಸೂಚನೆ॥ ಅಮಮ ವೀರ ಹಿರಣ್ಯಕನ ವಿ | ಕ್ರಮ ನೃಕಂಠೀರವನ ರಣ ಸಂ | ಭ್ರಮಕೆ ಶತಗುಣವೆನಲು ಕಾದಿದರುಭಯ ಪಟುಭಟರು ॥

ಪದ್ಯ॥ ವಸುಮತೀಪತಿ ಸೂನು ಕೇಳ್ ರ | ಕ್ಕಸನ ರಣ ರಂಜಕನ ನಾವೇ | ನಸುರಸುರ ಮಾನವರೊಳಿಲ್ಲವೆ ಹೇಳುವರೆ ಯೆಂದ ॥ ಹೆಸರುಗೊಳ ಲಂಭೋಜಭವ ನಿ| ರ್ಮಿಸಿದ ಸೃಷ್ಟಿಯಲಾದಿ ಮಧ್ಯದ | ವಿಷಮ ವೀರರೊಳಿಂದ್ರಜಿತುವಿಂ ದಾತುಸರಿ ಯೆಂದ ॥೧॥ ಬಹಳಬಲ ಬಲರಿಪು ವಿರೋಧಿಯ | ವಹಣ ಜೀರೆಸುಗೆಯಲಿ ತೋರಿದ | ಸಹಿತ ನಂಗದ ಲೇಲುಸಾವಿರ ಬಾಣವಂದದಲಿ ॥ ಗ್ರಹಿಸುವಂ ದಿಂದ್ರಾರಿಯೊಳು ವಿ | ಗ್ರಹಕೆ ನಿಂದಮರೇಂದ್ರ ಸುರು ವಿ | ಗ್ರಹದ ಕೋಪದ ಕಣ್ಗಳವೊಲತಿಕಾಯ ಹೆರನೆ ಸೆದ ॥ ೨ ॥ ಮಗುಳೆ ಸರಳೊಂದರಲಿ ಹೃದಯವ | ಹುಗಿಲು ಗೊರೆದನು ನೈರುತಾಸ್ತ್ರ ದೊ | ಳುಗುಳೆ ತರುಣಜಲೌಘವನು ಕುಂಭಿನಿಯ ಮೈನೆನೆಯೆ ॥ ತೆಗೆದೆಸುವ ಮೈಲು ಳಿಯ ಬಿಗುಹಿನ | ಬಿಗುಹು ಬಿಟ್ಟುದು ಬಳಲಿಕೆಯ ಮೈ | ನೆಗಹಿದೊಡೆಯನ ಕಂಡು ಕವಿದುದು ಕಪಿಭಟವ್ರಾತ ।೩॥ ಕವಿದ ನೀಲನ ನಿಕ್ಕಿದನು ಮುಂ | ಚುವ ಮರುದ್ಗಣ ರಾಜಪುತ್ರರ | ಪವಡಿಸಲು ಸಿಕ್ಕಿದನು ಸರಿಸದೊಳೊದಗುವಬುಜಜನ ॥ ಭವನ ಬೀಳಲು ಕುಕ್ಕಿದಸುರರಿಪು | ಬವರ ಕಂಪೈಸು ಗವಾಕ್ಷನ | ಗವಯ ಹರಣವ ಹಿಕ್ಕಿದನು ಸೊಕ್ಕಿದನು ಸಮರದಲಿ ॥೪॥ ನಳಿನ ನಳಿಸಿದನಾ ಸುಷೇಣನ | ಹಲುಗಿರಿಸಿದನು ಗಜನ ಗವ ಯನ | ನೆಲನ ಕಾಣಿಸಿ ತೀರಿಸಿದ ನವರವರ ಸೈನಿಕವ ॥ ಮಲೆತ ಹನುಮನ ನಳಿಸಿದನು ಹೊಂ | ಬಿಳುಕುಗಳ ತೊಸ ಸರಳಿನಲಿ ಕೈ | ಲುಳಿಯ ತೋರಿದ ನೊಯ್ಯನನುಜಂಗಾಗ

ಶಕ್ರಜಿತು ॥ ೫ ॥ ಚಾರಿ ಪರಿಪರಿದೆಚ್ಚಸೊದಗಿದ । ವೀರ ಕಪಿನಾಯಕರ ಮರಳಿದು । ಮಾರುತಿಯ ನೋಯಿಸಿದ ಮುಂದಣ ಮಾಗಧೀಸುತನ ॥ ಕೂರಲಗಿನಲಿ ಮುಸುಕಿ ಬೊಬ್ಬಿಂ । ದಾಲಿ ತೀರನು ತಿರುಹಿಸಿಂದವ । ಚಾಂಸುತ ಕೈಯಿಕ್ಕಿದನು ಕದನಕೆ ವಿಭಿಷಣನ ॥೬॥ ಬಗೆವನೇ ಬವರವನು ಮುಳಿದರೆ । ಮಿಗೆ ವಿಭೀಷಣದೇವ ದೇವಾ । ದಿಗಳು ಭೋಯೆಂನೆ ಕೊಂದನಂಗದ ವಿಗ್ರಹದ ಗದೆಯು ॥ ನೆಗಹಿ ಹೋದನು ರಾವಣಿಯು ರಥ । ದಗಡುತನ ಸುಗ್ಗಾಗೆ ನೆಲಬಾಯ್ । ದೆಗೆವು ಲಾಳೆ ಫಣೀಂದ್ರ ಬೀಳೆ ದಿಶೇಭ ಸಂದೋಹ ।೭॥ ಗದೆಯ ಹಿಡಿದಾಕ್ಷಣ ವರೂಥವ । ನೊದೆದು ಚಿಮ್ಮಿದನಸುರ ನೈಯ್ಯನ । ಕದನ ಭೀಷಣದನುವ ಬಲ್ಲವನಾಗಿ ಪಡಿರಥಕೆ ॥ ಸದಕಿದನು ಬಳಿಕೀತರಣ ಕೊದ । ಗಿದ ಮಹಾಮುಂಡಳಿಯ ಮದರದಿ । ಯೊದೆದ ಮಾವುತರ ನಿಗಳರಾವುತರ ಹಯುವ ಕಾಲಾಳ ॥ ೮ ॥ ಅನಿತರೊಳೆ ಸಂಪರಿಸಿ ರಾಘವ । ನನುಜನಗ್ಗದ ಚಾಪ ಮೌರ್ವಿಯ । ನಿನದವನು ಸೆನಹಿದನು ಕಮಲಭವಾಂಡ ಘುಮ್ಮಿಡಲು ಹನುಮನುಬ್ಬಿರಿದರಿಯು ತೇರಿನ । ತನಿವರಿಯ ತಡೆದಾಲಿದನು ಸಂ । ಜನಿಸಿದುದು ಸಮರಾಭಿಮಾನಗಳುಭಯ ವೀರರಿಗೆ ॥ ೯ ॥ ಮಲೆತರಿಬ್ಬರು ಮತ್ತೆ ಮದಕರಿ । ಮಲೆತಪೋಲ್ಕದ ದುಬ್ಬಗೊಬ್ಬಿನ । ಕಲಿತನದ ಕೈಮೆಗಳ ಮೆರೆದರು ಕಣೆಯ ಕಡುಹಿನಲಿ ॥ ಫಳಫಳಿಲು ಖಣೆ ಖಟಿಲು ಖರ್ಪುರ । ಗಳ ಮಹಾ ಮಾರ್ಗಣಗಳಂಗಳ । ಬಲು ಸಬುದ ಸಡಗರಿಸ ಲೆಚ್ಚಾಡಿದರು ಸರಿಸದಲಿ ॥ ೧೦ ॥ ಹಳಚಿದವು ಕಣೆಕಣೆಗಳನು ಖಂ । ಡಳಿಸಿದವು ಕಣೆಕಣೆಗಳನು ಸೀ । ಳ್ದರಿದು ಹಾಯ್ದುದು ಕಣೆಗಳನು ಕಣೆಯು ದೆಸುಗೆಯಲಿ ॥ ಕಳುಗಿಡಿಯ ಕಾರ್ಬೊಗೆಯು ಬಲು ಮಂ । ಡಳಿಯ ಬಿರುದಸಿಯಭ್ರದಲಿ ಶಿಖಿ । ಸುಳಿದು ಸುರಲೋಕವನು ಸುಡಬಗೆದುದು ನೀಹಾರದಲಿ ॥ ೧೧ ॥ ಬಳಿಕ ಲಘು ಸಂಧಾನದೆಸುಗೆಯು । ಬಳಿಯು ಮೆರೆದರು ಚಿತ್ರಗತಿಗಳ । ಚಳ ಬಳಿಕೆಗಳ ಚಾಪಮುಕ್ತ ವಿಮುಕ್ತ ಮಾರ್ಗಣವ ॥ ಬಳಿಸಲಿಸಿ ದಂಬುಗಳು ಹಾಯ್ದು । ಚ್ಛಳಿಸಿದವು ಭಟರಂಗದಲಿ ಹೆ । ಕ್ಕಳಿಸಿದವು ಬಳಿಯಂಬು ಸಂದಣಿಸಿದವು ದೇಹದಲಿ ॥೧೨॥ ಜೋಡುನನವಹ ಜುರಿತ ನೆತ್ತರ । ಝಾಡಿಯಲಿ ಸಿಕ್ಕಿದವು ಘಾಯದ । ಬೀಡುಗಳು ಬಳಿಸರಳ ಸಂದಣಿಸಿಂದು ದಿಬ್ಬರಲಿ ॥ ಪಾಡು ಪಂಥವ ಸಮರ ಸವೆಯದೆ । ನೋಡಿ ಮುರಿದವು ಮರವೆಯಲಿ ನೈ । ಗೂಡು ಕೊಂಚಂತರಿಸಿದವು ಬಳಲಿಕೆಯ ಭಾರದಲಿ ॥ ೧೩ ॥ ತೆಗೆದ ನಿಬ್ಬರ ನಿಬ್ಬರಾಸ್ತ್ರರು । ತಗಬಿಡಿಸಿದರು ಅಂಗಮೂರ್ಛೆಯು । ರಕುತಗಳ ತೊಳೆದಂಬ ನುಗಿದೇರುಗಳ ಲೌಷಧಿಯು ॥ ಬಗೆಗೊಳಿಸಿ ಬೆಳುವಟ್ಟೆಗಳನು । ಟ್ಟಗರು ಕುಂಕುಮ ಗಂಧದನುಲೇ । ಪಗಳ ಲೆಸೆದರು ಕರ್ಪುರದ ತಳುಕುಗಳ ಕವಳದಲಿ ॥೧೪॥ ಬೊಬ್ಬಿರಿದು ಬಳಿಕುಲಿದು ಬಿಳುಗಳ । ತೆಬ್ಬಗಳ ನಾರೈದ.ಲುಳಿವರೆ । ದೆಬ್ಬಿಸಿದ ರಂಬುಗಳ ನಂಬರ ತುಂಬಲಗಲದಲಿ ॥ ಮುಬ್ಬಿಡುವ ನಿಡುಮುಗಿಲ ಮೋಹರ । ಕುಬ್ಬು ಮಂಬುಧಿಯಂತೆ ಕದನದ । ಕೊಬ್ಬಿನಲಿ ಕಲಿಯೇರಿ ಬಳಿಕಿಂತೆಂದ ಸಿಂದ್ರಾರಿ ॥೧೫॥ ಕರೆಸಿಕೋ ನಿಮ್ಮಣ್ಣ ದೇವನ । ನಿಲಲಿ ಹತ್ತಿರ ಭರತ ಶತ್ರು । ಘ್ನರಿಗೆ ಬರಸೋಲೆಗಳ ಬಳುಕಿವರಿಲ್ಲಿಲೇ ನಿಮ್ಮ ॥ ಕರುಣಾಪೊಕ್ಕನ ಕಳುಹು ದೇಶಾಂ । ತರಕೆ ಲಕ್ಷ್ಮಣ ಕೇಳು ಮುಂದಣ । ವರಕೆ ನೆಸೆ ನಿನ್ನಿ ಹ್ನನ್ವೈವನೆನುತ ತೆಗದೆಚ್ಚ ॥೧೬॥ ಕರೆಸುವೆಸು ನಮ್ಮಣ್ಣನನು ಪಶ । ತಿರನ ವಧೆಗೋಲೆಬ

ನಯೋಧ್ಯೆಗೆ । ಬರಸುವೆನಾ ರಿಪುವಿಜಯ ವಾರ್ತಾವಿಮಲ ಸಂಗತಿಗೆ ॥ ಶರಣಾಹೊಕ್ಕ ವಿಭೀಷಣನ ತಂ । ದಿರಿಸುವೆನು ಲಂಕಾ ಮಹಾಪುರ । ದರಸುತನಕೆಲೆ ಖೂಳ ಕೇಳಿದ ನೆಂದನಾ ಖಳನ ॥ ೧೭ ॥ ಎಚ್ಚ ಬಾಣವ ನಸುರನೆಡೆಯಲಿ । ಕೊಚ್ಚಿ ಕಡಿದನು ಕಾಳ ಮೇಘದ । ಮುಚ್ಚಳನು ತೆಗೆದಂತೆ ಸರಳಿನ ವೃಷ್ಟಿ ಸರಗೊಳಿಸಿ ॥ ಅಚ್ಚರಿಯಲಾ ಲಕ್ಷ್ಮಣನ ಕೈ । ಮೆಚ್ಚಿದಂಬಿನ ಚಿತ್ರಗತಿ ರಥ । ದಚ್ಚರಥಿಕನ ಬಿಲ್ಲನಡಿ ದೆಬ್ಬಿಸಿದ ನಂಬರಕೆ ॥೧೮॥ ಎಲವೊ ರಾವಣಿ ಕೇಳು ರಾಕ್ಷಸ । ಕುಲದ ತಲೆ ಚಂಡಾಡಿದಂಬಿನ । ಬಲುಹ ಕಂಡಾ ಕೊಲ್ಲೆ ನಂಜದಿರೇಳು ಹೊಸ ರಥವ ॥ ಬಿಲುದುಡುಕ ಬಾಣಗಳನ ರೆ ಕೈ । ಲುಳಿಯು ನೋಡುವೆ ಬಳಿಕೆನುತ ಬಳಿ । ಗಳಚಲೆಚ್ಚನು ಕೊರಳುಗಳ ತೇಜಿಗಳ ಸಾರಥಿಯ ॥ ೧೯ ॥ ಕಳಹಿದನು ಮಯನಾಕ್ಷಣದೊಳ । ಗ್ಗಳದ ರಥ ಸಾರಥಿಯ ತುರಗಾ । ವಳಿಯ ನಿಶಿತಾಕ್ಷಯ ಶರಂಗಳ ನುಗ್ರ ಕಾರ್ಮುಕವ ॥ ಕಳೆದು ಕೊಳುತಾ ಚಾಪ ಮಾರ್ಗಣ । ಗಳನು ರಥದಲಿ ನಿಂದು ಬೊಬ್ಬಿರಿ । ದಳವಿ ಗೊಂಡೀ ಮಾತನೆಂದನು ಮಾಗಧೀಸ ತಗೆ ॥೨೦॥ ಕೇಳು ಲಕ್ಷ್ಮಣ ವತ್ಸರಗಳೀ । ರೇಳ ರುಪವಾಸದ ಸುನಿದ್ರಾ । ಲೋಲ ನಗ್ಗದ ಭಾಮಿನೀ ಸಂಭೋಗ ವರ್ಜಿತನ ॥ ಮೇಲುಗೈಯ್ಯಹ ವೀರನಾದಡೆ । ಕೋಲ ಕಳುಹಲ್ಲದಡೆ ಹಿಂದಕೆ । ಬೀಳುಕೋ ಬಯಲಿಂಗೆ ಸಾಹಸ ಗೊಳಲು ಬೇಡೆಂದ ॥೨೧॥ ಇದಕೋ ಬರುತಿದೆ ಬಾಣವಿದ ಮಧ್ಯದಲಿ ಸಡಿಲಿಸ ಶಕ್ತಿಯುಳ್ಳಡೆ । ತುದಿಗೊಳಿಸಿ ತೋಮರವ ತಿರುಹಿ ನೊಳೆನುತ ಶಕ್ರಾರಿ ॥ ತ್ರಿದಶಪತಿ ಹಿಡಿವಂಬ ನಾರಿಯ । ಲೊದಿಸಿ ಬೊಬ್ಬಿರಿದಾಲೆ ಶಕಾ । ಸ್ತ್ರದಲಿ ಸಂಹರಿಸಿದ ನಸುರ ಮಾರ್ಗದಲಿ ಸೌಮಿತ್ರಿ ॥೨೨॥ ಗಾಢ ನಿನಗಿನ್ನೇ ಕೆಲವೊ ವರ । ಮೈಥಿಲೀಶನ ವಚನ ಮಾರ್ಗದ । ವಿಧಿಸುವರಾ ವೈಸೆ ಮಾತೆರಡಿಲ್ಲ ಸವೆಗೆನುತ ॥ ಪಾದ ದುದ್ಭವ ಭೂತ ಸುಮನೋ । ನಾಥ ಮುಖ್ಯರು ಹೊಗಳೆ ಹಗೆಯುವ । ರೂಥವನು ಹದಿನಾರು ಯೋಜನ ಕೆಚ್ಚು ಬೊಬ್ಬಿರಿದ ॥೨೩॥ ಮಾ ಮಹಾ ಮಾರ್ಗಣ ಸುವಿದ್ಯಾ । ವ್ಯೋಮಕೇಶಂಗೆಣೆ ಯೆನಲು ಬಹು । ದೈ ಮಹಾದೇವನೆನುತ ಹೊಗಳುತ ತಿರುಹಿ ನಿಜರಥವ ॥ ಭೀಮ ಬಲ ನಸುರಾಸ್ತ್ರದಲಿ ನಿ । ಸ್ಸೀಮಬಲ ಲಕ್ಷ್ಮಣನ ಘನ ಸಂ । ಗ್ರಾಮ ಕೃತ ಲಕ್ಷ್ಮಣನ ವಕ್ಷವ ನಚ್ಚು ಬೊಬ್ಬಿರಿದ ॥೨೪॥ ಉಗಿದು ಹಾಯ್ದುದು ಬಾಣ ವ್ಯಥೆಯನು । ಬಗೆದು ಭೀಮ ಧ್ಯಾನ ಗಾನದ । ಲುಗಳಿ ತರುಣಾಂಬುವನು ಬಳಿಕದ ಬಗೆಯ ದಬ್ಬರಿಸಿ ॥ ಮಗಧ ಚಕ್ರೇಶ್ವರನ ಮೋಹದ । ಮಗಳ ಮಗನು ಮಹಾಸ್ತ್ರದಲಿ ಸುರ । ರುಗಿಯೆ ಸುರ ವೈರಿಯ ಲಲಾಟವ ನೆಚ್ಚು ಬೊಬ್ಬಿರಿದ ॥೨೫॥ ಶರಳು ಸಮಗಣೆಯಾಗೆ ರಕುತವ । ನೆರಡು ಭಾಗದಿ ನುಗುಳಿಸಿದುದೆವೆ । ಮುರಿದ ವಂಗ ನಿಹಾರದಲಿ ವಾರಿಸಿದ ಝೋಂಪಿನಲಿ ॥ ಕರದ ಬಿಲು ಕಳಚಿದವು ಕಂಗಳು । ತಿರುಗ ಬಗೆದವು ತೇರಿನೊಳಗಂ । ತರಿಸು ತಂಕರಿಸುತ್ತ ಖಳ ನಿಮ್ಮದನು ಹಳವಿಗೆಯ ॥೨೬॥ ಹಾತ್ರಿವಿಷ್ಟಪರಾಯಜಿತು ಹಾಹಾ ತ್ರಿಲೋಕದ ಗಂಡ ಚಂಡ ವಿ । ಧಾತ್ರ ಬಾಣಾಪಾಣಿ ಹಾಹಾ ಯೆನುತ ನಭದಿಂದ ॥ ಧಾತ್ರಿ ಗಿಳಿದನು ಮಯನು ನಿಜದೌ । ಹಿತ್ರ ಮೋಹದ ಲಮಲ ಕರ ಕರ । ಪಾತ್ರೆ ಜಲ ದಭಿಮಂತ್ರದಿಂ ದೆಬ್ಬಿಸಿದ ನಾಖಳನ ॥೨೭॥ ತೆಗೆದು ತನ್ನಯ ದಿವ್ಯ ಕವಚವ । ಮಗಳ ಮಗನಂಗದಲಿ ತೊಡಿಸಿದು । ನೆಗಹಿ ನಿಂದಿರಿಸಿದನು ಕೊಟ್ಟನು ತನಗೆ

ಪೂರ್ವಕದಲಿ || ಜಗದಪಿತ ನಿತ್ತುಗ್ರ ಶೀತಾಂ | ಶುಗವ ನುಗ್ರ ಶರಾಸನವ ಕೈಮುಗಿದು ಪೊವ್ಮಗನ ಹರಸಿ ಹೋದನು ಮಯನು ಮಾಯೆಯಲಿ || ೨೯ || ಆತ ಬಳಿಕಬ್ಬರಿಸಿ ಕೊಂಡನು | ಮಾತೃ ಪಿತ ನಿತ್ತಂಬನದು ನಯು | ವೀತಿಹೋತ್ರನ ನುಗುಳು ತಿರ್ದುದು ಚಾಪ ಯಂತ್ರದಲಿ || ಕೌತುಕ ವಿದೇನೆನುತ ರಘುಸಂ | ಜಾತ ಚರಣಾರಾಧಕನು ಬಳಿ | ಕೀತ ಗೆಚ್ಚರಿಸಿದನು ಮಾಯಾ ಮಯನ ಕೃತ್ರಿಮವ ||೩೦|| ಬೇಗ ಕೊಡು ಪೈತಾಮಹಾಸ್ತ್ರವ | ನೀಗ ಲೊಲವಡೆ ಸಮರದಲಿ ಶತಯಾಗಜಿತು ತೊಡು ವಸ್ತ್ರ ಭಂಗಕೆ ಮರೆಯ ಮಾತೇನು || ತೂಗದವ ಮುಂಚಿದರೆ ಕಮಲಜ | ಕೂಗಿಡಲು ಕೇಳ್ದೀರ್ಘ ನಿದ್ರಾ | ಯೋಗವಹು ದೆಮ ಗಂದಿನ ವೊಲೆಂ ದಸುರಪತಿ ನುಡಿದ ||೩೧|| ಆ ವಚನ ವಿಭಟನ ಕರ್ಣದ | ಲಾವರಿಸಿ ತರಿ ದಿಳುಹಿದನು ಕಲಿ | ರಾವಣಿಯು ಕೋದಂಡ ಚಂಡ ಸುಕಾಂಡ ಸಿಂಜಿನಿಯ || ದೇವತತಿ ಖೋ ಯೆಂದು ದುಂದುಭಿ | ರಾವದಲಿ ನಲವೇರಿ ಬಳಿಕ ಶ| ರಾವಧಾನದ ಲರಿಯ ಮಕುಟವ ನೆಚ್ಚು ಬೊಬ್ಬಿರಿದ || ಕೆಡಿಸಿದೆ ಯಲಾ ದ್ರೋಹಿ ಮರ್ಮವ | ನುಡಿದು ನನ್ನವರಲ್ಲ ದಿರ್ದದೆ | ಬಿಡುವರೇ ಜೀವವನು ಜೀವಾಳದ ಮಹಾಭಟರು || ತೊಡೆವೆ ನಿವನ ಲಲಾಟ ಲಿಖಿತವ | ತಡೆಯ ದೀಕ್ಷಣ ಬಳಿಕ ಮೃತ್ಯುವಿ | ನೊಡಲ ಹೊಗಿಸುವೆ ಹಗೆಯ ನೆನುತವ್ರಡಗಿದ ಸಿಂದ್ಗಾರಿ ||೩೨|| ಎತ್ತಿದನು ಕಿರಿಯ್ಯೆಯನಾ ಮಯ | ನಿತ್ತ ಶಕ್ತಿಯ ನಮ್ಮವಂಶಕ | ಮೃತ್ಯುವಾದ ಸುರಾಧಮನ ನೀ ನೋಡಿಕೋ ಯೆಂದ || ಒತ್ತುಬರ ದುದ್ರೇಕದಿಂದಿಡೆ | ಸತ್ತೆ ನಕಟಾ ಶರಣನೆಂ ದೊಳ | ಲುತ್ತಲಿರೆ ಕಾಲಾಗ್ನಿ ತೇಜದಲೈದಿ ತಿದಿರಿನಲಿ ||೩೩|| ಹೆದರಿದನು ಹನುಮಂತ ಜಾಂಬವ | ನುದರ ಕಳವಳಿಸಿದುದು ನಳ ನಂ | ಗದ ಸುಷೇಣ ಗವಾಕ್ಷ ನೀಲಾದ್ಯಖಿಳ ಕಪಿಭಟರ || ಹೃದಯ ಹಾತಕ ವಾರಿದವು ಮರು | ಗಿದುದು ಮರ್ಕಟ ನಿಕರ ಹಾ ಯೆಂ | ದೊದರಿದರು ನಭ ಮಾರ್ಗದಲಿ ಪ್ರಹ್ಲಾದ ನಾರದರು ||೩೪|| ಏನು ದೈವಂಗಳಲಿ ಭಕ್ತಾ | ಧೀನರೋ ರಘುನಾಥ ಲಕ್ಷ್ಮಣ | ರಾ ನಿಮಿಷ ದೊಳಗಿದ್ದು ದಿಕ್ಕಡಿ ಯಾಗಿ ಗಗನದಲಿ || ಆ ನಿಶಾಟ ಮಹಾಶಕುತಿ ಸಂ | ಧಾನ ವಿಶಿಖವ ಕಂಡುದಿಲ್ಲ ವಿ | ಮಾನಿಕರು ವಿಸ್ಮಯವದೇ ನೆಸುಗೆಯಲಿ ಸೌಮಿತ್ರಿ ||೩೫|| ಗುಡಿ ವಿಡಿದು ಗುಹಿಲಿಡಿದು ನಾರದ | ಮೃಡನ ಮುಂಡಾಡಿದನು ವೈಷ್ಣವ | ಗಡಣ ವಾನಂದಾಬ್ಧಿ ಯೊಳಗೋಲಾಡಿ ತಭ್ರದಲಿ || ಬಿಡುಮುಗುಳು ಮಲ್ಲಿಗೆಯ ಮಳೆ ಹೊನ | ಲಿಡ ಲುಸುರಿದವು ರಾಯ ತೊರವೆಯ | ಕಡು ಕೃಪಾ ಸಾಗರನ ತಮ್ಮನ ಶಿರದ ಸರಿಸದಲಿ || ||೩೬||

ನಲವತ್ಮೂರನೆಯ ಸಂಧಿ ಸಮಾಪ್ತಂ.

ನಲವತ್ನಾಲ್ಕನೆಯ ಸಂಧಿ.

ಸೂಚನೆ|| ವೀರ ವಿಜಿತಾಹವನುದಾರ ಗ | ಭೀರಬಲ ಸೌಮಿತ್ರಿ ಗೋತ್ರ ಹ | ರಾರಿಯನು ಗೆಲಿದೊಲಿಸಿದನು ಭುಜವಿಜಯ ಭಾಮಿನಿಯ ||

ಪದ್ಯ॥ ನಡೆದುದೀಪರಿ ನಾಲ್ಕುದಿನ ಬಿಡ । ದಡಸಿ ಸಂಗರ ವಿಬ್ಬರಿಗೆ ಕಪಿ।
ಪಡೆಗೆ ಖಳ ಬಲಕಿರುಳು ಹಗಲೆನ್ನದೆ ನಿರಂತದಲಿ ॥ ಕಡೆಯದಿನ ಕಲಿಗಳಿಗೆ ಕಾಳಗ।
ನಡೆದ ಪರಿಯನು ಕೇಳಿರೈ ಯು । ಗ್ಗಡದ ರಾಜಕುಮಾರರಿರ ಸಾವಧಾನದಲಿ ॥ ೧ ॥
ಎನೆಲವೊ ರಾವಣಿ ರಣಾಂಗಣ। ಹೀನನೇ ನೀನಕಟ ನಾವಿರೆ। ಮಾನಸತಿ ಗುಪಹತಿಯ
ಬಗೆವರೆ ಬದುಕ ಸುಡು ನಿನ್ನ ॥ ನೀನಿನಿತು ಪಾತಕದ ಪಯಣಕೆ ಮಾನಸವ ಮಾಡು
ವರೆ ನೆರೆ ಕೈ । ಹೀನ ರಕ್ಕಸತಂಗ ಕಂಘೈಸುವರೆ ನೀನೆಂದ॥ ೨॥ ಸಂತವಿಸಿಕೋ ಕೋಪ
ವನು ನ। ಮ್ಮಂತರಂಗದ ಲಘುವಿಲು ಸಾ। ವೆಂತು ಸಂಘಟಿಸುವುದು ಹರಿಪದ ಭಕ್ತಿ
ಯುಕ್ತರಿಗೆ ॥ ಭ್ರಾಂತದೇಕಿನ್ನೆಲವೊ ಸಾರೆ ಕೃ। ತಾಂತ ಪುರ ನಿನಗಿನ್ನು ರಣ ವಿ।
ಕ್ರಾಂತ ವಿಜಯಾಂಗನೆಯ ಲಯಭಯವ ಪಡೆದು ಬಾಯೆಂದ ॥೩॥ ಮನವ ಬಲುವಿಡಿ
ವೀರ ಲಕ್ಷ್ಮಿಯ। ಮನವ ಮೆಚ್ಚಿಸು ಲೋಕ ಹಾಸ್ಯಕೆ। ತನುವ ತೆರದಿರು ತಿದ್ದಿಕೋ
ಭವಭವದ ಕಿಲ್ಬಿಷವ ॥ ಜನನ ಮರಣಗಳುಳ್ಳವೆಲ್ಲರಿ। ಗಿನಿತು ಗುಣವನ್ಯಾಯ
ಮಾರ್ಗವ। ನೆನೆಯದೇಕೋ ಭಾವದಲಿ ಕಾದೆಮ್ಮ ಕೂಡೆಂದ ॥೪॥ ಬಲ್ಲೆ ನಾವ್ ಹೇಳ
ದಿರು ನಿನ್ನಯ । ಬಲ್ಲಿದಿಕೆ ಸಾಕೆನ್ನ ಪರಿಯನು । ಗೆಲ್ಲದಲಿ ತೋರುವೆನು ತಡವೇ
ಕೊಂದು ನಿಮಿಷದಲಿ ॥ ಬಿಲ್ಲಬಲುಮೆಯ ವೀಕ್ಷಿಸೆನುತವೆ । ಬಲ್ಲಿದನು ಸಹಭವನ
ಕರಸಿ। ನೆಲ್ಲವೇತಕೆ ಯೆನುತ ಹೂಳಿದ ನಂಬಿನಲಿ ನಭವ ॥ ೫ ॥ ಕೆಣಕಿದಡೆ ಕಣೆನಿಲು
ವವೇಲ। ಕ್ಷ್ಮಣನ ಶರ ಸಮಯ ಪ್ರಕೃತ ಲ। ಕ್ಷ್ಮಣನ ನೂತನ ಕೌತುಕಾಹವ ರಂಗ
ರಕ್ಷಣನ ॥ ಅಣದು ಚಲ್ಲಿದ ನಂಭಟನಮಾ । ರ್ಗಣನ ಮುಗುಳ್ಳೈತಹ ಶರಾಳಿಯು।
ಹಣಿದು ಹಮ್ಮಿದನನುನು ಭೂವ್ಯೋಮಾಕಾಶ ಮಂಡಲವ ॥ ೬ ॥ ಎಸುವ ಗತಿಗಾಯೆಂದು
ಕಸ್ತೂರಿ। ರಸದೊಳದ್ದಿದ ಹೂಗಳನು ಸುಮ। ನಸರು ಸೂಸುವ ರಬ್ಬರಿಸುತತಿಕಾಯ
ಮರ್ದನನ ॥ ಸಶಿನದಲಿ ಸುರವೈರಿಗಳು ವಾ। ಶಿಶಿದ ಬೆಳುವಟ್ಟೆಯ ನಿವಾರಿಸಿ।
ಬಿಸುಡುವಲು ಬೊಬ್ಬಿರಿದು ಕರ್ಬುರ ಭಟನ ಸರಿಸದಲಿ ॥ ೭ ॥ ಬಿಸಿಬಿಸಿಯ ಬೋಳೆಗಳ
ತಳಪದ । ರಸುಮೆಗಳ ಕವಲಂಬುಗಳ ಥಾ। ಳಿಸುವ ಕಣಲಿಗೆ ಯಲಗುಗಳ ಕುಪ್ಪಿ
ಗೆಯ ಕೋಲುಗಳ ॥ ಎಸಳಲಗು ಕವಲಂಬು ಕತ್ತರಿ। ವೆಸರಿ ಕಣೆಗಳ ಥಾಳಿಗಳು ಧ।
ಟ್ಟಿಸಿದ ವೆರಡಂಕದ ನರಾಸುರ ವೀರರೆಸುಗೆಯಲಿ ॥೮॥ ಅಳವಿಯಲಿರಲಿ ಪದರಥಿಯ ಕ।
ಟ್ಟಳೆಯ ಕಣೆಕಣೆಗಳಲಿ ಚಿತ್ರದ। ಚಳ ಚಮತ್ಕೃತದಭಿನವದ ಸೊಗಸುಗಳ ಸೋಂಪು
ಗಳ ॥ ಉಳಿಯ ಮೆರೆದರು ನೋಟಕರ ಕಂ। ಣ್ಗಳಿಗೆ ಕೌತುಕವಾಗೆ ರಾವಣಿ। ಎಳಿಕ
ರಾಮ ಸಹೋದರನ ಮೂದಲಿಸುತಿಂತೆಂದ ॥ ೯ ॥ ಹಿಡಿರಣದೊಳತಿಕಾಯ ವೀರನ।
ಕೆಡಹಿದುತ್ಸವದರ್ಪ ಗಿರಿಗಿದೆ। ಸಿಡಿಲು ಶೂರ್ಪನಖಾಭಿಮಾನಚ್ಯುತಿಯ ಸಾಹಸದ ॥
ಗೊಡಲುಗಿದೆ ಬಿರುಘಾಳಿ ಹಿಸುಣನ । ನುಡಿಯ ಕೇಳಿದು ಕುಣಿವ ಕಡು ಧ। ಕ್ಕಡೆಯ
ತನಕಿದಿಕೋ ಕೃತಾಂತ ನಿವಾಸವೆನುತೆಚ್ಚ ॥ ೧೦ ॥ ಹಿಗ್ಗಿ ಹಿಂದೆಮ್ಮವನು ಹಾವಿನ।
ಹಗ್ಗದಲಿ ಹೆಡಗುಡಯ ಕಟ್ಟಿದ। ಬಗ್ಗಡೆಯ ತನಕಿದಕೋ ಬಹುಮಾಯವಿಲಾಸದಲಿ॥
ಕಗ್ಗನೆಯ ಕತ್ತಲೆಯಲೆಮ್ಮನು। ಮುಗ್ಗಿಸಿದ ಫಲಕಿದಕೋ ಸಾವಿನ। ಸುಗ್ಗಿ ನಿನಗೆನು
ತೆಚ್ಚ ಸಿಂಧ್ರಾರಿಯನು ಸೌಮಿತ್ರಿ ॥ ೧೧ ॥ ಎಚ್ಚ ಲಕ್ಷ್ಮಣನಂಬ ನಾಖಳ। ನೆಚ್ಚು
ಮುಗುಳೆ ಮಹಾಸ್ತ್ರದಲಿ ಬಿಡ । ದೆಚ್ಚ ನೆಚ್ಚ ವಿರೋಧಿಯಂಬಿನ ಹೊದರ ಸೌಮಿತ್ರಿ ॥

ಬಿಚ್ಚಿ ಬಿಸುಟಂಭೋಜನಾಭನ | ನೆಚ್ಚರುವಡರಿದೆಂಬವೊಲು ತೆಗ | ದೆಚ್ಚ ನುಗ್ರಾ
ನೇಕಬಾಣದ ಉರಿಯ ಕಪಿಸೇನೆ ॥ ೧೨ ॥ ನೂಕಿ ಹಾಯ್ದವು ಲಕ್ಷ್ಮಣನ ಶರ |
ಪ್ರೋಕರಿಸು ತರುಣಾಂಬವ ನುಚಿತ | ಪಾಕಶಾಸನ ನುರವ ಬಗಿದಾರೇಳು ಯೋಜನವ ॥
ಸೋಕಿದಾಜ್ಯಾಹುತಿಯು ಶಿಖಿಯು | ದ್ರೇಕದ ವೊಲಿಂದ್ರಾರಿ ಕೋಪದ | ಲೀ ಕಕುಸ್ಥಾ
ನ್ವಯನ ತಮ್ಮನ ನೆಚ್ಚಿ ಬೊಬ್ಬಿರಿದ ॥ ೧೩ ॥ ಸರಗೊಳಿಸಿ ಬಳಿಕಾತ ನೀತನ | ಸರಳ
ಪಾತದಲಾತ ನೀತನ | ತಿರುಗಿ ಕಟ್ಟಿವುಗೆಗಳೊಳೀ ಸೌಮಿತ್ರಿ ರಾವಣಿಯು ॥ ಹರ
ವಿರೋಧಿ ವಿರಾಧ ಹಿಂಸಾ | ವರಜನನು ಸರಿಮಿಗಿಲೆನಲು ಸಂ | ಗರ ಜಯಾಂಗನೆ
ಮೆಚ್ಚಲೆಚ್ಚಾಡಿದರು ಸನಿಸದಲಿ ॥ ೧೪ ॥ ಬಾಣ ವಿದ್ಯಾಭ್ಯಾಸದಲಿ ಕ | ಟ್ಟಾಣೆಗಳಲಾ
ತ್ರೀತೆಯಲಿ ಕಡು | ಜಾಣರಲ್ಲಾ ಜಡತೆ ಹೊಗ ದಾಹವ ವಿಚಿತ್ರದಲಿ ॥ ಸ್ಥಾಣು
ತ್ರೈಲೋದ್ಧರನ ಸುತ ನಾ | ಸ್ಥಾಣು ಚಾಪ ಸಿಖಂಡನಾನುಜ | ರೂಣೆ ಹೊಗ ದೆಚ್ಚಾಡಿ
ದರು ಮೆಚ್ಚಲು ಸುರವ್ರಾತ ॥ ೧೫ ॥ ತೆಗೆದು ಬಳಿಕಳವಿಯಲಿ ನಿಂದಿದು | ನಿಗುರಿ ನಿಲು
ಕುವ ಕೋಪವಹ್ನಿಯ | ನುಗುಳಿಸಿದ ರಂದಂಬುಗಳ ನಂಬುಗೆಯ ಬಿಲುಗಳಲಿ ॥ ಬಗೆಯ
ಭಾರಿಯ ಬಾಣತತಿ ಕೋ | ಮಗಳು ಕಾಣಿಸದಂತೆ ತನುಗಳ | ಹುಗಿಲಿರಿದು ಹವಿ
ರಿದು ಬಳಲಿಕೆ ದೋರೆ ಭಟರುಗಳ ॥ ೧೬ ॥ ದಾರಿದೆಗೆದುದು ಕೋಪದೆಸುಗೆಯು | ಭಾರಿ
ಸೆಯ ಬಲುಹಂತರಿಸಿದುದು | ವೀರತನ ದಾಳಾಪ ಕುಬ್ಜಸವಾದ ವಿಬ್ಬರಿಗೆ ॥ ಶೇರಿತಧಿಕ
ಶ್ರಮವು ಮುಕ್ತ ಶ | ರೀರರಾಗಲು ಬಗದರಿದ ಕಂ | ಡೋರಣಿಸಿ ಬಲವೆರಡು ನಿಂದುದು
ಬಿಸುಟು ಬವರವನು ॥ ೧೭ ॥ ಕಂಡ ರಿವರಿಬ್ಬರ ರಣಾಗಮ | ದಂಡಿಸಿದ ಮಾರ್ಗಾಂ
ತರವ ಮಾ | ರ್ತಾಂಡ ಪಥದಲಿ ಮೋಹವಳಿಯೆ ಸುರಾಸುರವ್ರಾತ ॥ ಕಂಡು ಕಳುಹಿದ
ರುಘಯ ಗುರುಗಳು | ಗುಂಡಿಗೆಯ ಸುಧೆಯೌಷಧಿಗಳ ವಿ | ಚಂಡ ಬಲ ಭಟರುಗಳ
ಬಳಿಗಿತ್ತಂದ ರಾಕ್ಷಣಕೆ ॥ ೧೮ ॥ ಇಬ್ಬರಿಬ್ಬರ ಸೌಷಧಿಗಳಿಂ | ದೆಬ್ಬಿಸಿದ ರಾಹವಕೆ
ವೀರರ | ಹಬ್ಬುಗಯ ಹಗೆ ಪಾಡಿಗಿಮ್ಮಿಗಿಲೆನಲು ಸಂಗರಕೆ ॥ ಉಬ್ಬರಿಸಿ ಬಿಲುದನಿ
ಗಳಲಿ ಬಲು | ಬೊಬ್ಬೆಯಲಿ ಲಳಿಯೆ ರಿ ಸಿಂವಿರ | ಲಿಬ್ಬರಿಬ್ಬರಿಸಿತ್ತರುತ್ತಮ ದಿವ್ಯ
ಕವಚವನು ॥ ೧೯ ॥ ಇತ್ತರಾ ಕೈಯ್ಯೊಡನೆ ಸುಭಟರಿ | ಗುತ್ತಮದ ಮಂತ್ರಾಸ್ತ್ರವನು
ದಿವ | ದತ್ತ ಹಾಯ್ದರು ಹಾಯ್ದ ಬಾಣವ ಹೊದರಿ ಗುರಿ ಹೆದರಿ ॥ ಕಿತ್ತಟದ ಲಮ
ರೇಂದ್ರ ನಿನವಂ | ಶೋತ್ತಮನ ಸಹಭವನ ಗೆಲವಿನ | ಹತ್ತುಗೆಯ ಹಮ್ಮೈಸು
ತಿದ್ದನು ಹರಕೆಗಳ ಬಳಿಯ ॥ ೨೦ ॥ ಹೂಳಿದನು ಬಳಿಕಸುರ ನಸಮ ಸ | ಗಾಳ ಶಂಭವ
ಶರವ ನಾಕ್ಷಣ ಹೂಡಿದನು | ಸೌಮಿತ್ರಿ ನಾರಾಯಣ ಮಹಾಶರವ ॥ ಹೂಳಿ ತೀವಿಗೆ
ಬಗವೆಸುತ ಕೊಂ | ಡಾಡಿಪ ನುಚಿತದಲಿ ಜಗವನು | ಮಾಡಿದಜ ನುಡಿದಮರರೆಲ್ಲೈದೆ
ವೋದ ರಭ್ರದಲಿ ॥ ೨೧ ॥ ಬಿಟ್ಟರಿಬ್ಬರು ಬಾಣಗಳ ತಲೆ | ಪಟ್ಟ ನಿಂದವು ಗಗನದಲಿ
ಸರಿ | ಗಟ್ಟಿ ಹಳಚಿವನೆರಡು ಶರ ಸುರಲೋಕ ತಲ್ಲಣಿಸೆ ॥ ತುಟ್ಟಿ ತುಡಿಯಿದು ದೈವ
ಧರ್ಮದ | ಬಟ್ಟೆಗರ ಕಡೆ ಧರ್ಮಹೀನರ | ಬಿಟ್ಟು ಕಳವಮ ಕೇಳಿದೈ ನೃಪಸೂನು
ಸೀನೆಂದ ॥ ೨೨ ॥ ಅಡಗಿತಾ ನೈಸ್ತ್ರವೊಳಗ್ಗದ | ಮೃಡ ಕಳಂಬಕ ವಸಿತರಲಿ ಖಳ |
ನಡುಗಿದನು ಕಡೆಗಾಲ ಪಿಮಗಿಸ್ನಗದಿರದೆಸುತ ॥ ಮುಡುಹ ಭಸ್ಮವಿಸಿದರು ಭೇರಿಯ |
ಹೊಡಸಿ ಸುರ ನಸುರೌಘ ಕೋಪದ | ಕಿಡಿಯ ಲಿದರ್ಮನು ಕದನ ಕೊಡಗಿತು ಮತ್ತೆ

ಕಲಿಗಳಿಗೆ ॥ ೨೩ ॥ ಆಯುಕಿಕೆ ಬಲಿದಸುರಶಸ್ತ್ರನಿ। ಕಾಯವನು ಕೆದರಿದನು ದಿಗು ಸವನು। ದಾಮ ಶರನಯನಾಗೆ ತೂಳುವ ನಾದ್ಯ ಘೋಷದಲಿ॥ ಆಯತಾಸ್ತ್ರ ವಿಚಿತ್ರ ರಾಘವ। ರಾಮ ನನುಜನು ತರಿದನಾ ವ। ಜ್ರಾಯುಧಾರಿಯ ಬಾಣಪಂಜರ ಪುಂಜ ದಂಬರವ ॥೨೪॥ ಮಸಗಿತಾ ಕೈಯೊಡನೆ ಕದನದ। ಪಿಷವ ವಿಗ್ರಹ ವಿಬ್ಬರಿಗೆ ನಿ। ಸ್ಪಸರ ವೆಸುಗೆಯ ನಿಶಿತ ಬಾಣಾವಳಿಯ ಬಂಬಲಿನ ॥ ಬಿಸಿಲುದೋರಿದ ಜೇಗುಗಳ ಹೊಂ। ಬೆಸದ ಹಿಳುಕಿನ ನವಿಲ ಗರಿಗಳ। ಹಸರಣಿಯ ಹಮ್ಮುಗೆಯ ಲಿಮ್ಮಡಿ ಯಾಯ್ತು ರಣ ರಭಸ॥ ೨೫ ॥ ಸೋಲಗೆಲವನು ಕಾಣದಿಬ್ಬರ। ಕೋಲ ಕದನವ ಲಮರತತಿ ರಣ। ದಾಲಸಿಕೆ ತೋರಿದುದು ಘಟರಿಬ್ಬರಿಗೆ ಭಾರಣೆಯ॥ ತೋಳು ಬಳ ಲಿದ ವೆಡಬಲದ ಸಂ ಬಾಳಿಗಳ ಶಬುದಗಳು ಸಿಂದವು। ಬಾಲ ಯುವ್ವನನಡಗಿ ತೋರಿತು ಮುಪ್ಪುದಿನ ಮಣಿಮ ॥೨೬॥ ಬಳಿಕ ಬಿಲುದಿರುಗಳನು ಹೊಯ್ದಡೆ। ಗಲಸಿ ಸಿಂದಳವಿಗಳ ಕೊಂಡ। ಗ್ಗಳದ ವೀರಾಳಾಪದಲಿ ಮಡವೇರಿ ಬೊಬ್ಬಿರಿದ। ಗೆಲವು ಗಳ ನಭಿನೈಸಿ ಸುರಸಂ। ಕುಲಕೆ ಕೈಗಳನೆಗಹಿ ಬಿರುದಾ। ವಳಿಯ ಸುಭಟರು ನಿಟ್ಟಿಸುತ ಹೂಡಿದರು ಮಾರ್ಗಣವ ॥ ೨೭ ॥ ಹಿಂದಣೆಸುಗೆಯ ಕಣಿಯ ಕೌತುಕ। ದಿಂದ ಶತಗುಣವೆನಲು ಸರಳಿನ। ಸಂದಣಿಯ ತೋರಿದರು ತೋರಿದ ಮೊದಲ ಮೋಡದಲಿ॥ ಮುಂದಲಿಸಿ ಬೊಬ್ಬಿರಿವ ಶರಸಥಿ। ಯಂದದಲಿ ಶರ ಸಟುದ ಸವೆದುದು। ಕಂದ ಕೇಳುತ್ತಾನಪಾನ ತನೂಜ ಮಂಡಲವ ॥ ೨೮ ॥ ಮುರಿದ ಮೊಗವಾಯುಲಗುಗಳ ಗರಿ। ಹರಿವ ಹಿಳುಕುಗಳುಡಿದು ಚಿಮ್ಮಿದ। ಮಿರುಗು ವಣಸುಗಳರೆ ಕಡಿದ ಸಮುಗಣಿಯ ಸೀಳುಗಳ ॥ ಬಿರುಗಣಿಯ ಬಿಸಬಿಸಲಿ ಕಾಣೆನು। ತೆರನನಿಳಿಗೇನದ್ಭುತದ ರಣ। ನೆರ ವಣಿಗೆಯುಳ್ಳವರೊ ರಾವಣಿ ರಾಘವಾನುಜರು ॥ ೨೯ ॥ ಕೆರಳಿ ಬಳಿಕಿಂದ್ರಾರಿ ಯಮ ಶಿಖಿ। ನಿರುತ ಮೇಘ ತಮೌಘ ದರ್ವೀ। ಕರ ಮಹಾದ್ರಿ ಸಮುದ್ರ ಮೊದಲಾದಸ್ತ್ರ ಸಂಕುಲವ ॥ ಸುರಿದನಸಿತಕೆ ಲಕ್ಷ್ಮಣನು ಹರಿ। ವರುಣ ಹರ ಪವಮಾನ ಭಾಸ್ಕರ। ಗರುಡ ವಜ್ರಾಜ್ಞೇಯ ಶರದಲಿ ಗೆಲಿದು ಬೊಬ್ಬಿರಿದ ॥ ೩೦ ॥ ಎಲೆಲೆ ಲಕ್ಷ್ಮಣ ದಿವ್ಯ ಬಾಣಾ। ವಳಿಯ ಜಯಿಸಿದೆನೆಂದು ಧಿಟ ಹೆ। ಕ್ಕಳಿಸದಿರು ಹಿತಕಾರಿಗಳು ನಮಗಮರ ರಲ್ಲಾಗಿ ॥ ತಲೆಯ ಬರಹನ ತೊಡವೆನ್ನೈ ಕಂ। ಘನ ಸುದತ್ತ ಮಹಾಸುರಾಸ್ತ್ರದ। ಬಲುಮೆಯನು ನೋಡೆನುತ ಹೂಡಿದನಾ ಮಹಾಶರವ ॥೩೧॥ ಪ್ರಾಣವಿರಲಿಕೆ ನೋಡಿ ಕೋಗೀ। ವರ್ಣ ನಿಕರದ ಕೊರಳ ಕತ್ತರಿ। ವಾಣಿ ಮಾನವ ವಿಮಾನ ಕುಲಗಳ ಗಾಣವಹಿ ಕುಲದ। ಪ್ರಾಣ ಹಿಂಸಾಪರನ ಸಮರ। ಕ್ಷಾಣಿಯಿದಕೋ ನಿಮ್ಮ ಜಠರದ। ಶೋಣಿತವ ಸವಿ ಪಸ್ತ್ರವಿದೆ ನೋಡೆನುತ ಬೊಬ್ಬಿರಿದ ॥೩೨॥ ಮತ್ತೆ ನೋಡಿದ ಕಾಣೆ ನೆನಬೇ। ಡುತ್ತರಸ್ಥಿತಿ ಬಿರಿಸು ತೋರಿಸು। ಹತ್ತಿರಿದ ವಿಭೀಷಣಾಂಗದ ಹನುಮ ಮೊದಲಾದ ॥ ಉತ್ತಮವ ಭಟರೀಕ್ಷಿಸಲಿ ಭಯ। ಸುತ್ತಿಕೊಳ್ಳದ ಮುನ್ನ ಶರವಿದ। ನುತ್ತರಿಸಲಾಪರೆ ವಿಭೀಷಣ ಮತವ ನರಿಯೆಂದ ॥೩೩॥ ಕಾಣೆನೆನಬೇಡೆನುತಲಾಸುರ। ಬಾಣವನು ಬೊಬ್ಬಿರಿಮ ಸೀತಾ। ಪ್ರಾಣನಾಥಪ್ರಿಯ ಸಹೋದರನೆಡೆಗೆ ಬಿಡೆ ಬಳಿಕ॥ ಕ್ಷೋಣಿಮಗಲಕೆ ನೆರಹಿದುದು ಪರಿ। ಮಾಣ ಗೆಟ್ಟಿಂದ್ರಾದಿಗಳನ। ಕ್ಷೀಣ ಬಲ ಭಟರು ಗಳ ಸೈಧ ಹಯ ರಥ ಪದಾತಿಗಳ ॥ ೩೪ ॥ ಎತ್ತ ನೋಡಿದಡಿಂದ್ರಜಿತುವಿನ। ನೊತ್ತ

ವಿಸ್ಸಿದು ಕವಿದೆಸುವ ಖಳ। ಪತ್ತಿರಾವೃತರ ಲಧಿಕರಿರ್ದರು ಕೋಟಿ ಸಂಖ್ಯೆಯಲಿ ॥
ಸುತ್ತವೇಡೆಯ ಸಿಕ್ಕಿಹೊಳಕುವ। ಹೊತ್ತ ಗಿರಿಗಳ ಹೆಮ್ಮರನ ಸುಭ। ಟೋತ್ತಮರು
ಸಂಹರಿಸುತಿರ್ದುದು ಸೇನೆರಾವಣಿಯ ।೩೫॥ ಇರಿವ ಕಡಿದೆಸು ವೆತ್ತಿ ಸೀಳುವ। ತಿರಿವ
ತಿವಿದವುಡಗಿವ ತೆರಳುವ । ಕೊರೆವ ಕೊಚ್ಚುವ ಕೊಂಡುಚುಚ್ಚುವ ಕಾಳ ರಕ್ಕಸರ ॥
ದುರುಬುಗಾಳಗ ಕಳೆವುತಿರ್ದುದು। ಗಿರಿಕುಗಳ ಗಡ್ಡಗಳ ಹಲುಗಿದ। ಒರಚಿಬೀಳುವ
ಬಾಲದಣ್ಣಗಳವನಿಯುಗಲದಲಿ ॥೩೬॥ ಮೇಲೆ ಬೀಳುವ ಮುಸಲ ಮುದ್ಗರ। ಶೂಲ
ಶೆಲ್ಲೆಹ ಸಬಳ ಚಕ್ರಕ। ರಾಳ ಪರಿಘ ಪ್ರಾಸ ಖಡ್ಗ ಪ್ರಮುಖ ಕೈದುಗಳ ॥ ತೂಳಲೇ
ಹವಣಾಯ್ತು ಗೆಲವಿನ। ಕೀಲಣಿಗೆ ಗತಿಯಿಲ್ಲದಾಯಿತು। ಬಾಳುತನ ಕವಸಾನಕಾಸ್ತ್ರ
ತಿಕಾಯ ರಿಪುವಿಂಗೆ ॥ ೩೭ ॥ ಮೊರೆದವಗಣಿತ ಸಿಡಿಲು ಸುಳಿಸುಳಿ। ದುರಿ ಭಡಾಳಿಸು
ತುಬ್ಬಿದವು ಕೇ। ಸರಿಗಳಾಸುರ ಮಸಗ ಮುಸುಕಿದ ವಖಿಳ ಭೂತಚಯ ॥ ಗಿರಿಗಳೆಡೆ
ಯಾಡಿದವು ಸೂಸಿದು। ದರುಣಮುಖ ಜಲಧಾರೆ ನೆರೆದವು। ಹರಿ ಶರಭ ಶಾರ್ದೂಲ
ಸೈರಿಭ ವಿದಿರಲರಿಭಟರ ।೩೮॥ ಹೋದುದಿನ್ನೇನಕಟ ರಾಮು ಸ। ಹೋದರನ ಶೌರ್ಯಾತಿ
ಶಯವೆಂ। ದಾ ದಿವೌಕಸರೊರಲುತಿರ್ದರು ತರಣಿ ಮಾರ್ಗದಲಿ ॥ ಐದಿತಧಿಕ ಬಲಾ
ನಕದ ಲಜ। ನ್ನಾದರದಿ ನುರು ವೈಷ್ಣವದ ಸಂ । ಪಾದ ವಸ್ತ್ರವನಿತ್ತು ಕಳುಹಿದ ನಾ
ಸವಿಾರಜನ ॥೩೯॥ ಇಳಿದ ನಂಭೋಜಜನ ಬಳಿಯಿಂ। ದಿಳೆಗೆ ಭುವನಪ್ರಾಣನಗ್ಗದ।
ಕಲಿ ಲಲಾಟ ಲಲಾಮ ಲಘು ಸಂಧಾನ ಲಕ್ಷ್ಮಣನ ॥ ಲಲಿತ ವೈಷ್ಣವ ಮುದ್ರಿತಾಸ್ತ್ರವ।
ತಿಳುಹಿ ಕೊಟ್ಟಾಕಾಶ ಮಾರ್ಗಕೆ । ನಿಲುಕಿದನು ಪವಮಾನ ಪವನ ಕುಮಾರ ನಬ್ಬ
ರಿಸೆ ॥೪೦॥ ಕೊಟ್ಟ ಬಾಣವ ನೀತ ತಿರುವಿಗೆ । ತೊಟ್ಟು ಕುಬುಜರಿದಬ್ಬರಿಸಿ ಬೊ।
ಬ್ಬಿಟ್ಟು ಬಿಡೆ ಬೆರಸಿತು ಬಹು ಮಾಯಾಸುರಾಸ್ತ್ರದಲಿ ॥ ಹುಟ್ಟಿದಿಂದ್ರಜಿತು ಪ್ರಮುಖ
ರಣ। ಘಟ್ಟಣೆಯ ಚತುರಂಗ ಬಲವನು। ಬಟ್ಟ ಬಯಲನ ಮಾಡಿ ಝಾಡಿಸಿ ತಖಿಳ
ಭೂತಳವ ॥೪೧॥ ಉಳಿದನೊಬ್ಬನೆ ಶಕ್ರಜಿತು ಬೆರ। ಳಿಸುಹಿ ಮೂಗಿನಮೇಲೆ ಮಾ
ರ್ಗವ। ನೊಲದು ಮಾ ಮಝು ಭಾವು ವಿಧಿ ಬಲ್ಲಿದನಲಾ ಯೆನುತ ॥ ಉಳಿದ ತಂದೆ
ಗಸಾಧ್ಯ ಪಾಪದ । ಬಳಿಯ ಫಲವು ತಪ್ಪುವುದೆ ತಾ ನಿ । ನ್ನಳಲಿ ಮಾಡುವುದೇನು
ಸಾವುದೆ ಸಮಯ ತನಗೆಂದ ॥೪೨॥ ಈತಗಳು ನರರಲ್ಲ ನೆರದಿಹ। ಕೋತಿ ಕೋಡಗ
ವಲ್ಲ ನಮ್ಮಯ। ತಾತ ಬಯಸಿದ ವನಿತೆ ಮಾನವಿಯಲ್ಲವಿದು ಸಿದ್ಧ ॥ ಸೋತಡೆಯು
ಸುಖ ದೈವದಲಿ ಧೈ। ರ್ಯಾತಿಶಯದಲಿ ಕಾದಿ ಕೀರ್ತಿಯ। ಬೈತಲೆಯ ನಪ್ಪುವುಡೆ
ಭಾವಜ್ಞರಿಗೆ ಗುಣವೆಂದ ॥ ೪೩ ॥ ಎನುತ ಮೇಘಧ್ವಾನ ಕೋಟಿಯ । ಸನದದಲಿ
ನೈರುತವಧನು ಸಿಂ। ಜೆನಿಯಲಿರೆ ಝಣಗರಿಸಿ ಸಕಲ ದಿಗಂತ ಧನಿದೋರೆ ॥ ವನಧಿ
ತಲಕೆಳಕಾಗೆ ನೆಲ ಬಿ। ಕ್ಕನೆ ಬಿರಿಯೆ ಚಂದ್ರಾರ್ಕ ಬಿಂಬದ । ಘನಪಥದ ಪದ ಪಲ್ಲ
ಟಿಸೆ ತೆಗೆದೆಚ್ಚ ನಿಂದ್ರಾರಿ। ೪೪॥ ಏನು ಬಲವಿಕೆಯೋ ಸಿಥಿಸಿಸೆ। ಮಾನವನೆ ಸೌಮಿತ್ರಿ
ಶರ ಸಂ। ಧಾನ ಸಮಯೋಚಿತದ ನಧಿಕನಲಾ ಜಗತ್ತ್ರಿಸಲಿ ॥ ಆ ನಿಖುತಿ ಮಂತ್ರಾಸ್ತ್ರ
ಮುಖಕೆ ಮ। ಹಾ ನಿಶಿತ ಶಿತಿಕಂಠ ಶರವ ವಿ। ಮಾನಿಕರು ತಲೆದೂಗಲೆಡೆಯಲಿ ಕಡಿದ
ನಾ ಶರವ ॥೪೫॥ ಎತ್ತಿದನು ಬಳಿ ಕಬುಜಭವ ತನ। ಗಿತ್ತ ಪೂರ್ವದ ದಿವ್ಯ ಶಕ್ತಿಯ।
ನೆತ್ತಿಲುರಿ ಘುಗಿ ಘುಗಿಸಿ ಕವಚ ಭವಾಂಡ ಖರ್ಪರವ ॥ ಪೊತ್ತಿದವು ಜಗರದ ನಸಿಮ

ರಘು | ಜೋತ್ತಮನ ನಿಜ ಶರಣ ನಾ ಕ್ಷಣ | ಹತ್ತಿರಕೆ ನಡೆತಂದು ಲಕ್ಷ್ಮಣ ದೇವಗಿಂ
ತೆಂದ || ೪೬ || ಹೂಡು ತಿರುವಿನಲಜ ಮಹಾಸ್ತ್ರವ | ನಾಡಲಿಕೆ ತೆರಹಿಲ್ಲವೀಪರಿ |
ಕೋಡಿನಲಿ ಕುಳ್ಳಿರಿಸು ಕಾಲನ ಮಂತ್ರ ಮುಖದಿಂದ || ಹೇಡಿಗೊಳುತದೆ ಸುರರು
ಶೀಘ್ರವ | ಮಾಡಸುರ ವಲ್ಲಭನ ನಿಲಿಸು ನಿ | ರೂಢಿಸಿದ ಶರಮುಖದೊಳರಿಭಟ
ವಿಜಯಿ ಯಾಗೆಂದ || ೪೭ || ಆತ ತಕ್ಷಣ ಹೂಡಿದನು ಜಲ | ಜಾತಭವ ಬಾಣವನು
ಲಯ ನಿ | ರ್ಘಾತತತಿ ಬೊಬ್ಬಿರಿದವಾಶರ ಮುಖದ ಮುಂಬಿನಲಿ || ಘಾತಿಸಿದ ಮೇಘ
ಸೆಯ ಮೇಘ | ವ್ರಾತಗಳು ಮಿಂಚುಗಳು ಹಿಗ್ಗಿತು | ವಾತಜನ ತನು ತವಕಿಸಿದವತಿ
ರಥನ ಸರಿಸದಲಿ ||೪೮|| ನೆನೆದನಾ ರಾಮಾಂಘ್ರಿ ಪಂಕಜ | ವನು ಮನೋಭಾವದಲಿ
ಕೌಶಿಕ | ಮುನಿಗೆ ಶರಣೆಂದಭ್ರದಮರರಿ ಗಕ್ಷಿಯಲಿ ನಮಿಸಿ || ಧನುವ ವಾಮದ ಕರ
ತಳದ ಬಿಗು | ಹಿನಲಿ ಬಿಗಿದಾಕರ್ಣ ಶಿರ ಶಿಂ | ಜಿನಿಯ ಸಂಧಾನದಲಿ ಲಕ್ಷ್ಮಣದೇವ
ನಿಂತೆಂದ ||೪೯|| ಸುರ ಮಹೀರುಹ ಹವ್ಯ ಕವ್ಯಾ | ಧ್ವರ ವಿಘಾತರಿಗಿದಕೊ ದುರ್ಜನ |
ಚರಿತ ದೈವದ್ರೋಹ ನಿರತರಿಗಿದಕೊ ಪರಸತಿಯ || ಪರಧನದ ಸೊಗಸಿಂಗೆ ಮನವನು |
ಬೆರಸು ವಧಮರಿಗಿದಕೊ ಶಿಕ್ಷಾ | ಪರಮ ಪ್ರಾಯಶ್ಚಿತ್ತವಿಧಿಯನು ತೆಚ್ಚು ಬೊಬ್ಬಿ
ರಿದ || ೫೦ || ಅಬ್ಬರಿಸಿ ಬರೆ ಸರಳು ನಭದಲಿ | ಜೊಬ್ಬಿರಿದುದಮರಾಳಿ ಹೊಡೆದವು |
ಹೆಬ್ಬರೆಗಳಲ್ಲಲ್ಲಿ ಮಾತಳಿ ಭುಜವ ನೊದರಿಸುತ || ಉಬ್ಬುಗೊಡದಿಂದ್ರಾರಿ ಕೈಯ್ಯಿಂ |
ದೆಬ್ಬಿಸಿದ ಶಕ್ತಿಯನು ಖಂಡಿಸು | ತುಬ್ಬಿನಲಿ ನಡೆತಂದು ನೆಗಹಿತು ನಭಕೆ ರಿಪು
ಶಿರವ ||೫೧|| ತೂಕಿರಿದ ನಂತಕನು ಬೊಬ್ಬೆಯ | ತೋಕಿದನು ಶಿಖಿ ಹರುಷದಿಂದ ಪಿ |
ನಾಕಿ ಹಾರೈಸಿದನು ಹೊಯ್ಸಿದ ನಖಿಳ ಭೇರಿಗಳ || ನಾಕಪತಿ ನಲಿದಾಡಿದನು ಮಕ
ರಾ ಕರೇಶ್ವರ ನನಿಲ ಧನದ ರ | ನೇಕ ಸುರರುಬ್ಬರಿಸಿದರು ರಾವಣಿಯ ಮರಣದಲಿ ||
ಹಾ ಯೆನುತ ಹಮ್ಮೈಸಿ ತಸುರ ನಿ | ಕಾಯ ವಘ್ರದ ಯಕ್ಷ ರಾಕ್ಷಸ | ರಾಯುಧವ
ಬಿಸುಟುಗುರ ಲೊಗಸಿದ ರಶ್ರುವಾರಿಗಳ || ಬಾಯ ಹೊಯ್ಲಿನ ಶೋಕ ಶಿಖಿಯ ಧ |
ಡಾಯಮಾನದ ಮರುಕಮಬ್ಧಿನ | ಕಾಯದುಪ ಲಂಕೇಶ ನಿಳೆಗೊರಗಿದನು ಮೂರ್ಛೆ
ಯಲಿ ||೫೨|| ಚಿಗಿದ ತಲೆ ಕೊಂಡಾಡೆ ಬವರದ | ನಿಗುಹು ಬಳಚದೆ ಬಾಣದಿಯ ಬಾ |
ಣಗಳು ಸವೆವನ್ನ ಬರ ಲೆಚ್ಚಿದು ಮುಂತ ರಾವಣಿಯ || ಮುಗುಳೆ ಕಿಗ್ಗಟ್ಟಿನ ಕಠಾರಿಯ |
ನುಗಿದು ದಂದೆಯನೊಡ್ಡಿ ಶಿವಿದುದು | ಗಗನವನು ಹಳುವಾಯಿಯಲಿ ಹವಣಿಸುತ
ರಥದೊಳಗೆ ||೫೪|| ಹೇಳಲುಚ್ಚರಿ ವೀರ ಲಂಕಾ | ಪಾಲಕನ ಭುಜವಿಜಯ ಲಕ್ಷ್ಮಿಯ |
ತೋಳ ಕನ್ನಡಿ ಕಳಚಿ ಬೀಳ್ವಂದದಲಿ ನಭದಿಂದ || ಥಾಳಿಸುವ ದಾಡೆಗಳ ಹೊಗರೂಗು |
ವಾಲಿಗಳ ನಗೆಮೊಗದ ಕರ್ಣ ವಿ | ಲೋಲ ಕುಂಡಲ ದಸುರ ಶಿರಕೆಡದುದು ಮಹೀ
ತಳಕೆ || ೫೫ || ಪಿಡಿದು ತಲೆಯನು ತಕ್ಕವಿಸಿ ಮೊಗ | ದಡವಿ ಮಕ್ಕಳ ಮಾಣಿಕವೆ ಕ |
ನ್ನಡಿಯೆ ಕಲಿಗಳ ಕಂದ ಬಾ ಯೆನುತಾ ವಿಭೀಷಣನು || ಮಡಿದೆಯ್ಯ ಯೆಲೆ ಮಗನೆ
ತಂದೆಯ | ತೊಡಕು ಪೇಟದ ತೋಟಯಲಿ ನಗೆ | ಗೆಡೆಗೆ ಸಂದಿರೆಯೆಂದು ತಂದನು
ಕಂಗಳಿಗೆ ಜಲವ ||೫೬|| ಆರ ಮಾತನು ಕೇಳದಕಟ | ಹೋರಿ ಸತ್ತಿರಿ ಮಕ್ಕಳಿರ ಕ
ಣ್ಣಾರ ಕಂಡೆನೆ ಪುತ್ರ ಮಿತ್ರ ಭ್ರಾತೃ ವಧೆಗಳನು || ವೀರ ಹಾ ವೈಚಿತ್ರ ಕದನ ಕ
ಠೋರ ಹಾ ಕಮನೀಯ ಸಾಂದರ | ಸಾರ ಹಾ ಹಾ ಕಂದ ಯೆಂದಸುರೇಂದ್ರ ಚಿಂತಿ

ಸಿದ ॥ ೫೭ ॥ ಸಂತವಿಸಿದನು ಬಳಿಕಲಾ ವಿ। ಕ್ರಾಂತಬಲ ಸೌಮಿತ್ರಿ ಕಲಿ ಹನು।
ಮಂತ ಮತವಹಸೂನು ಜಾಂಬವ ಮುಖ್ಯ ಭಟನಿಕರ ॥ ಭ್ರಾಂತಿಯನು ಬಿಡಿಸಿದನು
ಮಾಯಾ। ಭ್ರಾಂತಿ ಬೇಡೆಂದಮಳ ಲಕ್ಷ್ಮೀ। ಕಾಂತ ತೊರವೆಯರಾಮ ನರಕೇಸರಿಯ
ಕಿಂಕರನು ॥ ॥೫೮॥

ನಲವತ್ನಾಲ್ಕನೆಯ ಸಂಧಿ ಸಮಾಪ್ತಂ.

ನಲವತ್ತೈದನೆಯ ಸಂಧಿ.

ಸೂಚನೆ॥ ಕಾಳಗದ ಮುಖದಲಿ ಶುಕ ಶಾ। ರ್ದೂಲ ಸಾರಣರಸುವ ಸಲಹಿ ಸು। ರಾ
ಲಯಕೆ ಕಳುಹಿದನು ರಘುಪತಿ ಕಲಿ ಸುಪಾರ್ಶ್ವಕನ ॥

ಪದ್ಯ॥ ಕುಶ ಕುಮಾರಕ ಕೇಳು ನೆಲೆಗಾ। ಣಿಸಿದ ರಾಕ್ಷಸ ಜಲಧಿ ನೆಲೆಗಾ।
ಣಿಸಿತಲ್ಲೈ ಕಲಿ ಕುಂಭಕರ್ಣಾಸುರನ ಮರಣದಲಿ ॥ ಕುಶ ಸಹೋದರ ಕೇಳು ಶಕ್ರ।
ದ್ವಿಷನ ಸಾವಿನಲುಗುಳು ನೀರಾಯ್ತ। ತಸುರರಿಗೆ ಸುರನಿಕರ ಕಾಯ್ತಾತ್ಮರಿಯ
ಭಯ ಜಲಧಿ ॥೧॥ ಸಾರಿದುದು ರವಿಬಿಂಬ ಪಡುವಣ। ವಾರಿಧಿಯ ಧಾರುಣಿಯ ಲಲಿತ।
ಸ್ಮೇರ ಬಿಂಬಾಧರರುಚಿ ಪರ್ವಿದುದು ಪಶ್ಚಿಮವ ॥ ಭಾಸಿಸಿದ ಶರಣಿಶ್ರಮದ ಸಂ।
ಪೂರಣದ ಲಿವ ರಿರುಳು ಮುಖದಲಿ। ಸಾರಿದರು ಪದಪದ್ಮವನು ಪಂಕರುಹ ಲೋಚ
ನನ ॥೨॥ ಎದ್ದು ತಮ್ಮನ ನಪ್ಪಿದನು ಹೊದ। ರೆದ್ದ ಹರುಷದಲನುಜ ಕೇಳ್ನೀ। ನಿದ್ದ
ಕಾರಣ ಕೀರ್ತಿ ಕೈವಶವಾದುದಧಿನವದ ॥ ಹೊದ್ದಿದಭಿಮಾನಾಂಗನೆಯ ನೆರೆ। ವದ್ದಿ
ಗರು ನಾವಾಗದಂತಿರೆ। ಗೆದ್ದೆ ಹಗೆವನನೆಂದು ಹೊಗಳಿದನಾ ರಾಮ ॥೩॥
ಬಳಲಿ ದನುಜನ ವೈಯ್ಯ ರಕುತವ। ಬಳಿದು ಘಾಯದೊಳದ್ದ ಶರಮುಖ। ದಲಗುಗಳ
ನುಗಿದುಗಿದು ತಂದನು ಕಂಗಳಲಿ ಜಲವ ॥ ಇಳೆಯೊಳಿಸ್ನಂದದಲಿ ಬೇರಿ। ನ್ನುಳ್ಳಿಡೀ
ಮೂಲಿಕೆಗಳಿಂದು ಮಿಕ್ಕಿನ। ಬಲಯುತರ ನುಪಚರಿಸಿದನು ಕಾರುಣ್ಯ ಚಿತ್ತದಲಿ ॥ ೪ ॥
ಅನುಜ ಕೇಳೀರೇಳು ವರುಷದ। ಲನಶನ ವ್ರತವೆಂತು ಘಟಿಸಿತು। ನಿನಗೆ ನಿದ್ರಾಭಂಗ
ವೆಂತರಿವಾಯ್ತು ಹೇಳೆನಲು ॥ ವನ ಫಲಂಗಳ ದಿನದಿನಕೆ ಭೋ। ಜನಕೆ ದೇವರಿ
ಗೀವೆ ದೇವರ। ನೆನಹು ಸಂಧಿಸದಿರಲು ನಿರಶನವಾದುದೆನಗೆಂದ ॥೫॥ ಇರುಳು ದುಷ್ಟ
ಮೃಗೌಘ ರಜನೀ। ಚರರ ಬಾಧೆಗೆ ತೊರೆದು ನಿದ್ರೆಯ। ಧರವಟಿಗೆ ಬರುತಿಹೆನು
ನಿಮ್ಮಡಿಯ ರಕ್ಷಣೆಗೆ ॥ ತರುಣಿಯರ ಸಂಭೋಗವೆಂತುಟೊ। ದೊರಕದೆಂಬುದ
ದೇವರಪ್ಪಂ। ತರದ ಚಿತ್ತವೆ ಬಲ್ಲಿದೆನ ಮರುಗಿದನು ರಘುನಾಥ ॥೬॥ ಅರಿಯದಾದೆನು
ಕಂದ ಕಾನನ। ದುರುವ ಕಂದ ಫಲಾದಿಗಳ ನೀ। ವರೆಯ ಮುದರಾಗ್ನಿಗೆ ನೀನೇದಿವ
ನೆಂದು ಬಗದಿಹೆನು ॥ ಪವಗನಿಹ ನಿದ್ರೆಯಲಿ ಯೆಂದಾ। ನರಿಯದಿಹೆ ನೆಲೆತಮ್ಮ ಯೆನು
ತು। ಬ್ಬರಿಸ ಶೋಕದ ಲಂಬರವ ನಂಬಕಕೆ ಸೇರಿಸಿದ ॥೭॥ ಅರಸ ಕೇಳುಪವಾಸಗಳ
ಸಾ। ಗರಗಳಮಲ ಬ್ರಹ್ಮಚರಿಯದ। ನಿರತಿಶಯ ಸುವ್ರತವು ದೊರಕಿತು ದೈವ ಸಾತ್ರ
ದಲಿ ॥ ಧುರದೊಳಜ ಶಂಕರ ಸುರೇಂದ್ರಾ। ದ್ಯರಿಗೆ ಸೋಲದ ಭಟನು ಮಿತ್ರೊ।
ಬ್ಬರಿಗೆ ಮಣಿವನೆಯೆಂದು ಬಿನ್ನೈಸಿದನು ಸುಗ್ರೀವ॥೮॥ ಎಂದ ರವಿನಂದನನ ನಹುದೈ

ಯೆಂದು ಜಾಂಬವ ಹೊಗಳೆ ಬಳಿಕರ । ವಿಂದ ನಯನನನುಪಚರಿಸಿ ಪರಿಹರಿಸಿದನು
ಮನದ ॥ ಸಂದಣಿಸಿ ಶೋಕ ವ್ಯಥೆಯು ನ । ಲ್ಲಿಂದ ಮೇಲಸುರಾರಿ ನಯನಾ । ಸ್ಪಂದ
ದಲಿ ಬೀಡಿಕೆಗೆ ಬೀಳ್ಕೊಟ್ಟನು ಭಟಾವಳಿಯ ।೯॥ ಕೇಳಿದೈ ಯೆಲೆ ನೃಪ ಕುವರ ಶಾ ।
ರ್ದೂಲರಿರ ಧರೆಗಿಳಿದ ನಾ ಸುರ । ಪಾಲ ಜಿತುವಿನ ಸೂತತ್ರ್ರಲು ಶೋಕದಲಿ ರಥವ ॥
ಆಲಿ ಮರಳಿದ ಮುಸುಡ ಮುಸುಕಿನ । ಥಾಳ ತೆರಳಿಚ ತಲೆಯು ತೇರಿನ । ಮೇಲೆ
ತಂದಿಳುಹಿದನು ರಥವನು ನಡಿಸಿದನು ಪುರಕೆ ॥೧೦॥ ಇಳುಹಿವನು ದಶಕಂಠ
ನೋಲಗ । ದೊಳಗೆ ಸಾರಥಿ ಶಕ್ರಜಿತುವಿನ । ತಲೆಯು ಮೊಸಗೆಯು ಹರಿಯು ಹೊಯೇ
ಳಿಂದಿ ನಾಹವವ ॥ ಗಲವಿದೆಂಬೀ ಕೂರಿತಹ ನುಡಿ । ಯಲಗು ದಾಂಟಿತು ಬೆನ್ನಿನಲಿ
ಕಳ । ವಳಿಸಿ ಹಾಯುವ ರಾಜ ಹಾಯೆನು ತೊರಗಿದನು ನೆಲಕೆ ॥೧೧॥ ತನ್ನ ದೆಶೆ
ಯಿಂದಾದ ಬಾಧೆಗೆ । ಭಿನ್ನ ಹೃದಯನು ಕನಸು ಕಳವಳ । ಗನ್ನದಲಿ ತಲೆ ಸಿಕ್ಕಿ
ಸಿಡಿಮಿಡಿ ಯೋದ ನದಿಗಡಿಗೆ ॥ ಚೆನ್ನ ಹಾ ಚತುರಾಸ್ಯ ವರ ಸಂ । ಪನ್ನ ಹಾ ವಿಬು
ಧೇಂದ್ರಜಿತು ಹಾ । ಯೆನ್ನರಸ ಹಾ ಕಂದ ಹಾ ಯಿನ್ನೇನು ಗತಿಯೆಂದ ॥೧೨॥
ಮಗನೆ ನಿನ್ನಿಂದಾ ತ್ರಿವಿಷ್ಟಪ । ನಗರ ಕೈವಶವಾಯ್ತು ಹೆಸರಾ । ಯ್ತಗುವಿರೋಧಿ
ಪ್ರಮುಖ ದಿವಿಜರ ಗಂಡ ನೆಂದೆಂಬ ॥ ಬಗೆಯ ಬಿರುದಿನ ಕೀರ್ತಿ ಲತೆ ಮೂ । ಜಗವ
ಹಬ್ಬಿತು ನಿನ್ನದೆಸೆ ಯಿಂ । ಮಗನೆ ಕೇಳ್ನಿನ್ನಗಲ ಲಗಲಿದು ದಿಂದು ತನಗೆಂದ॥೧೩॥
ಸಿರಿ ಯುದೇಕಿನ್ನೀ ಜಗತ್ರಯ । ದರಸುತನ ವಿನ್ನೇಕೆ ಕಾಮಿನಿ । ಯರ ಕಟಾಕ್ಷ ಕಳಾಪ
ಕೇಳೀ ವ್ಯಸನ ವಿನ್ನೇಕೆ ॥ ತರುಣ ಕೇಳ್ ನೀನಲ್ಲ ದೇಕೀ । ಹರಣವೆಲೆ ಸುಕುಮಾರ
ನುಡಿಯೈ । ಕಿರಣ ವಿಲ್ಲದ ಶಶಿಯು ಪೊಲು ತಾ ನಾದೆನೇ ಯೆಂದ ॥೧೪॥ ಹೇಳು
ಬುದ್ಧಿಯ ನಮಗೆ ಮುಂದಕೆ । ಬಾಳಿಲೋ ಬೀಳಲೋ ಮಹಾಲಯ । ಬಾಲಕಿಯು
ಬಲು ಜವ್ವನದ ನೆಲೆ ಮೊಲೆಯು ನಪ್ಪಿನಲಿ ॥ ಕಾಳು ಕವಿದುದು ಬೆನ್ನ ಬೆಳಕಿಗೆ ।
ಕೇಳಿದ್ಯೈ ಯೆಲೆ ಕಂದ ತನ್ನಯ । ನಾಲಿಗೆಗೆ ಮುಳ್ಮುರಿದು ದುತ್ತರ ವಾವು ದೆನ
ಗೆಂದ ॥೧೫॥ ರತಿಕಲಾ ಸುಪ್ರೌಢಿ ಯಿಲ್ಲದ । ಸತಿಯು ಸೊಬಗಿದ್ದೇನು ಫಲ ಸಂ। ನುತ
ಗುಣಾಧಿಕ ನಲ್ಲದವ ನಾ ಕಾರ್ಯ ವೇನುಫಲ ॥ ನುತ ರಸಾಲಂಕಾರ ವಿಲ್ಲದ । ಕೃತಿಯು
ಸೊಬಗಿದ್ದೇನು ಫಲ ನಿಜ । ಸುತ ವಿಹೀನನ ಬದುಕು ಲೋಕ ದೊಳೇನು ಫಲ
ವೆಂದ ॥೧೬॥ ತಾನಭಾಗ್ಯನು ಕಂದ ನಿನ್ನಿಂ । ದೇನು ಕೊರತೆ ಮಹಾಹವ ದೊಳುರೆ ।
ಹಾಸಿ ಹೊದ್ದದೆ ಹಗೆಯ ಜಯಿಸಿದೆ ಜಾಂಬವಾಸ್ತ್ರದಲಿ ॥ ಆನಿಸಿತೆ ಸರ್ವತ್ರ
ಮೃತ್ಯುವಿ । ನಾನನಕೆ ಬಳಿಕೊಮ್ಮನಲಿ ಚತು । ರಾ ನನಾಸ್ತ್ರ ದೊಳಲ್ಪ ಪುಣ್ಯರ್ಪ
ನಾವನೇ ಯೆಂದ ॥೧೭॥ ಬೇಡ ನಾಗದೆ ರೋಮದಲಿ ಖಯ । ಖೋಡಿಯಿಲ್ಲದೆ ಮಗನೆ
ಖಾಡಾ । ಖಾಡಿಯಲಿ ನೆರೆ ಕಾದಿ ಕೊಂಡೆಯಲಾ ಮಹಾಬಲರ ॥ ಆಡೆ ನಾಲಗೆ ಯಿಲ್ಲ
ವಿಷಮದ । ಲಾಡಿ ಮಕ್ಕಳ ಮರಿಗಳನು ಹೋ । ಗಾಡಿದನು ಖಳ ನೆನ್ನದಿರ ದಿನ್ನೇನು
ಗತಿ ಯೆಂದ ॥೧೮॥ ಕೇಳಿ ಬಂದಳು ಬಳಿಕ ಸೊಸೆಯುರ । ಮೇಳದಲಿ ಮೊರೆಯಿಡುತ
ವದನವ । ಸೂಳವಿಸಿ ಕೊಳು ತಸುರ ರಾಯನ ರಾಣಿ ಮಗನೆಡೆಗೆ ॥ ಬಾಲ ಹಾ ಬರ್ಹಿ
ರ್ಮುಖರ ಹೃ । ಚ್ಛೂಲ ಹರಣನ ಭಾಮಿನೀ ರತಿ । ಲೋಲ ಹಾ ಹಾ ಕಂದ ಹಾ
ಯೆಂದೊರಗಿದಳು ನೆಲಕೆ ॥೧೯॥ ಅಸವಳಿದು ಬಸವಳಿದು ಸಡಿಲಿದ । ವಸನ ದುರದ

ನಿತಾಂತ ಲಂಬಿತ । ದಸಿತ ಕೇಶದ ಕೆದರಿಕೆಯ ಕಂಕಣ ಝಣತ್ಕೃತಿಯ ॥ ಬಸುರ ಹೊಯ್ಲಿನ ಕಾಂತಾ । ವಿಸರ ದಕ್ಕೆಯ ಉಕ್ಕಿರಿದ ಕಡು । ರಸದ ಶೋಕೋದ್ರೇಕದಲಿ ಹೊರಳಿದಳು ಹುಡಿಯೊಳಗೆ ॥೨೦॥ ಬಳಲಿ ಬಳಿಕೆದ್ದಬಲೆ ಗಂಡನ । ಬಳಿಯಲಿಹ ರಾಕ್ಷಸ ಸಭಾ ಮಂ। ಡಳಿಯೊಳಗೆ ಮೊರೆಯಿಟ್ಟಳುರೆ ಬಹುವಿಧ ವಿಲಾಸದಲಿ । ಕೆಳೆದು ಕೊಂಡರೊ ತನ್ನ ರನ್ನದ । ಕಳಶವನು ತನ್ನಯ ಮನೋರಥ । ವಿಳಸವನು ಮಾಂಗಲ್ಯ ಭಾಳದ ಮೌಕ್ತಿಕದ ಮಣಿಯ ॥೨೧॥ ಎನ್ನ ಸೊಬಗಿನ ನೋಟದುತ್ತಮ । ಕನ್ನಡಿಯ ನೊಡೆಬಡಿದರೋ ಹಾ । ಯೆನ್ನ ಚಿಂತಾಮಣಿಯ ಕದ್ದರೊ ಕಾಣ ತಕಟಕಟ ॥ ಎನ್ನ ಭಾಗ್ಯದ ನಿಧಿಗೆ ಸವೆದರೊ । ಕನ್ನವನು ಮೊರೆಯಿಡುವ ಮಾತನು । ಮನ್ನಿಸುವರಿಲ್ಲವೊ ವಿಚಾರದೊಳೆಂದಳಾ ಕಾಂತೆ ॥೨೨॥ ಆಸೆಗೊಡುವವರಿಲ್ಲ ದಕಟಾ ದೇಶಿಗಿತಿ ನಾನಾದೆನೇ ನೆರೆ । ದೋಷವಿಲ್ಲವೆ ನಿಮಗೆ ಕಂದನ ಕೊಂದವರು ನೀವೇ ॥ ಲೇಸು ಮಾಡಿ ದಿವಾಳಿಗಿತ್ತಾ । ದೇಶವನು ನೀವ್ ಪಾಲಿಸಲು ಬೇ । ಕೈಸಲೇ ಯೆಂದಬಲೆ ಮೊರೆಯಿಟ್ಟಳು ಸಭಾವಳಿಗೆ ॥ ೨೩ ॥ ಕಳುಹಿ ಬಂದಿರೆ ಮಗನ ಹಗೆವನ । ಕೊಲಿಗೆ ಗುರಿಮಾಡಿದರೆ ಬವರಕೆ । ಬಲಿಯ ಕೊಟ್ಟರೆ ಬಾಯಿಗಡಸಿದರೇ ಲಯಾನನನ ॥ ಚಲುವ ಚನ್ನಿಗ ಚದುರ ನಲಿ ನೀವ್ । ಛಲವ ಮೆರೆದಿರೆ ಕೇಡು ತನಗೊಬ್ಬಳಿಗೆ ಬಂದುದಲಾ ಯೆನುತ ಬಾಯ್ಬಿಟ್ಟಳಾ ಕಾಂತೆ ॥೨೪॥ ಬೆಳೆವ ಜಟ್ಟಿಕೆ ಮಗನ ತೊತ್ತಳ । ದುಳಿದು ತಾವನುಭವಿಸ ಲೇಪ್ಯದ । ಹಲವ ದೂರಪೆ ದಿನಗಳಕಟಾ ತಮ್ಮ ಕಣ್ಗಳಿಗೆ ॥ ತೊಳಲುತಿರ್ದನ ಹೋದ ನುರೆ ಸಿ । ರ್ಮಳವು ನಿಮಗಿನ್ನಾಗಲೆಂದಾ । ಲಲನೆ ಕಾಂತನ ಕಟಕಿಯಲಿ ನುಡಿದಳು ಸರೋಷದಲಿ ॥೨೫॥ ವೃತ್ತ್ಯವಾದಳೆ ಮಗನೆ ಸೋದರ । ದತ್ತೆ ತಮ್ಮಣ್ಣನನು ಬೋಧಿಸಿ । ಕಿತ್ತು ಬಿಸುಟಳೆ ಬೇರ ತನ್ನಯ ಪುತ್ರ ಸಂತತಿಯ ॥ ಹೆತ್ತೊಡಲು ಹಾಳಾಯ್ತು ಕಂಡಿರೆ । ಯೆತ್ತಿ ಸಲಹಿದ ತೋಳು ನೆರೆ ಮುರಿ । ಯಿತ್ತು ಕಂಡಿರೆ ಯೆನುತ ಕೊರಳಿಗೆ ಹಾಯ್ದಳಬಲೆಯರ ॥೨೬॥ ಅರಿದ ಶಿರವನು ತೆಗೆದು ಮುಂಡದ । ಕೊರಳಿನಲಿ ಸಸಿನಿಂಸಿ ಮುದ್ದಿಸಿ । ಮರಳಿ ಚೈ ಮುಂಡಾಡಿ ದಿಟ್ಟಿಸಿ ಲಲ್ಗೆ ವಾತಿನಲಿ ॥ ಕರೆ ಕರೆದಡೌ ಯೆನ್ನೆ ಯೇನಲೆ । ತರುಣ ತಾಯ್ ತಾನಲ್ಲವೇ ತಾ । ಕರಗವೇ ಕರಣಗಳು ತನ್ನಲಿ ಯೆಂದಳಾ ಕಾಂತೆ ॥೨೭॥ ತಲೆಯ ತಕ್ಕೈಸಿ ಕೊಂಡು ಮೇಲುದ । ಕೆಲ ಕಡೆಗೆ ಮರೆಮಾಡಿ ಮುದ್ದಿಸಿ । ಮೊರೆಗೊಳಿಸಿ ತೂಪಿರಿದು ಮಲಗೆಲೆ ಕಂದ ಮಲಗೆನುತ ॥ ನೆಲನ ಮೇಲಿಳುಹಿದಳು ಕರೆದಳು । ಕೆಳದಿಯರ ಜೋಗುಳಕೆ ದಶಶಿರ । ನೊಳುಗುತಾಪಿಸಿ ಕೊಸರಿದಳು ನಂದನನ ಗುಣಗಣವ ॥೨೮॥ ಸತಿಯ ಪುತ್ರ ವಿಲಾಪ ಮೇಘ । ಪ್ರತತಿ ಯುಬ್ಬರ ಕುಬ್ಬಿದುದು ಖಳ ಪತಿಯ ಕರಣಾವಳಿಯ ನೊಡೆದುರೆ ಶೋಕಮಯ ಜಲಧಿ । ಖತಿಯು ಹಿಡಿದವ ಬಳಿಕಲಾ ರಘು । ಪತಿಯು ಪುಣ್ಯ ಶ್ರಿಯ ಕೊಲುವಾ । ಯತದ ಲೈದಿದ ನಾಗ ಬನವನು ಜನಕ ನಂದನೆಯ ॥೨೯॥ ಅಸುರ ನಧಿಕ ಕ್ರೋಧ ವಹ್ನಿಯು । ರಷುಮೆಯಲಿ ವನ ಮುಟ್ಟದವ್ರ ಸಾರಸದ ಷರಷಿಯ ಸಲಿಲ ಕುದಿದುದು ಕೂಡೆ ಬನದೊಳಗೆ ॥ ದೆಸೆದೆಸೆಗೆ ಹಾರಿದವು ಬಕಸಾ । ರಸ ಮದಾಳಿ ಪಿಕಾಳಿ ಸೀದವು । ಕಿಸಲಯದ ಲಾವಣ್ಯದ ಅಶೋಕೆಯ ಲತಾಗ ಕೇಳೆಂದ ॥೩೦॥ ಕೆಲಕೆ ಸಾದರು ಕಾಮಿನಿಯ ಕಾ । ವಲಿನ ಕಾಂತೆಯ ರಂಜಿಕೆಯ

ಲುರಿ । ಚಲಿಸದ ಮೊಲೀಕ್ಷಿಸಿದ ಳಬಲೆ ಕಟಾಕ್ಷದಲಿ ಖಳನ । ಕೊಲಲು ಬಂದನಲಾ
ಯೆನುತ ತಳ । ವೆಳಗಿನಲಿ ತಲೆ ಮುಸುಕಿನಲಿ ರಘು । ಕುಲ ಲಲಾಮನ ರಾಮ
ರಾಮೆನುತಿರ್ದಳಬುಜಾಕ್ಷಿ ॥೩೧॥ ಸತಿಯ ಕಾಣುತ ಖಂಡೆಯುವ ನುಗಿ । ದತಿ ಮನದ
ರಕ್ಕಸನು ಲಲನಾ । ಹತಿ ಗೊಡಂಬಟ್ಟಿರಗು ವನಿತರೊಳವನ ಮಂತ್ರಿಗಳು ॥ ಮತ
ವಿದಲ್ಲೆನು ತಡ್ಡವಿಸಿ ದೂ । ಹತಿಯ ಹಸ್ತವ ಹಿಡಿದು ರಣ ನಿ। ಷ್ಕೃತಿಗೆ ರಂಜಕ
ವಾವು ದನಿತರೊಳೆಂದ ರವರೆಂದು ।೩೨॥ ಇವಳ ದೆಸೆಯಿಂ ದೈಸಲೇ ನ। ಮ್ಮವರು
ನೆಮ್ಮದ ರಂತಕನ ನಿಜ । ಭವನ ವೀದಿಯ ಲಿವಳ ತಲೆಯಿನು ಹೊಡೆದ ಬಳಿಕಿನಲಿ ॥
ಇವಳ ಬಿಡಿಸಲು ಬಂದ ಮೃಗ ಮಾ। ನವ ಭಟಾಳಿಯ ಕೊಲುವೆನೆಂದವ । ತವಕಿಸಲು
ತಗ್ಗೊತ್ತಿ ಬಳಿಕ ಸುಪಾರ್ಶ್ವ ನಿಂತೆಂದ ॥೩೩॥ ಕೊಳುಗುಳದೊ ಳರಿಭಟನ ಬವರ
ದೊ। ಳಳಿದ ರಥಿಕ ಸ್ವರ್ಗವಲ್ಲಿಯ । ಲಲನೆಯರು ನಿನ್ನವರಲಾ ನೀ ನಿಂದ್ರ ಚಂದ್ರರಿಗೆ॥
ಸಲೆ ಮಿಗಿಲು ನೀನರಿಯ ಗೆಲಿದಲೆ । ಬಳಿಕ ತೋರಿಸಿ ಸೀತೆಯನು ನಗೆ । ಗೊಳಗಹದ
ಬಿಡು ಕಷ್ಟವೃತ್ತಿಯ ನೆಣಿಸ ಬೇಡೆಂದ ।೩೪॥ ಕೀರ್ತಿಯಹು ದರಿಭಟನ ಸಮರದೊ।
ಳಾರ್ತದಲಿ ಕಾದಿದರೆ ಸೇರದ । ಧೂರ್ತಜನ ನಗದಿಹುದೆ ರಾವಣ ನಧಿಕ ಬಲನೆಂದು॥
ವಾರ್ತೆ ಮುಂದಣ ಯುಗಗಳಿ । ಸಂಪೂರ್ತಿಯಾಗಿಹು ದದರಿ ನೀ ನಪ । ಕೀರ್ತಿ
ಯನು ಕೈವಿಡಿಯ ದಾರಿಗೆ ಮನವ ಮಾಡೆಂದ ॥೩೫॥ ಲೋಕ ದೂಷಣ ವನ್ಯ
ನಾರಿಯ । ಸೋಕು ತಾನದು ಹಗೆಯ ಜಯಿಸಿದು । ಸೋಕಿ ದಬಲೆಗೆ ಮನವ ಮಾಡುವ
ದೋಜೆ ರಾಯರಿಗೆ ॥ ಸಾಕು ತಿರುಗಿ ಧೈರ್ಯ ಧರ್ಮವ । ನೂಕಿ ತಾ ಕಡು ಖೂಳರಿ
ರವಿಗೆ । ನೋಕಹದ ನೆಳಲಾಗದಿರು ನಡೆ ರಣಕೆ ನೀನೆಂದ ॥೩೬॥ ಚಾಚು ನಮ್ಮನು
ನಮ್ಮ ಜೀವ ವಿ। ರೋಚನದ ಮೇಲರಿಯ ಕೊರಳಿಗೆ । ಚಾಚು ಚಟುಳ ಚಪೇಟ ಕದ
ಚೂರಿಸುವ ಖಂಡೆಯವ ॥ ಆಚಟುಳ ಬಲ ನಿನ್ನ ಬಲುಹನು । ಚಾಚಿದರೆ ಬಳಿ ಕರಿದು
ಕೋ ಸಚ । ರಾಚರಾತ್ಮಕನೆಂದು ಸತ್ಯವಿ ದೆಮ್ಮನುಡಿ ಯೆಂದ ॥೩೭॥ ತಿರುಹಿದನು
ಬಳಿ ಕಸುರ ರಾಯನ । ಹೊರದ ಕೋಪದ ತಾಪ ಶಿಖಿಯನು । ವರ ವಚೋ ವಿನ್ಯಾಸ
ನಯವಿಸ್ತರದ ನೀತಿಯಲಿ ॥ ಪರಿಹರಿಸು ಕೈವಿಡಿದು ತಂದಾ । ಭರಿತ ಸುತ ಶೋಕಾಗ್ನಿ
ದಾಹದ । ತರುಣಿ ಮಂಡೋದರಿಯ ನುಪಚರಿಸಿದನು ವಿನಯದಲಿ ॥೩೮॥ ಅಳಲದಿರು
ಕೇಳಬಲೆ ರಣದೊಳ । ಗಳಿದ ನಿನ್ನ ಕುಮಾರ ವರ್ಗವ । ನಲಿಸುವೆನು ನಿನ್ನಿದಿರಿನಲಿ
ನೀರೇಜ ಭವ ಹರರ ॥ ಗಳಕೆ ಖಡ್ಗವ ನಿಕ್ಕಿ ಮುನ್ನಿನ । ಹಳಿಮೆ ಗಿಮ್ಮಿಗಿಲಾಗಿ ಸುಖ
ಮಯ । ದೊಳಗೆ ನಿನ್ನ ಮನೋರಥವ ಮಾಡುವೆನು ತಾನೆಂದ ॥೩೯॥ ಬಳಿಕವರ ನಾ
ಸಚಿವಪತಿ ನಿಜ । ನಿಳಯ ಕವರನು ಕಳುಹಿ ಕಡುಗ । ತ್ತಲೆಯ ಕೈದೀವಿಗೆಯ ಪಾಳೆ
ಯದ ಪಸರದಲಿ ॥ ಒಳು ಭಟರ ನೊಳು ದಂತಿಗಳ ನ । ಗ್ಗಳಿಯ ತೇಜಿಯ ತಿಂಥಿ
ಣಿಯ ತೇ । ರ್ಗಳನು ಮೇಳೈಸಿದನು ಕೂಡಿಕ್ಕಿದನು ಕೈದುಗಳ ॥೪೦॥ ಒಡೆದು
ಭಂಡಾರವನು ಮೊಗ ಮೊಗ । ದಡಕಿದನು ಮನದಣಿಯೆ ಮಣಿಮಯ । ದೊಡಿಗೆಗಳ
ನೀಡಿದನು ಕರ್ಪುರ ಹುಳುಕುಗಳ ಮೊಗೆದು ॥ ಕುಡಿತೆಯಲಿ ಚಾಚಿದನು ರಕ್ಕಸ। ಪಡೆಗೆ
ನಾಳಿನ ಸಮರ ಮುಖದಲಿ । ಮಡಮುರಿದ ಡಿಹಪರಕೆ ಬಾಹಿರ ರಹಿರಿ ನೀವೆಂದ ।೪೧॥
ವೀರ ಕಂಕಣ ವಿಕ್ಕುವುದು ನಿಜ । ನಾರಿಯರ ಮಕ್ಕಳ ಗೃಹಾಲಂ । ಕಾರವನು

ಬೀಳ್ಕೊಂಬುದೊಂದೇ ಚಿತ್ತಶುದ್ಧಿಯಲಿ ॥ ಸಾರೆ ಸಂಪದ ವಿತ್ತ ಸ್ವಾಮಿಯ। ಕಾರಿ
ಯಕೆ ಪ್ರಾಣವನು ಕೊಡುವುದೆ । ದಾರಿಯಿದು ಸದ್ಗತಿಗೆ ಕಾರಣವೆಂದು ಸಾರಿ
ದರು ॥೪೨॥ ಮಣಿಯ ಲಾಗದು ವೈರಿ ಸುಭಟಾ। ಗ್ರಣಿ ಗಳದಿರಿನ ಲಿರಿದು ಮರೆವುದು।
ಹಣೆಗಳಲಿ ತೋರುವುದು ಕಣ್ಗಳ ನಾಜಿ ರಂಗದಲಿ ॥ ಜುಣುಗಿ ದಾಹವ ಸತಿಯ
ಹಾರದ । ಕುಣಿಕೆಯನು ಸಕ್ಕುವುದು ಸ್ವಾಮಿಯ । ರುಣವ ತಿದ್ದುವುದೆಂದು ವೀರ
ಸುಪಾರ್ಶ್ವ ಸಾರಿಸಿದ ।೪೩॥ ಅಡರಿದನು ರವಿ ರಥವ ಕೈಯ್ಯಲಿ। ಹಿಡಿದ ಕಮಲವ
ಹಾಯ್ಕಿ ವಜ್ರದ । ಖಡುಗವನು ಮಣಿಮಯದ ಹಲಗೆಯ ಕೊಂಡು ರಕ್ಕಸರ ॥
ತೊಡಕು ತೋಟಿಯ ವಿಲಗ ತನ್ನನು। ತೊಡಕಿ ಕೊಂಬುದೋ ಯೆಂಬ ಸಂಶಯ।
ದೆಡಹಿನಲಿ ವೈದೋರಿದನು ಪೂರ್ವಾಚಲಾದ್ರಿಯಲಿ ॥೪೪॥ ಇವನ ಜನನ ದೋಷಾ
ಸುಪಾರ್ಶ್ವಕ । ನನುವರಕೆ ಮೇಳೈಸಿದನು ವಾ । ಹಿನಿಯ ಹೊರವಡಿಸಿದನು ಹೊರ
ಗೆಯ ರಾಜ ಕಾರ್ಯದಲಿ ॥ ಕನಕ ರತ್ನಾಭರಣವನು ಲೇ। ಪನದ ಲೊಪ್ಪಂಬಡೆದು
ಖಳ ನರ। ಮನೆಗೆ ಬಂದಾಹವಕೆ ವೀಳಯ ಗೊಂಡು ಬೀಳ್ಕೊಂಡು ॥೪೫॥ ವೀರ ಶುಕ
ಶಾರ್ದೂಲ ದುರ್ಮದ । ಸಾರಣರ ಗಡಣದಲಿ ಪಯಣದ। ಭೇರಿಗಳ ಬಿರುದನಿಯ
ಳಿಳಿದನು ದುರ್ಗವನು ಖಳನ ॥ ತೋರ ವಿಪ ಮಣಿ ಮಕುಟ ನಿಕರದ। ಭೂರಿವೆಳ
ಗಳ್ಗರಿಯ ಸುಮನೋ । ನಾರಿಯರ ನಿಡು ಗಣ್ಗಳನು ನಡೆತಂದ ನಾಹವಕೆ ।೪೬॥
ತೇಜಿಗಳ ಥರೆ ಮಾಲೆಗಳ ರಥ। ರಾಜಿಗಳ ನೆಗಳುಗಳ ನಾಗ ಸ। ಮಾಜಗಳ ಸೀರೇಭ
ಗಳ ಪದ ಚರರ ಜಲಚರರ ॥ ರಾಜಿಸುವ ನಾನಾಯುಧಂಗಳ। ತೇಜ ದೌರ್ವಾನಳನ
ಬಗೆಯಲಿ । ರಾಜರಾಜಾನು ಜನ ಬಲ ಜಲರಾಸಿ ರಂಜಿಸಿತು ॥೪೭॥ ಅಣುಗ ಕೇಳಾ
ಬಲದ ಹಯ ವಾ। ರಣ ವರೂಥ ಪದಾತಿಗಳ ಹ। ಲ್ಲಣದ ಹೇಷಿತ ನಿನದ ಬೃಂಹಿತ
ನಾದ ಚೀತ್ಕೃತಿಯ ॥ ರಣಿತ ನಿಸ್ವನ ಸಿಂಹರವ ವಿಗೆ । ಮುಳುಗಿಸಿತು ಸರಸಿಜ
ಭವಾಂಡವ । ನಣದು ದಾ ಮುಂಗುಡಿಯ ವಾದ್ಯದ ಕೂಗು ಕೂರುಮನ ॥೪೮॥
ಕಾಣುತೀ ಬಲ ದುಬ್ಬರದ ಪರಿ । ಮಾಣವನು ಪದ್ಮಪ್ರಿಯನ ಮುಂ । ಗಾಣಿಕೆಯ
ಮಗ ನುಭಯ ದಿಕ್ಕಿನ ಭಟರ ನೀಕ್ಷಿಸಲು ॥ ಏಣವಿಂಡಿಗೆ ಮಲೆವ ಹುಲಿಗಳ। ಹೊಣಿ
ಕೆಯ ವೊಲು ತೊಂಚಿ ಸುಭಟ। ಶ್ರೇಣಿ ನಿಂದುದು ನೀಲ ನಿಷಧಾದ್ರಿಗಳ ನಿಲವಿನಲಿ ॥
ಹಿಮದ ಹೊಯ್ಲಿಗೆ ಹೊದಕೆಗೊಂಬನೆ। ತಮವಿರೋಧಿ ವಿಲೋಕ ನದಲು। ಭ್ರಮಿಸಿ
ಹಳಚಿತು ಡೊಕ್ಕು ದಡ ದುಡ ಧೊಪ್ಪು ಧಿಪ್ಪೆನಲು ॥ ದ್ಯುಮ ಮಹಾದ್ರಿ ನಿಘಾತದಲಿ
ರಣ। ವಿಮುಖರೇ ರಕ್ಕಸರು ಖಣಿ ಖಟಿ। ಲಮರೆ ಕಡಿವರು ಕೋಡಗವ ಮುಸು ಕರ
ಗಳ ಪಡೆಯ ।೫೦॥ ನಡೆವುತಿರ್ದುದು ಸಂಕುಳದ ರಣ। ವಡವಿಗರಿ ಗಡ ಸುರರಿ ಗವ
ನಿಪ । ನುಡಿದ ನಿತ್ತಲು ತನ್ನ ವೈನಂಬುಗೆಯ ಶರಣಂಗೆ ॥ ಕಡೆಯ ಕಾಣೆನು ದಿನ
ದಿನಕೆ ಪೊರ । ಮಡುವ ಸೇನೆಗಿದೇನು ಸೋಜಿಗ । ಕಡೆಗವಧಿ ನಮಗಾವುದೆಂದನು
ನಗುತ ರಘುನಾಥ ॥೫೧॥ ದಶ ಶಿರನ ದೆಸೆಗಂಜಿ ನಾಲುಕು। ಮುಸುಡಿ ನವನೀ ಸೇನೆ
ಯನು ನಿ। ರ್ಮಿಸಿಯೆ ಕೊಡುತಿರನಲೆ ಮಹಾಂಭೋರಾಶಿ ಮಧ್ಯದಲಿ ॥ ಎಸೆವ ಬುದ್ಬು
ದದಂತೆ ಸೇನಾ । ವಿಸರ ಬರುತಿದೆ ಬಂದ ಸುಭಟನ। ಹೆಸರವೇನೆಂದರಸ ಬೆಸಗೊಂ
ಡನು ವಿಭೀಷಣನ ॥೫೨॥ ಇವನಬಲ್ಲಿರೆ ಜೀಯ ಬೇಹಿಂ। ಗಿವರು ಬಾರರೆ ಹಿಂದೆ ಶುಕ

ನೆಂ। ಬವನು ಸಾರಣನೆಂಬುವನು ಶಾರ್ದೂಲ ನೆಂಬವನು|| ಇವರ ಮೂವರ ಹಿಂದೆಸೆಯು ತೋ। ರ್ಪವ ಸುಪಾರ್ಶ್ವಕ ನವನ ಬಳಿಯಲಿ । ಬವರಿಗರು ಹದಿನೆಂಟು ನಿರ್ಬುದ ವೀರರದೆ ಯೆಂದ॥ ೫೩॥ ಅದೆ ಸಮುದ್ರದ ಥೆರೆಯುವೊಲು ದು। ರ್ಮದನ ಬಲ ದೀರ್ಘೋದರನ ಪಡೆ। ಪುದಿದ ಬಲುಗೈದುಗಳ ಭಾರಿಯು ಭೂರಿವೇಗಿನಲಿ ॥ ಎದೆಯ ಕೆಚ್ಚಿನ ನಚ್ಚಿನವ ರಿವ। ರದುಭುತಃಹವಮಲ್ಲ ರಿವ ರಾ। ವದನ ಹತ್ತಿರ ರಕ್ಕಸನ ಮನ್ನಣೆಯ ಭಟರೆಂದ ||೫೪|| ಜೀಯ ಚಿತ್ತೈಸಿದುವೆ ರಕ್ಕಸ। ರಾಯ ಕಟಕದ ಮೂಲಬಲ ವಿ। ನ್ಯಾಯಿತೀಸರ ಮೇಲೆ ತೋಟಯ ತೆರಪು ದಿನದಿನಕೆ॥ ಜೀಯವಾಯಿತ್ತಗಳ ಭಾವಿಪ ಬಾರದಂಡೆಯ ಬಗೆಯ ಬೆಳೆಯ ವೊ। ಲಾಯಿತೀ ತುಳಿದಿಹುದೆ ಕುಂದದೆ ದೇವ ಕೇಳೆಂದ|| ಆದಡಿವರೊಳಗೊಮ್ಮೆ ಸಮರವ। ನೈದಿ ನೋಡುವೆನೆನುತ ಸುಗ್ರೀ। ವಾದಿ ಸುಭಟರ ಸಾರಿಸುತ ಕೈಸನ್ನೆಯಲಿ ಕೆಲಕೆ ॥ ತೋದ ಕೊರಳಿನ ತಿರುವೆರಡ ನಾ। ರೈದು ಹಿಡಿವಬ್ಬುಗಳು ಮರಲಿರಿ। ದಾದೆ ನರಕೇಸರಿಯವೊಲು ಹೊಕ್ಕನು ರಣಾಂಗಣವ ॥ ೫೬ ॥ ಹೊಕ್ಕವೈಯಲಿ ಕೋಲು ಕೊಲೆಗೆಲ ಲಕ್ಕ ಸಂಖ್ಯೆಯ ಕರಿಘಟೆಯು ಕಾ। ಲಿಕ್ಕುವತಿಶಯದಶ್ವಕೋಟಿಯ ಕೋಟಿ ಸಂಖ್ಯೆಗಳ ॥ ಮಿಕ್ಕನೂಕುವ ತೇರುಗಳ ಕೈ। ಯಿಕ್ಕಿಕಾದುವ ಖಳಪದಾತಿಯ । ಮುಕ್ಕುರಿಯ ಮಾಡಿದನು ರಣಮುದ ದುಬ್ಬಿನಲಿ ರಾಮ ॥ ತೋಳ ಪೂಜೆಸಿಕೊಂಬ ರಣ ಮಾ। ಸಾಳ ತೊಲಗದ ಕಂಭವೆಂ ಬು। ಬ್ಬಾಳು ಬಿರುದಿನ ಹಗಲು ಕೈದೀವಿಗೆಯ ಹೆಚ್ಚಳ ॥ ಧೂಳ ತೂರಿತು ಕಾಣೆನೆಂ ಬೆ। ಚ್ಚಾಳನೆಡೆ ಸಂಕಲೆಯ ಬಿಂಗದ। ಕಾಳಗದ ಕಲಿಯಾಳ ಕಾರಮುಲಗಿಸಿದನು ರಾಮ ॥ ೫೮ ॥ ಪರಿಭವಿಸಿ ಕವಿವಾಳು ಕುದುರೆಯ। ನುರವಣಿಪ ತೇರುಗಳ ತವಕಿಸಿ। ತುರುಗುವಿಭ ಸಂಕುಲದ ಸಂಕುಳವಾಗೆ ಸರಕಟಿಸಿ ॥ ಸರಗೊಳಿಸಿದನು ಸರಳಸಾರದ । ಶರಧಿಯಲಿ ಸಂಗ್ರಾಮ ಚೌಪಟ । ರರಸ ರಿಪುಬಲವಿಸರ ಜಯವದು ವರಸ ನಾಜೆಯಲಿ ॥ ೫೯ ॥ ಹರಿದುಬೀಳುವ ತೋಳುಗಳ ಮಳೆ। ಗರೆದುದೈ ರಣದಗಲದಲಿ ರಣ। ಕುರುಬಿ ಬೀಳುವ ತಲೆಯ ಮಣಿಗಣದಾರಿ ಕಲ್ಗಳಲಿ ॥ ತುರುಗಿತೆಳೆನಡು ತೊಡೆಯ ತುಂಡಿನ। ಗುರವದಲಿ ಗುಮ್ಮಿಕ್ಕಿದುದು ನಭ। ವಂಚುತಿರ್ದ ವಜಾಂಡ ಬೊಬ್ಬೆಗೆ ರಾಮನೆಸುಗೆಯಲಿ ||೬೦|| ಕರುಳ ಕಪ್ಪಳಿ ಕಾಳಿಜದ ಹೆ। ಮ್ಮರಡಿ ಕನ್ನತ್ತರಿನ ಮಡ ನಿಡು। ದೊಳೆಗಳ ಹೇರಾಶಿ ಹೆಗ್ಗಿರಿ ನುಗ್ಗಿದಸ್ಥಿಗಳ ॥ ಸರಿಬೆರಕೆಯಲಿ ಭೂತಕೋಟಿಯ। ನೆರವಿಗುಣಬಡಿಸಿದ ವೊಲಿರ್ದುದು। ಖರ ವಿರೋಧಿಯ ಕದನ ಕರ್ಕಶ ಬಾಣಪರ್ವದಲಿ ॥ ೬೧ ॥ ಒಪ್ಪೆಸರ ಖಳರಳಿಯೆ ಕೋಟಿಗೆ। ಚಪ್ಪಳೆಯ ಕೈಗಳಲಿ ಕುಣಿವುದು। ತಪ್ಪದೊಂದೇ ಮುಂಡ ರಣದಲಿ ಕೇಳಿದೈ ಕುಶನೆ ॥ ತಪ್ಪಿ ನುಡಿಯನು ಮುನಿಯೆನಲು ಬೇ। ಡಪ್ಪಗಳ ಮೇಲಾಣೆ ಕುಣಿದವು। ತಪ್ಪದಲೆಗಳ ಮುಂಡಗಳು ಶತಕೋಟಿ ಸಂಖ್ಯೆಯಲಿ ॥ ೬೨ ॥ ವಹಿಗಳಳುಹಿದವರರೆ ಸಂಗರ। ಮಹಿಯ ಸೀಮಾವಳಿಯದಲಿ ತಹ। ಬಹ ಕೃತಾಂತನ ದೂತರೆಣಿಕೆಯ ಕೊಳಲು ಪಿತೃಪತಿಯ ॥ ಮಿಹಿರ ವಂಶೋದ್ಭವನ ರಿಪುವನ। ದಹನ ದಾವಾನಳನ ಕಾರಣ। ಮಹಳೆ ಯಭಿನವ ನಾಟಕನ ಕಗ್ಗೊಲೆಯ ಕವತೆಯಲಿ ||೬೩|| ಏನು ವೀರರೊ ರಕ್ಕಸರು ಕಡಿ। ದಾನೆಗಳ ಮಸ್ತಕದ ಮುಂಡದ। ಲಾನಿಸಿದ ರುಡಿದಶ್ವಸಿಕರದ ತಲೆಯ ಹರಿದರಿವ ॥ ಆನೆಗಳ ಮುಂಡದಲಿ ಸಿಕ್ಕಿದ । ರಾಸಿಶಾಬಾಶ್ವಗಳ

ಮುಂಡದ । ಲೂನ ತಲೆಗಳ ಕೂಡಿಸಿ ನಡೆಸಿದರಾಹವಕೆ ಬಲವ ॥ ೬೪ ॥ ಪಲ್ಲಟಿಸಿ ಕೆಲ
ಕೆಲವ ಮುಂಡಗ । ಳಲ್ಲಿ ತಲೆಗಳ ಕಡಿದ ತಲೆಗಳ । ಶಲ್ಲೆ ಹದಲಿ ಗದಾಯುಧದ ಲಸಿ
ಮುದ್ಗರಂಗಳಲಿ ॥ ಬಲ್ಲೆ ಹದಲಿದು ಗುಂಡಿನಲಿ ತಿರಿ । ಕಲ್ಲುಗಳ ಕವಣೆಗಳಲಂಬಿನ ।
ಘಲ್ಲಣೆಯ ಲುಬ್ಬರಿವ ಹೆಬ್ಬರೆಗಳಲಿ ಹಳಚಿವರು ॥ ೬೫ ॥ ಕಡಿದ ಕಾಲ್ಗಳ ಖಳರ
ಮುಂಡದ । ಹೆಡಕಗಳ ಚಿಗಿದೇರು ಚಿಮ್ಮಿದ । ರೆಡಬಲನ ಲಬ್ಬರಿಸಿ ರಾಮನಮೇಲೆ
ಖಂಡೆಯುವ ॥ ಕಡನರಿಸಿ ಬಿದ್ದಿರ್ದ ತಲೆಗಳ । ತೊಡಸಿ ಕರುಳನು ಕೆಲವು ಮುಂಡದ ।
ಲಡಸಿ ದಿತಿಜರು ತೆಗೆದು ಸುರಗಿಯು ತಿವಿದರಿನಕುಲನ ॥೬೬॥ ಉಬ್ಬರಿಸಿದುದು ವೀರರಸ
ರಣ । ದುಬ್ಬರದ ರೌದ್ರಾದ್ಭುತದ ರಣ । ದುಬ್ಬಟೆಯಲೀ ರಕ್ಕಸರ ಸೇನಾ ಸಮುದ್ರ
ದಲಿ ॥ ಒಬ್ಬನೇ ಬಳಿಕಂಬಲಾಬ್ಧಿಯ । ಲುಬ್ಬರಿಸದೇ ಸರಳವಡಬನ । ಹಬ್ಬದಲಿ
ನಿಲಿಸಿದನು ಧೀರೋದ್ಧಾತ ರಘುನಾಥ ೬೭॥ ಏನು ಬಾಣಾಭ್ಯಾಸಿಯೋ ರಘು । ಸೂನು
ಮುಸೆ ಮೈದೋರಿಶಿಲ್ಲರಿ । ಸೇನೆ ಸೂಸಿದ ಸಕಲ ಶಸ್ತ್ರಾಸ್ತ್ರ ಪ್ರಹಾರದಲಿ ॥ ಭಾನುಮಂ
ಡಲದಿದಿರಿನಲಿ ತೇ । ಜೋನಿಧಿಯ ತಾರಾಳಿ ಹೊಗಳಲು । ಮಾನವನೆ ಮಹದಾದಿ
ಮಾಯಾ ಮಹಿಮ ಹರಿಯೆಂದ ॥ ೬೮ ॥ ತರುಣ ಕೇಳಚ್ಚರಿಯ ನಪ್ಪರ । ತರುಣಿಯರ
ಕಾಳಗವ ಕಿವಿಗಳು । ಹರಿಯೆ ಕೈಯಿಕ್ಕಿದರು ಹಾಯ್ದುರು ಹೊಯ್ದು ಮುಂದಲೆಗೆ ॥
ಬರಸೆಳೆದು ಮೇಲುಳಿದನು ಬಾಯ್ಗಳ । ಕರತಳದ ಲಪ್ಪಳಿಸಿ ಭುಜಗರ । ಬರಸೆಳೆದು
ಬಿಗಿಯಪ್ಪುತಿರ್ದುದು ಬೀದಿಬೀದಿಯಲಿ ॥೬೯॥ ಈತನೆನ್ನವನೀತ ತನ್ನವ । ನೀತನನು
ವರಿಸಿದನು ಮೊದಲಿವ । ಲೇತಕವಳು ಶಿಖಂಡಿ ತೊತ್ತುವಳಾವ ಹೆಣ್ಣವಳು ॥ ಖಾತೆ
ಹೋಗೆಲೆ ಲಜ್ಜೆಗೇಡಿಗೆ । ಮಾತು ತನಗೇಕೆನುತ ಬಲಹಿನ । ಲಾತಗಳ ನೆಳದೊಯ್ಯು
ತಿರ್ದುವು ವೀರ ಭಟರುಗಳ ॥ ೭೦ ॥ ಅಳಿಯೆ ಸೇನೆ ಸುಪಾರ್ಶ್ವ ದುರ್ಮದ । ರಳವಿ
ಗೊಟ್ಟರು ಶುಕನು ಸಮರಕೆ । ನಿಲುಕಿದನು ಸಾರಣನು ಸೈರಣಯಂಬಿ ನೆಸಗೆಯಲಿ ॥
ಹಳಚಿದನು ಶಾರ್ದೂಲ ಘರ್ಜಿಸಿ । ಸುಳಿದ ನಿದಿರಿಲಿ ಕರೆದನಂಬಿನ । ಮಳೆಯ ನಿವರಾ
ರಾಮ ಸುಮನೋದ್ದಾಮ ಶಿಖರಿಯಲಿ ॥ ೭೧ ॥ ಅನಿಬರೊಳು ರಣಗಲಿ ಸುಪಾರ್ಶ್ವಕ ।
ನನಿಮಿಷರು ಬೆರಗಾಗೆ ಮಕರಾ । ಕ್ಷನ ಮಹಾಕಲಿ ಕುಂಭಕರ್ಣನ ಕದನ ಕೌತುಕವ ॥
ಘನತೆ ಗಿಮ್ಮಗಿಲೆನಿಸಿ ಕಾದಿದು । ಕನಸ ಕಂಡನು ಸುರಪುರದ ಬೀ । ಡಿನಲಿ ಮಲಗಿದು
ಮಾರಣವ ಲಂಕಾಪುರಾಧಿಪನ ॥ ೭೨ ॥ ಹತ್ತಿತಾ ಕೈಯ್ಯೊಡನೆ ತಲೆ ನಭ । ದತ್ತ
ದುರ್ಮದನೆಂಬವನ ನಡೆ । ದೆತ್ತ ಹೋದುದೊ ಜೀವವಾ ದೀರ್ಘೋದರಾಸುರನ ॥
ಹತ್ತಿಸಿದ ಹಿಳುಕುಗಳ ಹೊದೆಗಳ । ಲೊತ್ತಬರಿಸಿ ನಿದಿರಿನಲಿ ನಗು । ತುತ್ತರಿಸಿದನು
ರಾಮನಾ ಮೂವರ ಶರಾಸನವ ॥ ೭೩ ॥ ಅಂದು ನಮ್ಮುವ ನರಿಯಲೋಸುಗ । ಬಂದ
ಬೇಹಿನ ಭಟರಲಾ ಸೀ । ವೆಂದಡಪರುದೆ ಕೃಪೆಯ ನೋಟವದಲಾ ನಿಶಾಟಂಗೆ ॥ ಎಂದ
ನಮಗಿಲ್ಲೆರಡು ನುಡಿಸುಡಿ । ಯೆಂದು ತಪ್ಪಿಸಿ ಕಾದು ಕಳುಹಿವೆ । ವಂದು ಹೋಗಿನ್ನೇಕೆ
ಕಾಳಗವೆಂದು ಬೀಳ್ಕೊಟ್ಟ । ೭೪ ॥ ಮೌಳಿಯಲಿ ಸಂಘಟಿತ ಕರಗಳ । ತಾಳಿ ಮೆಲ್ಲಸೆ
ಸರಿವರಾ ಶಾ । ರ್ದೂಲ ಶುಕ ಸಾರಣರು ಪೊಗಳುತ ರಾಘವೇಶ್ವರನ ॥ ಮೇಲೆ ಕೇಳ್ಕೈ
ಕುಶಸೆ ಲಂಕಾ । ಪಾಲ ನಿಶಾಚರನು ಭೂ । ಪಾಲನನು ಕೊಲಲೆಂದು ಕಳುಹಿದ ನಸ್ತ
ಮಾಘವಲಿ॥೭೫॥ ಅಡಗಿ ಮರೆಗೊಂಡಾ ನಿಶಾಚರ । ನಡಗಿದನು ಹೆಗಲೊಳಗೆ ಚಿಮ್ಮನ।

ಮಿಡುಕಿನವೊಲೊಳಹೊಕ್ಕು ಬರುತಿರೆ ಕಂಡು ಹನುಮಂತ || ಘುಡುಘುಡಿಪ ಕೋಪ ದಲಿ ಕೊನೆಯುನು | ಹಿಡಿದು ಹೆಮ್ಮರದಿಂದ ಹೊಯ್ದನು | ಹೆಡಕನವಸಿಗೆ ಬೀಳೆ ವಿದ್ಯುತ್ಕೇಶಿಯೆಂಬವನ ||೭೬|| ಘಾಯುವೊಂದರಲಾ ನಿಶಾಟನ | ಬಾಯು ಬಾಗಿಲದಾಂಟಿ ಹರಣವು | ತೋಯಿತಂತಕಪುರಿಗೆ ಹೊಂಪುಳಿಯಾಗೆ ಸುರಕಟಕ || ರಾಯ ತೊರವೆಯ ವೀರನರಹರಿ | ವಾಯುಜನ ಕೈವಿಡಿದು ವಾನರ | ರಾಯ ಸೈನ್ಯ ಸಮೇತ ಶಿಬಿರಕೆ ಬಂದ ನೊಲವಿನಲಿ || |೭೭||

ನಲವತ್ತೈದನೆಯ ಸಂಧಿ ಸಮಾಪ್ತಂ.

ನಲವತ್ತಾರನೆಯ ಸಂಧಿ.

ಸೂಚನೆ|| ಸತಿಯಮಾತನು ಕೇಳದವನೀ | ಪತಿಯು ಕಲಹಕೆ ಬಂದು ಮೋಹದ | ಸುತ ವಿರೂಪಾಕ್ಷನನು ರಣಕಿಕ್ಕಿದನು ದಶಕಂಠ ||

ಪದ್ಯ|| ಹೋಗಿ ಹೇಳಿದ ರವರು ಮೂವರು | ತಾಗಿ ಕಾಳಾದುದನು ಕಾಲನ | ಮಾಗಣೆಗೆ ಸಂದತುಳ ಬಲ ದುರ್ಮದ ಸುಪಾರ್ಶ್ವರನು || ಆಗಲೀ ಬಲ ವಳಿದು ದನುಜಯು | ದಾಗು ರಾಮಂಗಾದುದನು ಲೇ | ಸಾಗಿ ವಿಸ್ತರಿಸಿದನು ಖಳಕುಲಸಾರ್ವಭೌಮಂಗೆ |೧|| ಬೆರಗು ಬಾರಿಸಿ ಕರದ ಕದಪಿನ | ಹೊರಗೆಯಲಿ ಹೊಂಪಳಿದ ಹೆಮ್ಮೆಯ | ನಿರಿಗೆಯಲಿ ನಿಜ ಸಿಂಹಪೀಠವ ನಿಳಿದು ದುಗುಡದಲಿ || ಹಿರಿದು ಕಿರಿದಾಗಿದ್ದ ಸಾವಿಗೆ | ತೆರವು ಗೊಟ್ಟಿಹ ಖಳರ ಕರದಿಂ | ದುರುಬಿ ಮಂಡೋದರಿಯ ಭವನಕೆ ಬಂದ ನಸುರೇಂದ್ರ ||೨|| ಬಾಡಿ ದಾನವ ದಳದು ಹೊಯ್ದಡೆ | ಯಾಡಿ ಬಳಲುವ ಮನದ ಮಾತಿಗೆ | ತೋಡನಿಕ್ಕಿದ ನಾಲಿಗೆಯ ನಿಡು ಸುಯಿಲ ಲಸುರೇಂದ್ರ || ನೀಡಿದನು ನಿಜ ತನುವ ಮಲಗಿನ | ಮೋಡೆಯಲಿ ಬಳಿ ಕಂಜುತಂಜುತ | ನೋಡು ತಳುಕುತ ಬಂದಳಸುರನ ಬಳಿಗೆ ಮಯ ತನುಜೆ |೩|| ಬರಲು ಕೈಸನ್ನೆಯಲಿ ಮಂಡೋ | ದರಿಯ ನೆಡದಲಿ ನಿಲಿಸಿ ಮೂಗಿನ | ಬೆರಳ ಬಿಸುಹಿನ ಸುಗಿಯುದೆವೆಗಳ ಕಣ್ಗಳಿಂದಿರಲು || ಅರಸನನುವರಿದೊಯ್ಯ ನೊಯ್ಯನೆ | ಧುರದ ಮಂಡಣ ಕಾರ್ಯಕೇನು | ತ್ತರಣವನು ನೀವ್ ಕಂಡಿರೆಂ ದಳು ಪತಿಗೆ ಮಯತನುಜೆ ||೪|| ಉತ್ತರಣವೇನಿನ್ನು ಮರುಗೆನು | ಸತ್ತ ಸೇನೆಗೆ ತಂದ ಸಾವಿಗೆ | ಹೆತ್ತ ಮಕ್ಕಳೊಳಧಿಕನಲ್ಲಾ ಮಗ ಸುರೇಂದ್ರಜಿತು || ಬತ್ತಿದೆಂಡೆಗೆ ಕೂಡೆ ಕಡೆಯಾ | ಯಿತ್ತರದ ಬಲುದಿಳಿಗೆ ಘನ ಬೇ | ಸತ್ತುದಿ ಲ್ಲಾಹವಕೆ ಮನ ಮರುಗುವುದು ಮಗಗೆಂದ ||೫|| ಮರುಗ ಲೇಕಿಂನರಸ ಕೇಳ ಳರಿ | ದರಿದು ಪರವಧುವಿನಲಿ ಪಾತಕ | ಕುರಿಸಿ ಮಾರಿಯ ಕರೆದು ಕೊಂಡಾಬಳಿಕ ಮಾತೇನು || ಅರಿದು ಮೊದಲಲಿ ಮಾವ ಹೇಳಿದ | ತೆರನ ತೋರದೆ ತಮ್ಮನುಚಿತವ | ನರಿಯ ದಾಢ್ಯ ಕಾಳಗವ ಮಾಡಿದೆ ನಿರರ್ಥದಲಿ ||೬|| ತಾಯ ಮಾತಿನ ರೀತಿ ಕರ್ಣಕೆ | ಸಾಯಕದ ಮೊನೆಯಾಯ್ತು ನಿನ್ನಯ | ತಾಯಿತಂದೆಯ ವಚನ ಚರಿತದ ಬೋಧೆ ಭೂಸುರರ || ವಾಯುವಿನ ತೆರನಾಯ್ತು ತಂಗಿಯ | ಮಾಯುಗಾತಿಯ ಮಾತು ಕರ್ಣರ | ಸಾಯನವು ನಿನಗಾಯ್ತು ಸಾಕಿಂನೇಕ ಪರಿತಾಪ ||೭|| ಹೇಳಲಮ್ಮನು ಹೇಳಿದರೆ ನೀ | ಕೇಳು

ವೆಯೋ ಕೇಳಿಯೋ ಮಹಾ ಮ‍ಹಾಳವಾಗಿದೆ ನಿನ್ನ ಮಹದೈಶ್ವರ್ಯ ದಾಹವರೆ ॥ ಹೇಳದಿಹು ದನುಚಿತವು ಮಾತನು । ಕೇಳು ಕೇಳದೆ ಮಾಣೆ ರಾಮನ । ಕಾಲಹಿಡಿ ಬಿಡು ಜಾನಕಿಯ ನಿಹಪರವ ಬಯಸುವರೆ ॥೮॥ ಅಕ್ಷಯದ ಫಲ ವೀಯ ಲಂಭೋ । ಜಾಕ್ಷಿಯನು ಬಿಡು ಮಗನ ನೀ ವಿರು । ಪಾಕ್ಷ ನೊಬ್ಬನೆ ಸಾಕು ಕರೆಸು ವಿಭೀಷಣಾ ಸುರನ ॥ ರಕ್ಷಿಸೀ ಪಟ್ಟಣವ ನಾ ಕವು । ಲಾಕ್ಷ ನತಿ ಕಾರಣಿಕ ನಮ್ಮನು । ಪೇಕ್ಷಿಸನು ಬಳಿ ಕನಿತರಲಿ ಕೇಳೆಂದಳಾ ಕಾಂತೆ ॥೯॥ ರಾಮ ನೀ ಜಗದ್ವೈಯ ನಂಬುದು । ಭೂಮಿ ಯಲಿ ತಾ ಸುಪ್ರಸಿದ್ಧ ಮಹಾ ಮಹೀಸುತೆ ಲಕ್ಷ್ಮಿಯೆಂಬುದು ಸಕಲ ಜನಜನಿತ ॥ ಆ ಮಗಧ ತನುಜಾ ತನೂಭವ । ನಾ ಮಹಾಶೇಷನು ಕಣಾ ರಿವು । ಭೀಮ ಬಲ ಮರ್ಕಟರು ಸುರರೆಂದರಿ ಮನಸ್ಸಿನಲಿ ॥೧೦॥ ಅದರಿ ನೀ ಹದನರಿದು ಮರೆಯೊಗು । ವುದೇ ಮಹಾ ಸುಪೌರ್ತ್ರಿ ನೀ ಬದು । ಕಿದಡೆ ನೆರೆಯದೆ ಪುತ್ರ ಮಿತ್ರ ಕಳತ್ರ ಸಂದೋಹ ॥ ಹದುಳವಿರದೇ ನಿನ್ನ ಭಾಗ್ಯದ । ವಿದಿತ ವೈಭವ ಬೇಡ ಮೂರ್ಖರ । ಮುದದ ಮುಂದಳಿ ಗರಸ ನಾಗದಿರೆಂದ ಳಾ ಕಾಂತೆ ॥೧೧॥ ಹರನ ಬಿಲ್ಲನು ಮುರಿದು ಸೀತೆಯ । ವರಿಸಿದಂದೇನರಿಯ ಬಾರದೆ । ಧುರವಿಜಯ ಮಾರೀಚ ವೀರ ಸುಬಾಹು ಯೆಂಬವರ ॥ ಹರಣ ಗೊಂಡಂ ದರಿಯಬಾರದೆ । ಖರ ವಿರಾಧ ತ್ರಿಶಿರ ದೂಷಣ । ರರಿದ ತಲೆಗಳ ಕಂಡು ಕೆಣಕು ವುದುಚಿತವೇ ನಿನಗೆ ॥೧೨॥ ಸುರರಿ ಗಲ ಗಣ ಸಲ್ಲವೇ ನೀ । ನರಕ ಕೇಳ್ ನಿನ್ನವನು ಬಾಲದ । ಹುರಿಯ ನೇಣಲಿ ಗೋಣ ಬಿಗಿದಾ ವಾಲಿಯನು ಸುರರ॥ ತರುಣಿಯರ ತೋಳಿನಲಿ ಮೆರೆಸಿದ । ಪರಿಯ ನರಿಯಾ ಕಾಮುಕತ್ವದ । ಗರವ್ರ ಗಾಢಿಸಿ ತಕಟ ನಿನ್ನವ ನೆಂದಳಾ ಕಾಂತೆ ॥೧೩॥ ಶರಧಿಯನು ಮುನ್ನಾವಕಾಲ ದೊ । ಳರಸುಗಳು ಕಟ್ಟಿದರು ಮುನ್ನೀ । ಧರಣಿಪರ ಕದನಕೆ ಕೈಗೂಟಕ್ಕೆ ಕೋಡಗದ ॥ ನೆರವಿ ಕೂಡಿತು ದಾವ ಮನ್ವಂ । ತರದ ಳಿದವ ರೆದ್ದು ಲಂಕೆಯ । ನುರಿಗೊಳಿಸಿ ದವ ರುಂಟೆ ಲೋಕದೊಳೆಂದಳಾ ಕಾಂತೆ ॥೧೪॥ ಸಾವವನೆ ಕಲಿಕುಂಭಕರ್ಣ ನ। ದಾನ ವೀರನ ಕೈಯ ಕೊಲುವವ । ನಾವ ನಮರ ರೊಳಿಂದ್ರಜಿತುವನು ಮಿಕ್ಕ ನತಿಬಲರ ॥ ಜೀವ ಪಾರಿಗೆ ಸಾಧ್ಯಕೇಳು ಕ। ಲಾವಿದನು ನೀನೆಂಬೆ ನಿನ್ನನು । ತೀವಿಕೊಂಡಿದೆ ಶೀವ್ರತಾಮಸ ನೆಂದಳರಸಂಗೆ ॥೧೫॥ ಜಗದ ರಕ್ಷಣೆಗಾಗಿ ಹರಿ ಯುಗ । ಯುಗದೊ ಳವ ತರಿಸುವನು ಕೊಲುವನು । ಜಗಕೆ ಕಂಟಕರಾದವರ ನಿದು ವೇದಮಾರ್ಗ ಕಣ ॥ ಪೊಗಸದಿರು ಮೂರ್ಖತೆಗೆ ಮಾರಿಯ । ಮೊಗಕೆ ನಿಲದಿರು ಮೂರು ದಿವಸದ । ಹಗರಣಕೆ ಹರಿಸದಿರು ಘಟವನು ಯೆಂದಳಾ ಕಾಂತೆ ॥೧೬॥ ಮರಳೆ ದೈವಗಳುಂಟು ಜಗಕೇ। ದಿರಿಸದಿರು ಚಿತ್ತದಲಿ ಚಿಂತಾ । ಕರುಷಣನು ಭಕ್ತರಿಗೆ ಭಾಗ್ಯೋದಯದ ಬೆಸು ಕಣ॥ ಶರಣಜನಸಂತತಿಗೆ ಸೌಖ್ಯದ । ಶರಧಿ ದುರ್ಜನ ದುರ್ವಿದಗ್ಧರಿ । ಗರಿವ ಮೂಗಿನ ಕತ್ತಿ ಕೇಳೆಂದಳು ನಿಜೇಶಂಗೆ ॥೧೭॥ ಬಲಿಗೆ ಬಲ್ಲಿದರಾರು ತಮ ನಿಂ। ದಳವ ಮೀರುವ ರಾರು ಮಧುವಿನ । ಕಲಹದಲಿ ಕೈಮಿಗುವರಾರೀ ವರ್ತಮಾನದಲಿ ॥ ಕಲಿ ಹಿರಣ್ಯಾಕ್ಷ ಹಿರಣ್ಯಕ । ರೊಳಗೆ ಸೆಣಸುವರಾರು ಜೀವದೊ । ಳುಳಿದವೇ ಹಗೆಗೊಂಡು ಹರಿಯೊಳಗೆಂದ ಳಾ ಕಾಂತೆ ॥೧೮॥ ಕೊಂದವರತೋರಾ ಹಿರಣ್ಯಕ ನಂದನವ ಮರೆ ಯೊಕ್ಕ ಧೃವನ ಪು । ರಂದರನ ಪೌತ್ರನಗಜೇಂದ್ರನ ಕಲಿ ವಿಭೀಷಣನ ॥ ಇಂದು

ನೀಹಗೆ ತನವ ಸಾಧಿಸಿ । ನಿಂದಿರಲು ಸಮರ್ಥನೇ ಬಿಡು । ಮಂದಮತಿ ಯುಸುಫವನ ಮರೆಯೊಗು ರಾಘವೇಶ್ವರನ ॥೧೯॥ ಕೇಳು ಮಂಡೋದರಿ ವಿಚಾರಿಸಿ । ಖೂಳನನ್ನಾಗಿ ಮಾಡೆನ್ನ ಜನ್ಮ ಗ। ಳೇಳನೊಲ್ಲದೆ ಬಂದೆವಾವ್ ಜನ್ಮತ್ರಯಂಗಳಲಿ ॥ ಹೇಳಿಕೆಯು ಲಿನ್ನೊಂದು ಜನ್ಮದ । ಪಾಳೆಯುವು ನಮಗುಂಟು ಕಳೆದಡೆ । ಮೇಲೆ ಜಗದೊಳ ಗುತ್ತಮದ ಜಯವಿಜಯ ರಾವೆಂದ ॥೨೦॥ ಬಲ್ಲೆನೀ ರಘುನಾಥ ಲಕ್ಷ್ಮೀ । ವಲ್ಲಭನು ತಾನೆಂಬುದನು ತಾ । ಬಲ್ಲೆ ನವನಿಜೆ ಲಕ್ಷ್ಮಿಯೆಂಬುವ ನಾಹವಕೆ ನರವ ॥ ಭಲ್ಲುಕರು ಸುರರೆಂ । ದೆಲ್ಲ ವೇತಕೆ ಕೇಳು ರಣ ಮುಖ । ದಲಿ ರಾಮನ ಕೂಡುವುದು ಸಂಕಲ್ಪ ತನಗೆಂದ ॥೨೧॥ ಕಡೆಯ ಮಾತಿದು ನೀನು ಬೇರಿ । ನ್ನೊಡಬಡಿಸ ಬೇಡೆಂದು ಹಿಂದಕೆ । ನಡೆದ ಕೆಲಸವಿದೆನ್ನ ಹಿಪ್ಪೆಯ ಮಾಡಿ ಹಿಂಡದಿರು ॥ ತಡೆಯ ಬೇಡಿನ್ನೇನು ತರುಣಿಯ । ಮುಡಿಯ ನುಗುರಲಿ ತಿದ್ದಿ ಕಣ್ಣಲಿ । ಜಡಿವ ನೀರ್ಗಳ ನೊರಸಿ ನಂಬಿಸಿ ಕಳದ ನಾದಿನವ ॥೨೨॥ ಉದಯಮುಖದೊಳಗೆದ್ದು ಶೂಲಿಯ । ಪದವ ನೇಕಾಗ್ರದ ಮನೋಭಾ । ವದಲಿ ಭಜಿಸಿ ರಣೋದ್ಯಮದ ಸುಮ್ಮಾನ ದುಬ್ಬಿನಲಿ॥ ಪದಕ ಕುಂಡಲ ಮಕುಟ ಕಂಠಾ । ಗ್ರದಲಿ ಖಂಡೆಯ ಮೆಂಡೆಯದ ಹಾ । ರದಲಿ ಅಮಲಾಭರಣದಲಿ ಶೋಭಿಸಿದ ದಶಕಂಠ ॥೨೩॥ ಧೂಪಿಸಿದ ದಿವ್ಯಾಂಬರವ ನನು । ಲೇಪನಾದಿಯ ಪರಿಮಳಿತ ಮಾ। ಲಾ ಪರಿಗ್ರಹನಾಗಿ ಕೈಯಲಿ ವೀರ ಕಂಕಣವ ॥ ಸ್ಥಾಪನಂಗೈದಮರ ವಂದಿ ಜ । ನೋಪಚಾರದ ಬಿರುದುಗಳ ಸ । ಲ್ಲಾಪದಲಿ ಸಭೆಗಾಗಿ ಬಂದನು ಸುಭಟ ಜನ ಸಹಿತ ॥೨೪॥ ಕರೆಸಿದನು ಭಂಡಾರಿಗಳ ನಾ । ಹಾರಿ ಹುತಾಶನ ಯಮ ನಿಶಾಚರ। ವರುಣ ವಾಯು ಕುಬೇರ ಶಂಕರರಿತ್ತ ಕಪ್ಪಗಳ ॥ ಹಿರಿದು ಕಾಲದ ಹಳೆಯ ಟಂಕದ। ಪರಿಯ ನಾಣೆಯ ಳಲ್ಲವ ತರಿಸಿ । ಹೊರಿಸಿ ಸೂಸಿದ ನಖಿಳ ಯಾಚಕ ಜನದ ಸಂದಣಿಗೆ ॥೨೫॥ ತೂಗಿಸಿ ಸುಭಟರ ಸತಿ ಸುತರ ಮಂ । ದಿರಗಳಿಗ ಕಳುಹಿದನು ನಗರದ । ಹರದ ಹಾರುವ ಬಿನುಗು ಬಿಚ್ಚಟಿ ಬಡವು ಬಗ್ಗುಗಳ ॥ ಕರೆಕರದು ಕೈ ಹಾರದಲಿ ಮನ । ವೆರಸಿ ಸೂರೆಯ ಬಿಟ್ಟು ತೆರಿಗೆಯ । ಬಂಹಗಳ ನೆರೆ ತೊಡಸಿ ಸಂತಸ ಪಡಿಸಿದನು ಪುರವ ॥೨೬॥ ಸೆರೆವನಯೊಳಿ ದರ್ಖಿಳ ದಾನವ । ಸುರ ನರೋರುಗ ಜನವ ಮನ್ನಿಸಿ । ಹೊರವಡಿಸಿದನು ಪುರವನಾಪ್ತರ ಬಂಧುವರ್ಗಗಳ ॥ ಕರೆದು ರಣದೊಳಗಳಿದೆ ನಾದರೆ । ವರ ವಿಭೀಷಣದೇವನನು ಪರಿ । ಚರಿಯದಿಂ ಪತಿಕರಿಸಿ ಕೊಂಡಿಹುದೆಂದು ನೇಮಿಸಿದ ॥೨೭॥ ಬಳಿಕ ತನ್ನಯ ಬಳಿಯ ಬಹ ರಣ । ಗಲಿಗಳನು ವಿಂಗಡಿಸಿದನು ಕೊಳು । ಗುಳಕೆ ನಿಲುವ ಮತಂಗಜವ ನುತ್ತಮದ ತೇಜಿಗಳ । ಹೊಳೆವ ಹೊಂದೇರುಗಳ ರಥಿಕಾ । ವಳಿಯ ರಾವುತರ ಜೋಧರನು ಬಗೆ । ಗೊಳಿಸಿ ಬಲು ಗೈದುಗಳ ನಸಿಬರಿಗಿತ್ತು ಮನ್ನಿಸಿದ ॥೨೮॥ ನಿಯತಮತಿ ಕುಶಕೇಳು ರಣ ದೀ । ಕ್ಷೆಯನು ಕೈಕೊಂಡನುರರಿಪು ನಿ। ರ್ಭಯ ಮನೋರಾಗದಲಿ ಬಂಡಡರಿದನು ಮಣಿರಥವ । ನಯವಿದ ನೆಲವ ಕೇಳು ಬಂದಳು । ಮಯನಸುತೆ ಮಣಿಭೂಷಣದ ಕೆಳ । ದಿಯರ ಕರ್ಪೂರ ನಾರತಿಯ ಕೆಂಜೊಡರ ಸೊಗಸಿನಲಿ ॥೨೯॥ ಹರಸಿ ಮುತ್ತಿನಸೇಸೆಯನು ದಶ । ಶಿರನ ಶಿರದಲಿ ಸುರಿದು ಹಣೆಯಲಿ । ಧುರವ ಜಯಿಸೆಂ ದಿಟ್ಟ ಳಕ್ಷತೆಯನು ಸುಕುಂಕುಮದ ॥ ತಿರುಹಿ ಕರ್ಪೂರ ದಾರತಿಯ ನು । ಪ್ಪರದ ಬೆಳುವೆಯ ಬಿಸುಟು ದುಗುಡವ । ಧರಿಸಿ

ಮುರಿದಳು ಮಂದಿರಕೆ ಮಾನಿನಿಯು ರೊಗ್ಗಿಸಲಿ ||೩೦|| ವಸುಮತೀಪತಿ ಸೂನು ಕೇಳೆಲೆ|
ದಸುರರಲ್ಲದೆ ಕೂಡಿದುದು ಲೆಕ್ಕಿಸಲಿ ಕಷ್ಟಾದಶ ಮಹಾಕ್ಷೋಹಿಣಿಯು ಬಲ ಬಳಿಕ ||
ಕೊಸರು ಗಹಳೆಯು ಕೊಲಬು ಚಂಬಕ | ನುಸುರಿ ನುಬ್ಬಸ ಕಬುಜ ಜಾಂಡದ |
ಬಸುರು ಬಿರಿಯಲು ಬದು ಹೊಕ್ಕನು ಕಾಳಗದ ಕಳನ ||೩೧|| ಸಾರಿದವು ಕಹಳೆಗಳು
ಸುರಕುಲ | ಸೂರೆಗಾರರ ಸುಪ್ರತಾಪನ | ಮೂರುಲೋಕದ ಗಂಡ ಸಾಹಸ ಚಂಡ
ವಿಕ್ರಮನ | ಮಾರುಮಲವರ ಜೀವವನು ಸಲೆ | ತೂರಿ ಬಸುಡುವ ಭೀಮ ಬಲು
ಗೋಲೆ | ಗಾರ ರಕ್ಕಸ ರಾಯ ವೀರನ ತೊಡಕು ಬೇಡೆಂದು ||೩೨|| ಸುರಪ ನಸು ದಲ್ಲ
ಣನ ವೈಶ್ವಾ| ನರನ ಹೃಚ್ಛಲನ ಕೃತಾಂತನ | ಘನಶಿರೋಭಿಗೆ ದಾಸಿ ಘಾತನನಿಮತಿ
ಭೀಷಣನನ || ಮರುಣ ಖಂಡನ ಮಂಡಲಾಗ್ರನ | ಮರುತ ಘೋರನ ಧನಪ ಸಕಲೈ |
ಶ್ವರ್ಯ ಸರ್ವಸ್ವಾಪಹಾರನ ತೊಡಕು ಬೇಡೆಂದ||ಕೈಟಭಾರಿಯ ಸತಿಯ ತಂದನ | ತೋಟಿ
ಸುಖವಲ್ಲಮಮ ಹಿಮಕರ | ಜೂಟ ನದ್ರಿಯಕಿತ್ತ ವನಜ ಝುರದ ಲೇಸಲ್ಲ || ನಾಟಸುವ
ದೆಗದವನ ನಣಾವಿಗೆ | ಪಾಟಿಮಾಡದ ಸುಪ್ರಸಿದ್ಧನ | ಘಾಟ ರಣ ಸುಖವ ವೆಂದೊಡ
ರಿದವು ಕಹಳೆಗಳು ||೩೪|| ಒದರುತಿದ್ದವು ಕಹಳೆಗಳು ತೃಣ | ಕದನು ತಾರದೆ ತರಣಿ
ಸುತ ರಣ | ದಭಟರನು ನಿಂದಿರಸಿದನು ತುದಿವಾಲ ವೊಮ್ಮೆಳೆಗೆ || ತ್ರಿದಶ ಲೋಕಕೆ
ಬಿಡೆಯ ವೆನುತಾ | ತ್ರಿದಶ ಶೈಲ ಸಮಾನರನು ಕೈ | ದುದಿಯ ಗಿರಿಕೂಟಗಳ ಗರ್ವಿತ
ವೀರ ಭಟರುಗಳ ||೩೫|| ಬಂದ ಸಾಹಸ ಕಾ ದಶಾಸ್ಯನ | ನೆಂದು ಕೇಳಿದು ಕರ್ಣ
ದುಬ್ಬಿನ | ಮಂದಹಾಸದ ರಣದಲವಲವಿಕೆಯ ಮಹೋತ್ಸವದ || ಸಂವಣಿಯ
ಸೌರಂಭ ದಮರರಿ | ಪುಂಥಮನು ಜಾಂಬವ ವಿಭೀಷಣ | ರಿಂದ ಹೇಳಿಸಿ ಕೊಳುತ
ಹಮ್ಮಿದ ಹಗೆಯ ರಣಕಾಗಿ ||೩೬|| ಅತ್ತಲಾ ಭಾಸುರದ ಮುತ್ತಿನ | ಸತ್ತಿಗೆಯ ನೆಳಲಿ
ನಲಿ ಕೈಗಳ | ನೆತ್ತಿ ಫಣಿಪ ಕಂಪಿತ ಕಂಠೀರವನ ಹಳವಿಗೆಯ || ವರ್ತಿಸುವ ರಥ
ವಾಜಿಗಳ ಲಸು | ರೋತ್ತಮನ ರಥ ನಿಂದುದಾ ನಡು | ಹೊತ್ತಿ ನಂಬರಮಣಿಯ
ವೊಲು ಚುಂಬಿಸುವ ತೇಜದಲಿ ||೩೭|| ಅಂಜಿದನು ಸುರರಾಜ ನೊಡನೆ ಧ | ನಂಜ
ಯನು ನಡುಗಿದನು ಭಯದಿಂ | ದಂಜನಾ ನಂದನನ ಪಿತ ಸಾರಿದನು ಕೆಲಕಡೆಗೆ ||
ಮುಂಜರಗ ಸಂವರಿಸಿದನು ಯಮ ನಂಜುಳಿಯ ಕರಕಂಪದಲಿ ಮನ | ದಂಜಿಕೆಯ ನಂ
ತರಿಸಿ ನಿಂದಿದರುಳಿದ ದಿಗಧಿಪರು ||೩೮|| ಬಡಬಡಕರನು ಹೇಳದಿರು ಮನ | ನಡುಗು
ತಿರ್ದುದು ಮದನ ಹರ ನೆದೆ | ಮಿಡುಕುತಿರ್ದುದು ಮುರಳಿ ಮಾತೇನಂಬುಜಾಸನನ ||
ಹಿಡಿದ ವೀಣೆಯ ನಂಕಮಾಲೆಯ | ನುಸುರುತಿರ್ದನು ನಾರದನು ಖಳ | ನೆಡೆಗೆ ಮೆಲ್ಲನೆ
ದೇವಗುರು ಬಿಡ ದಂಜುತೈತಂದ ||೩೯|| ಸುಲಭವಿಂದಿನ ದಿವಸ ತಾರಾ | ಬಲದ ಪರಿ
ಕರ ಲೇಸು ಚಂದ್ರಮ | ನೊಲಿಮೆ ಮಿಗಿಲುಳಿದ ಗ್ರಹಂಗಳು ಸುಪ್ರಸಿದ್ಧವಲೆ ||
ಎಲವೊ ನಿನಗಹುದೆಡದ ಯೋಗಿಣಿ | ಬಲದ ಲಗ್ನದ ಕಾಳ ರಾಹುಗ | ಳೊಲವು
ದೇವರ ಮೇಲೆ ಮೇಲಣ ಕಾರ್ಯಲೇಸೆಂದ ||೪೦|| ಜೀಯ ಬಿನ್ನಹ ಸಕಲ ಸುರ ಸಮು|
ದಾಯವದೆ ಬರ ಲಂಜಿ ಯುಭಯುವ | ನೀಯಬೇಕೀಕ್ಷಿಸಲು ಭವ ದಾಜಿಯ ಮನೋ
ತ್ಸವವ || ಜೀಯ ಯೆನೆ ಬರಲೆಂದು ರಕ್ಕಸ | ರಾಯ ನೇಮಿಸಿ ನೆರೆದು ದಮರರು
ನಾಯುಪಥದಲಿ ವರ ವಿಮಾನಂಗಳ ವಿಲಾಸದಲಿ ||೪೧|| ವೀರ ರಾವಣ ನಂಬರದ

ವ್ಯಂ । ದಾರಕರ ನೀಕ್ಷಿಸುತ ನೂಕಿದ । ನಾರುಭಟೆಯಲಿ ರಥವ ನೆಡಬಲಸಹಿತ ॥ ಭೇರಿ
ಗಳು ಮೊಳಗಿದವು ತಂಬಟೆ । ದಾರು ಭಟೆ ಗಿದಪಟ್ಟು ಗಹಳೆ ಗ । ಳೋರಣದ ಲೊದರಿ
ದವು ದೀಪ್ತಿಗಳೊದರೆ ಚೂಣಿಯಲಿ ॥೪೨॥ ಬಿರಿಯ ಲರಿಭಟ ಗರ್ವ ಗಿರಿ ಯುಪ್ಪರಿಸಿ
ತೀಬಲ ಮಮಲದಿನದುರಿ । ಗಲೆರಡಿಟ್ಟವು ವೃಕ್ಷವವೊಲೌಂಕಿದವು ಬಲವೆರಡು ॥
ವರುಷಕಾಲದ ಮಿಂಚುಮಿಂಚಿನ । ಲುರವಣಿಸುವಂದದಲಿ ಹಿಡಿಯು । ಸ್ಫಲದವಾಲೆ
ಗಳುಪ್ಪರಿಸೆ ಹೊಯ್ದಾಡಿತುಭಯಬಲ ॥ ೪೩ ॥ ಎದ್ದುದಂಬರದುದಿಗೆ ರಜವದ । ನದ್ದಿ
ಸಿತು ರಕ್ತಾಂಬುನಿಧಿ ಬಲು । ಹೆದ್ದೊರೆಯ ಹೊಯ್ದಾರಣ ರಾವಣನ ॥ ಬಿದ್ದ ಬಲದಸು
ಪನನ ಪ್ರಳಯದೊ । ಳಿದ್ದ ಘಾಳಿಯ ತೆರನವಲು ಮುರಿ । ದೆದ್ದು ನಡೆದುದು ನಳಿನ
ಗರ್ಭನ ರಾಜಮಂದಿರಕೆ ॥೪೪॥ ಎತ್ತಬರಿಸಿತು ಬಳಿಕ ವಾನರ । ಪತ್ತಿ ವಾನರಯೂಥ
ನಾಥರ । ಮೊತ್ತವಾ ನರವೀರ ಸೇನಾಧೀಶರೊಗ್ಗಿನಲಿ ॥ ಕುತ್ತು ದಲೆಗಳ ಹೆಮ್ಮರನ
ಹೊಯ್ಲೊತ್ತುಗಳ ಬೆಟ್ಟಗಳ ಬಿರುಬಿನ । ಹತ್ತುಗೆಯ ಲೊಳಹೊಕ್ಕು ಸದೆದರು ಸಕಲ
ರಿಪುಬಲವ॥ ೪೫ ॥ ಆವವೀರನೋ ವೀರವರ್ಗದ । ದೇವದೇವಾಧೀಶ ದಲ್ಲಣ । ರಾವ
ಣನ ಮಗನಾ ವಿರೂಪಾಕ್ಷನು ವಿಚಿತ್ರದಲಿ ॥ ತೀವಿದೆಗೆ ದಂಬಿನಲಿ ಸಿಂಹ ವಿ । ರಾವ
ದಲಿ ತರಿದೊಟ್ಟಿದನು ಸು । ಗ್ರೀವ ಸೈನ್ಯವ ಸಕಲ ಸುರಕುಲವ್ಯೈದೆ ಬೆರಗಾಗೆ ॥ ೪೬ ॥
ಮೀರಿದನು ಸುರರಾಜಜಿತುವಿನ । ತಾರು ಥಟ್ಟಿನ ಕದನವನು ಕೈ ಮೀರಿದನು ಕಲಿ
ಕುಂಭ ಕರ್ಣನ ಕದನ ಕೌತುಕವ ॥ ನೂರುಮಡಿಯಾದನು ನರಾಂತಕ । ನೇರಿದರಿತದ
ರಣಕೆ ಮನವನು । ಮಾರುಗೊಂಡನು ಚಂಡಬಲ ಲಂಕಾಪುರಾಧಿಪನ ॥೪೭॥ ಅಡಿದಂ
ಬಿನ ಮೊನೆಗಳಲಿ ಕಡಿ । ದಾಡಿದವು ಕಪಿಬಲದ ಕಣೆ ಕಣೆ । ಯೂಡಿದೆಡೆಯಲಿ ತೆಕ್ಕೆ
ವೆಣನೊಟ್ಟಿದವು ತೇರ್ಗೈಸಿ । ಹೂಡುವಲಗೆಸುವಲಗೆಗಳ ಲೆಡೆ । ಯಾಡುತಿರ್ದವು ಜೀವ
ದಿವಿಜರ । ಬೀಡಿನಲಿ ಬರಿಸೈದವೀಪರಿ ಕಪಿಭಟಾವಳಿಯ ॥೪೮॥ ಆವನವನೊಡನಾವ
ವನು ಸು । ಗ್ರೀವನಲ್ಲದೆ ವಿಲಯಕಾಲ । ಗ್ರೀವನವೊಲಾರ್ಭಟಿಸುತಡೆಗಟ್ಟಿದನು
ರಕ್ಕಸನ ॥ ಸಾವವಂಗಿನ್ನೇಕೆ ಹುಲ್ಲುರಿ । ಡಾವರದ ಡೊಂಬಿಂಗೆ ನೀರಹು । ದೇ ವಿಚಾ
ರಿಸಲುಕ್ಕಿ ಸೊಕ್ಕದಿರೆಲವೋ ನೀನೆಂದ ॥ ೪೯ ॥ ಹಿಡಿದ ಹಿಗ್ಗರಿಮುದಿಯಲಗ್ಗದ ।
ಮಿಡುಕುವಸುರನ ತೇರತೇಜಿಯ । ನಡಿಮಗುಚಲಪ್ಪಳಿಸಲಾಜಿಗೆ ಚಿಗಿದನವ ಬಳಿಕ ॥
ತುಡುಕಿ ತುಂಡದಲಾ ವನೌಕಸ । ರೊಡೆಯ ನುರು ವಕ್ಷಪ್ರದೇಶವ । ನೊಡೆ ತಿವಿದು
ಕೆಡೆಯೆನುತ ಬೊಬ್ಬಿರಿದನು ವಿರೂಪಾಕ್ಷ ॥೫೦॥ ತಿವಿದ ಕುಂತವ ನುರುಬಿ ಮುದಕಾ ।
ಕವಿದು ಬೀಳಲು ಮುಷ್ಟಿಯಲಿ ಮರು । ದಿವಿಗಳಿಂದಪ್ಪಳಿಸಿದನು ಮೇಲ್ವಾಯ್ದು ರಕ್ಕ
ಸನ ॥ ನವರುಧಿರ ಜಲಧಾರೆ ರಾವಣಿ । ಯವಯದೋಳುಪ್ಪರಿಸೆ ರವಿಸುತ । ಜವನವರು
ನಗುತವನ ಬಳಿಗೆಳದೊಯ್ದ ರಭ್ರದಲಿ ॥೫೧॥ ಅಸಮಬಲ ದೀರ್ಘೋದರನು ಕಿಡಿ ।
ಮುಸಗಿ ಕೋಪದೊಳೇರಿದನು ರಾ । ಕ್ಷಸವಿರೋಧಿಯ ರಾಜಕಾರ್ಯಕೆ ನಿಂದ ರವಿಸುತನ॥
ಮುಸುಕುತಂಬಿನ ಮಳೆಯುಲಾಕುವ । ವಿಷನು ಕಪಿನಾಯಕರ ಸಂದಣಿ । ಯಸುವ
ನಚ್ಯುತ ಮುಟ್ಟವಿಸಿದನು ಮರ್ಕಟಾಧಿಪನ ॥ ೫೨ ॥ ಐದಿದಗ್ಗದ ವಿಗ್ರಹಕೆ ದೀ ।
ರ್ಘೋದರನ ರಥಕೆಡೆಯ ಲೊದೆದ ನು । ಪಾದದಲಿ ಪರಿಭವಿಸಿಕೊಂಡನು ಖಳನ
ಕಿಬ್ಬದಿಯ ॥ ಊರಲುದರಿದ ತೃಣದವೊಲು ಹರಿ । ಪಾದಹತಿಯಲಿ ಬಿದ್ದ ಖಳನೋ ।

ಲ್ವಾಯ್ದು ಡೊಕ್ಕರಿಸಿದನು ತ್ರಿಕ್ಕೆಯು ಲರ್ಕಸಂಭವನ ॥ ೫೩ ॥ ತೋರಿದರು ಹಣೆ
ಯೊತ್ತುಗಳ ಕೈ । ಹಾರಗಳ ತಳುಕುಗಳ ಒಲನೆಡ । ನೋರೆಗಳ ನೊತ್ತುಗಳ ತರತರಿಕೆ
ಗಳ ತಳಹರದ ॥ ವೀರರಿಬ್ಬರು ಹೆಣಗಿ ಕೆಡದರು । ಧಾರುಣಿಗೆ ಧರೆಬಿರಿಯೆ ಸಮರದ ।
ಸೈರಣೆಯು ಲಡಿವೋಲು ಮೇಲಡಿಯಾಗಿ ಕಣನೊಳಗೆ ॥ ೫೪ ॥ ಅಡಸಿದಸಿತಾ ದಂತಿಯುಲಿ
ಕೈ । ದುಡುಕಿ ಕೇಶಾಕೇಶಿಯಲಿ ಜವ । ಗೆಡಿಸಿ ಜಾನುಪ್ರಹರಣದಲಿ ಪದಾಭಿಘಾತದಲಿ ॥
ಬಿಡದೆ ದೆಖ್ಖಾದೆಖ್ಖಿಯಲಿ ಧೃತಿ । ಗೆಡದೆ ಧಾಳಾಧೂಳಿಯಲಿ ಬಲು । ಗಡಿಯ ಖಾಡಾ
ಖಾಡಿಯಲಿ ಕದಿದರು ಕಡುಹಿನಲಿ ॥ ೫೫ ॥ ಸುರಪ ಜಂಭನ ಗುಹನ ತಾರಕ । ನುರು
ನೃಸಿಂಹ ಹಿರಣ್ಯಕನ ಶಂ । ಕರ ಗಜಾಸುರ ಆದಿನಾರಾಯಣನ ಕೈಟಭನ ॥ ಪರಶು
ರಾಮನ ಕಾರ್ತವೀರ್ಯನ । ಹರಿಸುತನ ರಾವಣನ ರಣದಂ । ತರಕೆ ನಾಲ್ಮಡಿಯೆನಲು
ಕಾದಿದರಸಮ ಸಮರದಲಿ ॥ ೫೬ ॥ ವೀರಹನುಮನ ಹೊಗಳಿಕೆಯಲಿ ಕ । ಠೋರ ಸಾಹಸ
ಮಲ್ಲ ಬಿಗಿದನು । ಭಾರಿ ಭುಜಪಾದದಲಿ ದೀರ್ಘೋದರ ಶಿರೋದರವ ॥ ಚಾರುತರ
ಮುಖವೆರೆದುದಸುರನ । ದಾರಿಯನು ಬಿಗಿದಂತೆ ರಕ್ಕಸ । ವೀರನರಸುತ ನಾವ ರಂಧ್ರದಿ
ನುಸುಳಿತೋಯೆಂದ ॥ ೫೭ ॥ ತೆಕ್ಕೆ ಸಡಿಲಲು ಕೂಡೆ ಬಿಗುಹಿನ । ರಕ್ಕಸನ ಮುಖಚೇಷ್ಟೆ
ಯನು ಕಂ । ಡಕಟಾ ಕೇಡಾದುದ್ದೈ ಕಲಿ ರಾವಣಂಗಕಟ ॥ ಮಕ್ಕಳನು ಮನೆಸೆಂಟರನು
ಮೊ । ಮ್ಮಕ್ಕಳನು ಪರಮಾನಿನಿಗೆ ಮನ । ವಿಕ್ಕಿ ಕೊಲಿಸಿದನೆನುತ ತಿರುಗಿದ ನಬುಜ
ಸಖಸೂನು ॥ ೫೮ ॥ ಅಲಿದುದು ಕಪಿಸೇನೆ ಸೂರ್ಯಕು । ಮಾರನಧಿಕ ಪರಾಕ್ರಮಕೆ
ವೃಂ । ದಾರಕರು ಭುಲ್ಲೈಸಿದರು ರವಿತನುಜಗುತ್ತಮದ ॥ ಹಾರವನು ಕಳುಹಿದರು
ಕಂಡದ । ಸೈರಿಸುವನೇ ಭುವನ ಮೂರರ । ವೀರ ರಕ್ಕಸರಾಯನೆಲೆ ನೃಪಸೂನು
ಕೇಳೆಂದ ॥ ೫೯ ॥ ಹಬ್ಬಿದನು ಸುತಶೋಕ ಪಾವಕ । ನುಬ್ಬರಿಸಿದುದು ರೋಷಶಿಖಿ
ಮುರಿ । ದಬ್ಬಟೆಯು ಬಾಹು ಪ್ರತಾಪಾನನ ನಾಲಿಗೆಯ ॥ ಅಬ್ಬರಿನ ಕಿಚ್ಚೊಂದು
ಹುರಿಯಾ । ಗೆಬ್ಬಿಸಿದುದುದ್ರೇಕವನು ಜಗ । ದೊಬ್ಬವೀರನು ನಿಲುಕಿದನು ಬಳಿಕಿವರ
ಮೋಹರಕೆ ॥ ೬೦ ॥ ಒಬ್ಬರಾವಣ ಹತ್ತುವಿಲ್ಲೆಂ । ದೆಬ್ಬಿಸುತ ಬಾಣದಲಿ ಬೀಳದ ।
ರೊಬ್ಬರನು ನಾಕಾಣೆ ಕೋಲಲಳವಿಯಲಿ ಕಪಿಭಟರ ॥ ಕಬ್ಬು ತೋಟದ ಕರಿಯು
ಕಾಲ್ತುಳಿ । ಯಬ್ಬರವೋ ನಾನರಿಯೆ ನರಿಯೆನು । ತೆಬ್ಬಿದಮರೀಜನದ ತೋಳಿನಭಟರ
ತಿಂಥಿಣಿಯ ॥ ಹೊಕ್ಕನವ ನೆಡಬಲವ ಹಿಂಡುತ । ಹೊಕ್ಕು ತಿವಿದನು ಹರಿಕುಲೇಂ
ದ್ರನ । ಹೊಕ್ಕಿರಿವ ತವಕದಲಿ ತಳ್ಳಿರಿಕಿಸೆ ಕಪಿವ್ರಾತ ॥ ಶಿಕ್ಕದಿದ ನೀ ಖಳಗೆ ಕಪಿ
ಕುಲ । ಚಕ್ರ ತಡೆಯಲು ಬೇಕೆನುತ ರಿಪು । ರಕ್ಕಸನ ರಥದಿದಿರಿನಲಿ ಸೌಮಿತ್ರಿ
ಮಾರಾಂತ ॥ ॥ ೬೧ ॥

ನಲವತ್ತಾರನೆಯ ಸಂಧಿ ಸಮಾಪ್ತಂ.

ನಲವತ್ತೇಳನೆಯ ಸಂಧಿ.

ಸೂಚನೆ ॥ ಅಂತವಿಲ್ಲದ ನರರ ರೂಪಿನ । ನಂತನನು ಕೃತಸಮರ ಜಯ ವಿ । ಕ್ರಾಂತ
ನನು ರಾವಣನು ಗೆಲಿದನು ಘೋರ ಶಕುತಿಯಲಿ ॥

ಪದ್ಯ|| ಮೋಹರಿಸಿ ಕಳಿದುಳಿದ ಬಲ ನಾ | ಸಾಹಸನ ಸುರಲೋಕದಲ್ಲಣ | ನಾಹವಕೆ ಪಡಿಯಾಗಿ ಲಕ್ಷ್ಮಣದೇವ ನಿದಿರಿನಲಿ || ಕಾಹುರ ವಿದೇಕೆಲವೊ ವಾಣಿಯು| ಲಾಹರಾದ್ಯರ ಬಗೆಯುದಿಹ ನ| ವ್ಮಾ ಹರೀಶ್ವರನೊಡನೆ ಹಳಚುವ ಚಾಪಟೆಯು ತನವ || ೧ || ನಿನಗೆ ದೊಡ್ಡಿತ ನಿನಗೆ ಹರಿಪತಿ | ಮನುಜಸತಿಗಳು ತೃಣಕಣಾ ಕೇ| ಳೆನಗೆ ತಾಪಹಿತ ಸವೆದುದು ಸಕಲ ಬಲವೆಂದು || ಮನಕೆ ತೋರಿತಲಾಕ್ಷಣಾರ್ಥದೊ | ಳನಲನಾಡಿದ್ವ ಬೇಸಿಗೆಯು ತೃಣ | ವನವವೊಲು ನಿಮ್ಮವನು ಗೆಲದಿರ ಲಸುರನಲ್ಲೆಂದ|| ಅರಿಮುಬಹುದಿವ ರುಬ್ಬುಗೊಬ್ಬಿನ | ತೆರಹಿನಂತರ ಬೇಗ ಲೆಮಗೇ | ಕರಿಕೆಯುಳ್ಳಡೆ ತೋರು ರಣದಾಗನು ಪರಿಶ್ರಮವ || ಕರೆ ಖರಾರಿಯುನೆನುತ ಬೊಬ್ಬೆಯು | ಬಿರುಬಿನಲಿ ಬಿಲುದನಿಮುನಹಿತಗೆ | ಹೊರಿಸು ತೊತ್ತಂಬರಿಸಿದನು ಕಿವಿಗುಗಿದ ಕೋಪದಲಿ || ೩ || ಹಸುಳೆ ಹೊಕ್ಕನು ಹಗೆಯು ಸಮರ | ವ್ಯಸನಕೆಲೆ ಹನುಮಂತ ನಡೆಕೈ | ಕಸಿಯು ಕಡೆ ಮಗ ಹೋಗು ಹೊಳಕು ಸುಷೇಣ ಪಡಿಬಲಕೆ || ಸಸಿನವಾಗಿರದೇನು ಕಣು ಕಂ | ಪಿಸುತಲಿರ ಮನವತಿ ವಿಷಮನೆಲೆ | ವೆಸಗಿ ತಮ್ಮನಹಾನಿ ಹರಿಬಕೆ ಬೇಗ ಹೋಗೆಂದ || ಈತನದರಿಂದೊಳಗೆ ಶರ ಸಂ | ಘಾತದಲಿ ರಾವಣನ ತನುವನು | ತೂತುಗೊರೆ ದುಗುಳಿಸಿದ ನರ-ಣಾಂಬುವನು ರಣದೊಳಗೆ || ಸೂತನನು ಸುರಲೋಕ ದಬಲಾ | ಜಾತದಲಿ ನಿಂದಿರಿಸಿ ಕಡಿದನು | ಕೇತುದಂಡವ ನಿಳುಹಿದನು ರಾವಣನ ಸೌಮಿತ್ರಿ ||೫|| ತೊಲಗಡಿದನು ಹತ್ತು ಬಿಲುಗಳ | ನಿಳುಹಿದನು ಮಕುಟಗಳ ನಹಿತನ | ತಲೆಗೆ ತೊಟ್ಟನು ಮಾತನೆಂದನು ಮಧುರ ವಚನದಲಿ || ಎಲೆ ದಶಾನನ ಕೇಳು ರಾಮಂಗೊಲಿಮೆ ಘನ ನಿನ್ನವನ ಮೇಲಾ | ಬಳಿಯು ಲನುಸರಿಸುವುದು ಚಿತ್ತಕೆ ತೋರುತಿದೆಯೆಂದ || ೬ || ಬೇಡ ಛಲಪದವಿನ್ನು ಕೈಗಳು | ಬೇಡಿಕೊಳಲಿ ಭವಾಬ್ಧಿಪೋತನ | ನಾಡಿಕೆಡದ ಯಶೋವಿಲಾಸನ ಬಾಯು ತಂಬುಲವ || ಕೂಡಿಕೊಂಡಿರುಪೇಕ್ಷಿಸಿದ ಸರಿ | ಕಾಡಿಗಾತಿಯನನ-ಜ ಸಹಗತಿ | ಗೇಡು ಘನ ನಗರದಲಿ ನಾಯಕ ನಾಗಬೇಡೆಂದ || ೭ || ಒಲ್ಲೆಯೋ ಮನಕೆಮ್ಮ ಮಾತಿದು | ಸಲ್ಲದಿರೆ ಕರೆ ಸಾರಥಿಯ ಹಿಡಿ | ಬಿಲ್ಲನಡಸು ವರೂಥದಲಿ ಹಳವಿಗೆಯ ಕೈಮಾಡು || ಕೊಲ್ಲೆವಾವ್ ನಿನ್ನುವನು ನೀ ನ | ಮ್ಮಲ್ಲಿ ಮೆರೆ ನಿನಗುಳ್ಳ ಶಕ್ತಿಯ | ಕಲ್ಲಮುರ ನವರವು ಕರಬರಂಜಬೇಡೆಂದ ||೮|| ಅಸುರನವ ನಾಸುರವಿಕರ್ಮದ | ವಿಷಮ ಕೇಳ್ದನು ನಡಗಳಿವ ಸ್ಯೆ | ರಿಸುವನೇ ಬಳಿಕವನು ಕೊಂಡನು ಕಮಲಭವಸಿತ್ತ || ಹೊಸಮಸೆಯ ಹೊಗರಲಗುಗಳ ತೆ | ತ್ತಿಸಿದ ಶಕ್ತಿಯ ಲುರಿ ಚಡಾಳಿಸಿ | ಮುಸುಕೆ ಮಾರುತ ಪಥವನಮುರಾಳಿಗಳು ಕಳವಳಿಸೆ "೯|| ಝುಡಿವ ಶಕ್ತಿಯ ಕಿಚ್ಚು ವಾನರ | ಪಡೆಯನಟ್ಟಲು ಕಂಡು ಬಂದನು | ಝುಡಿತೆಯಲಿ ಜಾನ್ಹವಿಯ ತಂದೆಯ ಪಾದಪಂಕಜವ || ಹಿಡಿದು ಬದುಕಿದ ಶರಣ ಲಕ್ಷ್ಮಣ | ನೆಡೆಗೆ ತೂಗುತ ಗಡೆಯುನದ ಕಂ | ಡಿಡಿದ ನಂಬಿನಲಸುರ ವಿಕ್ಕಿನ ಕೈಗಳೆಸುಗೆಯಲಿ || ೧೦ || ನಸಿದು ದಾತನವರ್ಮ ಕರ್ಮನ | ಸುಸುರ್ಮ ಬಲುಗೊಂಡೆಯು ತನವು ನಿ | ಪ್ಪಸರದಲಿ ಝುಡಿದಿಟ್ಟನೀತನ ನಾತುಕೋಯೆನುತ || ವಸುಧೆ ಮೊಳಗಿತು ವರ ಚಿತಂಬರ | ದೆಸೆದೆಸೆಗಳೊದರಿದವು ಕುದಿದು | ಬ್ಬಸದ ಲುಕ್ಕಿತು ಶರಧಿ ಬಿಕ್ಕಿದ ನಳುಕಿ ಫಣಿರಾಯ ||೧೧|| ಫಣಫಣಾಕೃತಿಗೊಡುವ ಘಂಟಾ | ರಣಿತ ರವದುಜ್ಜರದ ಜೆಳಗಿನ | ಮಣಿಸಿಬಂಧಕ

ದಣಿಸಿನುರು ಬೊಂಬಾಳ ಚವುರಿಗಳ ॥ ಸೆಣಸಿ ನಾಯುಧವೈದಿತಸುರಾ । ಗ್ರಣಿಯ ಬೊಬ್ಬೆಯ ಹಬ್ಬುಗೆಯ ಲರಿ । ಗಣ ಭಯಂಕರ ಭೀಮಬಲ ಶತ್ರುಘ್ನ ನಗ್ರಜನ ॥ ೧೨॥ ಮಾನನಿಧಿ ಕುಶಕೇಳು ಸುಮಿತ್ರಾ । ಸೂನುವಿನ ಸಿಂಜಿನಿಯ ಶರ ಸಂ । ಧಾನದೆಸುಗೆಯ ಸರಳ ಬಗೆಯದೆ ಬಂದು ವಕ್ಷದಲಿ ॥ ಭಾನು ಬಿಂಬವ ನುಂಗುವ ಸ್ವ । ರ್ಭಾನು ಮಂಡದಂತೆ ಮಂಡಿಸ । ಲಾನೆ ಹರಿಕರಹತಿಗೆ ಕೆಡದವೊಲೊರಗಿದನು ಧರೆಗೆ ॥ ೧೩ ॥ ಸುರಪ ನಂಕುಶ ವಿಕ್ಕಿದನು ಮದ । ಕರಿಗೆ ಕರಹತ್ತಳದ ಲಶ್ವದ । ಬರಿಯ ನಣದೋಡಿದನು ಧನಪತಿ ಮೆರೆಯ ಮೇಘದಲಿ ॥ ಸರಿದನಾ ಮಕರೇಶ ಮಾರುತ । ನಿರವ ಹೇಳದಿರಂತಕನ ಬಾಯ್ । ಕರಿಸ ಸುತ್ತಿತು ಸುಳಿವಕಾಣೆನು ನಿರುತಿ ಹುತವಹರ ॥೧೪॥ ಈಶ ನಡುಗಿದ ನಂಜೆಯಿಂದ । ಬ್ಜಾಸನನು ನಿಂದಲಿ ನಿಲ್ಲದೆ । ಭಾಸುರದ ಬಿಡುಮಂಡೆಯಲಿ ಹಾಯಿದನು ನಿಜಪುರಿಗೆ ॥ ಲೇಸು ನಮಗಿನ್ನಿಲ್ಲೆನುತ ಲಭಿ । ಲಾಷೆಯನು ಬಿಟ್ಟುದ್ರು ಸುರವ್ರಜ । ಪೈಸರಿಸಿತಂಬರವಳಸು ಹಾಳಾಯ್ತು ನಿಮಿಷದಲಿ ॥೧೫॥ ಅಕಟ ಲಕ್ಷ್ಮಣ ದೇವನರಿಭಟ । ಶಕುತಿಯಲಿ ಸೈಗೆಡದನೇ ರಣ । ದುಃಖತಮುಪ್ಪಿತಲಾ ಯೆನುತ ನುಗ್ಗಿದನು ಸಂಗರಕೆ ॥ ಭೃಕುಟಿ ಬದ್ಧ ಸರೋಷದಲಿ ಗಿರಿ । ನಿಕರದಲಿ ಹೊಳಿದರು ಕಪಿನಾ । ಯಕರು ಕೈಯೊಡನೇರಿ ಕವಿಸಿದ ರದ್ರಿಕುಜತತಿಯ ॥ ೧೬ ॥ ಚಾಚಿದನು ಹೊಸತೇರ ನಾಕ್ಷಣ । ರಾಕ್ಷಸೇಂದ್ರರಗಾಕ್ಷಣದಲಿ ವಿರೋಚನನ ಕುಲದಸುರ ವಿದ್ಯುನ್ಮಾಲಿ ಯೆಂಬುವನು ॥ ನಾಚಿ ಬೆರಸಿದ ಜಯಸಿರಿಕೆ ಖಳ । ನಾ ಚಟುಳ ರಥವೇರಿ ಕವಿವ ವ । ನೇಚರರ ಬಿಡದೆನುತ ಬಿಟ್ಟನು ಸೂಟಿಯಲಿ ರಥವ ॥ ೧೭ ॥ ಹರಿಸಿ ರಥವನು ಹರಿತನೂಜನ । ಮರಣ ಹೆಂಗಲು ಕೆಡಹಿ ಮುಂದಣ । ಹರಿಚಮೂಪತಿ ನೀಲ ನಳ ಗಜ ಗಂಧಮಾಧನರು ॥ ಕೊರಳ ಬೇರ್ಗಳ ಕಳಚಿ ಕಪಿ ಕೇ । ಸರಿ ಗವಾಕ್ಷ ದ್ವಿವಿದ ವೈಂದರ । ಹೊರಳಿಚ್ಚನು ಗೊಂಡು ಕೊಂದನು ಕೋಟಿ ಸಂಖ್ಯೆಯಲಿ ॥೧೮॥ ತಿರುಹಿ ರಥವನು ಜಾಂಬವಂಗಜ । ಪುರದ ಪಥವನು ತೋರಿ ಹನುಮನ । ಸರಳ ಶರಧಿಯಲದ್ದಿ ಕನಕಾಂಗದನ ನಂಗದನ ॥ ಸುರಪುರಕೆ ಪಯಣವನು ಮಂಡಿಸಿ । ಸರರ ವೈದ್ಯರ ನಂದನನನು । ತ್ತರಿಸಲೀಯದೆ ಕಳುಹಿ ಕೆಣಕಿದನಾ ಖರಾಂತಕನ ॥೧೯॥ ಖೂಳನೇ ನೀ ರಣದೊಳಗೆ ಕಡು । ಖೂಳರಸುರರೊಳಾತು ಮಿಗೆ ರಣ । ಕೇಳಿಯಾವದು ಗೆಲುವತೋರಾ ನಿನ್ನ ಪರಿಜನದ ॥ ಕಾಳಗದ ಕಾಮಿನಿ ವಿಚಾರಿಸೆ । ಸೂಳೆಯೋ ಸಾಧ್ವಿಯೋ ಸವಿಪಾಕದ । ಸೊಲಿವಿಂದಿನಲಾರದೆಂಬುದ ನೋಡಿಕೋಯೆಂದ ॥೨೦॥ ನೋಡಿದೆವು ಲೇಸಾಗಿನಾಪ್ನೀ । ನೋಡಿಕೋ ಸಾಕಗ್ರದಲಿ ಧಿಟ । ಜೋಡೆಯೋ ಜಾತ್ಯಾಂಗನೆಯೋ ಜಯವನಿತೆ ನಮ್ಮೆಡೆಗೆ ॥ ನಾಡನಾಡದೆ ಕಣೆಗಳಲಿ ಮಾ । ತಾಡು ಗರುವನಿ ಗಂಗವಿದು ಗತಿ । ಗೇಡುಕರ ಬರಿ ಜೋಕೆಗಂಜುವ ಭಟನೆ ತಾನೆಂದ ॥೨೧॥ ಕಾಕತನವನು ವರುಣ ಯಮ ಶಿಖಿ ಪಾಕಶಾಸನರೊಳಗೆ ಮೆರೆವುದು । ಕೊಯ್ಕುರಲಿ ಹೆಂಗಳ್ಳರಲಿ ಕಳುಗುಡುಹಿ ಕಟ್ಟಿಯಲಿ॥ ಮೂಕೊರೆಯರಲಿ ನಿನ್ನ ಮಹಿಮೆಯು । ನಾಕುಮಡಿಯಲಿ ಬೊಗುಳುವುದು ನಿನ । ಗೇಕೆ ಸಾತ್ವಿಕ ಸಮರ ಶೌರ್ಯದ ಸುಭಟತನವೆಂದ ॥೨೨॥ ಆರು ತರಬಹುದಿರುಳು ಹೆಂಗುಸ । ಜೋರ ವಿದ್ಯೆಯ ಲನೃತ ಮುಖವಿಂ । ದಾರು ಗೆಲಬಹುದಮಮ ರಾತ್ರಿಯ ಲರುಣನಂದನನ ॥ ಆರು ಸಂಪಾತಿಯ ತನೂಭವ । ನೂರುವಿನ ಸಂಧಿಯಲಿ ನುಸುಳಿದ । ವೀರ

ತನ ನಿನಗಿಲ್ಲದಾರಿಗೆ ಸುಲಭ ಹೇಳೆಂದ ||೨೩|| ಆಲಿಗಳು ಕಂಡರಿಯುದಿದ್ದರೆ | ಕೇಳದರಿ
ಯವೆ ಕಿವಿಗಳುರೆ ಕ | ಟ್ಟಾಳು ನೀನಿದರೊಳಗೆ ನಾನದಕಾಣೆ ಯಿಡಲೇಕೆ || ಕಾಳಗದ
ಕೌತುಕದ ಕುಶಲದ | ಜಾಳಿಯುಳ್ಳರೆ ಚಾಚು ಕಣೆಗಳ | ಕಾಳನಾಗದೆ ಬೇಗೆನುತ
ಬಿಲು ದುಡುಕಿದನು ರಾಮ || ೨೪ || ಆದಡಿದಕೊಳ್ಳೆನುತ ದಿಗುಧರ | ಣೀ ದಿಶಾಂಗಣ
ವೈದೆ ಬಾಣ ಮ | ಹೋದಧಿಯು ಲೊಳಬಿದ್ದುದೆನೆ ಕವಿದೆಚ್ಚು ಸಿನಕುಲನ || ಆದಿನಾರಾ
ಯಣನಲಾ ವಿಲ | ಯೋದಧಿಯ ಧರೆಸೋಂಕದಿರ್ದೊ | ಪಾದಿಯಲಿ ಹಗೆಯುಂಬು
ಚುಂಬಿಸುತಿರ್ದನಾ ರಾಮ ||೨೫|| ತರುಗೆ ತಾರಕಿ ತಾಮಸಿಯೊಳಿಡೆ | ದೆರಹುದೋರದೆ
ಬೆಳಗಲಾ ನೇ | ಸರಿನ ತಲೆದೋರಕೆಯಲುಂಟೇ ತಮದ ಮಹಿಮೆಗಳು || ಮೆರೆವುದೇ
ರಘುನಾಥನಿದಿರಿನ | ಲಿರಿತಕಾರರ ಚಾಪವಿದ್ಯೆಯು | ನೆರವಣಿಗೆ ನೆಳಲಂಜಿಕೆಯವೋ
ಲಾಯ್ತು ಶರಜಾಲ ||೨೬|| ಅರರೆ ರಾಮನ ಬಾಣವೊಂದೇ | ತಿರುವ ನೊದವಾಗಂತರದ
ಲಂ | ಬರಕೆ ತೆರಹನು ಕಾಣೆಕಾಣೆನು ಕದನದಲಿ ಭಟರ || ಸರಳ ಖಂಡಿಸುವಲ್ಲಿ ಗಣ
ನೆಯು | ಗುರುಲಘುತ್ವದವೋಘತರ ಸಂ | ಗರದ ಧಾರಾವಾತದ ನೃಪಂಗಾರು ಸರಿ
ಯೆಂದ ||೨೭|| ಎಲೆ ಕುಮಾರಕ ಕೇಳು ರಾಮನ | ಬಲುಮೆಗವ ಸರಿಯೆನಲುಬಹುದಾ|
ಕಲಿಗಳಿಬ್ಬರಿಗಿಬ್ಬರೇ ಪ್ರತಿಕಣೆಯ ಕುಶಲದಲಿ || ಹಿಳುಕು ಹಿಳುಕಿನ ಲಲಗು ಲಲಗಿನ|
ವಿಲಯ ತತ್ಕಣೆ ಕಣೆಗಳಲಿ ಗರಿ | ಗಳಲಿ ಘಾತಿಸೆ ಗಾಢಟಲ ರೋಡಿದರು ಸರಿಸದಲಿ ||
ಕಾದಿದರು ಮಧುಕೈಟಭರು ಮೇ | ಲಾದಿನಾರಾಯಣನೊಳಿತ್ತಲು | ಕಾದಿದರು ತಮನಾ
ಹಿರಣ್ಯಾಕ್ಷಕ ಹಿರಣ್ಯಕರು || ಆದಿಮತ್ಸ್ಯವರಾಹ ನರಹರಿ | ಯಾದಿ ವಿಷ್ಣುವಿನೊಡನೆ
ಹೋಲಿಸ | ಲೈದೆ ಹೊಗಳ್ವವರೆ ಸಾಸಿರದ ಫಣಿಗರಿದೆಲೇಯೆಂದ ||೨೮|| ನಡೆದುದಗ್ಗದ
ಸಮರ ಸರಳಿನ | ಕಡಿತದಲಿ ಕುಂಭಿನಿಯ ಕೊರಳಿನ | ಹೆಡಕುಭಾರಿಸಿ ಯಿಬ್ಬರೆಸುಗೆಗೆ
ಕಾಣೆ ನವಧಿಗಳ || ಕಡುಗಲಿಗಳಂಗದಲಿ ಸರಳ್ಗಳು | ತುಡುಕಿತಿಲ್ಲೆಸುಗೆಗಳ ಲೇ ನು |
ಗ್ಗಡದ ವೀರರೋ ಬಾಣ ತಂತ್ರದ ಬಹಳ ವಿದ್ಯೆಯಲೆ||೩೦|| ಆದರೆಯು ಮಿಗಿಲಾದುದೈ
ಖರ | ಸೂದನನ ಕಟ್ಟಿಸುಗೆ ಮೊದಲಂ | ದಾದ ರಣನಾಟಕವ ಬಲ್ಲೈ ಜಾನಕೀಸುತನ||
ಆದುದಾವಿಧ ರಾವಣಂಗೊರ | ದಾದುದಿಲ್ಲ ದಿಗಂಬರತ್ವ ವಿ | ನೋದ ವಿಭವನಲಾ
ವಿಕರ್ತನ ವಂಶದರಸೆಂದ || ೩೧ || ರಥ ರಥಾಶ್ವಧ್ವಜ ಕುಲವು ಸಾ | ರಥಿ ಶರಾಸನ
ಬಾಣ ಕನಸಿನ | ಕಥೆಯವೋಲು ತೋರಿದನು ರಾಕ್ಷಸ ಸಾರ್ವಭೌಮಂಗೆ || ಶಿಥಿಲವಾ
ಯ್ತುದ್ರೇಕ ರಣದತಿ | ಮಥನ ವೈಲಿಗೆಯಾಯ್ತು ಚಿತ್ತ | ವ್ಯಥೆಯಲಿದ್ದನು ಮಣಿದ
ಮೌಳಿಯ ನಟ್ಟಬೆರಗಿನಲಿ || ೩೨ || ಏನೆಲವೋ ದುರ್ಮಾನ ರಣಸುಂ | ಮ್ಮಾನವೆಲ್ಲಿಗೆ
ಹೋಯ್ತು ಶರಸಂ | ಧಾನವೆಮ್ಮದು ಕೊರಳ ಕೊಟ್ಟಾ ನಮ್ಮ ಮಾರ್ಗಣಕೆ || ಮಾನಸ
ದೊಳಂಜದಿರು ಶಸ್ತ್ರವಿ | ಹೀನನನು ವಿರಥನನು ರಘುಕುಲ | ಮಾನನಿಧಿಗಳು ಕೊಲ್ಲ
ರನ್ನಬರಂಜಬೇಡೆಂದ ||೩೩|| ಬಿಡೆಯ ಘನ ನವಮಿಗೀಚೆಯಲಿ ನಿ | ನ್ನೊಡನೆ ಹುಟ್ಟಿದ
ವಂ ವಿಭೀಷಣ | ನೊಡಲು ಮರುಗುವುದಿಂದು ಕೊಂದರೆ ಮೂರು ಭಾರಿಯಲಿ || ತಡಿಗೆ
ಚಾಚುವುದಬುಧಿಯಿದು ನಾ | ಣ್ನುಡಿ ಜಗತ್ತಿನೊಳೆಂತು ನಿನ್ನನು | ಕೊಡೆ ಕೃತಾಂತಗೆ
ಹೋಗೆನುತ ತೆಗದೆಚ್ಚನಾ ರಾಮ ||೩೪|| ಕೊಂಡುಹೋದುದು ಬಾಣವಾರಣ | ಘಂಡ
ರಕ್ಕಸರಾಯನನು ಪುರ | ಕಂಡುದೆಂ ಬೊಂದರಿಕೆಯನು ಹುಟ್ಟಿಸದೆ ಮಾರ್ಗದಲಿ ||

ಹಿಂಡುಗಳ ಮುಸುಕಿನಲಿ ಪಟ್ಟದ । ಹೆಂಡತಿಯು ಸಿಳೆಯುದಲಿ ಹಾಯಿಕಿ । ಕಂಡುದ್ರೈ
ತಂದಸ್ತ್ರ ದೀಕ್ಷಾಚಾರ್ಯ ರಾಘವನ ॥೩೫॥ ಥಾ ಯೆನುತ ನೂಕಿದನು ತುರಗ ನಿ । ಕಾಯ
ವನು ಗರುಡಾಗ್ರಜನು ರಘು । ರಾಯ ಮೂರ್ಛು ಭಾಪೆನುತ ಪಡುವಣ ಕಡಲತಡಿಗಾಗಿ ॥
ಆಯತಾಂಬಕ ನಂಬಕದ ಪಾ । ನೀಯ ಪಥನದಲ್ಲೈದಿ ಬಂದನು । ವಾಯುಜನ ಕೈ
ಪಿಡಿದು ಲಕ್ಷ್ಮಣದೇವ ನಿದ್ದೆಡೆಗೆ ॥ ೩೬ ॥ ಹಾಸಿ ಹರಿಹಿದ ಧೌತ್ರಗಳ ಹೊರ । ಸೂಸಿ
ದರಿಬಿನ ಕರತಳದ ಬಿಡಬಿಡ । ಬೀಸಿದಂಗದ ಜೀವ ಪವನನ ಪಥದ ನಾಸಿಕದ ॥ ಆ
ಸರೋಜಜಶಕ್ತಿ ಮುಖದಲಿ । ಚಾಸಳಿಸು ವರುಣಾಂಬುವಿನ ಜಡು । ಗೇಶ ದನುಜನ
ಕಂಡು ಥೊಪ್ಪನೆ ಕೆಡದನವನಿಯಲಿ ॥೩೭॥ ಉಕ್ಕಿದುದು ಕಡು ಶೋಕರಸ ಕಾ । ಲಿಕ್ಕಿ
ತಗ್ಗದಮರವೆ ಸೊಕ್ಕಿನ । ಬಿಕ್ಕಿಸಲಿ ಹೆಲವಂಗದಲಿ ಹಳವಳಿಸುತನುಜಂಗೆ ॥ ಅಕ್ಕಿತೇ
ದುಷ್ಕೀರ್ತಿ ತಮ್ಮನ । ನಿಕ್ಕಿದೆನಲಾ ರಣಕೆ ಮಾಯೆಯು । ಠಕ್ಕಿನಬಲೆಯು ಮೋಹಕ
ದೊಳೆಂದರಸ ನಳವಳಿದ ॥ ೩೮ ॥ ಅಡವಿ ಸಲ್ಲದು ನಿನಗೆ ಬೇಡೆಂ । ವಡಚಿ ಬಂದೆನಲಾ
ವಿಪತ್ತುಗ । ಳೆಡೆಯ ನೆಣಿಸದೆ ಸೇವೆಗಲಸದೆ ತನ್ನ ಜೆಂಬಳಿಯ ॥ ಬಿಡದೆ ಬಂದ್ಯೆ
ತಮ್ಮನೀ ಶರ । ಕೊಡಲನಿತಾಯತ್ತನಗೆ ಕೈ । ಲೆಡೆಯ ಶಿಶುವೆಂದಿತ್ತ ಳಿನ್ನೇನೆಂಜೆ
ನಾನೆಂದ ॥೩೯॥ ಸುಳಿದ ಮಾಯಾಮೃಗವ ತರಲೆಂ । ದೇಸದೆನ್ನೊಳು ಬೇಡಬೇಡೆಂ ।
ದೊಳಗರಿದು ನುಡಿದುದನು ಕೇಳದೆ ನಡೆದೆ ನಡವಿಯಲಿ ॥ ಖಳನು ಸೀತೆಯನೊಯ್ಯೆ
ನಿನ್ನೊಳು । ಮುಳಿದೆನತಿ ನಿಷ್ಠುರತೆಯಲಿ ಕೈ । ಕೊಳದ ಕಷ್ಟವ ಬಿಟ್ಟು ಹೋದ್ಯೆ
ತಮ್ಮ ನೀನೆಂದ ॥ ೪೦ ॥ ಪಿತನ ಮರಣವ ನನುಜರಿಬ್ಬರ । ವಿತತ ವಿರಹವ ಗುರು
ಸುಮಾತೃ । ತ್ರಿತೆಯದಧಿಕ ವಿಯೋಗವನು ಕಾನನ ಪರಿಭ್ರಮದ ॥ ಅತಿಶಯದ
ದುಃಖವನು ನಿನ್ನಾ । ಯತಿಕೆಯಲಿ ಮರೆದಿರ್ದೆನಕಟಾ । ಗತಿಯದಾರ್ಯೈ ತನಗೆ ಹೇಳೆಂ
ದರಸನಳವಳಿದ ॥೪೧॥ ಎಂಬೆನೇನನು ತಮ್ಮ ತನ್ನನು । ನಂಬಿ ನಿನ್ನನು ಕಳುಹಿದೆರ
ಡನೆ । ಯುಂಬಿಕೆಗೆ ಮಗನೆಲ್ಲಿ ತೋರೆಂದೆನ್ನ ಬೆಸಗೊಳಲು ॥ ಎಂಬ ಮಾತಿನ್ನಾವುದೈ
ಸತಿ । ಯೆಂಬವಳಿಗೋಸುಗವೆ ಮಡುಹಿದೆ । ನೆಂಬೆನೇ ಗತಿಯೇನು ಹೇಳೈ ತಮ್ಮ ತನ
ಗೆಂದ ॥೪೨॥ ಜನಕನಂದದ ಲೆನ್ನ ರಕ್ಷಿಸಿ । ಮನವ ಹಿಡಿದ್ಯೆ ತಂದೆ ಗುರು ಭಾ । ವನೆಯ
ಭಯ ಭಕ್ತಿಯಲಿ ಹೇಳಿದ ಮಾಡಿದ್ಯೆ ಕಂದ ॥ ಅನುವರದೊಳಗ್ಗದ ಭುಜಬಲ । ನೆನಿಸಿ
ಮೆರೆದ್ಯೆಯಣುಗ ತನ್ನಯ । ತನುವಿಗಿನ್ನಾರಾಪ್ತರೆಂದಳಲಿದನು ರಘುನಾಥ ॥ ೪೩ ॥
ರಾವಣನ ಕೊಂದೇನುಫಲ ಸೀ । ತಾಯುವತಿ ಯಿದ್ದೇನುಫಲ ಸು । ಗ್ರೀವದೇವ ವಿಭೀ
ಷಣರ ವಿತ್ರತ್ವವೇನುಫಲ ॥ ಜೀವವಿದು ತಾನಿದ್ದು ಫಲವೇ । ನಾ ವಿಪ್ರಳಬಲಸಿಲ್ಲ
ದಕಟಾ । ಹಾ ವಿಧಾತ್ರ ವಿಧಾತ್ರ ಯೆಂದಳಲಿದನು ರಘುನಾಥ ॥ ೪೪ ॥ ಜೀಯ ಸಾಕಿ
ನ್ನೇಕೆ ಮಾನವ । ಮಾಯೆ ಬಿಡು ಶೋಕವನು ಹಿಂದಣ । ಪಾಯಕಿಂತಿದು ಘನವೆ
ಬೆಸಸಂಜನೆಯ ತನುಜಂಗೆ ॥ ವಾಯುಸುತ ನಿಮ್ಮಂತರಂಗ । ಸ್ಥಾಯಿಯಲ್ಲಾ ಧಿಟ
ವಿಚಾರಿಸ । ಲಾಯಸಂ ಬಡಬೇಡೆನುತ ಜಾಂಬವನು ಕೈಮುಗಿದ ॥ ೪೫ ॥ ಮರಿದು
ಬಿಡು ಕಣ್ಣಸಿಗಳಲಿ ದಶ । ಶಿರನ ದರ್ಪಧ್ವಂಸಕನ ವನ । ಚರ ಕಟಕ ರಕ್ಷಕನ ನೀಕ್ಷಿಸ
ದಾಡೆ ರಾಘವನ ॥ ಇರವ ಕಂಡ್ಯೆ ತನ್ನ ತಮ್ಮನ । ಪರಿಯ ಕಂಡ್ಯೆ ಹನುಮ ನಮ್ಮ ।
ಬ್ಬರ ಗತಪ್ರಾಣಾಭಿಮಾನವ ನಿನ್ನದಲೆಯೆಂದ ॥೪೬॥ ರಾಮನಾಡಿದ ಮಾತಿಗಿಂ ಮು ।

ನ್ನಾ ಮಹಾಬಲ ಹನುಮನಿದ್ದನು । ನೇಮಗೊಡಲೌಷಧಿಯ ತಹೆನೆಂದೆಂಬ ಶೀಘ್ರ ದಲಿ ॥ ರಾಮ ವಚನಾನುಗ್ರಹವ ನ । ಶ್ರಾವಿಸಲು ಕರ್ಣದಲಿ ನೃಪ ಪದ । ತಾಮರಸ ಕಭಿನಮಿಸಿ ಬೀಳ್ಕೊಂಡನು ಸರಾಗದಲಿ ॥ ೪೭ ॥ ಕರೆದು ಜಾಂಬವ ಕಲಿಸುಷೇಣಕ । ರೊರೆದ ರೀತಂಗಂದಿನಂದದಿ । ಗಿರಿಯ ತರಬೇಡೌಷಧಿಯ ನೀಬಲ್ಲೆ ಮೂಲಿಕೆಯ ॥ ತಿರಿದು ತಾ ಹೋಗೆಂಬ ನುಡಿಯಿಂ । ದೊಳಗೆ ವಾಯುಸ್ಕಂಧದಲಿ ಗೋ । ಚರಿಸಿ ತರಿವಿನ ಬಟ್ಟೆಯೆನೆ ಧಾಳಿಟ್ಟನಾಗಿರಿಗೆ ॥ ೪೮ ॥ ಅಂದಿನಂದದವೀರ ಮತ್ರ್ಯ । ತಂಜನೆಂದಾ ಗಿರಿಯ ಕಾಪಿನ । ಮಂದಿ ತಮತಮಗರಸಿ ಕಿತ್ತಿತ್ತರು ಮಹೌಷಧಿಯ ॥ ಅಂದ ಬಾಲದ ಲಗ್ನಿದೇವರ । ನಿಂದಿರಿಸಿದವ್ರೊಲೌಷಧಿಯ ಹೊರೆ । ಯಿಂದ ಹೊಳಹೊಳವ್ರತ ಬರುತಿ ರ್ದನು ಸರಾಗದಲಿ ॥ ೪೯ ॥ ಮರುತಸುತನಾಗಸದ ಪಥದಲಿ । ನಿರುತಯೋಧ್ಯಾಪುರ ದೊಳಿರುತಿಹ । ಭರತ ಶತ್ರುಘ್ನರನು ಕಂಡನು ರಾಮಲಕ್ಷ್ಮಣರ ॥ ಧುರದೊಳಿದ್ದವ ರಿಲ್ಲಿಗೈತಂ । ದರೆ ವಿಚಿತ್ರವಿದೆಂದು ನೋಡಿದ । ನೆರೆನಿಮಿಷವಂಬರದೊಳಿಲೆ ಕುಶಕೇಳು ಕೌತುಕವ ॥ ೫೦ ॥ ಆ ರಜನಿಯೊಳಗದ್ದ ಭರತನು । ಘೋರತರವಹ ಕನಸ ಕಂಡಾ । ವೀರ ಲಕ್ಷ್ಮಣ ನಳಿಯದಿರನೆಂದಧಿಕ ಚಿಂತೆಯಲಿ ॥ ಧಾರುಣಿಯ ವಿಬುಧರನು ಕರಸಿ ವಿ । ಚಾರದಲಿ ಶಾಂತಿಗಳ ರಚಿಸುವ । ಭಾರದಿಂದಿರಲಭ್ರದಲಿ ಹೊಳಕಿದುದು ಕಿರಣಾಳಿ॥ ನೋಡಿದೈ ಶತ್ರುಘ್ನ ಕನಸಿನ । ಕೇಡ ನಿನಗದ್ಭುತವ ನಭದಲಿ । ಮೂಡುತಿದೆ ನಿಳೆಗೆಚ್ಚು ಕೆಡಹುವೆ ನೊಂದು ನಿಮಿಷದಲಿ ॥ ನೀಡು ಚಾಪವನೆಂಬಮಾತ್ರದೊ । ಳಾಡಿತಂಬರ ವಾಣಿ ಬಿಲುಗೊಳ । ಬೇಡ ರಾಘವ ಕಾರ್ಯವರನಿವನೆಂದು ರಭಸದಲಿ ॥ ೫೧ ॥ ಕೇಳಿ ಭರತನು ನುಡಿಯನಿದ ನೀ । ಮೇಲೆ ರಾಮನ ರಾಜಕಾರಿಯ । ದೇಳಿಗೆಯಲಾ ಯೆಂದು ನಿಂದು ಮನೋನುರಾಗದಲಿ ॥ ಆಲಯುವ ನೊಳಹೊಕ್ಕು ನಿತ್ತ ವಿ । ಶಾಲಬಲ ಹನುಮಂತ ಬಂದನು । ಬಾಲದೊಳೌಷಧಿಯ ಹೊರೆ ಸಹಿತಾಳ್ದನಿದ್ದೆಡೆಗೆ ॥ ೫೨ ॥ ಸಿಂಧು ಮಧ್ಯದಲ್ಲೈದು ವನಿಲನ । ನಂದನನ ತಡೆದತುಳ ಭುಜಬಲ । ದಿಂದ ತಾಗುವೆ ಕಾದಿ ಸಂಜೀವಿನಿಯ ತಾರದೊಲು ॥ ಇಂದುಧರ ಕಮಲಾಸನನು ಸಂ । ಕ್ರಂದನಾದಿ ಸಮಸ್ತ ಸುರಮುನಿ । ವೃಂದ ಗೆಲಲರಿದೆನುತ ತಾಗಿದ ಮಾಲ್ಯವಂತ ಖಳ ॥೫೪॥ ತಡೆದು ಹಳ ಚಿದು ನನಿಲಜನ ನಾ । ಕಡಲ ನಡುವೆ ಸುಮಾಲ್ಯವಂತನು । ನಡೆದುದಿಬ್ಬರ ಸಮರ ಕರಘಾತದಲಿ ಖಡ್ಗದಲಿ ॥ ಘುಡುಘುಡಿಸಿ ಕೋಪದಲಿ ಮಾರುತಿ । ಸಿಡಿದು ಗಿರಿ ಮಸ್ತಕದೊಳೆರಗುವ । ಕಡುಹಿನವ್ರೊಲುಬ್ಬೆದ್ದು ತಿವಿದನು ಖಳನ ನಡುಶಿರವ ॥ ೫೫ ॥ ಬಿದ್ದನತುಳದೊಳಧಿಕ ಕೋಪದ । ಗುದ್ದಿನಲಿ ಪಾತಾಳಲೋಕದೊ । ಳದ್ದಿಕನು ಪಡಿ ತಳಿಸಲರಿಯದೆ ಮಾಲ್ಯವಂತ ಖಳ ॥ ಹೊದ್ದಿದನು ರಘುಪತಿಯ ಕಾರ್ಯದ । ಬದ್ಧಿ ಕಾರನು ಕಡಲ ತಡಿಗಾ । ಮದ್ದ ಮೂಲಿಕೆ ಹೊರೆಸಹಿತಲಾ ಕಟಕ ರಕ್ಷಕನು ॥ ೫೬ ॥ ಹೊಳಕಿದುದು ಕಿರಣಾಳಿ ಗಗನ । ಸ್ಥಳದ ದಿನಮಣಿಯಂದದಲಿ ಕಪಿ । ಕುಲ ಲಲಾಮನ ಕರದ ಸಂಜೀವನಿಯ ತೇಜೋಮಯ॥ ಅನುಜಗಳಿವನು ತೋರಿದೀ ನಿಶಿ । ಯೊಳಗೆ ತಲೆದೋರಿಸಲು ಬಹುದೇ । ನಳಿನಸಖ ನೆನುತೆತ್ತಿದನು ಸಿಂಜಿನಿಯ ಕಾರ್ಮುಕವ ॥ ತರಣಿಯಲ್ಲಲೆ ಜೀಯ ಹನುಮನ । ಬರವ ಚಿತ್ತೈಸೆನುತ ಧನ್ವಂ । ತರಿಯ ತನುಜ ಸುಷೇಣ ಜಾಂಬವರೆದ್ದು ಕೈಮುಗಿಯೆ ॥ ಬರವಕಾಣುತ ಹನುಮನೆಂದೀ ! ಕರದ

ಕಾರ್ಮುಕ ದಂಡವನು ಕೆಲ । ಕಿರಿಸಿ ಮನದಲಿ ಮರುಗಿ ತಪ್ಪಾಯ್ತೆನುತಲಾರಾಮು ॥ ಅಂಜನಾಸುತ ನಾಕ್ಷಣದೊಳಾ । ಕಂಜಬಾಂಧವ ಕಿರಣ ತೇಜಃ । ಪುಂಜ ಕಥಿನವಿ ಸುತ ಮುಕುಳ ಕ । ರಾಂಜಲಿಯೊಳಿಹ ಪವನ ತನುಜನ । ಮಂಜುಳದ ಕರಕಮಲ ದಲಿ ತಡವರಿಸಿದನು ರಾಮ ॥೫೭॥ ಅರಸಿ ನಾಲ್ಕೌಷಧಿಯ ಕೊನೆಗಳ । ತಿರಿದು ತೀಡಿ ಸುಷೇಣ ಮೂಗಿನ । ಲೆರದು ಸಿಲಿಕಿದನಾ ಸುಮಿತ್ರಾಸುತ ವಿಭೀಷಣರ ॥ ಅರಸಿ ಸುಗ್ರೀವಾದಿ ಸುಭಟರ । ಮರವೆಗಳ ಮಾಣಿಸಿದನಂಬುಧಿ । ಯುರುಬಿನವೊಲುಬ್ಬರಿಸು ತಿರ್ದುದು ಕೂಡೆ ಕಪಿಕಟಕ ॥೬೦॥ ಉಕ್ಕಿದುದು ಹರುಷಾಬ್ಧಿ ಮಾಯಾ । ತಕ್ಕಿನಿಂದೀವರ ದಳಾಕ್ಷಂ । ಗಕ್ಕರಿನ ಹರುಷದಲಿ ಬರ್ಹಿರ್ಮುಖರು ಗಹಗಹಿಸೆ ॥ ಒಕ್ಕದಂಬುಜ ದಲರನಪ್ಪಿದ । ನೆಕ್ಕತುಳದಲಿ ಭೂಮಿಪತಿ ಮುಂ । ದಕ್ಕೆ ಕಮಲಜನಹ ಸುಮಿತ್ರಾ ಸೂನು ರಕ್ಷಕನ ॥೬೧॥ ಆದುದಿಲ್ಲಾ ದಿವಸದಲಿ ಸಂ । ವಾದ ವಿತ್ತಂಡಕೆ ತರಣಿಯು । ಹೋದಮಾನ ದನುರಾಗ ಹಬ್ಬಿತು ಹಗಲಿನಗ್ರದಲಿ ॥ ಆ ದಯಾಂಬುಧಿ ತೊರವೆಪತಿ ಯಾ । ಹ್ಲಾದದಲಿ ಸುಗ್ರೀವ ಸಹಿತ ಸ । ಹೋದರನ ಕೈವಿಡಿದು ಹೊಕ್ಕನು ತನ್ನ ಪಾಳಯವ ॥ ॥೬೨॥

ನಲವತ್ತೇಳನೆಯ ಸಂಧಿ ಸಮಾಪ್ತಂ.

ನಲವತ್ತೆಂಟನೆಯ ಸಂಧಿ.

ಸೂಚನೆ॥ ರಣಪರಾಜಿತನಾಗಿ ಕಲಿ ರಾ । ವಣನು ರಣದಾಯತಿಕೆಯಲಿ ಮಾ । ರಣ ಮಹಾಯಜ್ಞವ ನುಪಕ್ರಮಿಸಿದನು ರಜನಿಯಲಿ ॥

ಪದ್ಯ॥ ವಸುಮತೀಪತಿಸೂನು ಕೇಳಾ । ದಶಶಿರನು ರಣಭಂಗದಲಿ ತಲೆ । ಮುಸುಕಿನಲಿ ಸಾರಿದನು ಸಜ್ಜಾಗೃಹವ ನಿರುಳಿನಲಿ ॥ ಬಿಸುಗುದಿಯ ಬಿರುಸುಯಿಲ ಸುಯಿಲಿನ। ಮುಸುಳಿದಾನನ ಮಂಡಲದ ಬೇ । ವಸದ ಕರಣೇಂದ್ರಿಯದ ಖಳನೊರಗಿದನು ಮಂಚ ದಲಿ ॥೧॥ ಮಾಣದಾದೆನು ಮಾವನಾಡಿದ । ವಾಣಿಯಲಿ ಕಾಮುಕ ವಿಕಾರದಿ । ಕಾಣ ದಾದೆನು ಕಲಿ ವಿಭೀಷಣ ನುಚಿತ ಭಾಷಿತವ ॥ ಪ್ರಾಣಮಿತ್ರನಲಾ ಪ್ರಹಸ್ತನ ಲೂಣ ಯವ ತಾಳಿದೆನು ಜನನಿಯ । ಜಾಣಿಕೆಯ ಜಾತ್ಯುತ್ತರವ ನತಿಗಳೆದೆ ನಕಟೆಂದ ॥ ೨ ॥ ಏನುಪಾಯವು ತನ್ನ ಕಟ್ಟಭಿ । ಮಾನಭಂಗಸ್ಥಿತಿಗೆ ಹರಣವ । ನಾ ನರೇಶ್ವರನಿತ್ತು ಸಂಧಿಗೆ ಮೂರು ಬಾರಿಯಲಿ ॥ ಹೀನತನವಾಯ್ತುಕಟ ಜಗದೊಳ । ನೂನ ಕೀರ್ತಿಗೆ ಮರಳಿ ಕಾಳೆಗ । ವೇ ನಿಧಾನಿಸೆ ರಾಘವೇಂದ್ರನೊಳೆಂದ ನಸುರೇಂದ್ರ ॥೩॥ ತಲೆಯ ಬೋಳಿಸಿಕೊಂಡು ಭವಗೋ । ಟಲೆಯ ಕೊಡಹಿ ಸಮಸ್ತ ಭೂಮಂ । ಡಲವ ತೊಳಲು ವುದೆಂದು ಮತವಿನ್ನೊಂದು ಮತ ಬೇರೆ ॥ ಉಳಿದ ಬಯಕೆಯ ಬಿಸುಟು ಹಾಲಾ । ಹಲವ ನಂಗೀಕರಿಸುವುದೆ ಹಗೆ । ಗಲಹ ವಿನ್ನಕಟಕಟ ಕಷ್ಟದ ಕಡೆಯ ಮಾತೆಂದ॥೪ ಮನದೊಳೀಪರಿ ತಲಬುತಾ ಖಳ । ನೆನೆದುಕೊಂಡನು ಮೆಚ್ಚಿಸುವೆ ನಾ । ವನಜಪೀಠನ ನಿಗಮ ಜೂಟನ ಕೋಟಿ ಹೋಮದಲಿ ॥ ತನಗೆ ನೂರ್ಮಡಿ ವಿಕ್ರಮದ ಸೊಂ । ಪಿನ ಮಹಾಭಟ ಕೋಟಿ ರಾವಣ । ರನು ಮಹಾಕ್ರತು ಕುಂಡದಲಿ ಹೊರವಡಿಸುವೆನೆಂದ॥೫॥

ಅಳಿದ ಧೂಮ್ರಾಕ್ಷಾದಿ ಸುಭಟಾ | ವಳಿಯ ನೆಬ್ಬಿಸುವೆನು ಮಹಾಹವ | ಲಲನೆಯನು ಸೆರೆವಿಡಿವೆ ಗಗನಕೆ ಗಂಹರೀಸುತೆಯ || ಹೇಳಬಿ ಮಾಡುವದೇನೆನುತ | ಲಲನೆ ಮಂಡೋದರಿಯ ಕರದ | ಗ್ಗಳದ ಯಜ್ಞಾರಂಭವನು ಕೈಕೊಂಡನಸುರೇಂದ್ರ |೬|| ಕರೆಸಿ ಖಳ ವಿಪ್ರರನು ಮುಖಪರ | ಕರವ ಸಂಪಾದಿಸಿ ವಿಮೂಢರ | ಗುರು ನಿಜಾಂಗನೆ ಸಹಿತ ಬಂದೇರಿದನು ಪುಷ್ಪಕವ || ಧುರದ ಕಟ್ಟಾದಿಯಲಿ ಲಂಕಾ | ಪುರವ ಹೊರವಂಟಸುರ ವಿಪ್ರರ | ನೆರವಿ ಸಹಿತ ನಿಕುಂಭಿಣಿಯ ನಿಳಯಕೆ ನಡೆತಂದ || ೭ || ಇಳಿದು ಧನಪ ವಿಮಾನವನು ನಿಜ | ಕುಲದ ಮನದೇವತೆಯ ನಿಕುಂ | ಭಿಣಿಯ ನಿಳಯವ ಹೊಕ್ಕನೊದರುವ ವಾದ್ಯ ಘೋಷದಲಿ || ಹಲವು ಪೂಜಾವಿಧದಿ ದೇವಿಯ | ನೋಲಿಸಿ ಹೊಕ್ಕನು ಮಯವಿನಿರ್ಮಿತ | ಬಿಲಮುಖದ ವಿತಳಪ್ರದೇಶದ ಯಜ್ಞಮಂಟಪವ |೮|| ಅರಿಗಳೈತರದಂತೆ ಕಾವಲ | ನಿರಿಸಿದನು ಭೇತಾಳ ಜಟ್ಟಿಗ | ನಿರುತಿ ಭೈರವ ಭೂತನಾಥಪ್ರಮುಖ ಭುಜಬಲರ || ಕರದ ಕತ್ತಿ ಕಪಾಲ ಪಾತ್ರೆಯ | ಶಿರದ ಮಾಲೆಯ ಕಾಳವೇಷದ | ಹೊರದ ಖಾತಿಯ ಭೂತಗಣ ಬಳಸಿದುದು ಮಂಟಪವ |೯|| ಕಾಳಿ ದುರ್ಗಿ ವರಾಹಿ ಭೈರವಿ | ಶೂಲಪಾಣಿ ವಿಚಂಡಿ ಚಂಡಿಕ | ರಾಳಿ ಕಾಪಾಲಿನಿ ಮಹೋದರಿ ಮುಕ್ತಕೇಶಿಗಳು || ಕಾಳರಾತ್ರಿ ಜ್ವಲನಮುಖ ಘಂ | ಟಾಳಿ ಶಾಂಭವಿ ಘನತಪಸ್ವಿನಿ | ಖೇಳ ದಂಷ್ಟ್ರಪ್ರಭೃತಿಯಿದ್ದುದು ಕರದ ಕತ್ತಿಗಳು || ೧೦ || ಮಾರಿ ಮಾಲಿನಿ ಚಂಡಪಾಣಿನಿ | ವಾರುಣೀಶ್ವರ ಧೂಮ್ರಮುಖಿ ಕಾಳಿ | ಶಾಕಿನಿ ಡಾಕಿನಿ ಪ್ರಣಯಿನಿ ಪ್ರಾಯಿನಿ ಮಹೇಂದ್ರಾಣಿ || ಘೋರಪೂತನಿ ರೌದ್ರಮುಖಿ ಕೌ | ಮಾರಿ ವೈಷ್ಣವಿ ಮುಖ್ಯ ಬಹಳಿತ | ಘೋರಶಕ್ತಿಯರಿದ್ದ ರೆತ್ತಿದ ಶೂಲ ಹಸ್ತದಲಿ ||೧೧|| ಕರೆಸಿದನು ಮಯನನು ನಿಶಾಚರ | ಗುರುವಚನ ವನುಮತದಿನಧ್ವರ | ವಿರಚಿಸಿದುದಾಸುರ ವಿಕರ್ಮ ಮಹಾಭಿಚಾರದಲಿ || ತರಳ ಕೇಳೈ ಕೋಟಿ ಹೋಮದ | ಪರಿಕರ ದ್ರವ್ಯಂಗಳಲಿ ಕ | ರ್ಬುರ ಮಹೀಸುರನಿಕರ ಬಳಸಿತು ಕುಂಡವನು ಮುಖದ || ೧೨ || ಕರಿಯ ಚರ್ಮದ ಹೊದಕೆಗಳ ನಿಡು | ಗರುಳು ನವ್ಯ ಪವಿತ್ರ ಸೂತ್ರದ | ನರ ರುಧಿರ ದನುಲೇಪನದ ದಾಸಣದ ದಂಡೆಗಳ || ಶಿರವ ಬಿಡುಗೂದಲಿನ ದಕ್ಷಿಣ | ಕರವ ಕತ್ತಿಯಲಾಭಿಚಾರಾ | ಧ್ವರದ ದೀಕ್ಷಿತ ತನುವ ಕೈಕೊಂಡನು ದಶಗ್ರೀವ || ೧೩ || ಅರಿದು ತನ್ನಯ ತಲೆಯ ಮಿದುಳನು | ಕೆರದು ಸೃಕ್ ಸೃವ ಮುಖ್ಯ ನಾನಾ | ಪರಿಯ ಪಾತ್ರೆಯಮಾಡಿ ಮಾಂಸದ ಚರುಗಳನು ಬಡಿಸಿ || ನೊರೆಮಿದಳ ಪರಮಾನ್ನವನು ವಿ | ಸ್ತರಿಸಿ ಶೋಣಿತದಾಜ್ಯ ಪಾತ್ರೊ | ತ್ಕರವ ಸಂಪಾದಿಸಿದನಾ ಹವನೀಯ ವಲಯದಲಿ || ೧೪ || ಬಗೆದು ಜಠರಾಗ್ನಿಯ ನಥರ್ವಣ | ನಿಗಮ ಮಂತ್ರಂಗಳಲಿ ನಿಲಿಸಿದ | ನುಗಿದು ಬದಿಯಸ್ಥಿಗಳ ಶುಷ್ಕಂಗಳಲಿ ಪಟುಗೊಳಿಸಿ | ಅಗಲಿಸಿದ ತೋಳ್ಗಳ ಪರಿಸ್ತರ | ಣಗಳ ವಿರಚಿಸಿ ನರದ ದರ್ಭೆಯ | ಬಗೆದು ಬೆರಳಲಿ ಬೇಡಿಕೊಂಡನು ಹವ್ಯವಾಹನನ |೧೫|| ಅರುಣ ಗಂಧಾಕ್ಷತೆ ಸುಪುಷ್ಪೋ | ತ್ಕರದಲಾ ಹುತವಹನನರ್ಚಿಸಿ | ಸರಸಿರುಹ ಸಂಭವನನಾಹ್ಲಾದಿಸಿ ಮಹೇಶ್ವರನ || ಸ್ಮರಿಸಿ ಭಾರ್ಗವಮಂತ್ರ ಮುಖದ | ಚ್ಚರಣೆಯಲಿ ಕಡಿಕಡಿದು ಚಿಗುರುವ | ಶಿರವನಾಹುತಿಯಾಗಿ ಕೊಡುತಿರ್ದನು ದಶಗ್ರೀವ || ೧೬ || ಮೇಲೆಮೇಲೆ ತಿಲಾಜ್ಯ ಚರು ಸಮಿ | ಧಾಳಿ ಮಾಂಸಾಹುತಿಗಳಲಿ ಜೆ | ಹ್ವಾಳಿಗಳು ನಿಗುರಿದವು ಸಿಲು

ಪದವಾ ಧನಂಜಯನ ‖ ತೂಳಿದುದು ದುರ್ಗಂಧ ದಾರು ಧೂ। ಮಾಳಿ ದಿಙ್ಮಂಡಲವ
ನುರೆ ಪಾ। ತಾಳ ಗನದುದು ಥಳಥಳನೆ ಕುದಿದುಕ್ಕಿ ತಂಬುನಿಧಿ ‖ ೧೭ ‖ ಚೀರಿತಿಳೆ
ತಾರಾಳಿ ನಭದಲಿ । ಕೌಂಡಲು ಕುಲಶೈಲ ಧಳ್ಳುರಿ । ದೋರಿದವು ಧಗಧಗಿಸಿದವು
ದಿಕ್ಕುಗಳು ಸುರಭುವನ ‖ ಓರೆಗುಡಿಸಿದವಮರತತಿ ಬಾ। ಯಾರಿದುದು ಮರುಕದಲಿ
ಕಪಿಬಲ। ತಾರು ಧಟ್ಟಾಯ್ತಮಮ ಕೋಟಿ ದಶಾಸ್ಯರುದಯದಲಿ ‖ ೧೮ ‖ ಏನಿದೀ
ಯುತ್ಪಾತ ಜನಿತ ಕೃ। ಶಾನು ಕಲ್ಪವ್ಯಾಪ್ತಿಯೋ ಲಂ। ಕಾನಗರ ದಧಿನಾಥನುದ್ಯಮ
ದಾಭಿಚಾರಕವೊ। ನೀನು ಬಲ್ಲೈ ಹದನಸನೆ ಮಣಿ। ದಾನನವನೆನೆ ದೇವ ತಪ್ಪದು।
ಮಾನುಷಾರಿಯ ಕೋಟಿ ಹೋಮವಿದೆಂದ ನಸುರೇಂದ್ರ ‖ ೧೯ ‖ ಅರಸಕೇಳಿಂ ದಿಂದ್ರ
ಜಿತು ವಿ। ಸ್ತರಿಸಿದಧ್ವರ ಕುಂಡದಲಿ ಕ। ರ್ಬುರ ಕುಲೇಂದ್ರನ ಕೋಟಿ ಹೋಮವು
ನಡೆವುತಿದೆ ಬೇಗ ‖ ಹರಿಸು ಹರಿನಂದನನಗ್ಗದ। ಹರಿತನೂಭವ ನಂದನನ ನಾ।
ಹರಿಸಖನ ನಂದನನ ನೆಂದಸುರೇಂದ್ರ ಕೈಮುಗಿದ ‖ ೨೦ ‖ ಬಲ್ಲಿವರಾಸ್ಫಳವ ನೀತಿಗ।
ಳಲ್ಲದಾರಿಗೆ ನೂಕಿದೆನೆ ರಣ। ವಿಲ್ಲರೆದ್ದರು ಬೇಗ ಬೆಸಸೆನು ತದ್ರಿಕುಜ ಸಹಿತ ‖ ಎಲ್ಲ
ವೇಕೀನೆಮ್ಮ ಹರಿಬದ। ಗೆಲ್ಲ ನಿಮ್ಮದು ಮೇಲೆ ನೀವೆಲ್ಲ। ಬಲ್ಲಿರೆನೆ ಧಾಳಿಟ್ಟರರ್ಬುದ
ಕೀಶಬಲ ಸಹಿತ ‖ ೨೧ ‖ ಮುಟ್ಟವಿಸಿದುದು ಧಾಳಿಧಾಳಿಯ । ಧಿಟ್ಟರನು ಭೂತಾಳಿ
ಹೊಗಗುಡ। ದಟ್ಟಿ ಹೊಯ್ದವು ಹೆಡದು ಕೆಡಹಿದ ವಖಿಳದೆಸೆಗಳಲಿ ‖ ಅಟ್ಟುಕಾರ
ನಲಾ ಜಗುಗಳ। ಪಟ್ಟಣದ ಲಂಜನೆಯಸುತ ನಾ। ಜಟ್ಟಿಗರ ಜಂಗುಳಿಯ ನೊರಸಿದ
ನೊಂದು ನಿಮಿಷದಲಿ ‖ ೨೨ ‖ ಅರಸಿದನು ದಶಶಿರನನಾ ಗಿರಿ। ಶಿರದ ಶಕ್ತಿ ನಿಕುಂಭಿ
ಣಿಯ ಮಂ। ದಿರದ ಮುಂಭಾಗದಲಿ ಕಾಣದೆ ಕಲಿತ ರೋಷದಲಿ ‖ ಧರೆ ಬಿರಿಯಲುರಿ
ನಗೆಯ ಲೊದೆದನು । ಚರಣದಲಿ ಬಳಿಕಲ್ಲಿ ಕಂಡನು । ಸುರವಿರೋಧಿಯ ಹೋಮ
ದೆಡೆಯನು ಹೊಕ್ಕ ನುರವಣಿಸಿ ‖ ೨೩ ‖ ಏಸುಕಾವಲ ಭೂತಗಣವದ। ರೈಸು ರೂಪಿನ
ಲೊಬ್ಬರದರೊಳು । ಸೂಸಿ ಸಿಡಿದೋಡದವೊಲುರಿಯಲಿ ಬಿಸುಟ ನವರುಗಳ ‖ ಈಶ
ನನು ಕೈಮುಗಿದು ಭೃಗಜ ಮ। ಹಾಸುರರ ಹೊರವಡಿಸಿ ದಶಮುಖ। ನಾಸುರ ಕ್ರತು
ಮುಖದ ಪೂರ್ಣಾಹುತಿಯ ಕೆಲಕೊದೆದ ‖ ೨೪ ‖ ತುಳಿದನಸಿತರ ನನಿಲಸುತ। ಹೊಳಕಿ
ರೂಪಾದಸುರ ಕೋಟಿಯ । ನುಳಿಯದಾ ಮಹದಗ್ನಿ ಕುಂಡದ ಲಿಂದ್ರಜಿತು ಸೂನು ‖
ಖಳ ಶಿರೋಮಣಿ ಯಂಗನೆಯ ಮುಂ । ದಲೆಯ ಹಿಡಿದುಟ್ಟಿರ್ದ ಸೀರೆಯ। ಸೆರೆಯ
ಲೊದರಿದಳಬಲೆ ಹಾಹಾರವದ ಲಸುರಂಗೆ ‖ ೨೫ ‖ ಅಕಟ ಲೋಗರ ಹೆಂಡತಿಯ ನ।
ಪ್ರಕಟದಲಿ ನೀ ತಂದೆ ಲೋಕ । ಪ್ರಕಟದಲಿ ನಿನ್ನಂಗನೆಯ ನಿನ್ನಯ ಸಮಕ್ಷದಲಿ ‖
ಚಕಿತ ಕಲುಷಾ ಕರುಷವಲಿ ವಿಟ । ನಿಕರ ಸೆಳದೊಯ್ಯುತದೆ ನಿ । ಶ್ಚಕಿತನಾದಡೆ
ಸಲಹು ಲಜ್ಜೆಯ ನೆಂದಳಾ ಕಾಂತೆ ‖ ೨೬ ‖ ಎಂಬನುಡಿ ರಕ್ಕಸನ ಕರ್ಣದೊ। ಳಿಂಪು
ಗೊಳೆ ಸತ್ರೈಕ್ಯರೀಘಶಿಖಿ ಮುಖ। ದಂಬಕತ್ರಯದತ್ತ ಹಿಮಕರ ಹಾಸವನು ಸೆಳೆದು ‖
ದೊಂಬಿನಾಡುವ ವಾಲಿತನುಜನ । ಸಂಹರಿಸಿ ಹನುಮಂತ ದೇವಗೆ। ಘೂಂಬಿಸಲು
ಮುರಿದಿಕ್ಕಿದನು ಸೆಳೆದಾ ಮಹಾಯುಧವ ‖ ೨೭ ‖ ಕೇಳಿಲವೊ ದಶಮುಖ ಪಿಕರ್ಬುದ।
ಬೇಳವೆಯ ಜೇಳಿಂಬ ಬೂದಿಯೊ । ಕಾಳುವೃದು ಕಕುಲಿತೆ ಸಾಕಿನ್ನೇಕೆ ಜಯಮು
ಖವ ‖ ಕಾಳಗದೊಳನುಚರಿಸದೊದಗಿವ। ಡೇಳುವುದು ಕಡಿದುಡಿದ ಕೀರ್ತಿಲ। ತಾಳ

ಕವಲೊಡೆದಜನ ಲಯುತನಕೆಂದನಾ ಹನುಮ ||೨೮|| ತಪ್ಪದೆಸುತಸುರೇಂದ್ರನಾ ನುಡಿ|
ಯೊಪ್ಪವಿಟ್ಟನು ಬಳಿಕಲಾಹವ | ದರ್ಪದಲಿ ಕಾಲಿಕ್ಕಿದನು ಕಮಲಜವರೂಥದಲಿ ||
ಚಪ್ಪರಿಸಿದನು ಹಯುವ ನವ ನಿ| ಮ್ಮಪ್ಪನೆಡೆಗೀ ಹನುಮನಂಗದ| ನಿಪ್ಪೆಣನ ಕೊಂ
ಡಗ್ನಿಸುತ ಸಹಿತೈದಿದನು ನೃಪನ ||೨೯|| ತಂದು ಮುಂದಿಳುಹಿದನು ತಾರಾ| ನಂದನನ
ಕಡಿಯೆರಡ ನರಸಂ| ಗೆಂದ ನೀತನ ದೆಸೆಯಲಳಿದುದು ಹೋಮ ರಾವಣನ || ಎಂದೆ
ನಲು ಮನಮರುಗಿ ಕಂಬನಿ| ದಂದು ಕೆಡಿಸಿದಿರಕಟ ಕೈಲಿಡೆ | ಕಂದನನು ಹಗೆಗಿಕ್ಕಿ
ಮಾಡಿದೆ ನಗೆಯು ನಮಗೆಂದ || ೩೦ || ಎನಲು ಜಾಂಬವದೇವ ಕೈಮುಗಿ| ದಿನಕುಲೇಂ
ದ್ರಗೆಂದನಿದಕೇ| ನಿನಿತು ಚಿಂತೆ ಮಹೌಷಧಿಗಳಿವೆಲಾ ಸುಷೇಣನಲಿ || ಮನುಜನೇ
ನೀ ನಿನ್ನ ಕೃಪೆ ಸಂ | ಜನಿಸಲೇಳುವದಂದೆ ಕೊರತೆಯು | ಹನುಮನಲಿ ಹಾಯ್ಕಲಿ
ಕಸಾಧ್ಯವದೇನು ನಿಮಗೆಂದ || ೩೧ || ಬಾ ಸುಷೇಣ ಹಸಾದ ನಮ್ಮಯ| ವಾಸವನ
ಮೊಮ್ಮಗನ್ನೈಯ ಮ| ಹೌಷಧಿಗಳುಂಟಾದಡೆಬ್ಬಿಸು ಜೀಯ ಯಿದೆಯೆನುತ|| ಆಸುವಿ
ತ್ರಾಸುತನ ನೆಬ್ಬಿಸಿ| ದೌಷಧಾರ್ಥದಲೆತ್ತಿದನು ಸಂ| ತೋಷದಿಂದಪ್ಪಿದನು ರಾಘವ
ರಾಯ ನಂಗದನ || ೩೨ || ಎಲೆ ಸಮಿರಾರಜ ದುಗುಡವೇ ನ| ಗ್ಗಳ ಬಲಾನ್ವಿತ ಭಟರ
ನಮ್ಮಾ| ಬಲವ ನೆತ್ತಿದ ವೀರರಾರೆಮ್ಮಯ ಸಹೋದರನ || ಉಳುಹಿದವರಾರೆನಗಸಾ
ಧ್ಯವು| ಸಲೆ ವಿಚಾರಿಸೆ ನಿನಗೆ ನಿನ್ನಿಂದೊ | ಳಲೆ ಜಗದಲಿ ವೀರರೆಂದುಪಚರಿಸಿದನು
ರಾಮ || ೩೩ || ಅವಧರಿಸು ರಾಘವೇಂದ್ರ, ಲೋಕ| ವ್ಯವಹರಣೆಗಿದು ಸೇವೆಯೆಂಬುದು|
ಭುವನದಲಿ ಕರಕಷ್ಟ ದೇವರಿಗೆಂದ ಮಾತಲ್ಲ || ಜವನ ಗೆಲಬಹುದಾ ಲಯಾಗ್ನಿಯ
ತವಿಸ ಬಹುದಾ ಪ್ರಳಯರುದ್ರನ| ಬವರ ಕಾಣಲುಬಹುದು ಸೇವಿಸಬಾರ ದಕಟೆಂದ ||
ಗರಳವನು ಕುಡಿದಕ್ಕಿಸಲು ಬಹು ದುರಿಯನಪ್ಪಲಿ ಬಹುದು ಮಾರಿಯ | ಸಿಂಹ
ವಾಡಲಿ ಬಹುದು ಚುಂಬಿಸಬಹುದು ಫಣಿಮುಖವ|| ಹರಿಯ ನಪ್ಪಲಿಬಹುದು ಸೀಳುವ||
ಗರಗಸಕೆ ಕೊರಳೊಡ್ಡ ಬಹುದು| ಚ್ಚರಿಸಬಾರದು ಸೇವೆಯೆಂಬುದ ನೆಂದನಾ ಹನುಮ||
ಮಾನಭಂಗವ ಮಾಡುವುದು ನೆರೆ| ಹೀನವೃತ್ತಿಯ ಬಳಸುವುದು ದು| ಮ್ಮಾನದಾಗಲ
ವೆನಿಸುವುದು ತನುವಿರಲು ಮೃತ್ಯುಮುಖವ || ಜ್ಞಾನಗೊಳಿಸುವುದಿತರ ಜನಕಭಿ| ಮಾನ
ಗೇಡುಗನೆನಿಸುವುದ ರಸ | ಸೂನು ಚಿತ್ತೈಸರಸು ಸೇವೆಗಳೆಂದನಾ ಹನುಮ || ೩೬ ||
ಸೇವೆ ಸಾವಿನ ಸಂಗಡದ ಮನೆ| ಸೇವೆ ದುಷ್ಟಾಚಾರದಾಗರ | ಸೇವೆ ಸತ್ಯವನೊತ್ತಿ
ಯಾಳುವ ಸತ್ಯದಾಗರವು || ಸೇವೆ ಯವಮಾನಕೆ ಚಾವಡಿ | ಸೇವೆ ಪಾಪದ ಪುಂಜ
ವಿದ್ದುದು| ಸೇವೆಯಿಂದತಿ ಕಷ್ಟವಿನ್ನೊಂದಿಲ್ಲ ರಘುನಾಥ || ೩೭ || ಸಾವುದೇ ಸುಖ
ಸೇವೆಗಿಂದವೆ| ಜೀವವನು ಸಲಹುವದರಿಂ ದೆನ| ಲಾ ವಿಭಾಕರಕುಲಜ ನತಿಕರುಣದಲಿ
ಕೈನೀಡಿ || ಪಾವಮಾನಿಯ ಬರಸೆಳೆದು ಸಂ| ಭಾವನೋಕ್ತಿಗಳಿಂದ ಜಾಂಬವ |
ದೇವ ಹೊಗಳಲು ತೆಗೆದು ಬಿಗಿಯಪ್ಪಿದನು ಸ್ನೇಹದಲಿ || ೩೮ || ಮಗನೆ ನೀ ಸೇವಕನೆ
ಸೇವೆಯ| ಸೊಗಸಕೊಂಬವರಾವ ಮಾತಿದು | ನಿಗರನಿನಗೆಲ್ಲೆಮ್ಮ ಹೃದ್ಗತ ಮರುತ
ನೀನೀಗ || ಜಗದೊಳಗೆ ನಿನ್ನಿಂದ ಪೂಜ್ಯರು | ಬಗೆಯಲುಂಟೇ ಕಂದ ಹೇಳೆಂ| ದಗ
ಲದಾ ಮೋಹವನು ಮರಳಿಚಿ ತಂದನಾ ರಾಮ ||೩೯|| ತೆಗೆದ ಲಜ್ಜೆಯ ಲಸುರಪತಿ ನಿಜ|
ನಗರಕಭಿಮುಖನಾದ ನಿತ್ತಲು | ಗಗನ ದಮರಿಯ ರೊಲಿದು ಸಂತೋಷದಲಿ ಸಂಪಿ

ಗೆಯು ॥ ಮುಗುಳು ಸುರಿದರು ಮೊರೆವ ಸುರಭೇ। ರಿಗಳ ರವದಲಿ ರಾಯ ತೊರವೆಯ।
ನಗರದಧಿಪತಿ ವೀರ ನರಕೇಸರಿಯು ಕಟಕದಲಿ ॥ ।೪೦॥

ನಲವತ್ತೆಂಟನೆಯ ಸಂಧಿ ಸಮಾಪ್ತವು.

ನಲವತ್ತೊಂಭತ್ತನೆಯ ಸಂಧಿ.

ಸೂಚನೆ॥ ರಾಯ ರಘುರಾಜೇಂದ್ರ ನಿರ್ಜರ । ರಾಯ ರಥದಲಿ ಹಳಚಿದನು ಖಳ ।
ರಾಯ ರಾವಣನೊಡನೆ ಸಕಲ ಸುರೌಘ ನಲಿವಾಡೆ ॥

ಪದ್ಯ॥ ಎಲೆ ಕುಶಾನುಜ ಕೇಳು ಕುಶಕೇ । ಳಿಕೆದ ಲಜ್ಜೆಯ ಲಸುರಪತಿ ನಿಜ । ಲಲನೆಯನು ಬೋಳೈಸಿ ರಿಪುವಿಜಯ ಪ್ರತಾಪಕದ ॥ ಛಲಪದೋಕ್ತಿಯ ನುಸುರಿ ರಜನಿಯ । ಕಳೆದು ರಣದೀಕ್ಷೆಯನು ಕೈಕೊಂ । ಡಳಿದುಳಿದ ಬಲಸಹಿತ ನಡೆಗೊಂಡನು ರಣಾಂಗಣಕೆ ॥೧॥ ಬಿರುದಿನಬ್ಬರ ಗಹಳೆಗರೆದವು । ನರಪತಿಯ ನಬ್ಬರಿಸಿದವು ಕಾ । ಹುರದ ಕದನವನೊಲದು ಕೆಣಕುವ ಭೂರಿ ಭೇರಿಗಳ ॥ ತುರಗ ಕುಣಿದವು ಕುಬು ಬಿರಿದ ನಿಳೆ । ಬಿರಿಯೆ ಸಾರಥಿ ಬಿಲ್ಲ ಜೋಕೆಯ । ಸರಳ ಸೌರಂಭದಲಿ ಖಳ ನೊಕ್ಕನು ರಣಾಂಗಣವ ॥ ೨ ॥ ಅರಿಯ ಬರವನ ಕಾಣುತುರು ಸಂ । ಗರ ಧುರೀಣ ಧನುರ್ಧರನು ರಣ । ಕುರವಣಿಸ ಕಪಿಭಟರ ಕೈಸನ್ನೆಯಲಿ ಸಂತೈಸಿ ॥ ಧುರಕೆ ನಾವಿನ್ನುತ್ತರಸ್ಥಿತಿ । ಗರಸಲಾ ದಶಶಿರನು ಧರ್ಮದ । ನಿರತರಾವೈಸಿನ್ನು ಗಾವಳಿಬೇಡ ನಿಮಗೆಂದ ॥ ೩ ॥ ಎಂದು ಪೀತ ಪಟಾಗ್ರವನು ರಣ । ಗಂಡಮಿಗೆ ಬಿಗಿದುಟ್ಟು ಕೈಯಲಿ । ಸಂಧಿಸುತ ಶಿಂಜಿನಿಯ ಸಿಶಿತಾಕ್ಷದಿಯ ಬಾಣದಿಯ ॥ ಕಂಬಕೇರಿಸಿ ಹರದ ಜಡೆಗಳ । ನೊಂದುಗೂಡಿ ನಿಜಾಗ್ರ ವಾರಿ । ದ್ವಂದ್ವದಿಂ ಚಾಪವನು ಧನಿದೋರಿದನು ರಘುನಾಥ ॥ ೪ ॥ ಬಿಸುಟು ಭಯವನು ಬಳಿಕ ದೇವ । ಪ್ರಸರದಿವ್ಯ ವಿಮಾನ ವೀಧಿಯ । ಲೆಸೆದುದೈ ಗಗನದಲಿ ಶಕ್ತಿ ಶರಾಸನಂಗಳಲಿ ॥ ನಿಶಿತ ಶಸ್ತ್ರಂಗಳಲಿ ರಣ ಕ । ರ್ಕಶ ಪರಿಗ್ರಹ ನಿಕರದಲಿ ಯಮ । ಪಶುಪತಿ ಬ್ರಂಹ್ಮಾಮರೇಂದ್ರಾದ್ಯಖಿಳ ಸುರನಿಕರ ।೫॥ ಸನಕ ನಾರದ ಭೃಗು ಪರಾಶರ । ಮುನಿ ಭರಧ್ವಾಜ ತ್ರಿಜಟಿ ಜಯ । ಮುನಿ ಮರೀಚಿ ಮತಂಗ ಮೈತ್ರಾವರುಣಿ ಮೊದಲಾದ ॥ ಮುನಿಗಳಭ್ರವ ತೀವಿನಿಂದುದು । ಮನು ಪುರೂರವ ಮಿಕ್ಕ ಷೋಡಶ । ಜನಪರೈದಿದ ರೀಕ್ಷಿಸಲು ನೃಪ ರಾಕ್ಷಸರ ರಣವ ॥ ೬ ॥ ಕೈಕಸೇ ದಿತಿ ಸೂನುಗಳು ನಾ । ಯಕರು ನಾಕಜರಡರಿದರು ಪು । ಷ್ಪಕ ರಥಾಶ್ವ ಸುವಾಹನಂಗಳ ಲೆಸೆದರಭ್ರದಲಿ ॥ ಪ್ರಕಟಿಸಿತು ಬಳಿಕಿತ್ತ ಸಮರೋ । ದ್ಯುಕುತ ಸಾಹಸ ರಬ್ಬರಣೆ ನೋ । ಟಕರ ಕಳಕಳವಡಗಿಸಿತು ಮೇಲುದಧಿ ಘೋಷದಲಿ ॥ ೭ ॥ ಖುರದ ಕುಣಿಹದ ಕಿಚಿದ ಪಣ್ಣಳ । ದರಳ್ದ ನಾಸಾಪುಟದ ನಲಿದು । ಪ್ಪರಿಸಿ ದಾನವ ದೊಸರ್ವ ನೊರೆಯಲಿ ಘಣಘಣಾ ಧ್ವನಿಯ ॥ ತುರಗ ತುಡಿಗಾಲಿನಲಿ ಮಿಗು ಖೊ । ಪ್ಪರಿಸಿ ನೆಲನನು ನಿಗುರಿ ರಾಮನ । ಸರಿಸದಲಿ ಸಡಗರಿಸಿದವು ಕಡುಹಿನಲಿ ಕಣನೊಳಗೆ ॥ ೮ ॥ ಘುಡಿಘುಡಿಸಿ ಹನುಮಂತ ನಥರವ । ನೊಡೆಯಗಿದು ಮಲೆತಿರ್ದನಾ ಗಡ । ಬಡೆಯ ತೇರಿನ ತುರಗದಿದಿರಲಿ ನೀಲ ನಾಲಿಜರು ॥ ತಡೆದ ತನಕದಲಿರ್ದರೆಡೆಯಲಿ । ಕಡಿದು ಬಿಸುಡುವೆ ರಥವ ನೆಂದವ ।

ಗಡೆಯು ಲಕ್ಷ್ಮಣ ನಿರ್ದನೆಂಬನು ಹೂಡಿ ಬಿಲ್ಲಿನಲಿ ॥ ೯ ॥ ಕಂಡನಿವ ರನುಮಾನ
ಚೇಷ್ಟೆಯ । ದಂಡಿಯನು ಸಾಕು ಭ್ರಮಿಸದಿರಿ । ಕಂಡಿರೈಶ್ವರ್ಯಕೆ ಪರಿಣಾಮಿಸುವು
ದುಚಿತವಲೆ ॥ ಖಂಡಿತಾಕ್ಷೋಪಾಲ ವೈಭವ । ಮಂಡನರು ನಾವ್ ಹೊತ್ತಿಗೇಪದ ।
ಪಂಡಿತತ್ವವೆ ಸಾಕು ಸಮರವನೋಡಿ ನೀವೆಂದ ॥೧೦॥ ಅರಿಯರೇ ದೇವತೆಗಳಾ ನೇ ।
ಸರಿನ ವಂಶನನಾದಿ ಪುರುಷನು । ಮೆರೆದನೆಂಬುದ ನಂಜಿಕೆಯ ದೇಕಿನ್ನು ನಮಗೆನುತ ॥
ಹೊರಿಸಿ ಕರ ಸಂಘಟವ ನೊಸಲಿನ । ಲೊರಲದೊಯ್ಯನೆ ಮಧುರ ವಚನದಿ । ನುರಿಸುವ
ವೊಲಿಂದ್ರಂಗೆ ಬಿನ್ನಹವಮಾಡಿತಮರಗಣ ॥ ೧೧ ॥ ದೇವರಿರವನು ನೋಡು ಪದ ರಾ ।
ಜೀವವೇ ಸಂಚರಿಸುತದೆ ರವಿಕುಳದ ಮಧ್ಯದಲಿ ॥ ರಾವಣನ ನೋಡುರು ವರೂಥದ ।
ರಾವ ಸಮರ ಪ್ರೌಢಿಯನು ನಿಮ । ಗಾವು ದುಚಿತಪ್ರೀಯವಿದು ಹರಿಗೆಂದುದಮರಗಣ ॥
ಕೇಳಿದನು ಬಳಿಕಿಂದ್ರ ನೊಯ್ಯನೆ । ಮೌಳಿಯನು ಮಣಿದಬುಜ ಸಂಭವ । ಶೂಲಿಗಳಿ
ಗಿವರನುಮತಾನುಜ್ಞೆಯಲಿ ನಿಜರಥವ ॥ ಮೇಳವಿಸಿ ಮಾತಲಿಯ ಕರೆದು ನೃ । ಪಾಲ
ಚೂಡಾಮಣಿಗೆ ರಜನಿಯ । ಶೂಲ ಶೂಲಾಗ್ರಣಿಗೆ ಸಾರಥಿಯಾಗು ಹೋಗೆಂದ ॥೧೩॥
ಇದಕೊ ಶಾರ್ಙಮಹಾ ಶರಾಸನ । ಯಿದನು ಕೊಡು ಕೊಳಮೃತ ಕಲಶವ । ಕುದುರೆ
ಗಳಿ ಗೆರೆನೊಂದಡೆಂದಮರೇಂದ್ರ ಮಾತಲಿಯ ॥ ಕದನ ಕರ್ಕಶ ಭೈರವನರಿವು ।
ಹೃದಯ ವಿದಳನ ಭೈರವನ ದಶ । ವದನ ರಣಭೈರವನುಬಳಿಗಾ ಗಿಂದ್ರ ಬೀಳ್ಕೊಟ್ಟ ॥
ಪಳಹರವ ಘಂಟಾರವದ ಪಡಿ । ತಳದ ಕದಳಿಕೆಗಳ ಸುಮುಕ್ತಾ । ಫಲದ ಪಲ್ಲವ ಸತ್ತಿ
ಗೆಯ ಮಣಿಖಚಿತ ಕಾಂಚನದ ॥ ಹೊಳೆವ ಚಕ್ರದ ಚಿತ್ರಕೃತಿಯ ಚಾ । ಪಳದ
ತೇಜಿಯ ಹೇಷಿತದ ಹೆ । ಕ್ಕಳದ ದಿವ್ಯ ವರೂಥ ಹೊಳೆಹೊಳೆದಿಳಿದು ದಿಳೆಗಾಗಿ ॥೧೪॥
ನಿಗುರಿದಶ್ವದ ಖುರಪುಟದ ಉರೆ । ನೆಗೆದ ಧೂಳಿಯ ಶಕ್ರಸೂತನ । ಹೊಗಳಿಕೆಯ
ಭಪ್ಪುರಣೆಯಬ್ಬರದಶ್ವ ರಘುಪತಿಯ ॥ ಮೊಗದ ಮುಂಭಾಗದಲಿ ನರ್ತಿಸಿ । ಹಗೆಯ
ಹರಿಬದ ಕಣನ ಗೆಲಿದವು । ತೆಗೆದು ನಿಂದುದು ತೇರು ನಭುಭಯದಲಿ ದಶಾನನನ ॥೧೬॥
ಅಣದು ಸಿಜ್ಜಣದಿಂದ ತುರಗವ । ಕುಣಿಸಿ ಸೂತಾಭ್ಯಾಸ ರಚನೆಯ । ರಣಿಯ ಮೆರೆದಿಳಿ
ಗವನಿಗಸುರಾರಾತಿಯ ಂಘ್ರಿಯಲಿ ॥ ಮಣಿದ ಮೌಳಿಯನಮರ ವಂಶಾ । ಗ್ರಣಿಯ
ಸೇವೆಯ ಚಿತ್ತವಿಸು ಸುರ । ಗಣದ ಬಿನ್ನಹವಿದು ವರೂಥಕೆ ಬಿಜಯಮಾಡೆಂದ॥೧೭॥
ಇಂದು ಪರಿಯಂತರವು ಸಮರ । ಸ್ಯಂದನದ ಸತ್ವದಲಿ ರಿಪುಗಳ । ಕೊಂದುದಿಲ್ಲೀನೆಲೆಗೆ
ಹಂಗೇಕಮರವಲ್ಲಭನ ॥ ಬಂದುದೆಲೆ ಸುರಸೂತ ಕೇಳು । ಪುರಂದರನ ಪುರುಷಾರ್ಥವಾ
ಸಂ। ಕ್ರಂದನನ ಮೆಚ್ಚಿಸುವೆ ನಾಜಿಯ ಲಂಘ್ರಿಚರಣದಲಿ ॥ ೧೮ ॥ ತಿರುಗು ನೀನಲ್ಲಿ
ನೊಡೆ ಕೆಲಸಾ । ರರು ಮದೀಯ ಮಹಾರಣವ ವಿ । ಸ್ತರಿಸಿ ಬಳಿಕಮರರಿಗೆ ಹೇಳಲೆ
ಸೂತ ನೀನೆನುತ ॥ ತಿರುವನ ದ್ವಕೆ ನೀವಿ ಕೊಪ್ಪಿನ । ಕೊರಳ ನಾರೈದಿಷುಧಿಯ ಬಲು।
ಸರಳ ಕೀಳುವ ಸಮಯದಲಿ ನಾರದನು ನಡೆತಂದ ॥ ೧೯ ॥ ಎಲೆ ನೃಪೋತ್ತಮ ಚಿತ್ತ
ವಿಸು ಹರ । ನಳಿನಭವ ಹರಶಿಖಿ ಯಮಾದ್ಯರು । ಬಳಿಗೆ ಬೀಳ್ಕೊಟ್ಟರು ಬಲೋತ್ಕರ
ದಲ್ಲಿ ನಿಮ್ಮಡಿಯ ॥ ಕಳುಹಿ ದಿವ್ಯಸ್ಯಂದನದ ರರಿ । ದಳವ ಮುರಿದರೆ ನೋಡುವೆವು
ಹಗೆ । ಯಳಿವ ನಲ್ಲಿದೊಡೊಲ್ಲೆವೆಂದರು ಹದನನೇನೆಂದ ॥ ೨೦ ॥ ನೋಡಿ ಮಾಡುವ
ದೇನು ನೋಡದೆ । ಮಾಡದಪಕೃತವೇನು ಗೆಲವಿನ । ಪಾಡು ನಮ್ಮನು ನೆಮ್ಮಪ್ರದಿ

ಕರ್ತವ್ಯವೇನೆಮಗೆ ॥ ಕಾಡದಿರಿ ಸೀವೆನೆ ವಿಭೀಷಣ । ಬೇಡಿಕೊಂಡನು ಚರಣಯುಗ
ಳಗೆ । ನೀಡಿದರು ಮಸ್ತಕವ ಸಿನಸುತ ಜಾಂಬವಾದಿಗಳು ॥೨೧॥ ಐಸೆ ಮತ್ತೇನೆಮಗೆ
ಪರಬಲ । ದಾಸೆಯಲಿ ಗೆಲವಾದಡಾಗಲಿ । ವಾಸಿಯೇಕೆನುತೇರಿದನು ಸುರರುಲಿಯೆ
ಘನರಥವ ॥ ಆ ಸವಿಾರಜನುಬ್ಬಿ ಬೊಬ್ಬಿರಿ । ದಾಸುರಸ್ಯಂದನವ ರತ್ನ ವಿ । ಲಾಸ
ದಮಲಧ್ವಜದ ಹಲಗೆಯಮೇಲೆ ಮಂಡಿಸಿದ ॥೨೨॥ ಧುರಕೆ ನಮಿಸಿ ರಘುಕ್ಷಿತೀಶನ ।
ಚರಣಕಾನತನಾಗಿ ರಥಕು । ಪ್ಪರಿಸಿ ವಾಜಿಯುಕೊಂಡು ಹಯಕಂಧರವ ಭೋಳೈಸಿ ॥
ಅರಿಯ ಸೂತನ ಮೂದಲಿಸಿ ಚ । ಪ್ಪರಿಸಿದನು ವಾಘೆಗಳ ಮಾತಲಿ । ಸುರರು ಕುಸು
ಮಾಂಜಲಿಗೆದರೆ ಕೆದರಿದವು ಹಯನಿಕರ ॥ ೨೩ ॥ ಮೊಳಗಿದವು ನಿಸ್ಸಾಳತತಿ ದಿಗು ।
ವಳಯ ಘುಮ್ಮೆಡಲಭ್ರದಮರರ । ಲಿಳಿಬಿರಿಯೆ ಲೊದಿರಿದವು ಭೇರಿಗಳಸುರ ಸೇನೆ
ಯಲಿ ॥ ಖಳ ಸುರೋತ್ತಮ ಸಾರಥಿಗ ಳಿ । ಕ್ಕಲಿಸೆ ನೆಲನಾಯೆಂದು ತುರಗಾ । ವಳಿಯ
ಬಿಟ್ಟರು ಪಡಿಮುಖಕೆ ರಾಘವ ದಶಾನನರ ॥೨೪॥ ಮನದ ಮತ್ಸರ ಕೋಪದುಬ್ಬಿನ ।
ಮೊನೆಯಲುದುರುವ ಕಿಡಿಯ ಕುಡುಹಿನ । ಕೊನರು ವಾಯತಿಕೆಗಳ ಬೀರಾಳಾಪ
ದುಬ್ಬರದ ॥ ಘನ ಪರಾಕ್ರಮದಭಿನಯದ ಸಂ । ಜನಿತ ವೈರದಲ ಬ್ಬಿ ಬೊಬ್ಬಿರಿ ।
ದನಿಮಿಷಾಸುರನಿಕರ ಹೊಗಳಲು ಕೆದರಿದನು ಕಣೆಯ ॥೨೫॥ ರಣಗಲಿಗಳಿಬ್ಬರ ಮಹಾ
ಮಾ । ರ್ಗಣ ಕದಂಬದ ನೈಗೆಯಲಿ ಧಾ । ರುಣಿಗೆ ಝುಡಿದುದು ತಿವಿಾರಶರ ಭೀಂ
ಕೃತಿಯ ಶಬ್ದದಲಿ ॥ ಹಣಿಗೆ ಬೇಸರು ದೋರೆ ರಾಜಸ । ಗುಣದ ವಿಭುಕರ್ಣದಲಿ
ಬೆರಳಿನ । ಜೆಣೆಯ ನಿಕ್ಕಿದ ಲೊದರಿದವು ಪ್ರತಿಸಬುದವಬುಧಿಯಲಿ ॥೨೬॥ ಚಂಡಬಲ
ರಿಬ್ಬರ ಮಹಾ ಕೋ । ದಂಡ ವಿದ್ದುದು ಖರಮರೀಚಿಯ । ಮಂಡಲಾಕಾರದಲಿ ಶತ
ಕಿರಣಂಗಳಂದದಲಿ ॥ ಚಂಡಿಸಿರ್ದವು ಬಾಗಿದೊಡಲಿನ । ಮಂಡೆಗಳ ಬಿಡುದಿಟ್ಟೆಗಳ
ಹುರಿ । ಗೊಂಡ ಹೊಸ ಹೊಗರುಗಳ ಸುಭಟರು ಸಮರ ಕೇಳಿಯಲಿ ॥ ೨೭ ॥ ಆಯೆನಂ
ತಸುರರುಬ್ಬುವರು ರಘು । ರಾಯ ನೆಸುಗೆಗೆ ಘೂತುರೇ ಮುರ್ಝು । ಮಾಯೆಯೆಂದಬ್ಬರಿ
ಸುವರು ಖಳನೆಸುಗೆಗಸುರಗಣ ॥ ಹೋಯಿತೀಪರಿ ದಿವಸನಂದು ಥ । ಡಾಯ ವಾದುದು
ಮರುದಿವಸ ಬಲು । ಸಾಯಕದ ಸಂಗ್ರಾಮ ಹೊಗಳೆ ಸುರಾಸುರವ್ರಾತ ॥೨೮॥ ಮೂರ
ನೆಯ ದಿವಸದಲಿ ತರಣಿಯ । ತೋರಿಕೆಯಲಿ ಭಟೋತ್ತಮರು ಕಣ । ನೇರಿ ಕಾದಿದ
ರಡಗೆ ಸೂರ್ಯನ ಬಿಂಬವಬುಧಿಯಲಿ ॥ ತೋರಲರಿಯದ ತಾಮಸಿಯ ಕಾ । ಲೂರಿಕೆಯ
ಕಾಣಿಕೆಯ ಲೊಪಗಿದ । ರಾಸಿಲೋಷ್ಣದ್ವಾದಶಾತ್ಮನ ಪದಪರಿಶ್ರಮದ ॥೨೯॥ ಕುಶನೆ
ಕೇಳ್ಕೈದನೆಂಬದಿನ ಭಾ । ರಿಸಿದ ಬಿಂಕದಬವರ ಕಿಡಿಬಿಡಿ । ಮುಸಗೆ ಕಣೆಕಣೆಗಳಲಿ ನೆಲೆ
ಕೀಲಿಸಿದ ನಂಬರವ ॥ ವಿಶಿಖ ವಿಹರಣ ದುಬ್ಬರಕೆ ದಿ । ಗ್ವಿಸರ ಹೊಗದವು ಹರಿ
ಹಯಾದಿಗ । ಳುಸುರುಗಳು ಪಲ್ಲಟಿಕೆ ನಿಂದವು ಲವನೆ ಕೇಳೆಂದ ॥೩೦॥ ರಣಭಯಂಕರ
ನಹಿತಬಲ ಮಾ । ರ್ಗಣದ ಶಿಖಿಮುಖ ಕಾಣಲಾರದೆ । ಮುಣುಗಿದನು ಬಿಸುಟಂಬರವ
ನಂಬುಧಿಯ ಮಧ್ಯದಲಿ ॥ ದಣಿದು ಸಲಿಲದ ಶೈತ್ಯದಲಿ ನೈ । ಮಣಿದು ಮೂಡಲ
ಕಡಲ ವಡಬನ । ಹಣಿಯಮೇಲೊಪ್ಪಿದನು ರವಿಯಾರನೆಯ ದಿವಸದಲಿ ॥ ೩೧ ॥
ನಡೆದುದಾದಿವಸದಲಿ ಸಿಡಿಲೊಲು । ಶಿಡಿಲು ಸೀವರಿಸುವವೊಲೆಸುಗೆಯ । ಲಿಡಿಯ
ಬಬುಜಭಸಾಂಡ ಮಂಡಲ ಯುದ್ಧ ಖಾಂಡದಲಿ ॥ ವ್ಯಡನವೀರ ಝಟಾಂಧಕನ ಬಲು ।

ಗಡಿಯು ಬವರಕೆ ಕುಶನೆ ಕೇಳೆಂ । ಮಡಿಯೆನಲು ಸಂಗ್ರಾಮ ತಲೆದೂಗಿಸಿತು ಸುರ ಗಣವ ॥೩೨॥ ವೀರ ರಾಮನ ಬಾಣ ವರುಷಾ । ಸಾರದಲಿ ನೆನೆದಸುರಪತಿ ಕೈ । ಹಾರ ಖಡುಗವಾಂತುಗೆ ಕೈಯೊಡನುಬ್ಬಿ ಬೊಬ್ಬಿರಿದು ॥ ಭಾರಿ ಭುಜದಂಡದಲಿ ನೆಗಹಿದ । ನಾರುಭಟೆಯಲಿ ಸುರರು ಬೆದರೆ ಪು । ರಾರಿದತ್ತ ಮಹೋಗ್ರ ಶಕ್ತಿಯ ನಧಿಕ ರೋಷ ದಲಿ ॥೩೩॥ ಮೂರುಜಗದತಿ ಬಲರೊಳೋಲೆಯು । ಕಾರನಲಾ ದಶವದನ ಹೊರೆ। ಯೇರಿ ಹೊಗರುಗಳ ತಳಪವ ಹೊಂದರುಗಳ ಹೊಳಹುಗಳ ॥ ಮೂರಲಗು ತೆತ್ತಿಸಿದ ಶೂಲವ। ನಾರುಸಾವಿರ ಸೂರ್ಯಕಿರಣದ । ಕೋರಿಕೆಯ ಕೈದುವನು ಕೈಯೊಡನೆತ್ತಿ ಬೊಬ್ಬಿರಿದ ॥೩೪॥ ಮೆರೆದು ಸುರಪನ ಹಸ್ತದಲಿ । ಉರಗನ ಗಂಧಾಕ್ಷತೆಯ ಬಲು ಸರಿಯ ರಕ್ತದ್ರವದ ನರಮಾಂಸೋಪಹಾಂಕದ ॥ ಜರೆದು ಕಲ್ಪಾನಲನ ನಾಲಿಗೆ । ಗುರುಬಿನಲಿ ಗುಮ್ಮುವ ಕಳಂಬದ । ಗುರುಬಿನಲಿ ಘೋರ್ಗರೆವ ಶೂಲ ಮಹೋಗ್ರ ತೇಜದಲಿ ॥ ೩೫ ॥ ರಾಮ ಕೇಳೀ ಮೂರು ಮುಖ ಕಜ। ಸೋಮಶೇಖರ ವಿಷ್ಣುಗಳ ಲಯ। ನಾಮ ನಿರ್ಣಯದವು ಕಣಾ ಗುಣ ಮತ್ತೆ ಬೇರುಂಟೆ ॥ ಈ ಮನುಜ ಮಹೋ ರಗಾಸುರ। ಭೂಮಿ ಭಂಜನದವು ಕಣಾ ಹೊರ । ಗೋಮದೀಯ ಮಹಾಸುಭಾಷಿತ ಕೊಳಗು ನೀನೆಂದ ॥ ೩೬ ॥ ಇದುಕಣಾ ಹೋಮಾಗ್ನಿಮಧ್ಯದ । ಉದಿಸಿದಾಯುಧ ಮುಖದ ಶಿಖಿ ತವ। ಹೃದಯ ದಃಮಿಃಷ ಹವಿಗೆ ಹದರಿಕ್ಕಿದುದು ನೋಡೆನುತ॥ ಹೊದರು ಗೈಗಳಲೆತ್ತಿ ಲಾವಣಿ। ಸಿದನು ಸೀತೆಗೆ ಹೇಳು ಹೇಳುವೆ । ನುದಿಸಿದಡೆ ಮಾತುಗಳು ಭಯಬೇಡೆಂದ ನಸುರೇಂದ್ರ ॥೩೭॥ ಶೂಲವನು ನಭಕಿಟ್ಟು ಬಾಹಾ। ಸ್ಫಾಲನಂ ಗೈದೊ ದರಿ ತಿರುಗುವ। ಶೂಲವನು ಹಿಡಿದಬ್ಬರಿಸಿ ಮಗುಳಭ್ರಮಂಡಲಕೆ ॥ ಜ್ವಾಲೆ ಥಳ್ಳಿಸ ಲೆಂದು ಬೊಬ್ಬೆಯ । ತಾಳಿ ಪುನರಪಿ ಹಿಡಿದು ಮಗುಳಿಸು । ರಾಳಿ ಬೆದರಲಿ ಕಟ್ಟು ಬಲುಗೈಗಳನು ಪಂಟಿಸಿದ ॥೩೮॥ ಎಲೆಲೆ ರಾಘವ ಕೇಳು ಸೋಲದ। ಸುಲಭ ನಿನಗಿಂದಿ ನಲಿ ಮುಂದಣ । ಗೆಲವ ನೋಡುವದಿಲ್ಲ ನಿನಗಿನ್ನೀ ಸಮಸ್ತಜಲ ॥ ಉಳಿವುದೆಂಬು ದಸಾಧ್ಯವೆನ್ನಯ । ಬಲುಹನಾರಲಿ ಮೆರೆವೆ ನೆಂಬು। ಮ್ಮಳಿಕೆ ತೋರಿದೆ ಬಿಡಲೋ ಜೇಡವೊ ಹೇಳು ಜೇಗೆಂದ ॥೩೮॥ ಕಾಯಲಾಪವರಿಲ್ಲ ಬೊಮ್ಮನು। ಬಾಯದೆಗೆಯಲಿ ನುಡಿಯಲೀಶನು। ನಾಯಿಗಳ ಹೇಳದಿರು ಹೇಡಿಗಳುಳಿದ ಸುರನಿಕರ ॥ ಕಾಯ ಬಲ್ಲವ ನೊಬ್ಬನೇ ತಾ। ನಾಯುವನು ನೀಗಾಡಿದರು ನಿ। ರ್ದಾಯದಲಿ ನುಡಿ ಬೇಗ ಭಯಬೇಡೆಂದ ನಸುರೇಂದ್ರ ॥ ಖಳರೊಳಗೆ ಬಾಯ್ ಬಡುಕನಹೆ ತಲೆ। ಗಳಿಗೆ ನಾಲಗೆ ಹತ್ತಲಾ ಧಿಟ। ಗಳಹುವಡೆ ಬಲ್ಲಿದನು ನಮಗೀಪರಿಯ ಮಾತುಗಳು ॥ ಸುಳಿಯ ಲರಿಯವು ನಾಲಿಗೆಗೆ ವೆ। ಗ್ಗಳ ಬಲಾನ್ವಿತರೊಳಗೆ ದುರ್ಬಲ। ರಳುಕುವರು ಕಕ್ಕುಲಿತೆ ನಿನಗಿಲ್ಲೆ ಸುಗು ಜೇಗೆಂದ ॥೪೧॥ ಆದಡಿದಕೋಯೆನುತ ಕರ್ಕಶ । ಗೈದುವನು ಕೆಬ್ಬಿರಿದು ಹಾಣಿಸ। ಲಾ ದಿವಾಕರಸೂನು ನೀಲಾಂಗದ ನಳಾದಿಗಳು ॥ ಕೈದುಡುಕಲನುವಾಯ್ತು ಲಕ್ಷ್ಮಣ। ಸೇದಿದಂಬಿನೊಳಿರ್ದನಾ ಕ್ರ । ವ್ಯಾದ ವೈಷ್ಣವರಾಯ ನಾಳ್ದಂಗೆಂದನೀ ಹದನ ॥೪೨॥ ಈ ಮಹಾಯುಧ ಕಂಬ ತೊಡು ಪೈ। ತಾಮಹದ ವೈಷ್ಣವದ ಶೈವದ। ತೋಮರತ್ರಯ ಕಲ್ಲದಿದು ನಿರ್ನಾಮವಾಗದೆನೆ ॥ ರಾಮ ನದರಿಮ್ಮುನ್ನ ಹೊಡಿದ । ನಾ ಮಹಾಸ್ತ್ರಂಗಳನು ಜಗದ ಮ। ಹಾಮಹಿಮನೇ ನರಿಯನೇ ಸಂಗರದಜಯಸಿರಿಯ॥

ಎಡದ ಲನುಜನ ನಯನದಲಿ ಕೆಲ | ಕಡೆಗೆ ಸಾರಿಸಿ ಬಲದ ದೆಶೆಯಲಿ | ಜಡಿದುಪುರ್ಬಿನ ಸಲಿನಸುತಾದ್ಯರ ನಸುರ ವಲ್ಲಭನ || ಕೆಡುಹಿ ನಾಯುಧ ದತ್ತಲಿವೆಗಳ | ಮಿಡುಕಿಸದೆ ಸಂಘಸಿದ ಸರಳಿನ | ಸಡಗರದ ಸಂಗ್ರಾಮ ಲೋಲುಪನಿರ್ದ ನೊಲವಿನಲಿ ||೪೪|| ಇಟ್ಟನವ ಬಳಿಕುಬ್ಬಿ ಬೊಬ್ಬಿರಿ | ದಟ್ಟೆತುರಿ ವೈಮಾನಿಕರ ಛುಗಿ | ಲಿಟ್ಟುದಬ್ಬರವಮಮ ಚಂಡಮರೀಚಿವ ಂಡಲವ || ಕಟ್ಟೆದುದು ಕಪಿಸೇನೆಯಲಿ ಕಾ | ಲಿಟ್ಟುದುರಿ ಸ್ಯೆರಿಸುವನೇ ಜಗ | ಜಟ್ಟಿ ಮನುಕುಲ ಸಾರ್ವಭೌಮನು ಮಗನೆ ಕೇಳೆಂದ ||೪೫|| ಆವ ಚಿತ್ರ ಶರಪ್ರಯೋಗವ | ದಾವ ಹಸ್ತ ಚಮತ್ಕೃತಿಯೋ ತಾ | ನಾವ ಕೋದಂಡ ಪ್ರಚಂಡದ ಸಮರ ಪೌರುಷವೊ || ದೇವ ರಾಮನ ಬಾಣ ಮುಖದಲಿ | ಮೂವ ರವತರಿಸಿದುದ ಕಂಡೆನು | ರಾವಣನ ಕೈದುವನು ಕಾಣೆನು ಬೆರಗದೇನೆಂದ ||೪೬|| ಕಡಗಿತಾ ಮಹದಾಯುಧದ ಬೆಳ | ಗೊಡನೆ ತರಣಿಯ ಬಿಂಬ ಪಡುವಣ | ಕಡಲೊಳಗೆ ಮುಳುಗಿದುದು ಯೆಸೆದುದು ಮೂಡಣಬುಧಿಯಲಿ || ಕಡುವೆರಗಿ ನಸುರೇಂದ್ರ ಬರವನು | ಹಿಡಿದು ಹೋರಿದ ನಿನಕುಲೇಂದ್ರನ | ಬಿಡು ಸರಳ ಸಂಗರದೊಳೊಂಭತ್ತನೆಯ ದಿನಸದಲಿ ||೪೭ ಹತ್ತನೆಯದಿನ ಹರಿ ಹರಣ್ಯಕ | ರೊತ್ತಬರ ಸಾಹವಕೆ ನೂರೈ | ವತ್ತು ಮಡಿಯೆನೆ ಕಾದಿದರು ಕಳಿಯೋರಿ ಕಡುಹಿನಲಿ || ಕತ್ತಲೆಯ ಬೆಳಗುಗಳ ಬಲುದಲೆ | ಯೊತ್ತುಗಳ ದಿನವೈದು ಮುಂದಣಿ | ಗೊತ್ತಿದವು ಬಲುಹಾಯ್ತು ರಣ ಹದಿನಾರನೆಯ ದಿವಸ ||೪೮||

ನಲವತ್ತೊಂಭತ್ತನೆಯ ಸಂಧಿ ಸಮಾಪ್ತಂ.

ಐವತ್ತನೆಯ ಸಂಧಿ.

ಸೂಚನೆ|| ಸಕಲ ಜಗವಲ್ಲಾಡೆ ದಿವಿಜ | ಪ್ರಕರ ಕಂಪಿಸೆ ಕಾದಿದರು ಸಾ | ಯಕದ ಸೌರಂಭದಲಿ ರಾವಣ ರಾಮ ರಾಜಿಯಲಿ ||

ಪದ್ಯ|| ಮತ್ತೆ ಮೋಹಿದ ವೆರಡು ರಥ ಕೆಂ | ಪೊತ್ತಿ ದಿನನುದಯದಲಿ ಸೂತನ | ಹತ್ತಳದ ಕೊಯ್ಲಿನಲಿ ಹೊಳಕಿದ ವಶ್ವವೆಡಬಲಕೆ || ಒತ್ತಬರಿಸಿತು ಸುರಕದಂಬ ವಿ | ಯತ್ತಳದ ವಳಯದಲಿ ವೀರಭ | ಟೋತ್ತಮರ ಸಂಗರವ ನೋಡಲು ಕುಶನೆ ಕೇಳೆಂದ ||೧|| ಲವನೆ ಕೇಳೈ ಹನುಮನಬ್ಬರ | ದಿವಿಜ ಸೂತನ ಬೊಬ್ಬೆ ರಘು ಸಂ | ಭವನ ಚಾಪಧ್ವಾನವಾ ದಶಕಂಠನಬ್ಬರಣೆ || ಆವ ರಥ ಹಯ ಮಾತನುಬ್ಬಿನ | ರವದ ರವಳಿಗಳೊಡೆವೆರಸಿ ಸುರ | ಭುವನವನು ಜಿವರಿಸಿದವಾ ಧೃವಲೋಕ ಪರಿಯಂತ ||೨|| ಕುಣಿವ ವಿಬ್ಬರ ಕುದುರೆ ಸಮರಾಂ | ಗಣದ ಸೌರಂಭದ ಸಗಾಢವ | ಸೆಣಸುಕಾರರ ಸೂತ ಸೋಜಿಸು ಲಾಜಿರಂಗದಲಿ || ಕಣೆದುಡಕಿ ತುಬ್ಬಿರಿದು ಕಲಿ ರಾ | ವಣ ಮುಂಬರಿಯುತೆಚ್ಚನಾ ದಿನ | ಮಣಿ ಕುಲೇಂದ್ರನ ನಮುಮ ಶರಮಯವಾಗೆ ದಿಗುಜಾಲ ||೩|| ಸರಳೊ ಸಂವರ್ತದ ತಮೌಘದ | ತಿರುಳೋ ಪೇಳುವೆನೇನ ಸಿಳಿಗಾ | ಯ್ತಿರುಳು ರಕ್ಕಸರಾಯ ನೆಚ್ಚ ಶರಾಂಧಕಾರದಲಿ || ಹೊರಳಿಯೊಡೆದುದು ಸುರರು ಘಾಯದ | ಲುರುಳಿದುದು ವಾನರ ವರೂಥಿನಿ | ನರಳಿದರು ನೋಯಿಸಲಿ ಲಕ್ಷ್ಮಣ ರಾವಣಾನುಜರು |೪|| ಹೊಣದುಕೊಂಡುದು ಗಗನ ದಿಗು ಥಾ | ರುಣಿಗಳನು ಧಟ್ಟೈಸಿ ರಿಪು ನಾ |

ರ್ಗಣ ವಿತಾಳಿಸಿ ಮುಸುಕಿದುದು ರಘುನಂದನನ ರಥವ ॥ ತೃಣದುರಿಯು ತೀವ್ರತೆ ಲಯಾಗ್ನಿಯು । ಸೆಳವುದೇ ಸಮರದಲಿ ಬಳಿಕಾ । ಕ್ಷಣದೊಳರಿ ಮಾರ್ಗಣ ಕದಂಬವ ಕೆದರಿದನು ರಾಮು ॥೫॥ ಬಳಿಕ ಪೇಳುವುದೇನು ನಿಬ್ಬರ । ಚಳ ಚಮತ್ಕೃತಿ ಚಾಪದಿಂದು । ತ್ಸಳಿಸವಸ್ತ್ರದ ನಿಕರ ಮುಸುಕಿತು ಲೋಕ ಹದಿನಾಲ್ಕು ॥ ಹಳಚುವಂಬಂಬುಗಳ ಲುದಿಸುವ । ಬಿಳಪಳದ ಕಟ್ಟಲಹು ಮೂರ್ಛೆ । ಕುಳವ ನಿತ್ತವು ತರುಣಕೇಳ್ ತೆತ್ತೀಸ ದೇವರಿಗೆ ॥೬॥ ಹಳಚುವಲ ಗಲುಗಗಳ ಧಾರೆಯು । ಕುಳು ಕಿಡಿಗಳುಬ್ಬೆವು ತಾರಾ । ವಳಿಯ ನಣದವು ತಳಿತ ವಿನಮಂಡಲದ ವಳಯದಲಿ ॥ ಬಳಿಕಲಿಸಿ ಬಿಗಿದೊಗುವ ಕಾರ್ಬೊಗೆ । ಬಳಿಸಿತ ಖಜಭವಾಂಡ ಖರ್ಪರ । ದೊಳಕಡೆಯು ನೇಸಂಬೆ ನಿಬ್ಬರ ಸಮರ ಸಂಭ್ರಮವ ॥ ೭ ॥ ಬಾಣಮಯವಾಯ್ತಖಿಳ ಭುವನ । ಶ್ರೇಣಿ ಘೂವ್ಯಂಬರದ ವಿವರದ । ಕಾಣೆನಂಬುಧಿ ಹೊಳಿತಂಬಿನ ಬೆನ್ನನುಸುರುವೆನು ॥ ಸ್ಥಾಣು ಕಮಲಭವಪ್ರಮುಖ ಗೀ । ರ್ವಾಣತಗ್ಗದ ದಿವ್ಯ ಗಾತ್ರ । ತ್ರಾಣಗಳ ಧರಿಸಿದರು ನಭದಲಿ ಹುಸಿಯಲೇನೆಂದ॥೮॥ ಇಬ್ಬರೆಸಗೆಯ ಬಾಣ ಪಂಜರ । ವಬ್ಬರಿಸುತಿರ್ದುದು ಧರಾತಳ । ಗಬ್ಬರಿಸುತಿರ್ದುದು ಸುರಾಚಲವಮರಿತೆಡಬಲಕೆ ॥ ಗರ್ಬಕಲಕಿದವಮರಿಯರ ಜಗ । ದುಬ್ಬಸವು ಬಲುಹಾಯ್ತು ಬಳಲಿಕೆ । ಯೆಬ್ಬಿಸಿತು ನಿರ್ಜರ ಪುರಂಗಳ ನಜನ ಪಟ್ಟಣಕೆ ॥ ೯ ॥ ಹತ್ತುಡೇನೀ ಬಲುಹು ಭಾರಿಭ । ಟೋತ್ತಮರಲಾ ಸಮರ ಧೀದೋ । ದ್ದಾತರಲಾ ಹಿಂದುಮುಂದಣ ಯುಗದ ವೀರರಿಗೆ ॥ ಎತ್ತಬಹುದೇ ಬೆರಳನೆಂದು ವಿ । ಯತ್ತಳದಲಾ ದೇವಮುನಿ ನುಡಿ । ವೃತ್ತಲಿರ್ದನು ಹೊರದ ಹರುಷದ ಹೆಂಪಿನುಬ್ಬಿನಲಿ ॥೧೦॥ ಹೋಗಲದ ಕೇಳುಭಯ ಸುಭಟರ । ಮೇಲಲಾ ಹನವನು ಶರಾವಳಿ । ತಾಗಿ ತವೊಳು ಹಿಗಿ ಬಿನ್ನೈಸಿದವು ವೀರರಿಗೆ ॥ ಆಗವೋಕ್ತದ ದಿವ್ಯ ಮಂತ್ರದ । ಮೇಲೆ ಮೆರೆವುದು ಬರಿದೆ ಬಿಡಬೇ । ಡಾಗ ನೊಲಿವಡೆ ನೀವೆನತ ಬೊಬ್ಬಿರಿದ ವಿದ್ದೆಸೆಯ ॥೧೧॥ ಕೇಳುತಿಬ್ಬರು ಬಳಿಕ ಮಂತ್ರಶ । ರಾಳಿಗಳ ನಿಷುಧಿಗಳ ಲುಗಿದರು । ಬೋಳವಿಸಿ ಬಿಲ್ಲುಗಳ ಸಂಭಾಳಿಯಲಿ ವಂದಿಗಳ ॥ ಸೂಳುವಾತಿನ ಹೆಂಬಳಿಯಹಿ । ಯ್ಯಾಳಿಕೆಯ ಹೇರವಗಳ ಮನದು । ಬ್ಬಾಳಿನಿಂದೆಚ್ಚಾಡಿದರು ಸುರ ಗರುಡ ಸಂದೋಹ ॥೧೨॥ ದಿವಿಜರಿಪು ಕೇಳೆಲವೋ ಸರಸಿಜ । ಭವಭವಾದ್ಯರ ಬಗೆಯನೆಂಬೀ । ಹವಣ ಸಂಗೀಕರಿಸಿದೆಯಲಾ ಖೂಳರಂದದಲಿ ॥ ಧೃವವು ನಿನಗಾಯುಷ್ಯವೆಂಬು । ತ್ಸವದಿ ನಮ್ಮನು ಕಲಕಿ ಲಯ ಮೃ । ತ್ಯುವಿನ ಕೈವಶವಾದೆ ನೀನೆಂದಸರರಿಪು ನುಡಿದ॥ ಎಲವೊ ಕೇಳಿನ್ನಾದಡೆಯು ಬಿಡು । ಚಲವ ಮರೆಯೊಗುಕಾವೆ ನಿನ್ನಯ । ತಲೆಯ ತರಣಿ ಹಿಮಾಂಶು ತಾರೆಗಳಿರವು ಪರಿಯಂತ ॥ ತೊಲಗುವುದು ನಿನಗಪಯಶವು ನಿ । ರ್ಮಲನು ನೀನಹೆ ಲೋಕದಲಿ ನಿ । ನ್ನಳಬಳವದೇನೆಲವೊ ಬೇಗದಲುಸುರು ತನಗೆಂದ ॥ ೧೪ ॥ ಏಕೆ ನಿನಗೀಮಾತು ಮರಿ ನಿನ । ಗೇಕೆ ಬಲ್ಲೆವು ನಿನ್ನ ಪರಿಯನು । ಕಾಕನೇಸಾ ನಚ್ಚುಮೆಚ್ಚಿನ ಮಾತದಂತಿರಲಿ ॥ ನೂಕು ಕಣೆಗಳ ಕದನ ಮುಖವೆ । ಸಾಕು ಸಾವಿಂಗಳುಕವೆನೆ ಲೋ । ಕೈಕ ವೀರ ಕಣಾ ಕೃಪೋದಯವೇಕೆ ನಿನಗೆಂದ ॥ ಇನ್ನು ನಿನ್ನ ಶುಭಾಶುಭವು ನಾವ್ । ಮನ್ನಿಸಿದ ಶರಣಾನುಮತ ವೆಂ । ದೆನ ದಿಹುದೇ ಲೋಕವದರಿಂ ದುಳುಹಬೇಕೆಂದು ॥ ನನ್ನಿಯಲಿ ನಾವ್ ನುಡಿದೆವಿದು ತಾ । ನಿನ್ನ

ಚಿತ್ರಕೆ ಬಾರದಿರೆ ರಣ। ಸನ್ನಹಿತನಾಗೆನುತ ತೆಗದೆಚ್ಚನು ದಶಾನನನ ॥೧೬॥ ಎಚ್ಚ
ಬಾಣನ ನಮರರಿಪು ಮುರಿ। ಯೆಚ್ಚು ಹೂಡಿದನೊಡನೆ ಲಯವ। ಪ್ರಾರ್ಚಿ ಬಾಣವ
ಬೊಬ್ಬಿರಿದು ಬಿರಿತೋಡೆ ಸುರನಿಕರ ॥ ಕಿಚ್ಚು ನಿಲುಕಿತು ನಭಕೆ ರವಿ ರಥ। ದಚ್ಚು
ಪರಿಯಂತಮುರ ರುಟ್ಟುದ। ಬಿಚ್ಚಿ ಬಿಸುಟಂ ಬೀಳ್ವ ಬಂಬಲು ಗಿಡಿಯ ಧಾಳಿಯಲಿ॥
ಉರಿ ಚಡಾಳಿಸಿ ದಿಙ್ಮುಖವ ಕೊ। ಪ್ಪರಿಸಿದುದು ಕಾರ್ಬೊಗೆ ವಿತಾಳಿಸಿ। ಹೊರದು
ದಬುಜ ಭವಾಂಡದಂದದ ಕಠಿಣ ಕರ್ಪರವ ॥ ಶರಧಿಕೂಳ್ಗುದಿ ಗುದಿದು ದಿಟವೀ।
ಚರರ ಬಲ್ಲವರಾರು ಹೊಗದುದು। ಧರೆ ಧರಕಧಿಪ ನಂಜಿದನು ಧಳ್ಳುರಿಯ ಧಾಳಿಯಲಿ॥
ವೀರ ಕೇಳೈ ಬಳಿಕ ರಾವಣ। ವೀರ ಬೊಬ್ಬಿರಿದೆಚ್ಚನಾ ರಘು। ವೀರನನು ವೀರರಿಗೆ
ವೀರನಲಾ ರಘುಪ್ರಭವ ॥ ನೀರಮಯವಾಯ್ತಿಳೆ ದಿಗಂತ ಸ। ಮಾರಪದ ನಿಮ್ಮೆಯ
ನೆಸಗೆಗೆ। ವಾರುಣಾಸ್ತ್ರಕೆ ಸೇಡುಗೊಂಡುದು ಸಕಲ ಸುರನಿಕರ ॥೧೯॥ ಒಡನೆ
ಹೂಡಿದ ನಸುರಪತಿ ಕಂ। ಗೆಡೆ ಜಗತ್ರಯ ಕಲ್ಪಕಮು ದು। ಗ್ಗಡದ ಬಾಣವ ಭಾರಿಸಿತು
ಕತ್ತಲೆಯಲವನಿತಳ ॥ ಮೃಡಸರೋಜಕೆರಂಜಿ ಹುಟ್ಟಿಸ। ಲೊಡರಿಸಿದ ರಂಭೋಜ
ಪುತ್ರನು। ನಡುಗಿ ಮಾತಳಿ ಧಾತುಗೆಟ್ಟನು ಕಾಣದರಿಭಟನ ॥೨೦॥ ಸೆಳೆದು ಮೂಡಿಗೆ
ಯಿಂದ ರವಿಕುಲ। ತಿಲಕ ಹೂಡಿದ ನುಷ್ಣ ಕಿರಣಾ। ಕಲಿತ ರವಿಮಾರ್ಗಣವ ನೆರೆದವು
ಬಿಂಬ ದಿನಮಣಿಯ ॥ ತಲೆವಿಲುಗಳಿಂದಿಬ್ಬರೊಂದೇ। ಚಳಕದಲಿ ಸರಳುಗಳ ಬಿಡೆ
ಬಲು। ಗಲಹ ನಡೆದುದು ಹಗಲಿರಳು ಹೋರಟೆಗಳಭ್ರದಲಿ ॥ ೨೧ ॥ ತರಣಿ ವಂಶಜ
ರಂಬು ರಜನೀ। ಚರ ಕಳಂಬವ ಗೆಲಲು ಛಲಗಳ। ಗುಲುವ ಗಾಢಭುಜ ಪ್ರತಾನ
ಕಲಾಪ ಕೈಯೊಡನೆ ॥ ತಿರುವಿನಲಿ ನೆಲೆಗೊಳಿಸಿದನು ಭೀ। ಕರ ಯಮಾಸ್ತ್ರವ ನಮಮ
ನಿಮಿಷಕೆ। ನೆರೆದು ದಂತಕ ಕೋಟಿ ಹೊಗಿಡು ವಧಿಕರೋಷದಲಿ ॥ ೨೨ ॥ ಪ್ರಾಸ
ಪಟ್ಟಿಸ ಪಲಿಘ ಮುದ್ಗರ। ಪಾಶ ಖೇಟಕ ಖಡ್ಗಗಳು ಬಃ। ಣಾಸನಾದಿ ಸಮಸ್ತ
ಕೈದುಗಳಿಂದ ಬೊಬ್ಬಿರಿದು ॥ ವಾಸವಾದ್ಯರ ಬೆದರಿಸಲು ಭೂ। ವಿಾಶ ಬಳಿಕಾಕ್ಷಣದಿ
ಸುಗ್ರಮ। ಹೇಶ ಶರಸಂಧಾನದಲಿ ಬೊಬ್ಬಿರಿದ ನಿದಿರಿನಲಿ ॥ ೨೩ ॥ ಎಚ್ಚನವನಾ
ಕೈಯೊಡನ ತೆಗೆ। ದೆಚ್ಚ ನವನಿಪನೇನ ಹೇಳುವೆ। ನಚ್ಚರಿಯನದ ನೆರದುದೊಂದೆ
ಕೃತಾಂತ ಕೋಟಿಗಳ ॥ ಬಿಚ್ಚಿ ಬಿಸುಟದು ಭಾಳನೇತ್ರನ। ನಿಚ್ಚಟವ ನಿಶಿತಾಸ್ತ್ರ
ಬಳಿಕದೆ। ಗೆಚ್ಚಿ ತಸುರ ಕುಲೇಂದ್ರ ಹೂಡಿದ ನದ್ರಿಮಾರ್ಗಣವ ॥೨೪॥ ಆಲಿ ಬೊಬ್ಬಿರಿ
ದೆಚ್ಚನೀ ರಘು। ವೀರನನು ಮುಸುಕಿದವು ನಿರಿವೃಂ। ದಾರಕಾಧೀಶ್ವರನ ಮುಸುಕಿದ
ಶೈಲ ಕುಲದಂತೆ ॥ ಭಾರಿ ಭುಜಬಲ ನಸುರಹರ ಶತ। ಧಾರಾ ಶರದಲಿ ಧೂಳಿಗೆದಂದ।
ನಾರೆ ಕಪಿಬಲವಮರ ತತಿ ಕೊಂಡಾಡೆ ಗಗನದಲಿ ॥೨೫॥ ವಾಸಿಬಿಡದಮರೇಂದ್ರ ಜಯ
ದಭಿಲಾಷೆಯಲಿ ಭುಜಗಾಸ್ತ್ರವನು ಬಾ। ಣಾಸನಕೆ ಬರಿಸಿದನು ಬರ್ಹಿಮುಖರು ಕಳ
ವಳಿಸೆ ॥ ಕೀಶಪಡೆ ಪಡಲಿಡೆ ಬಳಿಕ್ಕವ। ನಾಸುರದಿ ಬೊಬ್ಬಿರಿದು ಸರ್ಪಾ। ಧೀಶ
ಶಯನನ ಸಮ್ಮುಖಕೆ ಸುಳಿಸಿದನು ಮಾರ್ಗಣವ ॥ ೨೬ ॥ ನೆರೆದು ದಂಬರ ವಳಯದಲಿ
ರವಿ। ಗುರವಣಿಪ ರಾಹುವಿನ ಪೊಲು ಘೂ। ತ್ಕರ ಫಣಾಳಿಯ ಕೆದರಿಕೆಯ ಚೂರಿಸುವ
ನಾಲಿಗೆಯ ॥ ಉರಿಯ ನುಗುಳುವ ಘೋರ ವಿಷ ದು। ಬ್ಬರದ ಹಾವುಗಳಾಕಿದವು ನಿ।
ಮ್ಮರಶನನು ಭುಜಗೇಂದ್ರ ಭೂಷಣ ಮುಖ್ಯ ರಳವಳಿಯೆ ॥೨೭॥ ಗಜಬಜೆಸುವನೆರಾವು

ಗರುಡ | ಧ್ವಜನಲಾ ಸ್ಮರಿಸಿದನು ವಿನುತಾ | ತ್ಮಜನ ನಂಬಿನ ನೊನೆಯುಲುಬ್ಬಿರಿದೆಚ್ಚ
ನರಿ ಶರವ ‖ ಭುಜಗತತಿ ಯೇನಾದುದೋ ಹರ | ಭುಜದ ಹಾವಿಗೆ ಹೊಂಚಿ ಹೊಳ
ಕಿದು | ದಜನ ಕೈ ಸನ್ನೆಯಲಿ ತಿರುಗಿತು ಮೂಡಿಗೆಗೆ ನೃಪನ ‖ ೨೮ ‖ ಸರಳ ಹೂಡಿದ
ನಸುರಪತಿ ಜಲ | ಧರದ ವೊಳಗಿನ ವೋಹರದೊ ಳ | ಬ್ಬರಿಸಿ ಸುಂದವು ಸಿಡಿಲ
ಪಂಗ್ತಿಗಳಭ್ರಮಂಡಲವ ‖ ಬೆರಸಿದವು ಮಿಂಚುಗಳು ಸುರಿದುದು | ವರುಷ ಧಾರಾಸಾರ
ವಗಲಕೆ | ಶಿರಗಳೆನಿತನಿತರಲಿ ಬೊಬ್ಬಿರಿದೆಚ್ಚನವನಿಪನ ‖೨೯‖ ಲಂಬಿಸಿದ ಸಂವರ್ತ
ಮೇಘಾ | ಡಂಬರದ ಡೊಂಬಿಗೆ ಸಮಾರ ಕ | ಳಂಬವನು ಕಳುಹಿದನು ಕಲಿಗಳದೇವ
ನೆಸುಗೆಯಲಿ ‖ ಎಂಬೆ ನೇನನು ಬೀಸಿದುದು ಬಳಿ | ಕಂಬರದ ವಳಯದಲಿ ಭುವನ ಕ |
ದಂಬ ಕಂಪನ ಕಲಿತ ಕಲ್ಪಾಭೀಷ್ಟ ಪವಮಾನ ‖ ೩೦ ‖ ಮುರಿದ ಮುರುವಿನವೇಲಿ
ಹೇವದ | ಹೊರಿಗೆವಾಳರ ದೇವ ಹೂಡಿದ | ನೆರಹುವಿಗೆ ಮಾರೀಚನಿತ್ತ ಮಹಾ ಸುದ
ರ್ಶನವ ‖ ಮರೆಯುದೇ ನಜ ಹರರ ಚಿತ್ತಕೆ | ಬೆರಗ ಬೀರಿತು ಬಳಿಕ ಖಳ ಬೊ |
ಬ್ಬಿರಿದು ನೆನೆದನು ತನ್ನ ಮುನ್ನಿನ ಸಕಲ ಸೈನಿಕವ ‖ ೩೧ ‖ ವೀರಕೇಳ್ಳೈ ಕುಶನೆ ನೆರೆ
ದುದು | ಭೂರಿಬಲ ಧೂಮ್ರಾಕ್ಷ ಕುಂಭ ನ | ರಾರಿ ಯುದ್ಧೋನ್ಮತ್ತ ವಿದ್ಯುಜ್ಜಿಹ್ವ
ನತಿಕಾಯ ‖ ಘೋರಬಲ ಮಕರಾಕ್ಷ ಕಲಿ ಜಂ | ಭಾರಿಜಿತು ಮಿತ್ರಘ್ನ ಮುಖ್ಯ ಮ |
ಹಾರಥರು ಸಂದಣಿಸಿದರು ಶರ ಸನ್ನಿವೇಶದಲಿ ‖೩೨‖ ಕಲಿ ನಿಕುಂಭ ತ್ರಿಶಿರ ದುರ್ಮದ|
ಕುಲಿಶ ದಂಷ್ಟ್ರ ಸುಪಾರ್ಶ್ವ ಖಳ ದೋ | ರ್ವಳ ಮಹೋದರ ವೀರ ದೇವಾಂತಕ
ವಿರೂಪಾಕ್ಷ ‖ ಪ್ರಳಯಮುಖ ದಶಮುಖ ಸಹೋದರ | ರಳವಿಗೊಂಡಬ್ಬರಿಸಿ ಚತು |
ರ್ಬಲಸಹಿತ ವೈದೈಸಿಕೊಂಡುದು ರಾಘವೇಶ್ವರನ ‖ ೩೩ ‖ ಕರಿ ಕರಡಿ ಕಾಡ್ಗೋಣ
ಸೂಕರ | ಹರಿ ಶರಭ ಶಾರ್ದೂಲ ವೃಕ ಭೀ | ಕರ ಮಹೋರಗ ಕದಳಿ ಖಡ್ಗ ಪ್ರಮುಖ
ಕೋಳ್ಮೃಗದ ‖ ನೆರವಿಗಳ ವಾಹನದ ರಜನೀ | ಚರ ಕದಂಬಕ ಕೋಟಿ ಸಂಖ್ಯೆಯ |
ಲುರವಣಿಸಿ ಕೆದರಿದುದು ಕೈಕೊಂಡಟ್ಟಿ ಕಪಿಬಲ ‖ ೩೪ ‖ ಪರಿಘ ಮುಸಲ ಮುಸುಂಡಿ
ಮುದ್ಗರ | ಪರಶು ಪಟ್ಟಿಸ ವಿಂಡಿವಾಳದ | ಲುರವಣಿಸಿ ಕೊಂಡೆಸೆಯಲಸಿ ಶಲ್ಲೆಹದ
ಭಲ್ಲೆಹದ ‖ ಶರ ಗದಾ ಚಕ್ರಾಭಿಘಾತದ | ಸುರ ವಿರೋಧಿಗಳೊಂದೆಸೆಯ ವೋ |
ಹರಿಸಿ ಮುಸುಕಿದು ದಬ್ಬರಿಸು ವಬ್ಬರದ ಹರಿಗಳಲಿ ‖೩೫‖ ಆವ ಮುಖದಲಿ ನೋಡಿ
ದಡೆ ಕಲಿ | ರಾವಣನ ರಥವಿದ್ರ್ದವನ ಶ | ರಾವ ರೋಷಾವೇಶ ವಿದ್ರ್ದದು ರಣದೊ
ಳಗಲದಲಿ ‖ ದೇವ ರಾಘವ ಕಂಡು ಶಂಕಾ | ಭಾವ ಭಾರದಲಾ ವಿಭೀಷಣ | ದೇವ
ನಾನನವನು ನಿರೀಕ್ಷಿಸಿ ಶರಣ ಗಿಂತೆಂದ ‖೩೬‖ ಏನಿದದ್ಭುತ ಹಿಂದೆ ಹೊದ್ದಿದ | ಸೇನೆ
ನೆರೆದಿದೆ ಹುಸಿಯೊ ನಮ್ಮಯ | ವಾನರರು ಕೊಂದುದು ದಶಾಸ್ಯನ ಕೋಟಿ ಹೋಮ
ವನು ‖ ಈ ನಿಶಿತ ಬಲ ಹನುಮ ನಳಿಮದು | ತಾ ನಸತ್ಯವೊ ಮೇಣು ಹರ ಚತು |
ರಾನನ ರವರವಪ್ರೋ ವಿಭೀಷಣ ಹೇಳು ತನಗೆಂದ‖೩೭‖ಎಲೆ ಜಗನ್ಮಯ ನಿನ್ನ ಮಾಯಾ|
ವಿಲಸಕಿದು ವೆಗ್ಗಳವೆ ಕೇಳುವ | ಕೆಲಸವೇಸಿದ್ದುದು ಮಹಾ ಮಾಯಾ ವಿನೋದಂಗೆ ‖
ಬಳಿಕ ನರರವೊಲೇಕೆನಲು ರಘು | ತಿಲಕ ವೈಷ್ಣವ ಮಂತ್ರಮುಖ ದ | ಗ್ಗಳದಬಾಣವ
ಹೂಡಿದನು ಕೊಂಡಾಡೆ ದೇವಗಣ ‖ ೩೮ ‖ ಏನನೆಂಬೆನು ವೈಷ್ಣವದ ಮಹಿ | ಮಾ
ನಿಸರ್ಗ ಪ್ರಭೆಯ ಶಂಖ | ಧ್ವಾನ ರು ಡಿಮದು ಹೊಳಕಿದುದು ಝಡಿತೆಯಲಿ ಚಕ್ರ

ಚಯ ॥ ಭಾನುತೇಜದ ಲಸಿಗದಾದಿ ಮ। ಹಾ ನಿಸಿತ ಶಸ್ತ್ರಾಸ್ತ್ರವಾ ವಾ। ಯಾ
ಸಿಶಾಟ ಕದಂಬಕವು ಕೆದರಿದವು ಕಡಿತದಲಿ ॥ ೩೯ ॥ ತರುಣ ಕೇಳಲ್ಲಿಂದ ಮೇಲವ ।
ನಿರುತ್ತರ ಕ್ರೋಧಾಗ್ನಿಯಲಿ ಸೀ। ವರಿಸೆ ಸೆಳೆದನು ಸರಸಿಜಾಸನ ತನಗೆ ಪೂರ್ವದಲಿ॥
ಶಿರವನರಿ ದರಿದಗ್ನಿಗಿತ್ತಾ । ಸುರದ ವರದಲಿ ಕೊಟ್ಟಮೋಘದ । ಶರವ ಹೂಡಿದ
ನಾಡಲೇನಿಂದ್ರಾದಿಗಳು ಬೆದರೆ ॥ ೪೦ ॥ ಇಳಿದನಜ ನಿದಕಂಡು ತಂದೆಯು । ಬಳಿಗೆ
ವಿಪ್ರಾಕಾರದಲಿ ಕೆ। ಳಲೆ ಪಿತಾಮಹ ಪಿತನೆ ಕೊಡು ಪೈತಾಮಹಾಶರವ ॥ ಕಳುಹು
ತಹ ನವನದರ ಹೃದಯಾ । ನಲನ ಸಂಧಿಸುವರ ಚರಾಚರ । ಚರಿಸಲರಿಯದು
ಚತುರತೆಗೆ ಚಾಪಲವ ಮೆರೆಯೆಂದ ॥ ೪೧ ॥ ಸಾರಿನಿವು ಕೆಲಕೆನುತ ರಿಪುಭಟ। ಸಾರಿ
ಬೊಬ್ಬಿರಿದೇವ ಮುಷ್ಟಿಯು । ಪಾರಮೇಷ್ಠಿ ಶರಾಭಿಮುಖ ಕೆಬ್ಬಿಸಿದ ನುರು ಶರವ ॥
ಘೋರತರ ಬಾಣಾಸನದ ಬಲು । ನಾರಿಯನು ಕಡಿ ದುಡಿದು ತೋಳ್ಗಳ। ತಾರೆಗಳ
ಪದಕೆತ್ತಿ ತಿರುಗಿತು ಮತ್ತೆ ಮೂಡಿಗೆಗೆ ॥೪೨॥ ಮೂಡಿದವು ಭುಜಭುಜಗ ಹುತ್ತಿನೊ।
ಳೀಡಿರಿದು ಹೊರವಡುವ ವೋಲು ಸ । ಗಾಡ ಬಲನತೆ ಸಮರ ಸಮಯೋಚಿತವ
ತಪ್ಪಲವ ॥ ಖೋಡಿ ಗಾಣಿಸದಿಲ್ಲಿ ತದಕೊಂ । ದಾಡಬಹುದೆನು ತಮರ ವಂಶ ವಿ।
ಭಾಡ ಹೊಗಳಲು ಹೊಕ್ಕ ನವರಾಂಬುಧಿಯ ನಿನ ಬಳಿಕ ॥೪೩॥ ತೀರಿದವು ಹದಿನೇಳು
ದಿನ ಜ । ರ್ಝರ ನಡೆದುದು ಬಿಡದೆ ಕತ್ತಲೆ । ತೀರಿತಾ ದಿನಮಣಿಯ ಜನನದಲಿ
ಮರುದಿವಸ ॥ ವೀರ ತೊರವೆಯ ನರಹರಿಗೆ ರಣ। ಧೀರ ಲಂಕಾಪತಿಗೆ ನಡೆದುದು।
ಭಾರಿಯಾಹವ ಬಣ್ಣಿಸಲು ತನಗರಿದಲೇಯೆಂದ ॥ ॥೪೪॥

ಐವತ್ತನೆಯ ಸಂಧಿ ಸಮಾಪ್ತಂ.

ಐವತ್ತೊಂದನೆಯ ಸಂಧಿ.

ಸೂಚನೆ॥ ರಾಯ ರಾಯರರಾಯ ರಾಘವ । ರಾಯ ರಣರಂಗದಲಿ ರಕ್ಕಸ। ರಾಯ
ನನು ಗೆಲಿದೊಲಿಸಿ ಸಲಹಿದ ನಖಿಳ ಭುವನಗಳ ॥

ಪದ್ಯ॥ ಕೇಳಿದ್ದೆ ಕುಶ ನಿಮ್ಮ ರಘುಭೂ । ಪಾಲಕನ ಸಡಗರದ ಸಮರ ಸ ।
ಲೀಲೆಯನು ರಣಕೇಳಿಯನು ಲಂಕಾಪುರಾಧಿಪನ ॥ ಮೇಳವಿಸಿದವು ರಥವೆರಡು ನಿ ।
ಸ್ಸಾಳದಬ್ಬರ ಮಮರರಸುರರ। ಪಾಳಯದೊಳೊದರಿದವು ಪರುಠನವಾಯ್ತು ಕಾಳೆಗದ॥
ರಥಿಕರಿಬ್ಬರಬೊಬ್ಬೆ ಬಲು ಸಾ। ರಥಿಗಳಿಬ್ಬರ ಛಪ್ಪರಣೆ ಸು। ಪ್ರತಿತಬಲ ರುದ್ದಂಡ
ಕಾರ್ಮುಕದಂಡದಬ್ಬರಣೆ ॥ ರಥವೆರಡು ರತ್ನಾಳಗಮನದ। ಪೃಥುಳ ಚಿತ್ರಾಕೃತಿ ರಭಸ
ತುಂಬಿತು । ಮಥನದಬುಧಿಯ ಸಬುದಕಿಮ್ಮಿಗಿಲೆನೆ ಜಗತ್ರಯವ ॥ ೨ ॥ ಮಲೆತು
ನಿಂದವು ತೇರು ತೇಜಿಯ । ಚಳಚನುತ್ಕೃತಿ ಖರದ ಹೊಯ್ಲುಗ । ಳೊಳಗೆ ಖಿಡಿ
ಕೊಪ್ಪರಿಸಿದವು ಹಳವಿಗೆಯ ಹಲಗಳಿಗೆ ॥ ಕಲಹಗಳು ಕಡುಹಾಗೆ ಕಲಹಕೆ। ನಿಲುಕಿ
ನಿಂದರು ರಾಘವನ ಮೂ। ದಲಿಸಿದನು ಮಹಾಲೋಕದಲ್ಲಣ ನುಗ್ರರೋಷದಲಿ ॥ ೩ ॥
ರಾಮಕೇಳೆನ್ನೇಕೆ ಸೀತೆಯ । ಕಾಮಿತವು ಕಡು ಮರುಳಲಾ ಕು। ತ್ರಾಮ ಕಳುಹಿದ

ತೀರ ಬಲುಹುಂಟೆಂದು ಬೆರೆತೆಯಲಾ ॥ ವ್ಯೋಮಕೇಶ ವಿರಿಂಚಿ ಮುಖ್ಯ ಮ । ಹಾ
ಮಹಿಮ ಸುರಕೋಟಿಗಳು ಸಂ । ಗ್ರಾಮಕಭಿಮುಖವಾದ ರಣುವಿಗೆ ಬಗೆವನಲ್ಲೆಂದ॥೪॥
ಎಲವೊ ರಾವಣ ಕೇಳು ಶಂಕರ । ಸರಸಿಜೋದ್ಭವ ಮುಖ್ಯದಿವಿಜರ । ಬಲದ ಭಟನೇ
ತಾನದಾರೆಂದರಿದುದಿಲ್ಲವಲ ॥ ಹಲವು ತಲೆಗಳ ಹೊತ್ತ ಕೊರಳಿನ । ಒಲಗಚಾಚಿದು
ನಾಸಿಕಂಗಳ । ನಿಲುಹಿ ಸೀತೆಯ ತೆಗೆವ ಪರಿಯನು ನೋಡು ನೀನೆಂದ ॥ ೫ ॥ ಒಲ್ಲೆ
ನೊಪ್ಪಿಸಿ ಕೇಳಿ ಹೆಂಗುಸಿ । ನಲಿ ಮಾಡಿದ ಬಲುಹ ಹಳಿಹುಲು । ಬಿಲ್ಲ ಮುರಿದುದು
ನಟ್ಟ ಬಡಹಾರುವನ ಬಟ್ಟೆಯಲಿ ॥ ಬಿಲ್ಲ ಸೆಳೆದುದನನುಜ ತಾ ಕಲು । ಖುಲ್ಲರೊಳ
ಗಾಡಿದುದ ಕಾಗೆಯ । ಹುಲ್ಲಿನಿಂದಂಜಿಸಿದ ಬಿರುದಿನ ಬಲುಹ ತಾನೆಂದ ॥ ೬ ॥ ಆರು
ನಿನ್ನವೊಲೆಳೆಯ ಹರಿಣನ । ನಾಂಚದ ಲೆಚ್ಚವರು ನಚ್ಚಿನ । ಸಾರಿಯನು ನೀಗಾಡಿ
ಹಕ್ಕಿಯ ನುಡಿಗೆ ನಡಿದಿವರ ॥ ಸೇರಿ ಒಡ ಕೊಡಗವರ ಕೊಂದೀ । ವೀರತನವಾ
ಗುರ್ಂಟು ನಗದಲಿ । ಸಾಗರವ ಬಂಧಿಸಿದ ಬಲುಮೆಯದಾರಿಗುಂಟೆಂದ ॥ ೭ ॥ ಹಿಂದೆ
ರಾವಣಿಯೊಬ್ಬ ನಿದ್ರೆಗೆ । ಸಂಧ ಖಳನವನೊಬ್ಬ ನೆರೆ ಕಾ । ಮಂದಿ ಮಿಕ್ಕಿನ ವೀರ
ರವರುಭ್ರಮಿಗಳುಳಿದವರು ॥ ಮುಂದರಿಯದವ ರಳಿದರಾ ಬಗೆ । ಯೆಂದು ನೀ ನುಬ್ಬಿದೆ
ಯಲಾ ತಂ । ನಂದ ಬೇರನ ವಾಗೆನುತ ತೆಗೆವೆಚ್ಚನಸುರೇಂದ್ರ ॥ ೮ ॥ ಎಚ್ಚ ಶರವನು
ಸವರಿ ಶಿವಶಿವ । ಮುಚ್ಚು ಮರೆಯೇಕಿದಕೆ ಯಿಾ ಜಗ । ದಚ್ಚರಿಯ ಭಟನಲ್ಲವೇ ಬಲು
ಹೇತರದು ನಮಗೆ ॥ ಅಚ್ಚ ಕೈ ಕಂಕಣಕೆ ಮಣಿಮಯ । ದಚ್ಚಕನ್ನಡಿಯೇಕೆ
ನಮ್ಮಯ । ಮುಚ್ಚುಗಣಿಗಳ ಕಲಹವನು ನೀ ನೋಡಿಕೋಯೆಂದ ॥ ೯ ॥ ಅಳುಕಿದ
ನಲಾ ಕಾರ್ತವೀರ್ಯನು । ಕಲಹದಲಿ ನಿನಗಂಜಿ ಬಾಲವ । ಬೆಳಸಲಮ್ಮದೆ ವಾಲಿ ಬದು
ಕಿದ ನಮುಮ ಪುರಹರನ ॥ ಉಳುಹಿದೆಯಲಾ ರಜತ ಶೈಲವ । ತಲೆಕೆಳಗಮಾಡಿದೆ
ವಿದೇಹನ । ಕುಲವ ಹಲಹಿದೆ ಬಿಲುಗನೆಯು ದತಿ ಸುಭಟ ನಹುದೆಂದ ॥ ೧೦ ॥ ಆದ
ಡೆಯು ತೊಡಕುವುದು ತೋಟಿಯ । ನೈದೆ ನಗೆಗೆಡೆ ನಮಗೆ ನಿಮ್ಮೊ । ಪಾಸಿಯಲಿ
ನಾನಲ್ಲವಾಗಿ ದಶಾಸ್ಯ ಕೇಳೆಲವೊ ॥ ಆದಿಯಲಿ ನೀ ನಮ್ಮ ರಘುವಂ । ಶೋದಯದ
ಪಾರ್ಥಿವ ಕುಲೇಂದ್ರನ । ಕಾದಿ ಕೊಂದುದರಿಂದ ಕೆಣಕಿದೆವೈಸೆ ವಾನೆಂದ ॥೧೧॥ ಅದರಿಂ
ನೀನೇ ಗುರು ವಿರೋಧಾ । ಸ್ಪದನು ನಾವಾಬಳಿಯ ಬವರದ । ಲೊದಗಿದೆವು ನಿನ್ನೊ
ಡನೆ ಸಮರೋದ್ಯೋಗ ಕೇಳಿಯಲಿ ॥ ಇದನು ನೀ ಕೈಕೊಂಬುದೆಂ ದ । ಗ್ಗದ ಮಹಾ
ನೋಘಾಸ್ತ್ರದಲಿ ತಲೆ । ಯುದಿರ ಲೆಚ್ಚನು ಜೊಬ್ಬರಿದು ರಘುಪತಿ ದಶಾನನನ ॥೧೨॥
ದಿವಿಜರಾ ಯೆಂದುಬ್ಬಿದರು ರಾ । ಘವನ ಮಹಿಮೆ ಗೆ ಕಮಲಭವ ಭವ । ರವಿರಳಾನಂ
ದೈಕ ಸುಖಮಯರಾದ ರಭ್ರದಲಿ ॥ ಅವತರಿಸಿದವು ಮತ್ತೆ ತಲೆಗಳು । ಖವಖವಿಸು
ತಟ್ಟೆಯಲಿ ಕಲಿ ರಾ । ಘವ ಮಹೀಪತಿ ಕಂಡ ಕೈಗಲ್ಲದಲಿ ಬೆರಗಾದ ॥ ೧೩ ॥ ಕದಬ
ಡಿಸಿದನು ಸುರಪ ತಲೆವ । ತ್ತದಿಸಿದುದ ಕಂಡಕಟ ಮುಂಬರಿ । ಯದೆ ವರೂಥವ
ಕಳುಹಿ ಕೆಟ್ಟೆವು ಕಲಹ ಕವಸಿಪನ ॥ ತುದಿಗೆ ಗೆಲವೀ ರಾಘವಂ ಗಿ । ಲ್ಲದಡೆ ಕೈಹಾರದಲಿ
ನಮ್ಮನು । ಸದೆಯದಿರನೆಂದೆಲ್ಲ ಬಾರಿತು ಸಕಲ ಸುರನಿಕರ ॥ ೧೪ ॥ ಬೊಬ್ಬಿರಿದು ತಲೆ
ಮತ್ತೆ ರಾಮನ । ನಬ್ಬರಿಸಿದವು ಕೈಗಳಸ್ತ್ರವ । ನೆಬ್ಬಿಸಿದ ನಂಭೋಜ ಸಂಭೂತಾಂಶ
ಮಂಡಲವ ॥ ಪಬ್ಬಿಸಿದ ವಂಬುಗಳು ರಕುತಗ । ಳುಬ್ಬರಂಗಳು ಘಾಯವಿಲ್ಲದ ।

ರೊಬ್ಬರಿಲ್ಲೆನೆ ಕಾಣಿಸಿತು ಕಣ್ಗಳಿಗೆ ನಾಕಜರು ॥ ೧೫ ॥ ಎಸಗೆ ಬಲುಹೊಳೆ ವೀರ
ಧುರದಾ । ಲಸಿಕೆ ರಘುಕುಲ ವೀರರಲಿ ರಂ । ಜಿಸುವುದೇ ಬಿಡು ಬಾಣವನು ಕಡಿ
ಖಳನ ಮಸ್ತಕವ ॥ ವಿಶಿಖವೆಡೆ ಮಾಡಲಿ ಕೊರಲ್ಗಳ । ಸಸಿನದಲಿ ಕೈಕುಂದಬೇಡೆಂ ।
ದೆಸಗಿ ಮಾತಳಿ ಧಾಯೆನುತ ನೂಕಿದನು ತೇಜಿಗಳ ।೧೬॥ ಮಸಗಿ ಮಾತಳಿ ನುಡಿಯೆ
ಶರಸಂ । ಧಿಸಿದ ವಸುಸುರೇಂದ್ರನ ಕೊರಳ್ಗಳ । ಸಸಿನದಲಿ ಬಳಿಕಸವು ಸಂಗರ ರಂಗ
ನರ್ತನದ । ಶಶಿಮುಖಿಯು ಕರತಳದ ಕಂತುಕ । ವಿಸರವೆನೆ ಕುಣಿದಾಡುತಿರ್ದವು ।
ಪಶುಪತಿ ಬ್ರಹ್ಮಾಮರರು ಬೆರಗಾಗೆ ತಲೆ ಖಳನ ।೧೭॥ ಒಂದೆರಡು ಮೂರ್ನೈದು ಮೂರ
ರೊ । ಳೊಂದೆರಡು ಆರೇಳು ಪರಿವಿಡಿ । ಯಿಂದ ಲೆಂಟೊಂಭತ್ತು ಹತ್ತೊಂಭತ್ತರೆಣಿಕೆ
ಗಳ ॥ ಸಂದಣಿಸರೆಂಟೇಳು ಯೇಳರ । ಲೊಂದುಳಿಯ ಲಾರೈದು ನಾಲ್ಕ । ಲ್ಲಿಂದ
ಮೂರೆರಡೊಂದು ಶಿರದಲಿ ಶರಕೆ ಗುರಿಯಾಯ್ತು ॥ ೧೮ ॥ ಕಡಿತ ವಿಕ್ಕಿದು ವೀಪರಿ
ಯುಲಾ । ಕಡು ನಿಶಿತ ಶರವರಿಯೆ ಕಂಧರ । ದಡವಿಯಲಿ ತಲೆ ಬೀಳುತಿರ್ದವು ಕೋಟಿ
ಸಂಖ್ಯೆಯಲಿ ॥ ಕೆಡಪತಲೆ ಖದ್ಯೋತ ಸರಣಿಗೆ । ಸಿಡಿದತಲೆ ಮಾರ್ಗಣದ ಮುಖದಿಂ ।
ದುಡಿವತಲೆಗೆಡದೆರಹ ಕಾಣೆನು ಕಂದ ಕೇಳೆಂದ ॥ ೧೯ ॥ ಕೋಲ ಮಳೆಗರೆ ದಸುರ
ರಾಯನ । ತೋಳುಗಳಿಗೊಮ್ಮೊಮ್ಮೆ ಮುಂಡದ । ಲೇಳುವಗಣಿತ ತಲೆಗಡಿತ ಕೊಂ
ಮ್ಮೊಮ್ಮೆ ಮಾರ್ಗಣವ ॥ ಬೀಳು ಕೊಡುತಿರ್ದನು ವ ಹೋಗ್ರ ಕ । ರಾಳ ಮಸ್ತಕ
ಹಸ್ತ ಚಾಪ ಶ । ರಾಳಿ ಸಹಿತುದ್ಭವಿಸುತಿರ್ದವು ಕಾರ್ಯದಲಿ ಖಳನ ॥ ೨೦ ॥ ಗಮನ
ದಲಿ ಹರಿದಿಕ್ಕಿ ಪುನರಾ । ಗಮನದಲಿ ತರಿದಿಕ್ಕಿ ಮಾರ್ಗಣ । ಭ್ರಮಿಸಿದವು ಕಾಣದೆ
ಶಿರಃಖಂಡನವ ರಕ್ಕಸನ ॥ ಸಮರ ಸಾಕಿನ್ನೇಕೆ ಲಂಕಾರಮಣ ನಾಯುಷ್ಯಾವಸಾನಕೆ ।
ಸಮಯುವಲ್ಲೆಂದೊದರಿದವು ಕಿವಿಯಲಿ ಕಕುಸ್ಥಜನ॥೨೧॥ ತುಂಬಿದವು ತಲೆ ತಲೆಗಳಲಿ
ಕಕು । ದಂಬರಾವನಿ ಚಿಗಿದು ಸಿಡಿ ದರು । ಣಾಂಬುವಿನಲುರೆ ನೆನೆದು ಕೆಂಪಾಯ್ತು ಬುಜ
ಚಾಂಡ ಘಟ ॥ ಎಂಬೆನೇನನು ಬೇಸರಿಕೆ ಬಳಿ । ಕಂಬುಗಳಿಗಂಭೋಜ ನೇತ್ರಂ ।
ಗಿಂಬುಗೊಂಡುದು ಕಾಣೆ ನರಸುವ ತಲೆಗಳಿಗೆ ಕಡೆಯು ।೨೨॥ ಬೊಬ್ಬಿರಿದ ಮರಿದಲೆಗ
ಳಭ್ರದ । ಹಬ್ಬುಗೆಯು ಸುರಕಟಕದಲಿ ಕಡಿ । ದುಬ್ಬಡಲೆ ನುಂಗಿದವು ತರಣಿಯು
ತಾರಕಾವಳಿಯು ॥ ಎಬ್ಬಿಸಿದ ಬಲು ತಲೆಗಳವು ಬಂ । ದಬ್ಬರಿಸಿದವು ಸಾಕು ಸಂಗರ ।
ವುಬ್ಬದಿರು ರಣವಾರು ನೀವಾರೆಂದು ರಾಘವನ ॥೨೩॥ ಐಸೆ ಮತ್ತೇನೆಂದು ರಘು ಭೂ ।
ವಿಶಾಶ ಭಾರಿಸಿದಧಿಕ ಚಿಂತೆಯುಲಾ । ಶರಾಸನ ಕಂಬ ಹೊಡದೆ ರಿಪು ಭಟೋತ್ತಮನ ॥
ಆಸುರದ ಮಹದುಗ್ರತರ ದಾ । ಯಾಸ ಮುಖದಲಿ ಪಡೆದ ವರದ ವಿ । ಲಾಸ ಕಚ್ಚರಿ
ವಟ್ಟು ಬೆರಗಿಟ್ಟಿರ್ದ ನಿದಿರಿನಲಿ ॥೨೪॥ ಘಳಿಗೆಗಳು ಹದಿನಾರು ನಡೆದವು । ಜಲಜಸಖ
ನಭ್ಯುದಯ ವಿಡಿ ದ । ಗ್ಗಳಿಯ ರಾಮನ ಕದನಕಾಯ್ತುವಸಾನ ವಸುರರಿಪು ॥ ಇಳುಹಿ
ದನು ಕೋದಂಡವನು ರಥ । ದೊಳಗೆ ಕೇತುಸ್ತಂಭ ಮಧ್ಯವ । ಬಳಲಿ ನೆಮ್ಮಿದು
ಕರೆದು ನುಡಿದನು ಶಕ್ರಸಾರಥಿಗೆ ॥ ೨೫ ॥ ಮುರಿದು ನೋಡಿದ ನಿಂದ್ರಸಾರಥಿ । ಸಂಲ
ಗಮನವ ಕಾಣದೆಲೆ ರಘು । ವರನೆ ಚಿತ್ತೈಸಹಿತ ವಧೆಗಕಟ ಕೃಪೆನಿನಗೆ ॥ ಉರ
ವಣಿಸುತಿದೆ ತೇಜಿಗಳು ಮುಂ । ಬರಿದು ಬರುತಿದೆ ಬಾಣತತಿ । ಕೊರ್ಕರಿಸುವವನಲ್ಲ
ವನು ಕೊಲೆಗೆಲೆ ದೇವ ಕೇಳೆಂದ ॥ ೨೬ ॥ ಸಾಕು ಮಾತಲಿ ಸಮರ ಸಾಪ್ರ ಸ । ವಿಶಾಕ

ಬಾಹಿರರರಿ ಶಿರಗಳ | ನೂಕಿ ಬೀಸತ್ತೆವು ಶರಂಗಳ ಸೋಲವೆಮಗಾಯ್ತು || ಓಕರಿಸಿ
ದಳು ಮೃತ್ಯುವೀ ಲೋ | ಕೈಕವೀರನ ನಮಗೆ ತಾನಿ | ನ್ನೇಕೆ ಜಯದಭಿಲಾಷೆ
ತಿರುಗಿಸು ತೇರ ಕೆಳೆಕೇಂದ ||೨೭|| ತೆರಳು ನೀ ನಿನ್ನೇನ ಮಾಡುವೆ | ಹಿಂದು ಬಳಲಿದೆ
ಸಾರಥಿತ್ವದ | ಹರಹಿನಲಿ ರಿಪುವಿಜಯ ವಿಶ್ರುತಿಗಾವ ಭಾಗ್ಯರಲೆ || ವರ ವಿಭೀಷಣದೇವ
ಬಾ ನಮ | ಗೆರಡು ನಾಲಿಗೆಯಾದುದೆಮ್ಮನು | ಶರಣು ಹೊಕ್ಕರಿಗಾದುದಪಜಯ ವೆಂ
ದನಾ ರಾಮ |೨೮|| ಶರಣು ಹೊಗು ನಿಮ್ಮಣ್ಣದೇವನ | ಮರಳಿ ನಮ್ಮೊಡನಾಡಿ ಕೆಡ
ಬೇ | ಡೆರಡು ಕಡೆಯಲಿ ಕಷ್ಟತರ ವೆಮಗಾಯ್ತು ಲೋಕದಲಿ || ಹಿಂದು ಬಳಲಿದೆ
ಹೋಗೆನ್ನುತ ನಿಜ | ಕರವ ಮುಗಿದುದಿನೇಂದ್ರ ತನುಜನ | ಕರೆದನು ದನು ಮನದ
ದುಗುಡದ ಮಧುರ ವಚನದಲಿ ||೨೯|| ಬನದೊಳುಡಿದ ಭಾಷೆ ನಮಗಿಂ | ದಿನಲಿ ನಿಲು
ಕಡೆಯಾಯ್ತು ಕೊಲಿಸಿದೆ | ನನುವರದೊಳಳಿಯಾಸೆಯಲಿ ನಿನ್ನಯ ಪರಿಗ್ರಹನ ||
ಮನದೊಳೆಮ್ಮನು ಬೈಯ್ಯದಗ್ರಜ | ತನುಜಸಹಿತ ಸಮಸ್ತ ಕಪಿವಾ |. ಹಿನಿಸಹಿತ
ಕಿಷ್ಕಿಂಧೆಗಭಿಮುಖನಾಗು ಹೋಗೆಂದ |೩೦|| ಸೇವೆಯಲಿ ನಿನ್ನಿಂದಬಿಟ್ಟೆ | ನ್ನಾವನೈ
ಹನುಮಂತ ಮಂತ್ರ ಕ | ಳಾ ವಿಶೇಷಜ್ಞರಲಿ ಜಗದೊಳಗಾರು ಸರಿ ನಿನಗೆ || ಭಾವಿಸಿ
ದಿರೇ ಜಾಂಬವರೆ ಸ | ದ್ಭಾವದಲಿ ನೀ ವೃತ್ತರಾಯಿಗ | ಳಾವುದೈ ರವಿ ಹೀನರಾದೆವು
ತೆರಳಿ ನೀವೆಂದ || ೩೧ || ತಮ್ಮ ಬಾ ಜಗವರಿಯ ಲೂಣಯ | ನೆಮ್ಮ ತೆಮ್ಮನದಾವ
ಮೋರೆಯ | ಲೆಮ್ಮಮಾತೃತ್ರಯದ ಮುಸುಡನು ಗುರುಗಳಾನನವ || ತಮ್ಮದಿರ ವದನ
ವನು ಕಾಂಬೆವು | ತಮ್ಮ ಕೇಳೈ ತೆರಳು ನೀನೆ | ಮ್ಮೊಡನೆ ಬಳಲಿಕೆಯನು ಬಳಸದೇ |
ಪುರಕೆ ಮರಳೆಂದ || ೩೨ || ಸೀತೆಯನು ಹೋಗಾಡಿ ನೃಪನ | ಜ್ಞಾತವಾದನು ಕಾಣೆ
ನೆಂಬೀ | ಮಾತ ಹೇಳಿದು ಕೂಡೆ ಕೊಂಡಿಹುದಗ್ರಜಾನ ಜರ || ತಾತ ಹೋಗೆನ್ನಯ್ಯ
ತನ್ನೊಳು | ಮಾತನಾಡದೆ ತೆರಳೆನಲು ಸುರ | ಸೂತ ನಗುತಿಂದೆಂದ ನಸುರಾರಾತಿ
ಗುಚಿತದಲಿ ||೩೩|| ದೇವ ನೀನೀತಗಳೊಡನೆ ಮಾ | ಯಾ ವಿಲಾಸೋಕ್ತಿಗಳ ನುಡಿವೀ|
ಭಾವಕವು ತನ್ನೊಡನೆ ಕೊಳ್ಳದು ಕಪಟವೇಕಿನಿತು || ಆ ವಿರಿಂಚಿಪ್ರಮುಖ ಸಕಲ ಸು|
ರಾವಳಿಗಳೊಡಗೂಡಿ ಪೌಲೋ | ಮೀವರನು ಬಿನ್ನೈಸಿದುದು ನಾ ನರಿಯೆನೇ ಯೆಂದ||
ಹೊಸಬನೀ ನಿವರ್ಗಳಿಗೆ ಧಿಟನೀ | ಹೊಸಬನೇ ತನಗಿಲಿತನಕ ಮಾ | ನುಷ ಚರಿತ್ರ
ವಿಧಾತ್ರಪಿತನೆಂದರಿಯೆನೇ ತಾನು || ಬಿಸುಟ ಚಾಪವ ತೆಗೆದುಕೋ | ಸಂಧಿಸು ಶರಾ
ಳಿಯ ನನಿತರೊಳಗೀ | ಯಸುರ ನುಳಿದರೆ ಪೊಗುವೆ ನಗ್ನಿಯನೆಂದು ಘರ್ಜಿಸಿದ||೩೪||
ಮರುಳಲಾ ಸುರಸೂತ ವಾಣೀ | ಶ್ವರನ ಪಿತನಾದಡಿವ ನೀ | ಪರಿಯ ಜೀವಿಸುವನೆ
ವಿವೇಕ ವಿಚಾರವಿನಿತಿಲ್ಲ || ನರರು ನಾವ್ ಸಾಕಿನ್ನು ತನ್ನನು | ಹಿರಿದು ಹೊಗಳಲಿ
ಜೇಡವೆನು ತು | ರ್ವರೆಗೆ ಧುಮ್ಮಿದನು ದುಗುಡವ ಹಿಡಿಯಲವ ಬಳಿಕ || ೩೫ || ಮನ
ದೊಳಂಜದಿರೆಲೆ ರಘುಕ್ಷಿತಿ | ಜನಪ ತೊಡೆ ನಸ್ತ್ರವನು ಬಾಣಾ | ಸನ ಮಹಾಸ್ತ್ರ
ವಿಮುಕ್ತ ಹಸ್ತರ ಕೂಡೆ ನಿನ್ನವರ || ಅನುವರವ ನನುಸರಿಸು ಬಳಿಕೆ | ಮ್ಮನುವರಕೆ
ಕಲಿಯಾಗಿ ನಿಲುನಿಲು | ವೆನು ಸುರಾವಳಿ ವೆಚ್ಚಿ ಸಿನ್ನೊಡನೆಂದ ನಸುರೇಂದ್ರ ||೩೬||
ಇಳೆಗೆ ರಥದಿಂದಿಳಿದ ರಘುಕುಲ | ತಿಲಕನನು ಕಾಣುತ್ತ ದಿವದಿಂ | ದಿಳಿದ ನಾ ಸಮಯ
ದಲಿ ಸರಸಿಜಭವ ನನುಜ್ಞೆಯಲಿ || ಕಲಶಭವನಾ ಮನುಕುಲೇಂದ್ರನ | ಬಳಿಗೆ ನರ

ನಾಟಕದ ನಟಣೆಯು। ಕೆಲಸ ಕರಲೇಸಾಯಿತೆಂದನು ಮಂದಹಾಸದಲಿ ॥ ೩೮ ॥ ಬಲ್ಲೆ ವಾವ್ ನಿನ್ನುವನು ಸಾಕೆ। ನ್ನೆಲ್ಲಿ ಪರಿಯಂತರ ಸುರಾಳಿಯು। ನಳ್ಳೆ ಬಾರಿಸಬೇಡ ಬಿಡು ನರನಾಟಕಸ್ಥಿತಿಯು ॥ ಸಲ್ಲಲಿತ ಸಲಿಲವನು ಕೋಪದ। ಪಲ್ಲವವ ತೊಳೆಯಾಗವೋ ಕ್ತಿಯು। ಬಲ್ಲವಿಕೆಯಿಂ ದಾಚಮನ ವಿಧಿವಿಹಿತನಾಗೆಂದ ॥೩೯॥ ನೆನೆಹರಿ ಬ್ರಹ್ಮೇಶ್ವರರ ನಿಜ। ತನು ಸದಾನಂದಾತ್ಮಕನ ನೆನೆ। ನೆನೆ ದಿವಾ ತ್ರಿಗುಣಾತ್ಮಕನ ನಿಜ ಭಾವ ಶುದ್ಧಿ ಯಲಿ ॥ ಅನುಜಕೇಳಿಳಿತಕದ ನಾರವಿ। ಮನು ಕುಲೇಂದ್ರನ ಬಳಿಗೆ ಕೊಟ್ಟನು। ವನಜ ಭವಭವ ವಿಷ್ಣು ಮಂತ್ರಕ ದಿವ್ಯ ಮಾರ್ಗಣವ।೪೦॥ ಸರಿದನಿನ ನಂಬರಕೆ ಮುನಿ ಪತಿ। ತಿರುಗಿದನು ದಿವದತ್ತ ದಿವಿಜೇ। ಶ್ವರನ ಸಾರಥಿ ಶಾರ್ಜವನು ಬಳಿಕಿತ್ತ ನರ ಸಂಗೆ ॥ ಸುರರು ಪೊಗಳಲು ದಿವ್ಯರಥ ಕು। ಪ್ಪರಿಸಿ ಚಪ್ಪರಿಸಿದನು ಭ ಜವನೆ। ಹರಿ ಕಟಕ ಹನುಮಂತ ದೇವನ ಬೆರಳ ಬೊಬ್ಬೆಯುಲಿ ॥ ೪೧ ॥ ಲವನೆ ಕೇಳ್ಳೆ ಬಲದ ಭುಜ ಧಲಿ। ಭುವನು ವಾಮುದ ಕರದಲಂಬುಜ। ಭವನ ಮುಖದಲಿ ಶಿಖಿ ಕೃತಾಂತನು ಕೋಪ ದುರುಬೆಯುಲಿ ॥ ಪವನ ನುಶ್ವಾಸದಲಿ ಶೌರ್ಯೋ। ತ್ಸವದಲಾಶಕ್ತಿ ಮಿಕ್ಕಿನ। ದಿವಿಜ ರಂಗೋಪಾಂಗದಲಿ ನೆಲಸಿದರು ರಾಘವನ ॥೪೨॥ ಬಳಿಕ ಶಾರ್ಜ ಮಹಾಧನುವ ನು। ಜ್ವಲಿತ ಮೌರ್ವಿಯ ನೀವಿ ಬೆರಳಲಿ। ಉಳಿವಡೆದು ಬರಸೆಳೆದು ಹೂಡಿದನಾ ಮಹಾ ಶರವ ॥ ಅಲಗಿನಲಿ ಲಯರುದ್ರನಂಬಿನ। ವಳಯದಲಿ ಪರಮೇಷ್ಠಿ ಬಾಣದ। ಹಿಳುಕಿ ನಲಿ ಹರಿಗರಿಯೊಳೆಸೆದರು ಯಮ ಸಮೀರಣರು ॥ ೪೩ ॥ ವಿಶ್ವತೋ ಮುಖನಾದ ನಿರ್ಮಲ। ವಿಶ್ವಲೋಚನನಾದ ನಗ್ಗದ। ವಿಶ್ವತೋಭುಜನಾದ ನೀಕ್ಷಿಸಿ ನೋಡ ಲಿದಿರಿನಲಿ ॥ ವಿಶ್ವವಿಕ್ರಮನಾದ ನಾದನು। ವಿಶ್ವಮೂರುತಿ ಗಗನಶಿಖಿ ಪೃಪ। ದಶ್ವ ಜಲ ತತ್ವಾತ್ಮನಾಗಿರೆ ಕಂಡ ನಸುರೇಂದ್ರ ॥ ೪೪ ॥ ಕಮಲಭವ ಕೋಟಿಗಳು ಗಿರಿಜಾ। ರಮಣ ಕೋಟಗಳಿನಸುರೇಶ್ವರ। ಯಮ ಹುತಾಶನ ವರುಣ ವಾಯು ಕುಬೇರ ಕೋಟಿ ಗಳು ॥ ಹಿಮಕಿರಣ ಕೋಟಿಗಳನು ನಿಗಮಾ। ಗಮ ನಿಕರ ಕೋಟಿಗಳು ದೇವೋ। ತ್ತಮನ ಸಿರಿಯಂಗದಲಿ ನೆಲಸಿರೆ ಕಂಡನಸುರೇಂದ್ರ ॥ ೪೫ ॥ ಲೋಕಗಳ ಜನಪದ ಜನೌಘಾ। ನೀಕಗಳ ಗಿಂತರು ಸಮುದ್ರವ। ನೇಕ ವಿವಿಧದ್ವೀಪ ನಾನಾ ಜೀವರಾಶಿ ಗಳು ॥ ಸೋಂಕಿಕೊಂಡಿರ್ದಮಲ ಪರಿ ಪೂ। ರ್ಣಾಕಲಿತ ಪರದೇವತೆಯ ಮಾ। ಯಾ ಕೃತಿಯ ವಿಗ್ರಹವ ನಿದಿರಲಿ ಕಂಡನಸುರೇಂದ್ರ ॥೪೬॥ ಷಡುವಿಕಾರ ವಿಹೀನನನು ಸಲೆ। ಷಡುವಿವರ್ಣ ನಿತಾಂತನನು ನಡು। ಕಡೆಗಳಿಲ್ಲದ ಜನನ ಮರಣಾದಿಗಳು ಸಂಧಿಸದ ॥ ನುಡಿಗೆ ನಿಲ್ಲದ ನಿಗಮ ನಿಕರ ಗ। ಳಿಡಹಿ ಕಾಣದ ತತ್ವಮಯ ದು। ಘ್ಘಡದ ದೈವವ ಕಂಡ ನಿದಿರಿನಲಾ ದಶಗ್ರೀವ ॥ ೪೭ ॥ ಸುಖಮಯನ ಚಿನ್ಮಯನ ಬರ್ಹಿ। ಮುಖ ಕಿರೀಟ ನಖ ಪ್ರಭಾಂಚಿತ। ನಖನ ಪರಮೇಶ್ವರ ಪರಾಪರನಾ ಪರಾತ್ಮಕನ ॥ ಶಿಖಿ ಸುಧಾಕರ ಸಕಲ ಸಂಭವ। ಸುಖಮಯೂಖ ಸಹಸ್ರ ತೇಜೋ। ಮುಖನ ರಘುರಾ ಜೇಂದ್ರ ಚಂದ್ರನ ಕಂಡ ನಸುರೇಂದ್ರ॥೪೮॥ ನಿರುಪಮನ ನಿರ್ಮತ್ಸರನ ನಿ। ರ್ವಿಕರಣಾ ನನು ನಿಶ್ಚಿಂತನನು ನಿ। ರ್ಧರಿಸಬಾರದ ನಿಗಮ ತತ್ವ ರಹಸ್ಯ ಪಂಡಿತನ ॥ ನಿರತಿ ಶಯನ ನಿಜೋನ್ನ ತೋನ್ನತ। ಭರಿತ ಬಹಳ ಬ್ರಹ್ಮಮಯ ನೀ। ಶ್ವರ ಘನ ಸ್ವಾತಂತ್ರ ದೈವವ ಕಂಡ ನಸುರೇಂದ್ರ ॥೪೯॥ ಈತನೀಂಗಲೆ ಜನನ ಮರಣಾ। ತೀತ ಮಾಯಾ

ಮಹಿಮ ಸಗುಣ ಸ | ನಾತನನು ಸಂದೇಹ ತಾ ನಿನ್ನೇಕೆ ಪೂರ್ವದಲಿ || ಈತನೊಡನೆ
ವಿರೋಧವೆಮ ಗಭಿ | ಜಾತ ಮಾಡುದು ಲೋಕ ಮೂರರೊ | ಳೀತಕಂಜಿಕೆ ನಮಗೆ
ಮುಕ್ತಿಯು ಘೂರಿ ತನಗೆಂದ || ೫೦ || ಘೋರತರ ನಾನಾ ಮುಖಂಗಳ | ಸೈರಣೆಯ
ಯೋನಿಗಳ ಲುದಿಸಿದು | ತೀರದಿಹ ಭವಭವದ ದುಃಖ ಪರಂಪರಾವೃತದ || ಪಾರ
ವಿಲ್ಲದ ಕಷ್ಟತರ ಸಂ | ಸಾರ ಶರಧಿಯ ದಾಂಟಿ ಸ ಖಮಯ | ತಾರಕ ಬ್ರಹ್ಮವನು
ಮನದಲಿ ನೆನೆದ ನಸುರೇಂದ್ರ || ೫೧ || ತಾನದೆತ್ತಲು ಜನಕ ತನುಜಾ | ಮಾನಿನಿಯ
ದೆತ್ತಲು ಚತುರ್ಮುಖ | ಸೂನು ಸನಕಾದಿಗಳನುಜ್ಞೆಯ ಫಲವದೀಗವಲ || ಶ್ರೀ
ನೃಸಿಂಹ ನೃಸಿಂಹ ಮಾಯಾ | ಮಾನುಷ ವ್ಯಾಪಾರ ಸಾರ ಕೃ | ಪಾನಿಧಿಯೆ ಶರಣೆ
ನುತ ಬೀಂ ದನಿದೋರಿ ಬೊಬ್ಬಿರಿದ || ೫೨ || ನೋಡಿದನು ರಾವಣನ ಸ ಚಿತವ |
ಕೂಡಿಕೊಂಡು ನಯೋಕ್ತಿಯಲಿ ಮಾ | ತಾಡಿದನು ಕೇಳೈ ದಶಾನನ ಮೂರು ಲೋಕ
ದಲಿ || ರೂಢಿಸಿದ ಭಟ ನೀನು ಕಾಮುಕ | ರಾಡಿಕೆಯ ಬಿಡು ಕರೆದು ತಮ್ಮನ | ಕೂಡಿ
ಬದುಕಭಯಪ್ರದಾನವಿದೀಗ ನಿನಗೆಂದ ||೫೩|| ಕೊಡೆಯ ಕಡಿದಂದೊಮ್ಮೆ ನಾಚಿಕೆ |
ಗೆಡಿಸಿ ದಾಜಿಯಲೊಮ್ಮೆ ನಗರಕೆ | ಕೆಡೆಯಲೆಚ್ಚಂದೊಮ್ಮೆ ಕಾದೆನು ಮೂರು ಬಾರಿ
ಯಲಿ || ಪೊಡವಿ ವೆಚ್ಚಲು ನಮ್ಮ ಶರಣನ | ಬಿಡೆಯಕೋಸುಗ ಛಲದ ಬಲುಹನು |
ಬಿಡು ವೃಥಾ ಯಮನಾಕರಣೆ ಗೊಳಗಾಗಬೇಡೆಂದ ||೫೪|| ಶರಣು ಹೊಗು ಸಾಕೇತ
ಪುರವರ | ದರಸುತನ ನಿನಗುತ್ತರದ ಕುರು | ಧರಣಿಪರಿಯಂತುಳಿಯೆ ಲಂಕಾರಾಜ್ಯ
ದರಸುತನ || ಎರಡು ಮಾತೆಮಗಿಲ್ಲ ಸಂಧಿಗೆ | ಹರಿಯ ಮೊಮ್ಮನ ಕಳುಹಿದಾ ಪು |
ತ್ತರವು ತಪ್ಪದು ರಕ್ಷಿಸುವೆ ನಜನಳಿವು ಪರಿಯಂತ || ೫೫ || ಶರಣು ಹೊಗುವವನಲ್ಲ
ಮಂದಣ | ಸಿರಿಯ ಬಯಸುವವನಲ್ಲ ಸೀತೆಯ | ತಿರುಗಿ ಬಿಡುವವನಲ್ಲ ಮತಿ ಬೇರೆನ್ನ
ಮಾನಸದ || ಕರುಣ ನಿನಗಿನ್ನೇಕೆ ನಿನ್ನಯ | ಪರಿಯ ಬಲ್ಲೆನು ಬಿಡು ಮಹಾಸ್ತ್ರವ |
ಮರಣ ಕೊರಳಿನ ಲಾದಡೀಶ್ವರ ಭಜಕ ನಲ್ಲೆಂದ || ೫೬ || ಎಲೆ ವಿಭೀಷಣದೇವ
ಮೂರ್ಖರ | ತಿಲಕನಿವ ನಿನ್ನಂತರಂಗದ | ನೆಲೆಯ ಹೇಳೈ ಕೊಲಲೊ ಕೊಲಬೇಡವೊ
ತವಾಗ್ರಜನ || ತಿಳಿಯಲಿಬ್ಬರಿಗೊಬ್ಬಳೇ ತಾಯ್ | ಸಲೆ ಕರುಳ್ಗಳು ಮರುಗದಿರವಳ |
ಬಳವ ಹೇಳೆನ್ನಾಣೆ ಬಿಡೆಯವ ನುಡಿಯ ಬೇಡೆಂದ || ೫೭ || ಮರಳಿ ಮರಳೆನ್ನೆಲ್ಲಿ
ಪರಿಯಂ | ತರ ವಿಚಾರವು ಜೇಯ ಛಲದು | ಬ್ಬರದ ಪೌರುಷವಣ್ಣನದು ನಮಗಣ್ಣ
ನೆಂದೆಂಬೊ || ಕರುಣ ಬೇಡೆಮಗಗ್ರಜರು ಪಿತೃ | ಗುರುಗಳಾಗಿಯೆ ದೇವರಾ ಪುಂ |
ಗರಿಗ ರನುಸರಣೆಯನು ಹಿಡಿಯದೆ ಬೇಗ ಮಾಡೆಂದ ||೫೮|| ಎನಲು ಶರಣನ ನಂಬು
ಗೆಯ ನಿಜ | ಮನದ ಧೃತಿಗತಿ ಪರಿಣಮಿಸಿ ಯಿ | ನ್ನನಗೆ ದೋಷವು ಬಾರದೆಲೆ
ಸುಮನಸರ ಸಾಕ್ಷಿಯಲಿ || ಎನುತ ಶರಣಾ ಪೀಥಜಲಿ ಸಿಂ | ಜೆನಿಗೆ ಸರಳನು ತೊಡಿಸಿ
ಬರಸೆಳೆ | ದನಿಮಿಷಾಂತಕ ನಿದಿರಿನಲಿ ಬೊಬ್ಬಿರಿದನಾ ರಾಮ ||೫೯|| ಆವ ಭಟನೆಂದರಿ
ಯಲಾ ಮೂ | ದೇವರೊಳಗಾದಖಿಳಲಯದಧಿ | ದೇವರುಗಳೊಳಗಾಗಿ ಬರಲಿರಲಖಿಳ
ಮಂತ್ರಾಸ್ತ್ರ || ತೀವಿ ಕೊಟ್ಟಿಸೆ ಕಲ್ಪಪರಿಯಂ | ತಾವ ಭಯ ಬೇಡೆಂಬ ವಚನವ |
ನಾ ವಿಭೀಷಣದೇವ ನರಿದಿಂತೆಂದ ನರಸಂಗೆ || ೬೦ || ಅರಸ ಚಿತ್ತೈಸಂಬಿಕಾ ಸತಿ |
ಯರಸ ನೋಲಗದೊಳಗು ನಂದೀ | ಶ್ವರನ ನಣಕಿಸುತಿಟ್ಟನಾ ಜಂಬೀರ ಫಲದಿಂದ |

ಉರವ ತಾಕಲು ಶಾಪವಿತ್ತನು. | ಮರಣ ವಕ್ಷಸ್ಥಳದೊಳಿರೆ ಗೋ | ಚರಿಸಲೆಂದದ ರಿಂದ ಬಾಣವ ನುರಕೆ ಬೆಸಸೆಂದ ‖ ೬೧ ‖ ಎಂಬ ಶರಣನ ನುಡಿಗೆ ಹೂಡಿದ | ನಂಬ ನುರ ಕರಿ ಭಟನ ರವಿ ಶಶಿ | ಬಿಂಬ ಹೆಕ್ಕಳಿಸಿದವು ಸುಳಿದವು ಮೇಲೆ ಪವಮಾನ ‖ ಅಂಬುನಿಧಿ ಛಳಿಮಸಗಿ ತಮರ ನಿ | ತಂಬಿನಿಯು ರಾರತಿಯ ಲಮರ ಕ | ದಂಬ ಕುಸು ಮಾಂಜಲಿಯಲಿರ್ದುದು ಗಗನ ಮಾರ್ಗದಲಿ ‖ ೬೨ ‖ ಅರಿದ ನನುಜನು ರಾಘವಂಗೆ | ಚ್ಚರಿಸಿ ನುಡಿದಿಂಗಿತವ ತಪ್ಪದು | ಹೇವು ತನಗೆನುತಿರ್ದನಾತ್ಮಜ್ಞಾನ ದುದಯದಲಿ ‖ ಮರೆಯ ಮಾಯಾ ಮನುಜನನು ಕ | ಟ್ಟಿರಕವಿಂದವೆಯಿಕ್ಕುತೆಚ್ಚುತ | ದೆರಕದಿಂ ದಶ ಕಂಠ ನೀಕ್ಷಿಸುತಿರ್ದ ನಿದಿರಿನಲಿ ‖ ೬೩ ‖ ಹಳು ವರದ ಮಂದಿಯಲಿ ವಾಸುಗಿ | ಯಳುಕದ ವೊಲಾಶಾ ಗಜಂಗಳು | ಬಳುಕದವೊಲಿಳೆ ನೋಯದವೊಲಂಬುಧಿಯ ತಳಮಳಲು ‖ ತುಳುಕದವೊಲಸ್ತ್ರವನು ಕೆನ್ನೆಗೆ | ಸೆಳೆದು ಮತ್ತೀ ಮಾತನೆಂದನು | ಕೊಲೆಗೊಡಂ ಬಟ್ಟೆ ವಿಚಾರಿಸು ಮನವ ನೀನೆಂದ ‖ ೬೪ ‖ ಮನವನೆರೆ ನಿರ್ಧರಿಸಿದೆವು ನೀ | ಮನುಜ ನಲ್ಲೆಂಬುದವಿವೇಕದ | ನೆನಹಿನಿಂನಾನರಿದೆ ನಂಜೆನು ತನು ಪರಿಚ್ಯುತಿಗೆ ‖ ನಿನಗೆ ದಯ ಬೇಡಿನ್ನು ಧಿಟ ರಂ | ಜನೆಯ ನುಡಿ ಸಾಕೆನಲು ತಪ್ಪದು | ಜನವರಿಯೆ ಹೊರಗಾವು ಪಾಪಕೆ ತಪ್ಪದೇಯೆಂದ ‖ ೬೫ ‖ ತಪ್ಪದೆಸೆ ಮಾತೇಕೆ ನಿನಗಿ | ನ್ನೊಪ್ಪಿಸಿದೆ ನೀ ಧಿಟ | ತಪ್ಪುವಾತನೆ ಕಳುಹು ನಮ್ಮೊಡೆಗಮ್ಮವರೆ ಶರವ ‖ ಒಪ್ಪವನು ಬಳಿಕಿಟ್ಟುಕೋ ಯೆನೆ | ನಿಪ್ಪಸರದಲಿ ಬೊಬ್ಬಿರಿದು ನಿ | ಮ್ಮಪ್ಪನೆಚ್ಚನು ವೀರ ಧೀರೋದ್ಧಾತ ದಶ ಮುಖವ ‖ ೬೬ ‖ ಸರಳಗಮನ ಕಜಾಂಡಮಂಡಲ | ಹೊರವುತಿರ್ದವು ಸಕಲ ಸುರ ಮುನಿ | ವರ ಕದಂಬಕ ಜಯ ಯೆನುತಿರ್ದುದು ನಭೋಗ್ರದಲಿ ‖ ನರಚರಿತ್ರದ ವಿಷ್ಣು ವಿಶ್ವಂ | ಭರ ನಮೋ ಯೆನುತಿರ್ದುದಭ್ರದಿ | ಸುರರ ಸುಮ್ಮಾನಿಸುತಲಿರ್ದುದು ಹರುಷ ದುಬ್ಬಿನಲಿ ‖ ೬೭ ‖ ಉರವಣಿಸುವ ಮಹಾಸ್ತ್ರಕಂಬಿನ | ಸರಿಯ ಸುರಿದನು ಮುಟ್ಟವಿಸಿ ಒರ | ಬೆರಸಿ ಹೊಯ್ದನು ಖಡುಗ ಖರ್ಪಣ ಪರಶು ಪರಿಘದಲಿ ‖ ಉರಕೆ ಮೋಹಲು ಮುಷ್ಟಿಯಿಂ ದ | ಬ್ಬರಿಸಿ ತಿವಿದನು ಸುರ ನರೋರಗ | ಸರಣಿಯಲಿ ದಶಶಿರನವೊಲು ರಣಧೀರನಾರೆಂದ ‖ ೬೮ ‖ ತಡೆವವೇ ತಾರೆಗಳು ತರಣಿಯ | ನಡಸಿ ನುಂಗುವ ರಾಹು ವನು ಕಡಿ | ದುಡಿದು ಹಾಯಿತು ಸರಳುರಸ್ಥಳವನು ದಶಾನನನ ‖ ಹೊಡೆದವಮರ ಭೇರಿ ರಾಮನ | ಮುಡಿಯೊಳೊಕ್ಕವು ಕುಸುಮ ವಮರರ | ಮಡದಿಯರು ಸುರಿಸಿದರು ಜಯರವ ಮಂಗಳಾರತಿಯ ‖ ೬೯ ‖ ಹರಿಗೆ ವಿಶ್ವಂಭರಗೆ ಸರ್ವೇ | ಶ್ವರಗೆ ಸನಕಾದ್ಯ ಖಿಳ ಮುನಿ ಹೃ | ತ್ಸರಸಿರುಹ ಪೀಠಂಗೆ ಸದಾನಂದೈಕ ರೂಪಂಗೆ ‖ ಪರಮ ಮಂಗಳ ಮೂರ್ತಿಗಾನತ | ಸುರ ಕಿರೀಟನತಾಂಘ್ರಿ ಕಮಲಗೆ | ಸುರಸತಿಯ ರೊಲಿದೆತ್ತಿದರು ಜಯ ಮಂಗಳಾರತಿಯ ‖ ೭೦ ‖ ಜಯ ಜಗತ್ಪತಿ ಜಯ ಜನಾರ್ದನ | ಜಯ ಜಗದ್ರಕ್ಷಕ ಜಯಾಚ್ಯುತ | ಜಯ ಜಯಾಸುರವಂಶ ಮದಮಾತಂಗ ಪಂಚಾಸ್ಯ ‖ ಜಯಜಗತ್ರಯ ಸುರನರೋರಗ | ಭಯ ವಿಭಂಜನಯೆನುತ ಸುರನಾ | ರಿಯರು ಸುಳಿಸಿದ ರಿದಿರಿನಲಿ ಜಯ ಮಂಗಳಾರತಿಯ ‖ ೭೧ ‖ ಆಡಿದರು ಗಂಧರ್ವಯುವತಿಯ | ರಾಡಿದರು ರಂಭಾದಿ ದಿವಿಜರ | ಗಾಡಿಗಾತಿಯರುದಿತ ತೂರ್ಯತ್ರಯ ನಿನಾದದಲಿ ‖ ಕೂಡೆ ಸುರ ಮಾಗಧಿಯ ರುರೆ ಕೊಂ | ಡಾಡಿದರು ಕಡೆಗಣ್ಗಳಲಿ ಜಲ | ವ ಊಡಿದವು ರಾಮಂಗೆ ರಾಮನ ಶರಣಾ

ಗತಿಕಂಗೆ ||೭೨|| ಬಿಟುಟಳವನೀದೇವಿ ನೆರೆ ಭಾ | ವಿಸಿದ ನೈರ್ಋತ್ಯ ಹೊರೆಯ ವಸುಗಳು| ಪಸರಿಸಿದ ನಹಿರಾಜ ದಿಗ್ಗಜ ಕೂರ್ಮಾದಿಗಳು || ವಸು ಮರುದ್ಗಣ ರುದ್ರಗಣ ಮುನಿ| ವಿಸ್ತರ ಮುಖ್ಯ ಸಮಸ್ತ ದಿವಿಜ| ಪ್ರಸರವಿದ್ದುದು ನೊಸಲಕೈಗಳ ಜಯನಿನಾದದಲಿ || ದೇವ ಜಯಜಯ ಸಕಲ ದೇವರ | ದೇವ ಜಯಜಯ ಜಯ ಜನಾರ್ದನ | ಭಾವಕರ ಕುಲದೈವ ಜಯಜಯ ಜಯ ಜಗನ್ಮಯನೆ || ದೇವ ಲಕ್ಷ್ಮೀಕಾಂತ ವರರಾ | ಜೀವ ಲೋಚನ ರಾಘವೇಶ್ವರ | ರಾವಣಾಂತಕ ರಾಮ ಜಯಜಯ ಎಂದುದಮರಗಣ ||೭೪|| ಕುಶನೆ ಕೇಳ್ಕಿ ಮುಗುಳುನಗೆ ಲಂ | ಬಿಸಿದ ವದನದ ಹೊಗರು ಜಗುಳಿದ | ನಸು ಮುಗಿದ ಲೋಚನದ ಥಳಥಳಿಸುವ ಕದಂಪುಗಳ || ಪಸರಿಸಿದ ತೋಳುಗಳ ವಕ್ಷದೊ | ಳೊಸೆರ್ವ ಶೋಣಿತ ದೀಪ್ತಕಾಯದ | ಲಸುರಪತಿ ರಂಜಿಸಿದನಾ ರಣರಂಗ ಮಧ್ಯದಲಿ ||೭೫|| ಸುರರ ಬಿರುದಿನ ಹಾಹೆಗಳ ಸುರು | ಚಿರದ ಮಣಿವ್ಯಾಕೀರ್ಣ ಚೌವಿಾ | ಕರದ ಚರಣಾಭರಣ ಶೋಭೆಯ ಪಾದಪಲ್ಲವದ || ಸುರಗಿ ಸಂಭೃತ ಶೋಣ ಪಟಬಂ| ಧುರದ ಕಟಿತಟದರ್ಧತನು ಗೋ | ಚರಿಸು ತೋಲೈಸುವ ಮರುಳ್ಗಳ ಸುತ್ತುವಳಿಯದಲಿ ||೭೬|| ಲವನೆ ಕೇಳೈ ಭ್ರಾತೃ ಮೋಹದ | ಲವಲವಿಕೆ ಯೊಂದೆಸೆಯಲಾಳ್ದನ | ಹವಣನರಿಯದೆ ಭಯದ ಭಯದಂಜಿಕೆಯದೊಂದೆಸೆಯ || ಕವಲುಗೊಂಡಿರೆ ಚಿತ್ತದಲಿ ರಾ| ಘವ ಮಹೀಪತಿಯರಿದು ಕರಪ | ಲ್ಲವವ ಸೌಜ್ಞೆಯಮಾಡೆ ಮೂರ್ಛಿತನಾದ ನಸುರೇಂದ್ರ ||೭೭|| ಚೇತರಿಸಿಕೊಂಡೆದ್ದು ಜ್ಯೇಷ್ಠ | ಭ್ರಾತುವಿನ ಶರಭಿನ್ನ ತನುಸಂ| ಭೂತ ಶೋಣಿತ ವಾರಿಯಲಿ ಹೊರಳಿದನು ಬಾಯ್ಬಿಡುತ || ಭೂತನಾಥ ವರಪ್ರಸಾದ ಖ್ಯಾತಿ ಹಾ ಚತುರಾಸ್ಯ ನಿತ್ಯ ವಿ| ನೂತ ನಾಶೀರ್ವಚನ ಲಚನೋತ್ತುಂಗ ಹಾಯೆಂದ|| ವಿತತ ಸಮರ ಭುಜ ಪ್ರತಾಪೋ | ನ್ನತ ಸದಾಗತ ಸಖನ ಝುಳವಡ | ಗಿತೆ ವಿರೂಪಾಕ್ಷನ ಸಮಾನದ ತೃಷ್ಣೆ ಮುದ್ರಿಸಿತೆ || ಕ್ಷಿತಿಪತಿತ್ವದ ವೈಭವಾಲಂ| ಕೃತಿಯು ನೆಗ್ಗಿತೆ ಜಯ ಯಶ ಶ್ರೀ | ಸತಿಯ ಬೈತಲೆಯುಡಗಿತೇ ಹಾಯೆಂದ ನಸುರೇಂದ್ರ ||೭೯|| ಅಣ್ಣ ನುಡಿಯೈ ಸಮರ ಜಯ ಮು| ಕ್ಕಣ್ಣ ನುಡಿಯೈ ಸಕಲ ಸುರರೆಳೆ| ವೆಣ್ಣುಗಳ ಸಂತತಿ ವಿಲಾಸ ಪ್ರೌಢ ಮಾತಾಡೈ|| ಹೆಣ್ಣಿಗೆ ಕೆಟ್ಟೈ ಹಗೆತನವ ಪರ| ವೆಣ್ಣಿಗೋಸುಗ ಭಗಿನಿ ಚಿತ್ತದ | ಬನ್ನಣೆಯ ಬೇಳಂಬದಲಿ ಹಾಯೆಂದ ನಸುರೇಂದ್ರ ||೮೦|| ಕುಲಕೆ ಕಂಟಕನಾದೆ ನವನೀ | ತಳಕೆ ಭಾರಕನಾದೆ ನರಕದ | ಕುಳಿಗೆ ನಾಯಕನಾದೆ ಜಗದ ಜನಾಪವಾದಕದ || ಛಲನ ಕಧಿಕೃತನಾದೆ ಹೊತ್ತೆನು | ಜಲಜ ಸಂಭವ ಕಲ್ಪಪರಿಯಂ| ತಳಿಸದಪಕೀರ್ತಿಯನು ವತಿಯನಗೇನು ಕೇಳೆಂದ ||೮೧|| ಸಿರಿಯ ಮೇಲಣ ಲೋಲುಪತೆಯಲಿ | ಧುರದ ಮುಖದಿಂದಗ್ರಜನ ಸಂ| ಹರಣವನು ಮಾಡಿಸಿದೆನೆಂಬೀ ಬಗೆ ಕಕುಸ್ಥಜನ || ಕರಣವತಿ ಲೇಸಾಗಿ ನೆಲೆಗೊಳ| ದಿರದು ಕೆಟ್ಟೆನು ಕೆಟ್ಟೆನಿಹಪರ| ವೆರಡರಲಿ ಗತಿಯಾವು ದೆನಗೆಲೆಯಣ್ಣ ಹೇಳೆಂದ ||೮೨|| ಮರುಳುತನ ನಿನಗುಂಟೆ ಹೇಳೈ | ವರವಿಭೀಷಣದೇವ ಜನನಕೆ | ಮರಣ ನಿಜ ಸೌಖ್ಯಕೆ ದುಃಖವಿದೀಗ ಲನುಸಾರಿ || ತರುಣತೆಗೆ ವಾರ್ಧಿಕವು ಮಹದೈ | ಶ್ವರ್ಯ ವಿಪದಾಶ್ರಮಕೆ ನೀನಿದ | ಕರುಹನಾಗರಿವಿಂಗೆನುತ ಸಂತೈಸಿದನು ರಾಮ ||೮೩|| ಆರು ನೀ ನಾವಾರು ನಮ್ಮಯ| ನಾರಿಯೆತ್ತಲು ವಿಪಿನವೆತ್ತ ಕು | ಜೇರ ಸಹಭವನೆತ್ತ ಹೊಂಮೃಗವೆತ್ತ ವಾನರರ || ಸೇರ

ಪಡಿ ತಾನೆತ್ತ ದೈವ! ಪ್ರೇರಣೆಯದೀ ಸಲ್ಲದಿದು ನಾ। ವಾರು ಮಾಡುವದಲ್ಲವಂಗೀಕರಣ
ವೇಕೆಂದ ॥ ೮೪ ॥ ಬಿಡು ವೃಥಾ ಶೋಕಾಗ್ನಿ ದಾಹದ । ಲೊಡಲ ಬೇಯಿಸಬೇಡ
ನವಿಸ್ಮಾ। ನುಡಿಯ ನನುವರ್ತಿಸು ಚಿದಾತ್ಮ ವಿವೇಕ ಬುದ್ಧಿಯಲಿ ॥ ನಡೆಸು ಸಾಕೆ
ನ್ನುತ್ತರದ ಪರಿ। ವಿಡಿಯ ಕೃತ್ಯವನೆಂದು ಕಂಬನಿ। ದೊಡೆದು ಸಂತೈಸಿದನು ಶರಣಾ
ಗತನ ನಾ ರಾಮ ॥೮೫॥ ಕೇಳಿದೈ ಕೋಸಲ ಧರಿತ್ರೀ। ಪಾಲಸುತ ಲಂಕಾನಗರದಲಿ।
ಗಾಳು ಮೇಳಾಯ್ತುಕ್ಕಿದವ್ರ ಹೊಂಗದಗಳರಮನೆಯ ॥ ಲಾಳವಿಂಡಿಗೆ ಹಾಯ್ಕಿದವ್ರ
ಪುರ। ದೇಳುಸುತ್ತಿನ ಕೋಟಿಗಳ ಮೊಗ। ಶಾಲೆಯಲಿ ಜಿವರಾಯ್ತು ನಗರದ ಕೇರಿ
ಕೇರಿಯಲಿ ॥೮೬॥ ಅರುಹಿದರು ದೂತರು ದಶಾಸ್ಯನ। ಮರಣವನು ಮಂಡೋದರಿಗೆ
ಕಾ। ಹುರತೆ ಕೋಳಾಹಳಿಸಿತಂತಃಪುರದೊಳಗಲದಲಿ ॥ ಸುರ ನರೋರಗ ದನುಜ
ರಜನೀ। ಚರ ಯುವತಿಯರ ಲಕ್ಕ ಸಂಖ್ಯೆಯ। ನೆರವಿಯಲಿ ರಣಮಂಡಲಕೆ ನಡೆತಂ
ದಳಾ ಕಾಂತೆ ॥ ೮೭ ॥ ಆವ ಘನ ಸಂಪದದೊಳಧಿಕನೊ। ರಾವಣನು ನೆರೆದಿರ್ದದಬಿ
ನರ। ದೇವನಾರಿಯರೆಣಿಸೆ ಷೋಡಶ ಲಕ್ಕ ಸಂಖ್ಯೆಯಲಿ॥ ಸಾವಿಗೋಸುಗ ಸೇರಿದುದೊ
ಕೇ। ಳೈ ವಿಭಾಕರಕುಲಜ ಬಂದುದು। ತೀವಿ ನೆಲದಗಲದಲಿ ಮಂಡೋದರಿಯ ಬಳಿ
ವಿಡಿದು ॥೮೮॥ ಬಿಡುಮುಡಿಯ ಹಾಹಾರವದ ಬೆಳ। ಗಿಡುವ ಕಂಗಳಲೊಗುವ ವಾರಿಯ।
ನಿಡುಸರದ ರೋದನದ ಮಿಡುಕುವ ಪಲ್ಲವಾಧರದ॥ ಎಡಬಲಕೆ ಬಳುಕುವ ಕೊರಳ್ಗಳ।
ಪೊಡರ್ವ ಪೀನಪಯೋಧರದ ಕೆಲ। ಸಿಡಿದ ಮೇಲುದಿನಖಿಳ ಯುವತಿಯು ರೈದಿದರು
ರಣವ ॥೮೯॥ ಝಣರವದ ನೂಪುರದ ಮಣಿಕಂ। ಕಣದ ಹಾರದ ಕಡಪ ನಣವಾ।
ಮಣಿಯ ಮುತ್ತಿನ ತಿಲಕ ಬೈತಲೆಗಳ ವಿಲಾಸಗಳ॥ ಕುಣಿಕೆಗಳ ವರಿದಿಡುತವೀರರ।
ಕಣಿಯೆ ಹಾಸವು ಭಾಗ್ಯ ಚೂಡಾ। ಮಣಿಯೆ ಹಾ ಯೆಂದೊದರುತೈದಿದ ರಾತ್ಮವಲ್ಲ
ಭನ ॥೯೦॥ ಬಿಸಿಲುತಾಕದ ಘಾಳಿ ಸೋಕದ। ಘಸಣಿಕೆಯ ಕಾಲ್ನಡೆಗಳಿಲ್ಲದ। ಶಶಿ
ಮುಖಿಯರೈದಿದರು ಗಾಢಿಯ ಗಾಳುವೇಳದಲಿ॥ ಬಸುರು ಬಾಯ್ಗಳ ಹೊಯ್ಲುಗಳಿನ
ನಿ। ಪ್ಪಸರದಾಕ್ರಂದನದ ನಾರಿಯ। ವಿಸರ ಬಳಸಿತು ವೀರ ಧೀರೋದಾತ್ತ ದಶ
ಮುಖನ॥೯೧॥ ಸುರಪಜಿತು ಕಲಿ ಕುಂಭಕರ್ಣರ। ಸುರ ನರಾಂತಕ ಕುಂಭ ದೀರ್ಘೋ।
ದರ ಮಹೋದರ ಧೂಮ್ರನಯನ ನಿಕುಂಭ ರಾಕ್ಷಸರ ॥ ತರುಣಿಯರು ಮಿತಘ್ನನಂ
ಗನೆ। ಯರು ವಿರೂಪಾಕ್ಷ ಪ್ರಮುಖ ಕುವ। ರರ ವಧೂಜನ ಬಳಸಿದುದು ತಮತಮ
ವಲ್ಲಭರ ॥೯೨॥ ಹರಿದು ಹಾರವ ಕರ್ಣಪೂರವ। ನುರುಬಿ ಕಂಕಣ ಮುದ್ರಿಕೆಯ ಮುಡಿ।
ದೆರೆಯ ಮುತ್ತಿನ ಬೈತಲೆಯ ಮೂಗುತಿಯ ನೀಡಾಡಿ ॥ ಅರಸಿದರು ಹರಿಹರಿದು ತಮ
ತಂ। ಮೆರೆಯರನು ನಡೆತಂದು ತನುವಿನ। ಹರುಕ ಸಂಧಿಸಿ ಮಯತನುಜೆ ತೆಗೆದಪ್ಪಿ
ದಳು ಪತಿಯ ॥ ೯೩ ॥ ತೋಳುಗಳ ನಿಜಪತಿಯ ಬೆನ್ನಿನ। ಮೇಲೆ ಸೇರಿಸಿ ವಾಮ
ದಂಗದ। ಮೇಲೆ ಕುಳ್ಳಿದು ದಿಟ್ಟಿಸಿದಳಾನನವ ನಿಜಪತಿಯ ॥ ಥಾಳಿಸುವ ಗಂಡಸ್ಥಳದ
ರಣ। ಧೂಳಿಯನು ತೊಡೆತೊಡೆದು ಸಂಗರ। ಕೇಳಿ ಯೇನಾಯ್ತೆಂದು ಬೆಸಗೊಂಡಳು
ನಿಜೇಶ್ವರನ ॥೯೪॥ ವೀರ ನುಡಿಯೈ ವಿಬುಧಕುಲ ಸಂ। ಹಾರ ನುಡಿಯೈ ಜಯುವಧೂ
ಮಣಿ। ಹಾರ ನುಡಿಯೈ ಹರಿಧನಂಜಯ ಯಮ ನಿಶಾಚರರ॥ ವಾಯುಧೀಶ್ವರ ವಾಯು
ಧನದ ಪು। ರಾರಿ ಮುಖ್ಯ ಸುಪರ್ವ ರಾಜ್ಯ। ಶ್ರೀರವಣ ನುಡಿಯೆಂದು ಮಂಡೋದರಿ

ವಳು ನಿಜಪತಿಯ ॥ ೯೫ ॥ ಕಡೆಗಣಿಸಿ ನೋಡಜನ ನಿದಿರಿಲಿ । ವೃಡನ ನೀಕ್ಷಿಸು ಮುನಿಯ ವೀಣೆಯ । ನುಡಿಯ ಲಾಲಿಸು ನೋಡುಲಾಸ್ಯವ ನೂರ್ವಸೀ ಸತಿಯ ॥ ಎಡಬಲದ ಶಕ್ರಾದಿ ದೇವರ । ಝಡಿವ ಕಂಚುಕಿಗಳ ನಿವಾರಿಸು । ಕೊಡು ಧನವ ಹೊಗಳಿಕೆಯ ವರಿಗೆಂದಬಲೆ ಯೊರಲಿದಳು ॥೯೬॥ ಕಳುಹು ವೀಳಯವಿತ್ತು ತಾರಾ । ಬಲವ ಹೇಳಿದ ಗುರುವ ನಂಜುಳ । ಯುಲಸುರಾಚಾರ್ಯರನ ನುರು ಮನ್ನಿಸು ಸುಧಾ ಕರನ ॥ ಲಲಿತಕರ ದರ್ಪಣವ ನೀಕ್ಷಿಸು । ವುಲಯ ಪವನನ ಕೈಯ ಹೊಂಬ । ಟ್ಟಲಿನ ಗಂಧವ ಧರಿಸು ನೊಸಲಲಿ ಯೆಂದಳಾಕಾಂತೆ ॥೯೭॥ ಕುಸುಮ ಬಾಣನ ಕಾವ್ಯದಭಿನವ। ರಸವ ನಾಲಿಸು ವರ ವಸಂತನ । ಕುಸುಮವನು ಮುಡಿ ರತಿಯ ನಯುಗೆಭ್ರೂವಿಲಾಸ ವನು ॥ ಎಸೆದು ನೋಡು ಕಟಾಕ್ಷದಿಂದೀ । ಕ್ಷಿಸು ಜಯಂತನ ಧನವ ತನುಜನ । ಹಸನ ವಶನಾಳಾಪ ರಚನೆಯ ಮಾಡು ಮಾನಸದ ॥ ೯೮ ॥ ಓಲಗಕೆ ಧೂಮ್ರಾಕ್ಷ ಕುಂಭ ಕ । ರಾಳ ದೇವಾಂತಕ ಸುಪಾರ್ಶ್ವಕ । ವೀರ ವಿದ್ಯುನ್ಮಾಲಿ ವಿದ್ಯುಜ್ಜಿಹ್ವ ಮಕ ರಾಕ್ಷ ॥ ಕಾಲರಿಪು ಕಲಿ ಕಂಭಕರ್ಣ ವಿ । ಶಾಲಬಲ ನತಿಕಾಯ ಮುಖ್ಯ ವಿ । ಲೋಲ ಕುಂಡಲ ಭಟರು ಬಂದಿಹ ರೀಕ್ಷಿಸೆಡಬಲವ ॥೯೯॥ ಬಂದಿಹನೆ ನೋಡರಸ ಮೋಹದ । ಕಂದ ಸಿಂಧಾರಾತಿ ಕೇಳ್ನಡೆ । ತಂದಿಹನೆ ನಚ್ಚಿನ ನರಾಂತಕ ಕಲಿ ವಿರೂಪಾಕ್ಷ ॥ ಇಂದಿವರ ನುಪಚರಿಸು ಸೀತೆಗೆ । ಬಂದ ಭಟನಾಹವಕೆ ಬೆಸಸೇ । ನೆಂದು ನುಡಿವೆನು ತಾನು ಮರು ಮಾತೇನು ಹೇಳೆಂದು ॥೧೦೦॥ ಎಂದು ಗಂಡನನಬಲೆ ಬಹು ವಿಧ । ದಿಂದ ಹಲುಬಿ ಬಳಿಕ ಮೂರ್ಛೆಗೆ । ಸಂದು ಮೈಮರೆದಿರ್ದ ಳೊಂದರೆಘಳಿಗೆ ಪರಿಯಂತ ॥ ಕಂದ ಕೇಳೈ ಕಲಿ ವಿಭೀಷಣ । ಸಿಂದು ನಿಲ ಲರಿಯದೆ ವಿಲೋಚನ । ದಿಂದ ಸುರಿ ವಶೃಗಳಿಗೊರಗಿದ ನಿಳೆಗೆ ಮೂರ್ಛೆಯಲಿ ॥೧೦೧॥ ಸತಿಯ ನೆವದಲಿ ದೇವ ನೀ ವಸು । ಮತಿಯ ಭಾರವ ಕಳೆದು ಶರಣಾ । ಗತರ ಸಲಹಿದೆ ಸಂದುದದು ಸುಲಭದಲಿ ನೀನೆನಗೆ॥ ಗತಿಯದಾವುದು ದೇವ ಪೇಳೆಂ । ದತಿಶಯದ ಶೋಕದಲಿ ಸೀತಾ । ಪತಿಯ ಶಿರಿ ಚರ ಣಾರವಿಂದಕೆ ಚಾಚಿವಳು ಪಣೆಯ ॥೧೦೨ ॥ ಎತ್ತಿ ಮಂಡೋದರಿಯ ಹಣೆಯ ನು । ದಾತ್ತ ಕರುಣಾಸಿಂಧು ನುಡಿದನು। ಹೊತ್ತುಕೊಂಡನು ಭಾರವನು ನಿನ್ನಾತನಪಯಶದ॥ ಸತ್ತನನ್ಯಾಯದಲಿ ನೀನಿದ । ಕತ್ತು ಮಾಡುವದೇನು ಬಿಡು ಕೆಲ । ಕೊತ್ತಿ ಕಳೆ ಚಿಂತೆ ಯನು ಚಿತ್ತದೊಳೆಂದನಾ ರಾಮ ॥೧೦೩॥ ನಿನಗೆ ಪೇಳುವುದೇನು ನಿನ್ನಯ । ನೆನಹು ತಾ ನಜ್ಞಾನ ಮೋಹಕ । ದನುಭವನ ಬಲ್ಲಬಲೆಯೆಂಬುದು ತೋರುತಿದೆ ನಮಗೆ । ತನು ಪರಿಚ್ಯುತಿ ತನಕಲೀ ಮೈ । ದುನನ ನೀ ಮುಂದಿಟ್ಟು ಕೊಂಡಿರು । ಮನದ ಮರು ಕವ ಬಿಟ್ಟುಕಳೆ ನೀನೆಂದನಾರಾಮ ॥ ೧೦೪ ॥ ಸಂತವಿಟ್ಟನು ಬಳಿಕ ಸೀತಾ । ಕಾಂತ ನಧಿಕ ವಿಲಾಪ ಶೋಕದ । ಕಾಂತೆಯನು ಕರುಣೋದಯದ ಮಾಧುರ್ಯ ವಚನದಲಿ ॥ ಭ್ರಾಂತು ಬೇಡಿನ್ನೆಂದು ಶರಣನ । ಸಂತವಿಸಿ ಸೌರಂಭಪುರಿಗೆ ಭೂ । ಕಾಂತ ಬಿಜಯಂಗೈದು ಹೊಕ್ಕನು ತನ್ನ ಪಾಳಿಯವ ॥ ॥೧೦೫॥

ಐವತ್ತೊಂದನೆಯ ಸಂಧಿ ಸಮಾಪ್ತಂ.

ಐವತ್ತೆರಡನೆಯ ಸಂಧಿ.

ಸೂಚನೆ॥ ಪುರಕೆ ಹನುಮನ ಕಳುಹಿ ಬೆದರಿದ । ಪುರಜನವ ಸಂತೈಸಿ ಶರಣನ । ಸುರ ವಿರೋಧಿಯ ಸಂಸ್ಕೃತಿಗೆ ನೇಮಿಸಿದನಾ ರಾಮ ॥

ಪದ್ಯ॥ ಹನುಮ ಹೋಗೂರೊಳಗೆ ಗಾವಲಿ । ಮನುಗದಂಶಿರೆ ಸಂತವಿಸಿ ಪುರ । ಜನವ ಶಿಕ್ಷಿಸು ಗಜಬಜದ ಗರ್ವಿತ ನಿಶಾಚರರ ॥ ಬನದ ಸೀತೆಯ ದಾತನರಿ ಹೋ । ಗೆನೆ ಹಸಾದವಹಾಯ್ಕಿ ವಾನರ । ಜನ ಸಹಿತ ಬೀಳ್ಕೊಂಡು ಲಂಕಾಪುರಿಗೆ ನಡೆತಂದ ॥ ಪುರಜನವ ಸಂತೈಸಿ ಲಂಕಾ । ಪುರದ ವರ ಸಿಂಹಾಸನಕೆ ಭೂ । ವರ ವಿಭೀಷಣದೇವ ನೆಂದೈ ಹೊಯ್ಸಿ ಡಂಗುರವ ॥ ಇರಿಸಿ ಕಾವಲ ಕೇರಿ ಕೇರಿಗೆ । ಹರಿಚಮೂಪರ ನೈದಿ ದನು ಬಂ । ಧುರದಶೋಕಾವನದ ದೇವಿಯ ಕಂಡನಾ ಹನುಮ ॥೨॥ ಚರಣ ಕಾನತ ನಾಗಿ ಕೆಲಸಾ । ರ್ದರಿಭಯಂಕರ ನುಭಯಕರ । ಸರಸಿರುಹವನು ಮುಗಿದೊಯ್ಯನೊಸ ಗೆಯ ವಾರ್ತೆಯನು ಬಳಿಕ ॥ ವಿರಚಿಸಿದನಾ ವೀರ ದಶಕಂ । ಧರ ಶಿರಃಕಂತುಕ ವಿನೋ ದವ । ಧುರ ಧುರಂಧರ ದುಷ್ಟ ದೋರ್ದಂಡ ಪ್ರತಾಪಕವ ॥೩॥ ಲೋಕಕಂಟಕ ಕುಂಭ ಕರ್ಣನ । ನಾ ಕಠೋರ ಖರಾತ್ಮಜನ ಮೂ । ಲೋಕ ದಲ್ಲಣನ ರಾವಣಾಸುರ ಮುಖ್ಯ ರಾಕ್ಷಸರ ॥ ನೂಕಿದನು ಯಮಪುರಕೆ ರಣದೊಳ । ಗೇಕ ಪತ್ನೀವ್ರತನು ಸುಮನ । ವ್ಯಾಕರಣ ಪಂಡಿತನು ಹರ ಕೋದಂಡ ಖಂಡಿತನು ॥೪॥ ಸಾಯಕದ ಮುಖದಲಿ ಬಳಿಕತಿ । ಕಾಯನನು ವಾಯವ್ಯಾಸ್ತ್ರಬಲ ವ । ಜ್ರಾಯುಧಾಂತಕ ಮುಖ್ಯ ವೀರರ ನಸಮ ಸಮರದಲಿ ॥ ವಾಯುಪಥಕೇರಿಸಿದನಾ ರಘು । ರಾಯನನುಜನು ಮಿಕ್ಕ ಕಪಿ ಭಟ । ನಾಯಕರು ಕೊಂದರು ಸಮಸ್ತ ನಿಶಾಟ ನಾಯಕರ ॥೫॥ ಎನೆ ಮಹೋದ್ಯಮ ವಾದ ಹರುಷಾ । ನನದ ಹೊಂಪುಳಿಯಾದ ಹೆಂಪಿನ । ತನುವಿನಳಿದುಮ್ಮಳದಲಾನಂ ದಾಶ್ರು ಪೂರದಲಿ ॥ ಇಳೆಯ ನಧಿಕ ಪರಾಕ್ರಮದ ಭಾ । ವನೆಯ ನಂಗೀಕರಿಸಿ ಹನು ಮನ । ಮನಕೆ ಬಹ ಮಾತುಗಳ ನುಡಿದಳು ಮಧುರ ವಚನದಲಿ ॥೬॥ ಶೇಖರಿಸಿದುದು ಕೀರ್ತಿ ತತ್ಕುಲ । ಶಾಖೆ ತಳಿತುದು ಸುಪ್ರತಾಪ ಮ । ಯೂಖ ನಾಲಿಯ ಮರಸಿದುದು ಕೇಳ್ ಹನುಮ ನಿನ್ನಿಂದ ॥ ಆ ಖರಾರಿಗೆ ವಿಜಯ ವಿಭವೋ । ಲ್ಲೇಖವಾದುದು ಯೆಂದು ಸಿಂಧು ಸ । ಮೇಖಲಾಲಂಕೃತಿಯಸುತೆ ಕೊಂಡಾಡಿದಳು ಕಪಿಯ ॥೭॥ ಇದುವೆ ನಿಮ್ಮ ಪತಿವ್ರತಾ ಸಂ । ಪದದ ಗುಣವಲ್ಲದಡೆ ಕಲ್ಲಿನ । ಲುದಧಿ ಕಟ್ಟಿಸಿ ಕೊಂಬುದೇ ಕಪಿಗಳು ನಿಶಾಚರರ ॥ ಕದನದಲಿ ಜಯಿಸುವರೆ ಕಲಿ ದಶ । ವದನ ನಳಿವನೆ ತಾಯೆ ಯೆಂದಾ । ಮದನಮುಖವೈರಿ ಮಹಿಜಾಸುತೆಗೆ ಕೈಮುಗಿದ ॥೮॥ ಬಿಡುವು ದಿನ್ನುಮ್ಮಳವ ನಾಯಸ । ಸಿಡಿಲಿತಿನಕುಲ ದವನಿಪಗೆ ನಿ । ಮ್ಮೊಡೆಯ ಲಕ್ಕರು ಘನ ಮಹಾ ಸ್ನೇಹ ಪ್ರಪಂಚಕದ ॥ ಝುಡಿತೆಯಿಲ್ಲೆನೆ ಹರುಷ ಹೊಗ ದು । ಗದ್ಗದ ಕಂಬನಿ ಯಿಂದ ಜಾನಕಿ । ನುಡಿದಳರಸನ ಮನಸು ಬೀಸಿಲೆ ಹನುಮ ತನ್ನೆಡೆಗೆ ॥೯॥ ಕಳುಹಿ ದೆನು ಕಾಂಚನದ ಹರಿಣನ । ಬಳಿಯ ಬಯಕೆಯ ಭರದಲರಸನ । ಕಳುಹಿದೆನು ಕೆಡೆ ನುಡಿದು ಕಾಂತಾರದಲಿ ಮೈದುನನ ॥ ಖಳನ ಕೈವಶವಾದೆ ಯಿದು ಫಾ । ತಳಿಕಿಲ್ಲವೆ ಹೆಂಗುಸಿಗೆ ವಚನ । ದೊಳಗೆ ರಘುಪತಿ ಯೇನ ಬಗೆವನೊ ಯೆಂದಳಿಂದುಮುಖಿ ॥೧೦॥

ಮಾತನಾಡಿಸಿ ಕೇಳಿದರೆ ತಾ | ನೇತರಿಂದುತ್ತರವ ಕೊಡುವೆನು | ಮಾತನಾಡದಿ ರವಸಿಹನ ನೇನೆಂದು ನುಡಿಸುವೆನು ‖ ಏತಡೆನ್ನಯ ಭಾಗ್ಯ ವೊಲಿಯದಿರ | ಲೇತರದು ಬಳಿಕುಳಿವು ಹೊಗುವೆನು | ವೀತಿಹೋತ್ರನನೆಂದು ಕಂಬನಿ ದುಂಬಿದಳು ಸೀತೆ ‖ ೧೧ ‖ ವಿಹಿತವಲ್ಲವು ನುಡಿ ನವಗೆ ನಿ | ಸ್ಪೃಹತೆಯುಳ್ಳಡೆ ಹಗೆಯ ಕೊಲಲೈ | ತಹೆನು ನಿಮ್ಮಯ ಜೀವಿತೇಶನ ನಿಮ್ಮ ನೆನಹಿನಲಿ‖ ಇಹಮನವ ನಾಬಲ್ಲೆ ನೀ ಯು | ಮ್ಮಹದ ಚಿಂತೆಯ ಬಿಸುಡಿ ನೀವುನೆ | ಮಹಿಪನಡೆಗೆ ಬೀಳುಕೊಟ್ಟಳು ಪವನ ನಂದನನ‖೧೨‖ ನಮಿಸಿ ನಿಮಿಕುಲವಾರ್ಧಿ ವಾರ್ಧನ | ಕುಮುದ ಬಾಂಧವ ನಳಿದೆನೆಗೆ ವಿ | ಕ್ರಮಿ ಮಹಾರ್ಣವ ನೈದಿದನು ರಘುರಾಯ ಚಂದ್ರಮನ ‖ ನಮಿಸಿದನು ನಂನಾಟಕದ ಮಾ | ರಮಣ ನಂಘ್ರಿ ಸರೋರುಹಕೆ ಸಂ | ಭ್ರಮವಿದೇನೈ ಹನುಮ ಹೇಳೆಂದರಸ ಬೆಸಗೊಂಡ ‖೧೩‖ ಪುರಜನವ ಸಂತೈಸಿದೈ ದಶ | ಶಿರನ ತಮ್ಮನ ಜಗೆಯುಗಾವಳಿ | ಗರನು ಶಿಕ್ಷಿಸಿದೈ ಹಸಾದ ವಿಭೀಷಣನ ಗೃಹಕೆ ‖ ಇರಿಸಿದೈ ಕಾವಲನು ಮಿಗೆ ಬ | ಲ್ಲಿದ ಚಮೂವರ ದೇವಿ ಸೀತೆಯ | ಪರಿಯ ನರಿದೈ ಯೆನಲು ಬಿನ್ನಹ ಮಾಡಿದನು ಹನುಮ ‖ ಅಂದಿಗಿಂದಿನ ದಿನಕೆ ತನುವತಿ | ಕಂದಿದುದು ದೇವಿಯರ ದೇವರ | ರೊಂದು ನಾಮ ಸ್ಮರಣೆಯಲ್ಲದೆ ಕಾಣೆನನ್ಯವನು ‖ ಸಂದ ಸಂಗರದಲಿ ದಶಾಸ್ಯನ | ಕೊಂದ ಹದನನು ಹೇಳಿ ಹರುಷವು | ವಂದು ಭಾಗವು ಧರಿಸಿದುದು ಸಿರಿವದನ ವಂಬಿಕೆಯ ‖೧೪‖ ದೇವರುತ್ತರ ಕಾರ್ಯ್ಯ ದಭಿಸಂ | ಭಾವನೆಯ ನೀ ವರಿಯದುದೆ ಬಳಿ | ಕಾ ವಿದೇಹ ಕುಮಾರಿ ಕಳುಹಿದ ಳಶ್ರುಜಲ ಜಡಿಯೆ ‖ ದೇವರಿದ್ದೆಡೆಗಿನ್ನು ನಿಮ್ಮ ಕೃ | ಪಾವಲಂಬನ ವೆಂತುಟಿಂಬುದ | ನಾವು ಬಲ್ಲೆವೆಯೆಂದು ಬಿನ್ನಹ ಮಾಡಿದನು ಹನುಮ ‖೧೫‖ ಸಾಕು ಬಳಲಿದೆ ಕುಳ್ಳಿರೆಮಗಿ | ನ್ನೇಕೆ ಗತ ಕಾರ್ಯಪ್ರಸಂಗ | ವ್ಯಾಕುಲತೆ ಯೆಂದೀಕ್ಷಿಸಿದನಾ ಶರಣನಾನನವ ‖ ಸೋಕದಿರು ಚಿಂತೆಯನು ನಡೆ ನೀ | ಕೈಕಸೆಯ ನಂದನಗೆ ಮಾಡು ನಿ | ರಾಕುಲತೆಯಿಂದೌರ್ಧ್ವ ದೇಹಿಕ ವಿಹಿತ ಸಂಸ್ಕೃತಿಯ ‖೧೬‖ ಬೀಳುಕೊಂಡಸುರೇಂದ್ರ ಬಂದು ವಿ | ಶಾಲ ವೈದಿಕ ವಿಹಿತದಲಿ ದಶ | ಮೌಳಿಯನು ಸಂಸ್ಕರಿಸಿದನು ಬಳಿಕಾ ಚಿತಾಗ್ನಿಯಲಿ ‖ ಬಾಲಕಿಯರೊರಗಿದರು ವಹ್ನಿಜ್ವಾಲೆಯಲಿ ಮಿಕ್ಕಸುರರಗ್ಗದ | ಬಾಲೆಯರು ಸಹಗಮನದಲಿ ನೀಗಿದರು ನಿಜತನುವ ‖೧೭‖ ಹೊತ್ತಿಸಿದರುರಿ ತನು ಬಳಿಕೆಂ | ಭತ್ತು ಯೋಜನದಗಲ ದಿಳೆಯಲಿ | ಸತ್ತ ಸುಭಟರಮೇಲೆ ತಳಿಗಳ ನೊಟ್ಟಿ ನೀರಸದ ‖ ಇತ್ತರುದಕಾಂಜಲಿಯ ನನಿಬರು | ಪುತ್ರ ಮಿತ್ರ ಜ್ಞಾತಿಗಳು ಸ | ದ್ವೃತ್ತ ವೀರ ವಿಭೀಷಣಾಸುರನೊಡನೆ ಬಳಿಕೆಂದ ‖ ‖೧೮‖

ಐವತ್ತೆರಡನೆಯ ಸಂಧಿ ಸಮಾಪ್ತಂ.

ಐವತ್ಮೂರನೆಯ ಸಂಧಿ.

ಸೂಚನೆ‖ ಶರಣನನು ಪತಿಕರಿಸಿ ಲಂಕಾ | ಪುರದ ಪಟ್ಟವಕಟ್ಟಿ ಸೀತೆಯ | ವರಿಸಿ
ದನು ರಘುನಾಥ ನಭವಾದಿಗಳು ನಲಿದಾಡೆ ‖

ಪದ್ಯ॥ ಕಲೆ ಕುಶನೆ ಕೇಳಾದುದಲ್ಲಿಂ । ಬಳಿಕ ವೈದಿಕ ಲವ್ರಕಿಕದ ವಿಧಿಯಲಿ
ದಶಶಿರ ಕುಂಭಕರ್ಣಾದಿಗಳ ಸಂಸ್ಕಾರ ॥ ಬಲಿದ ಚಿಂತೆಯ ಮನದ ಬೆರಗಿನ । ಬೆಳವಿ
ಗೆಯ ಭಾರಣೆಯ ಕರಣದ । ಲಳುಕುತೈತಂದಾ ವಿಭೀಷಣ ನೆರಗಿದನು ಪದಕೆ ॥ ೧ ॥
ಕಂಡು ಶರಣಾಗತನ ವಿಭವಾ । ಖಂಡಲನು ಕರುಣದಲಿ ಕಾಣಿಕೆ । ಕೊಂಡು ಪತಿಕರಿಸಿ
ದನು ಪರಮ ಪ್ರಿಯತರೋಕ್ತಿಯಲಿ ॥ ಚಂಡಬಲ ಸುಗ್ರೀವ ಜಾಂಬವ । ಗಂಡುಗಲಿ
ಹನುಮಂತನನು ಮಾ । ರ್ತಾಂಡ ವಂಶಲಲಾಮ ಬಳಿಕಿಂತೆಂದು ನೇಮಿಸಿದ ॥ ೨ ॥
ಈತ ನಮ್ಮನು ಕಂಡ ದಿನದಲಿ । ಮಾತ ನಾಡಿದೆ ನಾವುದನು ನಾ । ವೀತಗಾ ಮರಿ
ಯಾದೆಯಲಿ ಪಟ್ಟಾಭಿಷೇಚನವ ॥ ಖ್ಯಾತವಾಗಿಯೆ ಮಾಡುವುದು ವಿಭ । ವಾತಿಶಯ
ದಲಿ ಹೋಗಿ ನೀವೆಂ । ದಾತಗಳ ಬೀಳ್ಕೊಡಲು ಕೈಮುಗಿದೆಂದ ನಸುರೇಂದ್ರ ॥ ೩ ॥
ಅರಸುತನಕೋಸುಗವೆ ಅಣ್ಣನ । ಹರಣ ಕನ್ಯವ ಬಗೆದವನು ನೆರೆ । ನರಚರಿತ್ರವ
ನಾಟಕವ ದಿನ್ನೇಕೆ ದೇವರಿಗೆ ॥ ವರವ ಪಡೆದವನ್ಯೆಸೆ ತಾನಿವ । ಹರಕೆವಿಗನಲ ದೇವ
ರೀಪರಿ । ಕರುಣಿಸುವರೇ ಕಷ್ಟವೃತ್ತಿಯನೆಂದ ನಸುರೇಂದ್ರ ॥ ೪ ॥ ದೇವರೊಡೆಯರು
ತೋರುವೀ ಭುವ । ನಾವಳಿಗೆ ರಾಜ್ಯಾಭಿಲಾಷೆಯ । ಸೇವಕರಿಗೀವುದು ಭವತ್ಪದ ಭಕ್ತಿ
ಭೂತಳಕೆ ॥ ದೇವರೆನ್ನವ ನಿಲಿಸುವುದು ಮ । ತ್ತಾವ ಮಾತನು ಬೆಸಸಬೇಡೆಂ । ದಾ
ವಿಭೀಷಣ ನೆರಗಿದನು ಮಗುಳರಸನಂಘ್ರಿಯಲಿ ॥೫॥ ಎಲೆ ವಿಭೀಷಣ ಕೇಳಿದೈ ರಘು ।
ಕುಲದ ರಾಯರು ತಪ್ಪಿ ನುಡಿಯರು । ಹಳಿವ ಹೊರರಿದು ಸಿದ್ಧ ನಿನಗಿನ್ನೇಕೆ ಮರು
ಮಾತು ॥ ಹೋಗಲಿ ಗಭಿಮುಖನಾಗು ಮನದಲಿ । ಹಲವ ನೆಣಿಸದೆ ಮರಳಿ ಮಾತನು ।
ಬಳಿಕದಡೆ ತನ್ನಾಣೆ ನಿನಗೆಂದರಸ ಬೀಳ್ಕೊಟ್ಟ ॥೬॥ ನಗರ ಸಿಂಗರಿಸಿತು ಸುರಪನ ।
ನಗರಕಿಮ್ಮಿಗಿಲೆನಲು ಪಲ್ಲವ । ವಗಿವವೆತ್ತಿದ ವಗಲದಲಿ ಗುಡಿ ತೋರಣಾದಿಗಳು ॥
ಅಗರು ಕುಂಕುಮ ಗಂಧದಲಿ ಮಘ । ಮಘಿಸಿದವು ಬೀದಿಗಳು ಪಟ್ಟದ । ಸೊಗಸಿ
ನಖಿಳದ್ರವ್ಯ ಸಂಪಾದಿಸಿತು ನಿಮಿಷದಲಿ ॥ ೭ ॥ ಬಳಿಕ ಮಂಗಳವಾದ್ಯ ರಭಸದ ।
ಲಿಳೆಯ ವಿಬುಧರ ನಿಗಮ ಮಂತ್ರದ । ಕಳಕಳದಲಿನಸುತ ಸುಮಿತ್ರಾತ್ಮಜರ ಹರಕೆ
ಯಲಿ ॥ ಸುಲಭವಾದುದು ಪಟ್ಟ ಕಂಡುದು ಹೊಳ । ಲಜನ ಪರಿಜನ ಸುಹೃಜ್ಜನ ।
ನಳಿನ ನಯನಾರಾಧಕನ ನಾ ವರ ವಿಭೀಷಣನ ॥೮॥ ಹರುಷಮಿಗೆ ಮನ್ನಿಸಿದನಾ ರಘು ।
ವರನ ತಮ್ಮನ ಬ್ರಹ್ಮಪುತ್ರನ । ತರಣಿ ತನ ಜನ ವಾಯು ವನ್ಹಿ ಸುರೇಂದ್ರ ಸುತ
ಸುತರ ॥ ಕರಿ ರಥಾಶ್ವ ಪದಾತಿ ಪುರಜನ । ನೆರೆದು ಕನ್ನಡಿ ಕಳಶ ಸಹಿತೂ । ವರ್ರೆಯ
ಪತಿಯೆಡೆಗಾ ವಿಭಿಷಣದೇವ ನಡೆತಂದ ॥೯॥ ಪರಿಪರಿಯ ರತ್ನಂಗಳನು ಪರಿ । ಪರಿಯ
ದಿವ್ಯ ವಿಭೂಷಣಾಂಗಳ । ಪರಿಪರಿಯ ದಿವ್ಯಾಂಬರಾದಿ ಸಮಸ್ತ ವಸ್ತುಗಳ ॥ ಕರಿ
ವರೂಥ ಸುವಾಹನಂಗಳ । ತರುಣಿಯರ ಕಾಣಿಕೆಯ ನಿತ್ತನು । ಚರಣಕಾನತನಾಗಿ
ರಘುಕುಲ ಸಾರ್ವಭೌಮಂಗೆ ॥ ೧೦ ॥ ಶಿರವಶಿರಿ ಹಸ್ತದಲಿ ಮೆಲ್ಲನೆ । ಬರಸೆಳೆದು ಬಿಗಿ
ಯಪ್ಪಿ ನುಡಿದನು । ದರಹಸಿತ ಮುಖದಿಂದ ನಿಜ ಶರಣಂಗೆ ವಿನಯದಲಿ ॥ ಧರೆಯ
ವೈಭವಸಹಿತ ಲಂಕಾ । ಪುರವನಿತ್ತೆನು ನಿನಗೆ ನಿನ್ನಪ । ಚರಣೆ ಬಂದುದು ಪುರಕೆ
ಕಳುಹಿಸು ಕಾಣಿಕೆಯನೆಂದ ॥ ೧೧ ॥ ಹಲವು ಪರಿಯಲಿ ಜೀಡಿಕೊಳು ಕೈ । ಕೊಳವೆ
ತಂದ ಸಮಸ್ತ ವಸ್ತುವ । ಕಳುಹಿ ನಗರಕೆ ಕೈಮುಗಿದು ಬಳಿಕೆಂದ ನರಸಂಗೆ ॥ ಸಲಿಸ

ಬೇಕೆನಗೊಂದು ವರವನು । ಸಲುವ ಸಲಿಗೆಯ ಭೃತ್ಯನಾದಡೆ । ಸಲುಗೆಯೆನು ತನಗೆ ನಲು ನುಡಿ ಕೇಳುವೆವು ನಾವೆಂದ ‖ ೧೨ ‖ ಆವ ಕಾರ್ಯನಿಮಿತ್ತ ಬಿಜಯಂ । ಗೈವು ದಾಯಿತು ಧುರಕೆ ದೇವರ । ದಾವ ಕೆಲಸ ನಿಮಿತ್ತ ಜಯಿಸಿದಿರೀ ದಶಾನನನ ‖ ಈ ವಿವೇಕಸ್ಥಿತಿಯ ನಂತ । ಭಾವದಲಿ ಬೆಳಸಿದಿರಿ ಭೃತ್ಯನ । ಭಾವವೇನೆಂಬುದನು ಚಿತ್ತೈಸಿದಿರೆ ನೀವೆಂದ ‖೧೩‖ ಅರಿದೆನಾವ್ ನಿನ್ನಂತರಂಗದ । ಮರೆಯ ಬಿನ್ನಹವೇಕೆ ಲೋಗರ । ಮುರಿದ ಮಾನಸ್ಥಿತಿಗೆ ರವಿಸುತ ಜಾಂಬವಾದಿಗಳು ‖ ಉರಿವುದೇ ನಿನಗೆ ನುತ ಮಾನಸ । ದೆರಕವಾದರೆ ಕೊಂಡುಬಾ ನಾ । ವರಿವೆ ವಂಗೀಕರಣ ವಿಂಗಿತವಸು ಮಹೀಸುತೆಯ ‖೧೪‖ ಎನ ಹಸಾದವೆನುತ್ತ ರಘುನಂ । ದನನ ಪದಕಭಿನಮಿಸಿ ಜೀ ಳ್ಯೊಂ । ದನು ಮಹೋತ್ಸವದಿಂದ ಬಂದನು ತನ್ನ ಪಟ್ಟಣಕೆ ‖ ಧನಪತಿಯ ದಂಡಿ ಗೆಯ ಲೆಡಬಲ । ದನುಚರರ ಚಾಮರದ ಛತ್ರದ । ಘನತರದ ಗಡಬಡೆಯ ಕಂಚುಕಿ ಗಳ ವಿಡಾಯಿಯಲಿ ‖೧೫‖ ಗುಡಿಗಳೆತ್ತಿದ ವಗಲದಲಿ ಕಂ । ನಡಿಯ ಕಲಶದ ತೋರ ಣದ ಸಂ । ಗಡ ಗಳೆಸೆದಡವು ಕೇರಿಕೇರಿಯಲಿಂದು ಭಾಸ್ಕರರ ‖ ಕಡುಹು ಕುಣಿದಾಡಿ ದವು ಹೇಮದ । ತೊಡಹದುರು ನಿಸ್ಸಾಳತತಿಯಲಿ । ನುಡಿವಡಚ್ಚರಿಯೆನಲು ಮಿಗೆ ಸಂಭ್ರಮಿಸಿತಾ ನಗರ ‖೧೬‖ ಕುಶನೆ ಕೇಳ್ಳೈ ಬಳಿಕ ರಾಕ್ಷಸ । ವಸುಮತೀಶ್ವರ ನಖಿಳ ಭುವನ । ಪ್ರಸರದಧಿದೇವತೆಯ ನೊಲಿದಿದಿರ್ಗೊಂಬ ತವಕದಲಿ ‖ ಪೊಸಗೆ ವಲೆಯನು ಹೆಯ್ಸಿ ತನಯ । ಶಶಿಮುಖಿಯ ನೊಡಗೂಡಿ ಭೂಸುರ । ವಿಸರದೊಗ್ಗಿನ ಲೈದಿದನು ಬನವನು ಮಹೀಸುತೆಯ ‖ ೧೭ ‖ ಇಳಿದು ದಂಡಿಗೆಯನು ಸುಲಲನಾ । ವಳಿ ಸಹಿತ ಮೈಯಿಕ್ಕುತೈತಂ । ದಿಳೆಯ ತನುಜೆಯ ಲಲಿತ ಪಾದ ಪಯೋಜಯುಗಳದಲಿ ‖ ಇಳುಹಿದನು ಮಸ್ತಕವ ಮಾಯಾ । ವಿಲಸ ದನುಪಮ ಲಕ್ಷ್ಮೀಭುವನಾ । ವಳಿಯ ಜನನಿ ಜನಾದ[illegible]ನನ ವಲ್ಲಭೆ ನಮೋಯೆಂದ ‖ ೧೮ ‖ ಡಿಂಗರಿಗನಾ ನಿಮಗೆ ನಿಮ್ಮರ । ಸಂಗ ಕಿಂಕರನಾಗಿ ಕೃಪೆ ತ । ನ್ನಂಗದಲಿ ನೆಲೆಗೊಳಲಿ ಬಳಲಿದಿರೆಮ್ಮ ದೆಸೆಯಿಂದ ‖ ಕಂಗ ಳಲಿ ಮುಂಗಾಣದಗ್ರಜ । ಹಿಂಗಿದನು ನಾವ್ ನಿಮ್ಮ ಪದ ಪ । ದ್ಮಂಗಳನು ಸಾರಿದೆವು ಸಲಹುವುದಿನ್ನು ನೀವೆಂದ ‖೧೯‖ ನಮದಿರಾರಣ್ಯದಲಿ ಸೆರೆಯಲಿ । ಸವೆದಿರಿ ನಿಬರೆಮ್ಮ ಪೂರ್ವಜ । ನವಗುಣಂಗಳ ಮರೆದು ಮೆರೆವುದು ನಿಮ್ಮ ಸದ್ಗುಣವ ‖ ಭುವನದಲಿ ನಿಮ್ಮಿಂದ ಪುಣ್ಯ । ಶ್ರವಣರಾರೆಲೆ ದೇವಿ ಕೇಳ್ ನಿ । ಮ್ಮವನು ನೆನೆದವರೇನು ಧನ್ಯರೋ ಲೋಕದೊಳಗೆಂದ ‖೨೦‖ ಕರಸರೋಜದಿ ನಾ ನಿಜೇಶನ । ಚರಣ ಶರಣನ ಮಣಿಖಚಿತ ಬಂ । ಧುರ ಕಿರೀಟನೆತ್ತಿ ಕೇಳ್ಳೈ ಕಲಿ ವಿಭೀಷಣನೆ ‖ ನರಪತಿಗೆ ನಿನ್ನಿಂದ ಜಯ ವಿ । ಸ್ತರಣವಾದುದು ನಿನ್ನವೋಲ್ ಭೃ । ತ್ಯರುಗಳಿನ್ನಾರು ಟು ಜಗದೊಳ ಗೆಂದ ಳಿಂದುಮುಖಿ ‖ ೨೧ ‖ ಏತರವನಾನೀ ಚರಾಚರ । ಚೇತನನ ಸೇವೆಗೆ ಸರೋ ರುಹ । ಜಾತ ಜನಕಂಗಪ್ರಮೇಯಂಗಂತ ರಹಿತಂಗೆ ‖ ಆತಗಾರು ಸಹಾಯಿಗಳು ಸಂ । ಪ್ರೀತಿ ಭಕ್ತರಮೇಲೆ ನಿಮಗದು । ನೀತಿ ತಾನೆನುತೊಡನೆ ಕೈಮುಗಿದೆಂದ ನವನಿಜೆಗೆ ‖ ದೇವಿ ನಿಮ್ಮನು ತರಲು ನಿಮ್ಮಯ । ಜೀವಿತೇಶನು ಕರೆದು ಬೆಸಸಿದ । ನಾವ ಸಂಶಯ ಬೇಡ ತಾ ಹೋಗೆಂದು ಕರುಣದಲಿ ‖ ನೀವು ಬಿಜಯಂಗೈಯ್ಯಬೇಕೆಂ । ದಾ ವಿಭೀಷಣ ಕೈಮುಗಿಯೆ ರಾ । ಜೀವಮುಖಿ ನೆನೆದೆಂದಳಾ ರಘುರಾಜ ಚಂದ್ರಮನ ‖೨೩‖ ಕರದ

ಕಂಬಿಯುಲಾ ವಿಭೀಷಣ। ನೆರವಿಗಳ ನೆಡಬಲಕೆ ಸಾರಿಸ । ಲರಸಿಯರು ಕೈಗೊಟ್ಟು ತಂದರು ರಾಜಮಂದಿರಕೆ ॥ ಕರವ ಮುಗಿದು ವಿಭೀಷಣನು ಮಾ । ಧುರ್ಯ ವಚನದ ಲಂಜು ತಳುಕುತ । ಶಿರವನೊಯ್ಯನೆ ಬಾಗಿ ಬಿನ್ನೈಸಿದನು ಜಾನಕಿಗೆ ।೨೪॥ ಚಿತ್ತವಿಸಿದಿರೆ ದೇವಿಯರ ದೇ। ವೋತ್ತಮನಲಾ ದೇವರಲಿ ರಾ। ಜೋತ್ತಮನಲಾ ರಾಯರಲಿ ಪುರುಷರಲಿ ಜಗವರಿಯೆ ॥ ಉತ್ತಮನಲಾ ನಿಮ್ಮರಸ ನೀವ್। ಹೊತ್ತ ಭಾರ ವಮಂಗಳವು ನೃಪ। ಮತ್ತಕಾಶಿನಿ ನೀವು ಶುಭಕರ ವಾಗಬೇಕೆಂದ ॥೨೫॥ ಬೇಡ ಜಗಕಪಹಾಸ್ಯವದು ಮಾ । ತಾಡಿ ಕೆಡಿಸಲದೇಕೆ ಸಹಜದ । ಲಾಡಿಗನು ರಘುನಾಥ ನಾನದ ಬಲ್ಲೆ ಪೂರ್ವದಲಿ ॥ ಕಾಡದೀಯಂಗದಲಿ ವೈರಿ ವಿ। ಭಾಂಡನಂಘ್ರಿಯ ಕಾಬುದ ಚಿತವು। ಬೇಡಿಕೊಂಬೆನು ನಿನ್ನ ಬಂದುದ ಮಾಡುವುಪಚಾರ ॥ ೨೬ ॥ ಅದನನಾನಿದನರಿದು ಬಿನ್ನೈ। ಸಿದೆನು ದೇವರಿಗವರ ಕರುಣಾ। ಸ್ಪದದಲೇ ಸೇವಾವನು ಪಡೆದೆನು ದೇವಿ ಚಿತ್ತೈಸು ॥ ಇದರ ಕೊರತೆಯು ನೆರತೆತನ್ನದು । ವಿದಿತ ವೈದಿಕ ಲೌಕಿಕಕೆ ಜಗ। ವದುಹದಂತಿರೆ ಚಿತ್ತಗೊಡಬೇಕೆಂದು ಕೈಮುಗಿದ ॥ ೨೭ ॥ ಐಸೆ ಮತ್ತೀನನ ತವಲ್ಲೆನ। ಲೀಸು ನಿರ್ಬಂಧದಲಿ ನೀ ಬಿಂ। ನೈಸಲೇ ಕನುಭವಿಸುವೆನು ಬಂದಾಯಸವ ನೆನಲು ॥ ದೋಷವಿದರಿಂ ಬಂದುದಾದಡೆ। ದಾಸನೇ ನಿಮಗಾನೆನುತ ವಿ। ಭೀಷಣನು ಕೈಮುಗಿದೊಡಂಬಡಿಸಿದನು ದೇವಿಯರ ॥ ೨೮ ॥ ತರಿಸಿ ಮಣಿ ಮಡಿವರ್ಗದಲಿ ಕು। ಳ್ಳಿರಿಸಿ ಪರಿಮಳ ತೈಲದಲಿ ನೇ । ವರಿಸಿದರು ಸಿರಿಮುಡಿಯ ಮಜ್ಜನವಾಯ್ತು ಮಂಗಳದ। ಸುರುಚಿರಾಂಬರ ಗಂಧ ಮಾಲ್ಯಾ। ಭರಣದಿಂದೊಪ್ಪಿದಳು ಪೂರ್ವದ। ಶಿರಿಯ ಸಡಗರದಲಿ ಸರಾಗದಲಾ ಸರೋಜಮುಖಿ ॥ ೨೯ ॥ ನೆರೆದುದಾಕ್ಷಣ ಸಕಲ ದೇವ । ತರುಣಿಯರು ರತುನಾರತಿಯ ವಿ। ಸ್ತರಿಸಿ ಬಿಜಯಂಗೈಸಿದರು ದಂಡಿಗೆಗೆ ದೇವಿಯರ॥ ಪರಿಪರಿಯ ಮಣಿಗಣದ ಚಿತ್ರೋ । ತ್ಕರದ ದಡ್ಡಿಯುಲಾ ವಿಭೀಷಣ। ನಮನೆಯ ಹೊರವಂಟಳವನಿಜೆ ನಲಿಯೆ ಪೌರಜನ ॥೩೦॥ ತರುಣಕೇಳ್ಳೈ ಕೂಡಿತಮರರ। ತರುಣಿಯರ ರೂಪಾತಿಶಯದು । ಬ್ಬರಕೆ ಶತಗುಣ ದಂಗನೆಯರು ಸಹಸ್ರ ಸಂಖ್ಯೆಯಲಿ ॥ ಸ್ಮರನ ಮಾರ್ಗಣ ದಲಗುಗಳು ಡಾ। ವರಿಸಿದವೋ ಜನಮನವನೆನೆ ಕೆಲ ಬಲ ವಿಲಾಸದ ಮುಗುದೆಯರು ಬಳಸಿದರು ಭೂಮಿಜೆಯ ॥೩೧॥ ಹೊಡಕರಿಸುವುದು ತಿಮಿರ ತಲೆವಣಿ। ಲೆಡೆಗಳಲಿ ತತ್ತಿಮಿರ ರಾಶಿಯ । ನಡಿ ಮುಗುಚುವುದು ಬೆಳಗು ಬಿಡ ದಬಲೆಯರ ಲೋಚನವ ॥ ತಡೆದುದಾ ಭುಜಪಾಶ ದೆಳೆಯೊಗ । ರಡಿಗಡಿಗೆ ವಿಟರುಗಳ ಕಂಗಳ। ನಡೆಯನೇ ವರ್ಣಿಸುವೆನಾ ಮಹಿಳಾ ಕದಂಬಕವ ॥ ೩೨ ॥ ಉರು ನಿತಂಬದ ಭಾರಕಹಿಪನ। ಕೊರಳು ಮಣಿದುದು ತೋರ ಮೊಲೆಗಳ। ಭರದ ಭಾರಕೆ ಬಳುಕಿದುದು ದಿಗ್ದಂತಿ ಸೋರ್ಮುಡಿಯ ॥ ಹೊರೆಗೆ ಹೊಡಕರಿಸಿದನು ಕೂರುಮ। ನರರೆ ಮದನನ ಪರಿಜನದ ನಿ। ರ್ಭರದ ನಿರ್ಗಮವನು ಹೊಗಳುವೆನೇನನದ್ಭುತವ ॥ ೩೩ ॥ ಬರಿಸಿತನಿಲನ ನಂಗಲತೆಗಳ। ಪರಿಮಳವು ಬಿಡ ದಮಮ ತನು ವಿ। ಸ್ಫುರಿತ ಲಾವಣ್ಯಾಂಬುರುಚಿ ಹಿಮರುಚಿಯ ಮಯ ಸಿರಿಯ ॥ ಬರಸೆಳೆಮುದುದು ಭಾವವಮರರ। ತರುಣಿಯರ ಸೀಕರಿಸಿತಾ ಬಂ। ಧುರದ ಸೊಬಗುರೆ ಜರೆದವಜ ಹರಿಹರರ ರಾಣಿಯರ ॥ ೩೪ ॥ ಹೊಳೆ ಹೊಳೆವ ಮಣಿಕರ್ಣ ಪೂರದ। ಬೆಳಗಿಡುವ ಮೂಗುತಿಯ ಮುತ್ತಿನ। ವಿಲಸ

ದೇಕಾವಳಿಯ ಮಣಿಮುದ್ರಿಕೆಯ ಕಂಕಣದ ‖ ಲಲಿತ ಚಿತ್ರಾಂಬರದ ನರಮೋ । ಖಲೆಯ ರಣಿತಸ್ವನದ ನೂಪುರ । ದುಲುಹುಗಳ ವರ ಯುವತಿಯರು ಬಳಸಿದರು ಜಾನ ಕಿಯ ‖೩೫‖ ತುರುಗ ಪುಷ್ಪ ವರೂಥ ಮದ ಸಿಂ । ಧುರುದ ಲಂದಣದಿಂದ ನಾರಿಯ । ರುರವಣಿಸಿದರು ವಿಕ್ಕು ನಡೆದುದು ಮುಂದೆ ಕಾಲ್ನಡೆಯ ‖ ಪರಿಪರಿಯ ಸಿಂಗಾರ ವಂಗನೆ । ಯರುಗಳೊಪ್ಪುವ ಕಳಸ ಕನ್ನಡಿ । ಮಾಳಜ ನರ್ತನ ರತುನದಾರತಿಗಳ ವಿಡಾಯಿಯಲಿ ‖೩೬‖ ಸಾರು ಸಾರೆಡೆಯೆಂಬ ಕಂಬಿಯ । ಭಾರಣೆಯಲಿ ವಿಭೀಷಣನು ಕೈ । ವಾರಿಗಳ ಗಢಣದಲಿ ಬಂದನು ಮುಂದೆ ದಂಡಿಗೆಯ ‖ ಚಾರು ಚಾವ ರದಾತ ಪತ್ರದ । ತೋರಣದ ಸೀಗುರಿಯ ಕೊದರಿನ। ಲೂರ ಹೊರವಂಟಳು ಮಹೀಸುತೆಗುಜ್ಜು ಗುರುಕಿನಲಿ ‖೩೭‖ ಕುಶನ ಕೇಳೈ ನಿಮ್ಮ ಜನನಿಯ । ವಸು ವತೀಶ್ವರ ರಾಘವನ ಸಂ । ಘಸದ ಸಂದರುಶನದ ನೋಳ್ಪುತ್ಸವದ ತವಕದಲಿ ‖ ವೃಷ ವರೂಥದಿ ಉಮೆ ಸಹಿತ ಶೋ । ಭಿಸುವ ಪಂಚಬ್ರಹ್ಮ ವಕ್ತ್ರದ । ದಶ ಭುಜದ ಪರಮೇಶ ಬಂದನು ಪ್ರಮಥ ಗಣ ಸಹಿತ ‖೩೮‖ ಲಲಿತವದನ ಚತುಷ್ಟಯದ ಕೋ । ಮಲಿತ ಬಾಹುಚತುಷ್ಟಯದ ಸ । ಮ್ಮಿಳಿತ ಶ್ರುತಿ ಮಸ್ತಕದ ವಾಮದಲೆಸೆವ ಭಾರತಿಯ ‖ ವಿಲಸ ದಂಚೆಯ ಅವರ ಮುನಿ ಸಂ । ಕುಲದ ಸೌರಂಭಾತಿಶಯ ಬಂ । ದಿಳಿದ ನಂಬುಜ ಗರ್ಭ ನನುಪಮ ರಾಜ ತೇಜದಲಿ ‖ ೩೯ ‖ ವರ ತಿಲೋತ್ತಮೆ ರಂಭೆ ಮೇನಕಿ । ಯರಸ ಮೇಳದಲಮರಪತಿ ಚಾ । ಮರದ ಛತ್ರ ಧ್ವಜ ಪತಾಕಾವಳಿಯ ಪಸರಿಕೆಯ ‖ ಕರಿಯ ಕಂಧರದಲಿ ಶಚೀ ಸತಿ । ವೆರಸಿ ವಂದಿಜನಂಗಳೊಗ್ಗಿನ । ಬಿರಿದಿ ನುಗ್ಗಢಣೆಯಲಿ ಬಂದನು ದೇವಗಣ ಸಹಿತ ‖೪೦‖ ತೊರೆದ ಶೋಣಚ್ಛವಿಯ ಘನ ಸುರು । ಚಿರದಕಾಯದ ಸಪ್ತ ಜಿಹ್ವೆಯ। ವರ ಶಿಖೋದ್ವಯ ದನುಪಮಾಂಘ್ರಿತ್ರಯದ ಕೇಸರಿಯ ‖ ಸ್ಫುರಿತ ವಕ್ತ್ರದ ವಾಮ ಭಾಗದ । ನಿರುಪಮ ಸ್ವಾಹಾಹುತಿಯ ಬಂ । ಧುರದ ಹುತವಹ ನೈದಿದನು ವಸು ಗಣದ ಗಡಣದಲಿ ‖ ೪೧ ‖ ಕಾಳಮೇಘದ ತನುರುಚಿಯ ದಂ । ಷ್ಟ್ರಾಳಿಗಳ ಬಾಹು ದ್ವಯದ ಸಂ । ಸ್ಥೂಲಕಾಯದ ಕಠಿಣ ದಂಡದ ಕರದ ಭೀಷಣದ ‖ ತೋಳಿನೊಳಿನ ಯಮಿಯ ಘನ ವಿಕ । ರಾಳ ಸೈರಿಭ ದೇರಿಕೆಯ ಲಯ । ಕಾಲನೈದಿದ ನಖಿಳ ದೂತ ಪರೇತ ಗಣಸಹಿತ ‖೪೨‖ ಘನ ಶರೀರದ ಕಾಳಿಕೆಯ ಕುಡಿ । ಮುನುಗುಗಳ ದಾಡೆಗಳ ಕಡು ಗೆಂ । ಪಿನ ಮಹೋಗ್ರ ವಿಲೋಚನದ ಗುಜುರೆದ್ದ ತಲೆನವಿರ ‖ ಮನುಜವಾಹನ ದಿಂದ ರಾಕ್ಷಸ । ವನಿತೆಸಹಿತ ಸಮಸ್ತ ರಾಕ್ಷಸ । ಜನಸಹಿತ ನಡೆತಂದನಾ ರಾಕ್ಷಸ ದಿಶಾಧಿಪನು ‖೪೩‖ ಭರಿತ ಭಂಗವ್ಯಕ್ತ ಜಲಸೀ । ಕರ ಕದಂಬದ ಫೇನ ಪಿಂಡೋ । ತ್ಕರದ ಬಹುಳಾವರ್ತ ಬುದ್ಬುದ ದುರುಗಡಾವಣೆಯ ‖ ವರ ಸರಿತ್ಸಾಗರದ ರತ್ನಾ । ಭರಣ ಶೋಭೆಯ ಪಾಶುಪತ ದು । ಬ್ಬರದ ಗಮನದ ಲೈದಿದನು ಜಲಚರದ ಗಡಣ ದಲಿ ‖ ೪೪ ‖ ಕ್ಷಿಪ್ರಗತಿಯ ತುರಂಗದುರು ಸಿಗ । ಮ ಪ್ರಭಾವದ ಭೂತ ಚೈತ । ನ್ಯ ಪ್ರಕರದಗಣಿತ ಮರುದ್ಗಣ ವಿಷ್ಣುಶರಾಸನದ ‖ ಸುಪ್ರತಾಪದ ಸಕಲ ಭುವನಗ । ತಿ ಪ್ರಸಿದ್ಧಿಯ ಪಂಚ ರೂಪಕ । ದ ಪ್ರಭಂಜನ ನೈದಿದನು ನಿಜಸತಿಯ ಗಡಣದಲಿ ‖೪೫‖ ನರ ಭುಜಂಗಮ ಸಿದ್ಧ ವಿದ್ಯಾ । ಧರ ಪಿಶಾಚರ ಯಕ್ಷಕ ಲ ಕಿಂ । ಪುರುಷ ಗುಹ್ಯಕ ಗರುಡ ಗಂಧರ್ವಾದಿ ಗಣ ಸಹಿತ ‖ ತುರುಗ ದುಪ್ಪರಗತಿಯ ಮಹದೈ । ಶ್ವರಿಯ ಮದ

ದಧಿಕಪ್ರತಾಪದ । ಭರದ ಭಾರವಣೆಯಲಿ ಬಂದನು ಸಖಸುಮಾಪತಿಯು ॥೪೬॥ ತರುಣಿ ಕೇಳೈ ಕುಶನ ಹಿಂದಣ । ತರಣಿವಂಶದ ಸೋಮವಂಶದ । ನರಪತಿಗಳೆಟ್ಟೈಸಿತಮರ ವಿಮಾನ ವೀಧಿಯಲಿ ॥ ಗುರು ವಸಿಷ್ಠನು ವಾಮದೇವಾ । ದ್ಯರುಗಳೊಪ್ಪಿದ ರಬುಜ ಕುವಲಯ । ಪರಮ ಸಖರೆಸೆದರು ಸುತಾರಾಗಣದ ಗಡಣದಲಿ ॥೪೭॥ ತುಂಬಿ ತಂಬರ ಘನ ಪತಾಕಾ । ಡಂಬರದ ಲನುಪಮ ವರೂಥಕ । ದಂಬ ವಾಹನ ಸಿಕರ ದಿವ್ಯ ವಿಮಾನ ವೀಧಿಯಲಿ ॥ ತುಂಬುರರು ನಾರದ ದಿವಿಜ ನಿ । ತಂಬಿನಿಯರ ಸಂಗೀತ ಲಾಸ್ಯಾ । ಡಂಬರದ ದೆಖ್ಖಾಳಮಿಗೆ ರಂಜಿಸಿತು ಸಭೆ ಸುರರ ॥೪೮॥ ಕಳಕಳದ ಕಾಹುರದ ಕಂಬಿಗ । ಳುಲುಹುಗಳ ಪಡಿಯರರ ದಿವಿಜಾ । ವಳಿಗಳೊತ್ತೊತ್ತೆಯಲಿ ಝಡಿದುದು ಕೂಡೆ ಗಗನತಳ ॥ ಹಳುರೆ ಧಿರುಧಿರು ಭಾಪು ಮಝು ಮಂ । ಗಲೆಯು ಮಹಸತಿಯಾದಿ ಮಾಮಾ । ಲಲನೆಯುವ ಧಾರೆಂಬ ಧ್ವನಿಗೇಳಿಸಿತು ರಘುಪತಿಯು ॥ ೪೯ ॥ ಮುಸುಕಿಬೀಳುವವು ರವರವದ ರಾ । ಕ್ಷಸರ ನೆರವಿಯು ನವನಿಜೆಯು ನೀ । ಕ್ಷಿಸುವ ತವಕದ ತರುಚರರ ನೆಡಬಲದ ಭಾಗದಲಿ ॥ ಅಸಬಡಿವೃತಸುರೇಂದ್ರ ನತಿಸರ । ಭಸದ ಸೌರಂಭದಲಿ ಬರೆ ಕಂ । ಡಸುರಹರ ಮೂಗಿನಲಿ ಬೆರಲಿಟ್ಟೊಲದ ನವಯುವವ ॥೫೦॥ ತಮ್ಮ ನೋಡೀ ಬಹ ವಿಕಾರ ವಿ । ದೆಮ್ಮದಾಗಲಿ ಬೇಕು ನಾಚಿಕೆ । ನೆವಿಮ್ಮತ್ತೈಲೇಸಾಗಿ ನೋಡಚ್ಚರಿಯ ನೋಡೆನುತ ॥ ಚಿಮ್ಮುವಘನುರುಪಣದ ಕಣದಲಿ । ಬಿಮ್ಮನುದ್ರೇಕದಲಿ ಸುರಪನ । ಮೊಮ್ಮನನು ಕರದಿಳುಹಿ ತಾ ಹೋಗೆಂದು ನೇಮಿಸಿದ ॥ ೫೧ ॥ ಆರಸಿರಿಗಿವಳಿನಿತು ಕಡು ಸಿಂ । ಗಾರವನು ಕೈಗೊಂಡಳಿನಳಿಂ । ದಾರ ನೇಮದ ಲೇರಿದಳು ಮಣಿಮಯದ ದಂಡಿಗೆಯ ॥ ವೀರ ನೋಡೈ ತಮ್ಮ ನೆಮ್ಮುಂ । ದಾರನೀ ಯುಪಹಾಸ್ಯಮನಕಿದು । ಸೇರುವುದೆ ಘಾತಾಳಿ ಯುಗವನು ನೋಡು ನೀನೆಂದ ॥ ೫೨ ॥ ಇವಳ ಕಳುಹದೆ ಬಿಡುವಳೇ ನಿ । ನ್ನವನು ನಮ್ಮೆಡೆ ಗಡವಿಯಲಿ ಕಪ । ಟವನು ಕೈಕೊಂಡಿರಳೆ ಯಿದು ನೀ ನೆವಲು ಕೆಡೆ ನುಡಿದು ॥ ವಿವಿಧ ಮಾಯಾ ರಚನೆಯಲಿ ನ । ಮ್ಮವನ ಕಳುಹಿದಳೀ ವಿಚಾರದ । ಹವಣ ನರಿಯದೆ ನಿನ್ನ ಜರೆದೆನು ತಮ್ಮ ತಾನೆಂದ ॥ ೫೩ ॥ ವಲ್ಲೆ ನೆನ್ನಡೆ ಪರರ ವೈಭವ । ದಲ್ಲಿ ಚಿತ್ತವ ಬೆರಸಿ ಕಾಮುಕ । ವಲ್ಲಭೆಯು ರಂದವನು ಮೆರೆದೆಮ್ಮೆಡೆಗೆ ನಡೆತಹುದು ॥ ಒಪ್ಪಿತೇ ನಮ್ಮಸ್ವಯುಕೆ ದಯ । ವಿಲ್ಲದೀಯೆಂತುಟೋ ನಾ । ವೆಲ್ಲಿ ಈಪರಿ ಕಂಡು ಕೇಳಿದ ಕಣೆಯುವಿಲ್ಲೆಂದ ॥ ೫೪ ॥ ಹಗರಣವ ನೋಡನುಜ ದಂಡಿಯ । ಬಿಗುಹ ನೀಕ್ಷಿಸು ಮೆರೆದು ಬಹ ದಂ । ಡಿಗೆಯು ಕಂಡೆವು ಕೇಳಿದೈ ಕಂಚುಕಿಗಳುಗ್ಗಡವ ॥ ನಗೆಯು ಸುರಿದಳು ನಮಗೆನುತ ನೃಪ । ಮೊಗವನಿರುಹಿದ ನಿಂದ್ರತನುಜನ । ಮಗನು ನಡೆತಂದಾ ವಿಭೀಷಣ ದೇವಗಿಂತೆಂದ ॥ ೫೫ ॥ ಎಲೆ ವಿಭೀಷಣ ದೇವ ರಘುಕುಲ । ತಿಲಕ ನಂಪಣದಿಂದ ದೇವಿಯು । ನಿಳಿಪ ಬರಲೆಂದೆನ್ನ ಕಳುಹಿದರೆಂಬ ಕರ್ಣದಲಿ ॥ ತಿಳುಹಲೆದೆ ಝಲ್ಲೆಂದು ಚಿಂತೆಯು । ತಳೆದು ತಾ ನೈತಂದು ಕರಕು । ಟ್ಮಲದಿ ನಾ ನಿಜ ಶರಣ ಬಿನ್ನೈಸಿದನು ರಘುಪತಿಗೆ ॥ ೫೬ ॥ ದೇವ ತಾ ನಪರಾಧಿ ಭೃತ್ಯನ । ಸೇವೆಯೈಸಿದು ಹಲವು ಪರಿಯಲಿ । ದೇವಿಯರು ತಾವೊಲ್ಲೆನೆಂದರು ಸ್ವೈಭವೋಚಿತವ ॥ ದೇವರಲಿ ಮುನಿಸಾವಡಿಸಿತಕೆ । ನಾವೆ ನೆಂದೊಡಬಡಿಸಿ ತಂದೆನು । ಕಾವುದೆನ್ನಪರಾಧ ಕೃತ್ಯವ ಮರೆದು ನೀನೆಂದ ॥೫೭॥ ಎಲೆ ವಿಭೀಷಣದೇವ ಲೋಕಾಭಿ

ವಳಿಯ ಮೆಚ್ಚಿಸಿ ನಡೆವುದೇ ಹೆಂ। ಗಳಿಗೆ ಲಕ್ಷಣ ಭುವನದಲಿ ಸುವ್ರತೆಯ ರವರೀಗ ॥
ಹಳುವದಲಿ ಸೆರೆಪಿಡಿದು ರಕ್ಕಸ ನೆಳೆದು ತಂದಂದಿನಿತು ಶೋಭಾ। ಕಲಿತ ವೈಭವ
ವಿಮ್ವದೇ ನೀ ಹೇಳು ನಮಗೆಂದ ॥ ೮ ॥ ಆರು ನೋಡದು ಕಂಗುರುಡನೇ । ವೀರ
ರಾವಣ ನಂದಿ ಗಿಂದಿನೊ। ಳೋರಣೆಸಿದುದು ಲಜ್ಜೆಯಂಗೀಕರಣ ವಿಂದಿನಲಿ ॥ ಹೋರ
ದಿರು ನೀ ಹೋಗು ಡೊಂಬಿನ। ಕಾರಣವದೇನಿಳುಹಿ ತಾ ಪರಿ। ವಾರ ನೋಡಲಿ ಮರಳಿ
ಬಿನ್ನಹ ಬೇಡ ನಿನಗೆಂದ ॥ ೯ ॥ ಪರಿಕಿಸುವಡೆ ಪತಿವ್ರತೆಯ ರಾ। ಚರಣೆ ಸುಜನರಿ
ಗರಿಯ ಬಹು ದೂ। ವರೆಯ ದುರ್ಜನರುಗಳ ಮೆಚ್ಚಿಸಬಾರದಿದು ಸಿದ್ಧ ॥ ಇರಳೀ
ಮಾಂಸಿಕೊಂಡು ಕಾಶೀ । ಪುರದೊಳೆಮ್ಮನ್ವಯದ ಪಾರ್ಥಿವ । ನರಸಿ ನೈಷಧನರಸಿ
ಇರಳೀ ಚೈದ್ಯನಗರಿಯಲಿ ॥ ೧೦ ॥ ಬಂದುದೇ ಯವರಿಗೆ ಜನಂಗಳ। ಸಿಂದೆ ದುಗುಡ
ವಿದೇಕೆ ನಿನಗೆ। ನ್ನೊಂದು ನಿಮಿಷದೊಳರಿಯ ಬಹುದಾಡಿಸಿದ ಮಾತಿನಲಿ ॥ ಸಂದೆಹವ
ಬಿಡು ಕಾಲು ನಡೆಯಲಿ । ತಂದು ತೋರಿಸು ಹಲವುನುಡಿ ಬೇ। ಡೆಂದು ಬೀಳ್ಕೊಡ
ಒಳ್ಳೆ ಬಾರುವ ಶರಣನೈತಂದ ॥ ೧೧ ॥ ತಾಯೆ ನಿಮ್ಮರಸನ ನಿರೂಪಕ । ವಾಯಿತಿಳೆ
ಗವತರಿಸಿ ರಾಯರ। ರಾಯನಲ್ಲಾ ಮೇಲೆ ನಿಮ್ಮಯ ಜೀವಿತೇಶನಲ ॥ ಆ ಯಶಸ್ಕರ
ನಾಜ್ಞೆ ನಿಮಗೆಮ । ಗಾಯತದ ಫಲ ಸಿದ್ಧಿಯೆನೆ ಜಲ । ಜಾಯತೇಕ್ಷಣೆ ಧರೆಗೆ
ಧುಮ್ಮಿಕ್ಕಿದಳು ದುಗುಡವಲಿ ॥ ೧೨ ॥ ಜಯಜಯೆಂದುದು ಕುಮ್ಮ್ರಕಲ। ಪಾಣಿಯಲಿ
ಪರಮ ಸ್ತೋತ್ರ ವಚನದ। ನಿಯಮದಲಿ ಸನಕಾದಿ ಸಕಲ ಸುಪರ್ವ ಮುನಿನಿಕರ ॥
ಭಯಭರಿತ ಭಕ್ತಿಯಲಿ ಸುರ ಸಮು। ದಯ ಸರಸ್ವತಿ ಮುಖ್ಯಪರ ನಾ। ರಿಯರು ವಿನ
ಮಿತರಾಯ್ತು ಸಂದರ್ಶನದ ಲವನಿಜೆಯ ॥ ೧೩ ॥ ಲೋಕಮಾತೆ ಸಮಸ್ತ ದಿವಿಜಾ।
ನೀಕ ಪೂಜಿತೆ ಸುರನರೋರಗ । ಲೋಕವಂದಿತೆ ವಿಷ್ಣುವಲ್ಲಭೆ ಸಕಲ ಜಗಭರಿತೆ ॥
ನಿಕನಾಥೆ ಪುರಾಣ ಪುಣ್ಯ। ಶ್ಲೋಕೆ ಪಾವನಚರಿತೆ ಮಾಯಾ। ಶ್ರೀಕಮಲೆ ನಮೋ
ಯೆನುತ ಮೈಯಿಕ್ಕಿತು ಸುರವ್ರಾತ ।೧೪॥ ನೋವು ಮನದಲಿ ತಾಗಿದುದು ಕಂ। ಡೈ
ವಿಭೀಷಣದೇವ ವರ ರಾ । ಜೀವನೇತ್ರನ ಪರಿಯ ಬಲ್ಲೆನು ನಿನ್ನ ದೆಸೆಯಿಂದ ॥ ಈ
ನಿಕಾರವ ನಸುಕರಿಸಿದೆನು। ಭಾವಲೇಸಾಗಿರದು ತನಗಿ। ನ್ನಾವ ಹದನಿನ್ನೇನು ಗತಿ
ಮತಿ ಯೆಂದಳಿಂದುಮುಖಿ ॥ ೧೫ ॥ ಹಲವ ಹಂಬಲಿಸುತ್ತ ಮನದೊಳ । ಗಳದು
ಹೊಯ್ಯುತ್ತ ದುಗುಡಭಾರದ । ಲಳುಕುತಂಜುತ ಸಾರಿದಳು ಸಚರಾಚರಾತ್ಮಕನ ॥
ಜಲಜಭವಸುತ ಜಲಜಸಖಸುತ। ಜಲಜನಯನಾವರಜ ರಿದಿರೆ। ದ್ದಿಳುಹಿದರು ಮಸ್ತ
ಕವ ನಂಘ್ರಿಯೊಳಾ ಪತಿವ್ರತೆಯ ॥೧೬॥ ಹೆಂಪಳಿದ ತನುಲತೆಯ ಹಸುಮದ। ಸೊಂಪು
ಸಡಿಲಿದ ಮುಖದ ನೋಟದ। ಗುಂಪುದೆಗೆ ದಕ್ಷಿಗಳ ಕೋಡಿಯೊಳೊಗುವ ಕಂಬನಿಯ॥
ಕಂಪಿಸುವ ಕರಣಂಗಳಂಜಿಕೆ। ಝೊಂಪಿಸುವ ಮಾನಸದ ಲಜ್ಜೆಯ। ನಂಪಿ ನಂಬುಜ
ವದನೆ ವೈಯಿಕ್ಕಿದಳು ನಿಜಪತಿಗೆ ।೧೭॥ ಬೀಳದನು ಕಂಪವು ಕಟಾಕ್ಷದ। ಲೇಳದಧಿಕ
ಸ್ನೇಹ ಕರಣ ದೊ। ಳಾಳಿದ ಮರುಷದಾನನದೊಳಭಿಮಾನ ಮಾನಸದ ॥ ಬಾಳಿಕೆಯ
ಲಡಮುಖದಲನುಜನ। ಮೇಲು ನೋಟದಲಿದ್ದನಾ ನೀ। ಲಾಳಕಿಯ ನೀಕ್ಷಿಸದೆ ನೃಪ
ನಿಕೆಘಳಿಗೆ ಪರಿಯಂತ ॥೧೮॥ ದೇವದೇವಾಧೀಶ ಸರ್ವ ಗು। ಣಾವಲಂಬನವೆನ ಚರಾ
ಚರ। ಜೀವ ರಕ್ಷಕ ಘನ ಕೃಪಾಕರ ಭಕ್ತ ಸುರಧೇನು ॥ ದೇವ ನರನಾಟಕದ ಮಾಯಾ।

ಶ್ರೀವರನೆ ಚಿತ್ತೈಸು ಸೀತಾ । ದೇವಿಯುರ ನುಪಚರಿಸಬೇಕೆಂದಜನು ಕೈಮುಗಿದ ॥೧೯॥
ನರನೆ ನೀ ನರಪತಿಯೆ ಜಾನಕಿ । ತರುಚರರು ಮರ್ಕಟರೆ ವಿಶ್ವಂ । ಭರೆಯ ಭಾರವ
ತಿದ್ದಲೋಸುಗ ಜನನವಾಯ್ತೆಂ ॥ ಪರಿಯ ಸಾವೇ ನರಿಯವೇ ಪತಿ । ಕರಿಸು ಪರಮ
ಪತಿವ್ರತೆಯ ನಿ । ಷ್ಠುರವದೇಕೆಲೆ ರಾಮ ನಿನಗೆಂದೀಶ ಕೈಮುಗಿದ ॥ ೨೦ ॥ ಧರೆಯ
ಭಾರವ ಕಳೆದೆ ಧರಣೀ । ಸುರರ ಸಲಹಿದೆ ಹವ್ಯ ಕವ್ಯಾ । ಧ್ವರವ ನಾರೆ ಪಾಲಿಸಿದೆ ದಿವಿ
ಜಾವಳಿಯ ರಕ್ಷಿಸಿದೆ ॥ ನರಚರಿತ್ರದ ನಾಟಕದ ವಿ । ಸ್ತರಣವತಿ ಲೇಸಾಯಿ ತಂಗೀ ।
ಕರಿಸು ಸೀತೆಯನೆಂದು ಮೈಯಿಕ್ಕಿದನು ಸುರನಾಥ ॥೨೧॥ ಉಳಿದ ದೇವವ್ರಾತ ಭಾಳ ।
ಸ್ಥಳದ ಮುಕುಳಿತ ಪಾಣಿ ಪಂಕಜ । ಗಳಲಿ ರಾಮನ ಬೇಡಿಕೊಂಡುದು ಶರಧಿ ಘೋಷ
ದಲಿ ॥ ಹಳವು ಹೊದ್ದದ ಕಾಯ ದೂಷ್ಯಾ । ವಳಿಗಳೈದಿದ ನಿತ್ಯಶುದ್ಧೆಯ । ಲಲಿತ
ಸಾಧ್ವಿಯ ವರಿಸಬೇಕೆಂದಭ್ರಮಾರ್ಗದಲಿ ॥೨೨॥ ಶೃತಿಗಳೀಪರಿ ಯೊರಲಿದವು ಕ್ರತು।
ತತಿಗಳೀಪರಿ ವಾಚಿಸಿದವಾ । ಸ್ಮೃತಿಗಳಿಂತೆಂದೇ ನಿರಂತರ ನುಡಿದ ವೀಪರಿಯ ॥
ವಿತತ ನಿಗಮಾಗಮ ಪುರಾಣ । ಪ್ರತತಿಗಳು ಮೊರೆಯಿಟ್ಟುದೀ ಸು । ವ್ರತೆಯ ನಧಿಕ
ಪತಿವ್ರತೆಯ ವರಿಸೆಂದು ರಘುಪತಿಗೆ ॥೨೩॥ ಎರಗಿದರು ಬಳಿಕಿಂದು ಜಾಂಬವ । ತರಣಿ
ತನುಜ ವಿಭೀಷಣಾದ್ಯರು । ಮರೆಯ ಬಿಡು ಮಣಿವೆಜ್ಜದೊಳಗಡಗುವದೆ ಯಾಕಾಶ ॥
ಅರಿಯದೆ ನಿನ್ನುವನು ಜಗವಲೆ । ಶಿರಿಯರಸ ಕೈವಿಡಿದು ತೆಗೆ ಸ । ಚ್ಚರಿತೆಯನ ಸುಪ್ರ,
ತೆಯನೆಂದರು ಹಿಡಿದು ನಿಜಪದವ ॥೨೪॥ ಏಳಿರೈ ನೀವೆಮ್ಮ ದೈವದ । ಮೇಲೆ ಹಾಯಿಕಿ
ಹೊಗಳಿದಿರಿ ಸಾ । ಕೇಳಿಲವ ಮಾಡಿದಿರಿ ನೀವ್ರಚಿತೋಪಭಾಷಿತವ ॥ ಮೇಲಣೆಣಿಕೆಯ
ನರಿಯದೆಮ್ಮನ್ನ । ಪಾಲವಂಶಕೆ ಕುಂದು ಹೊರಿಸುವ್ರ । ದೋಲಗಾರ್ತವೆ ನಿಮಗೆ
ನಿಮ್ಮನುಮಾನವೇನೆಂದ ॥೨೫ ॥ ಸ್ತ್ರೀಯೆ ಲೋಕದೊಳಿವಳು ಲೋಕದ । ಮಾಯ
ಕಾತಿಯ ರಿವಳ ಶಿಷ್ಯಳು । ನೋಯ ನುಡಿದಡವಿಯುಲಿ ನೂಕಿದಳಿವಳು ಲಕ್ಷ್ಮಣನ ॥
ಮಾಯದೆರಳೆಯ ನೆವದಲಸುರರ । ರಾಯನಲಿ ಸಂಕೇತ ಪಡೆದುದು । ದಾಯತಪ್ಪಿತು
ಕಲೆಯಲಿದನೀ ಮರಿಯಿಗೈಯೆಂದ ॥೨೬॥ ಇವಳಿಗೋಸುಗ ಬಂದು ಹಗೆಯನು । ತವಿಸಿ
ತಿಲ್ಲವರಣ್ಯವನು ತಾ । ನಿವನು ಕೊಂದನು ಪೂರ್ವದಲಿ ನಮ್ಮನ್ವಯಾಗತದ ॥ ಇವನ
ಕೊಲಲೈತಂದೆ ವಲ್ಲದೆ । ವಿವಶೆಯಾದೀ ಸತಿಯ ಹಂಬಲಿ । ನವರು ನಾವಲ್ಲೆಮ್ಮ
ನಿರ್ಬಂಧಿಸಲು ಬೇಡೆಂದ ॥ ೨೭ ॥ ತಪ್ಪುಹೊರದ ಮೊಲಾವ ಶಪಥವ । ನೊಪ್ಪುಗೊಳ
ಲದವಗಾಡುವೆನ ಧಿಟ । ತಪ್ಪು ಸಂಧಿಸಿತಾದಡಿಲ್ಲಿಯೆ ಬಿಡುವೆ ನೀ ತನುವ ॥ ಮೊಪ್ಪು
ವುದು ಬಿನ್ನಹದ ನಿದ ತಾ । ನಿಪ್ಪುರಿಯ ಕಾಮಿನಿಯೆ ನಿನಗೆ ಸ । ಮರ್ಪಿಸಿದ ತನು
ವಾದ ಡೊಲಿ ಬಳಿಕೆಂದಳಿಂದುಮುಖಿ ॥೨೮॥ ದೇವ ನೀನಲ್ಲದೆ ಯಶಃಪರ । ವಾವುದನು
ನಾಬಲ್ಲೆನಾದಡೆ । ದೇವತತಿ ಇದೆ ದಿವ್ಯಮುನಿಜನವಿದೆ ಸವಿಾಪದಲಿ ॥ ತಾವರೆಯ
ನೈದಿಲಿನ ಸಖ ಮಂ । ಶಾವಳಿಯ ನೃಪರಿದೆ ನಿರೀಕ್ಷಿಪಿ । ಕಾವುದಿಲ್ಲಿಂ ಮೇಲೆನುತ ಬಿನ್ನೈ
ಸಿದಳು ಸೀತೆ ॥೨೯॥ ಆದಡಗ್ನಿಯ ಹೊಕ್ಕು ಹೊರವಂ । ಟೀ ದಿವಿಜರನು ಮೆಚ್ಚಿಸಿದ
ಮೇ । ಲಾದಡಾಗಲಿ ಮರಳಿ ಮಾತೆಮ್ಮೊಡನೆ ಬೇಡೆನಲು ॥ ಆದಿಮಾಯಾಶಕ್ತಿ ಬಳಿಕ
ಹ । ಸಾದವೆನೆ ಕೈಮುಗಿದು ಭರತ ಸ । ಹೋದರನು ಬಿನ್ನಹವ ಮಾಡಿದನೆಮ್ಮ ರಘು
ಪತಿಗೆ ॥೩೦॥ ಅರಸ ಚಿತ್ತೈಸೊಟ್ಟಿದಗ್ನಿಯ । ನರಸಿಗೋಸುಗ ಹೊಗುವೆ ನುರಿಯ ।

ಬ್ಬರಿಸಿದಡೆ ಬಿಡಿ ದೇವಿಯರನುರಿಯೊಳಗೆ ಬೆರಸದೊಡೆ ॥ ಬರಿಸಿ ನಿಮ್ಮ ಪತಿವ್ರತೆಯು
ನಿದು । ನಿರತ ಪತಿಗನ್ಯಾಯುವ್ರಳ್ಳಡೆ । ಅರಿಯಲಿನ ಮೊದಲಾದ ಹದಿನಾಲ್ಕಂಗಳೀ
ಗೆಂದ ॥೮೧॥ ತುಂಗಬಲ ನಿನ್ನೊಟ್ಟದಗ್ನಿಯು । ಸಂಗದಿರ್ದಡೆ ಸಾಕು ಸಿನಗಿದ । ನಂಗ
ಸತಿ ತಾಪದೆಯೆಂಬುದ ನರಿಯೆ ವಾರಿನ್ನು ॥ ಅಂಘವಿಸಲಾಪಡೆ ಧನಂಜಯು । ವಂಗು
ಳಲಿತಾ ಹೊಕ್ಕು ಹೊರವಡ । ಲಂಘವಿಸುವರೆ ಬಳಿಕ ಬಿಜಯಂಗೈಯ್ಯ ಕೇಳೆಂದ ॥೮೨
ದೇವ ಚಿತ್ತೈಸರಸಿ ಸೀತಾ । ದೇವಿಗೋಸುಗ ಜೀರಬೇರಾವ್ । ಪಾವಕನೊಳುತ್ತರಿಸು
ವೆವು ನಿಮ್ಮಡಿಗಳಿದಿರಿನಲಿ ॥ ದೇವ ಬೆಸಸೆನುತೆದ್ದರಾ ಸು । ಗ್ರೀವ ಜಾಂಬವ ವಾಲಿಸುತ
ನಾ । ಪಾವಮಾನಿ ಸುಷೇಣ ನೀಗ ಗವಾದಿ ನಾಯಕರು ॥ ೮೩ ॥ ಅಂಜುವೆವು ನಾವ್
ನಿಮಗೆ ನಿಮ್ಮಭಿ । ರಂಜಕವ ನಾಬಲ್ಲೆನೀ ಸತಿ । ಯಂಜುವರೆ ಬಿಡೆಂಜದಿರ್ದಡೆ
ಹೊಗಲಿ ಹುತವಹನ ॥ ಕಂಜಭವ ಲವಮುಖ್ಯ ಸಕಲ ಸು । ಮಂಜಸರು ಕೂಗಿದರೆ
ಸರಿಮುರ । ಳೆಂಜಲಿನ ಮಾತಲ್ಲ ನಿಮಗೆಂದರಸ ನೇಮಿಸಿದ ॥೮೪॥ ಕೇಳಿದೈ ಸೌಮಿತ್ರಿ
ಮಿತ್ರ ಕು । ಲಾಳಿ ಗೃಹಪತಿ ಬಾರದಂತಿರೆ । ಬೀಳುವೆನು ಶುಚಿಯಾದಡೇಳುವೆ ನಗ್ನಿ
ಕುಂಡದಲಿ ॥ ಮೇಲೆ ಮಾತಿನ್ನೇಕೆ ವಂಶ ವಿ । ಶಾಲ ವೈಭವವೆನ್ನದೈಸಲೆ । ತೂಳಿಸ
ಗ್ನಿಯನೊಟ್ಟಲಿಂಧನವೆಂದಳಿಂದುಮುಖಿ ॥ ೮೫ ॥ ತಪ್ಪನೆಂದವಸಿಜೆಯ ವಚನವ ।
ನೊಪ್ಪಗೊಂಡನು ರಾಮ ನುಡಿಗಳು । ಸೊಪ್ಪಳಾಗದೆ ಸುಮ್ಮನಿರ್ದರು ಸುರರು
ವಾನರರು ॥ ಅಪ್ಪಕಣದುಭಯಾಕ್ಷಿಗಳು ನಿ । ಮ್ಮಪ್ಪನನುಜನ ಕರೆದು ಬಳಿಕ ಸ ।
ಮರ್ಪಿಸಿದನೀ ಮಾತನಾ ಲಂಕಾಧಿನಾಥಂಗೆ ॥ ೮೬ ॥ ರಚಿಸು ಕುಂಡವ ನಗ್ನಿದೇವರ ।
ರುಚಿ ದಿಗಂತವ ಬೆಳಗಲೆಂಬೀ । ವಚನ ಮಾತ್ರಕೆ ಕೋಟಿಸಂಖ್ಯೆಯ ಸರಿಗರಕ್ಕಸರ ॥
ಪ್ರಚುರತರವೆನೆ ಸೀಳಿದರು ಬಳಿ । ಕಚಲೆಯನು ಸಮಚೌಕದಲಿ ಶಶಿ । ರುಚಿಯ ಶಿಲೆ
ಗಳ ಕೆಂಡವಿಸಿ ಕಟ್ಟಿದರು ಕುಂಡವನು ॥ ೮೭ ॥ ತಂದು ಬಳಿಗೊಟ್ಟಿದರು ಪರಿಮಳ ।
ಚಂದನದ ನೀರಸ ಕುಜಂಗಳ । ನಂದವಿಗೆ ಮಧ್ಯದಲಿ ಸುರಿದರು ಭಾರ ಸಂಖ್ಯೆಯಲಿ ॥
ಒಂದು ತಾಳೋತ್ಸೇದಲಿ ಹಳು । ಕೋದಿದುತ್ತಮ ಕರ್ಪುರವ ನ । ಲ್ಲಿಂದ ಮೇಲುರಿ
ಗೊಳಿಸಿದರು ಬಳಿಕನಿಲ ಬಾಂಧವನ ॥ ೮೮ ॥ ತುಡುಕಿ ತಂಬರದುದಿಯ ಶಿಖಿ ಹೊಗೆ ।
ಹೊಡೆದುದಭ್ರವ ತಾರೆಗಳು ಕೆಲ । ಪಿಡಿದು ಬಿದ್ದವು ಕೇಸರಿಗಳಾಸುರದ ಕಿಡಿ ಸಹಿತ॥
ಮೃಢನವಧು ಕಣ್ಮುಚ್ಚಿದಳು ಬೆರ । ಗಡಸಿ ಭಾರತಿ ವರ ವಿರಂಚಿಯ । ನಡುವನಪ್ಪಿದ
ಳಂಜಿಸಿತು ಶಿಖಿ ಸುರ ವಧೂಜನವ ॥೮೯॥ ಅಳುಕುವರೆ ಸುವ್ರತೆಯುರಗ್ನಿಗೆ । ಜಲಜಭವ
ಭವ ಹರಿಗಳೆರಗುವ । ರುಳಿದವರ ಪಾಡೇನು ಪತಿಭಜನಾನು ಚರಿತರಿಗೆ ॥ ಬಳಿಕ
ಕೈಮುಗಿದೆಂದಳರಸಂ । ಗೆಲೆ ನೃಪೋತ್ತಮ ನಿನ್ನ ಸಿರಿಪದ । ನಳಿನವಲ್ಲದೆ ಬಲ್ಲರೊಳ
ಕೊಳಲಗ್ನಿ ನಿಜತನುವ ॥ ೯೦ ॥ ಅಲ್ಲದಿರ್ದಡೆ ನಿನ್ನ ಸಿರಿಪದ । ಪಲ್ಲವವ ಕಾಣಿಸಲಿ
ಮುಡಿದೀ । ಮಲ್ಲಿಗೆಯ ಪೂ ಕುಂದಿದಡೆ ಮೂಗುತಿಯ ॥ ಸಲ್ಲಲಿತ ಬೆಳಗುಟ್ಟ ಸೀರೆಯ
ಕೆಲ್ಲ ಶಿಖಿ ಸೋಂಕಿದಡೆ ನಿನ್ನವ । ಳಲ್ಲ ಜನಕಂಗಿಳೆಗೆ ಮಗಳಲ್ಲೆಂದಳಿಂದುಮುಖಿ॥೯೧॥
ಅವಧರಿಸು ರಾಜೇಂದ್ರ ಕೇಳ್ ನಿಂ । ನವಳ ನಿರ್ಮಲ ಶುಚಿತನವ ನೆಂ । ದವನಿಸುತೆ
ಬಲಬಂದಳಭ್ರವ ಚುಂಬಿಸುವ ಶಿಖಿಯ ॥ ಯುವೆಯೊಳೀಶಂಗಜಸುರೇಶ್ವರ । ರವಿ
ಗಳಿಗೆ ವಂದಿಸಿ ಧರಿತ್ರೀ । ಯುವತಿಗೆರಗುತ ವುರಿಯೊಳಗೆ ಧುಮ್ಮಿಕ್ಕಿದಳು ಸೀತೆ॥೯೨॥

ಹಾಯೆನುತ ಹಂಮ್ಮೈಸಿದನು ರಘು । ರಾಯನನುಜನು ಪವನತನುಜನು । ಬಾಯ
ಹೊಯ್ದುಕೊಳುತ ಧೊಪ್ಪನೆ ಕೆಡದ ನವನಿಯಲಿ ॥ ತೋಯಜಪ್ರಿಯ ಸೂನು ಸಹ
ಕಪಿ । ನಾಯಕರು ಘೋಳಿಟ್ಟರಾ ಕಾ । ತ್ಯಾಯನಿ ಪ್ರಮುಖಾಮರಿಯರೋರಲಿದರು
ಗಗನದಲಿ ॥೯೩॥ ಸೂಸಿದರು ಕಂಬನಿಯ ನಂಬರ । ಕೇಶ ಮೊದಲಾದವರು ಭೋರ್ಗರೆ ।
ದಾಸುರದ ಶಿಖಿ ಧಗಧಗಿಸಿದುದು ಗಗನದಗ್ರದಲಿ ॥ ದಾಶರಥಿ ಯೋರಂತೆ ಚಿಂತಾ ।
ಕ್ಲೇಶ ಭಾರದ ಮಣಿದ ಶಿರದ ನಿ । ಮೇಷ ದೃಷ್ಟಿಯೊಳಿದ್ದ ನೀಕ್ಷಿಸಿದಾ ಧನಂಜಯನ ॥
ಕುಶನೆ ಕೇಳು ಪತಿವ್ರತೆಯರಿಗೆ । ವಿಷವಮೃತವಹುದುರಿಹಿಮಾನಿತ । ರಸವಹುದಾ
ಜಲು ಹಾವು ನೇಣಹುದು ಬೆಂಬಿಡದೆ ॥ ಎಸಗಿ ದಪವಾದಂಗಳವು ತಾ । ಸಸಿನ ವಹು
ದಿದು ಸಿದ್ಧ ಸಾಕುವ । ಶಿಶುವಿನ ವೊಲಿದ್ದಳು ವಿದೇಹಜೆ ಕೈಗಳಲಿ ಶಿಖಿಯ ॥೯೫॥
ಘೆರೆಗಳುಬ್ಬರವಳಿದ ಘನ ಸಾ । ಗರದವೊಲು ಲವಕೇಳು ಸುರ ವಾ । ನರ ಕದಂಬಕ
ವಿದ್ದುದೈ ಚಿತ್ರಿಸಿದ ಪುತ್ಥಳಿಯ ॥ ಇರವಿನಂತಿರೆ ಬಳಿಕ ಮೆಲ್ಲನೆ । ಹರನ ತೊಡೆಯಿಂ
ದಿಳಿದು ನೇಮವ । ಧರಿಸಿ ರಾಮನ ಬಳಿಗೆ ಬಂದಳು ಗೌರಿ ಹರುಷದಲಿ ॥೯೬॥ ನರಚರಿ
ತ್ರದ ನಾಟಕದ ವಿ । ಸ್ಮರಣವತಿ ಲೇಸಾಯ್ತು ಸಾಕ್ಷಾ । ತ್ಪರಮ ಪುರುಷನು ನೀನು
ಜಾನಕಿ ಜಗದ ಜನನಿಯಲ ॥ ಕರೆದುಕೋ ಸಾಕೆಲ್ಲಿಪರಿಯಂ । ತರ ಪರೀಕ್ಷಿಪೆ ಪುಣ್ಯ
ಚರಿತೆಯ । ಪರಮ ಪಾತಿವ್ರತೆಯನೆಂದಳು ಗೌರಿ ವಿನಯದಲಿ ॥೯೭॥ ಬೇಡಿಕೊಳಲೇ
ಕಸಿತು ನಿಮಗೆ ನಿ । ರೂಢಿಸಿತು ಶುಚಿಯಾದಡನಲನ । ಬೇಡಿಕೊಂಬುದು ಕಾಣ ಬಹು
ದಂತದಲಿ ನೀವೆಮಗೆ ॥ ಆಡಿದುಚಿತ ಸುಭಾಷಿತವು ನೆರೆ । ಕಾದದಿರಿ ನೀವೆಮ್ಮನೆನೆ ಕೈ ।
ನೀಡಿ ಬಾರೌ ತಂಗಿ ಬಾರೆಂದಳು ವಿದೇಹಜೆಯ ॥೯೮॥ ರವಿಕುಲೇಂದ್ರನ ಚಿತ್ತ
ವೃತ್ತಿಯ । ಹವಣವಿದು ಬಳಿಕಾ ಭವಾನಿಯ । ನಿವಡಿಸಿದ ನುಡಿಗಗ್ನಿದೇವರು ನಡುಗಿ
ದೇವಿಯರ । ದಿವಿಜತತಿ ಜಯಯೆನಲು ತಂದನು । ನವ ಶರೀರೆಯ ಘನ ವಿಲಾಸ ।
ಪ್ರವರ ಲಾವಣ್ಯ ಪ್ರಪೂರೆಯ ಪೂರ್ವ ಗೋವಿನಿಯ ॥೯೯॥ ಕುಶನ ಕೇಳ್ ಪುಟವಿಟ್ಟ
ವಿಸುನಿಯ । ರಸದ ಪ್ರತಿಮೆಯವೊಲು ಪ್ರಕಾಶವು । ದೆಸೆದೆಸೆಗೆ ಸಾರ್ದುದು
ಪಸರಿಸಿದಧಿಕ ಸೌಭಾಗ್ಯ ॥ ಹೊಸಪರಿಯ ಹಾ ದುರುಬಿನಲಿ ಥಾ । ಳಿಸುವ ಮೂಗುತಿ
ಮೂಗಿನಲಿ ಜೆಳು । ವಸನದಂಗದಲೋಲೆ ಕಿವಿಯಲಿ ಮೆರೆದವಾಸತಿಯ ॥೧೦೦॥ ತಾಯೆ
ಬಂದೈ ಬಳಲಿದೌ ಹಿರಿ । ದಾಯ ಸವ ನನುಭವಿಸಿದೌ ಯೆಂ । ದಾಯತಾಕ್ಷಿಯ ನಪ್ಪಿ
ಕೊಂಡಳು ಗೌರಿ ನಸುನಗುತ ॥ ತಾಯೆ ನೀ ನರಸತಿಯೆ ಲೋಕದ । ತಾಯೆಲಾ ಯೆನು
ತಕ್ಷಿಗಳ ಸಾ । ನೀಯುವನು ಪಾಣಿಯಲಿ ನೇವರಿಸಿದಳು ನೇಹದಲಿ ॥ ೧೦೧ ॥ ಇಳಿದು
ವೃಷಭವ ನಖಿಳ ನಿಗಮಾ । ವಳಿ ಶಿರೋಮಣಿ ಸೀತೆ ಕರ ಸ । ಲ್ಲಲಿತ ಮಸ್ತಕಮಣಿ
ನಭೋಮಣಿ ಕೋಟಿಸಂಕಾಶ ॥ ಜಲಜ ಸಂಭವ ಮುಖ್ಯ ದಿವಿಜಾ । ವಳಿ ಶಿಖಾಮಣಿ
ಜನನ ಮರಣ । ಸ್ಖಲಿತ ನಿರ್ಮಲ ಬ್ರಹ್ಮ ಚೂಡಾರತ್ನ ನಡೆಯೆಂದ ।೧೦೨॥ ಹೇಳು
ತಿರ್ದವು ವೇದಕೋಟಿಗ । ಳಗಣಿತಾಮರ ಕೋಟಿ ಕೈಗಳ । ಮುಗಿವು ಜಯ ಯೆನು
ತಿರ್ದರೀಶನ ಸುತ್ತುವಳೆಯದಲಿ ॥ ನಿಗಮಹಾ ಪ್ರಳಯದಿ ಕೋಟಿಗ । ಳಗವಿಕೆಯು
ಪರಮೇಶ ಪರತರ । ನಿಗಮ ನಿರ್ಮಲ ತಾರಕಬ್ರಹ್ಮವನು ಸಾರಿದರು ॥೧೦೩॥ ಸಾರಿ
ದನು ಕೈಯೊಡನೆ ಸೀತಾ । ಶ್ರೀರಮಣನನು ಕಮಲಭವ ಪ್ರಂ । ದಾರಕೋತ್ತಮ

ಮುಖ್ಯನಾನಾ ದೇವಕೋಟಿಗಳು ॥ ವೀರಕೇಳ್ಕೈ ಕುಶನೆ ವರನವ । ತಾರವಾದಡದೇನು
ಪೂರ್ವದ । ಗೌರವದ ಗರುವಾಯಿ ಬಿಡುವುದೆ ಲವನೆ ಕೇಳೆಂದ ॥೧೦೪॥ ಶಿರವ ನಸು
ಬಾಗಿದನು ನಗೆವೊಗ । ವೆರಸಿ ಪರಮಪ್ರಿಯ ಮಹೇಶಂ । ಗುರುತರ ಪ್ರೇಮದಲಿ
ಕುಳ್ಳಿರಿಯೆಂದನಬ್ಜಜನ ॥ ಕರದ ಸನ್ನೆಯಲಮರ ಚಕ್ರೇ । ಶ್ವರನನುಪಚರಿಸಿದನು
ಮಿಕ್ಕಿನ । ಸುರರ ನೀಕ್ಷಿಸಿ ಸುಮ್ಮನಿರ್ದನು ಸುಳಿಸದುತ್ತರವ ॥ ೧೦೫ ॥ ಏನು ಬಂದಿರಿ
ಯೆಂಬ ಬುಧಸ । ನ್ಮಾನ ಸಂಭೃತ ವಿಹಿತ ವಿನಯ ಗು । ಣಾನುರಾಗೋಕ್ತಿಗಳು
ನಮ್ಮಲಿ ತೋರದಾಯಿತಲ ॥ ಮಾನವೇಂದ್ರಗುಚಿತವೇ ಲ । ಕ್ಷ್ಮೀ ನಿವಾಸ ಪ್ರೌಢಿನೆ
ಬೆಂದಗ । ಜಾನಿತಂಬಿನಿಯರಸ ಮೆಲ್ಲನೆ ನುಡಿದನರಸಂಗೆ ॥೧೦೬॥ ಬಂದ ಹದನನು
ಬಲ್ಲೆ ನೊಪ್ಪಿಸಿ । ಸಂದಿಹುದು ಸಂದೇಹವದು ನಿ । ಮ್ಮಿಂದ ಹರಿಯದು ಮರಳಿ ನೀವೆಂ
ಬುಕುತಿಯದು ನಾನು ॥ ಎಂದವೆನು ನೀವ್ ಕೇಳಿನಾವ್ ಹರಿ । ಯೆಂದು ಸೀತಾದೇವಿ
ಸಿರಿ ತಾ । ನೆಂದು ಹೇಳುವಿಲ್ಲೈಸಲ್ಕೆ ಮನವೊರೆದು ನಮಗೆಂದ ॥೧೦೭॥ ಕುಲಜರಾವ್
ರಘುವಂಶದಲಿ ನಿ । ಸ್ಖಲಿತರಾವ್ ಮಾರ್ಗದಲಿ ಲೋಕದ । ಹಳಲಿಗೊಶ ವಹರಲ್ಲ
ನಗೆಗೆಡೆಯುವರು ನಾವಲ್ಲ ॥ ಇಳೆಯ ಸುತೆ ನಿರ್ಮಲಯ ಕಲ್ಮಷ । ಲಲಿತ ಪುಣ್ಯಚರಿತ್ರೆ
ಸುವ್ರತೆ । ಕುಲ ಯಶಸ್ವಿನಿಯೆಂಬರ್ಕೈಸಲೆ ಯೆಂದನಾ ರಾಮ ॥ ೧೦೮ ॥ ಒಪ್ಪೆನಾವಾ
ಮಾತ ಸೀತೆಯ । ನೊಪ್ಪುಗೊಳಿಸುವ ಬುದ್ಧಿ ಚಿತ್ತದ । ಲಿಪ್ಪುದಾದಡೆ ಕರೆದುಕೊಡಿ
ನಮ್ಮನ್ವಯದ ನೃಪರ ॥ ತಪ್ಪರವರೆಮ್ಮನ್ವಯಕೆ ಹಳಿ । ವೊಪ್ಪುಗೈಯ್ಯದುಯೆಂದು
ನಿಮ್ಮೊಡ । ನಿಪ್ಪವರ ಸಂಸದಲಿ ನುಡಿದರೆ ನೊಪ್ಪಿವಾವೆಂದ ॥ ೧೦೯ ॥ ಎನಲು ನಸು
ನಗುತಾ ಮಹೇಶ್ವರ । ವನಜಭವ ನಾನವನ ನೀಕ್ಷಿಸ । ಲಿನಕುಲದ ಶಶಿಕುಲದರಾಯರ
ಕರೆಸಿ ಕಮಲಭವ ॥ ಮುನಿ ವಸಿಷ್ಠನ ಬರಿಸೆ ನಿಮ್ಮಯ । ಜನಪತಿಗೆ ಪೂರ್ವ ಕ್ಷಿತೀಶ್ವರ
ಮನುಪರಂಪರೆಯಿಂದ ತೋರಿಸಿ ಕಳುಹು ನೀನೆಂದ ॥ ೧೧೦ ॥ ನೆರೆದುದಾ ಬಳಿಕಾ
ವಸಿಷ್ಠನ । ಕರೆದ ಸನ್ನೆಯಲುಭಯ ವಂಶದ । ನೃಪತಿಗಳಿದ್ದೆಸೆಯಲಾ ರಘು ರಾಮ
ಚಂದ್ರಮನ ॥ ಅರಸನಲ್ಲಿಗೆ ಬಳಿಕ ಮುನಿ ನಡೆ । ತರಲು ಧಿಮ್ಮನೆನಿಂದು ಗುರುವಿನ ।
ಚರಣಕಾನತನಾಗೆ ನಗುತಿಂದೆಂದನಾ ಮುನಿಪ ॥೧೧೧॥ ರಾಯ ಕೇಳ್ಕೈ ಸಕಲ ಲೋಕದ ।
ತಾಯಲಾ ಭೂಜಾತೆ ಕೀರ್ತಿಯ । ತಾಯಿವನೆ ಯೆಂಬುದನುಮಾ ದೇವಿಯರ ಕೇಳಿ
ನಲು ॥ ಆಯಿತಾ ಮಾತಂತಿರಲಿ ಕುಲ । ದಾಯತಿಕೆ ಯವರಿವರವರ್ಗಳ । ಬಾಯಿ
ವಕ್ಕಣೆಯುಳ್ಳಡಾಗಲಿ ನುಡಿಸಿ ನೀವೆಂದ ॥ ೧೧೨ ॥ ನಿಂದಿರಾದರೆ ತೋರಿಸುವೆ ಕೇ ।
ಳೆಂದು ಕೈಗೊಟ್ಟಾದಿಪುರುಷನ । ತಂದ ತೋರಿಸಿದನು ಪುರಾತನ ಪಾರ್ಥಿವೋತ್ತ
ಮರ ॥ ಇಂದುಕುಲದ ಪುರೂರವನು ಬಳಿ । ಸಂದ ನೃಪನಾಯಕ ಕುಮಾರಕ । ನಿಂದಿ
ವರ ನುಡಿಗೇಳು ಸೀತೆಯ ಪರಿಯ ನೀನೆಂದ ॥೧೧೩॥ ಈತ ಕುರುರಾಜೇಂದ್ರ ನೀ ತೋ ।
ರ್ಪಾತ ಭರತನು ಯದು ನೃಪೋತ್ತಮ । ನೀತ ನಹುಷನು ರಾಮ ನೋಡೀತನು
ಯಯಾತಿಕಣ ॥ ಈತ ನಳ ಮಾಂಧಾತ ನೃಪ ತಾ । ನೀತ ನಗ್ಗದ ಕಾರ್ತವೀರ್ಯ ಮ ।
ಹೀತಳಾಧಿಪ ನಿವರ ನುಡಿ ಕೇಳೆಂದನಾ ಮುನಿಪ ॥ ೧೧೪ ॥ ಇದೆ ಸುಧಾಕರ ವಂಶದವ
ಶವ । ರುದಿತ ವಚನವ ನಂಬದಿರೆ ನೋ । ಡಿದಕೋ ನಿಮ್ಮನ್ವಯದ ರಾಯರು ಕೋಟಿ
ಸಂಖ್ಯೆಯಲಿ । ವಿದಿತವವರ ಸುವಾಕ್ಯಪದ್ಧತಿ । ಹೃದಯ ಕನುಮತಿಯುಹಡೆಕೈಗೊಂ ।

ಬುದು ಜಗನ್ಮಾತೆಯನು ಸೀತೆಯೆನೆಂದನಾಮುನಿಪ || ೧೧೫ || ಮನು ಮಹೀಶ್ವರನೀತ ನೀಶನ | ತನುಜ ಕುಕ್ಷಿ ವಿಕುಕ್ಷಿ ನೃಪ ನೀ | ತನು ನೃಪೋತ್ತಮ ನೀತ ಗಿಕ್ಷ್ವಾಕು ಭೂಪಾಲ || ಜನಪ ನೀತದಿಲೀಪ ರಘುವೀ | ತನು ಹರಿಶ್ಚಂದ್ರ ಕ್ಷಿತೀಶ್ವರ | ವಿನುತ ಸಗರ ಭಗೀರಥಾದಿಗಳಿವರ ಕೇಳೆಂದ || ೧೧೬ || ಈತ ರುಕುಮಾಂಗದ ತ್ರಿಶಂಕು ಮ | ಹೀತಳಾಧಿಪನೀತ ನೀತ ಮ | ಹಾತಿಬಲ ನನರಣ್ಯನೀತ ಕಕುತ್ಸ್ಥಭೂಪಾಲ || ಈತ ನೋಡೀಗಂಬರೀಷನ | ಖ್ಯಾತನಿವ ನಜನೀತ ದಶರಥ | ನೀತ ನಿವರನಮಿತವ ನಂಗೀ ಕರಿಸು ನೀನೆಂದ ||೧೧೭|| ಬೀಳಲಾನಂದಾಶ್ರುಜಲ ಹೆ | ಕ್ಕಳಿಸೆ ವೈಯಿಕ್ಕಿದನು ಜನ ಕಂ | ಗಳಿದು ದಿವ್ಯ ವಿಮಾನವನು ದಶರಥ ಮಹೀಪಾಲ || ಜಲಜ ಬಾಂಧವ ವಂಶ ದವನಿಪ | ತಿಲಕ ಬಾ ರಘುರಾಜ ವಂಶಾ | ವಳಿ ಸರಿತ್ಪತಿ ಸೋಮ ಬಾ ಯೆಂದಪ್ಪಿ ದನು ಮಗನ ||೧೧೮|| ತರುಣಕೇಳ್ ಸಂತುಷ್ಟನಾದೆನು| ಪರಮ ಸತ್ವಧೃಡವ್ರತಕೆ ಸ | ದ್ಗುರು ಸುಮಾತಾ ಪಿತೃ ಸುಪರ್ವ ಮಹೀಶ್ವರಾರ್ಚನೆಗೆ || ಅರಿವಿಜಯ ವಿಕ್ರಮಕೆ ನಿನ್ನಯ | ತರುಣಿಯಮಲ ಪತಿವ್ರತಾ ಸ | ಚ್ಚರಿತ ಮಾರ್ಗಕೆ ಲಕ್ಷ್ಮಣನ ಶಿಶ್ರೂಷೆ ನಾನೆಂದ ||೧೧೯|| ಮಗನೇ ನೀ ನರನೇ ಚತರ್ದಶ | ಜಗದ ಜನಕಗೆ ಜನಕನಲ್ಲಾ | ನಿಗಮ ಸಿದ್ಧನಲಾ ವಿಚಾರಿಸೆ ಲೋಕರಕ್ಷಣೆಗೆ || ಯುಗ ಯುಗಂಗಳಲಿಳೆಯ ಭಾರವ | ನುಗಿಯಲೋಸುಗ ವೇಷವಲ್ಲದೆ | ಸೊಗಸೆ ನಿನಗಿದು ಪರಕೆ ಪರತರ ವಸ್ತು ನೀನೆಂದ|| ಆದರೆಯು ನರನಾಟಕದ ಸಂ | ಪಾದಕರ ಲೇಸಾಯ್ತು ಜನಕಜೆ | ಯಾದಿಲಕ್ಷ್ಮಿ ಕರಣಾ ಪರಿಗ್ರಹಿಸೆನ್ನ ಮಾತಿನಲಿ|| ವೇದ ವಚನವಿದೆಂದು ಬಗೆ ಹುಸಿ | ಯಾದಡೀ ನುಡಿನಿಮ್ಮ ರಘುವಂ | ಶೋದಯದ ಉದ್ಭವಿಸಿದವನಲ್ಲೆಂದನಾ ಭೂಪ || ೧೨೧ || ತಾಯಿ ಬಾ ಗೌ ತಂಗಿ ನೀ ಹಿರಿ | ದಾಯಸವ ನನುಭವಿಸಿನಲಿಗಿದೆ | ರಾಯ ರಂಗನೆಯುರಲಿ ನೀ ನುತ್ತಮೆ ಯುಲಾ ಜಗಕೆ|| ವಾಯುಸಖ ನುದರದಲಿ ಹೊಕ್ಕಬು | ಜಾಯತಾಕ್ಷಿಯುರುಂಟೇ ನಿನ್ನ ಪ್ರೌ | ಲಾಯಿತೀ ಪರಮೇಲೆ ಜಗದಲಿ ಕೀರ್ತಿ ನಮಗೆಂದ |೧೨೨|| ಬಿಕ್ಕಿ ಬಿರಿಬಿರಿದಳುತ ಸತಿ ನೈ | ಯಿಕ್ಕಲವನೀನಾಥ ಸೆರಗಿನ | ಲುಕ್ಕುವಂಬಕ ಜಲವ ತೊಡೆ ದಪಸವ್ಯದಂಕ ಪಲಿ|| ಅಕ್ಕರಿನ ಮೋಹದಲಿ ಕಂಬನಿ | ಯುಕ್ಕುತಿಬ್ಬರ ಕುಳ್ಳಿರಿಸಿ ಚರ | ಣಕೆ ನಮಿ ಸಿದ ಲಕ್ಷ್ಮಣ ತೆಗೆದಪ್ಪಿದನು ಭೂಪ || ೧೨೩ || ಎಡದ ತೊಡೆಯಲಿ ಕುಳ್ಳಿರಿಸಿ ನೈ | ದಡವಿದನು ರಘುಪತಿಯು ಸೀತೆಯ | ಮುಡಿಯ ನೇವರಿಸಿದನು ಮುಂಡಾಡಿದನು ಲಕ್ಷ್ಮಣನ || ಬಿಡು ಮಗನೆ ಚಿತ್ತದ ಕಳಂಕವ | ಹಿಡಿಯದಿರು ಸಂಶಯವ ಸೀತೆಯ | ನಡವಳಿಗೆ ಸಂತುಷ್ಟಮಾನಸರಾದೆ ವಾವೆಂದ || ೧೨೪ || ಬಳಿಕುಮಾದೇವಿಯುರು ಸೀತೆಯ | ಲಲಿತ ಹಸ್ತಾಂಬುಜವನಾ ರಘು | ಕುಲ ಶಿರೋಮಣಿ ಯಮಲಕರಕಮಲ ದಲಿ ಸಂಘಟಿಸಿ || ನಳಿನಭವ ಸತಿಸಹಿತ ಮುಕ್ತಾ | ಫಲದ ಸೇಸೆಯ ತಳಿದು ವಿಪ್ರಾ | ವಳಿಯ ಸುಳಿದರೊಲಿಲಿದು ಹೊಂದಳಿಗೆಗಳ ಹಂತಿಯಲಿ || ೧೨೫ || ಮೊರೆದವಾಗಲು ದೇವ ದುಂದುಭಿ | ಪರಿಮಳದ ಕುಸುಮಂಗಳಾಕ್ಷಣ | ಸುರಿದವಂಗೀಕರಿಸಿದನು ರಘು ನಾಥ ನವಸಿಜೆಯ || ನರ ವಧುಗಳೊಳಗಾರು ಸೀತಾ | ಸ್ಮರಣೆಯನು ಮಾಡಲು ಪತಿ ವ್ರತೆ | ಮರಿಗೆ ತಾಯಿಯವೃಸಲೇ ಕುಶನೆ ಕೇಳೆಂದ || ೧೨೬ || ದೇವ ನೀ ನಮ ಗಿತ್ತ ವರವದು | ದೇವತಾ ವರವಾಯ್ತು ನೀ ಮನು | ಜಾಪತಾರದ ಸೊಗಸ ನಂಗೀ

ಕರಿಸಿ ನಡೆಮುದಕೆ ॥ ನಾವು ಕೊಡುವೆವು ವರವ ನಿಮಗೆಂ । ದಾ ವಿರಂಚಿ ಪುರಾರಿ ಪೌಲೋ । ಮಾ ವರರು ನುಡಿಯಲ್ಕೆ ಬಳಿಕಿಂತೆಂದನಾ ರಾಮ ।೧೨॥ ಕೊಡುವ ವರ ವುಂಟಾದರೀಗಲಿ । ಮಡಿದ ವಾನರರೆಲ್ಲ ರವರಿ । ದ್ದೆಡೆಯಲಿರ ಲಕ್ಷಯ ಫಲಾಳಿ ಸುಧೋಪಮಾನ್ವಿತದ ॥ ಮಡುಗಳಿರಲಿ ನಿಜಾಂಗನಾಜನ । ರೊಡನೆ ಸುಖದಿಂದಿಪ್ಪ ವರವನು । ಕೊಡುವುದೆನೆ ಕೊಟ್ಟರು ಹರ ಬ್ರಹ್ಮಾಮ ರೇಶ್ವರರು ॥ ೧೨೮ ॥ ಬಳಿಕಿಡಿದು ಬಂದೊಬ್ಬರಳಿವಿನ । ಅರಿಯದಂತಿರೆ ಕಪಿಗಳಿದ್ದರು । ಕಳಕಳಿಗೆ ಮಿಗೆ ಬೀಳುಕೊಂಡುದು ದೇವಗಣ ನೃಪನ ॥ ಕಳುಹಿವನು ಕೈಮುಗಿದು ಕೈರವ । ಜಲಜಸಖ ವಂಶದ ನೃಪಾಲಾ । ವಳಿಯ ನೈಯ್ಯನ ನಮಿಸಿ ಬೀಳ್ಕೊಟ್ಟನು ಮಹೀಪಾಲ ॥ ೧೨೯ ॥ ಬೆಳಗಿದುದು ಸಫ ಲಿಂದು ಸೂರ್ಯರ । ಸುಳಿವು ಸುಲಭತೆಯಾಯ್ತು ದಿಜ್ಮಂ । ಡಲಗಳುತ್ಸಾಹಿಸಿದ ಳವನೀ ದೇವಿ ಹರುಷದಲಿ ॥ ತಳಿದು ದಂಭೋರಾಸಿಮಿಗೆ ಹೆ । ಕ್ಕಳಿಸಿದುದು ತಾ ಹೇಳಲೇನದ। ಕೆಳಗು ಮೇಲಣ ಜಗದ ಸುಮ್ಮಾನದ ಸಗಾಢತೆಯ ॥ ೧೩೦ ॥ ಪರಮ ಪುಣ್ಯಪತಿ ವ್ರತೆಯ ಸತಿ । ಯರ ಶಿರೋಮಂಡನೆಯ ತೊರವೆಯ । ಪುರ ವರಾಧೀಶ್ವರನು ಕಂಡೀ ಶವನು ಹರುಷದಲಿ ॥ ಪರಿಸಿದರು ಸುಗ್ರೀವ ಜಾಂಬವ । ಹರಿತನುಜ ನಳ ನೀಲ ಮೊದ ಲಾ । ದರಿಗೆ ನಲವಾಯ್ತಖಿಳ ದಂಪತಿಗಳ ನಿರೀಕ್ಷಣದಲಿ ॥ ॥೧೩೧॥

ಐವತ್ತ್ಮೂರನೆಯ ಸಂಧಿ ಸಮಾಪ್ತಂ.

ಐವತ್ನಾಲ್ಕನೆಯ ಸಂಧಿ.

ಸೂಚನೆ॥ ಭುವನಜನ ಘುಲ್ಲೈಸೆ ನಿರ್ಜರ । ನಿವಹತತಿ ಪರಿಣಮಿಸೆ ಸತಿ ಸಹ। ಭವನು ಸಹಿತಸುರಾರಿ ನಂದಿಗ್ರಾಮಕೈತಂದ ॥

ಪದ್ಯ॥ ಕೇಳಿವೈ ಕುಶ ಬಲಿದುದನಿತರ । ಮೇಲೆ ಪರಮಸ್ನೇಹ ಸೀತೆಯ । ಮೇಲೆ ರಘುನಾಥಂಗೆ ಮೇಲಸುರೇಂದ್ರನೈತಂದು ॥ ಶ್ರೀ ಲತಾಂಗಿಯರಮಣ ನಂ ಘ್ರಿಯ । ಮೇಲೆ ಮೌಳಿಯ ನಿರಿಸಿ ಕೈಮುಗಿ । ದೋಲಗಂಬಡೆ ದಾಳಿವಗೆ ಬಿನ್ನೈಸಿ ದನು ಬಳಿಕ ।೧। ಪುರಕೆ ಬಿಜಯಂಗೈದು ತನ್ನುಪ । ಚರಣೆಯನು ಕೈಕೊಂಡು ಲಂಕಾ। ಪುರಜನವ ಸಂತೈಸಿ ಬಿಜಯಂಗೈಯ್ಯಬೇಕೆನಲು ॥ ಅರಸ ಬಳಿಕಿಂತೆಂದ ನೆನ್ನಯ । ಭರತ ಜನನಿಯ ನೇಮವವಧಿಯ । ವರುಷ ತುಂಬದಮುನ್ನ ನಗರನಿವಾಸವಿಲ್ಲೆಂದ ॥೨ ಇನಿತು ಸತ್ಕೃತಿ ಸಾಲದೇ ನ । ಮ್ಮನುಜ ಲಕ್ಷ್ಮಣದೇವ ಮಾಡಿದ । ಘನತರದ ಪರಿ ಚಯ ನಡೆದುದು ನಮಗೆ ನಿಮ್ಮಿಂದ ॥ ಜನನಿಯರು ಚಿಂತಿಸುವ ರುಮ್ಮಳ । ವನುಜರಿಗೆ ಭಾರಿಸುವ ದಿಂದಿನ । ದಿನದಲೇ ನಾವ್ ತೆರಳಬೇಕೆಂದಸುರರಿಪು ನುಡಿದ ।೩॥ ತರಿಸಿ ದನು ಬಳಿಕಖಿಳ ಭೋಜ್ಯದ । ನಿರುಪಮಿತ ಸಾಧನ ಸಮಗ್ರವ । ವಿರಚಿಸಿತು ಮಣಿಮಂ ಟಪವು ಮಯನಿಂದ ಪಾಳಯದ ॥ ವರ ಪುರೋಭಾಗದಲಿ ನಾನಾ । ಪರಿಯ ಸಂಭ್ರಮ ದಿಂದ ನೆರೆದಿ । ಸ್ತರಣದಲಿ ಬಿದಸ್ಟಟನಾದುದು ಸಕಲ ಕಪಿಬಲಕೆ ॥ ೪ ॥ ಅರಸ ನಾಜ್ಞೆಯ ಲಖಿಳ ದಿವ್ಯಾ । ಭರಣ ದಿವ್ಯಸುಗಂಧ ಮಾಲ್ಯಾಂ । ಬರದಿ ನೊಪ್ಪಿದುದಿನ

ಸುತಾದಿ ಸಮಸ್ತ ಕಪಿಸೇನೆ ॥ ತರಿಸಿ ಧನದನ ಪುಷ್ಪಕವ ಮುಂ । ದಿರಿಸಿ ಬಿಜಯಂಗೈವು ದೆಂದನು । ನರಪತಿಗೆ ಕೈಮುಗಿದು ಲಂಕಾನಾಥ ನೊಲವಿನಲಿ ॥ ೫ ॥ ಗಜಗಲಿಸಿದುದು ಸೋಮ ಸೂರ್ಯರ । ನಿಜದ ಸಿರಿಗೆಯು ಲಹರಿಯಲಿ ನಾ । ಕಜರ ವಿಮಳ ವಿಮಾನ ಗಣನೆಯು ಗುಣಕೆ ಮಿಗಿಲೆನಿಸಿ ॥ ರಜಿತ ಶೈಲವೊ ವೇಣ್ಸುಧಾಬ್ಧಿಯು । ನಿಜನಿವಾಸಿಸಿ ನಿಲಯವೊ ನೀ । ರಜಭವನ ಭವನವೋ ಪರೀಕ್ಷಿಸಲರಿಯೆ ನಾನೆಂದ ॥ ೬ ॥ ನಿಳಯ ವಿದ್ರುದನಂತ ಸೌಧಾ । ವಳಿಗಳಿದ್ದವು ಲಲಿತ ಕಾಮಿತ । ಫಲ ಸಮಗ್ರದ ಬಹಳಸಂದಸ ವಿರ್ದುದೆಡೆಗೆಡೆಗೆ ॥ ಜಲಭರಿತ ಕಾಸಾರವಿರ್ದುದು । ಲಲಿತ ಭೋಜ್ಯ ಸುವಸ್ತು ಲಲನಾ । ವಳಿ ಮಹಾ ಪದವಿರ್ದ ವಮಲ ವಿಮಾನ ಮಧ್ಯದಲಿ ।೭॥ ಕಟಕ ಸಹಿತೆಲೆ ದೇವನೀ ವಿ । ಸ್ಫುಟ ವಿಮಾನಾರೋಹಣಕೆ ಸಂ । ಘಟಿಸುವುದು ಚಿತ್ರವನು ಸೇವೆಯಿದೀಗ ಕಿಂಕರನ॥ ನಟಿಸದಿರಲನ್ಯವನು ಮನವು । ತ್ಕಟದ ಕೃಪೆ ತನಗೀಗೆನುತ ಸಂ । ಘಟದ ಕರದಲಿ ಬೇಡಿ ಕೊಂಡನು ಶರಣರಾಳುವನ ॥೮॥ ಐಸೆ ಮತ್ತೀನೆನುತ ನೃಪತಿ ಸು । ವಾಸಿಸಿಯು ಕೈವಿಡಿದು ಲಂಕಾ । ಧೀಶ ನುಗ್ಗಡಣೆಯಲಿ ಬಂದೇರಿದನು ಪುಷ್ಪಕವ ॥ ಕೀಶಪತಿ ಜಾಂಬವ ಸುಷೇಣಕ । ಕೇಸರಿ ಪ್ರಮುಖಾದಿ ಬಲ ಭೂ । ವಿಾಶ ನಾಜ್ಞೆಯ ಲೇರಿದರು ಕೌಬೇರ ಪುಷ್ಪಕವ ॥ ೯ ॥ ತೆರಪುಗೊಟ್ಟಿರ್ದುದು ಕುಬೇರನ । ಮಿರುಪ ದಿವ್ಯ ವಿಮಾನವೈವರಿ । ಗರಿಯಬಾರದು ಸಂದಣಿಸಿ ಕುಳ್ಳಿರ್ದ ಕಪಿಭಟರ ॥ ಹೆರೆಯ ಮೌಳಿಯ ದೇವ ಧನಪತಿ । ಮರೆಯೊಗುವ ಕಾಲದಲಿ ಕರುಣದ । ಲರಿಯೆ ಕೊಟ್ಟ ನಿಮಾನವಿದು ಸಾಮಾನ್ಯವೇಯೆಂದ ॥೧೦॥ ಶರಣುಜನ ಮಸ್ತಕಮಣಿಮಯ ನಿಜ । ಕರತಳದ ಲಾಡಿದವಲ್ಲೈ ಲಾ । ಮರ ಚತುರ್ದಶಭುವನ ಭವನ ಶರೀರ ವಿದ್ದೆಸೆಯ ॥ ನೊರೆವದುಂದುಭಿ ರಭಸದಲಿ ಪು । ಷ್ಕರಕೆ ಪುಷ್ಕರರುಚಿರಿಸಿದುದು ಖೇ । ಚರರು ಜಯ ಜಯಯೆನಲು ಝುಡಿತೆಯ ಜಯದಗಾಡಿಯಲಿ ॥೧೧॥ ಕಂಡುದಿಲ್ಲಿಲೆ ದೇವ ದೇವರ । ಕಂಡು ಬದುಕಿದ ಶರಣಜನ ಮಣಿ । ಮುಂಡನನ ಪಟ್ಟಣವ ತೋರಿಸಬೇಕು ತನಗೆನಲು॥ ಖಂಡಪರಶು ಮಹೋಗ್ರತರ ಕೋ । ದಂಡ ಚಂಡನಿತಂಡ ಬಾಹಾ । ದಂಡ ಚಂಡ ಪರಾಕ್ರಮನು ವೈದೇಹಿಗಿಂತೆಂದ ॥೧೨॥ ಇದು ಕಣಾ ಪೂರ್ವದಲಿ ಮಯನಿಂ । ತ್ರಿದಶ ವರ್ಧಕಿಯಿಂದ ವಿಸ್ತರಿ । ಸಿದುದು ನಗರವಿದೀಗ ಸೇರಿತು ರಾಜರಾಜಂಗೆ ॥ ಸುದತಿ ಕೇಳ್ಬಳಿಕಾಯ್ತು ದಾಯಾ । ದ್ಯದ ವಿರೋಧದಲಾ ದಶಾಸ್ಯಂ । ಗಿದಿರ ಮಹಿಮೆಯ ಹೊಗಳಲಸದಳವೆಂದನಾ ರಾಮ ॥೧೩॥ ಈ ಮಹಾಗಿರಿ ದುರ್ಗವಿದು ತಾ । ವ್ಯೋಮ ಕೇಶನು ಗೆಲಿದ ದುರ್ಗದ । ಕೈಮಿಗಿಮ್ಮಡಿ ಸಾಧ್ಯವಾದುದು ದೈವಘಟಣೆಯಲಿ ॥ ಈ ಮಹಾ ಶರಣಂಗೆ ಪರರನು । ಕಾಮಿಸದ ಕಮಲಜನ ಕಲ್ಪದ । ಸೀಮೆ ವರಿಯಂತಬಲೆ ನೋಡೆಂದರಸ ತೋರಿಸಿದ ॥೧೪॥ ವಲಯವೆರಡರ ಕೋಟಿ ಚಂದ್ರನ । ಬಳಸಿ ತೋರುವ ಪರಿಧಿಯಂತಿವೆ । ನಿಳಯವವೆ ತಾರಾಗ್ರಹಗಳ ಬಹಳ ತೇಜದಲಿ ॥ ಥಳಥಳಿಸುತಿದೆ ರಾಜಗೃಹತತಿ । ಗಳ ಸುಧಾಕರನಂತೆ ಲೋಕಾ । ಲಲಿತ ನಂದನವದೆ ವಿಳಂಬಿತ ಧಾತ್ರಿಯಂಪದಲಿ ॥ ೧೫ ॥ ಅಗಳು ನೋಡೀ ಪುರಕೆ ಪೂರ್ವದ । ಸಗರರಿಂದಾದಬುಧಿ ಕಪಿಗಳು । ಬಿಗಿದರಿದನುಪ್ಪರದ ಮಾಯಾ ಸೂತ್ರಮಾತ್ರದಲಿ ॥ ವ್ಯಗವಿಲೋಚನೆ ಕೇಳು ಲಂಕಾ । ನಗರದೆರಡನೆ ಮರಸು ನಮ್ಮಂ । ಘ್ರಿಗಳ ದರುಶನವಾದ ಠಾವಿದು

ನೋಡು ನೀನೆಂದ ॥೧೬॥ ಎನೆ ವಿಭೀಷಣದೇವ ಕೈಮುಗಿ । ದಿನಕುಲೇಂದ್ರಗೆ ಬಿನ್ನ
ವಿಸಿದನು । ವನಜಲೋಚನ ಚಿತ್ತವಿಸು ಮುಂದಣ ಯುಗಂಗಳಲಿ॥ ಮನುಜ ಗೋಚರ
ವಾಗದವೊಲೀ । ವನಧಿಯನು ಸೇತುವ ವಿಭಾಗಿವು। ದೆನಲು ಬಿಲ ಕೊಪ್ಪಿಂದ ಮುಕ್ಕಡಿ
ಯಾಗಿ ಖಂಡಿಸಿದ ॥೧೭॥ ನಡೆದುದುತ್ತರಕಾಗಿ ಗಗನದ। ಸೋದರ ಸೊಬಗಿನವೊಲು
ಪುಷ್ಪಕ। ವೆಡೆಯಲಿರ್ದುದು ಕಲಿ ಜಟಾಯುವಿ ನಗ್ರಜನ ವಿಪಿನ ॥ ಮಡದಿ ನೋಡಿದ
ಹಿಂದೆ ರಾವಣ। ನೊಡನೆ ಹಳಚಿದ ಸೂರ್ಯಸೂತನು। ಹಡೆದ ಮಗನಗ್ರಜನ ವನವಿದು
ಕಾಂತೆ ಕೇಳೆಂದ ॥ ೧೮ ॥ ಮುಂದೆ ನೋಡು ಸ್ವಯಂಪ್ರಭೆಯ ನಿಜ । ಮಂದಿರದ
ಮಾರ್ಗದ ಸರೋವರ । ವಿಂದುಮುಖಿ ಕೇಳಿದರೊಳಿರ್ದುದು ಮೂರುದಿನವುಳಿಯೆ ॥
ಸಂದಮಾಸವ ನೆಮ್ಮಬಲ ಬಿಲ। ದಿಂದಿಳಿದು ನಿನಗೋಸುಗವೆ ನೋ। ಡೆಂದು ತೋರಿಸೆ
ಮುಂಚಿದುದು ಪುಷ್ಪಕ ಧನೇಶ್ವರನ ॥ ೧೯ ॥ ಇದು ಕಣಾ ಕಿಷ್ಕಿಂಧೆ ಯೆಂಬ। ಗ್ಗದ
ಮಹಾಗಿರಿದುರ್ಗವಿದ ನಾ। ತ್ರಿದಶಪತಿಸುತನಾಳುತಿರ್ದನು ಹಲವು ವತ್ಸರವ ॥ ಸುದತಿ
ಯಭಿಲಾಷೆಯಲಿ ವೈರದ। ಲಿವಿರುಗೊಂಡನು ತಮ್ಮನಲಿ ಸೇ। ರದ ಸಮಾಕದೊಳಿದೆ
ನಾತನನರಸಿ ಕೇಳೆಂದ ॥೨೦॥ ಬಳಿಕ ಪರಮ ಸ್ನೇಹಭಾವದ। ಬಳಸಿದನು ನಮ್ಮಡೆಗೆ
ವೈರಿಯ। ಕೊಲೆಗೆ ಕೈನೆರವಾದರೀ ಸುಗ್ರೀವ ನಾಜ್ಞೆಯಲಿ ॥ ಗೆಲವು ನಮಗಾಯಿತ್ತಿತ
ನಲಿ ಕೇ। ಳೆಲೆ ಮಹೀಸುತೆಯೆಂಬ ನುಡಿಯಿಂ । ದೊಳಗೆ ಬಂದಳು ರುಮೆ ಸಮಸ್ತ
ವಧೂ ಕದಂಬದಲಿ ॥ ೨೧ ॥ ಕಲಶ ಕನ್ನಡಿಯಿಂದ ಶೋಭಾ । ಕಲಿತ ವೈಭವದಿಂದಿದಿ
ರ್ಗೊಂ। ಡಳು ಮಹಾ ಸಂಭ್ರಮದಿ ಯುವನಿಜೆ ಸಹಿತ ರಾಘವನ ॥ ಇಳಿದು ತೊಡೆ
ಯಿಂದರಸನಾಜ್ಞೆಯ । ಲೊಲವುವಿಂಗೆ ವೈದೇಹಿ ರುಮೆಯನು। ಸೆಳೆದು ಬಿಗಿಯಪ್ಪಿ
ದಳು ಪರಮ ಸ್ನೇಹ ಭಾವದಲಿ ॥ ೨೨ ॥ ಹಿಂದೆ ಸೀತಾದೇವಿಯರು ಬಿಸು । ಟಂದಿನಾ
ಭರಣಗಳ ಧರಣಿ। ನಂದನೆಗೆ ಕಾಣಿಕೆಯ ನಿತ್ತೆರಗಿದಳಲಾ ಬಳಿಕ ॥ ಕಂದ ಕೇಳ್ಕೈ
ಕುಶನೆ ಪರಮಾ। ನಂದದಲಿ ರುಮೆ ತಾರೆಯರ ಮುದ। ದಿಂದ ಮನ್ನಿಸಿ ಸತ್ಕರಿಸಿದಳು
ಸೀತೆ ಹರುಷದಲಿ ॥ ೨೩ ॥ ಪುರಕೆ ಬಿಜಯಂಗೈದು ನಮ್ಮ। ಬ್ಬರ ಕೃತಾರ್ಥರಮಾಡಿ
ಸ್ಪೃತ್ಯರ । ಪರಮ ಪೂಜೆಯ ನನುಕರಿಸಿ ನೀವ್ ನಾಳಿನುದಯದಲಿ ॥ ತೆರಳುವುದು
ನೀವೆಂದು ರವಿಸುತ । ಕರಯುಗಂಗಳ ಮುಗಿಯಲಾ ನೃಪ। ದರಹಸಿತ ವದನದಲಿ
ನುಡಿದನು ಭಾನುತನುಜಂಗೆ ॥ ೨೪ ॥ ಆರು ನಿನ್ನವೊಲೀಪರಿಯ ಸ। ತ್ಕಾರ ಸೇವಾ
ಲಂಬರ್ಯ್ಯ ಯುಪ। ಚಾರವೇ ನಾವ್ ಮರೆಯಬಹುದೇ ಜನ್ಮಜನ್ಮದಲಿ ॥ ಆರ ದೆಸೆಯಿಂ
ದಿಳಿದ ಲಜ್ಜೆ ವಿ। ಹಾರಿಸಿತು ಕೊಂಡಾಡುವರೆ ಕೈ । ವಾರಿಗಳೆನಾವ್ ಸಾಕಿದಿನ್ನೇಕೆಂ
ದನಾ ರಾಮ ॥೨೫॥ ಭರತನಿಂದಿನದಿನದೊಳಗೆ ಕೇ। ಸರಿಯ ಸಪ್ತಾರ್ಚಿಯಲಿ ಕಾಯುವ।
ಬೆರಸದಿರಸಿದು ಪೂರ್ವ ಸೂಚಿತ ಸುಪ್ರತಿಜ್ಞೆಯಲಿ ॥ ಹಿರಿದು ತೃಪ್ತಿಯ ನೈದಿದೆವು
ಪರಿ। ಚರಿಯೆಯಲಿ ನಿನ್ನಿಂದಲೊಂದಾ । ದರಿಸಿ ಬಳಿಕ ವಿಮಾನ ನಡೆದುದು ಮುಂದೆ
ಪಹಿಲದಲಿ ॥೨೬॥ ಸೀತೆ ನೋಡೀ ಶೈಲವಿದು ರವಿ। ಸೂತ ತನುಜ ಜಟಾಯು ಬಿದ್ದ
ನಿ। ಕೇತನಸ್ಥಳ ವಿದು ಕಣಾ ಯೆನೆ ನೋಡಿ ಕಂಬನಿಯ ॥ ಆ ತರಳೆ ನಯನದಲಿ
ಹೊಕ್ಕಳಿ । ಪಾತನರಸಂಗೆಂದಳಮರ ವಿ। ಘಾತನಲಿ ನೊಂದದರ ಮೇಲೇನಾಯ್ತು
ಖಗಪತಿಗೆ ॥ ೨೭ ॥ ಅರಸಿ ಕೇಳ್ ಘಾಯದಲಿ ಜೀವವ। ನಿರಿಸಿಕೊಂಡಿರ್ದನು ಕಣಾ

ಸಾಪ್ । ದರುಶನವ ಮಾಡಿದ ಬಳಿಕಸುರೇಂದ್ರನುದ್ಯಮವ । ವಿರಚಿಸುತ ಹರಣ
ವನು ಬಿಡೆ ಸಂ । ಸ್ಕರಿಸಿದೆವು ವೈದಿಕ ವಿಧಾನದ । ಲರಿಯ ಬವರಕೆ ಪೋಲಿ ಮನ ನು
ತಂದೆವಾವೆಂದ ॥೨೮॥ ಐಸೆ ಮತ್ತೇನೆಂದು ಬಂದುದು । ಭಾಸುರಾಂಬರಯಾನದ ವನ।
ವಾಸದಿದಿರಿನ ಪಂಚವಟಿಯ ಪುರಾಣ ಪಲ್ಲವದ ॥ ವಾಸದೆಡೆ ನೀನೋಡು ವಿಪಿನ ನಿ।
ವೇಶನವು ನಾವಿರ್ದ ವಿಪುಳ ವಿ । ಲಾಸವಳಿದಿವೆ ಸೊಗಸು ಕಡಿಲಿದ ಸೋಮನಂದದಲಿ॥
ಜನಕಸುತೆ ನೋಡೆಮ್ಮ ಮುನ್ನಿನ । ಮನೆಯ ಮುಂದಣ ಮಾರ್ಗವಿದೆ ಸ । ಜ್ಜನನ
ಸೂಕ್ತಿಯ ಮುಸುಕಿಕೊಂಡಿಹ ಕುಜನ ಸಂತತಿಯ॥ ಘನ ವಚನ ಸಿಪ್ಪುರನ ಪ್ರೊಲ್ಸಂ ।
ಜನಿತ ಕರ್ಕಶ ಕಂಟಕಂಗಳ । ವನದಿ ನೊತ್ತಂಬರಿಸಿಕೊಂಡಿವೆ ನೋಡು ನೀನೆಂದ ॥
ದಾನವಿಲ್ಲದ ಧನಪತಿಯ ಸು । ಮ್ಮಾನದ ಪೊಲಿದೆ ವಿವಿಧ ವಿದ್ಯಾ । ಗಾನವಿಲ್ಲದ ಗರ್ವಿ
ತನ ಗರುವಿಕೆಯ ಲಿವೆನೋಡು ॥ ನೀನು ಸಲಹಿದ ಸುರಭಿತರು ಸುಮ । ನೋನುಬದ್ಧ
ಲತಾಳಿಗಳು ಧನ । ಹೀನನ ಪೊಲಿವೆ ನಿಳಯುವೆಲೆ ಲಲಿತಾಂಗಿ ನೋಡೆಂದ ॥೩೧॥ ವನಕೆ
ನೋಡುತ್ತರದ ಭಾಗದ । ವನವಿದಂದಿನ ವರುಣ ಮಿತ್ರನ । ತನಯನಾಶ್ರಮ ವನ
ನುತ್ತರದಡವಿ ತನ್ಮುನಿಯ ॥ ಅನುಜನಾಶ್ರಮ ವದರ ಮುಂದಣ । ವನವು ಶರಭಂಗಾ
ಶ್ರಮವು ಮಿಗೆ । ವರ ಸುತೀಕ್ಷ್ಣ ಮುನಿಪನಾಶ್ರಮ ದೇವಿ ನೋಡೆಂದ ॥ ೩೨ ॥ ಈ
ಮಹಾಶ್ರಮವೀಗ ನೋಡಿದು । ಸೋವ ದತ್ತಾತ್ರೇಯ ವಿಗಡ ಮ । ಹಾ ಮುನಿಪ
ದೂರ್ವಾಸರನು ಪಡೆದತ್ರಿಮುನಿವರನ ॥ ಕೀಮೆಯಿದು ಮುಂಭಾಗದಲಿ ತೋ । ರ್ಪಾ
ಮಹಾದ್ರಿಯಿದೀಗ ಧಾತ್ರಿ । ಸ್ತೋಮ ರಂಜಿತ ಚಿತ್ರಕೂಟವಿದೀಗ ನೋಡೆಂದ ।೩೩॥
ಕಾಣ ಬಂದುದು ಬಳಿಕಲಾ ಗೀ । ರ್ವಾಣ ಪುಷ್ಪಕ ವಮಲರುಚಿ ಗೀ । ರ್ವಾಣ ಕಲ್ಲೋ
ಲಿನಿಯ ಯಮುನಾನದಿಯ ಸಂಗಮದ ॥ ವಾಣಿಯನುಪಮ ವನದ ಮಧ್ಯ । ಕ್ಷೋಣಿ
ಯಭಿರಂಜಕದ ಮುನಿಪ ಸ್ಥಾಣು ಸುಮನೋರಾಜ ಗುರುನಂದನನ ಕಣ್ಣಿಗೆ ॥೩೪॥
ಪರಮ ಹರುಷದ ಲಖಿಳಮುನಿ ಸತ್ತ । ಮರುಗಳೊಗ್ಗಿ ನಲಿದಿರುಗೊಂಡನು । ಸುರನರೋ
ರಗ ಲೋಕ ವಂದ್ಯನ ರಾಘವೇಶ್ವರನ ॥ ಅರಸ ಚಿತ್ತೈಸಿಂದು ನಮ್ಮಪ । ಚರಣೆ
ಯನು ಕೈಕೊಂಡು ಕಾಬುದು । ಭರತನನು ಬಳಿಕೆಂದು ಭರದ್ವಾಜಮುನಿ ನುಡಿದ ೩೫
ಎಲೆ ಮುನೀಶ್ವರ ಭರತನನು ಕಾಂ । ಬಳತೆಯಿಂದಿನ ದಿವಸ ಕಾಣದ । ರಳಿವನಗ್ನಿಯ
ಲಿರವು ಸಂಘಟಿಸುವುದೆ ನಮಗೆನಲು ॥ ಕಳುಹು ಸಂಜೀವಿನಿಯ ಶ್ರೀಂವ । ತಳೆದು
ತಂದ ಮಹಾತಿಶಯ ಭುಜ । ಬಲನನಲ್ಲಿಗೆ ಯಿಲ್ಲಿ ನೀವಿಂದು ನಿಲ್ಲಬೇಕೆಂದ ॥ ೩೬ ॥
ಆಗಲದಕೇನೆಂದು ನೃಪನನು । ರಾಗದಲಿ ಬೀಳ್ಕೊಟ್ಟನಗ್ಗದ । ಸಾಗರೋಲ್ಲಂಘನನು
ಭರತನ ಬಳಿಗೆ ವಿನಯದಲಿ ॥ ಆ ಗಗನಯಾನದಿ ನಿಳಾತಳ । ಕಾಗಿ ಬಿಜಯಂಗೈದು
ಹೊಕ್ಕನು । ಯಾಗಮಂಟಪವನು ಸುರಾಚಾರಿಯನ ನಂದನನ ॥ ೩೭ ॥ ಸ್ಮರಿಸಿದನು
ಬಳಿಕಾ ಮುನಿಪ ಸುರ । ಸುರಭಿಯನು ಸುಳಿದುದು ಸಮಸ್ತೈಶ್ವರ್ಯ । ವಾಯು ಕಟಕ
ವಳತೆಗೆ ಸಕಲ ಕಡೆಗಟ್ಟು ॥ ಪರಮ ಭೋಜನ ಗಂಧಮಾಲ್ಯಾಂ । ಬರ ವಿಭೂಷಣ
ದಿಂದ ಮಿಗೆ ಸ । ತ್ಕರಿಸಿದನು ಮುನಿ ಸಕಲ ಸೇನೆಯ ನವನಿಪತಿ ಸಹಿತ ॥೩೮॥ ಅಸಿತ
ರೊಳೆ ಬಳಿಕಂಜನಾನಂ । ದನನು ನಡೆತಂದಾ ಶುಶುಕ್ಷಣಿ । ಯನು ಪ್ರದಕ್ಷಿಣವಾಗಿ
ಬಹ ಭರತ ಕ್ಷಿತೀಶ್ವರನ । ಮನದ ಭಕ್ತಿಯ ಕಂಡು ಜೀಸೆಂ । ದೆನುತ ಹಿಡಿದನು ಕೈಯ

ಪೊಗಬೇ। ಡನಲನನು ಬಂದನು ಭಗೀರಥವಂಶದರಸೆಂದ ॥ ೩೯ ॥ ರಾಯ ಬಂದನು ಸಕಲ ಜಗದಧಿ। ರಾಮ ಬಂದನು ರಿಪುಗಣೋತ್ಸವ । ಭೀಮ ಬಂದನು ಜಾನಕಿಯ ನಯನೋತ್ಪಲಾನಂದ ॥ ಸೋಮ ಬಂದನು ಬಂಧುಜನ ಸು। ಪ್ರೇಮಿ ಬಂದನು ಶರಣ ಜನ ವಿ। ಶ್ರಾಮ ಬಂದನು ಭರತ ಚಿತ್ತೈಸೆಂದನಾ ಹನುಮ ॥ ೪೦ ॥ ಅದೆ ಕುಬೇರ ವಿಮಾನ ಕೈಲಾ । ಸದ ವೊಲೀಕ್ಷಿಸು ಪುಷ್ಪಕದ ಮ । ಧ್ಯದಲಿ ಬಹಳ ಛತ್ರ ಚಮರ ಧ್ವಜ ಪತಾಕೆಗಳ ॥ ಹೊದರಿನಲಿ ಹೊಳೆಹೊಳೆವ ಮಣಿ ಪೀ । ಠದಲಿ ಕುಳ್ಳಿರ್ಪಾತ ಸಿನ್ನಯ । ಹೃದಯವಲ್ಲಭ ರಾಘವೇಶ್ವರನೀಗ ನೋಡೆಂದ । ೪೧ ॥ ಹನುಮನೆಂಬಭಿದಾನವೆನ್ನದು । ಮನದೊಳಗೆ ಸಂಶಯವನಕ್ಷತಿ । ಯನು ನಿವಾರಿಸು ನೋಡು ದಕ್ಷಿಣ ದಿಗ್ವಿಭಾಗದಲಿ ॥ ಎನೆ ನಿರೀಕ್ಷಿಸೆ ಮೋಘ ಗತಿಯಲಿ। ಘನಪಥನೊಳೈತಂದುದಾ ಪುರ। ಜನವ್ರ ಗುಡಿಗಟ್ಟದುದು ಗಮನಕೆ ರಾಘವೇಶ್ವರನ ॥೪೨॥ ಚಳಗತಿಯ ಚಾಪಳ ತುರಂಗಾ । ವಳಿಯ ಚಟುಲಧ್ವನಿಯ ಪಕ್ಕದ । ಉಳಿಯ ಪವನನ ಮಣಿಮಯದ ಛತ್ರಗಳ ಚಿತ್ಕೃತಿಯ ॥ ಥಳಥಳಿಪ ಹೊಂಬೆಸದ ಸೌಧಾ। ವಳಿಯ ದಿವ್ಯ ವಿಮಾನ ಗಗನವ। ನಿಳಿದುದವನೀತಳಕೆ ನಂದಿಗ್ರಾಮ ಸೀಮೆಯಲಿ ॥ ।೪೩॥

ಐವತ್ನಾಲ್ಕನೆಯ ಸಂಧಿ ಸಮಾಪ್ತಂ.

ಐವತ್ತೈದನೆಯ ಸಂಧಿ.

ಸೂಚನೆ॥ ರಾಜರಾಜಾಧೀಶ ರಘುಕುಲ। ರಾಜ ಪರಮೇಶ್ವರನು ನಿಮಿಕುಲ। ರಾಜನಂದನೆ ಸಹಿತ ರಾಜ್ಯಂಗೈದ ನೋಲವಿನಲಿ ॥

ಪದ್ಯ॥ ಮಣಿಖಚಿತ ಜಾಂಬೂನದದ ರು । ಗ್ಗಣದ ಕೋಟೆವಳಿಯ ದುರುಭಾ। ರಣೆಯ ಮಖಶಾಲೆಗಳ ಮುಗಿಲಟ್ಟಳೆಯ ಗೋಪುರದ ॥ ಘೃಣಿ ವಿಕರ್ಣ ಸುರತ್ನಮಯ ಕೇ । ವಣದ ಕಳಶವ್ರಜದ ಕೇತನ । ಗಣದ ವರ ಸಾಕೇತ ನಗರವ ಕಂಡು ದಖಿಳಜನ ॥೧॥ ಸೀತೆ ನೋಡು ಮದೀಯ ವರ ಸಾ। ಕೇತಪುರವನು ನಮ್ಮ ಮೂವರು। ಮಾತೆಯರ ಸಂದರ್ಶನವು ನಮಗಿಂದಲೇ ಯೆನುತ ॥ ವೀತರಾಗದ್ವೇಷವನ। ಭ್ರಾತ ಶತ್ರು ಬಳಿಕ ಸತಿ ಸಹ । ಜಾತ ಸಹಿತಾ ವರವಿಮಾನವ ನಿಳಿದನೊಲವಿನಲಿ ॥ ೨ ॥ ಮನದ ಮಹದುತ್ಸವದ ಮೂವರು । ಜನನಿಯರು ಗುರು ಮಂತ್ರಿಗಳು ಪುರ। ಜನವ್ರ ಬಾಂಧವ ಜನಸಹಿತ ಪರಿಜನದ ಗಡಣದಲಿ ॥ ಕನಕದರ್ಪಣ ಕಳಶ ದಬಲ। ಜನದ ತೂರ್ಯತ್ರಯದ ನೃಪ ವಾ। ಹನದ ಸೌರಂಭದಲಿ ಭರತನೃಪಾಲನೈತಂದ ॥೩॥ ಜಲರುಹಾಕ್ಷನ ಮೂರ್ತಿಯನು ಕಂ। ಗಳಲಮರ್ಚಿ ನೃಪಾಲ ಪುಷ್ಪಾಂಜಲಿಗೆ! ವೈಯಿಕ್ಕಿದನು ಭಯ ಭರತ ಭಕ್ತಿಯಲಿ ॥ ಬಳಿಕ ರಾಘವರಾಯನಾ ಕೌ । ಸಲೆ ಸುಮಿತ್ರಾದೇವಿ ಕೈಕಾ। ಲಲನೆಯರಿ ಗೆರಗಿದನು ಕಾಣಿಕೆಯಿತ್ತು ಹರುಷದಲಿ ॥ ೪ ॥ ಗುರುವಸಿಷ್ಠನ ವಾಮದೇವನ। ವರ ಮುನಿಪ ಜಾಬಾಲಿಯಂಘ್ರಿಗೆ। ದರುಶನವ ನೀಡಿದನು ವಿನಮಿತನಾಗಿ ವಿನಯದಲಿ ॥ ಭರತ ಶತೃಘ್ನರನು ನಯನದಿ। ನುರುಳು ವಶ್ರುಕಣಾಳಿಗಳ ಕಾ।

ಹುರತೆಯಲಿ ಬಿಗಿಯಪ್ಪಿ ಬಳಿಕಿಂತೆಂದನಾ ರಾಮ ||೫|| ನಲಿಗಿದಿರಿ ಹಿಂದಾಗಿ ಜಡೆವ |
ಲ್ಕಲ ಫಲಾಶನದಿಂದ ವಿಧ ಜೇ | ರ್ಪಡಿಸಿ ತನ್ನಿಂದಾದುದಾಯಾಸವು ನಿಮಗೆಂದು ||
ತಲೆವಿಡಿದು ತನ್ನನುಜ ರಕ್ಷಿಯ | ಜಲವ ಸೆರಗಿನೊಳೊರಸಿ ಸಚಿವರ | ಬಳಿಕ ಕಾಣಿಸಿ
ಕೊಂಡು ಮನ್ನಿಸಿದನು ನಯೋಕ್ತಿಯಲಿ || ೬ || ಕೇಳಿದೈ ಕುಶ ನಿಮ್ಮ ಮಾತೆಯು |
ಮೇಲಣಕ್ಕರುತನದಿ ಕೌಸಲೆ | ಬೀಳುವಂಬಕ ಜಲದಿನಂಘ್ರಿಗೆ ನಮಿಸಿ ದಂಗನೆಯು ||
ತೋಳುಗಳ ಹಿಡಿದೆತ್ತಿ ಘನ ಪುಳ | ಕಾಳಿಗಳ ಲಪ್ಪಿದಳು ಹರಸಿದ | ರೇಳಿಗೆಯ
ಹರುಷದಲಿ ಮಾತೆಯು ಲೂರ್ಮಿಳಾಸತಿಯು ||೭|| ಲವನೆ ಕೇಳೈ ಬಳಿಕಲಾ ನಾ | ಲುವರಿ
ಗಾಯ್ತು ಜಟಾ ವಿಸರ್ಜನ | ದವಿರಳದ ಸಂಭ್ರಮದಿ ಮಂಗಳವಾಯ್ತು ಮಜ್ಜನದ ||
ವಿವಿಧ ರತ್ನಾಭರಣದಲಿ ನವ | ವಿವಸನದ ಲನುಲೇಪನದ ಲು | ತ್ಸವವ ತಾಳ್ದರು
ಮುನಿಗಳಾಶೀರ್ವಾದ ಘೋಷದಲಿ ||೮|| ಬಂದುದಾಕ್ಷಣ ದಶವರೂಥ | ಸ್ಯಂದನವು
ರಘುಪತಿಗೆ ದಿವಿಜರ | ದುಂದುಭಿಯ ನಿರ್ಘೋಷದಲಿ ಮಾನಿಜನದ ಹರಕೆಯಲಿ ||
ಸಂದಣಿಯ ಸೌರಂಭದಲಿ ಪೂ | ರ್ಣೇಂದುಮುಖಿ ಸಹಿತೇರಿದನು ಸುರ ' ವೃಂದ ಜಯ
ಜಯಯೆನಲು ಹೊಗಳುವ ವಾದ್ಯರಭಸದಲಿ ||೯|| ಬಳಿಕ ರಾಘವರಾಯ ನಾಜ್ಞೆಯ |
ಲಿಳಿದು ಸುಗ್ರೀವಾದಿ ಸುಭಟಾ | ವಳಿಗಳಡರಿದ ರಿಭವರೂಥ ಸುಘೋಟಕಾವಳಿಯ ||
ಉಳಿದು ಕಪಿರೂಪಕನ ನಮರಾ | ವಳಿಯ ಮುನ್ನಿನ ಮೂಲ ಮೂರ್ತಿಯ | ತಳೆದು
ವೀರ ವಿಭೀಷಣಾಸುರ ಸಹಿತ ವಹಿಲದಲಿ ||೧೦|| ಮುಂದೆ ಜೇಯವಧಾನಧಿ ಭಾ |
ಪೆಂದು ಕೈಗಂಬಿಗಳ ಲುಗ್ಗಡ | ದಿಂದ ಹನುಮಾಂಗದರು ಕೆಲ ಸಾರಿಸಿದ ರೆಡಬಲಕೆ ||
ಮುಂದೆ ನರ್ತನ ವಾದ್ಯಮಂದಿಗ | ಳಿಂದ ನೋಟಕ ಬನದ ಸಂದಣಿ | ಯಿರಿದ ಬಿಜಯಂ
ಗೈದು ಹೊಕ್ಕನು ಕೋಸಲಪತಿಯು ||೧೧|| ಪರಿಮಳಿಸಿದವು ಬೀದಿ ಬೀದಿಗ | ಳೊಸೆದ
ಕುಂಕುಮ ಕಾರಣೆಯು ಕ | ಸ್ತುರಿಯ ನವಸಾರಣೆಯ ನವ ಕರ್ಪುರದ ಮಾಲಿಕೆಯು ||
ಪರಿಸರದ ಪನ್ನೀರ ಚಳೆಯದ | ಭರಿತ ಗುಗ್ಗುಳ ಧೂಪಧೂಪದ | ಲರರೆ ಪವನಾ
ಕರ್ಷಣದ ಪರುಠವದ ಪಾಣಿಯಲಿ ||೧೨|| ಥಳಥಳಿಸಿದವು ಮಕರ ತೋರಣ | ಗಳಲಿ
ರನ್ನದ ಕನ್ನಡಿಗಳು | ಜ್ವಲಿಸಿದವು ಹೊಂಗಳಶತತಿ ಯುಪ್ಪರಿಗೆ ಯಗ್ರದಲಿ || ತಳಿತ
ವಗಲಕೆ ಗುಡಿಗಳುರೆಪಡಿ | ತಳಿಸಿದವು ಪ ಣಿಮಯ ಪತಾಕಾ | ವಳಿ ಸವಿಸ್ತಾರ ವಿಹಾರ
ದಲಿ ರಘುಪತಿಯ ಗಮನದಲಿ ||೧೩|| ಕೇರಿಕೇರಿಯ ತಳಿಗೆ ತಂಬುಲ | ದಾರತಿಯ
ದೂರ್ವಾಕ್ಷತೆಯ ಪುರ | ನಾರಿಯರ ವಾರಾಂಗನೆಯರ ಸುವರ್ತನಾವಳಿಯ || ಭೇರಿ
ಶಂಖ ಮೃದಂಗ ಘನ ಕಹ | ಳಾರವದಲೈತಂದು ಹೊಕ್ಕನು | ದ್ವಾರ ತೇಜೋಭದ್ರ
ಮಣಿಮಯ ರಾಜಮಂದಿರವ ||೧೪|| ಸುಳಿದವಾರತಿ ಕರ್ಪುರದ ಪ್ರ | ಜ್ವಲದ ಮಾಹಿಕ
ವಿಪ್ರಗಳ ಪ | ಕ್ರುಗಳ ಗೂಳಿನ ಬಳುವೆಗಳ ರಪ್ಪುಗಳ ಸೂಸಿಕೆಯ || ಕಳಕಳದ
ಜೊಪ್ಪಿದುದು ಪಾರ್ಥಿವ | ಸಿಳಯವಲ್ಲಿಂ ಮೇಲೆ ಬೀಡಿಕೆ | ಗಳಿಗೆ ಸುಗ್ರೀವಾದಿಜನ
ಬೀಳ್ಕೊಂಡುದೊಲವಿನಲಿ ||೧೫|| ವಿಮಲಮತಿ ಕುಶಕೇಳಿದೈ ಸಂ | ಭ್ರಮಿಸಿದುದು
ವೈಶಾಖ ಶಿತ | ಸಪ್ತಮಿಯದಿನ ಮೂರ್ಧ್ನಾಭಿಷೇಚನ ರಚನೆ ರಘುಪತಿಗೆ || ಅಮರ
ರಿಪು ನೆರೆದುದು ವಶಿಷ್ಠ | ಪ್ರಮುಖ ರೊಗ್ರ್ಯಾಧಿಕ ಸೀಮಾ | ಪ್ರಮಿತ ಪಾರ್ಥಿವ
ನಿಕರ ಕೂಡಿತು ಪಟ್ಟಕವನಿಪನ ||೧೬|| ವರ ಶುಭೋದಯ ಲಗ್ನದಲಿ ಶಂ | ಕರವಿರಿಂಚಿ

ಸುರೇಂದ್ರ ಮುಖ್ಯಾ । ಮರರ ದಂದಣಿ ಮಿಗಲು ಸುರನಾರಿಯರ ಸಂಭ್ರಮದ ॥ ಸುರ
ಮುನೀಂದ್ರರ ವೇದಘೋಷದ । ಲರಸುತನವಭಿಷೇಕ ಮಿಗೆ ವಿ । ಸ್ತರಿಸಿದುದು
ರಾಮಂಗೆ ಸುಗ್ರೀವಾದಿಗಳು ನಲಿಯೆ ॥ ೧೭ ॥ ಕಾಣಿಕೆಯ ಬಳಿಕಿತ್ತು ರಜಗವ । ಪಾಣಿ
ನಾಣೀನಾಥರಾಗೀ । ವಾರ್ಣಪತಿ ಧನಪತಿ ಹುತಾಶನ ಮುಖ್ಯ ದಿಗಧಿಪರು ॥ ಕ್ಷೋಣಿ
ಯುವತಿಯ ಮುಖ್ಯ ರಾಜ । ಶ್ರೇಣಿ ಪುರಪುರಜನಗಳುತ್ತಮ । ನಾಣಿಮಯ ನೀಡಿದರು
ದರುಶನ ಕವನಿಜೇಶ್ವರನ ॥ ೧೮ ॥ ಬಲದಲೀಶ್ವರ ನೆಡದ ಲಬುಜಜ । ರೊಲಿದು ನಿಜ
ಮಣಿಭದ್ರ ಪೀಠಂ । ಗಳಲಿ ಕುಳ್ಳಿರ್ದರುಭಯಪಾರ್ಶ್ವದ ಭದ್ರವೀದಿಯಲಿ ॥ ಬಲಮಥನ
ಶಿಖಿ ಯಮ ನಿಶಾಚರ । ಜಲಧಿಪತಿ ಪವಮಾನ ಧನಪತಿ । ಜಲರುಹಪ್ರಿಯ ಸೋಮ
ಭಾವನಾದಿಗಳು ರಂಜಿಸಿತು ॥ ೧೯ ॥ ಸನಕ ನಾರದ ಭೃಗು ಭರದ್ವಾ । ಜನು ಮರೀಚಿ
ಮತಂಗ ದೂರ್ವಾ । ಸನು ಪುಲಸ್ತ್ಯನು ವಿಶ್ರವಸು ಜಮದಗ್ನಿ ಜಾಬಾಲಿ ॥ ವಿನುತ
ವಿಶ್ವಾಮಿತ್ರ ಮುನಿಜಯ । ಮುನಿ ಮರೀಚಿ ಮೃಕಂಡು ಕಶ್ಯಪ । ರೆಸೆಪ ದಿವ್ಯ
ಮುನೀಂದ್ರ ರೆಸೆದರು ಹಿಂದೆ ರಘುಪತಿಯ ॥ ೨೦ ॥ ಗುರು ವಸಿಷ್ಠನು ವಾಮದೇವರು ।
ಮೆರೆದರುಭಯ ಸುಪಾರ್ಶ್ವದಲಿ ಕಿ । ನ್ನರರು ಸಿದ್ಧರು ಸಾಧ್ಯವಸುಗಂಧರ್ವ ದೇವ
ಗಣ ॥ ಕರಯುಗಂಗಳ ಮುಗಿದು ದೇವನ । ಸರಿಸದಲಿ ಧೂರದಲಿ ಜಯ ವಿ । ಸ್ತರಣ
ವಚನಗಳಿಂದ ನಿಂದಿರ್ದರು ಸರಾಗದಲಿ ॥ ೨೧ ॥ ವೀರಭಟ ಸುಗ್ರೀವ ಜಾಂಬವ ।
ಮಾರುತಾತ್ಮಜ ವಾನರೇಂದ್ರ ಕು । ಮಾರ ನೀಲ ಸುಷೇಣ ನಳ ಗಜ ಗಂಧಮಾದನರ ॥
ಸಾರತರ ಸಾಲೆದ್ದುಧಾಸುರ । ಪುರಿಕಾಂಕ್ಷಿಗಳುಭಯದಲಿ ರಘು । ವೀರನನುಜರು
ಮೆರೆದರಿದಿರಲಿ ಕರದ ಕಂಬಿಯಲಿ ॥ ೨೨ ॥ ಚಾರು ಚಾಮರಗಳನು ಚಿಮ್ಮಿದ । ರಾ ರಮಾ
ಧೀಶಂಗೆ ಲಲಿತ । ಸ್ಮೇರ ವದನದ ಥಾಳಿಸುವ ಕಣ್ಗಳ ವಿಳಾಸದಲಿ ॥ ತೋರ ಮೊಲೆ
ಗಳ ತೋಳಹೊಗರಿನ । ಭೂರಿಭೂಷಣ ದನುಪಮಾಂಬರ । ಸಾರ ಸೌರಭದೇಳ್ಗೆಯಲಿ
ರಂಭಾದಿ ನಾರಿಯರು ॥ ೨೩ ॥ ಎಸೆದುದೋಲಗವಮಮ ಪೂರ್ವದ । ಝುಸಕಕಿಮ್ಮಿಗ್ರಿ
ಲಾಗಿ ಬಳಿ ಕೂ । ರ್ಗಸಿಯ ನರ್ತನ ಚಿತ್ರರಥನ ಮೃದಂಗ ಮೃದುನಿನದ ॥ ಹೊಸ
ಪರಿಯ ಗೀತಗಳ ಗಂಧ । ರ್ವ ಸತಿಯರ ತುಂಬುರರ ವೀಣೆಯ । ಕೊಸರಿಕೆಯ ಕಳ
ಕಳದೆ ರಂಚಿಸಿತಾ ಸಭಾಸ್ಥಾನ ॥ ೨೪ ॥ ವಾಮದಂಗದಮೇಲೆ ಸೀತಾ । ರಮಣಿ ರಂಜಿಸಿ
ದಳು ದಿವೌಕಸ । ಭಾಮಿನಿಯ ರಾರತಿಯ ನೊಲಿದೆತ್ತಿದರು ಸರಿಸದಲಿ ॥ ಭೂಮಿಜಾ
ಸುತ ಕೇಳಗಸ್ತ್ಯಮ । ಹಾ ಮುನೀಶ್ವರನಖಿಳ ಸುಮನಸ । ಸ್ತೋಮ ಮಧ್ಯದಲೆದ್ದು
ಬಿನ್ನೈಸಿದನು ರಾಮಂಗೆ ॥ ೨೫ ॥ ಆರು ಗೆಲಬಾರದ ಜಗತ್ರಯ । ವೀರನನು ವಿಬುಧಾರಿ
ಯನು ಸ । ಕ್ರೂರನನು ದುಷ್ಟನ ದುರಾತ್ಮನಗೆಲಿದು ರಕ್ಷಿಸಿದೆ ॥ ಧಾರುಣಿಯ ಶಿಷ್ಟರನು
ಮುನಿವೃಂ । ದಾರಕಾಮ್ನಾಯರನು ನಿನಗಿ । ನ್ನಾರುಸರಿ ಸುರ ನರ ಭುಜಂಗರೊಳೆಂದು
ಕೈಮುಗಿದ ॥ ೨೬ ॥ ದೇವ ನೀನೀಗಖಿಳ ಲೋಕವ । ಕಾವ ಕರುಣಾಳುಗಳರಸ ನೀ ।
ವಿವಿಧ ಸಂರಕ್ಷಕನು ನೀನೇ ನಿಗಮ ಸಿದ್ಧನಲ ॥ ದೇವದೇವರ ಡೇವ ಲಕ್ಷ್ಮೀ । ದೇವಿ
ಯರಸ ಮಹಾಮಹಿಮ ಕಲಿ । ರಾವಣಾಂತಕ ರಾಮ ಬೀಳ್ಕೊಡು ಸುರರ ನೀವೆಂದ ॥
ತರಿಸಿ ದಿವ್ಯ ವಿಭೂಷಣಾಂಬರ । ವರ ಸುಕುಂಕುಮ ಯಕ್ಷ ಕರ್ದಮ । ಗಳ ಮಹಾ
ತೀರ್ಥಾದಿ ಸನ್ಮಾನೋಕ್ತಿಯಲಿ ಬಳಿಕ ॥ ಹರನ ಪರಮೇಷ್ಠಿಯ ಪುರಂದರ । ವರುಣ

ವಾಯು ಕುಬೇರ ಮುಖ್ಯರ । ನುರುತರ ಪ್ರೇಮದಲಿ ಕಳುಹಿದನಾ ರಘುಪ್ರಭವ ॥೨೮॥ ಹರದುದೋಲಗ ಪಂದಿನಿರುಳಲಿ । ಕರಸಿ ಸುಗ್ರೀವಾದಿ ಭಟರಿಂಗೆ । ಶರಣಜನ ಸಂತಾನ ಶೃತಿ ಭೂಷಣ ವಿಭೀಷಣಗೆ ॥ ತರಿಸಿದೌತಣ ದಕ್ಷತೆಯು ವಿ । ಸ್ತರಿಸಿ ಕಳುಹಿದನವರ ನಲ್ಲಿಂ । ದರಸುತನದತಿಶಯದ ಸೊಬಗನು ಕುಶನೆ ಕೇಳೆಂದ ॥ ೨೯ ॥ ಬಂದನ ಕ್ಷಣ ವಿಶ್ವಕರ್ಮನು । ನಿಂದಿರಿಸಿದನು ಸೌಧಗಳ ಮಣಿ । ಮಂದಿರಗಳ ಸುಪಾಕಶಾಲಾವಳಿಯ ವೀಥಿಗಳ ॥ ಕಂದ ಕೇಳ್ ರಾವಣಗೆ ಸೇವೆಯ । ನಂದು ಮಾಡುವ ಸೇವಕರು ನಡೆ । ತಂದು ಮಾಡಿತು ಸೇವೆಗಳನಾ ಮಂತ್ರಣೋತ್ಸವದ ।೩೦॥ ಉದಯಮುಖಕಾಯ್ತಾ ಪಿಳ ಕಡೆಗ । ಟ್ಟುದಧಿಶಯನನ ವೈಭವಕೆ ನಿಧಿ । ರಾದವಾಗಲು ಕಲ್ಪತರು ಸುರಧೇನು ಸುರಮಣಿಯು ॥ ಸದೆದುದಯದ ಸ್ವರಂಗಳನು ಸೊಂ । ಪೊದವಿತೋ ಯೆಂಬಂತೆ ಸೊಗ ಸಾ । ದುದು ಸಮಸ್ತ ಸುಭಕ್ಷ್ಯ ಭೋಜ್ಯಾದಿಗಳ ಗಡಣದಲಿ ॥ ೩೧ ॥ ಸೊಗಸಿದವು ಸರಸಿಗಳು ಪಾಲ್ಗೊಸ । ರುಗಳ ಸದ್ಯೋಘೃತದ ರಂಜಣಿ । ಗೆಗಳ ಸಾಲಿಳುಹಿದವು ಪಾನರಸಾಯನಾದಿಗಳ ॥ ಝಗಝಗಿಪ ಹೊಂಗೊಪ್ಪರಿಗೆಗಳು । ಬಗೆ ವಿರಾಜಿಸಿ ತೋದನದ ರಾ । ಶಿಗಳು ರಂಜಿಸಿದವು ಸುಪಕ್ವದ ಭಕ್ಷ್ಯಭಾರದಲಿ ।೩೨॥ ಅದುದೀಪರಿ ವಿವಿಧ ಸೌರಂ । ಭೊ ದಯದ ದಿವ್ಯಾನ್ನಪಾನ ಮ । ಹಾ ದಯಾಂಬುಧಿ ರಾಘವೇಂ ದ್ರನ ರಾಜಭವನದಲಿ ॥ ಆದುದುದಯದ ಮೇಲೆ ಬಳಿಕವ । ರೈದು ಘಳಿಗೆಯ ಲಗ್ನಿ ಹೋತ್ರಗ । ಳಾದಿಯಾದ ಸಮಸ್ತ ಸುರ ತರ್ಪಣದ ಸೌರಂಭ ॥೩೩॥ ಕರೆಸಿದನು ಬಳಿ ಕರಸ ನುಚಿತೋ । ತ್ತರದಲಾ ಸುಗ್ರೀವ ಜಾಂಬವ । ಮರುತಸುತ ನೀಲಾಂಗದಾದಿ ಸಮುಸ್ತ ಕಪಿಭಟರ ॥ ಶರಣುಹೊಕ್ಕ ವಿಭೀಷಣಾದ್ಯರ । ನುರುತರಪ್ರೇಮದಲಿ ಮಣಿ ಮಯ । ನಿರತಿಶಯ ಭವನಾಂತರಾಳಕೆ ಭೂಮಿಜಾವರನ ॥ ೩೪ ॥ ಬಲದಲೆಡೆಯಾ ಯ್ತು ಜಕುಮಾರಗೆ । ಬಲಿಮುಖರ ವೈದ್ಯಂಗೆ ವಾಮದ । ವಳಯದಲಿ ಭರತಂಗೆ ಭರತಾ ನುಜರಿಗಿಬ್ಬರಿಗೆ ॥ ಜಲಜಬಂಧು ಸುತಂಗೆ ಲಂಕಾ । ಲಲನೆಯರಸಂಗಗ್ನಿಸುತ ಶತ । ಬಲಿಗಳಾದ್ಯಸಿಗಾದವೆಡೆಗಳು ಸಕಲ ಬಲಸಹಿತ ॥ ೩೫ ॥ ಹೊಳೆವ ಕಾಲಡ್ಡಣಿಗೆಗಳ ಘಳ । ಥಳಿಪ ಹೇಮದ ಸಾಲ ಹರಿಯಣ । ಗಳ ಸುವರ್ಣದ ತಟ್ಟೆ ಬಟ್ಟಲುಗಳ ವಿಲಾಸ ದಲಿ ॥ ಕೆಲಸ ಗತಿಗಳ ಗಿಂಡಿ ಸಗ್ಗಳೆ । ಗಳಲಿ ದೀಪಸ್ತಂಭ ರಚನಾ । ವಳಿಗಳಲಿ ಸಾಲೆಸೆದವಾ ಭವನಾಂತರಾಳದಲಿ ॥ ಹಿರಿದು ಕಿರಿದಿನ ಮಾನ್ಯ ಮನ್ನಣೆ । ಯರಿದು ಲಕ್ಷ್ಮಣದೇವ ನುಚಿತೋ । ತ್ತರಗಳಲಿ ಕುಳ್ಳಿರಿಸಿದನು ಕಪಿ ವಾಹಿನೀಶ್ವರರ ॥ ತರುಣಿ ಯರು ಸುಳಿಸಿದರು ಪಾಕೋ । ತ್ತರದ ನಾನಾ ವಸ್ತು ಭೋಜ್ಯೋ । ತ್ತರದ ಕರ ಭಾಂಡಗಳ ಭಾರದ ಬಳುಕು ನಡೆಗಳಲಿ ॥ ೩೭ ॥ ಇಟ್ಟಮುತ್ತಿನ ಬೊಟ್ಟುಗಳ ಬೆಳು । ವಟ್ಟೆಗಳ ಸಿಂಗರದ ಮೈಗಳ । ತೊಟ್ಟ ರತ್ನಾಭರಣಗಳ ನೂಪುರದ ಝಣರವದ ॥ ಬಟ್ಟ ಮೊಲೆಗಳ ಥಾಳಿಸುವ ಕಡೆ । ದಿಟ್ಟೆಗಳ ಹನ್ನಿಗಳ ನಡೆಗಳ । ಕಟ್ಟಣೆಯರುಣ ಬಡಿಸಿದರು ಬಹುವಿಧದ ಭಕ್ಷ್ಯಗಳ ॥೩೮॥ ಕೊನೆಮುಡಿಯ ಹೂಮುರುಬುಗಳ ಹಿಂ । ಪಿನ ವಿಲಾಸದ ಹಿಣಿಲ ತಿದ್ದಿದ । ಕೊನೆಯುಗುರು ಮಣಿಮುದ್ರಿಕೆಯ ಕೊರಳುಗಳ ಕಂಕಣದ ॥ ಜನಿತ ಝಣಝಣರವ ದಂಗಲತೆಗಳ । ತನಿಸೊಗರು ಹೊರಹೊಮ್ಮ ವಬಲಾ । ಜನಗಳುಣಬಡಿಸಿದರು ನಾನಾ ಪರಿಯ ಪಾಯಸವ ॥೩೯॥ ಔಕಿ ಸಿರಿಗಳ ಸಿರಿಕಿ ಮೇಲುಮೆ ।

ಸೋಕುವೆರಳೆ ನಲಹಿರಿಗೆಳಲಿ ವ । ನೌಕಸರ ನೀಕ್ಷಿಸುತ ತೋರಿಸು ತುಂಬವಿಭ್ರಮವ ॥
ನಾಕದಬಲೆಯರಿವರ ಘನ ಬಿ । ಬ್ಬೋಕ ಕೆಣೆಯಿಲ್ಲೆಂಬ ಸತಿಯರು । ಶಾಕಗಳ ಬಡಿಸಿ
ದರು ಷಡುರಸ ಭೂರಿಭೋಜ್ಯಗಳ ॥೪೦॥ ಚೀನ ಚಿತ್ರಾಂಬರ ವಿಚಿತ್ರ ನ । ವೀನ ಫಣಿ
ಗಳ ಬೀಜಗಳ ಪರಿ । ಧಾನಗಳ ಬೊಂಬೆಗಳ ಪಟ್ಟಾವಳಿಯ ಚಂದ್ರಿಕೆಯ ॥ ಆನೆ
ಮೆಟ್ಟಿನ ಹಯ ಹರಿಣ ಪಂ । ಚಾನನಾಂಕಿತ ದಿವ್ಯ ವಸ್ತ್ರವ । ಮಾನಿನಿಯರುಟ್ಟುಣ
ಬಡಿಸಿದರು ವಾನರೇಂದ್ರರಿಗೆ॥೪೧॥ ಹಗಲು ಹನುಮಂಗಿಲ್ಲದಿರೆ ಕೈ । ಮುಗಿದು ಮೆಲ್ಲನೆ
ಮಗಧ ತನುಜೆಯ । ಮಗನು ಬಿನ್ನಹ ಮಾಡಿದನು ರಘುನೃಪನ ಕರ್ಣದಲಿ ॥ ಅಗಲು
ಬೇಕಿನ್ನೇಕೆ ಜೀವಾಂ । ಶುಗನಲಾ ನಮ್ಮಂತರಂಗದ । ಲಗಲದಿಹ ನಾ ವಾತಜಗೆ ತರ
ಪುತ ರಾಮನಿಂತೆಂದ ॥೪೨॥ ತರಣಿಸುತ ತನ್ನಂಗನೆಗೆ ತಂ । ನರಸುತನಕೋಲ್ಕೈಸಿದನು
ದಶ । ಶಿರನ ತಮ್ಮನು ತನ್ನ ರಾಜ್ಯವ ಸೇರಿದನು ॥ ತರುಣಿ ಕೇಳ್ ಹನುಮಂತ
ನೇತರ । ಸಿರಿಯ ಬಯಸಿದ ನೇನ ಬೇಡಿದ । ನತವರಿಸದಾಯಸಕೆ ಸಿಂದವನೊಬ್ಬನೇ
ಯೆಂದ ॥೪೩॥ ಸತ್ತವರನೆಬ್ಬಿಸಿದ ನೆನ್ನಮ್ಮನ । ನೆತ್ತಿದನು ಮುದ್ರಿಕೆಯ ನವನಿಜೆ ।
ಗಿತ್ತ ನಂಜವೆ ಕೊಂದ ನಗಣಿತ ರಾಜನಂದನರ ॥ ಕಿತ್ತನಗ್ಗದ ಬನವ ನಾಹುತಿ ।
ಗಿತ್ತ ನಹಿತನಪುರವ ನಗ್ನಿಗೆ । ತೊತ್ತ ಕೆಲಸಕರಿವರಿಸದವ ನೊಬ್ಬನೇ ಯೆಂದ ॥೪೪॥
ಹನುಮ ನೀಗೆಮ್ಮೊಡನೆ ಸಹ ಭೋ । ಜನವ ನೆಂದಿದಿರೆದ್ದು ಕರವನು । ವಿನುತ ಕರ
ಪಲ್ಲವದಿ ಹಿಡಿತಂದವಮಲ ವಿಷ್ಟರದ ॥ ಕೊನೆಯೊಳಾತನ ನಿಲಿಸಿದನು ರವಿ । ತನುಜ
ವೀರ ವಿಭೀಷಣಾದ್ಯರು । ಹನುಮ ಮಾಡಿದ ಸುಕೃತವೆಂತುಟೋಯೆ ನುತ ಬೆರಗಾಗೆ ॥
ಹನುಮನಿದ್ದನು ಸುಮ್ಮನಾವೋ । ಶನವ ತುದಿ ಪರಿಯಂತಲಾ ಭೋ । ಜನ ಕುಪ
ಕ್ರಮಿಸಿದರು ರಘುರಾಜೇಂದ್ರ ಮೊದಲಾದ ॥ ವನಚರಾಧಿಪ ನಂತಂದಲಾ । ಹನುಮ
ನಾಳ್ವನ ಭುಕ್ತ ಶೇಷದ । ಕನಕ ಪಾತ್ರೆಯ ಕೊಂಡು ಹಾಯ್ದನು ಗಗನ ತಡಿಗಾಗಿ॥೪೫॥
ಸನಕ ನಪ್ಪಿದನಲ್ಲಿ ನಾರದ । ಮುನಿಪ ನಾಲಂಗಿಸಿದ ನನುರರ । ಜನಪ ಕೈಮುಗಿದೆರಗಿ
ದನು ಹೊಗಳಿದನು ಕಮಲಭವ ॥ ವಿನುತ ವೈಷ್ಣವರೊಳಗೆ ನೀ ಮಿಗಿ । ಲೆನುತ ಹರ
ಕೊಂಡಾಡಿದನ. ಲಯ । ಜನಿಸದಮಲಶ್ಮವನು ಪಡೆಯೆಂದಮಲ ಹರುಷದಲಿ ॥ ೪೬ ॥
ಉಂಡು ಕೈದೊಳೆದಿಳಿದನಾ ದೋ । ರ್ದಂಡಬಲ ಹನುಮಂತನಾ ಕೋ । ದಂಡ ದೀಕ್ಷಾ
ಚಾರ್ಯ ರಘುಕುಲರಾಯನಿದ್ದೆಡೆಗೆ ॥ ಕಂಡು ಬೆರಗಾಯ್ತಖಿಳ ವಾನರ । ತಂಡವೀ
ನಿಜಭಕ್ತಿಯನು ನಾವ್ । ಕಂಡೆವೀ ಹನುಮಂತ ದೇವನಲೆಂದುದಖಿಳಜನ ॥ ೫೦ ॥
ಗುಣಭರಿತ ರಘುನಾಥನಾರೋ । ಗಣೆಯ ಮಾಡಿದ ನಖಿಳವಾನರ । ಗಣಸಹಿತ
ಕೈತೊಳೆದು ಕೈಪುಟಗಳನು ಸಂಘಟಿಸಿ ॥ ಅಣುಗ ಕೇಳನುಲೇಪನದ ಸಾ । ರಣೆಗಳಲಿ
ಹೂಮಾಲೆಗಳ ಭೂ । ಷಣಗಳಲಿ ಕರ್ಪುರದ ವೀಳಯಗಳಲಿ ಮನ್ನಿಸಿದ ॥೫೧॥ ಮನ
ದಣಿಯೆ ಮಣಿಭೂಷಣಾದಿಯ । ನಿನಸುತಾದ್ಯರಿಗಿತ್ತ ವಿಲಸಿತ । ವಿನುತ ದಿವ್ಯಾಂಬರ
ಗಳಲಿ ಮನ್ನಿಸಿದ ನುಚಿತವಲಿ ॥ ಇನಿತು ತನ್ನಯ ಬೆಂಬಳಿಯ ಬಂ । ದನಿತು ಕಪಿಸೇನೆ
ಯನು ಸೇನಾ । ಜನನ ನುರೆ ಮನ್ನಿಸಿದ ನುಡುಗೊರೆ ಯುಚಿತವೃತ್ತಿಯಲಿ ॥ ೫೨ ॥
ಕಳುಹಿವನು ಕರುಣದಲಿ ಕಲಿಗಳ । ತಿಲಕ ಸುಗ್ರೀವಾದಿ ಸುಭಟರ । ವಳಿಯ ನವರವರಿಹ
ನಿವಾಸಂಗಳಿಗೆ ವಿನಯದಲಿ ॥ ಬಳಲಿದಿರಿ ನಿಮ್ಮಿಂದ ಹಗೆಯನು । ಗೆಲಿದೆವಾವ್

ನಿಮ್ಮಿಂದ ಕೀರ್ತಿಯು । ಘಳಿಸಿದೆವು ನಿಮ್ಮಿಂದ ಜಗದೊಳಗಧಿಕರಾದೆಂದ ॥೫೩॥ ದೇವ
ಬಳಿಕತಿ ಹರುಷ ಮುಖದಲಿ । ಪಾವನಾನಿಮು ಕರೆದು ನಿನ್ನಯ । ಸೇವೆಗೇತರ
ವೃತ್ತಿರಾಯಿಗಳಾವು ಹೇಳೆನುತ ॥ ಆ ವಿರಿಂಚಿಯ ವೈಭವವು ಕ । ಲ್ಪಾವಸಾನಕೆ
ನಿಲಲಿ ಭುವನ ಜ । ನಾವಳಿಗಳುರೆ ವಂದಿಸಲಿ ಗುರುವಾಗು ಜಗಕೆಂದ ॥ ೫೪ ॥ ಇರು
ಸುರೋರಗ ಮರ್ತ್ಯ ಭುವನಾ । ವಳಿಗಳಲಿ ಮನಬಂದ ಠಾವಿನ । ಲಿರು ಸುರಾದಿ,
ಪ್ರಮುಖ ನಾನಾ ಪರ್ವತಂಗಳಲಿ ॥ ಇರು ಮದೀಯ ಪುರಾಂತರದ ಲಿಂ । ದಾಸ ಕರು
ಣಾಸ್ಪದದ ನೇಹದ । ನಿರತಿಶಯದಲಿ ಬೀಳುಕೊಟ್ಟ ನಚಿಂತ್ಯ ಕಿಂಕರನ ॥ ೫೫ ॥ ಜಲ
ಜಡಿಯೆ ಕಂಗಳಲಿ ಕರುಣಾ । ಜಲಧಿ ಯಂಘ್ರಿಗೆ ನಮಿಸಿ ವಿಕ್ರಮ । ಜಲಧಿ ಕಳುಹಿಸಿ
ಕೊಂಡನಾ ತರುವಾಯ ರಾಕ್ಷಸರ ॥ ಕುಲ ಲಲಾಮನ ಕರೆದು ಕೈವರ । ಜಲಜಮುಖ
ರುಳ್ಳನಿಬರನು ಬಿಡ । ದೊಲಿದು ಪಾಲಿಸು ಪುರಜನವ ಸುಖಿಯಾಗು ಹೋಗೆಂದ ॥೫೬॥
ಝುಡಿವ ಕಂಬನಿಗಳಲಿ ರಘುಪತಿ । ಯಡಿಗೆರಗಿದಂಗದನ ಶಿರವನು । ತಡವರಿಸಿ ಬಾರೈ
ಬಲೀಯುಸ ಬಲಿಮುಖಾಧೀಶ ॥ ಪೊಡವಿ ನಿನಗುಳ್ಳನ್ನಬರ ಕೈ । ಪಿಡಿದು ಸಲಹೆಮ
ಗೊಪ್ಪಿಸಿದ ಕೈ । ಲಿಡೆಯು ಕಂದನನೆಂದು ರಘುರಾಜೇಂದ್ರ ಬೀಳ್ಕೊಟ್ಟ ॥೫೭॥ ಬೀಳು
ಕೊಂಡುದು ಸಕಲ ವೀರ ಭ । ಟಾಳಿ ಮೊಳಗುವ ವಾದ್ಯ ಹರ ಷವ । ಲೀಳೆಗೆಯು ಹರುಷ
ದಲಿ ತಮತಮ್ಮಖಿಳ ಮರಗಳಿಗೆ ॥ ವೇಳೆ ಮನು ಮೊದಲಾದ ಪೃಥ್ವೀ । ಪಾಲರಿಂದ
ಸಹಸ್ರ ಮಡಿಯಲಿ । ಪಾಲಿಸಿದ ನೂರ್ವರೆಯ ಜನವನು ಸಕಲ ವಿಭವದಲಿ ॥ ೫೮ ॥
ಎಲ್ಲಿ ನೋಡಿದಡಲ್ಲಿ ಸೌಖ್ಯದ । ಸಲ್ಲಲಿತ ಸಂಪದದ ಮಯ ಮುರಿ । ದೆಲ್ಲಿ ನೋಡಿದಡಲ್ಲಿ
ಸಕಲೈಶ್ವರ್ಯಮಯವಹುದು ॥ ಎಲ್ಲಿ ನೋಡಿದಡಲ್ಲಿ ಬೆಳಸಿನ । ಘುಲ್ಲವಣೆ ವಿಲಾಸ
ಮಯ ರಘು । ವಲ್ಲಭನ ರಾಜ್ಯದಲಿ ಹೇಳುವುದೇನು ತಾನೆಂದ ॥ ೫೯ ॥ ಕಳವನ್ಯಾ
ಪನ್ಯಾಯ ಹುಸಿ ದಳ । ದಳವು ದುಮ್ಮೃಗಬಾಧೆ ವಂಚನೆ । ಹಳಿವು ಹಾದರ ಬಂಧಿ
ಸಂಕರಜಾತಿ ಧರ್ಮಗಳು ॥ ಉಳಿಯ ಲರಿಯವು ರಾಮ ರಾಜ್ಯದ । ಸುಲಭತೆಗೆ ಪರಿಯಾ
ಪ್ರದೈ ಕ.ಶ । ಕೇಳು ಕೇಳಾಶ್ಚರ್ಯವಿದ ನೀಗೆಂದನಾ ಮುನಿಪ ॥ ೬೦ ॥ ನದ ನದಿಯ
ತೀರದಲಿ ಗೃಹ ಸಂ । ಪದವು ಸಹಿತ ಸಮಸ್ತ ವಿಭವಾ । ಸ್ಪದ ಸಹಿತ ಸ ಕ್ಷೇತ್ರ
ಕನ್ಯಾಧೇನುಗಳು ಸಹಿತ ॥ ಮದಹರದ ಮಧುವೈರಿ ದುರ್ಗಾ । ಸದನಗಳು ಸಹಿತಗ್ರ
ಹಾವ । ಮದ ನಿಳೆಯಲೀ ರಾಮನನುಪಮಧಾಮ ನೋಲವಿನಲಿ ॥ ೬೧ ॥ ಪಳುಕಿನಲಿ
ಸೆವದಮಲ ಭಾಂಡ ದೊ । ಳೆಳುಹಿದುಜ್ವಲ ದೀಪಕದ ಮೈ । ವೆಳಗಿನವೊಲಂಭೋಜ
ಸಂಭೂತಾಂಡ ಮಂಡಲವ ॥ ವೊಳಕಡೆಯು ಹೊರಕಡೆಯಲುರೆ ಪ್ರ । ಜ್ವಲಿಸಿತಗ್ಗದ
ಕೀರ್ತಿ ರುಚಿ ರಘು । ಕುಲ ಲಲಾಮನ ರಾಮಚಂದ್ರನ ರಾಜ್ಯದೇಳ್ಗೆಯಲಿ ॥೬೨॥ ಕಟ್ಟಿ
ದನು ಯುವರಾಜ ರಾಜಿತ । ಪಟ್ಟವನು ಭರತಂಗೆ ಸೇನಾ । ಪಟ್ಟವನು ಶತ್ರುಘ್ನನಲಿ
ಸಂಧಿಸಿ ನೂರ್ವರೆಯ ॥ ಕಟ್ಟಳೆಯ ಪಾಲನೆಯ ಮಿಕ್ಕೊಡ । ಹುಟ್ಟಿದಗೆ ನೇಮಿಸಿ
ಸಿಶಾಟಘ । ರಟ್ಟ ತೊರವೆಯರಾಯ ನರಹರಿ ಸಲಹಿದನು ಜಗವ ॥ ೬೩ ॥ ಚಾರುತರ
ಕವಿರಾಜಹಂಸ ಕು । ಮಾರ ವಾಲ್ಮೀಕೀಶ ಬಂಧುವ । ಸಾರಮಯ ರಾಮಾಯಣವ
ನಾದರಿಸಿ ಕೇಳ್ದರಿಗೆ ॥ ಶ್ರೀರಮಣನಿಹ ಪರದ ಸುಖ ಸಂ । ಪೂರಣವ ಸೊಲಿದೀವು
ದೆಂಬುದು । ಧಾರುಣಿಯೊಳಿದು ಸಿದ್ಧ ನಂಬುವುದುಳಿದು ಸಂಶಯವ ॥ ೬೪ ॥ ಶಿವನ

ನುಡಿಯಿದು ಸರಸಿರುಹ ಸಂ। ಭವನ ಮಾತಿದು ಸುರಮುನಿಪನನು। ಪಮದ ವಿಶ್ರುತ
ವಾಕ್ಯವಿದು ವಾಲ್ಮೀಕಿ ಮುನಿವರನ ॥ ಸವಿಗೊಡುವ ವಾಕ್ಯಾಮೃತಾರ್ಣವ। ದವಿರಳದ
ಪಾನೀಯುವಿದು ತ್ರೈ। ಭುವನ ರಂಜಿತ ಪುಣ್ಯವಿದು ರಘುರಾಮಚಂದ್ರ ಕಥೆಯು ॥೬೫॥
ಸರಸ ವರ್ಣಕ ಕವಿಗಳೊಳು ಭಾ। ಸರ ಕುಮಾರವ್ಯಾಸನೊಬ್ಬನು। ಪರಿಕಿಸುವ
ತಾನೊಬ್ಬ ಮುಗುಳೆರಡನೆಯು ವರ್ಣಕಗೆ ॥ ವರ ಕುಮಾರವ್ಯಾಸನೊಬ್ಬನು। ಯೆರಡ
ನೆಯು ತಾನೊಬ್ಬ ಮುಕ್ಕಿನ ॥ ಬರಡು ಕವಿಗಳ ಲೆಕ್ಕಿಸುವನೆ ಕುಮಾರ ವಾಲ್ಮೀಕಿ॥೬೬॥
ವರ ಕುಮಾರವ್ಯಾಸ ಘನ ಬಂ। ಧುರದ ಭಾರತ ಕೃತಿಗೆ ಕರ್ತನು। ನಿರುತ ರಾಮಾ
ಯಣಕೆ ಸ.ಕವಿ ಕುಮಾರವಾಲ್ಮೀಕಿ ॥ ಧೊರೆ ವಿಚಾರವದೇನು ಹೇಳದಿ। ರೆರಡು
ಕಾವ್ಯಕೆ ಮುಕ್ತ ಶಾಖಾ। ಕ್ಷರ ದರಿದ್ರರ ಬಂಧು ಬಂಧುರ ರಸ ವಿವರ್ಜಿತರ ॥ ೬೭ ॥
ಮಂಗಳವು ಜಗಕಾಯ್ತು ಸುರರಿಗೆ। ಮಂಗಳ ದ್ರುಮ ಫಲಿಸಿದುದು ಜಯ। ಮಂಗಳವು
ನೆಲೆಗೊಂಡುದೋಮುವ ಕೇಳ್ವ ಸುಜನರಿಗೆ ॥ ಸಂಘಟಿಸಿದುದು ಸಕಲ ಭಕ್ತ ಜ। ನಂಗ
ಳಿಗೆ ಸುಖರಾಸು ತೊರವೆಯ। ಮಂಗಳ ಶ್ರೀಮೂರ್ತಿ ನರಕೇಸರಿಯ ಕಾವ್ಯದಲಿ ॥೬೮॥

ಐವತ್ತೈದನೆಯ ಸಂಧಿ ಸಮಾಪ್ತಂ.

ಯುದ್ಧಕಾಂಡ ಸಂಪೂರ್ಣಂ.

ಸಮಾಪ್ತೋಯಂ ರಾಮಾಯಣಗ್ರಂಥಃ.

